ಕರ್ನಾಟಕ ಸರ್ಕಾರ

# ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಬರೆಹಗಳು ಸಂಪುಟ-೮

ಲೇಖಕರು

## ಪಂ. ದೀನ್ ದಯಾಳ್ ಉಪಾಧ್ಯಾಯ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಬೆಂಗಳೂರು, ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು-೫೬೦ ೦೫೬

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೨೦೮
ವಿಚಾರ ಸಾಹಿತ್ಯಮಾಲೆ – ೧೦೬

# ದೀನ್ ದಯಾಳ್ ಉಪಾಧ್ಯಾಯರ
# ಪತ್ರಿಕಾ ಬರೆಹಗಳು ಮತ್ತು ಹೇಳಿಕೆಗಳು
# ಸಂಪುಟ ೮

## ಸಂಪಾದಕ ಮಂಡಳಿ


ಡಾ. ಪ್ರಧಾನ್ ಗುರುದತ್ತ (ಅಧ್ಯಕ್ಷರು)

ಶ್ರೀ ಎಸ್.ಆರ್. ರಾಮಸ್ವಾಮಿ (ಸದಸ್ಯರು)

ಡಾ. ಜಿ.ಬಿ. ಹರೀಶ್ (ಸದಸ್ಯರು)

ಶ್ರೀ ವಾದೀರಾಜ್ (ಸದಸ್ಯರು)

ಶ್ರೀ ಪಿ.ಎಂ. ರಮೇಶ್ (ಸದಸ್ಯರು)

# ದೀನ್ ದಯಾಳ್ ಉಪಾಧ್ಯಾಯರ
# ಪತ್ರಿಕಾ ಬರೆಹಗಳು ಮತ್ತು ಹೇಳಿಕೆಗಳು
# ಸಂಪುಟ ೮

**ಪಂ॥ ದೀನ್ ದಯಾಳ್ ಉಪಾಧ್ಯಾಯ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬.

**DĪN DAYĀḶ UP  DHYĀYARA PATRIKĀ BAREHAGAḶU MATTU HĒ  IKEGA  U (Samputa 8) (Complete Works of Pandit Deendayal Upadhaya, Vol. 8)** Published by **Sri P. Narayana Swamy, Registrar, Kuvempu Bhasha Bharathi Pradhikara;** Kalagrama, Jnanabharathi, Behind Bangalore University Campus, Mallattahalli, Bangalore - 560 056 ; 2015 ; Pp. xvi + 466 ; Price : Rs.125/-

© : ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಪ್ರಥಮ ಮುದ್ರಣ : ೨೦೧೫
ಪುಟಗಳು : xvi + ೪೬೬
ಬೆಲೆ : ರೂ. ೧೨೫/–
ಪ್ರತಿಗಳು : ೧೦೦೦

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಶ್ರೀ ವಿಶ್ವನಾಥ್ ಶೆಟ್ಟಿಗಾರ್**

**ISBN : 978-93-80415-19-2**

ಮುದ್ರಕರು :
**ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಅಡ್ಡರಸ್ತೆ,
ಲಾಲ್‌ಬಾಗ್ ರೋಡ್, ಕೆ.ಎಸ್. ಗಾರ್ಡನ್,
ಬೆಂಗಳೂರು – ೫೬೦೦೨೭. ದೂ : ೨೨೨೩೪೦೬೬

# ಪರಿವಿಡಿ

## ಸಂಪುಟ ೮

**ಸಂದರ್ಶನ**

೧. ಜನಸಂಘ ಮತ್ತು ರಾಷ್ಟ್ರ ೧
೨. ನಮ್ಮ ಯೋಜನೆಗಳ ಅಸ್ತವ್ಯಸ್ತತೆ ೮
೩. ಪ್ರಪಂಚದ ಸ್ಥಿತಿಯ ಕುರಿತು ಜನಸಂಘದ ದೃಷ್ಟಿ ೧೩
೪. ಡೆಲ್ಲಿ ಡೈರಿ ೧೩
೫. ಪತ್ರಕರ್ತರೊಡನೆ ಉಪಾಧ್ಯಾಯರ ಭೇಟಿ ೨೩

**ಪತ್ರಿಕಾಗೋಷ್ಠಿ**

೬. ಲಕ್ಷ್ಮಣರು ಮತ್ತು ಊರ್ಮಿಳೆಯರು ಬೇಕಾಗಿದ್ದಾರೆ ೨೬
೭. ಸಾಮೂಹಿಕ ವ್ಯವಸಾಯವನ್ನು ಭಾರತೀಯ ಜನಸಂಘ ವಿರೋಧಿಸುತ್ತದೆ, ಸಹಕಾರಿ ಬೇಸಾಯ ಎನ್ನುವುದು ಮಿಥ್ಯಾನಾಮ ಪ್ರಯೋಗ ೨೯
೮. ಕುಸಿಯುತ್ತಿರುವ ಕೃಷಿ ಉತ್ಪನ್ನಗಳ ಬೆಲೆಗಳನ್ನು ತಡೆಯಲು ಜನಸಂಘದ ಸಲಹೆಗಳು ೩೩

**ವರದಿಗಳು**

೯. ಗುಜರಾತಿನಲ್ಲಿ ಜನಸಂಘ ನಾಯಕರ ಪ್ರಥಮ ಪ್ರವಾಸ ಉತ್ತಮ ಪ್ರತಿಕ್ರಿಯೆ ೩೫
೧೦. ಜನಸಂಘಕ್ಕೆ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಉದ್ಧಟತನ ಬೆದರಿಕೆ ೩೮
೧೧. ಗ್ರಾಮದಾನ ಸಮ್ಮೇಳನ ಮತ್ತು ಭಾರತೀಯ ಜನಸಂಘ ಮಜುಂದಾರ್–ದೀನ್ ದಯಾಳ್ ವಾಗ್ದಾನ ೪೧
೧೨. ಜನಸಂಘವನ್ನು ಕೇವಲ ನಂಬರ್ ೨ ಅಲ್ಲ ನಂಬರ್ ಒನ್ ಪಕ್ಷವನ್ನಾಗಿಸುವ ಗುರಿ ೪೫
೧೩. ಬೆಂಗಳೂರು ಅಧಿವೇಶನ ಗಮನಾರ್ಹ ಯಶಸ್ಸು ೪೯
೧೪. ಜನಸಂಘದ ಇಂದೋರ್ ಅಧಿವೇಶನ ೫೪
೧೫. ಕೇರಳ ತಲುಪಿದ ಜನಸಂಘ ೫೮

೧೬. ಪ್ರಸ್ತುತ ವಿದ್ಯಾಮಾನಗಳ ಕುರಿತು ಜನಸಂಘದ ಧೋರಣೆ ೬೦
೧೭. ಅಮೆರಿಕ ಅನುದಾನ ಕಡಿತದ ಸಂದರ್ಭದಲ್ಲಿ ಕಲಿತ ಪಾಠಗಳು ೬೪
೧೮. ಹಿಂದೂಸ್ಥಾನವು ಪಾಕಿಸ್ತಾನದ ಮೇಲೆ ಆಕ್ರಮಣ ಮಾಡುವುದೇ? ೬೬
೧೯. ತಿದ್ದುಪಡಿಯ ಭಾವನೆಗೆ ಬೆಂಬಲ ಹಾಗೂ ಉತ್ತರಾಧಿಕಾರತ್ವದ ಮಸೂದೆಯ ಬಗೆಗೆ ಟೀಕೆ ೭೨

**ಲೇಖನಗಳು**

೨೦. ನೆಹರೂ – ಕಮ್ಯೂನಿಸ್ಟರ ಮೊದಲ ಸ್ನೇಹಿತ ೭೫
೨೧. ಕೇರಳದ ಯುನೈಟೆಡ್ ಫ್ರೆಂಟ್‌ನ ತಪ್ಪು ಹೆಜ್ಜೆ ಮ್ಯಾನೊಮ್ ಬಗ್ಗೆ ನಿರ್ಲಕ್ಷ್ಯ ೭೭
೨೨. ರಾಷ್ಟ್ರಪತಿಯವರ ನಿರ್ದೇಶನ ಅತೃಪ್ತಿಕರ ೮೩
೨೩. ಭಾರತ–ಅಮೆರಿಕ ಆಹಾರ ಒಪ್ಪಂದ ೮೮
೨೪. ಜನಸಂಘದ ಪಾತ್ರ ೯೩
೨೫. ಡಾ. ಮುಖರ್ಜಿ, ಕಾಶ್ಮೀರ ಮತ್ತು ಭವಿಷ್ಯ ೧೦೧
೨೬. ಇಂಗ್ಲಿಷ್‌ಗೆ ನೀಡುವ ಬೆಂಬಲ ಜನತೆಗೆ ಮಾಡುವ ವಂಚನೆ ೧೦೫
೨೭. ಯೋಜನೆಯ ಕೆಲವು ಮೂಲಭೂತ ಸೂತ್ರಗಳು ೧೦೭
೨೮. ಭಾಷೆಯ ರಾಜಕಾರಣ ೧೧೭
೨೯. ಉರ್ದುವಿನ ರಾಜಕೀಯ ೧೨೧
೩೦. ಎರಡನೆ ಯೋಜನೆ–ಅಭಾರತೀಯ ಮತ್ತು ಅಪ್ರಜಾಸತ್ತಾತ್ಮಕ ೧೨೫
೩೧. ಭೂಸುಧಾರಣೆಗಳು ಜ್ಞಾನ ಮತ್ತು ಅಜ್ಞಾನ ೧೩೪
೩೨. ನೆಹರೂ ಅವರ ಸಿಐಡಿ ಅಥವಾ ಹಿಟ್ಲರಿನ ಗೆಸ್ತಪೊ? ರಾಂದಾ ಅವರ ಬಂಧನ ೧೪೧
೩೩. ಬೆಂಗಳೂರು ಅಧಿವೇಶನ ಮತ್ತು ಅನಂತರ–೧ ೧೪೫
೩೪. ಬೆಂಗಳೂರು ಮತ್ತು ಅನಂತರ–೩ ೧೪೯
೩೫. ಬೇಕಿದೆ–ಏಕಾತ್ಮಕರೂಪದ ಒಂದು ಸರ್ಕಾರ ೧೫೬
೩೬. ಚೀನಾದ ಎವರೆಸ್ಟ್ ಆಕ್ರಮಣ ೧೬೭
೩೭. ಬೆಂಗಳೂರು ಮತ್ತು ಆನಂತರ–೪ ೧೭೦
೩೮. ಅಲ್ಪಸಂಖ್ಯಾತರೆಡೆಗಿನ ಧೋರಣೆ ಮುಸ್ಲಿಂ ಒಡಂಬಡಿಕೆಯ ಪ್ರತಿಧ್ವನಿಗಳು ೧೭೭
೩೯. ನಮ್ಮ ಆರ್ಥಿಕ ರಚನೆ ೧೮೭
೪೦. ಅಂತ್ಯೋದಯ ೨೦೧

೪೧. ಅಖಂಡ ಭಾರತವನ್ನು ಬಿಟ್ಟು ನಮ್ಮ ಯಾವುದೇ ನಿಯತಿ ಇಲ್ಲ ೨೦೨

೪೨. ನಂಬಿಕೆ ದ್ರೋಹ ೨೦೭

೪೩. ಶಾರದಾ ಮಾತೆಗೆ ಪ್ರಣಾಮಗಳು ೨೧೯

೪೪. ಆಪತ್ಕಾಲದಲ್ಲಿ ರಾಷ್ಟ್ರೀಯ ಶಕ್ತಿಗಳ ಜವಾಬ್ದಾರಿ ೨೨೩

೪೫. ಚೀನಾ ದೇಶದ ಆಕ್ರಮಣ : ಕಾರಣ ಮತ್ತು ಸ್ಪಷ್ಟೀಕರಣ ೨೩೨

೪೬. ನಾನಲ್ಲ, ನೀನೇ ೨೩೯

೪೭. ಗುರುವಿಲ್ಲದೆ ಜ್ಞಾನವಿಲ್ಲ ೨೪೫

೪೮. ವಿಕೇಂದ್ರೀಕರಣದ ವಿಡಂಬನೆ ೨೪೭

೪೯. ಕೇವಲ ವ್ಯವಸ್ಥೆಯಲ್ಲಿ ಮಾತ್ರವಲ್ಲ, ಯೋಜನೆಯಲ್ಲಿಯೂ ಮೂಲಭೂತ ಬದಲಾವಣೆ ಬೇಕು ೨೫೫

೫೦. ವಾರ್ತೆಗಳು–ಹಿಂದುಸ್ಥಾನದ ಅಭಿವ್ಯಕ್ತಿ ೨೫೭

೫೧. ತಾಷ್ಕೆಂಟ್ ಒಪ್ಪಂದದಲ್ಲಿ ಜನಸಂಘದ ಎಚ್ಚರ ೨೬೪

೫೨. ಬಾಂಗ್ಲಾ ದೇಶದ ಸಂಕಟದ ಸಂದರ್ಭದಲ್ಲಿ ಜನಸಂಘದಿಂದ ಎಚ್ಚರ ೨೬೯

೫೩. ಚುನಾವಣೆಯ ಗೆಲುವಿನಿಂದ ಸಂತೋಷವಾಗಿ ಕೈಕಟ್ಟಿ ಕುಳಿತುಕೊಳ್ಳಬಾರದು ೨೭೨

೫೪. ಸಮೃದ್ಧ ಭಾರತಕ್ಕಾಗಿ ಪುನರ್ ನಿರ್ಮಾಣ ಮಾಡೋಣ ೨೮೦

೫೫. ಪಣ ಕಟ್ಟುವುದನ್ನು ಕಲಿಯಿರಿ ೨೯೫

೫೬. ಯತೋ ಧಮಸ್ತತೋಜಯಃ ೨೯೯

೫೭. ಇತಿಹಾಸದ ಕಥೆ ೩೦೨

೫೮. ಭಾರತೀಯ ಗಣತಂತ್ರ ವ್ಯವಸ್ಥೆಯಲ್ಲಿ ಆರ್ಥಿಕ ಪ್ರಜಾತಂತ್ರ ೩೦೮

೫೯. ಮೂರನೇ ಸಾರ್ವತ್ರಿಕ ಚುನಾವಣೆಯಿಂದ ವೃದ್ಧಿಸಿದ ಜನಸಂಘದ ಶಕ್ತಿ ೩೧೨

೬೦. ಚೀನಾ ಎಂದರೆ ಭಯವೇಕೆ? ೩೨೬

೬೧. ವಚನ ಭಂಗ ೩೩೩

೬೨. ನಮ್ಮ ರಾಷ್ಟ್ರಧ್ವಜ ೩೬೬

೬೩. ರಾಷ್ಟ್ರೀಯತೆ ಅಥವಾ ಅರಾಷ್ಟ್ರೀಯ – ಸಮನ್ವಯ ಅಸಂಭವ ೩೮೦

೬೪. ಹಿಂದುತ್ವದ ಅರಿವಿನ ಅಭಿವ್ಯಕ್ತಿ ೩೮೧

೬೫. ಸಹಿಷ್ಣುತೆಯೊಂದಿಗೆ ಜಯಿಸುವ ಪ್ರವೃತ್ತಿ ಬೇಕು ೩೮೪

**ಭಾಷಣಗಳು**


೬೬. ಅಲಿಪ್ತ ನೀತಿ (ತಟಸ್ಥನೀತಿ) ಮತ್ತು ಯಾರೊಡನೆಯೂ ಸೇರಿಕೊಳ್ಳದಿರುವುದು ಜನಸಂಘದ ನಿಲುವಾಗಿದೆ ೩೮೭

೬೭. ಪ್ರತ್ಯೇಕ ಮತ್ತು ಪ್ರತ್ಯೇಕತಾವಾದಿ ಕಾಶ್ಮೀರದ ಸಂವಿಧಾನವನ್ನು ಕಿತ್ತೊಗೆಯಿರಿ ೩೮೯

೬೮. ನೆಹರೂ ಅವರ ವಿದೇಶಾಂಗ ನೀತಿಯು ಭಾರತವನ್ನು ಮಿತ್ರಹೀನವನ್ನಾಗಿ ಮಾಡಿದೆ ೩೯೧

೬೯. ಮುಂಬೈಯಲ್ಲಿ ದೀನ್ ದಯಾಳ್‌ಜೀ ಪೀಟರ್ ಆಲ್ವರೆಸ್‌ರೊಡನೆ ಭೇಟಿ ೩೯೨

೭೦. ಜನಸಂಘವು ತನ್ನ ಸ್ಥಾನವನ್ನು ಉತ್ತಮಗೊಳಿಸಿಕೊಳ್ಳುವ ವಿಶ್ವಾಸ ಭರವಸೆ ಹೊಂದಿದೆ ೩೯೫

೭೧. ದೀನ್ ದಯಾಳ್ ಅವರಿಗೆ ೫೩,೦೦೦ ರೂಪಾಯಿಗಳ ನಿಧಿಯ ಕೊಡುಗೆ ೩೯೯

೭೨. ರಾಜಸ್ಥಾನ ಭಾರತೀಯ ಜನಸಂಘದ ಬಿಕನೇರ್ ಅಧಿವೇಶನ ೪೦೫

೭೩. ಪಂಡಿತ್ ಮಾಳವೀಯರ ಬಗೆಗೆ ದೀನ್ ದಯಾಳ್ ಉಪಾಧ್ಯಾಯರ ಪ್ರಶಂಸೆ ೪೦೯

೭೪. ಇದು ಯೋಜಿತ ಪಿತೂರಿ ೪೧೧

೭೫. ಸಂಭ್ರಮ ಮತ್ತು ಹೊಣೆಗಾರಿಕೆ ೪೧೩

೭೬. ಮತಗಳಿಕೆಯ ಪ್ರಮಾಣದಲ್ಲಿನ ಇಳಿಕೆಯು ಆಡಳಿತ ಪಕ್ಷದವರ ರಾಜಕೀಯ ಮರುಚಿಂತನೆಗೆ ಪ್ರೇರಣೆಯೇ? ೪೧೪

೭೭. ಕಾಶ್ಮೀರದಲ್ಲಿನ ಪರವಾನಗಿ ಪದ್ಧತಿಯ ರದ್ದತಿಗೆ ಜನಸಂಘದ ಸ್ವಾಗತ ೪೧೮

೭೮. ಆಡಳಿತ ಹಿಂದಿಯ ಸ್ವರೂಪವನ್ನು ವಿಕೃತಿಗೊಳಿಸುವ ಪ್ರಯತ್ನ ಮಾಡದಿರಲು ಜನಸಂಘದ ಅಖಿಲ ಭಾರತದ ಕಾರ್ಯದರ್ಶಿ ಶ್ರೀ ದೀನ್ ದಯಾಳ್ ಉಪಾಧ್ಯಾಯರ ಭಾಷಣ ೪೨೦

೭೯. ಪಾಕಿಸ್ತಾನೀಯರ ಅಕ್ರಮ ಪ್ರವೇಶದ ವಿರುದ್ಧ ಜನಸಂಘವು ದೇಶವ್ಯಾಪಿ ಆಂದೋಲನ ಮಾಡಲಿದೆ ೪೨೨


**ಹೇಳಿಕೆಗಳು**


೮೦. ಹಿಂದಿ ರಕ್ಷಾ ಸತ್ಯಾಗ್ರಹವನ್ನು ಜನಸಂಘವು ಬೆಂಬಲಿಸುತ್ತದೆ ದೀನ್ ದಯಾಳ್ ಜೀಯವರ ಹೇಳಿಕೆ ೪೨೪

೮೧. ಇಂಗ್ಲಿಷನ್ನು ಉಳಿಸಿಕೊಳ್ಳುವುದು ಆಳುವವರು ಮತ್ತು ಪ್ರಜೆಗಳ ನಡುವೆ ತಿಕ್ಕಾಟಕ್ಕೆ ಕಾರಣವಾಗುತ್ತದೆ ೪೨೬

೮೨. ಜಮೀನು ಮತ್ತು ಕುಟುಂಬದ ಸ್ವಾತಂತ್ರ್ಯ ರಕ್ಷಣೆಯಲ್ಲಿ ೪೨೯
೮೩. ಪಂಡಿತ್ ಮೌಳಿಚಂದ್ರರ ರಾಜೀನಾಮೆ ಕುರಿತು
ದೀನ್ ದಯಾಳರ ಹೇಳಿಕೆ ೪೩೧
೮೪. ಜನಸಂಘ ಮತ್ತು ಭೂಸುಧಾರಣೆಗಳು ೪೩೩
೮೫. ಜಬಲ್‌ಪುರದಿಂದ ದೂರವಿರಿ
ರಾಜಕೀಯ ಪಕ್ಷಗಳಿಗೆ ದೀನ್ ದಯಾಳ್ ಅವರ ಎಚ್ಚರಿಕೆ ೪೩೭
೮೬. ಭಾರತ ಸರ್ಕಾರದ ಭಾಷಾನೀತಿ ಸಂವಿಧಾನಕ್ಕೆ ವಿರುದ್ಧ ೪೪೦
೮೭. ಸ್ಪಷ್ಟ ಟಿಬೆಟ್ ನೀತಿಗಾಗಿ ಉಪಾಧ್ಯಾಯ ಒತ್ತಾಯ ೪೪೨
೮೮. ಜನಸಂಘವು ಪಂಜಾಬ್ ಹಿಂದಿ ಸತ್ಯಾಗ್ರಹವನ್ನು ಬೆಂಬಲಿಸುತ್ತದೆ ೪೪೪
೮೯. ಆಗಸ್ಟ್ ೧೫ ಭಾರತದ ರಕ್ಷಣಾ ದಿನ ಎಂದು ಆಚರಿಸಬೇಕು ೪೪೭
೯೦. ಬಾಂಬೆಯ ಬಗೆಗಿನ ತೀರ್ಮಾನ ದುರದೃಷ್ಟಕರ ತಪ್ಪು ನೀತಿ ೪೪೯
೯೧. ಭಾರತದ ಏಕತೆಗಾಗಿ ಸಂಗ್ರಾಮ ೪೫೧
೯೨. ಫ್ರೆಂಚ್ ವಸತಿ ಪ್ರದೇಶಗಳ ಕುರಿತು
ನೆಹರೂರವರ ಹೇಳಿಕೆ ನಿರಾಶಾದಾಯಕವಾದದ್ದು ೪೫೩
೯೩. ಸೊಂಟ ಮುರಿವ ತೆರಿಗೆ: ನಿರಂಕುಶ ಪ್ರಭುತ್ವದ
ಪಥದಲ್ಲಿ ಪಯಣ ೪೫೬
೯೪. ಚೀನೀ ಸಾಮ್ರಾಜ್ಯದ ಪ್ರತೀಕಾರಕ್ಕಾಗಿ ಸಂಘಟಿತರಾಗಿ ೪೫೯
೯೫. ಪಂ. ದೀನ್ ದಯಾಳ್ ಉಪಾಧ್ಯಾಯರ ಕೊನೆಯ ಭಾಷಣ ೪೬೩

# ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರ
# ಪತ್ರಿಕಾ ಬರೆಹಗಳು ಮತ್ತು ಹೇಳಿಕೆಗಳು
# ಸಂಪುಟ – ೮

## ಮೂಲ ಹಿಂದಿ ಬರೆಹಗಳನ್ನು ಕನ್ನಡಕ್ಕೆ ಅನುವಾದಿಸಿದವರು

೧. ಡಾ. ಎಸ್. ಕುಮಾರ್
ಮೈಸೂರು.

೨. ಶ್ರೀಮತಿ ಶಶಿಕಲಾದೇವಿ ಬಿ.ಟಿ
ಮೈಸೂರು.

೩. ಡಾ. ವಿ. ಸೌಭಾಗ್ಯಲಕ್ಷ್ಮೀ
ಮೈಸೂರು.

೪. ಡಾ. ಲೀನಾ ಪಿ. ನಾಯಕ್
ಬೆಂಗಳೂರು.

೫. ಡಾ. ವೀರಘಂಟೀಮಠ
ಬಿಜಾಪುರ.

೬. ಡಾ. ಕುಮಾರಸ್ವಾಮಿ
ಸುಳ್ಯ, ದಕ್ಷಿಣಕನ್ನಡ ಜಿಲ್ಲೆ.

೭. ಡಾ. ತಿಪ್ಪೇಸ್ವಾಮಿ
ಮೈಸೂರು.

೮. ಡಾ. ಮಾಧವ ಎಸ್. ಭಂಡಾರಿ
ಉಡುಪಿ.

೯. ಶ್ರೀಮತಿ ಎಚ್.ಡಿ. ಶಾಂತ
ಬೆಂಗಳೂರು.

# ಪಂಡಿತ್ ದೀನ್‌ದಯಾಳ್ ಉಪಾಧ್ಯಾಯರ
# ಪತ್ರಿಕಾ ಬರೆಹಗಳು ಮತ್ತು ಹೇಳಿಕೆಗಳು
# ಸಂಪುಟ – ೮

## ಮೂಲ ಇಂಗ್ಲಿಶ್ ಬರೆಹಗಳನ್ನು ಕನ್ನಡಕ್ಕೆ ಅನುವಾದಿಸಿದವರು

೧. ಶ್ರೀಮತಿ ಎಲ್.ವಿ. ಶಾಂತಕುಮಾರಿ
ಬೆಂಗಳೂರು.

೨. ಶ್ರೀ ವಿ. ಕೃಷ್ಣ
ಬೆಂಗಳೂರು.

೩. ಡಾ. ಡಿ.ಎಸ್. ಜಯಪ್ಪಗೌಡ
ಮೈಸೂರು.

೪. ಡಾ. ಎಚ್.ಎಂ. ನಾಗರಾಜರಾವ್
ಮೈಸೂರು.

೫. ಶ್ರೀ ಎಂ.ಎಸ್. ರಘುನಾಥ್
ಬೆಂಗಳೂರು.

೬. ಪ್ರೊ. ರವೀಂದ್ರ ಭಟ್ ಕುಳಿವೀಡು
ಸಾಗರ, ಶಿವಮೊಗ್ಗ ಜಿಲ್ಲೆ.

೭. ಶ್ರೀ ಎನ್.ಎಸ್. ಶಾರದಾಪ್ರಸಾದ್
ಮೈಸೂರು.

೮. ಶ್ರೀ ರಾಜು ಶಾನಭಾಗ್
ಬೆಂಗಳೂರು.

೯. ಶ್ರೀ ಕೆ. ವಿ. ರಾಧಾಕೃಷ್ಣ
ಬೆಂಗಳೂರು.

# ದೀನ್ ದಯಾಳ್ ಉಪಾಧ್ಯಾಯರ
# ಪತ್ರಿಕಾ ಬರೆಹಗಳು ಮತ್ತು ಹೇಳಿಕೆಗಳು
# ಸಂಪುಟ ೮

# ಜನಸಂಘ ಮತ್ತು ರಾಷ್ಟ್ರ

*[ನಮ್ಮ ಪತ್ರಿಕೆಗೆ ಪ್ರತ್ಯೇಕವಾಗಿ ನೀಡಿದ ಸಂದರ್ಶನದಲ್ಲಿ ಭಾರತೀಯ ಜನಸಂಘದ ಪ್ರಧಾನಕಾರ್ಯದರ್ಶಿ ಶ್ರೀ ದಿನ್ ದಯಾಳ್ ಉಪಾಧ್ಯಾಯ ಅವರು ದೇಶದ ಮುಂದಿರುವ ಹಲವು ಸಮಸ್ಯೆಗಳನ್ನು ಚರ್ಚಿಸಿದರು. ಇಂದಿನ ಪ್ರಮುಖ ಸಮಸ್ಯೆಗಳನ್ನು ಕುರಿತು ಜನಸಂಘದ ಅಧಿಕೃತ ಹೇಳಿಕೆಯೆಂಬಂತೆ, ಈ ಸಂದರ್ಶನವನ್ನು ಅಕ್ಷರಶಃ ಇಲ್ಲಿ ನೀಡುತ್ತಿದ್ದೇವೆ. – ಸಂ.]*

ಸಂಪಾದಕ : **ಜನಸಂಘವು ಎಷ್ಟು ಶಕ್ತಿಯುತವಾಗಿದೆ?**

ದೀನ್ ದಯಾಳ್ ಉಪಾಧ್ಯಾಯ : ದೇಶದೆಲ್ಲೆಡೆ ಕಾರ್ಯ ನಡೆಯುತ್ತಿದೆ. ಪ್ರಮುಖವಾಗಿ ದೆಹಲಿ, ಉತ್ತರ ಪ್ರದೇಶ, ಮಧ್ಯ ಭಾರತದಲ್ಲಿ ಬೆಳವಣಿಗೆ ಚೆನ್ನಾಗಿದೆ. ಒರಿಸ್ಸಾ ಮತ್ತು ತಮಿಳುನಾಡುಗಳನ್ನು ಹೊರತುಪಡಿಸಿ, ದೇಶಾದ್ಯಂತ ನಾವು ಶಾಖೆಗಳನ್ನು ಹೊಂದಿದ್ದೇವೆ.

ಸಂ: **ಮುಂದಿನ ಮಹಾಚುನಾವಣೆಯಲ್ಲಿ ಜನಸಂಘದ ಸಾಧನೆ ಏನಾಗಬಹುದು?**

ದೀ : ನಮ್ಮ ಸಾಧನೆ ಚೆನ್ನಾಗಿರುತ್ತದೆ ಎಂಬ ನಂಬಿಕೆಯಿದೆ. ನಮ್ಮ ಸಾಂಘಿಕ ಹಾಗೂ ಜನಪ್ರಿಯತೆಯ ಶಕ್ತಿಯನ್ನು ಅಳೆಯಲು ರಾಜ್ಯಗಳ ಶಾಸನ ಸಭೆಗಳು ಸರಿಯಾದ ಮಾನಗಳಲ್ಲ. ಭಾರತದಲ್ಲಿ ಈಗ ಮಾನ್ಯವಾಗಿರುವ ನಾಲ್ಕು ರಾಷ್ಟ್ರೀಯ ಪಕ್ಷಗಳಲ್ಲಿ ಒಂದಾಗಿರುವ ಜನಸಂಘಕ್ಕಿಂತ (ಉಳಿದ ಮೂರೆಂದರೆ, ಕಾಂಗ್ರೆಸ್, ಪ್ರಜಾ ಸೋಷಿಯಲಿಸ್ಟ್ ಪಕ್ಷ ಮತ್ತು ಭಾರತೀಯ ಕಮ್ಯುನಿಸ್ಟ್ ಪಕ್ಷ) ಹೆಚ್ಚಿನ ಪ್ರತಿನಿಧಿಗಳನ್ನು ಚಿಕ್ಕಚಿಕ್ಕ ಪಕ್ಷಗಳು, ಅದರಲ್ಲೂ ಪ್ರಾದೇಶಿಕ ಪಕ್ಷಗಳು ಹೊಂದಿವೆ. ನಮ್ಮ ನೈಜ ಬಲ ಹಾಗೂ ಶಾಸನ ಸಭೆಗಳಲ್ಲಿನ ನಮ್ಮ ಸಂಖ್ಯಾಬಲ ಇವುಗಳ ನಡುವೆ ಇರುವ ವ್ಯತ್ಯಾಸವನ್ನು ಮುಂದಿನ ಮಹಾ ಚುನಾವಣೆಯಲ್ಲಿ ಸರಿದೂಗಿಸುವ ನಿರೀಕ್ಷೆ ನಮಗಿದೆ. ಆದರೆ, ಇದಕ್ಕೆ ಬೇಕಾಗಿರುವ ಪರಿಶ್ರಮ ಅಪಾರ.

ಸಂ: **ಪಂಡಿತ್‌ಜೀ, ವಿಶೇಷ ವಿವಾಹ ಮಸೂದೆಯ ಬಗ್ಗೆ ನಿಮ್ಮ ಆಲೋಚನೆ ಏನು?**

ದೀ : ನನಗೆ ಅದರ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ. ವಿವಾಹವೆನ್ನುವುದು ಪವಿತ್ರವಾದ

---

**ಮೂಲ ಆಕರ : ಆರ್ಗನೈಸರ್, ೧೫, ಆಗಸ್ಟ್, ೧೯೫೪**

ಸಂಸ್ಕಾರ. ಅದರ ಹೊರತು ಅದು ಕೇವಲ ವ್ಯಾವಹಾರಿಕ ಒಪ್ಪಂದವಲ್ಲ. ಈ ಭಾವನೆಯೇ ನಮಗೆ ಅಸಹ್ಯಕರವೆನಿಸುತ್ತದೆ. ಈ ಮಸೂದೆಯಲ್ಲಿ ಹೇಳಿರುವ ವಿಚ್ಛೇದನವು – ಪರಸ್ಪರ ಒಪ್ಪಿಗೆಯ ಆಧಾರದ ಮೇಲೆ ಆದರೂ – ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಫ್ರಾನ್ಸ್ ದೇಶಗಳಲ್ಲಿ ಕೂಡ ಕೇಳಸಿಗುವುದಿಲ್ಲ. ವಾಸ್ತವವಾಗಿ, ನಮ್ಮ ದೇಶದಲ್ಲಿ ಒಪ್ಪಿಗೆಯನ್ನು ಬಲವಂತವಾಗಿ ಪಡೆಯಲಾಗುತ್ತದೆ.

ವಿವಾಹವೆನ್ನುವುದು ಕೇವಲ ವೈಯಕ್ತಿಕ ವಿಷಯವಲ್ಲವೆಂಬುದನ್ನು ಮೊದಲು ಅರಿತುಕೊಳ್ಳಬೇಕು. ಹಾಗಿಲ್ಲದಿದ್ದರೆ ಪಶುಗಮನಕ್ಕೆ ಅಲ್ಲದಿದ್ದರೂ, ವಿಕೃತರತಿಗೆ ಪರವಾನಗಿ ಕೊಡಬೇಕಾಗುತ್ತದೆ. ವ್ಯಕ್ತಿಯ ವೈಯಕ್ತಿಕ ಹುಚ್ಚಾಟಗಳಿಗೆ ಅನುಕೂಲವಾಗುವ ಹಾಗೆ ವಿವಾಹದ ಕಾನೂನುಗಳನ್ನು ರಚಿಸಬಾರದು. ವಿವಾಹ ವ್ಯವಸ್ಥೆಯು ಸಮಾಜದ ಮೇಲೆ ಅಪಾರ ಪರಿಣಾಮವನ್ನು ಬೀರುತ್ತದೆ. ಆದ್ದರಿಂದ ಅದನ್ನು ವಿಶಾಲವಾದ ಸಾಮಾಜಿಕ ಕಲ್ಯಾಣದ ದೃಷ್ಟಿಯಿಂದ ನಿರ್ವಹಿಸಬೇಕು.

ಸಂ: **ವಿಧವಾ ವಿವಾಹದ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ದೀ : ಹಿಂದೂ ಸಮಾಜದ ಮೊದಲ ದಿನಗಳಿಂದಲೂ ವಿಧವಾ ವಿವಾಹ ಇದೆಯೆನ್ನುವುದು ವಾಸ್ತವ ಸಂಗತಿ. ಆಧುನಿಕರಾದ ನಾವು ಅದನ್ನೇ ಇಂದು ಸಾಮಾಜಿಕ ಸುಧಾರಣೆ ಎಂದು ಮಾಡಿದ್ದೇವೆ. ನಮ್ಮ ಸಮಾಜದಲ್ಲಿ ಹಲವಾರು ವರ್ಗಗಳಲ್ಲಿ ಅದು ಇತ್ತು ಮತ್ತು ಈಗಲೂ ಇದೆ. ಆದರೆ, ನನ್ನ ವಿರೋಧವಿರುವುದು ಅದನ್ನು ಕಾನೂನಿನ ಸಂಹಿತೆಗಳಿಗೆ ಒಳಪಡಿಸುವುದರ ಬಗ್ಗೆ. ಹೀಗೆ ಸಂಹಿತೆಗೆ ಒಳಪಡಿಸುವುದರಿಂದ ಕೆಳವರ್ಗವೆಂದು ಕರೆಯಲ್ಪಡುವ ವರ್ಗಗಳಲ್ಲಿನ ವಿಚ್ಛೇದನದ ಷರತ್ತುಗಳನ್ನು ಕಠಿಣಗೊಳಿಸಿ, ಮೇಲುವರ್ಗಗಳವರಲ್ಲಿನ ವಿಚ್ಛೇದನ ಪ್ರಕ್ರಿಯೆಯನ್ನು ಸರಳಗೊಳಿಸುತ್ತೇವೆ. ಇದು ಪಾದರಕ್ಷೆಗೆ ತಕ್ಕಂತೆ ಪಾದವನ್ನು ಕೊಯ್ದಹಾಗೆ ಆಗುತ್ತದೆ. ಇದರಿಂದ ಕೆಲವರಿಗೆ ಅತಿ ಒಳ್ಳೆಯದಾಗಬಹುದು, ಕೆಲವರಿಗೆ ಅತಿಯಾಗಿ ಹಾನಿಯಾಗಬಹುದು. ನಮ್ಮ ನಿಲುವೆಂದರೆ, ತಮ್ಮ ತಮ್ಮ ಮಾನಸಿಕ ಹಾಗೂ ನೈತಿಕ ಬೆಳವಣಿಗೆಗೆ ನಿಯಮಿತವಾದ ವಿವಿಧ ವರ್ಗಗಳ ಜನರು ತಮ್ಮ ಜೀವನ ಮಟ್ಟವನ್ನು ಹೊಂದಿರುತ್ತಾರೆ. 'ಸಮಾನತೆ' ಎಂಬ ಹೆಸರನ್ನು ನೀಡಿ, ಬಾಹ್ಯ ಕಾನೂನಿನ ಬಲದಿಂದ ಹಲವಾರು ವರ್ಗಗಳ ಆಂತರಿಕ ಸಮತೋಲನವನ್ನು ಕೆಡಿಸಬಾರದು.

ಸಂ: **ಸಮುದಾಯ ಯೋಜನೆಗಳ ಬಗ್ಗೆ ನಿಮ್ಮ ನಿಲುವೇನು?**

ದೀ : ಅವುಗಳ ಬಗ್ಗೆ ನಮಗೆ ಅನುಕಂಪ ಮತ್ತು ಮೆಚ್ಚುಗೆ ಇದೆ. ಆದರೆ ನಮ್ಮ ಮಾರ್ಗ ಅತ್ಯುತ್ತಮವಾದುದಲ್ಲ. ಸ್ಥಳೀಯ ಸಂಪತ್ತು ಮತ್ತು ಹಳ್ಳಿಗರ ಸಮುದಾಯ ಪ್ರಜ್ಞೆಯ ಬದಲಾಗಿ ಅಮೆರಿಕಾದ ಔದಾರ್ಯದ ಮೇಲೆ ಹೆಚ್ಚಿನ ಒತ್ತನ್ನು ಕೊಡಲಾಗಿದೆ. ನೀರೆತ್ತುವ ಪಂಪುಗಳು ನಿಷ್ಕ್ರಿಯವಾಗಿರುವುದನ್ನು ನಾನೇ ನೋಡಿದ್ದೇನೆ. ಅವುಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸಲಾಗಿದೆ. ತರಬೇತಿ ಇಲ್ಲದವರು ಉಪಯೋಗಿಸುವಾಗ ಸಾಮಾನ್ಯವಾಗಿ ಆಗುವಂತೆ ಅವು ಕೆಟ್ಟುನಿಲ್ಲುತ್ತವೆ. ಅವುಗಳನ್ನು ರಿಪೇರಿಮಾಡುವ ಸೌಲಭ್ಯಗಳೇ ಇಲ್ಲ. ಈ ಯೋಜನೆಗಳ ನಿರ್ವಹಣಾ ವ್ಯವಸ್ಥೆಯ ವಿರುದ್ಧ ಇರುವ ನನ್ನ ಇನ್ನೊಂದು ಆಕ್ಷೇಪಣೆಯೆಂದರೆ, ಅವು ಕ್ರಿಶ್ಚಿಯನ್ ಮಿಷನರಿಗಳು ದೇಶದಲ್ಲಿ ಬೇರೂರಲು ಅವಕಾಶಮಾಡಿಕೊಡುತ್ತವೆ. ಕೆಲವು ಸಂದರ್ಭಗಳಲ್ಲಿ ಈ ಮಿಷನರಿಗಳು ತಾವೇ ಈ ಯೋಜನೆಗಳನ್ನು ಕಾರ್ಯಗತಗೊಳಿಸುವ ಜವಾಬ್ದಾರಿಯನ್ನು ಕೈಗೆತ್ತಿಕೊಂಡಿದ್ದಾರೆ. ಯೋಜನೆಗಳು ತಮ್ಮ ಮೂಲರೂಪದಲ್ಲಿ, ವ್ಯಾಪ್ತಿಯಲ್ಲಿ ಮತ್ತು ಅವುಗಳ ನಿರ್ವಹಣೆಯಲ್ಲಿ ಹೆಚ್ಚು ರಾಷ್ಟ್ರೀಯ ಭಾವನೆಯನ್ನು ಹೊಂದಿರುವಂತೆ ಸರಕಾರವು ಮಾಡಬೇಕೆಂಬುದು ನಮ್ಮ ಆಶಯ.

ಸಂ: **ಆರ್ಥಿಕ ಬೆಳವಣಿಗೆಯ ಗತಿ ಮತ್ತು ದಿಕ್ಕಿನ ವಿಷಯದಲ್ಲಿ ನಿಮಗೆ ತೃಪ್ತಿಯಿದೆಯೇ?**

ದೀ : ಇದೆಯೆಂದು ಹೇಳುವುದು ನನಗೆ ಸಾಧ್ಯವಿಲ್ಲ. ಸರಕಾರವು ಜನಸಂಖ್ಯೆ ಹೆಚ್ಚಳ ಮೊದಲಾದ ಸಮಸ್ಯೆಗಳ ವಿಷಯವಾಗಿ ಮಾತನಾಡುತ್ತಿದೆ. ಆದರೆ ನಾವು ಒತ್ತುಕೊಡಬೇಕಾಗಿರುವುದು ಬೇರೆಯ ರೀತಿಯಲ್ಲಿ. ನಮಗೆ ದೊಡ್ಡ ದೊಡ್ಡ ಸಮಸ್ಯೆಗಳಿರುವಂತೆಯೇ ದೊಡ್ಡ ಸಂಪತ್ತಿನ ಮೂಲಗಳೂ ಇವೆ. ಸರಕಾರಕ್ಕೆ ದೇಶದಲ್ಲಿರುವ ಮೂವತ್ತೈದು ಕೋಟಿ ಬಾಯಿಗಳು ಮಾತ್ರ ಕಾಣುತ್ತದೆ, ಆದರೆ ಎಪ್ಪತ್ತು ಕೋಟಿ ಕೈಗಳು ಇರುವುದನ್ನು ಮರೆತುಬಿಟ್ಟಿದೆ. ನಮ್ಮಲ್ಲಿರುವ ಅಪಾರ ಮಾನವ ಸಂಪನ್ಮೂಲವನ್ನು ಬಳಸಿಕೊಳ್ಳಬೇಕೆಂಬುದು ಆರ್ಥಿಕ ಸೂತ್ರದ ಮೊದಲ ನೀತಿಯಾಗಬೇಕು. ಕೈಗಾರಿಕೆಯೆಂಬುದು ಭರತವರ್ಷಕ್ಕೆ ಹೊಸದೇನಲ್ಲ. ಆದರೆ, ಹಳ್ಳಿಹಳ್ಳಿಗಳಲ್ಲಿರುವ ಕಮ್ಮಾರ ಮೊದಲಾದವರಿಗೆ ತರಬೇತಿ ನೀಡಿ ಅವರನ್ನು ತಂತ್ರಜ್ಞರನ್ನಾಗಿಸುವ ದಿಕ್ಕಿನಲ್ಲಿ ಸರಕಾರ ಏನು ಮಾಡುತ್ತಿದೆ? ಹಳ್ಳಿಗಳ ಉದ್ಧಾರದ ಅಥವಾ ಗುಡಿ ಕೈಗಾರಿಕೆಗಳ ಬಗ್ಗೆ ಯೋಚನೆ ಮೂಡಿದಾಗ ಸರಕಾರಕ್ಕೆ ಜಪಾನಿಗೆ ಅಥವಾ

ಅಮೆರಿಕಾಕ್ಕೆ ನಿಯೋಗಗಳನ್ನು ಕಳಿಸುವುದೇ ಆದ್ಯತೆಯ ವಿಷಯವಾಗುತ್ತದೆ. ನನ್ನ ಅಭಿಪ್ರಾಯದಲ್ಲಿ, ಭಾರತದಲ್ಲಿರುವ ಪರಿಸ್ಥಿತಿ ಆ ದೇಶಗಳಲ್ಲಿರುವ ಪರಿಸ್ಥಿತಿಗಿಂತ ಬಹಳಷ್ಟು ಭಿನ್ನವಾಗಿದೆ ಮತ್ತು ಇಂತಹ ದುಂದುವೆಚ್ಚದ ಸಂತೋಷ ಪರ್ಯಟನಗಳಿಂದ ಯಾವ ಉಪಯೋಗವೂ ಆಗುವುದಿಲ್ಲ. ಸರಕಾರವು ಒಂದೆಡೆ ಸ್ಥಳೀಯ ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಬಗ್ಗೆ ಮಾತನಾಡುತ್ತದೆ, ಆದರೆ ಇನ್ನೊಂದೆಡೆ ಈ ಕೈಗಾರಿಕೆಗಳು ನಶಿಸಿಹೋಗುವಂತೆ ಮಾಡುತ್ತಿದೆ. ಉದಾಹರಣೆಗೆ ಪ್ಲಾಸ್ಟಿಕ್ ಉದ್ಯಮವನ್ನೇ ತೆಗೆದುಕೊಳ್ಳಿ. ಹಳ್ಳಿಗಳಲ್ಲಿ ಕೈಬಳೆಗಳನ್ನು ಮಾಡುತ್ತಿದ್ದವರು ನಾಶವಾದರು. ಗಂಧದ ಮರದ ಕೆಲಸ, ಮೆರುಗಿನ ಎಣ್ಣೆ, ಕಾಗದದ ತಿರುಳು ಮೊದಲಾದವನ್ನು ಉಪಯೋಗಿಸಿ ಮಾಡುತ್ತಿದ್ದ ಕೆಲಸಗಳಲ್ಲಿ ತೊಡಗಿದ್ದವರ ಸ್ಥಿತಿ ಕೂಡ ಹೀಗೇ ಇವೆ. ಗುಡಿ ಕೈಗಾರಿಕೆಗಳಿಗೆ 'ನೆರವು' ನೀಡುವ ಭಾವನೆಯನ್ನು ನಾವು ತೊರೆಯಬೇಕು. ಬದಲಿಗೆ, ಗುಡಿಕೈಗಾರಿಕೆಗಳು ನಮ್ಮ ಕೈಗಾರಿಕಾರಂಗದ ಹೃದಯಭಾಗವೆಂಬುದನ್ನು ನಾವು ಅರಿತುಕೊಳ್ಳಬೇಕು. ಕೇವಲ ಔದಾರ್ಯದ ಮಾತನ್ನಾಡುವುದರಿಂದ ಉಪಯೋಗವಿಲ್ಲ. ಅದಕ್ಕೆ ನಾವು ಸಂಪೂರ್ಣ ನ್ಯಾಯವನ್ನು ಸಲ್ಲಿಸಬೇಕು.

ಸರಕಾರವು ದೊಡ್ಡದೊಡ್ಡ ವಿಷಯಗಳನ್ನು ಚಿಂತಿಸುತ್ತದೆ ಆದರೆ ಅದರ ಅರ್ಥ ನಾವು ಸಣ್ಣ ವಿಷಯಗಳನ್ನು ಮರೆತುಬಿಡಬೇಕೆಂದಲ್ಲ. ದೇಶದಾದ್ಯಂತ ದೊಡ್ಡ ವಿದ್ಯುತ್ ಸ್ಥಾವರಗಳನ್ನು ನಿರ್ಮಿಸುತ್ತಿದ್ದೇವೆ. ಆದರೆ ಹಳ್ಳಿಗಳಲ್ಲಿ ವಿದ್ಯುತ್ತಿನ ಬಳಕೆ ಸರಿಯಾಗಿ ನಡೆಯುವಂತೆ ವ್ಯವಸ್ಥೆಯನ್ನು ಮಾಡಿದ್ದೇವೆಯೇ? ಕೆಲವು ಸ್ಥಾವರಗಳಲ್ಲಿ ಅವುಗಳ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ತಂತ್ರಜ್ಞಾನವಿಲ್ಲ. ಸದ್ಯದಲ್ಲಿ ಹಳ್ಳಿಗಳಲ್ಲಿನ ಸ್ಥಾವರಗಳಿಂದ ಬರುವ ವಿದ್ಯುತ್ತನ್ನು ಅಲ್ಲಿನ ಶ್ರೀಮಂತರ ಫ್ಯಾನುಗಳಿಗಾಗಿ ಅಥವಾ ಅಕ್ಕಿ ಮತ್ತು ಹಿಟ್ಟಿನ ಗಿರಣಿಗಳನ್ನು ನಡೆಸುವುದಕ್ಕಾಗಿ ಮಾತ್ರ ಉಪಯೋಗಿಸಲಾಗುತ್ತಿದೆ. ಅಲ್ಲಿನ ವಿದ್ಯುತ್ತನ್ನು ಗ್ರಾಮಕೈಗಾರಿಕೆಗಳಲ್ಲಿ ಉಪಯೋಗಿಸಿಕೊಳ್ಳುವಂತೆ ಮಾಡುವ ದಿಕ್ಕಿನಲ್ಲಿ ನಮ್ಮ ಪ್ರಯತ್ನ ಶೂನ್ಯ.

ಸಂ: **ಭಾಷಾವಾರು ಪ್ರಾಂತ್ಯಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ದೀ : ನಾವು ಏಕಾತ್ಮಕ ಸ್ವರೂಪದ ಸರಕಾರವನ್ನು ಬಯಸುತ್ತೇವೆ, ಸ್ವಯಮಾಧಿಕಾರದ ಸರಕಾರಗಳನ್ನಲ್ಲ. ಭಾಷಾವಾರು ಪ್ರಾಂತ್ಯಗಳ ರಚನೆಯ ಬಗ್ಗೆ ನಮ್ಮ ವಿಶ್ವಾಸವಿಲ್ಲ. ನಮ್ಮ ಎಲ್ಲಾ ಭಾಷೆಗಳ ಸಂಪೂರ್ಣ ಅಭಿವೃದ್ಧಿಯನ್ನು ನಾವು ಬಯಸುತ್ತೇವೆ. ಈ ಕಾರಣಕ್ಕಾಗಿಯೇ ಉನ್ನತ ಶಿಕ್ಷಣವು ತಾಯ್ನುಡಿಯಲ್ಲಿಯೇ

ಆಗಬೇಕೆಂಬುದು ನಮ್ಮ ಅಪೇಕ್ಷೆ. ಹಿಂದಿಯು ಎಲ್ಲರಿಗೂ ಕಡ್ಡಾಯವಾಗಿರಬೇಕು.

ಸಂ: **ಸಂವಿಧಾನವನ್ನು ತಿದ್ದುಪಡಿಮಾಡಬೇಕೆಂಬ ಹಲವಾರು ಪ್ರಸ್ತಾಪಗಳ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?**

ದೀ : ಸಂವಿಧಾನಕ್ಕೆ ತಿದ್ದುಪಡಿಮಾಡಲೇಬಾರದೆಂಬುವರ ಗುಂಪಿಗೆ ನಾನು ಸೇರಿದವನಲ್ಲ. ನಮ್ಮದು ವಿಶೇಷವಾಗಿ ವಿದೇಶೀ ಸಂವಿಧಾನ. ಅದನ್ನು ಭಾರತೀಕರಣಗೊಳಿಸಬೇಕು. ಹೀಗಾಗಿ ಅದರ ಸ್ವರೂಪವನ್ನು ಬದಲಿಸುವುದನ್ನು ನಾವು ವಿರೋಧಿಸುವುದಿಲ್ಲ. ನಮ್ಮ ಆಕ್ಷೇಪಣೆಯಿರುವುದು ಉದ್ದೇಶಿತ ತಿದ್ದುಪಡಿಗಳ ಬಗ್ಗೆ. ವಾಕ್ಸ್ವಾತಂತ್ರ್ಯದ ಮೇಲೆ ನಡೆಯುತ್ತಿರುವ ಆಕ್ರಮಣಗಳ ಬಗ್ಗೆ ನಾವು ಚಿಂತಿತರಾಗಿದ್ದೇವೆ. ಈ ಉದ್ದೇಶಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕಾದರೆ ಕುಖ್ಯಾತವಾಗಿರುವ ೧೯(ಎ) ವಿಧಿಯನ್ನು ಮೊದಲು ರದ್ದುಗೊಳಿಸಬೇಕು.

ಸಂ: **ನಿರುದ್ಯೋಗದ ಸಮಸ್ಯೆಯ ಬಗ್ಗೆ ನಿಮ್ಮ ಆಲೋಚನೆಗಳೇನು?**

ದೀ : ನಗರಗಳಲ್ಲಿ ನಿರುದ್ಯೋಗದ ಪರಿಸ್ಥಿತಿ ಕೆಟ್ಟಿದ್ದರೆ ಹಳ್ಳಿಗಳಲ್ಲಿ ಅದು ತೀರ ಕೆಟ್ಟಿದೆ. ನಗರಗಳಲ್ಲಿನ ಜನತೆ ಕೂಗಾಡುತ್ತಾರೆ. ಅವರನ್ನು ಸಮಾಧಾನಪಡಿಸಲು ಸರ್ಕಾರ ಚೂರುಪಾರು ನೀಡುತ್ತದೆ. ಆದರೆ ದೂರದಲ್ಲಿರುವ, ಅಸಂಘಟಿತರಾದ, ದನಿಯೇ ಇಲ್ಲದ ಹಳ್ಳಿಗರನ್ನು ಕೇಳುವವರು ಯಾರು? ನಗರಗಳಲ್ಲಿನ ಕೈಗಾರಿಕೆಗಳು ಹಳ್ಳಿಗಳಲ್ಲಿನ ಕೈಗಾರಿಕೆಗಳನ್ನು ನಾಶಮಾಡುತ್ತಿವೆ. ಸ್ವಲ್ಪ ಸಮಯದ ಹಿಂದೆ ಎರಡು ಹಡಗುಗಳಲ್ಲಿ ಅಮೆರಿಕದಿಂದ ಬಂದ ಬಾಚಣಿಗೆಗಳನ್ನು ಬಾಂಬೆಯಲ್ಲಿ ಸುರಿಯಲಾಯಿತು. ಇದರಿಂದ ಸ್ಥಳೀಯ ಬಾಚಣಿಗೆ ಉದ್ಯಮದ ಮೇಲಾಗುವ ಪರಿಣಾಮಗಳನ್ನು ಯೋಚಿಸಲಾಗಿದೆಯೇ? ಸರಕಾರವು ನಗರಗಳಲ್ಲಿನ ಕೈಗಾರಿಕೆಗಳು ಸಮರ್ಪಕವಾಗಿ ನಡೆಸುವುದಕ್ಕೆ ಸಹಾಯಮಾಡಿದರಷ್ಟೇ ಸಾಲದು, ಹಳ್ಳಿಗಳಲ್ಲಿರುವ ಕೈಗಾರಿಕೆಗಳಿಗೂ ಆಧುನಿಕ ಕಾಲದವರ ಅಭಿರುಚಿಗೆ ಹೊಂದುವಂತೆ ಪದಾರ್ಥಗಳನ್ನು ಉತ್ಪತ್ತಿಮಾಡಲು ಅಗತ್ಯವಾದ ತಂತ್ರಜ್ಞಾನವು ದೊರಕುವಂತೆ ಮಾಡಬೇಕು.

ಸಂ: **ಪಂಡಿತ್ ನೆಹರೂ ಅವರ ವಿದೇಶೀ ನೀತಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ದೀ : ಅವರ ವಿದೇಶೀ ನೀತಿಯ ಬಗ್ಗೆ ನಮಗೆ ಹೆಚ್ಚುಕಡಿಮೆ ಸಹಮತವಿದೆ. ಶಕ್ತರಾಷ್ಟ್ರಗಳ ಬಣ–ರಾಜಕೀಯದಲ್ಲಿ ಭಾರತವು ನಿರ್ಲಿಪ್ತವಾಗಿರಬೇಕೆಂಬ ನೀತಿಯ ಬಗ್ಗೆ ಎರಡನೆಯ ಮಾತೇ ಇಲ್ಲ. ಅಲಿಪ್ತ ಬಣವನ್ನು

ಬಲಗೊಳಿಸುವಲ್ಲಿ ಮತ್ತು ಶಾಂತಿವಲಯವನ್ನು ವಿಸ್ತರಿಸುವಲ್ಲಿ ನಮ್ಮ ವಿದೇಶೀ ನೀತಿಯು ಸದಾಕಾಲ ಪ್ರಯತ್ನಶೀಲವಾಗಿರಬೇಕು. ವಿಶ್ವದಲ್ಲಿರುವ ಸಣ್ಣಪುಟ್ಟ ತೊಂದರೆಗಳ ಬಗ್ಗೆ ನಮ್ಮ ವಿದೇಶಾಂಗ ಸಚಿವರು ಹೆಚ್ಚು ಮಾತನಾಡದಿರುವುದು ಸಂತೋಷಕರ ವಿಷಯ. ಬ್ರಿಟಿಷ್ ಗಯಾನಾ ಮತ್ತು ಗ್ವಾಟೆಮಾಲಾಗಳ ವಿಷಯದಲ್ಲಿ ಅವರು ಉದ್ರೇಕಿತರಾಗಲಿಲ್ಲ. ಸಾರ್ವಜನಿಕವಾಗಿ ಕ್ರೋಧಗೊಳ್ಳುವುದರಿಂದ ನಾವು ಪರಿಸ್ಥಿತಿಯನ್ನು ಉತ್ತಮಗೊಳಿಸಲಾರೆವು ಎಂಬ ಸತ್ಯವು ನಮ್ಮ ಅರಿವಿಗೆ ಬಂದಿದೆಯೆಂಬುದರ ಸಂಕೇತ ಇದು.

ಹೀಗೇ ಸರ್ಕಾರದ ವಿದೇಶೀ ನೀತಿಯ ಬಗ್ಗೆ ಸಾಮಾನ್ಯ ವಿಷಯಗಳಲ್ಲಿ ಸಹಮತವಿದ್ದರೂ, ನಾವು ಈ ದಿಕ್ಕಿನಲ್ಲಿ ನಿರ್ದಿಷ್ಟವಾದುದೇನನ್ನೂ ಸಾಧಿಸದಿರುವದರ ಬಗ್ಗೆ ನಮಗೆ ವಿಷಾದವಿದೆ. ಕಾಶ್ಮೀರದ ವಿಷಯದಲ್ಲಿ ವಿಶ್ವಸಂಸ್ಥೆಯಲ್ಲಿ ನಾವೂ ದಯನೀಯವಾಗಿ ಸೋತಿದ್ದೇವೆ. ಟಿಬೆಟ್ಟಿನಲ್ಲಿ ನಡೆಯುತ್ತಿರುವ ವಿದ್ಯಮಾನ ದೆಹಲಿಗೆ ಕೀರ್ತಿ ತರುವಂತಹುದೇನಲ್ಲ. ಸಿಲೋನ್, ಬರ್ಮಾ ಮತ್ತು ದಕ್ಷಿಣ ಆಫ್ರಿಕಾಗಳಲ್ಲಿರುವ ಭಾರತ ರಾಷ್ಟ್ರೀಯರ ೧೯೪೭ ರಿಂದೀಚೆಗಿನ ಪರಿಸ್ಥಿತಿ ಅದಕ್ಕೆ ಮೊದಲಿದ್ದುದಕ್ಕಿಂತ ಹೀನಾಯವಾಗಿದೆ. ಈ ವಾಸ್ತವಾಂಶಗಳ ಬೆಳಕಿನಲ್ಲಿ ನೋಡಿದಾಗ ದೇಶದ ವಿದೇಶೀ ನೀತಿಯು ವಾಸ್ತವಿಕತೆಯಿಂದ ಕೂಡಿಲ್ಲ ಎಂದು ಹೇಳಬೇಕಾಗುತ್ತದೆ.

ನಮ್ಮ ಅಲಿಪ್ತ ನೀತಿಯಲ್ಲಿನ ಆಂತರಿಕವಾಗಿ ಇನ್ನೂ ಹೆಚ್ಚು ನೆಮ್ಮದಿ ಕೆಡಿಸುವ ಅಂಶವೆಂದರೆ ವಿದೇಶೀ ಸಿದ್ಧಾಂತಗಳು ಭಾರತವನ್ನು ಯುದ್ಧಭೂಮಿಯನ್ನಾಗಿಸಿವೆ. ಬೇರಾವ ದೇಶದಲ್ಲಿಯೂ ಊಹಿಸಲಾಗದಷ್ಟು ಸ್ವಾತಂತ್ರ್ಯವನ್ನು ಅಮೆರಿಕಾ ಮತ್ತು ರಷ್ಯಾದೇಶಗಳು ಇಲ್ಲಿ ಪಡೆದಿವೆ. ಎರಡೂ ಪಕ್ಷದ ಎಲ್ಲಾ ತರಹದ ಸಂಘಟನೆಗಳೂ ಭಾರತದ ಜನತೆಯನ್ನು ಅನುನಯಿಸಲು ಉತ್ಕಟವಾಗಿ ಪ್ರಯತ್ನಿಸುತ್ತಿವೆ. ಇವೆರಡರಲ್ಲಿ ಯಾವುದಾದರೂ ಒಂದು ಪಕ್ಷ ದೆಹಲಿಯಲ್ಲಿ ತನ್ನ ಸರ್ಕಾರವನ್ನು ಸ್ಥಾಪಿಸಿದರೂ ಆಶ್ಚರ್ಯವೇನಿಲ್ಲ. ಗ್ವಾಟೆಮಾಲಾ, ಇರಾನ್, ಪಾಕಿಸ್ತಾನಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಇತರ ದೇಶಗಳಿಗೆ ಯಾವ ಭವಿಷ್ಯವಿದೆಯೆಂಬುದರ ಸೂಚನೆಗಳಾಗಿವೆ.

ಭಾರತೀಯ ಜನಸಂಘವು ಇಂತಹ ಪರಿಸ್ಥಿತಿಯೊಂದಿಗೆ ರಾಜಿಮಾಡಿಕೊಳ್ಳದೆ ಅದನ್ನು ವಿರೋಧಿತ್ತದೆ. ಪ್ರಜಾ ಸೋಷಿಯಲಿಸ್ಟ್ ಪಕ್ಷವು ಅಮೆರಿಕದ ಪರವಾಗಿದ್ದರೆ, ಕಮ್ಯುನಿಸ್ಟ್ ಪಕ್ಷವು ರಷ್ಯದ ಪರವಾಗಿದೆ, ಮತ್ತು ಕಾಂಗ್ರೆಸ್ ಪಕ್ಷ ಇಬ್ಬಂದಿಯಂತೆ ಎರಡೂ ದೇಶಗಳ ಪರವಾಗಿ ನಿಂತಿದೆ. ಆದರೆ ಅಖಿಲ ಭಾರತ ಪಕ್ಷಗಳಲ್ಲಿ ಜನಸಂಘವು ಮಾತ್ರ ತಾನು ಯಾವ ದೇಶದ ಪಕ್ಷವನ್ನೂ ವಹಿಸುವುದಿಲ್ಲ ಎನ್ನುತ್ತದೆ.

ಭಾರತವು ಅಲಿಪ್ತವಾಗಿ ಉಳಿದುಕೊಳ್ಳದೆ, ವಿದೇಶೀ ಸಿದ್ಧಾಂತಗಳ ಸಂಘರ್ಷ ಭೂಮಿಕೆಯಾದರೆ, ಅಲಿಪ್ತ ಕೂಟವನ್ನು ನಾವು ಹೇಗೆ ಕಟ್ಟಬಹುದು? ಭಾರತವು ನಿರ್ಲಿಪ್ತ ರಾಷ್ಟ್ರವಾಗಿರುವಂತಹ ಮತ್ತು ವಿದೇಶದ ಸಿದ್ಧಾಂತಗಳನ್ನು ವಿರೋಧಿಸುವಂತಹ ನಿಲುವನ್ನು ಹೊಂದಿರಬೇಕೆಂಬುದು ಜನಸಂಘದ ನೀತಿಯಾಗಿದೆ. ನಮ್ಮ ದೇಶವು ಯಾವ ಗುಂಪಿಗೂ ಸೇರದೆ ತಟಸ್ಥವಾಗಿರುವ ಮೂರನೆಯ ಶಕ್ತಿಯಾಗಬೇಕೆಂಬುದನ್ನು ನಮ್ಮ ಸಂಘವು ಸಮರ್ಥಿಸುತ್ತದೆ.

* * * * *

# ನಮ್ಮ ಯೋಜನೆಗಳ ಅಸ್ತವ್ಯಸ್ತತೆ

*ದೇಶದ ಕ್ಲೇಶಕರ ಆರ್ಥಿಕ ಸಮಸ್ಯೆಗಳ ಬಗ್ಗೆ ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ದೀನ್ ದಯಾಳ ಉಪಾಧ್ಯಾಯರೊಂದಿಗೆ ನಡೆದ ಮಾತುಕತೆಯ ವಿವರಗಳನ್ನು ಇಲ್ಲಿ ಪ್ರಸ್ತುತಪಡಿಸಿದ್ದೇವೆ.* *–ಸಂಪಾದಕ*

ಪ್ರಶ್ನೆ : **ಎರಡನೆಯ ಪಂಚವಾರ್ಷಿಕ ಯೋಜನೆಯು ಅತಿ ಮಹತ್ವಾಕಾಂಕ್ಷೆಯದು ಎಂದು ನೀವು ಪರಿಗಣಿಸುತ್ತೀರಾ?**

ಉತ್ತರ : ಜೀವನದ ಕೆಳಮಟ್ಟ, ನಿರುದ್ಯೋಗ ಮುಂತಾದ ಸಮಸ್ಯೆಗಳನ್ನು ಸಮರ್ಥವಾಗಿ ನಿರ್ವಹಿಸುವ ಲೆಕ್ಕಾಚಾರ ಹಾಕಿಲ್ಲ ಎಂಬ ಅರ್ಥದಲ್ಲಿ ಅದು ಸಣ್ಣದು. ಆದರೆ ಬೃಹತ್ ಉದ್ದಿಮೆಗಳ ಪರವಾಗಿ ಇರುವ ವಿಷಯದಲ್ಲಿ ಅದು ಸಮತೋಲನವಿಲ್ಲದ್ದು, ಸಂಪನ್ಮೂಲಗಳ ಸ್ಥಿತಿಗತಿ ಮುಂತಾದ ವಿಷಯಗಳಲ್ಲಿ ದುರ್ಬಲವಾದದ್ದು ಎಂಬ ಅರ್ಥದಲ್ಲಿ ಅದು ಅತಿ ಮಹತ್ವಾಕಾಂಕ್ಷೆಯದು.

ಪ್ರಶ್ನೆ : **ಮೂರು ಉಕ್ಕಿನ ಕಾರ್ಖಾನೆಗಳನ್ನು ಹೊಂದುವುದು ತೀರಾ ಮಹತ್ವಾಕಾಂಕ್ಷೆಯದು ಎಂದು ನೀವು ಭಾವಿಸುವಿರಾ?**

ಉತ್ತರ : ಹೌದು, ಮೊದಲ ಯೋಜನೆಯ ಅವಧಿಯಲ್ಲಿ ನಾವು ಒಂದಾದರೂ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಿದ್ದಿದ್ದರೆ, ತುಲನಾತ್ಮಕವಾಗಿ ಎರಡನೆಯ ಯೋಜನೆಯಲ್ಲಿ ಎರಡೋ ಮೂರೋ ಕಾರ್ಖಾನೆಗಳನ್ನು ಹೆಚ್ಚು ಸುಗಮವಾಗಿ ಸ್ಥಾಪಿಸಲು ಸಾಧ್ಯವಿತ್ತು. ಆದರೆ ಈ ಮಾರ್ಗದಲ್ಲಿ ಅವರು ಮುಂದುವರಿಯಲಿಲ್ಲ. ಆದರೆ ಈಗ ಏಕಕಾಲದಲ್ಲಿ ಮೂರು ಕಾರ್ಖಾನೆಗಳನ್ನು ಸ್ಥಾಪಿಸಲು ಹೊರಟು ಸಂಪನ್ಮೂಲಗಳ ಬೆನ್ನಟ್ಟಿದ್ದೇವೆ. ಬೃಹತ್ ಗ್ರಾಹಕ ಉದ್ಯಮದ ತೊಂದರೆ ಎಂದರೆ ಅದು ಹೆಚ್ಚು ಹಿಂದುಳಿದ ಮತ್ತು ಮಂದಗತಿಯ ಇತರ ಆರ್ಥಿಕತೆಯೊಂದಿಗೆ ಸಂಬಂಧ ಹೊಂದದಿರುವುದು. ಸರ್ಕಾರವು ಸಣ್ಣ ಪ್ರಮಾಣದ ಉದ್ಯಮದ ಮೇಲೆ ಹಣ ವ್ಯಯಿಸುವಾಗ ಕೂಡ ಅದರಲ್ಲಿ ಹೆಚ್ಚಿನಂಶ ಹೋಗುವುದು

---

**ಮೂಲ ಆಕರ : ಆರ್ಗನೈಸರ್, ದೀಪಾವಳಿ, ೧೯೫೮**

ಚರಖಾದಂಥ ಖಯಾಲುಗಳಿಗೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಣ್ಣ ಪ್ರಮಾಣದ ಉದ್ಯಮಗಳಿಗೆಂದು ೧೬೦ ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಆದರೆ ಇದರಲ್ಲಿ ಕೇವಲ ಕಾಲುಭಾಗದಷ್ಟು ಮೊತ್ತ ಯಾಂತ್ರೀಕೃತ ಸಣ್ಣ ಪ್ರಮಾಣದ ಉದ್ಯಮಕ್ಕೆ ಹೋಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಬೃಹತ್ ಉದ್ಯಮವು ೭೯೦ ಕೋಟಿ ರೂಪಾಯಿಗಳನ್ನು ಪಡೆಯುತ್ತದೆ. ಇಷ್ಟೇ ಅಲ್ಲ, ಬೃಹತ್ ಉದ್ಯಮದ ಬಗೆಗಿನ ಅಂದಾಜು ಮೊತ್ತಗಳು ಸತತವಾಗಿ ಪರಿಷ್ಕೃತಗೊಳ್ಳುತ್ತ ಏರುಮುಖವಾಗಿವೆ. ಸಣ್ಣ ಉದ್ಯಮಗಳಿಗೆ ಬೇಕಾದ ಸಂಪನ್ಮೂಲಗಳನ್ನು ಅವು ನುಂಗಿಹಾಕುತ್ತಿವೆ. ಉದ್ದಿಷ್ಟ ಸಂಪನ್ಮೂಲಗಳನ್ನು ಸಂಗ್ರಹಿಸಲು ಕೂಡ ಆಗದ ವೈಫಲ್ಯವು ಪರಿಸ್ಥಿತಿಯನ್ನು ಮತ್ತಷ್ಟು ಗಂಭೀರಗೊಳಿಸುತ್ತದೆ.

ಪ್ರಶ್ನೆ : **ರೈಲ್ವೆ ಮೇಲಿನ ಖರ್ಚು–ವೆಚ್ಚಗಳ ಬಗ್ಗೆಯೂ ಹೇಳಲು ಸಾಧ್ಯವೆ?**

ಉತ್ತರ : ಹೌದು, ಖಂಡಿತವಾಗಿ, ಗ್ರಾಮೀಣ ಪ್ರದೇಶಗಳಲ್ಲಿ ರೈಲ್ವೆಗಿಂತ ಮೋಟಾರು ಸಾರಿಗೆ ಹೆಚ್ಚು ಉತ್ತಮವಾಗಿ ಸೇವೆ ಸಲ್ಲಿಸಲು ಸಾಧ್ಯ. ಆದರೆ ಸರ್ಕಾರ ರಸ್ತೆ ಮಾರ್ಗಗಳಿಗಿಂತ ಹೆಚ್ಚು ಗಮನವನ್ನು ರೈಲ್ವೆಗೆ ನೀಡುತ್ತಿದೆ. ರೈಲ್ವೆಯ ಆದಾಯ ಸುಮಾರು ೪೦ ಕೋಟಿ ರೂಪಾಯಿಗಳು; ೧೪೦೦ ಕೋಟಿ ರೂಪಾಯಿಗಳ ಮೇಲಿನ ಬಡ್ಡಿಯಾಗುವುದು ನಿಜವಾಗಿ ಲಾಭವೆಂಬುದೇನೂ ಇಲ್ಲ. ಇನ್ನೊಂದೆಡೆ ಸರ್ಕಾರಕ್ಕೆ ವಿವಿಧ ತೆರಿಗೆಗಳ ಮೂಲಕ ಖಾಸಗಿ ಮೋಟಾರು ಸಾರಿಗೆಯಿಂದ ೮೦ ಕೋಟಿ ರೂಪಾಯಿಗಳ ಆದಾಯವಿದೆ. ಇದಲ್ಲದೆ, ರೈಲ್ವೆಯು ಕೇವಲ ೧೧ ಲಕ್ಷ ಜನರನ್ನು ನೇಮಿಸಿಕೊಂಡಿದ್ದರೆ, ಮೋಟಾರು ಸಾರಿಗೆಯು ೨೦ ಲಕ್ಷ ಜನರಿಗೆ ಉದ್ಯೋಗ ನೀಡಿದೆ.

ಉದಾಹರಣೆಗೆ, ಎತ್ತಿನ ಗಾಡಿಯ ವಿಷಯವನ್ನೇ ತೆಗೆದುಕೊಳ್ಳೋಣ. ಅಧಿಕೃತ ಅಂಕಿ–ಅಂಶಗಳ ಪ್ರಕಾರ ರೈಲ್ವೆಗಿಂತ ಹೆಚ್ಚಿನ ಪ್ರಮಾಣದ ಸಾಮಗ್ರಿಗಳನ್ನು ಎತ್ತಿನ ಗಾಡಿಗಳು ಸಾಗಿಸುತ್ತವೆ. ಇಲ್ಲಿನ ಹೂಡಿಕೆ ಸುಮಾರು ೯೦೦ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ನಮ್ಮ ಸಾರಿಗೆ ವ್ಯವಸ್ಥೆಯ ಈ ಕ್ಷೇತ್ರವನ್ನು ಬಲಪಡಿಸಲು ಇನ್ನೂ ಹೆಚ್ಚಿನ ಉತ್ತೇಜನ ನೀಡಬೇಕಾಗಿದೆ.

ಪ್ರಶ್ನೆ : **ಹೇಗೆ?**

ಉತ್ತರ : ಗ್ರಾಮರಸ್ತೆಗಳನ್ನು ಮಾಡುವುದರ ಮೂಲಕ, ಅವರು ರಬ್ಬರ್ ಟೈರುಗಳನ್ನು ಬಳಸಲು ಸಾಧ್ಯವಾಗುವಂತೆ ಮಾಡುವುದರ ಮೂಲಕ ಹೆಚ್ಚು ಉತ್ತಮ

ತಳಿಯ ಎತ್ತುಗಳನ್ನು ಸಾಕಲು ನೆರವು ನೀಡುವುದರ ಮೂಲಕ, ಇತ್ಯಾದಿ, ಇತ್ಯಾದಿ.

ಪ್ರಶ್ನೆ : **ಶ್ರೀ ಜೆ. ಸಿ. ಕುಮಾರಪ್ಪನವರು ಗಾಳಿ ತುಂಬಿದ ಟೈರುಗಳಿಗೆ ಆಕ್ಷೇಪಿಸುತ್ತಾರಲ್ಲ?**

ಉತ್ತರ : ಏಕೆಂದರೆ ಅವು ಪ್ರಾಯಃ ಗ್ರಾಮಗಳಲ್ಲಿ ತಯಾರಾಗುವುದಿಲ್ಲ ಎಂದು ಆದರೆ ಕೇವಲ ಹಳ್ಳಿಗಳಲ್ಲೇ ಉತ್ಪಾದಿತವಾದ ಸಾಮಗ್ರಿಗಳನ್ನು ಹಳ್ಳಿಯ ಜನರು ಬಳಸಬೇಕೆಂದು ನಾವು ಯೋಚಿಸಲು ಸಾಧ್ಯವಿಲ್ಲ. ನಮ್ಮ ನಿಲುವಾದರೋ ಸರ್ಕಾರ ಮತ್ತು ಸರ್ವೋದಯದವರ ನಡುವೆ ಎಲ್ಲೋ ಇದೆ.

ಮತ್ತೆ ದೋಣಿ ಮೂಲಕ ಸಾಗಣೆ ವ್ಯವಸ್ಥೆಯೂ ಇದೆ. ನದಿಗಳ ಹೂಳೆತ್ತಿ ನೌಕಾಯಾನ ಸುಲಭವಾಗುವಂತೆ ಮಾಡಲು, ರೈಲು ಮತ್ತು ರಸ್ತೆ ಸಾರಿಗೆಗಳೊಡನೆ ಅದು ಸ್ಪರ್ಧಿಸುವಂತೆ ಮಾಡಲು ಸ್ವಲ್ಪ ಗಮನ ಹರಿಸಿದರೆ ಸಾಕು. ಆದರೆ, ಇಲ್ಲಿ ದೊಡ್ಡ ದೊಡ್ಡ ವಿಷಯಗಳನ್ನೇ ಕುರಿತು ಈ ಜನರು ಮಾತನಾಡುತ್ತಿದ್ದಾರೆ. ತುಂಬ ಚಿಕ್ಕಮಟ್ಟ ವಿಷಯಗಳ ಬಗ್ಗೆ ಯಾರೂ ಲಕ್ಷ್ಯ ವಹಿಸುವುದಿಲ್ಲ.

ಪ್ರಶ್ನೆ : **ವಿದೇಶಿ ಸಾಲಗಳನ್ನು ನೀವು ಹೇಗೆ ಕಾಣುವಿರಿ?**

ಉತ್ತರ : ಅವು ಸ್ವಾಭಾವಿಕವಾಗಿ ಹರಿದು ಬಂದಲ್ಲಿ ಸರಿಯಾದುದೇ. ಆದರೆ ಅವುಗಳ ಮೇಲೆ ಸಂಪೂರ್ಣ ಅವಲಂಬನೆಯ ಭಾವನೆಯನ್ನು ಇಟ್ಟುಕೊಳ್ಳುವುದು ತಪ್ಪು. ವಿದೇಶೀ ಸಾಲಗಳ ಮೇಲಿನ ಅಸಹಾಯಕ ಅವಲಂಬನೆಯಾದರೋ ಅದರ ಪರಿಣಾಮದಲ್ಲಿ ಶಕ್ತಿಹೀನ ಗೊಳಿಸುವಂಥದು. ಪ್ರತಿಯೊಬ್ಬ ಅರ್ಥಮಂತ್ರಿಯೂ ಭಿಕ್ಷಾಪಾತ್ರೆ ಯೊಂದಿಗೆ ವಿದೇಶಕ್ಕೆ ಹೋಗಬೇಕಾಗಿರುವುದು ವಿಷಾದಕರ.

ಚೆನ್ನಾದ, ಸಮತೋಲನದಿಂದ ಕೂಡಿದ, ಯೋಜನೆಯೊಂದಕ್ಕೆ ಹಣ ಒದಗಿಸಲು ನಮಗೆ ಸಾಕಷ್ಟು ಸಂಪನ್ಮೂಲಗಳಿವೆ ಎಂದು ನನಗೆ ತೋರುತ್ತದೆ. ಆದರೆ ಈ ಕಾರ್ಯವನ್ನು ಸರ್ಕಾರವು ಸರಿಯಾಗಿ ನಿರ್ವಹಿಸಲು ಹೋಗುವುದಿಲ್ಲ. ಲೇವಾದೇವಿದಾರನೆಂಬಾತನಲ್ಲಿ ಪ್ರಾಚೀನ ಸ್ಥಳೀಯ ಬ್ಯಾಂಕಿಂಗ್ ವ್ಯವಸ್ಥೆಯೊಂದು ನಮಗಿದೆಯಲ್ಲ. ಗ್ರಾಮದ ಆರ್ಥಿಕತೆಯ ದೊಡ್ಡ ಆವಶ್ಯಕತೆಯನ್ನು ಆತ ಪೂರೈಸುತ್ತಾನೆ. ಈ ವ್ಯವಸ್ಥೆಯಲ್ಲಿನ ಆಕ್ಷೇಪಣೀಯವಾದ ದೋಷಗಳನ್ನು ತೆಗೆದುಹಾಕಿ ಅದನ್ನು ಉತ್ತಮಪಡಿಸುವ ಬದಲಾಗಿ ಸರ್ಕಾರವು ಅದನ್ನು ಪರಿಹಾಸ್ಯ ಮಾಡುತ್ತದೆ. ಆದರೂ ಅವರಿಗೆ ಗ್ರಾಮಕ್ಕೆ ಆಧುನಿಕ ಬ್ಯಾಂಕಿಂಗ್

ವ್ಯವಸ್ಥೆಯನ್ನು ಕೊಂಡೊಯ್ಯುವುದಕ್ಕಿಂತ ಅಸ್ತಿತ್ವದಲ್ಲಿರುವ ಗ್ರಾಮೀಣ ಸಾಲದ ವ್ಯವಸ್ಥೆಯನ್ನು ನಿರ್ನಾಮಗೊಳಿಸುವುದು ಸುಲಭವಾದುದು. ನಮ್ಮ ಹಿಂದುಳಿದ ಗ್ರಾಮೀಣ ಆರ್ಥಿಕತೆಗೆ ಆಧುನಿಕ ಬ್ಯಾಂಕುಗಳು ಹೊಂದಿಕೊಳ್ಳುವುದಿಲ್ಲವೆಂಬುದನ್ನು ಅವರು ಮರೆತುಬಿಡುತ್ತಾರೆ. ಉದಾಹರಣೆಗೆ ಕೃಷಿಕನ ನಿಜವಾದ ಆವಶ್ಯಕತೆಯಾದ ಕೆಲಸಕ್ಕೆ ಬೇಕಾದ ಖರ್ಚುವೆಚ್ಚಗಳಿಗೆ ಬ್ಯಾಂಕೊಂದು ಹಣ ನೀಡುವುದಿಲ್ಲ.

ರಾಷ್ಟ್ರದ ಆತ್ಮವಿಶ್ವಾಸವನ್ನು ವಿದೇಶೀ ಸಾಲಗಳು ಖಂಡಿತವಾಗಿ ದುರ್ಬಲಗೊಳಿಸುತ್ತವಷ್ಟೇ ಅಲ್ಲ, ಅವು ತೀರ ಆರ್ಥಿಕವಾಗಿ ಪ್ರಯೋಜನಕಾರಿಯಾದ ಸಲಹೆಯೂ ಅಲ್ಲ. ಈ ಸಾಲಗಳಲ್ಲಿ ಬಹು ಹೆಚ್ಚಿನವು ಬರುವುದು ಅಮೆರಿಕ ಸಂಯುಕ್ತ ಸಂಸ್ಥಾನಗಳಿಂದ (ಯು.ಎಸ್.ಎ). ಅವು ಸಲೀಸಾಗಿ ಪರಿವರ್ತಿತವಾಗಬಲ್ಲ ಸಾಲಗಳಲ್ಲ. ಈ ಸಾಲದ ಹಣವನ್ನು ಸಾಲಕೊಟ್ಟ ದೇಶದಲ್ಲೇ ವೆಚ್ಚ ಮಾಡಬೇಕಾದ್ದು ಆವಶ್ಯಕ. ಆದರೆ ಅಮೆರಿಕದ ಬೆಲೆಗಳು ಬ್ರಿಟಿಷ್ ಬೆಲೆಗಳಿಗಿಂತ ಸುಮಾರು ಶೇಕಡ ೩೦ರಷ್ಟು ಹೆಚ್ಚಿನವು !

ಇಷ್ಟೇ ಅಲ್ಲದೆ, ಇಲ್ಲಿಂದ ಆಮದು ಮಾಡಿಕೊಳ್ಳುವ ಯಂತ್ರಗಳಲ್ಲಿ ಕೆಲವು ನಮಗೆ ಬಹಳ ಆಧುನಿಕವಾದವು. ಹೀಗಾಗಿ ಅದನ್ನು ಬಳಸಲು ವಿದೇಶೀ ಪರಿಣತರನ್ನು ನಾವು ಆಮದು ಮಾಡಿಕೊಳ್ಳುತ್ತೇವೆ. ಹೀಗಾಗಿ ಈ ಇಡೀ ವ್ಯವಹಾರವೇ ವ್ಯರ್ಥವಾದದ್ದು.

ನಾನು ಹೇಳಿದ ಹಾಗೆ ಸಣ್ಣ ಉದ್ದಿಮೆಯ ಕಡೆಗೆ ಯಾರೂ ಗಮನ ನೀಡುತ್ತಿಲ್ಲ. ಕೇವಲ ಅದರಿಂದಲೇ ಹೆಚ್ಚಿನ ಜನರ ನೇಮಕಾತಿ ಸಾಧ್ಯ. ಆದರೆ ಅದಕ್ಕೆ ಸಣ್ಣ ಪ್ರಮಾಣದ ಹಣ ಹೂಡಿಕೆ ಆವಶ್ಯಕ. ಮಹಾರಾಷ್ಟ್ರದ ಈಚಲ ಕರಂಜಿಯು ತನ್ನ ವಿದ್ಯುತ್ ಮಗ್ಗಗಳಿಂದಾಗಿ ಪ್ರಸಿದ್ಧವಾಗಿದೆ. ಆದರೆ ಅವು ವಿದ್ಯುತ್ತಿನ ಕೊರತೆಯನ್ನು ಎದುರಿಸುತ್ತಿವೆ. ಸಮೀಪದಲ್ಲಿಯೆ ಇರುವ ಕೊಯ್ನಾ ಯೋಜನೆಯಿಂದ ವಿದ್ಯುತ್ತಿನ ಉತ್ಪಾದನೆಯಾಗುತ್ತಿದೆ. ಆದರೆ ಅವೆಲ್ಲವನ್ನೂ ಬೃಹತ್ ಉದ್ಯಮಗಳಿರುವ ಬೊಂಬಾಯಿ ನಗರಕ್ಕೆ ಹರಿಸಲಾಗುತ್ತಿದೆ. ಈಚಲ ಕರಂಜಿಯ ಮಗ್ಗಳಿಗೆ ತಮ್ಮ ವಿದ್ಯುತ್ ಬಳಕೆಯನ್ನು ಕಡಿಮೆ ಮಾಡುವಂತೆ ಹಾಗೂ ಸಂಜೆ ೭ರ ಅನಂತರ ಮಗ್ಗಗಳು ಕೆಲಸ ಮಾಡಬಾರದೆಂದು ಸೂಚಿಸಲಾಗಿದೆ !

ಪ್ರಶ್ನೆ : **ಹಿಡುವಳಿ ಜಮೀನುಗಳಿಗೆ ಒಂದು ವೇದಿಕೆ ಹಾಗೂ ಗರಿಷ್ಠಮಿತಿ ಇರಬೇಕೆಂಬುದು ನಿಮ್ಮ ಆಲೋಚನೆಯೆ?**

ಉತ್ತರ : ಹೌದು, ಐದು ಎಕರೆಗಳಿಗಿಂತ ಕಡಿಮೆ ಹಿಡುವಳಿ ಜಮೀನು ಇರುವುದು ಆರ್ಥಿಕ ಲಾಭದ್ದಾಗುವುದಿಲ್ಲವೆಂಬುದು ನಮ್ಮ ಭಾವನೆಯಾಗಿದೆ. ಇದಕ್ಕಿಂತ ಕಡಿಮೆ ಜಮೀನಿನ ಛಿದ್ರೀಕರಣವನ್ನು ನಿಷೇಧಿಸಬೇಕು. ವರ್ಷಕ್ಕೆ ಸುಮಾರು ೧೦,೦೦೦ ರೂಪಾಯಿಗಳ ಆದಾಯವಿರುವ ಜಮೀನಿಗೆ ಗರಿಷ್ಟಮಿತಿಯನ್ನು ವಿಧಿಸಬಹುದು. ಯೋಜನಾ ಆಯೋಗದ ೩೬೦೦ ರೂಪಾಯಿಗಳ ಆದಾಯದ ಮಿತಿಯ ನಿಲವು ನ್ಯಾಯಸಮ್ಮತವೆಂದು ನನಗನ್ನಿಸುವುದಿಲ್ಲ. ಎಲ್ಲರಿಗೂ ಸಾಕಾಗುವಷ್ಟು ಭೂಮಿ ಇಲ್ಲವೆಂಬುದು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಕೂಗುವವರಿಗೆ ಅರ್ಥವಾದಂತೆ ಕಾಣುವುದಿಲ್ಲ. ಗರಿಷ್ಠಮಿತಿ ಮೀರಿದ ಜಮೀನು ಉಳುವವನಿಗೇ ಹೋಗಬೇಕೆಂಬುದು ನಮ್ಮ ಆಲೋಚನೆಯಾಗಿದೆ. ಭೂಮಿಯ ಅತ್ಯಂತ ಸಂಭವನೀಯ ಬಳಕೆಗೆ ಅದೊಂದೆ ಸರಿಯಾದ ಮಾರ್ಗ. ಇನ್ನೂ ಕೆಳಗಿನ ಮಿತಿ ವಿಧಿಸುವುದರಿಂದ ಇಡೀ ಗ್ರಾಮ ಪ್ರದೇಶವನ್ನು ಏಕರೂಪದ ಬಡತನಕ್ಕೆ ಇಳಿಸಿದಂತೆ ಆಗುವುದು.

ಪ್ರಶ್ನೆ : **ಮೂರನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ ನಿಮ್ಮ ಆಲೋಚನೆಗಳೇನು?**

ಉತ್ತರ : ಎರಡನೆಯ ಪಂಚವಾರ್ಷಿಕ ಯೋಜನೆಯಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯುವುದಕ್ಕಾಗಿಯೇ ಮೂರನೆಯ ಯೋಜನೆಯ ಅಕಾಲಿಕ ವಿಚಾರವನ್ನು ಹರಿಬಿಡಲಾಗಿದೆ ಎನ್ನುವುದು ನನ್ನ ಭಾವನೆಯಾಗಿದೆ. ಅದು ವಿಷಯಾಂತರ ಮಾಡುವ ಮಾತು.

* * * * *

# ಪ್ರಪಂಚದ ಸ್ಥಿತಿಯ ಕುರಿತು ಜನಸಂಘದ ದೃಷ್ಟಿ

ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಗಳಾದ ಪಂ। ದೀನ್ ದಯಾಳ್ ಉಪಾಧ್ಯಾಯರೊಂದಿಗೆ ಸಂಪಾದಕರೊಬ್ಬರು ನಡೆಸಿದ ಸಂದರ್ಶನದಲ್ಲಿ SEATOದ ರಚನೆಯನ್ನು ಮತ್ತು ಕ್ವಿಮೋಯ್ ಮೇಲಿನ ಬಾಂಬ್ ದಾಳಿ ಶಾಂತಿಯ ವಾತಾವರಣಕ್ಕೆ ಅಪಾಯಕಾರಿಯಾದದ್ದೆಂದು ಬಲವಾಗಿ ಪ್ರತಿಪಾದಿಸಿದರು.

ಸಂ. : **SEATO ಬಗ್ಗೆ ನಿಮ್ಮ ಅಭಿಪ್ರಾಯವೇನು?**

ದೀ.ದ.: ಈ ಎಲ್ಲ ಸೈನಿಕ ಮೂಲದ SEATO, NATO, ANZUS ಮತ್ತು ಅಂಥವು ವಿಶ್ವಸಂಸ್ಥೆಯ ಉದ್ದೇಶವನ್ನೇ ಹಾಳುಗೆಡಹುವಂಥವು ಎಂದು ನಾವು ಗ್ರಹಿಸುತ್ತೇವೆ. ಸತತ ಬೆದರಿಕೆಯನ್ನು ನಾವು ಕಡಿಮೆಗೊಳಿಸುತ್ತಿಲ್ಲ. ಅದು ರಾಷ್ಟ್ರೀಯತೆಯೊಂದಿಗೆ ತಳಿಕೆ ತಳುಕು ಹಾಕಿಕೊಂಡರೆ ಅದು ಅತಿ ಕ್ಲಿಷ್ಟಕರ ಮತ್ತು ಸ್ಫೋಟಕ. ಆದಾಗ್ಯೂ ನಾವು ಅಂದುಕೊಳ್ಳುವುದೇನೆಂದರೆ – ಅಮೆರಿಕವೇನಾದರೂ ಅದರ ಸ್ವಾತಂತ್ರದ ತತ್ವವನ್ನು ಮತ್ತು ಪ್ರಜಾಪ್ರಭುತ್ವವನ್ನು ವ್ಯಾಜ್ಯದ ಪರಿಧಿಗೆ ತಂದರೆ ಸ್ಥಿತಿ ಹಗುರಾಗಿ ಬಗೆಹರಿಯಬಹುದು. ಅಮೇರಿಕಾ ಅದರ ತತ್ತ್ವಕ್ಕೆ ಸಂಪೂರ್ಣ ಬದ್ಧರಾಗಿರಬೇಕು ಮತ್ತು ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಹಕರಿಸಬೇಕು. ಆದರೆ ಅದರ ಈಗಿನ ಮಿಲಿಟರಿ ಶಕ್ತಿಯನ್ನು ಬಳಸುವ ನಿಯಮ ನೋಡಿದರೆ ಅಂಥದ್ದನ್ನು ಮಾಡುವುದು ಕಷ್ಟ ಮತ್ತು ಕಮ್ಯುನಿಸಂನಿಂದ ವಿಷಯಗಳನ್ನು ಪರಿಹರಿಸದು. ಮೂರು ಇಂಡೋಚೈನಾ ರಾಷ್ಟ್ರಗಳು SEATO ಸೇರುವುದು ಆಕ್ಷೇಪಾರ್ಹವಾದದ್ದು. ಇದು ಜಿನೇವಾ ಒಪ್ಪಂದಕ್ಕೆ ವಿರುದ್ಧವಾದದ್ದೆಂದು ನಾವು ಭಾವಿಸುತ್ತೇವೆ. ಇದು ನಮ್ಮ ಗಡಿಯಲ್ಲಿ ಶೀತಲ ಸಮರಕ್ಕೆ ನಾಂದಿ ಹಾಡಬಹುದು.

ನಮಗೆ ಭಯವೆಂದರೆ ಇದು ಯೂರೋಪಿನ ಆಳ್ವಿಕೆಯ ಅಭಿವ್ಯಕ್ತಿ. ವಿಶ್ವಸಂಸ್ಥೆ ಕೂಡಾ ಇಂಥ ಸಾಧನವನ್ನು ಒಳಗೊಂಡಿದೆ. ಕೇವಲ ನಾಲ್ಕು ಯೂರೋಪಿನ ಶಕ್ತಿಗಳು ಮತ್ತು ಒಂದು ಏಷ್ಯಾ ಶಕ್ತಿ – ಅದು ಅದರ ರಚನೆಯ ಹೊತ್ತಿಗಿತ್ತು –

---

**ಮೂಲ ಆಕರ : ಆರ್ಗನೈಸರ್, ೨೧, ಫೆಬ್ರವರಿ, ೧೯೫೫**

ಅವು ಖಾಯಂ ರಾಷ್ಟ್ರಗಳು. ಭದ್ರತಾ ಸಮಿತಿಯ ಖಾಯಂ ರಾಷ್ಟ್ರಗಳು. ಈಗ ಇದರ ಮಾರ್ಪಾಟಿನ ಅಗತ್ಯವಿದೆ. ಭಾರತ ಕೂಡಾ ಖಾಯಂ ರಾಷ್ಟ್ರದ ಸ್ಥಾನ ಪಡೆಯಬೇಕು.

ಸಂ.: **ಏಷ್ಯಾ ಮತ್ತು ಆಫ್ರಿಕಾ ದೇಶಗಳ ಒಕ್ಕೂಟಗಳ ಉದ್ದೇಶಿತ ಸಭೆಯ ಕುರಿತು ತಮ್ಮ ಅಭಿಪ್ರಾಯವೇನು? ಮತ್ತು ಅವುಗಳ ವ್ಯಾಪ್ತಿಯ ವಿಸ್ತಾರದ ಕುರಿತು ಏನು ಹೇಳುತ್ತೀರಿ?**

ದೀ.ದ.: ಇದು ಒಳ್ಳೆಯ ವಿಚಾರ.

ಸಂ.: **ಪ್ರಧಾನಿಯವರ ಉದ್ದೇಶಿತ ಚೀನಾ ಭೇಟಿಯ ಕುರಿತು ತಮ್ಮ ಅಭಿಪ್ರಾಯವೇನು?**

ದೀ.ದ.: ಒಳ್ಳೆಯದು. ಪ್ರಧಾನಿಯವರು ಅಮೆರಿಕಾಕ್ಕೆ ಭೇಟಿ ಕೊಡುವುದಾದರೆ ಚೀನಾಕ್ಕೂ ಕೊಡಬಹುದು. ಭಾರತ ಮತ್ತು ಚೀನಾ ಚಾರಿತ್ರಿಕವಾಗಿ ಸ್ನೇಹಿತರು. ಮತ್ತೆ ಮೈತ್ರಿಯ ಮೂಲಕ ರಷ್ಯಾದ ಏಕ ಘನಶಿಲ್ಪ ವ್ಯವಸ್ಥೆಯಿಂದ ಮುಕ್ತವಾಗಬಹುದೆಂದು ಆಶಿಸಬಹುದು. ಆದಾಗ್ಯೂ ನಾವು ಕಮ್ಯುನಿಸ್ಟರಾಗಲು ಹೊರಟಿಲ್ಲ ಎಂಬ ಎಚ್ಚರಿಕೆ ಅಗತ್ಯ. ಚೀನಾ ಜೊತೆಗಿನ ಸಂಬಂಧ ಶಕ್ತಿ ನೀಡಬಹುದು ಮತ್ತು ಸ್ಥಳೀಯ ಕಮ್ಯುನಿಸ್ಟರಿಗೆ ಘನತೆ ಎಂದಾಗಬಹುದು. ಅವರು ರಷ್ಯಾ ಮತ್ತು ಚೈನಾದ ವಿಜಯದ ಬೆಳಕಿನ ಪ್ರತಿಫಲನದಲ್ಲಿ ಹೊಳೆಯಬಹುದು. ಕಮ್ಯುನಿಸ್ಟರು ಭಾರತಕ್ಕೆ ಆಹ್ವಾನವಿತ್ತಿದ್ದಾರೆ. ಭಾರತೀಯ ಕಮ್ಯುನಿಸ್ಟರ ರಾಷ್ಟ್ರ ವಿರೋಧಿ ಗುಣವನ್ನು ಜನ ಮರೆಯುತ್ತಿದ್ದಾರೆ. ಸಂಗತಿಗಳಿಗೆ ಮೋಡ ಮುಸುಕುತ್ತಿದೆ.

ಸಂ.: **ಕ್ವಿಮೋಯಿ ದ್ವೀಪದ ಮೇಲಿನ ದಾಳಿಗೆ ಏನು ಹೇಳುತ್ತೀರಿ?**

ದೀ.ದ: ಜಿನೇವಾ ಒಪ್ಪಂದದ ಮೂಲಕ ಮೂಡಿದ ಶಾಂತಿಯ ವಾತಾವರಣವನ್ನದು ಕದಡುತ್ತದೆ. ಜಿನೇವಾ ಒಪ್ಪಂದದ ನಂತರ ಆ ಚೀನಾ ಫೋರ್‌ಮೋಸಾ ದಿಗ್ವಿಜಯದ ಕೂಗನ್ನೆಬ್ಬಿಸಿದೆ. ನೆಹರೂ ಚೂ ನಡುವಿನ ಮಾತುಕತೆ ಚೀನಾದ ಶಾಂತಿಯ ಕಾತುರತೆಯನ್ನು ಎತ್ತಿಹಿಡಿಯುವುದಕ್ಕೆ ಸಾಕ್ಷಿಯೇನಲ್ಲ. ಬಹುಶಃ ಫೋರ್‌ಮೋಸಾದಲ್ಲಿ ಅಮೇರಿಕೆಯ ಪ್ರಭಾವವಿರಬಹುದು. ಆದರೆ ಆಳ್ವಿಕೆ ನಡೆಸಿದ ಚಾಂಗ್‌ಕೈಸೇಕ್ ನಿನ್ನೆಯವರೆಗೂ ಅಖಂಡ ಚೀನಾದ ಅಧ್ಯಕ್ಷನಾಗಿದ್ದವನು. ಅದಕ್ಕಿಂತ ಹೆಚ್ಚಾಗಿ ಫೋರ್‌ಮೋಸಾ ಚೀನಾದ ಆಳ್ವಿಕೆಗೆ ಒಳಪಟ್ಟದ್ದು. ಆದ್ದರಿಂದ ಅದರ ಬಿಡುಗಡೆಯ ಕುರಿತು ಚೀನಾ ಮಾತನಾಡಲು ಕಾರಣಗಳಿಲ್ಲ. ವಿಶೇಷವಾಗಿ ಅದು ಕಠಿಣ ಪ್ರಪಂಚದ ಸ್ಥಿತಿಯನ್ನು ಜಿನೇವಾ ನಂತರವೂ ಹದಗೆಡಿಸುತ್ತಿದೆ. ಅದು ಈ ಸಮಸ್ಯೆಯಿಂದ

ಯಾಕೆ ಮುಕ್ತವಾಗುತ್ತಿಲ್ಲ ಎಂಬುದು ಸ್ಪಷ್ಟವಾಗುತ್ತಿಲ್ಲ. ಮೂರನೆ ಒಂದಂಶದ ಕಾಶ್ಮೀರವನ್ನು ಪಾಕಿಸ್ತಾನ ಕಾನೂನನ್ನು ಮೀರಿ ಭಾರತದಿಂದ ಆಕ್ರಮಿಸಿದೆ. ಆದರೆ ನಮ್ಮ ಪ್ರಧಾನಿ ಅದನ್ನು ಮುಕ್ತಗೊಳಿಸಲು ಸಿದ್ಧರಿರದೆ ನೀಡುವ ಕಾರಣವೆಂದರೆ ಬಲಪ್ರಯೋಗದಿಂದ ಸಮಸ್ಯೆಯನ್ನು ಇತ್ಯರ್ಥಗೊಳಿಸುವುದರಲ್ಲಿ ನಂಬಿಗೆಯಿಲ್ಲ ಎಂದು. ಹೀಗಿದ್ದಾಗ ಫೋರ್‌ಮೋಸಾ ಯುದ್ಧದ ಕುರಿತು ಮೌನತಾಳಿದ್ದಾರೆ ಹಾಗೂ ವಿದೇಶಿ ಆಳ್ವಿಕೆಗೆ ಒಳಪಟ್ಟ ಮುಖ್ಯ ಪ್ರದೇಶವಾದ ಗೋವಾವನ್ನು ಮುಕ್ತಗೊಳಿಸಲು ತಿರಸ್ಕರಿಸುತ್ತಿರುವುದು ವಿಚಿತ್ರವಾಗಿದೆ. ಬಲಪ್ರಯೋಗದಿಂದ ಚೀನಾ ಆಳ್ವಿಕೆಗೆ ಒಳಪಟ್ಟ ಚೀನಾ ತೀರದ ದ್ವೀಪವನ್ನು ಮುಕ್ತಗೊಳಿಸುವುದರ ವಿರುದ್ಧ ಚಕಾರ ಎತ್ತುತ್ತಿಲ್ಲ. ಅದು ಚೀನಾದ ಮುಖ್ಯಭಾಗದಂತೆ ವಿನಃ ರಾಜಕೀಯ ಒತ್ತಡದಿಂದಲ್ಲ.

ಟಿಬೆಟಿನ ವಿಷಯವನ್ನೇ ತೆಗೆದುಕೊಳ್ಳಿ. ಅದನ್ನು ಚೀನಾ ಆಕ್ರಮಿಸಿಕೊಂಡು ಆಳುತ್ತಿದೆ. ಟಿಬೆಟಿನ ಇತಿಹಾಸದಲ್ಲಿ ಹಿಂದೆಂದೂ ಹೀಗಾಗಿರಲಿಲ್ಲ. ಚೀನಾ ಆಕ್ರಮಣ ಸ್ವಭಾವಿಕ ಸ್ವಭಾವದ್ದು. ಅದರೊಟ್ಟಿಗೆ ಕಳೆದ ವರ್ಷದವರೆಗೆ ಟಿಬೆಟ್ ನೇಪಾಳಕ್ಕೆ ಕಪ್ಪ ಒಪ್ಪಿಸುತ್ತಿತ್ತು. ಈಗ ಇಡೀ ವ್ಯವಸ್ಥೆ ಬದಲಾಗಿದೆ. ಚೀನಾ ಟಿಬೆಟನ್ನು ಆಕ್ರಮಿಸಿದೆ. ಇದು ನವವಸಾಹತುಷಾಹಿ ಆಳ್ವಿಕೆಗೆ ವಿರುದ್ಧ. ಪ್ರಪಂಚದ ಈ ನವವಸಾಹತುವಿನ ಸ್ವಾತಂತ್ರ್ಯದ ಕುರಿತು ಭಿಡೆಬಿಟ್ಟು ಪ್ರತಿಭಟಿಸಬೇಕು.

ಇತಿಹಾಸದುದ್ದಕ್ಕೂ ಮಧ್ಯ ಏಷ್ಯಾ ಭಾರತದ ಭಾಗವಾಗಿತ್ತು. ಕಳೆದ ಶತಮಾನದಲ್ಲಷ್ಟೇ ಬೇಪಾ ರಾವಲ್‌ಸಿಂಗ್ ಅಪಘಾನ್ ಆಳಿದ ಮತ್ತು ಕನಿಘರ್ ತಲುಪಿದ. ಮತ್ತೆ ನಾವು ಆ ಪ್ರದೇಶಗಳನ್ನು ಹೊಂದುವುದು ಈಗ ನ್ಯಾಯವೆಂದು ಸಾಧಿಸಲಾದೀತೇ? ಚೀನಾದ ಟಿಬೆಟಿನ ಕುರಿತ ವಾದವು ಇದಕ್ಕಿಂತ ಭಿನ್ನವಲ್ಲ.

* * * * *

# ಡೆಲ್ಲಿ ಡೈರಿ

## ದೀನ್ ದಯಾಳ್‌ರ ಜೊತೆ ಒಂದು ಗಂಟೆ

ದೀನ್ ದಯಾಳ್ ಉಪಾಧ್ಯಾಯರು ಕೇವಲ ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಗಳಷ್ಟೇ ಆಗಿರದೇ, ರಾಷ್ಟ್ರೀಯ ಸಮಸ್ಯೆಗಳ ಸಮರ್ಥ ವಿದ್ಯಾರ್ಥಿಯೂ ಆಗಿದ್ದಾರೆ. ಈ ಕೆಳಗೆ ಕಳೆದ ವಾರ ನಡೆಸಿದ ಒಂದು ಸಂಭಾಷಣೆಯ ಸಮಯದಲ್ಲಿ ಕೇರಳ, ಸ್ವತಂತ್ರ ಪಕ್ಷ ಹಾಗೂ ಕಾಂಗ್ರೆಸ್ ಮುಂತಾದವುಗಳ ಬಗೆಗಿನ ಅವರ ಅಭಿಪ್ರಾಯಗಳನ್ನು ನಾವು ಈ ಕೆಳಗೆ ಪ್ರಸ್ತುತಪಡಿಸುತ್ತಿದ್ದೇವೆ–ಸಂಪಾದಕರು.

ಸಂ: **ಕೇರಳದಲ್ಲಿ ಕೇಂದ್ರದ ಹಸ್ತಕ್ಷೇಪದ ಬಗ್ಗೆ ನಿಮಗೆ ಸಂತೋಷವಿದೆಯೇ?**

ದೀ : ಕೇರಳದಲ್ಲಿ ಕೇಂದ್ರದ ಹಸ್ತಕ್ಷೇಪ ಅನಿವಾರ್ಯವಾಗಿತ್ತು. ಇದು ಇನ್ನೂ ಮೊದಲೇ ಬರಬೇಕಾಗಿತ್ತು.

ಸಂ: **ಪ್ರಾರಂಭದಲ್ಲಿ ಈ ಚಳುವಳಿಯನ್ನು ಬೆಂಬಲಿಸಲು ನೀವೇಕೆ ಹಿಂದೇಟು ಹಾಕಿದಿರಿ?**

ದೀ: ಏಕೆಂದರೆ ನಾವು ಕೇಂದ್ರವು ಒಂದು ಸಾಮೂಹಿಕ ಚಳುವಳಿಯ ಪರಣಾಮದಿಂದ ಜನಜೀವನ ಅಸ್ತವ್ಯಸ್ತವಾಗಲು ಕಾಯದೇ ಹಸ್ತಕ್ಷೇಪ ಮಾಡಬೇಕೆಂದು ಬಯಸಿದ್ದವು. ಕೇರಳದಲ್ಲಿನ ಪರಿಸ್ಥಿತಿಯ ಗಂಭೀರತೆ ಒಂದು ಸಾಮೂಹಿಕ ಚಳುವಳಿಯಿಂದ ಸಾಬೀತಾಗಬೇಕಾಗಿರಲಿಲ್ಲ.

ಸಂ: **ಕೇರಳದ ಕಮ್ಯುನಿಸ್ಟ್ ಪಕ್ಷವು ಬೇರೆಡೆಗಿರುವ ಕಾಂಗ್ರೆಸ್ ಪಕ್ಷಕ್ಕಿಂತ ಕೆಟ್ಟದಾಗಿದೆಯೆಂದು ಹೇಳಬಹುದೇ?**

ದೀ : ಎರಡು ಕೆಡುಕುಗಳನ್ನು ಹೋಲಿಸುವುದು ಕಷ್ಟ. ಆದರೆ ಆಚಾರ್ಯ ಕೃಪಲಾನಿಯವರು ಹೇಳಿದ ಹಾಗೆ ಇಲ್ಲೊಂದು ವ್ಯತ್ಯಾಸವಿದೆ. ಕಾಂಗ್ರೆಸ್ಸಿಗರು ವೈಯಕ್ತಿಕ ಕಾರಣಗಳಿಗಾಗಿ ಭ್ರಷ್ಟರಾಗಿದ್ದಾರೆ. ಕಮ್ಯುನಿಸ್ಟರ ಭ್ರಷ್ಟತೆ ಸಂಘಟಿತ ಭ್ರಷ್ಟತೆ. ಇದು ದೇಶದೆಲ್ಲೆಡೆ ಕಮ್ಯುನಿಸ್ಟ್ ಸರ್ವಾಧಿಕಾರವನ್ನು ಸ್ಥಾಪಿಸಲು

---

**ಮೂಲ ಆಕರ : ಆರ್ಗನೈಸರ್, ೧೫, ಆಗಸ್ಟ್, ೧೯೫೯**

ಪಕ್ಷವನ್ನು ಬಲಪಡಿಸುವ ಗುರಿ ಹೊಂದಿದೆ. ಅವರು ದೊಡ್ಡ ಪ್ರಮಾಣದ ನಕಲಿ ಹೆಸರುಗಳೊಂದಿಗೆ ಮತದಾನದ ಪಟ್ಟಿಯನ್ನು ತುಂಬಿದ್ದಾರೆಂದು ಹೇಳಲಾಗಿದೆ.

ಸಂ: **ಜನಸಂಘವು ಕಾಂಗ್ರೆಸ್ ಸರ್ಕಾರದ ವಿರುದ್ಧ ಇಂಥ ಯಾವುದೇ ಚಳುವಳಿಗಳನ್ನು ಬೆಂಬಲಿಸುತ್ತದೆಯೇ?**

ದೀ : ಅದು ಸರ್ಕಾರ ಎಷ್ಟು ಕೆಟ್ಟದಾಗಿದೆ, ಅದನ್ನು ಯಾರು ಹಾಗೂ ಏಕೆ ಬೀಳಿಸಬಯಸುತ್ತಾರೆ ಎನ್ನುವುದನ್ನು ಅವಲಂಬಿಸಿರುತ್ತದೆ.

ಸಂ: **ಕಮ್ಯುನಿಸ್ಟರು ಕೇರಳದಲ್ಲಿ ಮುಂದಿನ ಚುನಾವಣೆಯನ್ನು ಗೆದ್ದಲ್ಲಿ ಏನಾಗುತ್ತದೆ?**

ದೀ : ಪ್ರಪ್ರಥಮವಾಗಿ ಹೇಳಬೇಕೆಂದರೆ ಅವರು ಗೆಲ್ಲುವುದಿಲ್ಲ. ಆದರೆ ತಾರ್ಕಿಕವಾಗಿ ಅವರನ್ನು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಲೇ ಬಿಡಬಾರದು. ಅವರ ಮೇಲೆ ಕಾನೂನುಬದ್ಧ ಬಹಿಷ್ಕಾರವಿರಬೇಕೇ ಎನ್ನುವುದು ಪರಿಗಣಿಸಬಹುದಾದ ವಿಚಾರ. ಆದರೆ ಕಮ್ಯುನಿಸ್ಟ್ ಪಕ್ಷದ ನಿಜವಾದ ಸ್ವರೂಪವನ್ನು ಬಯಲು ಮಾಡುವಲ್ಲಿ ಎಲ್ಲ ಪ್ರಜಾಪ್ರಭುತ್ವವಾದೀ ಪಕ್ಷಗಳೂ ಕೈಜೋಡಿಸಬೇಕೆಂದು ನಾನು ಬಯಸುತ್ತೇನೆ. ಅವರು ಆಂಧ್ರದಲ್ಲಿ ಅದನ್ನೇ ಮಾಡಿದರು ಹಾಗೂ ಅಲ್ಲಿ ತಮ್ಮ ಸ್ವಂತ ಸರ್ಕಾರ ರಚನೆಯ ಕನಸು ಕಾಣುತ್ತಿದ್ದ ಕಮ್ಯುನಿಸ್ಟರು ಹೀನಾಯವಾಗಿ ಸೋತುಹೋದರು. ಆದರೆ ಪ್ರಜಾಪ್ರಭುತ್ವವಾದೀ ಪಕ್ಷಗಳ ದೌರ್ಬಲ್ಯವೇ ಕಮ್ಯುನಿಸ್ಟ್ ಪಕ್ಷಕ್ಕೆ ಸಹಾಯ ಮಾಡುತ್ತದೆ.

ಕಮ್ಯುನಿಸ್ಟರಿಗೆ ಅವರ ಸ್ಥಾನ ತೋರಿಸಿಕೊಡುವ ಇನ್ನೊಂದು ವಿಧಾನವಿದೆ. ಅನುಪಾತದ ಪ್ರಾತಿನಿಧ್ಯದ ವ್ಯವಸ್ಥೆ ಅವರ ಜನಪರ ಮತಗಳ ಅನುಪಾತದಲ್ಲಿ ಅಂದಾಜು ಅನುಪಾತವನ್ನು ನೀಡುತ್ತದೆ. ಹಾಗೂ ಇದು ಕಮ್ಯುನಿಸ್ಟರಿಗೆ ಯಾವುದೇ ಪ್ರಾಂತ್ಯದ ಮೇಲೆ ಹಿಡಿತ ಸಾಧಿಸುವುದನ್ನು ಅಸಾಧ್ಯವಾಗಿಸುತ್ತದೆ.

ಸಂ: **ಆದರೆ ನಾವು ಆ ವ್ಯವಸ್ಥೆಯನ್ನು ಅಳವಡಿಸಿಕೊಂಡಲ್ಲಿ ಕಾಂಗ್ರೆಸ್ ಅನೇಕ ಪ್ರಾಂತ್ಯಗಳನ್ನು ಕಳೆದುಕೊಳ್ಳುತ್ತದೆ. ಅದು ಕೇಂದ್ರದಲ್ಲೂ ಬಹುಮತ ಹೊಂದಿರುವುದಿಲ್ಲ. ಅದು ಅಸ್ಥಿರತೆಗೆ ಕಾರಣವಾಗುವುದಿಲ್ಲವೇ?**

ದೀ : ಸಾರ್ವಜನಿಕ ಅಭಿಪ್ರಾಯವು ನೈಜವಾದ ಹಾಗೂ ಪ್ರಾಮಾಣಿಕ ಅಭಿವ್ಯಕ್ತಿಯನ್ನು ಹೊಂದಿರಬೇಕು. ನಾವು ಬ್ರಿಟನ್ನಿನ ಎರಡು ಪಕ್ಷಗಳ ವ್ಯವಸ್ಥೆಯನ್ನು ಹೊಂದಿರದಿದ್ದಾಗ ಅಲ್ಲಿನ ಚುನಾವಣಾ ವ್ಯವಸ್ಥೆಯನ್ನೂ ಹೊಂದಲಾಗದು. ಯಾವುದೇ ಪಕ್ಷಕ್ಕೂ ಸ್ವತಃ ಬಹುಮತ ದೊರಕದಿದ್ದಲ್ಲಿ ಮುಂದಿನ ಸ್ಪಷ್ಟ ದಾರಿ ಎರಡು ಅಥವಾ ಹೆಚ್ಚು ಪ್ರಜಾಪ್ರಭುತ್ವವಾದೀ ಪಕ್ಷಗಳ ಸಹಯೋಗವಾಗಿದೆ.

ಸಂ: **ಅನುಪಾತದ ವ್ಯವಸ್ಥೆ ದೊಡ್ಡ ಬಹು–ಸದಸ್ಯ ಕ್ಷೇತ್ರಗಳ ಅಗತ್ಯಗಳನ್ನು ಹುಟ್ಟುಹಾಕುತ್ತದೆ. ಹಾಗೂ ಅದು ಪ್ರಚಾರವನ್ನು ಕಷ್ಟಸಾಧ್ಯ ಹಾಗೂ ದುಬಾರಿಯಾಗಿಸುತ್ತದೆ.**

ದೀ : ಬಹು–ಸದಸ್ಯ ಕ್ಷೇತ್ರಗಳು ಅನುಪಾತದ ವ್ಯವಸ್ಥೆಯ ಅಗತ್ಯ ಭಾಗಗಳೇನಲ್ಲ. ಉದಾಹರಣೆಗೆ ಇಲ್ಲಿ ಪಟ್ಟಿ ವ್ಯವಸ್ಥೆಯಿದೆ. ಜನರು ಒಂದಿಲ್ಲೊಂದು ಪಕ್ಷದ ಸಂಪೂರ್ಣ ಪಟ್ಟಿಗೆ ಮತ ಹಾಕುತ್ತಾರೆ. ಪಕ್ಷದ ಅಭ್ಯರ್ಥಿಗಳನ್ನು ಪಕ್ಷವು ಗಳಿಸಿದ ಮತಗಳ ಅನುಪಾತದಲ್ಲಿ ಅವರ ಪಕ್ಷದ ಆಯ್ಕೆಯ ಕ್ರಮದ ಮೇಲೆ ಚುನಾಯಿತರೆಂದು ಘೋಷಿಸಲಾಗುತ್ತದೆ.

ಸಂ: **ಅದು ಒಡೆತನಕ್ಕೆ ಎಡೆ ಮಾಡುತ್ತದೆ.**

ದೀ : ಹೌದು, ಆದರೆ ಯಾವುದೇ ವ್ಯವಸ್ಥೆಯೂ ಪರಿಪೂರ್ಣವಲ್ಲ. ೪೭% ಜನಗಳ ಮತದ ಆಧಾರದ ಮೇಲೆ ಲೋಕ ಸಭೆಯಲ್ಲಿ ೭೪% ಸ್ಥಾನಗಳನ್ನು ಹೊಂದಿರುವ ಕಾಂಗ್ರೆಸ್‌ನ ಸ್ಥಿತಿ ಪ್ರಜಾತಂತ್ರಕ್ಕೆ ವಿರುದ್ಧವಾಗಿದೆ. ಇದನ್ನು ಬದಲಾಯಿಸಬೇಕು. ಪ್ರಜಾತಂತ್ರ ಸಂಯೋಜನೆಗಳು ಈಗಿರುವ ಒಂದು ಹೇರಿಕೆಯ ಅಲ್ಪಸಂಖ್ಯಾತರ ಬಹುಮತಕ್ಕಿಂತ ಹೆಚ್ಚು ಪ್ರಜಾಸತ್ತಾತ್ಮಕವಾಗಿರುತ್ತದೆ. ಇಂಥ ಸಂಯೋಜನೆಗಳಲ್ಲಿ ಸಾಂವಿಧಾನಿಕ ಪಕ್ಷಗಳಿಗೆ ಮತದಾನದ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡಬಹುದು. ಅವಿಶ್ವಾಸ ಗೊತ್ತುವಳಿ ಅಥವಾ ಬಜೆಟ್ ಭಾಗಗಳ ಹೊರತಾಗಿ ಸರ್ಕಾರವು ರಾಜೀನಾಮೆ ನೀಡಬೇಕಾದ ಅಗತ್ಯವಿರುವುದಿಲ್ಲ.

ಸಂ: **ಸ್ವತಂತ್ರ ಪಕ್ಷದ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ದೀ : ಸ್ವತಂತ್ರ ಪಕ್ಷವು ಇನ್ನೂ ತನ್ನ ನೀತಿಗಳಿಗೆ ಅಂತಿಮ ರೂಪ ನೀಡುವ ಪ್ರಯತ್ನದಲ್ಲಿದೆ. ಇಲ್ಲಿವರೆಗೆ ಇದು ಕೇವಲ ಆರ್ಥಿಕ ವಿಷಯಗಳ ಬಗ್ಗೆ ಮಾತ್ರ ಮಾತನಾಡಿದೆ. ಅಲ್ಲೂ ಕೂಡ ಅದು ಸಂಪೂರ್ಣವಾಗಿ ಸುಸ್ಪಷ್ಟವಾಗಿಲ್ಲ. ಉದಾಹರಣೆಗೆ ಸ್ವತಂತ್ರ ಪಕ್ಷವು ಮುಕ್ತ ಉದ್ಯಮಶೀಲತೆಯನ್ನು ಬೆಂಬಲಿಸುತ್ತದೆ. ಆದರೆ ಅದು ಸಣ್ಣ ಕೈಗಾರಿಕೆಗಳ ಮುಕ್ತ ಉದ್ಯಮವೇ ಅಥವಾ ದೊಡ್ಡ ಕೈಗಾರಿಕೆಗಳ ಉದ್ಯಮವೇ?

ಇವೆರಡೂ ಒಟ್ಟಿಗೆ ಬಹುದೂರ ಹೋಗಲಾರವು. ದೊಡ್ಡ ಉದ್ದಿಮೆಗಳು ಸಾರ್ವಜನಿಕ ವಲಯಕ್ಕಿಂತ ಮುಕ್ತವಾಗಿದ್ದರೂ ಅವು ಸಣ್ಣ ಕೈಗಾರಿಕೆಗಳಷ್ಟು ಮುಕ್ತವಾಗಿರಲಾರವು. ಜನ ಸಂಘವು ದೊಡ್ಡ ಉದ್ದಿಮೆಗಳು ಸಂಪೂರ್ಣವಾಗಿ ಅಗತ್ಯವಿದ್ದ ಹೊರತು ಸಣ್ಣ ಕೈಗಾರಿಕೆಗಳಿಗೇ ಆದ್ಯತೆ ನೀಡುತ್ತದೆ.

ಈ ಹೊಸ ಪಕ್ಷವು ಹಿಂದಿ, ವಿದೇಶೀ ನೀತಿ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ

ಯಾವ ಧೋರಣೆಗಳನ್ನು ಹೊಂದಿದೆಯೆಂದು ನಮಗೆ ತಿಳಿದಿಲ್ಲ. ಇವು ಒಂದು ರಾಷ್ಟ್ರೀಯ ಪಕ್ಷ ತನ್ನ ಪರಿಗಣನೆಗಳಿಂದ ಹೊರಗಿಡಬೇಕಾದ ವಿಷಯಗಳಲ್ಲ.

ಸಂ: **ನೀವು ಸ್ವತಂತ್ರ ಪಕ್ಷದ ಜೊತೆ ಚುನಾವಣಾ ಹೊಂದಾಣಿಕೆಗಳನ್ನು ಕಲ್ಪಿಸಿಕೊಳ್ಳಬಹುದೇ?**

ದೀ : ಚುನಾವಣಾ ಹೊಂದಾಣಿಕೆಗಳು ಚುನಾವಣೆಯ ಸಮಯದ ಸಂಗತಿಗಳಾಗಿವೆ. ಈ ಹಂತದಲ್ಲಿ ಅದರ ಬಗ್ಗೆ ಏನು ಹೇಳುವುದೂ ಅಕಾಲಿಕವಾಗುತ್ತದೆ.

ಸಂ: **ನೀವು ಸ್ವತಂತ್ರ ಪಕ್ಷವನ್ನು ಪ್ರತಿಕ್ರಿಯೆಯ ಪಕ್ಷವನ್ನಾಗಿ ಪರಿಗಣಿಸುತ್ತೀರ?**

ದೀ : ಇಲ್ಲ. ಹೆಸರಿಡುವುದು ಒಂದು ವಿಷಯವನ್ನು ತಿಳಿದುಕೊಳ್ಳಲು ಸಹಾಯ ಮಾಡುವುದಿಲ್ಲ. ನಾವು ಸ್ವತಂತ್ರ ಪಕ್ಷವನ್ನು ನಿರಂಕುಶ ಸರ್ವಾಧಿಕಾರದ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಸಂಘಟಿಸುವ ಒಂದು ಪ್ರಜಾತಂತ್ರ ಪಕ್ಷವನ್ನಾಗಿ ಪರಿಗಣಿಸುತ್ತೇವೆ. ಆದರೆ ಅದು ಪ್ರಜಾತಂತ್ರದ ಮತಗಳನ್ನು ವಿಭಜಿಸುವುದಿಲ್ಲವೆಂದು ನಾನು ಆಶಿಸುತ್ತೇನೆ.

ಸಂ: **ಜನನ ನಿಯಂತ್ರಣ ಪ್ರಚಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ದೀ : ನನಗೆ ಅದರ ಬಗ್ಗೆ ಒಲವೇನಿಲ್ಲ.

ಇದು ಭಯ ಮತ್ತು ಸೋಲಿನ ಮನಸ್ಥಿತಿಗೆ ಇಂಬು ನೀಡುತ್ತದೆ. ಸಾಮಾನ್ಯವಾಗಿ ಮಕ್ಕಳು ಬೇಡದಿರುವವರೆಂದೆನಿಸುತ್ತಾರೆ. ಇದು ಅಸಹಜವಾಗಿದೆ. ಇದು ಆತ್ಮಹತ್ಯಾತ್ಮಕವಾಗಿದೆ. ಸ್ವ–ನಿಯಂತ್ರಣ ಒಳ್ಳೆಯದು ಆದರೆ ಸಂತಾನಹರಣವನ್ನೂ ಒಳಗೊಂಡಂತೆ ಜನನ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಈಗಿರುವ ವಿಧಾನಗಳಲ್ಲಿ ಸುಧಾರಿತ ಜೀವನ ಮಟ್ಟಗಳು ನೈಸರ್ಗಿಕವಾಗಿ ಹಾಗೂ ತಾನಾಗಿಯೇ ಜನನ ಪ್ರಮಾಣವನ್ನು ಕಡಿಮೆ ಮಾಡುತ್ತವೆ.

ಸಂ: **ಆದರೆ ಜನನದ ಪ್ರಮಾಣವನ್ನು ಕಡಿಮೆ ಮಾಡಿ ದೇಶಕ್ಕೆ ಮೊದಲು ಸುಧಾರಿಸಿಕೊಳ್ಳಲು ಸ್ವಲ್ಪ ಸಮಯ ನೀಡದೇ ಜೀವನ ಮಟ್ಟ ಹೇಗೆ ಸುಧಾರಿಸುತ್ತದೆ?**

ದೀ : ಕೃತಕವಾಗಿ ಜನನ ಪ್ರಮಾಣವನ್ನು ಸೀಮಿತಗೊಳಿಸದೇ ಜೀವನಮಟ್ಟವನ್ನು ಸುಧಾರಿಸಬಹುದು. ಒಂದು ದೇಶ ಮುಂದುವರಿಯುವಾಗ ಜನಸಂಖ್ಯೆ ಹಾಗೂ ಜೀವನಮಟ್ಟಗಳು ಏಕಕಾಲಕ್ಕೆ ಅಭಿವೃದ್ಧಿ ಹೊಂದಿವೆ ಎನ್ನುವುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ನಮ್ಮ ಸಮಸ್ಯೆ ಬಹುಸಂತಾನದ್ದಲ್ಲ, ಬದಲಾಗಿ ನಗಣ್ಯವೆನಿಸುವ ರಾಷ್ಟ್ರೀಯ ಪ್ರಜ್ಞೆ, ನಮಗೆ ಜೀವನಮಟ್ಟಗಳನ್ನು

ಎತ್ತರಿಸಲಾಗದಿದ್ದಲ್ಲಿ ನಾವು ಜನ್ಮ ನಿಯಂತ್ರಣದಲ್ಲೂ ಯಾವುದೇ ಯಶಸ್ಸನ್ನು ಹೊಂದುವುದಿಲ್ಲ. ಸ್ವದೇಶೀ ಚೇತನ ನಮಗೆ ಮೊದಲ ದರ್ಜೆಯ ಬಟ್ಟೆಯ ಉದ್ದಿಮೆಯನ್ನು ಸ್ಥಾಪಿಸಲು ಸಹಾಯ ಮಾಡಿತು. ಗಾಂಧೀಜಿಯವರು ಸಾರ್ವಜನಿಕ ಜೀವನದ ಪದ್ಧತಿಗಳನ್ನು ಬದಲಾಯಿಸುವಲ್ಲಿ ಸಫಲರಾದರು. ಅವರಿಗಿಂತ ಮೊದಲು ಒಬ್ಬ ನಾಯಕ ಸೊಗಸಾದ ಬಟ್ಟೆ ಧರಿಸಬೇಕಿತ್ತು. ಅವರು ಕೈನೇಯ್ಗೆಯ, ತಾವೇ ತೊಳೆದುಕೊಳ್ಳುವ ಖದ್ದಾರ್ ಅನ್ನು ಸಾರ್ವಜನಿಕ ನಾಯಕತ್ವದ ಒಂದು ಅವಿಭಾಜ್ಯ ಅಂಗವಾಗಿಸಿದರು. ದುರದೃಷ್ಟವೆಂದರೆ ಇಂದು ಕಾಂಗ್ರೆಸ್ ಮುಖಂಡರೂ ಕೂಡ ತಮ್ಮ ಮಕ್ಕಳನ್ನು ಕಾನ್ವೆಂಟ್‌ಗಳಿಗೆ ಕಳಿಸುತ್ತಾರೆ. ಈ ಮನೋಭಾವ ಬದಲಾಗಬೇಕು. ಹಾಗೂ ಇದು ಬದಲಗುತ್ತದೆನ್ನುವ ನಂಬಿಕೆ ನನಗಿದೆ. ಜನರು ಜಾಗೃತರಾಗಿದ್ದಾರೆ; ಹಾಗೂ ಅವರು ತಮ್ಮನ್ನು ತಾವು ಧೃಢವಾಗಿ ಪ್ರತಿಪಾದಿಸಿಕೊಳ್ಳುತ್ತಾರೆ.

ಸಂ: **ಇಲ್ಲಿ ಸಮಸ್ಯೆಯ ತಿರುಳೆಂದರೆ ನಮ್ಮ ದೇಶದ ಶೀಘ್ರ ಅಭಿವೃದ್ಧಿಯಾಗಿದೆ. ಇದನ್ನು ಪ್ರಜಾಪ್ರಭುತ್ವದ ರೀತಿಯಲ್ಲಿ ಮಾಡಲು ಸಾಧ್ಯವಿಲ್ಲ. ಕೇವಲ ಒಬ್ಬ ಸರ್ವಾಧಿಕಾರಿ ಮಾತ್ರ ಇದನ್ನು ಮಾಡಬಹುದೆಂಬ ಭಾವನೆಯಿದೆ.**

ದೀ : ಖಂಡಿತ ಸರಿಯಲ್ಲ. ಕೇವಲ ಪ್ರಜಾಪ್ರಭುತ್ವದಲ್ಲಿ ಮಾತ್ರವೇ ಜನರನ್ನು ಗರಿಷ್ಠ ಮಟ್ಟದಲ್ಲಿ ಸಜ್ಜುಗೊಳಿಸಬಹುದು. ನಾವು ಹಿಟ್ಲರ್ ಹಾಗೂ ಮುಸಲೋನಿಯಂಥ ಸರ್ವಾಧಿಕಾರಿಗಳ ಪ್ರಜಾಪ್ರಭುತ್ವದ ಅಭಿಪ್ರಾಯಗಳ ಅಲೆಯ ಮೇಲೇ ಅಧಿಕಾರಕ್ಕೆ ಬಂದರೆನ್ನುವುದನ್ನು ಮರೆಯುತ್ತಿದ್ದೇವೆ. ಅವರು ತಮ್ಮ ಜನಪ್ರಿಯತೆಯನ್ನು ತಮ್ಮ ದುಸ್ಸಾಹಸದ ನೀತಿಗಳಿಗೆ ದುರ್ಬಳಕೆ ಮಾಡಿಕೊಂಡರೆನ್ನುವುದು ಬೇರೆಯ ವಿಚಾರ. ಭಾರತೀಯ ಪ್ರಜಾಪ್ರಭುತ್ವವು ಸಂಪೂರ್ಣ ಪ್ರಜಾತಾಂತ್ರಿಕವಲ್ಲದ್ದರಿಂದ ಅದು ಚೆನ್ನಾಗಿ ನಡೆಯುತ್ತಿಲ್ಲ. ಕಾಂಗ್ರೆಸ್ ತನ್ನನ್ನು ತಾನು ಎಲ್ಲ ಬಗೆಯ ಬಾಹ್ಯ ಶಕ್ತಿಗಳಿಂದ ಪ್ರಭಾವಕ್ಕೊಳಗಾಗಲು ಅನುಮತಿಸುವುದರಿಂದ ಅದು ಎರಡು, ಪ್ರಾಯಶಃ ಎರಡಕ್ಕಿಂತ ಹೆಚ್ಚು ಮನಸ್ಸುಗಳನ್ನು ಹೊಂದಿದೆ. ಅದು ರಾಷ್ಟ್ರೀಯ ಚೇತನವನ್ನು ಬಡಿದೆಬ್ಬಿಸಲು ವಿಫಲವಾಗಿದೆ. ಟಿಬೆಟ್‌ನ ವಿಷಯವು ಜನರು ಒಂದು ರಾಷ್ಟ್ರೀಯ ವಿಷಯದ ಬಗ್ಗೆ ಹೇಗೆ ಸಂಘಟಿತರಾಗಬಹುದು ಹಾಗೂ ಸದೃಢವಾಗಬಹುದು ಎಂದು ತೋರಿಸಿದೆ.

ಸಂ: **ಎಐಸಿಸಿ ಕಛೇರಿಯು ಝಾನ್ಸಿ ರಾಣಿಯ ಒಂದು ದೊಡ್ಡ ಚಿತ್ರವನ್ನು ಹಾಕಿದೆ. ಆದರೆ ಅವರಿನ್ನೂ ಶಿವಾಜಿಯ ಬಗ್ಗೆ ಅನುಮಾನ ಹೊಂದಿರುವಂತೆ ತೋರುತ್ತಿದೆ.**

ದೀ: ನೆಹರೂರವರು ಶಿವಾಜಿಯ ಪ್ರತಿಮೆಯನ್ನು ಅನಾವರಣಗೊಳಿಸಲೆಂದೇ

ಪ್ರತಾಪಗಢಕ್ಕೆ ಹೋದರು. ಸರ್ಕಾರವು ಮಾನವ ಯತ್ನದ ಪ್ರವರ್ತನೆಯ ಸಾಧನಗಳಾಗಿ ಸಂಸ್ಕೃತಿ ಹಾಗೂ ಧರ್ಮದ ಅಗಣಿತ ಬಲವನ್ನು ಅರಿತುಕೊಳ್ಳುತ್ತದೆಂದು ಆಶಿಸುತ್ತೇನೆ. ಒಂದು ಸದೃಢ ರಾಷ್ಟ್ರೀಯ ಭಾವನೆಯ ಬಲದ ಮೇಲೆಯೇ ಅದ್ಭುತ ಸಾಧನೆಗಳನ್ನು ಮಾಡಲಾಗಿದೆ. ಆರ್ಥಿಕ ಬೆಳವಣಿಗೆ ಕೂಡ ರಾಷ್ಟ್ರೀಯತೆಯಿಂದ ಮಾತ್ರ ಸಾಧ್ಯವಾಗುತ್ತದೆ. ರಾಷ್ಟ್ರೀಯತೆಯ ಭಾವನೆಯ ಉಲ್ಲೇಖವಿಲ್ಲದೇ ಆರ್ಥಿಕ ಬೆಳವಣಿಗೆಯ ಬಗ್ಗೆ ಮಾತನಾಡುವುದು ಕುದುರೆಗಿಂತ ಮೊದಲು ಬಂಡಿಯಿಟ್ಟಂತೆ. ನಮ್ಮ ದೇಶದಲ್ಲಿನ ಸಮಸ್ಯೆಯೆಂದರೆ ಕಾಂಗ್ರೆಸ್ ಪಕ್ಷವು ಕಮ್ಯೂನಿಸಂ, ಪ್ರತಿಪಾದಿಸುವ ಲೌಕಿಕತೆ, ವರ್ಗ ಘರ್ಷಣೆ ಮುಂತಾದವುಗಳ ವಿಚಾರ ವಿಭಾಗಗಳನ್ನು ಸ್ವೀಕರಿಸಿದೆ. ಅಲ್ಲದೇ ನಾವು ಪಶ್ಚಿಮದ ವಿಜ್ಞಾನ ಹಾಗೂ ತಾಂತ್ರಿಕತೆಯ ಬದಲು ಅವರ ಪದ್ಧತಿಗಳು ಹಾಗೂ ಮೌಲ್ಯಗಳನ್ನು ಮೈಗೂಡಿಸಿ ಕೊಳ್ಳುತ್ತಿದ್ದೇವೆ. ಪ್ರಾಚೀನ ಭಾರತ ತನ್ನದೇ ವಿಧಾನಗಳು ಹಾಗೂ ಮೌಲ್ಯಗಳ ಜೊತೆಗೆ ಮಹಾನ್ ಹಾಗೂ ಶಕ್ತಿಶಾಲಿಯಾಗಬಹುದಾದಲ್ಲಿ ನಾವೇಕೆ ಈಗ ಮತ್ತೊಮ್ಮೆ ಮಹಾನ್ ಹಾಗೂ ಶಕ್ತಿಶಾಲಿಯಾಗಲು ಇದನ್ನು ಬದಲಾಯಿಸಬೇಕು? ನಾವು ನಮಗೆ ಹಾಗೂ ನಮ್ಮ ಸ್ವಂತ ಜೀವನ ಪದ್ಧತಿಗಳಿಗೆ ಪ್ರಾಮಾಣಿಕವಾಗಿರದಿದ್ದಲ್ಲಿ ಲೌಕಿಕವಾಗೂ ನಾವೂ ಮುಂದುವರಿಯಲು ಸಾಧ್ಯವಿಲ್ಲವೆಂದು ನನಗನಿಸುತ್ತದೆ.

ಸಂ: **ಎಲ್ಲರಿಗೂ ದೇಶ ಶೀಘ್ರ ಪ್ರಗತಿ ಹೊಂದಬೇಕಾಗಿರುವುದರಿಂದ ಹಾಗೂ ಕಮ್ಯುನಿಸ್ಟ್ ರಷ್ಯಾ ಶೀಘ್ರ ಪ್ರಗತಿ ಹೊಂದಿರುವುದರಿಂದ ಜನರು ಕಮ್ಯುನಿಸಂನತ್ತ ಆಕರ್ಷಿತರಾಗುತ್ತಾರೆ.**

ದೀ: ರಷ್ಯಾ ತನ್ನ ಈಗಿನ ಸ್ಥಿತಿಗೆ ಬರಲು ೪೦ ವರ್ಷಗಳನ್ನು ತೆಗೆದುಕೊಂಡಿದೆ. ಪ್ರಜಾಪ್ರಭುತ್ವ ರಾಷ್ಟ್ರೀಯ ಭಾರತವು ಅದೇ ಸಮಯದಲ್ಲಿ ಹೆಚ್ಚಲ್ಲದಿದ್ದರೂ ಅಷ್ಟೇ ಪ್ರಗತಿಯನ್ನಾದರೂ ಖಂಡಿತ ಸಾಧಿಸಬಹುದು. ಇದನ್ನು ಬಿಟ್ಟು ನಮ್ಮ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನಾವು ದಾರಿ ತಪ್ಪಿದಲ್ಲಿ ಅದು ವಿನಾಶವಾಗುತ್ತದಲ್ಲದೇ ಅಭಿವೃದ್ಧಿಯಲ್ಲ. ಮಾನವ ಸಮಾಜಕ್ಕೆ ಗಂಭೀರ ಹಾನಿಯಾಗದೇ ಧರ್ಮ ಹಾಗೂ ಮಾವನ ನಾಗರಿಕತೆಯ ಇತರ ಮೂಲಗಳನ್ನು ವರ್ಜಿಸಬಹುದೆನ್ನುವವರು ಕೃತಕವಾಗಿ ಆಲೋಚಿಸುತ್ತಾರೆ. ಆಲೋಚಕರು ಆಳವಾಗಿ ಹಾಗೂ ದೀರ್ಘವಾಗಿ ಯೋಚಿಸಬೇಕು. ಅವರು ವರ್ಷಗಳಲ್ಲಲ್ಲದೇ ಯುಗಗಳಲ್ಲಿ ಚಿಂತಿಸಬೇಕು.

ನಮ್ಮ ಮೂಲಭೂತ ಸಮಸ್ಯೆಯೆಂದರೆ ಶೀಘ್ರ ಬಂಡವಾಳ ನಿರ್ಮಾಣವಾಗಿದೆ. ಅದು ಕೇವಲ ಪ್ರಸ್ತುತ ಬಳಕೆಯನ್ನು ಸೀಮಿತಗೊಳಿಸುವುದರಿಂದ ಮಾತ್ರ

ಸಾಧ್ಯವಿದೆ. ಬಳಕೆಯನ್ನು ಸಂಘಟಿತ ದಬ್ಬಾಳಿಕೆ ಅಥವಾ ಪ್ರಜಾಪ್ರಭುತ್ವದಿಂದ ಬರುವ ದೇಶಪ್ರೇಮದ ಮೂಲಕ ಸೀಮಿತಗೊಳಿಸಬಹುದು. ಕೊರತೆಯ ಹಣಕಾಸಿನ ಮೂಲಕ ಅಭಿವೃದ್ಧಿಯ ಕಾಂಗ್ರೆಸ್ ವಿಧಾನ ಸಾಕಾಗಲಾರದು. ಪ್ರಪ್ರಥಮವಾಗಿ ಅದು ಪ್ರಾಮಾಣಿಕ ವಿಧಾನವಲ್ಲ. ಅಲ್ಲದೆ ರಾಷ್ಟ್ರೀಯ ಭಾವನೆಯ ಗೈರುಹಾಜರಿಯಲ್ಲಿ ಬರುವ ಪ್ರಜಾಸತ್ತಾತ್ಮಕ ಪ್ರತಿರೋಧಗಳಿಂದಾಗಿ ಅದು ಬಹಳ ದೂರ ಹೋಗಲಾರದು. ಜನಸಂಘವು ಎರಡನೆಯ ವಿಧಾನವನ್ನು ಬೆಂಬಲಿಸುತ್ತದೆ. ಇಂದು ಪರಿಸ್ಥಿತಿ ಚೆನ್ನಾಗಿಲ್ಲ. ಆದರೆ ನಮ್ಮ ಜನತೆ ಒಂದು ದೃಢ ಪ್ರಕೃತಿಯನ್ನು ಹೊಂದಿದ್ದಾರೆಂದು ನಾನು ಭಾವಿಸುತ್ತೇನೆ. ಸಾರ್ವಜನಿಕ ಅಭಿಪ್ರಾಯದ ಲೋಲಕ ಮತ್ತೊಮ್ಮೆ ರಾಷ್ಟ್ರೀಯತೆಯೆಡೆಗೆ ಹೊರಳುತ್ತದೆ. ಹಾಗೂ ಕೇವಲ ಅದು ಮಾತ್ರವೇ ನಮಗೆ ಒಂದು ಮಹಾನ್ ಹಾಗೂ ಶಕ್ತಿಶಾಲಿ ರಾಷ್ಟ್ರವಾಗಲು ಸಹಾಯ ಮಾಡುತ್ತದೆ.

* * * * *

# ಪತ್ರಕರ್ತರೊಡನೆ ಉಪಾಧ್ಯಾಯರ ಭೇಟಿ

**ಡಿಎಮ್‌ಕೆಯ ಬೆದರಿಕೆಯ ಗಂಭೀರತೆಯನ್ನು ಏಕೀಕರಣ ಸಮಿತಿ ಇನ್ನೂ ಸಂಪೂರ್ಣವಾಗಿ ಮನಗಂಡಿಲ್ಲ**

**ಪ್ರತ್ಯೇಕವಾದವು ಪ್ರಾದೇಶಿಕ ವಾದಕ್ಕಿಂತ ಅಪಾಯಕಾರಿ: ಅದು ರಾಷ್ಟ್ರವಿರೋಧಿ**

(ನಮ್ಮ ವಿಶೇಷ ಪ್ರತಿನಿಧಿಯಿಂದ)

ನವದೆಹಲಿ, ಜೂನ್ ೬: ಇಂದು ಮಧ್ಯಾಹ್ನ ಒಂದು ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಾ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು ರಾಷ್ಟ್ರೀಯ ಏಕೀಕರಣ ಸಮಿತಿಯು ದ್ರಾವಿಡ ಕಳಗಮ್ ಹಾಗೂ ದ್ರಾವಿಡ ಮುನ್ನೇತ್ರ ಕಳಗಮ್‌ನಂಥ ಪಕ್ಷಗಳು ಒಡ್ಡುವ ಬೆದರಿಕೆಯ ಗಂಭೀರತೆಯ ಬಗೆಗೆ ಸಾಕಷ್ಟು ಜಾಗೃತಿ ಮೂಡಿಸುವಲ್ಲಿ ವಿಫಲವಾಗಿದೆಯೆಂದು ಹೇಳಿದರು.

ಶ್ರೀ ಉಪಾಧ್ಯಾಯರು ಹೇಳಿದರು, ಡಿಎಮ್‌ಕೆಯ ಸಿದ್ಧಾಂತವನ್ನು ಪ್ರಾದೇಶಿಕ ಶ್ರೇಷ್ಠತಾವಾದದ ಅತಿರೇಕವೆಂದು ಹೇಳುವುದು ತಪ್ಪಾಗಬಹುದಾದರೂ ಅದನ್ನು ದೇಶದ ಇತರ ಭಾಗಗಳಿಗೆ ಕಂಡುಬರುತ್ತಿರುವ ಧೂರ್ತ ಪ್ರಾದೇಶಿಕ ವಾದಗಳ ಜೊತೆ ಸೇರಿಸುವುದು ಅದರ ಅಪಾಯಕಾರೀ ಪರಿಣಾಮಗಳನ್ನು ಕಡೆಗಣಿಸುವುದಾಗಿದೆ.

ಪ್ರಾದೇಶಿಕವಾದಿಗಳು ನಮ್ಮ ದೇಶ ಹಾಗೂ ರಾಷ್ಟ್ರದ ಏಕತೆಯನ್ನು ನಿರಾಕರಿಸದಿದ್ದರೂ ಪ್ರತ್ಯೇಕತಾವಾದಿಗಳು ನಮ್ಮ ರಾಷ್ಟ್ರೀಯ ಅಸ್ತಿತ್ವದ ಈ ಮೂಲಭೂತ ಲಕ್ಷಣವನ್ನೇ ಸಂಪೂರ್ಣವಾಗಿ ನಿರಾಕರಿಸುತ್ತಾರೆ ಎಂದು ಅವರು ಹೇಳಿದರು.

ಪ್ರತ್ಯೇಕ ದ್ರಾವಿಡ ಸಂಸ್ಕೃತಿ ಸುಳ್ಳೆಂದು ಸಾಬೀತುಪಡಿಸಲು ಹಾಗೂ ನಾಶಪಡಿಸಲು ರಚನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬೇಕು ಹಾಗೂ ಇದರ ಜೊತೆಗೆ ಪ್ರಸ್ತುತ ಸರ್ಕಾರೀ ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಭಾರತವನ್ನು ಒಂದು ಏಕಾತ್ಮಕ ಸರ್ಕಾರವಿರುವ ರಾಜ್ಯವೆಂದು ಘೋಷಿಸಬೇಕು ಹಾಗೂ ಅಧಿಕಾರವನ್ನು

ಪ್ರಾಂತ್ಯಗಳಲ್ಲಿ ವಿಕೇಂದ್ರೀಕರಿಸಬೇಕು ಎಂದು ಭಾರತೀಯ ಜನಸಂಘದ ನಾಯಕರು ಒತ್ತಾಯಿಸಿದರು.

**ತೆರಿಗೆ ವಿರೋಧೀ ಚಳುವಳಿ ಪ್ರಾರಂಭವಾಗಲಿದೆ**

ಈ ವರ್ಷದ ರಾಷ್ಟ್ರೀಯ ಹಾಗೂ ರಾಜ್ಯ ಬಜೆಟ್‌ಗಳಲ್ಲಿ ವಿಧಿಸಿದ ಹೊಸ ತೆರಿಗೆಗಳನ್ನು ಟೀಕಿಸಿದ ಶ್ರೀ ಉಪಾಧ್ಯಾಯರು ಈ ಹೊಸ ಕರಗಳ ವಿರುದ್ಧ ಜನ ಸಂಘವು ಒಂದು ರಾಷ್ಟ್ರವ್ಯಾಪಿ ಚಳುವಳಿಯನ್ನು ಪ್ರಾರಂಭಿಸುವುದಾಗಿ ಹೇಳಿದರು.

ಕೆಲವು ರಾಜ್ಯಗಳಲ್ಲಿ ಪ್ರಸ್ತಾಪಿಸಲ್ಪಡುತ್ತಿರುವ ಹಾಗೆ ಭೂ ಕಂದಾಯದ ಮೇಲಿನ ಯಾವುದೇ ಹೆಚ್ಚಳವನ್ನೂ ಜನಸಂಘವು ವಿರೋಧಿಸುತ್ತದೆಂದು ಅವರು ಹೇಳಿದರು. ಸಭೆಗಳು ಹಾಗೂ ಸಮಾವೇಶಗಳ ಜೊತೆಗೆ ಜನಸಂಘವು ಹೆಚ್ಚಿದ ದರಗಳು ಜಾರಿಗೆ ಬರುವ ದಿನವಾದ ಜುಲೈ ೧ ರಂದು ರೇಲ್ವೇ ನಿಲ್ದಾಣಗಳಲ್ಲಿ ಬೃಹತ್ ಪ್ರದರ್ಶನಗಳನ್ನು ಏರ್ಪಡಿಸುತ್ತದೆಂದು ತಿಳಿಸಿದರು.

ಹಳ್ಳಿಗಳಲ್ಲಿ ಭೂ ಕಂದಾಯದ ಹೆಚ್ಚಳವನ್ನು ವಿರೋಧಿಸಲು ಪ್ರತಿರೋಧ ಸಮಿತಿಗಳನ್ನು ಸ್ಥಾಪಿಸುವ ಪ್ರಸ್ತಾವನೆಯಿದೆಯೆಂದೂ ಅವರು ಹೇಳಿದರು.

ಶ್ರೀ ಉಪಾಧ್ಯಾಯರು ಕೇಂದ್ರ ಹಾಗೂ ರಾಜ್ಯ ಹಣಕಾಸು ಮಂತ್ರಿಗಳಿಗೆ ಜನತೆ ನೇರವಾಗಿ ಕಾರ್ಯಾಚರಣೆಗಿಳಿಯಲು ಉತ್ತೇಜಿಸಬಹುದಾದ ಒಂದು ಪರಿಸ್ಥಿತಿಯನ್ನು ಸೃಷ್ಟಿಸುವುದನ್ನು ತಡೆಯಲು ಅವರ ನಿರ್ಧಾರಗಳನ್ನು ಮರುಪರಿಶೀಲಿಸುವಂತೆ ಮನವಿ ಮಾಡಿದರು.

**ಜನ ಸಂಘ ಹಾಗೂ ಆರ್.ಎಸ್.ಎಸ್.**

- **ಒಬ್ಬ ಪತ್ರಿಕಾ ಪ್ರತಿನಿಧಿಯು ಜನಸಂಘ ಹಾಗೂ ಆರ್.ಎಸ್.ಎಸ್. ನಡುವೆ ಭಿನ್ನಾಭಿಪ್ರಾಯಗಳಿಗಿರುವ ವರದಿಯಲ್ಲಿ ಯಾವುದೇ ಹುರುಳಿದೆಯೇ ಎಂದು ಪ್ರಶ್ನಿಸಿದರು.**

ಶ್ರೀ ಉಪಾಧ್ಯಾಯರು ಉತ್ತರಿಸಿದರು, ಭಿನ್ನಾಭಿಪ್ರಾಯಗಳೇ? ನನಗೆ ತಿಳಿದಿರುವ ಜನಸಂಘದಲ್ಲಾಗಲೀ ಅಥವಾ ಆರ್.ಎಸ್.ಎಸ್.ನಲ್ಲಾಗಲೀ ಇಲ್ಲ. ಜನಸಂಘ ಹಾಗೂ ಆರ್.ಎಸ್.ಎಸ್. ನಡುವಿನ ಭಿನ್ನಾಭಿಪ್ರಾಯಗಳಿಗೆ ಸಂಬಂಧಪಟ್ಟಂತೆ ವಿಭಿನ್ನ ಪರಿಸರಗಳಲ್ಲಿ ಕೆಲಸ ಮಾಡುತ್ತಿರುವ ಈ ಎರಡೂ ಸಂಘಟನೆಗಳ ನಡುವಿನ ವ್ಯತ್ಯಾಸ ತಿಳಿದಿರುವವರಿಗೆ ಈ ಪ್ರಶ್ನೆ ಅರ್ಥಹೀನವಾಗಿ ತೋರಬಹುದು.

- **ಪ್ರಶ್ನೆ ಕೇಳಿದವರು ಮುಂದುವರಿದರು: ಜನಸಂಘದ ಸದಸ್ಯರು ಆರ್.ಎಸ್.ಎಸ್. ಜೊತೆ ಯಾವ ಸಂಬಂಧವನ್ನೂ ಹೊಂದಿಲ್ಲವೆಂದು ನೀವು ಹೇಳುತ್ತೀರೇ?**

ನಾನು ಖಂಡಿತವಾಗೂ ಹಾಗೆ ಹೇಳಿಲ್ಲ, ಶ್ರೀ ಉಪಾಧ್ಯಾಯರು ಹೇಳಿದರು. ಜನಸಂಘದಲ್ಲಿ ಆರ್.ಎಸ್.ಎಸ್.ನ ಸದಸ್ಯರು ಅನೇಕರಿದ್ದಾರೆ. ಹಾಗೆಯೇ ಆರ್.ಎಸ್.ಎಸ್.ನ ಸದಸ್ಯರಾಗಿದಾವರೂ ಕೂಡ. ನಾನು ಕಳೆದ ೨೦ ವರ್ಷಗಳ ಕಾಲ ಆರ್.ಎಸ್.ಎಸ್.ನಲ್ಲಿದ್ದೆ. ಆರ್.ಎಸ್.ಎಸ್. ಒಂದು ಸಾಂಸ್ಕೃತಿಕ ಸಂಘಟನೆಯಾಗಿದ್ದು ಇದರರ್ಥ ಅದರ ಸದಸ್ಯರು ರಾಜಕೀಯದಲ್ಲಿ ಭಾಗವಹಿಸುವುದಿಲ್ಲವೆಂದಲ್ಲ. ವಾಸ್ತವವಾಗಿ ಅದರ ಸದಸ್ಯರು ಅನೇಕ ರಾಜಕೀಯ ಪಕ್ಷಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಾರೆ.

ತಮ್ಮ ವಾದವನ್ನು ವಿಸ್ತರಿಸುತ್ತ ಜನಸಂಘದ ಪ್ರಧಾನ ಕಾರ್ಯದರ್ಶಿಗಳು ಹೇಳಿದರು: "ಉದಾಹರಣೆಗೆ ಶ್ರೀ ಲಾಲ್ ಬಹಾದೂರ್ ಶಾಸ್ತ್ರಿಗಳು ಹಾಗೂ ಇತರ ಅನೇಕ ಕಾಂಗ್ರೆಸಿಗರು ಆರ್ಯ ಸಮಾಜದ ಸದಸ್ಯರಾಗಿರಬಹುದು ಹಾಗೂ ಇನ್ನೂ ಅನೇಕರು ಹಿಂದಿ ಸಾಹಿತ್ಯ ಸಮ್ಮೇಳನದ ಸದಸ್ಯರಾಗಿರಬಹುದು. ಆದರೆ ಅದು ಈ ಯಾವುದೇ ಸಂಘಟನೆಗಳನ್ನು ಒಂದಕ್ಕೊಂದು ಜೋಡಿಸುವುದಿಲ್ಲ ಅಥವಾ ಒಂದನ್ನು ಇನ್ನೊಂದರ ಅಂಗವನ್ನಾಗಿ ಮಾಡುವುದಿಲ್ಲ. ಈ ಸಂಘಟನೆಗಳು ಪ್ರತ್ಯೇಕ ಚಟುವಟಿಕೆಗಳ ಪರಿಸರವನ್ನು ಹೊಂದಿವೆ. ಜನಸಂಘ ಹಾಗೂ ಆರ್.ಎಸ್.ಎಸ್. ಕೂಡ ಹೀಗೇ ಯಾರಾದರೂ ಉದ್ದೇಶಪೂರ್ವಕವಾಗಿ ಇಲ್ಲಿ ಗೊಂದಲ ಸೃಷ್ಟಿಸದ ಹೊರತು ಇಲ್ಲಿ ಯಾವುದೇ ಗೊಂದಲವಿಲ್ಲ. ನನಗೆ ಹೀಗೆ ಗೊಂದಲ ಸೃಷ್ಟಿಸುವ ಅನೇಕ ಪತ್ರಿಕೆಗಳ ಬಗ್ಗೆ ತಿಳಿದಿದೆ.

**ಪ್ರಜಾಪ್ರಭುತ್ವಕ್ಕಾಗಿ ಹುತಾತ್ಮರಾದವರು**

ಭಾನುವಾರದ ಮೊಂಗೀರ್ ಲೋಕಸಭಾ ಕ್ಷೇತ್ರದ ಉಪಚುನಾವಣೆಯ ಸಂದರ್ಭದಲ್ಲಿ ಮೈದರೀಪುರ ಮತಗಟ್ಟೆಯಲ್ಲಿ ಪೊಲೀಸ್ ಗೋಲಿಬಾರ್ ಅನ್ನು ಶ್ರೀ ಉಪಾಧ್ಯಾಯರು ಖಂಡಿಸಿದರು.

ಅವರು ಹೇಳಿದರು: ಜನರು ಕಾಂಗ್ರೆಸ್‌ನ ಕಾನೂನುಬಾಹಿರ ಪ್ರಚಾರದ ವಿರುದ್ಧ ಪ್ರತಿಭಟಿಸುವಾಗ ಒಬ್ಬ ಪ್ರಾಂತೀಯ ಮಂತ್ರಿಯ ಉಪಸ್ಥಿತಿಯಲ್ಲಿ ಪೊಲೀಸರು ಗೋಲೀಬಾರ್ ನಡೆಸಿದ್ದು ಈ ಇಡೀ ದುರದೃಷ್ಟಕರ ಘಟನೆಯನ್ನು ಇನ್ನಷ್ಟು ನಿಂದನೀಯವಾಗಿಸುತ್ತದೆ. ಪೊಲೀಸ್ ಗೋಲೀಬಾರ್‌ನಲ್ಲಿ ಮೃತಪಟ್ಟ ವ್ಯಕ್ತಿಗಳಿಗೆ ನಾನು ನನ್ನ ಶ್ರದ್ಧಾಂಜಲಿ ಅರ್ಪಿಸುತ್ತೇನೆ. ಅವರು ಪ್ರಜಾಪ್ರಭುತ್ವಕ್ಕಾಗಿ ಹುತಾತ್ಮರಾದವರು.

ಒಂದು ನ್ಯಾಯಾಂಗ ತನಿಖೆಯಾಗಬೇಕೆಂದು ಜನಸಂಘವು ಆಗ್ರಹಿಸುತ್ತದೆ. ಕಮಿಷನರ್ ಅವರ ಪ್ರಸ್ತುತ ತನಿಖೆ ಉದ್ದೇಶ ಈಡೇರಿಸುವುದಿಲ್ಲ.

* * * * *

# ಲಕ್ಷ್ಮಣರು ಮತ್ತು ಊರ್ಮಿಳೆಯರು ಬೇಕಾಗಿದ್ದಾರೆ

## ದೀನ್ ದಯಾಳರ ಪತ್ರಿಕಾ ಸಮ್ಮೇಳನ

ಜನವರಿ ಎರಡನೆಯ ದಿನಾಂಕ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಶ್ರೀ ದೀನ್ ದಯಾಳ್ ಉಪಾಧ್ಯಾಯ ಅವರು, ಭಾರತೀಯ ಜನಸಂಘದ ಮಹಾ ಕಾರ್ಯದರ್ಶಿಗಳನ್ನು ಮರು ನೇಮಕ ಮಾಡಿ, ಅಧಿಕ ಸಂಖ್ಯೆಯಲ್ಲಿ ಉಪಸ್ಥಿತರಿದ್ದವರನ್ನು ಉದ್ದೇಶಿಸಿ, ಭಾರತೀಯ ಜನಸಂಘವು ೧,೨೬೦ ವಿಧಾನಸಭೆಯ ಸ್ಥಾನಗಳಿಗೆ ಮತ್ತು ಸುಮಾರು ೨೦೦ ಲೋಕಸಭಾ ಸ್ಥಾನಗಳಿಗೂ ಸ್ಪರ್ಧಿಸಲು ನಿರ್ಧರಿಸಿರುವುದಾಗಿ ತಿಳಿಸಿದರು.

ಸಂಸ್ಥೆಯ ಕಾರ್ಯಕರ್ತರ ಕರ್ತವ್ಯಗಳ ಬಗೆಗೆ ಉಲ್ಲೇಖಿಸುತ್ತಾ ಶ್ರೀ ಉಪಾಧ್ಯಾಯರು ಅತ್ಯಂತ ಮಾರ್ಮಿಕ ಹಾಗೂ ಸ್ಪಷ್ಟವಾದ ಉದಾಹರಣೆಯನ್ನು ನೀಡಿದರು ಮತ್ತು ಹೀಗೆ ಹೇಳಿದರು: ಪ್ರತಿನಿಧಿಗಳ ಭಾರಿ ಮೆರವಣಿಗೆಯಲ್ಲಿ– ಕೆಲವರು–ಶೇಕಡಾ ಐದರಷ್ಟು ಸಂಖ್ಯೆಯ ಪ್ರತಿನಿಧಿಗಳಿದ್ದರು. ನೋಟದ ಬಗೆಗಿದ್ದ ಅವರ ಆಕರ್ಷಣೆಯು ಅವರ ಕರ್ತವ್ಯ ಪ್ರಜ್ಞೆಯನ್ನು ಮೀರಿ ನಿಂತಿತು. ತಮ್ಮ ತಮ್ಮ ನಿಗದಿತ ಸ್ಥಾನಗಳನ್ನು ಬಿಟ್ಟು ರಾವುತರ ತಂಡ–ಅಶ್ವಾರೋಹಿಗಳ ತಂಡವು ಸಾಗುವುದನ್ನು ನೋಡಲೆಂದು ಪಕ್ಕದ ಪಂಕ್ತಿಗಳಲ್ಲಿ ನಿಂತುಕೊಂಡರು. ಸಹಜವಾಗಿಯೇ ಇದು, ಪಥಸಂಚಲನದ ಸಮಗ್ರ ಪ್ರಭಾವದಿಂದ ನೋಡುಗರ ಮನಸ್ಸನ್ನು ವಿಕರ್ಷಿಸಿತು. ತಮ್ಮ ಕ್ಷೇತ್ರದಲ್ಲಿ ಮತಚಲಾವಣೆಯಿಂದ ಹರ್ಷಗೊಂಡು ಬೇರೆ ಬೇರೆಯವರು ಗೆಲುವಿನತ್ತಲೋ ಸೋಲಿನತ್ತಲೋ, ಹೇಗೆ ಸಾಗುತ್ತಿದ್ದಾರೆಂದು ನೋಡಲು ತಾವು ಕರ್ತವ್ಯ ನಿರ್ವಹಿಸಬೇಕಾದ ಸ್ಥಾನವನ್ನು ಬಿಟ್ಟು ಹೋಗುವ ಚುನಾವಣೆಯ ಕಾರ್ಯಕರ್ತರನ್ನು ನೆನಪಿಗೆ ತರುತ್ತದೆ. ಕೇವಲ, ಹರ್ಷದಿಂದ ಪ್ರೋತ್ಸಾಹಿಸುವ ಪ್ರೇಕ್ಷಕನಾಗುವ, ತನ್ನನ್ನು ತಾನು ಸಂಪೂರ್ಣವಾಗಿ ತಾನು ಸ್ಪರ್ಧಿಸಲು ಆಶಿಸಿದ ಕ್ಷೇತ್ರಗಳಲ್ಲಿ ತಲ್ಲೀನರಾಗುವ ಪ್ರಲೋಭನೆ ಇದು.

ಸಮತಾವಾದಿಗಳೊಡನೆಯಾಗಲೀ, ಕೋಮುವಾದಿಗಳೊಡನೆಯಾಗಲೀ ಯಾವುದೇ ಸಂಬಂಧವಿರುವುದಿಲ್ಲ.

೮೬೦ ವಿಧಾನಸಭಾ ಚುನಾವಣಾ ಕ್ಷೇತ್ರಗಳು ಮತ್ತು ೧೧೩ ಲೋಕಸಭಾ ಚುನಾವಣಾ ಕ್ಷೇತ್ರಗಳು ಈಗಾಗಲೇ ಅಂತಿಮವಾಗಿ ನಿರ್ಧಾರವಾಗಿವೆಯೆಂದು

ಶ್ರೀ ದೀನ್ ದಯಾಳರು ಪ್ರಕಟಿಸಿದರು. ಜನಸಂಘದ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದಿರುವ ರಾಜ್ಯ ಒರಿಸ್ಸಾ ಮಾತ್ರ ಎಂದೂ ಹೇಳಿದರು. ೧೯೬೧ ಮಾರ್ಚ್‌ನಲ್ಲಿ ಅಭ್ಯರ್ಥಿಗಳ ಮೊದಲ ಪಟ್ಟಿಯು ಪ್ರಕಟಗೊಳ್ಳುತ್ತದೆ. ೧೯೬೧ ಅಕ್ಟೋಬರ್‌ನಲ್ಲಿ ಚುನಾವಣಾ ಪ್ರಣಾಳಿಕೆಯು ಪ್ರಕಟಗೊಳ್ಳುತ್ತದೆ.

ಸಮತಾವಾದಿಗಳೊಡನೆಯಾಗಲೀ, ಕೋಮುವಾದಿಗಳೊಡನೆಯಾಗಲೀ, ಜನಸಂಘವು ಯಾವುದೇ ಸಂಬಂಧ ಹೊಂದಿರುವುದಿಲ್ಲವೆಂದು ದೀನ್ ದಯಾಳರು ಹೇಳಿದರು. ನಂತರದ ಪಂಗಡದಲ್ಲಿ ಅವರು ಅಕಾಲಿದಳ, ಮುಸ್ಲಿಮ್ ಲೀಗ್, ಮತ್ತು ದ್ರಾವಿಡಕಳಗಂ ಪಕ್ಷಗಳನ್ನು ಸೇರಿಸಿದರು. ಮಹಾಸಭೆಯು ಕೋಮುವಾದಿಯೇ ಎಂದು ಪ್ರಶ್ನಿಸಿದಾಗ, ಇಲ್ಲ, ಹಿಂದೂ ಮಹಾ ಸಭೆಯು ಕೋಮುವಾದಿ ಪಕ್ಷ ಎಂದು ನಾವು ಪರಿಗಣಿಸುವುದಿಲ್ಲ ಎಂದು ಹೇಳಿದರು. ಕಾಂಗ್ರೆಸ್ಸನ್ನು ಪರಾಭವಗೊಳಿಸಲು ಮತ್ತು ಸಮತಾವಾದಿಗಳನ್ನು ತೆಗೆದುಹಾಕುವ ಸಲುವಾಗಿ ಜನಸಂಘವು ಇತರ ಪಕ್ಷಗಳ ಸಹಕಾರವನ್ನು ಕೋರುತ್ತದೆ.

**ಉರ್ದು ಮತ್ತು ಇಂಗ್ಲಿಷ್:**

ಭಾರತದಲ್ಲಿ ಇಂಗ್ಲಿಷ್ ಮತ್ತು ಉರ್ದುವಿನ ಸ್ಥಾನದ ಬಗೆಗೆ ನಿಮ್ಮ ಆಲೋಚನೆಗಳು ಏನೆಂದು ಪ್ರಶ್ನಿಸಿದಾಗ, ಶ್ರೀ ದೀನ್ ದಯಾಳ್ ಹೇಳಿದರು. ಇವತ್ತಿನ ಪ್ರಕಾರ, ೧೯೬೫ರಲ್ಲಿ ಇಂಗ್ಲಿಷ್ ನಿರ್ಗಮಿಸುತ್ತದೆ ಎನ್ನುವುದು ಸಾಂವಿಧಾನಿಕ ಸ್ಥಿತಿಯಾಗಿದೆ. ಉರ್ದುವಿನ ಬಗೆಗೆ ಮಾತನಾಡುತ್ತಾ ಅವರು ಹೀಗೆ ಹೇಳಿದರು: ಉರ್ದು ಇತರ ಭಾಷೆಗಳಂತೆ ಒಂದು ಭಾಷೆಯಲ್ಲ. ಅದು ಪರ್ಷಿಯಾದ ಭಾಷೆಗೆ ರೂಪಾಂತರಗೊಂಡ ಹಿಂದಿ ಭಾಷೆಯಾಗಿದೆ. ಕಮಲ ಪುಷ್ಪದಲ್ಲಿ ಕೂಡ ಉರ್ದುಕವಿಗಳು ಸೌಂದರ್ಯವನ್ನು ಕಾಣುವ ತನಕವೂ ನಾವು ಅವರನ್ನು ಇಂಡಿಯಾದವರು ಅಥವಾ ಭಾರತೀಯರು ಎಂದು ಪರಿಗಣಿಸಲಾಗುವುದಿಲ್ಲ ಎಂದರು. ಮಹಾರಾಷ್ಟ್ರ ಮತ್ತು ಮದ್ರಾಸ್‌ಗಳಲ್ಲಿ ಕೂಡಾ ಮುಸ್ಲಿಮರು ಉರ್ದುವನ್ನೇ ತಮ್ಮ ಮಾತೃಭಾಷೆಯೆಂದು ಘೋಷಿಸಬೇಕೆಂದು ಬಯಸುವ ಸಂಗತಿಯು, ಈ ವಿಚಾರವು ಭಾಷೆಗೆ ಸಂಬಂಧಿಸಿದುದಲ್ಲ ಆದರೆ ರಾಜಕೀಯ ಹಾಗೂ ಕೋಮುವಾದಕ್ಕೆ ಸಂಬಂಧಿಸಿದುದು ಎನ್ನುವುದನ್ನು ತೋರಿಸುತ್ತದೆ ಎಂದು ಶ್ರೀ ದೀನ್ ದಯಾಳ್ ಹೇಳಿದರು.

**ಹೊಸ ಕಾರ್ಯಕಾರಿ ಸಮಿತಿ ಮತ್ತು ಸಂಸತ್ತಿನ ಆಲೋಚನಾ ಸಮಿತಿ**

ಅಧ್ಯಕ್ಷರಾದ ಶ್ರೀ ಎ. ರಾಮರಾವ್‌ರಿಂದ ನಿಯುಕ್ತಗೊಳಿಸಲ್ಪಟ್ಟ ಹೊಸ

ಕಾರ್ಯಕಾರಿ ಸಮಿತಿಯನ್ನು ಶ್ರೀ ದೀನ್ ದಯಾಳ್ ಅವರು ಪ್ರಕಟಿಸಿದರು: ಶ್ರೀ ಡಿ. ಪಿ. ಘೋಷ್ ಮತ್ತು ಶ್ರೀ ಪೀತಾಂಬರ್‌ದಾಸ್ (ಉಪ–ಅಧ್ಯಕ್ಷರು); ಕ್ಯಾಪ್ಟನ್ ಕೇಶಬ್ ಚಂದ್ರ (ಖಜಾಂಚಿ); ಶ್ರೀ ಜಗನ್ನಾಥ್ ರಾವ್ ಜೋಷಿ, ಶ್ರೀ ಎ. ಬಿ. ವಾಜಪೇಯಿ ಮತ್ತು ಶ್ರೀ ಸುಂದರಸಿಂಗ್ ಭಂಡಾರಿ (ಕಾರ್ಯದರ್ಶಿಗಳು); ಶ್ರೀ ಜೆ. ಪಿ. ಮಾಥುರ್ (ಕಾರ್ಯಾಲಯ ಕಾರ್ಯದರ್ಶಿ, ಉತ್ತರ ವಲಯ); ಶ್ರೀ ರಾಜಕುಮಾರ್ (ಕಾರ್ಯದರ್ಶಿ, ಪೂರ್ವ ವಲಯ); ಸದಸ್ಯರು–ಸರ್ವಶ್ರೀ ಪ್ರೇಮನಾಥ ಡೋಗ್ರಾ, ಹರೇಂದ್ರ ಸಿಂಗ್, ಕ್ರಿಷನ್ ಲಾಲ್, ವೈ. ಡಿ. ಶರ್ಮಾ, ಜಿ. ಡಿ. ವೈದ್ಯ, ಡಾ. ಮಹಾವೀರ್, ಠಾಕುರ್ ಪ್ರಸಾದ್, ಎಚ್. ಪಿ. ಭಾರತಿ, ಎಂ. ಎ. ವಿ. ರಾವ್, ವಿ. ರಾಜಗೋಪಾಲಾಚಾರಿ, ಎನ್. ಎನ್. ಮೆನನ್, ಬಿ. ಆರ್. ವ್ಯಾಸ್, ಜಿ. ಕೆ. ಕಪೂರ್, ಹೆಚ್. ಪಿ. ಪಾಂಡ್ಯ, ಯು. ಎಂ. ತ್ರಿವೇದಿ, ಬಿ. ಎಸ್. ಶೇಖಾವತ್ ಮತ್ತು ಶ್ರೀಮತಿ ಕಮಲಾ ಮಧೋಕ್, ಮತ್ತು ಅಧ್ಯಕ್ಷರು, ಮಹಾಕಾರ್ಯದರ್ಶಿಗಳು ಮತ್ತು ಸರ್ವಶ್ರೀ ವಾಜಪೇಯಿ, ಭಂಡಾರಿ, ಜಗನ್ನಾಥರಾವ್, ನಾನಾಜಿ ಮತ್ತು ಬಲರಾಜ್ ಮಧೋಕ್ ಇವರುಗಳನ್ನು ಒಳಗೊಂಡ ಹೊಸ, ಸಂಸತ್ತಿನ ಆಲೋಚನಾ ಸಮಿತಿಯನ್ನು ಅವರು ಘೋಷಿಸಿದರು.

* * * * *

# ಸಾಮೂಹಿಕ ವ್ಯವಸಾಯವನ್ನು ಭಾರತೀಯ ಜನಸಂಘ ವಿರೋಧಿಸುತ್ತದೆ, ಸಹಕಾರಿ ಬೇಸಾಯ ಎನ್ನುವುದು ಮಿಥ್ಯಾನಾಮ ಪ್ರಯೋಗ

ಜನವರಿ ೨೩ರಂದು ಪತ್ರಕರ್ತರ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ಭಾರತೀಯ ಜನಸಂಘದ ಮಹಾಕಾರ್ಯದರ್ಶಿಗಳಾದ ಶ್ರೀ ದೀನ್ ದಯಾಳ್ ಉಪಾಧ್ಯಾಯರು ಹೀಗೆ ಹೇಳಿದರು :

ಗ್ರಾಮೀಣ ಅರ್ಥವ್ಯವಸ್ಥೆಯನ್ನು ಚುರುಕುಗೊಳಿಸಲು ಮತ್ತು ಅದನ್ನು ಭದ್ರಬುನಾದಿಯ ಮೇಲೆ ಸ್ಥಾಪಿಸಲು, ಮಾಡಲೇಬೇಕಾದ ಅವಶ್ಯಕ ಕ್ರಮಗಳನ್ನು ಜನಸಂಘವು ಗುರುತಿಸುತ್ತದೆ. ಆದರೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ (ಭಾರತ ರಾಷ್ಟ್ರೀಯ ಕಾಂಗ್ರೆಸ್), ನಾಗಪುರ ಅಧಿವೇಶನ ಸೆಷನ್‌ನಲ್ಲಿ ಭೂಸುಧಾರಣೆಗಳ ಬಗೆಗೆ ಅಂಗೀಕರಿಸಿದ ನಿಲುವಳಿಗಳನ್ನು ಕಾರ್ಯಗತಗೊಳಿಸಿದರೆ, ಅದು ಗ್ರಾಮೀಣ ಭಾರತದ ರಾಜಕೀಯ ಹಾಗೂ ಆರ್ಥಿಕ ವಿನ್ಯಾಸಗಳಲ್ಲಿ ವ್ಯಾಪಕವಾದ ಗೊಂದಲ, ಕ್ಷೋಭೆಗಳಿಗೆ ಕಾರಣವಾಗುತ್ತದೆಂದು ಜನಸಂಘವು ಪರಿಗಣಿಸುತ್ತದೆ. ಇದುವರೆಗೂ ಭೂಸುಧಾರಣಾ ಕಾರ್ಯಕ್ರಮಗಳ ಕಟ್ಟಕಡೆಯ ಉದ್ದೇಶವು ಭೂಮಿಯ ನಿಜವಾದ ಉಳುಮೆಗಾರನಿಗೆ, ಒಡೆತನದ ಹಕ್ಕುಗಳನ್ನು ನೀಡುವುದೇ ಆಗಿದೆ. ರೈತರ ಮಾಲಿಕತ್ವದ ವ್ಯವಸ್ಥೆಯ ಆಧಾರದಿಂದ ರೂಪುಗೊಂಡ ಭೂಮಿಯ ಅನುಭೋಗದ ಅವಧಿಯು ಪ್ರಜಾಸತ್ತಾತ್ಮಕ ತತ್ತ್ವಗಳಿಗೆ ಬದ್ಧವಾಗಿರುತ್ತದೆ ಮತ್ತು ಅತ್ಯಂತ ಹೆಚ್ಚಿನ ಆರ್ಥಿಕ ಫಲಿತಾಂಶವನ್ನು ಕೊಡುತ್ತದೆ. ಜನಸಂಘವು ಎಲ್ಲ ರೀತಿಯ ಸಾಮೂಹಿಕ ವ್ಯವಸಾಯವನ್ನು ವಿರೋಧಿಸುತ್ತದೆ. ಈಗ ಸೂಚಿಸಲ್ಪಟ್ಟಿರುವ ಸಹಕಾರಿ ಕೃಷಿಕ್ಷೇತ್ರಗಳು ಕೇವಲ ಮಿಥ್ಯಾನಾಮ ಪ್ರಯೋಗಗಳು. ಅವುಗಳು, ಮಾಲಿಕರಾದ ರೈತರನ್ನು ಭೂರಹಿತ ಕೂಲಿಯ ಮಟ್ಟಕ್ಕೆ ಇಳಿಸಿ ಸಾಂಘಿಕ ಅಥವಾ ಸಮುದಾಯ ಸ್ವಾಮ್ಯ ರೂಪಿಸುವತ್ತ ಕೊಂಡೊಯ್ಯುತ್ತವೆ. ಇದು ಆ ರೈತನ ವೈಯಕ್ತಿಕ ಸ್ವಾತಂತ್ರ್ಯವನ್ನು, ಕರ್ತೃತ್ವ ಶಕ್ತಿ, ಉದ್ಯಮಶೀಲತೆಗಳನ್ನು ನಾಶಪಡಿಸುವುದರ ಮೂಲಕ, ಪ್ರಜಾಪ್ರಭುತ್ವವನ್ನು

---

**ಮೂಲ ಆಕರ : ಜನವರಿ ೨೬, ೧೯೫೯**

ನಷ್ಟಪಡಿಸಿ ಸರ್ವಾಧಿಕಾರಿಶಾಹಿ ಪ್ರವೃತ್ತಿಯನ್ನು ಬಲಗೊಳಿಸುತ್ತವೆ. ಆರ್ಥಿಕ ದೃಷ್ಟಿಕೋನದಿಂದ ಕೂಡ, ಬಂಡವಾಳ ಮತ್ತು ಪರಿಶ್ರಮದ ಅನುಪಾತವು ಸಾಂದ್ರವಾದ ಕೃಷಿಯನ್ನು ಪರಿಚಯಿಸುವುದನ್ನು ಹೊರತು ಬೇರೆ ಯಾವ ಮಾರ್ಗವನ್ನೂ ಬಿಡುವುದಿಲ್ಲವಾಗಿ, ದೊಡ್ಡ ಪ್ರಮಾಣದ ಸಹಕಾರಿ ಕೃಷಿ ಕ್ಷೇತ್ರಗಳು ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೇರಿಸುವುದಿಲ್ಲ. ದೇಶವು ತೀವ್ರ ಆಹಾರ ಕೊರತೆಯ ಹಿಡಿತದಲ್ಲಿರುವಾಗ, ಬೇರೆ ಕಡೆಗಳಲ್ಲಿ ವಿಫಲವಾಗಿರುವ ಪ್ರಯೋಗಗಳನ್ನು ಮರುನವೀಕರಿಸುತ್ತಾ, ನಮ್ಮನ್ನು ನಾವು ಭವಿಷ್ಯದ ಅಪಾಯಕ್ಕೆ ಖಂಡಿತ ಒಡ್ಡಿಕೊಳ್ಳುವಂತಿಲ್ಲ.

ಜನಸಂಘವು, ಮಾಲೀಕನೇ ಬೇಸಾಯ ಮಾಡುವ ಆಧಾರದ ಭೂಸ್ವಾಮ್ಯದ ಅವಧಿಯ ವ್ಯವಸ್ಥೆಯನ್ನು ಜಾರಿಗೆ ತರುವ ನಿಲುವು ಹೊಂದಿರುವುದರಿಂದ ಮತ್ತು ಯಾಂತ್ರೀಕೃತ ಬೇಸಾಯವು ಈಗ ಅಸ್ತಿತ್ವದಲ್ಲಿರುವ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗೆ ಸೂಕ್ತವಾಗಿಲ್ಲವೆಂದು ಪರಿಗಣಿಸುವುದರಿಂದ, ಜಮೀನು ಹಿಡುವಳಿಯ ಮೇಲೆ ಗರಿಷ್ಠ ಮಿತಿಯು ಅವಶ್ಯಕವೆಂದು ಅದು ಭಾವಿಸುತ್ತದೆ. ಈ ಗರಿಷ್ಠಮಿತಿಯನ್ನು ನಿಗದಿಪಡಿಸುವಾಗ, ವ್ಯವಸಾಯ ಮಾಡುತ್ತಿರುವ ಭೂಮಿಯನ್ನೂ, ವ್ಯವಸಾಯ ಯೋಗ್ಯವಾದ ಬಂಜರು ಬಿದ್ದಿರುವ ಜಮೀನನ್ನೂ, ಗ್ರಾಮೀಣ ಜನಸಂಖ್ಯೆಯ ಅವಶ್ಯಕತೆ–ಬೇಡಿಕೆ, ಸಾಮರ್ಥ್ಯವನ್ನೂ, ಜಮೀನಿನ ಅಭಿವೃದ್ಧಿಯ ಸೌಲಭ್ಯ ಸಾಮರ್ಥ್ಯಗಳ ಅಂತರವನ್ನೂ, ವ್ಯವಸಾಯದಿಂದ ಹೊರತಾದ ಉದ್ಯೋಗಾವಕಾಶಗಳು ಮತ್ತು ಸರ್ವಸಮತೆಯ ತತ್ತ್ವಗಳನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ವಾರ್ಷಿಕ ಕಡೆಯಪಕ್ಷ ೬೦೦೦ ರೂಪಾಯಿಗಳ ನಿವ್ವಳ ಆದಾಯ ನೀಡಲು ಸಮರ್ಥವಾದಂಥ ಮೂವತ್ತು ಎಕರೆ ಒಳ್ಳೆಯ ನೀರಾವರಿ ಜಮೀನು ಅಥವಾ ಅದಕ್ಕೆ ಸರಿಸಮನಾದಷ್ಟು ಭೂಮಿಯನ್ನು ಜನಸಂಘವು ಗರಿಷ್ಠ ಮಿತಿಯ ಹಿಡುವಳಿ ಎಂದು ಪರಿಗಣಿಸುತ್ತದೆ. ಈಗ ಅಸ್ತಿತ್ವದಲ್ಲಿರುವ ಸಂವಿಧಾನದ ನಿಬಂಧನೆಗಳ ಅಡಿಯಲ್ಲಿ ದೊಡ್ಡ ದೊಡ್ಡ ಜಮೀನುಗಳ ಮಾಲಿಕರು, ತಾವು ಬಿಟ್ಟುಕೊಟ್ಟ ಹೆಚ್ಚುವರಿ ಜಮೀನಿಗೆ ಪರಿಹಾರ ಧನ ಪಡೆಯಬೇಕಾಗಿರುವುದರಿಂದ, ಸರ್ಕಾರವು ಯಾವುದೇ ಪ್ರಾಯೋಗಿಕ ಕ್ರಮಗಳನ್ನು ಕೈಗೊಳ್ಳುವ ಮೊದಲು, ಈ ಇಡೀ ಪ್ರಶ್ನೆಯ ಆರ್ಥಿಕ ಅಂಶವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಅಲ್ಲದೆ, ಜಮೀನಿನ ಹೊಸ ಕೃಷಿಕರಿಗೆ, ಭೂರಹಿತ ರೈತರ ಸಹಕಾರಿ ಸಂಸ್ಥೆಗಳಿಗೆ ಮುಂಗಡ ನೀಡಲು ಕಾಂಗ್ರೆಸ್ಸಿನ ನಿರ್ಣಯದಂತೆ, ವ್ಯವಸಾಯವನ್ನು ಮುಂದುವರೆಸಲು ಬೇಕಾದ ಅಗತ್ಯಗಳನ್ನು ಒದಗಿಸಲು ಹಣದ ಅವಶ್ಯಕತೆಯಿರುತ್ತದೆ. ರಾಜ್ಯಗಳ ಮೇಲೆ ಹೊರಿಸಲ್ಪಡುತ್ತಿರುವ ಈ ಎಲ್ಲ ಆರ್ಥಿಕ ಹೊಣೆಗಾರಿಕೆಯು, ವಿಶೇಷವಾಗಿ ಆ ರಾಜ್ಯಗಳು ಈಗಾಗಲೇ ಭಾರೀ ಯೋಜನೆಗಳು ಮತ್ತು ಯೋಜನೇತರ ಖರ್ಚು

ವೆಚ್ಚಗಳಿಗೆ ಬದ್ಧರಾಗಿರುವುದರಿಂದ, ಮತ್ತು ಮಾಜಿ ಜಮೀನ್‌ದಾರರಿಗೆ ಮತ್ತು ಜಾಗೀರ್ದಾರರಿಗೆ ಭಾರೀ ಪ್ರಮಾಣದಲ್ಲಿ ಪರಿಹಾರ ನೀಡಬೇಕಾಗಿರುವುದರಿಂದಾಗಿ, ಇತರ ಆರ್ಥಿಕ ಸಂಪನ್ಮೂಲಗಳ ಮೇಲೆ ಹೆಚ್ಚಿನ ಒತ್ತಡ ಉಂಟುಮಾಡುತ್ತದೆ. ದೊಡ್ಡ ಪ್ರಮಾಣದ ಆಡಳಿತಾತ್ಮಕ ಮತ್ತು ಸಂಘಟನಾತ್ಮಕ ಏರ್ಪಾಡುಗಳು– ಸಿದ್ಧತೆಗಳು– ಕೂಡಾ, ಅಗತ್ಯವಾಗಿರುತ್ತದೆ, ಅದೂ, ಈ ಹೆಚ್ಚುವರಿ ಜಮೀನಿನಲ್ಲಿ ಕೃಷಿಯು ಸಹಕಾರೀ ತತ್ತ್ವದಲ್ಲಿ ನಡೆಯಬೇಕಾದರೆ ಶಾಸನಗಳ ಮೂಲಕ ಕೇವಲ ಸಂಸ್ಥೆಗಳನ್ನು ಅಸ್ತಿತ್ತ್ವಕ್ಕೆ ತರುವುದರಿಂದ ಪರಿಸ್ಥಿತಿಯ ಅಗತ್ಯಗಳನ್ನು ಪೂರೈಸಲು ಸಾಧ್ಯವಿಲ್ಲ. ಭಾರತದ ಲಕ್ಷಲಕ್ಷ ಹಳ್ಳಿಗಳಲ್ಲಿ ಚದುರಿಹೋಗಿರುವ ಬಹುಸಂಖ್ಯಾತ ಸ್ತ್ರೀ ಪುರುಷರ ಸಮೂಹವನ್ನು ಸಂಚಲನಗೊಳಿಸಿ, ಉತ್ಸಾಹ ತುಂಬುವಂತಹ, ಉನ್ನತ ಮಟ್ಟದ ಪ್ರಾಮಾಣಿಕತೆ, ಸಾಮಾಜಿಕ ದೃಷ್ಟಿಕೋನ, ನಿಸ್ವಾರ್ಥ ಸೇವಾ ಮನೋಭಾವ, ಆಡಳಿತಾತ್ಮಕ ದಕ್ಷತೆ, ಕಾರ್ಯಪಟುತ್ವ ಮತ್ತು ನಾಯಕತ್ವದ ಗುಣಗಳು ಇದಕ್ಕೆ ಅಗತ್ಯವಾಗಿವೆ. ಇವೆಲ್ಲವೂ ಅತ್ಯಂತ ಬೃಹತ್ಕಾರ್ಯವಾಗಿದೆ. ಯಾವುದೇ ಸರ್ಕಾರದ ಆಡಳಿತ ವ್ಯವಸ್ಥೆ, ಪಂಚಾಯತಿ ವ್ಯವಸ್ಥೆಯಾಗಲೀ ಈ ಅಗಾಧವಾದ ಹೊಣೆಗಾರಿಕೆಯನ್ನು ನಿರ್ವಹಿಸಲು ಸಾಧ್ಯವಿಲ್ಲ. ಸೈದ್ಧಾಂತಿಕ ಅನುಸಂಧಾನದ ಹೊರತಾಗಿ, ವ್ಯಾವಹಾರಿಕ ಆಲೋಚನೆಯು– ಪರಿಶೀಲನೆಯು– ಭೂ ಸುಧಾರಣೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕ್ರಮಗಳನ್ನು ಅಳವಡಿಸಿ ಕೊಳ್ಳಬೇಕಾಗಿದೆ.

(೧) ತತ್‌ಕ್ಷಣದಿಂದಲೇ, ಎಲ್ಲ ರಾಜ್ಯಗಳಲ್ಲಿಯೂ ಭವಿಷ್ಯದಲ್ಲಿ ಗಳಿಸುವ ಜಮೀನಿನ ಮೇಲೆ ಗರಿಷ್ಠ ಪರಿಮಿತಿಯನ್ನು ಜಾರಿಗೆ ತರಬೇಕು.

(೨) ಹಿಡುವಳಿದಾರರಿಗೆ, ಭೋಗ್ಯದ ಅವಧಿಯ ನಿಗದಿತತೆಯನ್ನು ಮತ್ತು ಸುಲಭ ಬೆಲೆಯಲ್ಲಿ ಜಮೀನನ್ನು ಕೊಳ್ಳುವ ಹಕ್ಕನ್ನೂ, ಮತ್ತು ಹಣವನ್ನೂ ಹಲವಾರು ಕಂತುಗಳಲ್ಲಿ ಅನೇಕ ವರ್ಷಗಳ ಅವಧಿಯಲ್ಲಿ ಹಿಂದಿರುಗಿಸುವ ಅವಕಾಶವನ್ನೂ ಕೊಡಬೇಕು.

ಈ ಹಿಡುವಳಿದಾರರು ಯಾವುದೇ ಬಾಡಿಗೆಯನ್ನೂ ಪಾವತಿಸಬೇಕಾಗಿಲ್ಲ;

(೩) ಗರಿಷ್ಠ ಪರಿಮಿತಿಗಿಂತಲೂ ಹೆಚ್ಚಿನ ಹಿಡುವಳಿಯಿರುವ ಭೂಮಾಲಿಕರು ತಮ್ಮ ಹೆಚ್ಚುವರಿ ಜಮೀನನ್ನು, ಮೂರು ವರ್ಷಗಳ ಅವಧಿಯ ಒಳಗೆ, ವಿಲೇವಾರಿ (ಹಸ್ತಾಂತರಿಸು) ಮಾಡುವಂತೆ ತಿಳಿಸಬೇಕು. ಇಂತಹ ಜಮೀನುಗಳನ್ನು ಕೊಂಡುಕೊಳ್ಳಲು ಬಯಸುವ ವ್ಯಕ್ತಿಗಳು, ಬೆಲೆಯ ಹಣವನ್ನೂ ಕಂತುಗಳಲ್ಲಿ ಕೊಡುವ ಸೌಲಭ್ಯ ಪಡೆಯಬೇಕು. ಇಂತಹ ಭೂಮಿಯನ್ನು ಕೊಳ್ಳಲು, ಸಹಕಾರೀ ಅಥವಾ ಇತರ, ಸಾಲನೀಡುವ ಹಣಕಾಸು ಸಂಸ್ಥೆಗಳು, ಹಣವನ್ನು ಮುಂಗಡವಾಗಿ ನೀಡಬಹುದು.

(೪) ಸಂಪೂರ್ಣ ಗ್ರಾಮವನ್ನು ಮರುವಿನ್ಯಾಸಗೊಳಿಸುವ ವ್ಯಾಪ್ತವಾದ ಯೋಜನೆಯನ್ನೂ ರೂಪಿಸಬೇಕು ಮತ್ತು ಸಂಘಟಿತ ಕಾರ್ಯವನ್ನು ಕೈಗೊಳ್ಳಬೇಕು.

(೫) ಸಾಲ ನೀಡಿಕೆ, ವ್ಯಾಪಾರೋದ್ಯಮ, ಕ್ರಯವಿಕ್ರಯಗಳಿಗೆ ಸಹಕಾರಿ ಸೇವಾ ಕೇಂದ್ರಗಳನ್ನು ಸ್ಥಾಪಿಸಬೇಕು.

ಕೃಷಿ ಅರ್ಥವ್ಯವಸ್ಥೆಯಲ್ಲಿ ತೀವ್ರವಾದ ಅನಿಶ್ಚಯತೆ– ಸಂದಿಗ್ಧತೆಯನ್ನು ಒಳತರುವುದರ ಮೂಲಕ ನಾಗಪುರದ ನಿರ್ಣಯವು ಆಹಾರ ಉತ್ಪಾದನೆಯಲ್ಲಿ ಪ್ರತಿಕೂಲ ಪರಿಣಾಮ ಬೀರಬಹುದೆಂದು, ಪ್ರಶ್ನೆಗಳನ್ನು ಉತ್ತರಿಸುತ್ತಾ ದೀನ್ ದಯಾಳರು ಹೇಳಿದರು.

ಯಶಸ್ವಿಯಾದ, ರಾಜ್ಯದ ಒಂದೇ ಒಂದು ಕೃಷಿಕ್ಷೇತ್ರವನ್ನೂ ತಾವು ನೋಡಲಿಲ್ಲವೆಂದು ದಿನ್ ದಯಾಳರು ಹೇಳಿದರು. ಜಮ್ಮು ಮತ್ತು ಯು.ಪಿ.ಯ ತೆರಾಯ್‌ನ ಎರಡು ದೊಡ್ಡ ದೊಡ್ಡ ರಾಜ್ಯ ಕೃಷಿಕ್ಷೇತ್ರಗಳೂ ದುಸ್ಥಿತಿಯಲ್ಲಿದ್ದವು. ಅಲ್ಲದೇ, ಆಹಾರ ಉತ್ಪಾದನೆಯ ಹೆಚ್ಚಳಕ್ಕೆ ವಿಸ್ತೃತವಾದ ಬೇಸಾಯಕ್ಕಿಂತಲೂ, ಸಾಂದ್ರವಾದ ವ್ಯವಸಾಯದಲ್ಲಿ ಹೆಚ್ಚು ಅವಕಾಶವಿರುತ್ತದೆ. ಮತ್ತು ಇಲ್ಲಿ, ಚದುರಿದ ಹೊಣೆಗಾರಿಕೆ, ಮತ್ತು ವಿಭಜಿತಗೊಂಡ ಆಸಕ್ತಿಗಳಿಂದಾಗಿ ಅಗಾಧಗಾತ್ರದ, ಹಿಡಿತಕ್ಕೆ ಸಿಕ್ಕದ ಸಹಕಾರೀ ವ್ಯವಸಾಯಕ್ಕಿಂತಲೂ ಹೆಚ್ಚಾಗಿ ರೈತರ ಚಿಕ್ಕ ಚಿಕ್ಕ ಕೃಷಿಕ್ಷೇತ್ರಗಳು ನಿರ್ಣಾಯಕವಾದ ಅನುಕೂಲ ಪಡೆದಿದ್ದವು.

ವ್ಯವಸಾಯದ ಹಿಡುವಳಿಯನ್ನು (ಜಮೀನನ್ನು) – ಮಿತಿಗೊಳಪಡಿಸಿದ ಜನಸಂಘವು ನಗರ ಸಂಪತ್ತನ್ನು ಏಕೆ ಮಿತಿಗೊಳಪಡಿಸಲಿಲ್ಲವೆಂದು ಪ್ರಶ್ನಿಸಿದಾಗ, ದೀನ್ ದಯಾಳರು, ನಗರಜೀವನದ ವೆಚ್ಚವು ಒಂದು ಕುಟುಂಬಕ್ಕೆ, ತಿಂಗಳಿಗೆ ೨೦೦೦ ರೂಪಾಯಿಗಳಿಗೆ ಮಿತಿಗೊಳಿಸಬೇಕೆಂಬ ಉದ್ದೇಶ ಹೊಂದಿದೆ ಎಂದು ತಿಳಿಸಿದರು. ಜಮೀನು ಪರಿಮಿತ ಪ್ರಮಾಣದಲ್ಲಿರುವುದರಿಂದಲೂ, ಕೈಗಾರಿಕೆ ಮತ್ತು ವಾಣಿಜ್ಯದಲ್ಲಿ ಅವಕಾಶಗಳು ಅಷ್ಟೊಂದು ಪರಿಮಿತ ಎಲ್ಲೆಯಲ್ಲಿ ಇಲ್ಲದಿರುವುದ ರಿಂದಲೂ ವ್ಯವಸಾಯ ಕ್ಷೇತ್ರದಲ್ಲಿ ಗರಿಷ್ಠ ಮಿತಿಯನ್ನು ಇಳಿಸುವುದು ಸಮರ್ಥನೀಯವಾಗಿದೆ.

ಜನಸಂಘವು, ಸೇವಾ ಸಹಕಾರತ್ವಕ್ಕೆ ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಏಕೆ ಒಪ್ಪಿಕೊಳ್ಳುತ್ತಿದೆ ಎಂದು ಪ್ರಶ್ನಿಸಿದಾಗ ದೀನ್ ದಯಾಳ್‌ಜೀಯವರು ಹೀಗೆ ಉತ್ತರಿಸಿದರು: ಜನಸಂಘವು ಕೇವಲ ವಿರೋಧಕ್ಕಾಗಿ ವಿರೋಧಿಸಲು ಸಿದ್ಧವಿರಲಿಲ್ಲ. ಎಲ್ಲರ ನಗುವಿನ ಮಧ್ಯೆ ಅವರು ಹೇಳಿದರು ನಾವು ಸಹಮತಿಸುವಂತಹ ಅನೇಕ ಕಾರ್ಯಗಳನ್ನು ಸರ್ಕಾರ ಮಾಡುತ್ತದೆ. ಅವುಗಳನ್ನು ವಿರೋಧಿಸುವ ಉದ್ದೇಶ ನಮಗಿಲ್ಲ.

* * * * *

## ಮೂರು ಅಂಶಗಳ ಕಾರ್ಯಕ್ರಮ

# ಕುಸಿಯುತ್ತಿರುವ ಕೃಷಿ ಉತ್ಪನ್ನಗಳ ಬೆಲೆಗಳನ್ನು ತಡೆಯಲು ಜನಸಂಘದ ಸಲಹೆಗಳು

### ಜಯಪುರದಲ್ಲಿ ದೀನ್ ದಯಾಳರು

ಮೇ ಹನ್ನೆರಡರಂದು, ಜಯಪುರದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ನಮ್ಮದೇ ನೆಲದ ಮೇಲೆ ನಮ್ಮ ಕಣ್ಣುಗಳೆದುರೇ ಪೋರ್ಚುಗೀಸರು, ನಮ್ಮ ಜನರನ್ನು ಹಿಂಸಿಸುವುದು ಅಸಂಬದ್ಧ ಮತ್ತು ಅಸ್ವಾಭಾವಿಕವಾಗಿತ್ತು, ಎಂದು ಜನಸಂಘದ ಪ್ರಧಾನಕಾರ್ಯದರ್ಶಿಗಳಾಗಿ ಶ್ರೀ ದೀನ್ ದಯಾಳ್ ಉಪಾಧ್ಯಾಯರು ಹೇಳಿದರು. ಪೋರ್ಚುಗಲ್ ಮಾತುಕತೆಗೆ ಕೂಡಾ ಒಪ್ಪದಿದ್ದುದನ್ನು ಪರಿಗಣಿಸಿದಾಗ ಗೋವಾದಲ್ಲಿ ಸ್ಪಷ್ಟವಾಗಿಯೇ ಪೊಲೀಸ್ ಕ್ರಮಕ್ಕೆ ಅವಕಾಶವಿತ್ತು ಎಂದೂ ಅಭಿಪ್ರಾಯಪಟ್ಟರು.

ಕಾಶ್ಮೀರದ ಬಗೆಗೆ ಭಾರತ ಮತ್ತು ಪಾಕಿಸ್ತಾನಗಳ ಮಾತುಕತೆಯನ್ನು ಉಲ್ಲೇಖಿಸುತ್ತಾ ಜನಸಂಘದ ನಾಯಕರು ಹೀಗೆ ಹೇಳಿದರು: ರಾಜ್ಯದ ಚುನಾವಣಾ ಕ್ಷೇತ್ರದ ಸಭೆಯು– ವಿಧಾನಸಭೆಯು– ಕಾಶ್ಮೀರದ ಸೇರ್ಪಡೆಯನ್ನು ಕ್ರಮಬದ್ಧವಾಗಿ ಊರ್ಜಿತಗೊಳಿಸಿದ ನಂತರ ಕಾಶ್ಮೀರ ಸಮಸ್ಯೆಯನ್ನು ಕುರಿತು ಮಾತುಕತೆಗಳನ್ನು ಮತ್ತೆ ಆರಂಭಿಸಿದ್ದು ತಪ್ಪು ನಿರ್ಣಯವಾಗಿತ್ತು. ನ್ಯಾಯಕ್ಕೆ ವಿರುದ್ಧವಾಗಿ ಪಾಕಿಸ್ತಾನವು ಆಕ್ರಮಿಸಿಕೊಂಡಿದ್ದ ಪ್ರದೇಶಗಳನ್ನು ಮತ್ತೆ ಪಡೆದುಕೊಳ್ಳುವ ಮಾರ್ಗವನ್ನು ಹುಡುಕಬೇಕೆಂದೂ ಅವರು ಹೇಳಿದರು. ಪಾಕಿಸ್ತಾನದ ಗವರ್ನರ್ ಜನರಲ್ ಮತ್ತು ಪ್ರಧಾನಮಂತ್ರಿಗಳ ಸ್ನೇಹಪೂರ್ಣ ಹೇಳಿಕೆಗಳನ್ನು ಸ್ವಾಗತಿಸುತ್ತಾ, ದೀನ್ ದಯಾಳ್ ಅವರು ಹೀಗೆ ಹೇಳಿದರು: ನೆಕೊವಾಲ್‌ನಲ್ಲಿನ ಗಂಭೀರ ಘಟನೆ ಮತ್ತು ಪೂರ್ವ ಬಂಗಾಳದಿಂದ ಸತತವಾಗಿ ಮುಂದುವರೆಯುತ್ತಿರುವ ಭಾರೀ ವಲಸೆಯು ಪಾಕಿಸ್ತಾನವು ತಾನು ಹೇಳಿದುದನ್ನು ಕಾರ್ಯರೂಪಕ್ಕೆ ತರುವ ಇಚ್ಛೆ ಹೊಂದಿರಲಿಲ್ಲವೆಂಬುದನ್ನು ಅನಾವರಣಗೊಳಿಸಿದವು.

---

**ಮೂಲ ಆಕರ : 'ಆರ್ಗನೈಸರ್', ೩೦, ಮೇ, ೧೯೫೫**

ರಾಜಸ್ಥಾನದಲ್ಲಿ ಇತ್ತೀಚೆಗೆ ವನಸ್ಪತಿ ತೈಲಗಳ ಆಮದಿನ ಮೇಲಿನ ನಿಷೇಧವನ್ನು ತೆಗೆದುಹಾಕಿದುದರ ಬಗೆಗೆ ಶ್ರೀ ದಿನ್ ದಯಾಳರು ಟೀಕಿಸಿದರು. ಈ ನಿಷೇಧವನ್ನು ತೆಗೆಯುವುದರಿಂದ, ದೇಶೀಯ ತುಪ್ಪದ ಕೈಗಾರಿಕೆಯು ನಾಶವಾಗುವುದಲ್ಲದೇ, ಜನತೆಯ ಆರೋಗ್ಯದ ಮೇಲೆಯೂ ಇದು ಪರಿಣಾಮ ಬೀರುತ್ತದೆ. ಕಲ್ಕತ್ತಾ ಮತ್ತು ಮುಂಬೈಗಳಿಗೆ ಮುಕ್ತವಾಗಿ ದನಗಳನ್ನು ರಫ್ತು ಮಾಡುವುದರಿಂದ ಗೋಹತ್ಯಾ ನಿಷೇಧವನ್ನು ರದ್ದುಮಾಡಿದಂತಾಗುತ್ತದೆಂದೂ ಅವರು ಹೇಳಿದರು. ಈ ಎರಡೂ ಸಂದರ್ಭಗಳಲ್ಲಿ ಪರಿಹಾರೋಪಾಯ ಕೈಗೊಳ್ಳಲು ಅವರು ಒತ್ತಾಯಿಸಿದರು.

ಕೃಷಿ ಉತ್ಪನ್ನಗಳ ಬೆಲೆಯಲ್ಲಿನ ತೀವ್ರ ಕುಸಿತದ ಬಗೆಗೆ ತೀಕ್ಷ್ಣವಾದ ಗಮನ ಸೆಳೆಯುತ್ತಾ ಅವರು ಹೇಳಿದರು. ಕೃಷಿ ಉತ್ಪನ್ನಗಳ ಬೆಲೆ ಕುಸಿತಕ್ಕೆ ಸಂವಾದಿಯಾಗಿ, ಕೃಷಿಕವರ್ಗದವರು ಉಪಯೋಗಿಸುವ, ಕಾರ್ಖಾನೆಗಳಲ್ಲಿ ತಯಾರಾದ ವಸ್ತುಗಳ ಬೆಲೆಯಲ್ಲಿ ಕುಸಿತವಿಲ್ಲ. ಯುದ್ಧಕಾಲದಲ್ಲಿ ಮತ್ತು ಯುದ್ಧಾನಂತರದ, ಹೆಚ್ಚಿದ ಜಮೀನಿನ ಬೆಲೆಗಳ ಗ್ರಾಮೀಣ ಋಣಬದ್ಧತೆಯು ಸಂಪೂರ್ಣವಾಗಿ ಋಣಸಂದಾಯವಾಗಿ, ಹೆಚ್ಚಾಗುವ ಪ್ರವೃತ್ತಿಯೇ ಕಂಡುಬಂದಿತು. ಜಮೀನು ಮತ್ತು ಮನೆಗಳು ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಆಧಾರ, ಭೋಗ್ಯಕ್ಕೆ ಒಳಗಾಗುತ್ತಿದ್ದವು.

ಈ ಪರಿಸ್ಥಿತಿಯನ್ನು ಎದುರಿಸಲು ದೀನ್ ದಯಾಳರು ಮೂರು ಅಂಶಗಳ ಕಾರ್ಯಕ್ರಮವನ್ನು ಸೂಚಿಸಿದರು. ಎಲ್ಲ ಕೃಷಿ ಉತ್ಪನ್ನಗಳಿಗೂ ಸರ್ಕಾರವು ಕನಿಷ್ಠ ಬೆಲೆಯನ್ನು ನಿಗದಿಪಡಿಸಬೇಕು. ಎರಡನೆಯದಾಗಿ ಗ್ರಾಮೀಣ ಸಾಲ ಸೌಲಭ್ಯಗಳನ್ನು ವಿಸ್ತರಿಸಬೇಕು. ಕಡೆಯದಾಗಿ, ಆದರೆ ಬಹಳ ಮುಖ್ಯವಾಗಿ ಕಚ್ಚಾ ವಸ್ತುಗಳು, ಸೀಮೆಎಣ್ಣೆ, ಮತ್ತು ಅಗತ್ಯ ಪ್ರಮಾಣದ ಸಿಮೆಂಟ್ ಮತ್ತು ಉಕ್ಕು ಇಂತಹ ಅವಶ್ಯಕತೆಗಳು ಕೃಷಿಕರಿಗೆ, ಸರ್ಕಾರವು ನಿಗದಿಪಡಿಸಿದ ನ್ಯಾಯಬೆಲೆಗೆ ದೊರಕುವಂತೆ ಮಾಡಬೇಕು.

* * * * *

# ಗುಜರಾತಿನಲ್ಲಿ ಜನಸಂಘ ನಾಯಕರ ಪ್ರಥಮ ಪ್ರವಾಸ ಉತ್ತಮ ಪ್ರತಿಕ್ರಿಯೆ

ಭಾರತೀಯ ಜನಸಂಘದ ಪ್ರಧಾನಕಾರ್ಯದರ್ಶಿಗಳಾದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು, ಸಾಕಷ್ಟು ವ್ಯಾಪಕವಾದ ತಮ್ಮ ಪ್ರವಾಸವನ್ನು ಮೇ ತಿಂಗಳ ಎರಡನೆಯ ದಿನಾಂಕ ಸಂಪೂರ್ಣಗೊಳಿಸಿದರು. ತಮ್ಮ ಪ್ರವಾಸದ ಹತ್ತು ದಿನಗಳ ಅವಧಿಯಲ್ಲಿ ಅವರು, ಸೂರತ್, ಬರೋಡ, ಅಹಮದಾಬಾದ್, ಜುನಾಗರ್, ರಾಜಕೋಟ್, ಮಾರ್ವಿ ಮತ್ತು ಸಿದ್ದಾಪುರ ಮುಂತಾದ ಗುಜರಾತಿನ ಮುಖ್ಯ ಸ್ಥಳಗಳಿಗೆ ಭೇಟಿ ನೀಡಿದರು. ದೇಶದ ಈ ಪ್ರದೇಶಗಳಿಗೆ ಮಹಾಕಾರ್ಯದರ್ಶಿಗಳ ಪ್ರಥಮ ಭೇಟಿಯಾಗಿ, ಈ ಪ್ರವಾಸವು ಹೆಚ್ಚು ಮಹತ್ವಪೂರ್ಣವಾಗಿತ್ತು.

ಎಲ್ಲ ಪ್ರದೇಶಗಳಲ್ಲಿಯೂ ಶ್ರೀ ದೀನ್ ದಯಾಳರನ್ನು ವಿಶ್ವಾಸಪೂರ್ವಕವಾಗಿ ಸ್ವಾಗತಿಸಲಾಯಿತು. ಸೂರತ್, ಬರೋಡಾ, ರಾಜಕೋಟ್ ಮತ್ತು ಅಹಮದಾಬಾದ್‌ಗಳಲ್ಲಿ ಪತ್ರಿಕಾ ಸಮ್ಮೇಳನಗಳು ನಡೆದವು; ಮೊದಲ ಮೂರು ನಗರಗಳೂ ಜನಸಂಘದ ನಾಯಕನಿಗೆ ನಿಧಿಯನ್ನು ಸಮರ್ಪಿಸಿದವು. ಎಲ್ಲ ಪ್ರದೇಶಗಳಲ್ಲಿಯೂ ಅವರು ಒಂದು ಅಥವಾ ಅದಕ್ಕಿಂತಲೂ ಹೆಚ್ಚು ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಭಾಷಣ ಮಾಡಿದರು ಮತ್ತು ಪ್ರಮುಖ ನಾಗರಿಕರೊಡನೆ ಅನೌಪಚಾರಿಕ ಚರ್ಚೆಗಳನ್ನು, ಸಂವಾದಗಳನ್ನು ನಡೆಸಿದರು. ವಿಷಯದ ಸ್ಪಷ್ಟ ಪ್ರತಿಪಾದನೆ, ಮನಸ್ಸಿಗೆ ಒಪ್ಪಿಗೆಯುಂಟು ಮಾಡುವ ವಾದ ವೈಖರಿ ಮತ್ತು ಪ್ರಭಾವೀ ವಾಕ್ಚಾತುರ್ಯಗಳಿಂದ ಅವರು ಭಾಷಣ ಮಾಡಿದಲ್ಲೆಲ್ಲಾ ಜನರನ್ನು ತಮ್ಮೊಂದಿಗೆ ಕೊಂಡೊಯ್ದರು.

ತಾವು ಭೇಟಿ ಮಾಡಿದ ಎಲ್ಲ ಪ್ರದೇಶಗಳಲ್ಲಿಯೂ ಜನಸಂಘದ ನಾಯಕ ದೀನ್ ದಯಾಳ್‌ರು ಹೀಗೆ ಹೇಳಿದರು: ಜನಸಂಘದ ತೀವ್ರತರ ರಾಷ್ಟ್ರೀಯ ದೃಷ್ಟಿಕೋನವೇ ಜನಸಂಘವನ್ನು ಉಳಿದ ಪಕ್ಷಗಳಿಗಿಂತ ಭಿನ್ನವಾಗಿ ಗುರುತಿಸಿ ಮಾನ್ಯ ಮಾಡುತ್ತದೆ. ಇತರ ಪಕ್ಷಗಳು ರಾಷ್ಟ್ರೀಯ ಸಮಸ್ಯೆಗಳನ್ನು, ಅಂತರರಾಷ್ಟ್ರೀಯ ದೃಷ್ಟಿಕೋನದಿಂದ ಅಥವಾ ವಿದೇಶೀ ಕಣ್ಣುಗಳಿಂದ ನೋಡುತ್ತಾರೆ.

---

**ಮೂಲ ಆಕರ : 'ಆರ್ಗನೈಸರ್', ೦೯, ಮೇ ೧೯೫೪**

ಭಾರತಕ್ಕೆ ನಿಜವಾಗಿಯೂ ಸೇವೆ ಸಲ್ಲಿಸುವಂತಹ ಪಕ್ಷವು, ಭಾರತದ ಜನರ ಸ್ಫೂರ್ತಿಯ ನಿಜವಾದ ಮೂಲವನ್ನು ಅರ್ಥ ಮಾಡಿಕೊಳ್ಳಬೇಕು. ದುರದೃಷ್ಟವಶಾತ್, 'ಡಿಸ್ಕವರಿ ಆಫ್ ಇಂಡಿಯಾ'ದ ಲೇಖಕರು, ಇನ್ನೂ ಭಾರತವನ್ನು ಕಂಡುಕೊಂಡಿಲ್ಲ.

ಭಾಷಾವಾರು ಪ್ರಾಂತ್ಯಗಳು, ಗೋಹತ್ಯಾ ನಿಷೇಧದ ಬಗೆಗೆ ಅದರ ತೀಕ್ಷ್ಣ ಉತ್ಸಾಹ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯ ಬಗೆಗೆ ಒತ್ತಾಯ, ದೇಶದಲ್ಲಿ ಎಲ್ಲ ವಿದೇಶೀ ಸಂಪನ್ಮೂಲದ ವಿರುದ್ಧ ಅದರ ಸಕ್ರಿಯ ಚಳುವಳಿಗಳು, ಈ ರಾಷ್ಟ್ರೀಯ ದೃಷ್ಟಿಕೋನವು ಜನಸಂಘದ ನಿಲುವನ್ನು ವಿವರಿಸುತ್ತದೆ ಎಂದರು. ಅಲ್ಲದೇ ಈ ದೃಷ್ಟಿಕೋನವು ಅಖಂಡ ಭಾರತದಲ್ಲಿ ಶ್ರದ್ಧೆ ಹೊಂದಿದೆಯೆಂದೂ ದೀನ್ ದಯಾಳರು ತಮ್ಮ ಭಾಷಣದಲ್ಲಿ ವಿವರಿಸಿದರು. ಇದಕ್ಕೆ ವಿರುದ್ಧವಾಗಿ, ಇಂತಹ ಸ್ಪಷ್ಟ ಮತ್ತು ದೋಷರಹಿತವಾದ ರಾಷ್ಟ್ರೀಯ ದೃಷ್ಟಿಕೋನದ ಕೊರತೆಯು ಪಂಡಿತ ನೆಹರೂರನ್ನು, ಸಮಯಸಾಧಕರನ್ನಾಗಿ (ಗಾಳಿ ಬಂದ ಕಡೆ ತೂರಿಕೊಳ್ಳುವವರನ್ನಾಗಿ), ಮಾಡಿತ್ತು. ಹಾಗಾಗಿ ಅವರು, ಕಾಮನ್‌ವೆಲ್ತ್ ಆಫ್ ನೇಷನ್ಸ್, ಸುಖೀ ರಾಜ್ಯ, ಈಗ ಸಮಾಜವಾದೀ ಮಾದರಿಯ ಸಮಾಜ ಮುಂತಾದ ಯಾವಾಗಲೂ ಬದಲಾಗುತ್ತಿರುವ ಘೋಷಣೆಗಳಿಗೆ ಮೊರೆಹೋಗಬೇಕಾಗಿದ್ದು, ಅವು ಅವರು ಇತ್ತೀಚೆಗೆ ಭೇಟಿ ಮಾಡಿದ್ದ ದೇಶದ ಪ್ರಭಾವದಡಿಯಲ್ಲಿ ಅಥವಾ ತತ್ಕಾಲೀನ ಪರಿಸ್ಥಿತಿಯನ್ನು ಎದುರಿಸಲು ಮಾಡಿದ ಘೋಷಣೆಗಳಾಗಿವೆ.

ಜನತೆಯು ನಮ್ಮನ್ನು ಯಾವಾಗಲೂ ನಿರಾಶೆಗೊಳಿಸುತ್ತಿದೆ ಎಂದು ಅಧಿಕಾರದಲ್ಲಿರುವ ಪಕ್ಷವು ಯಾವಾಗಲೂ ದೂರುತ್ತಿರುತ್ತದೆ. ಇದು ಮಿಥ್ಯಾಪವಾದಕ್ಕಿಂತ ಸ್ವಲ್ಪವೂ ಕಡಿಮೆಯದಲ್ಲ. ಪ್ರತಾಪ, ಶಿವಾಜಿ, ಲೋಕಮಾನ್ಯ ತಿಲಕ್ ಮತ್ತು ಮಹಾತ್ಮ ಗಾಂಧಿಯವರನ್ನು, ಧೈರ್ಯ, ಸಾಹಸಗಳಿಂದ ಬೆಂಬಲಿಸಿ, ಸಮರ್ಥಿಸಿ ಅವರ ಜೊತೆಗೆ ನಿಂತಿದ್ದು ಇದೇ ಜನತೆಯೇ. ಹಾಗಿದ್ದಲ್ಲಿ ಜನತೆಯ ಮೇಲೇಕೆ ಅಪವಾದ, ದೂಷಣೆ? ವಾಸ್ತವಾಂಶವೇನೆಂದರೆ, ಜನತೆಯನ್ನು ಅತ್ಯಂತ ದಯನೀಯವಾಗಿ ನಿರಾಶೆಗೊಳಿಸಿ, ಅವರನ್ನು ಹತಾಶೆಯ, ಭರವಸೆಯಿರದ ಕೂಪಕ್ಕೆ ತಳ್ಳಿರುವವರು ಈ ನಾಯಕರು.

ಇಂದು ಜನಸಂಘವು ತಮ್ಮದೇ ಆದ ಸ್ಪಷ್ಟವಾಗಿ – ನಿಖರವಾಗಿ– ಸೂತ್ರೀಕರಿಸಲ್ಪಟ್ಟ ಸಿದ್ಧಾಂತದಿಂದ ಸಮರ್ಥ ವಿರೋಧಪಕ್ಷವಾಗಿ ನಿಲ್ಲುತ್ತದೆ. ರಾಷ್ಟ್ರವಿರೋಧಿ ಪ್ರವೃತ್ತಿ ಮತ್ತು ಚಟುವಟಿಕೆಗಳ ವಿರುದ್ಧ ನೆಹರೂ ಅವರ ಕೈಗಳನ್ನು ಬಲಪಡಿಸುವುದೇ ನಮ್ಮ ಕರ್ತವ್ಯವಾಗಿದೆ ಎಂಬುದು ಈ ದಿನಗಳಲ್ಲಿ ಎಲ್ಲ ವಿರೋಧ ಪಕ್ಷಗಳೊಡನೆ ಕಾಂಗ್ರೆಸ್ ಪ್ರತಿಪಾದಿಸುವ ಸತ್ಯಾಭಾಸದ (ತೋರಿಕೆಯ) ವಾದವಾಗಿದೆ. ಹೊರ ಪ್ರಾದೇಶಿಕ ನಿಷ್ಠೆ ಹೊಂದಿರುವ ಮತ್ತು ರಾಷ್ಟ್ರ ವಿರೋಧಿ ಸಿದ್ಧಾಂತಗಳಿಂದ

ಸ್ಫೂರ್ತಿ ಪಡೆಯುವುದರಲ್ಲಿ ತಮ್ಮ ಅಸ್ತಿತ್ವ ಕಂಡುಕೊಳ್ಳುವಂತಹ ವಿರೋಧ ಪಕ್ಷಗಳ ಬಗೆಗೆ ಇದು ನಿಜ. ಆದರೆ, ಅದರ ಆತ್ಮವೇ ಭಾರತೀಯವಾಗಿರುವ ವಿರೋಧ ಪಕ್ಷವು ಪ್ರಜಾಪ್ರಭುತ್ವದ ಶಕ್ತಿ ಸಾಮರ್ಥ್ಯವಾಗಿದೆ. ಅಂತಹ ವಿರೋಧ ಪಕ್ಷವು, ಅದು ವಾಸ್ತವವಾಗಿ ಅಧಿಕಾರ ಗ್ರಹಣ ಮಾಡದಿದ್ದರೂ, ಸರ್ಕಾರವು ಸತತವಾಗಿ ಜಾಗರೂಕತೆಯಿಂದಿರಲು ಸಹಾಯ ಮಾಡುತ್ತದೆ. ಮತ್ತು ಒತ್ತಾಯ ಮಾಡುತ್ತದೆ ಕೂಡ, ಮತ್ತು ಸತತ ಜಾಗ್ರತೆಯು ಸ್ವಾತಂತ್ರ್ಯದ ಬೆಲೆಯಾಗಿದೆ. ಜನಸಂಘವು ರಾಷ್ಟ್ರದ ಬಗೆಗೆ ತನ್ನ ಕರ್ತವ್ಯ ನಿರ್ವಹಣೆಗೂ ಮತ್ತು ಸರ್ಕಾರವು ತನ್ನ ಕರ್ತವ್ಯವನ್ನು ನಿರ್ವಹಿಸುವಂತೆ ಮಾಡಿಸುವುದಕ್ಕೂ ಹೊರಟಿದೆ.

* * * * *

# ಜನಸಂಘಕ್ಕೆ ಲಾಲ್ ಬಹಾದ್ದೂರ್ ಶಾಸ್ತ್ರಿಯವರ ಉದ್ಧಟತನ ಬೆದರಿಕೆ

**ದೀನ್ ದಯಾಳ್ ಉಪಾಧ್ಯಾಯರ ಪ್ರತ್ಯುತ್ತರ; ಪ್ರಧಾನಮಂತ್ರಿ ನೆಹರೂ ಅವರ ನಿರಾಕರಣೆ**

'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯು ಅಕ್ಟೋಬರ್ ಮೂರರ ತನ್ನ ದೆಹಲಿ ಆವೃತ್ತಿಯ ಪ್ರಥಮ ಪುಟದಲ್ಲಿ ಈ ಮುಂದಿನ ವರದಿಯನ್ನು ಪ್ರಕಟಿಸಿತ್ತು.

ಫ಼ರೂಕಾಬಾದ್, ಅಕ್ಟೋಬರ್ ೨ – ಜನಸಂಘ, ರಾಮರಾಜ್ಯ ಪರಿಷತ್, ಮುಸ್ಲಿಂ ಲೀಗ್‌ನಂತಹ ಎಲ್ಲಾ ಕೋಮುವಾದಿ ಸಂಸ್ಥೆಗಳನ್ನು ಕಾನೂನುಬಾಹಿರ ಎಂದು ಘೋಷಿಸಲು ಕೇಂದ್ರ ಸರ್ಕಾರವು ಆಲೋಚಿಸುತ್ತಿದೆ. ಈ ವಿಷಯವನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಖಾತೆಯ ಸಚಿವ ಶ್ರೀ ಲಾಲ್ ಬಹಾದೂರ್ ಶಾಸ್ತ್ರಿಯವರು ಇಲ್ಲಿನ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ನಿನ್ನೆ ತಿಳಿಸಿದರು.

ಭಾರತೀಯ ಜನಸಂಘದ ಪ್ರಧಾನಕಾರ್ಯದರ್ಶಿ ಶ್ರೀ ದೀನ್ ದಯಾಳ್ ಉಪಾಧ್ಯಾಯ ಅವರು ಇದರ ಬಗ್ಗೆ ಪ್ರತಿಕ್ರಿಯಿಸುತ್ತಾ ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಹೀಗೆ ತಿಳಿಸಿದರು.

ಜನಸಂಘವೂ ಸೇರಿದಂತೆ ಕೆಲವು ಕೋಮುವಾದಿ ಸಂಸ್ಥೆಗಳನ್ನು ಬಹಿಷ್ಕರಿಸುವ ವಿಷಯವನ್ನು ಕೇಂದ್ರ ಸರ್ಕಾರವು ಪರಿಶೀಲಿಸುತ್ತಿದೆ ಎಂದು ಶ್ರೀ ಲಾಲ್ ಬಹಾದೂರ್ ಶಾಸ್ತ್ರಿಯವರು ಫರೂಕಾಬಾದ್‌ನಲ್ಲಿ ಹೇಳಿದರೆಂದು ವರದಿಯಾಗಿದೆ. ಕೇರಳದಲ್ಲಿನ ಕಾಂಗ್ರೆಸ್–ಮುಸ್ಲಿಂ ಲೀಗ್‌ಗಳ ಚುನಾವಣಾ ಮೈತ್ರಿಯ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಶ್ರೀ ಶಾಸ್ತ್ರಿಯವರು ಹೀಗೆ ಹೇಳದರೆಂದು ವರದಿಯಾಗಿದೆ.

ಇದು ಬೇರೆ ಬೇರೆ ವೃತ್ತಪತ್ರಿಕೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ವರದಿಯಾಗಿರುವುದರಿಂದ ಶ್ರೀ ಶಾಸ್ತ್ರಿಯವರು ವಾಸ್ತವವಾಗಿ ಏನು ಹೇಳಿದರು ಎಂಬುದನ್ನು ತಿಳಿದುಕೊಳ್ಳುವುದು ಕಷ್ಟ. ಸರ್ಕಾರವು ಹುಚ್ಚು ಸಾಹಸಿಕತನದಿಂದ ದುಡುಕದಿದ್ದರೆ, ಜನಸಂಘವನ್ನು ಬಹಿಷ್ಕರಿಸುವ ಸಂಭವನೀಯತೆಯಿದೆಯೆಂದು

---

**ಮೂಲ ಆಕರ : ಆರ್ಗನೈಸರ್, ೩ ಅಕ್ಟೋಬರ್**

ನನಗೆ ತೋರುವುದಿಲ್ಲ. ವಾಸ್ತವಾಂಶವೆಂದರೆ, ಕೇರಳ ಕುರಿತಾದ ಕಾಂಗ್ರೆಸ್ ಪಕ್ಷದ ನೀತಿಯಿಂದ ಶ್ರೀ ಶಾಸ್ತ್ರಿಯವರು ಮುಜುಗರದ ಪರಿಸ್ಥಿತಿಯಲ್ಲಿರಬಹುದು. ಅಲ್ಲಿನ ಮುಸ್ಲಿಂ ಲೀಗಿನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿದ್ದ ಸಂದರ್ಭದ ಅನಿವಾರ್ಯತೆಯನ್ನು ಒಪ್ಪಿಕೊಂಡು ತಮ್ಮ ತೀರ್ಮಾನವನ್ನು ಸಮರ್ಥಿಸಿಕೊಳ್ಳಲಾಗದೆ ಅವರು ಆಭಾಸಕರ ವಾದಗಳನ್ನು ಮುಂದಿಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ತೀವ್ರವಾಗಿ ಟೀಕಿಸಬಹುದೆಂಬ ಭಯದಿಂದ ಸಹಜವಾಗಿಯೇ ರಾಷ್ಟ್ರೀಯ ಪಕ್ಷಗಳನ್ನು ಅವರು ಈ ವಿವಾದದ ಮಧ್ಯಕ್ಕೆ ಎಳೆದುಕೊಂಡು ಬಂದಿದ್ದಾರೆ.

ಮುಸ್ಲಿಂ ಲೀಗ್‌ನೊಡನೆ, ಅಥವಾ ಶ್ರೀ ಶಾಸ್ತ್ರಿಯವರು ಹೇಳಿದಂತೆ, ೨೨ ಲಕ್ಷ ಮುಸ್ಲಿಮರೊಡನೆ ಇಂತಹ ಅನೀತಿಯುತ ಹೊಂದಾಣಿಕೆ ಮಾಡಿಕೊಳ್ಳುವ ಮೊದಲು ಕಾಂಗ್ರೆಸ್ ಪಕ್ಷವು ಮುಸ್ಲಿಮರಿಗಿಂತ ಹೆಚ್ಚಾಗಿ, ಬಹುಸಂಖ್ಯಾತ ಹಿಂದುಗಳನ್ನು ಕಮ್ಯುನಿಸ್ಟ್‌ನ ಪ್ರಭಾವದಿಂದ ಮುಕ್ತಮಾಡಬೇಕಾಗಿರುವುದು ಮುಖ್ಯ ಎಂಬುದನ್ನು ಮರೆತಿದೆ. ಕೇರಳದಲ್ಲಿ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಮತೀಯರೊಡನೆ ಸಖ್ಯ ಬೆಳೆಸುವ ತನ್ನ ನೀತಿಯಿಂದಾಗಿ, ಕಾಂಗ್ರೆಸ್ ಪಕ್ಷವು ಅಲ್ಲಿನ ಹಿಂದೂಗಳನ್ನು ಕಮ್ಯುನಿಸ್ಟ್‌ನತ್ತ ದೂಡುತ್ತಿದೆ.

ಕಮ್ಯುನಿಸ್ಟ್ ಪಕ್ಷವು ಸಂಪೂರ್ಣವಾಗಿ ಕಳಂಕಿತವಾಗಿರುವ ಈ ಸಂದರ್ಭದಲ್ಲಿ ಅದನ್ನು ವಿರೋಧಿಸುವ ರಂಗವೊಂದನ್ನು ಕಟ್ಟುವ ಬದಲಿಗೆ ಕಾಂಗ್ರೆಸ್ ಪಕ್ಷವು, ಜಾತಿಯ ಆಧಾರದ ಮೇಲೆ ಸ್ಥಾನಗಳನ್ನು ಹಂಚುವ ತನ್ನ ಹಳೆಯ ನೀತಿಯನ್ನೇ ಮುಂದುವರೆಸಿಕೊಂಡು ಹೋಗುತ್ತಿದೆ. ಈ ನೀತಿ ಹಾಗೂ ಶ್ರೀ ಶಾಸ್ತ್ರಿಯವರ ಘೋಷಣೆ– ಇವುಗಳಿಂದಾಗಿ ಕೇರಳದಲ್ಲಿನ ಅಥವಾ ಇತರೆಡೆಗಳಲ್ಲಿನ ಕಮ್ಯುನಿಸ್ಟ್ ವಿರೋಧಿ ಶಕ್ತಿಗಳನ್ನು ಒಗ್ಗೂಡಿಸುವ ಕಾರ್ಯಕ್ಕೆ ನಿಸ್ಸಂದೇಹವಾಗಿಯೂ ಹಿನ್ನಡೆಯಾಗುತ್ತದೆ.

ಸಾಮ್ರಾಜ್ಯದಾಹೀ ಕಮ್ಯುನಿಸ್ಟ್ ದೇಶವೊಂದು ನಮ್ಮ ದೇಶದ ಸಮಗ್ರತೆಗೆ ಭಂಗತರುವ ಸನ್ನಾಹದಲ್ಲಿರುವಾಗ, ದೇಶದ ಒಳಗೆ ಇರುವ ಕಮ್ಯುನಿಸ್ಟರು ರಾಷ್ಟ್ರೀಯ ಭದ್ರತೆಯನ್ನು ವಿಧ್ವಂಸಗೊಳಿಸುವುದಕ್ಕಾಗಿ ಹಲವಾರು ತಂತ್ರಗಳನ್ನು ಹೆಣೆಯುತ್ತಿದ್ದಾರೆ. ಈ ಹೊತ್ತಿನಲ್ಲಿ, ಈ ಕಮ್ಯುನಿಸ್ಟರ ಯೋಜನೆಗಳನ್ನು ಧೈರ್ಯವಾಗಿ ಹಾಗೂ ವ್ಯಾಪಕವಾಗಿ ಬಯಲುಗೊಳಿಸುತ್ತಿರುವ ಮತ್ತು ರಾಷ್ಟ್ರದ ಭದ್ರತೆಯ ಪರವಾಗಿರುವ ಶಕ್ತಿಗಳನ್ನು ಒಗ್ಗೂಡಿಸುತ್ತಿರುವ ಜನಸಂಘದಂತಹ ರಾಷ್ಟ್ರೀಯ ಪಕ್ಷಗಳನ್ನು ಬಹಿಷ್ಕರಿಸುವ ಮಾತುಗಳು ರಾಷ್ಟ್ರವಿರೋಧಿ ಶಕ್ತಿಗಳಿಗೆ ಮತ್ತಷ್ಟು ಇಂಬುಕೊಡುತ್ತದೆ.

ಈ ವರದಿಯ ಹಿಂದೆ ವಾಸ್ತವಿಕತೆಗಿಂತ ಹೆಚ್ಚಾಗಿ ಭಾವೋದ್ವೇಗವೇ ಕೆಲಸ ಮಾಡಿದೆಯೆಂದೆನಿಸುತ್ತದೆ. ಅಲ್ಲದೆ, ಇದು ಮುಂಬರುವ ಉತ್ತರ ಪ್ರದೇಶದ

ನಗರಸಭೆಗಳ ಚುನಾವಣೆಯಲ್ಲಿ ತನಗೆ ತೀವ್ರವಾದ ಪ್ರತಿರೋಧವನ್ನು ಜನಸಂಘವು ಮಾತ್ರವೇ ಒಡ್ಡುತ್ತದೆ ಎಂಬ ನಿರೀಕ್ಷೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೆಣೆದ ಚುನಾವಣಾ ಕಸರತ್ತಿನ ಭಾಗವಾಗಿರಬಹುದು. ಹೀಗಿರುವಾಗ, ಬಹಿಷ್ಕಾರದ ಬಗ್ಗೆ ಜನತೆ ಕಳವಳಪಡಬೇಕಾದ ಆವಶ್ಯಕತೆಯಿಲ್ಲ. ಸರ್ಕಾರವು ಇಂತಹ ಅಪಮಾರ್ಗಗಳನ್ನು ಹಿಡಿಯುವ ದುಸ್ಸಾಹಸವನ್ನು ವಿರೋಧಿಸಲು ರಾಷ್ಟ್ರೀಯ ಪ್ರಜಾತಂತ್ರದ ಶಕ್ತಿಗಳು ಸಾಕಷ್ಟು ಬಲವಾಗಿವೆ.

ಶ್ರೀ ಲಾಲ್ ಬಹಾದೂರ್ ಶಾಸ್ತ್ರಿಯವರು ಮುಸ್ಲಿಂ ಲೀಗ್, ಜನಸಂಘ, ಮೊದಲಾದವುಗಳನ್ನು ಬಹಿಷ್ಕರಿಸುವ ಆಲೋಚನೆ ಸರಕಾರಕ್ಕಿದೆ' ಎಂದು ಹೇಳಿದ್ದಾರೆ, ಈ ವರದಿಯಲ್ಲಿ ಸತ್ಯಾಂಶವಿದೆಯೇ ಎಂದು ನವ ದೆಹಲಿಯಲ್ಲಿ ಅಕ್ಟೋಬರ್ ೮ ರಂದು ನಡೆದ ಪತ್ರಿಕಾ ಗೋಷ್ಠಿಯಲ್ಲಿ ಪ್ರಧಾನ ಮಂತ್ರಿಯವರನ್ನು ಕೇಳಲಾಯಿತು. ತಮ್ಮ ಸಂಪುಟದ ಸಹೋದ್ಯೋಗಿಯೊಬ್ಬರನ್ನು ಸಾರ್ವಜನಿಕವಾಗಿ ಬಿಟ್ಟುಕೊಡಲಾಗದ ಪ್ರಧಾನ ಮಂತ್ರಿಯವರು, ನಾಜೂಕಾಗಿ ಅದರ ಬಗ್ಗೆ ನಾನೇನೂ ಹೇಳುವುದಿಲ್ಲ ಎಂದು ಉತ್ತರಿಸಿದರು.

* * * * *

# ಗ್ರಾಮದಾನ ಸಮ್ಮೇಳನ ಮತ್ತು ಭಾರತೀಯ ಜನಸಂಘ ಮಜುಂದಾರ್ – ದೀನ್ ದಯಾಳ್ ವಾಗ್ವಾದ

ಆಗಸ್ಟ್ ೨೫ರಂದು ಇಡೀ ದೇಶದ ಪತ್ರಿಕೆಗಳಲ್ಲಿ ಪಿ.ಟಿ.ಐ. ಸುದ್ದಿಯೊಂದು ಸ್ಥಳ ದಿನಾಂಕ ಸಹಿತ ಪ್ರಕಟವಾಯಿತು: ಅಲಹಾಬಾದ್, ಆಗಸ್ಟ್ ೨೪. ಅಖಿಲ ಭಾರತ ಸರ್ವ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಧೀರೇಂದ್ರ ಮಜುಂದಾರ್ ಅವರು ನಡೆಸಿದ ಸುದ್ದಿಗೋಷ್ಠಿಯೆಂದು ಹೇಳಲಾದ ಕಡೆಯಿಂದ ವರದಿಯೊಂದು ಪ್ರಕಟವಾಗಿತ್ತು: ದೇಶದಲ್ಲಿನ ಬಹುಮಟ್ಟಿಗೆ ಎಲ್ಲ ರಾಜಕೀಯ ಪಕ್ಷಗಳ ಉನ್ನತ ನಾಯಕರು ಭೂಸಂಬಂಧದ ಪುನರ್ವ್ಯವಸ್ಥೆಯ ವಿಧಿ ವಿಧಾನಗಳನ್ನು ನಿರೂಪಿಸುವ ದೃಷ್ಟಿಯಿಂದ ಸೆಪ್ಟೆಂಬರ್ ೨೧ ಮತ್ತು ೨೨ ರಂದು ಮೈಸೂರಿನಲ್ಲಿ ನಡೆಯಲಿರುವ ಉನ್ನತಮಟ್ಟದ ಚರ್ಚೆಯಲ್ಲಿ ಭಾಗವಹಿಸಲು ಒಪ್ಪಿರುತ್ತಾರೆ. ಡಾ. ರಾಜೇಂದ್ರಪ್ರಸಾದ್, ಶ್ರೀ ನೆಹರೂ, ಪಂಡಿತ್ ಪಂತ್, ಶ್ರೀ ಧೇಬರ್, ಶ್ರೀ ಜೆ. ಪಿ. ನಾರಾಯಣ, ಆಚಾರ್ಯ ಕೃಪಲಾನಿ, ಪಿ.ಎಸ್.ಪಿ. ಅಧ್ಯಕ್ಷರಾದ ಗಂಗಾ ಚರಣ ಸಿನ್ಹಾ ಈ ಸಭೆಯಲ್ಲಿ ಭಾಗವಹಿಸಲು ಈಗಾಗಲೇ ಒಪ್ಪಿಗೆ ಸೂಚಿಸಿದ್ದಾರೆಂದು ಶ್ರೀ ಮಜುಂದಾರ್ ಹೇಳಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ, ಗ್ರಾಮದಾನ ಚಳುವಳಿಯ ಬಗ್ಗೆ ಜನಸಂಘದ ನಾಯಕರಿಗೆ ಮೂಲಭೂತವಾದ ಭಿನ್ನಾಭಿಪ್ರಾಯಗಳಿರುವುದರಿಂದ ಹಾಗೂ ಈ ಚಳುವಳಿಯು ಸಮಾಜಸ್ವಾಮ್ಯವಾದದ (ಕಮ್ಯುನಿಸಂ) ಕಡೆಗೆ ಒಂದು ಹೆಜ್ಜೆ ಎಂದು ಅವರು ಭಾವಿಸುವುದರಿಂದ ಅವರು ಭಾಗವಹಿಸುತ್ತಿಲ್ಲವೆಂದು ಮಜುಂದಾರರು ಹೇಳಿದರು ('ಸ್ಟೇಟ್ಸ್‌ಮನ್' ಆಗಸ್ಟ್ ೨೫)

ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿಯಾದ ಶ್ರೀ ದೀನ್ ದಯಾಳ್ ಉಪಾಧ್ಯಾಯ ಅವರು ಶ್ರೀ ಮಜುಂದಾರರಿಗೆ ಪತ್ರ ಬರೆದು ಪ್ರಕಟವಾದ ವರದಿಯ ಬಗ್ಗೆ ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸಿದರೆಂಬುದು ನನಗೆ ತಿಳಿದಿದೆ. ಜನಸಂಘವು ಗ್ರಾಮದಾನದ ಬಗ್ಗೆ ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸಿಲ್ಲ; ಹೀಗಾಗಿ ಅದನ್ನು ವಿರೋಧಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂಬುದನ್ನು ಅವರು

---

**ಮೂಲ ಆಕರ : ಆರ್ಗನೈಸರ್, ೩೦, ಸೆಪ್ಟೆಂಬರ್, ೧೯೫೭**

ತೋರಿಸಿಕೊಟ್ಟರು. ಉಳುವವನಿಗೆ ಭೂಮಿ ಎಂಬ ಸಿದ್ಧಾಂತವನ್ನು ಜನಸಂಘವು ಯಾವಾಗಲೂ ಬೆಂಬಲಿಸಿತ್ತೆಂಬುದನ್ನು ಅವರು ಸ್ಪಷ್ಟಪಡಿಸಿದರು; ತಮ್ಮ ತೃಪ್ತಿಗಾಗಿ ಅವರು ಪಕ್ಷದ ಪ್ರಣಾಳಿಕೆಯ ಪ್ರತಿಯೊಂದನ್ನೂ ಕಳುಹಿಸಿಕೊಟ್ಟರು. ಜನಸಂಘದ ಯಾವ ನಾಯಕನಿಗೂ ಆಹ್ವಾನವಿರಲಿಲ್ಲವೆಂಬುದನ್ನು ಮತ್ತು ಶ್ರೀ ಮಜುಂದಾರರು ಪತ್ರಿಕೆಗೆ ನೀಡಿದ ಹೇಳಿಕೆ ಸರಿಯಲ್ಲ ಹಾಗೂ ಅಪಾರ್ಥಕ್ಕೆಡೆ ಮಾಡಿ ಕೊಡುವಂಥದ್ದೆಂಬುದನ್ನು ಶ್ರೀ ಉಪಾಧ್ಯಾಯರು ತೋರಿಸಿಕೊಟ್ಟರು.

ಸೆಪ್ಟೆಂಬರ್ ೮ರ ತೇದಿಯ ತಮ್ಮ ಪ್ರತ್ಯುತ್ತರದಲ್ಲಿ ಶ್ರೀ ಮಜುಂದಾರರು ತಾವು ಪತ್ರಿಕೆಗೆ ತಿದ್ದುಪಡಿಯೊಂದನ್ನು ಕಳುಹಿಸಿಕೊಟ್ಟರುವುದಾಗಿ ತಿಳಿಸಿದ್ದರು. ನಾಯಕರ ವೈಯಕ್ತಿಕ ಸಾಮರ್ಥ್ಯವನ್ನು ಆಧರಿಸಿಯೇ ಆಹ್ವಾನ ಪತ್ರಿಕೆಗಳನ್ನು ಅವರಿಗೆ ಕಳುಹಿಸಲಾಗಿತ್ತೆಂದು ಅವರು ತಮ್ಮನ್ನು ಸಮರ್ಥಿಸಿಕೊಂಡರು.

ಆದರೂ ಅವರ ಈ ವಿರೋಧಾಭಾಸದ ಹೇಳಿಕೆ ಎಲ್ಲಿಯೂ ಪ್ರಕಟಗೊಂಡಿರಲಿಲ್ಲ. ಆದ್ದರಿಂದ ಇಡೀ ವರದಿ ನ್ಯಾಯಸಮ್ಮತವಾದುದಲ್ಲವೆಂದು ತಿಳಿಸಿ ಶ್ರೀ ಉಪಾಧ್ಯಾಯರು ಮತ್ತೆ ಅವರಿಗೆ ಸೆಪ್ಟೆಂಬರ್ ೧೪ರಂದು ಪತ್ರ ಬರೆದರು. ಅದಕ್ಕೆ ಇದುವರೆಗೆ (ಸೆಪ್ಟೆಂಬರ್ ೨೩) ಇನ್ನೂ ಉತ್ತರ ಬಂದಿಲ್ಲ; ಪ್ರಾಯಃ ಬರಲಾರದು.

ಸರ್ವ ಸೇವಾ ಸಂಘವು ಅದರ ಹೆಸರೇ ಸೂಚಿಸುವಂತೆ ಅನ್ವರ್ಥಕವಾಗಿರಬೇಕೆಂದು ಸಾಮಾನ್ಯವಾಗಿ ಇರುವ ಭಾವನೆ. ಆದರೆ ಅದು ಅಧಿಕಾರದಲ್ಲಿರುವ ಪಕ್ಷದ ಆಜ್ಞಾನುವರ್ತಿಯಾಗಿ ನಡೆದುಕೊಳ್ಳುತ್ತ ಸರ್ಕಾರದ ಬಾಲಂಗೋಚಿಗಿಂತ ಹೆಚ್ಚೇನೂ ಅಲ್ಲವೆಂದು ತೋರಿಸಿಕೊಡುತ್ತಿದೆ. ಶ್ರೀ ಮಜುಂದಾರರು ಆ ಎಲ್ಲ ವಿಷಯಗಳನ್ನೂ ಹೇಳಲಿಲ್ಲ; ಒಂದು ವಿಷಯಕ್ಕಂತೂ ಅವರ ಮಾತನ್ನು ನಂಬುವುದು ಕಷ್ಟ. ಸುದ್ದಿಗೋಷ್ಠಿಯೊಂದನ್ನು ನಡೆಸುವಾಗ ಅತ್ಯುತ್ಸಾಹದಲ್ಲಿ ವಿವೇಕರಹಿತವಾಗಿ ಏನನ್ನೋ ಹೇಳುವುದು ಮತ್ತು ಅದರ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಪತ್ರಿಕೆಗಳನ್ನೇ ದೂಷಿಸುವುದು ಹಳೆಯ ಕುತಂತ್ರವೇ. ತಾವು ನಾಯಕರ ವೈಯಕ್ತಿಕ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಆಹ್ವಾನ ಪತ್ರಿಕೆಗಳನ್ನು ಕಳುಹಿಸಿಕೊಟ್ಟುದಾಗಿ ಅವರು ಹೇಳುತ್ತಾರೆ. ಬಹಳ ಒಳ್ಳೆಯದು. ಆದರೆ ಜನಸಂಘವು ರಾಷ್ಟ್ರೀಯ ಚಿಂತನೆಯ ಪ್ರಮುಖ ಪಂಥವೊಂದು. ಬೇರೆ ಯಾವುದೇ ಪಕ್ಷದವರನ್ನು ಮರೆಯದೆ ಈ ಪಕ್ಷದ ನಾಯಕರನ್ನೆ ಮರೆಯುವುದು ಅವರಿಗೆ ಹೇಗೆ ಸಾಧ್ಯವಾಯಿತು?

ಗ್ರಾಮದಾನವನ್ನು ಜನಸಂಘವು ವಿರೋಧಿಸುತ್ತದೆ ಅಥವಾ ಇಲ್ಲವೆಂಬುದು ಅವರಿಗೆ ತಿಳಿದದ್ದು ಹೇಗೆ? ಶ್ರೀ ಉಪಾಧ್ಯಾಯರು ಸಮೃದ್ಧವಾಗಿ ಸ್ಪಷ್ಟಪಡಿಸುವಂತೆ

ಜನಸಂಘವು ಈ ವಿಷಯದಲ್ಲಿ ತನ್ನ ನಿಲವನ್ನು ವ್ಯಕ್ತಪಡಿಸಿಯೆ ಇಲ್ಲ. ಅಲ್ಲದೆ ಜನಸಂಘವು ವಿಶೇಷವಾಗಿ ಗ್ರಾಮದಾನದ ಪರವಾಗಿಲ್ಲ ಎಂದು ಭಾವಿಸಿಕೊಳ್ಳುವುದು ಅದರ ನಾಯಕರ ಮಾತುಗಳನ್ನು ಕೇಳದಿರುವುದಕ್ಕೆ ತಕ್ಕ ಕಾರಣವಾಗುವುದಿಲ್ಲ. ಅವರ ವಾದಗಳ ಬೆಳಕಿನಲ್ಲಿ ನಿರ್ಧಾರ ತೆಗೆದುಕೊಳ್ಳಲು ಏನು ಅಡ್ಡಿ?

ಆದರೆ ಖಂಡಿತವಾಗಿ ಗ್ರಾಮದಾನದ ವಿಷಯದ ಬಗೆಗಿನ ಭಿನ್ನಾಭಿಪ್ರಾಯ ಕೇವಲ ಒಂದು ನೆಪ. ಏಕೆಂದರೆ ಕಮ್ಯುನಿಸ್ಟರೇ ವಿನೋಬಾಜೀ ಮತ್ತು ಅವರ ವಿವಿಧ ದಾನಗಳ ಅತ್ಯಂತ ಕಟು ವಿಮರ್ಶಕರಾಗಿದ್ದಾರೆ. ಜಮೀನುದಾರರ ಹಿಂಸಾತ್ಮಕ ಪದಚ್ಯುತಿ ಮತ್ತು ಅದನ್ನು ಅನುಸರಿಸಿ ಬರುವ ವ್ಯಾಪಕ ಯಾಂತ್ರೀಕೃತ ಕೃಷಿ ಜಮೀನು – ಇವೇ ಪುನರ್ವ್ಯವಸ್ಥೆಗೆ ಇರುವ ಏಕೈಕ ನ್ಯಾಯವೆಂಬ ನಿಲುವು ಅವರದು. ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ವರದಿಯಾದಂತೆ: ಗ್ರಾಮದಾನ ಚಳುವಳಿಗೆ ಕಮ್ಯುನಿಸ್ಟರ ಹಾದಿ ಏನೆಂಬುದನ್ನು ಈ ಸಮ್ಮೇಳನವು ಮುಂದಿಟ್ಟಿತು. ಪಕ್ಷದ ವಕ್ತಾರರಲ್ಲಿ ಒಬ್ಬರಾದ ಡಾ. ಝಡ್. ಎ. ಅಹಮದ್ ಅವರು ಗ್ರಾಮದಾನದ ಸಿದ್ಧಾಂತಗಳನ್ನು ಒಪ್ಪಿಕೊಂಡರು; ಆದರೆ ಎಲ್ಲ ಭೂ ಸಮಸ್ಯೆಯನ್ನು ಪರಿಹರಿಸಬಹುದಾದ ಹಂತವನ್ನು ಈ ಚಳುವಳಿಯು ಇನ್ನೂ ತಲುಪಿಲ್ಲ ಎಂದು ಅಭಿಪ್ರಾಯಪಟ್ಟರು. ಸಮ್ಮೇಳನದ ಕೋಣೆಗೆ ಕಮ್ಯುನಿಸ್ಟರು ತಮ್ಮ ನಿರ್ದಿಷ್ಟ ಮಾರ್ಗವನ್ನು ಒಯ್ಯಬಹುದಾದರೆ, ಅದನ್ನೇ ಮಾಡಲು ಜನಸಂಘವನ್ನೇಕೆ ಆಹ್ವಾನಿಸದೆ ಇರಬೇಕು?

ಈ ಘಟನೆಯಿಂದ ಕೆಲವು ತೀರ್ಮಾನಗಳು ಅನುಸರಿಸಿ ಬರುತ್ತವೆ.

೧. ಸಾರ್ವಜನಿಕ ನಿಧಿಯಿಂದ ಬೃಹತ್ ಮೊತ್ತದ ಸಹಾಯಧನ ಪಡೆಯುವ ಸರ್ವ ಸೇವಾ ಸಂಘ, ಸಮಾಜ ಕಲ್ಯಾಣ ಮಂಡಲಿ, ಭಾರತ ಸೇವಕ ಸಮಾಜ ಇತ್ಯಾದಿ ಇತ್ಯಾದಿ–ಇಂಥ ಈಚೀಚಿನ ವಿವಿಧ ಸಂಘ ಸಂಸ್ಥೆಗಳು ವಾಸ್ತವದಲ್ಲಿ ಕಾಂಗ್ರೆಸ್ಸಿನ ಉಪಕರಣಗಳು ಮಾತ್ರವೇ ಆಗಿವೆ. ಒರಿಸ್ಸ ಪ್ರಾಂತವೊಂದರಲ್ಲೇ ಒಂದು ಸರ್ವ ಸೇವಾ ಸಂಘಕ್ಕೆ ಸರ್ಕಾರವು ೬೮ ಲಕ್ಷ ರೂಪಾಯಿಗಳನ್ನು ಒದಗಿಸಲು ಒಪ್ಪಿಕೊಂಡಿದೆ (ನೋಡಿ, ಟೈಮ್ಸ್ ಆಫ್ ಇಂಡಿಯಾ, ಪು. ೬, ಸೆಪ್ಟೆಂಬರ್ ೨೧).

೨. ಈ ಎಲ್ಲ ಸಂಘಸಂಸ್ಥೆಗಳಲ್ಲಿ ಅನೇಕ ಕಮ್ಯುನಿಸ್ಟರು ನುಸುಳಿದ್ದಾರೆ.

೩. ಕಮ್ಯುನಿಸಂ ಮತ್ತು ಪಾಶ್ಚಾತ್ಯತೆಗಳಿಗೆ ಇರುವ ಏಕಮಾತ್ರ ರಾಷ್ಟ್ರೀಯ ತಾತ್ತ್ವಿಕ ಪರ್ಯಾಯವನ್ನು ಒದಗಿಸುವ ಜನಸಂಘವನ್ನು ಒಂಟಿಯನ್ನಾಗಿ ಮಾಡಲು ಕಾಂಗ್ರೆಸ್ ಮತ್ತು ಎಡಪಂಥೀಯರ ನಡುವೆ ಒಂದು ಅಪವಿತ್ರ ಮೈತ್ರಿ ಇದೆ.

೪. ಪತ್ರಿಕೆಗಳಲ್ಲಿ ಮತ್ತು ವೇದಿಕೆಗಳಲ್ಲಿ ಜನಸಂಘವನ್ನು ತಪ್ಪಾಗಿ ನಿರೂಪಿಸುವ ಮತ್ತು ಅದರ ಬಗ್ಗೆ ಅಪಪ್ರಚಾರ ಮಾಡುವ ಯಾವ ಪ್ರಯತ್ನವನ್ನೂ ಬಿಡದಿರುವುದು.

ಈ ಘಟನೆಯಿಂದ ಜನಸಂಘ ಕಲಿಯಬೇಕಾದ ಎರಡು ಪಾಠಗಳಿವೆ:

೧. ತಮ್ಮ ಆಧಿಪತ್ಯಕ್ಕೆ ಜನಸಂಘದಿಂದ ಅಪಾಯವಿದೆ ಎಂಬುದನ್ನು ಇತರ ಪಕ್ಷಗಳು ಮಾನ್ಯ ಮಾಡಿರುವುದು.

೨. ತನ್ನ ಶಕ್ತಿಯನ್ನು ಕುಂದಿಸಲು ಕಾತರವಾಗಿರುವ ಪ್ರತಿಸ್ಪರ್ಧಿ ಪಕ್ಷಗಳನ್ನು ಸೋಲಿಸಲು ತನ್ನ ತತ್ತ್ವ ಸಿದ್ಧಾಂತಗಳ ಸಿಂಧುತ್ವದೊಡನೆ ಇನ್ನೂ ಹೆಚ್ಚಿನ ಪ್ರಯತ್ನಗಳನ್ನು ನಡೆಸಬೇಕಾದ ಆವಶ್ಯಕತೆ ಜನಸಂಘಕ್ಕೆ ಇರುವುದು.

* * * * *

# ಜನಸಂಘವನ್ನು ಕೇವಲ ನಂಬರ್ ೨ ಅಲ್ಲ ನಂಬರ್ ಒನ್ ಪಕ್ಷವನ್ನಾಗಿಸುವ ಗುರಿ

ಇಂದು ಕೊನೆಗೊಂಡ ಭಾರತೀಯ ಪ್ರತಿನಿಧಿ ಸಭೆಯ ಎರಡು ದಿನಗಳ ಅಧಿವೇಶನದಲ್ಲಿ ತೃತೀಯ ಮಹಾ ಚುನಾವಣೆಗೆ ಜನಸಂಘ ಅನುಸರಿಸಬೇಕಾದ ಕಾರ್ಯತಂತ್ರದ ಬಗ್ಗೆ ನಡೆದ ನಾಲ್ಕು ಗಂಟೆಗಳ ಕುತೂಹಲಕಾರಿ ಚರ್ಚೆಯು ಪ್ರಮುಖವಾಗಿದ್ದಿತು.

ಶ್ರೀ ಎ. ರಾಮರಾಲ್ ಅವರು ಅಧ್ಯಕ್ಷತೆ ವಹಿಸಿದ್ದರು. ಒಂದು ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ವ್ಯಾವಹಾರಿಕವಾಗಿದ್ದ ಈ ಅಧಿವೇಶನದಲ್ಲಿ ಈ ಪ್ರದೇಶದ ಭೀಕರ ಬಿಸಿಲು ಭಾಗವಹಿಸಿದ್ದವರ ಉತ್ಸಾಹ ಮತ್ತು ಓಜಸ್ಸಿನ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ.

ಪ್ರಧಾನ ಕಾರ್ಯದರ್ಶಿ ದೀನ್ ದಯಾಳ್ ಉಪಾಧ್ಯಾಯ ಅವರು ಚುನಾವಣೆಗಳನ್ನು ಕುರಿತು ಮಂಡಿಸಿದ ಹಾಗೂ ಕಾರ್ಯಕಾರಿ ಸಮಿತಿ ಅನುಮೋದಿಸಿದ ಸಮಗ್ರ ವರದಿ ಚರ್ಚೆಗೆ ಮೂಲ ವಸ್ತುವನ್ನೊದಗಿಸಿತು.

ವರದಿಯಲ್ಲಿ ಪ್ರಸ್ತಾಪಿಸಲಾಗಿದ್ದ ಅನೇಕ ವಿಷಯಗಳ ಬಗ್ಗೆ ಭಾಷಣಕಾರರು ಮಾತನಾಡಿದರೂ ಸಹ, ಗರಿಷ್ಠ ಪ್ರಮಾಣದ ಅಭ್ಯರ್ಥಿಗಳನ್ನು ನಿಲ್ಲಿಸುವ ಪಕ್ಷದ ಪ್ರಯತ್ನವು ಫಲಪ್ರದವಾಗಿದೆಯೆ ಅಥವಾ ಅದು ಸಾಮರ್ಥ್ಯ ಮತ್ತು ಸಂಪನ್ಮೂಲಗಳನ್ನು ವ್ಯರ್ಥವಾಗಿಸಿತೆ ಎಂಬುದನ್ನು ಕುರಿತು ಪ್ರಮುಖವಾಗಿ ಚರ್ಚಿಸಿದರು. ಪಂಜಾಬಿನ ಅನೇಕ ಪ್ರತಿನಿಧಿಗಳು ಎರಡನೆಯ ನಿಲುವನ್ನು ವ್ಯಕ್ತಪಡಿಸಿದರು, ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶ ಪ್ರತಿನಿಧಿಗಳು ಪಕ್ಷದ ಈ ಕಾರ್ಯತಂತ್ರವೇ ಅವರಿಗೆ ಯಶಸ್ಸನ್ನು ತಂದಿದೆಯೆಂದು ಪ್ರತಿಪಾದಿಸಿದರು.

ಮಹಾರಾಷ್ಟ್ರದ ಬಿಜೆಎಸ್ ಸಹ ಕಾರ್ಯದರ್ಶಿ ಶ್ರೀ ರಾಮದಾಸ್ ಕಲಾಸ್ಕರ್ ಅವರು ಮಹಾರಾಷ್ಟ್ರದಲ್ಲಿ ಪಕ್ಷದ ಸಾಧನೆಯ ಪರಾಮರ್ಶೆ ಮಾಡುವುದರೊಂದಿಗೆ ಚರ್ಚೆ ಆರಂಭವಾಯಿತು. ಈಗಾಗಲೇ ಅನುಮೋದಿಸಿರುವ ಕಾರ್ಯನೀತಿಗಿಂತ ಮತ್ತೊಂದು ಕಾರ್ಯನೀತಿಯ ಬಗ್ಗೆ ಒಲವು ತೋರದ ಅವರು, ಜನಸಂಘ

---

**ಮೂಲ ಆಕರ : ಆರ್ಗನೈಸರ್, ೪, ಜೂನ್, ೧೯೬೨**

ಏಕಾಂಗಿಯಾಗಿ ಸ್ಪರ್ಧಿಸಿರುವ ನಿರ್ಧಾರ, ಎಲ್ಲಾ ಇತರ ಪಕ್ಷಗಳು ಜನಸಂಘದ ವಿರುದ್ಧ ಒಗ್ಗೂಡುವಂತೆ ಪ್ರೇರೇಪಿಸಿವೆ ಎಂದು ಹೇಳಿದರು. ನಿಲ್ಲಿಸಿರುವ ಅಭ್ಯರ್ಥಿಗಳ ಸಂಖ್ಯೆ ಹೆಚ್ಚು ಆದರೆ ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿರುವ ಕ್ಷೇತ್ರಗಳಿಗೆ ಹೆಚ್ಚಿನ ಗಮನ ಕೊಡಲಾಗಿದೆ ಹಾಗೂ ಸಂಪನ್ಮೂಲಗಳನ್ನು ಅಲ್ಲಿ ಕ್ರೋಢೀಕರಿಸಲಾಗಿದೆ ಎಂದೂ ಅವರು ತಿಳಿಸಿದರು.

ಪಂಜಾಬ್ ಘಟಕವು ತನ್ನ ಸಾಮರ್ಥ್ಯಕ್ಕಿಂತಲೂ ಹೆಚ್ಚು ವ್ಯಾಪ್ತಿಯನ್ನು ಮೀರಿದೆ ಹಾಗೂ ಕಡಿಮೆ ಸಂಖ್ಯೆಯ ಕ್ಷೇತ್ರಗಳಲ್ಲಿ ಸ್ಪರ್ಧಿಸಿದಿದ್ದರೆ ಫಲಿತಾಂಶವು ಇನ್ನೂ ಉತ್ತಮವಾಗಿರುತ್ತಿತ್ತೆಂದು ಪಂಜಾಬ್ ಶಾಸಕ ಡಾ॥ ಮಂಗಳ್ ಸ್ಯೇನ್ ಒತ್ತಿ ಹೇಳಿದರು. ದೆಹಲಿಯಲ್ಲಿ ಪಕ್ಷವು ತೀವ್ರತರವಾದ ಹಾನಿಯನ್ನು ಅನುಭವಿಸಿದ್ದಕ್ಕೆ ಅವರು ವಿಷಾದಿಸಿದರು.

ಡಾ॥ ಮಂಗಳ್ ಸ್ಯೇನ್‌ರ ಅಭಿಪ್ರಾಯಕ್ಕೆ ಪಂಜಾಬ್‌ನ ಕೆಲವು ಸದಸ್ಯರು ಸಹಮತವನ್ನು ವ್ಯಕ್ತಪಡಿಸಿದರು, ಆದರೆ, ಪೂರ್ವ ಉತ್ತರ ಪ್ರದೇಶದ ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಹರೀಶ್ ಚಂದ್ರ ಶ್ರೀ ವಾಸ್ತವ ಅವರು ಪ್ರಬಲವಾಗಿ ಪ್ರಶ್ನಿಸಿದರು. ಚೆನ್ನಾಗಿ ವಾದಿಸಿದ ಭಾಷಣದಲ್ಲಿ ಶ್ರೀ ಶ್ರೀವಾಸ್ತವ ಅವರು ಚುನಾವಣಾ ಯಶಸ್ಸಿಗೆ ಕೊಡುಗೆ ನೀಡುವ ಅಂಶವೆಂದರೆ, ಪಕ್ಷ ಮತ್ತು ಸ್ಥಳೀಯ ಅಭ್ಯರ್ಥಿಗಳು ಕೈಗೊಳ್ಳುವ ಕೆಲಸ ಎಂದು ಅದರ ಮಹತ್ವನ್ನು ವಿಷದಪಡಿಸಿದರು. ಹೊರಗಿನ ಪ್ರಚಾರಕರು ಅಥವಾ ಕಾರ್ಯಕರ್ತರು ಓರ್ವ ಅಭ್ಯರ್ಥಿಯ ಅವಕಾಶಗಳನ್ನು ಸುಧಾರಿಸುವುದರಲ್ಲಿ ನೀಡುವ ಕೊಡುಗೆ ಕಡಿಮೆ ಮಹತ್ವದ್ದು. ಯಾವುದೇ ಕ್ಷೇತ್ರದಲ್ಲಿ ಪ್ರಚಾರ ಮಾಡದೆ ಇರುವುದು, ಕ್ರೋಢೀಕರಣ ದೃಷ್ಟಿಯಿಂದ ಸಕಾರಾತ್ಮಕ ಅನುಕೂಲವನ್ನು ಉಂಟುಮಾಡಿಲ್ಲ. ಆದರೆ ಅದರಿಂದ ಕೆಲವು ನಿರ್ದಿಷ್ಟವಾದ ನಕಾರಾತ್ಮಕ ಫಲಿತಾಂಶಗಳು ಬಂದಿದ್ದವು. ಚುನಾವಣಾ ಸಂಕ್ಷೋಭೆಯು ಸಾಮಾನ್ಯವಾಗಿ ಅನೇಕ ವ್ಯಕ್ತಿಗಳನ್ನು ಧೂಳೀಪಟ ಮಾಡುತ್ತದೆ. ಅನೇಕ ವೇಳೆ, ಜನಸಂಘವು ಅಭ್ಯರ್ಥಿಗಳನ್ನು ನಿಲ್ಲಿಸಲು ವಿಫಲರಾಗುವ ಕ್ಷೇತ್ರಗಳಲ್ಲಿ ಅದರದೇ ಬೆಂಬಲಿಗರು (ದುರ್ಬಲವಾದ, ಸೈದ್ಧಾಂತಿಕ ನೆಲೆಯಿಲ್ಲದವರು) ಇತರ ಪಕ್ಷಗಳೊಡನೆ ಕೈ ಜೋಡಿಸುತ್ತಾರೆ. ಉತ್ತರ ಪ್ರದೇಶದಲ್ಲಿ, ಜನ ಸಾಮಾನ್ಯರು ಕಾಂಗ್ರೆಸ್‌ಗೆ ಪರ್ಯಾಯವಾಗಿ ಜನಸಂಘದ ಬಗ್ಗೆ ನಿರೀಕ್ಷೆ ಇಟ್ಟುಕೊಳ್ಳಲು ಕಾರಣ, ಅಧಿಕ ಸಂಖ್ಯೆಯ ಅಭ್ಯರ್ಥಿಗಳನ್ನು ನಿಲ್ಲಿಸುವ ಸಾಮರ್ಥ್ಯ ಎಂದೂ ಶ್ರೀ ಶ್ರೀವಾಸ್ತವ ಹೇಳಿದರು.

ಶ್ರೀ ಶ್ರೀವಾಸ್ತವ ಅವರ ಅಭಿಪ್ರಾಯಕ್ಕೆ ಸಂಸದ ಶ್ರೀ ಆರ್. ವಿ. ಬಾಡೆಯವರ ಭಾಷಣದಲ್ಲಿ ಪ್ರಬಲವಾದ ಬೆಂಬಲ ಸಿಕ್ಕಿತು. ೧೯೫೭ರಲ್ಲಿ ಖಾರ್‌ಗೋನೆ (ಮ.ಪ್ರ.) ಕ್ಷೇತ್ರದಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ, ತಮ್ಮ ಕೆಲವು ಸಹೋದ್ಯೋಗಿಗಳು, ಆತ್ಮವಿಶ್ವಾಸವಿಲ್ಲದೆ ಯೋಚಿಸುವುದನ್ನು ಹಾಗೂ ಪಾರಂಪರಿಕವಾಗಿ ಆಯೋಜಿಸುವ

ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದರು ಎನ್ನುವುದನ್ನು ನೆನಪಿಸಿಕೊಂಡರು. ಆದರೆ ಐದು ವರ್ಷಗಳ ಕಾಲ ಸ್ಥಳೀಯ ಕಾರ್ಯಗಳ ಮೇಲೆ ಗಮನವಿರಿಸಿ ಹಾಗೂ ಮಹತ್ವಾಕಾಂಕ್ಷೆಯಿಂದ ಯೋಜನೆ ಹಾಕಿಕೊಳ್ಳುವ ಮೂಲಕ, ೧೯೬೭ರಲ್ಲಿ ಜನಸಂಘವು ಎಲ್ಲಾ ೮ ಅಸೆಂಬ್ಲಿ ಸ್ಥಾನಗಳನ್ನು ತಮ್ಮ ಕ್ಷೇತ್ರದ ಲೋಕಸಭಾ ಸ್ಥಾನದೊಂದಿಗೆ ಗೆಲ್ಲಲು ಸಾಧ್ಯವಾಯಿತು ಎಂದು ಹೇಳಿದರು.

ರಾಜಾಸ್ಥಾನದ ಶ್ರೀ ರವಿದತ್ ವೈದ್ಯ ಅವರು, ಚುನಾವಣಾ ಮೈತ್ರಿ ವಿಷಯದಲ್ಲಿ ಪ್ರಯೋಜನ ದೃಷ್ಟಿ ಇರುವುದು ಒಳ್ಳೆಯದು ಎಂದರು. ಕಮ್ಯುನಿಸ್ಟರು ಹಾಗೂ ಅವರ ದೇಶದ್ರೋಹಿ ಚಟುವಟಿಕೆಗಳ ಬಗ್ಗೆ ಜನಸಂಘದ ಟೀಕೆ ಇರಬೇಕಾದ ರೀತಿಯಲ್ಲಿ ವ್ಯವಸ್ಥಿತ ಹಾಗೂ ಉಗ್ರವಾಗಿಲ್ಲ ಎಂದೂ ಅಭಿಪ್ರಾಯಪಟ್ಟರು.

ಚುನಾವಣಾ ಮೈತ್ರಿಯ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ, ಶ್ರೀ ವೈದ್ಯರೊಂದಿಗೆ, ಮಧ್ಯಪ್ರದೇಶದ ಶ್ರೀ ಶಿವಕುಮಾರ್ ಮಿಶ್ರ ಮತ್ತು ಬಿಹಾರದ ಶ್ರೀ ಸುರೇಶ್ ದತ್ತಶರ್ಮ ಇಬ್ಬರೂ, ತತ್ವಾಧಾರಿತವಲ್ಲದ ಮೈತ್ರಿಯ ಜನಸಂಘದ ಸ್ಪಷ್ಟವಾದ ತಿರಸ್ಕಾರವು ಇತರ ಪಕ್ಷಗಳು ಮಾಡಿಕೊಂಡಿರುವ ಅವಕಾಶವಾದಿ ಮೈತ್ರಿಯ ವಿರೋಧಕ್ಕೆ ಅನುಗುಣವಾಗಿದೆಯೆಂದು ಒತ್ತಿ ಹೇಳಿದರು. ಕೇವಲ ಪಕ್ಷದ ಹಿತದೃಷ್ಟಿಯಿಂದ ಕೂಡ, ಜನಸಂಘದ ಈಗಿನ ನೀತಿಯು ಲಾಭಕರ ಎಂದೂ ಅವರು ಅಭಿಪ್ರಾಯಪಟ್ಟರು.

ವಿವೇಚನೆಯೊಂದಿಗೆ ಮಾಡಿಕೊಳ್ಳುವ ಮೈತ್ರಿ ಮತ್ತು ಪಕ್ಷದ ಚುನಾವಣಾ ರಂಗವನ್ನು ವಿಸ್ತರಿಸುವುದರಿಂದುಂಟಾಗುವ ಪ್ರಯೋಜನಗಳನ್ನು ಸೋದಾಹರಣವಾಗಿ ವಿಶ್ಲೇಷಿಸಿದವರು, ಭಾ.ಜ.ಸಂ.ದ ಮಧ್ಯಪ್ರದೇಶದ ನಾಯಕ ಶ್ರೀ ವೀರೇಂದ್ರ ಕುಮಾರ್ ಸಕ್ಲೇಚಾ ಅವರು ದ್ವಿತೀಯ ಚುನಾವಣೆ ನಂತರ, ಕೆಲವೊಂದು ಕ್ಷೇತ್ರಗಳ ಮೇಲೆ ಹೆಚ್ಚಾಗಿ ಗಮನ ಹರಿಸುವ ಕಾರ್ಯತಂತ್ರವನ್ನು ಜನಸಂಘ ಒಪ್ಪಿಕೊಂಡಿದೆಯೆಂದು ಶ್ರೀ ಸಕ್ಲೇಚಾ ತಿಳಿಸಿದರು. ಐದು ವರ್ಷಗಳ ಕಾಲ ಅವರು ಅಲ್ಲಿ ಕೆಲಸ ಮಾಡಿದ್ದರು. ಹಾಗಾಗಿ ಅಲ್ಲಿನ ಫಲಿತಾಂಶ ಅವರು ಪಟ್ಟ ಪ್ರಯತ್ನಗಳಿಗೆ ಸರಿಸಮಾನವಾಗಿದೆ. ಆದರೆ, ಚುನಾವಣಾ ಪೂರ್ವದಲ್ಲಿ ಮಾತ್ರ ಗಮನ ಕೊಡುವುದರಲ್ಲಿ ಯಾವುದೇ ಅರ್ಥವಿಲ್ಲ. ಅಧಿಕ ಸಂಖ್ಯೆಯ ಅಭ್ಯರ್ಥಿಗಳನ್ನು ನಿಲ್ಲಿಸುವುದಕ್ಕೆ ಎತ್ತಿದ ಮುಖ್ಯವಾದ ಆಕ್ಷೇಪವೆಂದರೆ, ನಮ್ಮ ಪ್ರಧಾನ ಪ್ರಚಾರಕರು ಅನೇಕ ಕ್ಷೇತ್ರಗಳಿಗೆ ಭೇಟಿ ನೀಡಲಾಗಲಿಲ್ಲ ಎಂಬುದು. ಬರೀ ಭಾಷಣಗಳಿಂದಲೇ ಚುನಾವಣೆಗಳನ್ನು ಗೆಲ್ಲಬಹುದು ಎಂದು ತಿಳಿಯುವುದು ತಪ್ಪು ಎಂದು ಸಕ್ಲೇಚಾ ನುಡಿದರು. ಮುಖ್ಯವಾಗಿ ಸ್ಥಳೀಯ ಘಟಕಗಳು ಮಾಡುವ ಕಾರ್ಯಗಳೇ ಗೆಲುವಿಗೆ ಕಾರಣವಾಗುತ್ತವೆ.

ಚರ್ಚೆಯನ್ನು ಮುಗಿಸುತ್ತಾ, ಜನಸಂಘವು ಎರಡನೆಯ ಪಕ್ಷವಾಗಿ ಹೊರಹೊಮ್ಮಬೇಕು ಎನ್ನುವುದು ಚರ್ಚೆಗಳಲ್ಲಿ ವ್ಯಕ್ತವಾದ ಒಟ್ಟಾರೆ ಅಭಿಪ್ರಾಯ ಎಂದು ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರು ಹೇಳಿದರು.

ಈ ಅಭಿಪ್ರಾಯವನ್ನು ತಾವು ಪ್ರಬಲವಾಗಿ ವಿರೋಧಿಸುವುದಾಗಿ ಹೇಳಿದ ಶ್ರೀ ಉಪಾಧ್ಯಾಯ ಅವರು, ಪ್ರಜಾಪ್ರಭುತ್ವದಲ್ಲಿ, ಯಾವ ಪಕ್ಷವೂ ಎರಡನೆಯ ಸ್ಥಾನಕ್ಕಾಗಿ ಆಸೆಪಡುವುದಿಲ್ಲ. ಮುಖ್ಯ ಧ್ಯೇಯವೇನಿದ್ದರೂ ಮೊದಲ ಪಕ್ಷವಾಗಿ ಹೊರಹೊಮ್ಮುವುದೇ ಆಗಿದೆ ಎಂದು ಅಭಿಪ್ರಾಯಪಟ್ಟರು.

ಈ ಉದ್ದೇಶ ಸ್ಪಷ್ಟವಾಗಿದ್ದೇ ಆದರೆ, ನಾವು ನಿಲ್ಲಿಸಿದ್ದ ಅಭ್ಯರ್ಥಿಗಳ ಸಂಖ್ಯೆ ಚಿಕ್ಕದಿರಬಹುದು. ನಾವು ಇಷ್ಟು ಮಂದಿಯನ್ನು ಮಾತ್ರ ನಿಲ್ಲಿಸುತ್ತೇವೆ. ಯಾಕೆಂದರೆ ನಾವು ಹೆಚ್ಚು ಜನರನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ ಎನ್ನುವುದು ತಿಳಿಯುತ್ತದೆ ಎಂದು ಹೇಳಿದರು.

ಯಾವುದೇ ಪಕ್ಷವು ಬೆಳೆದಂತೆ, ಅದರ ಸಾಂಸ್ಥಿಕ ನೆಲೆ ವಿಸ್ತಾರವಾದಂತೆ ಅದು ಅನೇಕ ರಾಜಕೀಯ ಒತ್ತಡಗಳಿಗೆ ಎಡೆ ಮಾಡಿಕೊಡುತ್ತದೆ ಹಾಗೂ ಅವು ಚುನಾವಣಾ ಕಾರ್ಯತಂತ್ರವನ್ನು ನಿರ್ಧರಿಸುತ್ತವೆ ಎಂದೂ ಶ್ರೀ ಉಪಾಧ್ಯಾಯ ಅವರು ಹೇಳಿದರು. "ಉದಾಹರಣೆಗೆ ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಗಳನ್ನು ತೆಗೆದುಕೊಳ್ಳಿ, ಜನಸಂಘದ ಬಗ್ಗೆ ವ್ಯಕ್ತಪಡಿಸಿದ ಮತದಾರರ ವಿಶ್ವಾಸವು ಮುಂದಿನ ಚುನಾವಣೆವರೆಗೆ ಮಹತ್ತರ ಜವಾಬ್ದಾರಿಯನ್ನು ಹೊರಿಸುತ್ತದೆ." ಜನಸಂಘದ ಅತ್ಯಂತ ಹರ್ಷದಾಯಕ ಒಂದು ಪ್ರಾಂತ್ಯದಲ್ಲಿ, ಗ್ರಾಮೀಣ ಪ್ರದೇಶದ ಪಕ್ಷಕ್ಕೆ ಪ್ರತಿ ಬೆಂಬಲ ಗಣನೀಯವಾಗಿರುವುದೇ ಆಗಿದೆ.

ಮಧ್ಯಪ್ರದೇಶದ ವಿಧಾನಸಭೆಗೆ ಪುನರಾಯ್ಕೆಯಾದ ಎಲ್ಲಾ ೪೧ ಅಭ್ಯರ್ಥಿಗಳು ಗ್ರಾಮೀಣ ಕ್ಷೇತ್ರದವರದು. ಉತ್ತರ ಪ್ರದೇಶದಲ್ಲಿ ೪೯ರ ಪೈಕಿ ೪೮ ಸ್ಥಾನಗಳು ಗ್ರಾಮ ಕ್ಷೇತ್ರದವರದಾಗಿತ್ತು.

ಕಾಂಗ್ರೆಸ್‌ನ ಅಕ್ರಮಗಳು ಹಾಗೂ ಪ್ರಮಾದಗಳ ವಿರುದ್ಧದ ಆಕ್ರೋಶದಲ್ಲಿ ಅದರ ಮತಗಳನ್ನು ಕೊಂಡುಕೊಳ್ಳುವ ಹಾಗೂ ಮತೀಯ ಭಾವನೆಗಳನ್ನು ಕೆರಳಿಸುವ ವಿಚಾರದಲ್ಲಿ ಮುಯ್ಯಿಗೆ ಮುಯ್ಯಿ ನೀತಿಯನ್ನು ಅನುಸರಿಸಿ ಎಂದು ಓರ್ವ ಪ್ರತಿನಿಧಿ, ಹೇಳಿದ್ದರ ಬಗ್ಗೆ ಶ್ರೀ ಉಪಾಧ್ಯಾಯ ಅವರು ಪ್ರಸ್ತಾಪಿಸಿದರು. ಜನಸಂಘವು ಅಂಥ ಕೆಲಸ ಮಾಡಿದ ದಿನ, ಭಾ.ಜ.ಸಂ. ಅಭ್ಯರ್ಥಿಗಳು ಅಧಿಕ ಸಂಖ್ಯೆಯಲ್ಲಿ ಗೆಲ್ಲಬಹುದು ಆದರೆ ಜನಸಂಘವು ಸೋಲುತ್ತದೆ ಎಂದು ಶ್ರೀ ಉಪಾಧ್ಯಾಯ ಅವರು ತಿಳಿಸಿದರು.

* * * * *

# ಬೆಂಗಳೂರು ಅಧಿವೇಶನ – ಗಮನಾರ್ಹ ಯಶಸ್ಸು

ಕಳೆದ ವಾರ ಬೆಂಗಳೂರಲ್ಲಿ ನಡೆದ ಭಾರತೀಯ ಜನಸಂಘದ ಅಧಿವೇಶನ ಮುಂದಣ ಹೆಜ್ಜೆಯನ್ನಿಟ್ಟಿದೆ. ಜನಸಂಘವು ದಕ್ಷಿಣದಲ್ಲೂ ತನ್ನ ಬೇರುಗಳನ್ನು ಚಾಚಿದೆ ಎಂದು ಅದರ ಯಶಸ್ಸು ತೋರಿಸುತ್ತಿದೆ. ಶೇಕಡಾ ೫೦ಕ್ಕಿಂತ ಹೆಚ್ಚಿನ ಪ್ರತಿನಿಧಿಗಳು ದಕ್ಷಿಣದ ನಾಲ್ಕು ರಾಜ್ಯಗಳಿಂದ ಬಂದಿದ್ದರು – ಮದ್ರಾಸ್ ೪೫, ಕೇರಳ–೫೭, ಆಂಧ್ರ ೫೦ ಮತ್ತು ಮೈಸೂರು ಸುಮಾರು ೫೦೦. ಒಂದು ನೂರಕ್ಕೂ ಹೆಚ್ಚು ಮಹಿಳಾ ಪ್ರತಿನಿಧಿಗಳು ಇದ್ದರು.

ಆ ಸಂದರ್ಭದಲ್ಲಿ ಜರುಗಿದ ಎರಡು ಪ್ರದರ್ಶನಗಳು ಭಾರತ ದರ್ಶನ ಮತ್ತು ಗೋರಕ್ಷಾ ಪ್ರತಿನಿಧಿಗಳನ್ನು ಸುಮಾರು ಹತ್ತು ಸಾವಿರ ಜನ ವೀಕ್ಷಿಸಿದರು.

ನಾಯಕರು ಮತ್ತು ಪ್ರತಿನಿಧಿಗಳನ್ನು ಸಭೆ ನಡೆದ ಲಾಲ್‌ಬಾಗ್‌ನಿಂದ ಒಂದು ಮೈಲಿ ದೂರದ ಒಳಗೆ ಛತ್ರಗಳಲ್ಲಿ ಬಿಡಾರ ಮಾಡಲಾಗಿತ್ತು. ಗಾಜಿನ ಮನೆಯನ್ನು ಮೈಸೂರು ಅರಮನೆಯಂತೆಯೇ ದೀಪಾಲಂಕಾರ ಮಾಡಲಾಗಿತ್ತು. ಅಧಿವೇಶನದ ಮಹತ್ತ್ವವನ್ನು ಇಡೀ ಪತ್ರಿಕಾ ಸಮೂಹ ಗುರುತಿಸಿತು. ಮಾಜಿ ಕಮ್ಯುನಿಸ್ಟ್ ನಾಯಕ ಫಿಲಿಪ್ ಸ್ಪಾಟ್ ಅವರು ಮೈಸಿಂಧಿಯಾದಲ್ಲಿ ಬರೆದಂತೆ ಜನಸಂಘದ ನಿರ್ಣಯಗಳು ಬಹುತೇಕ ಸಾರ್ವಜನಿಕರ ಅಭಿಪ್ರಾಯವನ್ನೆ ಧ್ವನಿಸಿದ್ದವು. ಆದರೂ ಅಧಿವೇಶನವು ಮದ್ರಾಸ್ ಜನಸಂಘದ ಅಧ್ಯಕ್ಷ ಡಾ॥ ವಿ. ಕೆ. ಜಾನ್ ಅವರ ಹಠಾತ್ ನಿಧನದ ದುಃಖದಿಂದ ತಪ್ತವಾಗಿತ್ತು. ಅವರು ಗೋ ಸಂರಕ್ಷಣಾ ಪ್ರದರ್ಶನವನ್ನು ಉದ್ಘಾಟಿಸಬೇಕಿತ್ತು.

**ಕಾರ್ಯಕಾರಿ ಸಮಿತಿಯ ಹೊಸ ಸದಸ್ಯರು**

ಬ್ಯಾರಿಸ್ಟರ್ ಎನ್. ನಾರಾಯಣ ಮೆನನ್, ಕೇರಳದ ಖ್ಯಾತ ವಕೀಲರು, ಶ್ರೀ. ವಿ. ರಾಜಗೋಪಾಲಾಚಾರಿ, ಹಳೆಯ ಮದ್ರಾಸ್ ರಾಜ್ಯದ ಸಂಘಚಾಲಕ್, ಮದ್ರಾಸಿನ ಖ್ಯಾತ ವಕೀಲರು, ಹರಿಪಾದ ಭಾರತಿ, ಕಲ್ಕತ್ತದ ತತ್ತ್ವಶಾಸ್ತ್ರ ಪ್ರಾಧ್ಯಾಪಕರು, ಬಂಗಾಲಿ ಮತ್ತು ಇಂಗ್ಲಿಷ್ ವಾಗ್ಮಿಗಳು, ಶ್ರೀಮತಿ ಮಾಲತಿ ಪರಾಂಜಪೆ, ಹಿಂದಿ

---

**ಮೂಲ ಆಕರ : ಆರ್ಗನೈಸರ್, ೧೨, ಜನವರಿ, ೧೯೫೮**

ಉಪನ್ಯಾಸಕರು, ಎಸ್. ಪಿ. ಕಾಲೇಜ್ ಪೂನಾ. (ಅವರ ಪತಿ ಡಾ॥ ಎಂ. ಕೆ. ಪರಾಂಜಪೆ ಅದೇ ಕಾಲೇಜಿನಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರು), ಶ್ರೀ ನಾರಾಯಣ ದ್ವಿವೇದಿ, ಅಧ್ಯಕ್ಷರು, ಬಿಹಾರ ರಾಜ್ಯ ಜನಸಂಘ, ಆಗ್ರಾದಲ್ಲಿನ ಖ್ಯಾತ ವಕೀಲರು, ಶ್ರೀ ಗುರುದತ್ ವೈದ್ಯ, ಮಾಜಿ ಅಧ್ಯಕ್ಷರು, ದೆಹಲಿ ರಾಜ್ಯ ಜನಸಂಘ, ಹಿಂದಿಯಲ್ಲಿ ಎರಡು ಡಝನ್ ಪುಸ್ತಕಗಳ ಲೇಖಕರು; ಕ್ಯಾಪ್ಟನ್ ಕೇಶವ ಚಂದ್ರ, ಮಾಜಿ ಉಪಾಧ್ಯಾಯರು, ಅಖಿಲ ಭಾರತ ಹಿಂದೂ ಮಹಾಸಭಾ, ಪಂಜಾಬ್ ರಾಜ್ಯ ಜನಸಂಘದ ಅಧ್ಯಕ್ಷರು. ತಾರುಣ್ಯದ ದಿನಗಳಲ್ಲಿ ಕ್ರಿಕೆಟ್ ಕ್ಯಾಪ್ಟನ್.

ಮುಂದಿನ ಪ್ರತಿನಿಧಿಗಳ ಅಧಿವೇಶನವನ್ನು ಜೂನ್‌ನಲ್ಲಿ ಬನಾರಸ್‌ನಲ್ಲಿ ನಡೆಸಲು ನಿರ್ಧರಿಸಲಾಯಿತು ತಾತ್ಕಾಲಿಕವಾಗಿ ಮುಂದಿನ ವರ್ಷದ ಅಧಿವೇಶನವನ್ನು ೧೯೫೯ರ ಡಿಸೆಂಬರ್‌ನಲ್ಲಿ ನಡೆಸಲು ನಿರ್ಧರಿಸಲಾಯಿತು.

ಭಾನುವಾರದಂದು, ಮುಕ್ತ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ, ರಾಜಸ್ಥಾನ ವಿಧಾನಸಭೆಯ ಜನಸಂಘ ಗುಂಪಿನ ನಾಯಕರಾದ ಭೈರೋನ್ ಸಿಂಗ್ ಶೇಖಾವತ್ ಅವರು, ತಮ್ಮ ರಾಜ್ಯದಲ್ಲಿಯೇ ತಾವು ಕಂಡ ಅನುಭವದಂತೆ ಸಹಕಾರಿ ಬೇಸಾಯ ಪದ್ಧತಿಯು ಭಾರತದಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದರು. ಅದು ದೇಶದ ಕೃಷಿ ಉತ್ಪನ್ನದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಅದು ಈಗ ಇರುವಂತೆ ಆಡಳಿತ ಪಕ್ಷದ ಕೆಲ ಸ್ವಂತ ಹಿತವುಳ್ಳವರಿಗೆ ಮಾತ್ರ ಲಾಭ ಮಾಡಿಕೊಡುತ್ತಿದೆ.

ಜಮೀನ್ದಾರರಿಗೆ ಭೂಮಿತಿಯ ವಿಷಯದಲ್ಲಿ ವಿನಾಯಿತಿ ನೀಡುವ ವಿವೇಚನಾ ಅಧಿಕಾರವನ್ನು ಸರ್ಕಾರ ಹೊಂದಿರುವ ಔಚಿತ್ಯವನ್ನು ಶ್ರೀ ಶೇಖಾವತ್ ಪ್ರಶ್ನಿಸಿದರು.

ಆಂಧ್ರಪ್ರದೇಶದ ಜನಸಂಘದ ಅಧ್ಯಕ್ಷರಾದ ಶ್ರೀ ಯಜ್ಞನಾರಾಯಣ ಅವರು ಚೀನಾ ದೇಶದ ಸಮುದಾಯದ ಅನುಕರಣೆ ಮಾಡುತ್ತಾ, ಭಾರತೀಯ ರೈತರನ್ನು ಸಹಕಾರೀಕರಣ ಮತ್ತು ಟ್ರಾಕ್ಟರ್ ಉಳುಮೆ ಕಡೆಗೇ ಒಲಿಯುವ ನೀತಿಗೆ ತಳ್ಳುತ್ತಿದ್ದಾರೆಂದು ಹೇಳುತ್ತಿದ್ದರು. ಆದರೆ ಭಾರತದ ಸ್ಥಿತಿಗತಿಯು ರಷ್ಯಾ ಮತ್ತು ಚೀನಾದಲ್ಲಿರುವುದಕ್ಕಿಂತ ಭಿನ್ನ – ಸಂಪೂರ್ಣ ಭಿನ್ನವಾಗಿದೆ ಮತ್ತು ನಮ್ಮ ದೇಶದಲ್ಲಿ ಸಹಕಾರೀಕರಣ ಯಶಸ್ವಿಯಾಗಲು ಸಾಧ್ಯವಿಲ್ಲ ಎಂದರು.

ಬಂಗಾಲ ಜನಸಂಘದ ಸಹಕಾರ್ಯದರ್ಶಿ ಪ್ರೊ. ಹರಿದಾಸ್ ಭಾರತೀಯವರು ತಮ್ಮ ಹರಿತವಾದ ಭಾಷಣದಲ್ಲಿ, ಯಾವುದೇ ವ್ಯಕ್ತಿ ಎಷ್ಟು ದೊಡ್ಡವರಾಗಿದ್ದರೂ ಈ ದೇಶದ ಭೂಮಿಯನ್ನು ಮತ್ತೊಂದು ರಾಜ್ಯಕ್ಕೆ ವಹಿಸಿಕೊಡುವ ಅಧಿಕಾರವಿಲ್ಲ. ಆದರೆ ಭಾರತದ ಪ್ರಧಾನ ಮಂತ್ರಿ ಪಂಡಿತ್ ನೆಹರೂ ಅವರು, ಪಾಕಿಸ್ತಾನದ ಮಾಜಿ ಪ್ರಧಾನಿ ಮಾಲಿಕ್ ಫಿರೋಜ್ ಖಾನ್

ನೂನ್ ಅವರೊಂದಿಗೆ ಒಪ್ಪಂದ ಮಾಡಿಕೊಂಡು, ತಮ್ಮ ಸಂಪುಟದಲ್ಲಿ ಚರ್ಚಿಸುವುದಿರಲಿ ಪಾರ್ಲಿಮೆಂಟನ್ನು ಸಹ ಕೇಳದೆ, ಭಾರತದ ಗಡಿಪ್ರದೇಶದ ಅನೇಕ ಭಾಗಗಗಳನ್ನು ಬಿಟ್ಟುಕೊಡಲು ಒಪ್ಪಿಕೊಂಡಿದ್ದಾರೆ !

ರಾಜಕೀಯ ಪರಿಸ್ಥಿತಿಯನ್ನು ಕುರಿತು ಮಾತನಾಡುತ್ತಾ ಪ್ರೊ॥ ಬಲರಾಜ್ ಮಧೋಕ್ ಅವರು, ದೇಶದ ರಾಜಕೀಯ ಪರಿಸ್ಥಿತಿ ಅನಿಶ್ಚಿತ ಮತ್ತು ಅಸ್ಥಿರವಾಗುತ್ತಿದೆ ಎಂದು ಹೇಳಿದರು. ಕಾಂಗ್ರೆಸ್ ಪಕ್ಷವು ಅದರ ಟೀಕಾಕಾರರು ಮತ್ತು ಮಿತ್ರರು ನಿರೀಕ್ಷಿಸಿದ ಅಥವಾ ಆಶಿಸಿದ್ದಕ್ಕಿಂತ ಬೇಗನೆ ವಿಘಟನೆಯ ಹಾದಿಯನ್ನು ಹಿಡಿದಿದೆ. ಆದರೆ, ಅದು ಪೂರ್ತಿ ಹೋಗುವ ಮೊದಲು, ಭಾರತೀಯ ಜೀವನಕ್ಕೆ ಊಹಿಸಲಾರದಷ್ಟು ಹಾನಿಯನ್ನುಂಟು ಮಾಡಿರುತ್ತದೆ.

ಪಾಕಿಸ್ತಾನದ ಪ್ರಧಾನಿಗಳು ಅನೇಕ ಜನ ಬಂದು ಹೋಗಿದ್ದಾರೆ. ಆದರೆ, ಭಾರತದ ದೃಷ್ಟಿಯಿಂದ ಮಾತನಾಡುವವರೊಬ್ಬನನ್ನೂ ನಾವಿನ್ನೂ ನೋಡಬೇಕಾಗಿದೆ ಎಂದು ಬ್ಯಾರಿಸ್ಟರ್ ಯು.ಎಮ್. ತ್ರಿವೇದಿಯವರು ತಮ್ಮ ತೀಕ್ಷ್ಣವಾದ ಭಾಷಣದಲ್ಲಿ, ಜನಸಂಘದ ಬೆಂಗಳೂರು ಸಮ್ಮೇಳನದಲ್ಲಿ ಹೇಳಿದರು. ದೇಶದ ರಾಜಕೀಯ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ, ಪ್ರತಿಯೊಬ್ಬ ಪಾಕಿಸ್ತಾನಿ ಪ್ರಧಾನಿಯು ಕಾಶ್ಮೀರವನ್ನು ಆಕ್ರಮಿಸಿ ಕಾಲುವೆ ನೀರು ವಿವಾದವನ್ನು ಬಲವಂತವಾಗಿ ಬಗೆ ಹರಿಸಲು ತನ್ನ ಹಿಂದಿನವರನ್ನು ಮೀರಿಸಿ ಬೆದರಿಕೆ ತಂತ್ರವನ್ನು ಉಪಯೋಗಿಸುತ್ತಿದ್ದಾರೆ. ಇಂಥಾ ಬೆದರಿಕೆಗಳಿಗೆ ಭಾರತ ಸರ್ಕಾರ ಮಣಿಯಬಾರದು. ದೇಶದ ನಾಯಕತ್ವ ಇಂದು ದುರ್ಬಲವಾಗಿರುವುದು ವಿಶಾದಕರ.

ಪಂಜಾಬಿನ ಪರಿಸ್ಥಿತಿ ಬಗ್ಗೆ ವಿಶೇಷವಾಗಿ ಪ್ರಸ್ತಾಪ ಮಾಡಿದ ಕ್ಯಾಪ್ಟನ್ ಕೇಶವಚಂದ್ರ, ಪಂಜಾಬ್ ಪ್ರದೇಶ ಜನಸಂಘದ ಅಧ್ಯಕ್ಷರು ಕಾಂಗ್ರೆಸ್ ಹಿಂದಿನ ಅನುಭವದಿಂದ ಲಾಭ ಹೊಂದಲು ತಿರಸ್ಕರಿಸಿದೆ ಎಂದು ಹೇಳಿದರು. ಕಾಂಗ್ರೆಸ್ ಭವಿಷ್ಯ ಮುಗಿದಹಾಗೆ ಎಂದು ಹೇಳಿ ಜನಸಂಘದ ಕಾರ್ಯಕರ್ತರು, ಹೀಗೆ ಉಂಟಾಗಲಿರುವ ರಾಜಕೀಯ ಶೂನ್ಯ ಸ್ಥಿತಿಯನ್ನು ತುಂಬಬೇಕು ಎಂದೂ ಕರೆನೀಡಿದರು. ಪಂಜಾಬ್‌ನಲ್ಲಿ ಕಾಂಗ್ರೆಸ್ ಅನುಸರಿಸುತ್ತಿರುವ ಅಕಾಲಿಗಳ ಓಲೈಕೆ ಕ್ರಮವನ್ನು ಟೀಕಿಸಿ ಅದು ಲಕ್ನೋದ ಮತೀಯ ಒಪ್ಪಂದಕ್ಕೆ ಅನುಗುಣವಾಗಿದೆ ಯೆಂದರು.

ಅಧಿವೇಶನದ ಕೊನೆಯಲ್ಲಿ ಸಮಾರೋಪ ಭಾಷಣ ಮಾಡಿದ ಆಚಾರ್ಯ ದೇವ್ ಪ್ರಸಾದ್ ಘೋಷ್ ಅವರು ಸಮರ್ಪಣ ಭಾವದ ಹೊಸ ಸ್ಥೈರ್ಯದಿಂದ ಹಿಂತಿರುಗುವಂತೆ ಪ್ರತಿನಿಧಿಗಳಿಗೆ ಮನವಿ ಮಾಡಿದರು. ಜನಸಂಘವು ದಕ್ಷಿಣದಲ್ಲೂ ತನ್ನ ಬೇರುಗಳನ್ನು ಚಾಚಿದೆ ಎನ್ನುವುದು ಬೆಂಗಳೂರಿನ ಅಧಿವೇಶನದಿಂದ ತಿಳಿಯುತ್ತಿದೆ ಎಂದು ಹೇಳಿದರು.

**ಕಾಶ್ಮೀರ**

ಕಾಶ್ಮೀರದಲ್ಲಿನ ಆಂತರಿಕ ಸ್ಥಿತಿಗಳ ಬಗ್ಗೆ ನಿರ್ಣಯವೊಂದನ್ನು ಮಂಡಿಸಿದವರು ಶ್ರೀ ಯಜ್ಞದತ್ತ ಶರ್ಮ, ಪ್ರಾಂತೀಯ ಕಾರ್ಯದರ್ಶಿ, ಪಂಜಾಬ್ ಪ್ರದೇಶದ ಜನಸಂಘ ಮತ್ತು ಅನುಮೋದಿಸಿದರು ಶ್ರೀ ಲಾಲಚಂದ ಅದ್ವಾನಿ, ಪ್ರಾಂತೀಯ ಕಾರ್ಯದರ್ಶಿ, ದೆಹಲಿ ಪ್ರದೇಶದ ಜನಸಂಘ.

ಶ್ರೀ ಯಜ್ಞದತ್ತ ಅವರು ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಚುನಾವಣೆ ಎನ್ನುವುದು ಹೇಗೆ ಪ್ರಹಸನವಾಗಿದೆ ಎನ್ನುವುದನ್ನು ನಿದರ್ಶನಗಳ ಸಮೇತ ವಿವರಿಸಿದರು. ರೀಸಿ ಎಂಬ ಬೆಟ್ಟ ಪ್ರದೇಶದಲ್ಲಿ (ಸಾಧಾರಣವಾಗಿ ಮತದಾನ ೫೦%ಕ್ಕಿಂತ ಹೆಚ್ಚಾಗಿ ಇರದ) ಮತದಾನದ ಫಲಿತಾಂಶ– ಬಕ್ಷಿಯವರ ಆಳ್ವಿಕೆಯ ಜಾದೂವಿನ ಪರಿಣಾಮವಿರಬಹುದು– ಪವಾಡಸದೃಶ್ಯವಾಗಿದೆ. ಒಟ್ಟು ಮತಗಳ ಸಂಖ್ಯೆ ೧೫೪೮೦ರ ಪೈಕಿ, ೧೫೬೬೦ ಮತಗಳು ಚಲಾಯಿಸಲ್ಪಟ್ಟವು, ಅದರಲ್ಲಿ ೧೫೫೫೦ ನ್ಯಾಷನಲ್ ಕಾನ್‌ಫರೆನ್ಸ್‌ಗೆ ಹೋದರೆ, ಹತ್ತು ಪ್ರಜಾ ಪರಿಷತ್‌ಗೆ !

ಈ ನಿರ್ಣಯವು, ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಡುವ ನೆಪದಲ್ಲಿ, ಈ ರಾಜ್ಯದ ಜನ ನಾಗರಿಕ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳಿಂದ ವಂಚಿತರಾಗುತ್ತಿದ್ದಾರೆ ಹಾಗೂ ಭಾರತದ ಮಿಕ್ಕ ಭಾಗಗಳಲ್ಲಿ ಇತರ ಜನಕ್ಕೆ ಸಿಗುತ್ತಿರುವ ಮುಕ್ತಿ ಮತ್ತು ಸುಗಮ ಚುನಾವಣೆಗಳೂ ಇತರ ಪಾಲಿಗಿರುವುದಿಲ್ಲ ಎಂದು ಶ್ರೀ ಅದ್ವಾನಿಯವರು ತಿಳಿಸಿದರು.

ಕಾಶ್ಮೀರ ಸಮಸ್ಯೆಗೆ ಜನಸಂಘದ ಪ್ರಸ್ತಾಪಕ್ಕೆ ಸಂಬಂಧಿಸಿದಂತೆ ನಿರ್ಣಯವನ್ನು ಅರ್ಥೈಸಬೇಕೆಂದು ತಿದ್ದುಪಡಿಯಲ್ಲಿ ಶ್ರೀ ಸುಂದರ್‌ಲಾಲ್ ಪಟ್ವ ಎಂಎಲ್‌ಎ (ಮ.ಪ.) ಅವರು ಅಪೇಕ್ಷಿಸಿದರು. ಪರಿಗಣನೆಯಲ್ಲಿರುವ ನಿರ್ಣಯವು ನಿರ್ದಿಷ್ಟ ಮತ್ತು ಮಿತಿಗೊಳಪಟ್ಟ ಉದ್ದೇಶ ಅದೆಂದರೆ, ರಾಜ್ಯದೊಳಗಿನ ಖಂಡನೀಯ ಸ್ಥಿತಿಯನ್ನು ಮಾತ್ರ ಒಳಗೊಂಡಿದೆ. ಅದು ಜನಸಂಘವು ಮೊದಲಿನಿಂದಲೂ ಒತ್ತಾಯಿಸುತ್ತಿರುವ, ಭಾರತದ ಇತರ ಭಾಗದೊಂದಿಗೆ ಜಮ್ಮು ಮತ್ತು ಕಾಶ್ಮೀರದ ಸಂಬಂಧದ ನಿಲುವಿನ ಬಗ್ಗೆ ಎಳ್ಳಷ್ಟು ಹಿಂದೆ ಸರಿದಿಲ್ಲ ಅಥವಾ ಪಾಕ್ ಆಕ್ರಮಿತ ಪ್ರದೇಶದ ಬಗ್ಗೆ ಏನನ್ನೂ ಒಳಗೊಂಡಿಲ್ಲ ಎಂದು ತಿಳಿಸಿದಾಗ, ಈ ತಿದ್ದುಪಡಿಯುನ್ನು ಹಿಂಪಡೆಯಲಾಯಿತು.

ನಿರ್ಣಯವನ್ನು ಆಗ ಅಂಗೀಕರಿಸಲಾಯಿತು. ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಪಂಚವಾರ್ಷಿಕ ಯೋಜನೆಯ ನಿರ್ಣಯದ ಬಗ್ಗೆ ಮಾತನಾಡುತ್ತಾ, ಎಲ್ಲಾ ಜನಗಳ ಮತ್ತು ಪಕ್ಷಗಳ ಸಹಕಾರದಿಂದ ಮಾತ್ರ ಯೋಜನೆ ಯಶಸ್ವಿಯಾಗುತ್ತದೆ ಎಂದು ಹೇಳಿದರು. ತೃತೀಯ ಯೋಜನೆಯು ಎಲ್ಲರಿಗೂ ಉದ್ಯೋಗ ದೊರಕಿಸಿಕೊಡಬೇಕು, ಮೊದಲ ಎರಡು ಯೋಜನೆಗಳು

ಈ ಪ್ರಮುಖವಾದ ಸಮಸ್ಯೆಯನ್ನು ನಿರ್ಲಕ್ಷಿಸಿದ್ದವು. ಯೋಜನೆ ಬಗ್ಗೆ ಎಲ್ಲಾ ಪಕ್ಷಗಳನ್ನೊಳಗೊಂಡ ಪಾರ್ಲಿಮೆಂಟು ಸಮಿತಿ ರಚನೆಯನ್ನು ಸ್ವಾಗತಿಸಿದರು. ಆ ಸಮಿತಿಯು ಸದಸ್ಯರಾಗಿ, ಆ ವಿಷಯವನ್ನು ಒತ್ತಿ ಹೇಳುವುದಾಗಿ ಹೇಳಿದರು.

## ಕೇರಳದ ಬಗ್ಗೆ ವರದಿ

ಕೇರಳ ರಾಜ್ಯದ ಜನಸಂಘ ಕಾರ್ಯದರ್ಶಿ ಶ್ರೀ ಪರಮೇಶ್ವರನ್ ಅವರು ತಮ್ಮ ಪ್ರಾಂತ್ಯದ ಸ್ಥಿತಿಗತಿಯ ಬಗ್ಗೆ ಹೇಳಿದ್ದೇನೆಂದರೆ:

ಲಕ್ಷಾಂತರ ಮಂದಿ ಆರ್ಥಿಕವಾಗಿ ಹಿಂದುಳಿದ ಮತ್ತು ಶೈಕ್ಷಣಿಕವಾಗಿ ನಿರುದ್ಯೋಗಿಗಳ ಮುಂದೆ ಅವರು ನೀಡಿದ ಅಸಂಖ್ಯಾತ ವರ್ಣಮಯ ಭರವಸೆಗಳಾದ, ತೀವ್ರವಾದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ತತ್‌ಕ್ಷಣದ ಹಾಗೂ ರಾಜ್ಯಾದ್ಯಂತ ಕೈಗಾರಿಕೀಕರಣ, ಶೇ. ೨೫ರಷ್ಟು ತತ್‌ಕ್ಷಣ ವೇತನ ಹೆಚ್ಚಳ, ಅಲ್ಲದೆ, ಈಗ ಇರುವ ಭೂಹಸಿವನ್ನು ತಣಿಸಲು ಶೇ. ೧೨½ ಬೋನಸ್, ರಾಷ್ಟ್ರ ವಿರೋಧಿ ಚಟುವಟಿಕೆಗಳನ್ನು ಹತ್ತಿಕ್ಕಲು ಶೈಕ್ಷಣಿಕ ವಿಷಯಗಳಲ್ಲಿ ಸಾಕಷ್ಟು ಶಾಸನಗಳು ಹಾಗೂ ಶಿಕ್ಷಕರ ಸೇವಾ ಸ್ಥಿತಿಯ ಸುಧಾರಣೆಗಳು ಇತ್ಯಾದಿಗಳನ್ನು ಜನಗಳ ಕಲ್ಪನೆ ಹಾಗೂ ತಮ್ಮ ಅಧಿಕಾರಾರೂಢ ಜನರ ಮುಂದೆ ಇಟ್ಟರು.

ಇಪ್ಪತ್ತು ವರ್ಷಗಳಿಂದ ಕಮ್ಯುನಿಸ್ಟರು ಅಧಿಕಾರದಲ್ಲಿದ್ದರೂ, ಮೇಲಿನ ಯಾವ ಕಾರ್ಯಕ್ರಮಗಳನ್ನೂ ಈಡೇರಿಸಿಲ್ಲ. ಭರವಸೆಗಳ ಉಲ್ಲಂಘನೆಯಿಂದಾಗಿ ಅವರು ಕೇರಳದ ಕಾರ್ಮಿಕರ ವಿರೋಧಿ ಕ್ರಮವನ್ನು ಕೈಗೊಂಡಿದ್ದಾರೆ. ಅದೇ, ಬಿರ್ಲಾ ಕಂಪನಿಯೊಂದಿಗೆ ಮಾಡಿಕೊಂಡ ಒಪ್ಪಂದ ಕಾರ್ಮಿಕರ ಸೇವಾಸ್ಥಿಗಳು, ಲಾಠಿಚಾರ್ಜ್ ಮತ್ತು ಅನೇಕ ಕಡೆಗಳಲ್ಲಿ ಗೋಲಿಬಾರ್ ಹಾಗೂ ಉದ್ದೇಶಿತ ಶಿಕ್ಷಣ ಮಸೂದೆಯಲ್ಲಿ ಅಲ್ಪಸಂಖ್ಯಾತರಿಗೆ ಶಿಕ್ಷಣ ವಿಚಾರದಲ್ಲಿ ವಿನಾಯಿತಿ ಮೂಲಕ ದೇಶದ ಹಿತವನ್ನು ಕಡೆಗಣಿಸಲಾಗಿದೆ. ಪೊಲೀಸ್ ಇಲಾಖೆಯ ದಿನನಿತ್ಯ ಆಡಳಿತದಲ್ಲಿ ಹಸ್ತಕ್ಷೇಪದಿಂದಾಗಿ, ಕಾನೂನು ಸುವ್ಯವಸ್ಥೆಯ ಕುಸಿತ, ನ್ಯಾಯಾಂಗದ ಮೇಲೂ ತರುತ್ತಿರುವ ಒತ್ತಡ, ಒಳನುಸುಳುವಿಕೆಯನ್ನು ಕ್ರಮಬದ್ಧವಾಗಿಸಿದ ಚಟುವಟಿಕೆಗಳು, ಇವೆಲ್ಲವೂ ಪ್ರಜಾಪ್ರಭುತ್ವದ ತತ್ವಗಳನ್ನು ಮತ್ತು ಆಡಳಿತವನ್ನು ಗಾಳಿಗೆ ತೂರುವಂತಹ ಹಾಗೂ ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಂಡು ಪಕ್ಷವನ್ನು ಮುಂದಕ್ಕೆ ತರುವಂತಹ ಪ್ರಯತ್ನಗಳು ನಡೆಯುತ್ತಿವೆ.

ಇವೆಲ್ಲವುಗಳಿಂದ ಜನತೆಗೆ ಬಂದಿರುವ ಭಾವನೆಗಳೆಂದರೆ ಅವರು ಬಾಣಲೆಯಿಂದ ಬೆಂಕಿಗೆ ಬೀಳುತ್ತಿದ್ದಾರೆ ಎಂಬುದು.

* * * * *

# ಜನಸಂಘದ ಇಂದೋರ್ ಅಧಿವೇಶನ

ಭಾರತದ ಅತಿ ಕಿರಿಯ ರಾಜಕೀಯ ಸಂಘಟನೆಗಳಲ್ಲೊಂದಾದ ಜನಸಂಘ ಕಳೆದ ೫ ದಿನಗಳಿಂದ ಅಖಿಲ ಭಾರತೀಯ ಜನಸಂಘದ ರಾಷ್ಟ್ರೀಯ ಕಾರ್ಯಕಾರಿಣಿ ಮತ್ತು ಸಾಮಾನ್ಯ ಅಧಿವೇಶನ ಜರುಗಿಸಿದ್ದು, ಕಳೆದ ರಾತ್ರಿ ಬಹಳಷ್ಟು ವಿಧೇಯಕ – ಕಾರ್ಯಾಚರಣೆ ಮತ್ತು ಎಲ್ಲ ಕಾರ್ಯಗಳ ಮತ್ತು ಸಂಘಟನೆಗಳ ಕುರಿತು ಪ್ರಮುಖವಾದ ತೀರ್ಮಾನಗಳನ್ನು ತೆಗೆದುಕೊಂಡಿದ್ದಿರುತ್ತದೆ.

ಜನಸಂಘದ ಉದಯಾನಂತರ ಅದರ ಕಾರ್ಯಕಾರಿಣಿ ಮತ್ತು ಸಮಿತಿ ಕಾಲಕಾಲಕ್ಕೆ ತೆಗೆದುಕೊಂಡ ತೀರ್ಮಾನಗಳನ್ನು ಗಮನಿಸಿ ಕಳೆದ ಅಧಿವೇಶನದಲ್ಲಿ ಪ್ರಣಾಳಿಕೆಯ ಪುನರ್ ಪರೀಶೀಲನೆಗೆ ನೇಮಿಸಿದ್ದ ಪ್ರಣಾಳಿಕಾ ಸಹ ಸಮಿತಿ ನೀಡಿದ ವರದಿಗೆ ಅಂತಿಮ ಸ್ವರೂಪ ನೀಡಲು ಅದರ ಸಂವಿಧಾನದಲ್ಲೂ ಕೆಲವೊಂದು ಮಾರ್ಪಾಟು ಮಾಡಬೇಕಾದದ್ದನ್ನು ಲಕ್ಷ್ಯದಲ್ಲಿರಿಸಿಕೊಂಡು ಜನಸಂಘದ ಕಾರ್ಯಕಾರಿಣಿಯು ಮುಂದಿರುವ ಪ್ರಮುಖ ಕಾರ್ಯವನ್ನು ಅದು ಶ್ರೀ ಕೆ. ಎಲ್. ಗೋಯಲ್, ವಕೀಲರು – ಅಧ್ಯಕ್ಷರು ಮಧ್ಯಭಾರತ ಜನಸಂಘ ಅವರ ನಿವಾಸದಲ್ಲಿ ಸಭೆ ನಡೆಸಿತು.

ಮಹಾ ಅಧಿವೇಶನವನ್ನು ಉದ್ಘಾಟಿಸಿದವರು ಪಂ। ಪ್ರೇಮಾನಾಥ ಡೋಗ್ರಾ (ಜಮ್ಮು ಮತ್ತು ಕಾಶ್ಮೀರ ಪ್ರಜಾಪರಿಷದ್‌ದ ಅಧ್ಯಕ್ಷರು) ವಿಶೇಷ ಆಹ್ವಾನಿತರಾಗಿ ಈ ಕಾರಣಕ್ಕಾಗಿ ಆಗಮಿಸಿದ ಅವರನ್ನು ಸಹಸ್ರಾರು ಜನ ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸಿದರು. ೨೧ರ ಬೆಳಿಗ್ಗೆ ಮತ್ತಷ್ಟು ಸಹಾಸ್ರರು ಜನ ಅವರ ಮಾತುಗಳನ್ನು ಕೇಳಲು ಜಮಾಯಿಸಿದ್ದರು. ಕಾಶ್ಮೀರದ ಏಕತೆಯಲ್ಲಿ ಅವರ ಉದಾತ್ತ ಪಾತ್ರದಿಂದಾಗಿ ಭಾರತದ ಜನಮಾನಸದಲ್ಲಿ ಅವರಿಗೊಂದು ವಿಶಿಷ್ಟ ಸ್ಥಾನವಿತ್ತು. ಅವರು ರಾಷ್ಟ್ರ ನಾಯಕರಲ್ಲಿ ಒಬ್ಬರಂತಾಗಿದ್ದರು.

ಜನಸಂಘದ ಕುರಿತು ಕಾಂಗ್ರೆಸ್ಸಿನ ಅಸಹನೆಯ ಪರಂಪರೆ ಹೊತ್ತ ಮಧ್ಯಭಾರತದ ಅಧಿಕಾರಿಗಳು ಟೌನ್‌ಹಾಲ್‌ನ್ನು ಅಧಿವೇಶನ ನಡೆಸಲು ನೀಡಲಿಲ್ಲ. ಜನಸಂಘದ ವತಿಯಿಂದ ಅವರಿಗೆ ನೀಡಲುದ್ದೇಶಿಸಿದ ನಾಗರಿಕ ಸನ್ಮಾನವನ್ನು

---

**ಮೂಲ ಆಕರ : ಆರ್ಗನೈಸರ್, ಆಗಸ್ಟ್, ೧೯೫೪**

ನಗರಸಭೆಯ ಕಾಂಗ್ರೆಸ್ ಪ್ರತಿನಿಧಿಗಳು ವಿರೋಧಿಸಿದ್ದು, ಪ್ರತಿಭಟನೆಗೂ ಮತ್ತು ಎಲ್ಲ ವಿರೋಧ ಪಕ್ಷದವರ ಸಭಾತ್ಯಾಗಕ್ಕೂ ಕಾರಣವಾಯಿತು. ಸಾರ್ವಜನಿಕ ಸಭೆ ನಡೆಸಲು ಮತ್ತು ಪಟ್ಟಣದಲ್ಲಿ ಪಂ। ಡೋಗ್ರಾರ ಮೆರವಣಿಗೆ ನಡೆಸಲು ಅನುಮತಿ ನಿರಾಕರಿಸಲಾಯಿತು.

ಆದರೆ ಇಷ್ಟೆಲ್ಲಾ ತೊಂದರೆಗಳ ನಡುವೆಯೂ ಸ್ಥಳೀಯ ಸಂಘಟಕರು ಅಧಿವೇಶನವನ್ನು ಅದ್ದೂರಿಯಾಗಿ ಯಶಸ್ವಿಗೊಳಿಸುವಲ್ಲಿ ಸಮರ್ಥರಾದರು. ನಂದಾಲಾಲ್‌ಪೂರ್ ಥೇಟರ್‌ಹಾಲ್ ಸಂಪೂರ್ಣವಾಗಿ ಶೃಂಗರಿಸಲ್ಪಟ್ಟಿತ್ತು ಮತ್ತು ಜನಜಂಗುಳಿಯಿಂದ ಕಿಕ್ಕಿರಿದಿತ್ತು. ಮೊದಲಿಗೆ ಡೋಗ್ರಾ ತಮ್ಮ ಉದ್ಘಾಟನಾ ಭಾಷಣದಲ್ಲಿ ಸಂಘದ ಬೆಳವಣಿಗೆಯನ್ನು ಶ್ಲಾಘಿಸಿದರು. ಪೋರ್ಚುಗೀಸ್ ತೆಕ್ಕೆಯೊಳಗಿದ್ದದ್ದನ್ನು ಬಿಡುಗಡೆಗೊಳಿಸುವಲ್ಲಿ ಅದರ ಪಾತ್ರಕ್ಕೆ ಪ್ರಜಾಪರಿಷದ್‌ನ ಸಂಪೂರ್ಣ ಬೆಂಬಲವನ್ನು ಘೋಷಿಸಿದರು. ಅವರು ಪಂ। ನೆಹರೂರವರ ಪಠಾಣ್‌ಕೋಟ್ ಭಾಷಣವನ್ನು ಟೀಕಿಸಿದರು ಮತ್ತು ಮಾತನಾಡುವುದಕ್ಕೆ ಮುನ್ನ ಶಬ್ದಗಳನ್ನು ತೂಗಿ ಬಳಸಬೇಕೆಂದು ಅವರಿಗೆ ಕಿವಿ ಮಾತು ಹೇಳಿದರು ಮತ್ತು ಜಮ್ಮು–ಕಾಶ್ಮೀರದ ಏಕತೆಗೆ ಪ್ರಜಾಪರಿಷದ್ ಬದ್ಧರಾಗಿರುವುದಾಗಿ ಪುನರುಚ್ಚರಿಸಿದರು. ಮತ್ತಲ್ಲಿ ಹೊಸದಾಗಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಸಬೇಕೆಂದರು ಮತ್ತು ಚುನಾವಣೆ ಮಾತ್ರ ಅಲ್ಲಿನ ಸದ್ಯದ ಸಾರ್ವಜನಿಕ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದೆಂದರು.

ಸಮಿತಿ ತೆಗೆದುಕೊಂಡ ಪ್ರಮುಖ ನಿರ್ಧಾರಗಳು ಆರ್ಥಿಕ ನೀತಿಗೆ, ದೇಶದ ರಾಜಕೀಯ ವ್ಯವಸ್ಥೆಗೆ ಮತ್ತು ಪೋರ್ಚುಗೀಸ್ ಆಕ್ರಮಿತ ಜಾಗಕ್ಕೆ ಸಂಬಂಧಿಸಿದ್ದು. ಜನಸಂಘದ ಪರಿಷ್ಕೃತ ಆರ್ಥಿಕ ನೀತಿ ಒತ್ತು ನೀಡಿದ್ದು – ಗೃಹಕೈಗಾರಿಕೆ ಮತ್ತು ಪರಂಪರಾಧಾರಿತ ಸುಧಾರಿತ ಕೃಷಿ. ದೊಡ್ಡ ಉದ್ದಿಮೆಗಳು ಸಣ್ಣ ಉದ್ದಿಮೆಗಳಿಗೆ ಸ್ಪರ್ಧಿಗಳಾಗಬಾರದು. ನೇರವಾಗಿ ರಾಷ್ಟ್ರದ ಭದ್ರತಾ ಅವಶ್ಯಕತೆಗನುಗುಣವಾಗಿ ಉದ್ದಿಮೆಗಳ ರಾಷ್ಟ್ರೀಕರಣವಾಗಬೇಕು. ಮತ್ತು ಉಳಿದವು ಕೂಡಾ ಸರ್ಕಾರದ ಸ್ವಾಮ್ಯಕ್ಕೊಳಪಟ್ಟು ಸ್ವತಂತ್ರವಾಗಿರಬೇಕು. ಉದ್ದಿಮೆಗಳ ಸಾಮರಸ್ಯ ಸ್ಥಿತಿ ಕಾಪಾಡಲು ಬಂಡವಾಳ ಮತ್ತು ಕಾರ್ಮಿಕರ ನಡುವೆ ಲಾಭಾಂಶದ ಹಂಚಿಕೆ ಇರಬೇಕು. ಉದ್ದಿಮೆಯ ಆಡಳಿತ ಮಂಡಳಿಯಲ್ಲಿ ಕಾರ್ಮಿಕರಿಗೆ ಸ್ಥಾನವಿರಬೇಕು. ಕಾರ್ಮಿಕರಿಗೆ ಮುಷ್ಕರದ ಸ್ವಾತಂತ್ರ್ಯವಿರುವುದನ್ನು ಒಪ್ಪಿಕೊಂಡರೂ ಅದು ಉತ್ಪಾದನೆಯ ಮೇಲೆ ಪರಿಣಾಮ ಬೀರಬಾರದು. ಪರಸ್ಪರ ಸಹಕಾರ ಅಗತ್ಯವೆ ವಿನಃ ಕಚ್ಚಾಟವಲ್ಲ.

ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜನಸಂಘ ತೆಗೆದುಕೊಂಡ ಪ್ರಮುಖ ತೀರ್ಮಾನವೆಂದರೆ ಒಕ್ಕೂಟ ಸರ್ಕಾರಕ್ಕೆ ಬದಲಾಗಿ ಒಂದು ಸರ್ಕಾರ (Unitary

Government). ಜನಸಂಘದ ಮೂಲತತ್ತ್ವಕ್ಕನುಗುಣವಾಗಿ ಅದು ಒಂದೇ ದೇಶ – ಒಂದೇ ಜನ – ಒಂದೇ ಸಂಸ್ಕೃತಿ – ಒಂದೇ ರಾಷ್ಟ್ರ. ಭಾರತ ಉಪಖಂಡದ ಗ್ರಹಿಕೆ ಮತ್ತು ರಾಜ್ಯಗಳ ಒಕ್ಕೂಟ ಎಂಬುದು ಜನಸಂಘಕ್ಕೆ ಅಸಂಗತವಾದದ್ದು. ಅದು ಭಾರತವನ್ನು ಅಖಂಡವಾಗಿ ನೋಡುತ್ತದೆ ಮತ್ತು ಅದನ್ನು ಬೇರೆಬೇರೆ ಘಟಕಗಳನ್ನಾಗಿ ವಿಭಾಗಿಸುವುದು ಆಳ್ವಿಕೆಯ ಅನುಕೂಲಕ್ಕಾಗಿ ಮಾತ್ರ. ಅಂಥ ಘಟಕಗಳು ಕೇಂದ್ರ ದತ್ತುಮಾಡಿದ ಸ್ವಾತಂತ್ರ್ಯವನ್ನಷ್ಟೇ ಅನುಭವಿಸಬೇಕು. ಸಂಘಟನೆ ಕುರಿತು ಜನಸಂಘ ತೆಗೆದುಕೊಂಡ ಪ್ರಮುಖ ತೀರ್ಮಾನವೆಂದರೆ – ಇನ್ನು ಮುಂದೆ ಜನಸಂಘಕ್ಕೆ ಒಂದೇ ಪ್ರಧಾನ ಕಾರ್ಯದರ್ಶಿ ಮತ್ತು ಹಲವು ಕಾರ್ಯದರ್ಶಿಗಳು. ವಾರ್ಷಿಕ ಅಧಿವೇಶನವನ್ನು ನಾಲ್ಕು ವಿಭಾಗಗಳಲ್ಲಿ ನಡೆಸಬೇಕು. ಎಲ್ಲವೂ ಅಖಿಲ ಭಾರತ ಅಧಿವೇಶನಗಳೆ. ರಾಷ್ಟ್ರೀಯ ಕಾರ್ಯಕಾರಿಣಿ ಮತ್ತು ಸಾಮಾನ್ಯ ಸಭೆ ಅವುಗಳೊಟ್ಟಿಗೆ ನಡೆಯಬೇಕು. ಈ ಬದಲಾವಣೆ ದೇಶದಲ್ಲಿನ ಪಕ್ಷ ಸಂಘಟನೆಯನ್ನು ಲಕ್ಷ್ಯದಲ್ಲಿರಿಸಿಕೊಂಡು ಮಾಡಿದ್ದು. ವಿಭಾಗಮಟ್ಟದ ಅಧಿವೇಶನದ ಮುಖಾಂತರ ಪ್ರತಿ ಪ್ರಾಂತ್ಯದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ವಿಭಾಗಮಟ್ಟದಲ್ಲೇ ವಿಶೇಷ ಗಮನ ಹರಿಸಬೇಕು ಮತ್ತು ಅದು ಹೆಚ್ಚು ವ್ಯಾವಹಾರಿಕವಾಗಿರಬೇಕು.

ಅಧಿವೇಶನ ಅನೇಕ ಠರಾವುಗಳನ್ನು ಪಾಸು ಮಾಡಿತು. ಪ್ರತಿನಿಧಿಗಳಲ್ಲಿ ಅತ್ಯುತ್ಸಾಹ ತುಂಬಿದ್ದೆಂದರೆ – ಭಾರತದ ಪೋರ್ಚುಗೀಸ್ ಆಳ್ವಿಕೆಯ ಪ್ರದೇಶಗಳಿಗೆ ಸಂಬಂಧಿಸಿದ್ದು. ಆ ಠರಾವನ್ನು ಸಾರ್ವಜನಿಕವಾಗಿ ಮಂಡಿಸಿದವರು ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು. ಅವರು ಭಾರತದಲ್ಲಿನ ವಸಾಹತೀಕರಣದ ಕುರಿತು ಭಾರತದ ಸರ್ಕಾರದ ನಿಷ್ಕ್ರಿಯತೆಯನ್ನು ಟೀಕಿಸಿದರು. ಈ ಸಮಸ್ಯೆಯನ್ನು ಆದಷ್ಟು ಶೀಘ್ರವಾಗಿ ಮತ್ತು ಪರಿಣಾಮಕಾರಿಯಾಗಿ ಬಗೆಹರಿಸದಿದ್ದಲ್ಲಿ ಇದು ಸಮಸ್ಯೆಯನ್ನು ಇನ್ನಷ್ಟು ಜಡಕಾಗಿಸುತ್ತದೆ. ಇದರಲ್ಲಿ ಪಾಕಿಸ್ತಾನ ಅನಾವಶ್ಯಕ ಆಸಕ್ತಿ ತೋರಿಸುತ್ತಿದೆ ಮತ್ತು ಪಾಶ್ಚಿಮಾತ್ಯ ಅಧಿಕಾರಷಾಹಿಗಳ ವೈರತ್ವವಿದೆ. ಈ ಕುರಿತು ಸರ್ಕಾರ ಪೋರ್ಚುಗಲ್ ಸರ್ಕಾರದ ಜೊತೆ ತಟಸ್ಥ ವೀಕ್ಷಕರ ಕುರಿತಂತೆ ಸಂಧಾನ ಇತ್ಯಾದಿ ಮಾಡಬೇಕಿಲ್ಲ. ಪೋರ್ಚುಗಲ್ ತೆಗೆದುಕೊಂಡ ಠರಾವು ಕೇವಲ ಯುದ್ಧ ತಯಾರಿಗಾಗಿ ಕಾಲಾವಕಾಶ ಪಡೆಯಲು ಮತ್ತು ಅಂತರರಾಷ್ಟ್ರೀಯ ಶಕ್ತಿ ರಾಜಕಾರಣದೆದುರು ಸಮಸ್ಯೆಯನ್ನು ಜಟಿಲಗೊಳಿಸುವುದು. ಠರಾವು ಗೋವಾ ಮತ್ತದರ ಸುತ್ತಮುತ್ತಲ ಪ್ರದೇಶದ ವಿಮೋಚನೆಯಲ್ಲಿ ಭಾಗಿಯಾದ ಸ್ವಾತಂತ್ರ್ಯ ಹೋರಾಟಗಾರರನ್ನು ಅಭಿನಂದಿಸಿತು ಹಾಗೂ ತನ್ನೆಲ್ಲಾ ಶಾಖೆಗಳಿಗೂ ಗೋವಾ ವಿಮೋಚನೆಯನ್ನು ಗೋವಾ ಮುಕ್ತಿಪಾಠವೆಂದು ಸೆಪ್ಟೆಂಬರ್ ೯ ರಿಂದ ೧೬ರವರೆಗೆ

ಸಪ್ತಾಹ ಆಚರಿಸುವುದು ಮತ್ತೆ ಅದೇ ಸಂದರ್ಭದಲ್ಲಿ ಸಾರ್ವಜನಿಕ ಸಭೆ ಸಮಾರಂಭಗಳ ಮೂಲಕ ಜನಜಾಗೃತಿ ಮೂಡಿಸುವುದು ಮತ್ತು ಕಾರ್ಯಕರ್ತರನ್ನು ಹುರಿದುಂಬಿಸುವುದು. ಠರಾವನ್ನು ಶ್ರೀ ಜಗನ್ನಾಥರಾವ್ ಅನುಮೋದಿಸಿದರು.

* * * * *

# ಕೇರಳ ತಲುಪಿದ ಜನಸಂಘ

(ರಾಜ್ಯ ಪ್ರಧಾನ ಕಾರ್ಯದರ್ಶಿ : ತಾತ್ಕಾಲಿಕ ಸಮಿತಿಯನ್ನು ರಚಿಸಲಾಗಿದೆ)

ಕಳೆದ ವಾರ ಕೇರಳ ರಾಜ್ಯಕ್ಕೆ ಭೇಟಿ ನೀಡಿದ ಜನಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದೀನ್ ದಯಾಳ್ ಉಪಾಧ್ಯಾಯರಿಂದ ಹೊಸ ಆಶಾಕಿರಣ ಮತ್ತು ಸಂದೇಶವನ್ನು ಜನರು ಬಯಸಿದ್ದಾರೆ. ಕ್ರಿಶ್ಚಿಯನ್ನರ ಹಿಡಿತದಲ್ಲಿರುವ ಕಾಂಗ್ರೆಸ್, ಕೇರಳದಲ್ಲಿನ ಹಿಂದೂಗಳ ಭರವಸೆಗಳನ್ನೆಲ್ಲ ಛಿದ್ರಗೊಳಿಸಿದೆ. ಈಗವರು ಹಿಂದೂ ಮಹಾಮಂಡಳದಲ್ಲಿ ತಮ್ಮ ಭರವಸೆಗಳನ್ನು ಕಾಣಲೆತ್ನಿಸುತ್ತಿದ್ದಾರೆ.

ಆದರೆ ಅವರಿಗೆ ನೋವು ತುಂಬಿದ ಆಶ್ಚರ್ಯವೆಂದರೆ ಮಹಾಮಂಡಳದ ನಾಯಕತ್ವ ಕ್ರಿಶ್ಚಿಯನ್ ಕಾಂಗ್ರೆಸ್ ಪೈಪೋಟಿ ನೀಡುವುದಕ್ಕೆ ಮುಂದಾಗಿದೆಯೇ ವಿನಃ ಹಿಂದೂ ಜನಸಮುದಾಯಕ್ಕೆ ಸಹಾಯ ಮಾಡುವುದಕ್ಕಲ್ಲ. ಆದ್ದರಿಂದ ಭ್ರಮನಿರಸನಗೊಂಡ ಅನೇಕ ಹಿಂದೂಗಳು ಎಡಪಂಥೀಯ ಶಿಬಿರಕ್ಕೆ ಜಿಗಿದಿದ್ದಾರೆ. ಆದರೆ ಅವರ ತಲ್ಲಣ – ಭ್ರಮನಿರಸನವನ್ನು ಶ್ರೀ ದೀನ್ ದಯಾಳ್ ಉಪಾಧ್ಯಾಯರ ಭೇಟಿ ಉಪಶಮನಗೊಳಿಸುವ ದಿಕ್ಕಿನಲ್ಲಿತ್ತು.

## ಶ್ರೀ ದೀನ್ ದಯಾಳ್ ಅವರನ್ನು ಭೇಟಿಯಾದ ನಾಯಕರು

ಶ್ರೀ ದೀನ್ ದಯಾಳರು ಎರ್ನಾಕುಲಂ, ಅಲ್ಲಪ್ಪೆ, ತಿರುವನಂತಪುರ, ಕೊಟ್ಟಾಯಂ, ಪಾಲಘಾಟ್ ಮತ್ತು ಕಲ್ಲಿಕೋಟೆಗೆ ಭೇಟಿ ನೀಡಿದರು. ಇಲ್ಲೆಲ್ಲ ಅವರು ಪ್ರತಿಷ್ಠಿತ ನಾಗರಿಕರನ್ನು ಭೇಟಿಯಾದರು ಮತ್ತು ಜನಸಂಘ ಸ್ಥಾಪಿಸಿ – ತಾತ್ಕಾಲಿಕ ಸಮಿತಿಯನ್ನು ರಚಿಸಿದರು. ಅವರನ್ನು ಭೇಟಿಯಾದವರಲ್ಲಿ ಎರ್ನಾಕುಲಂನ ಶ್ರೀ ಪಿ. ಕೆ. ಕೃಷ್ಣನ್ ಕುಟ್ಟಿ ಮೆನನ್, ಕೊಟ್ಟಾಯಂನ ಶ್ರೀ ಎನ್. ಎನ್. ಗೋವಿಂದ ಮೆನನ್ (ಪ್ರಭಾವಶಾಲಿ ನಾಯರ್ ಸೇವಾ ಸಂಸ್ಥೆ (NSS)ಯ ಹಿಂದಿನ ಅಧ್ಯಕ್ಷರು) ತ್ರಿವೇದ್ರಂದ ಶ್ರೀ ಮನ್ನಾರ್ ಪಿ. ಗೋಪಾಲ್ ನಾಯರ್ ಮತ್ತು ಅಲ್ಲಪ್ಪೆಯ ಡಾ॥ ಕೆ. ಪಿ. ಫಣಿಕ್ಕರ್ (ಸರ್ದಾರ್ ಫಣಿಕ್ಕರ್‌ರ ಸಹೋದರ) ಮುಖ್ಯರು.

---

**ಮೂಲ ಆಕರ : ಆರ್ಗನೈಸರ್, ೨೧, ಡಿಸೆಂಬರ್, ೧೯೫೩**

ಜನವರಿಯಲ್ಲಿ ಈ ತಾತ್ಕಾಲಿಕ ಸಮಿತಿ ಸಭೆ ಸೇರಿ ಮುಂಬರುವ ಚುನಾವಣಾ ನೀತಿಯನ್ನು ರಚಿಸಬೇಕೆಂದು ತೀರ್ಮಾನಿಸಲಾಯಿತು.

ಎರ್ನಾಕುಲಂ ಮತ್ತು ತಿರುವನಂತಪುರಗಳಲ್ಲಿ ಕರೆದ ಪತ್ರಿಕಾಗೋಷ್ಠಿಗಳಲ್ಲಿ ಶ್ರೀ ದೀನ್ ದಯಾಳ್‌ರು ಜನಸಂಘ ಸಂಪೂರ್ಣವಾಗಿ "ಅಖಂಡ ಭಾರತ"ದ ಪರವಾಗಿ ನಿಲ್ಲುತ್ತದೆಂದು ಪುನರುಚ್ಚರಿಸಿದರು. ಹಿಂದೂ–ಮುಸ್ಲಿಂ ಮತ್ತು ಭಾರತ–ಪಾಕ್ ಸಮಸ್ಯೆಗಳನ್ನು ಪುನಃ ಒಂದಾದ ಭಾರತದಲ್ಲಿ ಸಮಾನ ಹಕ್ಕು ಮತ್ತು ಅವಕಾಶಗಳನ್ನು ನೀಡುವ ಮುಖಾಂತರ ಪರಿಹರಿಸಬಹುದೆಂದರು. ಯಾವುದೇ ಸ್ವತಂತ್ರ ಮತ್ತು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಯಾವುದೇ ಧರ್ಮದ ಅಲ್ಪಸಂಖ್ಯಾತರಿಗೆಂದು ವಿಶೇಷ ಸ್ಥಾನಮಾನ ಕಲ್ಪಿಸುವ ಪ್ರಶ್ನೆಯೇ ಇಲ್ಲವೆಂದರು. ಕಾಶ್ಮೀರದ ಘಟನೆಗಳು ಜನಸಂಘದ ತತ್ತ್ವವನ್ನು ಸಮರ್ಥಿಸುವಂತಿವೆ. ಸರ್ಕಾರಕ್ಕೇನಾದರೂ ಮೊದಲೇ ವಿವೇಕ ಮೂಡಿದ್ದರೆ ಗೌರವಾನ್ವಿತ ಡಾ. ಶ್ಯಾಮಾಪ್ರಸಾದರ ಸಾವನ್ನು ತಪ್ಪಿಸಬಹುದಿತ್ತೆಂದವರು ಅಭಿಪ್ರಾಯಪಟ್ಟರು.

## ಕೆಲಸದ ಹಕ್ಕು – ಉಳುವವನಿಗೇ ಭೂಮಿ

ಕೆಲಸದ ಹಕ್ಕು ಪ್ರತಿಯೊಬ್ಬನಿಗೂ ಪ್ರಾಪ್ತವಾಗಬೇಕೆಂಬುದೇ ಜನಸಂಘದ ಆರ್ಥಿಕ ನೀತಿ ಎಂದವರು ವಿವರಿಸಿದರು. ನಾವು ಇದೇ ವೇಗದಲ್ಲಿ ಸಾಗಿದರೆ ಇನ್ನು ಐದು ಪಂಚವಾರ್ಷಿಕ ಯೋಜನೆಗಳಾದರೂ ನಾವು ಸಂಪೂರ್ಣವಾಗಿ ಉದ್ಯೋಗ ಪಡೆಯಲು ಸಾಧ್ಯವಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು ಇರುವ ಒಂದು ಮಾರ್ಗವೆಂದರೆ ಮುಖ್ಯವಾದ ಉದ್ದಿಮೆಗಳನ್ನು ರಾಷ್ಟ್ರೀಕರಣಗೊಳಿಸುವುದು ಮತ್ತು ಉಳಿದ ಉದ್ದಿಮೆಗಳನ್ನು ವಿಕೇಂದ್ರೀಕರಣಗೊಳಿಸುವುದು. ಬೃಹತ್ ಉದ್ದಿಮೆಗಳು, ಯಂತ್ರಗಳು ಮನುಷ್ಯನ ಜಾಗವನ್ನು ಆಕ್ರಮಿಸಿದೆ. ಪರಿಣಾಮವಾಗಿ ಮನುಷ್ಯನ ಅಭಿವೃದ್ಧಿಗೆ ಮಾರಕವಾಗಿವೆ. ಯಾವುದೇ ಬೃಹತ್ ಉದ್ಯಮವನ್ನು ವಿಕೇಂದ್ರಿಕರಣಕ್ಕೊಳಪಡಿಸಲು ಸಾಧ್ಯವಾಗದಿದ್ದ ಪಕ್ಷದಲ್ಲಿ – ಅದರಲ್ಲಿ ಕೆಲಸ ಮಾಡುವ ಕಾರ್ಮಿಕ ವರ್ಗಕ್ಕೆ ಅದರ ಲಾಭಾಂಶದಲ್ಲಿ ಪಾಲುದಾರಿಕೆ ಪಡೆಯುವುದಕ್ಕಾದರೂ ಅವಕಾಶವಿರಬೇಕೆಂದು ಅವರು ಸಲಹೆ ಮಾಡಿದರು.

ಭೂಮಿ ಊಳುವವನಿಗೆ ಸೇರಿದ್ದೆಂದು ಅವರು ತಿಳಿಸಿದರು. ಜಮೀನ್ದಾರ್ ಮತ್ತು ಜಹಗೀರುದಾರರು ಪುನರ್ ವಸತಿ ಸಹಾಯಧನಕ್ಕೆ ಮಾತ್ರ ಅರ್ಹರು. ಸ್ವದೇಶಿ ನೀತಿ ಮತ್ತು ದೃಷ್ಟಿ ಪ್ರಾಪ್ತವಾಗದಿದ್ದಲ್ಲಿ ಸ್ವರಾಜ್ಯ ಸ್ಥಾಪನೆ ಅಸಾಧ್ಯ. ದೇಶದ ಆರ್ಥಿಕತೆ ಹೆಚ್ಚಾಗಿ ಸ್ವದೇಶಿ ನೀತಿಯನ್ನೇ ಆಧರಿಸಿದ್ದು ಸರ್ಕಾರ ಈ ದಿಸೆಯಲ್ಲಿ ಸಾಗಬೇಕು.

## ಜಾನ್ ತೊಲಗಲಿ

ಪ್ರತಿಕೂಲ ಮತಗಳ ಅನಂತರವೂ ಜಾನ್ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರೆಯಲು ಯಾವುದೇ ಹಕ್ಕಿಲ್ಲವೆಂದು ಕೇರಳದ ಆಡಳಿತಕ್ಕೆ ಸಂಬಂಧಿಸಿದಂತೆ ಶ್ರೀ ದೀನ್ ದಯಾಳ್‌ರು ಅಭಿಪ್ರಾಯ ವ್ಯಕ್ತಪಡಿಸಿದರು. ಆಕ್ಷೇಪಾರ್ಹ ಮತ್ತು ಹೊಸ ಚುನಾವಣೆ ನಡುವೆ ಇಂಗ್ಲೆಂಡ್‌ನಲ್ಲಿ ಸರ್ಕಾರ ಅಧಿಕಾರದಲ್ಲಿರುವುದು ನಿಜ. ಆದರೆ ಅಲ್ಲಿ ೧೫ ದಿನಗಳೊಳಗಲ್ಲವಾದರೂ ತಿಂಗಳೊಳಗಾಗಿ ಚುನಾವಣೆ ನಡೆಯುವಂತೆ ನೋಡಿಕೊಳ್ಳಲಾಗುತ್ತದೆ. ಹಾಗಲ್ಲದೆ ಅಧಿಕಾರಕ್ಕೆ ವರ್ಷಗಟ್ಟಲೆ ಅಂಟಿಕೊಳ್ಳುವುದು ರಾಜಕೀಯ ವ್ಯಭಿಚಾರ. ಅವರಿಗೆ ಅಪಾಯದ ಎಚ್ಚರವಿರಬೇಕು ಮತ್ತು ಅದರ ವಿರುದ್ಧ ಹೋರಾಡಬೇಕು.

ವಿಚಿತ್ರವೆಂದರೆ ಒಂದೆಡೆ ಅಮೆರಿಕದ ಸಹಾಯ ಪಡೆಯುತ್ತಿರುವ ಪಾಕಿಸ್ತಾನ ಭಾರತದೊಂದಿಗೆ ಯುದ್ಧಕ್ಕೆ ಸಿದ್ಧವಾಗುತ್ತಿದೆ ಮತ್ತು ಇನ್ನೊಂದೆಡೆ ಕಾಶ್ಮೀರದ ಪ್ರಜಾಭಿಪ್ರಾಯದ ಕುರಿತು ಮಾತನಾಡುತ್ತದೆ. ಆದರೆ ಕಾಶ್ಮೀರವನ್ನು ಯಾವುದೇ ಮಾರ್ಗದಲ್ಲಿ ಪಡೆಯುವ ಅದರ ಆಸೆ ಈಡೇರುವುದಿಲ್ಲ ಎಂದವರು ಘೋಷಿಸಿದರು.

* * * * *

# ಪ್ರಸ್ತುತ ವಿದ್ಯಾಮಾನಗಳ ಕುರಿತು ಜನಸಂಘದ ಧೋರಣೆ

ಕರ್ನಾಟಕದಲ್ಲಿ ಪ್ರಧಾನ ಕಾರ್ಯದರ್ಶಿಯವರು
(ಶ್ರೀ ಸೌಮಿತ್ರಿ ಶರ್ಮಾ, ಕಾರ್ಯದರ್ಶಿ, ಕರ್ನಾಟಕ ರಾಜ್ಯ ಜನಂಘ ಇವರಿಂದ)

ಪಂ। ದೀನ್ ದಯಾಳ್ ಉಪಾಧ್ಯಾಯರು ತಮ್ಮ ಚೊಚ್ಚಲು ಪ್ರವಾಸವನ್ನು ಈಗಷ್ಟೆ ಪೂರೈಸಿದ್ದಾರೆ. ಶೈಕ್ಷಣಿಕ ಮತ್ತು ಸಾಂಸ್ಕೃತಿಕ ನಗರವಾದ ಧಾರವಾಡದಿಂದ ಪ್ರಾರಂಭಿಸಿ – ಹುಬ್ಬಳ್ಳಿ, ಬಾಗಲಕೋಟೆ, ಬಿಜಾಪುರ, ಬೆಳಗಾವಿ, ಶಿವಮೊಗ್ಗ, ಮಂಗಳೂರು, ಮೈಸೂರು, ತುಮಕೂರು ಮತ್ತು ಬೆಂಗಳೂರು. ಭೇಟಿಯಿತ್ತ ಪ್ರತಿ ಸ್ಥಳದಲ್ಲೂ ಅವರು ಜನಸಂಘದ ಕಾರ್ಯಕರ್ತರೊಂದಿಗೆ ಸಭೆ ನಡೆಸಿದರು – ಪತ್ರಿಕಾ ಸಂದರ್ಶನ ನಡೆಸಿದರು – ಸಾರ್ವಜನಿಕ ಭಾಷಣ ಮಾಡಿದರು. ತುಮಕೂರಿನಲ್ಲಿ ಸ್ಥಳೀಯ ವಕೀಲರ ಸಂಘವನ್ನು ಉದ್ದೇಶಿಸಿ ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಕೆಲವು ಕಡೆ ಪಟ್ಟಣದ ಪ್ರತಿಷ್ಠಿತರೊಂದಿಗೆ ಚಹಾ ಕೂಟದಲ್ಲಿ ಕೂಡ ಭಾಗಿಯಾಗಿದ್ದರು.

ತಮ್ಮ ಭಾಷಣದಲ್ಲವರು ಪಾಕ್–ಅಮೆರಿಕದ ಮಿಲಿಟರಿ ಸಂಬಂಧ – ಪಾಕಿಸ್ತಾನದ 'ಇಸ್ಲಾಮಿಕ್' ಸಂವಿಧಾನ, ಭಾಷಾವಾರು ಪ್ರಾಂತ್ಯಗಳು, ನಿರುದ್ಯೋಗ ಮತ್ತು ಕೈಗಾರಿಕೀಕರಣದ ಕುರಿತು ಪ್ರಸ್ತಾಪಿಸಿದರು. ಗಂಭೀರ ವಿಚಾರಗಳನ್ನವರು ಸರಳವಾಗಿ ವಿಶ್ಲೇಷಿಸಿದ ರೀತಿ ಕೇಳುಗರ ಮೇಲೆ ಅಪಾರ ಪ್ರಭಾವ ಬೀರಿತು. ಶಿವಮೊಗ್ಗೆಯಲ್ಲಿ ಮಾತ್ರ ಅವರು ಇಂಗ್ಲಿಷಿನಲ್ಲಿ ಮಾತನಾಡಿದರು. ಉಳಿದ ಕಡೆಯಲ್ಲೆಲ್ಲ ಶುದ್ಧ ಹಿಂದಿಯಲ್ಲಿ ಮಾತುಗಳನ್ನಾಡಿದರು. ಅವರ ಮಾತುಗಳು ಎಲ್ಲ ಗುಂಪು ಮತ್ತು ವರ್ಗದವರಿಗೂ ತಲುಪುವಂತಾಯಿತೆಂದರೆ ದಕ್ಷಿಣ ಭಾರತದಲ್ಲೂ ಬಹಳ ಜನರಿಗೆ ಇಂಗ್ಲಿಷ್‌ಗಿಂತ ಹಿಂದಿ ಹೆಚ್ಚು ಅರ್ಥವಾಗುತ್ತದೆಂಬುದೇ ಆಗಿದೆ.

## ಪಾಕ್ – ಅಮೆರಿಕ ಸಂಬಂಧ

ಪಾಕ್ – ಅಮೆರಿಕ ಸಂಬಂಧವನ್ನು ಪ್ರಸ್ತಾಪಿಸಿದ ಶ್ರೀ ದೀನ್ ದಯಾಳ್‌ರು ಇದರ ಪರಿಣಾಮ ಇಡೀ ಏಷ್ಯಾದ ಮೇಲಾಗುವುದೆಂದರು. ಪ್ರಧಾನ ಮಂತ್ರಿಗಳು

---

**ಮೂಲ ಆಕರ : ಆರ್ಗನೈಸರ್, ೧೯೫೪**

ಈ ವಿಷಯವನ್ನು ಸಮರ್ಥವಾಗಿ ನಿಭಾಯಿಸಬಲ್ಲರು. ಆದರೆ ಈ ಒಪ್ಪಂದಕ್ಕೆ ಗಂಭೀರವಾದ ಒಳಗಿನ ಪರಿಣಾಮಗಳಿವೆ. ಇದರಿಂದ ಅಮೆರಿಕವನ್ನು ಭಾರತದಿಂದ ಸಂಪೂರ್ಣ ಹೊರಗಿಡಬೇಕಾಗಬಹುದು. ಇದರಿಂದ ಭಾರತೀಯರು ಕಮ್ಯುನಿಸ್ಟ್ ರಷ್ಯಾ ಮತ್ತು ಚೀನಾದತ್ತ ದೃಷ್ಟಿ ಹರಿಸಬೇಕಾದೀತು. ಇದರಿಂದ ಭಾರತದಲ್ಲಿ ಕಮ್ಯುನಿಸ್ಟ್ ಪರವಾದ ಬಲ ಅಧಿಕಗೊಳ್ಳಬಹುದು. ಅಮೆರಿಕ ಪಾಕಿಸ್ತಾನದೊಂದಿಗಿನ ತನ್ನ ಸಂಬಂಧದಿಂದಾಗಿ ಭಾರತದಲ್ಲಿ ಕಮ್ಯುನಿಸಂ ಬೆಳೆಯಲು ಸಹಕರಿಸಿದಂತಾಗುತ್ತದೆ.

## ‘ಇಸ್ಲಾಮಿಕ್’ ಸಂವಿಧಾನ

ಪಾಕಿಸ್ತಾನದ ಇಸ್ಲಾಮಿಕ್ ಸಂವಿಧಾನದ ಕುರಿತು ಶ್ರೀ ದೀನ್ ದಯಾಳ್‌ರು ಹೇಳಿದ್ದೇನೆಂದರೆ – ಇದು ಪ್ರತಿ ರಾಷ್ಟ್ರದ ಅಲ್ಪಸಂಖ್ಯಾತರಿಗೂ ಸಮಾನ ಹಕ್ಕು ನೀಡಬೇಕೆಂದು ದೇಶ ವಿಭಜನೆಯ ಸಂದರ್ಭದಲ್ಲಿ ಮಾಡಿಕೊಂಡ ಒಪ್ಪಂದಕ್ಕೆ ವಿರುದ್ಧವಾಗಿದೆ. ಇದು ಪರಸ್ಪರ ತರತಮ ಧೋರಣೆಯುಳ್ಳದ್ದು. ಪಾಕಿಸ್ತಾನದ ಸಂಸ್ಥಾಪಕರು ಅಲ್ಪಸಂಖ್ಯಾತರಿಗೆ ನೀಡಿದ್ದ ವಾಗ್ದಾನಕ್ಕೆ ವಿರುದ್ಧವಾದದ್ದು. ಪಾಕಿಸ್ತಾನದ ಚುನಾಯಿತ ಪ್ರತಿನಿಧಿ ಸಭೆ ಇದನ್ನು ಕಾರ್ಯರೂಪಕ್ಕೆ ತರಕೂಡದು. ಅದು ದೇಶ ವಿಭಜನೆಯ ಸಂದರ್ಭದಲ್ಲಿ ನೀಡಿದ ವಾಗ್ದಾನಕ್ಕನುಗುಣವಾಗಿ ನಡೆದುಕೊಳ್ಳಬೇಕು. ಪಾಕಿಸ್ತಾನ ತನ್ನ ಮಾತಿನಂತೆ ನಡೆದುಕೊಳ್ಳುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವ ಜವಾಬ್ದಾರಿ ಭಾರತದ್ದು. ಅಲ್ಪಸಂಖ್ಯಾತರಿಗೆ ಸಮಾನ ಪ್ರಾತಿನಿಧ್ಯ ದೊರಕುವಂತಾಗಬೇಕು. ಇದು ಕೇವಲ ಪಾಕಿಸ್ತಾನದ ಸಮಸ್ಯೆಯಲ್ಲ. ಪಾಕಿಸ್ತಾನದಲ್ಲಿನ ಅಲ್ಪಸಂಖ್ಯಾತ ಹಿಂದುಗಳಿಗೆ ಅನ್ಯಾಯವಾದರೆ ಅದರ ಪರಿಣಾಮ ಗಂಭೀರವಾಗಿರುತ್ತದಲ್ಲದೆ – ಅದು ಗಡಿಭಾಗದಲ್ಲಿ ಘರ್ಷಣೆಯ ಸರಣಿ ಪ್ರಕ್ರಿಯೆಗಳಿಗೂ ನಾಂದಿಯಾಗಬಹುದು.

## ಭಾಷಾವಾರು ಪ್ರಾಂತ್ಯಗಳು

ಭಾಷಾವಾರು ಪ್ರಾಂತ್ಯ ರಚನೆಗೆ ನೇಮಿಸಿದ ಉನ್ನತಾಧಿಕಾರದ ಆಯೋಗ ರಚನೆಯ ಕಾರಣದಿಂದಾಗಿ ಎಲ್ಲ ಬಗೆಯ ದೊಂಬಿ ಮತ್ತು ಪ್ರತಿಭಟನೆಗಳು ನಿಲ್ಲಬೇಕು. ಆಯೋಗ ಸಮಸ್ಯೆಯನ್ನು ಪರಿಹರಿಸಬೇಕು. ಭಾಷೆ ಬಹಳ ಮುಖ್ಯವಾದುದ್ದೆಂಬುದರಲ್ಲಿ ಅನುಮಾನಗಳಿಲ್ಲ. ಆದರೆ ಆರ್ಥಿಕ ಸ್ಥಿತಿಗತಿಗಳನ್ನು ಕೂಡಾ ಇದರಿಂದ ಸಂಪೂರ್ಣವಾಗಿ ಹೊರಗಿಡುವಂತಿಲ್ಲ. ಹಾಗೆ ಹೊಸ ಭಾಷಾವಾರು ಗಡಿಗಳನ್ನು ರಚಿಸಬೇಕು. ಆದಾಗ್ಯೂ ಬಹಳಷ್ಟು ಭಾಷಾ

ಅಲ್ಪಸಂಖ್ಯಾತರು ಗಡಿ ದಾಟುವ ಸಾಧ್ಯತೆಯಿದೆ. ಆದ್ದರಿಂದ ಯಾರೂ ನಿರ್ದಿಷ್ಟವಾಗಿ ಗಡಿ ಗುರುತಿಸಲು ಒತ್ತಾಯಿಸಕೂಡದು. ಕೆಲವು ಪ್ರದೇಶಗಳು ನಮಗೆ ಸೇರುತ್ತವೆ ಅಥವಾ ಬಿಡುತ್ತವೆ ಎಂಬುದು ಮುಖ್ಯವಲ್ಲ. ಒಟ್ಟಾರೆ ಅವೆಲ್ಲ ಭಾರತದಲ್ಲೇ ಉಳಿದಿರುತ್ತವೆಂಬುದು ಮುಖ್ಯ.

## ನಿರುದ್ಯೋಗ

ಶ್ರೀ ದೀನ್ ದಯಾಳ್ ಉಪಾಧ್ಯಾಯರು ಎಲ್ಲ ಕಡೆ ತಮ್ಮ ಮಾತುಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪ್ರಸ್ತಾಪಿಸಿದರು. ಭಾರತ ಸರ್ಕಾರದ ವಿಧೇಯಕದಲ್ಲಿ ಮೂಲಭೂತ ಬದಲಾವಣೆಯಾದರೆ ಈ ಸಮಸ್ಯೆಯನ್ನು ಪರಿಹರಿಸಬಹುದು. ಪಂಚವಾರ್ಷಿಕ ಯೋಜನೆಗಳು ಸಣ್ಣ ಕೈಗಾರಿಕಾ ಕ್ಷೇತ್ರವನ್ನು ನಿರ್ಲಕ್ಷಿಸಿವೆ. ಜನಸಂಘ ಬಯಸುವುದೇನೆಂದರೆ ಕೈಗಾರಿಕಾ ಆರ್ಥಿಕ ನೀತಿಯು ಸಣ್ಣ ಕೈಗಾರಿಕಾ ವಲಯವನ್ನಾಧರಿಸಿರಬೇಕು. ಬೃಹತ್ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳಿಗೆ ಪೂರಕವಾಗಿರುವುದು ಅವಶ್ಯಕ. ಹಾಗೆ ಸಣ್ಣ ಕೈಗಾರಿಕೆಗಳಿಂದ ಅಸಾಧ್ಯವಾದ ಉತ್ಪನ್ನಗಳನ್ನು ಮಾತ್ರ ಬೃಹತ್ ಕೈಗಾರಿಕೆಗಳು ಉತ್ಪಾದಿಸಬೇಕು. ಯಾವ ದೇಶದಲ್ಲಿ ಕಾರ್ಮಿಕ ಶಕ್ತಿ ಅಧಿಕವಾಗಿರುವುದೋ ಅಲ್ಲಿ ಕಾರ್ಮಿಕ ಶ್ರಮವನ್ನು ಉಳಿಸುವ ಯೋಜನೆಗಳು ಹುಚ್ಚುತನದ್ದು. ಶ್ರೀ ದೀನ್ ದಯಾಳರು ಕರ್ನಾಟಕದಲ್ಲಿ ಜನಸಂಘ ಬೇರುಬಿಡುತ್ತದೆ ಎಂಬ ನಂಬಿಕೆಯೊಂದಿಗೆ ಪ್ರವಾಸ ಮುಗಿಸಿದರು. ಬಾಂಬೆಯಲ್ಲಿ ಜರುಗುವ ಸಂಘದ ಮಹಾಧಿವೇಶನ ಸಂಘದ ಕೊರತೆಯನ್ನು – ದಕ್ಷಿಣದಲ್ಲಿ ವಿಶೇಷವಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ – ಪೂರೈಸಬಹುದೆಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

* * * * *

# ಅಮೆರಿಕ ಅನುದಾನ ಕಡಿತದ ಸಂದರ್ಭದಲ್ಲಿ ಕಲಿತ ಪಾಠಗಳು

## ದೊಡ್ಡ ಮೊತ್ತದ ವಿದೇಶಿ ಅನುದಾನದ ಬಗ್ಗೆ ಎಚ್ಚರಿಕೆಯ ಕರೆ – ಉಪಾಧ್ಯಾಯ

ನಮ್ಮ ಪ್ರತಿನಿಧಿಯಿಂದ, ಕೋಟಾ, ಮೇ ೨೫

ಜನಸಂಘದ ಕೇಂದ್ರೀಯ ಸಮಿತಿಯ ಸಾರ್ವಜನಿಕ ಸ್ವಾಗತ ಸಮಾರಂಭವನ್ನುದ್ದೇಶಿಸಿ ಮಾತನಾಡುತ್ತಾ ಪಂಡಿತ ದೀನ್ ದಯಾಳ್ ಉಪಾಧ್ಯಾಯ ಅವರು ವಿದೇಶಿ ಅನುದಾನಕ್ಕೆ ಯಾವುದೇ ನಿರ್ದಿಷ್ಟ ತಂತುಗಳ ಆಧಾರವಿಲ್ಲದಿದ್ದರೂ ನಮ್ಮ ಅಭಿವೃದ್ಧಿಯ ಕಾರ್ಯ ಯೋಜನೆಗಳಲ್ಲಿ ವಿದೇಶಿ ಬಂಡವಾಳ ನಿರ್ಣಾಯಕ ಸ್ಥಾನ ಪಡೆದಲ್ಲಿ ವಿದೇಶಿ ಒತ್ತಡ ಅದರಲ್ಲಿ ಅಡಕವಾಗಿರುತ್ತದೆ.

ಭಾರತೀಯ ಜನಸಂಘದ ಕಾರ್ಯದರ್ಶಿಗಳು ಭಾರತವು ರಷ್ಯಾದಿಂದ ಸೂಪರ್‌ಸಾನಿಕ್ ಖರೀದಿಯ ಬಗ್ಗೆ ಅಮೆರಿಕಾ ಎತ್ತಿರುವ ಆಕ್ಷೇಪದ ಬಗ್ಗೆ ತಮ್ಮ ತೀವ್ರ ಕಳವಳ ವ್ಯಕ್ತಪಡಿಸುತ್ತಾ ಯಾವುದೇ ಭಾರತದ ರಾಷ್ಟ್ರವಾದಿ ಇಂತಹ ಆಕ್ಷೇಪದ ನಡವಳಿಕೆಗಳನ್ನು ಸಹಿಸಲಾರ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಮುಂದುವರಿದು ಮಾತನಾಡುತ್ತಾ, ರಷ್ಯಾದಿಂದ ಭಾರತವು ಮಿಗ್ ಸೂಪರ್‌ಸಾನಿಕ್ ಖರೀದಿ ಹಿನ್ನೆಲೆಯಲ್ಲಿ ಅಮೆರಿಕಾ ವಿದೇಶಿ ಅನುದಾನ ಕಡಿತ ಮಾಡುತ್ತಿರುವ ನಡವಳಿಕೆಯು ನಮ್ಮ ರಾಜಕೀಯ ವ್ಯವಸ್ಥೆಯ ಮೇಲೆ ಒತ್ತಡ ಹೇರದ ನೇರ ಬಂಡವಾಳ ಅಥವಾ ವಿದೇಶಿ ಅನುದಾನ ದೇಶದೊಳಕ್ಕೆ ಹರಿದು ಬರುವುದಿಲ್ಲ ಎಂದು ಸ್ಪಷ್ಟವಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಹೇಗಾದರೂ ಮಾಡಿ ಪ್ರಸ್ತುತ ಸಂದರ್ಭದಲ್ಲಿ ಈ ವಿದೇಶಿ ವಿನಿಮಯದ ಕೊರತೆಯ ಸಂದರ್ಭವನ್ನು ಭಾರತವು ಸರಿದೂಗಿಸಿಕೊಂಡು ಹೋಗಬಹುದು. ಆದರೆ ದೂರಗಾಮಿ ನೆಲೆಯಲ್ಲಿ ನಾವು ವಿದೇಶಿ ಹೂಡಿಕೆ ಮತ್ತು ಅನುದಾನ ವಿಷಯಗಳಲ್ಲಿ ನಮ್ಮ ತೀರ್ಮಾನವನ್ನು ಪುನರ್ ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ವಿದೇಶಿ ವಿನಿಮಯದ ಮೂಲಭೂತ ವಿಷಯಗಳನ್ನು ವಿಮರ್ಶಿಸುತ್ತಾ ಮಾತನಾಡಿದ ಶ್ರೀ ಉಪಾಧ್ಯಾಯ ಅವರು ವಿದೇಶಿ ಹೂಡಿಕೆಗಳಲ್ಲಿ ಒಳಗೊಳ್ಳಬಹುದಾದ ರಾಜಕೀಯ ಒತ್ತಡಗಳ ಹೊರತಾಗಿಯೂ ಅದು ನಮ್ಮ

ಆರ್ಥಿಕ ಬೆಳವಣಿಗೆಗಳ ಮೇಲೆ ಗಂಭೀರ ಪರಿಣಾಮ ಬೀರಬಲ್ಲದು, ವಿದೇಶಿ ತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳುವ ಮೂಲಕ ನಾವು ಕೇವಲ ಉತ್ಪಾದನೆ ಮತ್ತು ಬಳಕೆಯ ಅಗತ್ಯತೆಯ ನಡುವಿನ ಅಂತರವನ್ನಷ್ಟೇ ಅಲ್ಲ ಬಳಕೆಯಾಗದ ಹೇರಳ ಸಂಪನ್ಮೂಲಗಳನ್ನು ನಿರ್ಮಿಸುತ್ತಿದ್ದೇವೆ. ಇದೇ ಕಾರಣಕ್ಕಾಗಿ ಕಳೆದ ೧೪ ವರ್ಷಗಳಲ್ಲಿ ಬಹಳ ದೊಡ್ಡ ಮೊತ್ತದ ವಿದೇಶಿ ಅನುದಾನ ಹರಿದು ಬಂದ ಹೊರತಾಗಿಯೂ ಬಹಳ ದೊಡ್ಡ ಮಟ್ಟದಲ್ಲಿ ನಿರುದ್ಯೋಗ ಹೆಚ್ಚಿದೆ ಮತ್ತು ಬಂಡವಾಳದ ಬಳಕೆ ಆಗುತ್ತಿಲ್ಲ. ರೂಪಾಯಿಯಲ್ಲಿ ಮರುಪಾವತಿ ವ್ಯವಸ್ಥೆಯನ್ನು ಮೀರುವಲ್ಲಿ ನೆರವಾಗಬಹುದು. ಆದರೆ ರಾಜಕೀಯ ವ್ಯವಸ್ಥೆಯನ್ನು ಒತ್ತಡಕ್ಕೊಳಪಡಿಸುವ ವಿದೇಶಿ ಹೂಡಿಕೆಗಳು ಈ ಒಪ್ಪಂದಗಳಡಿಯಲ್ಲಿ ಮಾಡಬೇಕಾದ ಖರೀದಿಯಲ್ಲಿ ತಾರತಮ್ಯವನ್ನನುಸರಿಸಿದಲ್ಲಿ ಈ ಸಮಸ್ಯೆ ಉಲ್ಬಣಗೊಳ್ಳಬಹುದು.

* * * * *

# ಹಿಂದೂಸ್ಥಾನವು ಪಾಕಿಸ್ತಾನದ ಮೇಲೆ ಆಕ್ರಮಣ ಮಾಡುವುದೇ?

## ಸುಳ್ಳುಗಾರ ಪಾಕಿಸ್ತಾನದ ಬಲೆಗೆ ಬಿದ್ದ ಅಮೆರಿಕ

### ಲಕ್ನೋ ವಿಶ್ವವಿದ್ಯಾಲಯದ ಯೂನಿಯನ್ನಿನಲ್ಲಿ ದೀನ್ ದಯಾಳ ಉಪಾಧ್ಯಾಯರಿಂದ ಬಯಲಾದ ರಹಸ್ಯ

ಯೂರೋಪ್, ಅಮೆರಿಕ ಮತ್ತು ಆಫ್ರಿಕಾ ದೇಶಗಳಲ್ಲಿ ಪ್ರವಾಸ ಮಾಡಿ ಬಂದಿರುವ ಅಖಿಲ ಭಾರತೀಯ ಜನಸಂಘದ ಮುಖ್ಯ ಕಾರ್ಯದರ್ಶಿ ಪಂ. ದೀನ್ ದಯಾಳ್ ಉಪಾಧ್ಯಾಯರು–ಅಮೆರಿಕ ಹಾಗೂ ಯೂರೋಪಿನಲ್ಲಿ ಪತ್ರಿಕೆಗಳು ಪ್ರಕಟಗೊಳ್ಳುವುದು ಬಹಳ ಕಡಿಮೆ. ಆದ್ದರಿಂದ ಇಲ್ಲಿಯ ಸಮಾಚಾರಗಳು ಅಲ್ಲಿ ಸಿಗಲಾರವು. ವಿದ್ಯಾರ್ಥಿ ನಾಯಕರು ಜೈಲಿನಲ್ಲಿ ಬಂಧಿತರಾದ ಸಮಾಚಾರವೂ ಇಲ್ಲಿಗೆ ಬಂದ ನಂತರವೇ ತಿಳಿಯಿತು. ಅಲ್ಲಿದ್ದಾಗ ವಿದ್ಯಾರ್ಥಿಗಳ ಆಂದೋಲನದ ವಿಷಯವಾಗಿ ಸಂಕ್ಷಿಪ್ತ ಸಮಾಚಾರ ಸಿಕ್ಕಿತ್ತು. ಆದರೆ ಅದಕ್ಕೆ ಸಂಬಂಧಿಸಿದಂತೆ ವಿಶೇಷ ವಿವರಣೆ ಸಿಗಲಿಲ್ಲ ಎಂಬುದಾಗಿ ಲಕ್ನೊ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಯೂನಿಯನ್ನಿನಿಂದ ಆಯೋಜಿಸಲ್ಪಟ್ಟ ವಿಶ್ವವಿದ್ಯಾಲಯ ಘಟಿಕೋತ್ಸವ ಸಮಾರಂಭದಲ್ಲಿ ಭಾಷಣ ಮಾಡುತ್ತಾ ಹೇಳಿದರು.

### ಪಾಕ್ ಮತ್ತು ಚೀನಾದ ವಿಷಯವಾಗಿಯೇ ಚರ್ಚೆ

ಅಮೆರಿಕ ಪ್ರವಾಸದಲ್ಲಿದ್ದಾಗ ನಾನು ಅನೇಕ ವಿಶ್ವವಿದ್ಯಾಲಯಗಳಿಗೆ ಹೋಗಿದ್ದೆ. ಅಲ್ಲಿನ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರೊಂದಿಗೆ ಚರ್ಚಿಸಿದ್ದೆ. ರಾಜನೀತಿ ಮತ್ತು ಅಂತಾರಾಷ್ಟ್ರೀಯ ಅಧ್ಯಯನ ವಿಭಾಗದ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಚರ್ಚೆಯ ಪ್ರಮುಖ ವಿಷಯವು ಚೀನಾ ಹಾಗೂ ಪಾಕಿಸ್ತಾನವನ್ನು ಕುರಿತೇ ಇರುತ್ತಿತ್ತು – ಎಂದರು.

### ಅಮೆರಿಕದ ಜನತೆಯಲ್ಲಿ ಭ್ರಮೆ

ಚೀನಾವು ಭಾರತದ ಮೇಲೆ ಮಾಡಿದ ಆಕ್ರಮಣವನ್ನು ಅಮೆರಿಕ ಮಾನ್ಯ ಮಾಡುತ್ತದೆ. ಅದರ ವಿರುದ್ಧವಾಗಿ ಭಾರತಕ್ಕೆ ಸಹಾಯ ಮಾಡಲು ಸಿದ್ಧವಾಗಿದೆ.

ಆದರೆ ಪಾಕಿಸ್ತಾನದಿಂದಲೂ ಏನಾದರೂ ತೊಂದರೆ ಇದೆ ಎನ್ನುವುದನ್ನು ಅವರು ಒಪ್ಪುವುದಿಲ್ಲ. ಅವರು ಭಾರತದಿಂದ ಪಾಕಿಸ್ತಾನಕ್ಕೆ ತೊಂದರೆ ಇದೆ ಎಂದು ಒಪ್ಪುವರೇ ಹೊರತು ಪಾಕಿಸ್ತಾನದಿಂದ ಭಾರತಕ್ಕೆ ತೊಂದರೆ ಇದೆ ಎಂದು ಒಪ್ಪುವುದೇ ಇಲ್ಲ.

ಒಂದು ಸಂದರ್ಭದಲ್ಲಿ ಒಂದು ಕಷ್ಟವನ್ನು ಮಾತ್ರ ನೋಡಿ ಇನ್ನೊಂದು ಕಷ್ಟವನ್ನು ನೋಡಲಾರದಂಥ ಜನರು ಜಗತ್ತಿನಲ್ಲಿ ಇದ್ದಾರೆ. ಅಂತೆಯೇ ಚೀನಾ ಹಾಗೂ ಪಾಕಿಸ್ತಾನಗಳ ಎರಡು ಆಕ್ರಮಣಗಳ ಕಷ್ಟಗಳಲ್ಲಿ ಒಂದನ್ನು ಮಾತ್ರ ನೋಡುವ, ಇನ್ನೊಂದನ್ನು ನೋಡಲಾರದಂಥ ಕೆಲವರು ಭಾರತದಲ್ಲೂ ಇದ್ದಾರೆ.

ಪಾಕಿಸ್ತಾನವು ಭಾರತಕ್ಕೆ ಬಹಳವಾಗಿ ಹೆದರುತ್ತದೆ ಎಂದು ಒಬ್ಬ ಪ್ರಮುಖ ಸಜ್ಜನನು ಹೇಳಿದ್ದನ್ನು ಕೇಳಿ ತಮಗೆ ತುಂಬ ಆಶ್ಚರ್ಯ ಉಂಟಾಯಿತೆಂದು ಶ್ರೀ ಉಪಾಧ್ಯಾಯರು ಹೇಳಿದರು. ಹಿಂದೂಸ್ಥಾನವು ಪಾಕಿಸ್ತಾನದ ಮೇಲೆ ಆಕ್ರಮಣ ಮಾಡಲಿದೆ ಎಂದು ಟೆಲಿವಿಜನ್ನಿನ ಒಂದು ಸಂದರ್ಶನದಲ್ಲಿ ಪಾಕಿಸ್ತಾನದ ಶ್ರೀ ಅಯೂಬರು ಹೇಳಿದರು. ಆದರೆ ಸತ್ಯ ಸಂಗತಿ ನಿಜವಾಗಿ ವಿರುದ್ಧವಾಗಿದೆ. ಭಾರತವು ಪಾಕಿಸ್ತಾನದ ಮೇಲೆ ಆಕ್ರಮಣ ಮಾಡುವ ಪ್ರಶ್ನೆಯೇ ಏಳುವುದಿಲ್ಲ. ಏಕೆಂದರೆ ನಾವು ಪಾಕಿಸ್ತಾನದಿಂದ ಅಧಿಕೃತವಾದ ಕಾಶ್ಮೀರದ ನೆಲವನ್ನು ಹಿಂದಕ್ಕೆ ಪಡೆಯಲು ಇನ್ನೂ ಸಿದ್ಧರಿಲ್ಲ. ಪಾಕಿಸ್ತಾನದ ನಾಜಿ ನಾಯಕರಾದ ಹಿಟ್ಲರ್ ಮತ್ತು ಗೋಲ್ಬೆಲ್ಸ್‌ರ ಅನುಸರಣೆ ಮಾಡುತ್ತಾ ಭಾರತವು ಪಾಕಿಸ್ತಾನದ ಮೇಲೆ ಆಕ್ರಮಣ ಮಾಡುತ್ತದೆ ಎಂದು ಅವರು ಅಪಪ್ರಚಾರ ಮಾಡುತ್ತಿದ್ದಾರೆ. ಇಂಥ ಪ್ರಚಾರ ಪರಿಣಾಮವಾಗಿ ಅಮೆರಿಕದ ಸಾಮಾನ್ಯ ಪ್ರಜೆ ಪಾಕಿಸ್ತಾನವನ್ನು ಆಕ್ರಮಣಕಾರಿ ಎಂದು ಭಾವಿಸದೆ ಭಾರತವನ್ನೇ ಆಕ್ರಮಣಕಾರಿ ಎಂದು ತಿಳಿದಿದೆ.

**ಭಾರತವು ಪಾಕಿಸ್ತಾನದ ಮೇಲೆ ಆಕ್ರಮಣ ಮಾಡುವುದಿಲ್ಲ**

ಪಾಕಿಸ್ತಾನವು ಭಾರತಕ್ಕೆ ಹೆದರಬೇಕಾದ ಪ್ರಮೇಯವೇ ಇಲ್ಲ, ಏಕೆಂದರೆ ಭಾರತದ ಹಾಲಿ ನಾಯಕರ ಒಪ್ಪಿಗೆಗೆ ಅನುಸಾರವಾಗಿಯೇ ಪಾಕಿಸ್ತಾನದ ನಿರ್ಮಾಣವಾಗಿದೆ ಎಂದು ತಾವು ತಿಳಿಸಿದುದಾಗಿ ಶ್ರೀ ಉಪಾಧ್ಯಾಯರು ಹೇಳಿದರು. ಭಾರತವು ಪಾಕಿಸ್ತಾನದ ಮೇಲೆ ಆಕ್ರಮಣ ಮಾಡ ಬಯಸಿದ್ದಿದ್ದರೆ ಬಹಳ ಮುಂಚೆಯೇ ಮಾಡಬಹುದಾಗಿತ್ತು. ೧೯೪೭ರಲ್ಲಿ ಪಾಕಿಸ್ತಾನವು ಕಾಶ್ಮೀರದ ಮೇಲೆ ಆಕ್ರಮಣ ಮಾಡಿದಾಗ ಭಾರತ ತನ್ನ ಸೈನ್ಯವನ್ನು ಪಶ್ಚಿಮ ಅಥವಾ ಪೂರ್ವ ಪಾಕಿಸ್ತಾನಕ್ಕೆ ಕಳಿಸದೆ ಕಾಶ್ಮೀರಕ್ಕೆ ಮಾತ್ರ ಕಳಿಸಿತ್ತು. ಭಾರತವು ಬಯಸಿದ್ದರೆ ೧೯೫೦ರಲ್ಲಿ ಪೂರ್ವ ಬಂಗಾಳದಲ್ಲಿ ಆದ ತೊಂದರೆಯ ಸಂದರ್ಭದಲ್ಲಿ ತನ್ನ ಸೈನ್ಯವನ್ನು ಢಾಕಾಗೆ ಕಳುಹಿಸಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ.

**ಪಾಕಿಸ್ತಾನವು ಅನಾಕ್ರಮಣ ಒಪ್ಪಂದದ ಪ್ರಸ್ತಾಪವನ್ನು ಒಪ್ಪಿಕೊಳ್ಳಲಿ**

ಪಾಕಿಸ್ತಾನಕ್ಕೆ ಭಾರತದಿಂದ ಬಹಳ ಭಯವಿರುವುದಾದರೆ ಆ ಭಯವನ್ನು ಅಂತ್ಯಗೊಳಿಸಲು ಒಂದು ದಾರಿ ಇದೆ. ಅದೆಂದರೆ ಭಾರತದ ಪ್ರಧಾನ ಮಂತ್ರಿಗಳು ಪ್ರಸ್ತಾಪ ಮಾಡಿರುವ ಭಾರತ–ಪಾಕಿಸ್ತಾನಗಳ ಅನಾಕ್ರಮಣ ಒಪ್ಪಂದವನ್ನು ಅವರು ಒಪ್ಪಿಕೊಳ್ಳಲಿ. ಅವರಿಗೆ ಭಾರತೀಯ ನಾಯಕರಲ್ಲಿ ನಂಬಿಕೆ ಇಲ್ಲವೆಂದಾದರೆ ಭಾರತ–ಅಮೆರಿಕದಿಂದ ಪ್ರಾಪ್ತವಾದ ಸೈನಿಕ ಸಹಾಯವನ್ನು ಪಾಕಿಸ್ತಾನದ ವಿರುದ್ಧ ಪ್ರಯೋಗ ಮಾಡುವಂತಿಲ್ಲವೆಂದು ಪರಸ್ಪರವಾದ ಒಡಂಬಡಿಕೆಯಾಗಿರುವ ಈ ಒಪ್ಪಂದಯನ್ನಾದರೂ ನಂಬಬೇಕು. ಇಷ್ಟೆಲ್ಲಾ ಆದ ನಂತರವೂ ಭಾರತದಿಂದ ಪಾಕಿಸ್ತಾನಕ್ಕೆ ತೊಂದರೆ ಇದೆ ಎನ್ನುವುದಾದರೆ ಅಮೆರಿಕವು ತಾನೇ ಈ ದುಷ್ಪ್ರಚಾರದ ಪರವಾಗಿದೆ ಅಥವಾ ಪಾಕಿಸ್ತಾನದಿಂದ ಪ್ರಭಾವಿತವಾಗಿದೆ ಅಥವಾ ಅವರಿಗೆ ಪಾಕಿಸ್ತಾನದ ಮತ್ತು ತಮ್ಮ ಶಕ್ತಿಯಲ್ಲಿ ವಿಶ್ವಾಸವಿಲ್ಲ ಎಂದು ಅಮೆರಿಕದ ಜನರೊಂದಿಗೆ ಮಾತನಾಡುತ್ತಿದ್ದಾಗ ನಾನು ಹೇಳಿದೆ ಎಂದು ಜನಸಂಘದ ನಾಯಕರು ಹೇಳಿದರು

ಜನ ಪಾಕಿಸ್ತಾನದೊಂದಿಗೆ ಒಪ್ಪಂದದ ಮಾತಾಡುತ್ತಾರೆ. ಭಾರತವು ಯಾವಾಗಲೂ ಒಪ್ಪಂದದ ಪರವಾಗಿಯೇ ಇದೆ. ಆದರೆ ನಾವು ಭಾರತದ ಹಿತವನ್ನು ಬಲಿಗೊಟ್ಟು ಒಪ್ಪಂದ ಮಾಡಿಕೊಳ್ಳಲಾರೆವು.

**ಆಶ್ಚರ್ಯಚಕಿತರಾದ ವಿಶ್ವವಿದ್ಯಾಲಯದ ಡೀನ್**

ಅಮೆರಿಕದ ಇನ್ನೊಂದು ಆಶ್ಚರ್ಯಜನಕವಾದ ಪ್ರಚಾರವೆಂದರೆ ಪಾಕಿಸ್ತಾನದ ಹುಟ್ಟು ಹಿಂದು ಮುಸ್ಲಿಮ್ ಆಧಾರದ ಮೇಲೆ ಆಗಿತ್ತು ಎನ್ನುವುದೇ ಆಗಿದೆ. ಅವರು ತಿಳಿದುಕೊಂಡಿರುವುದೇನೆಂದರೆ ಕಾಶ್ಮೀರದಲ್ಲಿ ಮಾತ್ರ ಕೆಲವು ಮುಸಲ್ಮಾನರಿದ್ದಾರೆ. ಭಾರತದಲ್ಲಿ ಅಲ್ಲ.

ಇದಕ್ಕೆ ಸಂಬಂಧಿಸಿದಂತೆ ಒಂದು ಹಾಸ್ಯಾಸ್ಪದವಾದ ಉದಾಹರಣೆ ಕೊಡುತ್ತಾ ಅವರು ಹೀಗೆಂದರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಡೀನ್‌ರೊಂದಿಗೆ ಮಾತನಾಡುತ್ತಿದ್ದಾಗ ವಿದೇಶೀ ವಿದ್ಯಾರ್ಥಿಗಳ ನಿವಾಸಕ್ಕೆ ಸಂಬಂಧಿಸಿದಂತೆ ತೊಂದರೆಗಳು ಎದುರಾಗುತ್ತವೆ. ಒಬ್ಬ ಯಹೂದಿ ವಿದ್ಯಾರ್ಥಿ ಇನ್ನೊಬ್ಬ ಅರಬ್ ವಿದ್ಯಾರ್ಥಿಯೊಂದಿಗೆ ಅಥವಾ ಒಬ್ಬ ಅರಬ್ ವಿದ್ಯಾರ್ಥಿ ಇನ್ನೊಬ್ಬ ಯಹೂದಿ ವಿದ್ಯಾರ್ಥಿಯೊಂದಿಗೆ ಇರಲು ಇಷ್ಟಪಡುವುದಿಲ್ಲ. ಯಹೂದಿ ವಿದ್ಯಾರ್ಥಿ ಮತ್ತು ಕ್ರಿಶ್ಚಿಯನ್ ವಿದ್ಯಾರ್ಥಿಗಳೂ ಪರಸ್ಪರ ಕಾರ್ಯಕ್ರಮಗಳಲ್ಲಿ ಸಮ್ಮಿಲಿತರಾಗುವುದಿಲ್ಲ.

ಆದರೆ ಭಾರತ ಮತ್ತು ಪಾಕಿಸ್ತಾನೀ ವಿದ್ಯಾರ್ಥಿಗಳ ವಿಷಯದಲ್ಲಿ ಇಂಥ ಸಮಸ್ಯೆ ಉತ್ಪನ್ನವಾಗುವುದಿಲ್ಲ. ಅವರೀರ್ವರು ಪರಸ್ಪರ ಬಹಳ ಚೆನ್ನಾಗಿ ಬೆರೆಯುತ್ತಾರೆ.

ಒಬ್ಬ ವಿದ್ಯಾರ್ಥಿ ಪಾಕಿಸ್ತಾನೀಯನೋ ಅಥವಾ ಭಾರತೀಯನೋ ಎನ್ನುವುದನ್ನು ಕೇವಲ ಆತನ ಹೆಸರಿನಿಂದ ಗುರುತು ಹಿಡಿಯಬಹುದು, ಎಂದು ನಾನು ತಿಳಿಸಿದಾಗ ಅವರಿಗೆ ಬಹಳ ಆಶ್ಚರ್ಯವಾಯಿತು. ಹೆಸರಿನಿಂದ ಅವನು ಭಾರತೀಯನೋ ಅಥವಾ ಪಾಕಿಸ್ತಾನಿಯೋ ಎಂಬುದನ್ನು ಹೇಗೆ ಪತ್ತೆ ಹಚ್ಚುತ್ತೀರಿ ಎಂದು ನಾನು ಕೇಳಿದೆ. ಇದಂತೂ ಸರಳ, ಯಾವ ವಿದ್ಯಾರ್ಥಿಯ ಹೆಸರು ಹಿಂದೂವಿನಂತೆ ಇರುತ್ತದೋ ಅವನು ಭಾರತೀಯ ಮತ್ತು ಯಾವ ವಿದ್ಯಾರ್ಥಿಯ ಹೆಸರು ಮುಸಲ್ಮಾನನಂತಿರುವುದೋ ಅವನು ಪಾಕಿಸ್ತಾನಿ ಎಂದರು. ಆಗ ನಾನು ಹೇಳಿದೆ ಭಾರತದಲ್ಲೂ ಮುಸಲ್ಮಾನರಿದ್ದಾರೆ. ಅವರು ಕೇಳಿದರು – ಇದು ಹೇಗೆ ಸಾಧ್ಯ? ಆಗ ಭಾರತೀಯ ವಿದ್ಯಾರ್ಥಿಗಳ ವಿಶ್ವವಿದ್ಯಾಲಯದ ಪಟ್ಟಿಯನ್ನು ತರಿಸಲಾಯಿತು. ಅದರಲ್ಲಿ ಹತ್ತು ಮುಸಲ್ಮಾನ ವಿದ್ಯಾರ್ಥಿಗಳ ಹೆಸರನ್ನು ನೋಡಿ ಅವರು ಮತ್ತಷ್ಟು ಆಶ್ಚರ್ಯಗೊಂಡರು.

ಪಾಕಿಸ್ತಾನದವರಿಂದ ಈ ರೀತಿಯಾಗಿ ಮಾಡಲ್ಪಟ್ಟ ಹುಸಿ ಪ್ರಚಾರದಿಂದ ವಿದೇಶಗಳಲ್ಲಿ ಪಾಕಿಸ್ತಾನದ ಸ್ಥಾನವು ಪ್ರಬಲಗೊಂಡಿದೆ.

**ತುಷ್ಟೀಕರಣದಿಂದ ಪರಿವರ್ತನೆ ಅಸಂಭವ**

ಚೀನಾವನ್ನು ಎದುರಿಸಬೇಕಾದರೆ ನಾವು ಪಾಕಿಸ್ತಾನದೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ಅಗತ್ಯ ಎಂದು ಕೆಲವರು ಹೇಳುತ್ತಾರೆ – ಎಂದು ಶ್ರೀ ಉಪಾಧ್ಯಾಯರು ಹೇಳಿದರು. ಆದರೆ ಪಾಕಿಸ್ತಾನದೊಂದಿಗೆ ಒಪ್ಪಂದ ಮಾಡಿಕೊಂಡದ್ದೇ ಆದರೆ ಭಾರತವು ಎಂದಿಗೂ ಚೀನಾವನ್ನು ಎದುರಿಸಲಾರದು. ನಾವು ಒಬ್ಬ ಆಕ್ರಮಣಕಾರಿಯ ಮುಂದೆ ತಲೆ ಬಾಗಿಸಿ ಇನ್ನೊಬ್ಬ ಆಕ್ರಮಣಕಾರಿಯನ್ನು ಎದುರಿಸಲಾರೆವು. ಭಾರತವು ಎರಡೂ ಆಕ್ರಮಣಗಳನ್ನು ಸವಾಲಾಗಿ ಸ್ವೀಕರಿಸಿ ದೃಢವಾಗಿ ಎದುರಿಸಬೇಕು.

ಭಾರತದ ವಿರೋಧವನ್ನು ಆಧಾರವಾಗಿಟ್ಟುಕೊಂಡೇ ಪಾಕಿಸ್ತಾನದ ನಿರ್ಮಾಣವಾಗಿದೆ. ಅಲ್ಲಿ ಅನೇಕ ಸಲ ಸರಕಾರಗಳು ಬದಲಾಗಿವೆ. ಆದರೆ ಭಾರತದ ವಿರುದ್ಧ ಘೋಷಣೆಗಳು ನಿರಂತರ ಆಗುತ್ತಲೇ ಇವೆ. ಮತ್ತು ಮುಂದೆಯೂ ಆಗುತ್ತಲೇ ಇರುತ್ತವೆ. ಪಾಕಿಸ್ತಾನದೊಂದಿಗೆ ಒಪ್ಪಂದ ಆಗುವುದು ಸಾಧ್ಯವಿಲ್ಲ. ನಾಲೆಯ ನೀರಿನ ಒಪ್ಪಂದ ಸಾಧ್ಯವಾಗಲಿಲ್ಲ, ಅಲ್ಲದೆ ಉಳಿದ ಅನೇಕ ಒಪ್ಪಂದಗಳು ಭಾರತ ವಿರೋಧಿ ಪ್ರವೃತ್ತಿಯನ್ನು ಬದಲಿಸಲಾಗಿಲ್ಲ.

ಒಂದು ವೇಳೆ ಪರಿವರ್ತನೆ ಆಗುತ್ತದೆ ಎಂದು ಭಾವಿಸುವುದಾದರೆ ಆಗಲೂ ಚೀನಾವನ್ನು ಎದುರಿಸಬೇಕಾದರೆ ಸೈನಿಕ ಸಾಮರ್ಥ್ಯ, ರಾಷ್ಟ್ರೀಯ ಐಕ್ಯತೆ ಮತ್ತು

ದೃಢ ಸಂಕಲ್ಪಗಳು ಅತ್ಯಾವಶ್ಯಕ. ಇವುಗಳಲ್ಲಿ ಯಾವೊಂದರ ಕೊರತೆ ಉಂಟಾದರೂ ಉಳಿದವುಗಳು ವ್ಯರ್ಥ. ಯಾರೊಬ್ಬರೊಂದಿಗೆ ಒಪ್ಪಂದ ಮಾಡಿಕೊಂಡರೂ ರಾಷ್ಟ್ರೀಯತೆ ಮತ್ತು ಸಂಕಲ್ಪಗಳು ದುರ್ಬಲವಾಗುವುವು. ಪಾಕಿಸ್ತಾನದೊಂದಿಗೆ ಒಪ್ಪಂದ ಮಾಡಿಕೊಂಡು ಚೀನಾವನ್ನು ಎದುರಿಸಲಾಗದು.

**ಜರ್ಮನಿಯಲ್ಲಿ ಏಕೀಕರಣದ ಪ್ರಬಲ ಭಾವನೆ**

ಶ್ರೀ ಉಪಾಧ್ಯಾಯರು ಜರ್ಮನಿಯ ತಮ್ಮ ಅನುಭವವನ್ನು ಪ್ರಸ್ತಾಪ ಮಾಡುತ್ತಾ ಹೇಳಿದರು – ಪೂರ್ವ ಜರ್ಮನಿಯರು ಪಶ್ಚಿಮ ಜರ್ಮನಿಯರೊಂದಿಗೆ ಈಗಲೂ ಐಕ್ಯತೆಯಿಂದಲೇ ಇದ್ದಾರೆ. ಭಾರತ ವಿಭಜನೆಯ ಸಂದರ್ಭದಲ್ಲಿ ಯೋಚಿಸಿದ್ದಂತೆ ಭಾರತ ಪಾಕಿಸ್ತಾನಗಳು ಭವಿಷ್ಯದಲ್ಲಿ ಒಂದಾಗುವುವು ಎಂಬ ಆಲೋಚನೆ ಈಗಲೂ ಇರುವುದಾದರೆ ನಾವು ತಪ್ಪು ಮಾಡುತ್ತಿದ್ದೇವೆ. ಆದರೆ ಜರ್ಮನಿಯಲ್ಲಿ ಐಕ್ಯತೆಯ ಆಸೆ ಇದೆ. ಜರ್ಮನಿಗಳು ಒಂದಾಗಿ ಇರಬೇಕೆಂಬುದೇ ಅವರ ಸಂಕಲ್ಪವಾಗಿದೆ.

**ಅವಿಶ್ರಾಂತ ಪರಿಶ್ರಮವೇ ಪ್ರಗತಿಯ ರಹಸ್ಯ**

ಅಮೆರಿಕದ ಭಾರತೀಯ ವಿದ್ಯಾರ್ಥಿಗಳೊಡನೆ ನಡೆದ ಭೇಟಿಯನ್ನು ವರ್ಣಿಸುತ್ತಾ ಆ ವಿದ್ಯಾರ್ಥಿಗಳು ಪ್ರತಿದಿನ ೧೬ ಗಂಟೆಗಿಂತಲೂ ಹೆಚ್ಚು ಕೆಲಸ ಮಾಡಬೇಕು ಎಂದು ದೂರು ಕೊಟ್ಟರು ಎಂಬುದಾಗಿ ಉಪಾಧ್ಯಾಯರು ಹೇಳಿದರು. ಈ ವಿಷಯವು ಅತ್ಯಂತ ಮಹತ್ವಪೂರ್ಣ ವಿಷಯ. ಇದು ಎಲ್ಲಾ ಪಾಶ್ಚಿಮಾತ್ಯ ದೇಶಗಳಲ್ಲೂ ಹಾಗೂ ಆಫ್ರಿಕಾದಲ್ಲೂ ಜಾರಿಯಲ್ಲಿದೆ. ಆ ದೇಶಗಳ ಸಫಲತೆ ರಹಸ್ಯ ಅವರ ಘೋರ ಪರಿಶ್ರಮವೇ ಆಗಿದೆ. ಅಲ್ಲಿನ ಪ್ರತಿಯೊಬ್ಬ ವ್ಯಕ್ತಿ, ವಿದ್ಯಾರ್ಥಿ, ಅಧ್ಯಾಪಕ, ರೈತ, ಶ್ರಮಿಕ, ಇಂಜಿನಿಯರ್, ವ್ಯಾಪಾರಿ, ವೈದ್ಯ, ವಿಜ್ಞಾನಿ ಇತ್ಯಾದಿಗಳೆಲ್ಲರೂ ಘೋರ ಪರಿಶ್ರಮ ಮಾಡುತ್ತಾರೆ. ಕಗ್ಗತ್ತಲ ಖಂಡವೆಂದು ಕರೆಯಲಾಗುವ ಆಫ್ರಿಕಾ ಭಾರತಕ್ಕಿಂತ ಹೆಚ್ಚು ಕ್ರಿಯಾಶೀಲವಾಗಿದೆ. ಅಮೆರಿಕನ್ನರು ತಾವು ಜಗತ್ತಿನ ಎಲ್ಲರಿಗಿಂತ ಮುಂದೆ ಇರಬೇಕೆನ್ನುವ ಭಾವನೆಯಿಂದ ಕೆಲಸ ಮಾಡುತ್ತಾರೆ. ಬೇರೆ ದೇಶಗಳನ್ನು ಕೀಳಾಗಿ ಮಾಡಿ ಅಲ್ಲ, ಬದಲಾಗಿ ಎಲ್ಲರಿಗಿಂತ ಮುಂದೆ ಇರುವ ಗುರಿಯಿಂದ ದುಡಿಯುತ್ತಾರೆ.

ರಷ್ಯಾ ದೇಶವು ಗೋಧಿ ಕೇಳಿದಾಗ ಅಮೆರಿಕಾದವರು ಆನಂದಪಟ್ಟರು. ತಾವು ರಷ್ಯಾದ ಜನರ ಹೊಟ್ಟೆ ತುಂಬಿಸಬಲ್ಲೆವು ಎಂದು ಗರ್ವಪಟ್ಟರು. ಕೆಲವರು ರಷ್ಯಾಕ್ಕೆ ಗೋಧಿ ಕೊಡದಿರುವಂತೆ ಸಲಹೆ ಕೊಟ್ಟರು. ಹಾಗೆ ಕೊಡದಿದ್ದರೆ ಅವರು

ಹಸಿದುಕೊಂಡಿರಬೇಕಾಗುತ್ತದೆ. ಇದರಿಂದ ರಷ್ಯಾದಲ್ಲಿ ಕ್ರಾಂತಿಯಾಗುತ್ತದೆ. ಕ್ರಾಂತಿಯಿಂದ ಖ್ರುಶ್ಚೇವರ ಸರಕಾರ ಮುರಿದುಬೀಳುತ್ತದೆ ಹಾಗೂ ಕಮ್ಯುನಿಸಂ ಕೊನೆಗೊಳ್ಳುತ್ತದೆ, ಎಂದರು. ಆದರೆ ಅವರು ಆ ಮೂಲಕ ಕಮ್ಯುನಿಸಂ ಅನ್ನೂ ನಾಶ ಮಾಡುವ ಉದ್ದೇಶ ತಮಗಿಲ್ಲ ಎಂದರು. ತಾವು ಉನ್ನತ ಮಟ್ಟದಲ್ಲಿದ್ದೇವೆ. ಎನ್ನುವುದನ್ನು ಪ್ರಪಂಚಕ್ಕೆ ತೋರಿಸುವ ಉದ್ದೇಶದಿಂದಲೇ ಅವರು ಕ್ಯೂಬಾದಲ್ಲಿ ಭೂಕಂಪವಾದಾಗ, ಭಾರತದ ಮೇಲೆ ಚೀನಾದ ಆಕ್ರಮಣ ವಿರುದ್ಧವೂ ಸಹಾಯ ಮಾಡಿದರು. ಅವರ ಈ ಉನ್ನತಿ ಹಾಗೂ ಪ್ರಗತಿಯ ರಹಸ್ಯ ಘೋರ ಪರಿಶ್ರಮವೇ ಆಗಿದೆ. ಅಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ೧೬ ಗಂಟೆ ಅಥವಾ ಹೆಚ್ಚು ಸಮಯ ಕೆಲಸ ಮಾಡುತ್ತಾನೆ. ಇದರ ಫಲವಾಗಿ ಅವರ ಸಮೃದ್ಧಿ ಮತ್ತು ಪ್ರಗತಿ ಉಂಟಾಗಿದೆ.

* * * * *

# ತಿದ್ದುಪಡಿಯ ಭಾವನೆಗೆ ಬೆಂಬಲ ಹಾಗೂ ಉತ್ತರಾಧಿಕಾರತ್ವದ ಮಸೂದೆಯ ಬಗೆಗೆ ಟೀಕೆ

**ಜನಸಂಘ ಪ್ರಧಾನ ಕಾರ್ಯದರ್ಶಿಯಿಂದ**

ತಮ್ಮ ಬೊಂಬಾಯಿ, ಮಹಾರಾಷ್ಟ್ರ, ಮರಾಠವಾಡಾ ಪ್ರವಾಸದಿಂದ ಮಾರ್ಚ್‌ನಲ್ಲಿ ಮರಳಿದ ಜನಸಂಘದ ಕಾರ್ಯದರ್ಶಿಗಳಾದ ಶ್ರೀ ದೀನ್ ದಯಾಳ್ ಉಪಾಧ್ಯಾಯರು ಗೋವಾದ ವಿಷಯಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕ ಅಭಿಪ್ರಾಯ ತುಂಬ ಉದ್ವೇಗಪೂರ್ಣವಾಗಿತ್ತೆಂದು ತಿಳಿಸಿದರು. ಶ್ರೀ ಹೇಮಂತ್ ಸೋಮನ್ ಅವರು ಗುಜರಾತ್, ಸೌರಾಷ್ಟ್ರ, ಹಾಗೂ ಮಹಾರಾಷ್ಟ್ರಗಳಲ್ಲಿ ಸಂಚರಿಸುತ್ತ ಜನರಿಗೆ ಗೋವಾದ ನಿಜವಾದ ಪರಿಸ್ಥಿತಿಯ ಬಗ್ಗೆ ಅರಿವು ಮೂಡಿಸುತ್ತಿದ್ದರು.

ಅವರು ಭೇಟಿ ನೀಡಿದ ಪ್ರದೇಶಗಳಲ್ಲಿ ಜನಸಂಘದ ಕೆಲಸವು ತೃಪ್ತಿಕರವಾಗಿ ನಡೆಯುತ್ತಿತ್ತೆಂದು ಅವರು ಹೇಳಿದರು. ನಿರ್ದಿಷ್ಟವಾಗಿ ಮರಾಠವಾಡಾದಲ್ಲಿ ಜನ ಸಂಘದ ಕೆಲಸಕ್ಕೆ ಒಳ್ಳೆಯ ಆಸ್ಪದವಿತ್ತು. ಇಲ್ಲಿ ಮೊದಲು ಬಲಶಾಲಿಯಾಗಿದ್ದ ಪೆಸಂಟ್ಸ್ ಎಂಡ್ ವರ್ಕರ್ಸ್ ಪಾರ್ಟಿಯ ಮುಖಂಡರುಗಳು ಕಾಂಗ್ರೆಸ್ ಅಥವಾ ಕಮ್ಯುನಿಸ್ಟ್ ಪಕ್ಷವನ್ನು ಸೇರಿಕೊಂಡ ಮೇಲೆ ಆ ಪಕ್ಷಕ್ಕೆ ಈಗ ಜೀವವಿಲ್ಲದಂತಾಗಿದೆ. ಜನ ಸಂಘವು ಕಾರ್ಮಿಕರನ್ನೂ ಆಯೋಜಿಸುತ್ತಿದೆಯೆಂದೂ ಅವರು ಹೇಳಿದರು.

ದೀನ್ ದಯಾಳ್‌ರು ಬೊಂಬಾಯಿ ರಾಜ್ಯ ಸಾರಿಗೆ ಹಾಗೂ ಬಾಂಬೇ ಕಡ್ಡಾಯ ಪಾಶ್ಚರೀಕರಣ ಮಸೂದೆಯನ್ನು ನೀಡುತ್ತಿಲ್ಲವೆಂದು ಅವರು ಆರೋಪಿಸಿದರು. ಅವರು ಜನಸಂಘವು ಪಾಶ್ಚರೀಕರಣ ಮಸೂದೆಯನ್ನು ವಿರೋಧಿಸುತ್ತದೆಂದು ಹೇಳಿದರು. ಒಂದೆಡೆ ವೈಜ್ಞಾನಿಕ ಅಭಿಪ್ರಾಯಗಳು ಪಾಶ್ಚರೀಕರಣದಲ್ಲಿ ತಯಾರಿಸಲಾಗುವ ಹಾಲಿನ ಅತೀ ಬಿಸಿಯಾಗುವಿಕೆ ಹಾಗೂ ತಣ್ಣಗಾಗಿಸುವಿಕೆ ಹಾಲಿನ ಪ್ರಮುಖ ಅಂಶಗಳನ್ನು ನಾಶಪಡಿಸುತ್ತದೆಂದು ಹೇಳಿದರೆ ಇನ್ನೊಂದೆಡೆ ಈ ಮಸೂದೆ ಹಾಲು ವ್ಯಾಪಾರದ ಈಗಿನ ವ್ಯವಸ್ಥೆಯನ್ನೂ ನಾಶಪಡಿಸುತ್ತದೆಂದು ಹೇಳಿದರು. ಪ್ರಸ್ತುತ ಇದು ಹೆಚ್ಚೂ ಕಡಿಮೆ ಒಂದು ಸಣ್ಣ ವ್ಯಾಪಾರವಾಗಿದೆ. ಆದರೆ ಕಡ್ಡಾಯ ಪಾಶ್ಚರೀಕರಣದಿಂದ ಈ ಸಂಪೂರ್ಣ ವ್ಯಾಪಾರ

ಶ್ರೀಮಂತರ ಕೈಸೇರುತ್ತಿದ್ದು ಅವರು ಮಾತ್ರ ದುಬಾರಿ ಪಾಶ್ಚರೀಕರಣ ವ್ಯವಸ್ಥೆಯನ್ನು ಹೊಂದಲು ಸಾಧ್ಯವಿರುತ್ತದೆ. ಬಾಂಬೇ ಕಾರ್ಪೋರೇಷನ್ ಕಾಂಗ್ರೆಸ್ ಪಕ್ಷವೂ ಪಾಶ್ಚರೀಕರಣ ಮಸೂದೆಯನ್ನು ವಿರೋಧಿಸಿದ್ದನ್ನು ಅವರು ಸ್ವಾಗತಿಸಿದರು. ಈ ಮಸೂದೆಯನ್ನು ಕೈಬಿಡಲಾಗುತ್ತದೆಂದು ಅವರು ಆಶಿಸಿದರು. ಈ ಮಧ್ಯೆ ಜನಸಂಘವು ಬಾಂಬೇ ಪ್ರಾಂತ್ಯದ ಅನೇಕ ಸ್ಥಳಗಳಲ್ಲಿ ಗೋವಳ ಸಂಘಗಳನ್ನು ಆಯೋಜಿಸುತ್ತಿದೆಯೆಂದು ಅವರು ತಿಳಿಸಿದರು.

ಸಂವಿಧಾನದ ೩ನೇ ಕಾಯಿದೆಗೆ ತಿದ್ದುಪಡಿ ತರುವುದಕ್ಕೆ ಸಂಬಂಧಪಟ್ಟಂತೆ ದೀನ್ ದಯಾಳ್‌ರು ಈ ಮಸೂದೆಯ ಭಾವನೆಯನ್ನು ಸ್ವಾಗತಿಸುವುದಾಗಿ ಹೇಳಿದರು. ಅವರು ಜನಸಂಘವು ಬಡವರ ಪರವಾಗಿದೆಯೆಂದು ತಿಳಿಸಿದರು. ಕಾರ್ಮಿಕರು ಹಾಗೂ ಗ್ರಾಹಕರ ಆಸಕ್ತಿಯಲ್ಲಿ ಅದನ್ನು ನಡೆಸುವ ಅಧಿಕಾರ ಸರ್ಕಾರಕ್ಕಿರಬೇಕೆಂದೂ ಅವರು ತಿಳಿಸಿದರು. ಆದರೆ ಒಂದು ಕಾರ್ಖಾನೆಯನ್ನು ನಡೆಸುವುದು ಆರ್ಥಿಕವಾಗಿ ಅಸಾಧ್ಯವಾದಲ್ಲಿ ಅದು ಮುಚ್ಚಬಹುದು. ಹೀಗಾಗಿ ಜನಸಂಘವು ತಿದ್ದುಪಡಿಯ ಭಾವನೆಯನ್ನು ಸ್ವಾಗತಿಸಿದರೂ ಸಂವಿಧಾನವನ್ನು ಪದೇ ಪದೇ ಬದಲಾಯಿಸುವುದಕ್ಕೆ ಖೇದ ವ್ಯಕ್ತಪಡಿಸಿತು. ಇತ್ತೀಚೆಗಷ್ಟೇ ಇದೇ ಕಾಯಿದೆಗೆ ಒಮ್ಮೆ ತಿದ್ದುಪಡಿ ತರಲಾಗಿತ್ತು. ಸರ್ಕಾರವು ಒಂದು ಸಮಗ್ರ ತಿದ್ದುಪಡಿಯನ್ನು ಪರಿಚಯಿಸಬೇಕಿತ್ತು. ಇನ್ನೊಂದು ಸಮಸ್ಯೆ ಎದುರಾದಲ್ಲಿ ಕಾಯಿದೆಗೆ ಮತ್ತೊಮ್ಮೆ ತಿದ್ದುಪಡಿ ಮಾಡಲಾಗುವುದಿಲ್ಲವೆಂದು ಅವರು ಆಶಿಸಿದರು. ಸರ್ಕಾರವು ತಿದ್ದುಪಡಿಗೆ ಮೊದಲು ಹಾಗೂ ನಂತರ ಪರಿಶೀಲಿಸಬೇಕು ಹಾಗೂ ಸಂವಿಧಾನವನ್ನು ಬೇಕಾಬಿಟ್ಟಿಯಾಗಿ ತಿದ್ದುತ್ತಿರುವಂತೆ ಅನಿಸಬಾರದು ಎಂದು ಅವರು ಹೇಳಿದರು.

ದೀನ್ ದಯಾಳ್‌ರು ಜನಸಂಘವು ಪರಿಹಾರ ನೀಡುವಿಕೆಯಲ್ಲಿ ವಿಶ್ವಾಸ ಹೊಂದಿಲ್ಲವೆಂದು ತಿಳಿಸಿದರು. ಆದರೆ ಆಸ್ತಿಯ ರಾಷ್ಟ್ರೀಕರಣದಿಂದ ಪೀಡಿತರಾದ ವ್ಯಕ್ತಿಗಳಿಗೆ ಬದುಕಿನ ಬೇರೆ ಯಾವುದೇ ಮಾರ್ಗೋಪಾಯಗಳಿಲ್ಲದಿದ್ದಲ್ಲಿ ಅವರಿಗೆ ಪುನರ್ವಸತಿ ಕಲ್ಪಿಸಬೇಕೆಂದು ಅವರು ಹೇಳಿದರು. ಉದಾಹರಣೆಗೆ ಬಲರಾಮಪುರದ ಮಹಾರಾಜರಂಥವರು ಈಗಾಗಲೇ ಕಟ್ಟಡಗಳು, ಸಂಸ್ಥೆಯ ಶೇರುಗಳಂಥ ಅನೇಕ ಸಂಪನ್ಮೂಲಗಳನ್ನು ಹೊಂದಿರುವುದರಿಂದ ಅವರಿಗೆ ಅವರ ಭೂಮಿಯನ್ನು ಕಳೆದುಕೊಂಡಿದ್ದಕ್ಕಾಗಿ ಪರಿಹಾರ ನೀಡುವುದು ಅನುಪಯುಕ್ತವೆಂದು ಅವರು ಹೇಳಿದರು. ಇದೇ ರೀತಿ ರಾಜಸ್ಥಾನದಲ್ಲಿ ಅತ್ಯಂತ ಶ್ರೀಮಂತ ಜಹಗೀರುದಾರರಿಗೂ ಅವರು ನೀಡಿದ ಭೂ ಕಂದಾಯದ ನಾಲ್ಕು ಪಟ್ಟು ನೀಡುವುದನ್ನು ಪ್ರಸ್ತಾಪಿಸಲಾಗಿದೆ. ಅವರಲ್ಲಿ ಕೆಲವರಿಗೆ ೨೦ ಲಕ್ಷ ರೂಪಾಯಿಗಳು ಅಥವಾ ಹೆಚ್ಚು ನೀಡಬೇಕಾಗಿದೆ.

ಅದು ತಪ್ಪು. ಇನ್ನೊಂದೆಡೆ ಬಡವರಿಗೆ ನೀಡುವ ಪರಿಹಾರದಿಂದ ಅವರ ಪುನರ್ವಸತಿ ಸಾಧ್ಯವಾಗುವುದಿಲ್ಲ. ಅಲಹಾಬಾದಿನಲ್ಲಿ ಸುಧಾರಣಾ ಮಂಡಳಿಯು ಗುಡಿಸಲು ವಾಸಿಗಳಿಗೆ ಅತಿ ಕಡಿಮೆ ಹಣ ನೀಡಿ ಅವರನ್ನು ಗುಳೆ ಎಬ್ಬಿಸಿತು ಹಾಗೂ ಅವರಿಗೆ ಗುಡಿಸಲು ಕಟ್ಟಿಕೊಳ್ಳಲು ಯಾವುದೇ ಪರ್ಯಾಯ ಸ್ಥಳವನ್ನೂ ನೀಡಲಿಲ್ಲ. ಅದು ತುಂಬ ಅನ್ಯಾಯ. ಹಿರಾಕುಡ್, ಬಿಲಾಸಪುರ್, ಹಾಗೂ ನಿಜ ಹೇಳಬೇಕೆಂದರೆ ಎಲ್ಲ ಅಣೆಕಟ್ಟಿನ ಸ್ಥಳಗಳಲ್ಲೂ ಬಡ ಜನರನ್ನು ದೊಡ್ಡ ಸಂಖ್ಯೆಯಲ್ಲಿ ಗುಳೆ ಎಬ್ಬಿಸಲಾಯಿತು ಹಾಗೂ ಕೇವಲ ನೆಪಮಾತ್ರದ ಪರಿಹಾರವನ್ನು ನೀಡಿ ಅವರನ್ನು ಕಳಿಸಲಾಯಿತು. ಜನಸಂಘ ಈ ದ್ವಿಗುಣ ಅನ್ಯಾಯವನ್ನು ವಿರೋಧಿಸಿತ್ತು.

ಹಿಂದು ಉತ್ತರಾಧಿಕಾರತ್ವದ ಮಸೂದೆಗೆ ಸಂಬಂಧಪಟ್ಟಂತೆ ದೀನ್ ದಯಾಳರು ಎಲ್ಲ ಪ್ರಜೆಗಳಿಗೂ ಅನ್ವಯವಾಗದ ಸಾಮಾಜಿಕ ಶಾಸನಗಳನ್ನು ಅವರು ಸೈದ್ಧಾಂತಿಕವಾಗಿ ವಿರೋಧಿಸುವುದಾಗಿ ಹೇಳಿದರು. ಅವರು ಒಂದು ಸಾರ್ವತ್ರಿಕ ರಾಷ್ಟ್ರೀಯ ನಾಗರಿಕ ಕಾನೂನಿಗಾಗಿ ಮನವಿ ಮಾಡಿದರು. ಪ್ರಸ್ತುತ ಮಸೂದೆಯ ಅರ್ಹತೆಗಳ ಬಗ್ಗೆ ಮಾತನಾಡುತ್ತ ಅವರು ಅದು ಸಾಮಾಜಿಕ ಭದ್ರತೆಯ ಬದಲಾಗಿ ಅಭದ್ರತೆಯನ್ನು ಸೃಷ್ಟಿಸುವುದಾಗಿ ಹೇಳಿದರು. ಬಹಳಷ್ಟು ಪುರುಷರಿಗೆ ಆಸ್ತಿಯೇ ಇಲ್ಲದಿರುವುದರಿಂದ ಮಗಳಿಗೆ ಪಾಲು ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಅವರು ಹೇಳಿದರು. ಪ್ರಸ್ತುತ ಪುರುಷರು ಅವರ ಪುತ್ರಿಯರ ವಿವಾಹ ನೆರವೇರಲು ಸಾಲವನ್ನೂ ಮಾಡುತ್ತಾರೆ. ಈ ಮಸೂದೆ ಸಹೋದರಿಯರೆಡೆಗಿನ ಸಹೋದರರ ಕರ್ತವ್ಯಪರತೆಯನ್ನು ದುರ್ಬಲಗೊಳಿಸುತ್ತದೆ ಹಾಗೂ ಹುಡುಗಿಯರಿಗೆ ವೇದನೆ ತಂದೊಡ್ಡುತ್ತದೆ.

* * * * *

# ನೆಹರೂ – ಕಮ್ಯುನಿಸ್ಟರ ಮೊದಲ ಸ್ನೇಹಿತ

ಮೊನ್ನೆ ಸ್ನೇಹಿತನೊಬ್ಬ ಹೀಗೆ ಹೇಳಿದ: ಭಾರತದಲ್ಲಿ ಸಮಾಜವಾದವೂ ಒಂದು ಅನಿಷ್ಟ, ಕಿರಿಕಿರಿ ಉಂಟುಮಾಡುವಂತಹುದು, ಆದರೆ, ಸಮಾಜವಾದಿ ಪಕ್ಷದ ಕಾರ್ಯಕರ್ತನಾಗಿ ನಾನು ಅದನ್ನು ಟೀಕಿಸಲಾಗುವುದಿಲ್ಲ. ಯಾವುದೇ ವಿಷಯ, ಸಮಸ್ಯೆಗಳನ್ನು ಹಿಂದಿನ ಕಾರಣದ ಅರ್ಥಗ್ರಹಣದಿಂದಲ್ಲ ಆದರೆ ವ್ಯಾವಹಾರಿಕ ಮೌಲ್ಯದಿಂದ ತೀರ್ಮಾನಿಸಬೇಕಾದ ಕಾಲ ಈಗ ಬಂದಿದೆ. ಜನತೆಯ ಹಾಗೂ ದೇಶದ ಒಳಿತು ಮಾತ್ರವೇ ನಮ್ಮ ನಂಬಿಕೆಯಾಗಿರಬೇಕು. ಮೊದಲು ನಾವು ಸಮೃದ್ಧಿಯಾಗಿ ಉತ್ಪಾದಿಸೋಣ, ನಂತರ ನಮ್ಮ ಅರ್ಥವ್ಯವಸ್ಥೆಯೊಡನೆ ಪ್ರಯೋಗ ಮಾಡೋಣ. ನಾವು ಅಭಾವವಿರುವಾಗ– ಕ್ಷಾಮವಿರುವಾಗ– ಪ್ರಯೋಗ ನಡೆಸಿದರೆ ಗೊಂದಲದಲ್ಲಿ ಪರ್ಯವಸಾನ ಹೊಂದಬಹುದು. ಏಕೆಂದರೆ, ಯಶಸ್ವಿಯಾಗುವ ಪ್ರತಿಯೊಂದು ಪ್ರಯೋಗದ ಹಿಂದೆಯೂ ಹತ್ತು ವೈಫಲ್ಯಗಳಿರುತ್ತವೆ".

ಕೇರಳದ ಪರಿಸ್ಥಿತಿಯನ್ನು ವಿವರಿಸುತ್ತಾ ಶ್ರೀ ದೀನ್ ದಯಾಳ್ ಹೇಳಿದರು: "ಈಗಿನ್ನೂ ಕೇರಳವು ತೀಕ್ಷ್ಣವಾದ ಚಳುವಳಿಯ ಹಿಡಿತದಲ್ಲಿದೆ. ಕಮ್ಯುನಿಸ್ಟರು ಸಂವಿಧಾನದ ಹೆಸರಿನಲ್ಲಿ ಪ್ರತಿಜ್ಞೆ ಮಾಡುತ್ತಾರೆ. ಆದರೆ ನಮ್ಮ ಪ್ರಜಾಸತ್ತಾತ್ಮಕ ಸಂವಿಧಾನದಲ್ಲಿ ಅವರ ಶ್ರದ್ಧೆಯು, ದೇವರಲ್ಲಿ ಭಸ್ಮಾಸುರನ ಶ್ರದ್ಧೆಯಂತಿದೆ. ಅಮರತ್ವದ ವರ (ಭರವಸೆ)ವನ್ನು ಗಳಿಸಿದ ನಂತರ ಅವನು ಮಹಾದೇವ ಶಿವನನ್ನೇ ಸುಡಲು ಸಿದ್ಧನಾದ"!

ಆದಾಗ್ಯೂ, ಪ್ರಜಾಸತ್ತಾತ್ಮಕ ವಿರೋಧವು ನೇರ ಕ್ರಿಯೆಗೇ ಇಳಿದಿರುವುದನ್ನು ಗಮನಿಸಲು ವಿಷಾದವಾಗುತ್ತದೆ. ಸರ್ಕಾರದ ಅನೇಕ ದುಷ್ಕಾರ್ಯಗಳ ಬಗೆಗೆ, ಒಂದು ಚಳುವಳಿಯನ್ನು ನಿರ್ಮಿಸಬೇಕಾಗಿತ್ತು, ಮತ್ತು ಕಮ್ಯುನಿಸ್ಟ್ ಪಕ್ಷವು ಷಡ್ಯಂತ್ರ, ಸಂಚುಗಳ ಪಕ್ಷವೆಂದು ಅದರ ಬಗೆಗೆ ದೇಶಾದ್ಯಂತ ಒಂದು ಚಳುವಳಿಯನ್ನು ಹಮ್ಮಿಕೊಳ್ಳಬೇಕಾಗಿತ್ತೆಂದು ನಾವು ಭಾವಿಸುತ್ತೇವೆ:

ಸದ್ಯದ ಪರಿಸ್ಥಿತಿಯಲ್ಲಿ ಈಗಿರುವಂತೆ, ಕೇರಳದಲ್ಲಿ ಮುಖ್ಯವಾಗಿ, ತನ್ನ ಕೇಂದ್ರ ಕಾರ್ಯಾಲಯವು ರೋಮ್‌ನಲ್ಲಿರುವ ಕೇರಳದ ಚರ್ಚ್ ಮತ್ತು ತನ್ನ ಕೇಂದ್ರ ಕಾರ್ಯಾಲಯವು ಮಾಸ್ಕೋದಲ್ಲಿರುವ ಕೇರಳದ ಕಮ್ಯುನಿಸಮ್‌ಗಳ

ನಡುವೆ ಸಂಘರ್ಷವಿದೆ. ಈ ಎರಡರ ನಡುವೆ, ರಾಷ್ಟ್ರೀಯ ಶಕ್ತಿಗಳು ವಿಭಜಿತಗೊಂಡಿವೆ. ಇವರಲ್ಲಿ ಯಾರೇ ಜಯಗಳಿಸಿದರೂ ಹಿಂದೂಗಳು ಸೋಲನ್ನನುಭವಿಸುತ್ತಾರೆ. ಇದು ನನಗೆ ಹದಿನೆಂಟನೆಯ ಶತಮಾನದ ಹಿಂದೂ ರಾಜರನ್ನು ನೆನಪಿಗೆ ತರುತ್ತದೆ. ಒಮ್ಮೆ ಬ್ರಿಟಿಷರ ಪರ, ಒಮ್ಮೆ ಫ್ರೆಂಚರ ಪರವಾಗುತ್ತಿದ್ದರು ಇವರು. ಅವರಲ್ಲಿ ಯಾರೇ ಜಯಗಳಿಸಿದರೂ ಸೋಲುತ್ತಿದ್ದವರು ಹಿಂದೂ ರಾಜರು. ದೇಶದಲ್ಲಿ ವಿದೇಶೀ ಶಕ್ತಿಗಳನ್ನು ದಮನಗೊಳಿಸಲು ಒಂದೇ ಒಂದು ದಾರಿಯೆಂದರೆ ರಾಷ್ಟ್ರೀಯ ಶಕ್ತಿಗಳನ್ನು ಒಂದುಗೂಡಿಸುವುದು. ಕಮ್ಯುನಿಸಂ ಒಂದು ಆಪತ್ತು ಅದನ್ನು ಸೋಲಿಸಲೇಬೇಕು. ಆದರೆ ಅದನ್ನು ಸಂವಿಧಾನಾತ್ಮಕವಾಗಿ ಸೋಲಿಸಬೇಕೆಂದು ನಾವು ಸೂಚಿಸುತ್ತೇವೆ.

ದೇಶದಲ್ಲಿ ಕಮ್ಯುನಿಸ್ಟ್ ಶಕ್ತಿಗೆ ನೆರವಾಗುತ್ತಿರುವ ಅತ್ಯಂತ ಹೆಚ್ಚಿನ ಒಂದೇ ಒಂದು ಸಹಕಾರೀ ಅಂಶವೆಂದರೆ ಪ್ರಧಾನ ಮಂತ್ರಿಯವರು ಅದರ ಬಗೆಗೆ ತಳೆದಿರುವ ಮೃದುಧೋರಣೆ. ಕಮ್ಯುನಿಸಮ್ ಸರಿಯಾದದ್ದೇ ಆಗಿದೆ ಆದರೆ ಭಾರತದ ಕಮ್ಯುನಿಸ್ಟರು ಮಾತ್ರ ಕೆಟ್ಟವರೆಂಬ ಅವರ ಸಿದ್ಧಾಂತವು ದೇಶದಲ್ಲಿ ಕಮ್ಯುನಿಸಮ್ ಅನ್ನು ಗೌರವಾರ್ಹವನ್ನಾಗಿ ಮಾಡಿದೆ. ಅವರು ಮತ್ತು ಕಾಂಗ್ರೆಸ್ಸಿನ ಇತರ ಅವರ ಸಹ ಪ್ರಯಾಣಿಕರು C.P.I. ನ ನಿಜವಾದ ಶಕ್ತಿಯಾಗಿದ್ದಾರೆ. ಈ ಕಮ್ಯುನಿಸ್ಟ್ ಶಕ್ತಿಯ ಮೂಲಗಳ ವಿರುದ್ಧ ನಾವು ಚಳುವಳಿ ಹೂಡೋಣ ಮತ್ತು ಇದನ್ನು ಬಯಲಿಗೆಳೆಯೋಣ.

ಮುಕ್ತಾಯದಲ್ಲಿ ಶ್ರೀ ದೀನ್ ದಯಾಳರು ಆಡಳಿತಾರೂಢ ಪಕ್ಷವು ತಾನು ಆಡಳಿತಗಾರ ಎಂಬ ನಿಲುವಿನಿಂದ ಆಲೋಚಿಸದಿರುವಂತೆ ಪಕ್ಷಕ್ಕೆ ಮನವಿ ಮಾಡಿದರು. ಅವರು ಹೇಳಿದರು: ಈ ಬಹುಮತ ಪಕ್ಷದ ಸರ್ವಾಧಿಕಾರವು ಕೊನೆಗೊಳ್ಳಬೇಕು; ಏಕೆಂದರೆ ಪಕ್ಷಗಳು ಬರುತ್ತವೆ, ಹೋಗುತ್ತವೆ. ಈಗಾಗಲೇ ಒರಿಸ್ಸಾದಲ್ಲಿ ಸಮ್ಮಿಶ್ರ ಸರ್ಕಾರವಿದೆ, ಡೆಲ್ಲಿಯಲ್ಲಿ ಸಹಕಾರ ಕೂಡಾ ಇದೆ. ಕಾಂಗ್ರೆಸ್ ಇತರ ಪಕ್ಷಗಳನ್ನು ಸಮಾನವಾಗಿ ಕಂಡು, ಅವುಗಳೊಡನೆ ಸಹಕರಿಸಬೇಕು. ಸುಭದ್ರತೆಯನ್ನು ಅದು ಬಯಸುವುದಾದಲ್ಲಿ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಹೆಚ್ಚು ಇಷ್ಟಪಟ್ಟಲ್ಲಿ, ಕಾಂಗ್ರೆಸ್ ಈ ಕ್ರಮವನ್ನು ಅನುಸರಿಸಬೇಕು.

ಸಭಾಸದರೆಲ್ಲರೂ ಎದ್ದುನಿಂತು, ಕೈಗಳನ್ನು ಜೋಡಿಸಿ ವಂದೇಮಾತರಂ ಗೀತೆಯನ್ನು ಸಂಪೂರ್ಣವಾಗಿ ಹಾಡುವುದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

* * * * *

# ಕೇರಳದ ಯುನೈಟೆಡ್ ಫ್ರಂಟ್‌ನ ತಪ್ಪು ಹೆಜ್ಜೆ – ಮ್ಯಾನೊಮ್ ಬಗ್ಗೆ ನಿರ್ಲಕ್ಷ್ಯ

ಕಳೆದ ಹತ್ತು ವರ್ಷಗಳ ಇತಿಹಾಸದಿಂದ, ರಾಜ್ಯದ ಜನತೆಯ ವಿಶ್ವಾಸವನ್ನು ಕ್ರಮಕ್ರಮವಾಗಿ ಕಳೆದುಕೊಳ್ಳುತ್ತಿರುವ ಬಗ್ಗೆ ಕೇರಳದ ರಾಜಕೀಯ ಪಕ್ಷಗಳು, ಅದರಲ್ಲಿಯೂ ಮಿತ್ರಪಕ್ಷಗಳಾಗಿರುವ ಪ್ರಜಾ ಸೋಷಿಯಲಿಸ್ಟ್ ಮತ್ತು ಕಾಂಗ್ರೆಸ್ ಪಕ್ಷಗಳು ಯಾವ ಪಾಠವನ್ನೂ ಕಲಿತಿಲ್ಲ. ಈ ಅಂಶವು ಕಳೆದ ಮಹಾ ಚುನಾವಣೆಯಲ್ಲಿ ಅಪ್ರತ್ಯಕ್ಷವಾಗಿ ಕಮ್ಯುನಿಸ್ಟ್ ಪಕ್ಷವು ಅತಿ ದೊಡ್ಡ ಪಕ್ಷವಾಗಿ ಬೆಳೆಯಲು ಅನುವುಮಾಡಿಕೊಟ್ಟಿತು. ಆದರೆ ಜನತೆ ತಮಗೆ ಬೇಕೆಂದು ಅಪೇಕ್ಷಾಪೂರಿತವಾಗಿ ಕಮ್ಯುನಿಸ್ಟ್ ಪಕ್ಷದ ಸರಕಾರವನ್ನು ಅಧಿಕಾರಕ್ಕೆ ತರಲಿಲ್ಲ. ಹೀಗಾಗಿ, ತಮ್ಮ ನಿರೀಕ್ಷೆಗೆ ಮತ್ತು ಇಚ್ಛೆಗೆ ವಿರುದ್ಧವಾಗಿ ಕಮ್ಯುನಿಸ್ಟ್ ಪಕ್ಷವು ಐವರು ಸ್ವತಂತ್ರ ಸದಸ್ಯರ ನೆರವಿನಿಂದ ಅಧಿಕಾರಗ್ರಹಣ ಮಾಡಿದಾಗ ಜನತೆ ನೇರವಾಗಿ ಪ್ರತಿಕ್ರಿಯೆಗೆ ತೊಡಗಿದರು. ಈ ಕಮ್ಯುನಿಸ್ಟ್ ವಿರೋಧಿ ಚಳವಳಿಗೆ ಮೊದಲು ಮತ್ತು ನಂತರವೂ ಈ ಪ್ರತಿಕ್ರಿಯೆಗಳು ಯಾವ ರಾಜಕೀಯ ಪಕ್ಷದಿಂದಲೂ ಪ್ರಾಯೋಜಿಸಲ್ಪಡದೆ, ಜನತೆಯಿಂದಲೇ ಬರುತ್ತಿವೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಎಲ್ಲೆಲ್ಲೂ ಹರಡುತ್ತಿರುವ ಇಂತಹ ಚಳವಳಿಯಿಂದ ದೂರ ನಿಲ್ಲುವುದು ರಾಜಕೀಯ ಆತ್ಮಹತ್ಯೆಯಾಗುತ್ತದೆ ಎಂಬುದನ್ನು ಅರಿತಿದ್ದರಿಂದಲೇ ರಾಜಕೀಯ ಪಕ್ಷಗಳು ತಾವೂ ಇದರೊಡನೆ ಕೈಜೋಡಿಸಿದವು. ಆದರೆ ರಾಜಕೀಯ ಪಕ್ಷಗಳ ನೆರವಿಲ್ಲದೆಯೂ ಈ ಚಳವಳಿ ಜಯಶೀಲವಾಗುತ್ತಿತ್ತು.

**ಕಾಂಗ್ರೆಸ್, ಪ್ರಜಾಸೋಷಿಯಲಿಸ್ಟ್ ಪಕ್ಷ ಮತ್ತು ಮುಸ್ಲಿಂ ಲೀಗ್‌ಗಳ ಜಾತಿ ರಾಜಕಾರಣ**

ಕಮ್ಯುನಿಸ್ಟ್ ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸಿದ ಮೇಲೆ ಮತ್ತು ಮಹಾ ಚುನಾವಣೆ ಹತ್ತಿರ ಬರುತ್ತಿರುವಾಗ, ಈ ಪಕ್ಷಗಳು ಜನತೆಯನ್ನು ಮರೆತಿರುವ ಹಾಗೆ ಕಾಣಿಸುತ್ತಿದೆ. ಜನತೆಯ ಆಶೋತ್ತರಗಳನ್ನು ವಿಶ್ಲೇಷಿಸಿ ಅರಿತುಕೊಳ್ಳುವ ಬದಲು, ಈ ಪಕ್ಷಗಳು ಚುನಾವಣಾ ಹೊಂದಾಣಿಕೆಯನ್ನು ಮಾಡಿಕೊಳ್ಳಲು, ಸ್ಥಾನಗಳನ್ನು ಹಂಚಿಕೊಳ್ಳಲು, ಮಾಡಿದ ಸೂರೆಯ ಪಾಲು ಪಡೆಯಲು ತವಕಿಸುತ್ತಿವೆ.

ಪ್ರಜಾ ಸೋಷಿಯಲಿಸ್ಟ್ ಮತ್ತು ಕಾಂಗ್ರೆಸ್ ಪಕ್ಷಗಳೆರಡೂ ನಂಬಿಕೆಯನ್ನು ಕಳೆದುಕೊಂಡಿವೆ. ಜನತೆ ಇವೆರಡರ ಆಡಳಿತವನ್ನು ನೋಡಿದ್ದಾರೆ ಮತ್ತು ಅವುಗಳ ಬಗ್ಗೆ ಅವರಿಗೆ ಅತೃಪ್ತಿಯಿದೆ. ಈ ಪಕ್ಷಗಳ ಹೊಂದಾಣಿಕೆಯ ಹೊಸ ಅವತಾರದಲ್ಲಿ ಹೊಸತನವಾಗಲೀ ಹೊಸ ಮುಖಗಳಾಗಲೀ ಕಾಣಿಸುವ ಸಂಭವವಿಲ್ಲ. 'ಹೊಸ ಶೀಷೆಯಲ್ಲಿ ಹಳೆಯ ಮದ್ಯ' ಎನ್ನುವ ಹಾಗೂ ಇಲ್ಲ. ಈ ಪಕ್ಷಗಳಲ್ಲಿದ್ದ ಹಳೆಯ ಹುಲಿಗಳಿಗೆ ರಾಜ್ಯದ ಹೊರಗೆ ಉದ್ಯೋಗವನ್ನು ಕಲ್ಪಿಸಿ, ಅವರ ಜನಗಳೇ ಇರುವ ಹೊಸ ತಂಡವೊಂದನ್ನು ಮತದಾರರ ಮುಂದೆ ಕಳುಹಿಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದರೆ, ಅಧಿಕಾರ ಮತ್ತು ಸಂಪತ್ತಿನ ರುಚಿಯನ್ನು ಕಂಡಿರುವ ಹಳೆಯ ಹುಲಿಗಳು ರಾಜ್ಯದಲ್ಲಿ ತಮ್ಮ ಸ್ಥಾನಗಳಿಗೇ ಅಂಟಿಕೊಂಡಿವೆ. ಕಮ್ಯುನಿಸ್ಟ್ ಪಕ್ಷದ ವಿರುದ್ಧವಾಗಿ ನಡೆದ ಚಳವಳಿಯ ನಂತರ ತಮ್ಮ ವಿಜಯದ ಬಗ್ಗೆ ಆಶಾಭಾವನೆಯನ್ನು ಹೊಂದಿರುವ ಇವರು ತಾವು ನಿವೃತ್ತಿ ಹೊಂದಿ ಹೊಸಬರಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಡಲು ಬಯಸುವುದಿಲ್ಲ. ಅವರು ಮಾಡಿರುವುದು ಅಥವಾ ಮಾಡುತ್ತಿರುವುದೆಂದರೆ, ಚುನಾವಣೆಯನ್ನು ಎದುರಿಸಲು ಕಾಂಗ್ರೆಸ್, ಪ್ರಜಾ ಸೋಷಿಯಲಿಸ್ಟ್ ಮತ್ತು ಮುಸ್ಲಿಂ ಲೀಗ್‌ನ ಸಂಯುಕ್ತ ರಂಗವೊಂದನ್ನು ರಚಿಸುವುದು.

ಆದರೆ ಈ ಸಂಯುಕ್ತ ರಂಗವು ಪರಿಸ್ಥಿತಿಯ ಸವಾಲುಗಳನ್ನೆದುರಿಸಲು ಶಕ್ತವಾಗಿರುವ ಹಾಗೆ ಕಾಣುವುದಿಲ್ಲ. ಕಮ್ಯುನಿಸ್ಟ್ ಪಕ್ಷದ ಜಯಕ್ಕೆ ಈ ರಾಜಕೀಯ ಪಕ್ಷಗಳಲ್ಲಿದ್ದ ಒಡಕು ಕಾರಣವಲ್ಲ, ಬದಲಿಗೆ, ಈ ಯಾವ ಪಕ್ಷವೂ ಜನತೆಯ ಭಾವನೆಗಳಿಗೆ ಸ್ಪಂದಿಸುತ್ತಿರಲಿಲ್ಲದಿರುವುದು. ಬಹುಪಾಲು ಜನರು ರಾಷ್ಟ್ರೀಯತೆಯನ್ನು ಬಯಸುತ್ತಾರೆ. ಆದರೆ ಅವರನ್ನು ಇಲ್ಲಿಯವರೆಗೆ ಸರಿಯಾಗಿ ಪ್ರತಿನಿಧಿಸಲಾಗಿಯೇ ಇಲ್ಲ. ಕೇರಳದ ರಾಜಕೀಯ ಬೆಳವಣಿಗೆಗಳ ಬಗ್ಗೆ ಬರೆಯುವ ಯಾರೇ ಆದರೂ, ವಿವಿಧ ಜಾತಿ, ಪಂಗಡಗಳು ಅಲ್ಲಿನ ನಾಯರ್‌ಗಳು, ಎಳ್ವಾಗಳು ಇವರ ಬಗ್ಗೆಯೇ ಮಾತನಾಡುತ್ತಾರೆ. ಕೇರಳದ ರಾಜಕೀಯವೆಂದರೆ ಜಾತಿ ರಾಜಕಾರಣವಷ್ಟೇ ಎಂಬ ಪೂರ್ವನಿರ್ಧಾರಕ್ಕೇ ಅಂಟಿಕೊಂಡಿರುತ್ತಾರೆ. ಆದರೆ ನಾನು ಇಂತಹ ಸೈದ್ಧಾಂತಿಕ ನಿಲುವನ್ನು ಬಲವಾಗಿ ಪ್ರಶ್ನಿಸುತ್ತೇನೆ. ಕೇರಳದಲ್ಲಿ ಬೇರೆಬೇರೆಯ ಸಮುದಾಯದವರು ಸುಸಂಘಟಿತವಾದ ಸಾಂಘಿಕ ವ್ಯವಸ್ಥೆಗಳನ್ನು ಹೊಂದಿದ್ದಾರೆ ಎಂಬುದು ನಿಜ. ಆದರೆ ಇದರಿಂದ ಅವರು ಜಾತಿವಾದಿಗಳು ಎಂದು ಹೇಳುವುದು ತಪ್ಪಾಗುತ್ತದೆ. ಹೀಗೆ ಹೇಳಿದರೆ, ಹಿಂದೂ ಸಮಾಜದ ಸಾಮಾಜಿಕ ವ್ಯವಸ್ಥೆಯ ಜ್ಞಾನ ಇಂತಹವರಿಗೆ ಇಲ್ಲವೆಂದು ಹೇಳಬೇಕಾಗುತ್ತದೆ. ಬ್ರಿಟಿಷ್ ಪರಂಪರೆಯಿಂದ ವಿಶ್ಲೇಷಣಾ ಪದ್ಧತಿಯನ್ನು ಕಲಿತ ನಾವು ಸಾಮಾಜಿಕ ವ್ಯವಸ್ಥೆಯ ಉತ್ತಮಾಂಶಗಳನ್ನು ಅರಿಯುವಲ್ಲಿ, ವಿವಿಧತೆಯ

ಅಂತರ್ಯದಲ್ಲಿ ಇರುವ ಏಕತೆಯನ್ನು ತಿಳಿಯುವಲ್ಲಿ ಎಡವುತ್ತಿದ್ದೇವೆ. ಈ ಬ್ರಿಟಿಷ್ ಪರಂಪರೆಯನ್ನೇ ಅನುಸರಿಸುತ್ತಿರುವ ಕಾಂಗ್ರೆಸ್ ಮತ್ತು ಪ್ರಜಾ ಸೋಷಿಯಲಿಸ್ಟ್ ಪಕ್ಷಗಳು ಮತೀಯ ಲೆಕ್ಕಾಚಾರದ ಹಾದಿಯನ್ನೇ ಹಿಡಿದಿವೆ. ಇಂತಹ ನೀತಿಗಳು, ಜನತೆಯ ಹೃದಯವನ್ನು ಗೆಲ್ಲುವ ಬದಲು ಅವರನ್ನು ತಮ್ಮ ಸಾಂಘಿಕ ವ್ಯವಸ್ಥೆಗಳಿಂದ ದೂರಮಾಡುತ್ತಿವೆ. ಅವರು ತಮ್ಮ ಮನಸ್ಸಿಗೆ ಒಪ್ಪಬಹುದಾದ ಪಕ್ಷಕ್ಕಾಗಿ ಒಂದಾದ ನಂತರ ಒಂದು ಪಕ್ಷವನ್ನು ಪರೀಕ್ಷಿಸುತ್ತಿದ್ದಾರೆ. ಹೊರನೋಟಕ್ಕೆ ಇದು ಜಾತೀಯತೆಯ ಪೋಷಾಕನ್ನು ತೊಟ್ಟಿರುವ ಹಾಗೆ ಕಂಡರೂ, ಅಲ್ಲಿನ ಜನತೆ ತಮ್ಮ ಹೃದಯದ ಆಳದಲ್ಲಿರುವ ನಿಜವಾದ, ನಿಷ್ಕಳಂಕವಾದ ರಾಷ್ಟ್ರೀಯತೆಯನ್ನು ಹೊರಗೆ ತೋರಿಸಲು ಅರಿಯದವರಾಗಿದ್ದಾರೆ. ಪರಿಸ್ಥಿತಿಯು ಬಂದಾಗ ಅದು ಹೊರಕ್ಕೆ ಚಿಮ್ಮಬಹುದು. ಆದರೆ, ಸಾಮಾನ್ಯವಾಗಿ ಹುದುಗಿಸಲ್ಪಟ್ಟ ಭಾವನೆಯ ಹಾಗೆ, ಅದು ಅವರ ಸುಪ್ತಪ್ರಜ್ಞೆಯ ನೆಲೆಯಲ್ಲಿ ಕುಳಿತಿದೆ. ಇದನ್ನು ಹೊರತರಲು ಮನೋವೈಜ್ಞಾನಿಕ ವಿಶ್ಲೇಷಣೆಯ ಅಗತ್ಯವಿದೆ. ಹಾಗೆ ಆದಾಗ ಮಾತ್ರ ಅವರಿಗೆ ತೃಪ್ತಿ ಮತ್ತು ರಾಜ್ಯಕ್ಕೆ ಸ್ಥಿರತೆ ದೊರೆಯುತ್ತದೆ.

ಕಾಂಗ್ರೆಸ್ ಮತ್ತು ಪ್ರಜಾ ಸೋಷಿಯಲಿಸ್ಟ್ ಪಕ್ಷಗಳು ನಿಜವಾಗಿ ರಾಷ್ಟ್ರೀಯ ಪಕ್ಷಗಳಾಗಿ ದೇಶದಲ್ಲಿ, ಅದರಲ್ಲಿಯೂ ಕೇರಳದಲ್ಲಿ, ತಮ್ಮ ಸ್ಥಾನವನ್ನು ಕಳೆದುಕೊಂಡಿವೆ. ರಾಷ್ಟ್ರೀಯತೆಯ ಆಜನ್ಮ ಶತ್ರುಗಳಾಗಿರುವ ಕಮ್ಯುನಿಸ್ಟರು ಜನರ ಭಾವನೆಯನ್ನು ತಂತ್ರೋಪಾಯಗಳಿಂದ ತಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ಮತ್ತು ಪ್ರಜಾಸೋಷಿಯಲಿಸ್ಟ್ ಪಕ್ಷಗಳ ದೌರ್ಬಲ್ಯವನ್ನು ಸ್ವಪ್ರಯೋಜನಕ್ಕಾಗಿ ದುಡಿಸಿಕೊಳ್ಳುತ್ತಿದ್ದಾರೆ. ಆದರೆ, ಕಾಂಗ್ರೆಸ್ ಮತ್ತು ಪ್ರಜಾಸೋಷಿಯಲಿಸ್ಟ್ ಪಕ್ಷಗಳಾದರೋ, ಮುಸ್ಲಿಂ ಲೀಗಿನೊಂದಿಗೆ ಅನೈತಿಕ ಸಹಯೋಗವನ್ನು ಬೆಳೆಸಿಕೊಂಡು, ರಾಷ್ಟ್ರೀಯ ಭಾವನೆಯಿರುವ ಜನತೆಯ ಮನಸ್ಸಿನಲ್ಲಿ ಆತಂಕವನ್ನು ಬಿತ್ತಿದ್ದಾರೆ. ಹೀಗೆ ಮಾಡುವುದು ಅವರಿಗೆ ಸದ್ಯದ ಪರಿಸ್ಥಿತಿಯಲ್ಲಿ ಅಗತ್ಯವಿರಬಹುದಾದರೂ, ರಾಷ್ಟ್ರೀಯತೆಯ ದೃಷ್ಟಿಯಿಂದ ವರ್ತಮಾನದ ಅಗತ್ಯಗಳೊಂದಿಗೆ ರಾಜಿಮಾಡಿಕೊಳ್ಳುವುದು ತರವಲ್ಲ.

## ಮನ್ನತ್ ಪದ್ಮನಾಭನ್ ಅವರ ವಿವೇಕಪೂರ್ಣ ಸಲಹೆ

ಕಮ್ಯುನಿಸ್ಟ್ ಪಕ್ಷವನ್ನು ಅಧಿಕಾರದಿಂದ ಉಚ್ಚಾಟಿಸಲು ಮುಖ್ಯ ಕಾರಣಕರ್ತರಾಗಿದ್ದ ಶ್ರೀ ಮನ್ನತ್ ಪದ್ಮನಾಭನ್ ಅವರು ಈ ಪಕ್ಷಗಳು ಚುನಾವಣಾ ಮೈತ್ರಿಯ ಹಂತದಲ್ಲಿದ್ದಾಗಲೇ ಅದರ ಬಗ್ಗೆ ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದ್ದರು. ಆದರೆ ಅವರು ಈ ಪಕ್ಷಗಳು ಚುನಾವಣೆಯ ಕಣದಿಂದ ದೂರವಿರಬೇಕೆಂದು

ಪ್ರತಿಪಾದಿಸುವಷ್ಟು ದೂರ ಹೋಗಲಿಲ್ಲ. ಹಾಗೇನಾದರೂ ಮಾಡಿದ್ದರೆ, ಕಳೆದ ಬಾರಿಯಂತೆಯೇ ಅವರಿಗೆ ಈ ಬಾರಿಯೂ ವ್ಯಾಪಕ ಬೆಂಬಲ ಖಂಡಿತವಾಗಿಯೂ ಸಿಗುತ್ತಿತ್ತು. ಕಾಗದದ ಮೇಲೆ ಚುನಾವಣಾ ಕ್ಷೇತ್ರಗಳನ್ನು ಹಂಚಿಕೊಳ್ಳುವುದರ ಬದಲಿಗೆ, ಪ್ರತಿ ಕ್ಷೇತ್ರದಲ್ಲಿ ಯಾವ ಅಭ್ಯರ್ಥಿಯು ಆತನ ಪಕ್ಷವು ಯಾವುದೇ ಇದ್ದರೂ, ಜನಮನ್ನಣೆಯನ್ನು ಗಳಿಸಬಲ್ಲನೋ, ಅಂತಹ ಅಭ್ಯರ್ಥಿಯನ್ನು ನಿಲ್ಲಿಸಬೇಕು ಎಂದು ಅವರು ಸಲಹೆಮಾಡಿದ್ದರು. ಹೀಗಾಗಿದ್ದರೆ ಸೂಕ್ತ ಅಭ್ಯರ್ಥಿಗಳ ಪರ್ಯಾಯ ಕೂಟವೊಂದು ರಾಜ್ಯದಲ್ಲಿ ಉದಯವಾಗುತ್ತಿತ್ತು. ಅಂತಹ ಅಭ್ಯರ್ಥಿಗಳನ್ನು ಎದುರಿಸುವುದು ಕಮ್ಯುನಿಸ್ಟರಿಗೆ ಸುಲಭಸಾಧ್ಯವಾಗುತ್ತಿರಲಿಲ್ಲ.

ಆದರೆ, ಹಿಂದೂಸ್ತಾನ್ ಟೈಮ್ಸ್‌ನ ತಿರುವನಂತಪುರದ ಪ್ರತಿನಿಧಿಯ ಪ್ರಕಾರ ಈ ಸಲಹೆಯುನ್ನು ಕುಚೋದ್ಯವೆಂದು ಪರಿಗಣಿಸಲಾಯಿತು. ಈ ಸಲಹೆಯನ್ನನುಸರಿಸಿದರೆ, ರಾಜಕೀಯ ಪಕ್ಷಗಳು ತಮ್ಮ ಅವಸಾನಕ್ಕೆ ಎಡೆಮಾಡಿಕೊಡುತ್ತದೆ ಎಂದು ಭಾವಿಸಿದವು. ಇದನ್ನು ಕಾರ್ಯಗತಗೊಳಿಸಬೇಕಾದರೆ, ಕೆಲವೊಂದು ವ್ಯಾವಹಾರಿಕ ತೊಂದರೆಗಳು ಎದುರಾಗಬಹುದಾದರೂ, ಅವು ನಿವಾರಿಸಿಕೊಳ್ಳಲಾಗದವೇನೂ ಅಲ್ಲ. ಈ ತೊಂದರೆಗಳು ಸಂಯುಕ್ತ ರಂಗದಿಂದ ಬರುವ ತೊಂದರೆಗಳಿಗಿಂತ ಖಂಡಿತವಾಗಿಯೂ ಸಹ್ಯವಾಗಬಲ್ಲವು. ಈ ಸೂತ್ರಕ್ಕೆ ಎಷ್ಟು ವ್ಯಾಪಕ ಬೆಂಬಲ ದೊರೆತಿದೆಯೆಂದರೆ, ಇದನ್ನು ಅಗತ್ಯವಾಗಿ ಪರೀಕ್ಷಿಸಬಹುದು. ರಾಜಕೀಯ ಪಕ್ಷಗಳು ಈ ಸೂತ್ರವನ್ನು ಪರಿಶೀಲಿಸಿ ಇದು ತಮ್ಮ ಅಭ್ಯರ್ಥಿಗಳನ್ನು ಚುನಾವಣಾ ಕ್ಷೇತ್ರದಿಂದ ಹೊರನೂಕುತ್ತವೆ ಎಂದು ಭಾವಿಸಿದರೆ, ವಾಸ್ತವವಾಗಿ ಸೂಕ್ತ ಅಭ್ಯರ್ಥಿಗಳು ಕಣದಲ್ಲಿ ಇಲ್ಲವೆಂಬುದನ್ನು ಪರೋಕ್ಷವಾಗಿ ಒಪ್ಪಿಕೊಂಡಂತೆಯೇ ಆಗುತ್ತದೆ. ಅವರ ಆತಂಕಗಳು ವಾಸ್ತವಿಕವೇ ಆದರೂ ಜನತೆಯ ಆತಂಕಗಳೂ ಅಷ್ಟೇ ವಾಸ್ತವಿಕವಾಗಿವೆ. ಶ್ರೀ ಪದ್ಮನಾಭನ್ ಅವರ ಸೂತ್ರ 'ಕ್ರಮಕ್ರಮವಾಗಿ ಕೇರಳದಲ್ಲಿ ರಾಜಕೀಯ ಪಕ್ಷಗಳನ್ನು ತೆಗೆದುಹಾಕುವ' ಉದ್ದೇಶದ್ದಾದರೆ, ಕಾಂಗ್ರೆಸ್–ಮುಸ್ಲಿಂಲೀಗ್–ಪ್ರಜಾಸೋಷಿಯಲಿಸ್ಟ್ ಪಕ್ಷಗಳ ಒಕ್ಕೂಟದ ಸೂತ್ರದ ಉದ್ದೇಶ ಹಳೆಯ, ಭ್ರಷ್ಟಾಚಾರಿ, ಅಸಮರ್ಥ ಮತ್ತು ಜನಪ್ರಿಯತೆಗೆ ಎರವಾದ ವ್ಯವಸ್ಥೆಯನ್ನು ಪುನಃ ಬರಮಾಡಿಕೊಳ್ಳುವುದು ಮತ್ತು ಜನತೆಯನ್ನು ನಿರಾಶಾಕೂಪಕ್ಕೆ ತಳ್ಳುವುದು, ಜೊತೆಗೆ ಕಮ್ಯುನಿಸ್ಟ್‌ರ ಬಲೆಗೆ ತಳ್ಳುವುದು.

**ಮ್ಯಾನೊಮ್ ಅವರ ನಾಯಕತ್ವ ಈ ಅಪವಿತ್ರ ಮೈತ್ರಿಗಿಂತ ಮುಖ್ಯವಾದದ್ದು**

ಮನ್ನತ್ ಅವರ ಸೂತ್ರವನ್ನು ತಿರಸ್ಕರಿಸುವುದಕ್ಕೆ ಮತ್ತೊಂದು ಮನವಿಯನ್ನು ಈ ರಾಜಕೀಯ ಪಕ್ಷಗಳು ಮಾಡಿವೆ. ಅವುಗಳ ಪ್ರಕಾರ ಈ ಸೂತ್ರವು ರಾಷ್ಟ್ರೀಯ

ನಾಯಕರ ಹಾಜರಿಯಲ್ಲಿ, ಅವರ ಒಪ್ಪಿಗೆಯನ್ನು ಪಡೆದೇ ಮೂರು ಪ್ರಮುಖ ಪಕ್ಷಗಳು ಆರು ವಾರದ ಹಿಂದೆ ಮಾಡಿಕೊಂಡಿರುವ ವ್ಯವಸ್ಥೆಯನ್ನು ನಿರರ್ಥಕಗೊಳಿಸುತ್ತದೆ. ಆದರೆ ಈ ವಾದದಲ್ಲಿ ಯಾವುದೇ ಹುರುಳಿಲ್ಲ. ಇದು ಜನತೆಯ ಆಶೋತ್ತರಗಳನ್ನು ಪ್ರತಿನಿಧಿಸುತ್ತಿಲ್ಲ. ಈ ಹೊಂದಾಣಿಕೆಯ ಹಿಂದಿರುವ ನೀತಿ ದೋಷರಹಿತವಾಗಿಲ್ಲ. ಇರಬೇಕಾದ ನೀತಿಯನ್ನು ಗಾಳಿಗೆ ತೂರಲಾಗಿದೆ. ತತ್ವನಿಷ್ಠೆಯಿಲ್ಲದ ಇಂತಹ ಹೊಂದಾಣಿಕೆಯು ಕೇರಳಕ್ಕಷ್ಟೇ ಅಲ್ಲದೆ ದೇಶದ ಇತರೆಡೆಗಳಲ್ಲಿಯೂ ಕೇಡಿಗೆ ಕಾರಣವಾಗುತ್ತದೆ, ಮುಸ್ಲಿಂ ಕೋಮುವಾದಕ್ಕೆ ಮರುಹುಟ್ಟನ್ನು ಕೊಡುತ್ತದೆ. ಅಂದರೆ, ಕೇರಳ ಸರಕಾರವನ್ನು ಕೋಮುವಾದಿ ಮೈತ್ರಿಕೂಟದ ಕೈಗೆ ಕೊಡುತ್ತದೆ. ಎರಡನೆಯದಾಗಿ ಕೇರಳದಲ್ಲಿನ ಬದಲಾದ ಪರಿಸ್ಥಿತಿಯನ್ನು ಗಣನೆಗೇ ತಂದುಕೊಂಡಿಲ್ಲ. ೧೯೫೭ರಲ್ಲಿದ್ದ ಪರಿಸ್ಥಿತಿಯ ಆಧಾರದ ಮೇಲೆ ಕ್ಷೇತ್ರ ವಿಂಗಡಣೆಯನ್ನು ಮಾಡಿದರೆ, ಕಳೆದ ಮೂರು ವರ್ಷಗಳಲ್ಲಾದ ಬೆಳವಣಿಗೆಯನ್ನು ನಿರ್ಲಕ್ಷಿಸಿದಂತಾಗುತ್ತದೆ. ಹೊಸ ಶಕ್ತಿಗಳು ಉದಯವಾಗಿವೆ ಮತ್ತು ಹೊಸ ಹೊಂದಾಣಿಕೆಗಳು ನಡೆದಿವೆ. ಕ್ರಿಯಾಶೀಲ ಪರಿಸ್ಥಿತಿಗೆ ನಿಷ್ಕ್ರಿಯ ಪರಿಹಾರ ಹುಡುಕಿದಂತೆ ಆಗುತ್ತದೆ. ಕೊನೆಯದಾಗಿ, ಇದು ಶ್ರೀ ಮನ್ನತ್ ಪದ್ಮನಾಭನ್ ಅವರ ವ್ಯಕ್ತಿತ್ವ, ಗೌರವ ಮತ್ತು ಕರ್ತೃತ್ವನ್ನು ನಿರ್ಲಕ್ಷ್ಯಿಸುತ್ತದೆ.

ಇದನ್ನು ನಿವಾರಿಸುವುದಕ್ಕಾಗಿ ವಿದೇಶಕ್ಕೆ ಹೋಗಲು ಅವರನ್ನು ಬಲವಂತವಾಗಿ ಒಪ್ಪಿಸಿ ಅವರ ಅನುಪಸ್ಥಿತಿಯಲ್ಲಿ ಈ ಪಕ್ಷಗಳು ಆತುರಾತುರವಾಗಿ ಒಪ್ಪಂದವನ್ನು ಮಾಡಿಕೊಂಡವು. ಶ್ರೀ ಮನ್ನತ್ ಅವರು ನಿಸ್ವಾರ್ಥ ಕಾರ್ಯಕರ್ತರಾಗಿರಬಹುದು. ಅವರ ಸೂತ್ರದಲ್ಲಿ ವೈಯಕ್ತಿಕ ಲಾಭದ ಆಸೆ ಇರದಿರಬಹುದು. ಆದರೆ ಅವರು ಈ ನಡೆಯ ಹಿಂದಿರುವ ಇತರರ ಕುಟಿಲತೆಯನ್ನು ಅರಿಯಬಹುದಿತ್ತು ಮತ್ತು ಕೇರಳದ ಜನತೆಯ ಹಾಗೂ ದೇಶದ ಹಿತದೃಷ್ಟಿಯಿಂದ ಅಪವಿತ್ರ ಮೈತ್ರಿಯನ್ನು ಮಾನ್ಯಮಾಡಲು ನಿರಾಕರಿಸಬಹುದಿತ್ತು. 'ಸಮರ್ಥರಲ್ಲದವರು, ಜನತೆಗೆ ಒಪ್ಪಿಗೆಯಾಗದಂತಹವರು' ಎಂದು ಅವರು ಭಾವಿಸುವ ಅಭ್ಯರ್ಥಿಗಳಿಗೆ ಅವರು ಹೇಗೆ ತಾನೆ ತಮ್ಮ ಬೆಂಬಲವನ್ನು ಸೂಚಿಸುತ್ತಾರೆ? ಚಳವಳಿಯ ಸಮಯದಲ್ಲಿ ಅವರು ಹಳೆಯ, ಕೊಳೆತ ಅಭ್ಯರ್ಥಿಗಳಿಗೆ ಮತಹಾಕುವಂತೆ ತಾವು ಬೇಡುವುದಿಲ್ಲ ಎಂದು ಜನತೆಗೆ ಆಶ್ವಾಸನೆಯಿತ್ತಿದ್ದರು. ತಮ್ಮ ಆಶ್ವಾಸನೆಯನ್ನು ಉಳಿಸಿಕೊಳ್ಳಬೇಕಾದರೆ ಜನರಿಗೆ ಪರ್ಯಾಯವೊಂದನ್ನು ನೀಡಬೇಕು. ಈ ಅನರ್ಹ ರಾಜಕೀಯ ಪಕ್ಷಗಳು ತಾವಾಗಿಯೇ ತಮ್ಮ ಸ್ಥಾನವನ್ನು ಬಿಟ್ಟುಕೊಡುವುದಿಲ್ಲ. ಅವುಗಳನ್ನು ಹೊರದೂಡಬೇಕು. ಕಮ್ಯುನಿಸ್ಟ್ ಮಂತ್ರಿಮಂಡಲದ ವಿರುದ್ಧ ಈ ಪಕ್ಷಗಳು ಹೋರಾಟವನ್ನು ಆರಂಭಿಸುವವರೆಗೆ ಶ್ರೀ ಮನ್ನತ್ ಅವರು ಕಾಯಲಿಲ್ಲ. ತಾವೇ ಮೊದಲ ಹೆಜ್ಜೆಯನ್ನು ಇಟ್ಟರು. ನಂತರ ರಾಜಕೀಯ ಪಕ್ಷಗಳು

ಅವರನ್ನು ಅನುಸರಿಸಿದವು. ಜನತೆಯು ಅವರ ಸಂಗಡವಿರುವಾಗ, ಜನತೆಯು ಇಷ್ಟಪಡದವರ ಬಗ್ಗೆ ಶ್ರೀ ಮನ್ನತ್ ಅವರು ಈಗ ಹಿನ್ನೆಲೆಗೆ ಸರಿದರೆ, ಹಿಂದಿನ ಚುನಾವಣಾ ಫಲಿತಾಂಶವು ಈ ಬಾರಿಯೂ ಪುನರಾವೃತ್ತಿಯಾಗುತ್ತದೆ. ಅವರು ಮುಂದೆ ಬಂದು ಕಮ್ಯುನಿಸ್ಟ್ ವಿರೋಧಿಯಾಗಿರುವ ಖಚಿತವಾದ ರಾಷ್ಟ್ರೀಯ ಪರ್ಯಾಯವೊಂದನ್ನು ಜನತೆಯ ಮುಂದಿಡಬೇಕು. ತೇಪೆ ಕೆಲಸದಿಂದ ಯಾವ ಪ್ರಯೋಜನವೂ ಆಗದು. ಕೋಮುವಾದಿ, ಸ್ವಾರ್ಥಪರ ಮತ್ತು ರಾಷ್ಟ್ರೀಯ ಭಾವನೆಯಿಲ್ಲದ ದುರ್ಬಲರ ಹೆಗಲ ಮೇಲೆ ಬಂದೂಕನ್ನಿಟ್ಟು ಯುದ್ಧಕ್ಕೆ ಕಳುಹಿಸಿದರೆ ಬರುವ ಲಾಭವಾದರೂ ಏನು? ಕಾಂಗ್ರೆಸ್ ಮತ್ತು ಪ್ರಜಾಸೋಷಿಯಲಿಸ್ಟ್ ಪಕ್ಷದ ಮುಖಂಡರು ಕಮ್ಯುನಿಸ್ಟರನ್ನು ಹದ್ದುಬಸ್ತಿನಲ್ಲಿಡಲಾಗಲಿಲ್ಲ. ಅವರು ಹೀಗೆಯೇ ಮುಂದುವರೆಯಲು ಬಿಟ್ಟರೆ, ಮುಂದೆಯೂ ಕಮ್ಯುನಿಸ್ಟರನ್ನು ತಡೆಯಲು ಅವರಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಶ್ರೀ ಮನ್ನತ್ ಅವರ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ. ಜನತೆ ಅವರತ್ತ ನೋಡುತ್ತಿದೆ, ಅವರು ಜನರನ್ನು ನಿರಾಶೆಗೊಳಿಸುವುದಿಲ್ಲವೆಂದು ನಾನು ನಂಬುತ್ತೇನೆ.

* * * * *

# ರಾಷ್ಟ್ರಪತಿಯವರ ನಿರ್ದೇಶನ ಅತೃಪ್ತಿಕರ

ರಾಷ್ಟ್ರೀಯ ಭಾಷೆಯನ್ನು ಕುರಿತು ರಾಷ್ಟ್ರಪತಿಯವರು ಸಂವಿಧಾನದ ೩೪೪ (೬)ನೇ ವಿಧಿಯನ್ವಯ ನೀಡಿದ ನಿರ್ದೇಶನವನ್ನು ಅಧಿವೇಶನದ ಕೊನೆಯ ದಿನವಾದ ಏಪ್ರಿಲ್ ೨೯ರಂದು (ಶುಕ್ರವಾರದಂದು) ಸಂಸತ್ತಿನ ಮುಂದೆ ಇಡಲಾಯಿತು. ಎಲ್ಲಾ ವಿಷಯಗಳಲ್ಲಿಯೂ ನಿಧಾನತಂತ್ರವನ್ನು ಅನುಸರಿಸುವುದು ಮತ್ತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವು ಸದಸ್ಯರಿಗೆ ದೊರಕದಂತೆ ಮಾಡುವುದು ಸರಕಾರದ ನೀತಿಯೇ ಆಗಿದೆ. ಈ ನಿಧಾನ ತಂತ್ರಗಳಿಂದಾಗಿಯೇ, ರಾಷ್ಟ್ರಪತಿಯವರಿಗೆ ಮೇಲೆ ಹೇಳಿದ ವಿಧಿಯನ್ವಯ ನಿರ್ದೇಶನ ನೀಡಲು ಐದು ವರ್ಷಗಳ ಕಾಲ ಬೇಕಾಯಿತು. ನಿರ್ದೇಶನದ ವಿಷಯವಾಗಿ ಹೇಳಬೇಕೆಂದರೆ, ರಾಷ್ಟ್ರಪತಿಯವರು ೩೪೪ನೇ ವಿಧಿಯನ್ನು ಪಾಲಿಸಿದ್ದಾರೆ, ಆದರೆ ೩೪೩ನೇ ವಿಧಿಯನ್ನು ಉಲ್ಲಂಘಿಸಿದ್ದಾರೆ. ಇಂಗ್ಲಿಷ್ ಕುರಿತಾಗಿ ಕೆಲವರಲ್ಲಿರಬಹುದಾದ ಹೆದರಿಕೆಯನ್ನು ಹೋಗಲಾಡಿಸಲು ಆ ಭಾಷೆಯು ಒಂದು ಸಹ–ಭಾಷೆಯಾಗಿ ಮುಂದುವರೆಯಲಿದೆ ಎಂದು ಪ್ರಧಾನಮಂತ್ರಿಗಳು ಹೇಳಬಹುದಾದರೂ, ೧೯೬೫ರ ನಂತರ ಇಂಗ್ಲಿಷ್ ಸಹ–ಭಾಷೆಯಾಗಿ ಮುಂದುವರೆಯುತ್ತದೆ ಎಂದು ತಮ್ಮ ನಿರ್ದೇಶನದಲ್ಲಿ ರಾಷ್ಟ್ರಪತಿಯವರು ಹೇಳುವುದು ಅಸಾಧು. ೧೯೬೫ರ ನಂತರ, ಸಂಸತ್ತು ಕಾನೂನಿನ ಪ್ರಕಾರ ಸೂಚಿಸಿದ ಎಡೆಯನ್ನು ಹೊರತುಪಡಿಸಿದಂತೆ ಇಂಗ್ಲಿಷ್ ಭಾಷೆಯ ಬದಲಿಗೆ ಹಿಂದಿಯನ್ನು ಉಪಯೋಗಿಸಬೇಕು ಎಂದು ಸಂವಿಧಾನವು ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ ೧೯೬೫ರಲ್ಲಿ ಸಂಸತ್ತು ಈ ವಿಷಯದಲ್ಲಿ ನಿರ್ಣಯವನ್ನು ತೆಗೆದುಕೊಳ್ಳಬೇಕೇ ಹೊರತು, ೧೯೬೦ರಲ್ಲಿಯೇ ಇಂಗ್ಲಿಷ್ ಅಧಿಕೃತ ಭಾಷೆಯಾಗಿ ಎಲ್ಲಿಯವರೆಗೆ ಮತ್ತು ಎಷ್ಟರಮಟ್ಟಿಗೆ ಇರಬೇಕು ಎನ್ನುವುದನ್ನು ರಾಷ್ಟ್ರಪತಿಯವರು ಘೋಷಿಸಬಾರದು.

೧. ಕೇಂದ್ರ ಸರ್ಕಾರವು ಹಿಂದಿಯನ್ನು ಹಂತ ಹಂತವಾಗಿ ಉಪಯೋಗಿಸಿಕೊಳ್ಳುವ ಬಗ್ಗೆ,

೨. ಕೇಂದ್ರ ಸರ್ಕಾರದ ಎಲ್ಲಾ ಅಥವಾ ಕೆಲವು ಅಧಿಕೃತ ಉದ್ದೇಶಗಳಿಗಾಗಿ ಇಂಗ್ಲಿಷನ್ನು ಬಳಸುವುದನ್ನು ಮಿತಿಗೊಳಿಸುವ ಬಗ್ಗೆ

೩. ೩೪೮ನೇ ವಿಧಿಯಲ್ಲಿ ನಮೂದಿಸಿರುವ ಎಲ್ಲಾ ಅಥವಾ ಯಾವುದಾದರೂ ಉದ್ದೇಶಗಳಿಗಾಗಿ ಬಳಸುವ ಭಾಷೆಯ ಬಗ್ಗೆ

೪. ಕೇಂದ್ರ ಸರ್ಕಾರವು ಕೆಲವೊಂದು ನಿರ್ದಿಷ್ಟ ಉದ್ದೇಶಗಳಿಗಾಗಿ ಯಾವ ಅಂಕಿಗಳನ್ನು ಬಳಸಬೇಕೆಂಬ ಬಗ್ಗೆ ರಾಷ್ಟ್ರಪತಿಗಳು ಆದೇಶವನ್ನು ನೀಡಬಹುದಿತ್ತು.

ಈ ಎಲ್ಲಾ ವಿಷಯಗಳಲ್ಲೂ ರಾಷ್ಟ್ರಪತಿಗಳ ಆದೇಶವು ನಮ್ಮನ್ನು ಮುನ್ನಡೆಸುವ ಬದಲು ಸ್ವಾತಂತ್ರ್ಯಪೂರ್ವದ ದಿನಗಳಿಗೆ ಕೊಂಡೊಯ್ಯುತ್ತದೆ. ಹಿಂದಿಯನ್ನು ಕ್ರಮಕ್ರಮವಾಗಿ ಬಳಸುವ ವಿಧಾನಗಳನ್ನು ನಿರ್ದಿಷ್ಟಗೊಳಿಸುವ ಬದಲು ಅದು ಗೃಹಸಚಿವಾಲಯವು ಇಂಗ್ಲಿಷ್ ಭಾಷೆಯ ಜೊತೆಗೆ, ಹಿಂದಿಯನ್ನು ಹಂತಹಂತವಾಗಿ ಬಳಸಲು ಮತ್ತು ಅದನ್ನು ಜಾರಿಗೊಳಿಸಲು ಬೇಕಾದ ಪ್ರಾಥಮಿಕ ಹೆಜ್ಜೆಗಳನ್ನು ಸಂವಿಧಾನದ ೩೪೩ನೇ ವಿಧಿಯ ೨ನೇ ಉಪವಿಧಿಯ ಅನ್ವಯ ತೆಗೆದುಕೊಳ್ಳಬೇಕು ಎಂದು ಹೇಳುತ್ತದೆ. ಹೊರನೋಟಕ್ಕೇ ತಿಳಿಯುವಂತೆ, ಹಿಂದಿಯನ್ನು ಉಪಯೋಗಿಸಲು ತನ್ನ ನೌಕರರನ್ನು ಸಿದ್ಧಪಡಿಸಲು ಸರಕಾರವು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅವರು ಈಗಿನ ತಮ್ಮ ವೇಗವನ್ನು ಹೆಚ್ಚಿಸಿಕೊಳ್ಳದೇ ಇದ್ದರೆ, ನಾವು ಇಂದು ಇರುವ ಜಾಗದಲ್ಲಿಯೇ ೧೯೬೫ರಲ್ಲಿಯೂ ಇರುತ್ತೇವೆ.

ಈಗಿರುವ ಪರಿಸ್ಥಿತಿಯಲ್ಲಿ ಈಗ ಯಾವ ಉದ್ದೇಶಗಳಿಗಾಗಿ ಇಂಗ್ಲಿಷನ್ನು ಬಳಸುತ್ತಿದ್ದೇವೆಯೋ ಅದನ್ನು ಕೈಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ, ಕೆಲವೊಂದು ಸಂದರ್ಭಗಳಲ್ಲಿ ಅಥವಾ ಉದ್ದೇಶಗಳಿಗಾಗಿ, ವಿದೇಶಗಳೊಡನೆ ವ್ಯವಹರಿಸುವಾಗ, ನಮ್ಮ ರಾಷ್ಟ್ರದ ಸಾರ್ವಭೌಮತ್ವವನ್ನು ಗಮನದಲ್ಲಿಟ್ಟುಕೊಂಡು, ನಾವು ಇಂಗ್ಲಿಷ್ ಬಳಕೆಯನ್ನು ಕೈಬಿಡಬೇಕಾಗುತ್ತದೆ. ಹಲವು ಬಾರಿ ನಾವು ಇದನ್ನು ಮಾಡಲೇಬೇಕಾದ ಸಂದರ್ಭಗಳು ಬರುತ್ತವೆ. ಕಮ್ಯುನಿಸ್ಟ್ ದೇಶಗಳು ಇಂಗ್ಲಿಷ್‌ಗೆ ಬದಲಾಗಿ ಹಿಂದಿಯನ್ನು ಬಳಸುವಂತೆ ಒತ್ತಾಯವನ್ನು ತರುತ್ತವೆ. ಅವುಗಳ ಈ ಒತ್ತಾಯದ ಹಿಂದೆ ಒಳ್ಳೆಯ ಭಾವನೆ ಇರದಿದ್ದರೂ, ನಾವು ಈ ಉದ್ದೇಶಗಳಿಗಾಗಿ ಇಂಗ್ಲಿಷನ್ನು ಬಳಸದ ನಿರ್ಣಯವನ್ನು ತೆಗೆದುಕೊಳ್ಳಬೇಕು.

ಭಾರತೀಯ ಪ್ರಕಟಣೆಗಳಲ್ಲಿ ಇಲ್ಲಿಯವರೆಗೆ ಬಳಸುತ್ತಿದ್ದ ದೇವನಾಗರಿ ಅಂಕಿಗಳನ್ನು ಇನ್ನು ಮುಂದೆ ಬಳಸಬಾರದು. ೩೪೮ನೆಯ ವಿಧಿಯನ್ವಯ ರಾಷ್ಟ್ರಪತಿಗಳು ಮಾಡಿರುವುದೆಂದರೆ, ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳ ಭಾಷೆ ಹಿಂದಿಯಾಗಿರಬೇಕು ಎಂಬುದನ್ನು ಒಪ್ಪಿಕೊಂಡಿರುವುದು. ಮುಂದಿನ ದಿನಗಳಲ್ಲಿ ತೀರ್ಪುಗಳು, ಆಜ್ಞೆಗಳು, ಆದೇಶಗಳು ಮೊದಲಾದವುಗಳನ್ನು ಐಚ್ಛಿಕವಾಗಿ ಹಿಂದಿ ಅಥವಾ ಸ್ಥಳೀಯ ಭಾಷೆಗಳಲ್ಲಿ (ವಿವಿಧ ರಾಜ್ಯಗಳ

ರಾಜ್ಯಭಾಷೆಗಳಲ್ಲಿ) ನೀಡಲು ಅವಕಾಶವನ್ನು ಮಾಡಿಕೊಡಲು ತಮ್ಮ ಪೂರ್ವಾನುಮತಿಯನ್ನು ಪಡೆದು ಸೂಕ್ತ ಕಾನೂನನ್ನು ರೂಪಿಸಬೇಕೆಂದು ಅವರು ಕಾನೂನು ಸಚಿವಾಲಯಕ್ಕೆ ನಿರ್ದೇಶಿಸಿದ್ದಾರೆ. ಇದು ಐಚ್ಛಿಕತೆಯ ಪ್ರಶ್ನೆಯಾದರೆ, ಅದು ಬಹಳ ಹಿಂದೆಯೇ ಆಗಬೇಕಾಗಿತ್ತು. ನ್ಯಾಯಾಲಯಗಳು ಹಿಂದಿ ಅಥವಾ ಸ್ಥಳೀಯ ಭಾಷೆಗಳನ್ನು ಉಪಯೋಗಿಸುತ್ತಿದ್ದ ಕೆಲವು ರಾಜ್ಯಗಳಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರಕಾರದ ಆದೇಶವು ಮಾಡಿರುವುದೆಂದರೆ, ಆ ಸರ್ಕಾರಗಳು ತಮ್ಮೆಲ್ಲಾ ವ್ಯವಹಾರಗಳಿಗೆ ಹಿಂದಿ ಅಥವಾ ಸ್ಥಳೀಯ ಭಾಷೆಗಳನ್ನು ಉಪಯೋಗಿಸುವಂತೆ ಮಾಡಿದ ಎಲ್ಲ ಕೆಲಸಗಳನ್ನೂ ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರಕಾರದ ಆದೇಶವು ತಿರುವುಮುರುವು ಮಾಡಿದೆ. ಕನಿಷ್ಠಪಕ್ಷ, ಕೇಂದ್ರ ಸರಕಾರದ ಈ ನೀತಿಯನ್ನಾದರೂ ಸರಿಪಡಿಸಬಹುದಿತ್ತು.

ವಿಜ್ಞಾನ ಮತ್ತು ಇತರ ಉದ್ದೇಶಗಳಿಗೆ ಸಂಬಂಧಿಸಿದ ಹೊಸ ಪಾರಿಭಾಷಿಕ ಪದಗಳ ವಿಷಯದಲ್ಲಿ ಅಂತಾರಾಷ್ಟ್ರೀಯ ಪಾರಿಭಾಷಿಕ ಪದಗಳನ್ನೇ ಒಪ್ಪಿಕೊಳ್ಳಬೇಕು ಮತ್ತು ಅವುಗಳನ್ನೇ ಭಾರತೀಯ ಭಾಷೆಗಳಿಗೆ ತಕ್ಕಹಾಗೆ ಅನುವಾದಿಸಿಕೊಳ್ಳಬೇಕು ಎಂದು ಈ ಆದೇಶವು ನಿರ್ದೇಶಿಸುತ್ತದೆ. ನಿಷ್ಕೃಷ್ಟತೆ ಮತ್ತು ಖಚಿತತೆಗಳು ಅಗತ್ಯವಾಗಿರುವ ಸಂದರ್ಭಗಳಲ್ಲಿ ವಿದೇಶೀ ಭಾಷೆಗಳ ಪಾರಿಭಾಷಿಕ ಪದಗಳು ಸೂಕ್ತವಾಗಿರುವುದಿಲ್ಲ ಎಂಬ ಶ್ರೀ ಘನಶ್ಯಾಮ್ ಸಿಂಗ್ ಅವರ ನೇತೃತ್ವದ ಭಾಷಾತಜ್ಞರ ಪರಿಷತ್ತು ಮಾಡಿದ ಸಲಹೆಗೆ ಸಂವಿಧಾನ ರಚನಾ ಮಂಡಲಿಯ ಅಧ್ಯಕ್ಷರು ಸಹಮತಿಸಿದ್ದರು ಮತ್ತು ಅವರ ವರದಿಯನ್ನು ಒಪ್ಪಿಕೊಂಡಿದ್ದರು ವಿಜ್ಞಾನ ಮತ್ತು ತಂತ್ರಜ್ಞಾನಗಳು ಮಾನವನ ಸಂಪೂರ್ಣ ಬದುಕನ್ನು ಆವರಿಸಿಕೊಳ್ಳುತ್ತಿರುವ ಯುಗದಲ್ಲಿ ಈ ಪ್ರಮಾಣದಲ್ಲಿ ಪಾರಿಭಾಷಿಕ ಪದಗಳನ್ನು ಆಮದು ಮಾಡಿಕೊಳ್ಳುವುದು ಆತ್ಮಘಾತುಕವಾಗುತ್ತದೆ. ಬಹುತೇಕ ಪಾರಿಭಾಷಿಕ ಪದಗಳನ್ನು ಭಾರತೀಕರಣ ಗೊಳಿಸುವುದು ಸಾಧ್ಯವಾಗುವುದಿಲ್ಲ. ಲ್ಯಾಟಿನ್ ಅಥವಾ ಗ್ರೀಕ್ ಮೂಲದಪದಗಳಿಗೆ ಸಂಸ್ಕೃತ ಪ್ರತ್ಯಯಗಳನ್ನು, ಪೂರ್ವಪ್ರತ್ಯಯಗಳನ್ನು ಜೋಡಿಸುವುದು ಸರಿಯಾಗ ಲಾರದು. ಈ ದೃಷ್ಟಿಯಿಂದ ನೋಡಿದರೂ ನಾವು ನಮ್ಮ ಸಂವಿಧಾನದಲ್ಲಿ ಅಂಗೀಕರಿಸಿರುವುದು ವಿವೇಕದ ಕ್ರಮವಾಗಿದೆ. ಅಧಿಕೃತ ಭಾಷೆಯಾಗಿ ಉಪಯೋಗಿಸುವ ಹಿಂದಿ ಭಾಷೆಯು ತನ್ನ ಪದಸಂಪತ್ತಿಗಾಗಿ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ನಮೂದಿಸಿರುವ ಸಂಸ್ಕೃತವನ್ನು ಉಪಯೋಗಿಸಿಕೊಳ್ಳಬೇಕು ಎಂದು ೩೫೧ನೆಯ ವಿಧಿಯು ಹೇಳುತ್ತದೆ. ಇಂಗ್ಲಿಷ್ ಭಾಷೆಯು ಈ ಎಂಟನೆಯ ಪರಿಚ್ಛೇದದಲ್ಲಿ ಸೇರಿಸಲ್ಪಟ್ಟಿಲ್ಲವೆಂಬುದನ್ನು ಗಮನಿಸಬೇಕು. ವಿದೇಶಿ ಪಾರಿಭಾಷಿಕ ಹಾಗೂ ಇತರ ಪದಗಳನ್ನು ಬಳಸುವುದು ಯಾವುದೇ ಭಾಷೆಯ ಸ್ವಭಾವ ಲಕ್ಷಣಗಳಿಗೆ

ವಿರೋಧವಾಗಿರುತ್ತದೆ ಎಂಬುದನ್ನು ಸಂವಿಧಾನದ ನಿರ್ಮಾಪಕರು ಅರಿತಿದ್ದರು.

ತನ್ನ ಒಪ್ಪಿಗೆಯಿಂದಲೇ ಈ ರೀತಿಯ ಆದೇಶವನ್ನು ರಾಷ್ಟ್ರಪತಿಗಳ ಮೂಲಕ ಹೊರಡಿಸಿರುವ ಕೇಂದ್ರ ಸರ್ಕಾರವು ಸಂವಿಧಾನದ ವಿಧಿಗಳನ್ನು ನಿರ್ಲಕ್ಷಿಸಿ ತನ್ನ ಉದ್ದೇಶವನ್ನು ನೆರವೇರಿಸಿಕೊಳ್ಳಲು ಕಟಿಬದ್ಧವಾಗಿದೆ. ಸ್ವತಂತ್ರ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ೧೯೪೮ರಲ್ಲಿ ನಡೆದ ಶಿಕ್ಷಣ ಮಂತ್ರಿಗಳ ಸಭೆಯಲ್ಲಿ ಮುಂದಿನ ಐದು ವರ್ಷಗಳಲ್ಲಿ ಇಂಗ್ಲಿಷಿನ ಜಾಗದಲ್ಲಿ ಹಿಂದಿಯನ್ನು ಪ್ರತಿಷ್ಠಾಪಿಸುವ ನಿರ್ಣಯವನ್ನು ತೆಗೆದುಕೊಳ್ಳಲಾಗಿತ್ತು. ಸಂವಿಧಾನ ರಚನಾ ಮಂಡಲಿಯು ಈ ಅವಧಿಯನ್ನು ಹದಿನೈದು ವರ್ಷಗಳಿಗೆ ವಿಸ್ತರಿಸಿತ್ತು. ಆದರೆ ಸರ್ಕಾರವು ಇದನ್ನು ಅನಿರ್ದಿಷ್ಟ ಅವಧಿಯವರೆಗೆ ವಿಸ್ತರಿಸಲು ಯೋಚಿಸುತ್ತಿರುವಂತೆ ಕಾಣುತ್ತದೆ. ಹೀಗೆ ಇಂಗ್ಲಿಷ್‌ನಿಂದ ಹಿಂದಿಗೆ ಬದಲಾಯಿಸುವಾಗ, ಹಿಂದಿಯೇತರರಿಗೆ ಉದ್ಯೋಗ ಮತ್ತಿತರ ಅವಕಾಶಗಳಲ್ಲಿ ಅನ್ಯಾಯವಾಗದಂತೆ ನೋಡಿಕೊಳ್ಳಬೇಕಾದುದು ಅತ್ಯಾವಶ್ಯಕ ಎಂಬುದು ಅರ್ಥವಾಗುವಂತಹುದೇ. ಹಿಂದಿಯೇತರರಿಗೆ ಕೇವಲ ವ್ಯಾವಹಾರಿಕ ಹಿಂದಿಯಷ್ಟೇ ಅಲ್ಲದೆ ಆ ಭಾಷೆಯ ಮೇಲೆ ಒಳ್ಳೆಯ ಪ್ರಭುತ್ವವನ್ನು ಸಾಧಿಸಲು ಅನುಕೂಲಗಳನ್ನು ಮಾಡಿಕೊಡಬೇಕು. ಇಂದು ಬೇರೆ ಬೇರೆ ಚಾರಿತ್ರಿಕ ಕಾರಣಗಳಿಂದಾಗಿ ಕೇಂದ್ರ ಸರ್ಕಾರದಲ್ಲಿ ಬಹುಸಂಖ್ಯೆಯಲ್ಲಿರುವ, ಮತ್ತು ಹಿಂದಿ ಭಾಷೆಗೆ ವಿರೋಧವನ್ನು ತೋರಿಸುತ್ತಿರುವ, ಬಂಗಾಳಿ ಮತ್ತು ತಮಿಳು ಭಾಷಿಕರು ಹಿಂದಿ ಭಾಷೆಯನ್ನು ಕಲಿಯಬಲ್ಲರು, ಕಲಿಯುತ್ತಾರೆ ಅಷ್ಟೇ ಅಲ್ಲ, ಮಾತೃಭಾಷೆಯಾಗಿ ಹಿಂದಿಯನ್ನು ಮಾತನಾಡುವವರಿಗಿಂತ ಹೆಚ್ಚಿನ ಪ್ರಭುತ್ವವನ್ನು ಪಡೆದುಕೊಳ್ಳುತ್ತಾರೆ ಎಂಬುದರಲ್ಲಿ ನನಗೆ ಸಂಶಯವೇ ಇಲ್ಲ. ಅವರು ಇಂಗ್ಲಿಷಿನಲ್ಲಿ ಇಂಗ್ಲಿಷಿನವರಿಗಿಂತ ಹೆಚ್ಚಿನ ಪರಿಣತಿಯನ್ನು ಸಾಧಿಸಬಹುದಾದರೆ, ಹಿಂದಿಯಲ್ಲಿಯೂ ಅಂತಹ ಪರಿಣತಿಯನ್ನು ಖಂಡಿತವಾಗಿಯೂ ಸಾಧಿಸುತ್ತಾರೆ. ಇದಕ್ಕಾಗಿ ಅವರಿಗೆ ಅಗತ್ಯವಾದ ಸೌಲಭ್ಯಗಳನ್ನು ಮತ್ತು ಸವಲತ್ತುಗಳನ್ನು ನೀಡುವುದರ ಬದಲು, ಸರಕಾರವು ನಿಷ್ಕ್ರಿಯವಾಗಿ ಕುಳಿತಿದೆ. ತಾನು ಮಾಡಬೇಕಾದದ್ದನ್ನು ಮಾಡದೆ, ಮಾಡದೆ ಇರಬೇಕಾದದ್ದನ್ನು ಮಾಡಿದ ಪಾಪದ ಹೊರೆಯನ್ನು ಹೊತ್ತಿರುವ ಸರಕಾರವು ಹಿಂದಿಯೇತರರನ್ನು ಅಥವಾ ಹಿಂದಿ ವಿರೋಧಿಗಳನ್ನು ದೂರುವುದು ಕೇವಲ ಒಂದು ಕುಂಟು ನೆಪವಾಗಿದೆ. ಸಾಮಾನ್ಯ ಪಾರಿಭಾಷಿಕ ಪದಗಳನ್ನು ನಿರ್ಧರಿಸಲು ಒಂದು ಸಮಿತಿಯನ್ನು ಅಥವಾ ಆಯೋಗವನ್ನು ನೇಮಿಸುವುದಕ್ಕೆ ಅವರು ಎಂದೂ ವಿರೋಧವನ್ನು ವ್ಯಕ್ತಪಡಿಸಿಲ್ಲ. ಒಂದು ಶಿಷ್ಟ ಕೀಲಿಮಣೆಯನ್ನು ಅಧಿಕೃತಗೊಳಿಸದಂತೆ ಸರಕಾರವನ್ನು ತಡೆದವರು ಯಾರು? ಕಾನೂನಿನ ಹೊತ್ತಿಗೆಗಳನ್ನಾಗಲೀ, ಇತರ ಸರ್ಕಾರೀ ಪ್ರಕಟಣೆಗಳನ್ನಾಗಲೀ ಹಿಂದಿಯುಲ್ಲಿ ಪ್ರಕಟಿಸಬಾರದೆಂದು

ರಾಜಾಜಿಯವರಾಗಲೀ, ಸುನೀತಿ ಕುಮಾರ ಚಟರ್ಜಿಯವರಾಗಲೀ ಬೇಡಿಕೆಯನ್ನು ಸಲ್ಲಿಸಿರಲಿಲ್ಲ. ಕೆಲವರು ಹಿಂದಿಯ ವಿರುದ್ಧ ಹುಚ್ಚಾಟಗಳಿಗೆ ಇಳಿದಿರುವುದಕ್ಕೆ ಅಥವಾ ಹಾಗೆ ಅವರು ಕಾಣುವುದಕ್ಕೆ ಸರ್ಕಾರದ ಸೋಮಾರಿತನ ಹಾಗೂ ನಿಷ್ಕ್ರಿಯ ಪ್ರವೃತ್ತಿಯೇ ಕಾರಣ. ಹಿಂದಿಗೆ ತೋರುತ್ತಿರುವ ವಿರೋಧದಿಂದ ಪ್ರತಿಕ್ರಿಯೆಗಳು ಮೂಡುತ್ತಿವೆ. ಸಹಮತವಿರಬೇಕಾದ ಕಡೆ ವಿವಾದಗಳು ಸೃಷ್ಟಿಯಾಗುತ್ತಿವೆ. ಈ ವಿಷಯದಲ್ಲಿ ಡಾ. ರಾಮ ಮನೋಹರ ಲೋಹಿಯಾ ಮತ್ತು ರಾಜಾಜಿಯವರು ಇಬ್ಬರೂ ಎರಡು ವಿರುದ್ಧ ಧ್ರುವಗಳಲ್ಲಿರುವವರಂತೆ ಕಾಣಬಹುದು. ಆದರೆ, ಹೀಗಾಗುವುದಕ್ಕೆ ಸರ್ಕಾರವು ಕಳೆದ ಹದಿಮೂರು ವರ್ಷಗಳಲ್ಲಿ ಇಂಗ್ಲಿಷಿನ ಹಿಡಿತದಿಂದ ತಪ್ಪಿಸಲು ಯಾವ ಕ್ರಮವನ್ನೂ ತೆಗೆದುಕೊಳ್ಳದಿರುವುದೇ ಕಾರಣ. ತಮಿಳಿನ ಮಕ್ಕಳಿಗೆ ಹಿಂದಿಯನ್ನು ಕಲಿಸುವಾಗ ಅವರ ಭವಿಷ್ಯವು ಸುರಕ್ಷಿತವಾಗುತ್ತದೆ ಎಂಬ ಆಶ್ವಾಸನೆಯು ದೊರೆತರೆ ರಾಜಾಜಿಯವರು ಹಿಂದಿಯ ಕಲಿಕೆಗೆ ವಿರೋಧವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಹಿಂದಿಯನ್ನು ಕ್ರಮಕ್ರಮವಾಗಿ ಬಳಸಲು ಸರ್ಕಾರವು ಎಲ್ಲ ಕ್ರಮಗಳನ್ನೂ ತೆಗೆದುಕೊಂಡಿದ್ದರೆ, ಡಾ. ರಾಮ ಮನೋಹರ ಲೋಹಿಯಾ ಅವರು ಇಂಗ್ಲಿಷ್ ನಾಮಫಲಕಗಳ ಮೇಲೆ ಟಾರನ್ನು ಬಳಿಯುವಷ್ಟು ನಿರಾಶಾಭಾವನೆಯನ್ನು ಹೊಂದುತ್ತಿರಲಿಲ್ಲ.

ಈ ವಿಷಯದಲ್ಲಿ ಸಂವಿಧಾನವು ರಾಷ್ಟ್ರಪತಿಗಳ ಮೇಲೆ ಒಂದು ವಿಶೇಷ ಹೊಣೆಯನ್ನು ಹೊರಿಸಿದೆ. ಆದರೆ ತಮ್ಮ ಹೊಣೆಯಿಂದ ಹಿಂದೆ ಸರಿದ ರಾಷ್ಟ್ರಪತಿಗಳು ಆ ಹೊಣೆಯನ್ನು ಕೇಂದ್ರ ಗೃಹ ಸಚಿವಾಲಯದ ಹೆಗಲಿಗೆ ಜಾರಿಸಿದ್ದಾರೆ. ಗೃಹ ಸಚಿವಾಲಯವು ಪ್ರಾಮಾಣಿಕವಾಗಿ ತನ್ನ ಕರ್ತವ್ಯವನ್ನು ಮಾಡುತ್ತದೆಯೇ? ಅದು ಹಾಗೆ ಮಾಡುತ್ತದೆಯೇ ಇಲ್ಲವೇ ಎಂಬುದು ಹಿಂದಿಯನ್ನು ಇಂಗ್ಲಿಷಿನ ಸ್ಥಾನದಲ್ಲಿ ಪ್ರತಿಷ್ಠಾಪಿಸಲಿದೆಯೇ ಎಂಬುದರ ಮೇಲೆ ಅವಲಂಬಿತವಾಗಿದ್ದು ಅದನ್ನು ನಾವು ೧೯೬೫ರಲ್ಲಿ ನೋಡುತ್ತೇವೆ. ಈಗಿರುವ ನೀತಿಯೇ ಮುಂದುವರೆದರೆ, ಇಂಗ್ಲಿಷ್ ಭಾಷೆಯು ೧೯೬೫ರ ನಂತರವೂ ಸಹ–ಭಾಷೆಯಾಗಿರುವದರ ಬದಲು, ಕನಿಷ್ಠ ವ್ಯವಹಾರದಲ್ಲಿಯಾದರೂ, ಮುಖ್ಯ ಭಾಷೆಯಾಗಿಯೇ ಇರುತ್ತದೆ.

* * * * *

# ಭಾರತ–ಅಮೆರಿಕ ಆಹಾರ ಒಪ್ಪಂದ

ನಾವು ಆಹಾರ ಸಚಿವ ಶ್ರೀ ಎಸ್. ಕೆ. ಪಾಟೀಲ್ ಅವರನ್ನು ಹೂಗುಚ್ಛವನ್ನಿತ್ತು ಅಭಿನಂದಿಸುವುದು ಅವರು ವಿದೇಶದಿಂದ ಹಿಂದಿರುಗುವ ಸಮಯದಲ್ಲಲ್ಲ, ಆದರೆ, ಅವರು ದೇಶದಲ್ಲಿನ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿ, ಭಿಕ್ಷಾಪಾತ್ರೆಯನ್ನು ಹಿಡಿದು ಪ್ರಪಂಚವನ್ನೆಲ್ಲಾ ಸುತ್ತಿದ ಸ್ವತಂತ್ರ ಭಾರತದ ಕೊನೆಯ ಆಹಾರ ಸಚಿವರು ತಾವು ಎಂದು ಪ್ರಪಂಚಕ್ಕೆ ತೋರಿಸಿಕೊಟ್ಟಾಗ.

ಆಹಾರದ ಕೊರತೆಯು ಸರ್ಕಾರದ ಹಾಗೂ ಪ್ರಜೆಗಳ ತಲೆನೋವಾಗಿರುವಾಗ, ಅಮೆರಿಕಾ ಪಬ್ಲಿಕ್ ಲಾ (ಪಿ.ಎಲ್.) ೪೮೦ರ ಅನ್ವಯ ರೂ. ೬೭೦ ಕೋಟಿಯ ಸಾಲದ ಒಪ್ಪಂದವು ಮಂಜೂರಾದ ಸಂದರ್ಭದಲ್ಲಿ ದೇಶದಲ್ಲಿನ ಸಾಮಾನ್ಯ ಭಾವನೆಯು ಈ ಋಣದಾತರಿಗೆ ಕೃತಜ್ಞರಾಗಿರುವುದು ಸಹಜವಾಗಿಯೇ ಇದೆ. ಈ ಸಕಾಲಿಕ ಸಹಾಯವನ್ನು, ಅದರಲ್ಲಿಯೂ ಅಭೂತಪೂರ್ವ ಪ್ರಮಾಣದಲ್ಲಿ, ತಂದುದಕ್ಕಾಗಿ ಶ್ರೀ ಎಸ್. ಕೆ. ಪಾಟೀಲರು ಸಹಜವಾಗಿಯೇ ಹೆಮ್ಮೆಪಟ್ಟುಕೊಳ್ಳಬಹುದು. ಅಮೆರಿಕ ಸಂಯುಕ್ತ ಸಂಸ್ಥಾನವು ಈ ಒಪ್ಪಂದಕ್ಕೆ ಎಷ್ಟು ಮಹತ್ವವನ್ನು ಕೊಟ್ಟಿತು ಎಂಬುದು ಅಧ್ಯಕ್ಷ ಐಸೆನ್‌ಹೋವರ್ ಅವರು, ಸಂಪ್ರದಾಯವನ್ನು ಮುರಿದು, ಈ ಒಪ್ಪಂದಕ್ಕೆ ತಾವೇ ಸಹಿಹಾಕಿದರು. ಆದರೆ, ಭಾರತ ಸರ್ಕಾರದ ಪರವಾಗಿ ರಾಷ್ಟ್ರಾಧ್ಯಕ್ಷರಾಗಲೀ, ಸರ್ಕಾರದ ಮುಖ್ಯರಾದ ಪ್ರಧಾನಮಂತ್ರಿಯವರಾಗಲೀ ಅಲ್ಲಿ ಹಾಜರಿರಲಿಲ್ಲ. ಅಲ್ಲಿದ್ದವರು ಆಹಾರ ಮತ್ತು ಕೃಷಿ ಸಚಿವರಾದ ಶ್ರೀ ಎಸ್. ಕೆ. ಪಾಟೀಲ್ ಅವರು ಮಾತ್ರ. ಲಡಾಖ್ ಮತ್ತು ನೇಫಾಗಳ ಮೇಲಿನ ಚೀನಾ ಆಕ್ರಮಣದಿಂದಾಗಿ ಬದಲಾಗಿರುವ ಸನ್ನಿವೇಶದಲ್ಲಿ ಜನತೆಯು ಅಮೆರಿಕದ ಬಗ್ಗೆ ಇದ್ದ ಬದ್ಧದ್ವೇಷವನ್ನು ದೂರಮಾಡಿದ್ದಾರೆ. ಅಂತಹ ಸನ್ನಿವೇಶದಲ್ಲಿ ಅಮೆರಿಕದವರ ಈ ನಡೆ ಭಾರತದ ಜನತೆಯ ಸ್ನೇಹವನ್ನು ಸಂಪಾದಿಸುವ ಸಲುವಾಗಿ ಅವರ ರಾಜಕೀಯ ಮುತ್ಸದ್ಧಿತನದ ನಡೆಯಾಗಿದೆ. ಇದರಿಂದಾಗಿ, ವಾಷಿಂಗ್ಟನ್ನಿನಲ್ಲಿರುವ ಭಾರತದ ರಾಯಬಾರಿ ಶ್ರೀ ಛಾಗ್ಲಾ ಅವರ ಭಾರತ–ಅಮೆರಿಕದ ಸಂಬಂಧವು ಹಿಂದಿನ ಎಲ್ಲಾ ಕಾಲಗಳಲ್ಲಿದ್ದುದಕ್ಕಿಂತ ಉನ್ನತ ಮಟ್ಟದಲ್ಲಿದೆ ಎಂಬ ಮಾತನ್ನು ಭಾರತದಲ್ಲಿರುವ ಅಮೆರಿಕದ ರಾಯಭಾರಿ ಶ್ರೀ ಎಲ್ಸ್‌ವರ್ಥ್ ಬಂಕರ್ ಅವರು ಹಲವಾರು ಬಾರಿ ಪುನರುಚ್ಚರಿಸಿರುವುದು ಆಶ್ಚರ್ಯಕರವೇನೂ ಅಲ್ಲ. ತಮ್ಮ

ದೇಶದ ಈ ನಿರ್ಣಯವು ರಾಜಕೀಯ ಪ್ರೇರಿತವಾದ ನಿಲವಿನಿಂದಲೂ ಸಾಧ್ಯವಾಗಿದೆ ಎಂದು ಮುಕ್ತವಾಗಿ ಹೇಳಿದ್ದಾರೆ. "ಅಮೆರಿಕದ ಪಬ್ಲಿಕ್ ಲಾ ೪೮೦ರ ಪ್ರಕಾರ ನೀಡಿದ ಈ ನೆರವು ಭಾರತದ ಆಂತರಿಕ ಆರ್ಥಿಕತೆಯನ್ನು ಬಲಪಡಿಸುತ್ತದೆ. **ಇಲ್ಲಿನ ರಾಜಕೀಯ ಜೀವನವನ್ನು ಸ್ಥಿರಗೊಳಿಸುತ್ತದೆ** ಮತ್ತು ಅದರ ಪ್ರಗತಿಗೆ ಸಹಾಯವಾಗುತ್ತದೆ" ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

**ಪಬ್ಲಿಕ್ ಲಾ ೪೮೦ ಎಂದರೇನು?**

ಈ ಒಪ್ಪಂದವನ್ನು ಕೇವಲ ಔದಾರ್ಯವೆಂದು, ರಾಜಕೀಯ ಮುತ್ಸದ್ಧಿತನವೆಂದು ಮತ್ತು ಇದರಿಂದ ಅಮೆರಿಕದ ಆರ್ಥಿಕತೆಗೆ ಯಾವ ಪ್ರಯೋಜನವೂ ಇಲ್ಲವೆಂದು ತೀರ್ಮಾನಿಸುವುದು ತಪ್ಪಾಗುತ್ತದೆ. ೧೯೫೪ರಲ್ಲಿ ಪಬ್ಲಿಕ್ ಲಾ ಅನ್ನು ಅಮೆರಿಕದ ಕಾಂಗ್ರೆಸ್ ರೂಪಿಸಿದಾಗ ಅಮೆರಿಕದ ಕೃಷಿಗೆ ಆರ್ಥಿಕ ಸ್ಥಿರತೆಯನ್ನು ತಂದುಕೊಡುವುದು ಮತ್ತು ಅದರ ಕೃಷಿ ಉತ್ಪನ್ನಗಳಿಗೆ ವಿದೇಶಗಳಲ್ಲಿ ಮಾರುಕಟ್ಟೆಯನ್ನು ವಿಸ್ತರಿಸುವುದು ಅದರ ಮುಖ್ಯ ಗುರಿಯಾಗಿತ್ತು. ೧೯೫೯ರ ಡಿಸೆಂಬರ್ ೩೧ರವರೆಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ದರದಲ್ಲಿ ೩೮ ದೇಶಗಳಿಗೆ ೪೧೫೬ ದಶಲಕ್ಷ ಡಾಲರ್ (ರೂ. ೧೯೭೮ ಕೋಟಿ) ಮೌಲ್ಯದ ಕೃಷಿ ಉತ್ಪನ್ನಗಳ ಮಾರಾಟವಾಗಿದ್ದಿತು. ಆದ್ದರಿಂದ, ಈ ಒಪ್ಪಂದವು ಎರಡೂ ದೇಶಗಳ ಆರ್ಥಿಕ ಹಿತವನ್ನು ವೃದ್ಧಿಪಡಿಸಲು ಸಹಾಯವಾಗುತ್ತದೆ ಮತ್ತು, ಆಸಕ್ತರು ಇದಕ್ಕೆ ಯಾವ ರಾಜಕೀಯ ಅರ್ಥವನ್ನು ಆರೋಪಿಸಿದರೂ, ನಾವು ಈ ಒಪ್ಪಂದವನ್ನು ವಾಸ್ತವಿಕತೆಯ ದೃಷ್ಟಿಯಿಂದ ಮತ್ತು ವಸ್ತುನಿಷ್ಠವಾಗಿ ಪರಿಶೀಲಿಸಬೇಕು. ಈ ಒಪ್ಪಂದದಿಂದಾಗಿ ಅತ್ಯಂತ ಕಷ್ಟಕರವಾದ ಸಮಯದಲ್ಲಿ ನಮಗೆ ಅನುಕೂಲವಾದ ಹಾಗೆಯೇ, ಅಮೇರಿಕಕ್ಕೂ ಅದರ ಕೃಷಿ ಉತ್ಪನ್ನಗಳಿಗೆ ಮುಂದಿನ ದಿನಗಳಲ್ಲಿ ಒಂದು ಮಾರುಕಟ್ಟೆಯನ್ನು ದೊರಕಿಸಿತು.

ಪ್ರಸಕ್ತ ಒಪ್ಪಂದವು ಪಿ.ಎಲ್. ೪೮೦ರ ಅಡಿಯಲ್ಲಿ ಮಾಡಿಕೊಂಡ ಹಲವು ಒಪ್ಪಂದಗಳಲ್ಲಿ ಒಂದು. ಮೊದಲ ಒಪ್ಪಂದಕ್ಕೆ ೧೯೫೬ರ ಆಗಸ್ಟ್ ೧೯ರಂದೂ ಹಾಗೂ ಐದನೆಯದಕ್ಕೆ ೧೯೬೦ರ ಮೇ ೪ರಂದೂ ಸಹಿ ಹಾಕಲಾಯಿತು. ಮೊದಲ ನಾಲ್ಕು ಒಪ್ಪಂದಗಳು ಒಟ್ಟು ರೂ. ೪೬೦ ಕೋಟಿ ಮೌಲ್ಯದ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವುದಕ್ಕೆ ಸಂಬಂಧಪಟ್ಟಿದ್ದರೆ, ಐದನೆಯದು ರೂ. ೬೦೭ ಕೋಟಿ ಮೌಲ್ಯದ ಸಾಮಗ್ರಿಗಳಿಗೆ ಸಂಬಂಧಪಟ್ಟಿದೆ. ಇದು ೧೬ ದಶಲಕ್ಷ ಮೆಟ್ರಿಕ್ ಟನ್ ಗೋಧಿ ಮತ್ತು ಒಂದು ದಶಲಕ್ಷ ಮೆಟ್ರಿಕ್ ಟನ್ ಅಕ್ಕಿಯ ಸರಬರಾಜಿಗಾಗಿ ಮಾಡಿಕೊಳ್ಳಲ್ಪಟ್ಟಿದೆ. ಈ ಒಪ್ಪಂದದ ಪ್ರಕಾರ ನಾವು ಪಡೆಯುವ ಈ ಸಾಮಗ್ರಿಗಳ ಬೆಲೆ ಮತ್ತು ಹಡಗಿನ ಮೂಲಕ ಅವನ್ನು ತಲುಪಿಸುವ ವೆಚ್ಚಕ್ಕೆ

ಅಗತ್ಯವಾದ ಹಣವನ್ನು ಅಮೆರಿಕ ಸರ್ಕಾರ ನೀಡಲಿದೆ. ಈ ವರ್ಷದ ಸೆಪ್ಟೆಂಬರ್ ೩೦ರ ನಂತರ, ಅಂದರೆ ಅಮೆರಿಕದಿಂದ ರಫ್ತು ಕಾರ್ಯ ಪ್ರಾರಂಭವಾಗುವಾಗ ಈ ಹಣದಲ್ಲಿ ಕಾಲುಭಾಗವನ್ನು ಬಿಡುಗಡೆಮಾಡುತ್ತಾರೆ. ಉಳಿದ ಹಣವನ್ನು ೧೯೬೧ರ ಜನವರಿ ೧ರ ನಂತರ, ಅಲ್ಲಿಂದ ಸಾಮಗ್ರಿಗಳು ರಫ್ತಾದ ಹಾಗೆ, ಅದರ ಬೆಲೆ ಮತ್ತು ವ್ಯಾಪಾರದ ನಿಯಮಗಳ ಪ್ರಕಾರ, ಬಿಡುಗಡೆ ಮಾಡಲಾಗುತ್ತದೆ. ಅಮೆರಿಕ ಸರ್ಕಾರವು ಈ ಸಾಮಗ್ರಿಗಳ ಮಾರಾಟದ ಬೆಲೆಯಲ್ಲಿ ರೂ. ೫೧೨ ಕೋಟಿಯನ್ನು ಭಾರತ ಸರ್ಕಾರಕ್ಕೆ ನೀಡಲು ಒಪ್ಪಿಕೊಂಡಿದೆ. ಇದರಲ್ಲಿ ಅರ್ಧಭಾಗವನ್ನು ಅನುದಾನವಾಗಿಯೂ, ಉಳಿದ ಅರ್ಧಭಾಗವನ್ನು ಶೇ. ೪ರ ಬಡ್ಡಿ ದರವಿರುವ ಸಾಲದ ರೂಪದಲ್ಲಿಯೂ ಕೊಡುತ್ತದೆ. ಉಳಿದ ರೂ. ೯೫ ಕೋಟಿ ಹಣವನ್ನು ಅಮೆರಿಕದ ರಾಯಭಾರಿ ಕಚೇರಿಯು ಭಾರತದಲ್ಲಿನ ತನ್ನ ದೈನಂದಿನ ವೆಚ್ಚಕ್ಕಾಗಿ ಉಪಯೋಗಿಸಿಕೊಳ್ಳುತ್ತದೆ.

**ಒಪ್ಪಂದದ ನಿಯಮಗಳು**

ಈ ಒಪ್ಪಂದವು ಪ್ರಸಕ್ತ ಆಹಾರದ ಸಮಸ್ಯೆಯನ್ನು ನಿವಾರಿಸಲು ಮಾತ್ರ ಮಾಡಿಕೊಳ್ಳಲಾಗಿಲ್ಲ. ಆದರೆ, ನಾಲ್ಕು ದಶಲಕ್ಷ ಟನ್ ಗೋಧಿಯ ಹಾಗೂ ಒಂದು ದಶಲಕ್ಷ ಟನ್ ಅಕ್ಕಿಯ ಕಾಪುದಾಸ್ತಾನನ್ನು ಸಂಗ್ರಹಿಸಲು ಇದರಿಂದ ಅನುಕೂಲವಾಗುತ್ತದೆ. ಈ ಕಾಪುದಾಸ್ತಾನು ಅವರು ತಾವು ಆಹಾರ ಮತ್ತು ಕೃಷಿ ಸಚಿವರಾಗಿ ಅಧಿಕಾರವನ್ನು ವಹಿಸಿಕೊಂಡಾಗಿನಿಂದ ಇಂತಹ ಒಂದು ಕಾಪು ದಾಸ್ತಾನನ್ನು ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ. ಈ ಒಪ್ಪಂದವು ಅವರಿಗೆ ಅವರ ಈ ನೀತಿಯನ್ನು ಕಾರ್ಯಗತಗೊಳಿಸಲು ಸಹಾಯಮಾಡುತ್ತದೆ. ಆಹಾರ ಪದಾರ್ಥಗಳ ಬೆಲೆಯನ್ನು ಕಡಿಮೆ ಮಾಡಿದರೆ, ಹಣದುಬ್ಬರವನ್ನು ತಡೆಗಟ್ಟಬಹುದು ಮತ್ತು ದೇಶದ ಆರ್ಥಿಕತೆಯನ್ನು ಭದ್ರ ಅಡಿಪಾಯದ ಮೇಲೆ ನಿಲ್ಲಿಸಬಹುದು ಎಂದು ಭಾವಿಸಲಾಗಿದೆ.

ಭಾರತದ ಆರ್ಥಿಕತೆಗೆ ಈ ಒಪ್ಪಂದದ ಪ್ರಕಾರ ಆಮದು ಮಾಡಿಕೊಳ್ಳುವ ಆಹಾರಪದಾರ್ಥಗಳಿಂದ ಆಗುವ ಉಪಯೋಗವನ್ನು ನಾವು ಅಲ್ಲಗಳೆಯುವುದಿಲ್ಲ. ಆದರೆ, ಸರ್ಕಾರವು ಜಾಗರೂಕತೆಯಿಂದ ಇರಬೇಕೆಂದು ನಾವು ಅಪೇಕ್ಷಿಸುತ್ತೇವೆ. ಸಾಮಾನ್ಯ ಭಾರತೀಯನ ಮನೆ ಖರ್ಚಿನಲ್ಲಿ ಆಹಾರ ಪದಾರ್ಥಗಳು ಪ್ರಮುಖ ಭಾಗವಾಗಿರುತ್ತದೆ ಎಂಬುದರಲ್ಲಿ ಸಂಶಯವೇನೂ ಇಲ್ಲ. ನಮ್ಮ ದೇಶದಲ್ಲಿ ಶೇ. ೭೦ಕ್ಕಿಂತ ಹೆಚ್ಚು ಜನರು ಆಹಾರಕ್ಕಾಗಿ ಕೃಷಿ ಉತ್ಪನ್ನಗಳನ್ನು ಮತ್ತು ತಮ್ಮ ಕೊಳ್ಳುವ ಆರ್ಥಿಕ ಶಕ್ತಿಗಾಗಿ ಇತರ ಕೃಷಿ ಉತ್ಪನ್ನಗಳನ್ನು ಅವಲಂಬಿಸಿದ್ದಾರೆ.

ಸರಕಾರದ ಕಾಪುದಾಸ್ತಾನು ನೀತಿಯಿಂದ ದೇಶದಲ್ಲಿನ ಕೃಷಿ ಉತ್ಪಾದನೆಯು ಕುಂಠಿತಗೊಂಡರೆ ದೇಶವು ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲೇನೂ ಇರುವುದಿಲ್ಲ. ಹೀಗಾದರೆ, ಈ ಒಪ್ಪಂದದಿಂದ ಅಮೆರಿಕದ ರೈತರಿಗೆ ಲಾಭವಾಗಿ, ಭಾರತದ ರೈತರಿಗೆ ನಷ್ಟವಾಗುವಂತೆ ಆಗುವುದಿಲ್ಲವೇ? ಈ ಆತಂಕಕ್ಕೆ ಮತ್ತೂ ಒಂದು ಕಾರಣವಿದೆ. ಈ ಒಪ್ಪಂದದ ಪ್ರಕಾರ ಆಮದು ಮಾಡಿಕೊಳ್ಳಬೇಕಾಗಿರುವ ಗೋಧಿ ಮತ್ತು ಅಕ್ಕಿಯ ಜೊತೆಗೆ, ಭಾರತವು ವಿಶ್ವಮಾರುಕಟ್ಟೆಯಿಂದ ೧೪,೬೮೦,೦೦೦ ಬುಷೆಲ್ ಗೋಧಿಯನ್ನು ಕೊಳ್ಳುವುದಾಗಿ ಒಪ್ಪಿಕೊಂಡಿದೆ. ಅಮೆರಿಕ ಮತ್ತು ಭಾರತದ ನಡುವಿನ ಈ ಒಪ್ಪಂದದಿಂದಾಗಿ ಕೆನಡಾ ಮತ್ತು ಆಸ್ಟ್ರೇಲಿಯಾದಿಂದ ಕೊಳ್ಳಬೇಕಾದ ಗೋಧಿಯ ಪ್ರಮಾಣ ಕಡಿಮೆಯಾಗುವ ಭಯದಿಂದ ಒಪ್ಪಂದದ ಈ ನಿಯಮವನ್ನು ನಮ್ಮ ಮೇಲೆ ಹೇರಲಾಗಿದೆ. ತನ್ನ ಅಗತ್ಯಕ್ಕಿಂತ ಅತಿ ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕೆಂದು ಭಾರತವನ್ನು ಒತ್ತಾಯಿಸುವ ಈ ಅಂಶ ಸಂಪೂರ್ಣವಾಗಿ ಅನ್ಯಾಯದಿಂದ ಕೂಡಿದೆ. ಇದರಿಂದ ಭಾರತದ ಕೃಷಿ ಉತ್ಪನ್ನಗಳ ಬೆಲೆಯು ಪಾತಾಳಕ್ಕಿಳಿಯುತ್ತದೆ.

### ವಿದೇಶೀ ಆಹಾರದಿಂದ ನಮಗೆ ಮುಕ್ತಿ ಬೇಕು

ಆಹಾರಧಾನ್ಯಗಳ ಬೆಲೆಯಲ್ಲಿನ ಕುಸಿತ ಸಾಮಾನ್ಯ ಪದಾರ್ಥಗಳ ಬೆಲೆಗಳ ಕುಸಿತಕ್ಕೂ ಕಾರಣವಾಗುತ್ತದೆ ಎಂದು ಹೇಳುವುದು ಸಂಪೂರ್ಣವಾಗಿ ಸತ್ಯವಲ್ಲ. ಆಹಾರ ಪದಾರ್ಥಗಳ ಕೊರತೆ ಬೆಲೆ ಏರಿಕೆಗೆ ಉತ್ತೇಜನವನ್ನು ನೀಡಿದರೂ, ಒಟ್ಟಾರೆ ಬೆಲೆ ಏರಿಕೆಯನ್ನು ಸರ್ಕಾರದ ಆರ್ಥಿಕ ಮತ್ತು ಹಣಕಾಸಿನ ಹಾಗೂ ಔದ್ಯೋಗಿಕ ನೀತಿಗಳ ಹಿನ್ನೆಲೆಯಲ್ಲಿ ನೋಡಬೇಕು. ಕೃಷಿ ಉತ್ಪನ್ನಗಳ ಬೆಲೆ ಕುಸಿದಿರುವ ಸಮಯದಲ್ಲಿಯೇ ಉತ್ಪಾದಿತ ವಸ್ತುಗಳ ಬೆಲೆಯು ಏರುತ್ತಲೇ ಹೋಗಲೂಬಹುದು.

ಅಮೆರಿಕದ ಪಬ್ಲಿಕ್ ಲಾ ಪ್ರಕಾರ ದೇಶದಲ್ಲಿ ವಿತರಣೆಯಾಗುವ ಹಣದ ಮೊತ್ತದ ಪ್ರಶ್ನೆಯನ್ನೂ ಗಂಭೀರವಾಗಿ ಪರಿಗಣಿಸಬೇಕು. ರಾಜಕೀಯ ಪರಿಣಾಮಗಳಲ್ಲದೆ, ಅದರ ಆರ್ಥಿಕ ಮೌಲ್ಯವು ಅನುಮಾನಾಸ್ಪದವಾಗಿದೆ. ಈ ಅನುದಾನದ ಹಣವನ್ನು ಉಪಯೋಗಿಸುವುದರಿಂದ ಹಣದುಬ್ಬರಕ್ಕೆ ಕುಮ್ಮಕ್ಕು ಸಿಕ್ಕುವುದೇ ಎಂಬ ಬಗ್ಗೆ ಶ್ರೀ ಶೆಣೈ ಮತ್ತು ಇತರ ಆರ್ಥಿಕತಜ್ಞರ ನಡುವೆ ಭಿನ್ನಾಭಿಪ್ರಾಯವಿದೆ. ಆದರೆ, ಈ ಅನುದಾನದಿಂದ ವಿದೇಶೀ ಸರಕಾರವೊಂದು ನಮ್ಮ ದೇಶಕ್ಕೆ ಸಹಾಯಮಾಡುತ್ತಿದ್ದೇವೆ ಎಂಬ ಅನುಗ್ರಹ ಮನೋಭಾವದಿಂದ ಖಂಡಿತವಾಗಿಯೂ ಮೇಲುಗೈಯನ್ನು ಪಡೆಯುತ್ತದೆ. ಕೂಲೆಯವರ ತಿದ್ದುಪಡಿಯ

ಪ್ರಕಾರ, ಈ ಅನುದಾನದ ಶೇ. ೨೫ರಷ್ಟನ್ನು ಅಮೆರಿಕದ ಖಾಸಗೀ ಕ್ಷೇತ್ರದಲ್ಲಿರುವ ಕಂಪನಿಗಳಿಗೆ, ಇತರ ದೇಶಗಳಲ್ಲಿರುವ ಅವುಗಳ ಸಹಯೋಗೀ ಸಂಸ್ಥೆಗಳಿಗೆ, ಅಥವಾ ಅಮೆರಿಕದಲ್ಲಿದ್ದುಕೊಂಡು ಆ ದೇಶದ ಕೃಷಿ ಉತ್ಪನ್ನಗಳ ರಫ್ತಿನ ಕಾರ್ಯದಲ್ಲಿ ಸಹಾಯಮಾಡುತ್ತಿರುವ ಸ್ಥಳೀಯ ಸಂಸ್ಥೆಗಳಿಗೆ ನೀಡಬೇಕು. ಈ ಒಪ್ಪಂದವು ಅಮೆರಿಕದ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಕಲ್ಪಿಸುವುದರ ಜೊತೆಗೇ ಭಾರತಕ್ಕೆ ಬರಲಿಚ್ಛಿಸುವ ಅಲ್ಲಿನ ಕೈಗಾರಿಕೋದ್ಯಮಿಗಳಿಗೆ ಅನುಕೂಲಕರ ಪರಿಸ್ಥಿತಿಯನ್ನೂ ನಿರ್ಮಿಸುತ್ತದೆ. ದೀರ್ಘಾವಧಿಯಲ್ಲಿ ಈ ಒಪ್ಪಂದದ ಪರಿಣಾಮಗಳಿಗೆ ನಾವು ಕಣ್ಣನ್ನು ಮುಚ್ಚಿಕೊಂಡಿರುವುದು ಅವಿವೇಕವಾಗುತ್ತದೆ.

ಸದ್ಯದ ಪರಿಸ್ಥಿತಿಯನ್ನು ನಿಭಾಯಿಸಲು ಈ ಆಮದು ಸಹಾಯ ಮಾಡಬಹುದಾದರೂ, ಸಮಸ್ಯೆಗೆ ಸರಿಯಾದ ಪರಿಹಾರ ನಮ್ಮ ಕೃಷಿ ಉತ್ಪಾದನೆಯನ್ನು ಅತ್ಯಧಿಕಗೊಳಿಸುವುದರಲ್ಲಿ ಇದೆ. ಆದರೆ ಈ ದಿಕ್ಕಿನಲ್ಲಿ ನಾವು ಮಾಡಬೇಕಾದಷ್ಟನ್ನು ಮಾಡಿಲ್ಲ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಸರ್ಕಾರದ ವೈಫಲ್ಯಕ್ಕೆ ಈ ಒಪ್ಪಂದವು ಸ್ಪಷ್ಟ ರುಜುವಾತಾಗಿದೆ. ಕಾಲಕಳೆದಂತೆ ವಿದೇಶೀ ನೆರವಿನ ಮೇಲಿನ ನಮ್ಮ ಅವಲಂಬನೆ ಹೆಚ್ಚಾಗುತ್ತಾ ಹೋಗುತ್ತಿದೆ. ವರ್ತಮಾನದಲ್ಲಿ ಆಹಾರದ ದಾಸ್ತಾನು ವಿಪುಲವಾಗಿರುವುದರಿಂದ ಸರ್ಕಾರವು ತೃಪ್ತಮನೋಭಾವವನ್ನು ತಳೆದು ದೇಶದಲ್ಲಿನ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ವಿಫಲವಾಗಬಹುದೆಂಬ ಹೆದರಿಕೆ ನಮಗಿದೆ. ಪ್ರಜಾಪ್ರಭುತ್ವವಿರುವ ದೇಶಗಳಲ್ಲಿ ಕಷ್ಟಪಡುತ್ತಿರುವ ಜನತೆಗೆ 'ಆಹಾರ ಮತ್ತು ಸ್ವಾತಂತ್ರ್ಯ' ಎರಡೂ ಸಿಗುತ್ತದೆ ಎಂಬುದನ್ನು ಮನದಟ್ಟು ಮಾಡಲು ಅಮೆರಿಕವು ಈ ನೀತಿಯನ್ನು ಅನುಸರಿಸುತ್ತಿದೆ ಎಂದು ಅಮೆರಿಕಾದ ರಾಯಭಾರಿಗಳು ಭಾವಿಸುತ್ತಾರೆ. ನಮಗೆ ಬೇಕಾಗಿರುವುದು 'ನಮ್ಮ ಸ್ವಾತಂತ್ರ್ಯ' ಮತ್ತು 'ನಾವು ಬೆಳೆದ ಆಹಾರ'. 'ವಿದೇಶೀ ಆಹಾರ ಪದಾರ್ಥಗಳಿಂದ ಮುಕ್ತಿ' ಎಂಬ ನಮ್ಮ ಹಳೆಯ ಘೋಷಣೆಗೆ ನಾವು ಮತ್ತೆ ಜೀವತುಂಬಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ವಿದೇಶೀ ಮೂಲಗಳ ಮೇಲೆ ಅವಲಂಬನೆ ಹೆಚ್ಚಿದಂತೆಲ್ಲ ನಾವು ನಿಸ್ಸತ್ವಗೊಳ್ಳುತ್ತೇವೆ ಮತ್ತು ಹಲವು ಜಂಜಡಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ. ಆದ್ದರಿಂದಲೇ ನಾವು ಶ್ರೀ ಪಾಟೀಲ್ ಅವರನ್ನು ಹೂಗುಚ್ಛವನ್ನಿತ್ತು ಅಭಿನಂದಿಸುವುದು ಈಗಲ್ಲ, ಆದರೆ, ಅವರು ದೇಶದಲ್ಲಿನ ಕೃಷಿ ಉತ್ಪಾದನೆಯನ್ನು ಹೆಚ್ಚಿಸಿ, ಭಿಕ್ಷಾಪಾತ್ರೆಯನ್ನು ಹಿಡಿದು ಪ್ರಪಂಚವನ್ನೆಲ್ಲಾ ಸುತ್ತಿದ ಸ್ವತಂತ್ರ ಭಾರತದ ಕೊನೆಯ ಆಹಾರ ಸಚಿವರು ತಾವು ಎಂದು ಪ್ರಪಂಚಕ್ಕೆ ತೋರಿಸಿಕೊಟ್ಟಾಗ.

* * * * *

# ಜನಸಂಘದ ಪಾತ್ರ

ತಮ್ಮ ಹೊರಗೆ ನೋಡುವುದಕ್ಕಿಂತ, ತಮ್ಮೊಳಗನ್ನು ತಾವೇ ನೋಡಿಕೊಳ್ಳುವುದು ಸತ್ಯವನ್ನು ಹುಡುಕುವವರೆಲ್ಲರ ಮಾರ್ಗ. ಆದರೆ ನಾವು ನಮ್ಮೊಳಗನ್ನು ವಸ್ತುನಿಷ್ಠವಾಗಿ ನೋಡಿಕೊಳ್ಳಬೇಕು. ವಸ್ತುನಿಷ್ಠತೆಯೇ ನಿಷ್ಪಕ್ಷಪಾತವಾದ ವಿವೇಚನಾ ಶಕ್ತಿಯ ಓರೆಗಲ್ಲು. ಯಶಸ್ಸನ್ನು ಸಾಧಿಸಲು ಬದುಕಿನ ಎಲ್ಲಾ ರಂಗಗಳಲ್ಲಿಯೂ ಇದು ಅಗತ್ಯ. ರಾಜಕೀಯ ಬದುಕಿನಲ್ಲಿ ನಮಗೆ ಇದು ಇನ್ನೂ ಹೆಚ್ಚು ಮುಖ್ಯವಾಗುತ್ತದೆ. ಕಾರಣ, ಆ ರಂಗದಲ್ಲಿನ ನಮ್ಮ ಕ್ರಿಯೆಗಳು ಬಹು ಜನರ ಮೇಲೆ ಪರಿಣಾಮವನ್ನು ಬೀರುತ್ತದೆ. ರಾಜಕೀಯವು ಆಡಳಿತದ ಮೇಲೆ ಪ್ರಭಾವನ್ನು ಬೀರುವ, ಸರಕಾರಗಳನ್ನು ಸ್ಥಾಪಿಸಿ ಆಡಳಿತ ನಡೆಸುವ ಗುರಿಯನ್ನು ಹೊಂದಿರುವುದರಿಂದ, ಅದು ವ್ಯಕ್ತಿನಿಷ್ಠ ಆಲೋಚನೆಯಿಂದ ಮಾರ್ಗದರ್ಶನ ಪಡೆಯಲು ಸಾಧ್ಯವಿಲ್ಲ. ವಸ್ತುನಿಷ್ಠತೆಯು ಆಡಳಿತದ ಕಲೆಯನ್ನು ಒಂದು ವಿಜ್ಞಾನವನ್ನಾಗಿಸುತ್ತದೆ. ಧರ್ಮಶಾಸ್ತ್ರವನ್ನು ಅನುಸರಿಸಿದ ಆಡಳಿತವು, ಅಂದರೆ ಧರ್ಮರಾಜ್ಯವು, ಅಂತಹ ವೈಯಕ್ತಿಕತೆಯನ್ನು ಮೀರಿದ ಆಡಳಿತವಾಗುತ್ತದೆ. ಅಲ್ಲಿ ವ್ಯವಸ್ಥೆಯೇ ಆಡಳಿತವನ್ನು ನಡೆಸುತ್ತದೆ. ಆದರೆ ಅಂತಹ ವ್ಯವಸ್ಥೆಯು ಸಮಾಜದ ಕಲ್ಯಾಣ ಸಾಧನೆಗಾಗಿ ಇರಬೇಕಲ್ಲದೆ, ಬ್ರಿಟಿಷರು ಮಾಡಿದ ಹಾಗೆ ತುಳಿದು ಆಳುವುದಕ್ಕಾಗಿ ಮತ್ತು ಶೋಷಿಸುವುದಕ್ಕಾಗಿ ಇರಬಾರದು. ಬ್ರಿಟಿಷರು ಆಡಳಿತ ವ್ಯವಸ್ಥೆಯ ವಿದ್ಯೆಯನ್ನು ಕರಗತಮಾಡಿಕೊಂಡಿದ್ದರು. ಹೀಗಾಗಿ ವ್ಯವಸ್ಥೆಯು ಯಾರ ಕೈಯಲ್ಲಿದ್ದಿತು ಎಂಬುದು ಮುಖ್ಯವಾಗುತ್ತಿರಲಿಲ್ಲ. ಆಡಳಿತವು ಅವರಿಂದ ಹಸ್ತಾಂತರಗೊಳ್ಳುವಾಗ ಈ ವ್ಯವಸ್ಥೆಯು ಮುಕ್ಕಾಗಲಿಲ್ಲ.

## ಇದು ಗಣರಾಜ್ಯವಲ್ಲ, ನೆಹರೂ ರಾಜ್ಯ

ಪ್ರಜಾತಂತ್ರವು ಜನರಿಂದ, ಜನರಿಗಾಗಿ ಇರುವುದರಿಂದ ಅದು ವೈಯಕ್ತಿಕವಾಗಬಾರದು. ಪ್ರಜಾತಂತ್ರವು ಯಶಸ್ವಿಯಾಗಬೇಕಾದರೆ, ಅದು ಆಳುವ ವ್ಯಕ್ತಿಯ ಹುಚ್ಚಾಟ ಮತ್ತು ಖಯಾಲುಗಳಿಂದ ಮುಕ್ತವಾಗಿರಬೇಕು. ಈ ದೃಷ್ಟಿಯಿಂದ ಮಾತ್ರ ಪ್ರಜಾತಂತ್ರವು ಸರ್ವಾಧಿಕಾರೀ ಆಡಳಿತಕ್ಕಿಂತ ಬೇರೆಯಾಗಿರುತ್ತದೆ.

---

**ಮೂಲ ಆಕರ : ಆರ್ಗನೈಸರ್, ೧೯೫೬, ಜನಸಂಘ ವಿಶೇಷ**

ಸರ್ವಾಧಿಕಾರೀ ಆಡಳಿತವು ಸರ್ವಾಧಿಕಾರಿಯ ಸಾಮರ್ಥ್ಯ ಮತ್ತು ಉದಾತ್ತತೆಯ ಮೇಲೆ ಅವಲಂಬಿಸಿದ್ದರೆ, ಪ್ರಜಾತಂತ್ರದಲ್ಲಿ ಆಡಳಿತವು ಯಾವ ಒಬ್ಬ ವ್ಯಕ್ತಿಯ ಮೇಲೆಯೂ ಅವಲಂಬಿಸದೆ ವ್ಯವಸ್ಥೆಯ ಮೇಲೆ ನಿಂತಿರುತ್ತದೆ. 'ಜಲಪಾದ'ದಂತೆ ವ್ಯವಸ್ಥೆಯು

*ವ್ಯಕ್ತಿಗಳು ಬರುತ್ತಾರೆ, ವ್ಯಕ್ತಿಗಳು ಹೋಗುತ್ತಾರೆ,*
*ಆದರೆ ನಾನು ಮಾತ್ರ ನಿರಂತರ ನಡೆಯುತ್ತಿರುತ್ತೇನೆ*

ಎಂದು ಹೇಳಬಹುದು.

ವ್ಯಕ್ತಿ–ನಿರಪೇಕ್ಷವಾಗುವುದರಿಂದ ಇದನ್ನು ಕೆಲವರು ಮೆಚ್ಚುವುದಿಲ್ಲ. ವ್ಯಕ್ತಿಸ್ವಾತಂತ್ರ್ಯದ ಸಮರ್ಥನೆಗಾಗಿ ಬಂದ ಪ್ರಜಾತಂತ್ರವು ವ್ಯಕ್ತಿಗಳನ್ನು ಅಮುಖ್ಯರನ್ನಾಗಿಸಿದೆ. ಅದರಲ್ಲಿ ಮುಖ್ಯನಾಗುವುದು ಸಾಮಾನ್ಯ ಮನುಷ್ಯನೇ ಹೊರತು ಬಲಾಢ್ಯರಲ್ಲ. ಸಾಮಾನ್ಯ ವ್ಯಕ್ತಿ ತನ್ನ ಪ್ರತಿನಿಧಿಯನ್ನು ಆಯ್ಕೆಮಾಡುವಾಗಲಾಗಲೀ, ಅಥವಾ ನಿರ್ದಿಷ್ಟ ಕಾರ್ಯಕ್ರಮಕ್ಕೆ ಒತ್ತುಕೊಡುವಾಗಲಾಗಲೀ ತನ್ನ ಪರಿಜ್ಞಾನವನ್ನು ಬಳಸುವುದು ಬಹಳ ಕಡಿಮೆ. ಸಂಘಟಿತರಾದ ಪಕ್ಷದ ಅಥವಾ ಅಸಂಘಟಿತ ಗುಂಪಿನ ಸಮಷ್ಟಿ ಪ್ರಜ್ಞೆ ಅವರ ಆಯ್ಕೆಯನ್ನು ನಿರ್ದೇಶಿಸುತ್ತದೆ ಮತ್ತು ನಿಯಮಿಸುತ್ತದೆ. ಈ ವ್ಯವಸ್ಥೆಯು ವ್ಯಕ್ತಿಗೆ ಅವರ ಪ್ರಜ್ಞಾವಲಯವನ್ನು ವಿಸ್ತರಿಸಿಕೊಳ್ಳಲು ಅವಕಾಶವನ್ನು ಮತ್ತು ಸ್ವಾತಂತ್ರ್ಯವನ್ನು ಕೊಡುವುದು ಬಹಳ ಕಡಿಮೆ.

ನಾವು ಈಗಾಗಲೇ ಪ್ರಜಾತಂತ್ರವನ್ನು ಒಪ್ಪಿಕೊಂಡಿರುವುದರಿಂದ, ಈಗ ಅದರ ಗುಣಾವಗುಣಗಳನ್ನು ಅಳೆಯುವುದು ಅನಗತ್ಯ. ಪ್ರಜಾತಂತ್ರವು ಯಶಸ್ವಿಯಾಗಬೇಕಾದರೆ, ನಾವು ವಿಷಯಗಳನ್ನು ವಸ್ತುನಿಷ್ಠವಾಗಿ ನೋಡುವ ಗುಣವನ್ನು ಬೆಳಸಿಕೊಳ್ಳಬೇಕು ಎಂಬುದನ್ನು ಅರಿತುಕೊಂಡರೆ ಸಾಕು. ಸರಕಾರವಾಗಲೀ, ರಾಜಕೀಯವಾಗಲೀ ವೈಯಕ್ತಿಕ ವಿಷಯವಲ್ಲ ಮತ್ತು ಅಲ್ಲಿ ವ್ಯಕ್ತಿಯ ಇಷ್ಟ ಮತ್ತು ದ್ವೇಷಗಳಿಗೆ ಸ್ಥಾನವಿಲ್ಲ. ಅದು ಪ್ರಜೆಗಳ ಸರಕಾರವಾದರೆ, ಜನತೆಯ ಒಳಿತೇ ನಮ್ಮ ಏಕೈಕ, ಮೂಲಭೂತ ಗುರಿಯಾಗಿರಬೇಕು. ಜನತೆಯ ಒಳಿತು ಯಾವುದು ಎಂಬುದನ್ನು ತಜ್ಞರು ನಿರ್ಧರಿಸಬಾರದು, ಬದಲಿಗೆ ಅದನ್ನು ನಿರ್ಧರಿಸುವವನು ಶ್ರೀಸಾಮಾನ್ಯನಾಗಿರಬೇಕು.

ಇಂಗ್ಲೆಂಡ್ ಪ್ರಜಾಪ್ರಭುತ್ವವುಳ್ಳ ದೇಶವಾಗಿರುವುದರಿಂದ, ಬ್ರಿಟಿಷರು ನಮಗೆ ವೈಜ್ಞಾನಿಕವಾದ ಆಡಳಿತ ಪದ್ಧತಿಯನ್ನು ನೀಡಿದರು. ಆಡಳಿತವು ಹಸ್ತಾಂತರವಾದ ಮೇಲೆ ನಾವು ಮಾಡಬೇಕಾಗಿದ್ದ ಒಂದೇ ಕೆಲಸವೆಂದರೆ, ಆಡಳಿತದಲ್ಲಿರುವ ನೌಕರವರ್ಗದವರಲ್ಲಿ ಅಧಿಕಾರೀ ಪ್ರವೃತ್ತಿಯ ಜಾಗದಲ್ಲಿ ಸೇವಾಮನೋಭಾವವನ್ನು

ಅವಶ್ಯಕವಾಗಿ ಬಿತ್ತಬೇಕಾಗಿದ್ದುದು. ಆದರೆ, ಇದಕ್ಕೆ ಬದಲಾಗಿ, ಜನತೆಯ ಸೇವಕರೆಂದು ಹೇಳಿಕೊಳ್ಳುವವರು ಕೂಡ ಜನರನ್ನು ಆಳುವವರಾದರು. ನಮ್ಮಲ್ಲಿನ ಕೀಳರಿಮೆಯನ್ನು ಕಿತ್ತು ಒಗೆಯಲು ಅತಿಮಾನವ ಶಕ್ತಿಗಳನ್ನು ಆರೋಪಿಸಲ್ಪಟ್ಟ ಜನರೇ ಬ್ರಿಟಿಷ್ ಯಜಮಾನರ ಬದಲಿಗೆ ನಾಯಕರಾದರು, ಆಳುವವರಾದರು. ಅವರಾಗಲೀ, ಸಾಮಾನ್ಯ ಜನತೆಯಾಗಲೀ ಇದನ್ನು ಪ್ರಜೆಗಳ ರಾಜ್ಯವೆಂದು ಎಣಿಸುವುದಿಲ್ಲ. ಇದು ಪ್ರಜಾತಂತ್ರವಲ್ಲ, ಅಲ್ಪತಂತ್ರ, ಆದರೆ ಅದರಲ್ಲಿರುವವರು ಕುಲೀನರಲ್ಲ, ಸಾಮಾನ್ಯರ, ಚಾರಿತ್ರ್ಯಹೀನರ ಒಂದು ಕೂಟ. ನಾವಿರುವುದು ಗಣರಾಜ್ಯದಲ್ಲಲ್ಲ, ನೆಹರೂ ರಾಜ್ಯದಲ್ಲಿ.

ನಾನು ಪ್ರಧಾನ ಮಂತ್ರಿಗಳಲ್ಲಿರುವ ಉತ್ತಮ ಗುಣಗಳನ್ನು ಅಲ್ಲಗಳೆಯುತ್ತಿಲ್ಲ. ಆದರೆ ವ್ಯಕ್ತಿನಿಷ್ಠವಲ್ಲದ ಆಡಳಿತಕ್ಕಾಗಿ ನಾವು ಹೋರಾಡದೆ ಇರುವುದು ನಿಶ್ಚಯವಾಗಿಯೂ ಸಾಧ್ಯವಿಲ್ಲ. ಸರ್ಕಾರದ ಎಲ್ಲ ವ್ಯವಹಾರಗಳೂ ಒಬ್ಬ ವ್ಯಕ್ತಿಯ ವೈಯಕ್ತಿಕ ವ್ಯವಹಾರದಂತೆ ನಡೆಯುತ್ತಿವೆ. ಸಚಿವ ಸಂಪುಟದ ಕೂಡು–ಹೊಣೆಗಾರಿಕೆ ಮತ್ತು ಸಂಸತ್ತಿನ ಸಂಯುಕ್ತ ನಿರ್ಣಯವೆಂಬುದು ಏಕ ವ್ಯಕ್ತಿಯ ಹೊಣೆಗಾರಿಕೆ ಮತ್ತು ನಿರ್ಣಯಗಳಾಗಿವೆ. ಕಾಶ್ಮೀರದ ಸಮಸ್ಯೆಯ ಬಗ್ಗೆ ಮಾತನಾಡುವಾಗ ದಿವಂಗತ ಸರ್ದಾರ್ ವಲ್ಲಭಭಾಯಿ ಪಟೇಲರು ಅದನ್ನು ಪ್ರಧಾನ ಮಂತ್ರಿಗಳ ವೈಯಕ್ತಿಕ ವಿಷಯವೆಂದು ಪರಿಗಣಿಸುತ್ತಿರಲಿಲ್ಲ ಎಂಬುದು ತೆರೆದ ಸತ್ಯ.

### ಶ್ರೀಸಾಮಾನ್ಯನೇ ಪ್ರಜಾತಂತ್ರದ ನಾಯಕನಾಗಬೇಕು

ದೇಶದಲ್ಲಿನ ರಾಜಕೀಯ, ವ್ಯಕ್ತಿಗಳ ಸುತ್ತ ಗಿರಕಿಹೊಡೆಯುತ್ತಿದೆ. ಪಕ್ಷಗಳು ತತ್ವ ಮತ್ತು ಕಾರ್ಯಕ್ರಮಗಳನ್ನು ಆಧರಿಸಿ ಹುಟ್ಟುತ್ತಿಲ್ಲ ಬದಲಿಗೆ ವೈಯಕ್ತಿಕ ಪ್ರತಿಷ್ಠೆ, ಹಮ್ಮು ಮತ್ತು ಅಸೂಯೆಗಳ ಆಧಾರದ ಮೇಲೆ ಜನ್ಮತಳೆಯುತ್ತಿವೆ. ರಾಜಕೀಯಸ್ಥರ ನಡುವಿನ ದ್ವೇಷಗಳನ್ನು ಸಾಧಿಸುವುದಕ್ಕಾಗಿ ಶ್ರೀಸಾಮಾನ್ಯನ ಶೋಷಣೆಯಾಗುತ್ತಿದೆ. ಮಧ್ಯಕಾಲೀನ ಯುಗದಲ್ಲಿ ದರ್ಬಾರ್ ರಾಜಕೀಯದ ಬಗ್ಗೆ ಜನರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಫುಟ್‌ಬಾಲ್ ಪಂದ್ಯದ ಪ್ರೇಕ್ಷಕರ ರೀತಿಯಲ್ಲಿ ಅವರು ರಾಜಕೀಯದ ಚದುರಂಗದಾಟವನ್ನು ನೋಡುತ್ತಿದ್ದರು. ಆದರೆ ಇಂದು ಸಾಮಾನ್ಯ ಜನರು ಕೋಳಿಜಗಳದ ಕೋಳಿಗಳಂತೆ ಕಿತ್ತಾಡುತ್ತಿದ್ದರೆ, ರಾಜಕೀಯಸ್ಥರು ಅದರ ಆನಂದವನ್ನು ಪಡೆಯುತ್ತಿದ್ದಾರೆ ಮತ್ತು ಯಶಸ್ಸಿನ ಕೀರ್ತಿಯನ್ನು ತಮ್ಮದಾಗಿಸಿ ಕೊಳ್ಳುತ್ತಿದ್ದಾರೆ. ನಮ್ಮ ರಾಜಕೀಯದಲ್ಲಿ ನಾವು ಜನತೆಯ ಸೇವೆಮಾಡುವುದಿಲ್ಲ. ಜನತೆ ನಮ್ಮ ದೇವರಲ್ಲ. ಅವರು ನಮ್ಮ ಸ್ವಾರ್ಥಸಾಧನೆಗೆ ಬೇಕಾದ ಸಾಧನವಷ್ಟೆ. ಇದು ರಾಜಕೀಯ ವ್ಯಭಿಚಾರ. ಪ್ರಜಾಪ್ರಭುತ್ವದಲ್ಲಿ ಇದನ್ನು ಇರಗೊಡಬಾರದು.

ನಾವು ನಮ್ಮ ರಾಜಕೀಯವನ್ನು ಮೂರ್ತೀಕರಿಸಿದರೆ, ಸ್ಥಾನಗಳಿಗಾಗಿ ಈಗಿರುವ ಕಚ್ಚಾಟವಿರುವುದಿಲ್ಲ ಮತ್ತು ಹಲವಾರು ಕಾಂಗ್ರೆಸ್ಸಿನವರ ಸ್ಥಳ ವಿರೋಧಪಕ್ಷಗಳಲ್ಲಿರುತ್ತದೆ.

ಭಾರತೀಯ ಜನಸಂಘದ ವಿಷಯಕ್ಕೆ ಬಂದರೆ, ಅಲ್ಲಿನ ಸದಸ್ಯರಾಗಲೀ, ಮುಖಂಡರಾಗಲೀ ಒಂದು ಉಚ್ಚ ಆದರ್ಶವನ್ನು ಅವರು ತಮ್ಮಲ್ಲಿ ಅಂತರ್ಗತ ಗೊಳಿಸಿಕೊಂಡಿರುತ್ತಾರೆ. ಸ್ವಾರ್ಥಸಾಧನೆಗೆ ಯಾರಾದರೂ ಜನಸಂಘವನ್ನು ಸೇರಿದ್ದರೆ, ಅಂತಹವರು ಈಗಾಗಲೇ ಅಲ್ಲಿಂದ ಹೊರನಡೆದಿದ್ದಾರೆ ಅಥವಾ ಸದ್ಯದಲ್ಲಿಯೇ ಹೊರನಡೆಯಲಿದ್ದಾರೆ. ವಿರೋಧಪಕ್ಷದಲ್ಲಿರುವುದರಿಂದ ಸ್ವಾರ್ಥಸಾಧನೆಗೆ ಅಲ್ಲಿ ಅವಕಾಶವಿಲ್ಲ. ಆದರೆ, ನಮ್ಮ ಆದರ್ಶವಾಗಲೀ, ಅಥವಾ ತ್ಯಾಗಮನೋಭಾವವಾಗಲೀ ನಮ್ಮ ಗುರಿಯನ್ನು ಸಾಧಿಸಲು ಸಾಕಾಗುವುದಿಲ್ಲ. ನಮ್ಮ ಆದರ್ಶವು ಸಾಮಾನ್ಯ ವ್ಯಕ್ತಿಯ ಸಮಸ್ಯೆಗಳನ್ನು ಅರ್ಥಮಾಡಿಕೊಂಡಿದೆಯೇ? ಅವನ ಬಳಿಗೆ ಹೋಗಿ ಅವನು ಅರ್ಥಮಾಡಿಕೊಳ್ಳಬಲ್ಲ ಭಾಷೆಯಲ್ಲಿ ನಾವು ನಮ್ಮ ತತ್ವಗಳನ್ನು ವಿವರಿಸಬಲ್ಲೆವೇ? ನಾವು ಅವನ ದನಿಯಾಗಿದ್ದೇವೆ ಎಂದು ಅವನು ಭಾವಿಸುತ್ತಾನೆಯೇ? ಅವನ ಶಕ್ತಿ ಮತ್ತು ಹಿರಿಮೆಯನ್ನು ನಾವು ಇನ್ನೂ ಅರ್ಥಮಾಡಿಕೊಳ್ಳಬೇಕಾಗಿದೆ. ಜನತೆಯ ಸಂಘಕ್ಕೆ ಜನತೆಯೇ ದೊರೆಯಾಗಬೇಕು. ಬೆಂಬಲಕ್ಕಾಗಿ ಮತ್ತು ಮಾರ್ಗದರ್ಶನಕ್ಕಾಗಿ ನಾವು ನೋಡಬೇಕಾಗಿರುವುದು ಆತನನ್ನೇ ಹೊರತು, ನಾಯಕರೆಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿರುವವರನ್ನಲ್ಲ. ಭಗವಾನ್ ಶ್ರೀರಾಮಚಂದ್ರನು ಒಬ್ಬ ಸಾಮಾನ್ಯ ಮನುಷ್ಯನಿಂದ (ಒಬ್ಬ ಅಗಸನಿಂದ) ಸೂಚನೆಯನ್ನು ಪಡೆದ. ಮಹಾತ್ಮ ಗಾಂಧಿಯವರು ತಮ್ಮ ಅಂತರ್ಬೋಧೆಯಿಂದ ಶ್ರೀಸಾಮಾನ್ಯನ ನಾಡಿಮಿಡಿತವನ್ನು ಅರಿಯಬಲ್ಲವರಾಗಿದ್ದರು.

## ಹಳೆಯ ನಾಯಕತ್ವವು ಕ್ರಾಂತಿಕಾರಿ ಬದಲಾವಣೆಯನ್ನು ತರಲಾರದು

ನಾವು ಶಾಂತಿಯುತವಾದ ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿಯನ್ನು ಯಾವಾಗಲೂ ಬಯಸುತ್ತೇವೆ. ಆದರೆ ಇದನ್ನು– ಇದು ಸಾಮಾಜಿಕವಾಗಿರಬಹುದು, ರಾಜಕೀಯವಾಗಿರಬಹುದು ಅಥವಾ ಬೌದ್ಧಿಕವೇ ಆಗಿರಬಹುದು – ಕೆಲವು ಮೇಲುಸ್ತರದ ನಾಯಕರಿಂದ ಸಾಧಿಸಲು ಸಾಧ್ಯವಿಲ್ಲ. ಹೀಗೆ ಮಾಡಲು ಅವರಿಗೆ ಧೈರ್ಯ ಸಾಲದು. ಮಾಡಹೊರಟರೆ, ತಾವಿರುವ ಬೆಚ್ಚನೆಯ ಸ್ಥಾನವನ್ನು ತಾವು ಕಳೆದುಕೊಳ್ಳಬೇಕಾಗಬಹುದೆಂಬ ಭಯ ಅವರಲ್ಲಿ ಇರುತ್ತದೆ. ಅವರು ಬದಲಾಗುತ್ತಿರುವ ಕಾಲದ ಜೊತೆ ಮುನ್ನಡೆಯುವ ಬದಲು, ಲೆಕ್ಕಾಚಾರದ ನಡೆಯಲ್ಲಿ ನಿರತರಾಗಿರುತ್ತಾರೆ. ಅವರು ತಾವೇ ಬದಲಾಗುವುದಿಲ್ಲ, ಆದರೆ ಕಾಲದ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಾರೆ. ಇತರ ಜನತೆಯಂತಲ್ಲದೆ, ನಾಯಕರು ಒಂದು ಕಾಲಾವಧಿಗೆ

ಸೀಮಿತರಾಗಿರುತ್ತಾರೆ. ಕಾಲದ ಇತಿಮಿತಿಯು ಅವರಿಗೆ ವಿವಿಧ ಹಂತಗಳಲ್ಲಿ ಅನ್ವಯವಾಗುತ್ತದೆ. ಇದು ಹಾಗಿಲ್ಲದಿದ್ದರೆ, ಹಳತು ಮತ್ತು ಹೊಸತರ ನಡುವೆ ಸಂಘರ್ಷವಿರುತ್ತಿರಲಿಲ್ಲ ಮತ್ತು ಮಾನವ ಜನಾಂಗ ಪ್ರಗತಿಯ ಹಾದಿಯನ್ನು ತುಳಿಯುತ್ತಿರಲಿಲ್ಲ. ಅವರ ನಡುವೆ ಇರುವ ಉತ್ತಮವಾದವರು ಕೂಡ, ಅಸ್ಥಿರಮನೋಭಾವದ ಹ್ಯಾಮ್ಲೆಟ್ಟನಿಗಿಂತ ಯಾವ ರೀತಿಯಲ್ಲಿಯೂ ಉತ್ತಮರಲ್ಲ. ನಿರ್ದಿಷ್ಟ ಗುರಿಯಿರದ ಹ್ಯಾಮ್ಲೆಟ್ ಇತರರನ್ನು ಮುನ್ನಡೆಸಲಾರ, ಮುನ್ನಡೆಸಿದರೆ ಅವನಂತೆಯೇ ನಮ್ಮನ್ನೂ ಕರ್ತವ್ಯಮೂಢರನ್ನಾಗಿ ಮಾಡಿ ಅಪಾಯದ ಪ್ರಪಾತಕ್ಕೆ ತಳ್ಳುತ್ತಾನೆ.

ಭಾರತೀಯ ಜನಸಂಘವು ತನ್ನ ಮುಂದಿರಿಸಿಕೊಂಡಿರುವ ಕ್ರಾಂತಿಕಾರಿ ಬದಲಾವಣೆಯನ್ನು ತರಲು ಹಳೆಯ ತಲೆಮಾರಿನ ನಾಯಕರು ಅಸಮರ್ಥರು ಎಂಬುದನ್ನು ಚೆನ್ನಾಗಿ ತಿಳಿದಿರುವ ನಮ್ಮ ಯುವ ಕಾರ್ಯಕರ್ತರು ತಮ್ಮೊಳಗಿನಿಂದಲೇ ಹೊಸ ನಾಯಕತ್ವವನ್ನು ಬೆಳಸುವ ತವಕದಲ್ಲಿದ್ದಾರೆ. ಭಾರತೀಯ ಜನಸಂಘವು ದೇಶಕ್ಕೆ ಹೊಸ ನಾಯಕತ್ವವನ್ನು ಒದಗಿಸಲು ಹವಣಿಸುತ್ತಿರುವ ಈ ಸಂದರ್ಭದಲ್ಲಿ, ನಮ್ಮ ಯುವ ಕಾರ್ಯಕರ್ತರ ಈ ನಡೆ ಸಮಂಜಸವೇ ಆಗಿದೆ. ಆದರೆ ಈ ಪ್ರಕ್ರಿಯೆಯಲ್ಲಿ ಅವರು ಅನುಸರಿಸುತ್ತಿರುವ ವಿಧಾನವನ್ನು ನಾವು ಮರುಪರಿಶೀಲಿಸಬೇಕಾಗಿದೆ. ರಾತ್ರಿ ಬೆಳಗಾಗುವುದರೊಳಗೆ ನಾಯಕರಾಗುವುದು ಸಾಧ್ಯವಿಲ್ಲ. ಇದಕ್ಕೆ ಹೆಚ್ಚಿನ ಪ್ರಯತ್ನದ ಅವಶ್ಯಕತೆಯಿದೆ. ಆದರೆ ಮಾರ್ಗವು ಮಾತ್ರ ಸರಿಯಾಗಿರಬೇಕು. ಅದಕ್ಕಾಗಿ ನಾವು ಯಾವ ಬೆಲೆಯನ್ನಾದರೂ ತೆರಲು ಸಿದ್ಧರಿರಬೇಕು. ಮೆರವಣಿಗೆಗಳು, ಜೈಕಾರಗಳು ನಮ್ಮನ್ನು ಉಬ್ಬಿಸಬಹುದು ಆದರೆ ನಮ್ಮನ್ನು ನಿಜವಾದ ನಾಯಕರನ್ನಾಗಿಸುವುದಿಲ್ಲ. ಹುರುಳಿಲ್ಲದ ಕಾಯ ಬಹುಕಾಲ ಬದುಕುವುದಿಲ್ಲ. ಮೆರವಣಿಗೆಗಳು, ಸಭೆಗಳು ಕೆಲವೊಂದು ಸಂದರ್ಭದಲ್ಲಿ ಅಗತ್ಯವಾಗಿರಬಹುದು, ಆದರೆ ಕೇವಲ ಅದರಿಂದಲೇ ಪಕ್ಷವನ್ನು ಕಟ್ಟಲು ಸಾಧ್ಯವಿಲ್ಲ. ಹಾಗಾಗಬಹುದಿದ್ದರೆ, ಕಾಂಗ್ರೆಸ್ ಪಕ್ಷಕ್ಕಿಂತ ಹಿಂದೂ ಮಹಾ ಸಭೆಯು ಶಕ್ತಿಯುತವಾದ ಪಕ್ಷವಾಗಬಹುದಿತ್ತು. ಈ ಯುವಜನತೆಯ ಪ್ರದರ್ಶನವು ಸ್ವಲ್ಪ ಹದ್ದುಬಸ್ತಿನಲ್ಲಿದ್ದಿದ್ದರೆ ಒಳಿತಾಗುತ್ತಿತ್ತು ಎಂದು ನಾನು ಭಾವಿಸುತ್ತೇನೆ. ಇಂತಹ ಕಾರ್ಯಕ್ರಮಗಳಿಂದ ನಮಗೆ ಚುನಾವಣೆಯಲ್ಲಿ ಆಗುವ ಲಾಭ ಅತ್ಯಲ್ಪ. ಬಾಹ್ಯ ಶಕ್ತಿಗಳು ನಾಯಕರನ್ನು ಮೇಲೆತ್ತುವ ಬದಲು, ನಾಯಕತ್ವವು ಒಳಗಿನಿಂದಲೇ ಮೇಲೆದ್ದು ಬರಬೇಕು.

**ಜನಸಂಘವು ಜನರ ಪಕ್ಷವಾಗಬೇಕು**

ಇದು ದೇಶದ ಒಳಿತಿಗಾಗಿ ಅಗತ್ಯ, ಪಕ್ಷಕ್ಕೂ ಇದರ ಅಗತ್ಯವಿದೆ ಮತ್ತು

ಜನತಂತ್ರದ ಯಶಸ್ಸಿಗೂ ಇದು ಬೇಕಾಗಿದೆ. ನಾವು ಜನಸಾಮಾನ್ಯರ ಬಳಿಗೆ ಹೋಗಬೇಕು ಮತ್ತು ಅವರ ಕಲ್ಯಾಣವನ್ನು ನಮ್ಮ ತಕ್ಷಣದ ಮತ್ತು ಅಂತಿಮ ಗುರಿಯನ್ನಾಗಿಸಿಕೊಳ್ಳಬೇಕು. ಅಜ್ಞಾನದಲ್ಲಿರುವ ಶ್ರೀಸಾಮಾನ್ಯರು ವಿವೇಕಿಗಳಿಗಿಂತ ವಿವೇಕಿ ಮತ್ತು ಬಲಾಢ್ಯರಿಗಿಂತ ಬಲಶಾಲಿ. ಅವನು ಸಂಕೋಚ, ಹಿಂಜರಿಕೆಗಳಿಂದ ಮುಕ್ತನಾಗಿದ್ದಾನೆ. ದೊಡ್ಡ ದೊಡ್ಡ ಹುತಾತ್ಮರಿಗಿಂತ ಹೆಚ್ಚಿನ ತ್ಯಾಗವನ್ನು ಮಾಡಬಲ್ಲವನಾಗಿದ್ದಾನೆ. ದೇಶದಲ್ಲಿರುವ ಅತ್ಯಂತ ಪ್ರಾಜ್ಞರು ಅವನನ್ನು ಹೀಗಳೆದರೂ, ಅವನು ನಮ್ಮ ಕ್ರಮವನ್ನು ಒಪ್ಪಿಕೊಂಡರೆ, ನಮ್ಮೆಲ್ಲಾ ಶಕ್ತಿಯೊಂದಿಗೆ ನಾವು ಮುನ್ನುಗ್ಗಬೇಕು. ಜನತೆಯ ಅಭಿಪ್ರಾಯವೇ ಜನಾರ್ದನನ ವಾಣಿ. ನಾವು ನಾವಿರುವ ಹಂತದಿಂದ ಮೇಲೆ ಹೋಗಿ ಸಾಕ್ಷಿಗಳ ಹಂತವನ್ನು ತಲುಪಿದರೆ ಆ ವಾಣಿಯನ್ನು ಆಲಿಸಬಹುದು. ಇದರ ಅರ್ಥ ನಮ್ಮ ಕರ್ತವ್ಯವನ್ನು ನಿರ್ಲಕ್ಷಿಸುವುದಲ್ಲ, ಎಲ್ಲಾ ಕರ್ತವ್ಯಗಳಿಗೂ ಹೆಗಲುಕೊಡುವುದು, ನೈಷ್ಕರ್ಮವಲ್ಲ ಬದಲಿಗೆ ನಿಷ್ಕಾಮ ಕರ್ಮ. ನಾನು ತತ್ತ್ವಶಾಸ್ತ್ರದ ಭಾಷೆಯನ್ನು ಬಳಸುವುದಿಲ್ಲ. ಭಾರತೀಯ ಜನಸಂಘದ ಪ್ರಧಾನಕಾರ್ಯದರ್ಶಿಯ ಸ್ಥಾನದಲ್ಲಿರುವ ನಾನು ಹೇಳುವುದೆಂದರೆ, ಭಾರತೀಯ ಜನಸಂಘವು ಭಾರತದ ಜನತೆಯ ಪಕ್ಷವಾಗಬೇಕು, ಸಾಮಾನ್ಯರ ಪಕ್ಷವಾಗಬೇಕೇ ಹೊರತು ತೋರಿಕೆಯ, ದೊಡ್ಡಮನುಷ್ಯರ ಪಕ್ಷವಾಗಬಾರದು. ಅವನನ್ನು, ಅಂದರೆ ಶ್ರೀಸಾಮಾನ್ಯನನ್ನು ನಾವು ಅರ್ಚಿಸಬೇಕು.

ಜನಸಂಘವು ಕೆಲವೊಂದು ಆದರ್ಶ ಮತ್ತು ತತ್ತ್ವಗಳಿಗೆ ಬದ್ಧವಾಗಿದೆ. ಈ ಆದರ್ಶಗಳನ್ನು ರಕ್ಷಿಸಲು, ಮುಂದಿನ ಜನತೆಗೆ ಅದನ್ನು ಕಾಪಾಡಿಕೊಂಡು ಹೋಗಲು ಮತ್ತು ಅವುಗಳನ್ನು ಬೆಳೆಸುವ ಉದ್ದೇಶದಿಂದ ನಾವು ಸರ್ಕಾರವನ್ನು ಟೀಕಿಸುತ್ತೇವೆ. ನಾವು ವಿರೋಧಪಕ್ಷದಲ್ಲಿರುವುದರಿಂದ, ಒಂದಲ್ಲ ಒಂದು ಕಾರಣಕ್ಕೆ ಕಾಂಗ್ರೆಸ್ ಪಕ್ಷಕ್ಕೆ ವಿರೋಧವಾಗಿರುವವರು, ಅಥವಾ ಸರ್ಕಾರದ ನೀತಿಯಿಂದಾಗಿ – ಅಂತಹ ನೀತಿಗಳು ನ್ಯಾಯಯುತವಾಗಿದ್ದರೂ – ಕಷ್ಟನಷ್ಟವನ್ನು ಅನುಭವಿಸಿದವರು ನಮಗೆ ಸಹಾನುಭೂತಿಯನ್ನು, ಬೆಂಬಲವನ್ನು ಕೆಲವೊಂದು ಸಂದರ್ಭದಲ್ಲಿ ನೀಡುತ್ತಾರೆ. ಆದರೆ ನಾವು ದುರ್ದೆಸೆಯಿಂದ ಪೀಡಿತರಾದವರ ಬೆಂಬಲ, ಸಮಯಸಾಧಕರ ಬೆಂಬಲ ಮತ್ತು ಆದರ್ಶಗಳಿಂದ ಪ್ರೇರಿತರಾದವರು ನೀಡುವ ಬೆಂಬಲ – ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕು. ನಾವು ನಮ್ಮ ಪಕ್ಷವನ್ನು ಸೇವಾ ಸಮಿತಿ ಅಥವಾ ರೆಡ್ ಕ್ರಾಸ್ ಸಂಸ್ಥೆಯನ್ನಾಗಿಸಲು ಬಯಸುವುದಿಲ್ಲ. ನಾವು ಹೊಸ ಕ್ಷೇತ್ರಗಳನ್ನು ಗೆಲ್ಲಹೊರಟಿರುವ ಯೋಧರು. ಬದಲಾವಣೆಗಾಗಿ ಬದಲಾವಣೆ ಎಂಬ ವಾದದಲ್ಲಿ ನಮಗೆ ಆಸಕ್ತಿಯಿಲ್ಲ. ಆದರೆ ನಾವು ಇದ್ದಲ್ಲೇ ಇರುವ ಜಡವಾದಿಗಳೂ ಅಲ್ಲ.

ಚುನಾವಣಾ ರಾಜಕೀಯದ ನಿರ್ಬಂಧಗಳು ವಿಭಿನ್ನ ದೃಷ್ಟಿಯವರನ್ನು ಒಂದುಗೂಡಿಸುತ್ತದೆ. ಪ್ರಗತಿಗಾಮಿ ಹಾಗೂ ಪ್ರತಿಗಾಮಿಗಳು ಒಂದಾಗಬಹುದು. ಆದರೆ ನಾವು ಅಭಿವೃದ್ಧಿಯ ಮತ್ತು ಸಾಮಾನ್ಯ ಜನತೆಯ ಒಳಿತಿನ ಪರವಾಗಿ ನಿಲ್ಲುತ್ತೇವೆ ಎಂಬುದನ್ನು ನಾವು ಅರ್ಥಮಾಡಿಕೊಂಡಿರಬೇಕು. ಹಿಂದೆಂದೋ ಇದ್ದ ಸುವರ್ಣಯುಗಕ್ಕಾಗಿ ನಾವು ಹಂಬಲಿಸುವುದಿಲ್ಲ, ಅಥವಾ ನಾವು ಕಳೆದುಕೊಂಡುದಕ್ಕಾಗಿ ಶೋಕಿಸುವುದಿಲ್ಲ. ಪ್ರಪಂಚದ ಸಮಸ್ಯೆಗಳಿಗೆ ನಾವು ಹೊಸ ಪರಿಹಾರವನ್ನು ಕೊಡೋಣ, ಮತ್ತು ಭಾರತೀಯ ಸಂಸ್ಕೃತಿಯು ಅದನ್ನು ನೀಡಬಲ್ಲುದು ಎಂಬುದು ನಮಗೆ ಗೊತ್ತು. ಯಾವುದೋ ಗ್ರಂಥದಲ್ಲಿ ನಮಗೆ ಪರಿಹಾರವು ಸಿಕ್ಕುವುದಿಲ್ಲ, ನಾವು ನಮ್ಮ ಆರ್ಷೇಯ ಋಷಿಗಳನ್ನು ಗೌರವಿಸುತ್ತೇವೆ. ಆದರೆ ಅವರಿಂದಲೂ ನಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕುವುದಿಲ್ಲ. ನಾವು ಅದನ್ನು ಬೆವರು ಹರಿಸಿ ದುಡಿಯುವ ವ್ಯಕ್ತಿಯಲ್ಲಿ ಕಾಣಬಹುದು. ಸಂಕಷ್ಟದಲ್ಲಿರುವ, ಹೋರಾಡುತ್ತಿರುವ ಜನರ ಕಷ್ಟವನ್ನು ಭಾರತೀಯ ಜನಸಂಘವು ಪರಿಹರಿಸಿದರೆ, ಅವರ ಹೊಟ್ಟೆಯ ಮತ್ತು ಆತ್ಮದ ಹಸಿವನ್ನು ಇಂಗಿಸಿದರೆ, ಅದು (ಜನಸಂಘವು) ಹೊಸಯುಗದ ಮುಂಗೋಳಿಯಾಗುತ್ತದೆ. ನಮ್ಮ ಪಕ್ಷವು ಪುರಾತತ್ವ ಇಲಾಖೆಯಲ್ಲ. ನಾವು ಹೊಸ ಮಹಲುಗಳನ್ನು ಕಟ್ಟುತ್ತೇವೆ. ನಾವು ಚರಿತ್ರಕಾರರಲ್ಲ, ನಾವು ಸಾಧಿಸುವುದನ್ನು ಚರಿತ್ರಕಾರರು ದಾಖಲಿಸಲಿ. ನಮ್ಮ ಮುಂದಿನ ನಡೆಯಲ್ಲಿ ದೈವವು ನಮಗೆ ಸಹಾಯಮಾಡಲಿ.

* * * * *

# ಡಾ. ಮುಖರ್ಜಿ, ಕಾಶ್ಮೀರ ಮತ್ತು ಭವಿಷ್ಯ

**ರಾಜ್ಯದ ಸಂವಿಧಾನಾತ್ಮಕ ಸ್ಥಾನಮಾನದ ಅಥವಾ ಜಮ್ಮುವಿನ ಜನತೆಯ ವಿಷಯದ ಬಗ್ಗೆ ಭಕ್ಷಿಯವರ ಆಡಳಿತ ಮತ್ತು ಅಬ್ದುಲ್ಲಾ ಅವರ ಆಡಳಿತದ ನಡುವೆ ಮೂಲಭೂತವಾಗಿ ಯಾವ ಬದಲಾವಣೆಯೂ ಇಲ್ಲ.**

ಡಾ. ಶ್ಯಾಮಾಪ್ರಸಾದ್ ಮುಖರ್ಜಿ ಅವರು ೧೯೫೩ರ ಜೂನ್ ೨೩ರಂದು ಶೇಖ್ ಮೊಹಮ್ಮದ್ ಅಬ್ದುಲ್ಲಾ ಅವರ ಸೆರೆಮನೆಯಲ್ಲಿ ಹುತಾತ್ಮರಾದರು. ಅಲ್ಲಿಯವರೆಗೂ ತಾವು ಭಾರತದ ಪ್ರಧಾನ ಮಂತ್ರಿಯವರಿಗೆ ಸಮಾನರಾದವರು ಎಂಬ ಹಮ್ಮಿನಲ್ಲಿದ್ದ, ರಾಜ್ಯದ ವಿವಾದಾತೀತ ನಾಯಕರಂತೆ ಇದ್ದ ಜಮ್ಮು ಕಾಶ್ಮೀರದ ಮುಖ್ಯಮಂತ್ರಿಯವರು ಈ ಘಟನೆಯ ನಂತರ ಪ್ರಧಾನಿಯ ಪ್ರಾಧಾನ್ಯವು ತಮ್ಮಲ್ಲಿಲ್ಲವೆಂಬುದನ್ನು ಕಂಡುಕೊಂಡರು. ಅವರು ವಜಾ ಆದುದಷ್ಟೇ ಅಲ್ಲ, ಅವರು ಆ ರಾಜ್ಯದ ಕಾನೂನಿನ ಪ್ರಕಾರ ತುಂಬು ಐದು ವರ್ಷಗಳ ಜೈಲುವಾಸವನ್ನು ಅನುಭವಿಸುವಂತೆಯೂ ಆಯಿತು. ನಂತರ ಸ್ವಲ್ಪ ಸಮಯ ಸ್ವಾತಂತ್ರ್ಯದ ಸವಿಯನ್ನು ಅವರು ಅನುಭವಿಸಿದರೂ, ಮತ್ತೆ ಅವರು ಸೆರೆಮನೆಯ ಕಂಬಿಯನ್ನು ಎಣಿಸುವಂತೆ ಆಯಿತು. ಈಗ ಅವರು ದೇಶದ್ರೋಹದ ಆಪಾದನೆಯನ್ನು ಎದುರಿಸುತ್ತಿದ್ದಾರೆ. ಮಾಡಿದುದರ ಪ್ರತಿಫಲವನ್ನು ಅನುಭವಿಸುವುದಕ್ಕೆ ದೃಷ್ಟಾಂತವನ್ನಾಗಿ ಈ ಘಟನೆಗಳನ್ನು ನೋಡಬಹುದು. ಸಾಮಾನ್ಯರು ಇದರಿಂದ ತೃಪ್ತರಾಗಬಹುದು. ಆದರೆ ಡಾ. ಮುಖರ್ಜಿಯವರು ಯಾವ ಉದ್ದೇಶಕ್ಕಾಗಿ ಈ ಸೆರೆಮನೆಯ ವಾಸವನ್ನು ಮತ್ತು ಅಂತಿಮವಾಗಿ ನಿಗೂಢ ರೀತಿಯ ಸಾವನ್ನು ಪಡೆಯುವುದನ್ನು ಆಯ್ಕೆಮಾಡಿಕೊಂಡರು ಎಂಬುದನ್ನು ಬಲ್ಲವರಿಗೆ ಇಷ್ಟರಿಂದಲೇ ತೃಪ್ತಿಯಾಗುವುದಿಲ್ಲ. ಅವರು ಡಾ. ಮುಖರ್ಜಿಯವರ ಉದ್ದೇಶವು ಅಪೂರ್ಣವಾಗಿದೆ ಎಂಬುದನ್ನು ಬಲ್ಲರು.

ದೇಶದ ಏಕತೆಗಾಗಿ ಡಾ. ಮುಖರ್ಜಿಯವರು ತಮ್ಮ ಪ್ರಾಣವನ್ನು ತೆತ್ತರು. ನಮ್ಮ ಸಂವಿಧಾನವು ನೀಡಿರುವ ಮೂಲಭೂತ ಹಕ್ಕುಗಳು ಮತ್ತು ಇತರ ಸೌಲಭ್ಯಗಳು ಜಮ್ಮು ಮತ್ತು ಕಾಶ್ಮೀರದ ಜನತೆಗೆ ಅನ್ವಯವಾಗುವಲ್ಲಿ ಆಗುತ್ತಿದ್ದ ತಾರತಮ್ಯವನ್ನು ಅವರು ಸಹಿಸುತ್ತಿರಲಿಲ್ಲ. ಯಾವ ಸಾಂವಿಧಾನಿಕ ನಿರ್ಬಂಧಗಳಿಗೂ ಒಳಗಾಗದೆ

---

**ಮೂಲ ಆಕರ : ಆರ್ಗನೈಸರ್, ೨೭, ಜೂನ್, ೧೯೬೦**

ಆ ರಾಜ್ಯವನ್ನು ಶೇಕ್ ಅಬ್ದುಲ್ಲಾ ಅವರು ತಮ್ಮ ಖಾಸಗೀ ಸ್ವತ್ತು ಎಂಬಂತೆ ಮಾಡಿಕೊಳ್ಳುವುದಕ್ಕೆ ಡಾ. ಮುಖರ್ಜಿಯವರು ವಿರೋಧವಾಗಿದ್ದರು. ಅವರು ಜಮ್ಮುವಿನ ಜನತೆಯ ಮೇಲೆ ರಾಜ್ಯ ಸರ್ಕಾರವು ದಬ್ಬಾಳಿಕೆಯನ್ನು ನಡೆಸುವುದರ ಅಥವಾ ಮುಸ್ಲಿಂ ಬಹುಸಂಖ್ಯಾತರು ಭಾರತದಲ್ಲಿಯೇ ಉಳಿಯುವಂತೆ ಅವರ ಮನವೊಲಿಸುವುದಕ್ಕಾಗಿ ಜಮ್ಮುವಿನ ಜನತೆಯು ಮೂಕವೇದನೆಯನ್ನು ಅನುಭವಿಸುವುದರ ವಿರುದ್ಧವಾಗಿದ್ದರು. ಅಲ್ಲಿನ ಸರ್ಕಾರಕ್ಕೆ ಭಾರತ ಸರ್ಕಾರವು ವಿಶೇಷವಾದ ಮನ್ನಣೆಯನ್ನು ನೀಡುವುದು ಅವರಿಗೆ ಸಹ್ಯವಾಗುತ್ತಿರಲಿಲ್ಲ. ಇವು ಮತ್ತು ಹಲವು ಅಂಶಗಳೊಂದಿಗೆ, ದೇಶದಲ್ಲಿನ ಇತರ ಸಂಸ್ಥಾನಗಳು ಗಣರಾಜ್ಯದಲ್ಲಿ ಐಕ್ಯವಾದ ಹಾಗಲ್ಲದೆ, ಜಮ್ಮು ಮತ್ತು ಕಾಶ್ಮೀರವು ಸಮಸ್ಯಾತ್ಮಕ ರಾಜ್ಯವಾಗಿ ಮುಂದುವರೆಯುತ್ತಿದೆ ಎಂಬುದನ್ನು ತಾವು ಪ್ರಧಾನಮಂತ್ರಿಗಳಿಗೆ ತಮ್ಮ ಸ್ಮರಣೀಯ ಪತ್ರಗಳಲ್ಲಿ ತಿಳಿಸಿದ್ದಾರೆ. ಆ ಪತ್ರಗಳನ್ನು ಯಾರಾದರೂ ಅವಲೋಕಿಸಿದರೆ ಅದು ಇಂದಿಗೂ ಉಪಯುಕ್ತವಾಗುತ್ತದೆ. ಜಮ್ಮು ಮತ್ತು ಕಾಶ್ಮೀರ ಪ್ರಜಾ ಪರಿಷತ್ತು ಮತ್ತು ಭಾರತೀಯ ಜನಸಂಘದ ಚಳವಳಿಯಿಂದಾಗಿ, ಡಾ. ಮುಖರ್ಜಿಯವರ ಹುತಾತ್ಮತೆಯಿಂದಾಗಿ, ಆ ರಾಜ್ಯದಲ್ಲಿ ಮತ್ತು ಆ ರಾಜ್ಯ ಮತ್ತು ಭಾರತದ ನಡುವಿನ ಸಂಬಂಧದ ವಿಷಯದಲ್ಲಿ ಹಲವಾರು ಸಾಂವಿಧಾನಿಕ ಬದಲಾವಣೆಗಳು ಆಗಿವೆ. ಇದು ಮಹತ್ವದ ಹೆಜ್ಜೆ. ಆದರೆ ರಾಜ್ಯದ ಸಂವಿಧಾನಾತ್ಮಕ ಸ್ಥಾನಮಾನದ ಅಥವಾ ಜಮ್ಮುವಿನ ಜನತೆಯ ವಿಷಯದ ಬಗ್ಗೆ ಭಕ್ಷಿಯವರ ಆಡಳಿತ ಮತ್ತು ಅಬ್ದುಲ್ಲಾ ಅವರ ಆಡಳಿತದ ನಡುವೆ ಮೂಲಭೂತವಾಗಿ ಯಾವ ಬದಲಾವಣೆಯೂ ಇಲ್ಲ. ಇತರ ರಾಜ್ಯಗಳಂತೆ, ಜಮ್ಮು ಮತ್ತು ಕಾಶ್ಮೀರವು ಇನ್ನೂ ರಾಷ್ಟ್ರದ ಅವಿಭಾಜ್ಯ ಅಂಗವಾಗಿಲ್ಲ. ಅಲ್ಲಿ ಭಾರತ ಸರ್ಕಾರದ ಅಧಿಕಾರ ಚಲಾಯಿಸುವಂತೆ ಇಲ್ಲ. ಭಾರತ ಸರ್ಕಾರವು ಆ ರಾಜ್ಯದ ಸೂಚನೆಯಂತೆ ಕಾರ್ಯ ನಿರ್ವಹಿಸುತ್ತಿದೆ. ಭಾರತದ ಸಾರ್ವಭೌಮ ಸಂಸತ್ತು ಅಲ್ಲಿ ತನ್ನ ಸಾರ್ವಭೌಮತ್ವವನ್ನು ಕಳೆದುಕೊಂಡಿದೆ. ಭಾರತದ ನಾಗರಿಕ ತನ್ನ ದೇಶದಲ್ಲಿಯೇ ತಾರತಮ್ಯಕ್ಕೀಡಾಗಿದ್ದಾನೆ. ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಅವನಿಗೆ ಯಾವುದೇ ಹಕ್ಕುಗಳಿಲ್ಲ. 'ರಾಜ್ಯಗಳಿಗೆ ಸಂಬಂಧಿಸಿದ ವಿಷಯ'ದ ಹೆಸರಿನಲ್ಲಿ ಆಸ್ತಿಯ ಹಕ್ಕಿಗೆ ಸಂಬಂಧಿಸಿದಂತೆ ಗಂಭೀರ ಮಿತಿಗಳಿವೆ.

ಕಾನೂನಿನ ಈ ವಿಧಿಗಳಿಂದ ರಾಜ್ಯದ ಜನತೆಗೆ ಕೆಲವೊಂದು ಅನುಕೂಲಗಳಿವೆಯೆಂದು ಹೇಳುತ್ತಾ ಈ ವಿಧಿಗಳನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ರಾಜ್ಯ ಸರ್ಕಾರವು ಹವಣಿಸುತ್ತಿದೆ. ಪಟ್ಟಭದ್ರ ಹಿತಾಸಕ್ತಿಯನ್ನು ಸೃಷ್ಟಿಸಲು ಅದು ಪ್ರಯತ್ನಿಸುತ್ತಿದೆ. ಹೀಗೆ ಮಾಡುವುದರಿಂದ ರಾಜ್ಯದ ಜನತೆ ಮತ್ತು ರಾಷ್ಟ್ರದ ಇತರ ಜನತೆಯ ನಡುವೆ ಮಾನಸಿಕ ಅಂತರವನ್ನು

ಉಂಟುಮಾಡುವುದರ ಜೊತೆಗೆ, ರಾಜ್ಯದ ಆರ್ಥಿಕಾಭಿವೃದ್ಧಿಯನ್ನು ಕುಂಠಿತಗೊಳಿಸುತ್ತಿದೆ. ಭಾರತ ಸರ್ಕಾರವು ವಿದೇಶೀ ಬಂಡವಾಳವನ್ನು ಆಕರ್ಷಿಸುವಲ್ಲಿ ಅತೀವ ಆಸಕ್ತಿಯನ್ನು ಹೊಂದಿದೆ. ಇದಕ್ಕಾಗಿ ತಾರತಮ್ಯ ನೀತಿಯನ್ನಷ್ಟೇ ಅಲ್ಲದೆ ಇತರ ಸೌಲಭ್ಯಗಳನ್ನು ನೀಡುತ್ತಿದೆ. ಆದರೆ ಜಮ್ಮು ಮತ್ತು ಕಾಶ್ಮೀರದ ಸರ್ಕಾರವು ಭಾರತೀಯ ಉದ್ಯಮಿಗಳಿಗೆ ಮತ್ತು ಔದ್ಯೋಗಿಕ ಉತ್ಸಾಹಿಗಳಿಗೆ ತನ್ನ ರಾಜ್ಯದಲ್ಲಿ ನೆಲಸಿ ಅಲ್ಲಿನ ಅಭಿವೃದ್ಧಿಕಾರ್ಯದಲ್ಲಿ ನೆರವಾಗಲು ಅವಕಾಶಕೊಡಲು ಸಿದ್ಧವಿಲ್ಲ. ಕಾಶ್ಮೀರದ ಜನತೆಯನ್ನು ಕೇವಲ ಕೇಂದ್ರ ಸರ್ಕಾರದ ಅನುದಾನ ಮತ್ತು ಧರ್ಮಾರ್ಥ ಕೊಡುವ ಹಣದಿಂದ ಸಾಕಲು ಸಾಧ್ಯವಿಲ್ಲ. ಕೈಗಾರಿಕೀಕರಣದಿಂದ ಮಾತ್ರ ರಾಜ್ಯವು ತನ್ನ ಕಾಲ ಮೇಲೆ ತಾನು ನಿಂತುಕೊಳ್ಳಬಹುದು. ಆದರೆ ಪ್ರಸಕ್ತ ಇರುವ ಸರ್ಕಾರವು ಪ್ರವಾಸಿಗರು ಮತ್ತು ಅಲ್ಪಕಾಲಿಕ ಭೇಟಿಕಾರರನ್ನು ಬಯಸುತ್ತದೆಯೇ ಹೊರತು ಬಂಡವಾಳ ಹೂಡುವವರು ಮತ್ತು ಉದ್ಯಮಿಗಳನ್ನಲ್ಲ.

ರಾಜ್ಯದ ವಿಷಯಗಳ ನಿರ್ವಹಣೆಯು, ಜಮ್ಮುವಿನ ಸುಮಾರು ಐವತ್ತು ಸಾವಿರ ಕುಟುಂಬಗಳು ಯಾವ ನಾಗರಿಕ ಹಕ್ಕುಗಳೂ ಇಲ್ಲದ ಸ್ಥಿತಿಯನ್ನು ತಲುಪುವಂತೆ ಮಾಡಿದೆ. ತನ್ನ ಜನತೆಯ ಒಂದು ಭಾಗಕ್ಕೆ ಪೌರಹಕ್ಕುಗಳನ್ನು ನೀಡಲಾಗದ ಭಾರತ ಸರ್ಕಾರವು, ಸಿಲೋನಿನಲ್ಲಿರುವ ಭಾರತೀಯ ಮೂಲದ ಜನತೆಯ ಹಿತವನ್ನು ರಕ್ಷಿಸಲು ಹೇಗೆ ಮುಂದಾಗುತ್ತದೆ? ಜಮ್ಮುವಿನ ಜನತೆಗೆ ಅವರ ಮೂಲಭೂತ ಹಕ್ಕುಗಳನ್ನು ನಿರಾಕರಿಸುವುದರ ಹಿಂದೆ ಕೋಮುಭಾವನೆಯು ಕೆಲಸಮಾಡಿದೆ. ಜಮ್ಮುವಿನ ಎಲ್ಲ ಜನರನ್ನೂ ಮತದಾರರ ಪಟ್ಟಿಯಲ್ಲಿ ಸೇರಿಸಿದರೆ ಎರಡು ಕೋಮುಗಳ ನಡುವಿನ ಅನುಪಾತವು ಏರುಪೇರಾಗುವ ಭಯ ರಾಜ್ಯ ಸರ್ಕಾರಕ್ಕಿದೆ. ರಾಜ್ಯ ಶಾಸನ ಸಭೆಯಲ್ಲಿನ ಪ್ರಾತಿನಿಧ್ಯವು ಸಾಂವಿಧಾನಿಕ ವಿಧಿಗಳನ್ನು ಅವಲಂಬಿಸಿರಬೇಕೇ ಹೊರತು ಜನತೆಯ ಕೋಮಿನ ಅನುಪಾತದ ಮೇಲೆ ಅಲ್ಲ. ಇದರಿಂದಾಗಿ ಕಾಶ್ಮೀರ ಪ್ರಾಂತ್ಯವು ಹೆಚ್ಚಿನ ಪ್ರಾಮುಖ್ಯವನ್ನು ಅನುಭವಿಸುತ್ತಿದೆ. ಅಲ್ಪಸಂಖ್ಯಾತರಿಗೆ ಪ್ರಾಮುಖ್ಯವನ್ನು ನೀಡುವ ಬ್ರಿಟಿಷ್ ನೀತಿಯನ್ನು ಇದು ಜ್ಞಾಪಕಕ್ಕೆ ತರುತ್ತದೆ. ಆದರೆ ಜಮ್ಮು ಮತ್ತು ಕಾಶ್ಮೀರದಲ್ಲಿ ಬಹುಸಂಖ್ಯಾತರೆಂದು ಹೇಳಬಹುದಾದವರಿಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡಲಾಗಿದೆ. ಭಾರತದ ಇತರ ರಾಜ್ಯಗಳಲ್ಲಿನ ಜನತೆ ಮಾತ್ರ ಜಮ್ಮು ಮತ್ತು ಕಾಶ್ಮೀರದಲ್ಲಿನ ತಮ್ಮ ಮೂಲಭೂತ ಹಕ್ಕುಗಳಿಂದ ವಂಚಿತರಾಗಿಲ್ಲ. ಆ ರಾಜ್ಯದ ಜನತೆಯು ಕೂಡ ತಮ್ಮ ಪ್ರತಿನಿಧಿಗಳನ್ನು ಸಂಸತ್ತಿಗೆ ಕಳುಹಿಸುವ ಹಕ್ಕನ್ನು ಕಳೆದುಕೊಂಡಿದ್ದಾರೆ. ರಾಜ್ಯದ ಶಾಸನ ಸಭೆಗೆ ನಡೆದ ಚುನಾವಣೆಯ ಆಧಾರದ ಮೇಲೆ ರಾಷ್ಟ್ರಪತಿಯವರು ಪ್ರತಿನಿಧಿಗಳನ್ನು ನಾಮಕರಣ ಮಾಡುತ್ತಾರೆ. ಅಂದರೆ, ಈ ರಾಜ್ಯವು ಸಂಸತ್ತಿನಲ್ಲಿ

ಪ್ರತಿನಿಧಿಸಲ್ಪಡುತ್ತದೆಯೇ ಹೊರತು ಅಲ್ಲಿನ ಜನತೆಯಲ್ಲ. ಇದರ ಪರಿಣಾಮವಾಗಿ, ಇಡೀ ಭಾರತಕ್ಕೆ ಸಂಬಂಧಿಸಿದ ವಿಷಯಗಳನ್ನು ಬಿಟ್ಟು ಸ್ಥಳೀಯ ಮತ್ತು ಪ್ರಾಂತೀಯ ವಿಷಯಗಳ ಮೇಲೆ ಚುನಾವಣಾ ಹೋರಾಟವು ನಡೆಯುತ್ತದೆ. ಅಲ್ಲಿನ ರಾಜಕೀಯ ಪಕ್ಷಗಳು ಅಖಿಲ ಭಾರತ ನೀತಿಗಳ ಬಗ್ಗೆ ಯೋಚಿಸುವ ಗೋಜಿಗೇ ಹೋಗುವುದಿಲ್ಲ. ಪ್ರಜಾ ಪರಿಷತ್ತು ಇಲ್ಲದಿದ್ದರೆ, ಈ ರಾಜ್ಯದ ಜನತೆಗೆ ಭಾರತದ ಬಗ್ಗೆ ಏನನ್ನಾದರೂ ತಿಳಿಯುವ ಅವಕಾಶವೇ ಇರುತ್ತಿರಲಿಲ್ಲ. ರಾಜ್ಯ ಸರ್ಕಾರವು ಶಾಸನ ಸಭೆಯ ಈ ಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಅತಿಯಾದ ಕಾಳಜಿಯನ್ನು ಹೊಂದಿದೆ. ಇದನ್ನು ಆಡಳಿತ ನಡೆಸುತ್ತಿರುವ ರಾಜಕೀಯ ಪಕ್ಷವೊಂದರಲ್ಲಿ ಅಥವಾ ಪ್ರತಿಯೊಂದು ಸರ್ಕಾರದಲ್ಲಿ ಇರಬಹುದಾದ ಸಹಜವಾದ ಆಸೆಯೆಂದು ಪರಿಗಣಿಸಲಾಗುವುದಿಲ್ಲ ಮತ್ತು ಹಾಗೆ ಮಾಡಲೂಬಾರದು. ಇದು ನ್ಯಾಷನಲ್ ಕಾನ್ಫರೆನ್ಸಿನ ಮನೋಭಾವವನ್ನು ತೋರಿಸುತ್ತದೆ. ಈ ಪಕ್ಷದವರು ರಾಜ್ಯದ ಜನತೆಯು ತಮ್ಮನ್ನು ತಾವು ಭಾರತೀಯರೆಂದು ಭಾವಿಸಬಾರದು ಎಂದು ಬಯಸುತ್ತಾರೆ. ಅವರಿಗೆ ಭಾರತದೊಂದಿಗೆ ಭಾವನಾತ್ಮಕವಾಗಿ ಒಂದಾಗಿರುವುದು ಬೇಡವಾಗಿದೆ. ಈ ಕಾರಣಕ್ಕಾಗಿಯೇ ರಾಜ್ಯ ಸರ್ಕಾರವು ತನ್ನದೇ ಆದ ಧ್ವಜವನ್ನು ಮತ್ತು ಪ್ರತ್ಯೇಕ ಸಂವಿಧಾನವನ್ನು ಹೊಂದಿದೆ.

ಡಾ. ಮುಖರ್ಜಿಯವರು ಇಂತಹ ಪ್ರತ್ಯೇಕತಾವಾದದ ಲಾಂಛನಗಳನ್ನು ವಿರೋಧಿಸುತ್ತಿದ್ದರು. ತಾತ್ಕಾಲಿಕ ಉದ್ದೇಶಗಳಿಗಾಗಿ ಸೇರಿಸಲ್ಪಟ್ಟ ಸಂವಿಧಾನದ ೩೭೦ನೇ ವಿಧಿಯನ್ನು ತೆಗೆದುಹಾಕಬೇಕೆಂದು ಅವರು ಬಯಸುತ್ತಿದ್ದರು. ಕಾಶ್ಮೀರಕ್ಕೆ ವಿಶೇಷ ಮಾನ್ಯತೆಯನ್ನು ನೀಡಿದರೆ, ಇದೇ ತರಹದ ಹಲವಾರು ಬೇಡಿಕೆಗಳು ಹುಟ್ಟಬಹುದೆಂದು ಅವರು ಭಾರತ ಸರ್ಕಾರವನ್ನು ಎಚ್ಚರಿಸಿದ್ದರು. ಅವರ ಭವಿಷ್ಯವಾಣಿಯು ನಿಜವಾಗಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿರುವ ವಿಶೇಷ ಸಾಂವಿಧಾನಿಕ ಸ್ಥಾನಮಾನವನ್ನು ತಮ್ಮ ಪಂಜಾಬೀ ಪ್ರಾಂತ್ಯಕ್ಕೂ ನೀಡಬೇಕೆಂದು ಅಕಾಲಿ ಮುಖಂಡರು ತಮ್ಮ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. ಈ ಅಂಟುಜಾಡ್ಯವು ಹರಡುತ್ತಿದೆ. ಸರ್ಕಾರವು ಅಕಾಲಿಗಳ ಬೇಡಿಕೆಯನ್ನು ತಿರಸ್ಕರಿಸಿದೆ. ಭಾರತದ ರಾಷ್ಟ್ರೀಯತಾವಾದಿಗಳು ಎಂದಿನಿಂದಲೂ ಇದೇ ದೃಷ್ಟಿಯನ್ನು ಹೊಂದಿದ್ದಾರೆ. ಆದರೆ ಕಾಶ್ಮೀರದಲ್ಲಿರುವ ಪ್ರತ್ಯೇಕತಾವಾದದ ಬಗ್ಗೆ ಏನು ಹೇಳುವುದು? ಅದನ್ನೂ ನಿರ್ಮೂಲಮಾಡಬೇಕು.

ದೇಶವು ಡಾ. ಮುಖರ್ಜಿಯವರ ಹುತಾತ್ಮರಾದ ದಿನವನ್ನು ಆಚರಿಸುತ್ತದೆ. ಈ ದಿನ, ಅವರು ತಮ್ಮ ಜೀವನವನ್ನು ಅರ್ಪಿಸಿದ ಕಾರ್ಯಕ್ಕೆ ನಮ್ಮನ್ನು ನಾವೇ ಅರ್ಪಿಸಿಕೊಳ್ಳೋಣ. ಡಾ. ಮುಖರ್ಜಿಯವರ ಸಾವಿಗೆ ಸಂವಿಧಾನದ ೩೭೦ನೆಯ

ವಿಧಿಯೇ ಕಾರಣ. ಈ ವಿಧಿಯು ಅಸ್ತಿತ್ವದಲ್ಲಿರುವವರೆಗೆ ಇನ್ನೂ ಎಷ್ಟು ಜನರು ಇದೇ ಗತಿಯನ್ನು ಪಡೆಯುತ್ತಾರೆಯೋ ನಮಗೆ ಗೊತ್ತಿಲ್ಲ. ಜಮ್ಮುವಿಗೆ ಹೋಗುವ ಮಾರ್ಗದ ಸಭೆಯೊಂದರಲ್ಲಿ ಅಲ್ಲಿ ನೆರೆದಿದ್ದವರನ್ನು ಕುರಿತು ಡಾ. ಮುಖರ್ಜಿಯವರು ಅವರಿಗೆ ಸಂವಿಧಾನವನ್ನು ಒದಗಿಸುತ್ತೇನೆ ಇಲ್ಲವೇ ತಮ್ಮ ಪ್ರಾಣವನ್ನು ಇದಕ್ಕಾಗಿ ಅರ್ಪಿಸುತ್ತೇನೆ ಎಂದು ಹೇಳಿದ್ದರು. ಅವರು ಹೇಳಿದ ಹಿಂದಿ ವಾಕ್ಯವು ಹೀಗಿತ್ತು ವಿಧಾನ್ ದೂಂಗಾ, ಯಾ ಜಾನ್ ದೂಂಗ. ವಿಧಾನವೆಂದರೆ ಭಾರತದ ಸಂವಿಧಾನವೇ ಹೊರತು, ರಾಜ್ಯದ ಈಗಿನ ಸಂವಿಧಾನವಲ್ಲ. ಆ ರಾಜ್ಯದ ಜನತೆಗೆ ಈಗ ಒಂದು ಸಂವಿಧಾನವಿದೆ, ಆದರೆ ಅದು ಭಾರತದ ಸಂವಿಧಾನವಲ್ಲ. ಕಾಶ್ಮೀರದ ಜನತೆಯು ನಮ್ಮ ಸಂಗಡ ಬರುವವರೆಗೆ, ನಮಗಿರುವ ಸಾಂವಿಧಾನಿಕ ಹಕ್ಕುಗಳನ್ನು ಅವರೂ ಪಡೆಯುವವರೆಗೆ ಹಾಗೂ ಸಂವಿಧಾನವು ಭಾರತೀಯ ಪೌರರಿಗೆ ವಿಧಿಸಿರುವ ಹೊಣೆಗಳಿಗೆ ಅವರು ಬಾಧ್ಯರಾಗುವವರೆಗೆ ನಾವು ನಮ್ಮ ಕಾರ್ಯದಿಂದ ವಿಮುಖರಾಗದಿರೋಣ. ಆಗಷ್ಟೇ (ಕಾಶ್ಮೀರದ ಜನತೆಗೆ) ನಮ್ಮ ದೇಶದ ಭಾಗಗಳನ್ನು ಪಾಕಿಸ್ತಾನ ಮತ್ತು ಕೆಂಪು ಚೀನಾಗಳು ಕಿತ್ತುಕೊಂಡಿರುವುದರಿಂದ ಆಗಿರುವ ನೋವು ಅರಿವಿಗೆ ಬರುತ್ತದೆ. ನಮ್ಮ ಪವಿತ್ರ ತಾಯಿನಾಡಿನ ಭಾಗಗಳನ್ನು ಹಿಂದಕ್ಕೆ ಪಡೆಯಲು ಅವರು ಸ್ಫೂರ್ತಿಯನ್ನು ಪಡೆಯುತ್ತಾರೆ. ೩೭೦ನೇ ವಿಧಿಯನ್ನು ರದ್ದುಮಾಡುವುದು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಜನತೆಯಲ್ಲಷ್ಟೇ ಅಲ್ಲದೆ ಇಡೀ ಭಾರತದ ಜನತೆಯಲ್ಲಿ ಉತ್ಸಾಹವನ್ನು ತುಂಬುತ್ತದೆ. ಲಡಾಖ್‌ನ ಮೇಲೆ ನಡೆದ ಚೀನಾದ ಆಕ್ರಮಣದ ಹಿನ್ನೆಲೆಯಲ್ಲಿ, ಜಮ್ಮು ಮತ್ತು ಕಾಶ್ಮೀರ ಹಾಗೂ ಭಾರತದ ನಡುವೆ ಇರುವ ಎಲ್ಲಾ ಮಾನಸಿಕ ಅಂತರವನ್ನೂ ತೊಡೆದುಹಾಕುವುದು ಅತ್ಯಂತ ಅಗತ್ಯವಾಗಿದೆ.

* * * * *

# ಇಂಗ್ಲಿಷ್‌ಗೆ ನೀಡುವ ಬೆಂಬಲ ಜನತೆಗೆ ಮಾಡುವ ವಂಚನೆ

ಸಂವಿಧಾನದ ಎಂಟನೇ ಪರಿಶಿಷ್ಟದಲ್ಲಿ ನಮೂದಿಸಿರುವ ಭಾರತೀಯ ಭಾಷೆಗಳ ಜೊತೆಗೆ ಇಂಗ್ಲಿಷನ್ನೂ ಸೇರಿಸಬೇಕೆನ್ನುವ ಶ್ರೀ ಫ್ರಾಂಕ್ ಆಂಥೋಣಿಯವರ ಗೊತ್ತುವಳಿ, ದೇಶೀ ಭಾಷೆಗಳ ಕತ್ತನ್ನು ಹಿಸುಕುವುದನ್ನು ಮುಂದುವರೆಸುವ ಒಂದು ನಾಜೂಕಾದ ಕ್ರಮವಾಗಿದೆ. ಬೋಳೆಸ್ವಭಾವದವರು ನಂಬುವಷ್ಟೂ ಈ ಗೊತ್ತುವಳಿಯು ಅಮಾಯಕವಾಗಿಲ್ಲ. ಇಂಗ್ಲಿಷನ್ನು ಮಾತ್ರ ಕೇಂದ್ರ ಮತ್ತು ರಾಜ್ಯ ಸರಕಾರಗಳ ಅಧಿಕೃತ ಭಾಷೆಯೆಂದು ಘೋಷಿಸಬೇಕೆಂದು ಮನವಿ ಸಲ್ಲಿಸಿರುವ ಶ್ರೀ ಆಂಥೋಣಿ ಹಾಗೂ, ಇತರ ಕೆಲವರು, ಆಗಿಂದಾಗ್ಗೆ ವ್ಯಕ್ತಪಡಿಸಿರುವ ಉದ್ದೇಶವನ್ನು ಗಮನಿಸಿದರೆ, ಅವರು ಈ ನಡೆಯಲ್ಲಿ ಯಶಸ್ವಿಯಾದರೆ ಅವರ ಅಂತಿಮ ಉದ್ದೇಶಕ್ಕೆ ಇದು ಮೊದಲ ಮೆಟ್ಟಿಲಾಗುತ್ತದೆ ಎನ್ನಬಹುದು. ಈ ಎಲ್ಲಾ ವಿಷಯಗಳಿಗೂ ಇಂಗ್ಲಿಷ್ ಭಾಷೆಯನ್ನು ಬಳಸುವುದರಿಂದ ಆಗುವ ಅನುಕೂಲಗಳಿಗೂ ಯಾವ ಸಂಬಂಧವೂ ಇಲ್ಲ. ಎಲ್ಲ ಭಾರತೀಯ ಭಾಷೆಗಳಿಗೂ ಕಂಟಕಪ್ರಾಯವಾಗಿ ಇಂಗ್ಲಿಷ್ ಭಾಷೆಯನ್ನು ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಶಾಸಕಾಂಗದ ಕ್ಷೇತ್ರದಲ್ಲಿ ಎತ್ತಿಹಿಡಿಯಲಾಗಿದೆ. ಸಂವಿಧಾನದ ೩೪೩(೩)ನೇ ವಿಧಿಯು ಕೂಡ ಮೊದಲು ನಿಗದಿಗೊಳಿಸಿದ್ದ ಹದಿನೈದು ವರ್ಷಗಳ ನಂತರವೂ ಇಂಗ್ಲಿಷ್ ಭಾಷೆಯು ಮುಂದುವರೆಯಲು ಅವಕಾಶಮಾಡಿಕೊಟ್ಟಿದೆ. ಇಂಗ್ಲಿಷಿಗೆ ಸಾಂವಿಧಾನಿಕ ರಕ್ಷಣೆಯ ಅಗತ್ಯವೇನೂ ಇಲ್ಲ. ಸ್ಥಳೀಯ ಭಾಷೆಗಳನ್ನು ಹೆಚ್ಚು ಹೆಚ್ಚು ಉಪಯೋಗಿಸುತ್ತಾ ನಡೆದಂತೆ ಇಂಗ್ಲಿಷನ್ನು ಅವಲಂಬಿಸುವುದು ಕಡಿಮೆಯಾಗುತ್ತಾ ಹೋಗುತ್ತದೆ. ಇಂಗ್ಲಿಷನ್ನು ೮ನೇ ಪರಿಚ್ಛೇದಕ್ಕೆ ಸೇರಿಸುವಷ್ಟರಿಂದ ಮಾತ್ರ ಹೀಗಾಗುವುದನ್ನು ತಡೆಯುವುದು ಸಾಧ್ಯವಿಲ್ಲ. ಇಂಗ್ಲಿಷಿಗೆ ಸಂವಿಧಾನಪೂರ್ವದ ಸ್ಥಾನವನ್ನು ನೀಡಲು ಸಂವಿಧಾನದ ಎಲ್ಲಾ ವಿಧಿಗಳನ್ನು ನಿರರ್ಥಕಗೊಳಿಸಬೇಕಾಗುತ್ತದೆ. ಆದ್ದರಿಂದ ಸಂಸತ್ತಿನ ಸದಸ್ಯರು ಇಲ್ಲಿ ನಡೆಯುತ್ತಿರುವ ತಂತ್ರವನ್ನು ವಿಮರ್ಶಾತ್ಮಕವಾಗಿ ತೂಗಿ ನೋಡಬೇಕು. ಈ ಮಸೂದೆಯನ್ನು ಅಂಗೀಕರಿಸಿದರೆ, ಇಂಗ್ಲಿಷ್ ಭಾಷೆಗೆ ಅನುಕೂಲವಾದ

---

**ಮೂಲ ಆಕರ : ಆರ್ಗನೈಸರ್, ೧೧, ಮೇ, ೧೯೫೫**

ಒಂದು ಮನಸ್ಥಿತಿ ಏರ್ಪಡುತ್ತದೆ. ಹಿಂದಿಗೆ ಬದಲಾಗುವ ಹಿಂದೇಟು ಹಾಕುವ ಅಧಿಕಾರಿಗಳು ಹೆಚ್ಚಿನ ಉತ್ಸಾಹದೊಂದಿಗೆ ಇಂಗ್ಲಿಷಿಗೇ ಅಂಟಿಕೊಳ್ಳುತ್ತಾರೆ. ಕಳೆದ ಹತ್ತು ವರ್ಷಗಳಿಂದ ಸ್ಥಳೀಯ ಭಾಷೆಗಳನ್ನು ಅಧಿಕೃತ ಭಾಷೆಯನ್ನಾಗಿಸಲು ಮಾಡಿರುವ ಎಲ್ಲಾ ಪ್ರಯತ್ನಗಳೂ ನೀರಿನಲ್ಲಿ ಹೋಮಮಾಡಿದ ಹಾಗಾಗುತ್ತದೆ.

ಕಾಂಗ್ರೆಸ್ ಪಕ್ಷವು ಎಲ್ಲಾ ಸದಸ್ಯರಿಗೂ ವೈಯಕ್ತಿಕ ತೀರ್ಮಾನದ ಮೇಲೆ ಮುಕ್ತ ಮತದಾನದ ಅವಕಾಶವನ್ನು ನೀಡಿರುವುದರಿಂದ ಪ್ರತಿಯೊಬ್ಬ ಸದಸ್ಯರೂ ತೆಗೆದುಕೊಳ್ಳುವ ನಿಲವಿನ ಮೇಲೆ ಜನತೆ ಅವರನ್ನು ಅಳೆಯುತ್ತಾರೆ. ನಮ್ಮ ರಾಷ್ಟ್ರೀಯ ಗೌರವ ಮತ್ತು ಗಾಂಭೀರ್ಯದ ದೃಷ್ಟಿಯಿಂದ ನೋಡಿದರೆ, ಸಂವಿಧಾನಕ್ಕೆ ಈ ವಿಷಯದ ಬಗ್ಗೆ ತಿದ್ದುಪಡಿ ಮಾಡಬಾರದು. ಇಂಗ್ಲಿಷಿನ ಪರ ವಾದಿಸುವವರು ತೋರಿಕೆಯ, ಅಬ್ಬರದ ವಾದಗಳಿಂದ ಸೃಷ್ಟಿಸಿರುವ ಮಬ್ಬಿನ ವಾತಾವರಣವನ್ನು ಸರಿಯಾಗಿ ಅರಿತುಕೊಳ್ಳಲು ಸದಸ್ಯರಿಗೆ ರಾಜಿಮಾಡಿಕೊಳ್ಳದ ಅವರ ರಾಷ್ಟ್ರೀಯ ಪ್ರಜ್ಞೆ ನೆರವು ನೀಡುತ್ತದೆ ಎಂದು ನಂಬುತ್ತೇನೆ. ಇಂಗ್ಲಿಷನ್ನು ಶಾಶ್ವತಗೊಳಿಸಲು ಬೇರೆಬೇರೆ ಅತೃಪ್ತ ಮನಸ್ಸುಗಳಿಗೆ ಬೇಕಾದ ಭೂಮಿಕೆಯನ್ನೊದಗಿಸದ ಹಾಗೆ ಆಗಲಿ. ಬ್ರಿಟಿಷರ ಒಡೆದು ಆಳುವ ನೀತಿಯು ಇಲ್ಲಿ ಯಾವುದೇ ಪ್ರಭಾವವನ್ನು ಬೀರದ ಹಾಗೆ ಆಗಲಿ. ಎಲ್ಲಾ ಭಾರತೀಯ ಭಾಷೆಗಳ ಭವಿಷ್ಯವು ಅಪಾಯದಲ್ಲಿದೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಮಾಡುತ್ತಿರುವ ಅಬ್ಬರ, ಆರ್ಭಟಗಳಿಗೆ ಬಲಿಯಾಗದೆ ಎಲ್ಲರೂ ಒಟ್ಟಾಗಿ ಈ ಅಪಾಯವನ್ನು ಎದುರಿಸೋಣ. ಇಂಗ್ಲಿಷ್ ಭಾಷೆಯ ಬೆಂಬಲಿಗರ ಧ್ವನಿಯಷ್ಟು ಗಟ್ಟಿಯಾದ ದನಿಯಿರದ ಕೋಟ್ಯಂತರ ಜನರು ತಮ್ಮ ಪ್ರತಿನಿಧಿಗಳು ಮೊಂಡು ಹಠದ ಕೆಲವರನ್ನು ಓಲೈಸಲು ತಮ್ಮ ಹಿತಾಸಕ್ತಿ ಮತ್ತು ಗೌರವಗಳನ್ನು ತ್ಯಾಗಮಾಡಬಾರದೆಂದು ಬಯಸುತ್ತಾರೆ. ಜನತೆಗೆ ಜನಪ್ರತಿನಿಧಿಗಳು ಜವಾಬುದಾರರಾಗಿರಬೇಕು. ತಮ್ಮನ್ನು ವಂಚಿಸಿದರೆ ಜನತೆ ಜನಪ್ರತಿನಿಧಿಗಳನ್ನು ಎಂದಿಗೂ ಕ್ಷಮಿಸುವುದಿಲ್ಲ.

* * * * *

# ಯೋಜನೆಯ ಕೆಲವು ಮೂಲಭೂತ ಸೂತ್ರಗಳು

ಎರಡು ಪಂಚವಾರ್ಷಿಕ ಯೋಜನೆಗಳು ಕಳೆದರೂ ಸರ್ಕಾರ ಮತ್ತು ಜನತೆ ಸಾಕಷ್ಟು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದರೂ ನಮ್ಮನ್ನು ನಾವು ಸಮರ್ಥಿಸಿಕೊಳ್ಳುವಷ್ಟಾಗಲಿ ಜನರ ತಕ್ಷಣದ ಅಗತ್ಯಗಳನ್ನು ಪೂರೈಸಲಾಗಲಿ ಸಾಧ್ಯವಾಗಿಲ್ಲ. ಇದೆಲ್ಲಕ್ಕೂ ವಿರೋಧಾಭಾಸವಾಗಿ ನಾವು ನಮ್ಮ ಹೃದಯಕ್ಕೆ ಇದುವರೆಗೂ ಹತ್ತಿರವಾಗಿದ್ದ ಜೀವನದ ಎಲ್ಲ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಈಗಿನ ಸಂಕಷ್ಟಗಳು ಸರ್ಕಾರ ಅಭಿವೃದ್ಧಿಪರ ಆರ್ಥಿಕತೆಯ ಹೆರಿಗೆನೋವೆಂದು ಸಮಾಧಾನಪಡಿಸಲು ಯತ್ನಿಸುತ್ತಿದೆ. ಸಮೃದ್ಧಿಯ ಯುಗದ ಭರವಸೆ ನೀಡಲಾಗುತ್ತಿದೆ. ಆದರೆ ಜನರಿಗೆ ನೀಡಲಾದ ಭರವಸೆಗಳು ಮತ್ತೆ ಮತ್ತೆ ಸುಳ್ಳಿನ ಕಂತೆಗಳೆಂದು ಕಂಡುಬಂದಿರುವುದರಿಂದ ಅದನ್ನು ನಂಬಲು ಜನರು ಸಿದ್ಧರಿಲ್ಲ. ಮೂಲಭೂತವಾದ ಮತ್ತು ಕ್ರಾಂತಿಕಾರಿ ಬದಲಾವಣೆಯ ದೃಷ್ಟಿ ನಮ್ಮ ಆರ್ಥಿಕ ವಿಷಯಗಳು ಮತ್ತು ಯೋಜನೆಗಳ ಬಗ್ಗೆ ಇರಬೇಕಾದ ಅಗತ್ಯವಿದೆ. ಈ ಮುಂದೆ ಯೋಜನಾಬದ್ಧ ಆರ್ಥಿಕತೆಯ ಬಗ್ಗೆ ಕೆಲವು ಮೂಲಭೂತ ಸೂತ್ರಗಳನ್ನು ಚರ್ಚಿಸೋಣ.

**ಆರ್ಥಿಕೇತರ ಪರಿಗಣನೆಗಳು**

ಸದ್ಯಕ್ಕೆ ನಾವು ಮುಖ್ಯವಾಗಿ ಜನರ ಕ್ಷೇಮಾಭಿವೃದ್ಧಿಯ ಬಗ್ಗೆ ಚಿಂತಿಸುತ್ತಿದ್ದೇವೆ. ಆದರೆ ಆರ್ಥಿಕ ಚಟುವಟಿಕೆಯನ್ನು ಪ್ರತ್ಯೇಕವಾಗಿ ಜಾರಿಗೊಳಿಸಲಾಗುವುದಿಲ್ಲ. ವಿಜ್ಞಾನಿ ಪ್ರಯೋಗಶಾಲೆಯ ಪರೀಕ್ಷಾ ಉದ್ದೇಶಕ್ಕಾಗಿ ಒಂದು ರೀತಿಯ ಉಪಾಧಿಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಹಾಗೆಯೇ ಒಬ್ಬ ಅರ್ಥತಜ್ಞ ವಿಶ್ಲೇಷಣೆಯ ಉದ್ದೇಶಕ್ಕಾಗಿ ಒಂದು ಬಗೆಯ ಉಪಾಧಿಗಳನ್ನು ಊಹಿಸಿಕೊಳ್ಳಬಹುದು. ಹೀಗೆ ಪಡೆದ ಫಲಿತಾಂಶಗಳನ್ನು ವಾಸ್ತವವಾಗಿ ಅನ್ವಯಿಸುವಾಗ ನಾವು ವಿವಿಧ ವ್ಯತ್ಯಸ್ಥ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇದು ಆ ನಿರ್ಣಯಗಳನ್ನು ವಾಸ್ತವವಾಗಿ ಮಾರ್ಪಡಿಸಬಹುದು. ಕೆಲವೊಮ್ಮೆ ಈ ನಿಯಂತ್ರಿಸುವ ಅಂಶಗಳನ್ನು ನಿಯಂತ್ರಿಸುವುದು ಸಾಧ್ಯ. ಆದರೆ ಇನ್ನು ಕೆಲವು ಶಕ್ತಿಗಳು ಮಾನವ ನಿಯಂತ್ರಣವನ್ನು

---

**ಮೂಲ ಆಕರ : ಆರ್ಗನೈಸರ್, ೨೦, ಅಕ್ಟೋಬರ್, ೧೯೬೦**

ಮೀರಿರುತ್ತವೆ. ಒಂದು ನಿರ್ದಿಷ್ಟ ಸಾಮಾಜಿಕ ಉದ್ದೇಶಗಳನ್ನು ಉಳಿದವಕ್ಕೆ ಅಧೀನಗೊಳಿಸುವ ಅಪೇಕ್ಷೆಯೂ ಒಂದು ವಿಷಯವಾಗಿರುತ್ತದೆ. ಉದಾಹರಣೆಗೆ, ನಮ್ಮ ಕಾರ್ಯನೀತಿಗಳು ಮತ್ತು ಯೋಜನೆಗಳನ್ನು ನಿಯಂತ್ರಿಸುವ ವಿಶೇಷ ಆರ್ಥಿಕ ಕಾರಣಗಳಿರುತ್ತವೆ. ಎಲ್ಲ ದೇಶಗಳಿಗೂ ತಮ್ಮ ರಾಜಕೀಯ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವುದು ಪ್ರಮುಖ ವಿಷಯವಾಗಿದೆ. ಆದರೆ ಕೆಲವು ದೇಶಗಳಿಗೆ ತಮ್ಮ ಭೌಗೋಳಿಕ ಪರಮಾಧಿಕಾರವನ್ನು ವಿಸ್ತರಿಸುವ ಸುಪ್ತ ಆಸೆ ಇರುತ್ತದೆ. ಅಂಶಗಳು ಆರ್ಥಿಕ ಯೋಜನೆಗಳ ಮೇಲೆ ಪ್ರಭಾವ ಬೀರುತ್ತವೆ ಮತ್ತು ಕೇವಲ ಆರ್ಥಿಕ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾದ ಯೋಜನೆಗಳ ಮೇಲೆ ಭಿನ್ನಸ್ತರದ ಪ್ರಭಾವವನ್ನುಂಟು ಮಾಡುತ್ತವೆ.

ಹೆಚ್ಚಿನ ಸಂದರ್ಭಗಳಲ್ಲಿ ರಾಜಕೀಯ ಮತ್ತು ಸಾಮಾಜಿಕ ಮೌಲ್ಯಗಳು ಚಟುವಟಿಕೆಯ ಗುರಿಗಳನ್ನು ನಿರ್ಧರಿಸುತ್ತವೆ. ಕಮ್ಯುನಿಷ್ಟರು ಆರ್ಥಿಕ ಪರಿಗಣನೆಗಳಿಗೆ ಹೆಚ್ಚಿನ ಆದ್ಯತೆ ಕೊಡುವವರಾದರೂ ಸೋವಿಯತ್ ರಷ್ಯಾವು ಆರ್ಥಿಕೇತರ ಪರಿಗಣನೆಯಾದ ಶಸ್ತ್ರಾಸ್ತ್ರಗಳ ಸಂಗ್ರಹಣೆಗಾಗಿ ಅಪಾರ ಹಣವನ್ನು ವೆಚ್ಚಮಾಡುತ್ತಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ವಿಷಯದಲ್ಲಿ ಇದೇ ಆಗಿದೆ.

ಒಟ್ಟಿನಲ್ಲಿ ಜೀವನವನ್ನು ವಿವಿಧ ಕ್ಷೇತ್ರಗಳಾಗಿ ವಿಭಾಗಿಸಲಾಗದು. ನಮ್ಮ ವ್ಯಕ್ತಿಗತ ಮತ್ತು ಗುಂಪು ತೀರ್ಮಾನಗಳು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಅಂಶಗಳ ಸಂಚಿತ ಪರಿಣಾಮದಿಂದ ಉಂಟಾದವು. ಕೆಲವು ಚಟುವಟಿಕೆಗಳಲ್ಲಿ ಒಂದು ನಿರ್ದಿಷ್ಟ ಪ್ರೇರಣೆಯನ್ನು ಪ್ರಮುಖವಾಗಿ ಮತ್ತು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಅದನ್ನು ನಾವು ಒಂದು ರಾಸಾಯನಿಕ ಸಂಯುಕ್ತದಂತೆ ಪ್ರಯೋಗಾಲಯದಲ್ಲಿ ವಿಶ್ಲೇಷಿಸುವುದು ಸಾಧ್ಯವಾದರೆ ಈ ಚಟುವಟಿಕೆಗಳ ವಿವಿಧ ಸುಪ್ತ ಶಕ್ತಿಗಳು ಕಾರ್ಯನಿರತರಾಗಿರುವುದನ್ನು ಕಾಣಬಹುದು. ಆದ್ದರಿಂದ ನಾವು ಒಂದು ಆರ್ಥಿಕ ಯೋಜನೆಯ ಬಗ್ಗೆ ಯೋಚಿಸುವ ಮೊದಲು ಒಬ್ಬ ವ್ಯಕ್ತಿಯಾಗಿ ಮತ್ತು ಒಂದು ರಾಷ್ಟ್ರೀಯ ಜನಪರವಾಗಿ ನಮ್ಮ ಅಸ್ತಿತ್ವದ ಉದ್ದೇಶವನ್ನು ಮೊದಲು ಅರ್ಥೈಸಿಕೊಳ್ಳಬೇಕು.

**ನಾಲ್ಕು ಪುರುಷಾರ್ಥಗಳು**

ಹಿಂದೂ ಧರ್ಮಶಾಸ್ತ್ರಗಳು ಪ್ರತಿಯೊಬ್ಬ ವ್ಯಕ್ತಿಗೂ ನಾಲ್ಕು ಪುರುಷಾರ್ಥಗಳ ಸಾಧನೆಯನ್ನು ವಿಹಿತಗೊಳಿಸಿದೆ. ಅದೇ ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷ. ಕೊನೆಯದು ಪರಮ ಸಾಧನೆ, ಮೊದಲನೆಯದು ಇತರ ಮೂರನ್ನು ಸಾಧಿಸಲು ತಳಹದಿ. ಮಾನವ ಸಾಧನೆಗಳ ಮತ್ತು ಅವುಗಳು ಮಾನವನ ಸಮಗ್ರ

ಅಭಿವೃದ್ಧಿಗೆ ಸಂಬಂಧಿಸಿದಂತೆ ಹೊಂದಿರುವ ಸಾಪೇಕ್ಷ ಸಂಬಂಧಗಳ ಬಗ್ಗೆ ಹೆಚ್ಚು ವಿವರಗಳಿಗೆ ಹೋಗದೆ ಈ ನಾಲ್ಕು ಬಗೆಯ ಚಟುವಟಿಕೆಗಳನ್ನು ಭಿನ್ನರೀತಿಯಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಹೆಸರಿಸಬೇಕೆಂದರೆ (೧) ವ್ಯವಸ್ಥಿತವಾದ ಮತ್ತು ಸಾಮರಸ್ಯ ಜೀವನಕ್ಕೆ ಆಕಾಂಕ್ಷೆ; (೨) ಭೌತಿಕ ಅಭಿವೃದ್ಧಿ ಮತ್ತು ಸಾಮಾಜಿಕ ಸ್ಥಾನಮಾನಕ್ಕೆ ಕಾನೂನು ವ್ಯವಸ್ಥೆ; (೩) ಒಬ್ಬನ ಭಾವನೆಗಳ ಅಭಿವ್ಯಕ್ತಿಗೆ ಆತ್ಮಸಾಕ್ಷಿ; (೪) ಎಲ್ಲ ಜೀವರಾಶಿಯ ಮೂಲತಃ ಏಕತೆಗಾಗಿ ಸಮಗ್ರ ವ್ಯವಸ್ಥೆಯ ಪಥ – ಇವು ಅಗತ್ಯವಾಗಿವೆ. ಆದ್ದರಿಂದ ನಮ್ಮ ಗುರಿ ಆಧ್ಯಾತ್ಮಿಕ ಮತ್ತು ಭೌತಿಕ ಸ್ವರೂಪದ್ದಾಗಿರಬೇಕು. ಒಂದೇ ದಿಕ್ಕಿನ ಪ್ರಗತಿ ಅಪೇಕ್ಷಣೀಯವೂ ಅಲ್ಲ; ಆಚರಣೀಯವೂ ಅಲ್ಲ. ಆಧ್ಯಾತ್ಮಿಕವಾಗಿ ಮುಂದುವರಿದಿದ್ದು ಜೀವನಸ್ಥಿತಿಯಲ್ಲಿ ಹೀನಾಯವಾಗಿರುವ ದೇಶಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಅಪಾಯ ಎದುರಿಸಬೇಕಾಗುತ್ತದೆ. ಭೌತಿಕ ಅಭಿವೃದ್ಧಿಯಲ್ಲಿ ಉನ್ನತವಾಗಿದ್ದು ಆಧ್ಯಾತ್ಮಿಕ ಮಟ್ಟದಲ್ಲಿ ಕಳಪೆಯಾಗಿರುವ ದೇಶಗಳೂ ಇಂತಹ ಅಪಾಯವನ್ನು ಎದುರಿಸುತ್ತವೆ. ಹಾಲಿ ಲಭ್ಯವಿರುವ ಅನುಕೂಲಗಳನ್ನು ಕಳೆದುಕೊಳ್ಳದೆ ಮೊದಲನೆ ಗುಂಪಿನ ದೇಶ ಭೌತಿಕ ಪುನರುತ್ಥಾನಕ್ಕಾಗಿ ಶ್ರಮಿಸಬೇಕು. ಈ ದೃಷ್ಟಿಯಿಂದಲೇ ಗಾಂಧೀಜಿಯವರು ಅರ್ಥಶಾಸ್ತ್ರ ನೈತಿಕ ಧ್ಯೇಯಗಳಿಗೆ ಅಧೀನವಾಗಿರಬೇಕೆಂದು ಅಪೇಕ್ಷಿಸಿದ್ದು. ಅವರು ಹೇಳಿದ್ದು ನಾನು ಅರ್ಥಶಾಸ್ತ್ರ ಮತ್ತು ನೀತಿಶಾಸ್ತ್ರದ ನಡುವೆ ಸೂಕ್ಷ್ಮಗೆರೆ ಎಳೆಯಲು ಬಯಸುವುದಿಲ್ಲ ಎಂದು. ವ್ಯಕ್ತಿಯ ಅಥವಾ ರಾಷ್ಟ್ರದ ಯೋಗಕ್ಷೇಮಕ್ಕೆ ಧಕ್ಕೆಯಾಗುವ ಅರ್ಥಶಾಸ್ತ್ರ ಅನೈತಿಕವಾದುದು ಮತ್ತು ಅದರಿಂದಾಗಿ ಅದು ಪಾಪಯುಕ್ತವೂ ಹೌದು. ಹದಿನೆಂಟು ವರ್ಷಗಳ ಅಂತರದ ಅನಂತರ ಅವರು ಮತ್ತೆ ಹೀಗೆ ಬರೆದರು. ಧನಪಿಶಾಚಿಯನ್ನು ಆರಾಧಿಸುವ ಅರ್ಥಶಾಸ್ತ್ರ ದುರ್ಬಲನನ್ನು ಶೋಷಿಸಿ ಬಲಾಢ್ಯನು ಸಂಪತ್ತನ್ನು ಗುಡ್ಡೆಹಾಕಿಕೊಳ್ಳಲು ಅವಕಾಶಮಾಡಿಕೊಡುತ್ತದೆ. ಇದು ದೋಷಪೂರಿತವಾದ ಮತ್ತು ದುಷ್ಪರಿಣಾಮದಿಂದ ಕೂಡಿದ ಅರ್ಥಶಾಸ್ತ್ರ.

**ಆಧ್ಯಾತ್ಮಿಕ ಪ್ರಜಾಪ್ರಭುತ್ವವೂ ಹೌದು**

ನಾವು ಇದೇ ಅಭಿಪ್ರಾಯವನ್ನು ಆಧುನಿಕ ಭಾಷೆಯಲ್ಲಿ ಹೇಳಬೇಕೆಂದರೆ ನಮ್ಮ ಗುರಿ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು. ಪ್ರಜಾಪ್ರಭುತ್ವ ಅರ್ಥವಿವರಣೆಗೆ ಕಷ್ಟಕರವಾದುದು. ಇದು ಹೆಚ್ಚಾಗಿ ಜೀವನದ ಬಗ್ಗೆ ಇಟ್ಟುಕೊಂಡಿರುವ ದೃಷ್ಟಿ. ಒಂದು ಜೀವನಮಾರ್ಗ ಮತ್ತು ಜೀವನ ಇದರಲ್ಲಿ ಸದಾ ಸಾಂಸ್ಥಿಕ ಘಟಕಗಳು ಕ್ರಿಯಾಶೀಲವಾಗಿರುವಂತೆ

ಕಂಡರೂ ವ್ಯಕ್ತಿ ಅಥವಾ ಗುಂಪು ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತದೆ. ಸಂಸ್ಥೆಗಳು ಅಮೂರ್ತ ಪರಿಕಲ್ಪನೆಗಳಿಗೆ ಸಾಕಾರ ರೂಪ ಕೊಡುತ್ತವೆ. ವೈವಿಧ್ಯಮಯವಾದ ಸಂಸ್ಥೆಗಳು ವಿವಿಧ ರಾಷ್ಟ್ರಗಳ ಜಾಯಮಾನಕ್ಕನುಗುಣವಾಗಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪೋಷಿಸಲು ಸಹಾಯಕವಾಗುತ್ತವೆ. ಒಂದು ನಿರ್ದಿಷ್ಟ ಸಂಸ್ಥೆ ತಾನು ಪ್ರಜಾಸತ್ತಾತ್ಮಕವಾಗಿದೆ ಎಂದು ಹೇಳಿಕೊಂಡರೂ ಅದು ಪ್ರಜಾಪ್ರಭುತ್ವವಾದಿಯಾಗದಿರಬಹುದು.

ಈ ಪ್ರಜಾಪ್ರಭುತ್ವ ದೃಷ್ಟಿ ಕೆಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿರುತ್ತದೆ. ಅದು ಎಲ್ಲ ಮಾನವರ ಮೂಲಭೂತ ಸಮಾನತೆಯನ್ನು ಗೌರವಿಸುತ್ತದೆ. ಸಮಾನತೆಯನ್ನು ಸಮರೂಪತೆ ಮತ್ತು ಗುರುತಿಸಿಕೊಳ್ಳುವಿಕೆಯಿಂದ ಬೇರ್ಪಡಿಸಬೇಕು. ಏಕತೆ ಈ ಮಾರ್ಗ ಕುರಿತು ಉತ್ತಮ ಕಲ್ಪನೆ ಮೂಡಿಸುತ್ತದೆ. ಏಕತೆ ಒಂದು ಸಂಚಿತ ಪರಿಕಲ್ಪನೆಯಾದರೆ ಸಮಾನತೆ ವ್ಯಕ್ತಿಗಳಿಗೆ ಸಂಬಂಧಿಸಿದ್ದು. ಆದರೆ ಇವೆರಡೂ ಪರಸ್ಪರ ಸಂಬಂಧಿಸಿವೆ. ಏಕತೆಯ ಭಾವನೆ ಇಲ್ಲದಿದ್ದರೆ ವಾಸ್ತವ ಸಮಾನತೆ ಇರುವುದಿಲ್ಲ. ಒಂದು ನೀರಸ, ಮಾಂತ್ರಿಕ, ಶಾಸನೀಯ ಮತ್ತು ಸಾಂಸ್ಥಿಕ ಸಮಾನತೆಯನ್ನು ಹೇರಿದರೆ ಅದು ಅದರ ಉದ್ದೇಶವನ್ನು ವಿಫಲಗೊಳಿಸುತ್ತದೆ.

ಸಮಾನತೆ ಎಂಬ ಪದವನ್ನು ಇತ್ತೀಚೆಗೆ ಅವಕಾಶದಲ್ಲಿನ ಸಮಾನತೆ ಎಂದು ಗುರುತಿಸಲಾಗಿದೆ. ಏಕೆಂದರೆ ಪ್ರಕೃತಿ ಸಹಜವಾಗಿ ಸಮಾನತೆ ಸಾಧ್ಯವಿಲ್ಲ. ನಾವು ಮಾಡಬಹುದಾದುದೆಂದರೆ ಪ್ರತಿಯೊಬ್ಬ ವ್ಯಕ್ತಿಗೂ ಸಮಾನವಾದ ಅವಕಾಶಗಳನ್ನು ನಿರ್ಮಿಸುವುದು. ಪ್ರಗತಿಯ ಹಾದಿಯನ್ನು ಮುಚ್ಚತಕ್ಕದ್ದಲ್ಲ. ಹಾಗೆಯೇ ಯಾವುದೇ ವ್ಯಕ್ತಿ ಅಥವಾ ವರ್ಗಕ್ಕೆ, ಯಾವುದೇ ಕ್ಷೇತ್ರವೂ ನಿಲುಕದಂತೆ ಮಾಡತಕ್ಕದಲ್ಲ. ಇದೇ ಮಾತನ್ನು ಬೇರೆ ರೀತಿಯಲ್ಲಿ ಹೇಳಬೇಕೆಂದರೆ ಪ್ರಜಾಪ್ರಭುತ್ವ ಅಂದರೆ ಆಯ್ಕೆಯ ಸ್ವಾತಂತ್ರ್ಯ ರಾಜಕೀಯ ಪ್ರಜಾಪ್ರಭುತ್ವ. ನಿಮ್ಮ ಪ್ರಭುಗಳನ್ನು ನೀವೇ ಆಯ್ದುಕೊಳ್ಳುವುದು. ಹಾಗೆಯೇ ನೀವು ಬಯಸಿದರೆ ನೀವೇ ಪ್ರಭುಗಳಾಗುವುದು. ಆರ್ಥಿಕ ಪ್ರಜಾಪ್ರಭುತ್ವವೆಂದರೆ ಜೀವನದಲ್ಲಿ ನಿಮ್ಮ ವೃತ್ತಿಯನ್ನು ನೀವೇ ಆಯ್ದುಕೊಳ್ಳುವುದು ಹಾಗೂ ನಿಮ್ಮ ಅಪೇಕ್ಷೆಗಳ ಈಡೇರಿಕೆಗೆ ನೀವೇ ಮಾರ್ಗಗಳನ್ನು ಕಂಡುಕೊಳ್ಳುವುದು. ಆರ್ಥಿಕ ಪದಗಳಲ್ಲಿ ಹೇಳಬೇಕೆಂದರೆ ಉತ್ಪಾದನಾ ಸ್ವಾತಂತ್ರ್ಯ ಮತ್ತು ಬಳಕೆಯ ಸ್ವಾತಂತ್ರ್ಯ. ಸಾಮಾಜಿಕ ಪ್ರಜಾಪ್ರಭುತ್ವವೆಂದರೆ ನಿಮ್ಮದೇ ಸಮಾಜವನ್ನು ನೀವು ಆಯ್ದುಕೊಳ್ಳುವ ಸ್ವಾತಂತ್ರ್ಯ. ಅಂದರೆ ಸಂಘ ಸ್ವಾತಂತ್ರ್ಯ. ಪ್ರತಿಯೊಬ್ಬರಿಗೂ ತಮ್ಮದೇ ದೇವರನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಬಂದಾಗ ಅದು ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ತಂದುಕೊಡುತ್ತದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅದನ್ನು ಆರಾಧನಾ ಸ್ವಾತಂತ್ರ್ಯ ಎನ್ನಬಹುದು.

**ಮರ್ಯಾದೆಗಳ ಸ್ಥಾಪನೆ**

ಇವೆಲ್ಲ ಅಪೇಕ್ಷಣೀಯ ಗುರಿಗಳು. ಆದರೆ ಅವನ್ನು ಪಡೆಯುವುದು ಹೇಗೆ? ಎಲ್ಲರೂ ಪ್ರಕೃತಿಯಿಂದ ಒಂದೇ ಸಮನಾಗಿ ವರದಾನ ಪಡೆದಿರುವುದಿಲ್ಲ. ಎಲ್ಲರೂ ಆಯ್ಕೆ ಮಾಡಿಕೊಳ್ಳಲು ಸಮರ್ಥರಾಗಿರುವುದಿಲ್ಲ. ಅದರಲ್ಲಿ ವಿವೇಕಯುತವಾದ ಮತ್ತು ಉತ್ಪಾದಕವಾದ ಆಯ್ಕೆಮಾಡಿಕೊಳ್ಳಲು ಶಕ್ತರಾಗಿರುವುದಿಲ್ಲ. ಮಗು ಅಥವಾ ರೋಗಿಗೆ ತಿನ್ನುವ ಸ್ವಾತಂತ್ರ್ಯಕೊಟ್ಟರೆ ಅವರು ಅದನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಯೇ ಹೆಚ್ಚು. ಕೆಲವರು ತಮಗೆ ದೊರೆತಿರುವ ಸ್ವಾತಂತ್ರ್ಯವನ್ನು ಇನ್ನೊಬ್ಬರ ಸ್ವಾತಂತ್ರ್ಯ ಹರಣಕ್ಕೆ ಬಳಸುತ್ತಾರೆ. ಕೈಗಾರಿಕೋದ್ಯಮಿಗೆ ನೀಡುವ ಉತ್ಪಾದನಾ ಸ್ವಾತಂತ್ರ್ಯ ಸಣ್ಣ ಪ್ರಮಾಣದ ತಯಾರಿಕರು ಉತ್ಪಾದಿಸಲು ಅಡಚಣೆ ಒಡ್ಡಬಹುದು ಆದ್ದರಿಂದ ಸ್ವಾತಂತ್ರ್ಯ ಎನ್ನುವುದು ಒಂದು ಹಂತದಲ್ಲಿ ಸ್ಪರ್ಧೆಯೂ ಆಗಿರುವುದರಿಂದ ಅದಕ್ಕೆ ತಡೆವಿಧಿಸದೆ ನೀಡತಕ್ಕದ್ದಲ್ಲ. ವ್ಯಕ್ತಿ ಸ್ವಾತಂತ್ರ್ಯ ಬಯಸಿದಾಗ ಅವನು ಭದ್ರತೆಯನ್ನು ಕೇಳುತ್ತಾನೆ. ನೀವು ಒಬ್ಬ ವ್ಯಕ್ತಿಗೆ ಸ್ವಾತಂತ್ರ್ಯ ನೀಡುವಾಗ ಇನ್ನೊಬ್ಬ ವ್ಯಕ್ತಿಯ ಒಂದು ಭಾಗ ಸ್ವಾತಂತ್ರ್ಯವನ್ನು ಮೊಟಕುಗೊಳಿಸಬೇಕಾಗುತ್ತದೆ. ಹೀಗೆ ವಾಸ್ತವ ಸ್ವಾತಂತ್ರ್ಯವು ನಿರ್ಬಂಧಗಳಿಂದಲೂ ಕೂಡಿರುತ್ತದೆ. ಈ ನಿರ್ಬಂಧಗಳೇನು ಎಂಬುದು ಸಂದರ್ಭದ ಅವಶ್ಯಕತೆಗಳನ್ನು ಅವಲಂಬಿಸಿರುತ್ತದೆ. ಸುವ್ಯವಸ್ಥಿತ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಈ ಪರಿಮಿತಿಗಳನ್ನು ಅರಿತಿರಬೇಕು. ಒತ್ತಾಯಗಳು ಅಗತ್ಯವಾಗಿರುವಲ್ಲಿ ವ್ಯಕ್ತಿಗೆ ಹೆಚ್ಚು ವ್ಯಾಪ್ತಿಯಲ್ಲಿ ಮುಕ್ತ ಅವಕಾಶವನ್ನು ನೀಡಬೇಕು. ಭದ್ರತೆಯ ಹೆಸರಿನಲ್ಲಿ ವ್ಯಕ್ತಿಗೆ ಸಾಹಸಶೀಲತೆಯನ್ನು ನಿರಾಕರಿಸಬಾರದು. ಹಾಗೆಯೇ ಆತನ ಬೆಳೆಯುತ್ತಿರುವ ಸಾಮರ್ಥ್ಯಗಳು ಅತಿಯಾದ ಭದ್ರತೆಯಿಂದ ಮೊಟಕಾಗದಂತೆ ನೋಡಿಕೊಳ್ಳಬೇಕು. ಹೀಗೆ ಒಂದು ಸಮತೋಲನವನ್ನು ಸಾಧಿಸಬೇಕು. ಇವನ್ನು ನಾವು ವ್ಯಾಪ್ತಿ ಸ್ಥಾಪನೆ ಎಂದು ಹೇಳಬಹುದು. ಈ ಸಮಾಜದಲ್ಲಿ ವ್ಯಕ್ತಿಯ ಕರ್ತವ್ಯ ಮತ್ತು ಮೌಲ್ಯಗಳನ್ನು ನಿರ್ಣಯಿಸುತ್ತವೆ.

ಅಧಿಕಾರದ ಅಧಿಕ ಕೇಂದ್ರೀಕರಣ ಇತರರ ಸ್ವಾತಂತ್ರ್ಯವನ್ನು ವಿನಾಶಗೊಳಿಸುತ್ತದೆ. ಆದ್ದರಿಂದ ಈ ಅಧಿಕಾರದ ಕೇಂದ್ರೀಕರಣವನ್ನು ನಿಯಂತ್ರಿಸಬೇಕು. ವಂಶಪಾರಂಪರ್ಯವಾಗಿ ಬಂದ ರಾಜ ಅಥವಾ ಒಬ್ಬ ಸರ್ವಾಧಿಕಾರಿಯಲ್ಲಿ ರಾಜಕೀಯ ಅಧಿಕಾರ ನಿಹಿತವಾಗುವುದರಿಂದ ಅದು ಜನರ ಸ್ವಾತಂತ್ರ್ಯಕ್ಕೆ ಕುಂದಾಗಿ ಪರಿಣಮಿಸುತ್ತದೆ. ಒಬ್ಬ ಜನಾನುರಾಗಿ ರಾಜ ಅಥವಾ ಉದಾರವಾದಿ ಸರ್ವಾಧಿಕಾರಿ ಜನರ ಹಿತ ಕಾಯಬಹುದು. ಆದರೆ ಅದೂ ಕೂಡ ರಾಜಕೀಯ ಕ್ಷೇತ್ರದಲ್ಲಿ ಜನರ ಆರಂಭಿಕ ಶಕ್ತಿಯನ್ನು ನಾಶಮಾಡುತ್ತದೆ. ಅಧಿಕಾರದ ಅತ್ಯಧಿಕ ಕೇಂದ್ರೀಕರಣ ಮತ್ತು ಸಾಂದ್ರೀಕರಣ ನಡೆದರೆ ಜನರ ಮತದಾನದಿಂದ ಚುನಾಯಿತವಾದ ರಾಷ್ಟ್ರೀಯ ಸರ್ಕಾರ ಕೂಡ ರಾಜಕೀಯ

ಪ್ರಜಾಪ್ರಭುತ್ವದ ಭರವಸೆ ನೀಡಲಾರದು. ವಿಕೇಂದ್ರೀಕರಣ ಅಂದರೆ ಅಧಿಕಾರಗಳನ್ನು ನಿಹಿತಗೊಳಿಸುವುದು ಅಥವಾ ನಿಯೋಗಿಸುವುದಲ್ಲ. ಅದು ಅಡ್ಯಾರ್‌ನಲ್ಲಿರುವ ಬೇರುಗಳು ಮತ್ತು ಕೊನೆಗಳನ್ನು ಪ್ರತ್ಯೇಕಗೊಳಿಸಲಾಗದ ಬಹು ಹಳೆಯ ಆಲದಮರದಂತೆ, ರಾಷ್ಟ್ರೀಯ ಸರ್ಕಾರವು ಅಧಿಕಾರಾರೂಢವಾಗಿದ್ದು ಅದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನ ಜವಾಬ್ದಾರಿಗಳನ್ನು ನಿರ್ವಹಿಸುತ್ತದೆ. ಆದರೆ ಜನರ ದಿನನಿತ್ಯದ ಚಟುವಟಿಕೆಗಳನ್ನು ಸಾಧ್ಯವಾದಮಟ್ಟಿಗೆ ಪರಿಹರಿಸಬೇಕಾದರೆ ರಾಷ್ಟ್ರೀಯ ಸರ್ಕಾರವೇ ಬೇಕು. ಅದು ಮುಖ್ಯವಾಗಿ ಸ್ಥಳೀಯ ಸರ್ಕಾರದ ಕಾರ್ಯಗಳು, ರಾಜಕೀಯ ವಿಕೇಂದ್ರೀಕರಣ ಪ್ರಜಾಪ್ರಭುತ್ವದೊಂದಿಗೆ ಏಕೀಭವವಾಗಿರುತ್ತದೆ.

### ಏಕಸ್ವಾಮ್ಯಗಳು ಮತ್ತು ಬಹುಸ್ವಾಮ್ಯಗಳು

ರಾಜಕೀಯ ಕ್ಷೇತ್ರದಲ್ಲಿದ್ದಂತೆಯೇ ಆರ್ಥಿಕ ಪ್ರಜಾಪ್ರಭುತ್ವಕ್ಕೂ ಅಧಿಕಾರ ಕೇಂದ್ರೀಕರಣ ಹಾನಿಕರವಾದುದು. ದೊಡ್ಡ ಏಕಸ್ವಾಮ್ಯ ಅಥವಾ ಬಹುಸ್ವಾಮ್ಯ ಜನರಿಗೆ ಅವರ ಆರ್ಥಿಕ ಸ್ವಾತಂತ್ರ್ಯವನ್ನು ನಿರಾಕರಿಸುತ್ತದೆ. ಅವರು ಬೆಲೆಗಳ ಮೇಲೆ ಕೈವಾಡ ನಡೆಸಬಹುದು, ಬೆಲೆಗಳ ಮೂಲಕ ಜಾಹಿರಾತು ಮತ್ತು ಮಾರುಕಟ್ಟೆ ಮೇಲೆ ಪ್ರಭಾವ ಬೀರಬಹುದು. ಅದು ಅಂತಿಮವಾಗಿ ಬಳಕೆದಾರನ ವ್ಯಕ್ತಿ ಸ್ವಾತಂತ್ರ್ಯದ ಮೇಲೂ ಪರಿಣಾಮ ಬೀರಬಹುದು. ಮುಕ್ತ ಸಾಹಸೋದ್ಯಮವಾದಿಗಳು ಬಂಡವಾಳಶಾಹಿ ಅಧಿಕತೆಯಲ್ಲಿ ಪ್ರತಿ ಬಾರಿ ನೀವು ಒಂದು ಖರೀದಿ ಮಾಡಿದಾಗ ಆರ್ಥಿಕ ವಲಯದಲ್ಲಿ ನೀವು ನಿಮ್ಮ ಮತದಾನದ ಹಕ್ಕನ್ನು ಚಲಾಯಿಸಿದಂತೆ ಎಂದು ಹೇಳುತ್ತಾರೆ. ಬಳಕೆದಾರನ ಆಯ್ಕೆ ಉದ್ಯಮಿಯ ನಿರ್ಧಾರಗಳ ಮೇಲೆ ಪ್ರಭಾವ ಬೀರುತ್ತದೆ. ಆದರೆ ಅದರಿಂದಾಚೆಗೆ ನೀವು ಚಲಾಯಿಸುವ ಆರ್ಥಿಕ ಮತದಾನ ಕಮ್ಯುನಿಸ್ಟ್ ದೇಶಗಳಲ್ಲಿ ಮಾಡುವ ಮತದಾನಕ್ಕಿಂತ ಹೆಚ್ಚು ಬೇರೆಯಲ್ಲ. ಅವರು ಕಡ್ಡಾಯವಾಗಿ ಮತ ಚಲಾಯಿಸಬೇಕು. ಆದರೆ ಅದು ಅಧಿಕೃತ ಅಭ್ಯರ್ಥಿಗೆ ಮಾತ್ರ. ನಾವು ಪೆಟ್ರೋಲ್ ಖರೀದಿಸುವಾಗ ನಮಗೆ ಏನಾದರೂ ಆಯ್ಕೆ ಹಕ್ಕು ಇದೆಯಾ? ಅದರ ಬೆಲೆಯೂ ಉತ್ಪಾದನೆ ಮತ್ತು ಬಳಕೆಯ ಮೇಲೆ ಅವಲಂಬಿತವಾಗುವುದಿಲ್ಲ; ಅದು ನಿರ್ಧಾರವಾಗುವುದು ಸಾವಿರಾರು ಮೈಲಿಗಳ ದೂರದಲ್ಲಿ ಅಮೆರಿಕದ ನಗರವೊಂದರಲ್ಲಿ ಕುಳಿತಿರುವ ಕೆಲವು ವ್ಯಕ್ತಿಗಳು ಕೈಗೊಳ್ಳುವ ತೀರ್ಮಾನದಲ್ಲಿ.

ಆದ್ದರಿಂದ ನಾವು ಆರ್ಥಿಕ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕಾದರೆ ನಮಗೆ ಆರ್ಥಿಕ ಅಧಿಕಾರದ ವಿಕೇಂದ್ರೀಕರಣದ ಅಗತ್ಯವಿದೆ. ಅಮೆರಿಕದಲ್ಲಿನ

ಆರ್ಥಿಕ ಕೇಂದ್ರೀಕರಣದ ಬಗ್ಗೆ ಅಲ್ಲಿನ ಅಧ್ಯಕ್ಷ ರೂಸ್‌ವೆಲ್ಟ್ ಒಮ್ಮೆ ಹೇಳಿದ್ದು ಹೀಗೆ ಯು.ಎಸ್.ಎ. ಯ ೧೨೪ ಮಿಲಿಯನ್ ಜನಸಂಖ್ಯೆಯಲ್ಲಿ ಅಮೆರಿಕದ ಸುಮಾರು ೬೦೦ ಚಿಲ್ಲರೆ ಕಾರ್ಪೊರೇಷನ್‌ಗಳು ಅಮೆರಿಕದ ಮೂರನೇ ಎರಡು ಭಾಗದಷ್ಟು ಕೈಗಾರಿಕೆಗಳನ್ನು ತಮ್ಮ ಹಿಡಿತದಲ್ಲಿರಿಸಿಕೊಂಡಿವೆ. ೧೦ ಮಿಲಿಯನ್ ಚಿಕ್ಕ ವ್ಯವಹಾರಸ್ಥರು ಉಳಿದ ಕ್ಷೇತ್ರವನ್ನು ಹಂಚಿಕೊಂಡಿದ್ದಾರೆ (ಲುಕಿಂಗ್ ಫಾರ್ವರ್ಡ್ ೧೯೩೭) ಅದೇ ಪರಿಸ್ಥಿತಿ ಗ್ರೇಟ್ ಬ್ರಿಟನ್‌ನಲ್ಲೂ ಇದೆ. ಅಲ್ಲಿ ಶೇಕಡಾ ೧೨ ರಷ್ಟು ಭಾಗದ ಜನರಿಗೆ ದೇಶದ ಅರ್ಧಭಾಗ ಆದಾಯ ಸೇರುತ್ತದೆ. ಹಾಗೆಯೇ ಮೂರನೆ ಒಂದು ಭಾಗ ಆದಾಯ ಶೇಕಡ ಮೂರರಷ್ಟು ಜನಸಂಖ್ಯೆಯ ಪಾಲಾಗುತ್ತದೆ. ಸ್ವಲ್ಪ ಆದಾಯವನ್ನು ಕಷ್ಟಪಟ್ಟು ಸಂಪಾದಿಸಬೇಕು. ಅನೇಕ ದೊಡ್ಡ ಆದಾಯಗಳು ಅದನ್ನು ಪಡೆಯುವವರ ಅಲ್ಪಶ್ರಮದಿಂದ ಅಥವಾ ಏನೂ ಶ್ರಮವಿಲ್ಲದೆ ದೊರೆಯುತ್ತವೆ. ಇಟಲಿಯ ಅರ್ಥಶಾಸ್ತ್ರಜ್ಞ ಲೋರಿಯಾ ಈ ಸ್ಥಿತಿಯನ್ನು ಒಂದು ಚಿಕ್ಕವಾಕ್ಯದಲ್ಲಿ ವರ್ಣಿಸಿದ್ದು ಹೀಗೆ ಕೆಲವರು ಕೆಲಸ ಮಾಡದೆ ಬದುಕುತ್ತಾರೆ ಮತ್ತು ಇತರರು ಬದುಕದೇ ಕೆಲಸಮಾಡುತ್ತಾರೆ.

**ಪೂರ್ಣ ಆರ್ಥಿಕ ಪ್ರಜಾಪ್ರಭುತ್ವ**

ಉತ್ಪಾದನೆಗೆ ಸ್ವಾತಂತ್ರ್ಯ ಅಂದರೆ ಅಲ್ಲಿ ನಿಮಗಾಗಿ ಒಂದು ಕೆಲಸವಿರಬೇಕು. ಕೆಲಸಮಾಡದೆ ನೀವು ಏನನ್ನೂ ಉತ್ಪಾದಿಸಲಾರಿರಿ. ಯಾವುದೇ ಕೆಲಸ ಲಭ್ಯವಿಲ್ಲವೆಂದರೆ ಬಳಕೆಯ ಸ್ವಾತಂತ್ರ್ಯವನ್ನು ಕುಂಠಿತಗೊಳಿಸಲಾಗದು. ಅಂದರೆ ಕೆಲಸಕ್ಕೆ ಬದಲಾಗಿ ರಾಜ್ಯ ಅಥವಾ ಇತರ ಸಾಮಾಜಿಕ ಸಂಸ್ಥೆಗಳು ಭತ್ಯೆ ನೀಡಬೇಕು. ಹೀಗೆ ಸಾಮಾಜಿಕ ಭದ್ರತೆಯ ಒತ್ತಾಯಪಡಿಸುವಂತೆ ಆರ್ಥಿಕ ಪ್ರಜಾಪ್ರಭುತ್ವ ಸಾಕಾರಗೊಳ್ಳಲು ಪೂರ್ಣಾವಧಿಯ ಉದ್ಯೋಗಗಳು ಲಭ್ಯವಿರುವ ಅಗತ್ಯವಿದೆ. ಈ ಎಲ್ಲ ಆರ್ಥಿಕ ಹಕ್ಕುಗಳು ಖಾತರಿಯಾಗುವುದು ಆರ್ಥಿಕ ವಿಕೇಂದ್ರೀಕರಣದಿಂದ ಮಾತ್ರ ಸಾಧ್ಯ.

ಪ್ರಜಾಪ್ರಭುತ್ವದ ತತ್ವವನ್ನು ಎತ್ತಿಹಿಡಿಯಲು ವಿಕೇಂದ್ರೀಕರಣ ಮಾತ್ರವಲ್ಲದೆ ಅಧಿಕಾರಿಗಳ ಪ್ರತ್ಯೇಕತೆಯ ಅಗತ್ಯವಿರುತ್ತದೆ. ಯಾವುದೇ ಆರ್ಥಿಕ, ರಾಜಕೀಯ, ಸಾಮಾಜಿಕ, ಮತ್ತು ಧಾರ್ಮಿಕ ಸಂಸ್ಥೆಗಳು ತಮ್ಮ ವ್ಯಾಪ್ತಿಮೀರಿದ ಅಧಿಕಾರವನ್ನು ಹೊಂದಿರಲಾಗದು. ಬೇರೆ, ಬೇರೆ ಕ್ಷೇತ್ರಗಳ ವ್ಯಕ್ತಿಗಳು ತಮ್ಮ ಕಾರ್ಯ ನಿರ್ವಹಿಸಲು ಪ್ರತ್ಯೇಕ ಸಂಸ್ಥೆಗಳಿರಬೇಕು. ಒಂದು ತರಹದ ವ್ಯಕ್ತಿಗಳು ಒಂದು ಕ್ಷೇತ್ರದ ಚಟುವಟಿಕೆಗಳ ಮೇಲೆ ನಿಯಂತ್ರಣ ಹೊಂದಿದ್ದರೆ ಅವರಿಗೆ ಇನ್ನೊಂದು ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡಲು ಅವಕಾಶವಿರಬಾರದು. ರಾಜಕೀಯ ಸಂಸ್ಥೆಯಾಗಿರುವ

ರಾಜ್ಯ ಆರ್ಥಿಕ ಜವಾಬ್ದಾರಿಯನ್ನು ಹೊರಬಾರದು. ಹಾಗೆಯೇ ರಾಷ್ಟ್ರದ ಆರ್ಥಿಕ ಹೊಣೆಯನ್ನು ನಿರ್ವಹಿಸುವ ಸಂಸ್ಥೆಗಳು ರಾಜಕೀಯ ಅಧಿಕಾರ ಹೊಂದಿರಬಾರದು. ಆಧ್ಯಾತ್ಮಿಕ ಗುರು ರಾಜಕೀಯ ಮುಖ್ಯಸ್ಥನಾಗಬಾರದು. ಖಿಲಾಫತ್ ಅಥವಾ ಪೋಪ್ ಅಧಿಕಾರತ್ವದ ತತ್ವ ಎಲ್ಲಾ ಕ್ಷೇತ್ರಗಳಲ್ಲೂ ಪ್ರಜಾಪ್ರಭುತ್ವದ ಸೂತ್ರಗಳಿಗೆ ಹೊಂದಾಣಿಕೆಯಾಗುವುದಿಲ್ಲ. ಎಲ್ಲ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಸಂಸ್ಥೆಗಳು ಏಕೀಭವಿಸುವುದು ವ್ಯಕ್ತಿಯಲ್ಲಿ. ಈ ರೀತಿ ಸಮಾಗಮವಾಗುವ ಕ್ಷೇತ್ರಗಳನ್ನು ಪರಸ್ಪರ ಸಂಘರ್ಷಕ್ಕೆಡೆ ಮಾಡದಂತೆ ನಿರ್ವಹಿಸಬೇಕಾದವನೂ ವ್ಯಕ್ತಿಯೇ.

ಕೈಗಾರಿಕಾ ಕ್ರಾಂತಿಯ ಅನಂತರ ಅಭಿವೃದ್ಧಿಗೊಂಡ ಬಂಡವಾಳಶಾಹಿ ಆರ್ಥಿಕ ಶಕ್ತಿಯಾಗಿ ಕೇಂದ್ರೀಕರಣಗೊಳ್ಳುವುದರಲ್ಲಿ ಪರಿಣಮಿಸಿತು. ಅದು ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ರಾಜಕೀಯ ಮತ್ತು ಇತರ ಸಂಸ್ಥೆಗಳ ಮೇಲೆ ಪ್ರಭಾವ ಬೀರತೊಡಗಿತು. ರಾಜಕೀಯ ಪ್ರಜಾಪ್ರಭುತ್ವ ಯಶಸ್ವಿಯಾಗಲು ಆರ್ಥಿಕ ಪ್ರಜಾಪ್ರಭುತ್ವ ಅತ್ಯಗತ್ಯ. ಆರ್ಥಿಕ ಪ್ರಜಾಪ್ರಭುತ್ವವಿಲ್ಲದ ರಾಜಕೀಯ ಪ್ರಜಾಪ್ರಭುತ್ವ ಜೀವನದ ಎಲ್ಲ ಕ್ಷೇತ್ರಗಳನ್ನು ಕಲುಷಿತಗೊಳಿಸಿ ನಿರ್ವೀರ್ಯಗೊಳಿಸುತ್ತದೆ. ಅದರ ಆದರ್ಶ ಆರ್ಥಿಕ ಮನುಷ್ಯ ಉತ್ಪಾದನೆಯ ಬಗ್ಗೆ ಒತ್ತಡವಿದೆ. ಅದರಲ್ಲೂ ಲಾಭದಾಯಕ ಉತ್ಪಾದನೆಯ ಬಗ್ಗೆ ಇನ್ನೂ ಹೆಚ್ಚು ಒತ್ತಡವಿದೆ. ಹಣ ಆರಾಧಿಸಲ್ಪಡುತ್ತಿದೆ ಹಾಗೂ ಅದು ಮಾತ್ರ ಏಕಮಾತ್ರ ಮೌಲ್ಯೀಕರಣ ಪ್ರಮಾಣವಾಗಿದೆ. ಇದರಿಂದಾಗಿ ಆರ್ಥಿಕ ಶಕ್ತಿ ಕೆಲವೇ ಜನರ ಕೈಯೊಳಗೆ ಸೇರುತ್ತದೆ. ಬೇರೆ ಮಾತಿನಲ್ಲಿ ಹೇಳಬೇಕೆಂದರೆ ಇಡೀ ಸಮಾಜ ಹಣದ ಗೀಳಿಗೆ ಒಳಗಾಗುತ್ತದೆ.

ಸಮಾನವಾದ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರದಲ್ಲಿ ಅಧಿಕ ಅಧಿಕಾರ ಕೇಂದ್ರೀಕೃತಗೊಂಡಿರುವುದರಿಂದ ಅದು ಪ್ರಜಾಪ್ರಭುತ್ವ ವಿರೋಧಿಯಾಗಿ ಪರಿಣಮಿಸುತ್ತದೆ. ಸಮಾಜವಾದಿ ಆಳ್ವಿಕೆಯಲ್ಲಿ ರಾಜ್ಯ ಒಂದು ಪೌರ ಅಥವಾ ರಾಜಕೀಯ ಸಂಸ್ಥೆಗಿಂತ ಮಿಗಿಲಲ್ಲ. ಜತೆಗೆ ಅದು ಒಂದು ಆರ್ಥಿಕ ಸಂಸ್ಥೆಯೂ ಹೌದು. ರಾಜ್ಯದ ಆರ್ಥಿಕ ಶಕ್ತಿ ಕೈಗಾರಿಕಾ ಸಾಮ್ರಾಜ್ಯಗಳ ಮತ್ತು ಕೈಗಾರಿಕೋದ್ಯಮಗಳು ಮತ್ತು ಹಣಕಾಸು ಪೋಷಕರ ನಿಯಂತ್ರಣದಲ್ಲಿರುವ ವ್ಯವಸ್ಥೆಗಿಂತ ದೊಡ್ಡದು. ಹೀಗೆ ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳು ಒಗ್ಗೂಡಿದ ಆಧುನಿಕ ರಾಜ್ಯದ ಶಕ್ತಿ ಅತಿದೊಡ್ಡದು. ಈ ಶಕ್ತಿ ಕೇಂದ್ರೀಕರಣದಿಂದ ಉಂಟಾಗುವ ವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಅಪಾಯ ಸಾವಿರ ಪಟ್ಟು ಹೆಚ್ಚಿನದಾಗುತ್ತದೆ. ಬೆಳೆಯುತ್ತಿರುವ ಈ ಅಪಾಯವನ್ನು ಗ್ರಹಿಸಿದ ಗಾಂಧೀಜಿಯವರು ಹೇಳಿದ್ದು ಗಮನಾರ್ಹವಾಗಿದೆ. ಅವರು ರಾಜ್ಯ ಹೆಚ್ಚಿಸಿಕೊಳ್ಳುತ್ತಿರುವ ಅಧಿಕಾರವನ್ನು ಗಮನಿಸಿದರೆ ಭಯವಾಗುತ್ತದೆ. ಕನಿಷ್ಟ ಶೋಷಣೆಯ ಮೂಲಕ ಅದು ಸ್ಪಷ್ಟವಾಗಿ

ಒಳ್ಳೆಯದನ್ನು ಮಾಡುತ್ತಿದೆ ಎಂದು ಕಂಡುಬಂದರೂ (ಸುಖೀ ರಾಜ್ಯದ ಹೆಸರಿನಲ್ಲಿ) ಎಲ್ಲ ಪ್ರಗತಿಗೂ ಬೇರು ಸತ್ವವಾದ ವ್ಯಕ್ತಿ ವಿಶಿಷ್ಟತೆಗೆ ಹಾನಿ ಮಾಡುವ ಮೂಲಕ ಮಾನವ ಕುಲಕ್ಕೆ ದೊಡ್ಡ ನಷ್ಟವನ್ನುಂಟು ಮಾಡುತ್ತದೆ. ವ್ಯಕ್ತಿಗೆ ಆತ್ಮವಿದೆ, ಆದರೆ ರಾಜ್ಯ ಆತ್ಮವಿಲ್ಲದ ಯಂತ್ರವೆ?

### ಕಮ್ಯುನಿಸಂ ಎಂಬ ಸ್ವಯಂ ಸೋಲಿನ ತತ್ವ

ರಾಜಕುಮಾರ ಕ್ರೊಪೊಟ್ಕಿನ್ನನು ೧೯೦೪ರಷ್ಟು ಹಿಂದೆಯೇ ಸಮಾಜವಾದದ ಅಪಾಯವನ್ನು ಮುಂಗಂಡಿದ್ದನು. ಅವನು ಬರೆಯುತ್ತಾ ಈ ಶತಮಾನದ ಪ್ರಮುಖ ಪ್ರವೃತ್ತಿಯಾದ ವಿಕೇಂದ್ರೀಕರಣ, ಸ್ವಯಮಾಡಳಿತ ಮತ್ತು ಮುಕ್ತ ಒಪ್ಪಂದದತ್ತ ಅವರು ಸಾಗುತ್ತಾರೋ ಅಥವಾ ಅದಕ್ಕೆ ವಿರುದ್ಧವಾಗಿ ವಿನಾಶಕಾರಿ ಅಧಿಕಾರ ಗಳಿಕೆಯಲ್ಲಿ ತೊಡಗುತ್ತಾರೊ? ಎಂದು ಕೇಳಿದ್ದ. ಅವನು ಮತ್ತೆ ೧೯೧೯ರಲ್ಲಿ ಪಶ್ಚಿಮ ಯೂರೋಪಿನ ಕಾರ್ಮಿಕರಿಗೆ ಪತ್ರ ಬರೆಯುತ್ತಾ ಅಭಿಪ್ರಾಯ ವ್ಯಕ್ತಪಡಿಸಿದ್ದು ಹೀಗೆ:

ನನ್ನ ದೃಷ್ಟಿಯಿಂದ ಕೇಂದ್ರೀಕೃತ ರಾಜ್ಯ ನಿರ್ಮಾಣದ ಮೂಲಕ ಕಮ್ಯುನಿಸ್ಟ್ ತತ್ವವನ್ನು ಜಾರಿಗೆ ತರುವುದು, ಅದನ್ನು ಪಕ್ಷದ ಸರ್ವಾಧಿಕಾರದ ಹೆಸರಿನಲ್ಲಿ ಉಕ್ಕಿನ ಕಾನೂನುಗಳ ಮೂಲಕ ಹೇರುವುದು, ಖಂಡಿತವಾಗಿಯೂ ವೈಫಲ್ಯದಲ್ಲಿ ಕೊನೆಗೊಳ್ಳುತ್ತದೆ ಎಂಬುದನ್ನು ನಾನು ನಿಮಗೆ ಪ್ರಮಾಣ ಮಾಡಿ ಹೇಳಬಲ್ಲೆ. ನಾವು ರಷ್ಯಾದಲ್ಲಿ ಕಮ್ಯುನಿಸಮನ್ನು ಹೇಗೆ ಜಾರಿಗೆ ತರಬಾರದೆಂಬುದನ್ನು ಕಲಿಯುತ್ತಿದ್ದೇವೆ. ದೇಶವು ಪಕ್ಷದ ಸರ್ವಾಧಿಕಾರ ಮೂಲಕ ಆಳಲ್ಪಟ್ಟಾಗ ಕಾರ್ಮಿಕರು ಮತ್ತು ರೈತರ ಮಂಡಳಿಗಳು ತಮ್ಮ ಇಡೀ ಪ್ರಾಮುಖ್ಯವನ್ನು ಕಳೆದುಕೊಳ್ಳುತ್ತವೆ. ಅದು (ಯು.ಎಸ್.ಎಸ್.ಆರ್.) ತನ್ನ ಅಧಿಕಾರಶಾಹಿಯನ್ನು ಬಹು ಪ್ರಮುಖವಾಗಿ ಬೆಳೆಸಿದೆ. ಫ್ರೆಂಚ್ ಅಧಿಕಾರಶಾಹಿಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿರುಗಾಳಿಯಿಂದ ಬಿದ್ದುಹೋದ ಒಂದು ಮರವನ್ನು ಮಾರಲು ನಲವತ್ತು ನೌಕರರ ಸಹಾಯ ಬೇಕಾಯಿತು. ಇನ್ನು ಇಲ್ಲಿನ ಹೋಲಿಕೆಯನ್ನು ನೋಡಬಹುದು. ರಾಜ್ಯದ ಬಂಡವಾಳಶಾಹಿ ನೀತಿ ಬಂಡವಾಳಶಾಹಿ ಸಮಾಜದ ರೋಗಗಳಿಗೆ ಮದ್ದಲ್ಲ. ಅದು ವ್ಯಕ್ತಿಗೆ ಕೊಡುವ ಆರ್ಥಿಕ ಭದ್ರತಾ ಭರವಸೆ. ಅವನಿಂದ ಎಲ್ಲ ಚಿಂತನೆ, ಕ್ರಿಯೆ ಮತ್ತು ಸಂಘಟನಾ ಸ್ವಾತಂತ್ರ್ಯಗಳನ್ನು ಕಿತ್ತುಕೊಳ್ಳುತ್ತದೆ.

ಈ ಎರಡೂ ಪದ್ಧತಿಗಳು ಯಾವುದೇ ಪರಿಹಾರವನ್ನು ಸೂಚಿಸುವುದಿಲ್ಲ. ಆದರೂ ಅವು ಮಾನವ ಕಲ್ಯಾಣ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಪ್ರತಿಪಾದಕರೆಂದು ಹೇಳಿಕೊಳ್ಳುತ್ತವೆ. ಅಂತಿಮವಾಗಿ ಅವು ವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಸತ್ತಾತ್ಮಕ

ಹಕ್ಕುಗಳನ್ನು ಗೌಣವಾಗಿಸುತ್ತವೆ. ನಾವು ಸದ್ಯಕ್ಕೆ ಪ್ರಜಾಪ್ರಭುತ್ವದ ಆದರ್ಶಗಳ ಸಂರಕ್ಷಣೆಗೆ ಬದ್ಧರಾಗಿದ್ದೇವೆ. ಅದನ್ನು ನಾವು ವಿಕೇಂದ್ರೀಕೃತ ಸಮಾಜ ರಚನೆ ಮತ್ತು ಅಧಿಕಾರಿಗಳ ಪ್ರತ್ಯೇಕತೆ ಮೂಲಕ ಸಾಧಿಸಬಹುದು ಎಂದು ಯಾವುದೇ ಹಿಂಜರಿಕೆ ಇಲ್ಲದೆ ಹೇಳಬಹುದು. ಆದ್ದರಿಂದ ಯೋಜನಾ ಗುರಿಗಳು ಈ ಮುಂದಿನಂತಿರಬೇಕು–

(೧) ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸುವುದು; (೨) ರಾಜಕೀಯ ಪ್ರಜಾಪ್ರಭುತ್ವವನ್ನು ಸಂರಕ್ಷಿಸುವುದು; (೩) ಎಲ್ಲ ನಾಗರಿಕರಿಗೂ ಕೆಲಸದ ಹಕ್ಕನ್ನು ಖಾತ್ರಿಗೊಳಿಸುವ ಮೂಲಕ ಹಾಗೂ ಕನಿಷ್ಟ ಮಟ್ಟದ ಬಳಕೆಯ ಅವಕಾಶವನ್ನು ಕಲ್ಪಿಸುವ ಮೂಲಕ ಆರ್ಥಿಕ ಪ್ರಭುತ್ವವನ್ನು ಸ್ಥಾಪಿಸುವುದು.

* * * * *

# ಭಾಷೆಯ ರಾಜಕಾರಣ

ಭಾಷೆ ಭಾರತದಲ್ಲಿ ರಾಜಕಾರಣಿಗಳ ಪ್ರಮುಖ ವಿಷಯವಾಗಿರುವಂತೆ ತೋರುತ್ತದೆ. ಪ್ರಧಾನಮಂತ್ರಿಗಳು ಅವಿರತವಾಗಿ ಪಠಿಸುತ್ತಿರುವ ಪಂಚಶೀಲದ ಸಕಾರಾತ್ಮಕ ತತ್ವಗಳಾಗಲಿ ಪಂಚವಾರ್ಷಿಕ ಯೋಜನೆಗಳ ಮೂಲಕ ಸಮೃದ್ಧಿ ತರುತ್ತೇವೆಂಬ ಭರವಸೆಯಾಗಲಿ ಭಾಷಾ ಉತ್ಸಾಹಿಗಳನ್ನು ಯಾದವೀಕಲಹದಲ್ಲಿ ತೊಡಗುವುದರಿಂದ ಹಿಂದೆ ಸರಿಯುವಂತೆ ಮಾಡುವಲ್ಲಿ ಸಫಲವಾಗಿಲ್ಲ. ಪತ್ರಿಕೆಗಳು ಮತ್ತು ವೇದಿಕೆಗಳ ಮೂಲಕ, ಮೆರವಣಿಗೆಗಳು ಮತ್ತು ಮೋರ್ಚಾಗಳ ಮೂಲಕ ಒಂದು ನಿರ್ದಿಷ್ಟ ದೃಷ್ಟಿಕೋನಕ್ಕೆ ಪರವಾಗಿ ಅಥವಾ ವಿರುದ್ಧವಾಗಿ ಪ್ರತಿಭಟನೆಗಳು ನಡೆಯುತ್ತಿರುತ್ತವೆ. ಅಷ್ಟಕ್ಕೇ ತೃಪ್ತರಾಗದೆ ಸತ್ಯಾಗ್ರಹಗಳನ್ನು ನಡೆಸಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ಎಳೆಯರಿಂದ ಎಂಬತ್ತು ವರ್ಷದವರೆಗಿನವರೂ ತಮ್ಮ ಭಾಷಾಹಿತಾಸಕ್ತಿಗಳಿಗಾಗಿ ಕಾನೂನು ಭಂಗ ಮಾಡಿದ್ದಾರೆ ಮತ್ತು ಬಂಧನಕ್ಕೊಳಗಾಗಿದ್ದಾರೆ. ಇದಕ್ಕಾಗಿ ದೇಶದ ರಾಜಕೀಯ ನಕಾಶೆಯನ್ನು ಪುನರ್‌ರೂಪಿಸಲಾಯಿತು. ಯೋಜನೆಗಳನ್ನು ಬದಲಾಯಿಸಲಾಯಿತು. ಜನತೆಯ ರಾಜಕೀಯ ನಿಷ್ಠೆಗಳು ಸಹ ಬದಲಾವಣೆಗೊಳಗಾದವು. ರಾಜಕೀಯ ನಾಯಕರುಗಳು ಒಂದಲ್ಲ ಒಂದು ಗುಂಪನ್ನು ಸೇರಿದ್ದರಿಂದ ಅವರ ಭವಿಷ್ಯ ನಶಿಸಿತು, ಇಲ್ಲವೇ ಪ್ರಕಾಶಿಸಿತು. ಎಲ್ಲಕ್ಕೂ ಮಿಗಿಲಾಗಿ ಭಾಷೆ ಕಳೆದ ಮಹಾಚುನಾವಣೆಯಲ್ಲಿ ಶಕ್ತಿಯುತವಾದ ಮತ್ತು ನಿರ್ಣಾಯಕ ಪಾತ್ರ ವಹಿಸಿತು. ಇದರ ಪರಿಣಾಮವಾಗಿ ಮತ್ತು ರಾಜ್ಯಗಳ ಪುನರ್‌ವಿಂಗಡನೆ ಮಸೂದೆಯ ಅಂಗೀಕಾರದಲ್ಲಿ ಅನುಸರಿಸಿದ ಕೆಲವು ಅಸಮರ್ಪಕ ವಿಧಾನಗಳ ಪರಿಣಾಮವಾಗಿ ಈ ವಿವಾದಾತ್ಮಕ ಮಸೂದೆ ಕೆಲವು ಭಾಗಗಳಲ್ಲಿ ಅಸಮಾಧಾನವನ್ನು ಹಾಗೆಯೇ ಉಳಿಸಿದೆ.

ರಾಜ್ಯಗಳ ಪುನರ್ವಿಂಗಡಣಾ ಚಳುವಳಿಗಳು ವಾಸ್ತವವಾಗಿ ಇಡೀ ದೇಶ ವ್ಯಾಪ್ತಿಯವಾದರೂ ಅವು ಕೆಲವು ನಿರ್ದಿಷ್ಟ ಪ್ರದೇಶಗಳಿಗೆ ಸೀಮಿತವಾದವು. ಆದರೆ ಕೇಂದ್ರಸರ್ಕಾರದ ಅಧಿಕೃತ ಭಾಷೆಗೆ ಸಂಬಂಧಿಸಿದಂತೆ ಎದ್ದ ಇತ್ತೀಚಿನ ವಿವಾದ

---

**ಮೂಲ ಆಕರ : ಆರ್ಗನೈಸರ್, ೧೭, ಮಾರ್ಚ್, ೧೯೫೮**

ಎಲ್ಲ ಜನತೆಯ ಹಿತಾಸಕ್ತಿಯ ವಿಷಯವಾಗಿತ್ತು. ದೇಶದ ದಕ್ಷಿಣ ಮತ್ತು ಪೂರ್ವ ಭಾಗಗಳ ಜನರು ಮಂಚೂಣಿಯಲ್ಲಿ ಕಂಡರೂ ಈ ಇಡೀ ಪ್ರಶ್ನೆ ದೇಶದ ಯಾವುದೇ ಒಂದು ಭಾಗದ ಪ್ರಶ್ನೆಯಾಗಿರಲಿಲ್ಲ. ಅದು ತಮಿಳುನಾಡು ಮತ್ತು ಉತ್ತರ ಪ್ರದೇಶ, ಬಿಹಾರ ಮತ್ತು ಬಂಗಾಳ, ಗುಜರಾತ್ ಮತ್ತು ರಾಜಸ್ತಾನ, ಪಂಜಾಬ್ ಮತ್ತು ಕಾಶ್ಮೀರ, ಆಂಧ್ರ ಮತ್ತು ಮಧ್ಯಪ್ರದೇಶ ಇವೆಲ್ಲವನ್ನೂ ಬಾಧಿಸಿದ್ದು ಎಲ್ಲ ರಾಜ್ಯಗಳೂ ಸಮಾನವಾಗಿ ಹಾಲಿ ಪದ್ಧತಿಯಲ್ಲಿ ತೊಂದರೆಗೊಳಗಾದವು. ಈ ಪದ್ಧತಿ ಬದಲಾದರೆ ಎಲ್ಲರೂ ಸಮಾನವಾಗಿ ಪ್ರಯೋಜನ ಪಡೆಯಬೇಕು.

ದೇಶದ ಅಧಿಕೃತ ಭಾಷೆ ಯಾವುದಿರಬೇಕೆಂಬುದನ್ನು ನಿರ್ಧರಿಸುವ ಮೊದಲು ನಾವು ಒಂದಾಗಿ ಬದುಕಲು ಇಚ್ಛಿಸಿದ್ದೇವೆಯೇ ಎಂದು ನಿಷ್ಕರ್ಷೆ ಮಾಡಿಕೊಳ್ಳಬೇಕು. ರಾಷ್ಟ್ರದ ಏಕತೆಯು ಎಂದೂ ಪ್ರಶ್ನಿಸುವಂತಹ ವಿಷಯವಲ್ಲ. ಅದನ್ನು ಸಾಬೀತುಪಡಿಸಲು ಅಥವಾ ಅಲ್ಲಗಳೆಯಲು ಯಾವುದೇ ವಾದಗಳನ್ನು ಮಾಡತಕ್ಕದ್ದಲ್ಲ. ರಾಷ್ಟ್ರೀಯ ಏಕತೆ ಉಪಾಧೇಯವಾದುದಲ್ಲ; ಒಪ್ಪಂದ ಬದ್ಧವಲ್ಲ, ಸಾಂಸ್ಥಿಕ ರೂಪದ್ದಲ್ಲ ಅಥವಾ ಸಾಂವಿಧಾನಿಕವಾದುದಲ್ಲ; ಅದು ವಾಸ್ತವಿಕ, ಸಹಜ ಮತ್ತು ಸ್ವಯಂಪ್ರೇರಿತವಾದುದು. ಈ ಆಧಾರದ ಮೇಲೆ ನಾವು ಒಟ್ಟಾಗಿ ಬದುಕುವುದನ್ನು ಮತ್ತು ಒಂದಾಗಿ ಸಾಗುವುದನ್ನು ಆಶಿಸುತ್ತೇವೆ. ನಾವು ಬೇರಾಗುವುದಿಲ್ಲ. ಬೇರಾಗಲು ಸಾಧ್ಯವಿಲ್ಲ. ನಾವು ಒಂದಾಗಿರುವುದರಿಂದ ನಮಗೆ ಒಂದೇ ಭಾಷೆ ಬೇಕು. ನಾವು ಭಾಷೆಯಿಂದಲೇ ಒಂದಾದವರಲ್ಲ ಅಥವಾ ನಾವು ಒಂದೇ ಭಾಷೆ ಹೊಂದಿರುವುದರಿಂದಲೂ ಒಂದಾಗಿಲ್ಲ. ಸ್ವಿಜರ್‌ಲೆಂಡ್‌ನಲ್ಲಿ ಬೇರೆ, ಬೇರೆ ಭಾಷೆಗಳಿದ್ದಾಗ್ಯೂ ಜನ ಒಂದಾಗಿ ಬದುಕಿದ್ದಾರೆ. ನಾವು ಯುಗ ಯುಗಗಳಿಂದಲೂ ಒಂದಾಗಿ ಬದುಕಿದ್ದೇವೆ. ನಮ್ಮಲ್ಲಿ ಯಾರೂ ವಿಭಜನೆಯ ಬಗ್ಗೆ ಮಾತನಾಡುವುದು ಬೇಡ. ಹಾಗೆ ಮಾತನಾಡುವವನು ಆ ಚರ್ಚೆಯಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. ನಾವು ಕೇವಲ ಭಾಷಾಪ್ರಶ್ನೆಯ ಬಗ್ಗೆ ಮಾತ್ರ ತೀರ್ಮಾನ ತೆಗೆದುಕೊಂಡರೆ ಸಾಲದು. ನಮ್ಮ ಅಸ್ತಿತ್ವದ ಹಾದಿಯಲ್ಲಿ ನೂರಾರು ವಿಷಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ನಾವು ಯಾವಾಗಲೂ ಒಡೆದುಹೋಗುವ ಭಯದಿಂದ ತೆಗೆದುಕೊಳ್ಳುವ ನಿರ್ಧಾರಗಳು ಸರಿಯಾದ ನಿರ್ಧಾರಗಳಾಗಿರುವುದಿಲ್ಲ.

ಅದು ಯಾವಾಗಲೂ ರಾಷ್ಟ್ರೀಯ ಹಿತಾಸಕ್ತಿಯೊಂದಿಗೆ ಹೊಂದಿಕೊಳ್ಳದವರೊಂದಿಗೆ ಮಾಡಿಕೊಳ್ಳುವ ರಾಜಿಯಾಗಿರುತ್ತದೆ. ರಾಷ್ಟ್ರಗಳ, ಸಂಸ್ಥೆಗಳ ಮತ್ತು ಕುಟುಂಬಗಳ ಇತಿಹಾಸವನ್ನು ಗಮನಿಸಿದರೆ ಏಕತೆಯ ಮೂಲಭೂತ ವಿಷಯಗಳ ಬಗ್ಗೆ ಮೊಂಡು ಹಠಮಾಡುವ ಗುಂಪುಗಳಿಗೆ ರಿಯಾಯಿತಿಯನ್ನು ಕೊಡುವುದರಿಂದ ಅದು ಸದಾ ವಿಭಜನೆಗೆ ದಾರಿಮಾಡಿಕೊಟ್ಟಿರುವ ಸಾಕಷ್ಟು ದೃಷ್ಟಾಂತಗಳು

ಕಂಡುಬರುತ್ತವೆ. ಮೂಲಭೂತ ಅಂಶಗಳ ಬಗ್ಗೆ ರಾಜಿ ಇರಕೂಡದು. ಅಂತಹ ಜನತೆಗೆ ನೀಡುವ ರಿಯಾಯಿತಿಗಳು ರಾಜಿಯಾಗದೆ ಓಲೈಕೆಯದಾಗುತ್ತವೆ. ಪ್ರತ್ಯೇಕವಾಗಿರಬೇಕೆನ್ನುವವರನ್ನು ಓಲೈಕೆಯಿಂದ ಗೆಲ್ಲಲಾಗುವುದಿಲ್ಲ. ಈ ವಿಷಯದಲ್ಲಿ ದೌರ್ಬಲ್ಯ ತೋರಿಸುವುದು ಬೇಡ. ದೌರ್ಬಲ್ಯ ವಿಂಗಡನಾ ಪ್ರವೃತ್ತಿಗಳಿಗೆ ಉತ್ತೇಜನ ನೀಡುತ್ತದೆ. ಒಡೆದುಹೋಗುವುದು ದೌರ್ಬಲ್ಯದ ಪರಿಣಾಮ. ನೀವು ದೃಢವಾದ ನಿರ್ಣಯ ಮತ್ತು ನಿರ್ಧಾರಕ ಕ್ರಮ ಕೈಗೊಳ್ಳದಿದ್ದರೆ ನೀವು ಒಂದಾಗಿ ಉಳಿಯಲಾರಿರಿ.

ಅಧಿಕೃತ ಉದ್ದೇಶಕ್ಕಾಗಿ ಬಳಸಲು ಒಂದು ನಿರ್ದಿಷ್ಟ ಭಾಷೆಯನ್ನು ಆಯ್ದುಕೊಳ್ಳುವ ಅಪೇಕ್ಷೆಯನ್ನು ಭಾವನಾತೀತವಾದ ರೀತಿಯಲ್ಲಿ ಅಂಗೀಕರಿಸಲಾಗುವುದಿಲ್ಲ. ಒಂದು ಭಾಷೆಗೆ ಬಲವಾದ ಭಾವನಾತ್ಮಕ ಬದ್ಧತೆ ಇರುತ್ತದೆ. ಅದು ಹಾಗಿಲ್ಲದಿದ್ದರೆ ಐರ್ಲೆಂಡ್ ಸ್ವತಂತ್ರವಾಗುತ್ತಿರಲಿಲ್ಲ; ಕಮಾಲ್‌ಪಾಷ ತನ್ನ ಹೆಸರನ್ನು ಕಮಾಲ್ ಅಟಾಟರ್ಕ್ ಎಂದು ಬದಲಾಯಿಸಿಕೊಳ್ಳುತ್ತಿರಲಿಲ್ಲ; ಆಧುನಿಕ ಇರಾನಿನ ನಿರ್ಮಾತೃವಾದ ರಾಜ್ಸಾಷಾನು 'ಪೆಲ್ಲವಿ' ಎಂಬ ಅಂಕಿತನಾಮವನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಭಾಷೆ ಕೇವಲ ಅಭಿವ್ಯಕ್ತಿಸಾಧನ ಮಾತ್ರವಲ್ಲ; ಅದು ನಮ್ಮ ಚಿಂತನಾ ರೀತಿಯನ್ನು ರೂಪಿಸುತ್ತದೆ. ಭಾಷೆ ಒಂದು ರಾಷ್ಟ್ರದ ವಿಕಾಸದೊಂದಿಗೆ ಬೆಳೆಯುತ್ತದೆ; ಹಾಗೆ ಸಾಗುತ್ತಾ ಆ ಜನತೆಯನ್ನು ಒಂದು ನಿರ್ದಿಷ್ಟ ರೂಪಕ್ಕೆ ತರುತ್ತದೆ. ಭಾಷೆಯನ್ನು ನಿರ್ಜೀವವಾದ ಪದಗಳ ಒಂದು ಸಂಯೋಜನೆ ಎಂದು ಭಾವಿಸುವವರು ಅದರ ಮಹತ್ವವನ್ನು ಕಡೆಗಣಿಸಿರುತ್ತಾರೆ. ಈ ಕಾರಣಕ್ಕಾಗಿಯೇ ಯಾವುದೇ ರಾಷ್ಟ್ರವೂ ವಿದೇಶಿ ಭಾಷಾ ಮಾಧ್ಯಮದ ಮೂಲಕ ತನ್ನ ಅಂತರ್‌ಸ್ವರೂಪವನ್ನು ವಿಕಸಿಸಿಕೊಳ್ಳಲಾರದು.

ಜನರ ಸ್ವಾತಂತ್ರ್ಯ ಅನೇಕ ವಿಧಗಳಲ್ಲಿ ಸಾಂಕೇತಿಕೃತವಾಗಿರುತ್ತದೆ. ಪ್ರತಿಯೊಂದು ಸ್ವತಂತ್ರ ರಾಷ್ಟ್ರವೂ ತನ್ನದೇ ಆದ ಧ್ವಜ ಹೊಂದಿದೆ. ಯಾರೂ ಅದನ್ನು ಪ್ರಯೋಜನದ ದೃಷ್ಟಿಯಿಂದ ನೋಡುವುದಿಲ್ಲ. ತಯಾರಿಸಲು ಅಗ್ಗ ಹಾಗೂ ಹೆಚ್ಚು ಉಪಯುಕ್ತ ಎಂಬ ಕಾರಣಕ್ಕೆ ನಾವು ಯೂನಿಯನ್ ಜಾಕ್ (ಬ್ರಿಟಿಷ್ ಧ್ವಜ)ನ್ನು ಕೆಳಗಿಳಿಸಿ ತ್ರಿವರ್ಣ ಧ್ವಜ ಅಳವಡಿಸಿಕೊಂಡಿಲ್ಲ. ಹೊಸ ಸ್ವತಂತ್ರ ರಾಜ್ಯ ಹುಟ್ಟಿರುವುದನ್ನು ತೋರಿಸುವುದೇ ಅದನ್ನು ಅಳವಡಿಸಿಕೊಂಡ ಉದ್ದೇಶ. ಈ ಉದ್ದೇಶಕ್ಕಾಗಿಯೇ ನಾವು ರಾಷ್ಟ್ರೀಯ ಭಾಷೆಯೊಂದನ್ನು ಅಳವಡಿಸಿಕೊಳ್ಳಬೇಕು. ರಾಷ್ಟ್ರಗಳು ಪ್ರತ್ಯೇಕ ಅಸ್ತಿತ್ವ ಹೊಂದಿರುವವರೆಗೂ ಅವುಗಳ ಸ್ವತಂತ್ರ ಅಸ್ತಿತ್ವವನ್ನು ತೋರಿಸುವ ಎಲ್ಲ ಅಗತ್ಯ ಸಂಕೇತಗಳನ್ನು ಅವು ಹೊಂದಿರಬೇಕು.

ಇಂಗ್ಲಿಷ್ ಇದ್ದರೆ ಹೊರ ಪ್ರಪಂಚವನ್ನು ನಾವು ಸುಲಭವಾಗಿ ಅರ್ಥಮಾಡಿಕೊಳ್ಳಬಹುದೆಂಬ ಕಾರಣಕ್ಕಾಗಿ ಅದನ್ನು ಅಪೇಕ್ಷಿಸುತ್ತಾರೆ. ಆದರೆ

ನಾವು ಪ್ರಪಂಚವನ್ನು ಅರ್ಥಮಾಡಿಕೊಳ್ಳುವ ಮೊದಲು ನಮ್ಮ ಜನರನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ನಾವು ಪ್ರಪಂಚವನ್ನು ಅರ್ಥಮಾಡಿಕೊಳ್ಳುವ ಭರದಲ್ಲಿ ನಮ್ಮ ಬೇರುಗಳಿಂದ ಬೇರೆಯಾದರೆ ನಾವು ಬೇರಿಲ್ಲದವರಾಗುವುದು ಮಾತ್ರವಲ್ಲದೆ ಬೇಗ ತಲೆ ಇಲ್ಲದವರೂ ಆಗುತ್ತೇವೆ.

ಒಮ್ಮೆ ವಿದೇಶಿ ಭಾಷೆಯನ್ನು ಕೈಬಿಡಬೇಕು ಎಂಬ ವಿಷಯ ಅಂಗೀಕೃತವಾದರೆ ನಮ್ಮ ಮುಂದಿರುವ ವಿಷಯವೆಂದರೆ ನಮ್ಮ ದೇಶಕ್ಕೆ ಭಾಷಾಮಾದರಿಯನ್ನು ಆಯ್ದುಕೊಳ್ಳುವುದು.

ಭಾರತ ಅಭಿವೃದ್ಧಿ ಹೊಂದಿರುವ ಮತ್ತು ಹೊಂದುತ್ತಿರುವ ಅನೇಕ ಭಾಷೆಗಳನ್ನು ಹೊಂದಿದೆ. ಈ ಭಾಷೆಗಳಲ್ಲಿ ಅದೃಷ್ಟವಶಾತ್ ಕೆಲವೊಂದು ಸ್ಥೂಲ ವ್ಯತ್ಯಾಸಗಳನ್ನು ಬಿಟ್ಟರೆ ಅಂತರ್ಗತ ಏಕತೆ ಇದೆ. ಅವುಗಳ ಸಾಹಿತ್ಯ ರಾಷ್ಟ್ರೀಯ ಜೀವನವನ್ನು ಪ್ರತಿಬಿಂಬಿಸುತ್ತದೆ. ಅವುಗಳಿಂದ ಸಾಮಾನ್ಯ ಸಾಂಸ್ಕೃತಿಕ ಮೌಲ್ಯಗಳು ಸ್ಥಾಪಿತವಾಗಿದೆ. ಮೂಲಭೂತ ಏಕತೆಯನ್ನು ಹೊಂದಿರುವ ನಮಗೆ ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳುವುದು ಕಷ್ಟವಲ್ಲ.

ಅಂತಹ ಪರಿಹಾರ ನಿಧಿಬದ್ಧವಾಗಿದ್ದು ಎಲ್ಲ ಜನರ ಆಶೋತ್ತರಗಳನ್ನು ಈಡೇರಿಸುವ ಮತ್ತು ನಮ್ಮ ಎಲ್ಲ ಭಾಷೆಗಳ ಅಭಿವೃದ್ಧಿಯನ್ನು ಸಾಧಿಸುವುದಾಗಿರಬಲ್ಲದು. ಯಥಾಸ್ಥಿತಿಯನ್ನು ಕಾಯ್ದುಕೊಳ್ಳಬೇಕೆಂಬ ಭಾವನೆ ಸೋಲೊಪ್ಪಿಕೊಂಡಂತೆ. ಈ ಸೋಲಿನ ಭಾವನೆಯನ್ನು ಕಳಚಿ ಸವಾಲನ್ನು ಎದುರಿಸೋಣ. ನಮ್ಮಲ್ಲಿ ಇಚ್ಛಾಶಕ್ತಿ ಇದ್ದರೆ ನಾವು ಅದಕ್ಕೆ ಪರಿಹಾರ ಕಂಡು ಕೊಳ್ಳಬಹುದು, ಹಾಗೂ ನಮ್ಮ ರಾಷ್ಟ್ರೀಯ ಅಸ್ತಿತ್ವದ ಮೂಲಭೂತ ಅಂಶವನ್ನು ಸಂರಕ್ಷಿಸಿಕೊಳ್ಳಬಹುದು.

* * * * *

# ಉರ್ದುವಿನ ರಾಜಕೀಯ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಉರ್ದು ಬಗ್ಗೆ ಅವು ಹೊಂದಿರಬೇಕಾದ ಕಾರ್ಯನೀತಿ ಕುರಿತು ಕಳುಹಿಸಿರುವ ನಿರ್ದೇಶನ ರಾಷ್ಟ್ರೀಯ ಏಕತೆಗೆ ತೀರ ಆಪತ್ಕಾರಿಯಾಗಿದೆ. ಕಾರ್ಯಕಾರಿ ಸಮಿತಿಯು ಉರ್ದುವನ್ನು ಪ್ರಾದೇಶಿಕ ಭಾಷೆ ಎಂದು ಪರಿಗಣಿಸಬೇಕೆಂದು ತಾಕೀತುಮಾಡಿದೆ. ಅದಕ್ಕಾಗಿ ಉರ್ದುವಿನ ಮೂಲಕ ಎಲ್ಲ ಹಂತಗಳಲ್ಲೂ ಶಿಕ್ಷಣ ಕೊಡಲು ಏರ್ಪಾಡಾಗಬೇಕು, ಎಲ್ಲ ನ್ಯಾಯಾಲಯಗಳು ಮತ್ತು ಕಚೇರಿಗಳಲ್ಲಿ ಉರ್ದು ದಾಖಲೆಗಳನ್ನು ಅಂಗೀಕರಿಸಬೇಕು, ಕಾನೂನು ನಿಯಮಗಳನ್ನು, ನಿಬಂಧನೆಗಳನ್ನು ಮತ್ತು ಅಧಿಸೂಚನೆಗಳನ್ನು ಉರ್ದುವಿನಲ್ಲಿ ಹೊರಡಿಸಬೇಕು ಹಾಗೂ ಈ ಭಾಷೆಯ ಅಭಿವೃದ್ಧಿಗೆ ಎಲ್ಲ ಬಗೆಯ ಉತ್ತೇಜನ ನೀಡಬೇಕು ಎಂದು ಆದೇಶಿಸಲಾಗಿದೆ. ಕಾಂಗ್ರೆಸ್ ಸಮಿತಿಯ ಸಮರ್ಥನೆ ಎಂದರೆ ಉರ್ದುವನ್ನು ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ರಾಷ್ಟ್ರಭಾಷೆಗಳಲ್ಲಿ ಒಂದೆಂದು ಮಾನ್ಯತೆ ನೀಡಿರುವುದು ಹಾಗೂ ಅದು ದೊಡ್ಡ ಸಂಖ್ಯೆಯ ಜನರ ಮಾತೃಭಾಷೆಯಾಗಿರುವುದು.

ಕಾರ್ಯಕಾರಿ ಸಮಿತಿ ಈ ನಿರ್ಣಯದ ಜಾರಿಗಾಗಿ ನಿರ್ದೇಶನ ನೀಡಿರುವುದರ ಜೊತೆಗೆ ರಾಷ್ಟ್ರೀಯ ಏಕತೆಯ ಬಗ್ಗೆ ಒಂದು ನಿರ್ಣಯವನ್ನು ಅಂಗೀಕರಿಸಿದೆ. ಈ ಎರಡೂ ನಿರ್ಣಯಗಳಲ್ಲೂ ಸಮಿತಿಯು ಅಲ್ಪಸಂಖ್ಯಾತರ ಬಗ್ಗೆ ಕಳಕಳಿ ತೋರಿಸಿರುವುದಲ್ಲದೆ ಅವರ ಹಿತಾಸಕ್ತಿಯನ್ನು ಪೋಷಿಸಲು ಬದ್ಧವಾಗಿದೆ. ಎ.ಐ.ಸಿ.ಸಿ. ಅಧಿವೇಶನದಲ್ಲಿ ನೆಹರೂ ಅವರು ಮಾಡಿದ ಭಾಷಣವನ್ನು ಗ್ರಹಿಸಿದಾಗ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮುಸ್ಲಿಂ ಕೋಮುವಾದಿಗಳನ್ನು ಸಂತೃಪ್ತಿಪಡಿಸಲು ಗೆರೆದಾಟಿ ಹೋಗಿರುವುದು ವ್ಯಕ್ತಪಡುತ್ತದೆ. ಕಾಂಗ್ರೆಸ್ ಪಕ್ಷವು ಉತ್ತರ ಪ್ರದೇಶದಲ್ಲಿ ಕೆಲವು ಮುಖ್ಯ ಸ್ಥಾನಗಳನ್ನು ಕಳೆದುಕೊಂಡಿರುವುದರಿಂದ ಪಕ್ಷದ ಹಿತಾಸಕ್ತಿಗಾಗಿ ಅಂತಹ ಕಾರ್ಯನೀತಿಯನ್ನು ಅಳವಡಿಸಿಕೊಳ್ಳುವುದು ಅದಕ್ಕೆ ಅಗತ್ಯವೆನಿಸಿರಬಹುದು. ಕಾಂಗ್ರೆಸ್ ಹೀಗೆ ಸ್ಥಾನಗಳನ್ನು ಕಳೆದುಕೊಳ್ಳಬೇಕಾಗಿ ಬಂದುದಕ್ಕೆ ಉತ್ತರಪ್ರದೇಶದಲ್ಲಿ ಮುಸ್ಲಿಂಲೀಗ್‌ನ ಪ್ರಭಾವಕ್ಕೊಳಗಾಗಿರುವ ಮುಸ್ಲಿಮರು

---

**ಮೂಲ ಆಕರ : ಆರ್ಗನೈಸರ್, ೨೬, ಮೇ, ೧೯೫೮**

ಕಾಂಗ್ರೆಸ್ಸನ್ನು ಸೋಲಿಸುವ ಉದ್ದೇಶದಿಂದ ಪ್ರಜಾಸಮಾಜವಾದಿ ಪಕ್ಷ, ಪ್ರಗತಿಪರ ಜನತಾ ಪಕ್ಷ ಮತ್ತು ಕಮ್ಯುನಿಸ್ಟರನ್ನು ಬೆಂಬಲಿಸಿದ್ದು ಕಾರಣವಾಯಿತು. ಈ ಮುಸ್ಲಿಮರು ಮುಸ್ಲಿಮ್ ಜಮಾಯತ್ ನಾಯಕರುಗಳು ಮತ್ತು ಬುಕ್ ಚಳವಳಿಗೆ ಕಾರಣರಾದವರ ಪ್ರಭಾವಕ್ಕೊಳಗಾದರು. ಉತ್ತರ ಪ್ರದೇಶ ಸರ್ಕಾರ ಅವರ ಬೆಂಬಲವನ್ನು ಕಳೆದುಕೊಂಡಿದ್ದರೂ ಮತ್ತು ಕೆಲವು ಸ್ಥಾನಗಳ ನಷ್ಟದ ಅನುಭವವಿದ್ದರೂ ಅದು ಸರಿಯಾದ ಭಾಷಾ ನೀತಿಯನ್ನೇ ಅನುಸರಿಸುತ್ತದೆ. ಆದರೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತತ್ವಗಳಿಗಿಂತ ಹೆಚ್ಚಾಗಿ ರಾಜಕೀಯ ಅವಕಾಶವಾದಕ್ಕೆ ಹೆಚ್ಚು ಮಣೆಹಾಕಿದಂತೆ ಕಂಡುಬರುತ್ತದೆ.

ಉರ್ದು, ಸಂವಿಧಾನದಲ್ಲಿ ಮಾನ್ಯತೆ ಪಡೆದಿದ್ದರೂ ಅದು ಭಾರತದಲ್ಲಿ ಹುಟ್ಟಿದ್ದರೂ ಅದು ಇನ್ನೂ ಮುಸ್ಲಿಂ ಪ್ರತ್ಯೇಕತೆಯ ಸಾಧನವಾಗಿ ಉಳಿದಿದೆ. ಅದು ಚೀನೀಯರಿಗೆ ಪಿಡ್ಗಿನ್ ಇಂಗ್ಲಿಷ್ ಇದ್ದಹಾಗೆ ಮಾತ್ರ ಭಾರತೀಯವಾಗಿದೆ. ಅದರ ವಾಕ್ಸರಣಿ, ಬಹುಮಟ್ಟಿನ ವ್ಯಾಕರಣ, ಛಂದೋಬಂಧ ಎಲ್ಲ ವಿದೇಶೀಯವೇ. ಅದಕ್ಕೆ ತಳಹಂತದಲ್ಲಿ ಬುನಾದಿಯಿಲ್ಲ; ಆದ್ದರಿಂದ ಉರ್ದು ಮಾತನಾಡುತ್ತೇವೆಂದು ಹೇಳಿಕೊಳ್ಳುವವರಿಗೆ ಭಾರತದಲ್ಲಿ ಬೇರುಗಳಿಲ್ಲ. ಈ ಕಾರಣಕ್ಕಾಗಿ ಮುಸ್ಲಿಂ ಲೀಗ್ ಪ್ರತಿಪಾದಿಸುವಂತೆ, ಅದು ಪ್ರತ್ಯೇಕ ಮುಸ್ಲಿಂ ರಾಷ್ಟ್ರೀಯತೆಯ ಸಂಕೇತವಾಗಿದೆ. ಕೆಲವು ಮುಸ್ಲಿಮರು ಉರ್ದುವಿಗೆ ಅಂಟಿಕೊಂಡಿದ್ದೇವೆಂದು ಹೇಳಿದರೆ ಅವರು ತಮ್ಮ ಹಳೆಯ ಕೋಮುವಾದಿ ದೃಷ್ಟಿಕೋನವನ್ನು ಬಿಟ್ಟಿಲ್ಲವೆಂದೇ ಅರ್ಥ.

ಕಾರ್ಯಕಾರಿ ಸಮಿತಿಯ ನಿರ್ದೇಶನದ ಹಿಂಬಾಗಿಲಿನಿಂದ ಉರ್ದುವನ್ನು ಅಖಿಲಭಾರತ ಭಾಷೆಯನ್ನಾಗಿ ಮಾಡುವ ಹುನ್ನಾರಕ್ಕೆ ಇಂಬುಕೊಡುವಂತಿದೆ. ಇದು ಸಂವಿಧಾನವನ್ನು ಮೀರುವ ಪ್ರಯತ್ನವೂ ಆಗಿದೆ. ಭಾಷಿಕ ವಿಷಯಗಳು ಈ ಸಮಸ್ಯೆಯಿಂದ ಕೂಡಿರುವಾಗ ಕಾಂಗ್ರೆಸ್ ಕದಡಿದ ನೀರಿನಲ್ಲಿ ಮೀನು ಹಿಡಿಯಲು ಪ್ರಯತ್ನಿಸುತ್ತಿದೆ.

ಎ.ಐ.ಸಿ.ಸಿ. ಕೆಲವೇ ದಿವಸಗಳ ಹಿಂದೆ ಸಭೆ ಸೇರಿತ್ತು. ಆ ಅಖಿಲ ಭಾರತ ಮಟ್ಟದ ಅಧಿವೇಶನದಲ್ಲಿ ಈ ನಿರ್ಣಯವನ್ನು ಮಂಡಿಸದೆ ಕಾರ್ಯಕಾರಿ ಸಮಿತಿಯ ಮುಂದೆ ಮಂಡಿಸುತ್ತಿರುವುದು ಕಾಂಗ್ರೆಸ್ ಒಳದಾರಿ ಹಿಡಿದಿರುವುದಕ್ಕೆ ಸಾಕ್ಷಿಯಾಗಿದೆ. ಕಾಂಗ್ರೆಸ್‌ನ ನಾಯಕರು ಈ ಮೂಲಕ ಇನ್ನೊಂದು ವಿಭಜನೆಗೆ ನಾಂದಿಹಾಡಲು ಹೊರಟಿದ್ದರು. ೧೯೪೭ರಲ್ಲಿ ಕಾಂಗ್ರೆಸ್‌ನ ಹೈಕಮ್ಯಾಂಡ್‌ನ ಆಣತಿಗೆ ಮೌನವಾಗಿ ವಿಭಜನೆಯನ್ನು ಒಪ್ಪಿಕೊಂಡಿದ್ದವರು ಕಾಂಗ್ರೆಸಿಗರು; ರಾಜಕೀಯ ಅನುಕೂಲಕ್ಕಾಗಿ ತತ್ವಗಳನ್ನು ಬಲಿಕೊಟ್ಟವರನ್ನು ರಾಷ್ಟ್ರೀಯವಾದಿಗಳು ಸಹಿಸಲಾರರು, ಏಕತೆ ಮತ್ತು ರಾಷ್ಟ್ರೀಯತೆಯ ಶಕ್ತಿಗಳು ಯಾವಾಗಲೂ ಪ್ರಬಲವಾಗಿವೆ. ಕಾಂಗ್ರೆಸ್ ಬ್ರಿಟಿಷ್

ಸರ್ಕಾರದ ತಂತ್ರಗಾರಿಕೆಯನ್ನು ಭಾರತದಲ್ಲಿ ಪುನರಾವರ್ತಿಸುತ್ತಿದೆ. ಇದಕ್ಕೂ ಅದೇ ಗತಿಯಾಗಲಿದೆ.

ಮೂಲಭೂತವಾಗಿ ಹಿಂದಿ ಮತ್ತು ಉರ್ದುಗಳಿಗೆ ಯಾವುದೇ ವ್ಯತ್ಯಾಸವಿಲ್ಲ: ಹಿಂದಿಗೆ ಪಾರ್ಸಿ ಮತ್ತು ಅರಬ್ಬಿಯ ಪದಗಳನ್ನು ಸೇರಿಸಿದರೆ ಅದು ಉರ್ದುವಾಗುತ್ತದೆ. ಉರ್ದುವಿನ ಇತಿಹಾಸವನ್ನು ನೋಡಿದರೆ ಇದನ್ನು ಉದ್ದೇಶಪೂರ್ವಕವಾಗಿ ಮಾಡಿರುವುದು ತಿಳಿದುಬರುತ್ತದೆ. ಉರ್ದುವು ಪಾರ್ಸಿ ಮತ್ತು ಅರಬ್ಬಿ ಪದಗಳನ್ನು ವಿರುದ್ಧ್ವನಿಯಲ್ಲಿ ಉಚ್ಚರಿಸುವ ಕೆಲವರಿಂದ ಹುಟ್ಟಿಕೊಂಡಿತು. ಸರ್ ಜಾರ್ಜ್ ಗ್ರಿರ್‌ಸನ್ನನ್ನು (Grierson) ಹೇಳಿರುವುದು ಗಮನಾರ್ಹ–

ಬಂಗಾಳ ಮತ್ತು ಪಂಜಾಬಿನ ನಡುವೆ ಗಂಗಾ ನದಿಯ ಬಯಲಿನುದ್ದಕ್ಕೂ ಒಂದೇ ಒಂದು ಭಾಷೆ ಬಳಕೆಯಲ್ಲಿದೆ, ಅದೇ ಹಿಂದಿ. ಅದಕ್ಕೆ ಅನೇಕ ಸ್ಥಳೀಯ ಆಡುಭಾಷೆಗಳಿವೆ.

ದೆಹಲಿ ಮತ್ತು ಲಕ್ನೋಗಳಲ್ಲಿ ಶ್ರೀಮಂತವರ್ಗದ ಮುಸ್ಲಿಂರನ್ನು ಆಯ್ದ ಒಂದು ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಗೆ ಪಾರ್ಸಿ ಮತ್ತು ಅರಬ್ಬಿ ಪದಗಳ ಒಂದು ಪಟ್ಟಿ ಸಿದ್ಧಪಡಿಸುವ ಕೆಲಸ ವಹಿಸಲಾಗಿತ್ತು. ಹಾಗೆ ಸಿದ್ಧಪಡಿಸಿದ ಶಬ್ದಕೋಶದ ಪಟ್ಟಿಯನ್ನು ವಿವಿಧ ಮುಸ್ಲಿಂ ಸಂಸ್ಥೆಗಳಿಗೆ ರವಾನಿಸಿ ಇಲ್ಲಿರುವ ಪದಗಳನ್ನು ಹಿಂದಿ ಪದಗಳಿಗೆ ಬದಲಾಗಿ ಬಳಸಲು ಮನವಿ ಮಾಡಿಕೊಳ್ಳಲಾಯಿತು. ಲಕ್ನೋದ ಪ್ರಸಿದ್ಧಕವಿ ನಾಸಿಖ್ ಲಕ್ನೋದ ಬೀದಿಗಳನ್ನು ಇನ್‌ಸಹಾನ್ ಪರಿವರ್ತಿಸಿದುದಾಗಿ ಹೇಳಿಕೊಂಡಿದ್ದಾನೆ. ರಾಷ್ಟ್ರೀಯವಾದಿ ಪಂಜಾಬ್ ಉರ್ದುವನ್ನು ಬಿಟ್ಟು ಪಂಜಾಬಿ ಮತ್ತು ಹಿಂದಿಯನ್ನು ಬಳಸಬಹುದಾದರೆ ಯು.ಪಿ. ಬಿಹಾರ್ ಮತ್ತು ದೆಹಲಿ ಮತ್ತು ಆಂಧ್ರಗಳಲ್ಲಿ ಎಲ್ಲಾ ರಾಷ್ಟ್ರೀಯವಾದಿಗಳು ಉರ್ದುವನ್ನು ಬಿಟ್ಟು ಹಿಂದಿ ಅಥವಾ ತೆಲುಗನ್ನು ಏಕೆ ಆಯ್ದುಕೊಳ್ಳಬಾರದು? ರಾಷ್ಟ್ರೀಯತೆ ಅದನ್ನು ಬೇಡುತ್ತದೆ.

ಆದರೆ ಮುಸ್ಲಿಮರಲ್ಲಿ ರಾಷ್ಟ್ರೀಯತೆ ಉದಯವಾಗುವುದು ಅವರು ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಾಗ. ಈ ಸಮಸ್ಯೆಯನ್ನು ರಾಜಕೀಯ ದೃಷ್ಟಿಯಿಂದ ಮಾತ್ರ ನೋಡಿ ಅವರವರ ವ್ಯಕ್ತಿಗತ ಒಲವಿನಂತೆ ಅವರು ಬೇರೆ ಬೇರೆ ರಾಜಕೀಯ ಪಕ್ಷಗಳಿಗೆ ಸೇರಿಕೊಳ್ಳುವುದಕ್ಕೆ ಅವಕಾಶವಾದರೆ ಇದು ಕಾಂಗ್ರೆಸ್‌ಗೆ ಅನಾನುಕೂಲವಾಗಬಹುದು. ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ಕ್ಷೇತ್ರದಲ್ಲಿ ಮೊದಲು ಮುಸ್ಲಿಮರ ಮತಗಳನ್ನು ಲೆಕ್ಕಹಾಕತೊಡಗುತ್ತಾರೆ. ಮುಸ್ಲಿಮರು ತಮ್ಮ ಮನೋಭಾವವನ್ನು ರಾಷ್ಟ್ರೀಕರಿಸಿದರೆಂದರೆ ಕಾಂಗ್ರೆಸ್ ಹೀಗೆ ಯೋಚಿಸಲು ಸಾಧ್ಯವಿಲ್ಲ. ಈ ಕಾರಣಕ್ಕಾಗಿಯೇ ಶ್ರೀ ಮೊರಾರ್ಜಿ ದೇಸಾಯಿ ಅವರು ಪುನಶ್ಚೇತನವಾದದ ಬಗ್ಗೆ ಚರ್ಚೆಯನ್ನು ಹುಟ್ಟು ಹಾಕಿದರು.

ಪಂಡಿತ್ ನೆಹರೂ ಸಹ ಉರ್ದು ಮತ್ತು ತಮಿಳನ್ನು ಸಮೀಕರಿಸಲು ಪ್ರಯತ್ನಿಸಿದರು. ಹಾಗೂ ಹಿಂದಿಯಲ್ಲಿ ಉಪಪರೀಕ್ಷೆಗಳನ್ನು ನಡೆಸುವುದರ ವಿರುದ್ಧ ದೂರಿದರು. ಇದುವರೆಗೂ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳಿಗೆ ಹಿಂದಿಯೇತರ ಅಭ್ಯರ್ಥಿಗಳಿಗೆ ಪೂರ್ವಭಾವಿ ಉಪಪರೀಕ್ಷೆಗಳಿಲ್ಲ (Tests). ಅಂತಹ ಉಪಪರೀಕ್ಷೆಗಳ ಅಗತ್ಯವಿಲ್ಲವೆಂದು ನಮಗೂ ಅನ್ನಿಸಿದೆ. ಕೇಂದ್ರ ಸರ್ಕಾರದ ಲೋಕಸೇವಾ ಆಯೋಗದ ಪರೀಕ್ಷೆಗಳು ಪ್ರಾದೇಶಿಕ ಭಾಷೆಗಳಲ್ಲಿಯೇ ನಡೆಯಬೇಕು. ಆದರೆ ಮದ್ರಾಸ್ ಸರ್ಕಾರವು ಈ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ತಮಿಳಿನಲ್ಲಿ ಯಾವುದೇ ಪರೀಕ್ಷೆಗಳನ್ನು ಇಡಬಾರದು.

ಪಂಡಿತ್ ನೆಹರೂ ಅವರ ಸಮಗ್ರ ಭಾಷಣ ದೋಷಪೂರಿತವಾಗಿಯೂ ವ್ಯಕ್ತಿಗತ ದೃಷ್ಟಿಕೋನದ್ದು ಆಗಿದ್ದಿತು. ಪ್ರಧಾನ ಮಂತ್ರಿಗಳು ಇದಕ್ಕಿಂತ ಹೆಚ್ಚು ಬೇಜವಾಬ್ದಾರಿಯುತವಾಗಿ ಮಾತನಾಡಲಾರರು.

* * * * *

# ಎರಡನೆ ಯೋಜನೆ–ಅಭಾರತೀಯ ಮತ್ತು ಅಪ್ರಜಾಸತ್ತಾತ್ಮಕ

ಭಾರತೀಯ ಜನಸಂಘವು ಉದ್ದಕ್ಕೂ ಎರಡನೇ ಪಂಚವಾರ್ಷಿಕ ಯೋಜನೆಯನ್ನು ವಿಮರ್ಶಿಸಿಕೊಂಡು ಬಂದಿತು. ಅದು ಸಂಯೋಜನೆ ಇಲ್ಲದ ಅಸ್ತವ್ಯಸ್ತವಾದ, ತಪ್ಪು ನಿರ್ದೇಶನದ ಅಥವಾ ನಿರ್ದೇಶನವಿಲ್ಲದ ಪ್ರಯತ್ನವಾಗಿದೆ. ಅದರಲ್ಲಿ ಒಬ್ಬರ ಮೇಲೆ ಮತ್ತೊಬ್ಬರನ್ನು ಎತ್ತಿಕಟ್ಟಲಾದ ಸಮೂಹಗಳ ವೈರುಧ್ಯ ಚಟುವಟಿಕೆಗಳು, ಪೋಲಿನ ಸ್ಪರ್ಧೆ ಹಾಗೂ ಅನಿಯಂತ್ರಿತ ಸಮಾಜವಿರೋಧಿ ಸಾಹಸ ಇತ್ಯಾದಿಗಳು ಕಂಡುಬರುತ್ತವೆ. ಆದರೆ ಅದೇ ವೇಳೆಗೆ ಅದು ಪ್ರಜಾಸತ್ತಾತ್ಮಕವಾಗಿರದ ಮತ್ತು ವ್ಯಕ್ತಿ ಸ್ವಾತಂತ್ರ್ಯದ ನಿರಾಕರಣೆಯಿಂದ ಕೂಡಿದ ಸೋವಿಯತ್ ಮಾದರಿಯ ಯೋಜನೆಗೆ ವಿರುದ್ಧವಾಗಿದೆ. ಯೋಜನೆಯ ಗಾತ್ರ ಮತ್ತು ಅದರ ಅನುಷ್ಠಾನಕ್ಕೆ ಅನುಸರಿಸಲಾಗುವ ತಂತ್ರವಿಧಾನಗಳು ಹಾಲಿ ಇರುವ ಆರ್ಥಿಕ ಸನ್ನಿವೇಶಕ್ಕನುಗುಣವಾಗಿ ಮತ್ತು ದೃಷ್ಟಿಯಲ್ಲಿರುವ ಆರ್ಥಿಕ ಸನ್ನಿವೇಶಕ್ಕನುಗುಣವಾಗಿ ಮತ್ತು ದೃಷ್ಟಿಯಲ್ಲಿರುವ ಆರ್ಥಿಕ ಗುರಿಗಳಿಗೆ ಅನುಗುಣವಾಗಿರಬೇಕಾದುದು ಮಾತ್ರವಲ್ಲದೆ ರಾಷ್ಟ್ರದ ರಾಜಕೀಯ ಮತ್ತು ಸಾಮಾಜಿಕ ಮೌಲ್ಯಗಳಿಗೂ ಅನುಗುಣವಾಗಿರಬೇಕು. ಎರಡನೆ ಪಂಚವಾರ್ಷಿಕ ಯೋಜನೆ ಪ್ರಜಾಪ್ರಭುತ್ವಕ್ಕೆ ತುಟಿಯುಪಚಾರ ಮಾಡುವಂತಿದ್ದರೂ ಅದನ್ನು ಪೂರ್ಣವಾಗಿ ಜಾರಿಗೆ ತಂದದ್ದಾದರೆ ನಮ್ಮ ಎಲ್ಲ ಸ್ವಾತಂತ್ರ್ಯಗಳೂ ಕುಂಠಿತವಾಗುತ್ತವೆ. ಯೋಜಕರು ದರ್ಶಿಸಿದ ತಂತ್ರವಿಧಾನಗಳನ್ನು ಅನ್ವಯಿಸಲು ಸರ್ಕಾರ ಹಿಂದೆಮುಂದೆ ನೋಡಿದ್ದರಿಂದ ಯೋಜನೆ ಬಹುಮಟ್ಟಿಗೆ ತೊಂದರೆಯಲ್ಲಿ ಸಿಕ್ಕಿಹಾಕಿಕೊಳ್ಳಲು ಕಾರಣವಾಯಿತು. ಪ್ರಜಾಪ್ರಭುತ್ವ ಮತ್ತು ಎರಡನೆ ಪಂಚವಾರ್ಷಿಕ ಯೋಜನೆಗಳು ಒಟ್ಟಿಗೆ ಹೋಗಲಾರವು. ನಾವು ಅವುಗಳಲ್ಲಿ ಒಂದನ್ನು ಆಯ್ದುಕೊಳ್ಳಲೇಬೇಕು. ಜನಸಂಘ ಮೊದಲನೆಯದನ್ನು ಆಯ್ದುಕೊಳ್ಳುತ್ತದೆ.

## ಎರಡನೇ ಪಂಚವಾರ್ಷಿಕ ಯೋಜನೆ ಮೂಲತಃ ಅಭಾರತೀಯವಾದುದು

ಜನಸಂಘವು ಎರಡನೆ ಪಂಚವಾರ್ಷಿಕ ಯೋಜನೆಯನ್ನು ಮೂಲತಃ ಅಭಾರತೀಯವಾದುದೆಂದು ಭಾವಿಸುತ್ತದೆ. ಅದು ಭಾರತೀಯ ಪರಂಪರೆಗಳನ್ನು

---

ಮೂಲ ಆಕರ : ಆರ್ಗನೈಸರ್, ೨೯, ಸೆಪ್ಟೆಂಬರ್, ೧೯೫೮

ನಮ್ಮ ಸಮಾಜದ ರಚನೆಗಳನ್ನು ಗುರುತಿಸುವಲ್ಲಿ ವಿಫಲವಾಗಿದೆ. ಆರ್ಥಿಕ ಬೆಳವಣಿಗೆಯನ್ನು ಶೂನ್ಯದಲ್ಲಿ ಸೃಷ್ಟಿಸಲಾಗುವುದಿಲ್ಲ.

ನಾವು ವಿದೇಶವೊಂದರ ಎಲ್ಲ ನೆರವನ್ನು ಪಡೆದರೂ ಆರ್ಥಿಕಾಭಿವೃದ್ಧಿಯನ್ನು ಪ್ರಪಂಚದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ತಂದು ಮರುನಾಟಿ ಮಾಡಲಾಗುವುದಿಲ್ಲ. ಜನಸಂಘವು ಎಲ್ಲ ಆರ್ಥಿಕ ಯೋಜನೆಯ ಕೇಂದ್ರಸೂತ್ರವಾಗಿ ಸ್ವಾವಲಂಬನೆ ಮತ್ತು ಸ್ವಸಹಾಯಗಳ ತತ್ವಗಳನ್ನು ಆಧರಿಸಬೇಕೆಂದು ಆಶಿಸುತ್ತದೆ. ಅದು ಒಂದು ಅಭ್ಯಾಸಕ್ರಮವನ್ನು ಅಳವಡಿಸಿಕೊಂಡರೆ ಕೈಗಾರಿಕೆ ಮತ್ತು ವ್ಯವಸಾಯದ ಬಗ್ಗೆ ಅದರ ನಿಲುವೇ ಬೇರೆಯಾಗುತ್ತದೆ. ಹಾಲಿ ಇರುವ ಉತ್ಪಾದನಾ ಮಾದರಿಯನ್ನು ತಳಹದಿಯನ್ನಾಗಿ ಮಾಡಿಕೊಂಡು ಅದರ ಮೇಲೆ ಆರ್ಥಿಕ ಅಭಿವೃದ್ಧಿ ಸಾಧಿಸುವ ವಿಧಾನ ಸಂಪೂರ್ಣ ವಿಫಲವಾಗಿದೆ. ಎರಡನೇ ಯೋಜನೆಯಲ್ಲಿ ಒಂದು ಕಡೆ ಕುಶಲ ಕಾರ್ಮಿಕರು, ವ್ಯವಸ್ಥಾಪನೆ ಮತ್ತು ಬಂಡವಾಳದಲ್ಲಿ ಕೊರತೆ ಕಾಣಿಸಿಕೊಂಡರೆ ಇನ್ನೊಂದೆಡೆ ನಿರುದ್ಯೋಗ ಮತ್ತು ಬಂಡವಾಳ ತೊಡಗಿಸದಿರುವಿಕೆ ಕಂಡುಬರುತ್ತದೆ. ಒಂದನೆಯ ಯೋಜನೆಯ ಅವಧಿಯಲ್ಲೂ ಅದೇ ಪ್ರಕ್ರಿಯೆ ಮುಂದುವರಿಯಿತು.

ಜನಸಂಘದ ನಿಲುವೆಂದರೆ ವಿದೇಶಿ ತಂತ್ರಜ್ಞಾನವನ್ನು ಆಮದು ಮಾಡಿಕೊಂಡು ಅದಕ್ಕೆ ಇತರ ಎಲ್ಲ ಉತ್ಪಾದಕ ಸನ್ನಿವೇಶಗಳನ್ನು ಹೊಂದಾಣಿಕೆ ಮಾಡಿಕೊಳ್ಳುವುದನ್ನು ಬಿಟ್ಟು ನಮ್ಮಲ್ಲಿರುವ ಉತ್ಪಾದನಾ ಅಂಶಗಳಿಗೆ ಸೂಕ್ತವಾಗುವಂತೆ ನಾವು ಒಂದು ತಂತ್ರಜ್ಞಾನ ಕ್ರಮವನ್ನು ಕಂಡುಹಿಡಿಯುವ ಸವಾಲನ್ನು ಸ್ವೀಕರಿಸಬೇಕೆಂಬುದು. ಇದನ್ನು ಸಾಧಿಸಬೇಕಾದರೆ ಈ ಮುಂದಿನ ಗುರಿಗಳಿಗೆ ಸಂಬಂಧಿಸಿದಂತೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನೇನು ಕಾರ್ಯಯೋಜನೆಗಳನ್ನು ಹಾಕಿಕೊಳ್ಳಲಾಗಿದೆಯೋ ಅದಕ್ಕಿಂತ ಹೆಚ್ಚು ಗುರಿಯನ್ನು ಇಟ್ಟುಕೊಳ್ಳಬೇಕು. ಅಷ್ಟಕ್ಕೂ ಈ ಯೋಜನೆಯ ಅಂತಿಮ ಗುರಿಗಳೆಂದರೆ ಎಲ್ಲರಿಗೂ ಲಾಭದಾಯಕ ಉದ್ಯೋಗವನ್ನು ಒದಗಿಸುವುದು. ಆರ್ಥಿಕ ಸಮಾನತೆಗಳನ್ನು ಕಡಿಮೆಮಾಡುವುದು. ಜನರ ಜೀವನಮಟ್ಟವನ್ನು ಹೆಚ್ಚಿಸುವುದು. ವಿಕೇಂದ್ರೀಕೃತ ಸಣ್ಣಪ್ರಮಾಣದ ಯಂತ್ರಗಳೊಂದಿಗೆ ನಾವು ಗುರಿಗಳನ್ನು ಸಾಧಿಸಬಹುದು. ಪಾಶ್ಚಿಮಾತ್ಯ ಪ್ರಪಂಚದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಬೆಳವಣಿಗೆಗಳೂ ಈ ದಿಕ್ಕಿನತ್ತ ಸಾಗುತ್ತಿವೆ. ಎರಡನೆಯ ಯೋಜನೆಯು ಆರ್ಥಿಕ ಕುಸಿತ ಪೂರ್ವ ತಂತ್ರಜ್ಞಾನ ಮತ್ತು ಆರ್ಥಿಕ ವಿಚಾರಗಳನ್ನು ಒಳಗೊಂಡಿದೆ.

ನಾವು ಉತ್ಪಾದನೆಗೆ ಸಮಾನ ಆದ್ಯತೆ ನೀಡಿದರೆ, ಅದರ ಸಮಾನ ಹಂಚಿಕೆಗೆ ಒತ್ತುಕೊಟ್ಟರೆ ಮತ್ತು ಬಳಕೆಯಲ್ಲಿ ಸಂಯಮವನ್ನು ಸಾಧಿಸಿದರೆ ಚೆನ್ನಾದ ಸಮತೋಲಿತವಾದ ಆರ್ಥಿಕ ಜೀವನ ವ್ಯವಸ್ಥೆ ಸೃಷ್ಟಿಸುವುದು ಸಾಧ್ಯವೆಂಬುದು

ಜನಸಂಘದ ಅಭಿಪ್ರಾಯ. ಉತ್ಪಾದನೆಯ ಹೆಚ್ಚಳದೊಂದಿಗೆ ಜನರ ಕೊಳ್ಳುವ ಶಕ್ತಿಯೂ ಹೆಚ್ಚಬೇಕು. ಎಲ್ಲರಿಗೂ ಉದ್ಯೋಗ ಒದಗಿಸುವ ಯೋಜನೆ ಕೈಗೊಂಡಾಗಲೇ ಇದು ಸಾಧ್ಯ. ಎರಡನೆ ಯೋಜನೆ ಉದ್ಯೋಗವನ್ನು ಹೆಚ್ಚಿಸುವ ಮಾತನ್ನು ಮಾತ್ರ ಆಡಿದೆ. ಈ ನಿಟ್ಟಿನಲ್ಲಿ ಅದು ಗುರಿ ಇಟ್ಟುಕೊಳ್ಳುವಾಗಲೂ ಈಗಾಗಲೇ ನಿರುದ್ಯೋಗಿಗಳಾಗಿರುವ ಒಂದು ಕೋಟಿ ಜನರನ್ನು ಒಳಗೊಳ್ಳುವ ಯೋಜನೆ ರೂಪಿಸಿಲ್ಲ. ಆದ್ದರಿಂದ ಈ ಗುರಿಗಳು ನಿರೀಕ್ಷೆಗಿಂತ ಕಡಿಮೆ ಮಟ್ಟದವಾಗಿವೆ. ಕೆಲವು ಕೈಗಾರಿಕೆಗಳಲ್ಲಿ ಈಗಿರುವ ಬೇಡಿಕೆ ಕುಸಿತ ಅದರಲ್ಲೂ ಹತ್ತಿಬಟ್ಟೆ ಕೈಗಾರಿಕೆಯಲ್ಲಿ ಕಾಣಿಸಿಕೊಂಡಿರುವುದಕ್ಕೆ ಜನರ ಖರೀದಿ ಶಕ್ತಿಯಲ್ಲಿ ಉಂಟಾಗಿರುವ ಇಳಿಮುಖವೇ ಕಾರಣ. ಬಂಡವಾಳ ಪ್ರಧಾನ ಯೋಜನೆಗಳ ಮೇಲೆ ಸರ್ಕಾರದ ನಿಧಿಯ ಬಹುಭಾಗದ ವಿನಿಯೋಗವಾಗಿದ್ದರೂ ಅದರಿಂದ ಪರಿಮಿತ ಸಂಖ್ಯೆಯ ಜನರಿಗೆ ಮಾತ್ರ ಉದ್ಯೋಗ ಲಭ್ಯವಾಗಿದೆ. ಅಧಿಕ ಕೊರತೆ ಬಜೆಟ್‌ನ್ನು ಮಂಡಿಸುತ್ತಿದ್ದರೂ ಸಾಮಾನ್ಯ ಜನರ ಕೈಯಲ್ಲಿ ಯಾವುದೇ ಹೆಚ್ಚುವರಿ ಹಣವಿಲ್ಲ; ಸರ್ಕಾರದ ತೆರಿಗೆನೀತಿ ಬೆಲೆಗಳ ಏರಿಕೆಗೆ ಕಾರಣವಾಗಿದೆ. ಅದು ಅನಿವಾರ್ಯವಾಗಿ ಸಂಬಳಗಳ ಹೆಚ್ಚಳದಲ್ಲಿ ಪರಿಣಮಿಸಿದೆ. ಜನರ ಖರೀದಿ ಶಕ್ತಿಯನ್ನು ಹೆಚ್ಚಿಸದ ಹೊರತು ಈ ವಿಷಮ ಚಕ್ರವ್ಯೂಹವನ್ನು ಭೇದಿಸಲು ಸಾಧ್ಯವಿಲ್ಲ. ಇದನ್ನು ಮೊದಲಿಗೆ ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವ ಮೂಲಕ ಮತ್ತು ಎರಡನೆಯದಾಗಿ ನಮ್ಮ ಕುಟುಂಬ ಬಜೆಟ್‌ನ ಮುಖ್ಯ ಭಾಗವಾದ ಆಹಾರ ವಸ್ತುಗಳ ಬೆಲೆಗಳನ್ನು ಸ್ಥಿರೀಕರಿಸುವ ಮೂಲಕ ಸಾಧಿಸಬಹುದು.

**ವ್ಯವಸಾಯ–ಭಾರತೀಯ ಯೋಜನೆಯ ಸಿಂಡ್ರೆಲ**

ವ್ಯವಸಾಯೋತ್ಪನ್ನಗಳನ್ನು ಹೆಚ್ಚಿಸುವುದು ನಮ್ಮ ಪ್ರಥಮ ಆದ್ಯತೆಯಾಗಿರಬೇಕೆಂಬುದು ಇಂದು ಎಲ್ಲರೂ ಒಪ್ಪಿಕೊಂಡ ವಿಷಯವಾಗಿದೆ. ಸ್ವಾತಂತ್ರ್ಯ ಬಂದ ಮೇಲೆ ೧೨೦೦ ಕೋಟಿ ರೂ.ಗಳ ಆಹಾರೋತ್ಪನ್ನಗಳನ್ನು ಆಮದು ಮಾಡಿಕೊಳ್ಳಲಾಗಿದೆ ಎಂಬುದು ಅಂದಾಜು ಯೋಜನಾ ಆಯೋಗ ವ್ಯವಸಾಯ ಕ್ಷೇತ್ರದಿಂದ ಮೂಲಭೂತ ಮತ್ತು ಭಾರಿ ಕೈಗಾರಿಕೆಗಳಿಗೆ ಆದ್ಯತೆಯನ್ನು ಬದಲಾಯಿಸಿದ್ದು ಅದು ದೂರದೃಷ್ಟಿ ಇಲ್ಲದಿರುವುದನ್ನು ತೋರಿಸುತ್ತದೆ. ಮೊದಲನೆ ಯೋಜನಾ ಅವಧಿಯಲ್ಲಿ ವ್ಯವಸಾಯದಲ್ಲಿ ಗಣನೀಯ ಅಭಿವೃದ್ಧಿಯಾದುದರಿಂದ ನಮಗೆದುರಾಗಿದ್ದ ಸಂಕಷ್ಟಕರ ಪರಿಸ್ಥಿತಿಯಿಂದ ಪಾರಾಗಲು ಸಾಧ್ಯವಾದುದನ್ನು ಗ್ರಹಿಸಲು ಆಯೋಗ ವಿಫಲವಾಗಿದೆ. ವ್ಯವಸಾಯ ಉತ್ಪನ್ನಗಳಲ್ಲಿ ಉನ್ನತಿಯನ್ನು ಸಾಧಿಸಿ ಮಾರುಕಟ್ಟೆಯಲ್ಲಿ ಉತ್ತಮ ಸ್ಥಿತಿ ತಲುಪುವ ಗುರಿ ಮುಟ್ಟದಿದ್ದರೆ ನಾವು

ಕೈಗಾರಿಕಾವಲಯದ ಮತ್ತು ನಗರ ಜನಸಂಖ್ಯೆಯ ಅಗತ್ಯಗಳನ್ನು ಪೂರೈಸಲಾಗುವುದಿಲ್ಲ. ಹಾಗೂ ಕಾರ್ಖಾನೆಗಳಲ್ಲಿ ತಯಾರಿಸಿದ ಸಿದ್ಧವಸ್ತುಗಳಿಗೂ ಬೇಡಿಕೆ ಬರಲಾರದು ಎಂಬುದು ಜನಸಂಘದ ಅಭಿಮತ. ನಾವು ನಮ್ಮ ಕೈಗಾರಿಕೆಗಳು ಪ್ರವರ್ಧಮಾನಕ್ಕೆ ಬರಲು ವಿದೇಶಿ ಮಾರುಕಟ್ಟೆಗಳನ್ನು ಅವಲಂಬಿಸುವುದು ಸಾಧ್ಯವೂ ಇಲ್ಲ ಮತ್ತು ಸಾಧುವೂ ಅಲ್ಲ. ಭಾರತ ತನ್ನ ಅಗಾಧ ಜನಸಂಖ್ಯೆ ಮತ್ತು ಅಪಾರ ಸಂಪನ್ಮೂಲಗಳನ್ನು ಸುಲಭವಾಗಿ ಒಂದು ಸ್ವಾವಲಂಬಿ ಆರ್ಥಿಕತೆಯಾಗಿ ರೂಪಿಸುವುದು ಸಾಧ್ಯವಿದೆ.

ವ್ಯವಸಾಯ ಉತ್ಪಾದನೆಯನ್ನು ಪ್ರಧಾನಮಂತ್ರಿಗಳ ದೀರ್ಘಭಾಷಣಗಳಿಂದಾಗಲಿ ಅಥವಾ ಅವರ ಬಂಟರ ತೋರಿಕೆ ಪ್ರಚಾರದಿಂದಾಗಲಿ ಹೆಚ್ಚಿಸಲು ಸಾಧ್ಯವಿಲ್ಲ. ಈ ಯೋಜನೆ ಗ್ರಾಮೀಣರ ಅಗತ್ಯಗಳು ಮತ್ತು ಅವರ ಮನೋರಥವನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ. ಅರೆಮನಸ್ಸಿನಿಂದ ಕಾರ್ಯಗತವಾದ ತೋರಿಕೆಯ ಭೂ ಸುಧಾರಣೆಗಳು ಗ್ರಾಮೀಣ ಜೀವನವನ್ನು ತಲೆಗೆಳಗು ಮಾಡಿವೆ. ಅವು ಜನರನ್ನು ಏಳಿಗೆಯತ್ತ ಕೊಂಡೊಯ್ಯುವಲ್ಲಿ ಅಥವಾ ಉದ್ದೀಪಿಸುವಲ್ಲಿ ಸೋತಿವೆ. ಎರಡನೆಯ ಯೋಜನೆಯಲ್ಲಿ ಗುರಿಯಾಗಿರಿಸಿಕೊಂಡಿದ್ದ ಸಹಕಾರಿ ಬೇಸಾಯ ಮತ್ತಷ್ಟು ವ್ಯವಸಾಯೋತ್ಪಾದನೆಗೆ ತಡೆಯಾಗುತ್ತಿದೆ. ನಮ್ಮ ಗುರಿ ಎಕರೆವಾರು ಗರಿಷ್ಟ ಉತ್ಪಾದನೆಯಾಗಬೇಕೆ ಹೊರತು ನೇಮಿಸಿದ ಕೆಲಸಗಾರರ ವಾರು ಉತ್ಪಾದನೆಯಾಗಬಾರದು. ನಾವು ರೈತರ ಒಡೆತನದ ತತ್ವಕ್ಕೆ ಬದ್ಧರಾಗಬೇಕು. ಅನುಪಸ್ಥಿತ ಜಮೀನ್ದಾರಿಕೆ ಮತ್ತು ಇತರ ಮಧ್ಯವರ್ತಿಗಳನ್ನು ಕೊನೆಗಾಣಿಸಲು ಕ್ರಮಕೈಗೊಳ್ಳಬೇಕು. ೧೯೫೧ರಷ್ಟು ಹಿಂದೆಯೇ ಜನಸಂಘ ಹೊಂದಿದ್ದ ನಿಲವುಗಳಿಗೆ ತಡವಾಗಿ ಮಾನ್ಯತೆ ದೊರೆಯುತ್ತಿದೆ. ಸಮುದಾಯ ಅಭಿವೃದ್ಧಿ ಕ್ಷೇತ್ರವಾರು ಆಹಾರೋತ್ಪಾದನೆಯ ಗುರಿಗಳನ್ನು ನಿಗದಿಪಡಿಸುವುದು ಅಪೇಕ್ಷಣೀಯ. ಆ ಮಟ್ಟದಲ್ಲಿ ಸಮಗ್ರ ಸಮನ್ವಯ ವ್ಯವಸ್ಥೆ ಇರಬೇಕು. ಅದು ವ್ಯವಸಾಯ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ಕಾರ್ಯಗಳ ಉಸ್ತುವಾರಿ ವಹಿಸಬೇಕು.

ಜನಸಂಘವು ಸಾರ್ವಜನಿಕ ವಲಯದ ವಿಸ್ತರಣೆಯನ್ನು ವಿರೋಧಿಸುತ್ತಾ ಬಂದಿದೆ. ೧೯೫೬ರ ಕೈಗಾರಿಕಾ ನೀತಿಯ ನಿರ್ಣಯವಿದ್ದರೂ ಸರ್ಕಾರವು ಜನರಿಗೆ ಬಿಡಬೇಕಾದ ಕಾರ್ಯಗಳನ್ನು ತಾನೇ ನಿರ್ವಹಿಸುತ್ತಿದೆ. ಜೀವವಿಮೆಯ ರಾಷ್ಟ್ರೀಕರಣ, ರಸ್ತೆ ಸಾರಿಗೆ ಮತ್ತು ಪಠ್ಯಪುಸ್ತಕಗಳು, ರಾಜ್ಯ ವ್ಯಾಪಾರ ಕಾರ್ಪೊರೇಷನ್, ರೈಲ್ವೆಗೆ ಇಲಾಖಾ ಕ್ಯಾಟರಿಂಗ್–ಇವು ಅಂಥ ಕೆಲವು ಉದಾಹರಣೆಗಳು. ಕೆಲವು ಹಳ್ಳಿಗಳಲ್ಲಿ ಕೊಳಗಳಲ್ಲಿ ಮೀನು ಹಿಡಿಯುವ ಹಕ್ಕನ್ನು ರಾಷ್ಟ್ರೀಕರಿಸಲಾಗಿದೆ. ಗ್ರಾಮ ಪಂಚಾಯತಿಗಳಿಗೆ ವಹಿಸಲಾದ ಗೋಮಾಳವನ್ನು

ಪಂಚಾಯತಿಗಳಿಗೆ ಆದಾಯಬರುವಂತೆ ಮಾಡಲು ಸಾಗುವಳಿಗೆ ಬಿಡಲಾಯಿತು. ಭೂರಹಿತ ಬಡವನ ಜೀವನಾಧಾರಕ್ಕಾಗಿ ಹೊಂದಿದ್ದ ಅಲ್ಪಸ್ವಲ್ಪ ಮೂಲಗಳನ್ನು ಕಸಿದುಕೊಳ್ಳಲಾಯಿತು. ಸಮಾಜವಾದ ಅವರ ಪಾಲಿಗೆ ಶಾಪವಾಗಿ ಪರಿಣಮಿಸಿದೆ.

**ಅವಾಸ್ತವವಾದುದು ಮತ್ತು ವ್ಯರ್ಥವಾದುದು**

ಎರಡನೆಯ ಯೋಜನೆಗೆ ಲಭ್ಯವಿರುವ ಸಂಪನ್ಮೂಲಗಳ ಬಗ್ಗೆ ಒಂದು ಅಂದಾಜು ನಡೆಸುವುದು ಸಹ ಅಗತ್ಯವಾಗಿದೆ. ಇಲ್ಲದಿದ್ದರೆ ಆಯೋಗವು ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಅನುಸರಿಸುವ ವಿವಿಧ ವಿಧಾನಗಳ ಪ್ರಭಾವ ಆರ್ಥಿಕತೆಯ ಮೇಲೆ ಹಾಗೂ ಪ್ರತಿಯಾಗಿ ಯೋಜನೆಯ ಅನುಷ್ಠಾನದ ಮೇಲೆ ಉಂಟಾಗುವ ಪರಿಣಾಮಗಳನ್ನು ಗ್ರಹಿಸುವ ಪ್ರಯತ್ನ ಮಾಡಿಲ್ಲ. ಆಯೋಗವು ರಾಜ್ಯಗಳು ತೆರಿಗೆ ಸಂಗ್ರಹಕ್ಕಾಗಿ ನಡೆಸಿರುವ ಪ್ರಯತ್ನಗಳ ಬಗ್ಗೆ ತೀವ್ರ ಅಸಂತೃಪ್ತಿ ವ್ಯಕ್ತಪಡಿಸಿದೆ. ಆದರೆ ಕೇಂದ್ರ ಸರ್ಕಾರವು ವಿಧಿಸಿರುವ ತೆರಿಗೆ ಯೋಜನೆಗೆ ಅನುಕೂಲಕರವಾಗಿ ಪರಿಣಮಿಸಿರುವುದಕ್ಕೂ ಮಿಗಿಲಾಗಿ ಆರ್ಥಿಕತೆಗೆ ಹಾನಿ ಉಂಟುಮಾಡಿದೆ. ಪ್ರಮಾಣ ಮಾಡಿದ ಮೇಲೆ ಸರ್ಕಾರವನ್ನು ಅಬ್ಕಾರಿ ತೆರಿಗೆಗಳನ್ನು ಪರಿಷ್ಕರಿಸುವಂತೆ ಮತ್ತು ಕಡ್ಡಾಯ ಠೇವಣಿಗಳನ್ನು ಕೈಬಿಡುವಂತೆ ಒತ್ತಾಯಿಸಿ ಹಾಗೆ ಮಾಡಿಸಲಾಯಿತು. ಸರ್ಕಾರಗಳ ಯೋಜನೇತರ ವೆಚ್ಚಗಳೂ ದೊಡ್ಡ ಪ್ರಮಾಣದಲ್ಲಿಯೇ ಹೆಚ್ಚಿವೆ. ಇದು ಯೋಜನೆಗಳಿಗೆ ಒದಗಬೇಕಾದ ಅಧಿಕ ಆದಾಯವನ್ನು ಕುಂಠಿತಗೊಳಿಸುವುದಲ್ಲದೆ ಜನರ ಮೇಲೆ ಅದು ಭಾರ ಹೇರುತ್ತದೆ. ದೇಶದ ಇಡೀ ಆರ್ಥಿಕತೆ ಒಂದೇ ಆಗಿದೆ. ಸರ್ಕಾರ ವಿನಿಯೋಗಿಸುವ ಎಲ್ಲ ವೆಚ್ಚಗಳ ಬಗ್ಗೆ ಯೋಜನೆಯಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕು. ಅವುಗಳ ಸಂಭವನೀಯ ಪರಿಣಾಮಗಳನ್ನು ಸರಿಯಾಗಿ ಗುರುತಿಸಬೇಕು. ತೆರಿಗೆಗಳನ್ನು ಇಳಿಸುವ ಅಗತ್ಯವಿದೆ. ವಿಶೇಷವಾಗಿ ಅಗತ್ಯವಸ್ತುಗಳ ಬೆಲೆಗಳನ್ನು ಏರಿಸಲು ಕಾರಣವಾಗುವ ತೆರಿಗೆಗಳನ್ನು ಇಳಿಸಬೇಕು. ಎಲ್ಲ ಇಲಾಖೆಗಳ ಅರ್ಥಶಾಸ್ತ್ರದ ಮೇಲೆಯೂ ಈ ಪರಿಣಾಮವಾಗಬೇಕು. ಹಣಕಾಸಿನ ಗುರಿಗಳಲ್ಲಿಯ ಪ್ರಜ್ಞಾವಂತಿಕೆಯನ್ನು ಭೌತಿಕ ಸಾಧನೆಗಳ ರೂಪದಲ್ಲಿ ಮೌಲ್ಯಮಾಪನ ಮಾಡಲು ಯಾವುದೇ ವ್ಯವಸ್ಥೆ ಇಲ್ಲದಿರುವುದು ದೊಡ್ಡ ಪ್ರಮಾಣದ ಪೋಲಿಗೆ ದಾರಿಮಾಡಿಕೊಟ್ಟಿದೆ. ಆಯೋಗವು ವಿವಿಧ ಕ್ಷೇತ್ರಗಳಲ್ಲಿ ಆದ ಒಂದು ಭೌತಿಕ ಘಟಕದ ಸಾಧನೆಗೆ ತಗುಲಿದ ಹಣದ ಮೊತ್ತವನ್ನು ಜನರು ತಿಳಿಯಲು ಒಂದು ಸೂತ್ರವನ್ನು ರೂಪಿಸುವುದು ಅಪೇಕ್ಷಣೀಯ.

ಈಗ ಯೋಜನಾ ಆಯೋಗವು ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಸೂತ್ರೀಕರಿಸಲು ಅನುಸರಿಸಿದ ಪರಿಭಾವನೆಗಳು ಅಸಮರ್ಥನೀಯ

ಎಂದು ಸಾಬೀತಾಗಿದೆ. ಅದು ಬಳಸಿದ ತಾಂತ್ರಿಕತೆ ಈ ದೇಶದ ಪರಿಸ್ಥಿತಿಗಳಿಗೆ ಸೂಕ್ತವಾದುದಲ್ಲ. ಉತ್ಪಾದನಾ ಗುರಿಗಳನ್ನು ಯಾಧೃಚ್ಛಿಕವಾಗಿ ನಿಗದಿಪಡಿಸಲಾಯಿತು. ಅದು ಕಂಡುಕೊಂಡ ಸಂಪನ್ಮೂಲಗಳು ವಸ್ತುಸ್ಥಿತಿಗೆ ಸಂಗತವಾಗಿರಲಿಲ್ಲ. ಅಭಿವೃದ್ಧಿಪರ ಆರ್ಥಿಕತೆಯ ನಿಯಮಗಳನ್ನು ಸರಿಯಾಗಿ ಅನ್ವಯಿಸಿಲ್ಲ; ಕಳೆದ ಎಂಬತ್ತು ವರ್ಷಗಳಲ್ಲಿ ಸ್ಥಾಪಿತವಾದ ವ್ಯಾಪಾರ ಮತ್ತು ಕೈಗಾರಿಕೆ ನಮೂನೆ ಬ್ರಿಟಿಷ್ ಪದ್ಧತಿಯ ಕಂಪನಿಗಳ ಮತ್ತು ವ್ಯಕ್ತಿಗಳ ಮುಕ್ತ ಸಾಹಸೋದ್ಯಮವನ್ನು ಅನುಕರಿಸಿದ್ದು ಯೋಜನಾ ಆಯೋಗವು ರಷ್ಯಾದ ಆದರ್ಶದಿಂದ ಪ್ರಭಾವಿತವಾಗಿದ್ದು ರಾಜ್ಯದ ತೊಡಗುವಿಕೆಯನ್ನು ಗುರಿಯಾಗಿಟ್ಟುಕೊಂಡಿದೆ. ಆದರೆ ಅದಕ್ಕೆ ಹಳೆಯ ಪರಂಪರೆಯನ್ನು ಬಿಟ್ಟುಕೊಡುವ ಅಥವಾ ಅಳಿಸಿಹಾಕುವ ಧೈರ್ಯವಿಲ್ಲ. ಯೋಜನಾ ಆಯೋಗದ ಈ ದ್ವಂದ್ವ ಅನಿಶ್ಚಿತ ಸ್ಥಿತಿಯನ್ನು ಉಂಟುಮಾಡಿದೆ. ಒಂದು ರಾಜಕೀಯ ಪಕ್ಷದೊಂದಿಗೆ ಸಹವರ್ತಿಯಾಗಿರುವ ಆಯೋಗವು ಚುನಾವಣಾ ಪ್ರಣಾಳಿಕೆಯ ಅರಿವನ್ನು ಹೊಂದಿರುತ್ತದೆ. ಅದು ಪಕ್ಷದ ನಾಯಕರುಗಳ ರಾಜಕೀಯ ವೃತ್ತಿಯ ಆಶಯಗಳನ್ನು ಮತ್ತು ದೇಶದ ಸ್ಥಿತಿಗತಿಗಳೆರಡನ್ನೂ ಪರಿಗಣಿಸಿ ನಿರ್ಣಯಗಳನ್ನು ಕೈಗೊಳ್ಳುತ್ತದೆ. ಹಾಗೂ ಅದು ಒಂದು ಸಾಮರಸ್ಯದ ಸಮತೋಲನವನ್ನು ಕಾಯ್ದುಕೊಳ್ಳಲು ಎಂದೂ ಸಫಲವಾಗಿಲ್ಲ.

**ಅಭದ್ರತೆಯ ಸಮಾನತೆ ಮತ್ತು ಸಂಪತ್ತಿನ ಅಸಮಾನತೆ**

ಎರಡನೆ ಪಂಚವಾರ್ಷಿಕ ಯೋಜನೆಯ ಗುರಿಗಳು ಪ್ರಶಂಸನೀಯವಾದರೂ ಈ ಯೋಜನೆಯನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸಿದಾಗಲೂ ಅವನ್ನು ಸಾಧಿಸುವುದು ಕಷ್ಟವಿತ್ತು. ಭಾರಿ ಕೈಗಾರಿಕೆಗಳು ಬಂಡವಾಳ ಪ್ರಧಾನವಾಗಿದ್ದು ಅವು ಅಧಿಕ ಹೂಡಿಕೆಯನ್ನು ಬೇಡುವವಾಗಿದ್ದವು: ಈ ಭಾರದಿಂದ ಸಮುದಾಯವನ್ನು ರಕ್ಷಿಸಲು ಅದು ತನಗೆ ಸಾಧ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು. ಹಾಲಿ ಇರುವ ಜೀವನ ಮಟ್ಟ ತುಂಬಾ ಕೆಳಗಿರುವಂತಹ ಸಮಾಜದಲ್ಲಿ ಬಳಕೆಗೆ ಅತೀವ ಬೇಡಿಕೆ ಇರುತ್ತದೆ; ಆದರೆ ಅದು ತನ್ನ ಅನುಭೋಗ ಮಟ್ಟವನ್ನು ಹೆಚ್ಚಿಸಿಕೊಳ್ಳಲಾಗದು. ಬಂಡವಾಳ ಪ್ರಧಾನ ಉದ್ಯಮಗಳನ್ನು ಸ್ಥಾಪಿಸುವ ಮೂಲಕ ಹೆಚ್ಚಿನ ಉದ್ಯೋಗಗಳನ್ನು ನೀಡಲಾಗದು. ತಾಂತ್ರಿಕವಾಗಿ ಅಭಿವೃದ್ಧಿಗೊಂಡ ಮತ್ತು ಕೊರತೆಯುಳ್ಳ ಕೈಗಾರಿಕೆಗಳು ವಿಶೇಷವಾಗಿ ಅವು ಪರಸ್ಪರ ಪೂರಕವಾಗಿರದಿದ್ದಲ್ಲಿ ಒಟ್ಟಿಗೆ ಅಸ್ತಿತ್ವದಲ್ಲಿರಲಾರವು. ಅವು ಒಟ್ಟಿಗೆ ಏಳಿಗೆಗೆ ಬರಬೇಕಾದರೆ ಅವುಗಳ ತಾಂತ್ರಿಕ ಹಿನ್ನಡೆಯ ಅನಾನುಕೂಲಗಳನ್ನು ಇತರ ಕ್ಷೇತ್ರಗಳ ಅನುಕೂಲಗಳ ಮೂಲಕ ಸರಿದೂಗಿಸಬೇಕಾಗುತ್ತದೆ. ಬಂಡವಾಳ ಪ್ರಧಾನ ಕೈಗಾರಿಕೆಗಳು ಮತ್ತು ಸಾಮಾನ್ಯ

ಕೈಗಾರಿಕೆಗಳ ನಡುವೆ ಆದಾಯದ ಸಮಾನತೆಯನ್ನು ತರುವುದು ಕಷ್ಟ. ಏಕೆಂದರೆ ಕೈಗಾರಿಕೀಕರಣದ ಕಾರ್ಯಕ್ರಮಗಳು ಬಂಡವಾಳವನ್ನು ಅಧಿಕವಾಗಿ ಅವಲಂಬಿಸುತ್ತವೆ. ಯೋಜನೆಯ ಅನುಷ್ಠಾನದಿಂದ ನಮಗೆ ಕಂಡಂತೆ ಶ್ರೀಮಂತರು ಶ್ರೀಮಂತರಾಗುತ್ತಿದ್ದಾರೆ, ಮತ್ತು ಬಡವರು ಬಡವರಾಗುತ್ತಿದ್ದಾರೆ. ಇಬ್ಬರೂ ಅತೃಪ್ತರು. ಬಡವರು ಹೆಚ್ಚುತ್ತಿರುವ ಬೆಲೆಗಳಿಂದ ಹಾಗೂ ನಿರುದ್ಯೋಗದ ಹೆಚ್ಚಳದಿಂದ ನೋಯುತ್ತಿದ್ದರೆ ಶ್ರೀಮಂತರು ಕಾನೂನು ಕಟ್ಟಳೆಗಳು ಹೆಚ್ಚುತ್ತಿರುವುದರಿಂದ ಮತ್ತು ತೆರಿಗೆ ನೀತಿಯ ಪ್ರೋತ್ಸಾಹದಾಯಕವಲ್ಲದ ಪರಿಣಾಮದಿಂದ ನಿರಾಶರಾಗಿದ್ದಾರೆ. ಇಲ್ಲಿ ಆದಾಯ ಮತ್ತು ಸಂಪತ್ತಿನಲ್ಲಿ ಹೆಚ್ಚಿನ ಸಮಾನತೆ ಇಲ್ಲದಿದ್ದರೂ ಒಬ್ಬನ ಭವಿಷ್ಯದ ಬಗ್ಗೆ ಖಂಡಿತವಾಗಿಯೂ ಅಭದ್ರತೆ ಮತ್ತು ಅನಿಶ್ಚಿತತೆ ಇದೆ; ಬಂಡವಾಳ ಮತ್ತು ಉತ್ಪಾದಕರ ಸರಕುಗಳಿಗಾಗಿ ವಿದೇಶಗಳನ್ನು ಅವಲಂಬಿಸದಂತೆ ದೇಶವನ್ನು ಸ್ವತಂತ್ರಗೊಳಿಸುವ ಉದ್ದೇಶಕ್ಕಾಗಿ ಮೂಲಭೂತ ಸೌಕರ್ಯ ಮತ್ತು ಭಾರಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಯಿತು. ಆದರೆ ನಾವು ಕ್ರಮೇಣ ನಮ್ಮ ಭವಿಷ್ಯವನ್ನು ಒತ್ತೆ ಇಟ್ಟು ಹೆಚ್ಚು ಹೆಚ್ಚಾಗಿ ಅವಲಬಂಬಿತರಾದೆವು. ಉತ್ಪಾದಿಸಿ ಅಥವಾ ನಾಶವಾಗಿ ಎಂಬ ಘೋಷಣೆಯ ಬದಲು ರಫ್ತು ಮಾಡಿ ಅಥವಾ ನಾಶವಾಗಿ ಎಂಬ ಘೋಷಣೆ ಬಂದಿತು. ವಿದೇಶಿ ನೆರವು ನಮ್ಮ ಸ್ವಾಭಿಮಾನವನ್ನು ಕುಗ್ಗಿಸಿತು. ಯೋಜನೆಯಲ್ಲಿ ವ್ಯವಸಾಯ ಕ್ಷೇತ್ರದ ಮೇಲಿನ ಒತ್ತಡವನ್ನು ತಗ್ಗಿಸಲು ಕೈಗಾರಿಕೀಕರಣವನ್ನು ಪ್ರತಿಪಾದಿಸಲಾಯಿತು. ಆದರೆ ಕೈಗಾರಿಕೀಕರಣದಿಂದಾಗಿ ಸೀಮಾಹಂತದ ಮತ್ತು ಸ್ವದೇಶಿ ಉದ್ಯಮಗಳು ಸ್ಪರ್ಧೆಯಿಂದ ನಶಿಸಿಹೋಗಿ ಹೆಚ್ಚು ಹೆಚ್ಚು ಜನರು ವ್ಯವಸಾಯ ಕ್ಷೇತ್ರದತ್ತ ತಳ್ಳಲ್ಪಟ್ಟರು. ನಾವು ವಸ್ತುಸ್ಥಿತಿಯ ಸಂಯೋಜಿತ ಗ್ರಹಿಕೆ ಮಾಡದಿರುವುದು ಸ್ಪಷ್ಟವಾಗಿದೆ.

ಜನಸಂಘವು ಎರಡನೆ ಯೋಜನೆಯನ್ನು ಪುನರ್‌ರೂಪಿಸಲು ಮತ್ತು ಅದರ ಅವಧಿಯನ್ನು ವಿಸ್ತರಿಸಲು ಒತ್ತಾಯಿಸುತ್ತಾ ಬಂದಿದೆ. ಈ ಯೋಜನೆಯಲ್ಲಿ ಅನೇಕ ಅಸ್ಪಷ್ಟತೆಗಳಿದ್ದು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸುಲಭವಾಗಿ ಪರಿಷ್ಕರಿಸಲು ಸಾಧ್ಯವಾಗದ ರೀತಿಯಲ್ಲಿದೆ. ಆದಾಗ್ಯೂ ಭೌತಿಕ ಮತ್ತು ಹಣಕಾಸು ಹಾಗೂ ವಿವಿಧ ವಿಭಾಗೀಯ ಕಾರ್ಯಕ್ರಮಗಳ ಗುರಿಗಳ ನಡುವೆ ಸಮತೋಲನದ ಕೊರತೆ ಇದೆ. ಅದನ್ನು ಸರಿಪಡಿಸಬೇಕು ಮತ್ತು ಆದ್ಯತೆಗಳನ್ನು ದಾಖಲಿಸಬೇಕು. ಆಯೋಗವು ಯೋಜನೆಯನ್ನು ಎರಡು ಭಾಗಗಳಾಗಿ ವಿಂಗಡಿಸಿದೆ. ಭಾಗ 'ಎ'ಯ ಸಂಪನ್ಮೂಲಗಳು ಸಮೀಪ ಗೋಚರವಿಲ್ಲ. ಕಾರ್ಯಗುರಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುವ ಕಾರ್ಯಯೋಜನೆಗಳು ಸಾಕಷ್ಟು ಪೋಲಿಗೆ ಕಾರಣವಾಗುವುದಲ್ಲದೆ ಅನಗತ್ಯವಾದ ವಿಷಣ್ಣತೆ ಮತ್ತು ಹತಾಶೆಯ ಭಾವನೆಗೆ

ಅವಕಾಶ ಕಲ್ಪಿಸುತ್ತವೆ. ಮಿಗಿಲಾಗಿ ಯೋಜನೆಗಳು ಚುನಾವಣೆಗಳೊಂದಿಗೆ ತಳಕು ಹಾಕಿಕೊಳ್ಳದಿದ್ದರೆ ಅಲ್ಲಿ ಹೆಚ್ಚಿನ ಸಹಕಾರ, ಶಾಂತವಾದ ಮತ್ತು ವಸ್ತುನಿಷ್ಠ ಮೌಲ್ಯಮಾಪನ ಸಾಧ್ಯವಿದ್ದು ಅದರಲ್ಲಿ ಯಾವುದೇ ಪ್ರತಿಷ್ಠೆ ಅಂಟಿಕೊಂಡಿರುವುದಿಲ್ಲ. ಕಳೆದ ಮೇನಲ್ಲಿ ನಡೆದ ರಾಷ್ಟ್ರೀಯ ಅಭಿವೃದ್ಧಿ ಕೌನ್ಸಿಲ್ ಸಭೆಯ ಕಲಾಪಗಳು ವಾಸ್ತವತೆಯ ಮತ್ತು ಜವಾಬ್ದಾರಿಯ ಪ್ರಜ್ಞೆಯನ್ನು ಕಳೆದುಕೊಂಡಿದ್ದವು. ನಾವು ಯೋಜನಾ ಪ್ರಕ್ರಿಯೆಯ ನವ ಮತ್ತು ಸಮೃದ್ಧ ಭಾರತವನ್ನು ನಿರ್ಮಿಸುವಲ್ಲಿ ನಿರತವಾಗುವ ಬದಲು ಅದು ರಾಜಕೀಯ ಆಟವಾಗಿದೆ; ಎಂದು ನಾವು ಯೋಚಿಸತೊಡಗಿದೆವು. ಯೋಜನಾ ಆಯೋಗವನ್ನು ಪುನರ್ ಸಂಘಟಿಸಬೇಕೆಂಬ ಬಗ್ಗೆ ಜನಸಂಘವು ಮೊದಲು ಧ್ವನಿ ಎತ್ತಿದ್ದು ಆಮೇಲೆ ಅಂದಾಜು ಸಮಿತಿಯು ತನ್ನ ಇಪ್ಪತ್ತೊಂದನೆ ಸಭೆಯಲ್ಲಿ ಈ ವಿಚಾರವನ್ನು ಗುರುತಿಸಿತು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಶ್ರೀ ಶ್ರೀಮನ್ ನಾರಾಯಣ ಅವರು ಆಯೋಗದ ಸದಸ್ಯರಾಗಿ ನೇಮಕಗೊಂಡರು. ಸರ್ಕಾರ ಸಂಸದೀಯ ಸಮಿತಿಯ ಅಭಿಪ್ರಾಯವನ್ನು ಸಂಪೂರ್ಣವಾಗಿ ಕಡೆಗಣಿಸಿ ಕೇವಲ ರಾಜಕೀಯ ನೇಮಕವನ್ನು ಮಾಡಿತು. ನಾವಾದರೂ ಭಾವಿಸುವುದೆಂದರೆ ಯೋಜನಾ ಆಯೋಗವನ್ನು ಸಲಹಾ ಕಾರ್ಯಗಳನ್ನು ನಿರ್ವಹಿಸುವ ಪರಿಣತ ಮಂಡಲಿಯಾಗಿ ಪುನರ್ ಸಂಘಟಿಸಬೇಕೆಂಬುದು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು ಪುನರ್ ಸಂಘಟಿಸಬೇಕು. ರಾಜಕೀಯ ಪಕ್ಷಗಳು, ವ್ಯಾಪಾರ ಮತ್ತು ವ್ಯವಹಾರ, ಕಾರ್ಮಿಕ ಮತ್ತು ಕೃಷಿ ಕ್ಷೇತ್ರದ ಪ್ರತಿನಿಧಿಗಳು ಈ ಸಂಸ್ಥೆಯಲ್ಲಿರಬೇಕು. ಯೋಜನೆ ರಾಷ್ಟ್ರೀಯವಾಗಿರಬೇಕೆಂದರೆ ಅದರ ರಚನೆ ಮತ್ತು ಕಾರ್ಯಗತಗೊಳಿಸುವಲ್ಲಿ ಯಾವುದೇ ಪಕ್ಷಪಾತದೃಷ್ಟಿ ಇರಬಾರದು. ಸರ್ವಪಕ್ಷ ಮಂಡಲಿಗಳು ಗ್ರಾಮಮಟ್ಟದವರೆಗೂ ಇರಬೇಕು. ಈಗಿನ ಸರ್ಕಾರ ಸಹಕಾರದ ಬಗ್ಗೆ ಮಾತನಾಡುತ್ತದೆಯೇ ಹೊರತು ಅದನ್ನು ಬಯಸುವುದಿಲ್ಲ. ಜನಸಂಘವು ಒಂದು ವರ್ಷದ ಹಿಂದೆ ಸಣ್ಣ ಉಳಿತಾಯ ಯೋಜನೆಗಳ ಬಗ್ಗೆ ಸಹಕಾರ ನೀಡುವ ಆಶಯ ವ್ಯಕ್ತಪಡಿಸಿದಾಗ ಯಾವುದೇ ಹಂತದಲ್ಲೂ ಏನೂ ಸ್ಪಂದನೆ ಬರಲಿಲ್ಲ.

**ವಿವೇಕಯುತ ಬ್ರಿಟಿಷ್ ಉದಾಹರಣೆ**

ಒಂದು ಯೋಜನೆ ಯಶಸ್ವಿಯಾಗಬೇಕಾದರೆ ಅದರ ಬಗ್ಗೆ ಚಿಕಿತ್ಸಕ ದೃಷ್ಟಿ ಇರಬೇಕೆ ಹೊರತು ಆದರ್ಶದ ಪರಿಗಣನೆಗಳಿರಬಾರದು. ಅದು ತನ್ನ ಮಾರ್ಗದಲ್ಲಿ ರಾಷ್ಟ್ರೀಯವಾಗಿರಬೇಕೆ ಹೊರತು ಪಕ್ಷೀಯವಾಗಿರಬಾರದು. ಒಂದು ಯೋಜನೆ ತನ್ನ ಪರಿಮಿತಿಗಳಾಚೆಗೆ ಹೋಗಲಾರದು. ಈ ಪರಿಮಿತಿಗಳನ್ನು ಗುರುತಿಸಬೇಕು.

ನಾವು ಪ್ರಜಾಸತ್ತಾತ್ಮಕ ಯೋಜನೆಯನ್ನು ಅಪೇಕ್ಷಿಸುವುದಾದರೆ ೧೯೪೮ರಲ್ಲಿ ಗ್ರೇಟ್ ಬ್ರಿಟನ್‌ನಲ್ಲಿ ನಾಲ್ಕು ವರ್ಷಗಳ ಯೋಜನೆಯ ಅಂದಾಜಿಗೆ ಬರೆದ ಮೊದಲ ಮಾತಿನ ಈ ಮುಂದಿನ ಭಾಗವನ್ನು ಗಮನಿಸುವುದು ಅಗತ್ಯ.

*ಗ್ರೇಟ್ ಬ್ರಿಟನ್ನಿನ ಆರ್ಥಿಕ ಯೋಜನೆ ಈ ಮುಂದಿನ ಮೂಲಭೂತ ಅಂಶಗಳನ್ನು ಆಧರಿಸಿದೆ. ಇಲ್ಲಿನ ಆರ್ಥಿಕ ವಸ್ತು ಸ್ಥಿತಿ ಅಂದರೆ ಗ್ರೇಟ್ ಬ್ರಿಟನ್ನಿನ ಆರ್ಥಿಕತೆ ಬಹುವಾಗಿ ಅಂತಾರಾಷ್ಟ್ರೀಯ ವ್ಯಾಪಾರವನ್ನು ಅವಲಂಬಿಸಿರುವುದು. ರಾಜಕೀಯ ವಸ್ತು ಸ್ಥಿತಿ ಅಂದರೆ ಅತ್ಯಧಿಕ ಮಟ್ಟದ ವ್ಯಕ್ತಿ ಸ್ವಾತಂತ್ರ್ಯವನ್ನು ಇಟ್ಟುಕೊಂಡು ಪ್ರಜಾಸತ್ತಾತ್ಮಕವಾಗುಳಿದಿರುವ ರಾಷ್ಟ್ರವಾಗಿರುವುದು ಹಾಗೂ ಆಡಳಿತಾತ್ಮಕವಾದ ವಸ್ತು ಸ್ಥಿತಿ ಅಂದರೆ ಯಾವುದೇ ಆರ್ಥಿಕ ಯೋಜನಾ ಸಂಸ್ಥೆ ಭವಿಷ್ಯದ ಆರ್ಥಿಕ ಅಭಿವೃದ್ಧಿ ಕುರಿತು ಬಹು ಸಾಮಾನ್ಯವಾದ ಪ್ರವೃತ್ತಿಯನ್ನುಳಿದು ಹೆಚ್ಚಿನ ಅರಿವು ಹೊಂದಿರಲು ಸಾಧ್ಯವಿಲ್ಲದಿರುವುದು.*

* * * * *

# ಭೂ ಸುಧಾರಣೆಗಳು – ಜ್ಞಾನ ಮತ್ತು ಅಜ್ಞಾನ

ಭೂ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಳಂಬ ಮಾಡಿರುವುದರಿಂದ ಆಹಾರ ಉತ್ಪಾದನೆಗೆ ಅಡ್ಡಿಯಾಗುತ್ತಿದೆ ಎಂಬುದರ ಅರಿವು ಹೆಚ್ಚುತ್ತಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ವಿಷಯದ ಬಗ್ಗೆ ಪರಿಶೀಲಿಸಲು ಒಂದು ಉಪಸಮಿತಿಯನ್ನು ರಚಿಸಿದ್ದು ಅದನ್ನು ತಪ್ಪೆಸಗಿರುವ ಹಾಗೂ ಒಲವು ತೋರದ ರಾಜ್ಯಗಳು ಈ ಬಹು ಮುಖ್ಯ ಕೆಲಸದೆಡೆಗೆ ಗಮನಹರಿಸುವಂತೆ ಒತ್ತಾಯ ಮಾಡಲು ಯೋಚಿಸಲಾಗಿದೆ. ಆಯೋಜನಾ ಮಂಡಳಿಯು ಕೂಡ ಉಳುವವನಿಗೆ ಭೂಮಿಯ ಮೇಲೆ ಒಡೆತನದ ಹಕ್ಕುಗಳು ಬರುವಂತೆ ಒಂದು ಕಾಯಿದೆಯನ್ನು ತರುವಂತೆ ಮತ್ತು ಭೂ ಒಡೆತನಕ್ಕೆ ಒಂದು ಪರಿಮಿತಿ ಹೇರುವಂತೆ ರಾಜ್ಯ ಸರ್ಕಾರಗಳನ್ನು ಒತ್ತಾಯಿಸುತ್ತಾ ಬಂದಿದೆ. ವಿವಿಧ ಶಾಸನ ಸಭೆಗಳಲ್ಲಿ ಹಲವಾರು ವಿಧೇಯಕಗಳು ಅನುಮೋದನೆಗಾಗಿ ಕಾದಿವೆ. ಕೆಲವು ರಾಜ್ಯಗಳಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ರಚಿಸಲಾಗಿದ್ದ ಸಮಿತಿಗಳು ತಮ್ಮ ವರದಿಗಳನ್ನು ಒಪ್ಪಿಸಿವೆ. ಅವುಗಳ ಶಿಫಾರಸುಗಳಿಗೆ ಅನುಗುಣವಾಗಿ ವಿಧೇಯಕಗಳ ಕರಡುಗಳನ್ನು ತಯಾರಿಸಲಾಗುತ್ತಿದೆ.

**ಭೂ ಸುಧಾರಣೆಗಳಿಗೆ ಪ್ರತಿರೋಧ**

ಜಮೀನ್ದಾರಿ ಮತ್ತು ಜಾಗಿರ್ದಾರಿಯ ರದ್ದತಿ ಕ್ರಮಗಳಂತಲ್ಲದೇ ಈ ಸುಧಾರಣೆಗಳು ಬಹು ಸಂಖ್ಯೆಯ ಜನರ ಮೇಲೆ ಪ್ರಭಾವ ಬೀರುತ್ತವೆ. ಹಾಗಾಗಿ ಸಹಜವಾಗೇ ಪ್ರಸ್ತಾಪಿತ ಅಥವಾ ಪ್ರಸ್ತಾಪಿಸಬೇಕಿರುವ ಕ್ರಮಗಳಿಗೆ ಸಮಾಜದ ಕಾಂಗ್ರೆಸ್‌ಯೇತರ ಭಾಗಗಳಿಂದಲ್ಲದೇ ಕಾಂಗ್ರೆಸ್ ಪಕ್ಷದ ಒಳಗೇ ಭಾರಿ ವಿರೋಧವಿದೆ. ವಿಧಾನ ಸಭೆಯ ಹೆಚ್ಚಿನ ಸದಸ್ಯರುಗಳು ಈ ಸುಧಾರಣೆಗಳಿಗೆ ವಿರುದ್ಧವಾಗಿದ್ದಾರೆ. ಉತ್ತರಪ್ರದೇಶ ಈ ಸುಧಾರಣೆಗಳನ್ನು ಜಾರಿಗೆ ತರುವುದಿಲ್ಲ ಎಂದು ನೇರವಾಗಿ ನಿರಾಕರಿಸಿರವುದಾಗಿ ವರದಿಯಾಗಿದೆ. ಬಿಹಾರದಲ್ಲಿ ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ

---

**ಮೂಲ ಆಕರ : ಆರ್ಗನೈಸರ್, ೧೩, ಅಕ್ಟೋಬರ್, ೧೯೫೮**

ಸುಧಾರಣೆಗಳನ್ನು ಕೈಬಿಡಲಾಯಿತು. ಪರಿಣಾಮವಾಗಿ ಅಂದಿನ ಕಂದಾಯ ಸಚಿವರು ರಾಜೀನಾಮೆ ಕೊಡುವುದಾಗಿ ಬೆದರಿಕೆ ಹಾಕಿದರು.

ಇತರ ಪ್ರಾಂತಗಳಲ್ಲಿ ಕೂಡ ಪ್ರಗತಿ ನಿಧಾನ ಗತಿಯಲ್ಲಿದೆ. ಅನೇಕ ಸಚಿವಾಲಯಗಳ ಹಣೆಬರಹ ಅವುಗಳ ಮೇಲೆ ಅವಲಂಬಿಸಿದೆ. ರಾಜ್ಯಗಳ ಮಂತ್ರಿ ಮಂಡಲಗಳು ಇಕ್ಕಟ್ಟಿನಲ್ಲಿವೆ. ಕೇಂದ್ರ ಮತ್ತು ಪಕ್ಷದ ಹೈಕಮಾಂಡ್ ವಿಷಯದ ಬಗ್ಗೆ ಗಮನ ಹರಿಸುವಂತೆ ಅವರನ್ನು ಸತತವಾಗಿ ಒತ್ತಾಯಿಸುತ್ತಾ ಬಂದಿವೆ. ಆದರೂ ಅವರಿಗೆ ಶಾಸಕಾಂಗದಲ್ಲಿರುವ ಅವರ ಸಹೋದ್ಯೋಗಿಗಳಿಂದ ಆವಶ್ಯಕವಾಗಿರುವ ಬೆಂಬಲ ದೊರೆಯುತ್ತಿಲ್ಲ. ಅದು ಭಾಗಶಃ ಸುಧಾರಣೆಗಳ ಬಗ್ಗೆ ಇರುವ ತಪ್ಪು ಗ್ರಹಿಕೆಯಿಂದಾಗಿದ್ದರೆ ಭಾಗಶಃ ಕಾಂಗ್ರೆಸ್ಸಿನ ಶಾಸಕರ ವಸ್ತುನಿಷ್ಠತೆಯ ಕೊರತೆಯಿಂದಾಗಿದೆ. ಸುಧಾರಣೆಗಳಿಂದ ಆಗುವ ಅಂತಿಮ ಅನುಕೂಲಗಳು ಏನೇ ಆಗಿರಲಿ ಕಾಂಗ್ರೆಸ್ಸಿನ ವಿಧಾನಸಭಾ ಸದಸ್ಯರುಗಳು ಮೊದಲನೆಯದಾಗಿ ತಮ್ಮ ಸ್ವಂತ ಹಕ್ಕುಗಳನ್ನೇ ಬಿಟ್ಟುಕೊಡಲು ಸಿದ್ಧರಿಲ್ಲ ಮತ್ತು ಎರಡನೆಯಾಗಿ ಹಳ್ಳಿಗಾಡುಗಳಲ್ಲಿ ಪ್ರಮುಖ ಸ್ಥಾನವನ್ನು ಹೊಂದಿರುವ ವಿಶೇಷತಃ ಚುನಾವಣಾ ಸಮಯದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಮುಖ್ಯಪಾತ್ರವಹಿಸುವ ಜಮೀನ್ದಾರಿ ರೈತವರ್ಗವನ್ನು ಅಸಂತುಷ್ಟಗೊಳಿಸಲು ಸಿದ್ಧರಿಲ್ಲ.

ಯಾರು ಭೂಮಿಯನ್ನು ಉಳದೇ ಅವರಿಗೆ ಸೇರಿದ ಭೂಮಿಯನ್ನು ಉಪಯೋಗಿಸಿದ್ದಕ್ಕಾಗಿ ರೈತರಿಂದ ೧/೬ ರಿಂದ ೧/೨ ಭಾಗದವರೆಗೆ ಗೇಣಿಪಾಲು ಪಡೆಯುತ್ತಾರೋ ಅಂತಹ ಜಮೀನ್ದಾರರನ್ನೂ ಒಳಗೊಂಡಂತೆ ಮಧ್ಯವರ್ತಿಗಳನ್ನು ರದ್ದುಪಡಿಸಲು ಹಾಗೂ ಜಮೀನಿನ ಮೇಲೆ ಭೂ ಪರಿಮಿತಿಯನ್ನು ಗೊತ್ತುಪಡಿಸುವ ಗುರಿ ಹೊಂದಿರುವ ಭೂ ಸುಧಾರಣೆಗಳನ್ನು ಕಮ್ಯುನಿಸಮ್ ಎಂದು ತಪ್ಪಾಗಿ ತಿಳಿದುಕೊಳ್ಳಲಾಗಿದೆ. ಅವುಗಳನ್ನು ವಿರೋಧಿಸುವವರು ಕಮ್ಯುನಿಸಮ್‌ನ್ನು ಎದುರಿಸುವ ದೃಷ್ಟಿಯಿಂದ ಹಾಗೆ ಮಾಡುತ್ತಾರೆ. ದುರಾದೃಷ್ಟವಶಾತ್ ಈ ಸುಧಾರಣೆಗಳನ್ನು ಬೆಂಬಲಿಸುವವರು ಕೂಡ ಈ ಕ್ರಮಗಳು ಕಮ್ಯುನಿಸಮ್‌ನ್ನು ನಿಗ್ರಹಿಸುತ್ತವೆ ಎಂದು ಯೋಚಿಸುತ್ತಾರೆ. ನಿಜವಾಗಿ ಸುಧಾರಣೆಗಳೊಂದಿಗೆ ಕಮ್ಯುನಿಸಮ್‌ಗೆ ಯಾವುದೇ ಸಂಬಂಧವಿಲ್ಲ. ರೈತನ ಪ್ರತ್ಯೇಕ ಅಸ್ತಿತ್ವವನ್ನು ಗುರುತಿಸುವ ಜಮೀನುಗಳ ಯಾವುದೇ ವ್ಯವಸ್ಥೆ ಕಮ್ಯುನಿಸಮ್‌ಗೆ ವಿರುದ್ಧವಾದುದು. ಕಮ್ಯುನಿಸ್ಟರು ರೈತರ ಇವತ್ತಿನ ಪರಿಸ್ಥಿತಿಯನ್ನು ಅವರದೇ ಲಾಭಕ್ಕಾಗಿ ದುರುಪಯೋಗ ಪಡಿಸಿಕೊಳ್ಳುತ್ತಿರಬಹುದು. ಆದರೆ ಅವರು ಮುಕ್ತ ಮತ್ತು ಸ್ವತಂತ್ರ ರೈತವರ್ಗವನ್ನು ಸಹಿಸಿಕೊಳ್ಳಲಾರರು. ಅವರು ಸಮೂಹ ಸ್ವಾಮ್ಯದ ತೋಟ ಜಮೀನುಗಳನ್ನು ಬೆಂಬಲಿಸುತ್ತಾರೆಯೇ ಹೊರತು ವೈಯಕ್ತಿಕ ಸ್ವಾಮ್ಯದವನ್ನಲ್ಲ. ಮುಕ್ತ ಮತ್ತು

ವೈಯಕ್ತಿಕ ರೈತಾಪಿವರ್ಗ ಅವರ ಅತ್ಯಂತ ದೊಡ್ಡ ತಲೇನೋವು. ಈ ಸುಧಾರಣೆಗಳು ಕಮ್ಯುನಿಸಮ್‌ನ ಯುಗವನ್ನು ಸಾರಲಾರವು. ವಾಸ್ತವವಾಗಿ, ಜಪಾನ್ ಅಮೇರಿಕದ ಕೈವಶವಾಗಿದ್ದಾಗಲೇ ತೀವ್ರವಾದ ಭೂ ಸುಧಾರಣೆಗಳು ಅಸ್ತಿತ್ವಕ್ಕೆ ಬಂದದ್ದು. ಅಮೆರಿಕದವರು ಕಮ್ಯುನಿಸ್ಟರನ್ನು ಅನುಕರಣೆ ಮಾಡಿದರು ಎಂದು ಪರಿಗಣಿಸಲು ಕಷ್ಟಸಾಧ್ಯ.

**ಭೂಮಿಯ ಅತ್ಯುತ್ತಮ ಉಪಯೋಗಕ್ಕಾಗಿ ಉಳುವವನೇ ಒಡೆಯನಾಗಬೇಕು**

ಗುತ್ತಿಗೆ ಅವಧಿ ಮತ್ತು ಗೇಣಿಯನ್ನು ನಿಗದಿಪಡಿಸಬೇಕೆಂಬುದು ರೈತರ ದೀರ್ಘ ಕಾಲದ ಬೇಡಿಕೆಗಳು. ಉಳುವವನು ನೆಲದೊಡೆಯನಾಗುವತನಕ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿಯಾಗಲಾರದು. ನಗರದಲ್ಲಿ ವಾಸಿಸುತ್ತಿರುವ ಜಮೀನುದಾರನಿಗೆ ಭೂಮಿಯನ್ನು ಅಭಿವೃದ್ಧಿಪಡಿಸುವ ಆಸಕ್ತಿ ಇರಲಾರದು. ಆತನಿಗೆ ಭೂಮಿಯಿಂದ ಬರುವ ಆದಾಯ ಪೂರಕವಷ್ಟೇ. ತಾನು ಎಷ್ಟು ವರ್ಷಗಳವರೆಗೂ ಈ ಜಮೀನಿನ ಸಾಗುವಳಿ ಮಾಡುತ್ತೇನೆಂದು ಭರವಸೆಯಿಲ್ಲದ ಗೇಣೀದಾರನು ತಾನು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಹೂಡುವುದು ಅಪರೂಪ. ಹಳೆಯ ಬಾವಿಗಳನ್ನು ಯಾಕೆ ದುರಸ್ತು ಮಾಡಿಸದೆ ಪಾಳು ಬಿಡಲಾಗುತ್ತದೆ? ಬಾವಿಗಳನ್ನು ತೋಡಲೆಂದು ತೆಗೆದುಕೊಂಡ ಹಣವನ್ನು ಇತರ ಉದ್ದೇಶಗಳಿಗೆ ಏಕೆ ಬಳಸಲಾಗುತ್ತದೆ? ಇದಕ್ಕೆಲ್ಲ ಕಾರಣವೆಂದರೆ ಭೂ ಒಡೆಯ ಭೂಮಿಯನ್ನು ಉಳುವವನಾಗಿಲ್ಲದಿರುವುದು ನಿಯಮಾನುಸಾರ ಭೂ ಮಾಲೀಕನೆ ಭೂ ಅಭಿವೃದ್ಧಿಗೆ ಸರ್ಕಾರದ ಅನುದಾನಗಳನ್ನು ಪಡೆಯಲು ಹಕ್ಕುಳ್ಳವನಾದರೂ ಅವನು ಬಾವಿ ತೋಡಿಸುವುದರಲ್ಲಾಗಲಿ, ದುರಸ್ತುಗೊಳಿಸಲಾಗಲಿ ಆಸಕ್ತನಾಗಿರುವುದಿಲ್ಲ. ಆಗ ಉಳುವ ರೈತ ವ್ಯವಸಾಯವನ್ನು ಉಪಕಸಬಾಗಿ ಭಾವಿಸಿರುವ ಪ್ರಸಂಗಗಳೂ ಇವೆ. ಏಕೆಂದರೆ ಗೇಣಿದಾರನು ತನ್ನ ಉತ್ಪನ್ನದಲ್ಲಿ ಒಂದು ಭಾಗವನ್ನು ಭೂಒಡೆಯನಿಗೆ ಕೊಟ್ಟ ಅನಂತರ ಅವನಿಗೆ ಉಳಿಯುವ ವರಮಾನದಲ್ಲೇ ಅವನು ಜೀವನ ನಡೆಸುವುದು ಸಾಧ್ಯವಿಲ್ಲ. ಇದರ ಫಲವಾಗಿ ವ್ಯವಸಾಯ ಗಮನಕೊಡುವವರಿಲ್ಲದೇ ಸೊರಗುತ್ತಿದೆ. ವ್ಯವಸಾಯ ಜಮೀನ್ದಾರನ ಅಥವಾ ರೈತನ ಪೂರ್ಣ ನಿರ್ಧಾರಕ್ಕೆ ಒಳಗಾಗಿಲ್ಲ. ಈ ಸನ್ನಿವೇಶ ಬದಲಾಗಬೇಕಾದ ಅಗತ್ಯವಿದೆ.

ಯಾಂತ್ರೀಕೃತ ವ್ಯವಸಾಯಕ್ಕೆ ಸೀಮಿತ ಅವಕಾಶವಿರುವುದರಿಂದ ನಾವು ಉಳುವವನೇ ಭೂಮಿಯ ಒಡೆಯನೆಂಬ ತತ್ವವನ್ನು ಒಪ್ಪಿದರೆ ಜಮೀನಿಗೆ ಹಿಡುವಳಿ ಮಿತಿ ವಿಧಿಸಬೇಕಾಗುತ್ತದೆ. ಉಳುವವನೆಂದರೆ ಅವನು ನೇಗಿಲು ಹಿಡಿದೇ ಉಳಬೇಕೆಂದಿಲ್ಲ; ಆದರೆ ಉಳುವವನು ಬೇಸಾಯದ ಉಸ್ತುವಾರಿ ನೋಡುತ್ತ

ಅದರ ಹೊಣೆ ಹೊರುವವನಾಗಿರಬೇಕು. ವ್ಯವಸಾಯವೊಂದೇ ಅವನ ಕಸಬಾಗದಿದ್ದರೂ ಅದು ಅವನ ಮುಖ್ಯ ಕಸಬಾಗಿರಬೇಕು. ಅಂತಹವನು ವ್ಯವಸಾಯ ಕಾರ್ಮಿಕರ ನೆರವು ಪಡೆಯಬಾರದೆಂದಿಲ್ಲ. ಆಗಲೂ ಅವನು ಒಂದು ಎಕರೆಗೆ ಅಪೇಕ್ಷಿಸುವ ಗರಿಷ್ಠ ಇಳುವರಿಯ ಮಟ್ಟವನ್ನು ಮುಟ್ಟದಿರಬಹುದು. ಭೂಹಿಡುವಳಿ ಮಿತಿಗಿಂತ ಹೆಚ್ಚುವರಿ ಜಮೀನು ಇರುವವರು ತಮ್ಮ ಬಂಡವಾಳ ಮತ್ತು ಕುಶಲತೆಯನ್ನು ವಿಸ್ತಾರ ಪ್ರದೇಶದಲ್ಲಿ ತೊಡಗಿಸದೆ ಪರಿಮಿತ ಜಮೀನಿನ ಮೇಲೆ ನಿಗಾವಹಿಸಿದರೆ ಅಂತಹವರು ಅಧಿಕ ಇಳುವರಿ ಪಡೆಯಬಹುದು. ವಿಸ್ತಾರ ಭೂಮಿಯನ್ನು ಹೊಂದಿರಬೇಕೆಂಬ ಮಾನಸಿಕ ತೃಪ್ತಿಯಿಂದ ಹೊರಬಂದು ತನ್ನ ನಿರ್ವಹಣಾಶಕ್ತಿಗನುಗುಣವಾಗಿ ಭೂಮಿ ಹೊಂದಿದವನು ಹೆಚ್ಚಿನ ಆದಾಯ ಗಳಿಸಬಲ್ಲ. ಕೊನೆಗೂ ನಮಗೆ ಬೇಕಾಗಿರುವುದು ಅಧಿಕ ವ್ಯವಸಾಯೋತ್ಪನ್ನಗಳ ಇಳುವರಿಯೇ ಹೊರತು ವಿಸ್ತಾರವಾದ ಜಮೀನಿನ ಹಿಡುವಳಿಗಳಲ್ಲ.

**ಇಂದಿನ ಅನಿಶ್ಚತತೆ ಹಾನಿಕರವಾದುದು**

ಈ ಸುಧಾರಣೆಗಳನ್ನು ಅನ್ವಯಿಸುವಾಗ ಸನ್ನಿವೇಶದ ವಾಸ್ತವಾಂಶವನ್ನು ವಿವಿಧ ಪ್ರದೇಶಗಳಿಗೆ ಅನ್ವಯಿಸಿ ಪರಿಗಣಿಸಬೇಕು. ಈ ಸುಧಾರಣೆಗಳನ್ನು ಜಾರಿಗೆ ತರುವುದರಿಂದ ವ್ಯಾವಸಾಯಿಕ ಆರ್ಥಿಕತೆಗೆ ಧಕ್ಕೆಯಾಗದಂತೆ ಎಚ್ಚರ ವಹಿಸಬೇಕು. ಮೊದಲನೆಯದಾಗಿ ಅಮಾನತಿನ ಮತ್ತು ಅನಿಶ್ಚಯತೆಯ ಅವಧಿ ಕನಿಷ್ಟ ಪ್ರಮಾಣದಲ್ಲಿರಬೇಕು. ಭೂಸುಧಾರಣೆಗಳನ್ನು ಜಾರಿಗೆ ತರದೆ ಅದರ ಬಗ್ಗೆ ಮಾಡುವ ಘೋಷಣೆ ಒಳ್ಳೆಯದಕ್ಕಿಂತ ಹೆಚ್ಚಾಗಿ ಕೆಟ್ಟದ್ದನ್ನೇ ಮಾಡುತ್ತದೆ.

ಸರ್ಕಾರ ಮುಂದಿನ ಇಪ್ಪತ್ತು ವರ್ಷಗಳ ಕಾಲ ಯಾವುದೇ ಬದಲಾವಣೆಗಳನ್ನು ತರುವುದಿಲ್ಲವೆಂದು ನಿರ್ಧರಿಸಿದರೆ ಭೂಮಿಯ ಮೇಲೆ ಹೂಡಿಕೆ ಹೆಚ್ಚಿ ಉತ್ಪಾದನೆಯೂ ಅಧಿಕಗೊಳ್ಳುತ್ತದೆ. ಅಂತಹ ಸಂದರ್ಭದಲ್ಲಿ ಮಾರುಕಟ್ಟೆ ಪರಿಸ್ಥಿತಿಗಳು ಮತ್ತು ರೈತರು ಅಗತ್ಯ ಹೊಂದಾಣಿಕೆಗಳನ್ನು ಮಾಡಿಕೊಳ್ಳುತ್ತಾರೆ. ಆದರೆ ಒಮ್ಮೆ ಸರ್ಕಾರ ಬದಲಾವಣೆಗಳನ್ನು ತರುವುದು ಅಗತ್ಯವೆಂದು ಭಾವಿಸುವುದಾದರೆ ಆದಷ್ಟು ಬೇಗ ಒಂದು ಸಮತೋಲನ ಸ್ಥಿತಿಯನ್ನು ಸ್ಥಾಪಿಸುವುದು ಸೂಕ್ತ.

ರೈತರಿಗೆ ಆಸ್ತಿಗಳ ಹಕ್ಕುಗಳು ಒದಗಿದರೆ ಅದನ್ನನುಸರಿಸಿ ಬರುವ ಸಾಲ ಮತ್ತು ಇತರ ಬೇಸಾಯಗಾರನ ಅಗತ್ಯಗಳೂ ಪೂರೈಕೆಗೊಳ್ಳುತ್ತವೆ. ಕೆಲವು ಕಡೆ ಭೂಮಾಲೀಕ ಬೇಸಾಯದಾರನಿಗೆ ಯಾವ ಸೌಲಭ್ಯವನ್ನೂ ಒದಗಿಸದಿರುವ ಸಂದರ್ಭಗಳಿದ್ದರೆ ಇನ್ನು ಕೆಲವು ಕಡೆ ಬೀಜ ಗೊಬ್ಬರ ಎತ್ತುಗಳು ಮತ್ತಿತರ ಸಲಕರಣೆಗಳನ್ನು ಒದಗಿಸಲಾಗುತ್ತಿದೆ. ರೈತ ಕೇವಲ ಅವನು ಉಳುತ್ತಿರುವ

ಜಮೀನಿನೊಂದಿಗೆ ಮಾತ್ರ ಉಳಿಯುವಂತಾಗದಿರಲಿ. ಅವನಿಗೆ ಅದನ್ನು ಸಾಗುವಳಿ ಮಾಡಲು ಸಾಧನಗಳು ಲಭ್ಯವಿರುವಂತಿರಬೇಕು. ಆಗ ಭೂಮಿಯ ವಾಸ್ತವ ಬೇಸಾಯ ಮಾಡದಿದ್ದರೂ ಗ್ರಾಮವನ್ನು ಬಿಡದಿರುವ ಜನರೂ ಇರುತ್ತಾರೆ. ಅವರು ಹಳ್ಳಿಯಲ್ಲೇ ಇದ್ದುಕೊಂಡು ಅದರ ಗತಿಯೊಂದಿಗೇ ಸಾಗುತ್ತಾರೆ. ಅದರ ಹಾಲಿ ಸ್ಥಿತಿಯಿಂದ ಬದಲಾಯಿಸುವ ಯಾವುದೇ ಪ್ರಯತ್ನವೂ ಸಾಮಾಜಿಕ ಮತ್ತಿತರ ಸಮಸ್ಯೆಗಳನ್ನು ಸೃಷ್ಟಿಸಬಹುದು. ಭೂಮಿಯ ಸಾಗುವಳಿಗಾಗಿ ಅವರಿಗೆ ಎಲ್ಲ ಸೂಕ್ತ ಅವಕಾಶವನ್ನು ಒದಗಿಸಬೇಕು.

**ಭೂಮಿಯ ಮಿತಿ ಎಷ್ಟಿರಬೇಕು?**

ಭೂಮಿಯ ಮಿತಿ ಎಷ್ಟಿರಬೇಕು ಎಂಬುದು ಸಹ ಒಂದು ಚರ್ಚಾಸ್ಪದ ವಿಷಯ. ಮಿತಿ ನಿಗದಿ ಮಾಡುವಲ್ಲಿ ಯಾವುದೇ ವೈಜ್ಞಾನಿಕ ಸೂತ್ರ ಇರಲು ಸಾಧ್ಯವಿಲ್ಲ. ಅದನ್ನು ಸರಾಸಗಟಾಗಿ ನಿರ್ಧರಿಸಬೇಕಾಗುತ್ತದೆ. ಆದರೆ ಈ ಸಾರಾಸಗಟು ನಿಗದಿ ವ್ಯಕ್ತಿಗಳ ಮನಸ್ಸಿಗೆ ಬಂದಂತೆ ಇರಬಾರದು. ಇಂತಹ ಪ್ರಕ್ರಿಯೆಗೆ ಸಾಮಾಜಿಕ ಸನ್ನಿವೇಶ ಮತ್ತು ಗುರಿಗಳನ್ನು ದೃಷ್ಟಿಯಲ್ಲಿರಿಸಿಕೊಳ್ಳಬೇಕು. ನಾವು ಸಮಾಜದಲ್ಲಿ ಇಂದು ಅಥವಾ ಮುಂದೆ ಜಾರಿಗೆ ತರಬೇಕೆಂದಿರುವ ಸಾಮಾಜಿಕ ನ್ಯಾಯಕ್ಕೆ ಹೊಂದಿಕೆಯಾಗದಿರುವ ಭೂಮಿತಿಯನ್ನು ಅನ್ವಯಿಸಬಾರದು. ಕೆಲವರು ಇತರ ಎಲ್ಲ ತರಹದ ಆಸ್ತಿಗೆ ಮಿತಿ ಹಾಕುವವರೆಗೆ ಭೂಮಿತಿ ವಿಧಿಸುವುದನ್ನು ಮುಂದೂಡಬೇಕೆಂದು ಹೇಳುತ್ತಿರುವುದು ಅಷ್ಟು ಸಮರ್ಥನೀಯವಲ್ಲ. ಆದರೆ ವ್ಯವಸಾಯೇತರ ಆದಾಯಗಳಲ್ಲಿ ಹೆಚ್ಚಿನ ಅಸಮಾನತೆಗಳು ಕಂಡುಬಂದಾಗ ಇವರು ಎತ್ತುವ ನಮ್ಮ ಸದುದ್ದೇಶವನ್ನು ಪೂರೈಸುವ ಪ್ರಶ್ನೆಗಳು ಅರ್ಥಪೂರ್ಣವಾಗಿರುತ್ತವೆ. ಯೋಜನಾ ಮಂಡಳಿಯು ಕುಟುಂಬದ ಹಿಡುವಳಿಗಳ ಆದಾಯವನ್ನು ವಾರ್ಷಿಕ ೩೬೦೦ ರೂ.ಗಳೆಂದು ನಿಗದಿ ಮಾಡಲು ಸಲಹೆ ಮಾಡಿದೆ.

ವಾರ್ಷಿಕ ೫೪೦೦ ರೂಗಳ ಆದಾಯದ ಪರಿಮಿತಿಯನ್ನು ಶಿಫಾರಸ್ಸು ಮಾಡಿರುವ ಮೈಸೂರಿನ ಜತ್ತಿ ಸಮಿತಿಯೊಂದನ್ನು ಹೊರತುಪಡಿಸಿ, ಇತರ ಎಲ್ಲಾ ರಾಜ್ಯಗಳು ಭೂಮಿತಿಯನ್ನು ಕಡಿಮೆ ಮಟ್ಟದಲ್ಲಿ ನಿಗದಿಪಡಿಸಲು ಉದ್ದೇಶಿಸಿವೆ. ರಾಜಸ್ಥಾನದ ಸಮಿತಿ ಅದನ್ನು ೨೪೦೦ ರೂಪಾಯಿಯಷ್ಟು ಕಡಿಮೆ ಮೊತ್ತಕ್ಕೆ ನಿಗದಿಮಾಡಿದೆ. ಕೇರಳ ಆದಾಯವನ್ನು ಪರಿಗಣಿಸಿಲ್ಲ. ಆದರೆ ಏಕರೀತಿಯಲ್ಲಿ ಅದನ್ನು ೧೫ ಎಕರೆಗೆ ನಿಗದಿಪಡಿಸಿದೆ. ಇಷ್ಟು ಕಡಿಮೆ ಪರಿಮಿತಿಗಳನ್ನು ಸಮರ್ಥಿಸಿಕೊಳ್ಳಲು ನಮಗೆ ಸಾಧ್ಯವಿಲ್ಲ. ನಗರಗಳಲ್ಲಿನ ಆದಾಯಗಳನ್ನು ವರ್ಷಕ್ಕೆ

ಗರಿಷ್ಠ ಮಟ್ಟ ೨೪,೦೦೦ ರೂಗಳೆಂದು ದೃಷ್ಟಿಯಲ್ಲಿ ಇಟ್ಟುಕೊಂಡಿದ್ದೇವೆ. ಹೆಚ್ಚು ವೆಚ್ಚ ತಗುಲದ ಹಲವಾರು ಸೌಲಭ್ಯಗಳಿಗೆ ನಾವು ಸ್ವಲ್ಪ ಅವಕಾಶಮಾಡಿಕೊಟ್ಟರೂ ವಾರ್ಷಿಕ ೧೦,೦೦೦/– ರೂಪಾಯಿಗಳಿಗಿಂತ ಕಡಿಮೆ ಮಟ್ಟಕ್ಕೆ ಪರಿಮಿತಿಯನ್ನು ಇಳಿಸಲಾರೆವು.

ಈಗಾಗಲೇ ಹಳ್ಳಿಗಳ ಮತ್ತು ಪಟ್ಟಣಗಳ ಜನರ ಜೀವನ ಮಟ್ಟದಲ್ಲಿ ಬಹಳ ವ್ಯತ್ಯಾಸವಿದೆ. ಜಮೀನುಗಳಲ್ಲಿ ಕೆಲಸಮಾಡುವ ಕೂಲಿಯಾಳಿನ ವೇತನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕನ ಶೇಕಡಾ ೪೩ ರಷ್ಟಿದೆ. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾಗಳಲ್ಲಿ ಅನುಕ್ರಮವಾಗಿ ಶೇಕಡಾ ೮೧ ಹಾಗು ಶೇಕಡಾ ೮೪ ರಷ್ಟಿದೆ. ಎರಡೂ ವರ್ಗಗಳ ಆದಾಯವನ್ನು ಹೋಲಿಸಿ ನೋಡಿದರೆ ವ್ಯತ್ಯಾಸ ಇನ್ನೂ ಬಹಳಷ್ಟು ಹೆಚ್ಚು. ವ್ಯವಸಾಯದಲ್ಲಿ ಯಾವುದೇ ಅಭಿವೃದ್ಧಿಯಾಗಬೇಕೆಂದು ಬಯಸಿದರೆ ರೈತ ಚೆನ್ನಾಗಿ ಬದುಕಲು ಆಗುವಷ್ಟನ್ನೇ ಮಾತ್ರ ಉತ್ಪಾದಿಸಬಾರದು, ಅವನು ಹಣ ಉಳಿಸಿ ಬಂಡವಾಳವನ್ನು ಹೂಡಲು ಆಗುವಷ್ಟನ್ನು ಉತ್ಪಾದಿಸಬೇಕು. ೩೬೦೦ ರೂ.ಗಳು ಯೋಜನಾ ಆಯೋಗ ಅವಕಾಶ ಮಾಡಿಕೊಡಬಹುದಾದ ಅತ್ಯಂತ ಹೆಚ್ಚಿನ ಮೊತ್ತವಾಗಿದ್ದರೆ, ಸರಾಸರಿ ಎಷ್ಟಾಗಿರಬಹುದು? ಅಂತಹ ಸಂದರ್ಭಗಳಲ್ಲಿ ಅತ್ಯಂತ ಶ್ರೀಮಂತ ರೈತನಿಗೇ ಆಗಲಿ ಉಳಿತಾಯಮಾಡಿ ಬಂಡವಾಳ ಹೂಡಲು ಸಾಧ್ಯವಾಗುವುದೇ? ಅದು ಅವರು ಸಾಲ ಮತ್ತು ಬಂಡವಾಳ ಹೂಡಿಕೆಯ ಹಣಕ್ಕಾಗಿ ಸರ್ಕಾರ ಮತ್ತು ನಗರದ ಸಂಸ್ಥೆಗಳ ಮೇಲೆ ಅವಲಂಬಿತವಾಗುವಂತೆ ಮಾಡಬಹುದು, ಮತ್ತು ಕೊನೆಗೆ ಭೂಮಿ ಮೇಲಿನ ತಮ್ಮ ಹಕ್ಕನ್ನು ಬಿಟ್ಟುಕೊಡುವುದಕ್ಕೆ ಕಾರಣವಾಗಬಹುದು. ಅದು ಸಮಷ್ಟೀಕರಣಕ್ಕೆ ದಾರಿ ಮಾಡಿಕೊಡುವುದಿಲ್ಲವೇ?

**ಲಾಭದಾಯಕವಲ್ಲದ ಹಿಡುವಳಿಗಳನ್ನು ಲಾಭದಾಯಕವನ್ನಾಗಿ ಮಾಡಬೇಕು**

ಭೂಮಿತಿಯನ್ನು ಜಾರಿಗೆ ತಂದ ನಂತರ ಭೂಮಿಯ ಮರುಹಂಚಿಕೆಯ ಪ್ರಶ್ನೆಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಅದು ಅನೇಕ ನಷ್ಟಕ್ಕೆ ಒಳಗಾಗಬಹುದಾದ ಘಟಕಗಳಾಗಿ ಪರಿಣಮಿಸಿದರೆ, ಪರಿಣಾಮವಾಗಿ ಕೃಷಿ ಉತ್ಪನ್ನಗಳು ಮತ್ತು ಜೀವನದ ಮಟ್ಟ ಕೆಳಕ್ಕೆ ಕುಸಿಯಬಹುದು. ಭೂಮಿಯನ್ನು ಹಳ್ಳಿಗಳಲ್ಲಿ ಉಳುಮೆ ಮಾಡುವ ರೈತರಿಗೆ ಹಂಚಬೇಕು/ವಿತರಿಸಬೇಕು. ಅವರ ಬಳಿ ಆವಶ್ಯಕವಾದ ಸೌಲಭ್ಯಗಳಿರಬೇಕು ಅಥವಾ ಅವರಿಗೆ ಅವುಗಳನ್ನು ಒದಗಿಸಿಕೊಡಬೇಕು. ಮೊದಲ ಆದ್ಯತೆಯನ್ನು ನಷ್ಟದಲ್ಲಿರುವ ಹಿಡುವಳಿಗಳನ್ನು ಲಾಭದಾಯಕವನ್ನಾಗಿ ಮಾಡುವುದಕ್ಕೆ ಕೊಡಬೇಕು. ಇಲ್ಲಿ ಸಹಜವಾಗಿ ರಾಜಕೀಯ ಮತ್ತು ಸಾಮಾಜಿಕ ಗುರಿಗಳು ಆರ್ಥಿಕ ಗುರಿಗಳಿಗೆ ವಿರೋಧವಾಗಹುದು.

ಘೋಷಣೆಗಳನ್ನು ಮಾಡಿದ ರೀತಿಯಲ್ಲಿ ಸುಧಾರಣೆಗಳನ್ನು ಜಾರಿಗೆ ತರುವುದು ಕೂಡ ಆವಶ್ಯಕ. ಜನಸಂಖ್ಯೆಯ ದಟ್ಟಣೆ ಮತ್ತು ಕೃಷಿ ಭೂಮಿಯ ಲಭ್ಯತೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಬೇರೆ ಬೇರೆಯಾಗಿದೆ. ವ್ಯವಸಾಯ ಯೋಗ್ಯ ಭೂಮಿಯು ಹೇರಳವಾಗಿರುವ ಪ್ರದೇಶಗಳಲ್ಲಿ ಈ ಸುಧಾರಣೆಗಳನ್ನು ಜಾರಿಗೆ ತಂದರೆ ಯಾವುದೇ ಪ್ರಯೋಜನ ಉಂಟಾಗುವುದಿಲ್ಲ. ಅದು ಕುದುರೆಯ ಮುಂದೆ ಗಾಡಿ ಕಟ್ಟಿದಂತಾಗುತ್ತದೆ. ಭೂ ಸುಧಾರಣೆಗಳನ್ನು ಮುಂದೂಡಬೇಕು ಎಂದು ಇದರ ಅರ್ಥವಲ್ಲ. ಆದರೆ ವಿವಿಧ ಸಂದರ್ಭಗಳಲ್ಲಿ ನಾವು ಅವುಗಳನ್ನು ಕಾರ್ಯರೂಪಕ್ಕೆ ತರುವಾಗ ಸೈದ್ಧಾಂತಿಕ ಪರಿಣಾಮಗಳಿಗಿಂತ ವ್ಯಾವಹಾರಿಕ ಸಿದ್ಧಾಂತಗಳು ನಮಗೆ ಮಾರ್ಗದರ್ಶನ ನೀಡಬೇಕು.

* * * * *

# ನೆಹರೂ ಅವರ ಸಿಐಡಿ ಅಥವಾ ಹಿಟ್ಲರನ ಗೆಸ್ತಪೊ? ರಾಂದಾ ಅವರ ಬಂಧನ

ಕಳೆದ ಅಕ್ಟೋಬರ್ ಅಂತ್ಯಭಾಗದಲ್ಲಿ ಪಶ್ಚಿಮ ಬಂಗಾಳ ಜನಸಂಘದ ಸಂಘಟನಾ ಕಾರ್ಯದರ್ಶಿಯಾದ ಶ್ರೀರಾಂಪ್ರಸಾದ್‌ದಾಸ್ ಅವರನ್ನು ಬಂಧಿಸಲಾಯಿತು. ಅವರ ಏಕಮಾತ್ರ ಅಪರಾಧವೆಂದರೆ ಜನಸಂಘದ ನಿರ್ಣಯದಲ್ಲಿ ದೃಢವಿಶ್ವಾಸ ಹೊಂದಿ ಕುಖ್ಯಾತ ನೆಹರೂ–ನೂನ್ ಒಪ್ಪಂದಕ್ಕೆ ವಿರುದ್ಧವಾದ ಜನಾಭಿಪ್ರಾಯವನ್ನು ಕ್ರೋಢೀಕರಿಸುತ್ತಿದ್ದುದು. ಅವರು ಗಡಿ ಪ್ರದೇಶದಲ್ಲಿ ಪ್ರವಾಸ ಮಾಡಿದರು; ಅಲ್ಲಿನ ಜನರು ಕಂಗಾಲಾಗಿರುವುದನ್ನು ಕಂಡರು; ಏಕೆಂದರೆ ಆ ಪ್ರದೇಶವನ್ನು ಪಾಕಿಸ್ತಾನಕ್ಕೆ ವರ್ಗಾಯಿಸಲಾಗುವುದೆಂಬ ವದಂತಿಯೊಂದನ್ನು ಪಾಕಿಸ್ತಾನದ ಪರವಾದ ಶಕ್ತಿಗಳು ಆ ಪ್ರದೇಶದುದ್ದಕ್ಕೂ ತೇಲಿಬಿಟ್ಟಿದ್ದವು. ಕೆಲವು ಭಾಗಗಳಲ್ಲಿ ಪಾಕಿಸ್ತಾನಿ ಧ್ವಜಗಳನ್ನು ಕೂಡ ಹಾರಿಸಲಾಗಿತ್ತು. ಸತ್ಯ ಸಂಗತಿಯನ್ನು ತಿಳಿಸುವ ಮೂಲಕ ಆ ಜನರ ಆತಂಕಗಳನ್ನು ದೂರಮಾಡಬೇಕಾದ ಹಾಗೂ ಭಾರತದ ಕೆಲವು ಪ್ರದೇಶಗಳನ್ನು ಪಾಕಿಸ್ತಾನಕ್ಕೆ ವರ್ಗಾಯಿಸಲು ಪಂಡಿತ್ ನೆಹರೂ ಒಪ್ಪಬಹುದಾದ ಸಂದರ್ಭಗಳಲ್ಲಿಯೂ ಅವರ ಹಿತಾಸಕ್ತಿಗಳನ್ನು ಕಾಪಾಡುವ ಭರವಸೆಯನ್ನು ಕೂಡ ಆ ಜನರಿಗೆ ನೀಡಬೇಕಾದ ಆವಶ್ಯಕತೆ ಇತ್ತು. ರಾಂದಾ ಅವರು–ಜನರು ಪ್ರೀತಿಯಿಂದ ಕರೆಯುತ್ತಿದ್ದುದು ಹಾಗೆ–ತಮ್ಮ ಕರ್ತವ್ಯವನ್ನು ಮಾಡಿ ಅದಕ್ಕಾಗಿ ನ್ಯಾಯಸಮ್ಮತವಾದ ಶಿಕ್ಷೆಯನ್ನೂ ಅನುಭವಿಸಿದರು; ಏಕೆಂದರೆ ನ್ಯಾಯಸಮ್ಮತವಲ್ಲದ ದಬ್ಬಾಳಿಕೆ ಮನೋಭಾವದ ಮತ್ತು ಭ್ರಷ್ಟವಾದ ಆಡಳಿತವಿರುವಾಗ ಒಬ್ಬ ತನ್ನ ಕರ್ತವ್ಯವನ್ನು ನಿರ್ವಹಿಸುವುದಕ್ಕಿಂತ ಹೆಚ್ಚು ಅಪರಾಧ ಇನ್ನೊಂದಿರಲಿಲ್ಲ.

ಆದರೆ ಅವರ ಪ್ರಯತ್ನಗಳು ವ್ಯರ್ಥವಾಗಲಿಲ್ಲ. ನೆಹರೂ–ನೂನ್ ಒಪ್ಪಂದದ ಮಾತುಕತೆಗಳಲ್ಲಿ ಭಾರತದ ಹಿತಾಸಕ್ತಿಗಳನ್ನು ಕಾಪಾಡದೆ ನೆಹರೂ ಅವರು ವಿಪರೀತವಾಗಿ ವಂಚಿಸಿದರೆಂಬುದನ್ನು ಈಗ ಪಶ್ಚಿಮ ಬಂಗಾಳದಲ್ಲಿ ಪ್ರತಿಯೊಬ್ಬನೂ ಹೇಳುತ್ತಾನೆ. ಬಹುಪಾಲು ಪತ್ರಿಕೆಗಳು ತಮ್ಮ ಸುದ್ದಿಗಳಲ್ಲಿ, ಟಿಪ್ಪಣಿಗಳಲ್ಲಿ ಮತ್ತು ಮುಖ್ಯ ಲೇಖನಗಳಲ್ಲಿ ಇದೇ ಅಭಿಪ್ರಾಯಕ್ಕೆ ಅಭಿವ್ಯಕ್ತಿ ನೀಡಿವೆ. ಸಾರ್ವಜನಿಕ

---

**ಮೂಲ ಆಕರ : ಆರ್ಗನೈಸರ್, ೦೯, ಫೆಬ್ರವರಿ, ೧೯೫೯**

ಅಭಿಪ್ರಾಯದ ಒತ್ತಡ ಎಷ್ಟು ಪ್ರಬಲವಾಗಿ ಬೆಳೆಯಿತೆಂದರೆ ಕೊನೆಗೆ ಪಶ್ಚಿಮ ಬಂಗಾಳದ ವಿಧಾನಸಭೆ ಮತ್ತು ವಿಧಾನಪರಿಷತ್ತುಗಳೆರಡೂ ಸರ್ವಾನುಮತದಿಂದ ಪಶ್ಚಿಮಬಂಗಾಳದ ಯಾವ ಭಾಗವನ್ನೂ ಪಾಕಿಸ್ತಾನಕ್ಕೆ ವರ್ಗಾಯಿಸಕೂಡದೆಂಬ ಹಕ್ಕೊತ್ತಾಯ ಮಾಡಬೇಕಾಯಿತು. ಪಶ್ಚಿಮ ಬಂಗಾಳದ ಸರ್ಕಾರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಇದ್ದುದಕ್ಕೆ ಡಾ. ಬಿ. ಸಿ. ರಾಯ್ ಪ್ರತಿಭಟಿಸಿದ್ದಾರೆ. ಒಪ್ಪಂದದಲ್ಲಿ ಸೂಚಿಸಲಾದ ಪ್ರದೇಶವನ್ನು ವರ್ಗಾಯಿಸುವುದಕ್ಕೆ ಪಶ್ಚಿಮ ಬಂಗಾಳ ಸರ್ಕಾರವನ್ನು ಮನವೊಲಿಸಲು ಕೇಂದ್ರ ಕಾನೂನು ಸಚಿವರಾದ ಶ್ರೀ ಎ. ಕೆ. ಸೇನ್ ಅವರಿಗೆ ಸಾಧ್ಯವಾಗಲಿಲ್ಲ.

ಪಂಡಿತ್ ನೆಹರೂ ಅವರ ಮಾತನ್ನು ಗೌರವಿಸಬೇಕು ಎಂದು ಕಾನೂನು ಸಚಿವರು ಹೇಳುತ್ತಾರೆ. ಆದರೆ ಒಪ್ಪಂದಕ್ಕೆ ಸಹಿ ಹಾಕಿದ ಕ್ಷಣದಿಂದ ಪರಿಸ್ಥಿತಿಗಳು ಬದಲಾಗಿಹೋಗಿವೆ ಎನ್ನುವುದನ್ನು ಅವರು ಮರೆಯುತ್ತಾರೆ. ಈಗೇನೂ ನೂನ್ ಪಾಕಿಸ್ತಾನದ ಪ್ರಧಾನ ಮಂತ್ರಿಗಳಲ್ಲ. ಭಾರತದ ಮೇಲಿನ ದ್ವೇಷವನ್ನು ಹೊಸ ಆಡಳಿತವು ಬಹಿರಂಗವಾಗಿಯೆ ವ್ಯಕ್ತಪಡಿಸಿದೆ. ಬದಲಾದ ಪರಿಸ್ಥಿತಿಯಲ್ಲಿ ಕಾಶ್ಮೀರದಲ್ಲಿ ಜನಾಭಿಪ್ರಾಯವನ್ನು ಕುರಿತ ಪಂಡಿತ್ ನೆಹರೂ ಅವರ ಘೋಷಣೆಯನ್ನು ಅಕ್ಷರಶಃ ತೆಗೆದುಕೊಳ್ಳಬಾರದೆಂದು ನಾವು ನ್ಯಾಯಸಮ್ಮತವಾಗಿ ಭಾವಿಸುವುದಾದರೆ, ಪ್ರಸ್ತುತ ಸನ್ನಿವೇಶದಲ್ಲಿ ಕೂಡ ಪಾಕಿಸ್ತಾನವು ತನ್ನ ಬದ್ಧತೆಯ ಕರ್ತವ್ಯಗಳನ್ನು ಗೌರವಿಸಲು ಸಿದ್ಧವಿಲ್ಲದಿರುವಾಗ ನಾವು ಒಪ್ಪಂದದ ನಮ್ಮ ಪಾಲಿನ ಕೆಲಸವನ್ನು ಅನುಷ್ಠಾನಗೊಳಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೆ ಪಂಡಿತ್ ನೆಹರೂ ಯಾರ ಸಲಹೆಯನ್ನೂ ಕೇಳಲು ಸಿದ್ಧರಿಲ್ಲ. ಎಲ್ಲ ಪ್ರತಿಭಟನೆಗಳನ್ನೂ ಅವರು ಉಪೇಕ್ಷಿಸಲು ನಿರ್ಧರಿಸಿದಂತೆ ಕಾಣುತ್ತದೆ. ಜನಸಂಘದ ಪ್ರತಿಭಟನೆಗಳನ್ನು ಅವರು ಕೋಮುವಾದಿ ಪಕ್ಷವೊಂದರ ಅಸಂಬದ್ಧ ಪ್ರಲಾಪಗಳೆಂದು ಬಿಟ್ಟುಬಿಡಬಹುದು. ಆದರೆ ಪಶ್ಚಿಮಬಂಗಾಳದ ವಿಧಾನಮಂಡಲದ ಸರ್ವಾನುಮತದ ನಿರ್ಣಯದ ಗತಿ ಏನು? ಪ್ರಧಾನ ಮಂತ್ರಿಗಳು ಅದಕ್ಕೆ ಗಮನಕೊಡದೆ ಹೋದರೆ ಇಡೀ ಸಂದರ್ಭವು ಬಂಗಾಳದ ಹಿತಾಸಕ್ತಿಗಳ ಬಗ್ಗೆ ಕಾಂಗ್ರೆಸ್ಸಿನ ಉದ್ದೇಶಪೂರ್ವಕ ಉಪೇಕ್ಷೆ ಎಂದು ವ್ಯಾಖ್ಯಾನಿಸಬೇಕಾಗುತ್ತದೆ. ಮುಸ್ಲಿಮರಲ್ಲಿ ಇರುವ ಪಾಕಿಸ್ತಾನದ ಪರವಾದ ಗುಂಪುಗಳ ಮತ ಬೆಂಬಲವನ್ನು ಕಳೆದುಕೊಳ್ಳುವ ಭಯದಿಂದಾಗಿ ವ್ಯಕ್ತಿಗಳೂ ಪಕ್ಷಗಳೂ ಭಾರತ ಸರ್ಕಾರವು ಪಾಕಿಸ್ತಾನದ ಬಗ್ಗೆ ತೋರುವ ತುಷ್ಟೀಕರಣ ನೀತಿಯನ್ನು ವಿರೋಧಿಸುವ ಧೈರ್ಯ ತೋರುವುದಿಲ್ಲ; ಅವರಾಗಲೇ ಕೇಂದ್ರ ಮತ್ತು ಪಶ್ಚಿಮ ಬಂಗಾಳಗಳ ನಡುವೆ ಬೆಳೆಯುತ್ತಿರುವ ಸ್ನೇಹಭಂಗದ ಕುರುಹೆಂದು ಈ ಇಡೀ ವಿದ್ಯಮಾನವನ್ನು ಅರ್ಥೈಸಲು ಪ್ರಾರಂಭ ಮಾಡಿದ್ದಾರೆ. ರಜು

ಸಮಾಜವಾದಿಗಳ ಮುಖವಾಣಿಯಾದ ಮರಲ್ ತನ್ನ ನೀರ್–ಕ್ಷೀರ್–ವಿವೇಕ್‌ದಲ್ಲಿ ಇದನ್ನು ವಿಶಿಷ್ಟ ರೀತಿಯಲ್ಲಿ ಪ್ರಯತ್ನಿಸಿದೆ. ವಿಘಟನೆಯನ್ನು ಕೆರಳಿಸುವುದಕ್ಕಾಗಿಯೆ ಅವಕಾಶಗಳನ್ನು ಯಾವಾಗಲೂ ಅರಸುತ್ತಿರುವ ಕಮ್ಯುನಿಸ್ಟರು ಈ ಬಿರುಕನ್ನು ಹಿಗ್ಗಿಸಲು ಕೂಡ ಪ್ರಯತ್ನ ಮಾಡುವವರೇ. ಇಡೀ ಪರಿಕಲ್ಪನೆಯನ್ನೇ ಪಂಡಿತ್ ನೆಹರೂ ಕೈಬಿಡುವುದನ್ನು ಮುತ್ಸದ್ದಿತನವು ಬಯಸುವುದು. ಬೆರುಬಾರಿ ಒಕ್ಕೂಟ ಪ್ರದೇಶವನ್ನು ಪಾಕಿಸ್ತಾನಕ್ಕೆ ವರ್ಗಾಯಿಸುವ ಯೋಜಿತ ಮಸೂದೆಯನ್ನು ತಾನೇ ಮುಂದಾಗುವ ಬದಲು ಪಾಕಿಸ್ತಾನವು ಅಕ್ರಮವಾಗಿ ವಶಪಡಿಸಿಕೊಂಡಿರುವ ತಕರ್ ಗ್ರಾಮ್ ಮತ್ತು ಲಖಿಂಪುರ್ ಪ್ರದೇಶಗಳನ್ನು ಮರಳಿ ಪಡೆಯಲು ಸರ್ಕಾರದ ಆಡಳಿತ ಯಂತ್ರವು ಮುಂದಾಗಬೇಕು.

ರಾಂದಾ ಅವರು ತಮ್ಮ ಬಂಧನಕ್ಕೆ ಮೊದಲು ಹಾಗೂ ಜನಸಂಘವು ಕೆಲವು ತಿಂಗಳುಗಳ ಹಿಂದೆಯೇ ತಿಳಿಸಿದ್ದನ್ನೇ ಈಗ ಇಡೀ ಪಶ್ಚಿಮ ಬಂಗಾಳ, ಹಾಗೆಯೇ ಅಸ್ಸಾಮ್ ಮತ್ತು ತ್ರಿಪುರ ಹೇಳುತ್ತವೆ. ಆದರೆ ರಾಂದಾ ಅವರು ಆಗಲೂ ಬಂಧನದಲ್ಲಿದ್ದರು. ಪ್ರಾಯಃ ಆತ ಮಾಡಿದ ತಪ್ಪೆಂದರೆ ಸಮಸ್ಯೆಯನ್ನು ಪೂರ್ವಭಾವಿಯಾಗಿಯೇ ನಿರ್ಣಯಿಸಿದ್ದು. ತಮ್ಮ ಮಾತೊಂದನ್ನೇ ಕೇಳಬಹುದೆಂದು ರಾಂದಾ ಅವರ ಬಾಯಿ ಮುಚ್ಚಿಸಲು ಪಶ್ಚಿಮ ಬಂಗಾಳ ಸರ್ಕಾರವು ಮಾಡಿದ ಈ ಕೃತ್ಯವು ಕುಚೋದ್ಯವಲ್ಲವೆ?

ಈ ಕ್ರಮವನ್ನು ತೆಗೆದುಕೊಳ್ಳುವಲ್ಲಿ ಪಶ್ಚಿಮಬಂಗಾಳ ಸರ್ಕಾರದ ಉದ್ದೇಶ ಏನೇ ಆಗಿರಲಿ, ರಾಂದಾ ಅವರಿಗೆ ಒದಗಿಸಿದ ಬಂಧನದ ಆಧಾರಗಳು ಎನ್ನುವುದು ಪಶ್ಚಿಮ ಬಂಗಾಳದ ಪೊಲೀಸರು ಹಿಟ್ಲರನ ಗೆಸ್ತಪೊ ಮತ್ತು ಸ್ಟಾಲಿನ್ನಿನ ಎನ್.ಕೆ.ವಿ.ಡಿ. ಜೊತೆ ಪೈಪೋಟಿ ನಡೆಸುತ್ತಿದ್ದಾರೆಂಬುದನ್ನು ತೋರಿಸಿಕೊಡುತ್ತದೆ. ಪ್ರಧಾನ ಮಂತ್ರಿಗಳನ್ನು ಕೊಲೆ ಮಾಡಲು ರಾಂದಾ ನಿರ್ಧರಿಸಿದ್ದರೆಂದು ಮತ್ತು ಆ ಉದ್ದೇಶಕ್ಕಾಗಿ ಅವರು ದೆಹಲಿಗೆ ಹೋಗುವ ವ್ಯವಸ್ಥೆ ಮಾಡಿಕೊಂಡಿದ್ದರೆಂದು ಅವರು ಆರೋಪಿಸುತ್ತಾರೆ ! ರಾಂಪ್ರಸಾದ್ ದೆಹಲಿಗೆ ಬರಬೇಕೆಂದಿದ್ದುದು ನಿಜವೇ. ಆದರೆ ಅದು ಜನಸಂಘದ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ. ಎಂದಿನಂತೆ ಅವರು ಈ ಸಭೆಗೆ ವಿಶೇಷ ಆಹ್ವಾನಿತರಾಗಿದ್ದರು; ಅವರು ಇನ್ನೂ ಬಂಧನದಲ್ಲಿಲ್ಲದಿದ್ದರೆ ಸಭೆಗೆ ಹಾಜರಾಗುತ್ತಿದ್ದರು. ಪಂಡಿತ್ ನೆಹರೂ ಅವರ ರಹಸ್ಯ ಪೊಲೀಸರ ಕಣ್ಣಿಗೆ ದೆಹಲಿಗೆ ಬರುತ್ತಿರುವ ಯಾರೆ ಆದರೂ ಕೊಲೆ ಮಾಡುವ ಸಂಚೆಂದು ಕಾಣುವುದಾದಲ್ಲಿ, ರಾಜಕೀಯ ಪಕ್ಷಗಳು ಅದರಲ್ಲಿಯೂ ವಿಶೇಷವಾಗಿ ವಿರೋಧ ಪಕ್ಷಗಳು ತಮ್ಮ ಸಭೆಸಮಾರಂಭಗಳಿಗೆ ದೆಹಲಿಯನ್ನು ಎಂದೂ ಆರಿಸಿಕೊಳ್ಳುವಂತಿಲ್ಲ.

ಪಶ್ಚಿಮ ಬಂಗಾಳದ ಪೊಲೀಸರಿಗೆ ರಾಂದಾ ಅವರ ಉದ್ದೇಶವಾದರೂ ತಿಳಿದದ್ದು ಹೇಗೆ? ಅವರು ಯಾವುದೇ ಸಂಚನ್ನು ಬೆಳಕಿಗೆ ತಂದರೇನು? ತಂದಿದ್ದಲ್ಲಿ ಬೇರೆ ಯಾರು ಯಾರನ್ನು ಬಂಧಿಸಲಾಗಿದೆ? ದೇಶದ್ರೋಹಿಗಳ ವಿರುದ್ಧ ಯಾವ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ? ಅದು ಯಾವನೋ ಒಬ್ಬ ಹುಚ್ಚು ಪೊಲೀಸ್ ಅಧಿಕಾರಿಯ ಕಲ್ಪನೆಯಾಗಿದ್ದಿರಬೇಕು. ಶೆರ್ಲಾಕ್ ಹೋಮ್ಸ್ ಓದುವುದರಲ್ಲಿಯೇ ಆತ ವಿಪರೀತ ನಿಮಗ್ನನಾಗಿದ್ದಿರಬೇಕೆಂದು ನನಗೆ ತೋರುತ್ತದೆ. ವ್ಯಾಪಕವಾಗಿ ಪ್ರೀತಿಸಲ್ಪಡುವ ಮತ್ತು ಗೌರವಿಸಲ್ಪಡುವ (ಪ್ರೀತಿ ಮತ್ತು ಗೌರವಗಳು ಅವರ ಅರ್ಥಕ್ಕೆ ಹೊಂದದಿರಬಹುದು ಅಥವಾ ಹುಕುಂ ಇರಬಹುದು) ಪ್ರಧಾನಮಂತ್ರಿಗಳ ವ್ಯಕ್ತಿತ್ವಕ್ಕೆ – ಹೇಗೆ ಆಗಾಗ ಅವರ ಬಗ್ಗೆ ಪ್ರಾಣಾಪಾಯದ ಸಂಚುಗಳನ್ನು ಹುಟ್ಟುಹಾಕುವುದು– ನಿಜಕ್ಕೂ ಅಪಮಾನಕಾರಿಯಾದುದು. ಸಾಮಾನ್ಯ ಸುರಕ್ಷಾ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಮರ್ಥನೆ ಇರುತ್ತದೆ. ಆದರೆ ಪ್ರಜಾಪ್ರಭುತ್ವದ ಆಡಳಿತದಲ್ಲಿ ಅವರ ಪ್ರಾಣವನ್ನು ತೆಗೆಯಬಹುದೆಂಬ ಆಲೋಚನೆಯಿಂದಲೇ ಸುರಕ್ಷಾ ಪೊಲೀಸರು ಪಟ್ಟಿಯೊಂದನ್ನು ಸಿದ್ಧಪಡಿಸಿ ಇಟ್ಟುಕೊಳ್ಳುವುದನ್ನು ಯಾರೂ ಸಮರ್ಥಿಸುವುದಿಲ್ಲ. ಅದು ನಿರಂಕುಶಾಧಿಕಾರಶಾಹಿಯ ಪದ್ಧತಿಯಾಗುವುದು. ಪುರಾಣ ಕಾಲದಲ್ಲಿ ಕಂಸ ಅಥವಾ ಹಿರಣ್ಯಕಶಿಪು ಅಂಥ ಸರ್ವಾಧಿಕಾರಿಗಳಾಗಿದ್ದರು. ಹಿಟ್ಲರ್ ಮತ್ತು ಸ್ಟಾಲಿನ್ ಅವರ ಆಧುನಿಕ ಕಾಲದ ಪ್ರತಿರೂಪಗಳಾಗಿದ್ದಾರೆ. ಆದರೆ ಪಂಡಿತ್ ನೆಹರೂ ಎಷ್ಟೇ ಸರ್ವಾಧಿಕಾರಿ ಮನೋಭಾವದಾಗಿರಲಿ, ಹೃದಯ ಹೀನ ಕ್ರೌರ್ಯ ಮತ್ತು ಅಮಾನುಷ ಮಹತ್ವಾಕಾಂಕ್ಷೆಗಳಿಂದ ಕೂಡಿದ ನಿರಂಕುಶಾಧಿಕಾರ ನಡೆಸುವ ಲವಲೇಶವಾದರೂ ಅವರಲ್ಲಿದೆ ಎಂದು ನಮಗೆ ಯೋಚಿಸಲೂ ಸಾಧ್ಯವಿಲ್ಲ. ಅವರ ಸುತ್ತ ಇರುವ ಕಾಂಗ್ರೆಸ್ಸಿಗರ ನಿಷ್ಪ್ರಯೋಜಕತೆ ಯಿಂದಾಗಿ ಕಾಂಗ್ರೆಸ್ಸಿನಲ್ಲಿ ಮತ್ತು ಸರ್ಕಾರದಲ್ಲಿ ಅವರೊಬ್ಬ ಪ್ರಶ್ನಾತೀತ ನಾಯಕರಾಗಿದ್ದಾರೆ; ಆದರೂ ಅವರನ್ನು ಸರ್ವಾಧಿಕಾರಿಯಾಗುವುದರಿಂದ ತಡೆದಿರುವ ಮೌಲ್ಯಗಳು ಅವರಲ್ಲಿವೆ. ಭಾರತದ ಭವಿಷ್ಯದ ಏಕೈಕ ತೀರ್ಪುಗಾರರಾಗಿ ಪಂಡಿತ್ ನೆಹರೂ ಅವರನ್ನು ಮಾಡುವಲ್ಲಿ ಪರಿಸ್ಥಿತಿಗಳು ಸಹಕಾರಿಯಾಗಿದ್ದರೆ, – ಪಂಡಿತ್ ನೆಹರೂ ಅವರೂ ಸೇರಿದಂತೆ ಪ್ರಜಾಪ್ರಭುತ್ವದ ಪ್ರೇಮಿಗಳಿಗೆಲ್ಲ ನಿರಂಕುಶಾಧಿಕಾರದ ಆಡಳಿತಗಾರನ ಜೊತೆ ಎಲ್ಲ ಪರಿಕರಗಳೊಡನೆ ಅಧಿಕಾರಿಗಳೂ ಸಹಕರಿಸಿ ದುಸ್ಥಿತಿಯನ್ನು ತರದಿರಲಿ. ಪ್ರಧಾನ ಮಂತ್ರಿಗಳ ವ್ಯಕ್ತಿತ್ವದ ಶ್ರೇಷ್ಠತೆಗೆ ಸೇರ್ಪಡೆಯಾಗುವ ಬದಲು ಅವು ಧಕ್ಕೆ ತರುತ್ತವೆ.

* * * * *

# ಬೆಂಗಳೂರು ಅಧಿವೇಶನ ಮತ್ತು ಅನಂತರ – ೧

ಭಾರತೀಯ ಜನಸಂಘದ ಏಳನೆಯ ವಾರ್ಷಿಕ ಅಧಿವೇಶನವು ೧೯೫೮ರ ಡಿಸೆಂಬರ್ ೮ ರಂದು ಮುಕ್ತಾಯವಾಯಿತು. ಎರಡು ವಾರಗಳಿಗಿಂತ ಹೆಚ್ಚು ಕಾಲ ಕಳೆದಿದೆ. ಪ್ರತಿನಿಧಿಗಳು – ತಮ್ಮ ಸಂಚಾರಗಳ ಮಾರ್ಗದಲ್ಲಿ ಇನ್ನೂ ದಕ್ಷಿಣಕ್ಕಿದ್ದ ಯಾತ್ರಾಸ್ಥಳಗಳನ್ನು ಸೇರಿಸಿಕೊಂಡು ಉತ್ತರಭಾರತದವರು – ಈ ಹೊತ್ತಿಗೆ ತಮ್ಮ ತಮ್ಮ ಮನೆಗಳನ್ನು ಸೇರಿರಬೇಕು. ಬೆಂಗಳೂರಿಗೆ ಹೋಗಲು ಅನುಕೂಲವಾಗದ ಜನಸಂಘದ ಕಾರ್ಯಕರ್ತರು ಮತ್ತು ಸದಸ್ಯರ ಕುತೂಹಲ ತಣಿಸಲು ಮಾತ್ರವಲ್ಲದೆ, ಅವರು ಜನಸಾಮಾನ್ಯರಲ್ಲಿ ಒಂದು ಅಂದಾಜು ಮೂಡಿಸಲು ಈ ಅಧಿವೇಶನದಲ್ಲಿ ಕೈಗೊಳ್ಳಲಾದ ನಿರ್ಣಯವನ್ನು ಮತ್ತು ತೆಗೆದುಕೊಳ್ಳಲಾದ ನಿರ್ಧಾರಗಳನ್ನು ಇಲ್ಲಿ ತಿಳಿಸಿದೆ. ಜನಸಂಘದ ಪ್ರತಿಯೊಬ್ಬ ಕಾರ್ಯಕರ್ತನಿಗೆ ಮತ್ತು ಸಹಮತ ಉಳ್ಳವನಿಗೆ, ಅಷ್ಟೇ ಅಲ್ಲ ನಮ್ಮ ಸ್ವಾತಂತ್ರ್ಯ ಮತ್ತು ಸಂಸ್ಕೃತಿಗಳಿಗೆ ಹೆಚ್ಚುತ್ತಿರುವ ಅಪಾಯಗಳನ್ನು ರಾಷ್ಟ್ರೀಯಾತ್ಮಕವಾಗಿ ಮತ್ತು ವಾಸ್ತವವಾಗಿಯೂ ದರ್ಶಿಸಬಲ್ಲ ಆ ಎಲ್ಲ ದೇಶಭಕ್ತ ಶಕ್ತಿಗಳಿಗೆ, ಹಾಗೆಯೇ ನಮ್ಮ ಎಲ್ಲ ರಾಜಕೀಯ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸಕಾರಾತ್ಮಕವಾದ ಸತ್ತ್ವವನ್ನು ಮತ್ತು ಉದ್ದೇಶ ಸಾಧಕತೆಗಳನ್ನು ಕೊಡುವ ಮಹತ್ತ್ವಾಕಾಂಕ್ಷೆಯನ್ನು ಹೊಂದಿರುವವರಿಗೆ ಇಲ್ಲೊಂದು ಸಂದೇಶವಿದೆ. ಬೆಂಗಳೂರಿನಲ್ಲಿ ಚರ್ಚಿಸಲಾದ ಪ್ರಮುಖ ಪ್ರಶ್ನೆಗಳನ್ನು ಮತ್ತು ನಿರ್ಧರಿಸಲಾದ ವಿಷಯಗಳನ್ನು ನಾವು ಈ ಲೇಖನಗಳ ಸರಣಿಯಲ್ಲಿ ವಿವರಿಸಲು ಉದ್ದೇಶಿಸಿದ್ದೇವೆ. ಈ ಮಧ್ಯೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕೂಡ ನಾಗಪುರದಲ್ಲಿ ತನ್ನ ೬೪ನೆಯ ಅಧಿವೇಶನವನ್ನು ಪೂರ್ಣಗೊಳಿಸಿದೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಇವೆರಡೂ ಸಂಘಟನೆಗಳ ದೃಷ್ಟಿಕೋನಗಳಲ್ಲಿ ತೋರುವ ಸಾದೃಶ್ಯ ವೈದೃಶ್ಯಗಳನ್ನು ಗುರುತಿಸುವ ಅವಕಾಶವು ಸ್ವಾಭಾವಿಕವಾಗಿಯೆ ನಮಗೆ ದೊರೆತಿದೆ.

ನಿರ್ದಿಷ್ಟ ವಿಷಯಗಳನ್ನು ಕುರಿತು ತಿಳಿಸುವ ಮೊದಲೇ ಬೆಂಗಳೂರು ಅಧಿವೇಶನವು ಜನಸಂಘದ ಬಹುತೇಕ ಕಾರ್ಯಕರ್ತರಿಗೆ ತುಂಬ ಉಪಯುಕ್ತವಾಗಿದೆ

---

**ಮೂಲ ಆಕರ : ಆರ್ಗನೈಸರ್, ೨೯, ಡಿಸೆಂಬರ್, ೧೯೫೯**

ಎನ್ನುವುದನ್ನು ಹೇಳಬೇಕು. ಅನೇಕರಿಗೆ ಅದು ವಿಂಧ್ಯದ ದಕ್ಷಿಣಕ್ಕೆ ಹೋಗುವ ಮೊದಲ ಸಂದರ್ಭವಾಗಿತ್ತು. ದೇಶದ ಉದ್ದಗಲಕ್ಕೂ ಅವರು ತಮ್ಮ ಸೋದರರೊಡನೆ ಭಾವನಾತ್ಮಕವಾಗಿ ಯಾವಾಗಲೂ ಒಂದಾಗಿಯೇ ಇದ್ದರು; ಆದರೂ ಬೇರೆ ಬೇರೆ ಪ್ರಾಂತಗಳಲ್ಲಿ ವಾಸಿಸುವ ನಮ್ಮವರೆ ಆದ ಜನರು ಎದುರಿಸುತ್ತಿರುವ ಅನೇಕ ಸನ್ನಿವೇಶಗಳು ಅವರ ಗ್ರಹಿಕೆಗೆ ನಿಲುಕಿರಲಿಲ್ಲ. ಬೆಂಗಳೂರಿನಲ್ಲಿ ವಿಷಯಗಳ ಸಮಿತಿ (Subject Committee) ಮತ್ತು ಭಾರತೀಯ ಪ್ರತಿನಿಧಿ ಸಭಾಗಳ ಔಪಚಾರಿಕ ಚರ್ಚೆಗಳಲ್ಲಿ ಮಾತ್ರವಲ್ಲ, ಅನೌಪಚಾರಿಕವಾದ ಗುಂಪು ಸಭೆಗಳಲ್ಲಿ ಮತ್ತು ಚರ್ಚೆಗಳಲ್ಲಿ ಕೂಡ ದೇಶದ ವಿವಿಧ ಭಾಗಗಳಿಂದ ಬಂದ ಪ್ರತಿನಿಧಿಗಳು, ಮಾತನಾಡಿ, ಒಬ್ಬರು ಇನ್ನೊಬ್ಬರನ್ನು ಹೆಚ್ಚು ಅರ್ಥಮಾಡಿಕೊಳ್ಳುವಂತಾಯಿತು. ಕೇರಳ ಮತ್ತು ತಮಿಳುನಾಡುಗಳಿಂದ ಬಂದವರಿಗೆ ಪಾಕಿಸ್ತಾನದಿಂದಾಗುವ ಗಡಿ ಉಲ್ಲಂಘನೆ ಯಾದರೋ ಈಗ ಕ್ಷೋಭೆಕಾರಿ ಸುದ್ದಿಯಲ್ಲ. ಬೆಂಗಳೂರಿಗೆ ಬರುವ ಮೊದಲು ತಾನು ನೆಹರೂ–ನೂನ್ ಒಪ್ಪಂದವನ್ನು ವಿರೋಧಿಸಿದ್ದೇಕೆಂದರೆ ತುಷ್ಟೀಕರಣದ ಹಳೆಯ ನೀತಿಯೇ ಮುಂದುವರಿದಿದೆ ಎಂದು ತಾನು ಪರಿಗಣಿಸಿದ್ದರಿಂದ; ಆದರೆ ಕಷ್ಟಕ್ಕೀಡಾದ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಬಂದಿದ್ದ ಪಶ್ಚಿಮ ಬಂಗಾಳದ ಸದಸ್ಯರೊಡನೆ ಬೆಂಗಳೂರಿನಲ್ಲಿ ತಾನು ನಡೆಸಿದ ಚರ್ಚೆಯಿಂದಾಗಿ ಭಾರತ ನೀಡಿದ ರಿಯಾಯಿತಿಗಳ ಭೀಕರ ಪರಿಣಾಮಗಳನ್ನು ಪೂರ್ಣವಾಗಿ ಗ್ರಹಿಸಿರುವುದಾಗಿ ಕರ್ನಾಟಕದ ಪ್ರತಿನಿಧಿಯೊಬ್ಬ ಹೇಳಿದ.

ಅಧಿವೇಶನದ ಅನಂತರ ಬೃಂದಾವನ ಉದ್ಯಾನದಲ್ಲಿ ಪಂಜಾಬಿನಿಂದ ಬಂದಿದ್ದ ನಮ್ಮ ಪ್ರತಿನಿಧಿಗಳಲ್ಲಿ ಕೆಲವರನ್ನು ಭೇಟಿ ಮಾಡುವ ಸಂದರ್ಭ ಒದಗಿ ಬಂದಿತ್ತು; ಅಖಿಲ ಭಾರತದ ಅಧಿಕೃತ ಭಾಷೆಯಾಗಿ ಹಿಂದಿಯನ್ನು ಜಾರಿಗೊಳಿಸುವ ವಿಷಯದಲ್ಲಿ ತಮ್ಮ ಅತ್ಯಾಗ್ರಹವನ್ನು ಈ ದಕ್ಷಿಣ ಭಾರತದ ಭೇಟಿ ತಗ್ಗಿಸಿತೆಂದು ಮತ್ತು ದಕ್ಷಿಣದಲ್ಲೆಲ್ಲ ವ್ಯಾಪಕವಾಗಿ ಹರಡಿದ ಹಿಂದಿ ವಿರೋಧದಿಂದಾಗಿ ತಮಗಿದ್ದ ಭಾವೋದ್ವಿಗ್ನತೆಯನ್ನು ಮೀರಲು ಕೂಡ ಇದು ಸಹಾಯಮಾಡಿತೆಂದು ಅವರು ಒಪ್ಪಿಕೊಂಡರು. ಹಿಂದಿ ವಿರೋಧವಿಲ್ಲಿ ಇರಲಿಲ್ಲವೆಂಬುದನ್ನು ಅವರು ಕಾಣಬಹುದಿತ್ತು; ಆದರೆ ಸಹಾನುಭೂತಿಯಿಂದ ಪರಿಶೀಲಿಸಿ ಪರಿಹರಿಸಬೇಕಾದ ಕಷ್ಟನಷ್ಟಗಳು ಮತ್ತು ತಪ್ಪುಭಾವನೆಗಳು ಖಂಡಿತವಾಗಿಯೂ ಇದ್ದವು. ಕೆಲವರು ಭಾವಿಸಿದಂತೆ ಕೇರಳ ಮತ್ತು ತಮಿಳುನಾಡುಗಳನ್ನು ಕಮ್ಯುನಿಸ್ಟರು ಮತ್ತು ದ್ರಾವಿಡ ಕಳಗಂನೊಡನೆ ಸಮೀಕರಿಸಬೇಕಾದ ಆವಶ್ಯಕತೆ ಇಲ್ಲ; ವಾಸ್ತವವಾಗಿ ಈ ವಿಷಯವನ್ನು ದೂರದಿಂದ ಕಂಡು ಅತಿ ಸರಳೀಕರಣ ಮಾಡುವ ಪ್ರವೃತ್ತಿ ಹೊಂದಿದ್ದಾರೆ. ನಮ್ಮ ಕಾರ್ಯಕರ್ತರಿಗೆ ಅಖಿಲ ಭಾರತೀಯ ದೃಷ್ಟಿಕೋನವನ್ನು ಮೂಡಿಸುವಂಥದು ಬೆಂಗಳೂರಿನಲ್ಲಿ ಈ

ಅಧಿವೇಶನವನ್ನು ನಡೆಸುವ ಉದ್ದೇಶಗಳಲ್ಲೊಂದು. ಇದನ್ನು ಶ್ರೀ ದೇವಪ್ರಸಾದ್ ಘೋಷ್ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಉಲ್ಲೇಖಿಸಿದರು. ಬಹುಮಟ್ಟಿಗೆ ಈ ಉದ್ದೇಶ ಈಡೇರಿತೆಂದೇ ಹೇಳಬೇಕು.

ಈ ಅಧಿವೇಶನದ ರೂಪುರೇಷೆ, ವಿನ್ಯಾಸ ಮತ್ತು ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಇದು ಹಿಂದೆ ಅಂಬಾಲ ಮತ್ತು ದೆಹಲಿಗಳಲ್ಲಿ ನಡೆಸಿದ ಅಧಿವೇಶನಗಳಿಗಿಂತ ವಿಭಿನ್ನವಾಗಿತ್ತು. ಅಂಬಾಲಾ ಮತ್ತು ದೆಹಲಿಗಳಲ್ಲಿ ವಸ್ತುತಃ ಡೇರೆಗಳಿಂದ ಒಂದು ಪುರವನ್ನು ನಿರ್ಮಿಸಬೇಕಿತ್ತು; ಆದರೆ ಬೆಂಗಳೂರಿನಲ್ಲಿ ಪ್ರತಿಯೊಂದೂ ಇಟ್ಟಿಗೆ ಗಾರೆಗಳಿಂದ ರೂಪುಗೊಂಡಿತ್ತು. ಅನೇಕ ಛತ್ರಗಳು, ನ್ಯಾಷನಲ್ ಹೈಸ್ಕೂಲ್, ಲಾಲ್‌ಬಾಗಿನ ವಿಶಾಲವಾದ ಗಾಜಿನಮನೆ ಮತ್ತು ಪುರಭವನಗಳು ನಮ್ಮ ಕಾರ್ಯಗಳಿಗೆ ಲಭ್ಯವಾಗಿದ್ದವು. ನಮ್ಮ ವಾಸ್ತವ್ಯ ಮತ್ತು ಸಮುದಾಯಗಳ ಆವಶ್ಯಕತೆಗಳನ್ನು ಅವು ಪೂರೈಸಿದವು. ಇವು ಪ್ರತಿನಿಧಿಗಳಿಗೆ ಅನುಕೂಲತೆಗಳನ್ನು ಹೆಚ್ಚಿಸಿದವು ಹಾಗೂ ಗಣನೀಯವಾಗಿ ಖರ್ಚುವೆಚ್ಚಗಳನ್ನು ತಗ್ಗಿಸಿದವು. ಇಂಥ ಸಾಮೂಹಿಕ ಮೇಳಗಳಲ್ಲಿರುವ ಗಡಿಬಿಡಿ, ಗದ್ದಲ ಮತ್ತು ವೈಭವದ ಪ್ರದರ್ಶನಗಳಲ್ಲಿ ಕೆಲವನ್ನು ದೂರಮಾಡಿದವು ಕೂಡ. ಚಾಟ್‌ವಾಲಾಗಳಿಗೆ ಮತ್ತು ಬಲೂನು ಮಾರುವವರಿಗೆ ಸುಗ್ಗಿಯಾಗುವಂಥ ಮತ್ತು ಥಳಕುಪಳಕು ವೇಷ ಭೂಷಣದ ಜನರು ಅಲ್ಲಿಂದಿಲ್ಲಿಗೆ ಓಡಾಡುತ್ತಿರುವಂಥ ದೊಡ್ಡ ಮೇಳವಾಗಿರಲಿಲ್ಲ ಇದು. ಪಂಜಾಬಿನಿಂದ ಬಂದಿದ್ದ ಕೆಲವು ಮಿತ್ರರಿಗೆ ಇದರಿಂದ ನಿರಾಶೆಯಾಗಿತ್ತು; ಇದನ್ನು ಬೃಹತ್ ಕಾರ್ಯಕರ್ತರ ಮೇಳಗಳಿಗೆ ಅವರು ಹೋಲಿಸಿ ನೋಡುತ್ತಿದ್ದರು. ಆದರೆ, ಬೆಂಗಳೂರಿನ ಇತಿಹಾಸದಲ್ಲಿಯೆ ಈ ಸಮಾರಂಭಕ್ಕೆ ಸಮಾನವಾದುದು ನಡೆದಿರಲಿಲ್ಲವೆಂಬ ಮಾತನ್ನು ಅನೇಕ ಸ್ಥಳೀಯ ನಾಗರಿಕರಿಂದ ಕೇಳಿ ಆಶ್ಚರ್ಯಪಡುತ್ತಿದ್ದರು. ಅತಿಶಯೋಕ್ತಿ ಎಂದು ಸ್ವಲ್ಪ ರಿಯಾಯಿತಿ ನೀಡಿದರೂ ಅಧಿವೇಶನವು ಸ್ಥಳೀಯರ ಮನಸ್ಸಿನ ಮೇಲೆ ಅಚ್ಚಳಿಯದ ಪರಿಣಾಮ ಬೀರಿತ್ತೆಂದು ನಾವು ಹೇಳಬಹುದು. ಆದರೆ ನಾಗಪುರದ ತಥಾಕಥಿತ ಸಾಂಸ್ಕೃತಿಕ ಪ್ರದರ್ಶನದಲ್ಲಿ ಉಂಟಾದ ನೂಕುನುಗ್ಗಲಿನಂಥ ಸುದ್ದಿಯನ್ನು ಪತ್ರಿಕೆಗಳಿಗೆ ಒದಗಿಸುವಲ್ಲಿ ಅದು ಶೋಚನೀಯವಾಗಿ ಸೋತಿತು. ನಾಗಪುರದಲ್ಲಾದಂತೆ ಇಲ್ಲಿ ಪ್ರತಿನಿಧಿಗಳಲ್ಲಿ ಕಿಸೆಗಳ್ಳತನ ನಡೆದು ಪೊಲೀಸರು ದಸ್ತಗಿರಿ ಮಾಡಬೇಕಾಗಲಿಲ್ಲ. ಕೀರ್ತಿ ಸಲ್ಲಬೇಕಾದ್ದು ವ್ಯವಸ್ಥಾಪಕರಿಗೋ ಪ್ರತಿನಿಧಿಗಳಿಗೋ ಅಥವಾ ಬೆಂಗಳೂರಿನ ಜನತೆಗೋ ಎನ್ನುವುದನ್ನು ಹೇಳುವುದು ಕಷ್ಟ; ಎಲ್ಲರಿಗೂ ಒಟ್ಟಾಗಿ ಮತ್ತು ಸಮಾನವಾಗಿ ಎಂದು ಹೇಳುವುದು ಉತ್ತಮ.

ಬೆಂಗಳೂರಿನಲ್ಲಿ ಮಾಡಲಾದ ವ್ಯವಸ್ಥೆಗಳ ಬಗ್ಗೆ ಯಾವುದನ್ನೂ ದೂರುವಂತೆಯೆ ಇರಲಿಲ್ಲ. ಆದರೆ ಇಲ್ಲಿಗೆ ಬರುವ ಪ್ರಯಾಣ ಪ್ರಯಾಸಕರವಾದುದಾಗಿತ್ತು. ಸಾವಿರಾರು ವೀಕ್ಷಕರಲ್ಲದೆ ಸಾವಿರದ ನಾನೂರು ಪ್ರತಿನಿಧಿಗಳು ಬೆಂಗಳೂರಿಗೆ ತೆರಳುವವರಿದ್ದರೂ ರೈಲ್ವೆ ಅಧಿಕಾರಿಗಳು ಯಾವ ತೆರನ ವ್ಯವಸ್ಥೆಯನ್ನೂ ಮಾಡಿರಲಿಲ್ಲ. ಉತ್ತರ ಪ್ರದೇಶದ ಅಧಿಕಾರಿಗಳಿಗೆ ಯುಕ್ತ ರೀತಿಯಲ್ಲಿ ಅರ್ಜಿ ಸಲ್ಲಿಸಲಾಗಿದ್ದರೂ ಲಕ್ನೋದಿಂದ ಪ್ರವಾಸಿ ಕಾರುಗಳನ್ನು ಒದಗಿಸಲು ಕೂಡ ಅವರು ನಿರಾಕರಿಸಿದರು. ಜೊತೆಗೆ ಋತುಮಾನದ (ಸೀಸನಲ್) ನೂಕುನುಗ್ಗಲು ಕೂಡ ಜನರ ಕಷ್ಟಗಳನ್ನು ಹೆಚ್ಚಿಸಿತು. ಸಂತೋಷಪಡಲು ಸಾಧ್ಯವಾದದ್ದು ರೈಲಿನಲ್ಲಿ ಕುಳಿತುಕೊಳ್ಳಲು ಅಥವಾ ನಿಂತುಕೊಳ್ಳಲು ಸ್ಥಳಾವಕಾಶ ಸಿಕ್ಕವರಿಗಷ್ಟೇ. ಅನೇಕ ಪ್ರತಿನಿಧಿಗಳಿಗೆ ಧೋಂಡ್‌ನಲ್ಲಿ ಸಿಗಬೇಕಾಗಿದ್ದ ಸಂಪರ್ಕದ ರೈಲುಗಳು ತಪ್ಪಿಹೋದವು. ಅವರಿಗೆಲ್ಲ ಇಪ್ಪತ್ನಾಲ್ಕು ಗಂಟೆಗಳಿಗಿಂತ ಹೆಚ್ಚು ಕಾಲ ವಿಳಂಬವಾಯಿತು. ಓಡುವ ರೈಲುಗಳ ತೀವ್ರ ಕೊರತೆ ಇದೆ ಎಂದು ರೈಲ್ವೆಯ ಸ್ಥಿತಿಯನ್ನು ತಿಳಿಸಿ ದೂರುವ ಪ್ರತಿನಿಧಿಗಳನ್ನು ಸಮಾಧಾನಪಡಿಸಲು ನಾನು ಪ್ರಯತ್ನಿಸಿದೆ. ಆದರೆ ಇದೇ ಕಾಲದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯುತ್ತಿದ್ದ ನಾಗಪುರಕ್ಕೆ ಅನೇಕ ವಿಶೇಷ ರೈಲುಗಳು ಓಡಾಡುತ್ತಿದ್ದುದನ್ನು ಕಂಡು ಆಶರ್ಯಪಟ್ಟೆ. *ಈ ರೈಲುಗಳು ಕೆಲವೇ ಪ್ರಯಾಣಿಕರೊಡನೆ ಓಡಾಡುತ್ತಿದ್ದವು. ಪೂರ್ತಿ ಖಾಲಿ ಓಡಿದ ರೈಲೂ ಒಂದಿತ್ತು.* ರೈಲು ಹೊರಟಾಗ ಸುಮಾರು ಇಪ್ಪತ್ತು ಪ್ರಯಾಣಿಕರಿದ್ದರೆಂದೂ ಅದು ಇಟಾರ್ಸಿ ತಲುಪುವ ಹೊತ್ತಿಗೆ ಅವರೆಲ್ಲ ಇಳಿದುಹೋಗಿದ್ದರೆಂದೂ ಗಾರ್ಡ್ ನನಗೆ ತಿಳಿಸಿದ. ಬೇತುಲ್‌ನಿಂದ ಮುಂದೆ ಪ್ರಯಾಣಿಕರು ಇರಬಹುದೆಂಬ ನಿರೀಕ್ಷೆ ಆತನದು. ಬೇರೊಂದೆಡೆ ರೈಲಿನಲ್ಲಿ ಸ್ಥಳಾವಕಾಶದ ಕೊರತೆಯಿಂದಾಗಿ ಸ್ಟೇಷನ್‌ಗಳ ಅಕ್ಕಪಕ್ಕಗಳಲ್ಲಿ ಪ್ರಯಾಣಿಕರು ಕಷ್ಟಪಡುತ್ತಿದ್ದರೆ ಇಲ್ಲಿ ಪ್ರಯಾಣಿಕರಹಿತ ರೈಲುಗಳು ಓಡಾಡುತ್ತಿವೆ; ಕಾಂಗ್ರೆಸ್ ಸಮಾಜದ ಕಾರ್ಯಾಚರಣೆಯ ರೀತಿ ಇದು.

* * * * *

# ಬೆಂಗಳೂರು ಮತ್ತು ಅನಂತರ – ೩**
# ಮೂರನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಕಾಂಗ್ರೆಸ್ ಮತ್ತು ಭಾರತೀಯ ಜನಸಂಘ

ಬೆಂಗಳೂರಿನಲ್ಲಿ ನಾವು ಸೇರಿದಾಗ ಮೂರನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಮಾತುಕತೆಗಳು ಆಗಲೇ ಪ್ರಾರಂಭವಾಗಿದ್ದವು. ತಮ್ಮ ಸಾರ್ವಜನಿಕ ಭಾಷಣವೊಂದರಲ್ಲಿ, ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಗೆ, ಎಂದರೆ ೧೯೬೫–೬೬, ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು (೧೧ನೆಯ ವಯಸ್ಸಿನವರೆಗೆ; ಸಂವಿಧಾನದ ನಿರ್ದೇಶಿತ ಸಿದ್ಧಾಂತಗಳಲ್ಲಿ (Directive Principles) ಆಲೋಚಿಸಲಾದಂತೆ ೧೪ ವರ್ಷವಲ್ಲ) ಲಭ್ಯವಾಗುವುದೆಂದು – ಸಂವಿಧಾನವು ಹೇಳಿದಂತೆ ಹತ್ತು ವರ್ಷಗಳೊಳಗೆ ಅಲ್ಲ– ಪ್ರಧಾನಮಂತ್ರಿಗಳು ಭರವಸೆ ನೀಡಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯೂ ಮೂರನೆಯ ಯೋಜನೆಗೆ ಸಂಬಂಧಿಸಿದಂತೆ ನಿರ್ಣಯವೊಂದನ್ನು ಅಂಗೀಕರಿಸಿತು. ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯೇ ಪೂರ್ಣಗೊಳ್ಳಲು ಇನ್ನೂ ಎರಡು ವರ್ಷಗಳಿಗಿಂತ ಹೆಚ್ಚು ಕಾಲ ಉಳಿದಿರುವಾಗ ಮೂರನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಆಡುವ ಯಾವುದೇ ಮಾತು ಅಕಾಲಿಕವಾದುದೆಂದು ರಾಜಕೀಯ ವೀಕ್ಷಕರು ಭಾವಿಸಿದ್ದಾರೆ. ಎರಡನೆಯ ಯೋಜನೆಯಲ್ಲಿ ಕೂಡ ಅದು ಅನುಷ್ಠಾನಕ್ಕೆ ಬರುವ ಎರಡನೆಯ ವರ್ಷದಲ್ಲಿಯೇ ಕಷ್ಟಕಾಲವನ್ನೆದುರಿಸಿತು. ಈ ಅಡ್ಡಿ ಆತಂಕಗಳು ಉಂಟಾದುದು ತಪ್ಪು ಆರ್ಥಿಕ ನೀತಿಯಿಂದಾಗಿ ಮತ್ತು ಯೋಜನಾ ಆಯೋಗದ ಸೂಕ್ಷ್ಮದರ್ಶಿತ್ವದ ಕೊರತೆಯಿಂದಾಗಿ. ಆದರೂ ಸರ್ಕಾರ ಮತ್ತು ಆಯೋಗದ ತಮ್ಮ ತಪ್ಪನ್ನು ಬಾಹ್ಯ ಪರಿಸ್ಥಿತಿಗಳಿಗೆ ಮತ್ತು ಪ್ರಕೃತಿಯ ಹುಚ್ಚಾಟಗಳಿಗೆ ಆರೋಪಿಸಿ ತಾವು ತಪ್ಪಿಸಿಕೊಂಡವು. ಮೂರನೆಯ ಪಂಚವಾರ್ಷಿಕ ಯೋಜನೆಯ ಮೇಲಿನ ಕಾಂಗ್ರೆಸ್ ನಿರ್ಣಯವು ಇಂಥ ನೆಪಗಳ ದೀರ್ಘಪಟ್ಟಿಯೊಂದನ್ನು ಕೊಡುತ್ತದೆ.

---

ಮೂಲ ಆಕರ : ಆರ್ಗನೈಸರ್, ೧೬, ಫೆಬ್ರವರಿ, ೧೯೫೯

** ಎರಡನೇ ಲೇಖನ ಲಭ್ಯವಾಗಿಲ್ಲ

ಕಾರಣಗಳೇನೇ ಇರಲಿ, ದೇಶದ ಆರ್ಥಿಕತೆಯು ಸಮನಾದ ಮಾರ್ಗವನ್ನು ಅನುಸರಿಸಿ ಸಾಗುತ್ತಿಲ್ಲ; ನಮ್ಮ ದೇಶವು ಇದುವರೆಗೆ ಅನುಸರಿಸಿಕೊಂಡು ಬಂದಿರುವ ಯೋಜನೆಯ ಮಾದರಿಗೆ ಬಹಳ ಆವಶ್ಯಕವಾದ ನಿರ್ದಿಷ್ಟತೆ ಮತ್ತು ಖಚಿತತೆಗಳನ್ನು ವಿಶೇಷವಾಗಿ ಮುಂದಿನ ಮೂರು ವರ್ಷಗಳ ಬಗ್ಗೆ ಹೇಳಲು ಸಾಧ್ಯವಿಲ್ಲ; ಮುಂದಿನ ಪ್ರವೃತ್ತಿಗಳ ಬಗ್ಗೆ ಹೇಳಲು ಸಾಧ್ಯವಿಲ್ಲ. ಪ್ರಥಮ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿದಾಗ ನಮ್ಮ ದೇಶವು ತೀವ್ರತರವಾದ ಆಹಾರದ ಕೊರತೆಯನ್ನು ಎದುರಿಸುತ್ತಿತ್ತು. ಆದ್ದರಿಂದ ಆಹಾರೋತ್ಪಾದನೆಯನ್ನು ಹೆಚ್ಚಿಸುವುದರ ಕಡೆಗೆ ತುಂಬ ಒತ್ತನ್ನು ನೀಡಲಾಯಿತು. ಆದರೆ ಆಯೋಗವು ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವ ಕೆಲಸದಲ್ಲಿ ನಿರತವಾಗಿದ್ದಾಗ ೧೯೫೩–೫೫ರ ವರ್ಷಗಳಲ್ಲಿ ಆಕಸ್ಮಿಕ ಸನ್ನಿವೇಶಗಳಿಂದಾಗಿ ಪರಿಸ್ಥಿತಿ ಬಹಳ ಸುಧಾರಿಸಿತು. ಆದ್ದರಿಂದ ಕೃಷಿಕ್ಷೇತ್ರವನ್ನು ಎರಡನೆಯ ಸ್ಥಾನಕ್ಕೆ ತಳ್ಳಲಾಯಿತು; ಮೂಲ ಮತ್ತು ಬೃಹತ್ ಉದ್ದಿಮೆಗಳ ವಿಶೇಷಾಭಿವೃದ್ಧಿಯಿಂದ ಕೂಡಿದ ಕ್ಷಿಪ್ರ ಕೈಗಾರಿಕೀಕರಣದ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಸ್ಪಷ್ಟವಾಗಿ ಅದರ ಅಂದಾಜು ಮೊತ್ತಗಳು ತಪ್ಪಾದವು; ಎರಡನೆಯ ಯೋಜನೆಯು ಪ್ರಾರಂಭವಾದಾಗ ಆಹಾರ ಮತ್ತು ವಿದೇಶೀ ವಿನಿಮಯ ಕ್ಷೇತ್ರಗಳಲ್ಲಿ ಕೊರತೆ ಮತ್ತು ಅಭಾವಗಳು ಅನುಭವಕ್ಕೆ ಬರಲಾರಂಭಿಸಿದ್ದವು. ಹೀಗಾಗಿ ಗಳಿಸಿದ ಅನುಭವದ ಬೆಳಕಿನಲ್ಲಿ ನಮ್ಮ ಎಲ್ಲ ಗಮನವನ್ನೂ ಸಂಪೂರ್ಣವಾಗಿ ಎರಡನೆಯ ಯೋಜನೆಯ ಉದ್ದೇಶಗಳ ಈಡೇರಿಕೆಗಾಗಿ ಮತ್ತು ಪ್ರಚಲಿತವಿರುವ ಪರಿಸ್ಥಿತಿಗಳಿಗೆ ಅನುಗುಣವಾಗಿ ಹರಿಸಬೇಕಾದುದು ಯುಕ್ತ. ಇದು ಆರೋಪಿತ ಉದ್ದೇಶದಂತೆ ತೋರಬಹುದು. ಆದರೆ ಕೆಲವು ಜನರ ಭಾವನೆ ಏನೆಂದರೆ ಅವರ ಗಮನವನ್ನು ಕಡುಬಡತನದಿಂದ ಭರವಸೆಯ ಕಡೆಗೆ ತಿರುಗಿಸಲೆಂದೇ ಮೂರನೆಯ ಯೋಜನೆಯನ್ನು ಇಷ್ಟು ಮುಂಚಿತವಾಗಿಯೆ ತರುತ್ತಿದ್ದಾರೆನ್ನುವುದಾಗಿದೆ. ಆದರೆ ಸರ್ಕಾರ ಮತ್ತು ಯೋಜನಾ ಆಯೋಗ ಮೂರನೆಯ ಯೋಜನೆಯ ರಚನೆಯಲ್ಲಾಗಲೇ ನಿರತವಾಗಿರುವಾಗ, ಜನಸಂಘ ಕೂಡ ತನ್ನ ನಿಲುವಿನ ಪ್ರಕಾರ ಗೈರುಹಾಜರಾಗುವ ನಿರ್ಣಯವನ್ನು ಅಂಗೀಕರಿಸಿತು.

ಪಕ್ಷದ ದೃಷ್ಟಿಕೋನದಿಂದ ಯೋಜನೆಯನ್ನು ನೋಡಬಾರದೆಂದು ತನ್ನ ಹಿಂದಿನ ಅಭಿಪ್ರಾಯವನ್ನೇ ಜನಸಂಘದ ನಿರ್ಣಯವು ಮತ್ತೆ ಹೇಳಿತು. ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಮಾತ್ರವಲ್ಲ, ಯೋಜನೆಯ ರಚನೆಯಲ್ಲಿ ಕೂಡ ಎಲ್ಲ ಪಕ್ಷಗಳ ಸಹಕಾರ ಆವಶ್ಯಕವಾಗಿತ್ತು. ಆದರೆ ಇಲ್ಲಿಯವರೆಗೆ ಯೋಜನೆಯಲ್ಲಿ ಇತರ ಪಕ್ಷಗಳನ್ನೂ ತನ್ನೊಡನೆ ಸೇರಿಸಿಕೊಳ್ಳಲು ಸರ್ಕಾರ

ಇಷ್ಟಪಡಲಿಲ್ಲ. ಸ್ವಲ್ಪಮಟ್ಟಿಗೆ ಸ್ವಾಮ್ಯಭಾವದೊಡನೆ ಕಾಂಗ್ರೆಸ್ ಪಕ್ಷವೊಂದೆ ಅದನ್ನು ನೋಡಿಕೊಳ್ಳುತ್ತಿತ್ತು. ಆದರೆ ಹೆಚ್ಚುತ್ತಿರುವ ಕಷ್ಟನಷ್ಟಗಳಿಂದಾಗಿ ಮತ್ತು ಎರಡನೆಯ ಯೋಜನೆಯಲ್ಲಿ ಉದ್ದೇಶಿತ ಗುರಿಸಾಧನೆ ಸಾಧ್ಯವಿಲ್ಲವೆಂಬ ಖಚಿತ ಭಾವನೆಯಿಂದಾಗಿ ಪ್ರಧಾನ ಮಂತ್ರಿಗಳು ಇತರ ಪಕ್ಷಗಳಿಗೆ ಸೇರಿದ ಕೆಲವು ಸದಸ್ಯರೊಡನೆ ಸಮಾಲೋಚನೆ ಮಾಡುವುದನ್ನು ಕೂಡ ನಿಲ್ಲಿಸಿದ್ದಾರೆ. ಈ ಅನೌಪಚಾರಿಕ ಸಂಬಂಧದಿಂದಾಗಿ ಕಾಂಗ್ರೆಸ್ಸೇತರ ಪಕ್ಷಗಳ ಸದಸ್ಯರೂ ಯೋಜನೆಯ ವೈಫಲ್ಯದ ಅಪಕೀರ್ತಿಗೆ ಪಾತ್ರರಾಗುವ ಸಾಧ್ಯತೆ ಇದೆ ಎನ್ನುವುದು ಅರ್ಥವಾದೀತು. ಆದರೆ ಇದಕ್ಕೆ ವಿರೋಧಪಕ್ಷಗಳ, ವಿಶೇಷವಾಗಿ ಜನಸಂಘದ ಸಮ್ಮತಿ ಇಲ್ಲ. ಹೀಗಿದ್ದರೂ ಸರ್ಕಾರವು ನಿಜವಾಗಿಯೂ ಸಹಕಾರ ಮತ್ತು ಸಲಹೆಯನ್ನು ಕೋರುವುದಾದರೆ ದೇಶದ ವ್ಯಾಪಕ ಹಿತದೃಷ್ಟಿಯಿಂದ ನಾವು ಆ ಹೊಣೆಯನ್ನು ಭರಿಸಲು ಸಿದ್ಧರಾಗಬೇಕಾಗುತ್ತದೆ. ಸರ್ಕಾರ ಮತ್ತು ಯೋಜನಾ ಆಯೋಗದ ನೀತಿ ನಿಯಮಗಳ ರಚನೆಗೆ ಈ ಸಮಿತಿಯ ಮಾತುಕತೆಗಳಿಂದ ಎಷ್ಟರಮಟ್ಟಿಗೆ ಮಾರ್ಗದರ್ಶನ ದೊರೆಯಬಹುದೆಂಬುದು ಗೊತ್ತಿಲ್ಲ. ಅಂದಾಜು ಸಮಿತಿಯ (estimates committee) ಶಿಫಾರಸುಗಳಿಗೆ ವಿರುದ್ಧವಾಗಿ, ಬದಲಾಗುತ್ತಿರುವ ಯೋಜನೆಯ ಸಂರಚನೆಯ ಕೆಲಸಕ್ಕೆ ಪರಿಣತರನ್ನು ಹೊರಪಡಿಸಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ವ್ಯಕ್ತಿಗಳನ್ನೇ ನೇಮಕ ಮಾಡಿಕೊಳ್ಳಲಾಗುತ್ತಿದೆ; ಎಲ್ಲ ಪಕ್ಷಗಳ ಸಹಕಾರ ಬಯಸುವುದು ಕೇವಲ ಬಾಹ್ಯ ಪ್ರದರ್ಶನವಾಗಿದ್ದು ಮುಂದಿನ ಯೋಜನೆಯು ಪ್ರಮುಖವಾಗಿ ಕಾಂಗ್ರೆಸ್ ಪಕ್ಷದ ದೃಷ್ಟಿಕೋನವನ್ನೇ ಬಿಂಬಿಸುವುದೆಂಬ ಭಾವನೆಯನ್ನು ಬಲಪಡಿಸುತ್ತದೆ.

ಇದುವರೆಗಿನ ನಮ್ಮ ಯೋಜನೆಗಳಲ್ಲಿನ ಪ್ರಧಾನ ದೋಷ ಎಂದರೆ ಭಾರತದ ವಿಶಿಷ್ಟ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಪರದೇಶಗಳ ಅಭಿವೃದ್ಧಿಯ ಮಾದರಿಗಳನ್ನು ಇಲ್ಲಿ ಸ್ಥಾಪಿಸಲು ಪ್ರಯತ್ನಿಸಿದುದು. ಹೀಗಾಗಿ ಇಲ್ಲಿನ ಯೋಜನೆಗೆ ಬೇರುಗಳಿಲ್ಲ ಮತ್ತು ಜನರಲ್ಲಿ ಪ್ರೇರಣೆ ತುಂಬುವಲ್ಲಿ ಅವು ವಿಫಲವಾಗಿವೆ ಎನ್ನುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. 'ಸಮಾಜವಾದ'ದ ಅನುಷ್ಠಾನವನ್ನು ತನ್ನ ಗುರಿಯನ್ನಾಗಿ ಇಟ್ಟುಕೊಂಡಿರುವ ಕಾಂಗ್ರೆಸ್ಸಿನಿಂದ ಜನತೆ ಮತ್ತು ಯೋಜನೆಗಳ ನಡುವೆ ಇದ್ದ ಬಿರುಕು ಇನ್ನಷ್ಟು ವಿಸ್ತಾರವಾಗಿದೆ. ಸಮಾಜವಾದವು ನಮ್ಮ ನೆಲಕ್ಕೆ ಮತ್ತು ಸ್ವಭಾವ ಲಕ್ಷಣಗಳಿಗೆ ಅನ್ಯವಾದುದು. ಅದನ್ನು ಕೆಲವೊಮ್ಮೆ ಸಮಾಜ ಕಲ್ಯಾಣ ಮತ್ತು ಸಾಮಾಜಿಕ ನ್ಯಾಯಗಳೆಂದು ತಪ್ಪಾಗಿ ಗ್ರಹಿಸಲಾಗಿದೆ. ಬಹಳ ಪ್ರಶಂಸಾರ್ಹವಾದ ಉದ್ದೇಶಗಳತ್ತ ಸಮಾಜವಾದವು ಕರೆದೊಯ್ಯುತ್ತದೆಂದು ಸ್ಪಷ್ಟತೆಯಿಲ್ಲದೆ ಭಾವಿಸಲಾಗಿದೆ. ವಾಸ್ತವವಾಗಿ

ಸಮಾಜವಾದ ಎಂದರೆ ಎಲ್ಲ ಅಧಿಕಾರಗಳನ್ನು ರಾಜ್ಯ ರಾಷ್ಟ್ರದಲ್ಲಿ (State) ಕೇಂದ್ರೀಕರಿಸುವುದೆಂದು ಅರ್ಥ, ಆಚರಣೆಯಲ್ಲಿ ಆಳುವ ಪಕ್ಷ ಹಾಗೂ ಆಡಳಿತ ಯಂತ್ರ ಎಂಬ ಅರ್ಥವನ್ನು ಅದು ಹೊಂದಿದೆ. ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವದ ಎಲ್ಲ ಸಮರ್ಥಕ ದೇವರು ಎನಿಸಿದ ಶ್ರೀಸಾಮಾನ್ಯನ ಅಭ್ಯುದಯವನ್ನು ಸರ್ಕಾರ ಎಂದೂ ಗಮನಿಸಲಿಲ್ಲ. ಕಾಂಗ್ರೆಸ್ಸಿನ ನಿರ್ಣಯಗಳ ಪ್ರಕಾರ ಅದರ ಗುರಿ ಪ್ರಜಾಪ್ರಭುತ್ವೀಯ ಸಮಾಜವಾದದ ಸ್ಥಾಪನೆ. ಆದರೆ ಎಲ್ಲಿಯೂ ಸಮಾಜವಾದ ಮತ್ತು ಪ್ರಜಾಪ್ರಭುತ್ವ ಜೊತೆ ಜೊತೆಗೆ ಸಾಗಿಲ್ಲ. ಇಂಗ್ಲೆಂಡಿನಲ್ಲಿ (ಯು.ಕೆ.) ಲೇಬರ್ ಪಕ್ಷವು ಇವೆರಡನ್ನೂ ಜೋಡಿಸುವ ಪ್ರಯತ್ನವನ್ನು ನಡೆಸಿತು. ಆದರೆ ಪ್ರಜಾಪ್ರಭುತ್ವದ ಸಂಪ್ರದಾಯಗಳ ಪರವಾಗಿ ಅದು ತನ್ನ ಖಯಾಲುಗಳನ್ನು ಪರಿತ್ಯಜಿಸಬೇಕಾಯಿತು. ಲೇಬರ್ ಪಕ್ಷದ ಕಾರ್ಮಿಕ ಸಂಘಟನೆಗಳು ಕೂಡ (ಟ್ರೇಡ್–ಯೂನಿಯನ್) ರಾಷ್ಟ್ರೀಕರಣದ ಹಾದಿಯಲ್ಲಿ ಮುಂದೆ ಸಾಗಲು ಸಿದ್ಧವಾಗಲಿಲ್ಲ.

ಪ್ರಜಾಪ್ರಭುತ್ವದ ಆದರ್ಶಗಳಿಗೆ ಹೊಂದಿಕೆಯಾಗದ ಸಮಾಜವಾದದ ಆರ್ಥಿಕತೆಯು ರಾಷ್ಟ್ರದ ಅಧಿಕಾರದ ಹೆಚ್ಚಿನ ಕೇಂದ್ರೀಕರಣದ ಕಡೆಗೇ ಬಹುಮಟ್ಟಿಗೆ ಒಯ್ಯುವುದರಿಂದ ಆ ಶಬ್ದಗಳನ್ನು ಜನಸಂಘದ ನಿರ್ಣಯದಿಂದ ಕೈಬಿಡಬೇಕೆಂದು ದೆಹಲಿಯಿಂದ ಬಂದ ಪ್ರತಿನಿಧಿಯೊಬ್ಬ ಅಪೇಕ್ಷಿಸಿದ. ವಿಶೇಷವಾಗಿ ದೇಶದ ಯುಜ ಜನರು ಸಮಾಜವಾದದ ಘೋಷಣೆಯಿಂದ ಬಹಳ ಆಕರ್ಷಿತರಾಗಿರುವಾಗ, ಸಮಾಜವಾದದ ಬಗೆಗಿನ ನಮ್ಮ ವಿರೋಧವಾದರೋ ರಾಜಕೀಯ ಲಾಭವನ್ನೇನೂ ತಂದುಕೊಡುವುದಿಲ್ಲವೆಂಬುದು ಸ್ಪಷ್ಟವಾಗಿ ಆತನ ಭಾವನೆಯಾಗಿತ್ತು. ಆತ ಹೇಳಿದ್ದರಲ್ಲಿ ಸ್ವಲ್ಪಮಟ್ಟಿನ ಸತ್ಯವಿದ್ದಿರಬಹುದು. ಆದರೆ ಪ್ರತಿಯೊಬ್ಬನೂ ಮೃಗಜಲವನ್ನು ಅರಸಿ ವಿವೇಕವಿಲ್ಲದೆ ಓಡುತ್ತಿರುವ ಸಮಯದಲ್ಲಿ ಸತ್ಯವನ್ನು ಹೆಚ್ಚು ಧೈರ್ಯ ವಹಿಸಿ ಕೆಲವರಾದರೂ ಹೇಳಬೇಕಾದ ಆವಶ್ಯಕತೆ ಇದೆ. ಅದು ರಾಷ್ಟ್ರೀಯವಾಗಿ ಪ್ರಯೋಜನಕಾರಿಯಾಗುವುದಾದರೆ ರಾಜಕೀಯವಾಗಿ ಕೂಡ ಪ್ರಯೋಜನ–ಕಾರಿಯಾಗಬೇಕು.

ರಾಷ್ಟ್ರದಲ್ಲಿನ ಎಲ್ಲ ಅಧಿಕಾರ ಕೇಂದ್ರೀಕರಣದ ಕಡೆಗೆ ಸಮಾಜವಾದ ಒಯ್ಯುವುದರಿಂದ ಜನಸಂಘವು ಅದನ್ನು ವಿರೋಧಿಸುವಂತೆಯೇ ವ್ಯಕ್ತಿಗಳಲ್ಲಿ ಅಧಿಕಾರ ಕೇಂದ್ರೀಕೃತವಾಗುವ ಬಂಡವಾಳಶಾಹಿಯನ್ನೂ ವಿರೋಧಿಸುತ್ತದೆ. ಬಂಡವಾಳಶಾಹಿ ಮತ್ತು ಸಮಾಜವಾದಗಳು ವಾಸ್ತವವಾಗಿ ಒಂದೇ ರೋಗದ ಎರಡು ರೂಪಗಳಾಗಿವೆ. ಯೂರೋಪಿನಲ್ಲಿ ಕೈಗಾರಿಕಾ ಕ್ರಾಂತಿಯು ಸ್ವಉದ್ಯೋಗದ ಕೆಲಸಗಾರನನ್ನು ನಾಶ ಮಾಡುವತ್ತ ಸಾಗಿತು. ಕೈಗಾರಿಕೀಕರಣದ ಕಾರ್ಯಕ್ರಮವನ್ನು

ನಾವು ಪ್ರಾರಂಭಿಸುತ್ತಿರುವಾಗ ಭಾರತದಲ್ಲಿ ಸರಿಯಾದ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಂಡರೆ, ವಿಕೇಂದ್ರೀಕರಣವನ್ನು ನಮ್ಮ ಸಿದ್ಧಾಂತವನ್ನಾಗಿ ಸ್ವೀಕರಿಸಿ, ಬಂಡವಾಳಶಾಹಿ ಮತ್ತು ಪ್ರಜಾಪ್ರಭುತ್ವಗಳೆರಡರ ಕೇಡುಗಳನ್ನೂ ನಿವಾರಿಸಲು ಸಾಧ್ಯವಿದೆ. ಸಣ್ಣ ಘಟಕಗಳಿಂದ ಉತ್ಪಾದನೆ ಎನ್ನುವುದು ನಿಯಮವಾಗಬೇಕು.

ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸುವಾಗ ಗಮನದಲ್ಲಿ ಇರಿಸಿಕೊಳ್ಳಬೇಕಾದ ಏಳು ನಿರ್ದಿಷ್ಟ ಅಂಶಗಳನ್ನು ಜನಸಂಘದ ನಿರ್ಣಯ ಸೂಚಿಸುತ್ತದೆ. ಅಪಾರ ಜನಸಂಖ್ಯೆ ಇರುವ ದೇಶದಲ್ಲಿ ಯೋಜನೆಯ ಸಮಸ್ಯೆಯ ಮುಖ್ಯ ಭಾಗವಿರುವುದು ಬರಿಗೈಗಳು ಕೆಲಸದಲ್ಲಿ ತೊಡಗುವಂತೆ ಮಾಡುವಲ್ಲಿ. ಲಾಭದಾಯಕವಾಗಿ ಜನತೆಯನ್ನು ನೇಮಿಸಿಕೊಂಡಲ್ಲಿ ಅದೊಂದು ಆಸ್ತಿಯಾಗಿ ಪರಿಣಮಿಸುವುದು; ಇಲ್ಲವಾದಲ್ಲಿ ಆರ್ಥಿಕತೆಯನ್ನು ಲಂಬಿಸುವಂತೆ ಮಾಡಿ ಹೊರೆಯಾಗುವುದು. ನಮ್ಮೆಲ್ಲ ಯೋಜನೆಗಳಲ್ಲಿ ಮುಖ್ಯ ಉದ್ದೇಶವಾಗಬೇಕಾದುದು ಪೂರ್ಣ ನೇಮಕಾತಿ ಎಂದು ಜನಸಂಘವು ಭಾವಿಸುತ್ತದೆ. ಆದರೆ ಈ ಆದರ್ಶವಾದರೋ ಅನುಬಂಧದ ಸ್ಥಾನಕ್ಕೆ ತಳ್ಳಲ್ಪಟ್ಟಿದೆ; ಹಾಗೆಯೇ ಮೂರನೆಯ ಯೋಜನೆಯನ್ನು ಕುರಿತ ನಿರ್ಣಯದಲ್ಲಿ ಕೂಡ ಹೆಚ್ಚಬೇಕಾದ ಕೃಷಿ ಉತ್ಪಾದನೆಯ ಪ್ರಾಮುಖ್ಯ ಪುನರುಕ್ತವಾಗಬೇಕಾದ ಅಗತ್ಯವಿಲ್ಲ. ಎಲ್ಲ ಕೈಗಾರಿಕೀಕರಣದಲ್ಲಿ ಇದೊಂದು ಆವಶ್ಯಕ ಪೂರ್ವಭಾವಿ ಷರತ್ತಾಗಬೇಕೆಂಬುದು ಮನವರಿಕೆಯಾಗದಿರುವುದು ವಿಷಾದನೀಯ. ಹೆಚ್ಚಿದ ಕೃಷಿ ಆಹಾರದ ಮಿಗಿತಾಯವು ಕೇವಲ ನಗರಜನರಿಗೆ ಮಾತ್ರವಲ್ಲ, ಕೈಗಾರಿಕೆಯ ಉತ್ಪನ್ನಗಳಿಗೆ ಬೇಡಿಕೆ ಇರುವ ಮಾರುಕಟ್ಟೆಯೊಂದನ್ನು ಒದಗಿಸುವುದಕ್ಕೆ ಕೂಡ ಆವಶ್ಯಕ. ಬೆಲೆ ನಿಗದಿಪಡಿಸುವ ನೀತಿಯೊಂದರಿಂದಾಗಿ ಇಡೀ ಆರ್ಥಿಕತೆಯು ಸಮಾನವಾದ ಹಳಿಯ ಮೇಲೆ ಮುಂದೆ ಸಾಗಲು ಸ್ಫೂರ್ತಿ ದೊರೆಯಬಹುದು. ರೈತನಿಗೆ ನ್ಯಾಯಸಮ್ಮತವಾದ ಪ್ರತಿಫಲ ಲಭ್ಯವಾಗುವ ವಿಷಯದ ಬಗ್ಗೆ ಕಾಂಗ್ರೆಸ್ ನಿರ್ಣಯ ಪ್ರಸ್ತಾಪಿಸುತ್ತದೆ. ಆದರೆ ಸ್ಥಿರಬೆಲೆಯ ಮಟ್ಟವನ್ನು ಉಳಿಸಿಕೊಳ್ಳುವ ಅಪೇಕ್ಷೆಯನ್ನು ಅದೆಲ್ಲೂ ಉಲ್ಲೇಖಿಸುವುದಿಲ್ಲ. ಕೃಷಿಕನು ಬಯಸುವುದು ಉನ್ನತ ಬೆಲೆಗಳಿಗಿಂತ ಹೆಚ್ಚಾಗಿ ಸ್ಥಿರಬೆಲೆಗಳನ್ನು. ಪ್ರಾಥಮಿಕ ಉತ್ಪಾದಕನಿಗೆ ಹಣದುಬ್ಬರ ಪ್ರವೃತ್ತಿಗಳು ಯಾವಾಗಲೂ ಹಾನಿಕರ; ಅದರಲ್ಲಿಯೂ ವಿಶೇಷವಾಗಿ ಹೆಚ್ಚು ಭೂಮಿಯನ್ನು ಹೊಂದುವ ಸಾಮರ್ಥ್ಯ ಬಹಳ ಕಡಿಮೆ ಇರುವ ಈ ದೇಶದಲ್ಲಿ.

ದಳ್ಳಾಳಿ ಲಭ್ಯತೆ ಇರುವ ಭಾರತದಲ್ಲಿ ಸಣ್ಣ ಪ್ರಮಾಣದ ಉದ್ಯಮಗಳು ಅತ್ಯುತ್ತಮವಾಗಿ ಹೊಂದಿಕೊಳ್ಳುತ್ತವೆ. ಕಾಂಗ್ರೆಸ್ ಕೂಡ ಸಣ್ಣ ಉದ್ದಿಮೆಗಳ ಬಗ್ಗೆ ಮಾತನಾಡುತ್ತದೆ; ಆದರೆ ಅದರ ಕಾರ್ಯಚಟುವಟಿಕೆಗಳು ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಸಂಘದಿಂದ ಪೋಷಿತವಾಗಿರುವ ಹದಿನಾಲ್ಕು

ಉದ್ಯಮಗಳಿಗೆ ಮಾತ್ರವೇ ಸೀಮಿತವಾಗಿವೆ. ಸಣ್ಣ ಉದ್ಯಮಗಳ ಉದ್ದೇಶಗಳನ್ನು ಅವು ಹಾಳು ಮಾಡುತ್ತಿವೆ. ಆಧುನಿಕವಾದ ಯಾಂತ್ರೀಕೃತ ಘಟಕಕ್ಕೇ ಇನ್ನೂ ಹೆಚ್ಚಿನ ಗಮನ ನೀಡಬೇಕೆಂದು ಜನಸಂಘ ಬಯಸುತ್ತದೆ. ಚಿಕ್ಕಪುಟ್ಟ ಆವಿಷ್ಕಾರಗಳು ದೇಶೀ ಯಂತ್ರಗಳ ಉತ್ಪಾದಕತೆಯನ್ನು ಬಹಳ ಹೆಚ್ಚಿಸುತ್ತವೆ.

ಮೂರನೆಯ ಯೋಜನೆಯ ಕಾಲದಲ್ಲಿ ಸರ್ಕಾರವು ಸಾರ್ವಜನಿಕ ವಲಯದಲ್ಲಿ ವಿಸ್ತರಣೆಗಿಂತ ಹೆಚ್ಚಾಗಿ ಬಲವರ್ಧನೆಗೆ ತನ್ನನ್ನು ಸೀಮಿತಗೊಳಿಸಿಕೊಳ್ಳಬೇಕೆಂದು ಪ್ರಾಯೋಗಿಕ ಆಧಾರಗಳ ಮೇಲೆ ಜನಸಂಘದ ನಿರ್ಣಯವು ಸೂಚಿಸಿತು. ಸಾರ್ವಜನಿಕ ಉದ್ದೇಶಗಳಿಗೆ ಹೆಚ್ಚಿನ ಸಂಪನ್ಮೂಲಗಳನ್ನು ಪಡೆದುಕೊಳ್ಳಲು ಸ್ಟೇಟ್ ಟ್ರೇಡಿಂಗ್ ಮತ್ತು ಸಾರ್ವಜನಿಕ ಉದ್ದಿಮೆಗಳನ್ನು ನಡೆಸಬೇಕೆಂದು ಕಾಂಗ್ರೆಸ್ ನಿರ್ಣಯವು ಹೇಳುತ್ತದೆ. ಸಾರ್ವಜನಿಕ ಉದ್ದಿಮೆಗಳನ್ನು ವ್ಯಾಪಾರ ಸಿದ್ಧಾಂತಗಳ ಅನುಸಾರ ನಡೆಸಬೇಕೆಂದಾದಲ್ಲಿ, ಅಂಥ ಗುರಿಯನ್ನು ಸಾಧಿಸಲು ಸಾಧ್ಯವಾಗುವುದು ದಕ್ಷ ಮತ್ತು ಆರ್ಥಿಕ ನಿರ್ವಹಣೆಯ ಮೂಲಕ. ಇಲ್ಲವಾದಲ್ಲಿ ಈ ಉದ್ದಿಮೆಗಳ ದರ ಮತ್ತು ಬೆಲೆ ವಿನ್ಯಾಸದಲ್ಲಿ ತೆರಿಗೆಯ ಅಂಶವೊಂದು ಅಂತರ್ಗತವಾಗಿರುವುದು. ಏಕಸ್ವಾಮ್ಯದ ನಿಯಂತ್ರಣದಿಂದ ಕಾರ್ಯಕ್ಷಮತೆ ಹೆಚ್ಚುವುದಿಲ್ಲ. ಇದುವರೆಗೆ ಸರ್ಕಾರವು ತನ್ನ ಕಾರ್ಯ ಚಟುವಟಿಕೆಗಳನ್ನು ಬಹುವೇಗವಾಗಿ ಹೆಚ್ಚಿಸುತ್ತಿದೆ. ಸೇವೆಗಳಲ್ಲಿ ತರಬೇತಿಯನ್ನು ಪಡೆದ ಕಾರ್ಯಪಡೆಯೊಂದರ ರಚನೆ, ಲೋಕಸಭೆಯ ನಿಯಂತ್ರಣ, ಉತ್ತರದಾಯಿತ್ವ ಮುಂತಾದ ಪ್ರಶ್ನೆಗಳನ್ನು ಇನ್ನೂ ಪೂರ್ಣವಾಗಿ ಪರಿಗಣಿಸಿಲ್ಲ. ಇಡೀ ವಿಷಯವೇ ಅಡ್ಡಾದಿಡ್ಡಿಯ ಬೆಳವಣಿಗೆಯಾಗಿದೆ. ಯೋಜಿತ ಬೆಳವಣಿಗೆಯ ಪರಿಕಲ್ಪನೆಯೊಡನೆ ಅದು ಹೊಂದಿಕೊಳ್ಳುವುದಿಲ್ಲ. ನಾವು ಆರಂಭಿಸಿರುವುದು ಏನನ್ನು ಎನ್ನುವುದರ ಬಗ್ಗೆ ನಾವು ಕ್ಷಣಕಾಲ ನಿಂತು ಪರ್ಯಾಲೋಚಿಸಿ, ಪ್ರತಿಯೊಂದನ್ನೂ ವ್ಯವಸ್ಥಿತ ಕ್ರಮದಲ್ಲಿ ಜೋಡಿಸಬೇಕಾದ ಮತ್ತು ಲಾಭಗಳನ್ನು ಸ್ಥಿರಪಡಿಸಬೇಕಾದ ಬಗ್ಗೆ ಗಮನವನ್ನು ಕೇಂದ್ರೀಕರಿಸಬೇಕಾದ್ದು ಆವಶ್ಯಕ. ಹಗರಣಗಳಿಂದ ತುಂಬಿ ಬಿರಿಯುವ ಅಧಿಕ ಸಂಖ್ಯೆಯ ಸಾರ್ವಜನಿಕ ವಲಯದ ಉದ್ದಿಮೆಗಳಿಗಿಂತ ಚೆನ್ನಾದ ನಿರ್ವಹಣೆಯನ್ನು ಹೊಂದಿರುವ ಸಾರ್ವಜನಿಕ ಸಂಸ್ಥೆಗಳು ಸಾರ್ವಜನಿಕ ವಲಯದ ಆಶೋತ್ತರಗಳನ್ನು ಈಡೇರಿಸುವುವು.

ಹೊಸ ಯೋಜನೆಯೊಂದನ್ನು ರೂಪಿಸುವಾಗ ಹಿಂದಿನ ಯೋಜನೆಯೊಂದಿಗೆ ಅದನ್ನು ಜೋಡಿಸುವುದು ಯಾವಾಗಲೂ ಆವಶ್ಯಕ. ಆದರೆ ಮೊದಲ ಯೋಜನೆಯ ಪ್ರತಿಫಲಗಳನ್ನು ಬಳಸಿಕೊಳ್ಳಲು ನಾವು ಸರಿಯಾದ ವ್ಯವಸ್ಥೆಯನ್ನು ಮಾಡಿಕೊಳ್ಳಲಿಲ್ಲ. ಅದೇ ತಪ್ಪುಗಳನ್ನು ನಾವೀಗ ಮಾಡದಿರೋಣ. ಮೊದಲ ಯೋಜನೆಯಲ್ಲಿ ರೂಪಿಸಲಾದ ನೀರಾವರಿ ಸಾಧ್ಯತೆಯನ್ನು ಎರಡನೆಯ ಯೋಜನೆಯಲ್ಲಿ

ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ; ಸರ್ಕಾರಿ ಕಾರ್ಯಾಗಾರಗಳಲ್ಲಿ ಉತ್ಪಾದಿತವಾದ ಕಡೆತ ಯಂತ್ರಗಳಿಗೊಂದು ಮಾರುಕಟ್ಟೆಯನ್ನು ಕಂಡುಕೊಳ್ಳಲು ಸಾಧ್ಯವಾಗಲಿಲ್ಲವೆಂದರೆ ತಪ್ಪಿರುವುದು ಯೋಜನಾ ಆಯೋಗದಲ್ಲಿಯೆ. ಮೂರನೆಯ ಯೋಜನೆಯಲ್ಲಿ ಇಂಥ ತಪ್ಪುಗಳು ಮರುಕಳಿಸದಂತೆ ನಾವು ಎಚ್ಚರ ವಹಿಸಬೇಕು.

ಯಾವುದೇ ಯೋಜನೆಯ ಯಶಸ್ಸಿಗೆ ಯಾವಾಗಲೂ ಯೋಗ್ಯ ಮಾನವ ಸಾಮಗ್ರಿ ಪ್ರಮುಖವಾದುದು. ಎರಡು ಯೋಜನೆಗಳೂ ತರಬೇತಿ ಮತ್ತು ಶಿಕ್ಷಣದ ಈ ಮೂಲಭೂತ ಆವಶ್ಯಕತೆಯನ್ನು ಉಪೇಕ್ಷಿಸಿವೆ. ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಧೈರ್ಯವಾಗಿ ಪುನಸ್ಸಂಘಟಿಸಲು ಮುಂದೆ ಬರುವವರೆಗೂ ನಾವು ನಮ್ಮ ಆರ್ಥಿಕತೆಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ತರಲಾರೆವು. ಶಿಕ್ಷಿತ ನಿರುದ್ಯೋಗಿಗಳ ಹೆಚ್ಚುತ್ತಿರುವ ಸಂಖ್ಯೆ ಸಮಸ್ಯೆ ಸೃಷ್ಟಿಸುತ್ತಿರುವುದು ಕೇವಲ ಅರ್ಥಶಾಸ್ತ್ರಜ್ಞನಿರಿಗಷ್ಟೇ ಅಲ್ಲ, ಸಮಾಜಶಾಸ್ತ್ರಜ್ಞ, ರಾಜಕಾರಣಿ ಹಾಗೂ ಆಡಳಿತಗಾರರಿಗೆ ಕೂಡ. ಇಂಥ ಸಾಮಾಜಿಕ–ಆರ್ಥಿಕ ಸನ್ನಿವೇಶದಲ್ಲಿ ನಮ್ಮ ಮಕ್ಕಳು ತಮ್ಮ ಜೀವನವನ್ನು ಅರ್ಥಪೂರ್ಣವನ್ನಾಗಿ ಮಾಡಿಕೊಳ್ಳಲು ಅವರಿಗೆ ಯೋಗ್ಯ ಶಿಕ್ಷಣವನ್ನು ನೀಡೋಣ.

ಕಾಂಗ್ರೆಸ್ ನಿರ್ಣಯವಾದರೋ ಈ ಸನ್ನಿವೇಶದ ವಾಸ್ತವ ಸಂಗತಿಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಆಸ್ಟಿರಿಟಿ ನೋ ಆ್ಯನ್ಸರ್ ಎಂಬ ಶಿರೋನಾಮೆಯಡಿ ಈ ಬಗ್ಗೆ ವಿಮರ್ಶಿಸುತ್ತ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ಬರೆಯಿತು: ಸಮಿತಿಯ ಕಾರ್ಯಕ್ರಮದಲ್ಲಿ ಘೋಷಿಸಲಾದ ಆರು ಅಂಶಗಳು ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಪರೀಕ್ಷೆಗೆ ಒಳಪಡಿಸದ ಪಠ್ಯಪುಸ್ತಕದ ಸೂತ್ರಗಳಂತೆ ಕಾಣುತ್ತವೆ. ತನ್ನ ಸಂಪಾದಕೀಯದಲ್ಲಿ ಹಿಂದೂಸ್ತಾನ್ ಟೈಮ್ಸ್ ಕೂಡ ಬರೆಯಿತು: ಯೋಜನೆಯನ್ನು ಕುರಿತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಕರಡು ನಿರ್ಣಯವಾದರೋ ಸಾರ್ವಜನಿಕರತ್ತ ಎಸೆದ ರಾಜಕೀಯ ಅಟಾಟೋಪದ ಕುಂಟುನೆಪದಂತೆ ಧ್ವನಿಸುತ್ತದೆ. ಅದು ನೆಪಗಳಿಂದ ಪ್ರಾರಂಭವಾಗಿ ಘೋಷಣೆಗಳೊಡನೆ ಕೊನೆಗೊಳ್ಳುತ್ತದೆ. ಕಾಂಗ್ರೆಸ್ ದೃಷ್ಟಿಕೋನದ ಸಮರ್ಥಕರೆಂದು ಹೇಳಲಾದವರ ಈ ಅಭಿಪ್ರಾಯಗಳಿಂದ, ಯೋಜನೆಯ ಮಾಂತ್ರಿಕತೆ ವೇಗವಾಗಿ ವಿಫಲಗೊಳ್ಳುತ್ತಿದ್ದು ಸತ್ಯಾಂಶಗಳಿಗೆ ವಿರುದ್ಧವಾದ ಸಂಗತಿಗಳನ್ನು ನಂಬುವಂತೆ ಮಾಡಿ ಜನರನ್ನು ಮೋಸಗೊಳಿಸುತ್ತಿದೆ ಎನ್ನುವುದು ವ್ಯಕ್ತವಾಗುತ್ತದೆ.

* * * * *

# ಬೇಕಿದೆ–ಏಕಾತ್ಮಕರೂಪದ ಒಂದು ಸರ್ಕಾರ

ಕಳೆದ ವರ್ಷ ಭಾರತ ಸರ್ಕಾರವು ರಾಜ್ಯಗಳ ಪುನಸ್ಸಂಘಟನೆಯ / ಪುನರ್ವಿಂಗಡಣೆಯ ಕಾರ್ಯಕ್ಕಾಗಿ ಉನ್ನತಾಧಿಕಾರದ ಸಮಿತಿಯೊಂದನ್ನು ರಚಿಸಿತು. ಅದೀಗ ತನ್ನ ಕಾರ್ಯವನ್ನು ಮುಂದುವರಿಸುತ್ತಿದೆ. ಆದ್ದರಿಂದ ನಾವು ಆಳವಾಗಿ ಮತ್ತು ಅತಿಗಂಭೀರವಾಗಿ ಈ ಸಮಸ್ಯೆಯನ್ನು ಮತ್ತು ಇದರಿಂದ ಉಂಟಾಗಬಹುದಾದ ಭಾರತದ ಬದಲಾದ ಮುಖವನ್ನು ಕುರಿತು ಆಲೋಚಿಸಬೇಕಾದುದು ಆವಶ್ಯಕ. ಹಿಂಸಾತ್ಮಕ ಚಳುವಳಿಯಿಂದಾಗಿ ಪ್ರತ್ಯೇಕ ಆಂಧ್ರ ರಾಜ್ಯವೊಂದು ಅಸ್ತಿತ್ವಕ್ಕೆ ಬಂತು; ಇದರಿಂದ ಶ್ರೀರಾಮುಲು ಮರಣವನ್ನು ಅನುಕೂಲಕರ ಉಪಕರಣವನ್ನಾಗಿ ಬಳಸಿಕೊಳ್ಳುವ ಸಾಧ್ಯತೆ ಇದೆ. ಇದೊಂದು ಉತ್ತಮ ಮೇಲ್ಪಂಕ್ತಿಯಾಗಿ ಇತರ ಪ್ರದೇಶಗಳಿಗೆ ಪರಿಣಯಿಸಬಹುದೆಂದು ಭೀತಿಪಡಬೇಕಾಗಿದೆ. ನಮ್ಮ ಭವಿಷ್ಯದ ನಿರ್ಮಾಪಕರು ಈಗ ನಾವೇ ಆಗಿದ್ದೇವೆ. ಅಂಥ ಘಟನೆಗಳಿಗೆ ಮತ್ತು ಪರಿಸ್ಥಿತಿಗಳಿಗೆ, ಹಾಗೆಯೇ ಪಕ್ಷಪಾತದ, ವಿಭಜನಕಾರಿಯಾದ ಮತ್ತು ಸ್ವಾರ್ಥದ ಭಾವನೆಗಳಿಗೆ ಬಲಿ ಬೀಳುವ ಮೂಲಕ ರಾಷ್ಟ್ರೀಯ ಅಭ್ಯುದಯವನ್ನು ಹಾಳುಗೆಡವದಿರುವ ಹೊಣೆಗಾರಿಕೆಯೂ ನಮ್ಮ ಮೇಲಿದೆ.

ಪ್ರಾಂತಗಳ ಪ್ರಸ್ತುತ ವ್ಯವಸ್ಥೆಯು ಯಾವುದೇ ನಿರ್ದಿಷ್ಟ ಸಿದ್ಧಾಂತವನ್ನು ಹೊಂದಿಲ್ಲವೆನ್ನುವುದು ಸುವಿದಿತ ಸಂಗತಿ. ನಮ್ಮ ರಾಷ್ಟ್ರೀಯ ಜೀವನದ ಮೂಲಭೂತ ವಿಕಾಸದಲ್ಲಿ ಈ ವ್ಯವಸ್ಥೆಯು ಬೇರೂರಿಲ್ಲ. ಇನ್ನೊಂದೆಡೆ ಇದು ಕಳೆದ ಇನ್ನೂರೈವತ್ತು ವರ್ಷಗಳ ಇತಿಹಾಸದ ಆಕಸ್ಮಿಕಗಳ ಮತ್ತು ಬ್ರಿಟಿಷರಿಂದ ದೇಶದ ವಿವಿಧ ಭಾಗಗಳ ಮೇಲಾದ ಕ್ರಮಿಕ ವಿಜಯಗಳ ಕುರುಹುಗಳ ನಿವ್ವಳ / ಒಟ್ಟು ಫಲಿತಾಂಶವಾಗಿದೆ. ೧೮೫೭ರ ಸ್ವಾತಂತ್ರ್ಯ ಸಮರದ ಅನಂತರ ವಿಸ್ಮಯಕರವೂ ಸ್ಫೂರ್ತಿಯುತವೂ ಆದ ರಾಷ್ಟ್ರೀಯ ಜಾಗೃತಿಯೊಂದು ರೂಪುಗೊಂಡಿದ್ದು ಅದನ್ನು ಉದ್ದೇಶಪೂರ್ವಕವಾಗಿ ದಮನ ಮಾಡಲು ಹಾಗೂ ವಿಘಟನೆಯ ಮತ್ತು ಪ್ರತ್ಯೇಕತೆಯ ಮನೋಭಾವದ ದುಷ್ಪ್ರವೃತ್ತಿಗಳನ್ನು ಬಿತ್ತಲು ಬ್ರಿಟಿಷರು ಹೊಸ ಪ್ರಾಂತಗಳ ರಚನೆಯನ್ನು ಪ್ರಕಟಿಸಿದರು.

ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ನಮ್ಮ ಹೋರಾಟವು ಪರಿಹಾರ ಬಯಸಿ ಎರಡು ಬಗೆಯ ಪ್ರವೃತ್ತಿಗಳಾಗಿ ತನ್ನನ್ನು ತೊಡಗಿಸಿಕೊಂಡಿತು. ಇವುಗಳಲ್ಲೊಂದು ಸುಧಾರಕ ಪ್ರವೃತ್ತಿ; ಇನ್ನೊಂದು ಕ್ರಾಂತಿಕಾರಿ ಪ್ರವೃತ್ತಿ.

ಆದರೆ ಇವೆರಡೂ ಪ್ರವೃತ್ತಿಗಳು ಎಷ್ಟು ನಿಕಟವಾಗಿ ಪರಸ್ಪರ ಪೂರಕವಾಗಿವೆ ಎಂದರೆ ಅವನ್ನು ಪ್ರತ್ಯೇಕಿಸಲು ಸಾಧ್ಯವಾಗುವುದಿಲ್ಲ. 'ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು' ಎಂಬ ಸ್ಫೂರ್ತಿಕಾರಕ ಘೋಷವಾಕ್ಯವನ್ನು ನೀಡಿದ ಹಾಗೆಯೇ ಭಾರತದ ಅಶಾಂತಿಯ ಜನಕ ಎಂಬ ಅಡ್ಡ ಹೆಸರನ್ನು ಪಡೆದಿದ್ದ ಲೋಕಮಾನ್ಯ ತಿಲಕರೂ ೧೯೧೯ರಲ್ಲಿ ಸುಧಾರಣಾವಾದವನ್ನೆ ಸ್ವೀಕರಿಸಿ 'ಕೊಟ್ಟದ್ದನ್ನು ಒಪ್ಪಿಕೊಳ್ಳಿ, ಹೆಚ್ಚಿನದಕ್ಕೆ ಹೋರಾಡಿ' ಎಂದು ಬೋಧಿಸುವಂತಾಯಿತು. ಈ ಅವಧಿಯಲ್ಲಿ ವಿದೇಶೀ ಶಕ್ತಿಗಳು ನಮಗಾಗಿ ಸಿದ್ಧಪಡಿಸಿದ ಸಾಂವಿಧಾನಿಕ ಸುಧಾರಣೆಗಳಲ್ಲಿ ಭಾರತೀಯ ಸಮಾಜಕ್ಕೆ ಬಿತ್ತುವಂಥ ವಿಷದ ಬೀಜಗಳನ್ನು ಅನಿವಾರ್ಯವಾಗಿ ಸೇರಿಸಿದ್ದವು; ಅವುಗಳ ವಿರುದ್ಧ ನಾವು ಪ್ರತಿಭಟಿಸಿದೆವು, ನಿರ್ಣಯಗಳನ್ನು ಕೈಗೊಂಡೆವು. ಆದರೆ ಈ ಸಾಂವಿಧಾನಿಕ ಸುಧಾರಣೆಗಳನ್ನು ನಾವು ಸಂಪೂರ್ಣವಾಗಿ ತಿರಸ್ಕರಿಸಲಾಗಲಿ ಅಥವಾ ಅಂಗೀಕರಿಸಲಾಗಲಿ ಸಾಧ್ಯವಾಗಲಿಲ್ಲ. ಅವುಗಳ ದೋಷಯುಕ್ತ ಅಂಶಗಳನ್ನು ನಾವು ನೋಡಿದೆವಷ್ಟೇ ಅಲ್ಲ, ಅವುಗಳ ಪರಿಣಾಮಗಳನ್ನೂ ಅನುಭವಿಸಿದೆವು. ಈ ವಿಷಯದಲ್ಲಿ ಕಮ್ಯುನಲ್ ಅವಾರ್ಡ್ ಒಂದು ಪ್ರಮುಖ ಉದಾಹರಣೆಯಾಗಿದೆ.

ನಮ್ಮ ಪ್ರಧಾನ ಬೇಡಿಕೆ ಎಂದರೆ ಆಡಳಿತದ ಭಾರತೀಕರಣ. ಈ ಬೇಡಿಕೆಗೆ ಬ್ರಿಟಿಷರು ಎಷ್ಟರಮಟ್ಟಿಗೆ ಸ್ಪಂದಿಸಿದರೆಂಬ ಅಂಶವಿರಲಿ, ಈ ಬೇಡಿಕೆಯ ಈಡೇರಿಕೆಯು ಪರಸ್ಪರ ದ್ವೇಷದ ಮತ್ತು ವಿನಾಶಕ ಘರ್ಷಣೆಗಳ ಬೀಜಗಳನ್ನು ಬಿತ್ತಿದವು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆಂಗ್ಲ ಶಿಕ್ಷಣ ಸರ್ಕಾರಿ ಸೇವೆಗೆ ಒಂದು ರಹದಾರಿಯಾಗಿತ್ತು. ಅದರ ಅರ್ಥವೆಂದರೆ ರಾಷ್ಟ್ರಜೀವನದ ಮೇಲೆ ಆಂಗ್ಲ ಶಿಕ್ಷಣದ ಹೆಚ್ಚುತ್ತಿರುವ ಪ್ರಭಾವ. ದೇಶದ ಹೆಚ್ಚು ಹೆಚ್ಚು ಪ್ರಾಂತಗಳು ಬ್ರಿಟಿಷರ ಕೈವಶವಾಗುತ್ತಿದ್ದಂತೆ, ಆಂಗ್ಲ ಶಿಕ್ಷಣವನ್ನು ಹೊಂದಿದ ಜನರು ಸರ್ಕಾರದ ಉದ್ಯೋಗಗಳನ್ನು ಪಡೆದುಕೊಳ್ಳತೊಡಗಿದರು. ಇದರ ಪರಿಣಾಮವಾಗಿ ಸರ್ಕಾರಿ ಸೇವೆಗಳಲ್ಲಿ ಕೆಲವು ಪ್ರಾಂತಗಳಿಗೆ ಸೇರಿದ ಜನರೇ ಹೆಚ್ಚಿನ ಪ್ರಾಬಲ್ಯ ಹೊಂದಿದರು. ಆದ್ದರಿಂದ ಆಡಳಿತದ ರಾಷ್ಟ್ರೀಕರಣದ ಬೇಡಿಕೆಯು ಬ್ರಿಟಿಷಿಸಂನ ವಿರುದ್ಧ ಹುಟ್ಟಿಕೊಂಡಿದ್ದಾದರೂ ಪರಿಣಾಮವಾದದ್ದೆಂದರೆ ಪ್ರಾಂತಗಳ ಜನರ ನಡುವೆ ದ್ವೇಷ ಮತ್ತು ಪೈಪೋಟಿಗಳಿಗೆ ಅದು ಸಹಾಯ ಮಾಡಿದುದು. ಈ ಪರಿಸ್ಥಿತಿಗಳಿಂದಾಗಿ ಸೂಚಿತವಾದ ಮೂಲ ಸ್ವರೂಪದ ಪರಿಹಾರವೆಂದರೆ ಪ್ರತ್ಯೇಕ ಪ್ರಾಂತಗಳ ರಚನೆ. ಇಂಥ ಪ್ರಾಂತಗಳ ರಚನೆಯಾದರೊ ಸ್ಥಳೀಯರನ್ನು ಉದ್ಯೋಗ ವಂಚಿತರನ್ನಾಗಿ

ಮಾಡದೆ ಹೊರಗಿನವರನ್ನು ತಡೆಯುವುದೆಂದು ಆಲೋಚಿಸಲಾಯಿತು. ಹೀಗೆ ಉಂಟಾದದ್ದು ಅಸ್ಸಾಮ್ ಮತ್ತು ಬಂಗಾಳಗಳ ವಿಭಜನೆ. ಬಿಹಾರ ಮತ್ತು ಒರಿಸ್ಸಾ ಇದೇ ರೀತಿ ತಮ್ಮ ಬೇಡಿಕೆಯನ್ನು ಮುಂದಿಡಲು ಪ್ರಾರಂಭಿಸಿದವು. ಬೊಂಬಾಯಿ ಪ್ರಾಂತದಿಂದ (ಬಾಂಬೆ ಪ್ರೆಸಿಡೆನ್ಸಿ) ಸಿಂಧ್ ಪ್ರದೇಶವನ್ನು ಬೇರ್ಪಡಿಸಲಾಯಿತು. ಆಂಧ್ರ ಮತ್ತು ಕರ್ನಾಟಕದ ಸಮಸ್ಯೆಗಳು ಮಹತ್ವ ಪಡೆಯಲು ಪ್ರಾರಂಭವಾಯಿತು.

ಆಡಳಿತದಲ್ಲಿ ಉತ್ತಮ ಉದ್ಯೋಗಗಳ ಪ್ರಲೋಭನೆಯ ಜೊತೆಗೆ ಶಿಕ್ಷಿತರ ಮನಸ್ಸಿನಲ್ಲಿ ರಾಜಕೀಯ ಮಹತ್ತ್ವಾಕಾಂಕ್ಷೆ ಕೂಡ ಪ್ರತ್ಯೇಕತೆಯನ್ನು ಬೆಳೆಸಿತು. ಬ್ರಿಟಿಷರೇನೂ ಒಂದೇ ಉಸಿರಿಗೆ ಭಾರತಕ್ಕೆ ಸ್ವಾತಂತ್ರ್ಯ ನೀಡಲಿಲ್ಲ; ಅಥವಾ ನಾವು ಅದಕ್ಕಾಗಿ ಹೋರಾಡಿ ಒಂದೇ ಏಟಿಗೆ ಅದನ್ನು ಗೆದ್ದುಕೊಳ್ಳಲಿಲ್ಲ. ನಡೆದ ಸಂಗತಿ ಏನೆಂದರೆ ನಮಗೆ ಸ್ವಯಮಾಡಳಿತ ಕ್ರಮಿಕ ಕಂತುಗಳಲ್ಲಿ ದೊರೆತದ್ದು; ಅದು ಕೂಡ ಪ್ರಾಂತೀಯ ಆಧಾರಗಳನ್ನು ಅನುಲಕ್ಷಿಸಿ. ಹೀಗಾಗಿ ರಾಜಕೀಯ ಹಕ್ಕುಗಳನ್ನು ಬಯಸುವುದಾದಲ್ಲಿ, ತಮ್ಮದೇ ಆದ ಪ್ರಾಂತವೊಂದು ಇರಲೇಬೇಕೆಂದು ಜನರು ಸಹಜವಾಗಿ ಆಲೋಚಿಸುವಂತಾಯಿತು. ಮುಸ್ಲಿಮರನ್ನು ಪ್ರಬಲರನ್ನಾಗಿ ಮಾಡಲೆಂದೇ ಬೊಂಬಾಯಿ ಪ್ರಾಂತದಿಂದ ಸಿಂಧ್ ಪ್ರದೇಶವನ್ನು ಬೇರ್ಪಡಿಸಲಾಯಿತೆಂಬುದನ್ನು ಇಂದಿಗೂ ಒಪ್ಪಿಕೊಳ್ಳಲಾಗುತ್ತದೆ.

ಭಾರತದಲ್ಲಿ ಉರುಬುತ್ತಿದ್ದ ರಾಷ್ಟ್ರೀಯ ಕ್ರಾಂತಿಕಾರಕ ಭಾವನೆಯನ್ನು ನಿರ್ಮೂಲ ಮಾಡುವ ದೃಷ್ಟಿಯಿಂದ ಹೊಸ ಪ್ರಾಂತಗಳನ್ನು ರಚಿಸಲು ಬ್ರಿಟಿಷರೂ ಆಲೋಚಿಸಿದರು. ಈ ರಾಜಕೀಯದಾಟದ ಅಂಗವಾಗಿ ಲಾರ್ಡ್ ಕರ್ಜನನು ಬಂಗಾಳದ ಬೆನ್ನೆಲುಬನ್ನು ಮುರಿಯಲೆಂದು ಮತ್ತು ಈ ಪ್ರಕ್ರಿಯೆಯಲ್ಲಿ ಮುಸ್ಲಿಂ ಬಾಹುಳ್ಯವಿರುವ ಪ್ರಾಂತವನ್ನು ರಚಿಸಲು ಬಂಗಾಳದ ವಿಭಜನೆಯನ್ನು ಯೋಜಿಸಿದನು. ಆದರೆ ಬಂಗಾಳದ ವಿಭಜನೆಯನ್ನು ಅನುಸರಿಸಿ ಬಂದ ಚಳುವಳಿ ಎಂಥ ಭೀಕರ ಪ್ರಮಾಣ ತಳೆಯಿತೆಂದರೆ ಬ್ರಿಟಿಷರು ತಮ್ಮ ಹೆಜ್ಜೆಗಳನ್ನು ಮರುಪರಿಶೀಲಿಸಬೇಕಾಯಿತು. ಆದರೆ ಯಾವುದನ್ನು ಅವರು ಬಹಿರಂಗವಾಗಿ ಸಾಧಿಸಲಿಲ್ಲವೋ ಅದನ್ನು ಅವರು ವಾಮಮಾರ್ಗದಿಂದ ಸಾಧಿಸಲು ಪ್ರಯತ್ನಿಸಿದರು. ಪ್ರಕ್ಷುಬ್ಧ ಬಂಗಾಳದಲ್ಲಿ ಪ್ರಭಾವಶಾಲಿಯಾದ ಮುಸ್ಲಿಂ ಬಹುಮತ ಉಳಿದಿರುವಂತೆ ಮಾಡುವ ಸಲುವಾಗಿ ಅವರು ಬಂಗಾಳದಿಂದ ಬಿಹಾರ ಮತ್ತು ಒರಿಸ್ಸಾಗಳನ್ನು ಪ್ರತ್ಯೇಕಿಸಿದರು. ಹೀಗೆ ಬಂಗಾಳದ ವಿಭಜನೆಯು ಆಗ ರದ್ದಾಗುವಂತಾಯಿತು. ಆದರೆ ಅವರ ಈ ಕುಟಿಲ ನಡೆಯಿಂದಾಗಿ ಉಂಟಾದ ಬಂಗಾಳ–ಬಿಹಾರ ವಿವಾದ ಇನ್ನೂ ಹೆಚ್ಚಾಗಿ ಕೀವು ತುಂಬಿದ ವ್ರಣವಾಗಿದೆ. ತುಲನಾತ್ಮಕವಾಗಿ ಇನ್ನೂ ಅನಂತರದ ಕಾಲದಲ್ಲಿ ಪಂಜಾಬು ಮತ್ತು ಮಹಾರಾಷ್ಟ್ರಗಳು ಬ್ರಿಟಿಷ್ ಆಧಿಪತ್ಯದ

ವ್ಯಾಪ್ತಿಗೊಳಪಟ್ಟವು; ಆದ್ದರಿಂದ ಅವಿನ್ನೂ ಸ್ವಾತಂತ್ರ್ಯದ ಸ್ಫೂರ್ತಿಯನ್ನು ಉಳಿಸಿಕೊಂಡಿದ್ದವು. ಇವೆರಡೂ ಪ್ರಾಂತಗಳಲ್ಲಿ ಜನರ ಸ್ವಾಭಿಮಾನ ಮತ್ತು ರಾಷ್ಟ್ರೀಯ ಆತ್ಮಾಭಿಮಾನವನ್ನು ಕಿತ್ತುಹಾಕಲು ಬ್ರಿಟಿಷರು ವ್ಯವಸ್ಥಿತ ಪ್ರಯತ್ನಗಳನ್ನು ನಡೆಸಿದರು. ಪಂಜಾಬಿನಲ್ಲಿ ಅವರು ಸಿಖ್ ಮತ್ತು ಸಿಖ್ಖೇತರರ ಹಾಗೂ ಜಾಟರ ಮತ್ತು ಮುಸ್ಲಿಮರ ನಡುವೆ ತಡೆಗೋಡೆಗಳನ್ನು ಎಬ್ಬಿಸಿದರು; ಇದು ಪ್ರಾಂತದ ಏಕತೆಯನ್ನು ಶಿಥಿಲಗೊಳಿಸಿತು. ಮಹಾರಾಷ್ಟ್ರ ಪ್ರಾಂತದ ಭಾಗಗಳನ್ನು ಇತರ ಮೂರು ಬೇರೆ ಬೇರೆ ಪ್ರಾಂತಗಳಿಗೆ ಹಂಚಿ ಅದರ ಪ್ರತ್ಯೇಕ ಅಸ್ತಿತ್ವವನ್ನು ಅವರು ಅಳಿಸಿಹಾಕಿದರು.

ಭಾಷೆಯ ಅಂಶದಿಂದಲೂ ಬ್ರಿಟಿಷ್ ಆಳರಸರು ಪ್ರತ್ಯೇಕತಾ ಪ್ರವೃತಿಗಳನ್ನು ಬೆಳೆಸುವ ಅಂಥದೇ ನೀತಿಯೊಂದನ್ನು ಅಳವಡಿಸಿಕೊಂಡರು. ಆಂಗ್ಲಭಾಷೆಯನ್ನು ಅವರು ಸಂಪರ್ಕ ಭಾಷೆಯನ್ನಾಗಿ ಮಾಡಿದರಷ್ಟೇ ಅಲ್ಲ, ಅದು ಪ್ರಾದೇಶಿಕ ಭಾಷೆಗಳೊಳಗೆ ಅದನ್ನು ನುಸುಳಿಸಲು ವ್ಯವಸ್ಥಿತವಾಗಿ ಪ್ರಯತ್ನಪಟ್ಟರು. ಇದರ ಪರಿಣಾಮವಾಗಿ ಬ್ರಿಟಿಷ್ ವಿರೋಧಿ ಹೋರಾಟವು ಆಂಗ್ಲಭಾಷಾ ವಿರೋಧಿ ಹೋರಾಟವೂ ಆಯಿತು. ಇದರಿಂದಾಗಿ ಭಾಷೆಯ ಅತಿರೇಕದ ಅಭಿಮಾನವು ಸುಪೋಷಿತವಾಯಿತು. ಆಗಿನ ದಿನಗಳಲ್ಲಿ ಈ ಅತಿರೇಕದ ಭಾಷಾಭಿಮಾನವು ಅನುಕೂಲಕರವಾಗಿ ಆದರೂ ರಾಷ್ಟ್ರೀಯತೆಯ ಕವಚದಲ್ಲಿ ಮುಚ್ಚಿಹೋಯಿತು. ಒಂದೆಡೆ ಬ್ರಿಟಿಷರ ವಿರುದ್ಧ ಹೋರಾಡಲು ಎಲ್ಲ ಭಾರತೀಯರೂ ಒಂದುಗೂಡಿದ್ದು ನಿಜ; ಇನ್ನೊಂದೆಡೆ ಕಾಲಾನುಕಾಲಕ್ಕೆ ಪ್ರಾದೇಶಿಕ ಭಾವನೆಗಳು ಕೂಡ ಕಾಣಿಸಿಕೊಂಡದ್ದು ನಿಜ. ಇದೇ ಕಾಲಕ್ಕೆ ರಾಷ್ಟ್ರೀಯ ಹೋರಾಟದಲ್ಲಿ ಮುಸ್ಲಿಮರೂ ಸಹ–ಹೋರಾಟಗಾರರೆಂದು ಭಾವಿಸುವ ಹಾಗೆ ಅವರ ತುಷ್ಟೀಕರಣವೂ ಪ್ರಾರಂಭವಾಯಿತು. ಇದು ಕೂಡ ಪ್ರಾದೇಶಿಕ ಭಾವನೆಗಳ ಅಪ್ರತ್ಯಕ್ಷ ಪುಷ್ಟೀಕರಣವೆಂಬುದು ಸಾಬೀತಾಯಿತು. ಪ್ರಾಚೀನ ಕಾಲದಿಂದಲೂ ಭಾರತವು ನಮ್ಮ ದೇಶವೆಂಬುದನ್ನು ಮರೆತೆವು; ಪ್ರತಿಯೊಬ್ಬ ಭಾರತೀಯನೂ ಒಂದೇ ಭಾರತೀಯ ಸಂಸ್ಕೃತಿಯ ಉತ್ಪನ್ನವೆಂಬುದನ್ನು ಮರೆತೆವು. ಸ್ವಾತಂತ್ರ್ಯಕ್ಕಾಗಿ ನಮ್ಮನ್ನು ಹೋರಾಡುವಂತೆ ಮಾಡಿದ ಏಕತೆಯ ಭಾವವನ್ನೂ ನಾವು ಮರೆತುಬಿಟ್ಟೆವು. ನಾವೀಗ ಹೊಸ ರಾಷ್ಟ್ರವೊಂದನ್ನು ಕಟ್ಟಲು ಬಯಸುತ್ತೇವೆ ಎಂದು ಹೇಳಿಕೊಳ್ಳಲು ಪ್ರಾರಂಭಿಸಿದೆವು ! ಈ ಹೊಸರಾಷ್ಟ್ರದ ಮಾದರಿಗಾಗಿ ನಾವು ವಿಶ್ವವ್ಯಾಪಕ ಅನ್ವೇಷಣೆಯನ್ನು ಪ್ರಾರಂಭಿಸಿದಾಗ ನಮಗೆ ಆಕರ್ಷಕವಾಗಿ ಕಂಡದ್ದು ಅಮೆರಿಕ ಸಂಯುಕ್ತ ಸಂಸ್ಥಾನಗಳು. ಪರಿಣಾಮವಾಗಿ ಸಣ್ಣ ಮತ್ತು ದೊಡ್ಡ ಅಭಿಪ್ರಾಯಗಳು ಹಾಗೂ ಪರಿಸ್ಥಿತಿಗಳೊಂದಿಗೆ ನಾವು ರಾಜಿಯಾಗಿ, ನಮ್ಮ ಪ್ರಯತ್ನಗಳೆಲ್ಲ ಭಾಷಿಕ

ಪ್ರಾಂತಗಳನ್ನು ಬಯಸಿ ಪ್ರತಿಪಾದಿಸುವ ಮಟ್ಟದವರೆಗೆ ಹೋಯಿತು. ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂವಿಧಾನವನ್ನು ಆಧರಿಸಿದ ಒಕ್ಕೂಟ ರಾಷ್ಟ್ರವೊಂದರ ಕಲ್ಪನೆ ಬೇರು ಬಿಡತೊಡಗಿತು. ಹೀಗಾಗಿ ಕಳೆದ ಐವತ್ತು ವರ್ಷಗಳಿಂದ ನೇರ ಹಾಗೂ ಪರೋಕ್ಷ ಪ್ರಚಾರವೆಲ್ಲ ಕೇವಲ ಸಂಯುಕ್ತ ರಾಜ್ಯಗಳ ಒಕ್ಕೂಟವೇ ಭಾರತದ ಸ್ಥಿತಿಗತಿಗಳಿಗೆ ಅತ್ಯಂತ ಉಚಿತವಾದುದೆಂದು ಜನರು ಭಾವಿಸುವಂತೆ ಮಾಡಿತು. ವಸ್ತುತಃ ಒಕ್ಕೂಟವನ್ನು ನಿರಾಕರಿಸುವಂಥದು ಏಕರೂಪದ ಸಂವಿಧಾನ; ಹಾಗೆಯೇ ಭಾರತವು ಒಂದು ದೇಶವೊಂದು ಪ್ರತಿಪಾದಿಸುವುದು ಪ್ರಜಾಪ್ರಭುತ್ವದ ವಿರುದ್ಧ–ಹೀಗೆ ಅಭಿಪ್ರಾಯವಷ್ಟರಮಟ್ಟಿಗೆ ಜನ ಮುಂದೆ ಸಾಗಿದರು. ವಾಸ್ತವವಾಗಿ ಈಗ ಭಾರತ ಸ್ವತಂತ್ರ ದೇಶ; ಜನ ಮತ್ತು ಸರ್ಕಾರ ಒಂದೇ ಆಗಿದೆ. ಜನಪ್ರಿಯ ಆಡಳಿತವಿರುವುದರಿಂದಾಗಿ ಕೇಂದ್ರದಲ್ಲಿ ಕೂಡ ಯಾರದೇ ಹಕ್ಕು ಮತ್ತು ಅಧಿಕಾರಗಳನ್ನು ಕಸಿದುಕೊಳ್ಳುವ ಪ್ರಶ್ನೆಯೇ ಇಲ್ಲ. ಆದ್ದರಿಂದ ಒಂದು ನಿರ್ದಿಷ್ಟ ಸ್ವರೂಪದ ಸಂವಿಧಾನದ ಮೇಲೆಯೇ ಪ್ರಜಾಪ್ರಭುತ್ವದ ಸ್ಥಿತಿಯೇನೂ ಈಗ ಅವಲಂಬಿತವಾಗಿಲ್ಲ. ಒಕ್ಕೂಟದ ಮತ್ತು ಏಕರೂಪದ ಸಂವಿಧಾನಗಳು ಈಗ ಸರಿಸಮಾನವಾಗಿ ಪ್ರಜಾಪ್ರಭುತ್ವದ್ದಾಗಿರಲು ಸಾಧ್ಯ.

ಭಾರತಕ್ಕೆ ಒಕ್ಕೂಟ ಸ್ವರೂಪದ ಸಂವಿಧಾನವೊಂದನ್ನು ಅಭಿವೃದ್ಧಿಪಡಿಸುವಲ್ಲಿ ಬ್ರಿಟಿಷರು ಆಳವಾಗಿ ಆಟವಾಡಿದರು. ಏಕೆಂದರೆ ಅವರ ಆಸಕ್ತಿ ಇದ್ದುದು ದೇಶವನ್ನು ಎಷ್ಟು ಸಾಧ್ಯವೋ ಅಷ್ಟು ತುಂಡುಗಳನ್ನು ಮಾಡುವುದರಲ್ಲಿ. ೧೮೫೭ರವರೆಗೆ ಅವರು ಅಧಿಕಾರದ ಕೇಂದ್ರೀಕರಣದತ್ತ ಒಲವು ತೋರಿದರು; ರಾಷ್ಟ್ರೀಯ ಚಳುವಳಿಯು ಬೇರುಬಿಟ್ಟು ಬೆಳೆಯಲಾರಂಭವಾದಂತೆ ಅವರು ಕೇವಲ ಕೇಂದ್ರಾಧಿಕಾರವನ್ನು ಉಳಿಸಿಕೊಂಡು ಭಾರತೀಯರಿಗೆ ಪ್ರಾಂತೀಯ ಅಧಿಕಾರಗಳನ್ನು ನೀಡುವ ಭಾವನೆ ಬರುವ ಆಮಿಷಗಳನ್ನು ತೋರುವ ನೀತಿಯುನ್ನು ಅಳವಡಿಸಿಕೊಂಡರು. ೧೯೧೯ರ ಸುಧಾರಣೆಗಳಿಂದಾಗಿ ಕೆಲವು ಅಧಿಕಾರಗಳು ಪ್ರಾಂತೀಯ ಮಂಡಳಿಗಳಿಗೆ ವರ್ಗಾವಣೆಗೊಂಡವು; ಹಾಗೆಯೇ ೧೯೩೫ರ ಕಾಯ್ದೆಯು ಪ್ರಾಂತೀಯ ಸ್ವಯಮಾಡಳಿತವನ್ನು ನೀಡಿತು ಮತ್ತು ಒಕ್ಕೂಟ ಸ್ವರೂಪದ ಸಂವಿಧಾನಕ್ಕೆ ಅಡಿಪಾಯ ಹಾಕಿತು. ಅಧಿಕಾರದ ಈ ವರ್ಗಾವಣೆಯಲ್ಲಿ ಪ್ರಾಂತಗಳಿಗೆ ಸ್ವಯಮಾಧಿಕಾರವು ಪ್ರಾಪ್ತವಾದದ್ದು ಭಾರತದಲ್ಲಿನ ಕೇಂದ್ರದಿಂದಲ್ಲ, ಸಮುದ್ರದಾಚೆಯ ಬ್ರಿಟಿಷ್ ಸರ್ಕಾರದಿಂದ ಎನ್ನುವುದಕ್ಕೆ ಹೆಚ್ಚು ಒತ್ತು ನೀಡಲಾಯಿತು. ೫೬೨ ಭಾರತೀಯ ಸಂಸ್ಥಾನಗಳಿಗೆ ಪರಮಾಧಿಕಾರವನ್ನು ಕೊಡಲಾಯಿತು. ೧೯೪೨ರ ಕ್ರಿಪ್ಸ್ ಯೋಜನೆಯು ಇನ್ನೂ ಮುಂದಕ್ಕೆ ಹೋಗಿ ಪ್ರಾಂತಗಳಿಗೆ ಪ್ರತ್ಯೇಕವಾಗುವ ಅಧಿಕಾರ ನೀಡಿತು. ಕ್ಯಾಬಿನೆಟ್ ಮಿಷನ್ ಯೋಜನೆ ಕೂಡ ಕೇಂದ್ರ, ಉಪಕೇಂದ್ರ

ಹಾಗೂ ಪ್ರಾಂತಗಳ ರೂಪಗಳಲ್ಲಿ ಮೂರು (ಸ್ತರದ) ಆಡಳಿತಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿತ್ತು. ಒಟ್ಟಿನಲ್ಲಿ ಪ್ರತಿಯೊಂದು ಸುಧಾರಣೆ ಹಾಗೂ ಅಧಿಕಾರ ವರ್ಗಾವಣೆಯು ಪ್ರಾಂತವಾರು ಮತ್ತು ರಾಜ್ಯವಾರು ವಿಂಗಡಣೆಗಳಾಗಿ ದೇಶದ ಛಿದ್ರೀಕರಣವನ್ನೆ ಗುರಿಯಾಗಿ ಹೊಂದಿತ್ತು.

ಹಿಂದೂ–ಮುಸ್ಲಿಂ ಏಕತೆಯನ್ನು ಗೀಳಾಗಿ ಹೊಂದಿದ್ದ ಕಾಂಗ್ರೆಸ್ಸಿಗೆ ಈ ಕುಟಿಲ ತಂತ್ರಗಳನ್ನು ಬಹಿರಂಗವಾಗಿ ವಿರೋಧಿಸಲು ಸಾಧ್ಯವಾಗಲಿಲ್ಲ. ಹಿಂದೂ ಬಹು ಸಂಖ್ಯಾತರು ತಮ್ಮನ್ನು ನಿಶ್ಶೇಷ ಮಾಡಿ ಬಿಡುವರೆಂದು ಮುಸ್ಲಿಮರು ಗೋಳಿಡಲು ಪ್ರಾರಂಭಿಸಿದಾಗ ಮುಸ್ಲಿಂ ಬಹುಮತ ಇರುವ ಪ್ರಾಂತಗಳಲ್ಲಿ ಅವರು ತಮಗೆ ಇಷ್ಟ ಬಂದ ಹಾಗೆ ಇರಲು ಸ್ವತಂತ್ರರಾಗಿರುವರೆಂಬ ಭರವಸೆಯನ್ನು ಕಾಂಗ್ರೆಸ್ ಅವರಿಗೆ ನೀಡಿತು. ಈ ಭರವಸೆಯನ್ನು ಅನುಲಕ್ಷಿಸಿ ಪ್ರಾಂತೀಯ ಅಧಿಕಾರಗಳನ್ನು ನಿಷ್ಕರ್ಷಿಸಲಾಯಿತು. ಮುಸ್ಲಿಮರ ಈ ತುಷ್ಟೀಕರಣವು ದೇಶದ ವಿಭಜನೆಯನ್ನೇನೂ ತಪ್ಪಿಸಲಿಲ್ಲವಷ್ಟೇ ಅಲ್ಲ, ರಾಷ್ಟ್ರ ಜೀವನದಲ್ಲಿ ಪ್ರತ್ಯೇಕತೆಯ ಬೀಜವನ್ನೂ ಬಿತ್ತಿತು. ಸಮಾಧಾನದ ಏಕೈಕ ಸಂಗತಿ ಎಂದರೆ ವಿಭಜನೆಯ ತರುವಾಯ ಮುಸ್ಲಿಂ ಸಮಸ್ಯೆ ಒಂದು ರೀತಿಯಲ್ಲಿ ಹೆಚ್ಚು ಸತಾರ್ಕಿಕವಾಗಿದ್ದು ಪ್ರತ್ಯೇಕ ಮತದಾರರ ವಿಷಯವನ್ನು ದೂರಮಾಡಿತು. ಸಂವಿಧಾನದ ರಚನೆಯ ಕಾಲದಲ್ಲಿ ಕೇಂದ್ರಕ್ಕೆ ಕೇವಲ ಮೂರು ವಿಷಯಗಳಲ್ಲಿ ಮಾತ್ರ ಅಧಿಕಾರವಿರಬೇಕೆಂದು ಸೂಚಿಸಲಾಯಿತು. ಆದರೆ ಮತ್ತೆ ಆಲೋಚಿಸಿದ ಅನಂತರ ಇನ್ನೂ ಅನೇಕ ಅಧಿಕಾರಗಳನ್ನು ಕೇಂದ್ರಕ್ಕೆ ನೀಡಲಾಯಿತು.

ಮೇಲೆ ಚರ್ಚಿಸಿದ ಪ್ರತಿಕ್ರಿಯೆಯ ಇತಿಹಾಸವನ್ನು ಈಗ ಮರೆತುಬಿಡಬೇಕಿದೆ ಹಾಗೂ ರಚನಾತ್ಮಕ ರೀತಿಯಲ್ಲಿ ದೇಶದ ಭವಿಷ್ಯವನ್ನು ರೂಪಿಸಬೇಕಾಗಿದೆ. ದೈವಿಕವಾಗಿ ಹೇಳುವುದಾದರೆ ಭಾರತವು ವಿವಿಧ ರಾಜ್ಯಗಳ ಒಂದು ಸಂಯುಕ್ತ ದೇಶವಲ್ಲ; ಆದರೆ ಅದು ಸ್ವತಃ ಏಕಾತ್ಮಕ ಘಟಕ. ಈ ದೇಶದ ವಿವಿಧ ಭಾಗಗಳು ಬೇರೆ ಬೇರೆ ಸಂಸ್ಕೃತಿಗಳನ್ನು ಹೊಂದಿವೆ ಎನ್ನುವುದು ನಿಜವಲ್ಲ. ಬೇರೆ ಬೇರೆ ಭಾಷಿಕ ಸಾಹಿತ್ಯ ಕೃತಿಗಳಲ್ಲಿ ಕೂಡ ಸಾಮಾಜಿಕ ಏಕತೆಯನ್ನು ಸೂಚಿಸುವ ಒಂದು ಬಗೆಯ ಅಂತಃಪ್ರವಾಹವಿದೆ. ಭಾರತ ಒಂದು, ಅದರ ಜನತೆ ಒಂದು, ಅವರ ಸಾಮಾಜಿಕ ಅಸ್ತಿತ್ವ ಒಂದು, ಅವರ ಚೈತನ್ಯ ಒಂದು ಹಾಗೂ ಅವರ ಸಂಸ್ಕೃತಿ ಒಂದು. ಅದು ಏಕ ರಾಷ್ಟ್ರ; ಆದ್ದರಿಂದ ಏಕ ಸರ್ಕಾರವನ್ನೆ ಹೊಂದಿರಬೇಕು. ಅಷ್ಟೊಂದು ಬಹು ಸಂಖ್ಯೆಯ ರಾಷ್ಟ್ರಗಳಿಗೆ ಆಸ್ಪದವೇ ಇಲ್ಲ.

ಒಕ್ಕೂಟವೆಂದರೆ ಬೇರೆ ಬೇರೆ ರಾಜ್ಯಗಳ ನಡುವಣ ರಾಜಿ ಅಥವಾ ಹೊಂದಾಣಿಕೆ ಮತ್ತು ಒಪ್ಪಂದ ಸೂಚಿತವಾಗುತ್ತವೆ. ಆ ರಾಜ್ಯಗಳ ಅಸ್ತಿತ್ವ ಅಥವಾ ಅಧಿಕಾರ ಈ ಒಪ್ಪಂದದ ಷರತ್ತುಗಳನ್ನು ಅವಲಂಬಿಸಿರುತ್ತದೆ.

ನಮ್ಮ ಸಂವಿಧಾನವು ಏಕರೂಪದ ಮತ್ತು ಒಕ್ಕೂಟದ ಮನೋಭಾವಗಳ ನಡುವಣ ಒಂದು ಹೊಂದಾಣಿಕೆಯಾಗಿದೆ. ಅದನ್ನು ರೂಪಿಸಿದ ಆಂಗ್ಲಶಿಕ್ಷಿತ ವಕೀಲರು ಪ್ರಾಂತೀಯ ಚೌಕಟ್ಟಿನೊಳಗೆ ಆಲೋಚಿಸುತ್ತಿದ್ದರು. ಆದರೆ ಅವರ ಹೃದಯಗಳು ರಾಷ್ಟ್ರಜೀವನದಲ್ಲಿನ ಪ್ರಾಚೀನ ಏಕತೆಯನ್ನು ಆಲಿಸುತ್ತಿದ್ದವು. ದೇಶದ ಏಕೀಕರಣಕ್ಕೆ ನಮ್ಮನ್ನು ಹೋರಾಡುವಂತೆ ಮಾಡಿದ ಪ್ರಾಚೀನ ಕರೆ ಇದು; ಬ್ರಿಟಿಷರು ನಮಗಾಗಿ ಬಿಟ್ಟು ಹೋದ ಕರೆ. ಸರ್ದಾರ್ ಪಟೇಲರ ರಾಜಸಂಸ್ಥಾನಗಳ ಏಕೀಕರಣದಲ್ಲಿ ಸ್ವತಃ ರೂಪುಗೊಂಡ ಕರೆ ಕೂಡ. ಅಂತಿಮವಾಗಿ ಸಂವಿಧಾನದ ಈ ಕೆಳಗಿನ ಮೂಲಭೂತ ನಿಯಮಗಳನ್ನು ನಾವು ಒಪ್ಪಿಕೊಳ್ಳುವಂತೆ ಮಾಡಿರುವ ರಾಷ್ಟ್ರೀಯ ಏಕತೆಯ ಸಾಕ್ಷಾತ್ಕಾರವಿದು:

೧. ದೇಶದ ಉದ್ದಕ್ಕೂ ಏಕೈಕ ರಾಷ್ಟ್ರೀಯತೆ ಇದೆ.
೨. ಒಂದು ಸಂವಿಧಾನ, ಒಬ್ಬ ರಾಷ್ಟ್ರ ಪ್ರಮುಖ ಮತ್ತು ಇಡೀ ರಾಷ್ಟ್ರಕ್ಕೆ ಒಂದು ಧ್ವಜವನ್ನು ನಾವು ಒಪ್ಪಿಕೊಂಡಿದ್ದೇವೆ (ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರತಿಯೊಂದು ರಾಜ್ಯಕ್ಕೂ ಅದರದೇ ಆದ ಸಂವಿಧಾನವಿದೆ) (ಸಂಯುಕ್ತ ಸಂಸ್ಥಾನಗಳಲ್ಲಿನ ಹಾಗೆ) ಇಲ್ಲಿ ರಾಜ್ಯಪಾಲರುಗಳು ಆಯ್ಕೆಯಾದವರಲ್ಲ; ಇಲ್ಲಿನವರು ಅಧ್ಯಕ್ಷರಿಂದ ನೇಮಿತರಾದವರು.
೩. ಇಡೀ ದೇಶಕ್ಕೆ ಒಂದು ರಾಷ್ಟ್ರ ಭಾಷೆ ಇದೆ.
೪. ಇಡೀ ದೇಶಕ್ಕೆ ಒಂದು ಚುನಾವಣಾ ವ್ಯವಸ್ಥೆ ಇದೆ.
೫. ಆರ್ಥಿಕ ಯೋಜನೆಯ ವಿಷಯದಲ್ಲಿ ಭಾರತವೊಂದು ಸಮರೂಪದ ಅಖಂಡ.
೬. ಇಡೀ ದೇಶಕ್ಕೆ ಒಂದು ನ್ಯಾಯಿಕ ವ್ಯವಸ್ಥೆ ಇದೆ.
೭. ಉಳಿಕೆ ಆಸ್ತಿಯ (residuary) ಅಧಿಕಾರಗಳು ರಾಜ್ಯಗಳ ಅಧೀನದಲ್ಲಿರದೆ ಕೇಂದ್ರದ ಅಧೀನದಲ್ಲಿರುತ್ತವೆ.
೮. ಯಾವ ವಿಷಯದಲ್ಲಾದರೂ ಸಮಾನ ಹಕ್ಕು ಪಟ್ಟಿಯಲ್ಲಿ (Concurrent List) ಪ್ರಾಂತಾಧಿಕಾರಕ್ಕಿಂತ ಕೇಂದ್ರಾಧಿಕಾರವು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.
೯. ಪ್ರಾಂತೀಯ ವಿಷಯಗಳಲ್ಲಿ ರಾಷ್ಟ್ರಾಧ್ಯಕ್ಷರು ಮಧ್ಯೆ ಪ್ರವೇಶಿಸಬಹುದು. ಅಗತ್ಯಬಿದ್ದರೆ ಪ್ರಾಂತೀಯ ಸರ್ಕಾರಗಳನ್ನು ಅಮಾನತ್ತಿನಲ್ಲಿಡಬಹುದು.
೧೦. ಇಡೀ ದೇಶದ ಜನತೆ ಒಂದು; ಅವರ ಗಣತಿಯನ್ನು ಒಟ್ಟಿಗೆ ಒಂದೇ ಅಧಿಕಾರದಡಿ ಮಾಡಲಾಗುತ್ತದೆ.

ನಮ್ಮ ಏಕಾತ್ಮಕ ಮನೋಭಾವಕ್ಕೆ ಸಂಬಂಧಿಸಿದಂತೆ ಪುರಾವೆಯಾಗುವ ಇಂಥ ಹಲವು ಅಂಶಗಳು ಸಂವಿಧಾನದಲ್ಲಿವೆ. ಆದರೆ ಇದೇ ಕಾಲದಲ್ಲಿ ನಾವು ಒಕ್ಕೂಟ ವ್ಯವಸ್ಥೆಯ ಪ್ರವೃತ್ತಿಗಳಿಗೆ ಬಲಿಯಾಗುವ ಸಂಭವವಿದೆ. ಪ್ರಾಂತೀಯತೆಯ

ಬಲಿಪಶುಗಳು ನಾವು; ೧೯೩೫ರ ಕಾಯ್ದೆಯ ಒಕ್ಕೂಟ ರಚನೆಯನ್ನು ಅನುಕರಿಸಿದವಷ್ಟೇ ಅಲ್ಲ, ಪ್ರಾಂತಗಳನ್ನು ರಾಜ್ಯಗಳೆಂದು (States) ಹೆಸರಿಸುವ ಪ್ರಮಾಣವನ್ನೂ ಮಾಡಿದೆವು. ಭಾರತವು ಒಕ್ಕೂಟವೆಂದೇ ಘೋಷಿಸಿಬಿಟ್ಟೆವು. ಉಭಯಸದನಿಕ ವ್ಯವಸ್ಥೆಯ ಮೂಲಕ ಕೇಂದ್ರಾಡಳಿತದ ಕಾಂತಿಹೀನ ಛಾಯೆಯೊಂದನ್ನು ಸ್ಥಾಪಿಸಲು ಪ್ರಯತ್ನಿಸಿದೆವು. ಅಧ್ಯಕ್ಷರ ರೀತಿಯಲ್ಲಿಯೇ ರಾಜ್ಯಪಾಲರ ಮತ್ತು ರಾಜ ಪ್ರಮುಖರನ್ನು ಪ್ರತಿಷ್ಠಾಪಿಸಲಾಯಿತು. ಪ್ರತ್ಯೇಕ ಹೈಕೋರ್ಟುಗಳು ಸ್ಥಾಪಿತವಾದವು. ಅವುಗಳಿಗೆ ಸಂವಿಧಾನವನ್ನು ಅರ್ಥೈಸುವ ಅಧಿಕಾರಗಳನ್ನು ನೀಡಲಾಯಿತು.

ನಮ್ಮ ಸಂವಿಧಾನವು ಏಕರೂಪದ ಮತ್ತು ಒಕ್ಕೂಟ (ಫೆಡೆರಲ್) ಪ್ರವೃತ್ತಿಗಳ ಒಂದು ಸಮ್ಮಿಶ್ರವಾಗಿ ರೂಪುಗೊಂಡುದರಿಂದ ದೇಶದ ಭವಿಷ್ಯದ ಪ್ರಗತಿಯ ದಿಕ್ಕು ಅನಿಶ್ಚಿತವಾಗಿ ಉಳಿದಿದೆ. ೧೯೫೦ರಿಂದ ಸಂವಿಧಾನವು ನಿಧಾನವಾಗಿ ವಿಕಾಸವಾಗುತ್ತಿದೆ. ನಾವು ಇನ್ನಷ್ಟು ಕಾಲಾವಕಾಶ ತೆಗೆದುಕೊಂಡಿದ್ದರೆ ಅದು ಇನ್ನಷ್ಟು ವ್ಯವಸ್ಥಿತ, ಏಕೀಕೃತ ಹಾಗೂ ಪರಿಣಾಮಕಾರಿಯಾದ ವ್ಯವಸ್ಥೆಯಾಗುತ್ತಿತ್ತು. ಕಾಲಾನುಕಾಲಕ್ಕೆ ಅದಕ್ಕೆ ತಿದ್ದುಪಡಿ ಮಾಡುವುದು ಮತ್ತು ಅದಕ್ಕೆ ರಾಷ್ಟ್ರಾಧ್ಯಕ್ಷರು ತಮ್ಮ ವಿಶೇಷಾಧಿಕಾರಗಳನ್ನು ಬಳಸುವುದು ಆವಶ್ಯಕವಾಗಿ ನಮಗೆ ಕಂಡುಬರುತ್ತದೆ; ಅದು ಈ ಪರಿಶೀಲನೆಯ ಸತ್ಯಕ್ಕೆ ಸಾಕ್ಷಿಯಾಗುವುದು.

ದುರದೃಷ್ಟವಶಾತ್ ಈ ಸಂವಿಧಾನದ ರೀತಿಯಲ್ಲಿಯೆ ದೇಶದ ಪ್ರಗತಿಯ ಈ ಕಾಲದಲ್ಲಿಯೆ ಬ್ರಿಟಿಷ್–ಬಿತ್ತನೆಯ ಪ್ರತ್ಯೇಕತೆಯ ಪ್ರವೃತ್ತಿಗಳು ಕೂಡ ಆವೇಗ ಪಡೆದುಕೊಳ್ಳುತ್ತಿವೆ. ಈಗಿರುವ ಪ್ರಾಂತೀಯ ಗಡಿ ಗೆರೆಗಳಿಗೆ ನಿಜವಾಗಿ ಯಾವುದೇ ವೈಜ್ಞಾನಿಕ ತಳಹದಿ ಇಲ್ಲ; ಅಥವಾ ಈಗಲೂ ಪ್ರತಿಪಾದಿಸುವ ವೈಜ್ಞಾನಿಕ ದೃಷ್ಟಿಕೋನವೂ ಇಲ್ಲ. ಪ್ರಾಂತೀಯ ಅಸಂತೃಪ್ತಿ ಮತ್ತು ಪ್ರತ್ಯೇಕತಾ ಭಾವನೆಗಳಿಗೆ ಇವು ಎಡೆ ನೀಡಿವೆ. ಭಾಷಿಕ ಚಳುವಳಿಗಳನ್ನು ಇವು ಫಲಿತಗೊಂಡಿವೆ. ಆಂಧ್ರದ ಉದಾಹರಣೆಯನ್ನು ಗಮನಿಸಿ ಹೇಳುವುದಾದರೆ ಈ ರೋಗಾಣುವಿನ ಪ್ರಸಾರವನ್ನು ನಿರೋಧಿಸಲು ಕೇವಲ ಎರಡು ಮಾರ್ಗಗಳಿವೆ. ಇವುಗಳಲ್ಲೊಂದು ಎಂದರೆ ಧರ್ ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಂಡು ಇಡೀ ಸಮಸ್ಯೆಯನ್ನು ೨೦ ವರ್ಷಗಳ ಕಾಲ ಮುಂದೂಡಿ, ಪರಿಣಾಮವಾಗಿ ಆಗುವ ರಾಷ್ಟ್ರೀಯತೆಯ ವಿರೋಧವನ್ನು ವಿಫಲಗೊಳಿಸುವುದು; ಇನ್ನೊಂದು ಪರಿಹಾರವೆಂದರೆ ಸಮಸ್ಯೆಯನ್ನು ಎದುರಿಸುವುದು ಮತ್ತು ಇನ್ನೂ ಹೆಚ್ಚಿನ ವೈಜ್ಞಾನಿಕವಾದ ಸಂವಿಧಾನದ ಅಡಿಯಲ್ಲಿ ದೇಶದ ಆಡಳಿತವನ್ನು ಪುನರ್ವ್ಯವಸ್ಥೆಗೊಳಿಸುವುದು.

ಇವುಗಳಲ್ಲಿ ಭಾರತೀಯ ಜನಸಂಘವು ಎರಡನೆಯ ಮಾರ್ಗವನ್ನು ಸಮರ್ಥಿಸುತ್ತದೆ. ಸಮಸ್ಯೆಯ ಮುಂದೂಡಿಕೆ ಎಂದರೆ ಹೆಚ್ಚಾಗುವ ಅತೃಪ್ತಿ

ಹಾಗೂ ರಾಷ್ಟ್ರೀಯತೆಯ ವಿರೋಧಿ ಒಳಸಂಚು ಎಂದು ಅರ್ಥವಾಗುವುದು. ೧೯೫೨ರಲ್ಲಿಯೆ ಭಾರತೀಯ ಜನಸಂಘವು ಭಾಷೆಯೊಂದೇ ಪುನಸ್ಸಂಘಟನೆಗೆ ಆಧಾರವಾಗಲಾರದೆಂದು ಮತ್ತು ಭದ್ರತೆ, ಆಡಳಿತ ಸೌಲಭ್ಯ ಹಾಗೂ ಕಾರ್ಯಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಈ ಸಮಸ್ಯೆಯನ್ನು ಕುರಿತು ಚಿಂತಿಸುವ ಉನ್ನತಾಧಿಕಾರದ ಆಯೋಗವೊಂದು ಆವಶ್ಯಕವೆಂಬುದನ್ನು ಸ್ಪಷ್ಟಪಡಿಸಿತ್ತು. ಆಡಳಿತವನ್ನು ಸುಗಮವನ್ನಾಗಿ ಮಾಡುವುದಕ್ಕೆ ಭಾಷೆ ಅನುಕೂಲಕರವೆನ್ನುವುದರಲ್ಲಿ ಯಾವುದೇ ಸಂಶಯವಿಲ್ಲ; ಆದರೆ ಅದೆಂದೂ ಏಕಮಾತ್ರ ಪರಮ ಪರಿಗಣನೆಯಾಗಲು ಸಾಧ್ಯವಿಲ್ಲ. ಆಡಳಿತ ದೃಷ್ಟಿಯಿಂದ ಬಂಗಾಳ, ಯು.ಪಿ. ಮತ್ತು ಬಿಹಾರಗಳಂಥ ಏಕಭಾಷಿಕ ರಾಜ್ಯಗಳಿಗಿಂತ ಬಹುಭಾಷಿಕವಾದ ಬೊಂಬಾಯಿ ಪ್ರಾಂತವು ಹಿಂದೇನೂ ಬಿದ್ದಿಲ್ಲ; ಅಷ್ಟೇ ಅಲ್ಲ, ವಾಸ್ತವವಾಗಿ ಅವುಗಳಿಗಿಂತಲೂ ಮುಂದಿದೆ ಕೂಡ. ಆದ್ದರಿಂದ ಜನಸಂಘದ ಸಲಹೆಗೆ ಸರ್ಕಾರವು ಗಮನಕೊಟ್ಟು ಉನ್ನತಾಧಿಕಾರದ ಆಯೋಗವನ್ನು ರಚಿಸಿತು.

ಆದರೆ ಈ ಆಯೋಗ ರಚನೆಯಾದ ಒಡನೆಯೇ ಪ್ರತ್ಯೇಕ ಪ್ರಾಂತಗಳ ಬೇಡಿಕೆಗಳು ರಾಶಿಯಾಗಲು ಪ್ರಾರಂಭವಾಯಿತು. ದಕ್ಷಿಣದಲ್ಲಿ ಅಂಥ ಬೇಡಿಕೆಗಳೇನೂ ಹೊಸತಲ್ಲ. ಆದರೆ ಈಗ ಉತ್ತರ ಭಾರತವೂ ಈ ಸಾಂಕ್ರಾಮಿಕ ರೋಗಕ್ಕೆ ಬಲಿಯಾಗಿಬಿಟ್ಟಿತು. ಬಿಹಾರದಂಥ ಏಕಭಾಷಿಕ ಪ್ರಾಂತ ಕೂಡ ಮಿಥಿಲಾ, ಭೋಜಪುರ ಮತ್ತು ಜಾರ್ಖಂಡ್ ರಾಜ್ಯಗಳಿಗೆ ಬೇಡಿಕೆಗಳನ್ನು ಮುಂದಿಡಲು ಪ್ರಾರಂಭಿಸಿತು. ಉತ್ತರಪ್ರದೇಶ ಮತ್ತು ರಾಜಸ್ಥಾನಗಳು ಸ್ವತಂತ್ರವಾದ ಬ್ರಜ, ಕುರು ಮತ್ತು ಜಾಂಗಲ ರಾಜ್ಯಗಳನ್ನು ಕುರಿತು ಚರ್ಚಿಸಲಾರಂಭಿಸಿದವು. ಯು.ಪಿ. ಯನ್ನು ಕೂಡ ಪ್ರತ್ಯೇಕ ಭಾಗಗಳಾಗಿ ವಿಭಜಿಸಲು ಕೆಲವರು ಕೋರಿದರು. ಈ ಎಲ್ಲ ಬೇಡಿಕೆಗಳನ್ನು ಪ್ರಚೋದಿಸುವ ಸ್ವಾರ್ಥತೆಗೆ ನಾವು ಬೆನ್ನು ಮಾಡಬೇಕು ಹಾಗೂ ಭಾರತದಲ್ಲಿ ರಾಷ್ಟ್ರೀಯ ಏಕತೆಯನ್ನು ಸಾಧಿಸಿ ಮುನ್ನಡೆಯಬೇಕು. ಇದಕ್ಕೆ ನಾವು ಭಾರತೀಯ ಜೀವನಕ್ರಮವನ್ನು ವಿಶ್ಲೇಷಿಸಬೇಕಾದುದು ಆವಶ್ಯಕ.

ಈಗ ಅಖಂಡ ಭಾರತದ ಸಾಮಾಜಿಕ ಜೀವನವು ಒಂದೇ ಅಸ್ತಿತ್ವವನ್ನು ಹೊಂದಿದ್ದು, ಅದು ವಿವಿಧ ಸ್ತರಗಳಲ್ಲಿ ರೂಪು ತಳೆದಿದೆ. ನಮ್ಮ ಮೂಲ ಏಕತೆಯನ್ನು ರೂಪಿಸುವಲ್ಲಿ ಕೂಡ ಸಂಸ್ಕೃತಿಯು ಸ್ವತಃ ಹಲವು ಮುಖಗಳಲ್ಲಿ ವಿಕಾಸಗೊಂಡಿದೆ. ಈ ವೈವಿಧ್ಯವನ್ನೂ ನಾವು ದೂರ ಮಾಡಿಲ್ಲ. ಆದರೆ ಅದರ ಬೆಳವಣಿಗೆಯನ್ನು ನಮ್ಮ ವಿಕಾಸದ ಒಂದು ಸಂಕೇತವಾಗಲು ಅವಕಾಶವಿತ್ತೆವು. ಹೊರ ಕವಚದೊಳಗೆ ಹುದುಗಿರುವ ಆಂತರಿಕ ಏಕತೆಯನ್ನು ಈ ವೈವಿಧ್ಯ ಯಾವಾಗಲೂ ತೋರಿಸಿಕೊಟ್ಟಿದೆ. ಎಲ್ಲೆಲ್ಲಿ ಒಂದೇ ಭಾಷೆಯನ್ನು

ಮಾತನಾಡಲಾಗುವುದೋ ಅಲ್ಲೆಲ್ಲ ಈ ಏಕತೆಯ ಅತ್ಯಂತ ಸ್ಫುಟವಾದ ಸತ್ಯ ದರ್ಶನವಾಗಿದೆ. ಅಂಥ ಪ್ರದೇಶಗಳು ಜನಪದಗಳೆಂದು ಪರಿಚಿತವಾಗಿವೆ. ಬ್ರಜ, ಅವಧ, ಭೋಜಪುರ, ಮಗಧ, ಮಿಥಿಲಾ, ಕೋಸಲ, ಕಳಿಂಗ, ವಿದರ್ಭ, ಖಾಂದೇಶ, ಮಾಳವ, ಕೊಂಕಣ, ಮಲಬಾರ್ ಮುಂತಾದಂಥ ಅನೇಕ ಜನಪದಗಳು ಭಾರತದಲ್ಲಿವೆ. ಈ ಜನಪದ ಪ್ರದೇಶದಲ್ಲಿ ಸಾಹಿತ್ಯದ ಮಾಧ್ಯಮವಾಗಿ ನಿರ್ದಿಷ್ಟ ಭಾಷೆಯೊಂದು ಸಮ್ಮತವಾಗಿರುತ್ತದೆ ಹಾಗೂ ಆ ಭಾಷೆಗೆ ಬದ್ಧರಾಗಿರುವ ಜನಪದರು ಪರಸ್ಪರ ಪೂರಕರಾಗಿ ಬರುವರು. ಈ ರೀತಿಯಲ್ಲಿ ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಬಂಗಾಳ ಮುಂತಾದ ಪ್ರಾಂತಗಳು ರೂಪುಗೊಂಡವು. ಒಟ್ಟಾರೆ ರಾಷ್ಟ್ರ ಜೀವನದ ಸರಿಯಾದ ಬೆಳವಣಿಗೆಗೆ ಯೋಜನೆಯೊಂದು ಅವಶ್ಯವೆಂಬುದನ್ನು ಇವೆಲ್ಲದರ ಸಮಗ್ರ ಚಿಂತನೆಯು ಮುನ್ಸೂಚಿಸುತ್ತದೆ.

ಇಂದಿನ ಪ್ರಾಂತಗಳು – ಅಸ್ತಿತ್ವದಲ್ಲಿರುವ ಹಾಗೂ ಬೇಡುತ್ತಿರುವ ಎರಡೂ ಬಗೆಯುವು–ಜನಪದ ಜೀವನವನ್ನು ಉಪೇಕ್ಷಿಸಿವೆ. ಪರಿಣಾಮವಾಗಿ ಸ್ಥಾಪಿತವಾಗಬೇಕೆಂದು ಬಯಸುತ್ತಿರುವ ವ್ಯವಸ್ಥೆ ಒಂದೇ ಮತ್ತು ಅದನ್ನು ಭಾಷೆ, ಸಾಹಿತ್ಯ ಮತ್ತು ಸ್ಥಳೀಯ ಸಂಪ್ರದಾಯಗಳೆಲ್ಲವನ್ನೂ ತ್ಯಾಗ ಮಾಡಿ ಕೊಂಕಣವು ಖಾಂದೇಶದೊಂದಿಗೆ ಲಾಭದಾಯಕವಾಗಿ ಸೇರ್ಪಡೆಯಾದೀತೆಂದು ಹೇಳುವ ಸಾಧ್ಯತೆ ಇಲ್ಲ. ಇನ್ನೊಂದು ನಿದರ್ಶನವನ್ನು ಉಲ್ಲೇಖಿಸಬಹುದು; ಬ್ರಜದ ಆತ್ಮಶಕ್ತಿ ಅಳುತ್ತಿರುವುದೇಕೆಂದರೆ ತುಲಸೀರಾಮಾಯಣದ ಭಾಷೆಯನ್ನು ಖ್ಯಾತ ಅವಧಕವಿಗಳು ಹಿಂದಿಯ ಪರವಾಗಿ ಪರಿತ್ಯಾಗ ಮಾಡುವುದು. ಈ ಪರಿಪಾಟಲಿನಿಂದ ಹೊರಬರುವ ದಾರಿ ಎಂದರೆ ಪ್ರಾಥಮಿಕ ಆಡಳಿತದ ಅಧಿಕಾರಗಳನ್ನು ಗ್ರಾಮಪಂಚಾಯಿತಿಗೆ ನೀಡಿ, ಇಂದಿನ ಪುರಸಭೆಗಳ ಅಧಿಕಾರಕ್ಕಿಂತ ಹೆಚ್ಚಿನ ಮತ್ತು ಇಂದಿನ ವಿಧಾನಸಭೆಗಳ ಅಧಿಕಾರಗಳಿಗಿಂತ ಕಡಿಮೆಯ ಅಧಿಕಾರಗಳನ್ನು ಹೊಂದಿರುವ, ಜನಪದ ಸಭೆಗಳನ್ನು ರಚಿಸುವುದು.

ಗ್ರಾಮಮಟ್ಟದವರೆಗಿನ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಿದ ತರುವಾಯ ಪರಮಾಧಿಕಾರವು ಲೋಕಸಭೆಗೆ ಇರಬೇಕು. ಜನಪದ ಸಭೆಗಳಿಗೂ ಲೋಕಸಭೆಗೂ ನಡುವೆ ಇರುವ ಅಧಿಕಾರಗಳೆಲ್ಲವನ್ನೂ ರದ್ದುಗೊಳಿಸಬೇಕು. ಆಡಳಿತದ ಅನುಕೂಲಕ್ಕಾಗಿ ಜನಪದ ಸಭೆಗಳನ್ನು 'ರಾಜ್ಯ'ಗಳಲ್ಲಿ ಅಲ್ಲ, ಪ್ರಾಂತಗಳಲ್ಲಿ ಏಕೀಕೃತಗೊಳಿಸಬೇಕು. ಪರಿಣಾಮಕಾರಿ ಆಡಳಿತಾಧಿಕಾರ ಹೊಂದಿರುವ ರಾಜ್ಯಪಾಲರ ಅಧೀನದಲ್ಲಿ ಪ್ರಾಂತಗಳಿರಬೇಕು. ರಾಷ್ಟ್ರೀಯ ಏಕತೆಗೆ ಇರುವ ಬೆದರಿಕೆಯನ್ನು ನಿವಾರಿಸುವ ಮತ್ತು ಪ್ರಾಂತೀಯ ಜನರ ಅಭಿವೃದ್ಧಿಯಲ್ಲಿ ಧಕ್ಕೆಯನ್ನುಂಟು ಮಾಡುವ ಪ್ರಾದೇಶಿಕತೆಯನ್ನು ಇದು ನಿಲ್ಲಿಸುವುದು.

ಷೇಕ್ ಅಬ್ದುಲ್ಲಾರ ಕಹಿ ನಿದರ್ಶನದಿಂದ ಸಾಬೀತಾಗಿರುವಂತೆ ಒಕ್ಕೂಟ ವ್ಯವಸ್ಥೆಯಲ್ಲಿ ರಾಷ್ಟ್ರೀಯ ಏಕತೆಗೆ ಇರುವ ಬೆದರಿಕೆಗಳು ಬಹಳ ನಿಜವಾದವು. ಇಂದು ಪ್ರಾದೇಶಿಕತೆ ಬೆಳೆಯುತ್ತಲಿದೆ. ಕೇಂದ್ರ ಮತ್ತು ಪ್ರಾಂತಗಳ ನಡುವೆ ಸಂಘರ್ಷ ಉಂಟಾಗುವ ಸ್ಪಷ್ಟ ಸಾಧ್ಯತೆ ಇದೆ. ಆದ್ದರಿಂದ ರಾಷ್ಟ್ರೀಯ ಶಕ್ತಿಯನ್ನು ಸದೃಢಗೊಳಿಸಬೇಕಾಗಿರುವುದು ತುರ್ತು ಆವಶ್ಯಕತೆಯಾಗಿದೆ. ಆಡಳಿತಕ್ಕೆ ಆವಶ್ಯಕವಾಗಿರುವ ಅಧಿಕಾರದ ವಿಕೇಂದ್ರೀಕರಣವು ಕೇವಲ ಜನಪದದ ಹಂತದಲ್ಲಿ ಮಾತ್ರವೇ ಆಗಬೇಕು. ಕೇಂದ್ರಾಧಿಕಾರವನ್ನು ವಿಕೇಂದ್ರೀಕರಣಗೊಳಿಸಲಾಗಿದೆ ಎನ್ನುವ ಅಂಶವನ್ನು ಇಂದಿನ ಪ್ರಾಂತೀಯ ವಿಧಾನಸಭೆಗಳು ಅಂಗೀಕರಿಸುವುದಿಲ್ಲ. ಇದಕ್ಕೆ ಪ್ರತಿಯಾಗಿ ತಾವೇ ಕೇಂದ್ರಕ್ಕೆ ತಮ್ಮ ಅಧಿಕಾರಗಳನ್ನು ಒಪ್ಪಿಕೊಟ್ಟಿರುವುದಾಗಿ ಅಭಿಪ್ರಾಯ ಹೊಂದಿವೆ. ಆದ್ದರಿಂದ ಪ್ರಸ್ತುತ ವಿಕೇಂದ್ರೀಕರಣವು ಒಂದೆಡೆ ರಾಷ್ಟ್ರೀಯ ಐಕಮತ್ಯಕ್ಕೆ ಇರುವ ಒಂದು ಬೆದರಿಕೆಯಾದರೆ ಇನ್ನೊಂದೆಡೆ ಅದು ಜನಪದ ಜೀವನವನ್ನು ಮಾರಕವಾಗಿ ಹೊಸಕಿಹಾಕುತ್ತಿದೆ.

ಕೇಂದ್ರ ಮತ್ತು ಜನಪದಗಳ ನಡುವಣ ಅಧಿಕಾರ ವಿಂಗಡಣೆ ಯಾವ ರೀತಿಯಲ್ಲಿರಬೇಕೆಂದು ಕೆಲವರು ಕೇಳಬಹುದು. ಈ ಲೇಖನದ ವ್ಯಾಪ್ತಿಗೆ ಮೀರಿದ ವಿಷಯವಾದರೂ ಇದಕ್ಕೆ ವಿವರವಾದ ಉತ್ತರವನ್ನು ಕಾಲ ಬಂದಾಗ ನೀಡಲು ಸಾಧ್ಯವಿದೆ.

* * * * *

# ಚೀನಾದ ಎವರೆಸ್ಟ್ ಆಕ್ರಮಣ

ನ್ಯೂ ಚೈನಾ ನ್ಯೂಸ್ ಏಜನ್ಸಿಯ ವರದಿಯೊಂದರ ಪ್ರಕಾರ ಶ್ರೀ ಚಾನ್‌ಚುವಾನ್ ಎಂಬಾತನ ನೇತೃತ್ವದ ಚೀನೀ ಸಾಹಸಯಾತ್ರಾ ತಂಡವು ಎವರೆಸ್ಟ್ ಶಿಖರವನ್ನು ಉತ್ತರದ ಇಳಿಜಾರು ಪ್ರದೇಶದ ಕಡೆಯಿಂದ ಆರೋಹಣ ಮಾಡಿ ಯಶಸ್ವಿಯಾಗಿ ತಲುಪಿದೆ. ಚೀನೀಯರಿಂದ ಅಂಥ ಪ್ರಯತ್ನವೊಂದು ನಡೆಯುತ್ತಿರುವ ಬಗ್ಗೆ ಪ್ರಪಂಚಕ್ಕೆ ತಿಳಿದುದು ಕೆಲವು ದಿನಗಳ ಮೊದಲಷ್ಟೇ. ಇಡೀ ಕಾರ್ಯಾಚರಣೆಯನ್ನು ರಹಸ್ಯವಾಗಿ ಯೋಜಿಸಿ ಕಾರ್ಯಗತಗೊಳಿಸಲಾಗಿತ್ತು. ಹೀಗಾಗಿ ಈ ಇಡೀ ಪ್ರಸಂಗವನ್ನೇ ಕೆಲವರು ನಂಬದೆ ಇರಲೂ ಇದು ಕಾರಣವಾಗಿತ್ತು. ವಿಶ್ವದ ಅತ್ಯಂತ ಎತ್ತರದ ಶಿಖಾರಾರೋಹಣ ಯಶಸ್ವಿಯಾದ ಬಗ್ಗೆ ಚೀನೀಯರ ಹೇಳಿಕೆ ಸತ್ಯಸಂಗತಿಯನ್ನು ಆಧರಿಸಿದ್ದಾಗಿರದೆ ಕೇವಲ ಕಮ್ಯುನಿಸ್ಟರ ಪ್ರಚಾರ ಎನ್ನುವುದು ಸಾರ್ವಜನಿಕರಲ್ಲಿ ವ್ಯಾಪಕವಾಗಿ ಹರಡಿದ ಭಾವನೆ. ನಮ್ಮದೇ ವೈಫಲ್ಯ ಮತ್ತು ಶತ್ರು ಶಕ್ತಿಯ ಯಶದಿಂದಾಗಿ ನಮಗಾಗಬಹುದಾದ ರಾಷ್ಟ್ರೀಯ ಅಪಮಾನವನ್ನು ತಪ್ಪಿಸಿಕೊಳ್ಳಬೇಕೆಂಬ ನಮ್ಮ ಆಸೆಯಲ್ಲಿ ಈ ಭಾವನೆಯ ಆಧಾರವಿದ್ದಿರಬಹುದು. ಆದರೆ ತಮ್ಮ ಪರ್ವತಾರೋಹಣದ ಪ್ರಯತ್ನದಲ್ಲಿ ಚೀನೀಯರು ರಾಜಕೀಯ ಉದ್ದೇಶಗಳಿಂದ ನಿರ್ದೇಶಿತರಾಗಿದ್ದಾರೆ; ಎವರೆಸ್ಟ್ ಪರ್ವತವನ್ನು ಚೀನಾದ ಪ್ರದೇಶದೊಳಗೆ ಸೇರಿಸಿಕೊಳ್ಳಲಾಗಿದೆ ಎಂಬ ಚೀನಾದ ಪ್ರಧಾನಮಂತ್ರಿಯ ಹೇಳಿಕೆಯ ಸಂದರ್ಭದಿಂದ ಸ್ಪಷ್ಟವಾಗಿ ಅವರ ಪ್ರವರ್ತನೆಯ ಬಗ್ಗೆ ಅನುಮಾನ ಹುಟ್ಟಿಸುತ್ತದೆ. ಅವರ ಪಾಲಿಗೆ ಈ ಪರ್ವತಾರೋಹಣ ಕ್ರೀಡೆಯಾಗಿರದೆ, ರಾಜಕೀಯದ ಸಂಗತಿಯಾಗಿದೆ.

ಚೀನೀಯರು ಪರ್ವತಾಗ್ರಕ್ಕೆ ಏರಿದರು. ಅದಿರುವುದು ನೇಪಾಳದಲ್ಲಿ ನೇಪಾಳ ಸರ್ಕಾರದಿಂದ ಅದು ಅನುಮತಿಯನ್ನು ಪಡೆದಿರಲಿಲ್ಲ. ಇದು ನೇಪಾಳದ ಸಾರ್ವಭೌಮತೆಯ ಉಲ್ಲಂಘನೆಯಾಗುತ್ತದೆ. ಅನುಮತಿ ಇಲ್ಲದೆಯೇ ಮಾಡಿದ ಈ ಸಾಹಸಯಾತ್ರೆಯನ್ನು ಸಮರ್ಥಿಸಲೆಂದು ಚೀನಾದ ಪ್ರಧಾನಮಂತ್ರಿಗಳು ಈ ರೀತಿ ಹೇಳಿಕೊಂಡರೆ ಅಥವಾ ಅದು ತಮ್ಮದೆಂದು ಪ್ರತಿಪಾದಿಸಲೆಂದೇ ಚಾರಣ ತಂಡವನ್ನು ಕಳುಹಿಸಿಕೊಟ್ಟರೆ ಎನ್ನುವುದನ್ನು ನಿರ್ಧರಿಸುವುದು ಕಷ್ಟವೇ. ಆದರೆ ನೇಪಾಳ ಸರ್ಕಾರದಿಂದ ಅನುಮತಿಯನ್ನು ಪಡೆಯುವ ಮಾತಿರಲಿ, ಅಂಥದೊಂದು

ನಡೆಯ ಬಗ್ಗೆ ಕೂಡ ಅದಕ್ಕೆ ಚೀನಾ ಸರ್ಕಾರ ತಿಳಿಸಿರಲಿಲ್ಲ. ತರುವಾಯ ಪ್ರಕಟವಾದ ವರದಿಯ ಪ್ರಕಾರ ಈ ತಂಡವು ಪೀಕಿಂಗ್ ನಗರವನ್ನು ಬಿಟ್ಟದ್ದು ಮಾರ್ಚ್ ೨೫ರಂದು. ಆ ಸಮಯದಲ್ಲಿ ನೇಪಾಳದ ಪ್ರಧಾನಮಂತ್ರಿಗಳಾದ ಶ್ರೀ ಬಿ. ಪಿ. ಕೊಯಿರಾಲ ಅವರು ಪೀಕಿಂಗ್‌ನಲ್ಲಿಯೆ ಇದ್ದರು. ಚೀನಾ ಮತ್ತು ನೇಪಾಳಗಳ ನಡುವಣ ಮೈತ್ರಿಯ ಒಪ್ಪಂದವೊಂದನ್ನು ಸಿದ್ಧಗೊಳಿಸಿ ಅಂತಿಮಗೊಳಿಸಲಾಗಿತ್ತು. ಎವರೆಸ್ಟ್ ಪರ್ವತದ ಮೇಲಿನ ಚೀನಾದ ಹಕ್ಕನ್ನು ನೇಪಾಳವು ಒಪ್ಪಿಕೊಂಡಿರಲಿಲ್ಲ. ಚೀನಾ ಕೂಡ ಅದನ್ನು ಒತ್ತಾಯಿಸಿರಲಿಲ್ಲ; ಆದರೆ ಅದನ್ನು ಮುಂದಾನೊಂದು ದಿನ ನಿರ್ಧರಿಸಲು ಬಿಟ್ಟಿತ್ತು. ನೇಪಾಳದ ಅನುಮತಿಯನ್ನು ಪಡೆಯದೆ ಚೀನಾ ಸಾಹಸಯಾತ್ರಾ ತಂಡವೊಂದನ್ನು ಕಳುಹಿಸಿದುದು ಸ್ನೇಹ ಭಾವವಿರುವ ವರ್ತನೆಯೆ? ಚೀನಾದ ರಹಸ್ಯ ವರ್ತನೆ ಉದ್ದೇಶಪೂರ್ವಕವಾದುದು. ಅದು ನೇಪಾಳವನ್ನು ವಂಚಿಸಲು ಪ್ರಯತ್ನ ಮಾಡಿತ್ತು.

ನೇಪಾಳ ಮೋಸಹೋಗಿದೆ. ಹಿಂದೆ ನೆಹರೂ ಅವರಿಗೆ ಎದುರಾಗಿದ್ದ ಪರಿಸ್ಥಿತಿಯೇ ಈಗ ಬಿ. ಪಿ. ಕೊಯಿರಾಲ ಅವರಿಗೆ ಎದುರಾಗಿದೆ. ಚೌಎನ್‌ಲಾಯ್ ಅವರು ತಮ್ಮ ಮೈತ್ರಿಯ ಮಾತನ್ನು ಉಳಿಸಿಕೊಳ್ಳಲಿಲ್ಲ. ಮೈತ್ರಿಯನ್ನು ಕುರಿತ ಅವರ ಮಾತುಗಳೆಲ್ಲ ಕೇವಲ ಲೆಕ್ಕಾಚಾರದವು ಮತ್ತು ಎದುರು ಪಕ್ಷದವರು ತಮ್ಮ ರಕ್ಷಣೆಯ ಕವಚವನ್ನು ತೆಗೆಯುವಂತೆ ಮಾಡಿ ತಮ್ಮ ಬಗ್ಗೆ ಗಮನ ಹರಿಯುವಂತೆ ಮಾಡುವುದೇ ಆಗಿತ್ತೆನ್ನುವುದನ್ನು ಅವರು ತೋರಿಸಿಕೊಟ್ಟಿದ್ದಾರೆ. ನೇಪಾಳ ಸರ್ಕಾರದ ಪ್ರಧಾನ ಮಂತ್ರಿಯವರು ಚೀನೀಯರ ಎವರೆಸ್ಟ್ ಆರೋಹಣದ ವಿಷಯವನ್ನು ಕುರಿತು ಪ್ರತಿನಿಧಿಗಳ ಸಭೆಯಲ್ಲಿ ಚರ್ಚಿಸುವ ಸಮಯದಲ್ಲಿ ಸ್ಥಗನ ನಿಲುವಳಿಯನ್ನು ತಂದಾಗ ಯಾವ ಹೇಳಿಕೆಯನ್ನೂ ನೀಡಲಾಗದಂಥ ದಿಗ್ಭ್ರಾಂತಿ ಉಂಟಾಗಿತ್ತು. ನೇಪಾಳ ಸರ್ಕಾರವು ಯಾವ ಕ್ರಮ ತೆಗೆದುಕೊಳ್ಳುವುದೋ ತಿಳಿಯದು. ಅದು ಇನ್ನೂ ತನ್ನ ಪ್ರತಿರೋಧವನ್ನೂ ವ್ಯಕ್ತಪಡಿಸಿಲ್ಲ. ನೇಪಾಳವು ಈಗ ಮೌನ ವಹಿಸಿದರೆ ಅಥವಾ ಯಾವುದೇ ರಾಜಕೀಯ ಮಹತ್ತ್ವದ ವಿಷಯವಲ್ಲವೆಂದು ಭಾವಿಸಿ ಇಡೀ ಸಂಗತಿಯನ್ನು ಕೇವಲ ಕ್ರೀಡಾ ವಿಷಯವೆಂದು ಉಪೇಕ್ಷಿಸಿದರೆ, ಚೀನಾದ ಪ್ರವರ್ತನೆ ಮತ್ತು ನಿಜವಾದ ಉದ್ದೇಶವನ್ನು ಅರ್ಥಮಾಡಿಕೊಳ್ಳುವಲ್ಲಿ ನೇಪಾಳದ ಅಸಾಮರ್ಥ್ಯವನ್ನು ತೋರುವುದು.

ಹಿಮಾಲಯದ ಪರ್ವತ ಶ್ರೇಣಿಗಳಾಗಲಿ ಶಿಖರಗಳಾಗಲಿ ಚೀನಾದ ಮುನ್ನುಗ್ಗುವಿಕೆಯನ್ನು ಇನ್ನು ಮುಂದೆ ತಡೆಯಲಾರವು ಎನ್ನುವುದನ್ನು ಚೀನಾ ಪ್ರದರ್ಶಿಸಿದೆ. ನೇಪಾಳದೊಡನೆ ಮಾಡಿಕೊಂಡ ಮೈತ್ರಿಯ ಒಪ್ಪಂದಗಳೂ ಹಿಮಾಲಯದ ಗಿರಿಶ್ರೇಣಿಯನ್ನು ದಾಟಿ ಮುಂದುವರಿಯುವುದರಿಂದ ಚೀನಾವನ್ನು

ತಡೆಯಲಾರವು ಎನ್ನುವುದನ್ನೂ ತೋರಿಸಿಕೊಟ್ಟಿದೆ. ತನ್ನ ನೆರೆ ರಾಷ್ಟ್ರದ ಭಾವನೆಗಳನ್ನು, ಸಾರ್ವಭೌಮ ಹಕ್ಕುಗಳನ್ನು ಕೂಡ, – ತನ್ನ ವಿಸ್ತರಣೆಯ ಆಶಯಗಳ ಈಡೇರಿಕೆಗಾಗಿ – ಉಪೇಕ್ಷಿಸುವ ಚೀನಾದ ದೃಢನಿರ್ಧಾರದ ಒಂದು ಸೂಚನೆ ಇದು. ನೇಪಾಳವು ಅಜಾಗ್ರತೆಯಿಂದಿರಲು ಸಾಧ್ಯವೆ? ಚೀನಾದ ಈ ನಡೆಯ ಮಹತ್ತ್ವವನ್ನು ಮನಗಂಡ ಮೇಲೆ ಭಾರತವೂ ಅದನ್ನು ಉಪೇಕ್ಷಿಸಲು ಸಾಧ್ಯವೆ? ನೇಪಾಳದ ಮೇಲಾಗುವ ಯಾವುದೇ ಆಕ್ರಮಣವನ್ನು ಭಾರತದ ಮೇಲಿನ ಆಕ್ರಮಣವೆಂದೇ ಪರಿಭಾವಿಸುವುದಾಗಿ ಪಂಡಿತ ನೆಹರೂ ಅವರು ಲೋಕಸಭೆಯಲ್ಲಿ ಹೇಳಿದ್ದರು. ಕೇವಲ ಕೆಲವೇ ನಿಮಿಷಗಳದ್ದಾದರೂ ಎವರೆಸ್ಟ್ ಮೇಲಿನ ಆಕ್ರಮಣವು ನೇಪಾಳದ ಮೇಲೆ ನಡೆಸಲಾದ ಆಕ್ರಮಣವೇ. ರಷ್ಯಾದ ವಾಯುಪ್ರದೇಶದ ಉಲ್ಲಂಘನೆಗೆ ಪ್ರತಿಯಾಗಿ ಇಡೀ ವಿಶ್ವಶಾಂತಿಗೇ ಬೆದರಿಕೆಯೊಡ್ಡಲು ಖ್ರುಶ್ಚೇವ್ ಸಿದ್ಧರಾಗಿರುವಾಗ, ನೇಪಾಳವು ತನ್ನ ಭೂ ಪ್ರದೇಶದ ಉಲ್ಲಂಘನೆಯನ್ನು ಗಮನಕ್ಕೆ ತೆಗೆದುಕೊಳ್ಳಬೇಕಲ್ಲವೆ? ಎವರೆಸ್ಟ್ ಪರ್ವತ ಪ್ರದೇಶ ತನ್ನದೆಂದು ಪ್ರತಿಪಾದಿಸಿ ಅದನ್ನೊಂದು ವಿವಾದದ ಅಂಶವನ್ನಾಗಿ ಮಾಡಿತೆಂದು ಇಟ್ಟುಕೊಂಡರೂ ಅದರ ಮೇಲಿನ ಸಾರ್ವಭೌಮತೆಯು ಅನಿಶ್ಚಿತವೆಂದು ಭಾವಿಸಿದರೂ ಗಡಿ ಆಯೋಗದ ಮುಂದೆ ಉಳಿದಿರುವ ವಿವಾದಿತ ಪ್ರದೇಶಗಳು, ನಿರ್ಧಾರಗಳಿಂದಾಗಿ ಸಿನೋ–ನೇಪಾಳಿ ಸಂಧಿಯಂತೆ ವಿಧಿಸಲಾಗಿರುವ, ಸಂಧಾನದ, ಮಾತುಕತೆಗಳು–ಇವುಗಳಿಂದಾಗಿ ಚೀನಾದ ಏಕಪಕ್ಷೀಯವಾದ ಯಾವುದೇ ಕ್ರಮಕ್ಕೆ ಸಮರ್ಥನೆ ಇರುವುದಿಲ್ಲ. ಹಿಮಾಲಯದ ಪ್ರದೇಶದುದ್ದಕ್ಕೂ ಚೀನಾ ವಿಪರೀತವಾಗಿ ಹಕ್ಕುಗಳನ್ನು ಪ್ರತಿಪಾದಿಸುತ್ತದೆ. ಇತರ ದೇಶಗಳ ಬಗ್ಗೆ ಯಾವ ಉಲ್ಲೇಖವನ್ನೂ ಮಾಡದೆ ಈ ಪ್ರದೇಶಗಳನ್ನು ಅದು ಕೈವಶಮಾಡಿಕೊಳ್ಳುವ ಉದ್ದೇಶ ಹೊಂದಿದ್ದಲ್ಲಿ, ಅದರ ಆಕ್ರಮಣಕಾರಿ ಮುನ್ನಡೆಯನ್ನು ತಡೆಯಲು ಇರುವ ಉಪಾಯವೆಂದರೆ ಸೈನಿಕ ಕಾರ್ಯಾಚರಣೆಗಳೇ; ಇದನ್ನು ಚೀನಾ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಸಂಧಿ ಮತ್ತು ಒಪ್ಪಂದಗಳನ್ನೇ ಅವಲಂಬಿಸುವುದರ ಅರ್ಥವೆಂದರೆ ಚೀನಾದ ಒಂದು ಆಟವಾಗಿ ನಮ್ಮನ್ನು ನಾವು ವಂಚಿಸಿಕೊಳ್ಳುವುದಾಗಿದೆ. ಈಗ ವರದಿಯಾಗಿರುವ ಸಾಗರಮಾತಾದ ಚೀನೀ ಆರೋಹಣದ ವಿಷಯವನ್ನು ಭಾರತ ಮತ್ತು ನೇಪಾಳ ಗಂಭೀರವಾಗಿ ಗಮನಿಸಲಿ.

* * * * *

## ಬೆಂಗಳೂರು ಮತ್ತು ಆನಂತರ – ೪:

# ಆಹಾರ ಮತ್ತು ಕೃಷಿಯ ಬಗ್ಗೆ ಕಾಂಗ್ರೆಸ್ ಮತ್ತು ಜನಸಂಘ

ಆಹಾರ ಮತ್ತು ಕೃಷಿ ಪರಸ್ಪರ ನಿಕಟವಾದ ಸಂಬಂಧವನ್ನು ಹೊಂದಿವೆ. ಕೃಷಿಕ್ಷೇತ್ರದಲ್ಲಿ ಸ್ಥಿರವಾದ ಸುಧಾರಣೆಗಳಾಗದೆ ಆಹಾರ ಸಮಸ್ಯೆಗೆ ಶಾಶ್ವತ ಪರಿಹಾರವೊಂದನ್ನು ಕಂಡುಕೊಳ್ಳಲು ಸಾಧ್ಯವಿಲ್ಲ. ಆದರೆ ಒಂದು ಕ್ಷೇತ್ರದಲ್ಲಿ ಸಮಸ್ಯೆಗಳನ್ನು ಎದುರಿಸಲು ಅಲ್ಪಕಾಲೀನ ಕ್ರಮಗಳನ್ನು ಕೈಗೊಂಡರೆ ಅದು ಮತ್ತೊಂದು ಕ್ಷೇತ್ರದಲ್ಲಿ ಹೊಸ ಸಮಸ್ಯೆಗಳನ್ನು ಹುಟ್ಟುಹಾಕುತ್ತವೆ. ಆದ್ದರಿಂದ ದೀರ್ಘಕಾಲೀನ ದೃಷ್ಟಿಕೋನದ ಕ್ರಮವನ್ನು ಕೈಗೊಳ್ಳುವುದು ಮತ್ತು ಕೃಷಿ ಮತ್ತು ಆಹಾರವೆರಡೂ ಕ್ಷೇತ್ರಗಳಲ್ಲಿ ಸಮಂಜಸವಾದ ನೀತಿಯೊಂದನ್ನು ಅನುಸರಿಸುವುದು ಆವಶ್ಯಕವಾಗುತ್ತದೆ.

ಆಹಾರ ಸಮಸ್ಯೆಯು ಬಹುಮಟ್ಟಿಗೆ ನಗರದ ಸಮಸ್ಯೆಯಾಗಿದೆ. ನಗರದ ಜನತೆಗೆ ವರ್ಷವೊಂದಕ್ಕೆ ಸುಮಾರು ೧೪ ಮಿಲಿಯನ್ ಟನ್‌ಗಳಷ್ಟು ಅಕ್ಕಿ ಮತ್ತು ಗೋಧಿಯ ಆವಶ್ಯಕತೆ ಇದೆಯೆಂದು ಅಂದಾಜು ಮಾಡಲಾಗಿದೆ. ಇದು ದೇಶದಲ್ಲಿನ ಆಹಾರ ಪದಾರ್ಥಗಳ ಒಟ್ಟು ಉತ್ಪಾದನೆಯ ಸುಮಾರು ಮೂರನೆಯ ಒಂದು ಭಾಗ. ಕೊರತೆಯ ಕ್ಷೇತ್ರಗಳಿಗೆ ಇರುವ ಸರಬರಾಜನ್ನೂ ನಾವು ಪರಿಗಣನೆಗೆ ತೆಗೆದುಕೊಂಡರೆ ಈ ಅಂಕಿ ಅಂಶ ಸುಮಾರು ೨೦ ಮಿಲಿಯನ್ ಟನ್‌ಗೆ ಏರುತ್ತದೆ. ಈ ಪ್ರಮಾಣವನ್ನು ದೇಶೀಯ ಮಾರುಕಟ್ಟೆಯಿಂದ ಕೊಂಡುಕೊಳ್ಳಬೇಕು ಇಲ್ಲವೇ ವಿದೇಶದಿಂದ ಆಮದು ಮಾಡಿಕೊಳ್ಳಬೇಕು.

ಈ ಬಿಕರಿಯಾಗಬಲ್ಲ ಹೆಚ್ಚುವರಿ ಪ್ರಮಾಣದ ಆಹಾರ ದೊಡ್ಡ ಅಥವಾ ಮಧ್ಯಮ ಪ್ರಮಾಣದ ಜಮೀನು ಹೊಂದಿರುವ ಕೃಷಿಕರಿಂದ ಅಥವಾ ಬೆಳೆ ಹಂಚಿಕೊಳ್ಳುವ (crop-sharing) ಆಧಾರದ ಮೇಲೆ ಕೃಷಿ ಮಾಡಲು ಇತರರಿಗೆ ನೀಡಿದ ಜಮೀನುದಾರರಿಂದ ಬರುತ್ತದೆ. ಉಳುವವನೇ ತನ್ನ ಭೂಮಿಯ ಒಡೆಯನಾಗಬೇಕೆಂದು ನಮ್ಮ ಸಾಮಾಜಿಕ ಮತ್ತು ರಾಜಕೀಯ ಉದ್ದೇಶಗಳು ಒತ್ತಾಯಿಸುತ್ತವೆ. ಇದರ ಅರ್ಥ ಆತ ತನ್ನ ಉತ್ಪಾದನೆಯ ಯಾವುದೋ ಭಾಗವನ್ನು

---

**ಮೂಲ ಆಕರ : ಆರ್ಗನೈಸರ್, ೨, ಮಾರ್ಚ್, ೧೯೬೫**

ಗುತ್ತಿಗೆಗೆ ಬದಲಾಗಿ ಪ್ರತ್ಯೇಕಿಸುವಂತೆ ಇರಬಾರದು. ಗುತ್ತಿಗೆ ಸ್ವೀಕರಿಸುವವನು ಆಹಾರ ಧಾನ್ಯಗಳನ್ನು ಮಾರುಕಟ್ಟೆಯಿಂದ ಕೊಂಡುಕೊಳ್ಳುವಂತಾಗಬೇಕು – ಹೀಗೆ ಪ್ರಸ್ತುತ ಇರುವ ಬೇಡಿಕೆಗೆ ಮತ್ತಷ್ಟು ಸೇರುವುದು. ಅದನ್ನು ತೃಪ್ತಿಪಡಿಸಿದರೆ ಈಡೇರಿಸಿದರೆ ಅಲ್ಲಿ ಇನ್ನೂ ಹೆಚ್ಚಿನ ಬಿಕರಿಯಾಗಬಲ್ಲ ಹೆಚ್ಚುವರಿ ಆಹಾರ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇರುವುದರಿಂದ, ಹೆಚ್ಚಿನ ಒಲವು ಆಹಾರ ಬಳಕೆಯ ಕಡೆಗೆ ಇರುವುದು. ಕೊರತೆಯ ಸಮಸ್ಯೆಯನ್ನು ಅದು ಸ್ಫುಟಗೊಳಿಸಬೇಕು.

ಹಾಗಿದ್ದರೂ ಈಗ ಅಸ್ತಿತ್ವದಲ್ಲಿರುವ ಗೇಣಿ ವ್ಯವಸ್ಥೆಯನ್ನು ನಾವು ಮುಂದುವರಿಸಿದರೆ ಸಾಮಾಜಿಕ ಅನ್ಯಾಯವನ್ನು ಸಹಿಸಿಕೊಳ್ಳುವುದರ ಜೊತೆಗೆ, ಇಳುವರಿಯನ್ನು ಹೆಚ್ಚಿಸಲು ನಿಜವಾದ ಉತ್ಪಾದಕನಿಗೆ ಯಾವುದೇ ಉತ್ತೇಜನವನ್ನು ನೀಡುವ ಸಾಧ್ಯತೆ ಇಲ್ಲವಾಗುತ್ತದೆ; ಇದಿಲ್ಲದೆ ನಮ್ಮ ಗ್ರಾಮೀಣ ಆರ್ಥಿಕತೆಯನ್ನು ನಾವು ಕ್ರಿಯಾಶೀಲವನ್ನಾಗಿ ಮಾಡಲಾರೆವು. ಎಂದರೆ ಸಮಸ್ಯೆಯು ಹಾಗೆಯೇ ಮುಂದುವರಿಯುವುದು ಹಾಗೂ ಜನಸಂಖ್ಯೆಯ ಹೆಚ್ಚುವ ಒತ್ತಡದಿಂದಾಗಿ ಆರ್ಥಿಕತೆ ಕ್ಷೀಣಿಸುವುದು ಎಂದು ಅರ್ಥ. ಹೀಗೆ ನಾವು ಒಂದು ಡೋಲಾಯಮಾನ ಸ್ಥಿತಿಯಲ್ಲಿದ್ದೇವೆ.

ಆಹಾರ ಧಾನ್ಯಗಳ ಪ್ರಮಾಣದ ಜೊತೆಜೊತೆಗೆ ಬೆಲೆಯ ಪ್ರಶ್ನೆಯನ್ನು ಕೂಡ ಪರಿಗಣಿಸಬೇಕಾಗುವುದು. ಮಧ್ಯಮ ವರ್ಗದವರಿಗೆ ಮತ್ತು ಕಡಿಮೆ ಆದಾಯದ ಗುಂಪುಗಳಿಗೆ ಏರಿದ ಬೆಲೆಗಳು ದುರ್ಭರವಾಗುತ್ತವೆ. ಅವುಗಳ ಆದಾಯ ಪ್ರಮಾಣಕ್ಕೂ ಬೆಲೆಗಳಿಗೂ ಒಂದು ಸ್ವಯಂಚಾಲಿತ ವ್ಯವಸ್ಥೆ ಏರ್ಪಟ್ಟಿರುವುದರಿಂದ ಅಲ್ಲಿ ಅತೃಪ್ತಿ ಇರುತ್ತದೆ. ವ್ಯವಸ್ಥಿತ ಬೇಡಿಕೆಗಳು ಮತ್ತು ಗಿರಾಕಿಯ ಚಟುವಟಿಕೆಗಳೂ ಇದ್ದು ಬೆಳವಣಿಗೆಯ ದಿಕ್ಕಿನಲ್ಲಿ ಇವುಗಳ ಪರಿಣಾಮವಿರುತ್ತದೆ. ಅವರ ವರಮಾನವನ್ನು ಹೆಚ್ಚಿಸುವ ಮೊದಲೇ ಈ ಕ್ರಿಯೆಗಳಿಂದಾಗಿ ಕೈಗಾರಿಕಾ ಉತ್ಪಾದನೆಗೆ ಮತ್ತು ಸರ್ಕಾರದ ಕೆಲಸಕ್ಕೆ ಧಕ್ಕೆ ಉಂಟಾಗುವುದು. ಹೀಗಾಗಿ ಹೆಚ್ಚುತ್ತಿರುವ ಅತೃಪ್ತಿಯಿಂದಾಗಿ ಹುಟ್ಟಿದ ಅದಕ್ಷತೆ ಮತ್ತು ಅಶಿಸ್ತು, ಲಂಚ ಮತ್ತು ಭ್ರಷ್ಟಾಚಾರಗಳನ್ನು ಜೀವನ ನಿರ್ವಹಣೆಗೆ ಹೇಗೋ ಸಮರ್ಥನೀಯ ವಿಧಾನವೆಂದು ಪರಿಗಣಿಸಲಾಗುವುದು. ಎಲ್ಲ ಬೇಡಿಕೆಗಳನ್ನು ಒಪ್ಪಿಕೊಂಡ ತರುವಾಯವೂ ಈ ದುಷ್ಪ್ರವೃತ್ತಿಗಳು ಮುಂದುವರಿಯುವುವು. ಇವೆಲ್ಲದರಿಂದ ಬೆಲೆ ಮಟ್ಟವು ಮತ್ತೂ ಹೆಚ್ಚುವತ್ತ ಸಾಗುವುದು. ಈ ರೀತಿಯಲ್ಲಿ ಸಾಮಾನ್ಯವಾಗಿ ವಿಷವರ್ತುಲವೆಂದು ಹೇಳಲಾಗುವ ವೇತನ–ಬೆಲೆ–ಚಕ್ರ ಸ್ಥಾಪಿತವಾಗುವುದು.

ಆಹಾರ ಧಾನ್ಯಗಳ ಬೆಲೆಗಳನ್ನು ನಿಯಂತ್ರಿಸಿದರೆ ಹಾಗೂ ಅವು ಉತ್ಪಾದಕನಿಗೆ ಲಾಭದಾಯಕವಾಗದಿದ್ದರೆ ಆತನ ಜೀವನ ಮಟ್ಟದ ಮೇಲೆ ಪರಿಣಾಮ ಬೀರುತ್ತವೆ. ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳದೆ ಬೆಳೆಯುತ್ತಿರುವ ಉದ್ದಿಮೆಗಳನ್ನು ಭರಿಸಲು ಕೂಡ ಸಾಧ್ಯವಾಗುವುದಿಲ್ಲ; ಏಕೆಂದರೆ ತಯಾರಾದ ಪದಾರ್ಥಗಳಿಗೆ ವಿಸ್ತಾರಗೊಳ್ಳುವ ಮಾರುಕಟ್ಟೆಯನ್ನು ಒದಗಿಸುವುದು ಆತನಿಗೆ ಮಾತ್ರವೇ ಸಾಧ್ಯ. ಆದ್ದರಿಂದ ಗ್ರಾಮೀಣ ಮತ್ತು ನಗರ ಜನರ ಅಗತ್ಯತೆ ನಡುವೆ ಸಮತೋಲನವೊಂದನ್ನು ಸಾಧಿಸುವುದು ಅತ್ಯವಶ್ಯ. ವೇತನವಿರುವ ಜನರ ಸಂಖ್ಯೆ ಸೀಮಿತವಾದಲ್ಲಿ ದರಮಟ್ಟವನ್ನು ಸಂಗತಗೊಳಿಸುವಲ್ಲಿ ಹೆಚ್ಚು ಕಷ್ಟವಿರುವುದಿಲ್ಲ. ಕೃಷಿಕ ಮತ್ತು ಕುಶಲ ಯಂತ್ರಕಾರರಿಬ್ಬರಿಗೂ ಅದು ಲಾಭದಾಯಕವಾಗಿರಲು ಸಾಧ್ಯ. ಬಂಡವಾಳ ಶಾಹಿಯಿಂದ ಅಥವಾ ಮಿಲ್ ಮಾಲಿಕನಿಂದ ನಿಗದಿತವಾದ ವೇತನದ ಆಧಾರದ ಮೇಲೆ ನೇಮಕವಾದ ಕಾರ್ಮಿಕವರ್ಗದ ಪ್ರವೇಶದೊಂದಿಗೆ ಹಾಗೂ ಆಡಳಿತ ವರ್ಗದ ಪ್ರಾಥಮಿಕ ಉತ್ಪಾದಕರು, ನೇಮಿತ ಉತ್ಪಾದಕರು ಹಾಗೂ ನೇಮಿತ ಕೆಲಸಗಾರರು ಪರಸ್ಪರ ಸಂಘರ್ಷಕ್ಕಿಳಿಯಲು ಪ್ರಾರಂಭಿಸಿದ್ದಾರೆ. ಈಗ ನಿಗದಿತ ಆದಾಯದ ಗುಂಪಿಗೆ ಸೇರಿದ ವರ್ಗವೊಂದು ಆಗಲೇ ಅಸ್ತಿತ್ವದಲ್ಲಿರುವಾಗ, ಅವರು ಏನನ್ನು ಹಣಕಾಸಿನ ವಿಷಯದಲ್ಲಿ ಕಳೆದುಕೊಳ್ಳುವರೋ ಅದನ್ನು ಪರಿಹರಿಸಲು ಪರಿಹಾರ ಮತ್ತು ಸಾಮಾಜಿಕ ಭದ್ರತೆಯ ಕ್ರಮಗಳನ್ನು ಸರ್ಕಾರವು ತನ್ನ ನಿಜವಾದ ನಿಬಂಧನೆಗಳಲ್ಲಿ ಅಳವಡಿಸಿಕೊಳ್ಳಬೇಕು. ರೈತನಿಗೆ ಸಾಕಷ್ಟು ಪ್ರತಿಫಲವನ್ನು ಖಾತರಿಪಡಿಸುವ ಬೆಲೆಗಳಿಂದಾಗಿ ಸಮಾಜದ ದುರ್ಬಲವರ್ಗದವರ ನೆರವಿಗಾಗಿ ಸರ್ಕಾರವು ನ್ಯಾಯಬೆಲೆ ಅಂಗಡಿಗಳನ್ನು ತೆರೆಯಬೇಕು ಎನ್ನುವುದೇ ಇದರ ಅರ್ಥ.

ನಾಗಪುರ ನಿರ್ಣಯದಲ್ಲಿ ಕಾಂಗ್ರೆಸ್ ಶಿಫಾರಸು ಮಾಡಿದ ಕಾರ್ಯನೀತಿ ಎಂದರೆ ಆಹಾರ ಧಾನ್ಯಗಳ ಉತ್ಪಾದನೆ ಮತ್ತು ವಿತರಣೆಯನ್ನು ನಿಯಂತ್ರಿಸುವುದು. ಸಹಕಾರಿ ಕೃಷಿ ವಿಧಾನ ಮತ್ತು ಆಹಾರಧಾನ್ಯಗಳ ವ್ಯಾಪಾರದ ರಾಷ್ಟ್ರೀಕರಣಗಳನ್ನು ಈ ನೀತಿಯ ಎರಡು ಪ್ರಧಾನ ಧ್ಯೇಯಗಳನ್ನಾಗಿ ಒಪ್ಪಿಕೊಳ್ಳಲಾಗಿದೆ. ಸಹಕಾರಿಗಳ ಮೂಲಕ ಬೃಹತ್ ಪ್ರಮಾಣದ ಕೃಷಿ ವಿಧಾನದಿಂದ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಭರವಸೆಯನ್ನು ಅವರು ಹೊಂದಿದ್ದಾರೆ. ಸರ್ಕಾರದ ಆದೇಶದ ಬೆಳೆಗಳನ್ನು ನಿಗದಿಪಡಿಸಲು ವ್ಯಾಪಾರದ ಮೇಲಣ ಸಂಪೂರ್ಣ ನಿಯಂತ್ರಣ ಸಹಾಯ ಮಾಡುವುದು. ಆದರೆ ಇಲ್ಲಿಯೂ ಅರೆಮನಸ್ಸಿನಿಂದ ಮಾಡುವ ಕ್ರಮಗಳೇ ಸೂಚಿತವಾಗಿದ್ದು ಅವು ಜನರಲ್ಲಿ ಭೀತಿಯನ್ನುಂಟು ಮಾಡುವ ಹಾಗಿವೆ. ಹಿಂಬಾಗಿಲ ಮೂಲಕ ಸರ್ವಾಧಿಕಾರದ ಸಮಾಜವಾದವನ್ನು ಜಾರಿಗೊಳಿಸಲು

ಅವರು ಬಯಸುತ್ತಾರೆ. ಕಾಂಗ್ರೆಸಿನ ಪರಮ ಗುರಿ ಸಹಕಾರದ ಗ್ರಾಮನಿರ್ವಹಣೆಯೇ ಆಗಿದ್ದಲ್ಲಿ, ಇಡೀ ಕಾರ್ಯ ಯೋಜನೆಯನ್ನು ಮೂರು ಹಂತಗಳಲ್ಲಿ ಅದೇಕೆ ಇರಿಸಿದೆ ಎನ್ನುವುದು ಅರ್ಥವಾಗುವುದಿಲ್ಲ. ಭೂಮಿ ಹೊಂದಿರುವುದರ ಬಗ್ಗೆ ಮಿತಿಯೊಂದನ್ನು ನಿಗದಿಪಡಿಸುವುದು ಮತ್ತು ಪಂಚಾಯತಿ ವ್ಯಾಪ್ತಿಯಲ್ಲಿನ ಹೆಚ್ಚುವರಿ ಜಮೀನನ್ನು ಗ್ರಾಮದ ಭೂರಹಿತ ವಯಸ್ಕರಿಂದ ಕೂಡಿದ ಸಹಕಾರಿ ಸಂಘವೊಂದಕ್ಕೆ ಕೊಡುವುದು ಮೊದಲ ಹಂತ. ಆರ್ಥಿಕವಾಗಿ ಪ್ರಯೋಜನವಿರದ ಭೂಮಿಯನ್ನು ಹೊಂದಿರುವ ಎಲ್ಲ ರೈತರನ್ನು ಸಹಕಾರಿ ಸಂಘಕ್ಕೆ ಸೇರುವಂತೆ ಕೋರುವುದು ಎರಡನೆಯ ಹಂತ. ಕೊನೆಯ ಹಂತದಲ್ಲಿ ಗ್ರಾಮದ ಎಲ್ಲ ಭೂಮಿಯನ್ನು ಒಟ್ಟುಗೂಡಿಸಿ ಸಾಮುದಾಯಿಕವಾಗಿ ಸಾಗುವಳಿ ಮಾಡುವುದು; ಇದನ್ನು ಗ್ರಾಮ ಪಂಚಾಯಿತಿಯು ನಿರ್ವಹಿಸುವುದು. ಮೊದಲು ಮೂರು ವರ್ಷಗಳ ಕಾಲ ಸೇವಾ ಸಹಕಾರಿ ಸಂಘಗಳನ್ನು ವ್ಯಾಪಕ ಪ್ರಮಾಣದಲ್ಲಿ ಸ್ಥಾಪಿಸುವ ವಿಷಯವನ್ನು ಕೂಡ ಮುಂದಿಡಲಾಗಿದೆ. ಆದರೆ ಈ ಎಲ್ಲ ಹಂತಗಳು ಇಡೀ ಯೋಜನೆಯ ಘನತೆಯನ್ನೆ ತೆಗೆದುಹಾಕುತ್ತವೆ. ಪ್ರಚಾರ ಮತ್ತು ಕುಟಿಲೋಪಾಯಗಳುಳ್ಳ ರಾಜಕಾರಣಿಯೊಬ್ಬನ ಆವಶ್ಯಕತೆಗಳನ್ನು ಅದು ಈಡೇರಿಸುವುದು; ಆದರೆ ಅರ್ಥಶಾಸ್ತ್ರಜ್ಞ ಮತ್ತು ಸಮಾಜಶಾಸ್ತ್ರಜ್ಞನ ಆದರ್ಶಗಳನ್ನು ಸಾಧಿಸಲು ಅಲ್ಲ. ಸಮಾಜದ ಒಂದು ಭಾಗವು ಇನ್ನೊಂದರ ವಿರುದ್ಧ ಪ್ರತಿಸ್ಪರ್ಧಿಸಲು ಮಾತ್ರವೇ ಭೂರಹಿತ ಸಹಕಾರಿ ಸಂಘಗಳೊಂದಿಗೆ ಮಿತಿಯ ಅಂಶವನ್ನು ಸೇರಿಸಲಾಗಿದೆ. ಭೂರಹಿತರಲ್ಲಿ ಹೆಚ್ಚಿನವರ ಪರಿಸ್ಥಿತಿ ಹೆಚ್ಚು ಉತ್ತಮವಾಗುವುದಿಲ್ಲ. ಇನ್ನೂ ಮೊದಲು ಭರವಸೆ ನೀಡಿದಂತಹ ಚಿಕ್ಕ ಭೂಮಿಯ ತುಣುಕನ್ನು ಸ್ವಂತವನ್ನಾಗಿ ಮಾಡಿಕೊಳ್ಳುವ ಮಾನಸಿಕ ಲಾಭವನ್ನು ಕೂಡ ಆತನಿಂದ ದೂರಮಾಡಿಕೊಂಡಂತಾಗುತ್ತದೆ. ಆತ ಕೂಲಿ ಕಾರ್ಮಿಕನಾಗಿಯೇ ಮುಂದುವರಿಯುವನು.

ಭೂರಹಿತರ ಈ ಹೊಸದಾಗಿ ಸ್ಥಾಪಿತವಾದ ಸಹಕಾರಿ ಸಂಘಗಳಿಗೆ ಆವಶ್ಯಕ ಅನುಕೂಲತೆಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುತ್ತದೆ. ಈ ಸಂಘಗಳು ಭೂರಹಿತರು ಮತ್ತು ಆರ್ಥಿಕಲಾಭವಿಲ್ಲದ ಭೂಮಿಗಳನ್ನು ಹೊಂದಿರುವ ಇತರ ರೈತರಿಂದ ರೂಪುಗೊಂಡಿದ್ದಲ್ಲಿ, ಎರಡನೆಯವರು, ಎಂದರೆ ಪ್ರಯೋಜನವಿಲ್ಲದ ಭೂ ಒಡೆಯರು, ತಮ್ಮ ಉಪಕರಣ ಮತ್ತು ಎತ್ತುಗಳೊಡನೆ ಸೇರಿಕೊಂಡುಬಿಡುತ್ತಿದ್ದರು. ಆದರೆ ವಸ್ತುತಃ ರಾಜಕೀಯ ಸ್ವರೂಪದ ತಿದ್ದುಪಡಿಯೊಂದನ್ನು ಪಂಡಿತ ನೆಹರೂ ಅವರು ಬಹಿರಂಗ ಅಧಿವೇಶನದಲ್ಲಿ ಮಂಡಿಸಿದರು. ಇದರಿಂದ ಸಣ್ಣ ರೈತರು ಮುಂದಿನ ಹಂತಕ್ಕೆ ದೂಡಲ್ಪಟ್ಟಂತಾಯಿತು. ರಾಜ್ಯಕ್ಕೆ ಅದೊಂದು ದೊಡ್ಡ ಹೊರೆಯಾಗುವುದೆಂಬುದು ಇದರ ಇಂಗಿತ. ಪ್ರಸ್ತುತ ಲಭ್ಯವಿರುವ ಅತ್ಯಲ್ಪ

ಸಂಪನ್ಮೂಲಗಳಿಂದ ಈ ಲಕ್ಷಾಂತರ ಸಹಕಾರಿಗಳ ವ್ಯಾಪಕ ಆವಶ್ಯಕತೆಗಳನ್ನು ತೃಪ್ತಿಪಡಿಸಲು ಸಾಧ್ಯವಾಗುವುದಿಲ್ಲ. ಮೊದಲ ಹಂತದಲ್ಲಿ ಸರ್ಕಾರವು ಇತರ ರೈತರಿಗೆ ಕೊಡುತ್ತಿರುವ ನೆರವನ್ನು ಕೇವಲ ಈ ಸಹಕಾರಿಗಳಿಗೆ ವರ್ಗಾಯಿಸುವುದು. ಇದು ಕೂಡ ಅವರ ಆವಶ್ಯಕತೆಗಳನ್ನು ಪೂರೈಸುವುದಿಲ್ಲ. ಆದರೆ ಸ್ವಪ್ರಯೋಜನಕ್ಕೆ ಅವರನ್ನು ಬಳಸಿಕೊಳ್ಳುತ್ತಿದ್ದವರಿಗೆ ಕೊರತೆ ಮತ್ತು ಕಠಿಣಶ್ರಮಗಳನ್ನು ನಿಶ್ಚಿತವಾಗಿ ಉಂಟುಮಾಡುತ್ತಿತ್ತು. ಎಂದರೆ ಎಲ್ಲೆಡೆ ಕೊರತೆಯೇ. ಇದರ ಪರಿಣಾಮವೆಂದರೆ ಕೃಷಿಯ ಉತ್ಪಾದನೆ ಇಳಿಮುಖವಾಗುವುದು; ಹಾಗೆಯೇ ಬಿಕರಿಯಾಗಬಲ್ಲ ಹೆಚ್ಚುವರಿ ಸರಕಿನ ಪ್ರಮಾಣವೂ ಇಳಿಮುಖವಾಗುವುದು.

ಮಿತಿಯನ್ನು ನಿಗದಿಪಡಿಸುವುದು, ಹೆಚ್ಚುವರಿ ಭೂಮಿಯನ್ನು ಒಪ್ಪಿಸುವುದು ಮತ್ತು ಅವುಗಳ ಸಾಗುವಳಿಯನ್ನು ಯೋಜಿತ ಸಹಕಾರಿಗಳ ಮೂಲಕ ಮಾಡುವುದು– ಇವೆಲ್ಲದರ ನಡುವೆ ಕೂಡ ಕಾಲದ ಅಂತರ ಉಂಟಾಗುವುದು. ದೀರ್ಘಕಾಲೀನವಾಗಿ ಇದು ನಡೆಯುವುದರಿಂದ ಇಡೀ ಕೃಷಿಯೇ ನಿಷ್ಕ್ರಿಯವಾಗುವ ಸಾಧ್ಯತೆ ಇರುವುದು. ಇದರ ಅರ್ಥವೆಂದರೆ ಕೃಷಿ ಮತ್ತು ಕೃಷಿಕನ ಅಭಿವೃದ್ಧಿಗಿಂತ ಹೆಚ್ಚಾಗಿ ನಿಷ್ಕ್ರಿಯತೆ ಮತ್ತು ಕ್ಷೀಣತೆ. ಅಲ್ಲದೆ, ನಾವು ಕೊನೆಯ ಹಂತ ತಲುಪುವ ವೇಳೆಗೆ ಇಡೀ ಪ್ರಕ್ರಿಯೆಯೇ ಜನರಲ್ಲಿ ದುರಭಿಪ್ರಾಯ ಮತ್ತು ವೈಮನಸ್ಯಗಳನ್ನು ಹುಟ್ಟು ಹಾಕಿ ಸಹಕಾರಿಗಳ ಯಾವುದೇ ಯೋಜನೆಯೂ ಅಸಂಭವನೀಯವನ್ನಾಗಿ ಮಾಡಿರುತ್ತದೆ. ತಾತ್ತ್ವಿಕ ಕಾರಣಗಳಲ್ಲದೆ, ಪ್ರಸಕ್ತ ಪರಿಸ್ಥಿತಿಯೂ ಕೃಷಿಯಲ್ಲಿ ಸಹಕಾರವನ್ನು ಅಳವಡಿಸಿಕೊಳ್ಳಲು ಸಕಾಲವಲ್ಲ. ಮೊದಲು ನಾವು ರಾಜಕೀಯ ವಿಕೇಂದ್ರೀಕರಣವನ್ನು ಜಾರಿಗೊಳಿಸೋಣ. ಸದೃಢವಾದ ತಳಹದಿಯ ಮೇಲೆ ಗ್ರಾಮ ಪಂಚಾಯಿತಿಯು ಪುನರ್ ರೂಪಿತವಾಗಬೇಕು. ಸರ್ವಾನುಮತದಿಂದ ಚುನಾಯಿತವಾದ ಪಂಚಾಯಿತಿಯನ್ನು ಪ್ರತಿನಿಧಿಸುವ ಒಗ್ಗೂಡಿದ ಗ್ರಾಮ ಜನರ ನಮ್ಮ ಪ್ರಾಚೀನ ಆದರ್ಶದ ಸಾಕಾರ ರೂಪವಾಗಿರಲಿ ಅದು. ಆದರೆ ಅಂಥ ಹಂತದಲ್ಲಿ ನಾವೀಗ ಅನಾವಶ್ಯಕವಾಗಿ ಅಳವಡಿಸಿಕೊಂಡಿರುವ ಚುನಾವಣೆಗಳನ್ನು ಹೊಂದಿದ್ದೇವೆ. ಒಂದುಗೂಡಿದ್ದ ಜನರನ್ನು ಅದು ವಿಭಜಿಸಿದೆ. ಅವರ ಭೂಮಿಗಳನ್ನು ಭೌತಿಕವಾಗಿ ಒಂದುಗೂಡಿಸುವುದರಿಂದ ಅವರನ್ನು ಒಂದು ಗೂಡಿಸಿದಂತಾಗುವುದಿಲ್ಲ.

ಸೇವಾ ಸಹಕಾರಿಗಳ ಕಾರ್ಯಕ್ರಮವೊಂದನ್ನು ನಾವು ಹೊಂದಲು ಸಾಧ್ಯವಿದೆ. ಸರ್ಕಾರದ ಯಾವುದೇ ಮಧ್ಯ ಪ್ರವೇಶವಿಲ್ಲದೆ ಅವು ಚೆನ್ನಾಗಿ ಕೆಲಸ ಮಾಡುವುದಾದಲ್ಲಿ, ಆಗ ಒಂದು ಬೃಹತ್ ಪ್ರಮಾಣದ ಉತ್ಪಾದನಾ ಘಟಕದ ಎಲ್ಲ ಅರ್ಥನೀತಿಗಳನ್ನು ನಾವು ಸಾಧಿಸಿದಂತೆ ಮತ್ತು ಎಲ್ಲ ತಪ್ಪು ಅರ್ಥನೀತಿಗಳನ್ನು ನಿವಾರಿಸಿದಂತೆ ಆಗಿರುವುದು.

ಅಧಿಕೋತ್ಪಾದನೆಯ ಸಾಗುವಳಿಯೇ ನಮ್ಮ ಕಷ್ಟಕರ ಕೃಷಿ ಮತ್ತು ಆಹಾರ ಸಮಸ್ಯೆಗೆ ಏಕೈಕ ಪರಿಹಾರವೆಂದು ನಮ್ಮೆಲ್ಲರಿಂದ ಪರಿಗಣಿತವಾಗಿದೆ. ಬಹಳ ಬೃಹತ್ ಪ್ರಮಾಣದಲ್ಲಿ ಯಾಂತ್ರೀಕರಣವನ್ನು ಕೈಗೆತ್ತಿಕೊಳ್ಳುವವರೆಗೆ ಕೇವಲ ಭೂಮಿಗಳನ್ನು ಒಟ್ಟುಗೂಡಿಸುವುದರಿಂದ ನಾವು ಈ ಗುರಿಯನ್ನು ಸಾಧಿಸಲಾರೆವು. ಪ್ರಾಯಃ ಹಾಗೆ ಮಾಡುವುದು ಕೂಡ ಸಾಧ್ಯವಿಲ್ಲವೇನೋ. ನಾಗಪುರ ಅಧಿವೇಶನದಲ್ಲಿ ಭೂಸುಧಾರಣೆಯ ನಿರ್ಣಯವನ್ನು ಪಂಡಿತ್ ಪಂತ್ ಅವರು ಮಂಡಿಸಿದಾಗ ಯಾಂತ್ರೀಕರಣವು ಉದ್ದೇಶಿತವಲ್ಲವೆಂದು ಸ್ಪಷ್ಟವಾಗಿ ಹೇಳಿದರು. ಯಾಂತ್ರೀಕರಣವಲ್ಲದೆ ತೆರಿಗೆಯಿಂದ ನಮ್ಮ ಆರ್ಥಿಕ ಸಂಪನ್ಮೂಲಗಳು ಸೊರಗಿ ನಿರುದ್ಯೋಗವನ್ನು ಹೆಚ್ಚಿಸುವುವು. ನಾವು ನಮ್ಮ ಸಾಂಪ್ರದಾಯಿಕ ವಿಧಾನಗಳನ್ನು ಅನುಸರಿಸುವುದಾದಲ್ಲಿ ಅಧಿಕೋತ್ಪಾದನೆಯ ಕೃಷಿಯನ್ನು ಅತ್ಯುತ್ತಮವಾಗಿ ನಮ್ಮ ಪುಟ್ಟ ಖಾಸಗಿ ಭೂಮಿಯಲ್ಲಿ (ಫಾರಂ) ಮಾಡಲು ಸಾಧ್ಯ. ಅಂಗುಲ ಅಂಗುಲ ಭೂಮಿಯನ್ನೂ ಕೃಷಿಗೆ ಬಳಸಿಕೊಂಡು ಉತ್ಪಾದನೆಯನ್ನು ಗರಿಷ್ಠಮಟ್ಟಕ್ಕೆ ಹೆಚ್ಚಿಸಲು ಆವಶ್ಯಕವಾದ ಪ್ರೋತ್ಸಾಹ ರೈತನಿಗೆ ದೊರೆಯಲಿ. ಸಹಕಾರಿ ಕೃಷಿ ವಿಧಾನದಲ್ಲಿ ಈ ಪ್ರೋತ್ಸಾಹ ಕುಗ್ಗುವ ಸಾಧ್ಯತೆ ಹೆಚ್ಚು.

ಲಾಭಕರವಲ್ಲದ ಜಮೀನುಗಳ ಪ್ರಶ್ನೆಯೂ ಇದೆ. ಆರ್ಥಿಕ ಹಿಡುವಳಿಯನ್ನಾಗಿ ಅವನ್ನು ಪರಿವರ್ತಿಸಲು ಮತ್ತು ಒಟ್ಟುಗೂಡಿಸಲು ಆಲೋಚಿಸಲಾಗಿದೆ. ಆದರೆ ಇದೇನೂ ಪರಿಹಾರವಲ್ಲ. ಅನೇಕ ಭೂತುಣುಕುಗಳು (plots) ಪ್ರತ್ಯೇಕವಾಗಿ ಬಿಡಿ ರೈತ ಕುಟುಂಬಗಳಿಗೆ ಮತ್ತು ಅವರ ಜೊತೆ ಕೆಲಸ ಮಾಡುವ ಎತ್ತುಗಳಿಗೆ ಪೂರ್ಣ ಉದ್ಯೋಗವನ್ನು ಕೊಡಲು ಸಾಧ್ಯವಿಲ್ಲವಾದರೆ, ಅವೆಲ್ಲ ಒಟ್ಟು ಸೇರಿಸಿದಾಗ ಅವರೆಲ್ಲರಿಗೂ ಉದ್ಯೋಗ ಒದಗಿಸಲು ಹೇಗೆ ಸಾಧ್ಯ? ಹೆಚ್ಚುವರಿ ಕೆಲಸಗಾರರನ್ನು ಬೇರಾವುದೋ ವೃತ್ತಿಗೆ ಬದಲಾಯಿಸಿದಲ್ಲಿ ಅವು ಪ್ರಯೋಜನಕಾರಿಯಾಗಬಹುದಷ್ಟೇ. ವಾಸ್ತವವಾಗಿ ಲಾಭಕರವಲ್ಲದ ಜಮೀನುಗಳು (ಫಾರಂ) ಅಧಿಕೋತ್ಪಾದನೆಯ ಸಾಗುವಳಿಯಿಂದ ಮಾತ್ರವೇ ಆರ್ಥಿಕ ಕೃಷಿ ಭೂಮಿಯಾಗಲು ಸಾಧ್ಯ. ಕೃಷಿ ಉದ್ಯಮಗಳನ್ನು ಅಭಿವೃದ್ಧಿಪಡಿಸಿದಲ್ಲಿ ಕೃಷಿಕರಿಗೆ ಹೆಚ್ಚಿನ ಆದಾಯವೂ ಸೇರಬಹುದು. ಆದರೆ ಅವನ್ನು ನಗರಗಳಿಗೆ ವರ್ಗಾಯಿಸಿದಲ್ಲಿ ಅಥವಾ ಸಂಬಂಧಿತವಲ್ಲದ ವೃತ್ತಿಗಳಿಗೆ ಬದಲಾಯಿಸಿದಲ್ಲಿ, ಕೃಷಿ ಕಾರ್ಮಿಕರ ಕೊರತೆ ಹೆಚ್ಚಾಗಿ ಅದು ಬಿತ್ತನೆಯ ಮತ್ತು ಸುಗ್ಗಿಯ ಕಾಲಗಳಲ್ಲಿ ಎಲ್ಲ ಗ್ರಾಮಗಳಲ್ಲಿ ಅನುಭವಕ್ಕೆ ಬರುವುದು.

ಭೂ ಸುಧಾರಣೆಯ ವಿಷಯದಲ್ಲಿ ಜನಸಂಘವು ನಿರ್ಣಯ ಮಾಡಿದಂತೆ ಈ ಪ್ರಶ್ನೆಯು ಪ್ರಾಯೋಗಿಕವಾದುದು ಹಾಗೂ ವ್ಯಾವಹಾರಿಕವಲ್ಲದ ಮಾರ್ಗಕ್ಕೆ ಅವಕಾಶ ನೀಡುವುದಿಲ್ಲ. ಜಮೀನುದಾರರು ಮತ್ತು ಜಾಗೀರುದಾರರಂಥ ಮಧ್ಯವರ್ತಿಗಳ ರದ್ಧತಿ ಅಷ್ಟು ಸುಲಭದ್ದಲ್ಲ. ರಾಜಕೀಯ ತುರ್ತು ಅಗತ್ಯಗಳಿಗೆ

ಸೂಕ್ತವಾಗುವಂತೆ ಹಿಂದಿನ ಆಳರಸರು ಸೃಷ್ಟಿಸಿದ ಒಂದು ಸಂಸ್ಥೆ ಅದು. ಹಾಗಾಗಿ ಅದನ್ನು ಕಾನೂನಿನ ಮೂಲಕ ರದ್ದುಗೊಳಿಸಲು ಸಾಧ್ಯವಾಗಲಿಲ್ಲ. ಭಾರತದಲ್ಲಿ ಕೃಷಿ ಕಾನೂನಿಗೆ ಬರೆದ ಪರಿಚಯಾತ್ಮಕ ಮುನ್ನುಡಿಯಲ್ಲ.

* * * * *

# ಅಲ್ಪಸಂಖ್ಯಾತರೆಡೆಗಿನ ಧೋರಣೆ ಮುಸ್ಲಿಂ ಒಡಂಬಡಿಕೆಯ ಪ್ರತಿಧ್ವನಿಗಳು

ಇತ್ತೀಚೆಗೆ ರಾಷ್ಟ್ರೀಯ ಐಕ್ಯತೆಯ ಅಗತ್ಯದ ಅರಿವು ಹೆಚ್ಚುತ್ತಿದೆ. ಈ ಭಾವನೆ ಎಲ್ಲ ರಾಜಕೀಯ ಪಕ್ಷಗಳ ಚುನಾವಣಾ ಪ್ರಣಾಳಿಕೆಯಲ್ಲೂ ಪ್ರತಿಫಲಿಸುತ್ತಿದೆ. ಆದರೆ ರಾಷ್ಟ್ರೀಯ ಐಕ್ಯತೆಯ ಬಗೆಗಿನ ಅವರ ಗ್ರಹಿಕೆಯಲ್ಲಿ ಬಹಳಷ್ಟು ವ್ಯತ್ಯಾಸವಿದ್ದಂತೆ ತೋರುತ್ತದೆ. ಇದಲ್ಲದೇ ಅವರಲ್ಲಿ ಕೆಲವರು ರಾಜಕೀಯದಲ್ಲಿನ ಜಾತೀಯ ಹಾಗೂ ಪಂಥೀಯ ಶಕ್ತಿಗಳ ಜೊತೆ ತಮ್ಮ ಅವಕಾಶವಾದಿ ಹೊಂದಾಣಿಕೆಯನ್ನು ಮುಚ್ಚಿಡಲು ಐಕ್ಯತೆಯ ಘೋಷಣೆಗಳನ್ನು ಉಚ್ಚರಿಸುತ್ತಿರುವಂತಿದೆ.

**ಈ ಸಂಬಂಧ ಕಾಂಗ್ರೆಸ್ ಪ್ರಣಾಳಿಕೆ ಹೀಗೆ ಬರೆಯುತ್ತದೆ**

ಹೀಗೆ ರಾಷ್ಟ್ರೀಯ ಐಕ್ಯತೆಯ ಪ್ರಶ್ನೆ ಮೂಲಭೂತವಾಗಿ ಪ್ರಾಮುಖ್ಯತೆ ಪಡೆದುಕೊಂಡಿದೆ. ಅದಲ್ಲದೇ, ಧರ್ಮಾಂಧತೆ, ಸಂಪ್ರದಾಯ ಶರಣತೆ ಹಾಗೂ ಪ್ರತಿಕ್ರಿಯೆಗಳು ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ.

**ಮುಂದಿನ ಪ್ಯಾರಾಗಳಲ್ಲಿ ಕಾಂಗ್ರೆಸ್ ಮತ್ತೆ ಬರೆಯುತ್ತದೆ**

ಭಾರತೀಯರ ಅಭಿವೃದ್ಧಿ ಎಲ್ಲಕ್ಕಿಂತ ಹೆಚ್ಚಾಗಿ ಅವರ ಐಕ್ಯತೆ ಹಾಗೂ ಹೊಂದಾಣಿಕೆಯಲ್ಲಿ ಹಾಗೂ ನಮ್ಮ ದೇಶದ ಸಮಗ್ರತೆಯಲ್ಲಿದೆ. ಜಾತೀಯ ಹಾಗೂ ಪಂಥೀಯ ಧೋರಣೆಗಳು ಕೇವಲ ಸೈದ್ಧಾಂತಿಕವಾಗಷ್ಟೇ ಕೆಟ್ಟದಲ್ಲದೇ ಅವುಗಳ ಪರಿಣಾಮದಲ್ಲೂ ಅಪಾಯಕಾರಿಯಾಗಿದ್ದು ಇವುಗಳು ದೇಶವನ್ನು ದುರ್ಬಲಗೊಳಿಸುತ್ತವೆ. ಆದ್ದರಿಂದ ಈ ಸಂಕುಚಿತ, ಭೇದಾತ್ಮಕ ಹಾಗೂ ಪ್ರತ್ಯೇಕತಾವಾದಿ ಧೋರಣೆಗಳನ್ನು ವಿರೋಧಿಸುವುದು ಹಾಗೂ ದೇಶದ ಸಂಪೂರ್ಣ ಐಕ್ಯತೆ ಹಾಗೂ ಸಮಗ್ರತೆಗೆ ಕಾರ್ಯ ನಿರ್ವಹಿಸುವುದು ಮುಖ್ಯವಾಗಿದೆ.

**ಕಾಂಗ್ರೆಸ್, ಜಾತೀಯತೆಯ ಆಶ್ರಯದಾತ**

ಇವೆಲ್ಲವೂ ಕೇಳಲು ಚೆನ್ನಾಗಿದೆ. ಆದರೆ ಕಾಂಗ್ರೆಸ್ ಪಕ್ಷವು ತನ್ನ ನೀತಿಗಳಲ್ಲಿ ಮುಖ್ಯವಾಗಿ ಹಾಗೂ ಸಂಪೂರ್ಣವಾಗಿ ಜಾತೀಯ ಪರಿಗಣನೆಗಳಿಂದ ಮಾರ್ಗದರ್ಶನಕ್ಕೊಳಗಾಗುತ್ತದೆಂದು ವ್ಯಾಪಕವಾಗಿ ಒಪ್ಪಲಾಗಿದೆ. ಈಗ ತೋರಿಕೆಗೆ ನಿರಾಕರಿಸಲ್ಪಟ್ಟ ಹಾಗೂ ಆರೋಪಿಸಲ್ಪಟ್ಟ ಕೇರಳದಲ್ಲಿ ಮುಸ್ಲಿಮ್ ಲೀಗ್ ಜೊತೆಗಿನ

ಅದರ ಸಹಯೋಗ ಅದೆಷ್ಟು ಕುಖ್ಯಾತಿ ಗಳಿಸಿತ್ತೆಂದರೆ ತನ್ನ ತೋರಿಕೆಗಳನ್ನು ಕಾಯ್ದುಕೊಳ್ಳಲು ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಸಮಗ್ರತಾ ಸಭೆಯ ಮಹಾನ್ ಅಣಕವನ್ನು ಆಯೋಜಿಸಬೇಕಾಯಿತು.

ಅದು ಯಾವತ್ತೂ ಬಹುಸಂಖ್ಯಾತರು ಹಾಗೂ ಅಲ್ಪಸಂಖ್ಯಾತರೆನ್ನುವ ನಿಟ್ಟಿನಲ್ಲೇ ಆಲೋಚಿಸುತ್ತದೆ ಹಾಗೂ ಇವರಿಬ್ಬರಿಗೂ ಅದು ಪ್ರತ್ಯೇಕ ಗುಣಮಟ್ಟಗಳನ್ನು ಹೊಂದಿದೆ. ಮಹಾರಾಜರಿಂದ ಭಾರತದಲ್ಲಿ ಕಾಶ್ಮೀರದ ವಿಲೀನವನ್ನು ರಾಜ್ಯದಲ್ಲಿನ ಬಹುಸಂಖ್ಯಾತರು ಮುಸ್ಲಿಮರೆನ್ನುವ ಏಕೈಕ ಕಾರಣಕ್ಕೆ ರಾಜ್ಯದ ಸಂವಿಧಾನ ಸಭೆಯು ಅದನ್ನು ಊರ್ಜಿತಗೊಳಿಸುವವರೆಗೂ ಅಂತಿಮವೆಂದು ಪರಿಗಣಿಸಲಿಲ್ಲ. ಆದರೆ ಬೇರೆ ರಾಜ್ಯಗಳಿಗೆ ಸಂಬಂಧಪಟ್ಟಂತೆ ಇಂಥ ಯಾವುದೇ ಶಿಷ್ಟಾಚಾರಗಳು ಕಾಂಗ್ರೆಸ್‌ಗೆ ಅಗತ್ಯವೆನಿಸಲಿಲ್ಲ.

ಟಿಕೆಟ್ ಹಂಚುವಿಕೆಯಲ್ಲೂ ಜಾತೀಯ ಪರಿಗಣನೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟಂತೆ ಮುಖ್ಯ ಮಂತ್ರಿಗಳ ನಿರ್ಧಾರಗಳು ಹಾಗೂ ಉರ್ದುವಿಗೆ ಸಂಬಂಧಪಟ್ಟಂತೆ ಕೇಂದ್ರ ಗೃಹಮಂತ್ರಿಗಳ ನಿರ್ದೇಶನವು ಕಾಂಗ್ರೆಸ್‌ನ ಜಾತೀಯ ಧೋರಣೆಯ ಉದಾಹರಣೆಗಳಾಗಿದೆ. ಅವರಿಗೆ ಹಿಂದುತ್ವವೆಂದರೆ ಹೇಸಿಗೆಯಾಗಿದೆ.

**ಪಿ ಎಸ್‌ಪಿಯ ನಿಲುವು**

ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯು ಈ ಕೆಳಗಿನ ರಾಷ್ಟ್ರೀಯ ಐಕ್ಯತೆಯ ಕೊರತೆಯ ಬಗ್ಗೆ ಪ್ರಲಾಪಿಸುತ್ತದೆ: ಭಾಷಾ ಅಲ್ಪಸಂಖ್ಯಾತರಿಗೆ ನ್ಯಾಯ ಸಿಗುವ ಬಗೆಗಾಗಲೀ ಅಥವಾ ಸಮಾನವಾಗಿ ನಡೆಸಿಕೊಳ್ಳುವ ಬಗೆಗಾಗಲೀ ಭರವಸೆಯಿಲ್ಲದಿರುವುದರಿಂದ ರಾಷ್ಟ್ರೀಯ ಐಕ್ಯತೆಗೆ ಧಕ್ಕೆಯುಂಟಾಗುತ್ತದೆ. ನಿರ್ಲಕ್ಷ್ಯ ಹಾಗೂ ಭೇದಭಾವಗಳು ಹಿಂಸೆ ಪ್ರಾರಂಭವಾಗುವವರೆಗೂ ಹಾಗೂ ರಕ್ತ ಹರಿಯುವವರೆಗೂ ಕಡೆಗಣಿಸಲ್ಪಡುತ್ತವೆ. ನಂತರ ತೇಪೆ ಹಚ್ಚಿದಂತೆ ಪರಿಹಾರ ಕಾರ್ಯಗಳು ಆಗಾಗ ಬಂದರೂ ಆಳವಾಗಿ ಹಬ್ಬಿರುವ ಪಿಡುಗು ಯಾವತ್ತೂ ಸರಿಯಾಗುವುದಿಲ್ಲ. ಅಲ್ಪಸಂಖ್ಯಾತರಲ್ಲಿ ಆಸೆ ಹಾಗೂ ವಿಶ್ವಾಸ ಗೆಲ್ಲಲು ಪ್ರಯತ್ನಿಸುವಲ್ಲಿ ನಂಬಿಕೆ ಹೆಚ್ಚಾಗುತ್ತದೆ.

ಧಾರ್ಮಿಕ ಗುಂಪುಗಳ ಮನ ಗೆಲ್ಲಲು ಹಾಗೂ ಮುಸ್ಲಿಮರ ಮುಗ್ಧತೆಯನ್ನು ಬಳಸಿಕೊಳ್ಳಲು ಇದು ಹೇಳುತ್ತದೆ: ಕಾಂಗ್ರೆಸ್ ಪಕ್ಷವು ಅನುಸರಿಸುವ ಅವಕಾಶವಾದಿ ನೀತಿಗಳು ಪದೇ ಪದೇ ಜಾತಿ ಹಾಗೂ ಜಾತೀಯ ನಿಷ್ಠೆಗಳಲ್ಲಿ ಪರ್ಯವಸಾನ ವಾಗುತ್ತದೆ ಹಾಗೂ ಇದು ಧಾರ್ಮಿಕ ಅಲ್ಪಸಂಖ್ಯಾತರ ಮನಸ್ಸಿನಲ್ಲಿ ನ್ಯಾಯಯುತವಾದ ಅಥವಾ ಹಾಗಿಲ್ಲದಿರುವ ಅನುಮಾನಗಳನ್ನು ಸೃಷ್ಟಿಸುತ್ತದೆ. ಈ ಅನುಮಾನಗಳನ್ನು

ರಾಜಕೀಯದಲ್ಲಿ ಜಾತೀಯ ಪರಿಗಣನೆಗಳನ್ನು ಮತ್ತೆ ಸೇರಿಸಬಯಸುವ ಪಕ್ಷಗಳು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತವೆ.

ಆದರೆ ಪಿಎಸ್‌ಪಿ ಶಿಫಾರಸ್ಸು ಮಾಡುವ ಪರಿಹಾರೋಪಾಯಗಳು ಮೇಲೆ ಉಲ್ಲೇಖಿಸಿದ ಸ್ವಲಾಭದಲ್ಲಿ ಆಸಕ್ತಿ ಹೊಂದಿದ ಪಕ್ಷಗಳ ಪಟ್ಟಿಯಿಂದ ಅದನ್ನು ಹೊರಗಿಡಲಾಗದೆಂದು ತೋರಿಸುತ್ತವೆ: ಭಾರತದ ಒಗ್ಗಟ್ಟು ತುಂಬ ಮುಖ್ಯವಾಗಿದೆ, ಹಾಗೂ ಅದನ್ನು ವಿಭಿನ್ನ ಅಲ್ಪಸಂಖ್ಯಾತರಿಗೆ ಸ್ವ-ಅಭಿವ್ಯಕ್ತಿಗೆ ಭರವಸೆಯನ್ನು ನೀಡುವುದರಿಂದ ಮಾತ್ರ ಸಾಧಿಸಬಹುದು. ಎಲ್ಲ ಅಲ್ಪಸಂಖ್ಯಾತರೂ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಜೀವನದ ಎಲ್ಲ ಸ್ತರಗಳಲ್ಲೂ ಭಾಗವಹಿಸುವ ಸಮಾನ ಅವಕಾಶ ಹೊಂದಿರಬೇಕು. ಇದರ ಜೊತೆಗೇ ಅವರು ತಮ್ಮ ಧರ್ಮವನ್ನು ಅನುಸರಿಸುವ, ಹಾಗೂ ತಮ್ಮ ಭಾಷೆ, ಲಿಪಿ ಹಾಗೂ ಸಾಹಿತ್ಯದ ಬೆಳವಣಿಗೆಗಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಹಾಗೂ ಸಾಂಸ್ಕೃತಿಕ ಸಂಘಟನೆಗಳನ್ನು ನಡೆಸುವ ಹಕ್ಕನ್ನು ಹೊಂದಿರಬೇಕು. ಇಂಥ ಸಂಸ್ಥೆಗಳು ರಾಜ್ಯದ ಆರ್ಥಿಕ ಸಹಾಯ ಹೊಂದಿರಬೇಕು. ಸಾಂಸ್ಕೃತಿಕ ಹಾಗೂ ಭಾಷೆಯ ಹಕ್ಕುಗಳನ್ನು ಆಸ್ವಾದಿಸಲು, ರಾಷ್ಟ್ರೀಯ ಜೀವನದಲ್ಲಿ ಸಮಾನ ಭಾಗವಹಿಸುವಿಕೆಯನ್ನು ಒಂದು ಅರ್ಥಪೂರ್ಣ ವಾಸ್ತವವನ್ನಾಗಿ ಮಾಡಲು ಹಾಗೂ ಅಲ್ಪಸಂಖ್ಯಾತರಿಗೆ ನೀಡಿದ ರಕ್ಷಣೆಗಳನ್ನು ಪ್ರಭಾವಶಾಲಿಯಾಗಿಸಲು ಸೂಕ್ತ ಅಧಿಕಾರಗಳಿರುವ ಹಾಗೂ ಸರ್ವೋಚ್ಚ ನ್ಯಾಯಾಲಯದ ದರ್ಜೆಯಿರುವ ಒಂದು ಅಲ್ಪಸಂಖ್ಯಾತರ ಆಯೋಗವನ್ನು ರಚಿಸಲಾಗುವುದು.

ಇದು ಸರ್ಕಾರದಲ್ಲಿ ಒಂದು ಶಾಶ್ವತವಾದ ಅವಿಶ್ವಾಸವನ್ನು ಉಂಟು ಮಾಡುವುದಿಲ್ಲವೇ? ಆದರೆ ಅದೇ ಉಸಿರಿನಲ್ಲೇ ಪ್ರಣಾಳಿಕೆಯು ಹೇಳುತ್ತದೆ: "ಅಲ್ಪಸಂಖ್ಯಾತರು ತಡೆಯಿಲ್ಲದ ಸ್ವ-ಅಭಿವ್ಯಕ್ತಿಗೆ ಅವಕಾಶ ಪಡೆಯಬೇಕಾದರೂ, ಅವರು ರಾಜ್ಯದೆಡೆಗೆ ಹಾಗೂ ಅದರ ಗುರಿ ಹಾಗೂ ಮೌಲ್ಯಗಳ ಬಗ್ಗೆ ನಿಷ್ಠೆ ಹಾಗೂ ತಿಳುವಳಿಕೆಯನ್ನು ಬೆಳೆಸಿಕೊಳ್ಳಬೇಕು.

ಪಿಎಸ್‌ಪಿ ರಾಷ್ಟ್ರ ಹಾಗೂ ರಾಜ್ಯದ ನಡುವೆ ಒಂದು ಪ್ರತ್ಯೇಕತೆ ಏರ್ಪಡಿಸಿಕೊಂಡಂತೆ ತೋರುತ್ತದೆ. ಅದು ರಾಜ್ಯಕ್ಕೆ ನಿಯತ್ತನ್ನು ಕೇಳುತ್ತದೆಯೇ ಹೊರತು ರಾಷ್ಟ್ರಕ್ಕಲ್ಲ.

**ಸಿಪಿಐ ಧೋರಣೆ**

ಜಾತೀಯತೆಯ ಬಗೆಗಿನ ತನ್ನ ವಾಗ್ದಾಳಿಯ ನಂತರ ಕಮ್ಯುನಿಸ್ಟ್ ಪಕ್ಷವು ಹೇಳುತ್ತದೆ: ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಅಭ್ಯಸಿಸುವ ಹಾಗೂ ಅಲ್ಪಸಂಖ್ಯಾತರ ಹಕ್ಕುಗಳು ಹಾಗೂ ಹಿತಾಸಕ್ತಿಗಳ ಉಳಿವು ಹಾಗೂ ರಕ್ಷಣೆಗಾಗಿ ಅವರ ದುಃಖ ದುಮ್ಮಾನಗಳನ್ನು ಪರಿಶೀಲಿಸಿ ಬಲವಾದ ಕ್ರಮಗಳು ಹಾಗೂ ಕಾರ್ಯಗಳನ್ನು

ಕೈಗೊಳ್ಳುವ ಭಾರತದಾದ್ಯಂತಹ ಹಾಗೂ ರಾಜ್ಯ ಮಟ್ಟಗಳ ಶಾಶ್ವತವಾದ ಅಲ್ಪಸಂಖ್ಯಾತರ ಆಯೋಗದ ಸೃಷ್ಟಿ.

ಅದು ಮುಂದೆ ಹೇಳುತ್ತದೆ: ಉರ್ದು ಮಾತನಾಡುವ ಅಲ್ಪಸಂಖ್ಯಾತರ ಎಲ್ಲ ಹಕ್ಕುಗಳನ್ನೂ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಹಾಗೂ ನಿಮ್ಮ ದೇಶದಲ್ಲಿ ಉರ್ದು ಭಾಷಿಕರ ಎಲ್ಲ ನ್ಯಾಯಯುತ ಕಷ್ಟಗಳನ್ನು ಇನ್ನು ಮುಂದೆ ಕೊನೆಗೊಳಿಸಬೇಕು.

ಒಂದು ಜಾಗತಿಕ ಸಿದ್ಧಾಂತವಾಗಿ ಕಮ್ಯುನಿಸಂ ರಾಷ್ಟ್ರೀಯತೆಯನ್ನು ಗುರುತಿಸುವುದಿಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಇತ್ತೀಚಿಗಿನ ರಷ್ಯಾದ ಕಮ್ಯುನಿಸ್ಟ್ ಪಕ್ಷದ ಸಮಾವೇಶದಲ್ಲಿ ಕ್ರುಶ್ಚೇವ್ ಹೇಳಿದ ಹಾಗೆ ಅವರು ರಾಷ್ಟ್ರೀಯತೆಯನ್ನು ಬೆಳವಣಿಗೆಯ ಅತ್ಯಂತ ದೊಡ್ಡ ಶತ್ರುವೆಂದು ಪರಿಗಣಿಸುತ್ತಾರೆ. ಇವೆಲ್ಲ ಒಂದು ಬೂರ್ಜ್ವಾ (ಮಧ್ಯಮ ವರ್ಗದ) ಭಾವನೆಗಳು.

**ಸ್ವತಂತ್ರ ಪಕ್ಷ**

ಸ್ವತಂತ್ರ ಪಕ್ಷವು ಕೇವಲ ಸಾಮಾನ್ಯ ಶಬ್ದಗಳಲ್ಲಿ ಮಾತ್ರ ಅಲ್ಪಸಂಖ್ಯಾತರ ರಕ್ಷಣೆಗೆ ಪಣತೊಡುತ್ತದೆ. ಅದು ಹೇಳುತ್ತದೆ.

ಸ್ವತಂತ್ರ ಪಕ್ಷವು ಎಲ್ಲ ಅಲ್ಪಸಂಖ್ಯಾತರ ಹಕ್ಕುಗಳು ಹಾಗೂ ರಕ್ಷಣೆಗೆ ಸಂವಿಧಾನದಲ್ಲಿರುವ ನಿಬಂಧನೆಗಳನ್ನು ಅಕ್ಷರಶಃ ಪಾಲಿಸುತ್ತದೆ.

ಜಾತೀಯ ಸಂಘಟನೆಗಳನ್ನು ವಿರೋಧಿಸಬೇಕಾಗಿರುವುದರಿಂದ ಅಥವಾ ಬಹಿಷ್ಕರಿಸಬೇಕಾಗಿರುವುದರಿಂದ ಯಾವುದೇ ವರ್ಗ ಅಥವಾ ಸಮುದಾಯದ ಹಕ್ಕುಗಳ ರಕ್ಷಣೆ ಮಾಡಲು ಯಾವುದೇ ಸಹಯೋಗಗಳನ್ನು ಪಡೆಯುವುದಿಲ್ಲವೆಂದೂ ಘೋಷಿಸುತ್ತದೆ.

ಈ ಎಲ್ಲ ಪಕ್ಷಗಳೂ ನೇರವಾಗಿ ಅಥವಾ ಪರೋಕ್ಷವಾಗಿ ಭಾರತದಲ್ಲಿ 'ಅಲ್ಪಸಂಖ್ಯಾತರನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲವೆಂದು' ಘೋಷಿಸುತ್ತವೆ. ಮುಸ್ಲಿಂ ಒಡಂಬಡಿಕೆಯಲ್ಲಿ ವ್ಯಕ್ತಪಡಿಸಲಾದ ದೂರುಗಳಿಗೆ ಇದಕ್ಕಿಂತ ದೊಡ್ಡ ಜಯ ಸಿಗಲು ಸಾಧ್ಯವಿಲ್ಲ. ಆದರೆ ವಾಸ್ತವಾಗಿ ಅಲ್ಪಸಂಖ್ಯಾತರೆಂದು ಕರೆಯಲ್ಪಡುವ ಇವರ ವಿರುದ್ಧ ತಾರತಮ್ಯವಾಗದೇ ಇವರ ಪರವಾಗಿ ತಾರತಮ್ಯವಾಗುತ್ತಿದೆ. ಈ ಪಕ್ಷಗಳು ಚುನಾವಣೆಯ ಚಿಲ್ಲರೆ ಯಶಸ್ಸಿಗೆ ಇಲ್ಲದ ಭೂತವನ್ನು ಸೃಷ್ಟಿಸುತ್ತಿವೆ. ಇದು ನಿಜವಾಗಿಯೂ ನಾಚಿಕೆಗೇಡು. ಇದಲ್ಲದೇ ಅವರು ಸಲಹೆ ಮಾಡಿದ ವಿಧಾನಗಳನ್ನು ಅನುಸರಿಸಿದಲ್ಲಿ ಅದು ಈ ಧಾರ್ಮಿಕ ಹಾಗೂ ಸಾಮಾಜಿಕ ಗುಂಪುಗಳನ್ನು ರಾಷ್ಟ್ರೀಯ ವಾಹಿನಿಯಿಂದ ಶಾಶ್ವತವಾಗಿ ಪ್ರತ್ಯೇಕಿಸುತ್ತದೆ.

**ಬೆರಕೆಯಿಲ್ಲದ ರಾಷ್ಟ್ರೀಯತೆ**

ಭಾರತೀಯ ಜನಸಂಘವು ಬಹುಸಂಖ್ಯಾತರು ಹಾಗೂ ಅಲ್ಪಸಂಖ್ಯಾತರೆಂಬ ಪರಿಕಲ್ಪನೆಗಳನ್ನು ಒಪ್ಪುವುದಿಲ್ಲ. ಇದು ಒಂದು ಸಂಸ್ಕೃತಿ, ಒಂದೇ ದೇಶದಲ್ಲಿ ವಿಶ್ವಾಸವಿರಿಸುತ್ತದೆ. ಅದು ಧಾರ್ಮಿಕ ಆಧಾರದ ಮೇಲೆ ವಿಭಿನ್ನ ಸಂಸ್ಕೃತಿಗಳ ಅಸ್ತಿತ್ವಗಳನ್ನು ಒಪ್ಪುವುದಿಲ್ಲ. ಅದು ಒಂದು ದೇಶ, ಒಂದು ಸಂಸ್ಕೃತಿ ಹಾಗೂ ಒಂದು ರಾಷ್ಟ್ರವನ್ನು ಪ್ರತಿಪಾದಿಸುತ್ತದೆ. ಐತಿಹಾಸಿಕ ಹಾಗೂ ಇತರ ಕಾರಣಗಳಿಗಾಗಿ ಪ್ರತ್ಯೇಕಗೊಂಡಿರುವ ಅಥವಾ ರಾಷ್ಟ್ರೀಯವಲ್ಲದ ಅಥವಾ ರಾಷ್ಟ್ರವಿರೋಧೀ ಪದ್ಧತಿಗಳನ್ನೂ ಮೈಗೂಡಿಸಿಕೊಂಡಿರುವ ನಮ್ಮ ಸಮಾಜದ ಭಾಗಗಳಿವೆಯೆಂಬ ಸಂಪೂರ್ಣ ಅರಿವಿನ ಜೊತೆ ಅದು ಅವರ ಪ್ರತ್ಯೇಕತಾವಾದವನ್ನು ಮುಂದುವರಿಸುವ ಬದಲು ಗುಣಪಡಿಸಲು ಪ್ರಯತ್ನಿಸುತ್ತದೆ. ಅದು ರಾಷ್ಟ್ರೀಯತಾವಾದವನ್ನು ರಾಜಕೀಯ ಚೌಕಾಶಿಗಳಿಂದಲ್ಲದೇ ನಿಷ್ಠೆಯಿಂದ ಅಳೆಯಬೇಕೆಂದು ಗುರುತಿಸುತ್ತದೆ. ಜನ ಸಂಘದ ಪ್ರಕಾರ ರಾಷ್ಟ್ರವು ಒಂದು ಜೀವಂತ ಅಸ್ತಿತ್ವವಾಗಿದೆ.

ರಾಷ್ಟ್ರೀಯ ಐಕ್ಯತೆಯನ್ನು ಬಲಪಡಿಸಬೇಕಾದಲ್ಲಿ ಅದಕ್ಕೆ ರಚನಾತ್ಮಕ ಪ್ರಯತ್ನಗಳ ಅಗತ್ಯವಿದೆಯೆಂದು ಜನಸಂಘವು ಭಾವಿಸುತ್ತದೆ. ಅದು ನಂಬಿಕೆ ಹಾಗೂ ಪೂಜೆಯ ಸಂಪೂರ್ಣ ಸ್ವಾತಂತ್ರ್ಯದ ಭರವಸೆ ನೀಡಿದರೂ ರಾಜಕೀಯದಲ್ಲಿ ಮತವನ್ನು ಎಳೆತರುವ ಹಾಗೂ ಆ ಆಧಾರದ ಮೇಲೆ ವಿಶೇಷ ಸವಲತ್ತುಗಳನ್ನು ಕೇಳುವ ರೂಢಿಯನ್ನು ವಿರೋಧಿಸುತ್ತದೆ. ಎಲ್ಲ ಭಾರತೀಯ ಪ್ರಜೆಗಳಿಗೂ ಭಾರತೀಯ ಸಂಸ್ಕೃತಿಯಲ್ಲಿ ನಂಬಿಕೆಯಿಡಲು ಶಿಕ್ಷಣ ನೀಡುವ ಮೂಲಕ ರಾಷ್ಟ್ರೀಯ ಐಕ್ಯತೆಯನ್ನು ಬಲಪಡಿಸಲು ಜನ ಸಂಘ ವಿಶೇಷ ಕ್ರಮಗಳನ್ನು ಕೈಗೊಳ್ಳುತ್ತದೆ.

ಎಲ್ಲ ಪ್ರಜೆಗಳಿಗೂ ಸಮಾನ ಹಕ್ಕುಗಳನ್ನು ನೀಡಲು ಸಂಬಂಧಪಟ್ಟಂತೆ ಸಂವಿಧಾನಕ್ಕೆ ಯಾವುದೇ ತಿದ್ದುಪಡಿಯ ಅಗತ್ಯವಿಲ್ಲ. ಆದರೆ ಜನಸಂಘವು ಅದರ ಸರ್ಕಾರೀ ಲಕ್ಷಣಗಳನ್ನು ಬದಲಾಯಿಸಬಯಸುತ್ತದೆ. ಇದರ ಬದಲು ಇಲ್ಲಿ ಒಂದು ಏಕಾತ್ಮಕ ಸರ್ಕಾರದ ರಾಜ್ಯವಿರಬೇಕಾಗಿದ್ದು ಅತ್ಯಂತ ಕೆಳಮಟ್ಟದವರೆಗೂ ಅಧಿಕಾರ ವಿಕೇಂದ್ರೀಕರಣಕ್ಕೆ ಇಲ್ಲಿ ಅವಕಾಶವಿರಬೇಕು. ಇದು ದೇಶದ ಯಶಸ್ವೀ ರಕ್ಷಣೆಗೆ ಅಗತ್ಯವಾಗಿರುವ ರಾಷ್ಟ್ರೀಯ ಐಕ್ಯತೆಯನ್ನು ಅಭಿವೃದ್ಧಿಪಡಿಸುತ್ತದೆ.

**ಅಸ್ಸಾಂ ಬಗ್ಗೆ ಒಂದು ಪ್ರತ್ಯಕ್ಷದರ್ಶಿ ವರದಿ**

ಕಳೆದ ತಿಂಗಳು ಅಸ್ಸಾಂ ಕಣಿವೆಯಾದ್ಯಂತ ನಡೆದ ವಿಸ್ತೃತ ಗಲಭೆಗಳ ಬಗ್ಗೆ ಪ್ರತ್ಯಕ್ಷ ವಿವರ ಪಡೆಯಲು ನಾನು ಜುಲೈ ೦೫, ೧೯೬೦ರಂದು ಗುವಾಹಟಿಗೆ ತೆರಳಿದೆ. ನಾನು ಆ ಪ್ರಾಂತ್ಯದ್ಲಲಿ ೧೦ ದಿವಸಗಳ ಕಾಲ ತಂಗಿದ್ದೆ. ಗುವಾಹಟಿಯಿಂದ ತಿನ್ಸುಕಿಯಾದವರೆಗೆ ನಾನು ಕಾರ್‌ನಲ್ಲಿ ಪ್ರಯಾಣ ಮಾಡಿದೆ.

ಬಹಳಷ್ಟು ಗಲಭೆಪೀಡಿತ ಹಳ್ಳಿಗಳು ಹಾಗೂ ಪಟ್ಟಣಗಳು ಅಸ್ಸಾಂ ಟ್ರಂಕ್ ರಸ್ತೆಯಲ್ಲಿದ್ದಿದ್ದರಿಂದ ನನಗೆ ಅಲ್ಲಿ ಉಂಟಾದ ಹಾನಿಯ ಬಗ್ಗೆ ಒಂದು ಸೂಕ್ತ ಗ್ರಹಿಕೆ ದೊರಕಿತು. ತಿನ್ಸುಕಿಯಾದಿಂದ ನಾನು ಸಿಲ್ಚಾರ್ ನಿಲುಗಡೆಗೆ ಸುಮಾರು ಆರು ತಾಸುಗಳ ಕಾಲ ರೈಲಿನಿಂದ ಪ್ರಯಾಣಿಸಿದೆ ಹಾಗೂ ಮತ್ತೆ ಗುವಾಹಟಿಗೆ ರೈಲಿನಿಂದ ಬಂದೆ ಹಾಗೂ ದಾರಿಯಲ್ಲಿ ನಾನು ಜನಸಂಘದ ಕಾರ್ಯಕರ್ತರನ್ನು ಭೇಟಿಯಾದೆ. ಅವರಿಂದ ನನಗೆ ಗಲಭೆಯ ವ್ಯಾಪ್ತಿಯ ಬಗೆಗೆ ವಿಶ್ವಾಸಾರ್ಹ ಮಾಹಿತಿ ದೊರಕಿತು. ಗುವಾಹಟಿಯಿಂದ ನಾನು ತೀವ್ರ ಗಲಭೆಗೊಳಗಾದ ಒಂದು ಪ್ರದೇಶವಾದ ಗೋರೇಶ್ವರಕ್ಕೆ ಬಂದೆ. ಈ ಹತ್ತು ದಿನಗಳ ಪ್ರಯಾಣದಲ್ಲಿ ನಾನು ಪ್ರಭಾವಿತ ಪ್ರದೇಶಗಳಲ್ಲಿ ಈ ಕೆಳಗಿನ ಸ್ಥಳಗಳಿಗೆ ಭೇಟಿ ನೀಡಿದೆ. ೧. ಗುವಾಹಟಿ, ೨. ಡೀಸ್ಪುರ್, ೩. ಖಾನಪಾರಾ, ೪. ಸೋನಾಪುರ, ೫. ಖೇತ್ರಿ, ೬. ಲಿಲ್ಲಿ, ೭. ಧರಮತುಲಾ, ೮. ಜಾಗಿ ರಸ್ತೆ, ೯. ನೌಗಾಂಗ್, ೧೦. ಪುರಾನೀ ಗೋದಾಮ್, ೧೧. ಸೋನ್ಯೆ ಕಲಿ, ೧೨. ಶ್ಯಾಮಾಂಬರಿ, ೧೩. ಮಿಸ್ಸಾ, ೧೪. ಕುಂಡಿತಾಲಾ, ೧೫. (ಪ್ರಭಾವಿತವಾಗಿಲ್ಲ), ೧೬. ಬಜಾರ್, ೧೭. ದಿಬ್ರುಗಢ, ೧೮, ಗೋಲಘಾಟ್, ೧೯. ಜೋರ್ಹಾಟ್, ೨೦. ಥಾನಾ, ೨೧. ಸಿಬ್ ಸಾಗರ್, ೨೨. ಮರಿಯಾನಿ, ೨೩. ಗೋರೇಶ್ವರ್, ಶಿಬಿರದಲ್ಲಿರುವ ನಿರ್ವಸಿತರಲ್ಲದೇ ನಾನು ಅನೇಕ ಭಾಷಾ ಸಮೂಹಗಳ ಜನರನ್ನೂ ಭೇಟಿಯಾದೆ. ಅಲ್ಲಿನ ನಮ್ಮ ಸಹೋದರ ಸಹೋದರಿಯರ ಭೀಭತ್ಸ ಹಾಗೂ ದುಃಖಕರ ಕಥೆಗಳನ್ನು ಮತ್ತೊಮ್ಮೆ ಇಲ್ಲಿ ಪುನರಾವರ್ತಿಸುವುದು ಕಷ್ಟವೂ ಹೌದು ಹಾಗೂ ಅದು ಇಲ್ಲಿ ಉಪಯುಕ್ತವೂ ಅಲ್ಲ. ನಾನು ನೋಡಿದ್ದೆಲ್ಲವೂ ನನ್ನದೇ ದೇಶವಾಸಿಗಳು ಇಷ್ಟೊಂದು ಕೀಳುಮಟ್ಟಕ್ಕೆ ಇಳಿಯಬಹುದೇ ಎನ್ನುವುದನ್ನು ಯೋಚಿಸಿ ನಾನು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡುತ್ತದೆ. ಆದರೆ ನಾನು ಸಹಜತೆಯನ್ನು ಮರಳಿ ತರುವಲ್ಲಿ ಸಹಾಯಕವಾಗುವಂತೆ ನಾನು ಗಮನಿಸಿದ ಕೆಲವು ಸಂಗತಿಗಳನ್ನು ಹಾಗೂ ಸಲಹೆಗಳನ್ನು ಹಂಚಿಕೊಳ್ಳುತ್ತೇನೆ.

**ಆಕಸ್ಮಿಕವೂ ಅಲ್ಲ ಅನಿರೀಕ್ಷಿತವೂ ಅಲ್ಲ**

ಈ ದೊಂಬಿಗಳನ್ನು ಭಾಷಾ ದೊಂಬಿಗಳೆಂದು ಹೇಳಲಾಗುತ್ತಿದ್ದರೂ ಅವು ರಾಜ್ಯ ಭಾಷೆಗೆ ಬಹಳ ಅಲ್ಪಮಟ್ಟದ ಸಂಬಂಧ ಹೊಂದಿವೆ. ಅಸ್ಸಾಮೀಯ ಭಾಷೆಯನ್ನು ಆ ಭಾಷಾ ಸಮೂಹಕ್ಕೆ ಸೂಕ್ತ ಸಾಂವಿಧಾನಿಕ ರಕ್ಷಣೆಗಳೊಡನೆ ರಾಜ್ಯ ಭಾಷೆಯೆಂದು ಘೋಷಿಸುವುದಕ್ಕೆ ಸಂಬಧಪಟ್ಟಂತೆ ಅಸ್ಸಾಂ ಕಣಿವೆಯಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಅಸ್ಸಾಮೀ ಹಾಗೂ ಅಸ್ಸಾಮೀಗಳಲ್ಲದ ಸಮೂಹಗಳೆರಡರಲ್ಲೂ ಕೆಲವು ತೀವ್ರವಾದಿ ಹಾಗೂ ಮೂಲಭೂತವಾದಿ ಅಂಶಗಳಿದ್ದರೂ ಅವುಗಳಿಗೆ ಯಾವುದೇ ಪ್ರಾತಿನಿಧ್ಯದ ಲಕ್ಷಣಗಳಿರಲಿಲ್ಲ. ಆದರೆ

ಅವುಗಳು ಮಾತ್ರವೇ ಧ್ವನಿ ಹೊಂದಿದ್ದು ಹಾಗೂ ಮುಂದಾಳತ್ವ ವಹಿಸಿಕೊಂಡಿದ್ದು ದುರದೃಷ್ಟಕರ. ಸಕಾರಣವಾದ, ಸಹಿಷ್ಣುಗಳಾದ, ರಾಷ್ಟ್ರೀಯವಾದಿ ವಿಚಾರಗಳು ದೃಢವಾಗಿ ಪ್ರತಿಪಾದನೆಗೊಂಡಿದ್ದರೆ ನಾಯಕತ್ವವು ಈ ಬೇಜವಾಬ್ದಾರಿ ಹಾಗೂ ಹೋಗಬಾರದ ಕೈಗಳಿಗೆ ಹೋಗುತ್ತಿರಲಿಲ್ಲ. ಅಸ್ಸಾಮೀಯರು ಸಾಮಾನ್ಯವಾಗಿ ಉಲ್ಲೇಖಿಸುವ ಆಳವಾದ ಕಾರಣಿಗರು ರಾಜ್ಯ ಭಾಷೆಯ ಜೊತೆ ಯಾವುದೇ ಸಂಬಂಧ ಹೊಂದಿಲ್ಲ.

ಅಸ್ಸಾಂ ಸರ್ಕಾರವು ಈ ಗಲಭೆಗಳು ಜನರ ಹಠಾತ್, ಅನಿರೀಕ್ಷಿತ ಹಾಗೂ ಸ್ವಪ್ರಚೋದಿತ ಉದ್ರೇಕಗಳೆಂದು ಬಿಂಬಿಸಲು ಯತ್ನಿಸುತ್ತಿದೆ. ಆದರೆ ನಾನು ಈ ದೃಷ್ಟಿಕೋನವನ್ನು ಒಪ್ಪುವುದಿಲ್ಲ. ಗಲಭೆಗಳು ಬಹುತೇಕ ಏಕಕಾಲದಲ್ಲಿ ಆಗಿದ್ದು, ಗಲಭೆಕೋರರ ಕಾರ್ಯತಂತ್ರಗಳು ಒಂದೇ ರೀತಿಯಾಗಿದ್ದು, ಹಾಗೂ ಎಲ್ಲೆಡೆ ಹರಡಿದ ವದಂತಿಗಳು ಒಂದೇ ರೀತಿಯಾಗಿದ್ದು ಇವೆಲ್ಲ ಈ ಘಟನೆಗಳ ಹಿಂದೆ ಒಂದು ಕುಟಿಲ ಮೆದುಳಿರುವುದನ್ನೇ ತೋರಿಸುತ್ತದೆ. ಅನೇಕ ಸ್ಥಳಗಳಲ್ಲಿ ಈ ಉದ್ದೇಶಕ್ಕಾಗಿ ಅಂತಿಮ ಎಚ್ಚರಿಕೆಯನ್ನೂ ನೀಡಲಾಯಿತು ಹಾಗೂ ಹಣವನ್ನೂ ಸಂಗ್ರಹಿಸಲಾಯಿತು.

ಇದರಲ್ಲಿ ಮುಸ್ಲಿಮರ ಪಾತ್ರ ತುಂಬ ಚಿಂತೆಯನ್ನುಂಟುಮಾಡುವಂಥದ್ದೂ ಹಾಗೂ ಗಣನೀಯವೂ ಆಗಿದೆ. ಕೇವಲ ಅಸ್ಸಾಮೀ ಮುಸ್ಲಿಮರಷ್ಟೇ ಅಲ್ಲದೇ ಬಂಗಾಳಿ ಹಾಗೂ ಯು.ಪಿ. ಮುಸ್ಲಿಮರೂ ಲೂಟಿ, ಬೆಂಕಿ ಹಚ್ಚುವಿಕೆ ಹಾಗೂ ಇತರ ಪಾಶವೀ ಕೃತ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿದರು. ಬಹುತೇಕವಾಗಿ ಮುಸ್ಲಿಮರಿರುವ ಗೋರೇಶ್ವರ ಹಾಗೂ ನೌಗಾಂಗ್ ಪ್ರದೇಶಗಳು ಎಲ್ಲಕ್ಕಿಂತ ಹೆಚ್ಚು ಪೀಡಿತವಾಗಿವೆ. ಹಿಂದೂ ಬಂಗಾಳಿಗಳ ಮನೆಗಳನ್ನು ಸುಟ್ಟುಹಾಕಲಾದರೂ ಮುಸ್ಲಿಂ ಬಂಗಾಳಿಗಳ ಮನೆಗಳನ್ನು ಕರಾರುವಾಕ್ಕಾದ ಕಾಳಜಿಯ ಜೊತೆಗೆ ಹಾಗೇ ಉಳಿಸಲಾಗಿದೆ. ಗಲಭೆಕೋರರಲ್ಲಿ ಶೇ. ೨೫ರಷ್ಟು ಹಿಂದೂಗಳಿರಲಿಲ್ಲ. ಇಂಥ ಸಂದರ್ಭದಲ್ಲಿ ಮೂರ್ತಿಭಂಜನವಾಯಿತು. ರಾಮಕೃಷ್ಣ ಮಿಶನ್ ಮೇಲೆ ಧಾಳಿಯಾಯಿತು ಹಾಗೂ ಮನೆಗಳ ಜೊತೆ ಹಸುಗಳನ್ನೂ ದಹಿಸಲಾಯಿತು. ಇದರ ಫಲಿತಾಂಶವಾಗಿ ಇದೆಲ್ಲವೂ 'ಬಂಗಾಳಿ ಹಿಂದು ಖೇದಾ' ಚಳುವಳಿಯಾಗಿ ಹೋಯಿತು.

**ಸಂಪೂರ್ಣ ವಿಫಲವಾದ ಸರ್ಕಾರ**

ಸರ್ಕಾರವು ತನ್ನ ಕಾರ್ಯನಿರ್ವಹಣೆಯಲ್ಲಿ ಸಂಪೂರ್ಣವಾಗಿ ವಿಫಲವಾಯಿತು. ಜುಲೈ ೬, ೭, ಹಾಗೂ ೮ರಂದು ಅಸ್ಸಾಂ ಕಣಿವೆಯ ಬಹುತೇಕ ಪ್ರದೇಶಗಳಲ್ಲಿ ಸರ್ಕಾರವೇ ಇರಲಿಲ್ಲವೆಂದರೂ ತಪ್ಪಾಗಲಾರದು. ಥಾನಾ ಸ್ಥಳಗಳು

ವಿಶೇಷವಾಗಿ ಪೀಡಿತವಾಗಿದ್ದವೆನ್ನುವುದು ಇಲ್ಲಿ ಮುಖ್ಯವಾಗುತ್ತವೆ. ಅಧಿಕಾರಿಗಳು ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಂಡ ಕೆಲವು ಸ್ಥಳಗಳನ್ನುಳಿದು ನಿಷ್ಕ್ರಿಯತೆ ಹಾಗೂ ಉದಾಸೀನತೆ ಎಲ್ಲ ಕಡೆಗೂ ಅದೆಷ್ಟು ಹೆಚ್ಚಿತ್ತೆಂದರೆ ಕೆಲವರು ಈ ಗಲಭೆಗಳಲ್ಲಿ ಸರ್ಕಾರವೂ ಕೈಜೋಡಿಸಿತ್ತೆಂದು ಅನುಮಾನಿಸುತ್ತಾರೆ. ಅಸ್ಸಾಂನಲ್ಲಿನ ರಾಜಕೀಯ ಪಕ್ಷಗಳ ಪಾತ್ರವೂ ಮೆಚ್ಚುವಂತದ್ದಾಗಿರಲಿಲ್ಲ. ಕೆಲವು ಪಕ್ಷಗಳು ಈ ಗಲಭೆಯನ್ನು ಉತ್ತೇಜಿಸಿದ್ದವೆಂದು ನಂಬಲೂ ಬಲವಾದ ಕಾರಣಗಳಿವೆ. ಕೆಲವು ಸ್ಥಳಗಳನ್ನು ಹೊರತುಪಡಿಸಿ ಎಲ್ಲಿಯೂ ಜನರಿಂದ ಸಂಘಟಿತ ಪ್ರತಿರೋಧವಿರಲಿಲ್ಲ. ಜನರು ಪ್ರತಿರೋಧಿಸಿದಲ್ಲೆಲ್ಲ ತೊಂದರೆಯನ್ನು ತಡೆಯಲಾಯಿತು ಅಥವಾ ಹಾನಿ ಕಡಿಮೆಯಾಯಿತು. ಕೆಲವೊಂದು ಕಡೆ ಅಸ್ಸಾಮೀ ಭಾಷಿಕರು ಗಲಭೆಕೋರರ ವಿರುದ್ಧ ನಿಂತು ಅವರ ಪ್ರದೇಶದ ಬಂಗಾಳೀ ನಿವಾಸಿಗಳನ್ನು ರಕ್ಷಿಸಿದ ಉದಾಹರಣೆಗಳೂ ಇವೆ. ಕೆಲವೇ ಕಿಡಿಗೇಡಿಗಳು ಒಟ್ಟಾಗಿ ಜನರನ್ನು ಉದ್ರೇಕಿಸುವಲ್ಲಿ ಸಫಲರಾಗಿದ್ದರೂ ಸಾಮೂಹಿಕ ಗಲಭೆಯ ಸಂತ್ರಸ್ತರು ಅಥವಾ ಅವರನ್ನು ನೋಡಿಕೊಳ್ಳುವವರಿಗೆ ಯಾವುದೇ ಸಂಘಟನೆಯಿಲ್ಲದ ಕಾರಣ ಒಂದು ನಿಲುವನ್ನು ತೆಗೆದುಕೊಳ್ಳಲಾಗಲಿಲ್ಲ.

ಈಗ ತೊಂದರೆ ಬಹಳಷ್ಟು ಕಡಿಮೆಯಾದಂತೆನಿಸುತ್ತದೆ. ಆದರೆ ಜನರ ಮುನಸ್ಸಿನಲ್ಲಿ ಇನ್ನೂ ಅನುಮಾನಗಳಿವೆ. ಕೆಲವು ಸ್ಥಳಗಳಲ್ಲಿ ಸಮಾಜವಿರೋಧೀ ಶಕ್ತಿಗಳು ತಮ್ಮ ಮನೆಗಳಿಗೆ ಮರುಳುತ್ತಿರುವವರನ್ನು ಇನ್ನೂ ಹೆದರಿಸುವುದು ನಡೆಯುತ್ತಿದೆ. ಈ ಜನರು ಪರಿಣಾಮ ನೆಟ್ಟಗಾಗದೆಂದು ಹೆದರಿಸುತ್ತ ಸುಂಕ ಸಂಗ್ರಹಿಸುತ್ತಿರುವ ವರದಿಗಳೂ ಇವೆ. ಸರ್ಕಾರವು ಶಿಬಿರಗಳನ್ನು ಮುಚ್ಚಲು ಉತ್ಸುಕವಾಗಿದ್ದರಿಂದ ನಿರಾಶ್ರಿತರಿಗೆ ಮರಳಲು ಒತ್ತಾಯಿಸಲಾಗುತ್ತಿದೆ. ಆದರೆ ಅಸ್ಸಾಂನಲ್ಲಿ ಅವರ ಜೀವನವನ್ನು ಮರುಸ್ಥಾಪಿಸಲು ಗಲಭೆಗೆ ಮುಂಚೆ ಇದ್ದ ಪರಿಸ್ಥಿತಿಯನ್ನು ಸ್ಥಾಪಿಸುವ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿಲ್ಲ.

**ಪರಿಹಾರ ಹಾಗೂ ವಿಚಾರಣೆ**

ಪೀಡಿತರ ಪುನರ್ವಸತಿಗಾಗಿ ಮುಂಚಿತವಾಗಿ ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ. ಅವರಲ್ಲಿ ಬಹಳಷ್ಟು ಜನರು ರೈತರಾಗಿದ್ದರಿಂದ ಯಾವುದೇ ವಿಳಂಬವೂ ಅವರಿಗೆ ಕಟಾವಿನಲ್ಲಿ ಇನ್ನಷ್ಟು ನಷ್ಟವುಂಟುಮಾಡುತ್ತದೆ. ಭತ್ತದ ಕಸಿ ಈಗಾಗಲೇ ನಷ್ಟವನ್ನನುಭವಿಸಿದೆ. ನಂತರ ಇಲ್ಲಿ ಬರಗಾಲ ಪರಿಸ್ಥಿತಿ ಬರುತ್ತದೆ. ಅವರ ಮನೆಗಳನ್ನು ಮತ್ತೆ ನಿರ್ಮಿಸುವುದು ಅಗತ್ಯವಾಗಿದೆ. ಛಾವಣಿ ಹುಲ್ಲಿನ ಕೊರತೆಯಿರುವುದರಿಂದ ಅವರಿಗೆ ತವರ ಹಾಗೂ ಮಡಿಕೆ ಕಬ್ಬಿಣದ ಹಾಳೆಗಳನ್ನು ನೀಡಬೇಕು. ಅವರು ತಮ್ಮ ಜಾನುವಾರುಗಳು ಹಾಗೂ ಕೃಷಿ ಉತ್ಪನ್ನಗಳನ್ನೂ

ಕಳೆದುಕೊಂಡಿದ್ದಾರೆ. ಈ ನಿಟ್ಟಿನಲ್ಲೂ ಏರ್ಪಾಡುಗಳನ್ನು ಮಾಡಬೇಕು. ಸರ್ಕಾರವು ಪೀಡಿತರಿಗೆ ಪರಿಹಾರ ನೀಡುವುದನ್ನೂ ಪ್ರಾರಂಭಿಸಬೇಕು. ಇದು ವಿಶ್ವಾಸವನ್ನು ಪುನಃ ಸ್ಥಾಪಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ.

ಸಂಪೂರ್ಣ ಆಡಳಿತ ಬಿಗಿಯಾಬೇಕಾದ ಅವಶ್ಯಕತೆಯಿದೆ. ಪ್ರಸ್ತುತ ಸಚಿವಾಲಯಕ್ಕೆ ಅದನ್ನು ಮಾಡಲಾಗದು. ಇದು ಮುಂದುವರಿದಷ್ಟು ಕಾಲವೂ ಜನರಲ್ಲಿ ಭದ್ರತೆಯ ಭಾವನೆ ಮರಳಲಾರದು. ಕೇಂದ್ರವು ಪ್ರಭಾವಶಾಲಿಯಾಗಿ ಮಧ್ಯ ಪ್ರವೇಶಿಸುವುದು ಈಗ ಅಗತ್ಯವಾಗಿದೆ. ಆದರೆ ಅಸ್ಸಾಮೀ ಭಾಷಿಕರಲ್ಲಿ ಭಾಷೆಯ ಸಮಸ್ಯೆಯನ್ನು ನಿರ್ಲಕ್ಷಿಸಲು ಹಾಗೂ ಮುಂದಕ್ಕೆ ಹಾಕಲು ಮಾತ್ರ ಕೇಂದ್ರದ ಹಸ್ತಕ್ಷೇಪವನ್ನು ಬಯಸಲಾಗುತ್ತಿದೆಯೆಂಬ ಅನುಮಾನವಿದೆ. ಈ ನಿಟ್ಟಿನಲ್ಲಿ ಒಂದು ಖಚಿತವಾದ ಘೋಷಣೆಯನ್ನು ನೀಡುವ ಮೂಲಕ ಕೇಂದ್ರವು ರಾಜ್ಯ ಭಾಷೆಯ ಬಗೆಗಿನ ಅವರ ಅನುಮಾನಗಳು ಹಾಗೂ ಭಾಷಾ ಅಲ್ಪಸಂಖ್ಯಾತರ ಅನುಮಾನಗಳನ್ನೂ ಹೊಡೆದೋಡಿಸಬೇಕು.

ಯಾವುದೇ ವಿಳಂಬವಿಲ್ಲದೇ ಕಿಡಿಗೇಡಿಗಳಿಗೆ ಶಿಕ್ಷೆ ನೀಡುವುದೂ ಮುಖ್ಯವಾಗಿದೆ. ಈ ಗಲಭೆಗಳಿಗೆ ಕಾರಣರಾದ ಎಲ್ಲರನ್ನೂ ಬಂಧಿಸಿ ಪ್ರತಿಬಂಧಕ ಶಿಕ್ಷೆಗಳನ್ನು ನೀಡುವುದು ಅವಶ್ಯಕವಾಗಿದೆ. ಗಲಭೆಪೀಡಿತ ಪ್ರದೇಶಗಳಲ್ಲಿ ತಪ್ಪಿತಸ್ಥರಿಗೆ ಸಾಮೂಹಿಕ ದಂಡ ವಿಧಿಸುವುದೂ ಅಗತ್ಯವಾಗಬಹುದು. ಆದರೆ ಈಗಿನ ಸಚಿವಾಲಯವು ಇದನ್ನು ಪ್ರಭಾವಶಾಲಿಯಾಗಿ ಜಾರಿಗೊಳಿಸಬಲ್ಲದೇ ಎನ್ನುವುದು ಅನುಮಾನಾಸ್ಪದವಾಗಿದೆ.

**ಅಸ್ಸಾಂ ಬಗ್ಗೆ ಒಂದು ಪ್ರತ್ಯಕ್ಷದರ್ಶಿ ವರದಿ**

ಕೆಲವರನ್ನು ಬಂಧಿಸಲಾಗುತ್ತಿದೆ ಹಾಗೂ ಮುಗ್ಧ ಜನರನ್ನು ಮನಬಂದಂತೆ ಬಂಧಿಸುತ್ತಿರುವ ದೂರುಗಳು ಬರುತ್ತಿವೆ. ಸಚಿವಾಲಯವು ತೋರಿಕೆಗೆ ಕೆಲವು ಮುಗ್ಧರನ್ನು ಶಿಕ್ಷಿಸಿ ನಿಜವಾದ ಅಪರಾಧಿಗಳಿಗೆ ಶಿಕ್ಷೆಯಿಲ್ಲದಂತೆ ಮಾಡುವ ಸಾಧ್ಯತೆಯಿದೆ. ನ್ಯಾಯ ಬೇಕಾದಲ್ಲಿ ಸರ್ಕಾರದಲ್ಲಿ ಬದಲಾವಣೆಯ ಅವಶ್ಯಕತೆಯಿದೆ.

**ಜನಸಂಘ ಹಾಗೂ ಅಸ್ಸಾಂ ಸಮಸ್ಯೆ**

ಈ ಗಲಭೆಗಳ ಹಿಂದಿರುವ ಕುಟಿಲ ಕಾರಸ್ಥಾನಿಗಳನ್ನು ಪತ್ತೆಹಚ್ಚಲು ಒಂದು ವಿಚಾರಣೆಯನ್ನು ನಡೆಸಬೇಕು. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿನ ಒಂದು ವಿಚಾರಣಾ ಸಮಿತಿ ಜನರಲ್ಲಿ ವಿಶ್ವಾಸ ಮರಳಿಸಲಷ್ಟೇ ಅಲ್ಲದೇ ಒಂದು ರಾಷ್ಟ್ರೀಯ ಪಕ್ಷದ ಮೇಲೆ ಪ್ರಧಾನ ಮಂತ್ರಿಗಳು ಆಪಾದನೆ ಮಾಡಿದ್ದರಿಂದ, ಅಲ್ಲದೇ ಜನರಲ್ಲಿ ಪ್ರದೇಶದ ಹೊರಗಿನ ನಿಷ್ಠೆಗಳಿರುವ ಕೆಲವರು ಈ ಗಲಭೆಗಳನ್ನು ಸೃಷ್ಟಿಸಿದ್ದಾರೆನ್ನುವ ಬಲವಾದ ಅನುಮಾನಗಳಿರುವುದರಿಂದಲೂ

ಆಗಬೇಕು. ಯಾವುದೇ ಕಾರಣಕ್ಕೂ ಒಂದು ವಿಚಾರಣೆಯನ್ನು ನಿಲ್ಲಿಸಿದಲ್ಲಿ ಅದು ಸಂಪೂರ್ಣ ರಾಷ್ಟ್ರದ ಭದ್ರತೆ ಹಾಗೂ ಸ್ವಾತಂತ್ರ್ಯವನ್ನು ಅಪಾಯಕ್ಕೆ ಸಿಲುಕಿಸುತ್ತದೆ.

ಭಾರತೀಯ ಜನಸಂಘವು ಈ ಸಮಸ್ಯೆಯನ್ನು ಕೇವಲ ಬಂಗಾಳಿಗಳ ವಿರುದ್ಧ ಅಸ್ಸಾಮೀಯರ ಸಮಸ್ಯೆಯನ್ನಾಗಿ ನೋಡುವುದಿಲ್ಲ. ಭಾರತ ಒಂದು ದೇಶವಾಗಿರುವುದರಿಂದ ಯಾವುದೇ ಭಾಗದಲ್ಲೂ ನಮ್ಮ ಜನರ ಸಂಕಷ್ಟಗಳು ರಾಷ್ಟ್ರೀಯ ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. ಭಾರತೀಯ ಪೌರತ್ವಕ್ಕೆ ಯಾವುದೇ ಅರ್ಥವಿದ್ದಲ್ಲಿ ಎಲ್ಲ ಪ್ರಜೆಗಳೂ ದೇಶದ ಯಾವುದೇ ಭಾಗದಲ್ಲೂ ಗೌರವಯುತವಾಗಿ ಹಾಗೂ ಸುರಕ್ಷಿತವಾಗಿ ಬದುಕುವಂಥ ಪರಿಸ್ಥಿತಿಗಳನ್ನು ಸೃಷ್ಟಿಸುವುದು ಅಗತ್ಯವಾಗಿರುತ್ತದೆ. ಅಸ್ಸಾಮೀ ಭಾಷಿಕರಲ್ಲಿ ಬಹುತೇಕರಿಗೆ ಭಾರತದ ಐಕ್ಯತೆಯಲ್ಲಿ ಹಾಗೂ ನಮ್ಮ ಸಮಾನ ರಾಷ್ಟ್ರವಾದದಲ್ಲಿ ಆಳವಾದ ವಿಶ್ವಾಸವಿದೆಯೆನ್ನುವ ನಂಬಿಕೆ ನನಗಿದೆ. ತನ್ನ ಮಾಡದಿರುವ ಕಾರ್ಯಗಳಿಂದ ಎಲ್ಲ ಜನರಿಗೂ ಕೆಟ್ಟ ಹೆಸರು ತಂದಿರುವ ಸರ್ಕಾರವನ್ನು ತ್ಯಜಿಸುವುದು ಅವರ ಕರ್ತವ್ಯವಾಗಿದೆ. ಅವರು ಸುಳ್ಳು ಪ್ರತಿಷ್ಠೆಯನ್ನು ಅವಲಂಬಿಸಬಾರದು ಹಾಗೂ ಸಮಾಜ ವಿರೋಧೀ ಶಕ್ತಿಗಳು ಹಾಗೂ ಒಂದು ನಿರ್ಲಕ್ಷ್ಯ ಸರ್ಕಾರವನ್ನು ಬೆಂಬಲಿಸಬಾರದು. ಅವರು ಸಂತ್ರಸ್ತರಾಗಿರುವ ತಮ್ಮ ನೆರೆಹೊರೆಯವರ ವಿಶ್ವಾಸವನ್ನು ಮರಳಿ ಪಡೆಯಲು ಮುಂದೆ ಬರಬೇಕು. ಭಾರತದ ಪ್ರಜೆಗಳು (ಅಸ್ಸಾಂ ಸೇರಿದಂತೆ) ರೋಗಗ್ರಸ್ತ ಮನಸ್ಸುಗಳ ಈ ರೀತಿಯ ಯಾವುದೇ ಪ್ರದರ್ಶನವನ್ನೂ ಸಹಿಸಿಕೊಳ್ಳಲಾಗುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸುವ ಅಗತ್ಯವೂ ಇದೆ ಹಾಗೂ ಭಾರತೀಯರನ್ನು ಪ್ರತಿನಿಧಿಸುವ ಕೇಂದ್ರ ಸರ್ಕಾರವು ಇಲ್ಲಿ ತನ್ನ ಕರ್ತವ್ಯವನ್ನು ಸಮರ್ಥವಾಗಿ ನಿಭಾಯಿಸಬೇಕು.

* * * * *

# ನಮ್ಮ ಆರ್ಥಿಕ ರಚನೆ

ನಮ್ಮ ಅರ್ಥವ್ಯವಸ್ಥೆಯ ಸಮಗ್ರ ಚಿಂತನೆಯನ್ನು ನಾವು ಮಾಡಬೇಕಿದೆ. ಅರ್ಥವ್ಯವಸ್ಥೆಯು ಹೇಗಿರಬೇಕು? ನಮ್ಮ ಮಾನವತ್ವವನ್ನು ವಿಕಸಿತಗೊಳಿಸುವಂತಹ, ನಮ್ಮ ಮಾನವೀಯತೆಯನ್ನು ಸಮಾಪ್ತಿಗೊಳಿಸದಿರುವಂತಹ, ಅದರ ಮೇಲೆ ಪ್ರತಿಕೂಲ ಪ್ರಭಾವ ಬೀರದಿರುವಂತಹ ಮತ್ತು ತನ್ಮೂಲಕ ಮಾನವತ್ವದಿಂದ ಮೇಲೇರಿ ದೈವತ್ವವನ್ನು ಪ್ರಾಪ್ತಗೊಳಿಸುವಂತಹ ವ್ಯವಸ್ಥೆಯು ನಮಗೆ ಬೇಕಿದೆ. ಏಕೆಂದರೆ, ನಮ್ಮಲ್ಲಿ ಮಾನವ ಜೀವನದ ಪೂರ್ಣ ವಿಕಾಸವು ಅದರ ದೈವತ್ವದ ರೂಪದ ಆವಿರ್ಭಾವವೆಂದೇ ತಿಳಿಯಲಾಗಿದೆ. ಈ ಉದ್ದೇಶದ ಸಿದ್ಧಿಗಾಗಿ ಅರ್ಥವ್ಯವಸ್ಥೆಯ ಯಾವ ಎಲ್ಲೆಗಳಿರಬೇಕು ಎಂಬುದರ ವಿಚಾರ ಮಾಡೋಣ.

**ಅರ್ಥವ್ಯವಸ್ಥೆಯ ಎಲ್ಲೆಗಳು :**

ಜನರ ಪಾಲನೆ–ಪೋಷಣೆಗಾಗಿ, ಜೀವನದ ವಿಕಾಸಕ್ಕಾಗಿ ಮತ್ತು ರಾಷ್ಟ್ರದ ಸುದೃಢ ವಿಚಾರಗಳು ಹಾಗೂ ವಿಕಾಸಕ್ಕಾಗಿ ಯಾವ ಮೌಲಿಕ ಸಾಧನೆಗಳ ಆವಶ್ಯಕತೆ ಇದೆಯೋ, ಅವುಗಳ ಉತ್ಪಾದನೆಯು ಅರ್ಥವ್ಯವಸ್ಥೆಯ ಗುರಿಯಾಗಿರಬೇಕು. ಕನಿಷ್ಟತಮ ಎಲ್ಲೆಯ ನಂತರ ಇನ್ನೂ ಹೆಚ್ಚು ಸಮೃದ್ಧಿ ಮತ್ತು ಸುಖಕ್ಕಾಗಿ ಅರ್ಥೋತ್ಪಾದನೆ ಮಾಡಬೇಕೋ ಅಥವಾ ಬೇಡವೋ ಎಂಬ ಸ್ವಾಭಾವಿಕ ಪ್ರಶ್ನೆ ಉದ್ಭವಿಸುತ್ತದೆ. ಪಶ್ಚಿಮದ ಅರ್ಥಶಾಸ್ತ್ರವು ಇಚ್ಛೆಗಳನ್ನು ನಿರಂತರವಾಗಿ ಹೆಚ್ಚಿಸುತ್ತಾ ಹೋಗುವುದು ಮತ್ತು ಆವಶ್ಯಕತೆಗಳನ್ನು ನಿರಂತರವಾಗಿ ಪೂರ್ತಿಗೊಳಿಸುವುದನ್ನೇ ಬಯಕೆ ಅಂದುಕೊಂಡಿದೆ. ಈ ವಿಷಯದಲ್ಲಿ ಅದರ ಯಾವುದೇ ಗರಿಷ್ಠತಮ ಎಲ್ಲೆ ಇಲ್ಲ. ಸಾಮಾನ್ಯವಾಗಿ ಮೊದಲು ಇಚ್ಛೆ ಉಂಟಾಗುತ್ತದೆ. ನಂತರ ಅದನ್ನು ಪೂರ್ತಿಗೊಳಿಸಲು ಸಾಧನಗಳನ್ನು ಸಂಗ್ರಹಿಸಲಾಗುತ್ತದೆ ಆದರೆ ಈಗಂತು ಪರಿಸ್ಥಿತಿ ಹೇಗಿದೆ ಎಂದರೆ, ಯಾವುದೇ ವಸ್ತುವಿನ ಉತ್ಪತ್ತಿಯಾದರೆ, ಅದರ ಉಪಭೋಗವಾಗುವ ಸಲುವಾಗಿ ಜನರಲ್ಲಿ ಇಚ್ಛೆಯನ್ನು ಮೂಡಿಸಲಾಗುತ್ತದೆ. ಮಾರುಕಟ್ಟೆಗೆ ಸರಕನ್ನು ಉತ್ಪತ್ತಿ ಮಾಡುವ ಜಾಗದಲ್ಲಿ ಉತ್ಪತ್ತಿ ಮಾಡಿದ ಸರಕಿಗೆ ಮಾರುಕಟ್ಟೆಯನ್ನು ಹುಡುಕುವುದು, ಸಿಗದಿದ್ದಲ್ಲಿ ಹೊಸ ಮಾರುಕಟ್ಟೆಯನ್ನು ನಿರ್ಮಾಣ ಮಾಡುವುದು ಇಂದಿನ ಅರ್ಥನೀತಿಯ ಪ್ರಮುಖ ಅಂಗವಾಗಿದೆ. ಆರಂಭದಲ್ಲಿ

---

**ಮೂಲ ಆಕರ : ಸಮಗ್ರ ದೃಷ್ಟಿ [ಭಾರತೀಯ ಅರ್ಥರಚನ ವಿಶೇಷಾಂಕ] ೧೯೬೫**

ಉತ್ಪಾದನೆಯು ಉಪಭೋಗವನ್ನು ಅನುಸರಿಸುತ್ತಿತ್ತು, ಈಗ ಉಪಭೋಗವು ಉತ್ಪಾದನೆಯ ಅನುಚರವಾಗಿದೆ.

ನಾವು ಚಹಾದ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಚಹಾದ ಬೇಡಿಕೆ ಇತ್ತೆಂದು ಚಹಾ ಬೆಳೆಯಲಾಗಲಿಲ್ಲ. ಆದರೆ ಚಹಾವನ್ನು ಬೆಳೆಯಲಾಯಿತು ಆದ್ದರಿಂದಲೇ ನಮಗೆ ಚಹಾಪಾನ ಮಾಡಲು ಕಲಿಸಲಾಯಿತು. ಈಗ ನಾವು ಚಹಾಪಾನ ಮಾಡುತ್ತೇವೆ. ಅದು ನಮ್ಮ ಜೀವನದ ಒಂದು ಅಂಗವಾಗಿಬಿಟ್ಟಿದೆ. ಇದೇ ರೀತಿ ಇಂದು ನಾವು ವನಸ್ಪತಿ ತುಪ್ಪವನ್ನು ಬಳಸುತ್ತಿದ್ದೇವೆ. ಎಂದಾದರೂ ನಾವು ಇದರ ಬೇಡಿಕೆ ಇಟ್ಟಿದ್ದೆವೆ? ವಾಸ್ತವವಾಗಿ ವನಸ್ಪತಿಯ ಉತ್ಪನ್ನವನ್ನು ಮಾಡಲಾಯಿತು ನಂತರ ಅದರ ಬಳಕೆಯನ್ನು ಕಲಿಸಲಾಯಿತು. ಯಾವುದೇ ವಸ್ತುವನ್ನು ಉತ್ಪಾದಿಸಿ, ಒಂದು ವೇಳೆ ಬಳಕೆ ಮಾಡದಿದ್ದಾಗ, ಅಗ್ಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ೧೯೩೦–೩೨ರ ಅಗ್ಗದ ಸಮಯವು ನಮಗೆ ನೆನಪಿರಬಹುದು. ಅಂದು ಸರಕಿದ್ದರೂ ಮಾರಾಟವಿರಲಿಲ್ಲ, ಆದ್ದರಿಂದ ಧಡಧಡನೆ ಕಾರ್ಖಾನೆಗಳು ಬಂದಾಗುತ್ತಿದ್ದವು, ದೀವಾಳಿ ಏಳುತ್ತಿದ್ದವು ಮತ್ತು ನಿರುದ್ಯೋಗ ಹೆಚ್ಚಾಗುತ್ತಿತ್ತು. ಆದ್ದರಿಂದ ಉತ್ಪಾದಿಸಿದ ಸರಕಿನ ಮಾರಾಟವೇ ಇಂದಿನ ಮಹತ್ವದ ವಿಷಯವಾಗಿದೆ.

ಆಂಗ್ಲ ಸಾಪ್ತಾಹಿಕ 'ಆರ್ಗನೈಜ಼ರ್'ನ ಸಂಪಾದಕರು ಕೆಲವು ವರ್ಷಗಳ ಹಿಂದೆ ಅಮೇರಿಕಕ್ಕೆ ಹೋಗಿದ್ದರು. ಅಲ್ಲಿಂದ ಹಿಂತಿರುಗಿದ ನಂತರ ಅವರು ಒಂದು ರೋಚಕ ಘಟನೆಯನ್ನು ತಿಳಿಸಿದರು. ಅಲ್ಲಿ ಆಲೂಗಡ್ಡೆಯ ಸಿಪ್ಪೆ ತೆಗೆಯುವ ಚಾಕು ತಯಾರಿಕೆಯ ಒಂದು ಕಾರ್ಖಾನೆ ಇದೆ. ಆ ಕಾರ್ಖಾನೆಯು ಜನರ ಆವಶ್ಯಕತೆಗಿಂತ ಹೆಚ್ಚು ಉತ್ಪಾದನೆಯನ್ನು ಮಾಡತೊಡಗಿತು. ಹೀಗಾಗಿ ಜನರು ಹೆಚ್ಚು ಸಂಖ್ಯೆಯಲ್ಲಿ ಚಾಕು ಕೊಳ್ಳುವಂತಹ ಯಾವುದಾದರೂ ಉಪಾಯವನ್ನು ಹುಡುಕಬೇಕೆಂಬ ಪ್ರಶ್ನೆ ಎದುರಾಯಿತು. ಕಾರ್ಖಾನೆಯ ಮಾರಾಟಗಾರರ ಒಂದು ಸಭೆಯನ್ನು ಕರೆಯಲಾಯಿತು. ಒಂದು ವೇಳೆ ಆಲೂಗೆಡ್ಡೆಯ ಸಿಪ್ಪೆಯ ಬಣ್ಣದ ಚಾಕುವಿನ ಹಿಡಿಕೆಯನ್ನು ತಯಾರಿಸಿದರೆ, ಆಲೂಗಡ್ಡೆಯ ಸಿಪ್ಪೆ ತೆಗೆದ ನಂತರ, ಸಿಪ್ಪೆಯ ಜೊತೆ ಚಾಕುವನ್ನೂ ಕಸದ ಬುಟ್ಟಿಗೆ ಎಸೆಯುವ ಸಂಭವ ಹೆಚ್ಚಾಗುವುದು, ಹೀಗಾಗಿ ಸರಕಿನ ಮಾರಾಟ ಹೆಚ್ಚಾಗುವುದು ಎಂಬ ಸಲಹೆ ನೀಡಲಾಯಿತು. ಚಾಕುವಿನ ಆಕರ್ಷಣೆಯನ್ನು ಹೆಚ್ಚಿಸಲು ಸುಂದರ ಪ್ಯಾಕಿಂಗ್ ವ್ಯವಸ್ಥೆಯನ್ನೂ ಮಾಡಲಾಯಿತು. ಈಗ ಆರ್ಥಿಕ ವ್ಯವಸ್ಥೆಯು ಉಪಭೋಗ ಪ್ರಧಾನವಾಗದೇ ವಿನಾಶೋನ್ಮುಖವಾಗಿದೆ. ಹಳೆಯದನ್ನು ಎಸೆ, ಹೊಸದನ್ನು ಖರೀದಿಸು. ಬಳಕೆದಾರನಲ್ಲಿ ಹೊಸತನ್ನು ಖರೀದಿಸುವ ಇಚ್ಛೆಯನ್ನು ಹುಟ್ಟಿಸುವುದು, ಬೇಡಿಕೆಯನ್ನು

ಪೂರ್ಣಗೊಳಿಸುವುದಲ್ಲ, ಬೇಡಿಕೆಯನ್ನು ಸೃಷ್ಟಿಸುವುದು; ಇದೇ ಇಂದಿನ ಆರ್ಥಿಕ ವ್ಯವಸ್ಥೆಯ ಗುರಿಯಾಗಿದೆ.

**ಪ್ರಕೃತಿಯ ಎಲ್ಲೆಯನ್ನು ಮರೆಯಬಾರದು**

ಆದರೆ, ಉತ್ಪಾದನೆಯ ಸಂಬಂಧವು ಪ್ರಾಕೃತಿಕ ಸಾಧನಗಳ ಜೊತೆಗೂ ಇದೆ. ಒಂದು ವೇಳೆ ಉತ್ಪಾದನೆಯನ್ನು ಯದ್ವಾತದ್ವಾ ಹೆಚ್ಚಿಸುತ್ತಾ ಹೋದಲ್ಲಿ ಎಲ್ಲಿಯವರೆಗೆ ಈ ಪ್ರಾಕೃತಿಕ ಸಾಧನಗಳು ಕೈ ಜೋಡಿಸುತ್ತದೆ? ಒಂದು ವೇಳೆ ಒಂದು ಪ್ರಕಾರದ ಸಾಧನಗಳು ಸಮಾಪ್ತಿಯಾದರೆ, ಇನ್ನೊಂದು ಪ್ರಕಾರದ ವಸ್ತುಗಳ ಅನ್ವೇಷಣೆಯಾಗಬಹುದು, ಹೊಸ ಪರ್ಯಾಯಗಳನ್ನು (ಸಬ್‌ಸ್ಟಿಟ್ಯೂಟ್) ಹುಡುಕಬಹುದು ಎಂದು ಕೆಲವರು ಸಮಜಾಯಿಷಿ ನೀಡುತ್ತಾರೆ. ಅವರ ಇಂತಹ ತರ್ಕದಲ್ಲಿನ ಸತ್ವವನ್ನು ಒಪ್ಪಿಕೊಂಡ ನಂತರವೂ, ಪ್ರಕೃತಿಯ ಸಂಪತ್ತು ಅಪಾರವಾಗಿದ್ದರೂ, ಅದರ ಒಂದು ಎಲ್ಲೆಯೂ ಇದೆ ಎಂದು ಹೇಳಬೇಕಾಗುತ್ತದೆ. ಒಂದು ವೇಳೆ ಬಹಳ ವೇಗವಾಗಿ ಹಾಗೂ ಅನವಶ್ಯಕವಾಗಿ ಅದನ್ನು ವ್ಯಯಿಸುತ್ತಾ ಹೋದಲ್ಲಿ ಒಂದು ದಿನ ನಾವು ಪಶ್ಚಾತ್ತಾಪಪಡಬೇಕಾಗುತ್ತದೆ.

**ಪ್ರಕೃತಿಯ ಜೊತೆ ಉಚ್ಛೃಂಖಲತೆ**

ಪ್ರಾಕೃತಿಕ ಸಂಪತ್ತಿನ ಎಲ್ಲೆಯ ಚಿಂತೆ ಮಾಡದಿದ್ದರೂ ಸಹ ಪ್ರಕೃತಿಯಲ್ಲಿನ ವಿಭಿನ್ನ ವಸ್ತುಗಳೊಂದಿಗೆ ಒಂದು ಪರಸ್ಪರಾವಲಂಬಿ ಸಂಬಂಧವಿದೆ ಎಂಬುದನ್ನಾದರೂ ಕಡೆಯ ಪಕ್ಷ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಒಂದು ಮತ್ತೊಂದರ ಸಹಾಯದಿಂದ ನಿಂತಿರುವ ಮೂರು ಮರದ ತುಂಡುಗಳಲ್ಲಿ ಒಂದು ವೇಳೆ ಒಂದರ ಸ್ಥಿತಿಯಲ್ಲಿ ನಾವು ಬದಲಾವಣೆ ಮಾಡಿದರೆ, ಉಳಿದ ಎರಡು ತುಂಡುಗಳು ತಂತಾವೇ ಬಿದ್ದುಹೋಗುತ್ತವೆ. ಇಂದಿನ ಆರ್ಥಿಕ ವ್ಯವಸ್ಥೆ ಮತ್ತು ಉತ್ಪಾದನೆಯ ಪದ್ಧತಿಗಳು ಈ ಸಾಮಂಜಸ್ಯವನ್ನು ಬಹಳ ವೇಗವಾಗಿ ಕೆಡಿಸುತ್ತಾ ಹೋಗುತ್ತಿವೆ. ಇದರ ಪರಿಣಾಮವಾಗಿ ಒಂದು ಕಡೆ ಎಲ್ಲಿ ನಾವು ಹೊಸ-ಹೊಸ ಇಚ್ಛೆಗಳ ಪೂರ್ತಿಗಾಗಿ ಹೊಸ-ಹೊಸ ಸಾಧನಗಳನ್ನು ಹುಡುಕುತ್ತಿದ್ದೇವೆಯೋ, ಅಲ್ಲಿ ಇನ್ನೊಂದು ಕಡೆ ನಮ್ಮ ಸಂಪೂರ್ಣ ಸಭ್ಯತೆ ಮತ್ತು ಮಾನವತೆಯನ್ನು ಸಮಾಪ್ತಿಗೊಳಿಸುವ ಹೊಸ ಹೊಸ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಾ ಹೋಗುತ್ತವೆ.

ಪ್ರಕೃತಿಯು ತನ್ನ ಕೊರತೆಯನ್ನು ಸ್ವತಃ ಪುನರ್ ಪೂರ್ಣಗೊಳಿಸಿಕೊಳ್ಳುವ ರೀತಿಯಲ್ಲಿ ನಾವು ಪ್ರಕೃತಿಯಿಂದ ಪಡೆದುಕೊಳ್ಳಬೇಕು. ಮರದ ಮೇಲಿನ ಹಣ್ಣನ್ನು ಕಿತ್ತರೆ, ಅದಕ್ಕೆ ಹಾನಿಯಾಗುವುದಿಲ್ಲ, ಲಾಭವಾಗುತ್ತದೆ. ಆದರೆ ಭೂಮಿಯಿಂದ ಅಧಿಕ ಫಸಲು ತೆಗೆಯುವ ಲೋಭದಿಂದ ನಾವು ಎಂತಹ ರಾಸಾಯನಿಕ ಗೊಬ್ಬರಗಳ ಪ್ರಯೋಗ ಮಾಡುತ್ತಿದ್ದೇವೆ ಎಂದರೆ ಇವುಗಳಿಂದ ಕೆಲವು ದಿನಗಳ ನಂತರ

ಅದರ ಉತ್ಪಾದನಾ ಶಕ್ತಿಯು ಸಮಾಪ್ತಿಯಾಗುತ್ತದೆ. ಇಂದು ಅಮೇರಿಕದಲ್ಲಿ ಲಕ್ಷಾಂತರ ಎಕರೆ ಭೂಮಿ ಈ ರೀತಿಯ ಬೇಸಾಯದ ಕಾರಣದಿಂದ ಬರಡಾಗಿ ಹೋಗಿದೆ. ಎಲ್ಲಿಯವರೆಗೆ ಈ ವಿನಾಶಲೀಲೆ ನಡೆಯುತ್ತಿರುತ್ತದೆ?

ಕಾರ್ಖಾನೆಯ ಮಾಲೀಕ ಮೆಷೀನ್ ಮುಂತಾದುವುಗಳಿಗೆ ಕ್ಷಯ–ನಿಧಿಯ ವ್ಯವಸ್ಥೆ ಮಾಡುತ್ತಾನೆ. ಆದರೆ, ಪ್ರಕೃತಿಯ ಈ ಕಾರ್ಖಾನೆಗೆ ನಾವು ಯಾವುದೇ ರೀತಿಯ ಕ್ಷಯ–ನಿಧಿಯ ಚಿಂತನೆ ಮಾಡುತ್ತಿಲ್ಲ. ಇದು ಹೇಗೆ ಸಾಧ್ಯ? ಈ ದೃಷ್ಟಿಯಿಂದ ವಿಚಾರ ಮಾಡಿದಾಗ ನಮ್ಮ ಆರ್ಥಿಕ ವ್ಯವಸ್ಥೆಯ ಗುರಿಯು ಎಲ್ಲೆ ಇಲ್ಲದ ಬಳಕೆಯಲ್ಲ, ಅತ್ಯಂತ ಸಂಯಮಿತ ಬಳಕೆಯಾಗಬೇಕು ಎಂದು ಹೇಳಬಹುದು. ಸದುದ್ದೇಶ, ಸುಖೀ, ವಿಕಾಸಮಯ ಜೀವನಕ್ಕಾಗಿ ಯಾವ ಭೌತಿಕ ಸಾಧನಗಳ ಆವಶ್ಯಕತೆ ಇದೆಯೋ, ಅವು ಅಗತ್ಯವಾಗಿ ಪ್ರಾಪ್ತಿಯಾಗಬೇಕು. ಭಗವಂತನ ಸೃಷ್ಟಿಯ ಅಧ್ಯಯನವನ್ನು ಮಾಡಿದಾಗ, ಅವನು ಅಷ್ಟು ವ್ಯವಸ್ಥೆಯನ್ನು ಮಾಡಿರುವುದು ಗೊತ್ತಾಗುತ್ತದೆ. ಆದರೆ, ಭಗವಂತನು ಮನುಷ್ಯನನ್ನು ಬಳಕೆಯ ಆಸಕ್ತಿ ಪ್ರಾಣಿಯನ್ನಾಗಿ ಸೃಷ್ಟಿಸಿದ್ದಾನೆ ಎಂದುಕೊಂಡು ಅದರ ಯದ್ವಾತದ್ವಾ ಉಪಯೋಗಕ್ಕಾಗಿ ತನ್ನ ಸಂಪೂರ್ಣ ಶಕ್ತಿಯನ್ನು ವ್ಯಯ ಮಾಡುವುದು ಸರಿಯಲ್ಲ. ಇಂಜಿನ್ ಚಲಿಸುವಂತೆ ಮಾಡಲು ಕಲ್ಲಿದ್ದಲು ಬೇಕು, ಆದರೆ ಕಲ್ಲಿದ್ದಲನ್ನು ಉಪಯೋಗಿಸಲು ಇಂಜಿನ್‌ನ್ನು ತಯಾರು ಮಾಡಲಾಗಲಿಲ್ಲ. ಅನ್ಯಥಾ ಕನಿಷ್ಟ ಇಂಧನದ ಬಳಕೆಯಿಂದ ಗರಿಷ್ಟ ಗಾತ್ರದ ಶಕ್ತಿಯನ್ನು ಉತ್ಪಾದಿಸುವ ಪ್ರಯತ್ನ ನಮ್ಮದಾಗಿರುತ್ತದೆ. ಇದು ಉಳಿತಾಯದ ದೃಷ್ಟಿಕೋನವಾಗಿದೆ. ಮಾನವ ಜೀವನದ ಉದ್ದೇಶದ ವಿಚಾರ ಮಾಡಿದಾಗ, ಕನಿಷ್ಟತಮ ಇಂಧನದಿಂದ ಅಧಿಕತಮ ವೇಗದೊಂದಿಗೆ ನಮ್ಮ ಗುರಿಯ ಕಡೆಗೆ ಮುನ್ನುಗ್ಗುವಂತಹ ವ್ಯವಸ್ಥೆ ಮಾಡಬೇಕಾಗಿದೆ. ಇಂತಹ ಆರ್ಥಿಕ ವ್ಯವಸ್ಥೆಯನ್ನು ಒಪ್ಪಬಹುದಾಗಿದೆ. ಇದು ಮಾನವನ ಒಂದು ಮಗ್ಗುಲಿನ ವಿಚಾರ ಮಾಡದೇ, ಅವನ ಸಂಪೂರ್ಣ ಜೀವನ ಮತ್ತು ಅಂತಿಮ ಉದ್ದೇಶದ ವಿಚಾರ ಮಾಡುತ್ತದೆ. ಇದು ಸಂಹಾರಾತ್ಮಕವಾಗಿರದೆ, ಸೃಜನಾತ್ಮಕವಾಗಿರುತ್ತದೆ. ಇದು ಪ್ರಕೃತಿಯ ಶೋಷಣೆಯ ಮೇಲೆ ಅವಲಂಬಿತವಾಗಿರದೆ, ಅದರ ಪೋಷಣೆಯ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ಆಧಾರವು ಶೋಷಣೆಯಲ್ಲ, ಕ್ಷೀರ ಪಾತ್ರೆಯಾಗಬೇಕು ಇಲ್ಲವೆ ಪ್ರಕೃತಿಯ ಸ್ತನ್ಯವು ನಮಗೆ ಜೀವನದಾಯಿನಿಯಾಗಿರಬೇಕು. ಇಂತಹ ವ್ಯವಸ್ಥೆಯನ್ನು ಮಾಡಬೇಕಿದೆ.

**ಘಾತಕ ಆರ್ಥಿಕ ಘೋಷಣೆಗಳು**

ಈ ಮಾನವೀಯ ಉದ್ದೇಶವು ಅರ್ಥವ್ಯವಸ್ಥೆಗೆ ಇದ್ದರೆ, ಆರ್ಥಿಕ ಪ್ರಶ್ನೆಗಳ ಕಡೆಗೆ ನೋಡುವ ನಮ್ಮ ದೃಷ್ಟಿಯು ಆಮೂಲಾಗ್ರವಾಗಿ ಬದಲಾಗಿ ಹೋಗುತ್ತದೆ.

ಪಶ್ಚಿಮದ ಆರ್ಥಿಕ ವ್ಯವಸ್ಥೆಯಲ್ಲಿ ಅದು ಬಂಡವಾಳಶಾಹಿಯಾಗಿರಲಿ ಇಲ್ಲವೆ ಸಮಾಜವಾದಿಯಾಗಿರಲಿ, ಮೌಲ್ಯಕ್ಕೆ ಅತ್ಯಂತ ಮಹತ್ತರವಾದ ಹಾಗೂ ಕೇಂದ್ರೀಯ ಸ್ಥಾನ ದೊರಕಿದೆ. ಅದರ ಸುತ್ತಲೂ ಸಂಪೂರ್ಣ ಆರ್ಥಿಕ ಚಿಂತನೆಯು ಭ್ರಮಣ ಮಾಡುತ್ತಿರುತ್ತದೆ. ಒಬ್ಬ ತತ್ವಶಾಸ್ತ್ರಜ್ಞನ ದೃಷ್ಟಿಯಲ್ಲಿ 'ಮೌಲ್ಯ'ದ ವಿಶ್ಲೇಷಣೆಯ ಮಹತ್ವವು ಯಾವುದೇ ಆಗಿರಲಿ, ಆದರೆ ಅದರ ಆಧಾರದ ಮೇಲೆ ಯಾವ ಜೀವನ-ದರ್ಶನಗಳು ಸ್ಥಿರಗೊಂಡಿವೆಯೋ, ಅವು ಬಹಳಷ್ಟು ಅಪರಿಪೂರ್ಣ, ಅಮಾನವೀಯ ಹಾಗೂ ಕೆಲವು ಅಂಶಗಳಲ್ಲಿ ನೀತಿ ವಿಹೀನವಾಗಿವೆ.

ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಇತ್ತೀಚೆಗೆ ಒಂದು ಘೋಷಣೆಯನ್ನು ಹಾಕಲಾಗುತ್ತಿದೆ- 'ಸಂಪಾದಿಸುವವನು ತಿನ್ನುತ್ತಾನೆ'. ಸಾಮಾನ್ಯವಾಗಿ ಕಮ್ಯುನಿಸ್ಟರು ಈ ಘೋಷಣೆಯನ್ನು ಹಾಕುತ್ತಾರೆ, ಆದರೆ ಈ ಘೋಷಣೆಯ ಮೂಲದಲ್ಲಿರುವ ಸಿದ್ಧಾಂತವನ್ನು ಬಂಡವಾಳಶಾಹಿಗಳೂ ಅಲ್ಲಗಳೆಯುವುದಿಲ್ಲ. ಇವರಿಬ್ಬರಲ್ಲಿ ಕಚ್ಚಾಟವೇನಾದರೂ ಇದ್ದರೆ, ಅದು ಯಾರು ಎಷ್ಟು ಸಂಪಾದಿಸುತ್ತಾರೆ ಎಂಬ ವಿಷಯದಲ್ಲಿ ಇರುತ್ತದೆ. ಬಂಡವಾಳಶಾಹಿಗಳು ಸಾಹಸ ಮತ್ತು ಬಂಡವಾಳಕ್ಕೆ ಮಹತ್ವವನ್ನು ಕೊಡುತ್ತಾರೆ. ಆದ್ದರಿಂದ ತಿನ್ನುವುದು ಅದರ ಪ್ರಮುಖ ಭಾಗವಾಗಿದ್ದಲ್ಲಿ ಅದನ್ನು ಅವರು ಯೋಗ್ಯವೆಂದು ಭಾವಿಸುತ್ತಾರೆ. ಇನ್ನೊಂದೆಡೆ ಕಮ್ಯುನಿಸ್ಟರು ಶ್ರಮವನ್ನೇ ನಿರ್ಮಾಣವೆಂದು ಭಾವಿಸುತ್ತಾರೆ, ಆದ್ದರಿಂದ ಅವರು ಶ್ರಮಿಕರಿಗೇ ತಿನ್ನುವ ಅಧಿಕಾರವನ್ನು ಕೊಡುತ್ತಾರೆ. ಇವೆರಡು ಚಿಂತನೆಗಳೂ ಸರಿಯಲ್ಲ. ವಾಸ್ತವವಾಗಿ ನಮ್ಮ ಘೋಷಣೆಯು 'ಸಂಪಾದಿಸುವವನು ತಿನ್ನಿಸುತ್ತಾನೆ' ಮತ್ತು 'ಜನ್ಮ ಪಡೆದವನೇ ತಿನ್ನುತ್ತಾನೆ' ಎಂದಿರಬೇಕು. ತಿನ್ನುವ ಅಧಿಕಾರ ಜನ್ಮದಿಂದ ಪ್ರಾಪ್ತವಾಗುತ್ತದೆ. ಸಂಪಾದಿಸುವ ಅಧಿಕಾರ ಶಿಕ್ಷಣದಿಂದ ಬರುತ್ತದೆ. ಸಮಾಜದಲ್ಲಿ ಯಾರು ಸಂಪಾದಿಸುವುದಿಲ್ಲವೋ ಅವರೂ ಸಹ ತಿನ್ನುತ್ತಾರೆ. ಮಕ್ಕಳು, ಮುದುಕರು, ರೋಗಿಗಳು, ಅಂಗಹೀನರು ಎಲ್ಲರ ಚಿಂತನೆಯನ್ನು ಸಮಾಜವು ಮಾಡಬೇಕಾಗುತ್ತದೆ. ಪ್ರತಿಯೊಂದು ಸಮಾಜವು ಈ ಕರ್ತವ್ಯವನ್ನು ನಿರ್ವಹಿಸುತ್ತದೆ. ಮಾನವನ ಸಾಮಾಜಿಕತೆ ಮತ್ತು ಸಂಸ್ಕೃತಿಯ ಮಾನದಂಡವು ಈ ಕರ್ತವ್ಯದ ನಿರ್ವಹಣೆಯ ತತ್ಪರತೆಯೇ ಆಗಿದೆ. ಈ ಕರ್ತವ್ಯದ ನಿರ್ವಹಣೆಯ ಯೋಗ್ಯತೆಯನ್ನು ಹುಟ್ಟಿಸುವುದೇ ಆರ್ಥಿಕ ವ್ಯವಸ್ಥೆಯ ಕರ್ತವ್ಯವಾಗಿದೆ. ಈ ಕರ್ತವ್ಯದ ಪ್ರೇರಣೆಯ ಚಿಂತನೆಯನ್ನು ಅರ್ಥಶಾಸ್ತ್ರವು ಮಾಡುವುದಿಲ್ಲ. ಕೆಲಸವನ್ನು ಮನುಷ್ಯ ತನ್ನ ಈ ಕರ್ತವ್ಯದ ನಿರ್ವಹಣೆಗಾಗಿ ಮಾಡುತ್ತಾನೆ, ಇಲ್ಲವಾದರೆ ಯಾರ ಹಸಿವು ಇಂಗಿಹೋಗಿದೆಯೋ ಅವರು ಕೆಲಸವನ್ನು ಮಾಡುವುದಿಲ್ಲ.

**ಕನಿಷ್ಟತಮ ಸ್ತರ**

ಮನುಷ್ಯನಿಗೋಸ್ಕರ ಭೌತಿಕ ಆವಶ್ಯಕತೆಗಳನ್ನು ಪೂರೈಸುವುದು ಯಾವುದೇ ಆರ್ಥಿಕ ವ್ಯವಸ್ಥೆಯ ಕನಿಷ್ಟತಮ ಸ್ತರವಾಗಿದೆ. ಸ್ಥೂಲವಾಗಿ ಇಂತಹ ಆವಶ್ಯಕತೆಗಳ ಅಭಿವ್ಯಕ್ತಿಯನ್ನು ಊಟ, ಬಟ್ಟೆ ಮತ್ತು ಮನೆ ಮಾಡುತ್ತವೆ. ಇದೇ ರೀತಿ ವ್ಯಕ್ತಿಯನ್ನು ಸಮಾಜಕ್ಕಾಗಿ ಕರ್ತವ್ಯಗಳನ್ನು ನಿರ್ವಹಿಸಲು ಯೋಗ್ಯವನ್ನಾಗಿ ಮಾಡುವುದು ಸಮಾಜದ ಆಧಾರಭೂತವಾದ ಜವಾಬ್ದಾರಿಯಾಗಿದೆ ಮತ್ತು ಯಾವುದೇ ರೀತಿಯ ಅಸ್ವಸ್ಥ ಸ್ಥಿತಿಯಲ್ಲಿ ವ್ಯಕ್ತಿಯನ್ನು ಸ್ವಸ್ಥನನ್ನಾಗಿ ಮಾಡುವ ವ್ಯವಸ್ಥೆಯನ್ನು ಮಾಡುವುದು ಹಾಗೂ ನಿರ್ವಹಣೆಯ ವ್ಯವಸ್ಥೆಯನ್ನು ಮಾಡುವುದು ಸಮಾಜದ ಕೆಲಸವಾಗಿದೆ. ಕಡೆಯ ಪಕ್ಷ ಇಷ್ಟು ಯಾವ ರಾಜ್ಯದಲ್ಲಿರುವುದೋ, ಅದೇ ಧರ್ಮರಾಜ್ಯ. ಇಲ್ಲದಿದ್ದಲ್ಲಿ ಅದು ಅಧರ್ಮ ರಾಜ್ಯ. ರಘು ವಂಶದ ದಿಲೀಪನ ರಾಜ್ಯದ ವರ್ಣನೆಯನ್ನು ಮಾಡುತ್ತಾ ಕಾಳಿದಾಸ ಹೇಳಿದ್ದಾನೆ –

ಪ್ರಜಾನಾಂ ವಿನಯಾಧಾನಾದ್ ರಕ್ಷಣಾತ್ ಭರಣಾದಪಿ ।
ಸ ಪಿತಾ ಪಿತರಸ್ತಾಸಾಂ ಕೇವಲಂ ಜನ್ಮಹೇತವಃ ॥ (೧/೨೪)

(ಪ್ರಜೆಗಳ ಶಿಕ್ಷಣ, ರಕ್ಷಣೆ ಹಾಗೂ ಪಾಲನೆ–ಪೋಷಣೆಗಳ ವ್ಯವಸ್ಥೆಯ ಕಾರಣದಿಂದ ಆತನೇ ಅವರ ವಾಸ್ತವಿಕ ಪಿತನಾಗಿದ್ದನು. ಅವರ ತಂದೆ ಕೇವಲ ಜನ್ಮದಾತರಾಗಿದ್ದರು) ಯಾವ ಭರತನ ಹೆಸರಿನಿಂದ ಈ ದೇಶದ ಹೆಸರು ಭಾರತವಾಯಿತೊ, ಅದರ ವ್ಯಾಖ್ಯೆಯೂ ಇದೇ ಆಗಿದೆ– 'ಭರಣಾತ್ ರಕ್ಷಣಾತ್ ಚ' – ಅಂದರೆ, ಪಾಲನೆ ಮತ್ತು ರಕ್ಷಣೆಯ ಕಾರಣದಿಂದಲೇ ಅವನು ಭರತನೆಂದು ಕರೆಯಲ್ಪಟ್ಟಿದ್ದನು. ಅವನದೇ ಈ ದೇಶ ಭಾರತವಾಗಿದೆ. ಭರತ–ಪೋಷಣೆಯ ಗ್ಯಾರಂಟಿ ಈ ದೇಶದಲ್ಲಿ ಇಲ್ಲದಿದ್ದಲ್ಲಿ 'ಭಾರತ' ಎಂಬ ಹೆಸರು ಸಾರ್ಥಕವಾಗುವುದಿಲ್ಲ.

**'ಕನಿಷ್ಟತಮ'ದ ಜನ್ಮ ಸಿದ್ಧ ಅಧಿಕಾರ**

ಈಗ ಎಲ್ಲರಿಗೂ ಕೊಡಬೇಕಿರುವ 'ಕನಿಷ್ಟತಮ' ಬರುವುದಾದರೂ ಎಲ್ಲಿಂದ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದು ನಮ್ಮ ಪ್ರಯತ್ನಗಳು ಹಾಗೂ ಪುರುಷಾರ್ಥದಿಂದಲೇ ಬರಬೇಕು ಎನ್ನುವುದು ಸ್ಪಷ್ಟ. ಆದ್ದರಿಂದ ಅಧಿಕಾರ ರೂಪದಲ್ಲಿ ಕನಿಷ್ಟತಮ ಸ್ತರವು ಎಲ್ಲಿ ನಮಗೆ ಸಿಕ್ಕಿದೆಯೋ, ಅಲ್ಲಿ ಉತ್ಪಾದಕ ಕರ್ಮ ಅಂದರೆ ಪುರುಷಾರ್ಥವಿಹೀನ ವ್ಯಕ್ತಿಯು ಸಮಾಜಕ್ಕೆ ಭಾರವಾಗುವನು. ಇದೇ ರೀತಿ ಯಾವ ಸಮಾಜ–ವ್ಯವಸ್ಥೆ ಅಥವಾ ಅರ್ಥ–ವ್ಯವಸ್ಥೆಯು ಜನರ ಪುರುಷಾರ್ಥಕ್ಕೆ ಬಾಧಕವೋ ಅದು ಆತ್ಮಹತ್ಯೆಯಾಗುತ್ತದೆ. ಇಂತಹ ವ್ಯವಸ್ಥೆಯಲ್ಲಿ ಸಮಾಜವು ವ್ಯಕ್ತಿಗಳಿಗಾಗಿ ತನ್ನ ಕರ್ತವ್ಯದ ನಿರ್ವಹಣೆಯನ್ನು ಮಾಡಲು ಸಾಧ್ಯವಾಗುವುದಿಲ್ಲ–ಒಂದು ವೇಳೆ ಮನುಷ್ಯನ ಆವಶ್ಯಕತೆಗಳು ಪೂರ್ಣಗೊಳ್ಳುತ್ತಿದ್ದರೂ ಪುರುಷಾರ್ಥವನ್ನು ಮಾಡದಿರುವುದರಿಂದ ಅವನ

ವಿಕಸನವು ಏಕಾಂಗಿಯಾಗಿರುತ್ತದೆ. ಮನುಷ್ಯನಿಗೆ ಹೊಟ್ಟೆ ಮತ್ತು ಕೈಗಳು ಸಿಕ್ಕಿವೆ. ಒಂದು ವೇಳೆ ಕೈಗಳಿಗೆ ಕೆಲಸ ಸಿಗದಿದ್ದಲ್ಲಿ ಹಾಗೂ ಹೊಟ್ಟೆಗೆ ಆಹಾರ ಸಿಗದಿದ್ದಲ್ಲಿ, ಆಗಲೂ ಮನುಷ್ಯ ಸುಖಿಯಾಗಿರುವುದಿಲ್ಲ, ಅವನ ವಿಕಾಸವಾಗುವುದಿಲ್ಲ. ನಿಸ್ಸಂತಾನ ಸ್ತ್ರೀಯು ಹೇಗೆ ತನ್ನ ಜೀವನದಲ್ಲಿ ಅಪೂರ್ಣತೆ ಹಾಗೂ ವ್ಯಥೆಯ ಅನುಭವವನ್ನು ಪಡೆಯುವಳೋ, ಹಾಗೆಯೇ ನಿರುದ್ಯೋಗಿ–ಪುರುಷಾರ್ಥ ರಹಿತ ವ್ಯಕ್ತಿಯೂ ಅಪೂರ್ಣನಾಗುತ್ತಾನೆ.

**ಪ್ರತಿಯೊಬ್ಬನಿಗೂ ಕೆಲಸ**

ಪ್ರತಿಯೊಬ್ಬನಿಗೂ ಕೆಲಸ ಎಂಬುದು ಅರ್ಥವ್ಯವಸ್ಥೆಯ ಆಧಾರಭೂತ ಗುರಿಯಾಗಬೇಕು. ಅಂದರೆ ಸ್ವಸ್ಥ ಹಾಗೂ ವಯಸ್ಕ ವ್ಯಕ್ತಿಗೆ ತನ್ನ ಗೃಹಸ್ಥಾಶ್ರಮದ ವಯಸ್ಸಿನಲ್ಲಿ ಜೀವಿಕೋಪಾರ್ಜನೆಯ ವ್ಯವಸ್ಥೆಯಾಗಬೇಕು. ಇಂದು ಸ್ಥಿತಿಯೇ ವಿಚಿತ್ರವಾಗಿದೆ. ಒಂದೆಡೆ ಹತ್ತು ವರ್ಷದ ಬಾಲಕ ಮತ್ತು ಎಪ್ಪತ್ತು ವರ್ಷದ ಮುದುಕ ಕೆಲಸದಲ್ಲಿ ತೊಡಗಿದ್ದಾರೆ, ಇನ್ನೊಂದೆಡೆ ಇಪ್ಪತ್ತೈದು ವರ್ಷದ ಯುವಕ ನಿರುದ್ಯೋಗದಿಂದ ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಈ ಅವ್ಯವಸ್ಥೆಯನ್ನು ಹೋಗಲಾಡಿಸಬೇಕು. ದೇವರು ಕೈಗಳನ್ನು ಕೊಟ್ಟಿದ್ದಾನೆ, ಆದರೆ ಅವು ಸ್ವತಃ ಉತ್ಪಾದಕಗಳಾಗುವುದಿಲ್ಲ. ಅವುಗಳಿಗೆ ಬಂಡವಾಳದ ಸಹಯೋಗ ಬೇಕಿದೆ. ಶ್ರಮ ಮತ್ತು ಬಂಡವಾಳದ ಸಂಬಂಧವು ಪ್ರಕೃತಿ ಮತ್ತು ಪುರುಷನ ಸಂಬಂಧವಾಗಿದೆ. ಸೃಷ್ಟಿ ಇವೆರಡರ ಲೀಲೆಯಾಗಿದೆ. ಇವುಗಳಲ್ಲಿ ಯಾವುದನ್ನೂ ಅವಹೇಳನೆ ಮಾಡಲಾಗುವುದಿಲ್ಲ.

**ಬಂಡವಾಳದ ನಿರ್ಮಾಣ**

ಉತ್ಪಾದನೆಯ ಸಂಪೂರ್ಣ ಬಳಕೆಯ ಸ್ಥಾನದಲ್ಲಿ, ಸ್ವಲ್ಪವನ್ನು ಉಳಿತಾಯ ಮಾಡುವುದು ಮತ್ತು ಅದನ್ನು ಭಾವಿ ಉತ್ಪಾದನೆಯ ಕೆಲಸದಲ್ಲಿ ತೊಡಗಿಸುವುದು ಬಂಡವಾಳದ ನಿರ್ಮಾಣಕ್ಕೆ ಆವಶ್ಯಕ. ಬಳಕೆಯಲ್ಲಿ ಸಂಯಮವಿಲ್ಲದಿದ್ದಲ್ಲಿ ಬಂಡವಾಳವು ಸಂಚಿತವಾಗುವುದಿಲ್ಲ. ಕಾರ್ಲ್‌ಮಾರ್ಕ್ಸ್ ಯಾವ 'ಹೆಚ್ಚುವರಿ ಮೌಲ್ಯ'ದ ವರ್ಣನೆಯನ್ನು ಮಾಡುತ್ತಾನೋ, ಅದೇ ಬಂಡವಾಳ–ನಿರ್ಮಾಣದ ಆಧಾರವಾಗಿದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಕೈಗಾರಿಕೋದ್ಯಮಿಯು ಈ ಹೆಚ್ಚುವರಿ ಮೌಲ್ಯದ ಸಹಾಯದಿಂದ ಬಂಡವಾಳದ ನಿರ್ಮಾಣ ಮಾಡುತ್ತಾನೆ. ಸಮಾಜವಾದಿ ವ್ಯವಸ್ಥೆಯಲ್ಲಿ ಈ ಕೆಲಸವು ರಾಜ್ಯದ ಮೂಲಕ ಆಗುತ್ತದೆ. ಎರಡೂ ಪದ್ಧತಿಗಳಲ್ಲಿ ಕಾರ್ಮಿಕರಿಗೆ ಸಂಪೂರ್ಣ ಉತ್ಪಾದನೆಯ ವಿತರಣೆಯಾಗುವುದಿಲ್ಲ. ಒಂದು ವೇಳೆ ಉತ್ಪಾದನಾ ಪದ್ಧತಿಯು 'ದೊಡ್ಡ ಪ್ರಮಾಣ'ದಲ್ಲಿ ಮತ್ತು 'ಕೇಂದ್ರಿತ'ವಾಗಿದ್ದಲ್ಲಿ, ಬಂಡವಾಳ – ನಿರ್ಮಾಣಕ್ಕಾಗಿ ಕಾರ್ಮಿಕರ ಮೂಲಕ ಮಾಡಲಾದ ಸಂಯಮ ಮತ್ತು ತ್ಯಾಗದ ಅರಿವೂ ಆಗುವುದಿಲ್ಲ. ವಿಕೇಂದ್ರೀಕರಣದ

ಲಾಭವೆಂದರೆ, ಬಂಡವಾಳದ ರೂಪದಲ್ಲಿ ಈ 'ಹೆಚ್ಚುವರಿ ಮೌಲ್ಯ'ದ ಪ್ರಯೋಗದಲ್ಲಿ ಕಾರ್ಮಿಕರ ಸಹಾಯಹಸ್ತವಿರಬಹುದು.

**ಯಂತ್ರ (ಮೆಷಿನ್)ದ ಪ್ರಭುತ್ವ**

ಯಂತ್ರವು ಬಂಡವಾಳದ ಅತ್ಯಂತ ಮಹತ್ವಪೂರ್ಣ ಸ್ವರೂಪವಾಗಿದೆ. ಮಾನವನ ಶ್ರಮವನ್ನು ಸುಲಭ ಸಾಧ್ಯ ಮಾಡಲು ಮತ್ತು ಅವನ ಉತ್ಪಾದಕತೆ ಹಾಗೂ ಯೋಗ್ಯತೆಯನ್ನು ಹೆಚ್ಚಿಸುವುದಕ್ಕಾಗಿಯೇ ಯಂತ್ರದ ಆವಿಷ್ಕರಣವಾಗಿದೆ. ಯಂತ್ರವು ಮಾನವನ ಸಹಾಯಕ, ಮಾನವನ ಪ್ರತಿಸ್ಪರ್ಧಿಯಲ್ಲ. ಆದರೆ ಎಲ್ಲಿ ಮಾನವ–ಶ್ರಮವನ್ನು ಒಂದು ವಿನಿಮಯ ವಸ್ತುವೆಂದು ತಿಳಿದು ರೂಪಾಯಿಗಳಲ್ಲಿ ಅದರ ಮೌಲ್ಯಾಂಕನವಾಗತೊಡಗಿತೋ, ಅಲ್ಲಿ ಯಂತ್ರವು ಮಾನವನ ಪ್ರತಿಸ್ಪರ್ಧಿಯಾಗಿಹೋಯಿತು. ಇದು ಬಂಡವಾಳಶಾಹಿ ದೃಷ್ಟಿಕೋನದ ದುರ್ಗುಣವಾಗಿದೆ. ಒಂದು ವೇಳೆ ಯಂತ್ರವು ಮನುಷ್ಯನ ಸ್ಥಾನವನ್ನು ಪಡೆದು ಅವನನ್ನು ಹಸಿವಿನಿಂದ ಸಾಯುವಂತೆ ಮಾಡಿದಲ್ಲಿ, ಯಾವ ಉದ್ದೇಶಗಳ ಸಿದ್ಧಿಗಾಗಿ ಯಂತ್ರದ ಆವಿಷ್ಕರಣವಾಯಿತೋ, ಅದು ಪ್ರತಿಕೂಲವಾಗುತ್ತದೆ. ಇದಕ್ಕೆ ಜಡ ಯಂತ್ರವು ದೋಷಿಯಲ್ಲ. ಈ ಕೆಟ್ಟತನವು ವಿವೇಕ ಶೂನ್ಯವಾಗಿರುವ ಅರ್ಥ ವ್ಯವಸ್ಥೆಯದ್ದಾಗಿದೆ. ಯಂತ್ರದ ಎಲ್ಲೆಗಳ ಚಿಂತನೆ ಮಾಡಿಯೇ ನಾವು ಅದರ ಉಪಯುಕ್ತತೆಯ ನಿರ್ಧಾರ ಮಾಡಬೇಕಿದೆ. ಈ ದೃಷ್ಟಿಯಿಂದ, ಜನಸಂಖ್ಯೆಯ ಕೊರತೆಯ ಆಧಾರದಿಂದ ತಯಾರಾದ ಪಶ್ಚಿಮದ ಯಂತ್ರಗಳನ್ನು ಗಂಭೀರವಾಗಿ ಯೋಚಿಸದೆ ಆಮದು ಮಾಡಿಕೊಳ್ಳುವುದು ಬಹಳ ದೊಡ್ಡ ತಪ್ಪಾಗುತ್ತದೆ. ಯಂತ್ರವು ದೇಶಕಾಲ–ಪರಿಸ್ಥಿತಿ–ನಿರವಲಂಬಿಯಲ್ಲ, ಅವಲಂಬಿಯಾಗಿದೆ. ಅದು ಆಧುನಿಕ ಪ್ರಗತಿಯ ಉತ್ಪತ್ತಿಯಾಗಿದೆ, ಆದರೆ ಅದರ ಪ್ರಯೋಗವನ್ನು ತನ್ನ ಪರಿಸ್ಥಿತಿಗಳು ಮತ್ತು ಆವಶ್ಯಕತೆಗಳಿಗನುಸಾರವಾಗಿ ಪ್ರತಿಯೊಂದು ದೇಶವೂ ಮಾಡುತ್ತದೆ. ನಮ್ಮ ಯಂತ್ರವು ನಮ್ಮ ಆರ್ಥಿಕ ಆವಶ್ಯಕತೆಗಳಿಗೆ ಅನುಕೂಲಕರವಷ್ಟೇ ಅಲ್ಲದೆ, ನಮ್ಮ ಸಾಂಸ್ಕೃತಿಕ ಹಾಗೂ ರಾಜನೈತಿಕ ಜೀವನ–ಮೌಲ್ಯಗಳ ಪೋಷಕವಾಗಿಲ್ಲದಿದ್ದರೂ, ಕಡೆಯ ಪಕ್ಷ ಖಂಡಿತವಾಗಿ ವಿರೋಧಿಯಾಗಿ ಇರಬಾರದು.

ಉಪಯುಕ್ತ ಯಂತ್ರಗಳ ನಿರ್ಮಾಣವನ್ನು ನಾವು ಮಾಡಬೇಕಿದೆ. ಆದರೆ, ನಮ್ಮಲ್ಲಿ ಆಗುವುದೇನೆಂದರೆ, ನಾವು ಮೊದಲು 'ಮೆಷೀನ್'ನ ಗೂಟವನ್ನು ನೆಟ್ಟುಬಿಡುತ್ತೇವೆ. ನಂತರ ಎಲ್ಲ ವಸ್ತುಗಳ ಹೊಂದಾಣಿಕೆಗಳನ್ನು ಅದರ ಜೊತೆಗೆ ಕೂರಿಸುತ್ತೇವೆ. ಆದರೆ, ಜಗತ್ತಿನ ಬೇರೆ–ಬೇರೆ ದೇಶಗಳಲ್ಲಿ ಹೀಗೆ ಆಗಿಲ್ಲ. ಹೊಸ–ಹೊಸ ಯಂತ್ರಗಳು ತಯಾರಾಗುವುದಿಲ್ಲ. ವಾಸ್ತವವಾಗಿ ಪ್ರಗತಿಯ ಲಕ್ಷಣವಾಗಿರುವ ವಿಜ್ಞಾನವನ್ನು ಸ್ಥಿರವೆಂದು ಒಪ್ಪಿಕೊಂಡು ನಡೆಯುವುದು ಒಂದು

ಅವೈಜ್ಞಾನಿಕ ದೃಷ್ಟಿಕೋನವಾಗಿದೆ. ನಾವು ಯಂತ್ರಗಳನ್ನು ಹೊರಗಿನಿಂದ ತರಿಸುತ್ತೇವೆ, ಆದ್ದರಿಂದಲೇ ಈ ವಿಷಯದಲ್ಲಿ ನಮ್ಮಲ್ಲಿ ಬಳುಕುವ ಸ್ವಭಾವವು ಬಹಳ ಕಡಿಮೆ. ನಾವು ತಾಂತ್ರಿಕ ಜ್ಞಾನದ ವಿಕಾಸವನ್ನು ಮಾಡಬೇಕಿದೆ.

ಹೇಗೆ ಯಾವುದೇ ಕಾರ್ಖಾನೆಯ ಪೂರ್ಣ ಸಾಮರ್ಥ್ಯದ ಉಪಯೋಗವನ್ನು ಪಡೆಯದಿರುವುದು ಆರ್ಥಿಕ ದೃಷ್ಟಿಯಿಂದ ಸರಿಯಲ್ಲವೋ, ಹಾಗೆಯೇ ದೇಶದ ಜನರನ್ನು ನಿರುದ್ಯೋಗಿಗಳನ್ನಾಗಿಡುವುದು ನಷ್ಟದ ವ್ಯಾಪಾರವಾಗುತ್ತದೆ. ಇಲ್ಲಂತೂ ದುಪ್ಪಟ್ಟು ನಷ್ಟವಾಗುತ್ತದೆ. ಬರಿದಾದ ಯಂತ್ರವು ಕೇವಲ ಹಳೆಯ ಬಂಡವಾಳವನ್ನು ತಿನ್ನುತ್ತದೆ, ಹೊಸದನ್ನೇನಲ್ಲ, ಆದರೆ ನಿರುದ್ಯೋಗಿ ಮನುಷ್ಯನಾದರೋ ಇಂದಿಗೂ ತಿನ್ನುತ್ತಾನೆ. ಆದ್ದರಿಂದ ಇಂದು 'ಸಂಪಾದಿಸುವವನು ತಿನ್ನುತ್ತಾನೆ' ಎನ್ನುವ ಜಾಗದಲ್ಲಿ 'ತಿನ್ನುವವನು ಸಂಪಾದಿಸುತ್ತಾನೆ' ಎಂಬ ಗುರಿಯನ್ನಿಟ್ಟುಕೊಂಡು ನಾವು ಅರ್ಥ ರಚನೆಯನ್ನು ಮಾಡಬೇಕಾಗಿದೆ. ಚರಕದ ಸ್ಥಾನದಲ್ಲಿ ನೇಯ್ಗೆಯ ಯಂತ್ರಗಳು ಬೇಕಿವೆ, ಆದರೆ ಎಲ್ಲ ಕೆಲಸಗಳಿಗೂ ಸ್ವಯಂಚಾಲಿತ ಯಂತ್ರಗಳೂ ಬೇಕಿಲ್ಲ, ಪೂರ್ಣ ಜೀವನೋಪಾಯದ ಗುರಿಯನ್ನು ಮುಂದಿಟ್ಟುಕೊಂಡು ನಾವು ಇತರೆ ಉತ್ಪಾದನೆಗಳ ಚಿಂತನೆ ಮಾಡಬೇಕಿದೆ.

**ಅರ್ಥ–ರಚನೆಯಲ್ಲಿ ವ್ಯಕ್ತಿ**

ವ್ಯಕ್ತಿಯ ಉಪಯೋಗ ಇಲ್ಲವೆ ಅವನ ಜೀವನೋಪಾಯದ ವಿಚಾರ ಮಾಡುವಾಗ ನಾವು ಯಾವಾಗಲೂ ಪೂರ್ಣ ಏಕಾತ್ಮ ಮಾನವನ ವಿಚಾರವನ್ನು ಮಾಡಬೇಕಾಗುತ್ತದೆ. ಕಳೆದ ಶತಮಾನಗಳ ಆರ್ಥಿಕ ಚಿಂತನೆಯ ಮತ್ತು ಅದರ ಆಧಾರಿತ ಅರ್ಥವ್ಯವಸ್ಥೆಯ ಪರಿಣಾಮವೇನಾಗಿದೆ ಎಂದರೆ ಮೂಳೆ ಮಾಂಸದ ವಾಸ್ತವಿಕ ಮಾನವ ನಮ್ಮ ದೃಷ್ಟಿಯಿಂದ ಕಣ್ಮರೆಯಾಗಿಬಿಟ್ಟಿದ್ದಾನೆ. ಅವನ ವ್ಯಕ್ತಿತ್ವದ ಬಗ್ಗೆ ನಾವು ಎಳ್ಳಷ್ಟೂ ಚಿಂತನೆ ಮಾಡುವುದಿಲ್ಲ. ಬಂಡವಾಳಶಾಹಿ ಅರ್ಥಶಾಸ್ತ್ರವು ಮನುಷ್ಯನನ್ನು ಒಂದು ಅರ್ಥಲೋಲುಪ ಪ್ರಾಣಿ ಎಂದುಕೊಂಡು ಮುನ್ನಡೆಯುತ್ತದೆ. ಆರ್ಥಿಕ ದೃಷ್ಟಿಕೋನದಿಂದಲೇ ಅದರ ಎಲ್ಲ ನಿರ್ಣಯಗಳಾಗುತ್ತವೆ. ಇಂತಹ ವ್ಯಕ್ತಿಯು ಮುಂದೆ ಐದು ರೂಪಾಯಿಗಳು ಯಾವಾಗಲೂ ನಾಲ್ಕು ರೂಪಾಯಿಗಳಿಗಿಂತ ಅಧಿಕವಾಗಿರುತ್ತದೆ. ಅರ್ಥೋತ್ಪಾದನೆಯ ಪ್ರೇರಣೆಯಿಂದಲೇ ಅದು ಕೆಲಸ ಮಾಡುತ್ತದೆ. ಹೆಚ್ಚು–ಹೆಚ್ಚು ಲಾಭವೇ ಅದರ ಗುರಿಯಾಗಿರುತ್ತದೆ. ಹೇಗೆ ಮಾರುಕಟ್ಟೆಯಲ್ಲಿ ಅನ್ಯವಸ್ತುಗಳು ಖರೀದಿಸಿ–ಮಾರಲ್ಪಡುತ್ತವೆಯೋ ಹಾಗೆಯೇ ಮಾನವ ಶ್ರಮವೂ ಕ್ರಯ–ವಿಕ್ರಯದ ವಸ್ತುವಾಗಿದೆ. ಇದು ಮುಕ್ತ ವ್ಯಾಪಾರದ ವ್ಯವಸ್ಥೆಯಾಗಿದೆ. ಪ್ರತಿಸ್ಪರ್ಧೆಯ ಅವರೋಧವನ್ನು ಹೊರತುಪಡಿಸಿ ಬೇರೆ ಯಾವುದೇ ನಿಯಂತ್ರಣವನ್ನು ಅದು ಅನ್ಯಾಯವೆಂದು ಭಾವಿಸುತ್ತದೆ. ಈ ಓಟದಲ್ಲಿ ಯಾರು

ಎಲ್ಲರಿಗಿಂತ ಹಿಂದುಳಿಯುವನೋ, ಅವನನ್ನು ಜೊತೆಗೆ ಕರೆದೊಯ್ಯುವ ವಿಚಾರವನ್ನೇ ಮಾಡಲು ಅದು ಸಿದ್ಧವಿಲ್ಲ, ಅನ್ಯಥಾ ಅವನ ವಿನಾಶವನ್ನೇ ನ್ಯಾಯವೆಂದು ಭಾವಿಸುತ್ತದೆ. ಅವನು ಹಣವಂತನಲ್ಲ, ಅವನಿಗೆ ನಷ್ಟವಾಗಬೇಕೆಂಬುದೇ ಅದರ ದೃಢ ವಿಚಾರವಾಗಿದೆ. ಅವನ ವಿನಾಶದಿಂದ ನಿಧಾನವಾಗಿ ಶಕ್ತಿಯು ಮುದುಡಿ ಕೆಲವು ಕೈಗಳಲ್ಲಿ ಕೇಂದ್ರಿತವಾಗುತ್ತದೆ. ಇದನ್ನು ಬಂಡವಾಳಶಾಹಿ ಅರ್ಥಶಾಸ್ತ್ರವು ಸ್ವಾಭಾವಿಕ ಪ್ರಕ್ರಿಯೆ ಎಂದು ಭಾವಿಸುತ್ತದೆ. ಆದರೆ, ಏಕಾಧಿಕಾರವಾದ ನಂತರ ಪ್ರತಿಸ್ಪರ್ಧೆಯ ಅವರೋಧವೂ ಕೆಲಸ ಮಾಡುವುದಿಲ್ಲ. ಆ ಸ್ಥಿತಿಯಲ್ಲಿ ಪ್ರತಿಸ್ಪರ್ಧೆಯ ಕಾರಣದಿಂದ ಉತ್ಪನ್ನವಾಗುವ ಪ್ರೇರಣೆ ನಷ್ಟವಾಗಿ ಹೋಗುತ್ತದೆ. ಬೆಲೆಗಳು ಮನಬಂದಂತೆ ಆಗಿಬಿಡುತ್ತವೆ ಮತ್ತು ಗುಣದ ದೃಷ್ಟಿಯು ಕ್ಷೀಣಿಸುತ್ತದೆ.

ಬಳಕೆದಾರನ ಸಂಬಂಧದಿಂದಲೂ ಇಂತಹ ಅರ್ಥಶಾಸ್ತ್ರಜ್ಞನ ದೃಷ್ಟಿಯು ಮನುಷ್ಯರ ಆವಶ್ಯಕತೆಗಳು ಅಥವಾ ಇಚ್ಛೆಗಳ ಮೇಲಿರದೆ, ಅವರ ಜೇಬಿನ ಮೇಲೆ ಅಂದರೆ ಕ್ರಯಶಕ್ತಿಯ ಮೇಲಿರುತ್ತದೆ. ಹಸಿದ ಹಾಗೂ ನಿರ್ಧನರ ವಿನಃ ಹೊಟ್ಟೆ ತುಂಬಿದ ಹಾಗೂ ಸಾಧನ–ಸಂಪನ್ನರ ಬಗ್ಗೆಯೇ ಅಲ್ಲಿ ಚಿಂತನೆ ಮಾಡಲಾಗುತ್ತದೆ. ಫಲಸ್ವರೂಪವಾಗಿ ಎಲ್ಲಿ ಸಂಪನ್ನರ ಆವಶ್ಯಕತೆಗಳ ಪೂರ್ತಿಗಾಗಿ ಅನೇಕ ವಿಧದ ವಸ್ತುಗಳ ಉತ್ಪಾದನೆ ಮಾಡಲಾಗುತ್ತದೆಯೋ, ಅಲ್ಲಿ ಸಾಧನಹೀನರ ಜೀವನ ನಿರ್ವಹಣೆಯ ಆವಶ್ಯಕತೆಗಳ ಅಭಾವವೂ ಹೆಚ್ಚಾಗುತ್ತದೆ.

**ಮಾನವನ ವಿಕಾಸ ಇಲ್ಲ**

ಉತ್ಪಾದನೆಯ ಕೇಂದ್ರೀಕರಣ ಹಾಗೂ ಏಕಾಧಿಪತ್ಯದ ಕಾರಣದಿಂದಾಗಿ ಬಳಕೆದಾರನು ನಿಧಾನವಾಗಿ ಪ್ರಭಾವಹೀನನಾಗಿಬಿಡುತ್ತಾನೆ. ಮಾರುಕಟ್ಟೆಗಳ ಸಂಘಟನೆಯನ್ನು ಯಾವ ರೀತಿ ಮಾಡಲಾಗುತ್ತಿದೆ ಎಂದರೆ, ಅಲ್ಲಿ ರಾಮ ಪ್ರಸಾದನ ಕಾಲಿನ ಎಲ್ಲ (ನಂಬರ್)ದ ಚಪ್ಪಲಿ ಸಿಗುತ್ತದೆ. ಈ ವರ್ಗೀಕರಣವು ಎಲ್ಲ ಕ್ಷೇತ್ರಗಳಲ್ಲೂ ಎಷ್ಟು ವೇಗವಾಗಿ ಹರಡುತ್ತಿದೆ ಎಂದರೆ, ವ್ಯಕ್ತಿಯ ವೈಯಕ್ತಿಕ ವ್ಯಕ್ತಿತ್ವವು ನಷ್ಟವಾಗಿ, ಅವನು ಒಂದು ಅಂಶವಾಗಿ ಬದಲಾಗುತ್ತಾ ಹೋಗುತ್ತಾನೆ. ಡ್ಯೂಯಿ ದಶಮಾಂಶ ಪ್ರಣಾಳಿಯ ಪ್ರಕಾರವಾಗಿ ಹೇಗೆ ಪುಸ್ತಕಗಳ ವರ್ಗೀಕರಣ ಮಾಡಿ ಅವುಗಳಿಗೆ ನಿಶ್ಚಿತ ಅಂಕಗಳನ್ನು ಕೊಡಲಾಗುತ್ತದೆಯೋ, ಹಾಗೆಯೇ ಮನುಷ್ಯರಿಗೂ ಕೊಡಬಹುದಾಗಿದೆ. ವ್ಯಕ್ತಿಗಾಗಿಯೇ ಎಲ್ಲವನ್ನೂ ಒಪ್ಪಿಕೊಳ್ಳುವ ಅರ್ಥವ್ಯವಸ್ಥೆಯು ವ್ಯಕ್ತಿತ್ವವನ್ನು ಖಂಡಿತವಾಗಿ ಸಮಾಪ್ತಿ ಮಾಡಿಸಿಬಿಟ್ಟಿದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯು 'ಮಾನವ'ನ ವಿಕಾಸವನ್ನು ಮಾಡಲು ಅಸಮರ್ಥವಾಗಿದೆ ಎಂಬುದು ಸುಸ್ಪಷ್ಟ.

**ಸಮಾಜವಾದ ಪ್ರತಿಕ್ರಿಯಾವಾದಿ**

ಬಂಡವಾಳಶಾಹಿಯ ವಿರುದ್ಧವಾಗಿ ಸಮಾಜವಾದಿ ಅರ್ಥವ್ಯವಸ್ಥೆಯು ಬಂದಿತು ಆದರೆ, ಅದಕ್ಕೂ ಮಾನವನಿಗೆ ಅವನ ಪ್ರತಿಷ್ಠೆಯನ್ನು ಕೊಡಲಾಗಲಿಲ್ಲ. ಅದು ಬಂಡವಾಳದ ಒಡೆತನವನ್ನು ರಾಜ್ಯದ ಕೈಗೊಪ್ಪಿಸಿ ಸಂತಸಗೊಂಡಿತು.

'ರಾಜ್ಯ'ವು ಅತ್ಯಧಿಕವಾಗಿ ವ್ಯಕ್ತಿ-ನಿರಪೇಕ್ಷಿತ ಸಂಸ್ಥೆಯಾಗಿದೆ. ಅಲ್ಲಿನ ಪ್ರತಿಯೊಂದು ಕೆಲಸವೂ ವಿಧಿ-ವಿಧಾನ ಹಾಗೂ ನಿಯಮಗಳ ಅಧೀನದಲ್ಲಿ ನಡೆಯುತ್ತದೆ. ಸಾಮಾನ್ಯವಾಗಿ ಅಲ್ಲಿ ಸ್ವವಿವೇಕಕ್ಕೆ ಸ್ಥಾನವಿಲ್ಲ. ಒಂದು ವೇಳೆ ಶಾಸನಾಧಿಕಾರಿಗಳಲ್ಲಿ ಅತ್ಯುಚ್ಚ ಕರ್ತವ್ಯ ಭಾವನೆ ಹಾಗೂ ಸಮಾಜನಿಷ್ಠೆ ಇಲ್ಲದಿದ್ದರೆ, ಪಕ್ಷಪಾತ ಹಾಗೂ ಭಷ್ಟಾಚಾರಗಳಿಗೆ ಆಶ್ರಯ ಸಿಗುತ್ತದೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯು ಕೇವಲ ಅರ್ಥ ಪರಾಯಣ ಮಾನವನ ವಿಚಾರ ಮಾಡಿ, ಅನ್ಯಕ್ಷೇತ್ರಗಳಲ್ಲಿ ಅವನನ್ನು ಸ್ವತಂತ್ರವಾಗಿ ಬಿಟ್ಟುಬಿಟ್ಟಿತು. ಹೀಗಾಗಿ ಅದು ಸ್ವಲ್ಪ ಪ್ರಮಾಣದಲ್ಲಿ ತನ್ನ ವ್ಯಕ್ತಿಯ ವಿಕಾಸವನ್ನು ಮಾಡಿತು, ಆದರೆ ಸಮಾಜವಾದಿ ವ್ಯವಸ್ಥೆಯು ಕೇವಲ ಜಾತಿವಾಚಕ ಮಾನವನ ವಿಚಾರವನ್ನು ಮಾತ್ರ ಮಾಡುತ್ತದೆ. ಅದರಲ್ಲಿ ವ್ಯಕ್ತಿಯ ಅಭಿರುಚಿ, ಪ್ರಕೃತಿ ಹಾಗೂ ಗುಣಗಳ ವೈವಿಧ್ಯತೆ ಮತ್ತು ಅದರ ಆಧಾರದಿಂದ ವಿಕಾಸಕ್ಕೆ ಯಾವ ಸ್ಥಾನವೂ ಇಲ್ಲವಾಗಿದೆ.

ಹೇಗೆ 'ಜೇಲ್ ಮ್ಯಾನ್ಯುಅಲ್' ನಲ್ಲಿ ಮಾನವನ ಚಿಂತನೆ ಮಾಡಿ, ಅವನ ಆವಶ್ಯಕತೆಗಳ ಚಿಂತನೆ ಮತ್ತು ಅವನ ಕಾರ್ಯಗಳ ನಿಯಮಗಳನ್ನು ಮಾಡಲಾಗಿದೆಯೋ, ಹಾಗೆಯೇ ಸಮಾಜವಾದಿ ವ್ಯವಸ್ಥೆಯಲ್ಲಿ ಮಾನವನ ಚಿಂತನೆಯನ್ನು ಅತ್ಯಂತ ವ್ಯಕ್ತಿ – ನಿರಪೇಕ್ಷತೆಯ ಆಧಾರದ ಮೇಲೆ ಮಾಡಲಾಗಿದೆ. ಅಲ್ಲಿ ವ್ಯಕ್ತಿಗತ ಸ್ವಾತಂತ್ರ್ಯತೆ ಎಂಬ ಹೆಸರಿನ ಯಾವುದೇ ವಸ್ತು ಇಲ್ಲ.

**ವಾದ ಅಲ್ಲ, ಮಾನವ**

ಬಂಡವಾಳಶಾಹಿ ಮತ್ತು ಸಮಾಜವಾದವೆಂಬ ಎರಡು ಸ್ಥಿತಿಗಳಲ್ಲೂ ಮಾನವನ ನೈಜ ಹಾಗೂ ಪೂರ್ಣ ರೂಪವನ್ನು ಅರಿಯಲಾಗಿಲ್ಲ. ಒಂದರಲ್ಲಿ ಅವನನ್ನು ಸ್ವಾರ್ಥಿ, ಅರ್ಥಪರಾಯಣ, ಸಂಘರ್ಷಶೀಲ ಮತ್ತು ಮತ್ಸ್ಯನ್ಯಾಯ-ಪ್ರವಣ ಪ್ರಾಣಿಯೆಂದು ತಿಳಿಯಲಾಗಿದ್ದು, ಮತ್ತೊಂದರಲ್ಲಿ ವ್ಯವಸ್ಥೆಗಳು ಮತ್ತು ಪರಿಸ್ಥಿತಿಗಳ ದಾಸ, ಅಕಿಂಚನ ಹಾಗೂ ಅನಾಸ್ಥೆಯುಳ್ಳವನು ಎಂದು ತಿಳಿಯಲಾಗಿದೆ. ಶಕ್ತಿಗಳ ಕೇಂದ್ರೀಕರಣವು ಎರಡರಲ್ಲೂ ಅಂಗೀಕೃತವಾಗಿದೆ. ಫಲಸ್ವರೂಪವಾಗಿ ಎರಡರ ಪರಿಣಾಮವು ಅಮಾನವೀಯಕರಣವಾಗುತ್ತಿದೆ.

ಭಗವಂತನ ಸರ್ವಶ್ರೇಷ್ಠ ರಚನೆಯಾದ ಮಾನವ ತನ್ನನ್ನು ಕಳೆದುಕೊಳ್ಳುತ್ತಿದ್ದಾನೆ. ಮಾನವನನ್ನು ಪುನಃ ಅವನ ಸ್ಥಾನದಲ್ಲಿ ನಾವು ಪ್ರತಿಷ್ಠಾಪನೆ ಮಾಡಬೇಕಿದೆ.

ಅವನ ಶ್ರೇಷ್ಠತೆಯ ಅರಿವನ್ನು ಅವನಲ್ಲಿ ಮೂಡಿಸಬೇಕಿದೆ, ಅವನ ಶಕ್ತಿಗಳನ್ನು ಜಾಗೃತಗೊಳಿಸಬೇಕಿದೆ ಹಾಗೂ ದೈವತ್ವದ ಪ್ರಾಪ್ತಿಗಾಗಿ ಅವನನ್ನು ಪುರುಷಾರ್ಥಶೀಲನನ್ನಾಗಿ ಮಾಡಬೇಕಿದೆ. ಇದು ವಿಕೇಂದ್ರಿತ ಅರ್ಥವ್ಯವಸ್ಥೆಯ ಮೂಲಕವೇ ಸಾಧ್ಯ.

ನಮಗೆ ಸಮಾಜವಾದ ಅಥವಾ ಬಂಡವಾಳಶಾಹಿ ಬೇಕಿಲ್ಲ, 'ಮಾನವ'ನ ಉತ್ಕರ್ಷ ಹಾಗೂ ಸುಖ ಬೇಕಿದೆ.

'ಮಾನವ'ನನ್ನು ಪಣಕ್ಕೊಡ್ಡಿ ಇಂದು ಇವೆರಡೂ ಸೆಣೆಸುತ್ತಿವೆ. ಇವೆರಡೂ ಮಾನವನನ್ನು ಅರಿಯಲಿಲ್ಲ ಮತ್ತು ಮಾನವನ ಚಿಂತೆಯೂ ಇವುಗಳಿಗಿಲ್ಲ.

**ನಮ್ಮ ಅರ್ಥವ್ಯವಸ್ಥೆ**

ನಮ್ಮ ಅರ್ಥವ್ಯವಸ್ಥೆಯ ಉದ್ದೇಶಗಳು ಹೀಗಿರಬೇಕು.

೧. ಪ್ರತಿಯೊಬ್ಬ ವ್ಯಕ್ತಿಗೂ ಕನಿಷ್ಟತಮ ಜೀವನ ಸ್ತರದ ಭರವಸೆ ಹಾಗೂ ರಾಷ್ಟ್ರದ ಸುರಕ್ಷಾ–ಸಾಮರ್ಥ್ಯದ ವ್ಯವಸ್ಥೆ.

೨. ಈ ಸ್ತರದ ನಂತರ ಉತ್ತರೋತ್ತರ ಸಮೃದ್ಧಿ, ಅದರಿಂದ ವ್ಯಕ್ತಿ ಮತ್ತು ರಾಷ್ಟ್ರಕ್ಕೆ ಅಂತಹ ಸಾಧನಗಳು ದೊರಕುವಂತಾಗಬೇಕು. ಅವುಗಳ ಸಂಗ್ರಹಣಾ ಸಾಮರ್ಥ್ಯದ ಆಧಾರದಿಂದ ವಿಶ್ವದ ಪ್ರಗತಿಗೆ ಕೊಡುಗೆ ನೀಡುವಂತಾಗಬೇಕು.

೩. ಮೇಲೆ ಹೇಳಿದ ಗುರಿಗಳ ಸಿದ್ಧಿಗಾಗಿ ಪ್ರತಿಯೊಬ್ಬ ವಯಸ್ಕ ಹಾಗೂ ಸ್ವಸ್ಥ ವ್ಯಕ್ತಿಯ ಅಭಿಪ್ರಾಯ ಜೀವನೋಪಾಯಕ್ಕಾಗಿ ಅವಕಾಶಗಳನ್ನು ನೀಡುವುದು ಮತ್ತು ಮಿತವ್ಯಯದ ಜೊತೆಗೆ ಪ್ರಕೃತಿಯ ಸಾಧನಗಳನ್ನು ಉಪಯೋಗ ಮಾಡುವುದು.

೪. ರಾಷ್ಟ್ರದ ಉತ್ಪಾದಕ–ಉತ್ಪಾದನೆಗಳ ಚಿಂತನೆ ಮಾಡಿ ಅನುಕೂಲಕರ ತಾಂತ್ರಿಕತೆಯ ವಿಕಾಸ ಮಾಡುವುದು.

೫. ಈ ವ್ಯವಸ್ಥೆಯು 'ಮಾನವ'ನ ಅವಹೇಳನೆ ಮಾಡದೇ ಅವನ ವಿಕಾಸದ ಸಾಧಕವಾಗಬೇಕು ಮತ್ತು ಸಮಾಜದ ಸಾಂಸ್ಕೃತಿಕ ಹಾಗೂ ಅನನ್ಯ ಜೀವನ–ಮೌಲ್ಯಗಳ ರಕ್ಷಣೆ ಮಾಡಬೇಕು. ಇದು ಲಕ್ಷ್ಮಣ ರೇಖೆಯಾಗಿದ್ದು, ಯಾವುದೇ ಪರಿಸ್ಥಿತಿಯಲ್ಲೂ ಅರ್ಥ ರಚನೆಯು ಇದರ ಅತಿಕ್ರಮಣ ಮಾಡಬಾರದು.

೬. ವಿಭಿನ್ನ ಉದ್ಯಮಗಳು ಮುಂತಾದವುಗಳಲ್ಲಿ ರಾಜ್ಯ, ವ್ಯಕ್ತಿ ಹಾಗೂ ಇತರೆ ಸಂಸ್ಥೆಗಳ ಒಡೆತನದ ನಿರ್ಣಯವು ವ್ಯಾವಹಾರಿಕ ಆಧಾರದ ಮೇಲೆ ಆಗಿರಬೇಕು.

ಈ ಕೆಲವು ಸ್ಥೂಲ ವಿಷಯಗಳ ಬಗ್ಗೆ ಚಿಂತನೆ ಮಾಡಿ ನಾವು ಅರ್ಥ–ರಚನೆ ಮಾಡಬೇಕಿದೆ.

ಇಂದಿನ ಪರಿಸ್ಥಿತಿಯಲ್ಲಿ ಒಂದು ವೇಳೆ ನಮ್ಮ ಅರ್ಥವ್ಯವಸ್ಥೆಯ ದಿಕ್ಕನ್ನು ಪರಿವರ್ತನೆಗೊಳಿಸುವ ವರ್ಣನೆಯನ್ನು ಯಾವುದೇ ಎರಡು ಶಬ್ದಗಳ ಪ್ರಯೋಗದ ಮೂಲಕ ಮಾಡಬೇಕೆಂದರೆ, ಅವು 'ವಿಕೇಂದ್ರೀಕರಣ' ಮತ್ತು ಸ್ವದೇಶಿ. ಇಂದು ನಾವು ಮಾಡುತ್ತಿರುವ ರಚನೆಯಲ್ಲಿ 'ಕೇಂದ್ರೀಕರಣ'ವು ಗೊತ್ತಿದ್ದೋ, ಗೊತ್ತಿಲ್ಲದೆಯೋ ನಮ್ಮ ಶ್ರದ್ಧೆಯ ವಿಷಯವಾಗಿದೆ. ಕೇಂದ್ರೀಕರಣವೇ ಆರ್ಥಿಕವೆಂಬುದು ನಮಗೆ ಮಾನ್ಯವಾಗಿಬಿಟ್ಟಿದೆ. ಆದ್ದರಿಂದಲೇ ಅದರ ದುಷ್ಪರಿಣಾಮಗಳ ಚಿಂತೆ ಮಾಡದೇ, ಅಥವಾ ಗೊತ್ತಿದ್ದೂ ವಿವಶತೆಯಿಂದ ಅದರ ಕಡೆಗೆ ನಾವು ಮುನ್ನುಗ್ಗುತ್ತಿದ್ದೇವೆ. 'ಸ್ವದೇಶಿ'ಯದ್ದೂ ಇದೇ ಸ್ಥಿತಿಯಾಗಿದೆ. ಸ್ವದೇಶಿಯ ಕಲ್ಪನೆಯು ಹಿಂದಿನ ಯುಗದ ಹಾಗೂ ಪ್ರಗತಿ ವಿರೋಧನ ದ್ಯೋತಕವಾಗಿದೆ ಎಂದು ಭಾವಿಸಿ ವಿದೇಶದ ಪ್ರತಿಯೊಂದು ವಸ್ತುವನ್ನು ನಾವು ತೀವ್ರ ಬಯಕೆಯಿಂದ ಕೊಳ್ಳುತ್ತಿದ್ದೇವೆ. ವಿಚಾರ, ವ್ಯವಸ್ಥೆ, ಪದ್ಧತಿ, ಬಂಡವಾಳ, ಉತ್ಪಾದನಾ ಪ್ರಣಾಳಿಕೆ, ತಾಂತ್ರಿಕತೆ ಹಾಗೂ ಉಪಯೋಗದ ಮಾನದಂಡ–ಎಲ್ಲ ಕ್ಷೇತ್ರಗಳಲ್ಲೂ ನಾವು ವಿದೇಶಗಳನ್ನು ಆಶ್ರಮಿಸಿದ್ದೇವೆ. ಇದು ಪ್ರಗತಿಯ ಪಥವಲ್ಲ. ಇದರಿಂದ ವಿಕಾಸವಾಗುವುದಿಲ್ಲ. ನಮ್ಮ 'ಸ್ವ'ನ್ನು ವಿಸ್ಮೃತಗೊಳಿಸಿ ನಾವು ಪರತಂತ್ರರಾಗಿಬಿಡುತ್ತೇವೆ. 'ಸ್ವದೇಶಿ'ಯ ಭಾವನಾತ್ಮಕ ರೂಪವನ್ನು ಅರಿತು ಅದರ ಸೃಜನೆಯ ಆಧಾರ ಹಾಗೂ ಆಶ್ರಯವನ್ನು ನಾವು ಕಲ್ಪಿಸಬೇಕಿದೆ.

**ನವ–ನಿರ್ಮಾಣ ಮಾಡಬೇಕಿದೆ**

ಸಮಯಾಭಾವದಿಂದ ನಾನು ಅರ್ಥ–ವ್ಯವಸ್ಥೆಯ ಸಾಂಸ್ಥಿಕ ಮಗ್ಗಲುಗಳ ಚರ್ಚೆ ಮಾಡಿಲ್ಲ. ಆದರೆ ಅನೇಕ ಹಳೆಯ ಸಂಸ್ಥೆಗಳು ಬದಲಾಗಿ, ಹೊಸ ಸಂಸ್ಥೆಗಳು ಹುಟ್ಟಿಕೊಳ್ಳುತ್ತವೆ ಎಂಬುದು ಸುಸ್ಪಷ್ಟ. ಈ ಪರಿವರ್ತನೆಯಿಂದಾಗಿ ಯಾವ ಹಳೆಯ ಸಂಸ್ಥೆಗಳಲ್ಲಿ ಸ್ವಾರ್ಥ ತುಂಬಿದೆಯೋ, ಅವುಗಳಿಗೆ ಆಘಾತವಾಗಬಹುದು. ಕೆಲವರು ಪ್ರಕೃತಿದತ್ತವಾಗಿಯೇ ಅಪರಿವರ್ತನವಾದಿಗಳಾಗಿದ್ದಾರೆ, ಅವರಿಗೂ ಕೂಡಾ ಸುಧಾರಣೆ ಹಾಗೂ ಸೃಜನಶೀಲತೆಯಿಂದ ಕೂಡಿದ ಇಂತಹ ಪ್ರಯತ್ನಗಳಿಂದ ಕೊಂಚ ಕಷ್ಟವಾಗಬಹುದು. ಆದರೆ, ಔಷಧವಿಲ್ಲದೇ ರೋಗವು ವಾಸಿಯಾಗುವುದಿಲ್ಲ ಹಾಗೂ ವ್ಯಾಯಾಮದ ಕಷ್ಟವನ್ನು ಪಡದೇ ಶಕ್ತಿಯು ಬರುವುದಿಲ್ಲ. ಆದ್ದರಿಂದ ಯಥಾಸ್ಥಿತಿಯ ಮೋಹವನ್ನು ಬಿಟ್ಟು ನಾವು ನವ–ನಿರ್ಮಾಣ ಮಾಡಬೇಕಿದೆ. ನಮ್ಮ ರಚನೆಯಲ್ಲಿ ಪ್ರಾಚೀನದ ಬಗ್ಗೆ ಅಶ್ರದ್ಧೆ ಮತ್ತು ಅವಜ್ಞೆಯ ಭಾವನೆ ಇರಬಾರದು. ಆದರೆ ಅದಕ್ಕೆ ಅಂಟಿಕೊಳ್ಳುವ ಆವಶ್ಯಕತೆಯೂ ಇಲ್ಲ. ಪರಿವರ್ತನೆಯ ದಿಕ್ಕುಗಳಾವುವು ಎಂಬುದರ ಬಗ್ಗೆ ನಾವು ಮೇಲೆ ಚಿಂತನೆ ಮಾಡಿದ್ದೇವೆ.

**ಉಪಸಂಹಾರ**

ನಾವು 'ಮಾನವೀಯತೆ'ಯ ಸಮಗ್ರ ಹಾಗೂ ಸಂಕಲಿತ ರೂಪದ ಸ್ವಲ್ಪ ಗಂಭೀರ ಚಿಂತನೆಯನ್ನು ಮಾಡಿದ್ದೇವೆ. ಇದರ ಆಧಾರದ ಮೇಲೆ ನಾವು ನಡೆದರೆ ನಾವು ಭಾರತೀಯ ಸಂಸ್ಕೃತಿಯ ಶಾಶ್ವತ ಮೌಲ್ಯಗಳ ಜೊತೆಗೆ ರಾಷ್ಟ್ರೀಯತೆ, ಪ್ರಜಾತಂತ್ರ, ಸಮತೆ ಮತ್ತು ವಿಶ್ವ–ಐಕ್ಯತೆಯ ಆದರ್ಶಗಳನ್ನು ಸಮನ್ವಯ ರೂಪದಿಂದ ಇಡಬಹುದಾಗಿದೆ. ಇವುಗಳ ಮಧ್ಯೆ ಇರುವ ವಿರೋಧಗಳು ನಷ್ಟವಾಗಿ ಅವು ಪರಸ್ಪರ ಪೂರಕವಾಗುತ್ತವೆ. ಮಾನವನು ತನ್ನ ಕಳೆದುಹೋದ ಪ್ರತಿಷ್ಠೆ ಹಾಗೂ ಜೀವನೋದ್ದೇಶಗಳನ್ನು ಪಡೆದುಕೊಳ್ಳಬಹುದು.

* * * * *

# ಅಂತ್ಯೋದಯ

ಆರ್ಥಿಕ ಯೋಜನೆಗಳು ಹಾಗೂ ಪ್ರಗತಿಯ ಅಳತೆಯು ಸಮಾಜದ ಮೇಲಿನ ಮೆಟ್ಟಲನ್ನೇರಿದ ವ್ಯಕ್ತಿಯಿಂದಲ್ಲ, ಆದರೆ ಕೆಳಸ್ತರದಲ್ಲಿರುವ ವ್ಯಕ್ತಿಯಿಂದ ಸಾಧ್ಯ. ಮಾನವನ ಯಾವುದೇ ರೀತಿಯ ಅಧಿಕಾರದ ಬಳಕೆ ಮಾಡಲಾಗದಂತಹ ಕೋಟ್ಯಾಂತರ ಮಾನವರು ಇಂದು ದೇಶದಲ್ಲಿದ್ದಾರೆ. ಶಾಸನದ ನಿಯಮಗಳು ಮತ್ತು ವ್ಯವಸ್ಥೆಗಳು, ಯೋಜನೆಗಳು ಮತ್ತು ನೀತಿಗಳು, ಪ್ರಶಾಸನದ ವ್ಯವಹಾರ ಮತ್ತು ಭಾವನೆಗಳು ಇವರನ್ನು ತನ್ನ ಪರಿಧಿಯೊಳಗೆ ಸೇರಿಸಿಕೊಂಡು ಹೋಗುವುದಿಲ್ಲ, ಅನ್ಯಥಾ ಅವರನ್ನು ಮಾರ್ಗ ಮಧ್ಯದ ಅಡಚಣೆಯೆಂದೇ ಭಾವಿಸಲಾಗುತ್ತದೆ. ಕೊಳಕಾದ, ಅವಿದ್ಯಾವಂತ ಆ ಮೂರ್ಖ ಜನರೇ ನಮ್ಮ ನಾರಾಯಣರು ಎಂಬುದು ನಮ್ಮ ಭಾವನೆ ಹಾಗೂ ಸಿದ್ಧಾಂತವಾಗಿದೆ. ನಾವು ಇವರ ಪೂಜೆಯನ್ನು ಮಾಡಬೇಕಿದೆ. ಇದು ನಮ್ಮ ಸಾಮಾಜಿಕ ಹಾಗೂ ಮಾನವ ಧರ್ಮವಾಗಿದೆ. ಎಂದು ಇವರಿಗೆ ಸುದೃಢ, ಸುಂದರ, ಸೂಕ್ಷ್ಮ ಮನೆಗಳನ್ನು ನಿರ್ಮಿಸಿಕೊಡುವೆವೋ, ಎಂದು ನಾವು ಇವರ ಕೈಗಳು ಮತ್ತು ಕಾಲುಗಳ ಬಿರುಕುಗಳನ್ನು ತುಂಬುವೆವೋ ಮತ್ತು ಎಂದು ನಾವು ಇವರಿಗೆ ಉದ್ಯೋಗ ಮತ್ತು ನೌಕರಿಯ ಶಿಕ್ಷಣವನ್ನು ಕೊಟ್ಟು ಇವರ ವರಮಾನವನ್ನು ಹೆಚ್ಚಿಸುವೆವೋ, ಅಂದು ನಮ್ಮ ಭ್ರಾತೃ ಭಾವನೆಯು ವ್ಯಕ್ತವಾಗುತ್ತದೆ. ಗ್ರಾಮಗಳಲ್ಲಿ ಎಲ್ಲಿ ಸಮಯವು ಅಚಲವಾಗಿ ನಿಂತಿದೆಯೋ, ಎಲ್ಲಿ ತಂದೆ-ತಾಯಂದಿರು ತಮ್ಮ ಮಕ್ಕಳ ಭವಿಷ್ಯವನ್ನು ರೂಪಿಸಲು ಅಸಮರ್ಥರಾಗಿರುವರೋ, ಅಲ್ಲಿ ನಾವು ಆಶಾಕಿರಣ ಹಾಗೂ ಪುರುಷಾರ್ಥದ ಸಂದೇಶವನ್ನು ಎಲ್ಲಿಯವರೆಗೆ ತಲುಪಿಸಲಾಗುವುದಿಲ್ಲವೋ ಅಲ್ಲಿಯವರೆಗೆ ನಾವು ರಾಷ್ಟ್ರದ ಚೈತನ್ಯವನ್ನು ಜಾಗೃತಗೊಳಿಸಲಾರೆವು. ನಮ್ಮ ಶ್ರದ್ಧೆಯ ಕೇಂದ್ರ, ಆರಾಧ್ಯ ಮತ್ತು ಉಪಾಸ್ಯ, ನಮ್ಮ ಪರಾಕ್ರಮ ಮತ್ತು ಪ್ರಯತ್ನಗಳ ಉಪಕರಣ ಹಾಗೂ ಗಳಿಕೆಗಳ ಮಾನದಂಡವು ಆ ಮಾನವನಾಗಿದ್ದಾನೆ. ಇಂದು ಅವನು ಶಬ್ದಶಃ ಅನಿಕೇತನ ಮತ್ತು ಅಪರಿಗ್ರಹಿಯಾಗಿದ್ದಾನೆ.

– ಪಂಡಿತ ದೀನ್ ದಯಾಳ್ ಉಪಾಧ್ಯಾಯ

# ಅಖಂಡ ಭಾರತವನ್ನು ಬಿಟ್ಟು ನಮ್ಮ ಯಾವುದೇ ನಿಯತಿ ಇಲ್ಲ

ನಾವು ಅಖಂಡ ಭಾರತದ ಧ್ಯೇಯವನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಅಖಂಡ ಭಾರತವು ದೇಶದ ಭೌಗೋಳಿಕ ಏಕತೆಯ ಪರಿಚಾಯಕವಷ್ಟೇ ಅಲ್ಲ, ಅನೇಕತೆಯಲ್ಲಿ ಏಕತೆಯ ದರ್ಶನವನ್ನು ಮಾಡಿಸುವ ಜೀವನದ ಭಾರತೀಯ ದೃಷ್ಟಿಕೋನದ ದ್ಯೋತಕವಾಗಿದೆ. ಪರಿಸ್ಥಿತಿ ವಿಶೇಷದಿಂದ ಜನಪ್ರಿಯವಾದ ಕಾರಣದಿಂದ ಅಖಂಡ ಭಾರತವು, ನಾವು ಸ್ವೀಕಾರ ಮಾಡಿದಂತಹ ಯಾವುದೇ ರಾಜನೈತಿಕ ಘೋಷಣೆಯಲ್ಲ, ಆದರೆ ಇದು ನಮ್ಮ ಸಂಪೂರ್ಣ ದರ್ಶನದ ಮೂಲಾಧಾರವಾಗಿದೆ.

೧೫ನೇ ಆಗಸ್ಟ್, ೧೯೪೭ ರಂದು ಭಾರತದ ಏಕತೆಯು ಖಂಡಿತವಾದ್ದರಿಂದ ಹಾಗೂ ಅಪಾರ ಧನಹಾನಿಯಾದ ಕಾರಣದಿಂದ ಜನರಿಗೆ ಅಖಂಡತೆಯ ಅಭಾವದ ಪ್ರತ್ಯಕ್ಷ ಪರಿಣಾಮವನ್ನು ನೋಡಬೇಕಾಯಿತು. ಆದ್ದರಿಂದಲೇ ಇಂದು ಭಾರತಕ್ಕೆ ಪುನಃ ಒಂದುಗೂಡಿಸುವ ಹಸಿವು ಪ್ರಬಲವಾಗಿದೆ. ಆದರೆ ಯುಗ ಯುಗಗಳಿಂದ ಹರಿದು ಬರುತ್ತಿರುವ ನಮ್ಮ ಜೀವನಧಾರೆಯ ಅಂತಃಪ್ರವಾಹವನ್ನು ಒಂದು ವೇಳೆ ನಾವು ನೋಡುವ ಪ್ರಯತ್ನ ಮಾಡಿದರೆ, ನಮ್ಮ ರಾಷ್ಟ್ರೀಯ ಚೈತನ್ಯವು ಯಾವಾಗಲೂ ಅಖಂಡತೆಗಾಗಿ ಪ್ರಯತ್ನಶೀಲವಾಗಿದೆ ಎಂಬುದು ಗೋಚರವಾಗುತ್ತದೆ. ಅಂತೆಯೆ ಈ ಪ್ರಯತ್ನದಲ್ಲಿ ನಾವು ಬಹಳಷ್ಟು ಸಫಲರೂ ಆಗಿದ್ದೇವೆ.

> ಉತ್ತರಂ ಯತ್ ಸಮುದ್ರಸ್ಯ।
> ಹಿಮಾದ್ರೇಶ್ಚೈವ ದಕ್ಷಿಣಂ।
> ವರ್ಷಂ ತದ್ ಭಾರತಂ ನಾಮ
> ಭಾರತೀ ಯತ್ರ ಸಂತತಿಃ ॥

ನಮ್ಮ ಪುರಾಣಕಾರರು ಈ ರೂಪದಲ್ಲಿ ಭಾರತ ವರ್ಷದ ವ್ಯಾಖ್ಯೆಯನ್ನೇನು ಮಾಡಿದ್ದಾರೋ ಅದು ಕೇವಲ ಭೂಮಿಪರವಲ್ಲ ಆದರೆ, ಜನಪರ ಮತ್ತು ಸಂಸ್ಕೃತಿಪರವಾಗಿತ್ತು. ನಾವು ಭೂಮಿ, ಜನರು ಮತ್ತು ಸಂಸ್ಕೃತಿಯನ್ನು ಒಂದರಿಂದ ಇನ್ನೊಂದನ್ನು ಭಿನ್ನವನ್ನಾಗಿ ಮಾಡಿಲ್ಲ, ಆದರೆ ಅವುಗಳ ಏಕಾತ್ಮತೆಯ ಅನುಭೂತಿಯ ಮೂಲಕ ರಾಷ್ಟ್ರದ ಸಾಕ್ಷಾತ್ಕಾರವನ್ನು ಮಾಡಿದ್ದೇವೆ. ರಾಷ್ಟ್ರೀಯ ಹಾಗೂ ಏಕಾತ್ಮಕ

ಸಂಸ್ಕೃತಿಯ ಆಧಾರಭೂತ ಮಾನ್ಯತೆಗಳು 'ಅಖಂಡ ಭಾರತ' ಶಬ್ದದೊಳಗೆ ಸಮಾವಿಷ್ಟವಾಗಿವೆ. ಅಟಕದಿಂದ ಕಟಕ, ಕಚ್ಛ್‌ನಿಂದ ಕಾಮರೂಪ ಹಾಗೂ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸಂಪೂರ್ಣ ಭೂಮಿಯ ಕಣ ಕಣವನ್ನು ಪುಣ್ಯ ಹಾಗೂ ಪವಿತ್ರವಷ್ಟೇ ಅಲ್ಲದೆ ಆತ್ಮೀಯವೆಂದುಕೊಳ್ಳುವ ಭಾವನೆಯು ಅಖಂಡ ಭಾರತದಲ್ಲಿ ಸ್ವೀಕೃತವಾಗಿದೆ.

ಈ ಪುಣ್ಯ ಭೂಮಿಯ ಮೇಲೆ ಅನಾದಿ ಕಾಲದಿಂದ ಜನಿಸಿದ ಹಾಗೂ ಈಗಿರುವ ಪ್ರಜೆಗಳಲ್ಲಿ ಸ್ಥಾನ ಹಾಗೂ ಕಾಲದ ಕ್ರಮಾನುಸಾರ ಮೇಲೆ ಹೇಳಿದ ಭಿನ್ನತೆಗಳು ಎಷ್ಟಿದ್ದರೂ, 'ಸ್ವರಾಜ್ಯ ಪ್ರಾಪ್ತಿ'ಯು ಆ ಅನುಭೂತಿಯಲ್ಲಿ ಸಹಾಯಕವಾಗಿರಬೇಕಿತ್ತು. ಅದಾಗಲಿಲ್ಲ, ಆದ್ದರಿಂದಲೇ ನಾವು ಭಿನ್ನರಾಗಿದ್ದೇವೆ. ಇಂದು ನಮ್ಮ ಜೀವನದಲ್ಲಿ ವಿರೋಧಿ ಭಾವನೆಗಳ ಸಂಘರ್ಷ ಆತ್ಮೀಯತೆ ಹಾಗೂ ಅದರಿಂದ ಹುಟ್ಟಿದ ಪಾರಸ್ಪರಿಕ ಶ್ರದ್ಧೆ ಮತ್ತು ವಿಶ್ವಾಸದ ಭಾವನೆ ಇರುತ್ತದೆ. ಅದು ಅವರ ಸುಖ–ದುಃಖಗಳಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ. ಈ ಅಖಂಡ ಭಾರತಮಾತೆಯ ಗರ್ಭದಿಂದ ಜನಿಸಿದ ಸುಪುತ್ರರು ತಮ್ಮ ಕ್ರಿಯಾ–ಕಲಾಪಗಳಿಂದ ವಿವಿಧ ಕ್ಷೇತ್ರಗಳಲ್ಲಿ ಏನೇನು ನಿರ್ಮಾಣ ಮಾಡಿದ್ದಾರೋ, ಅದರಲ್ಲೂ ಸಹ ಏಕತೆಯ ಸೂತ್ರವಿದೆ. ನಮ್ಮ ಧರ್ಮ–ನೀತಿ, ಅರ್ಥ–ನೀತಿ ಮತ್ತು ರಾಜನೀತಿ, ನಮ್ಮ ಸಾಹಿತ್ಯ, ಕಲೆ ಮತ್ತು ದರ್ಶನ, ನಮ್ಮ ಇತಿಹಾಸ, ಪುರಾಣ ಮತ್ತು ಉಪನಿಷತ್ತು, ನಮ್ಮ ಸ್ಮೃತಿಗಳು ಹಾಗೂ ವಿಧಾನಗಳು ಎಲ್ಲದರಲ್ಲೂ ದೇವಪೂಜೆಯ ವಿಭಿನ್ನ ವಿಧಾನಗಳ ಅನುಸಾರವಾಗಿ ಬಾಹ್ಯ ಭಿನ್ನತೆಗಳಿದ್ದರೂ, ಭಕ್ತನ ಭಾವನೆ ಒಂದೇ ಆಗಿರುತ್ತದೆ. ಅಖಂಡ ಭಾರತದ ಪುರಸ್ಕೃತನಿಗೆ ನಮ್ಮ ಸಂಸ್ಕೃತಿಯ ಏಕತೆಯ ದರ್ಶನವು ಆವಶ್ಯಕವಾಗಿದೆ.

ಸಂಪೂರ್ಣ ಜೀವನದ ಏಕತೆಯ ಅನುಭೂತಿ ಹಾಗೂ ಆ ಅನುಭೂತಿಯ ಮಾರ್ಗದಲ್ಲಿ ಬರುವ ಅಡೆ–ತಡೆಗಳನ್ನು ದೂರಮಾಡುವ ರಚನಾತ್ಮಕ ಪ್ರಯತ್ನಗಳ ಹೆಸರೇ ಇತಿಹಾಸವಾಗಿದೆ. ಗುಲಾಮಗಿರಿಯು ನಮ್ಮ ಐಕ್ಯತಾನುಭೂತಿಗೆ ಎಲ್ಲಕ್ಕಿಂತ ದೊಡ್ಡ ಅಡ್ಡಿಯಾಗಿತ್ತು. ಫಲಸ್ವರೂಪವಾಗಿ ನಾವು ಅದರ ವಿರುದ್ಧ ಸೆಣೆಸಿದೆವು. ಆದರೆ, ಪ್ರತಿಯೊಬ್ಬ ಅಖಂಡ ಭಾರತದ ಪೂಜಾರಿಯೂ ಅವರ ಸಂಪೂರ್ಣ ಜೀವನದ ಮೂಲಭೂತ ಐಕ್ಯತೆಯ ದರ್ಶನವನ್ನು ಮಾಡುತ್ತಾನೆ. ಆದುದರಿಂದ ಎಲ್ಲ ರಾಷ್ಟ್ರವಾದಿಗಳ ಸಂಬಂಧವಾಗಿ ಅವನ ಮನಸ್ಸಿನಲ್ಲಿ ಇರುವುದು ನಮ್ಮ ರಾಷ್ಟ್ರದ ಪ್ರಕೃತಿಯೇ 'ಅಖಂಡ ಭಾರತ'. ಖಂಡಿತ ಭಾರತವು ವಿಕೃತಿ. ಇಂದು ನಾವು ವಿಕೃತಿಯಲ್ಲಿ ಆನಂದಾನುಭೂತಿಯ ಮೋಸಕ್ಕೆ ಒಳಗಾಗುವುದನ್ನು ಬಯಸುತ್ತೇವೆ ಆದರೆ, ಆನಂದ ಸಿಗುವುದಿಲ್ಲ. ಒಂದುವೇಳೆ ನಾವು ಸತ್ಯವನ್ನು

ಸ್ವೀಕರಿಸಿದರೆ, ನಮ್ಮ ಅಂತರ್ ಸಂಘರ್ಷವು ದೂರಾಗಿ ನಮ್ಮ ಪ್ರಯತ್ನಗಳಲ್ಲಿ ಐಕ್ಯತೆ ಹಾಗೂ ಶಕ್ತಿ ಬರಬಹುದು.

**ಭಾರತವು ಅಖಂಡವಾಗುವುದು**

ಅಖಂಡ ಭಾರತವು ಸಿದ್ಧಿಸುವುದೋ, ಇಲ್ಲವೋ ಎಂಬ ಅನುಮಾನವು ಅನೇಕ ಜನರ ಮನಸ್ಸಿನಲ್ಲಿ ಮೂಡಬಹುದು. ಅವರ ಅನುಮಾನವು ಪರಾಭವ ಮನೋವೃತ್ತಿಯ ಪರಿಣಾಮವಾಗಿದೆ. ಕಳೆದ ಅರ್ಧ ಶತಮಾನದ ಇತಿಹಾಸ ಹಾಗೂ ನಮ್ಮ ಪ್ರಯತ್ನಗಳ ಅಸಫಲತೆಯಿಂದ ಅವರು ಎಷ್ಟೊಂದು ಕುಸಿದುಹೋಗಿದ್ದಾರೆ ಎಂದರೆ, ಈಗ ಅವರು ಎದ್ದು ನಿಲ್ಲಲು ಶಕ್ತಿಯೇ ಇಲ್ಲವಾಗಿದೆ. ೧೯೪೭ರಲ್ಲಿ ಅವರು ನಮ್ಮ ಐಕ್ಯತೆಯ ಪ್ರಯತ್ನಗಳ ಪರಾಜಯವನ್ನು ಮತ್ತು ಪೃಥಕ್ಕರಣವಾದೀ ನೀತಿಯ ವಿಜಯವನ್ನು ನೋಡಿದ್ದರು. ಅವರ ಧೈರ್ಯ ಕುಸಿದಿತ್ತು, ಮತ್ತು ಅವರು ಆ ಪರಾಜಯವನ್ನೇ ಸ್ಥಾಯಿಯನ್ನಾಗಿರಿಸಲು ಬಯಸುತ್ತಾರೆ ಆದರೆ, ಇದು ಸಂಭವವಲ್ಲ. ಅವರು ರಾಷ್ಟ್ರದ ಪ್ರಕೃತಿಯ ವಿರುದ್ಧವಾಗಿ ನಡೆಯಲು ಸಾಧ್ಯವಿಲ್ಲ. ವಿರುದ್ಧವಾಗಿ ನಡೆಯುವುದರ ಪರಿಣಾಮ ಆತ್ಮಹತ್ಯೆಯಾಗುವುದು. ಕಳೆದ ವರ್ಷಗಳ ಕಷ್ಟ–ಪರಂಪರೆಗೆ ಇದೇ ಕಾರಣವಾಗಿದೆ.

೧೯೪೭ರ ಪರಾಜಯವು ಭಾರತೀಯ ಐಕ್ಯತಾನುಭೂತಿಯ ಪರಾಜಯವಲ್ಲ ಆದರೆ, ರಾಷ್ಟ್ರೀಯ ಐಕ್ಯತೆಯ ಹೆಸರಿನಲ್ಲಿ ಮಾಡಲಾದ ಪ್ರಯತ್ನಗಳ ಪರಾಜಯವಾಗಿದೆ. ನಮ್ಮ ಉದ್ದೇಶ್ಯ ತಪ್ಪಾಗಿತ್ತೆಂದು ನಾವು ಅಸಫಲರಾಗಲಿಲ್ಲ ಆದರೆ, ಆರಿಸಿದ ಮಾರ್ಗವು ತಪ್ಪಾಗಿತ್ತು. ದೋಷಯುಕ್ತ ಸಾಧನಗಳ ಕಾರಣದಿಂದಾಗಿ ಸಾಧ್ಯದ ಸಿದ್ಧಿಯಾಗದಿದ್ದಲ್ಲಿ, ಸಾಧ್ಯವನ್ನು ತ್ಯಾಜ್ಯವೆಂದಾಗಲೀ ಇಲ್ಲವೆ ಅವ್ಯಾವಹಾರಿಕವೆಂದಾಗಲೀ ಪರಿಗಣಿಸಲಾಗುವುದಿಲ್ಲ. ಯಾರು ದೋಷಯುಕ್ತ ಸಾಧನಗಳನ್ನು ತಮ್ಮದಾಗಿಸಿಕೊಂಡರೋ ಹಾಗೂ ಅವುಗಳನ್ನು ಇಂದಿಗೂ ಬಿಡಲು ಬಯಸುವುದಿಲ್ಲವೋ ಅವರಿಗೆ ಇಂದಿಗೂ ಅಖಂಡ ಭಾರತದ ವ್ಯಾವಹಾರಿಕತೆಯ ಬಗ್ಗೆ ಸಂದೇಹ ಹುಟ್ಟುತ್ತದೆ.

ಮುಸ್ಲಿಂ ಸಂಪ್ರದಾಯದ ಪ್ರತ್ಯೇಕತಾವಾದೀ ಹಾಗೂ ರಾಷ್ಟ್ರೀಯ ಮನೋವೃತ್ತಿಯೇ ಅಖಂಡ ಭಾರತದ ಮಾರ್ಗದಲ್ಲಿ ಎಲ್ಲಕ್ಕಿಂತ ದೊಡ್ಡ ವಿಘ್ನವಾಗಿದೆ. ಪಾಕಿಸ್ತಾನದ ಸೃಷ್ಟಿಯು ಆ ಮನೋವೃತ್ತಿಯ ವಿಜಯವಾಗಿದೆ. ಮುಸಲ್ಮಾನ ತನ್ನ ನೀತಿಯಲ್ಲಿ ಪರಿವರ್ತನೆಯನ್ನು ಮಾಡುವುದಿಲ್ಲವೆಂದುಕೊಂಡು ಅಖಂಡ ಭಾರತದ ಸಂಬಂಧದಲ್ಲಿ ಶಂಕಾಶೀಲರು ಮುನ್ನಡೆಯುತ್ತಾರೆ. ಒಂದು ವೇಳೆ ಅವರ ದೃಡ ವಿಚಾರವು ಸತ್ಯವಾದಲ್ಲಿ ಭಾರತದ ೬ ಕೋಟಿ (ಲೇಖನ ಬರೆಯುವ ಸಮಯದಲ್ಲಿ) ಮುಸಲ್ಮಾನರನ್ನು ನಿಯಂತ್ರಿಸುವುದು ರಾಷ್ಟ್ರ ಹಿತಕ್ಕೆ ದೊಡ್ಡ ತೊಂದರೆಯಾಗಬಹುದು.

ಮುಸಲ್ಮಾನರನ್ನು ಭಾರತದಿಂದ ಹೊಡೆದೋಡಿಸಿಬಿಡಬಹುದೆಂದು ಯಾರೇ ಕಾಂಗ್ರೆಸ್ಸಿಗೆ ಹೇಳಲು ಸಾಧ್ಯವೇ? ಇಲ್ಲವೆಂದಾದರೆ, ಅವರು ಭಾರತೀಯ ಜೀವನದೊಂದಿಗೆ ಸಾಮರಸ್ಯ ಮಾಡಿಕೊಳ್ಳಬೇಕಾಗುವುದು. ಒಂದು ವೇಳೆ ಭೌಗೋಳಿಕ ದೃಷ್ಟಿಯಿಂದ ತುಂಡರಿಸಿದ ಭಾರತದಲ್ಲಿ ಈ ಅನುಭೂತಿಯು ಸಂಭವವಾದಲ್ಲಿ ಉಳಿದ ಭೂ–ಭಾಗಗಳಿಗೆ ಸಿಗಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಐಕ್ಯತೆಯ ಅನುಭೂತಿಯ ಕೊರತೆಯಿಂದ ಒಂದು ವೇಳೆ ದೇಶವು ತುಂಡರಿಸಲ್ಪಟ್ಟಿದ್ದರೆ, ಅದರ ಪ್ರಭಾವದಿಂದ ಅದು ಅಖಂಡವಾಗಬಹುದು. ಅದಕ್ಕಾಗಿ ನಾವು ಪ್ರಯತ್ನಿಸೋಣ.

**ರಾಷ್ಟ್ರೀಯತೆ ಮತ್ತು ಅರಾಷ್ಟ್ರೀಯತೆಯ ಸಮನ್ವಯ ಸಂಭವವಿಲ್ಲ**

ನೀತಿ ಬದಲಾಗಬೇಕಿದೆ. ತಪ್ಪು ಆಧಾರದ ಮೇಲೆ ಕಾಂಗ್ರೆಸ್ ಹಿಂದೂ ಮುಸ್ಲಿಂ ಐಕ್ಯತೆಯ ಪ್ರಯತ್ನವನ್ನು ಮಾಡಿತು. ಅದು ರಾಷ್ಟ್ರದ ಮತ್ತು ಸಂಸ್ಕೃತಿಯ, ನೈಜವಾದ ಹಾಗೂ ಅನಾದಿ ಕಾಲದಿಂದ ನಡೆದು ಬರುತ್ತಿರುವ ಐಕ್ಯತೆಯ ಸಾಕ್ಷಾತ್ಕಾರ ಮಾಡಲು ಮತ್ತು ಎಲ್ಲರಿಗೂ ಅದರ ಸಾಕ್ಷಾತ್ಕಾರ ಮಾಡಿಸುವ ಬದಲಾಗಿ, ಅನೇಕತೆಯ ಸಾಕ್ಷಾತ್ಕಾರವನ್ನೇ ಮಾಡಿತು ಹಾಗೂ ಅನೇಕತೆಯನ್ನು ಕೃತ್ರಿಮ ಮತ್ತು ರಾಜನೈತಿಕ ಚೌಕಾಸಿಯ ಆಧಾರದ ಮೇಲೆ ಒಂದುಗೂಡಿಸುವ ಪ್ರಯತ್ನ ಮಾಡಿತು. ಭಾಷೆ, ನಡೆ–ನುಡಿ, ರೀತಿ–ನೀತಿ ಎಲ್ಲ ರಚನೆಗಳನ್ನೂ ಕೃತ್ರಿಮ ರೀತಿಯಿಂದ ಮಾಡಿತು. ಈ ಪ್ರಯತ್ನಗಳೆಂದೂ ಸಫಲವಾಗುವುದಿಲ್ಲ ರಾಷ್ಟ್ರೀಯತೆ ಹಾಗೂ ಅರಾಷ್ಟ್ರೀಯತೆಯ ಸಮನ್ವಯ ಸಂಭವವಿಲ್ಲ.

ಒಂದು ವೇಳೆ ಏಕತೆಯನ್ನು ಬಯಸಿದರೆ, ನಾವು ಭಾರತೀಯ ರಾಷ್ಟ್ರೀಯತೆಯಲ್ಲಿ ಯಾವ ಹಿಂದೂ ರಾಷ್ಟ್ರೀಯತೆ ಇದೆಯೋ ಹಾಗೂ ಭಾರತೀಯ ಸಂಸ್ಕೃತಿಯಲ್ಲಿ ಯಾವ ಹಿಂದೂ ಸಂಸ್ಕೃತಿ ಇದೆಯೋ, ಅದರ ದರ್ಶನ ಮಾಡಬೇಕಿದೆ. ಅದನ್ನು ಮಾನದಂಡವನ್ನಾಗಿಸಿಕೊಂಡು ನಡೆಯಬೇಕಿದೆ. ಭಾಗೀರಥಿಯ ಈ ಪುಣ್ಯಧಾರೆಯಲ್ಲಿ ಎಲ್ಲ ಪ್ರವಾಹಗಳ ಸಂಗಮವಾಗಬೇಕಿದೆ. ಯಮುನೆಯೂ ಸಿಗುವಳು ಹಾಗೆಯೇ ತನ್ನ ಎಲ್ಲ ಕಳಂಕಗಳನ್ನು ಕಳೆದುಕೊಂಡು ಗಂಗೆಯ ಧವಳ ಧಾರೆಯಲ್ಲಿ ಒಂದೇ ರೂಪವಾಗುವಳು. ಆದರೆ, ಇದಕ್ಕಾಗಿ ಭಾಗೀರಥಿಯ ಪ್ರಯತ್ನಗಳ ನಿಷ್ಠೆ ಹಾಗೂ 'ಸದ್ವಿಪ್ರಾ ಬಹುಧಾ ವದಂತಿ' ಎಂಬ ಮಾನ್ಯತೆಯೊಂದಿಗೆ ಹೋಗಬೇಕಾಗಿದೆ. ನಾವು ಸಂಸ್ಕೃತಿ ಮತ್ತು ರಾಷ್ಟ್ರದ ಐಕ್ಯತೆಯ ಅನುಭವವನ್ನೇನು ಪಡೆದಿದ್ದೇವೆಯೋ ಅದು ಸಾವಿರಾರು ವರ್ಷಗಳ ಅಸಫಲತೆಗಳಿಗಿಂತಲೂ ಅಧಿಕವಾಗಿದೆ. ಆದ್ದರಿಂದ ನಾವು ಧೈರ್ಯಗೆಡುವ ಆವಶ್ಯಕತೆ ಇಲ್ಲ. ಒಂದು ವೇಳೆ ಹಿಂದಿನ ಸಿಪಾಯಿಗಳು ಆಯಾಸಗೊಂಡರೆ, ಹೊಸಬರು ಮುಂದೆ

ಬರಬಹುದು. ಹಿಂದುಳಿದವರು ತಮ್ಮ ಆಯಾಸವನ್ನು ಧೈರ್ಯದಿಂದ ಒಪ್ಪಿಕೊಳ್ಳಬೇಕಿದೆ, ತಮ್ಮ ಶಸ್ತ್ರಗಳ ಬಲಹೀನತೆಯನ್ನು ಸ್ವೀಕರಿಸಬೇಕಿದೆ. ಯುದ್ಧವನ್ನು ಗೆಲ್ಲುವುದೇ ಇಲ್ಲ ಎಂದು ಹೇಳುವುದು ಸರಿಯಲ್ಲ. ಇದು ನಮ್ಮ ಗೌರವ, ಮರ್ಯಾದೆ ಹಾಗೂ ಘನತೆಗಳಿಗೆ ವಿರುದ್ಧವಾಗಿದೆ, ರಾಷ್ಟ್ರದ ಪ್ರಕೃತಿ ಹಾಗೂ ಪರಂಪರೆಗೂ ಪ್ರತಿಕೂಲವಾಗಿದೆ.

* * * * *

# ನಂಬಿಕೆ ದ್ರೋಹ

ಜೂನ್ ೩೦ನೇ ೧೯೬೫ರ ಅಪರಾಹ್ನ ೧೨ – ೪೦ಕ್ಕೆ ನವದೆಹಲಿಯಲ್ಲಿ ಕಛ್ ಮತ್ತು ಸಿಂಧ್ ಗಡಿಗೆ ಸಂಬಂದಿಸಿದಂತೆ ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧವಿರಾಮದ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಪಾಕಿಸ್ತಾನದ ಪರವಾಗಿ ಪಾಕಿಸ್ತಾನದ ಪ್ರಧಾನ ಆಯುಕ್ತರಾದ ಶ್ರೀ ಅರ್ಶಾದ್ ಹುಸೇನ್ ಹಾಗೂ ಭಾರತದ ಪರವಾಗಿ ವಿದೇಶಾಂಗ ವಿಭಾಗದ ಸಚಿವರಾದ ಶೀ ಅಜೀಮ್ ಹುಸೇನ್‌ರು ಸಹಿ ಮಾಡಿದರು. ವಿಧಿಯ ವಿಡಂಬನೆಯೇನೆಂದರೆ ಶೀ ಅರ್ಶಾದ್ ಹುಸೇನ್ ಹಾಗೂ ಶ್ರೀ ಅಜೀಮ್ ಹುಸೇನ್‌ರು ಚಿಕ್ಕಪ್ಪ ದೊಡ್ಡಪ್ಪಂದಿರ ಮಕ್ಕಳಾಗಿದ್ದು ಪರಸ್ಪರ ಭಾವ–ಭಾವಮೈದುನರಾಗಿದ್ದಾರೆ. ಈ ಘಟನೆಯಿಂದ ನಮಗೆ ಭಾರತದ ಅಡಳಿತಾತ್ಮಕ ಅದರಲ್ಲೂ ವಿಶೇಷವಾಗಿ ಹಾಗೂ ವಿದೇಶಾಂಗ ವಿಭಾಗದ ಒಂದು ಚಿತ್ರ ಸಿಗುತ್ತದೆ. ಈ ಒಪ್ಪಂದಕ್ಕಾಗಿ ಕಳೆದ ಒಂದು ತಿಂಗಳಿನಿಂದಲೂ ಪೂರ್ವಸಿದ್ಧತೆಯಾಗುತ್ತಿತ್ತು. ಇದಕ್ಕೆ ಸಂಬಂಧಿಸಿದಂತೆ ಅವರ ಕೆಲವು ಷರತ್ತುಗಳೂ ಪತ್ರಗಳಲ್ಲಿ ಪ್ರಕಟವಾಗಿತ್ತು. ಆದರೂ ಭಾರತ ಸರ್ಕಾರವು ತನ್ನ ಮಾತಿಗೆ ತಾನು ಬದ್ಧವಾಗಿರುವುದಾಗಿ ಮತ್ತೆ ಮತ್ತೆ ತಿಳಿಸಿತ್ತು. ಈ ಒಪ್ಪಂದವು ಪ್ರಕಟವಾಗಿರುವಾಗ ದೇಶಕ್ಕೆ ಭಾರಿ ಹೊಡೆತ ಬಿದ್ದಿದೆ. ಸರ್ಕಾರವು ತನ್ನ ಪರವಾದ ಅನೇಕ ಮಹತ್ವಪೂರ್ಣ ಅಂಶಗಳನ್ನು ಬಿಟ್ಟುಕೊಟ್ಟಿದೆಯಾದರೂ ಪ್ರಧಾನ ಮಂತ್ರಿ ಶ್ರೀ ಶಾಸ್ತ್ರಿ ಮತ್ತು ಹಲವು ವಕ್ತಾರರು ತಾವು ಕೂಟನೀತಿಯ ದೃಷ್ಟಿಯಿಂದ ಬಹಳಷ್ಟು ಲಾಭ ಗಳಿಸಿರುವುದಾಗಿ ತಿಳಿಸಲು ಪ್ರಯತ್ನಿಸುತ್ತಿದ್ದಾರೆ. ಈ ಒಪ್ಪಂದವನ್ನು ಕುರಿತು ನಾವು ಗಂಭೀರವಾದ ವಿಶ್ಲೇಷಣೆ ಮಾಡಬೇಕಾಗಿದೆ. ಇಲ್ಲವಾದರೆ ಪ್ರತಿ ಬಾರಿಯ ಒಪ್ಪಂದದ ನಂತರವೂ ಅವರಾಡುವ ಸಕ್ಕರೆಯಂಥ ಸಿಹಿಯಾದ, ಸ್ನೇಹದ ಮಾತುಗಳ ಕುಚಕ್ರದಲ್ಲಿ ಸಿಲುಕಿ ಅಜಾಗರೂಕರಾಗುವುದಾದರೆ ಹಿಂದಿನ ದುರದೃಷ್ಟಕರವಾದ ಇತಿಹಾಸ ಮುಂದೆಯೂ ಮರುಕಳಿಸಲಿದೆ. ಒಪ್ಪಂದವನ್ನು ಕುರಿತು ಅನೇಕ ರೀತಿಯ ಪ್ರಚಾರಾತ್ಮಕವಾದ ಹೇಳಿಕೆಗಳು ಕೇಳಿಬರುತ್ತಿರುವುದರಿಂದ ನಾವು ಇಲ್ಲಿ ಅದರ ಯಥಾವತ್ತಾದ ಅನುವಾದವನ್ನು ಕೊಡುತ್ತಿದ್ದೇವೆ.

---

**ಮೂಲ ಆಕರ : ವಿಶ್ವಾಸಘಾತ್, ೧, ಜುಲೈ, ೧೯೬೫**

**ಭಾರತ ಮತ್ತು ಪಾಕಿಸ್ತಾನ ಸರ್ಕಾರಗಳ ನಡುವೆ ಏರ್ಪಟ್ಟ ಜೂನ್ ೩೦ ೧೯೬೫ರ ಒಪ್ಪಂದ**

ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸಂಪೂರ್ಣ ಗಡಿಯಲ್ಲಿ ಈಗ ಇರುವ ಆತಂಕ ಕಡಿಮೆಯಾಗುತ್ತದೆ ಎಂಬ ವಿಶ್ವಾಸದೊಡನೆ ಭಾರತ ಹಾಗೂ ಪಾಕಿಸ್ತಾನದ ಸರ್ಕಾರಗಳು ಪಶ್ಚಿಮ ಗುಜರಾತಿನ ಪಾಕಿಸ್ತಾನದ ಗಡಿಯಲ್ಲಿ ಯುದ್ಧವಿರಾಮ ಘೋಷಿಸಲು ಹಾಗೂ ೧೯೬೫, ಜನವರಿ ೧ ರ ಸ್ಥಿತಿಯನ್ನು ಸ್ಥಿರವಾಗಿ ಖಾಯಂಗೊಳಿಸಲು ಒಪ್ಪಿದೆ.

ಅಂದರೆ ಹಿಂದೆ ತಿಳಿಸಿರುವ ಪಶ್ಚಿಮ ಪಾಕಿಸ್ತಾನದ ಗುಜರಾತಿನ ಗಡಿಯಲ್ಲಿ ಪೂರ್ವಸ್ಥಿತಿ ಸ್ಥಾಪನೆಗೊಂಡ ನಂತರ ಈ ಕ್ಷೇತ್ರದ ಗಡಿಯನ್ನು ಅಳೆದು ನಿರ್ಧಾರ ಮಾಡಬೇಕು.

ಆದ್ದರಿಂದ ಎರಡೂ ಸರ್ಕಾರಗಳು ಈ ವಿಷಯದಲ್ಲಿ ಕೆಳಕಂಡ ಕ್ರಮಗಳನ್ನು ಪಾಲಿಸುತ್ತವೆ.

**ಅನುಚ್ಛೇದ ೧**

೧೯೬೫ ಜುಲೈ ೧ ರ ೦೦ – ೩೦ ಘಂಟೆ (ಗ್ರೀನ್‌ವಿಚ್)ಯಿಂದ ಕೂಡಲೆ ಯುದ್ಧವಿರಾಮ ಜಾರಿಗೆ ಬರುತ್ತದೆ.

**ಅನುಚ್ಛೇದ ೨**

ಯುದ್ಧವಿರಾಮ ಜಾರಿಗೆ ಬಂದಾಗ

(೧) ಎರಡೂ ಕಡೆಯ ಸೈನ್ಯ ಹಿಂದೆ ಸರಿಯಲು ಪ್ರಾರಂಭಿಸುವುದು.

(೨) ಈ ಕೆಲಸವು ೭ ದಿನಗಳಲ್ಲಿ ಪೂರ್ತಿಯಾಗುವುದು.

(೩) ೧೯೬೪ ಡಿಸೆಂಬರ್ ೩೧ರ ಸಂಖ್ಯಾಬಲಕ್ಕಿಂತ ಹೆಚ್ಚು ಇರುವಂತಿಲ್ಲ.

(೪) ಭಾರತ ಹಾಗೂ ಪಾಕಿಸ್ತಾನದ ಪೊಲೀಸರು ೧೯೬೫ ಜನವರಿ ೧ಕ್ಕೆ ಮೊದಲು ಯಾವ ಯಾವ ಮಾರ್ಗಗಳಲ್ಲಿ ಪಹರೆ ಮಾಡುತ್ತಿದ್ದರೋ ಆಯಾ ಮಾರ್ಗಗಳಲ್ಲಿ ಪಹರೆ ಮಾಡಬಹುದು. ಆದರೆ ಅವರ ಸಂಖ್ಯೆ ೧೯೬೫ ಜನವರಿ ೧ ರಂದು ಇದ್ದುದಕ್ಕಿಂತ ಹೆಚ್ಚಾಗಿರುವಂತಿಲ್ಲ.

(೫) ಒಂದು ವೇಳೆ ಭಾರತ ಹಾಗೂ ಪಾಕಿಸ್ತಾನದ ಪಹರೆಯವರು ಪರಸ್ಪರ ಸಂಪರ್ಕಕ್ಕೆ ಬಂದರೆ ಪರಸ್ಪರ ಹಸ್ತಕ್ಷೇಪ ಮಾಡುವಂತಿಲ್ಲ. ಹಾಗೂ ವಿಶೇಷವಾಗಿ ೧೯೬೦ರ ಜನವರಿಯಲ್ಲಿ ಆಗಿರುವ ಭಾರತ – ಪಾಕಿಸ್ತಾನಗಳ ಭೂಮಿ–ನಿಯಮಗಳಿಗನುಸಾರವಾಗಿ ವರ್ತಿಸಬೇಕು.

(೬) ಯುದ್ಧವಿರಾಮ ಜಾರಿಗೆ ಬಂದ ತಕ್ಷಣ ಹಾಗೂ ಅವಶ್ಯಕತೆ ಉಂಟಾದಾಗಲೆಲ್ಲಾ ಎರಡೂ ಸರ್ಕಾರಗಳು ಪ್ಯಾರಾ (೪) ರಿಂದ (೫) ರ

ವರೆಗೆ ಕ್ರಿಯಾಶೀಲರಾಗಿದ್ದು ಅದರಿಂದ ಉಂಟಾಗುವ ಸಮಸ್ಯೆಗಳನ್ನು ಬಿಡಿಸುವುದಕ್ಕಾಗಿ ಒಟ್ಟಾಗಬೇಕು.

**ಅನುಚ್ಛೇದ ೩**

(೧) ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು (ಅ) ಭಾರತದ ದಾವೆ ಏನೆಂದರೆ ಈ ವಿಷಯದಲ್ಲಿ ಯಾವುದೇ ಕ್ಷೇತ್ರೀಯ ವಿವಾದ ಇರುವುದಿಲ್ಲ, ಏಕೆಂದರೆ ವಿಭಜನಾ ಪೂರ್ವ ಮಾನಚಿತ್ರಗಳಲ್ಲಿ ಕಛ್‌ನ ರಣಕ್ಷೇತ್ರದ ಉತ್ತರದ ತುದಿಯ ಸುನಿಶ್ಚಿತವಾದ ಎಲ್ಲೆಯ ಭೂಮಿಯ ಅಳತೆ ಮಾಡುವ ಕೆಲಸ ಬಾಕಿ ಉಳಿದಿದೆ.

(ಆ) ವಿಭಜನಾ ಪೂರ್ವದ ಅನೇಕ ಅಭಿಲೇಖಗಳಿಂದ ತಿಳಿದುಬಂದಿರುವಂತೆ ಭಾರತ ಹಾಗೂ ಪಾಕಿಸ್ತಾನದ ನಡುವಿನ ಎಲ್ಲೆಯನ್ನು ಕುರಿತ ಕಛ್‌ನ ರಣ ಕ್ಷೇತ್ರದ ಮಧ್ಯದಿಂದ ೨೪ ಅಕ್ಷಾಂಶದ ವರೆಗೆ ಸುಮಾರು ೩೬೦೦ ಚದರಮೈಲಿಗಳ ಕ್ಷೇತ್ರೀಯ ವಿವಾದವಿದೆ ಎಂಬುದು ಪಾಕಿಸ್ತಾನದ ದಾವೆಯಾಗಿದೆ.

(ಬ) ೧೯೬೦ ಜನವರಿಯ ವಾರ್ತೆಯ ಪ್ರಕಾರ ಎರಡೂ ಸರ್ಕಾರಗಳ ಮಂತ್ರಿಗಳು ಕಛ್ – ಸಿಂಧ್ ಗಡಿಯನ್ನು ಕುರಿತು ಇನ್ನೂ ಹೆಚ್ಚಿನ ಅಂಶಗಳನ್ನು ಸಂಗ್ರಹಿಸುವುದು ಹಾಗೂ ಈ ವಿವಾದವನ್ನು ಬಗೆಹರಿಸಲು ಮುಂದೆ ಮಾತುಕತೆ ನಡೆಸಲಾಗುವುದು.

(ಕ) ಅಧಿಕಾರಗಳಿಂದ ಅನುಚ್ಛೇದ ೨ (೬) ರಲ್ಲಿ ಕಾಣಿಸಿರುವ ಕೆಲಸಗಳು ಮುಗಿದ ಕೂಡಲೇ, ಯುದ್ಧವಿರಾಮದ ಒಂದು ತಿಂಗಳಿನ ನಂತರ ಇನ್ನೂ ಆಗಿಲ್ಲದಿರುವ ಕೆಲಸಗಳ ಬಗ್ಗೆ ಎರಡೂ ಸರ್ಕಾರಗಳ ಮಂತ್ರಿಗಳು ತಮ್ಮ ತಮ್ಮ ದಾವೆಗಳನ್ನು ಗಮನದಲ್ಲಿಟ್ಟುಕೊಂಡು ಗಡಿಯ ನಿರ್ಧಾರ ಹಾಗೂ ಅಳತೆಯ ವ್ಯವಸ್ಥೆಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳಲು ಪರಸ್ಪರ ಭೇಟಿಯಾಗುವರು. ಈ ಸಭೆಯಲ್ಲಿ ಹಾಗೂ ಕೆಳಗಿನ ಅನುಚ್ಛೇದ ೩ (೨) ಮತ್ತು (೪) ರಲ್ಲಿ ವಿವರಿಸಲಾದ ಟ್ರಿಬ್ಯೂನಲ್‌ನ ಮುಂದೆ ಎರಡೂ ಸರಕಾರಗಳು ತಮ್ಮ ಪಕ್ಷದ ವಾದವನ್ನು ಪೂರ್ಣವಾಗಿ ಪ್ರತಿಪಾದಿಸುವ ಸ್ವತಂತ್ರ್ಯ ಹೊಂದಿರುತ್ತಾರೆ.

(೨) ಒಂದು ವೇಳೆ ಎರಡೂ ಸರ್ಕಾರಗಳ ಮಂತ್ರಿಗಳು ಯುದ್ಧವಿರಾಮದ ಎರಡು ತಿಂಗಳ ಒಳಗಾಗಿ ಗಡಿ ನಿರ್ಧಾರಕ್ಕೆ ಸಂಬಂಧಿಸಿದಂತೆ ಸಹಮತಕ್ಕೆ ಬರಲಾಗದಿದ್ದರೆ, ಎರಡೂ ಸರ್ಕಾರಗಳು ೧೯೫೯ ಅಕ್ಟೋಬರ್ ೨೪ರ ಸಂಯುಕ್ತ ಹೇಳಿಕೆಗಳ ಅನುಸಾರವಾಗಿ ಕೆಳಗೆ (೩) ರಲ್ಲಿ ಸೂಚಿಸಿರುವ

ಟ್ರಿಬ್ಯೂನಲ್ ಅನ್ನು ರಚಿಸಲಾಗುವುದು. ಆ ಟ್ರಿಬ್ಯೂನಲ್‌ನ ಮುಂದೆ ಪ್ರಸ್ತುತಗೊಳ್ಳಲಿರುವ ದಾವೆಗಳ ಮತ್ತು ಸಾಕ್ಷಿಗಳ ಆಧಾರದ ಮೇಲೆ ಗಡಿಯ ನಿರ್ಣಯ ಮಾಡುತ್ತದೆ ಹಾಗೂ ಆ ನಿರ್ಣಯವು ಅಂತಿಮವಾಗಿದ್ದು ಅದಕ್ಕೆ ಎರಡೂ ಪಕ್ಷಗಳು ಬದ್ಧವಾಗಿರುತ್ತವೆ.

(೩) ಇದಕ್ಕಾಗಿ ಯುದ್ಧವಿರಾಮ ಜಾರಿಗೆ ಬಂದ ೪ ತಿಂಗಳೊಳಗಾಗಿ ಮೂವರು ವ್ಯಕ್ತಿಗಳನ್ನೊಳಗೊಂಡ ಟ್ರಿಬ್ಯೂನಲ್ ಒಂದನ್ನು ರಚಿಸಲಾಗುವುದು. ಅದರಲ್ಲಿ ಭಾರತೀಯರಾಗಲೀ, ಪಾಕಿಸ್ತಾನದವರಾಗಲೀ ಸದಸ್ಯರಾಗಿ ಇರುವಂತಿಲ್ಲ. ಪ್ರತ್ಯೇಕ ಸರ್ಕಾರವು ಒಬ್ಬೊಬ್ಬ ಸದಸ್ಯನನ್ನು ನಾಮಾಂಕಿತಗೊಳಿಸುತ್ತದೆ. ಮೂರನೆಯ ಸದಸ್ಯನು ಎರಡೂ ಸರ್ಕಾರಗಳು ಸೇರಿ ಒಮ್ಮತದಿಂದ ಸೂಚಿಸಿದವನಾಗಿದ್ದು ಅವನೇ ಅಧ್ಯಕ್ಷನೂ ಆಗಿರುತ್ತಾನೆ. ಒಂದು ವೇಳೆ ಎರಡೂ ಸರ್ಕಾರಗಳು ಯುದ್ಧವಿರಾಮ ಜಾರಿಗೆ ಬಂದ ೩ ತಿಂಗಳೊಳಗಾಗಿ ಮೂರನೆಯ ವ್ಯಕ್ತಿಯನ್ನು ಆರಿಸುವಲ್ಲಿ ವಿಫಲರಾದರೆ ಅವರಿಬ್ಬರೂ ಅಂಥ ವ್ಯಕ್ತಿಯನ್ನು ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯನ್ನು ನೇಮಿಸಿಕೊಡಲು ಕೇಳಿಕೊಳ್ಳುತ್ತಾರೆ.

(೪) ಮೇಲೆ ತಿಳಿಸಿದ ಟ್ರಿಬ್ಯೂನಲ್‌ನ ತೀರ್ಮಾನಕ್ಕೆ ಎರಡೂ ಸರ್ಕಾರದವರು ಬದ್ಧರಾಗಿರಬೇಕು. ಹಾಗೂ ಯಾವುದೇ ಆಧಾರವನ್ನಿಟ್ಟುಕೊಂಡು ಅದಕ್ಕೆ ಸವಾಲೆಸೆಯುವಂತಿಲ್ಲ. ಟ್ರಿಬ್ಯೂನಲ್‌ನ ತೀರ್ಮಾನವನ್ನು ಸಾಧ್ಯವಾದಷ್ಟು ಬೇಗ ಜಾರಿಗೆ ತರಬೇಕೆಂದು ವಚನ ಕೊಡಬೇಕು. ಒಂದು ವೇಳೆ ವ್ಯಾವಹಾರಿಕವಾಗಿ ಏನಾದರೂ ತೊಂದರೆಯುಂಟಾದಲ್ಲಿ ಅದನ್ನು ಟ್ರಿಬ್ಯೂನಲ್‌ನ ಮುಂದೆ ಇಡಬೇಕು. ತೀರ್ಮಾನವು ಸರಿಯಾಗಿ ಜಾರಿಗೆ ಬರುವವರೆಗೂ ಟ್ರಿಬ್ಯೂನಲ್ ಅಸ್ತಿತ್ವದಲ್ಲಿರುತ್ತದೆ. ಮೇಲೆ ತಿಳಿಸಲಾಗಿರುವ ಉದ್ದೇಶಗಳನ್ನು ನೆರವೇರಿಸಿಕೊಳ್ಳುವುದಕ್ಕಾಗಿ ಈ ಕೆಳಕಂಡವರುಗಳು ಈ ಒಪ್ಪಂದಕ್ಕೆ ಸಹಿ ಹಾಕಿರುತ್ತಾರೆ. ೧೯೬೫ನೇ ಇಸವಿಯ ಜೂನ್ ೩ ನೇ ತಾರೀಖಿನಲ್ಲಿ ಇದರ ೨ ಪ್ರತಿಗಳನ್ನು ಆಂಗ್ಲ ಭಾಷೆಯಲ್ಲಿ ತಯಾರಿಸಲಾಗಿದೆ.

**ಹ. ಶ್ರೀ ಅಜೀಮ್ ಹುಸೇನ್**
ಭಾರತ ಸರಕಾರದ ಪ್ರತಿನಿಧಿ

**ಶ್ರೀ ಅರ್ಶಾದ್ ಹುಸೇನ್**
ಪಾಕಿಸ್ತಾನದ ಸರಕಾರದ ಪ್ರತಿನಿಧಿ

**ಆಕ್ರಮಣಕಾರನನ್ನೂ ಒಂದು ಪಕ್ಷವೆಂದು ಹೇಳಲಾಗಿದೆ**

ಇದು ಯುದ್ಧವಿರಾಮದ ಒಪ್ಪಂದವಾಗಿದ್ದರೂ ಇದರಲ್ಲಿ ಯಾರು ಆಕ್ರಮಣಕಾರಿ ಮತ್ತು ಯಾರ ಮೇಲೆ ಆಕ್ರಮಣ ನಡೆದಿದೆ ಎನ್ನುವ ವಿಷಯವನ್ನು ಪೂರ್ಣವಾಗಿ ಅಲಕ್ಷಿಸಲಾಗಿದೆ. ಏಪ್ರಿಲ್ ೯ರ ಬೆಳಿಗ್ಗೆ ಪಾಕಿಸ್ತಾನದ ಸೈನ್ಯವು ಭಾರತದ ಪೊಲೀಸ್ ಅಡ್ಡೆಗಳ ಮೇಲೆ ಧಾಳಿ ಮಾಡಿತು. ಭಾರತ ಸರ್ಕಾರವು ಈ ಆಕ್ರಮಣವನ್ನು ಪ್ರತಿಭಟಿಸಿ ತನ್ನ ಗಡಿಯ ಪೊಲೀಸರ ಸಹಾಯಕ್ಕಾಗಿ ಸೈನ್ಯವನ್ನು ಕಳಿಸಿತು. ಏಪ್ರಿಲ್ ೯ರ ಆಕ್ರಮಣದ ನಂತರ ಭಾರತ ಸರ್ಕಾರವು ಪಾಕಿಸ್ತಾನಕ್ಕೆ ಬರೆದ ಪತ್ರದಲ್ಲಿ ಪಾಕಿಸ್ತಾನದ ಈ ಕಾರ್ಯವನ್ನು ಅಕಾರಣವಾದ ಹಾಗೂ ಅಯೋಜಿತವಾದ ಆಕ್ರಮಣವೆಂದು ತಿಳಿಸಿ ಇದರಿಂದ ಭಾರತಕ್ಕಾಗುವ ನಷ್ಟವನ್ನು ತುಂಬಿಸಿಕೊಡಬೇಕೆಂದು ಕೋರಿತ್ತು. ಸ್ವಯಂ ಸರ್ಕಾರವೇ ಈ ಒಪ್ಪಂದದ ವಿರೋಧದ ಪತ್ರವನ್ನು ಕಸದ ಬುಟ್ಟಿಗೆ ಎಸೆದಿದೆ. ಆಕ್ರಮಣಕಾರಿಯೇ ಈಗ ಒಂದು ಪಕ್ಷವಾಗಿ ವಾದಿಸುತ್ತಿದ್ದಾನೆ. ಅವನು ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆ ಮಾಡಿದ್ದಾನೆ. ಅದಕ್ಕೆ ಅವನು ದಂಡನೆಗೊಳ್ಳುವುದಿರಲಿ, ಕಲಂಕರಹಿತನಾಗಿ ಲಾಭದೊಂದಿಗೆ ಹಿಂದಿರುಗುತ್ತಿದ್ದಾನೆ. ಇದರಿಂದ ಭಾರತದ ಶತ್ರುಗಳ ಮತ್ತು ಆಕ್ರಮಣಕಾರಿಗಳ ಉತ್ಸಾಹ ಹೆಚ್ಚುವುದಿಲ್ಲವೇ? ಭಾರತವು ತನ್ನ ಮೇಲೆ ಆಗಿರುವ ಆಕ್ರಮಣಕ್ಕೆ ಪ್ರತಿಯಾಗಿ ಈ ನಿಲುವನ್ನು ತಾಳುವುದಾದರೆ ಪ್ರಪಂಚದಲ್ಲಿ ಯಾರೂ ನಮ್ಮ ಕಡೆಗಿರುವುದಿಲ್ಲ ಎನ್ನುವುದರಲ್ಲಿ ಆಶ್ಚರ್ಯವಿಲ್ಲ.

**ಸೈನ್ಯದ ಕೈ ಕಟ್ಟಲಾಯಿತು**

ಮೊದಲು ಪಾಕಿಸ್ತಾನವು ಆಕ್ರಮಣ ಮಾಡಿ ನಮ್ಮ ಸೈನ್ಯದ ಕೆಲವು ನೆಲೆಗಳನ್ನು ಕಸಿದುಕೊಂಡಿತು. ನಮ್ಮ ಸೇನೆಯು ವೀರಾವೇಶದಿಂದ ಹೋರಾಡಿ ಆಕ್ರಮಣಕಾರರನ್ನು ಓಡಿಸಿತು. ಆಗ ನಮಗೆ ಅವಕಾಶ ಕೊಟ್ಟಿದ್ದಿದ್ದರೆ ನಮ್ಮ ಸೈನಿಕರು ಕಛ್ ರಣಭೂಮಿಯ ಪ್ರತಿ ಅಂಗುಲವನ್ನು ಬಿಡಿಸಿಕೊಳ್ಳುತ್ತಿದ್ದರು. ವಾಸ್ತವವಾಗಿ ರಾಷ್ಟ್ರದ ಸಂಕಲ್ಪವೂ ಇದೇ ಆಗಿತ್ತು. ಏಪ್ರಿಲ್ ೨೮ ರಂದು ಲೋಕಸಭೆಯು ಹೀಗೆಂದು ಪ್ರತಿಜ್ಞೆ ಮಾಡಿತ್ತು. ನಮ್ಮ ಸೇನೆಯು ಮುಂದುವರಿದಂತೆ ಪಾಕಿಸ್ತಾನದ ಪಕ್ಷಪಾತಿಗಳು ಮಧ್ಯಸ್ತಿಕೆಗಾಗಿ ಧಾವಿಸಿದರು. ನಾವು ಮನಸ್ಸು ಮಾಡಿದ್ದಿದ್ದರೆ ಆ ಮಧ್ಯಸ್ತಿಕೆಗಾರರನ್ನು ಬದಿಗೆ ಸರಿಸಿ ನಮಗಾದ ಅಪಮಾನವನ್ನು ತೊಳೆದುಕೊಂಡು ಸೈನ್ಯಶಕ್ತಿಯಿಂದ ನಮ್ಮ ನೆಲವನ್ನು ಬಿಡಿಸಿಕೊಳ್ಳುತ್ತಿದ್ದೆವು. ಆದರೆ ಅದಕ್ಕೆ ಬದಲಾಗಿ ಪ್ರಧಾನ ಮಂತ್ರಿಗಳು ಸೈನ್ಯದ ಕೈಗಳನ್ನು ಕಟ್ಟಿಹಾಕಿದರು. ಮೇ ೬ರಂದು ಪಾಕಿಸ್ತಾನವು ಕೀಟಲೆ ಮಾಡದೇ ಇದ್ದಿದ್ದರೆ ನಮ್ಮ ಸೈನ್ಯವು ಕಾರ್ಯಪ್ರವೃತ್ತವಾಗುತ್ತಿರಲಿಲ್ಲ ಎಂಬುದಾಗಿ ಘೋಷಿಸಿದರು. ಅಷ್ಟರಲ್ಲಿ ನಮ್ಮ

ಸೈನ್ಯವು ಸರದಾರಿ ಠಾಣೆ ಮತ್ತು ಎಂಗೋಕೋಟ್ ಅನ್ನು ಹಿಂದಕ್ಕೆ ಪಡೆದಾಗಿತ್ತು. ಕೆಲವೇ ದಿನಗಳಲ್ಲಿ ಕಂಜರ್‌ಕೋಟ್ ಅನ್ನೂ ವಶಪಡಿಸಿಕೊಳ್ಳಬಹುದಾಗಿತ್ತು. ಶಾಸ್ತ್ರೀಜಿಯವರು ಕಂಜರ್ ಕೋಟ್ ಎಂದು ಹೇಳುತ್ತಲೇ ಇದ್ದರಾದರೂ ಸೈನ್ಯವನ್ನು ತಡೆದುಬಿಟ್ಟರು. ವಾಸ್ತವವಾಗಿ ಯುದ್ಧವಿರಾಮ ಆಗಲೇ ಆಗಿತ್ತು. ಜೂನ್ ೩೦ರಂದು ಅದಕ್ಕಿಂತ ಹೆಚ್ಚು ಘಾತಕವಾದ, ಪ್ರತಿಷ್ಠೆಗೆ ಧಕ್ಕೆ ತರುವಂಥ ಘಟನಾವಳಿಗಳು ಘಟಿಸಿವೆ.

**ನಮ್ಮ ಸೈನ್ಯವು ತನ್ನ ಗಡಿಯಲ್ಲೇ ಹಿಂದಕ್ಕೆ ಸರಿಯಲಿದೆ**

ಪಾಕಿಸ್ತಾನದ ಆಕ್ರಮಣ ನಿಲ್ಲುವವರೆಗೂ ನಾವು ಯಾವುದೇ ಲಿಖಿತ ಒಪ್ಪಂದ ಮಾಡಿಕೊಳ್ಳುವುದಿಲ್ಲ ಎಂದು ಮೇ ೬ ರಂದು ಶಾಸ್ತ್ರೀಜಿಯವರು ಆಶ್ವಾಸನೆ ನೀಡಿದ್ದರು. ಈಗ ಆ ಆಶ್ವಾಸನೆ ನೇರವೇರಿತೇ? ಪಾಕಿಸ್ತಾನವು ಕಛ್‌ನ ರಣಕ್ಷೇತ್ರದಿಂದ ಹಿಂದೆ ಸರಿದಿದೆ ಎಂಬುದನ್ನು ಒಪ್ಪುವುದಾದರೆ ನಮಗೆ ನಾವೇ ಮೋಸ ಮಾಡಿಕೊಂಡಂತಾಗುತ್ತದೆ. ಒಪ್ಪಂದದ ಪ್ರಕಾರ ಪಾಕಿಸ್ತಾನದ ಸೈನ್ಯವು ರಣಕ್ಷೇತ್ರದಿಂದ ಹಿಂದಕ್ಕೆ ಸರಿಯಬೇಕಾಗಿತ್ತು. ಅದೇ ರೀತಿಯಲ್ಲಿ ನಮ್ಮ ಸೈನ್ಯವು ಹಿಂದಕ್ಕೆ ಸರಿಯಬೇಕಾಗಿತ್ತು. ಪಾಕಿಸ್ತಾನದ ಸೈನ್ಯ ಸರಿದರೂ ಅವರ ಪೊಲೀಸರಿಗೆ ಗಸ್ತು ತಿರುಗುವ ಅಧಿಕಾರ ಇರುತ್ತದೆ. ಯುದ್ಧಕಾಲವನ್ನು ಬಿಟ್ಟರೆ ಉಳಿದ ವೇಳೆಗಳಲ್ಲಿ ಪೊಲೀಸರು ಗಸ್ತು ತಿರುಗುತ್ತಾರೆ. ನಾವು ಪಾಕಿಸ್ತಾನದ ಸರ್ಕಾರಕ್ಕೆ ಈ ಅಧಿಕಾರವನ್ನೊಪ್ಪಿಸುವ ಮೂಲಕ ಅವರಿಗೆ ನಮ್ಮ ನೆಲದ ಮೇಲೆ ಗಟ್ಟಿಯಾಗಿರಲು ಒಪ್ಪಿಗೆ ಕೊಟ್ಟಿದ್ದೇವೆ. ಸೈನ್ಯ ಹಿಂದಿರುಗುವ ಪ್ರಶ್ನೆ ಬಂದಾಗ ಪಾಕಿಸ್ತಾನದ ಸೈನ್ಯ ನಮ್ಮ ನೆಲದಿಂದ ಹಿಂದಕ್ಕೆ ಸರಿಯುವುದು. ನಮ್ಮ ಸೈನ್ಯವು ನಮ್ಮ ನೆಲದಿಂದಲೇ ಹಿಂದಕ್ಕೆ ಸರಿಯುವುದು. ಪಾಕಿಸ್ತಾನವು ಸಿಂಧ್‌ನಲ್ಲಿ ಅಂತಾರಾಷ್ಟ್ರೀಯ ಗಡಿಯ ಬಳಿ ಸುರಕ್ಷಿತ ಕಂದಕಗಳಲ್ಲಿರುವಾಗ ನಾವು ಕಛ್‌ನ ರಣದಿಂದ ದೂರದಲ್ಲೆಲ್ಲೋ ಕುಳಿತಿರುತ್ತೇವೆ.

**ಅಯ್ಯೂಬ್‌ರ ಘೋಷಣೆಯಿಂದ ಯಾವ ಸ್ಪಷ್ಟೀಕರಣ ಪಡೆದಿದ್ದೇವೆ**

ಪಾಕಿಸ್ತಾನವು ಕಂಜರ್ ಕೋಟ್ ಅನ್ನು ಖಾಲಿ ಮಾಡುತ್ತದೆ ಎಂದು ಭಾರತದ ವಕ್ತಾರರು ಹೇಳಿದ್ದಾರೆ. ಆದರೆ ಪಾಕಿಸ್ತಾನದ ರಾಷ್ಟ್ರಪತಿ ಅಯ್ಯೂಬ್‌ರು ಘೋಷಿಸಿರುವ ಪ್ರಕಾರ ಪಾಕಿಸ್ತಾನದ ಸೈನ್ಯ ಮಾತ್ರ ಕಂಜರ್ ಕೋಟ್‌ನಿಂದ ಹಿಂದೆ ಸರಿಯುತ್ತದೆ, ಪೊಲೀಸರು ಅಲ್ಲೇ ಇರುತ್ತಾರೆ. ಜೂನ್ ೩೦ರ ಬೆಳಗಿನ ಸಮಾಚಾರ ಪತ್ರಿಕೆಗಳಲ್ಲಿ ಅಯ್ಯೂಬರ ಈ ಕೇಳಿಕೆ ಮುದ್ರಿತವಾಗಿತ್ತು. ಅದು ಸುಳ್ಳಾಗಿದ್ದಲ್ಲಿ ಭಾರತ ಸರ್ಕಾರವು ಒಪ್ಪಂದಕ್ಕೆ ಸಹಿ ಮಾಡುವ ಮೊದಲು ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಪಷ್ಟೀಕರಣ ಪಡೆದಿದೆಯೇ? ಭಾರತವು ಸರ್ದಾರ್ ಠಾಣೆ ಮತ್ತು ವಿಂಗೋಕೋಟ್ ಅನ್ನು

ಖಾಲಿ ಮಾಡುತ್ತದೆ. ಈ ಠಾಣೆಗಳನ್ನು ಪಾಕಿಸ್ತಾನದ ಸೈನ್ಯವು ಆಕ್ರಮಣ ಮಾಡಿ ತನ್ನ ವಶಕ್ಕೆ ತೆಗೆದುಕೊಂಡಿತ್ತು ಮತ್ತು ನಂತರ ನಮ್ಮ ಸೈನ್ಯವು ಪಾಕಿಸ್ತಾನದ ಸೈನಿಕರನ್ನು ಚದುರಿಸಿ ಹಿಂದಕ್ಕೆ ಪಡೆಯಿತು. ಈಗ ನಾವು ಆ ಠಾಣೆಗಳನ್ನು ಖಾಲಿ ಮಾಡಿ ಬರುತ್ತೇವೆ. ಛಡವೇಟ್ ಅಂತೂ ಯಾವಾಗಿನಿಂದಲೂ ನಮ್ಮ ಬಳಿಯಲ್ಲೇ ಇದೆ. ಈಗ ಒಪ್ಪಂದದ ಅನುಸಾರವಾಗಿಯೂ ಅದು ನಮ್ಮದಾಗಿಯೇ ಇರುವುದರಲ್ಲಿ ಹೆಚ್ಚುಗಾರಿಕೆ ಏನಿಲ್ಲ.

ಒಪ್ಪಂದದ ಈ ಷರತ್ತುಗಳ ಅನುಸಾರವಾಗಿ ಪಾಕಿಸ್ತಾನವು ತನ್ನನ್ನು ತಾನು ಕಛ್‌ನ ವಿಷಯವಾಗಿ ಭಾರತದೊಂದಿಗೆ ಸರಿಸಮವಾಗಿ ನಿಲ್ಲಿಸಿಕೊಂಡಿದೆ. ಪ್ರಪಂಚವು ನಮ್ಮಿಬ್ಬರನ್ನೂ ಒಂದೇ ತಕ್ಕಡಿಯಲ್ಲಿ ತೂಗಿದಾಗ ನಮಗೆ ಕೆಡುಕೆನಿಸುತ್ತದೆ. ಜಗತ್ತು ಪಾಕಿಸ್ತಾನದ ಅನ್ಯಾಯ ಹಾಗೂ ಆಕ್ರಮಣದ ವಿರುದ್ಧವಾಗಿ ನಮ್ಮ ಕಡೆಗಿರಲೆಂದು ಅಪೇಕ್ಷಿಸುತ್ತೇವೆ. ಆದರೆ ನಾವೇ ನಮ್ಮ ಪರವಾಗಿ ನಿಲ್ಲದೇ ಹೋದಾಗ ಬೇರೆ ಯಾರು ತಾನೆ ಜೊತೆಗಿರುತ್ತಾರೆ?

**೧೯೬೫, ಜನವರಿ ೧ರ ಆಯ್ಕೆ ಏಕೆ?**

೧೯೬೫, ಜನವರಿ ೧ರ ಹಿಂದಿದ್ದ ಸ್ಥಿತಿಗೆ ಬರದೇ ನಾವು ಯಾವುದೇ ಒಪ್ಪಂದ ಅಥವಾ ಚರ್ಚೆಗೆ ಸಿದ್ಧರಿಲ್ಲ ಎಂದು ಶಾಸ್ತ್ರೀಜಿಯವರು ಘೋಷಿಸಿದರು. ಇದಕ್ಕೆ ಜನವರಿ ೧ ಅನ್ನು ಏಕೆ ಆರಿಸಿಕೊಂಡರೋ ತಿಳಿಯದು. ಆದರೆ ದೇಶದ ಸಾಧಾರಣ ನಂಬಿಕೆ ಏನಿತ್ತೆಂದರೆ ಅದರಿಂದ ಪೂರ್ವದವರೆಗೆ ಸಂಪೂರ್ಣ ಕಛ್‌ನ ಮೇಲೆ ಅಂತಾರಾಷ್ಟ್ರೀಯ ಗಡಿಯವರೆಗೆ ಆಕ್ರಮಣಕಾರರಿದ್ದರು. ಜನವರಿ ೨೫ರಂದು ಪಾಕಿಸ್ತಾನದ ಸೈನಿಕರು ನುಗ್ಗಿದರು. ಅಂದರೆ ಜನವರಿ ೧ರ ಸ್ಥಿತಿಯ ಅರ್ಥವೆಂದರೆ ಪಾಕಿಸ್ತಾನದವರನ್ನು ಕಛ್‌ನ ನೆಲದಿಂದ ಸಂಪೂರ್ಣವಾಗಿ ಹೊರದೂಡುವುದು. ಆದರೆ ಈಗ ತಿಳಿಯುತ್ತಿರುವುದೇನೆಂದರೆ ಜನವರಿ ೧ಕ್ಕೆ ಮೊದಲಿನಿಂದಲೂ ಪಾಕಿಸ್ತಾನೀಯರು ಕೆಲವು ಕ್ಷೇತ್ರಗಳಲ್ಲಿ ಠಳಾಯಿಸುತ್ತಲೇ ಇದ್ದಾರೆ. ಹೀಗಿರುವಾಗ ಶಾಸ್ತ್ರೀಜಿಯವರು ೬೫ರ ಜನವರಿಯ ೧ನೇ ದಿನಾಂಕವನ್ನೇ ಏಕೆ ಆರಿಸಿಕೊಂಡರು? ಅವರಿಗೆ ಆಗಿನ ಸ್ಥಿತಿಯ ಅರಿವಿರಲಿಲ್ಲ ಅಥವಾ ಅವರು ದೇಶವನ್ನು ಮೋಸದ ಬಲೆಯಲ್ಲಿ ಸಿಲುಕಿಸಬಯಸಿದ್ದರು. ಪಾಕಿಸ್ತಾನವು ಆಕ್ರಮಣದ ಸಿದ್ಧತೆಗಳನ್ನು ನಡೆಸುತ್ತಿದ್ದ ವಿಷಯ ತಮಗೆ ಗೊತ್ತಿತ್ತೆಂದು ರಕ್ಷಣಾ ಮಂತ್ರಿ ಶ್ರೀ ಯಶವಂತರಾವ್ ಚವ್ಹಾಣರು ಹೇಳಿದ್ದಾರೆ. ಆದರೂ ಅವರು ಅವರನ್ನು ಎದುರಿಸುವುದಕ್ಕಾಗಿ ಯಾವುದೇ ಸಿದ್ಧತೆಯನ್ನೇಕೆ ಮಾಡಲಿಲ್ಲ? ಪಾಕಿಸ್ತಾನವು ೧೯೫೬ರಲ್ಲಿ ಛಡ್‌ವೇಟ್‌ನ ಮೇಲೆ ಆಕ್ರಮಣ ಮಾಡಿತ್ತು. ನಂತರ ನಮ್ಮ ಪೊಲೀಸರು ಅವರನ್ನು ಓಡಿಸಿ ಛಡ್‌ವೇಟ್ ಅನ್ನು ವಶಕ್ಕೆ ತೆಗೆದುಕೊಂಡಿತು. ಕಳೆದ ವರ್ಷ ಗುಜರಾತಿನ ವಿಧಾನ ಸಭೆಯಲ್ಲಿ

ಈ ಆಕ್ರಮಣಕಾರಿ ಸಿದ್ಧತೆಗಳ ಸೂಚನೆ ನೀಡಲಾಗಿತ್ತು. ಇದರಿಂದ ಸ್ಪಷ್ಟವಾಗುವುದೇನೆಂದರೆ ಶಾಸ್ತ್ರೀಜಿಯವರ ಸರಕಾರವು ತಿಳಿದೂ ತಿಳಿದೂ ಈ ಗಡಿಯನ್ನು ಕುರಿತು ದುರ್ಲಕ್ಷ್ಯವಹಿಸಿತು.

**ಈ ಷರತ್ತನ್ನು ನಮ್ಮ ಮೇಲೆ ವಿಧಿಸಲಾಯಿತು !**

೧೯೬೫ರ ಜನವರಿ ೧ಕ್ಕಿಂತ ಹಿಂದಿನ ಸ್ಥಿತಿಯನ್ನು ಕುರಿತು ಆಡಿದ ಮಾತುಗಳು ಪಾಕಿಸ್ತಾನಕ್ಕೆ ಅನ್ವಯಿಸಿತ್ತು. ಆದರೆ ಅದನ್ನು ಈಗ ನಮ್ಮ ಮೇಲೂ ಅನ್ವಯಿಸಲಾಗಿದೆ. ಆಕ್ರಮಣಕಾರರಿಗೆ ಹಿಂದೆ ಸರಿಯುವ ಬಗ್ಗೆ ಷರತ್ತನ್ನು ಹಾಕಬಹುದು. ಆದರೆ ರಕ್ಷಕರೂ ತಮ್ಮ ಮನೆಯಲ್ಲೇ ಇಂಥ ಷರತ್ತನ್ನು ಹೇಗೆ ತಾನೇ ಸಹಿಸಬಹುದು. ಇದರ ಪ್ರಕಾರ ೧೯೬೫ ರ ಜನವರಿಗೆ ಮುಂಚೆ ನಮಗೆ ಎಷ್ಟು ತಿಳಿದಿರಲಿಲ್ಲವೋ, ಈಗಲೂ ಅಷ್ಟೇ ತಿಳಿದಿಲ್ಲದಂತೆ ಇರಬೇಕು ಎಂದಾಗುತ್ತದೆ.

**ಒಪ್ಪಂದದ ಅಪಾಯಕಾರಿ ಮಗ್ಗುಲು**

ನಾವು ಇದನ್ನು ಕ್ಷೇತ್ರೀಯ ವಿವಾದವೆಂದು ಪರಿಗಣಿಸಿ ಪಂಚಾಯಿತಿಯ ತೀರ್ಮಾನಕ್ಕೆ ಬಿಟ್ಟಿರುವುದೇ ಒಪ್ಪಂದದ ಅಪಾಯಕಾರೀ ಮಗ್ಗುಲಾಗಿದೆ. ಈ ವಿಷಯವಾಗಿ ಶಾಸ್ತ್ರೀಜಿಯವರು ಸಂಸತ್ತಿನಲ್ಲಿ ಕೊಟ್ಟಿದ್ದ ಆಶ್ವಾಸನೆಯಿಂದ ಹಿಂದೆ ಸರಿಯುತ್ತಿದ್ದಾರೆ. ಕಛ್‌ನ ರಣದ ಪ್ರಶ್ನೆಯನ್ನು ಯಾವುದಾದರೂ ಟ್ರಿಬ್ಯೂನಲ್ ಗೆ ವಹಿಸಿದ್ದಾದರೆ ಅದು ಗಡಿಯ ಸೀಮಾಂಕನೆಗೆ ಸಂಬಂಧಿಸಿರುತ್ತದೆಯೇ ಹೊರತು ಕ್ಷೇತ್ರೀಯ ವಿವಾದವಾಗಿರುವುದಿಲ್ಲ ಎಂಬುದಾಗಿ ಮೇ ೮ನೇ ದಿನಾಂಕದಂದು ರಾಜ್ಯಸಭೆಯಲ್ಲಿ ಪ್ರಧಾನಮಂತ್ರಿಗಳು ಸ್ಪಷ್ಟವಾಗಿ ಘೋಷಣೆ ಮಾಡಿದ್ದರು. ಆದರೆ ಒಪ್ಪಂದದಲ್ಲಿ ಬಳಸಲಾಗಿರುವ ಶಬ್ದಗಳು ಗಡಿಯ ತೀರ್ಮಾನ ಮತ್ತು ಗುರುತು ಹಾಕುವುದಕ್ಕೆ ಸಂಬಂಧಿಸಿವೆ. ಕಛ್–ಸಿಂಧ್‌ನ ಗಡಿಯು ಸುನಿಶ್ಚಿತವಾಗಿದೆ ಎಂಬುದು ಇಲ್ಲಿಯವರೆಗೆ ನಮ್ಮ ಹೇಳಿಕೆಯಾಗಿತ್ತು. ಅದು ವಿವಾದದ ವಿಷಯವಾಗಲಾರದು. ಈ ವಿಷಯದ ಬಗ್ಗೆ ಅವರು ದೃಢವಾಗಿ ಇರಬೇಕಾಗಿತ್ತು.

**ಒಮ್ಮುಖ ಬಂಧನ ಹೇಗೆ ಸರಿ ?**

೧೯೬೦ರ ಶೇಖ್–ಸ್ವರ್ಣಸಿಂಹರ ಒಪ್ಪಂದದಲ್ಲಿ ಆಡಿದ ಮಾತುಗಳನ್ನು ಈ ಒಪ್ಪಂದದ ಮೂಲಕ ಆಚರಣೆಗೆ ತರಲಾಗುತ್ತದೆ ಎಂದು ಕೆಲವರು ಹೇಳಬಹುದು. ಆದರೆ ಇದು ಸತ್ಯವಲ್ಲ. ಶೇಖ್–ಸ್ವರ್ಣಸಿಂಹರ ಒಪ್ಪಂದದಲ್ಲಿ ವಿಷಯವನ್ನು ಕುರಿತು ಮತ್ತಷ್ಟು ಮಾಹಿತಿ ಸಂಗ್ರಹಿಸಬೇಕೆಂಬ ವಿಷಯವನ್ನು ಮಾತ್ರ ಒಪ್ಪಲಾಗಿತ್ತು. ಇದು ವಿವಾದದ ವಿಷಯವಾಗಿದೆ. ಇದನ್ನೆಂದೂ ಮಾನ್ಯ ಮಾಡಲಾಗಿಲ್ಲ. ಎರಡನೆಯದಾಗಿ ಪಾಕಿಸ್ತಾನವು ಈ ಒಪ್ಪಂದವನ್ನು ಬಲಪ್ರಯೋಗ ಮಾಡಿ ಭಂಗಗೊಳಿಸಿದೆ. ನಾವು ಅದರೊಂದಿಗೆ ಎರಡು ಕಡೆಗೂ ಬದ್ಧರಾಗಿರಲಾರೆವು.

**ಪ್ರಪಂಚವು ಮತ್ತಷ್ಟು ದಬಾವಣೆ ಮಾಡುವುದು**

ಕಛ್‌ನ ರಣದ ೩೫೦೦ ಚದರ ಮೈಲಿ ಭೂಮಿಯು ವಿವಾದದ ಮತ್ತು ಪಂಚರ ತೀರ್ಮಾನಕ್ಕೆ ಸಂಬಂಧಿಸಿದ ವಿಷಯವಾಗುತ್ತದೆ ಎಂಬುದು ಈ ಒಪ್ಪಂದದ ಅರ್ಥವಾಗುತ್ತದೆ. ಈಗ ಬಾಜಿ ನಮ್ಮ ಕೈಯ್ಯಲ್ಲಿಲ್ಲ. ಪಂಚರ ಕೈಯ್ಯಲ್ಲಿದೆ. ಅಲ್ಲದೆ ಅಂತಾರಾಷ್ಟ್ರೀಯ ವಿಷಯಗಳಲ್ಲಿ ನ್ಯಾಯ ಸಿಗುವುದಿಲ್ಲವೆಂಬುದು ನಮಗೆ ಗೊತ್ತಿದೆ.

**ಸ್ವಾತಂತ್ರ್ಯದ ಲೇವಡಿ**

ಯಾವುದೇ ಕ್ಷೇತ್ರೀಯ ಪ್ರಶ್ನೆಯು ಪ್ರಚಾರದ ವಿಷಯವಾಗುವುದಿಲ್ಲ ಎಂಬುದನ್ನು ಈ ತನಕ ಭಾರತ ನಂಬಿಕೊಂಡು ಬಂದಿದೆ. ಅದು ನಮ್ಮ ಪ್ರಭುತ್ವದ ಭದ್ರ ಬುನಾದಿಯಾಗಿದೆ. ನಾವು ಈ ಮಾನ್ಯತೆಯನ್ನು ಮೂಲೆಗೆ ತಳ್ಳಿ ನಮ್ಮ ಸ್ವಾತಂತ್ರ್ಯ ಮತ್ತು ಪ್ರಭುತ್ವವನ್ನು ಲೇವಡಿಯ ವಿಷಯವನ್ನಾಗಿ ಮಾಡಿದ್ದೇವೆ.

**ಕಾಶ್ಮೀರವನ್ನು ಕುರಿತೂ ಪಂಚರದೇ ತೀರ್ಮಾನವೇ?**

ಈ ಒಪ್ಪಂದವನ್ನು ಪಾಕಿಸ್ತಾನವು ಎಷ್ಟರಮಟ್ಟಿಗೆ ದುರುಪಯೋಗ ಪಡಿಸಿಕೊಳ್ಳಲಿದೆ ಎಂಬುದು ಕರಾಚಿ ಮತ್ತು ರಾವಲ್ಪಿಂಡಿಗಳಲ್ಲಿ ವ್ಯಕ್ತವಾಗಿರುವ ಪ್ರತಿಕ್ರಿಯೆಗಳಿಂದ ತಿಳಿದುಬರುತ್ತದೆ. ಕಛ್‌ನಲ್ಲಿ ಪಾಕಿಸ್ತಾನದ ಮೈತ್ರಿ ಸಮಪರ್ಣವಾಗಿರುತ್ತದೆ ಎಂದು ಭಾವಿಸುವವರ ಕಣ್ಣುಗಳು ಈ ಹೇಳಿಕೆಗಳಿಂದ ತೆರೆಯಬೇಕಾಗಿದೆ. ನಿಜವಾದ ಸಮಸ್ಯೆ ಕಾಶ್ಮೀರ ಎಂಬುದಾಗಿ ಭುಟ್ಟೋ ಸ್ಪಷ್ಟವಾಗಿ ತಿಳಿಸಿದ್ದಾರೆ. ಅವರು ಇದನ್ನೂ ಪಂಚರ ತೀರ್ಮಾನಕ್ಕೆ ವಹಿಸಲು ಬಯಸುತ್ತಾರೆಯೇ? ನಾವು ಇದನ್ನು ಒಪ್ಪಲಿದ್ದೇವೆಯೇ? ಇಲ್ಲ ಎನ್ನುವುದಾದರೆ ಅವರು ಆಕ್ರಮಣ ಮಾಡುತ್ತಾರೆ. ನಾವು ಆ ಅಕ್ರಮಣವನ್ನೆದುರಿಸಿದರೆ ಪಾಕಿಸ್ತಾನದ ಪರ ಇರುವವರು ಹಾಗೂ ಸ್ವಯಂಭು ಚೌಧರಿಗಳು (ನಾಯಕರುಗಳು) ಮಧ್ಯಸ್ತಿಕೆ ನಡೆಸಲು ಧಾವಿಸಿ ಬರುತ್ತಾರೆ. ಕಛ್‌ನ ಇತಿಹಾಸವು ಮರುಕಳಿಸುತ್ತದೆ. ಇಲ್ಲವಾದರೆ ನಾವು ದೊಡ್ಡ ಯುದ್ಧಕ್ಕೆ ಸಿದ್ಧರಾಗಬೇಕಾಗುತ್ತದೆ. ಬೆರಳನ್ನು ಹಿಡಿದು ಕೈಯನ್ನೇ ಅಲುಗಾಡಿಸಲಾಗುತ್ತದೆ. ನಾವು ತಿಳಿದೂ ತಿಳಿದೂ ನಮ್ಮ ಬೆರಳನ್ನು ಹಿಡಿಯಲು ಅವಕಾಶ ಕೊಟ್ಟಿದ್ದೇವೆ. ಇದರ ದುಷ್ಪರಿಣಾಮಗಳನ್ನು ಅನುಭವಿಸಬೇಕಾಗಿದೆ. ಪೂರ್ವದ ಗಡಿಯಲ್ಲಿ ಪಾಕಿಸ್ತಾನದ ಒತ್ತಡ ಹೆಚ್ಚುತ್ತಲೇ ಇದೆ. ಇದನ್ನೆಲ್ಲಾ ತಿಳಿಯದವರಂತೆ ನಾವು ಇರಲಾರೆವು.

**ಇಂಗ್ಲಿಷರ ಒತ್ತಡ ಸುಸ್ಪಷ್ಟ**

ನವದೆಹಲಿಯ ಮೇಲೆ ಈಗಲೂ ಇಂಗ್ಲಿಷರ ಒತ್ತಡ ಸಾಕಷ್ಟು ಬಲವಾಗಿದೆ ಎಂಬ ವಾಸ್ತವ ಸಂಗತಿ ಈ ಒಪ್ಪಂದದಿಂದ ತಿಳಿದುಬರುತ್ತದೆ. ಪಾಕಿಸ್ತಾನವು ಕಛ್‌ನಲ್ಲಿ ಅಮೆರಿಕದ ಅಸ್ತ್ರಗಳನ್ನು ಬಳಸಿತು. ಅದು ಭಾರತಕ್ಕೆ ನೀಡಿದ್ದ ಆಶ್ವಾಸನೆಗಳೆಲ್ಲಾ

ಸುಳ್ಳಾಗಿವೆ. ಆದರೆ ಅಮೆರಿಕ ಪಾಕಿಸ್ತಾನಕ್ಕೆ ಏನನ್ನಾದರೂ ಹೇಳುವ ಬದಲು ಭಾರತದ ಮೇಲೆಯೇ ಒತ್ತಡ ಹಾಕಿತು. ಕಾರ್ಗಿಲ್‌ನ ಆರಕ್ಷಕ ಠಾಣೆಗಳನ್ನು ಭಾರತದಿಂದ ಖಾಲಿ ಮಾಡಿಸಲಾಯಿತು. ಆದರೆ ಪಾಕಿಸ್ತಾನದ ಆಕ್ರಮಣದ ವಿರುದ್ಧ ಒಂದು ಶಬ್ದವನ್ನೂ ಆಡಲಿಲ್ಲ. ಪ್ರಧಾನಮಂತ್ರಿಗಳು ರಷ್ಯಾ ಪ್ರವಾಸಕ್ಕೆ ಹೋದರು. ಶ್ರೀ ವಿಲ್ಸನ್ನರು ಅದಕ್ಕಿಂತ ಮೊದಲೇ ಮಧ್ಯಸ್ತಿಕೆಯ ಪ್ರಸ್ತಾಪವನ್ನಿಟ್ಟು ರಷ್ಯಾವು ನಮ್ಮ ಪರವಾಗಿ ಮಾತಾಡದಿರುವಂತೆ ಮಾಡಿದರು. ಎಲ್ಲಾ ದೇಶಗಳು ಪಾಕಿಸ್ತಾನದ ಪರವಾಗಿದ್ದು ನಮ್ಮ ಪರವಾಗಿ ಇಲ್ಲದಿರಲು ಕಾರಣವೇನು? ನಾವು ನ್ಯಾಯ ಮತ್ತು ಸಿದ್ಧಾಂತಗಳ ಮಾತುಗಳನ್ನಾಡುತ್ತಲೇ ಇರುತ್ತೇವೆ. ಶಕ್ತಿಯನ್ನು ತೆಗಳುತ್ತೇವೆ. ಅಂತಾರಾಷ್ಟ್ರೀಯ ಜಗತ್ತಿನಲ್ಲಿ ನ್ಯಾಯವು ಶಕ್ತಿಯ ಹಿಂಬಾಲಕ. ಪಾಕಿಸ್ತಾನವು ಮನಸೋ ಇಚ್ಛೆಯಿಂದ ವರ್ತಿಸುತ್ತದೆ. ಎಲ್ಲರೂ ಅದರ ಪರ ಇರುತ್ತಾರೆ. ನಾವು ಸ್ವಲ್ಪವಾದರೂ ವ್ಯವಹಾರಚತುರರಾಗಬೇಡವೇ?

**ದಳೀಯ ದೃಷ್ಟಿಕೋಣ**

ಈ ಒಪ್ಪಂದವನ್ನು ಮಾಡಲಾಗಿರುವ ರೀತಿ ಮತ್ತಷ್ಟು ನಿಂದನೀಯವಾಗಿದೆ. ಭಾರತಕ್ಕೆ ತೊಂದರೆಯುಂಟಾದಾಗಲೆಲ್ಲಾ ದೇಶದ ಸಕಲ ಶಕ್ತಿಗಳೂ ಒಟ್ಟಾಗಿ ಸರಕಾರದ ಜೊತೆ ಕೈ ಜೋಡಿಸಿವೆ. ಆದರೆ ಸರ್ಕಾರವು ಯಾವಾಗಲೂ ದಳೀಯ ದೃಷ್ಟಿಕೋಣದಿಂದ ಹೊರ ಬಂದಿಲ್ಲ. ನಿಜವಾಗಿ ನೋಡಿದರೆ ಈ ಮಹತ್ವದ ಪ್ರಶ್ನೆಯನ್ನು ಕುರಿತು ಸರ್ಕಾರವು ಎಲ್ಲ ಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಆದರೆ ಸರ್ಕಾರವು ಸಂಸತ್ ಸಭೆ ಕರೆಯಲೂ ಇಲ್ಲ ಅಥವಾ ವಿಭಿನ್ನ ಪಕ್ಷಗಳ ನಾಯಕರೊಂದಿಗೆ ಪರಾಮರ್ಶೆಯನ್ನೂ ಮಾಡಲಿಲ್ಲ. ಭಾರತದ ಸಂಸತ್ತನ್ನು ಗಂಭೀರವಾಗಿ ಅಲಕ್ಷ್ಯ ಮಾಡಲಾಗಿದೆ. ಸಂಸತ್ತಿನಲ್ಲಿ ಕೊಟ್ಟ ಸದ್ವಚನಗಳನ್ನು ಮೂಲೆಗೆ ತಳ್ಳಿ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದರೆ ಶಾಸನವು ಸಂಸತ್ತಿನ ಗೌರವಕ್ಕೆ ಅಪರಾಧ ಎಸಗಿರುವ ಅಪರಾಧಿ ಎಂದು ನಾನು ಹೇಳುತ್ತೇನೆ. ಇಂಥ ಒಪ್ಪಂದಗಳನ್ನು ಮಾಡಿಕೊಳ್ಳಲು ನಿರ್ಬಾಧಿತವಾದ ಅಧಿಕಾರ ಕೊಡಬಾರದಂಥ ಸಂದರ್ಭ ಇದಾಗಿದೆ. ನಮ್ಮ ಹಿಂದಿನ ಅನುಭವಗಳಿಂದ ಅರಿವಾಗಿರುವ ಸತ್ಯವೆಂದರೆ ಮಂತ್ರಿಗಳು ಮತ್ತು ಪ್ರಧಾನಮಂತ್ರಿಗಳು ಹೇಗೆ ಬೇಕಾದರೂ ಒಪ್ಪಂದ ಮಾಡಿಕೊಳ್ಳುತ್ತಾರೆ ಮತ್ತು ನಂತರ ತಮ್ಮ ಮಾತುಗಳನ್ನು ಉಳಿಸಲು ಸಂಸತ್ತು ಅದರ ಮೇಲೆ ತನ್ನ ಒಪ್ಪಿಗೆಯ ಮುದ್ರೆ ಒತ್ತಬೇಕಾಗುತ್ತದೆ. ಭಾರತದ ಸಾರ್ವಭೌಮತ್ವವು ಸಾಮ್ರಾಜ್ಯದ ಗೌರವಾನ್ವಿತ ಅಧಿಕಾರ. ಸಂಸತ್ತು ಕೇವಲ ಮುದ್ರೆ ಒತ್ತುವ ಸಂಸ್ಥೆಯಾಗಿ ಉಳಿದಿದೆಯೇ?

**ಒಪ್ಪಂದವನ್ನು ರದ್ದುಗೊಳಿಸಿ**

ದೇಶದ ಅಖಂಡತೆ ಮತ್ತು ಪ್ರಭುತ್ವವನ್ನು ರಕ್ಷಿಸುವುದು ಶಾಸಕಾಂಗದ ಕೆಲಸ. ಆದರೆ ಶಾಸ್ತ್ರೀಜಿಗಳು ದೇಶದ ಪ್ರಭುತ್ವವನ್ನು ಸಂಸತ್ತಿನಿಂದ ಕಸಿದುಕೊಂಡು,

ಭಾರತದ ಸೇನೆಯಿಂದ ಕಸಿದುಕೊಂಡು, ಭಾರತದ ಜನತೆಯಿಂದ ಕಸಿದುಕೊಂಡು, ಈಗ ಪಂಚರ ವಶಕ್ಕೆ ಕೊಟ್ಟಿದ್ದಾರೆ. ನಮ್ಮ ಪೂರ್ವಿಕರು ಪ್ರಾಣಾರ್ಪಣೆ ಮಾಡಿ ರಕ್ಷಿಸಿದ ಕಛ್‌ನ ಪವಿತ್ರ ರಣ ಭೂಮಿಯನ್ನು ಈ ರೀತಿ ಅಡವಿಡಬಹುದೇ? ಸರ್ಕಾರವು ರಾಷ್ಟ್ರದ ಅಸ್ಮಿತೆಯನ್ನು, ಜನರ ಭಾವನೆಗಳನ್ನು ತುಳಿದುಹಾಕಿದೆ. ಸರ್ಕಾರದ ಕುಕೃತ್ಯದ ವಿರುದ್ಧ ದನಿ ಎತ್ತುವುದು ನಮ್ಮ ಪವಿತ್ರ ಕರ್ತವ್ಯವಾಗಿದೆ. ಈ ಒಪ್ಪಂದವನ್ನು ರದ್ದುಗೊಳಿಸಬೇಕೆಂಬ ಕೋರಿಕೆಯನ್ನಿಡೋಣ. ಇಲ್ಲದಿದ್ದರೆ ಪದತ್ಯಾಗ ಮಾಡಿ, ಪ್ರಜಾತಂತ್ರ ಪದ್ಧತಿಯಿಂದ ಈ ಪ್ರಶ್ನೆಯನ್ನು ಸವಾಲಾಗಿ ಜನತೆಯೇ ಸ್ವೀಕರಿಸಲು ಅವಕಾಶ ಮಾಡಿಕೊಡಲಿ.

**ಸ್ಮರಣ ಪತ್ರ**

**ಕಛ್‌ನಲ್ಲಿ ಪಾಕಿಸ್ತಾನದೊಂದಿಗೆ ಯುದ್ಧವಿರಾಮದ ಒಪ್ಪಂದದ ವಿರುದ್ಧವಾಗಿ ಜನಸಂಘದಿಂದ ದಿ॥ ೩೦-೦೬-೬೫ರಂದು ಆಯೋಜಿಸಿರುವ ಪ್ರದರ್ಶನದ ಸಂದರ್ಭದಲ್ಲಿ ಭಾರತ ಸರ್ಕಾರಕ್ಕೆ ಕೊಡಲಾದ ಸ್ಮರಣ ಪತ್ರ:** ಪಾಕಿಸ್ತಾನವು ಕಛ್ ಮೇಲೆ ಮಾಡಿರುವ ಆಕ್ರಮಣದ ಸಮಸ್ಯೆಯನ್ನು ಕುರಿತು ಪಾಕಿಸ್ತಾನದೊಂದಿಗೆ ಮಾಡಲಾದ ಯುದ್ಧವಿರಾಮದ ಒಪ್ಪಂದವು ಭಾರತದ ಹಿತಕ್ಕೆ ಧಕ್ಕೆ ತರುವಂಥದ್ದು ಹಾಗೂ ರಾಷ್ಟ್ರೀಯ ಪ್ರತಿಷ್ಠೆಗೆ ಕುಂದು ತರುವಂಥದ್ದೂ ಆಗಿದೆ. ಭಾರತ ಸರ್ಕಾರವೂ ಈ ಒಪ್ಪಂದ ಮಾಡಿಕೊಳ್ಳುವ ಮೂಲಕ ದೇಶದ ಜನತೆಗೆ ಕೊಟ್ಟ ಮಾತನ್ನು ಉಲ್ಲಂಘನೆ ಮಾಡಿದೆ.

ಪಾಕಿಸ್ತಾನದಿಂದ ಭಾರತದ ನೆಲವನ್ನು ಪೂರ್ತಿಯಾಗಿ ಬಿಡಿಸಿಕೊಳ್ಳುವ, ಮತ್ತು ಜನವರಿ ೧, ೧೯೬೫ ರ ಪೂರ್ವದ ಸ್ಥಿತಿಯನ್ನು ಜಾರಿಗೆ ತರುವ ಹಾಗೂ ಭಾರತಕ್ಕೆ ತನ್ನ ನೆಲದ ಮೇಲಿನ ಪೂರ್ಣ ಪ್ರಭುತ್ವವನ್ನು ಅನುಭವಿಸುವ ಯಾವುದೇ ವ್ಯವಸ್ಥೆಯೂ ಇಲ್ಲ ಎಂಬುದು ಈ ಒಪ್ಪಂದದ ಷರತ್ತುಗಳನ್ನು ಅಧ್ಯಯನ ಮಾಡಿದಾಗ ಸ್ಪಷ್ಟವಾಗುತ್ತದೆ.

ಪಾಕಿಸ್ತಾನವು ಕಛ್‌ನಲ್ಲಿ ಭಾರತದ ನೆಲದ ಮೇಲೆ ನಿಷ್ಕಾರಣವಾಗಿ ಆಕ್ರಮಣ ಮಾಡಿದ ಅಪರಾಧಿ. ಅವರಿಂದ ಕ್ಷಮಾಯಾಚನೆಯನ್ನು ಮಾಡಿಸುವ ಹಾಗೂ ಜನ-ಧನದ ಹಾನಿಯನ್ನು ತುಂಬಿಸಿಕೊಡುವ ಬೇಡಿಕೆ ಇಡುವ ಬದಲು, ಈ ಒಪ್ಪಂದದ ಮೂಲಕ ಪಾಕಿಸ್ತಾನದ ತಪ್ಪುಗಳ ಮೇಲೆ ಪರದೆ ಎಳೆಯಲಾಗುತ್ತಿದೆ.

ಪಾಕಿಸ್ತಾನವು ಕಛ್‌ನಲ್ಲಿ ಸೈನ್ಯಬಲ ಪ್ರಯೋಗ ಮಾಡಿ ೧೯೬೦ ರ ಸ್ವರ್ಣಸಿಂಹ ಶೇಖರ ಒಪ್ಪಂದಕ್ಕೆ ಅಂತ್ಯ ಹಾಡಿದೆ. ಕಛ್‌ನ ರಣಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದವಿಲ್ಲ ಎಂದು ಪ್ರಧಾನ ಮಂತ್ರಿಗಳು ಸಂಸತ್ತಿನಲ್ಲಿ ಮತ್ತೆ ಮತ್ತೆ ಪುನರುಚ್ಚಾರ ಮಾಡಿದ್ದಾರೆ. ಈ ಪ್ರಶ್ನೆಯನ್ನು ಪಂಚರ ತೀರ್ಮಾನಕ್ಕೆ ಒಪ್ಪಿಸಲು ಸಮ್ಮತಿ ನೀಡಿ

ನಾವು ಕಛ್‌ನ ಕ್ಷೇತ್ರವು ಸಂಪೂರ್ಣವಾಗಿ ವಿವಾದಗ್ರಸ್ತವಾಗಿದೆ ಎಂಬುದನ್ನು ಮಾನ್ಯ ಮಾಡುತ್ತಿದ್ದೇವೆ.

ಭಾರತದ ನೆಲದಲ್ಲಿ ಪಾಕಿಸ್ತಾನಕ್ಕೆ ತಿರುಗಾಡಲು ಅನುಮತಿ ಕೊಟ್ಟು, ಕಂಜರ್ ಕೋಟ್, ಬಿಯರ್ ಬೇಲ್, ಮತ್ತು ೮೪ ಅಂಶಗಳ ಆಧಾರದ ಮೇಲೆ ಪಾಕಿಸ್ತಾನದ ಪೊಲೀಸ್ ಠಾಣೆಗಳನ್ನು ಸರಿಸಲು ಸ್ಪಷ್ಟ ವ್ಯವಸ್ಥೆ ಮಾಡದೇ ನಾವು ನಮ್ಮ ಅಧಿಕಾರಗಳ ಮೇಲಿನ ಅತಿಕ್ರಮವನ್ನು ಒಪ್ಪಿಕೊಳ್ಳುತ್ತಿದ್ದೇವೆ.

ಕಛ್‌ನಲ್ಲಿ ನಮ್ಮ ಸೇನೆಗಳನ್ನಿಟ್ಟು, ಅವರನ್ನು ಅಂತಾರಾಷ್ಟ್ರೀಯ ಗಡಿಯವರೆಗೆ ಕಳಿಸುವ ನಮ್ಮ ಅಧಿಕಾರವನ್ನು ತ್ಯಜಿಸಿ ವಿಗೋಕೋಟ್ ಮತ್ತು ಸರದಾರ್ ಪೋಸ್ಟ್ ನಿಂದ ನಮ್ಮ ಪೊಲೀಸ್ ಠಾಣೆಗಳನ್ನು ಸರಿಸಿ ನಾವೇ ನಮ್ಮ ಆಡಳಿತ ವ್ಯವಸ್ಥೆಯನ್ನು ಸೀಮಿತಗೊಳಿಸಿಕೊಳ್ಳುತ್ತಿದ್ದೇವೆ.

ಒಪ್ಪಂದ ಮಾಡಿಕೊಳ್ಳುವ ಮೊದಲು ಸರ್ಕಾರವು ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲೂ ಇಲ್ಲ, ವಿರೋಧ ಪಕ್ಷದವರೊಂದಿಗೆ ವಿಚಾರವಿನಿಮಯ ಮಾಡಿಕೊಳ್ಳುವ ಸೌಜನ್ಯವನ್ನೂ ತೋರಿಸಲಿಲ್ಲ. ಇದರಿಂದ ಸರ್ಕಾರವು ಜನರ ಭಾವನೆಗಳನ್ನು ಮಾನ್ಯ ಮಾಡದಿರುವ ಪಣ ತೊಟ್ಟಿದೆ ಎಂಬುದು ಸ್ಪಷ್ಟವಾಗಿದೆ.

ಸರ್ಕಾರವು ಅಪಮಾನಜನಕವಾದ ಈ ಒಪ್ಪಂದವನ್ನು ರದ್ದುಪಡಿಸಲಿ ಮತ್ತು ಭಾರತದ ಪ್ರತಿ ಅಂಗುಲ ನೆಲವನ್ನೂ ಆಕ್ರಮಣಕಾರಿಗಳಿಂದ ಮುಕ್ತಗೊಳಿಸುವ ರಾಷ್ಟ್ರೀಯ ಸಂಕಲ್ಪವನ್ನು ಪೂರ್ಣಗೊಳಿಸಲು ದೃಢವಾಗಿ ಮುನ್ನಡೆಯಲಿ ಎಂಬುದೇ ರಾಷ್ಟ್ರೀಯ ಸ್ವಾಭಿಮಾನದ ಒತ್ತಾಯ. ಹಾಗೆ ಮಾಡದಿದ್ದರೆ ಸರ್ಕಾರ ತ್ಯಾಗಪತ್ರ ಕೊಟ್ಟು ಈ ಪ್ರಶ್ನೆಯನ್ನು ಕುರಿತು ಜನತೆಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶವನ್ನು ಕೊಡಲಿ ಎಂಬುದು ಲೋಕತಂತ್ರದ ಕೋರಿಕೆಯಾಗಿದೆ.

– ಜುಲೈ ೮, ೧೯೬೫

* * * * *

# ಶಾರದಾಮಾತೆಗೆ ಪ್ರಣಾಮಗಳು!

ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು ತಮ್ಮ ಒಂದು ಲೇಖನದಲ್ಲಿ ಗುಲಾಮಿ ಕಾಶ್ಮೀರದಲ್ಲಿರುವ ಶಾರದಾ ಪೀಠದ ಅಲೌಕಿಕತೆಯ ವರ್ಣನೆಯನ್ನು ಮಾಡಿದ್ದಾರೆ. ಅದನ್ನು ನಾವು ಇಲ್ಲಿ ಪ್ರಕಟಿಸುತ್ತಿದ್ದೇವೆ. ಪ್ರಸ್ತುತ ಲೇಖನವನ್ನು ಪಂಡಿತ್ ದಿನ್ ದಯಾಳ್ ಉಪಾಧ್ಯಾಯರ 'ಜಗದ್ಗುರು ಶ್ರೀ ಶಂಕರಾಚಾರ್ಯ' ಎಂಬ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.

ಕಾಶ್ಮೀರದಲ್ಲಿ ಇಬ್ಬರು ದೇವತೆಗಳ ಉಪಾಸನೆಯು ಪ್ರಚಲಿತದಲ್ಲಿದೆ. ಒಬ್ಬಳು ವಿದ್ಯಾದೇವತೆ ಶಾರದೆ, ಇನ್ನೊಬ್ಬಳು ಶತ್ರು ಸಂಹಾರಿಣಿಯಾದ ಶಾರಿಕಾ ಮಾತೆ.

ಶ್ರೀನಗರದಲ್ಲಿರುವ ಪ್ರಸಿದ್ಧ ನದಿಯ ಬಳಿ ಹರಿ ಪರ್ವತದ ಮೇಲೆ ತಾಯಿ ಶಾರಿಕಾ ದೇವಿಯ ಪ್ರಾಚೀನ ಮಂದಿರವಿದೆ. ಪಾರ್ವತಿಯ ಅವತಾರವಾದ, ೧೮ ಭುಜಗಳುಳ್ಳ ತಾಯಿ ಶಾರಿಕಾ ದೇವಿಯು 'ಜಲೋದ್ಭವ' ಎನ್ನುವ ರಾಕ್ಷಸನ ಸಂಹಾರ ಮಾಡಿದಳು ಎನ್ನುವ ಪ್ರತೀತಿ ಇದೆ. ಈ ರಾಕ್ಷಸನು ಹರಿ ಪರ್ವತದ ಕಾಡುಗಳಲ್ಲಿ ಸಾಧನೆಗೈಯ್ಯುತ್ತಿದ್ದ ಋಷಿ–ಮುನಿಗಳಿಗೆ ಕಂಟಕಪ್ರಾಯನಾಗಿದ್ದನು.

ಪ್ರಾಚೀನ ಕಾಲದಿಂದಲೂ ಶಿಕ್ಷಣ, ವಿವೇಕ ಮತ್ತು ಜ್ಞಾನದ ಪ್ರತೀಕದಂತಿರುವ ಶಾರದಾ ಮಾತೆಯು ಭಾರತದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದ್ದಾಳೆ. ಕಾಶ್ಮೀರವು ವಿದ್ಯೆಯ ಪ್ರಮುಖ ಕೇಂದ್ರವಾಗಿದೆ. ವರ್ತಮಾನದಲ್ಲಿ ಕಾಶ್ಮೀರದ ಯಾವ ಒಂದು ಭಾಗ ಪಾಕಿಸ್ತಾನದ ವಶದಲ್ಲಿದೆಯೋ, ಅದರ ಜಿಲ್ಲೆಯೇ ಮುಜಫರಾಬಾದ್, ಇದು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಗೆ ಹೊಂದಿಕೊಂಡಂತಿದೆ. ಮುಜಫರಾಬಾದಿನ ಹತ್ತಿರದಲ್ಲೇ ಕಿಶನ್‌ಗಂಗಾ ನದಿಯು ಹರಿಯುತ್ತದೆ. ಈ ಕಿಶನ್‌ಗಂಗಾ ಮತ್ತು ಮಧುಮತಿ ನದಿಗಳ ಮಧ್ಯದಲ್ಲೇ ಶಾರದಾ ಮಾತೆಯ ಪ್ರಾಚೀನ ಮಂದಿರವಿದೆ. ದೌರ್ಭಾಗ್ಯವೆಂದರೆ, ಈ ದಿನ ಈ ಶಾರದಾ ಪೀಠವು ಪಾಕಿಸ್ತಾನದ ವಶದಲ್ಲಿರುವ ಜಾಗದಲ್ಲಿದೆ. (ಶಾರದಾ ಪೀಠದ ಕತೆಯು ವಿಸ್ತಾರವಾಗಿ 'ಪಾಂಚಜನ್ಯ' ಪತ್ರಿಕೆಯ ೫ನೇ ಅಕ್ಟೋಬರ್ ೧೯೭೭ನೇ ಸಂಚಿಕೆಯಲ್ಲಿ ಪ್ರಕಟಗೊಂಡಿದೆ.) ಪೌರಾಣಿಕ ಗ್ರಂಥಗಳಲ್ಲಿ ಕಾಶ್ಮೀರದ ಹೆಸರು ಶಾರದಾ ದೇಶ ಎಂದು ಬರೆದಿರುವುದನ್ನು ಕಾಣಬಹುದು. ಆಲ್‌ಬೆರೂನಿ, ಹುಯೆನ್‌ತ್ಸಾಂಗ್‌ರಂತಹ ದೇಶವಿದೇಶದ ಅನೇಕ ಲೇಖಕರು, ವಿದ್ವಾಂಸರು ಶಾರದಾ ಪೀಠವನ್ನು ಸುಂದರವಾಗಿ ವರ್ಣಿಸಿದ್ದಾರೆ.

ಕಾಶ್ಮೀರದ ಸಾಂಸ್ಕೃತಿಕ, ಐತಿಹಾಸಿಕ ಮತ್ತು ಭಾಷೆಯ ಪರಿಚಯವೇ 'ಶಾರದಾ', ಯಾವ ಆದಿ ಶಂಕರಾಚಾರ್ಯರು ಸುತ್ತಾಡುತ್ತಾ ಇಲ್ಲಿಗೆ ಬಂದು ತಲುಪಿದರೋ, ಅದು ಇದೇ ಶಾರದಾ ಪೀಠ. ಅವರು ಇಲ್ಲಿ ವಿದ್ವಾಂಸರ ಜೊತೆ ಶಾಸ್ತ್ರಾರ್ಥಗಳನ್ನು ನಡೆಸಿದರು.

ತಕ್ಷಶಿಲೆಯಿಂದ ಆಚಾರ್ಯ ಶಂಕರಾಚಾರ್ಯರು ಕಾಶ್ಮೀರದ ಕಡೆಗೆ ಹೊರಟರು. ಕಶ್ಯಪ ಮಹರ್ಷಿಗಳ ಊರಾದ ಕಾಶ್ಮೀರದ ಮಡಿಲಲ್ಲಿ ಕೇವಲ ಕೇಸರಿಯ ಕಣಿವೆಗಳಷ್ಟೇ ಅಲ್ಲ, ಕಾವ್ಯ ಮತ್ತು ಶಿಲೆಗಳೂ ನಲಿದಾಡುತ್ತಿವೆ. ತನ್ನ ಪ್ರಾಕೃತಿಕ ಸೌಂದರ್ಯದಿಂದ ಅದು ನಂದನವನವನ್ನೂ ಮೀರಿಸುವುದಷ್ಟೇ ಅಲ್ಲದೆ ಸಾಹಿತ್ಯ ಮತ್ತು ಸಂಸ್ಕ ೃತಿಯ ಶುದ್ಧ ಹಾಗೂ ಸರಳ ಸೌಂದರ್ಯದ ಕಾರಣದಿಂದ ಸ್ವತಃ ಸರಸ್ವತಿಯೇ ವಿರಾಜಮಾನಳಾದಳು, ನಗರದ ಶಾರದಾ ಮಂದಿರವು ಬಹಳ ಪ್ರಸಿದ್ಧವಾಗಿತ್ತು. ದೊಡ್ಡ ದೊಡ್ಡ ವಿದ್ವಾಂಸರು ಬಂದು ಶಾರದೆಯ ಪಾದಗಳಿಗೆ ಶಿರಬಾಗಿ ನಮಿಸುತ್ತಿದ್ದರು. ಅವಳ ಕೃಪೆಗೆ ಪಾತ್ರರಾಗಲು ಬಯುಸುತ್ತಿದ್ದರು. ಆದರೆ ಅವರಿಗೆ ನಿರಾಶೆಯಾಗುತ್ತಿತ್ತು. ಏಕೆಂದರೆ ಯುಗ ಯುಗಗಳಿಂದ ಶಾರದೆಯ ಮಂದಿರದೊಳಗೆ ಯಾರೂ ಪ್ರವೇಶಿಸುವಂತಿಲ್ಲ. ಶಾರದೆಯ ಅನುಗ್ರಹವಿಲ್ಲದೆ ಯಾರು ಜಗದ್ಗುರುಗಳಾಗಲು ಸಾಧ್ಯ?

ಆಚಾರ್ಯ ಶಂಕರರು ಶಾರದೆಯನ್ನು ಧ್ಯಾನಿಸುತ್ತಾ ಮಂದಿರದ ಕಡೆಗೆ ಹೊರಟಿದ್ದರು. ಪ್ರಕೃತಿಯು ಸಕಲ ಶೃಂಗಾರದೊಂದಿಗೆ ಅವರನ್ನು ಅಕರ್ಷಿಸಲು ಇಚ್ಛಿಸಿತ್ತು. ಸುಂದರವಾಗಿ ಅರಳಿದ್ದ ಹೂವುಗಳು ನಗುತ್ತಾ ಅವರನ್ನು ಸ್ವಾಗತಿಸಿತು ಮತ್ತು ಒಂದೆರಡು ಮಾತುಗಳನ್ನಾಡಲು ಬಯಿಸಿತು. ಮೊಗ್ಗುಗಳು ಒಯ್ಯಾರದಿಂದ ಕಿವಿಯ ಬಳಿ ಬಂದು ತನ್ನ ಪ್ರೇಮವನ್ನು ಉಸುರಿದವು ಮತ್ತು ಕರಸ್ಪರ್ಶದ ಆಸೆಯನ್ನು ವ್ಯಕ್ತಗೊಳಿಸಿದವು. ಅಪ್ಸರೆಯರು ಸರೋವರಗಳಲ್ಲಿ ತಮ್ಮ ರೂಪವನ್ನು ನೋಡುವ ನೆಪದಲ್ಲಿ ಕೆಳಗಿಳಿದು ಬಂದರು. ಗಂಧರ್ವರು ಪಕ್ಷಿಗಳ ಸ್ವರದಲ್ಲಿ ಹಾಡಲಾರಂಭಿಸಿದರು. ಆದರೆ ಯಾರಿಗೂ ಸಹ ಶಂಕರರನ್ನು ತಡೆಯಲು ಸಾಧ್ಯವಾಗಲಿಲ್ಲ. ಅವು ಇಂದ್ರಿಯಗಳನ್ನು ಎಷ್ಟೇ ಸೆಳೆದರೂ ಅವರು ಸತ್ಯದ ಸಾಕ್ಷಾತ್ಕಾರವನ್ನು ಮಾಡಿಕೊಂಡವರು, ಹಾಗಾಗಿ ಅದು ಬಾಯಿ ಕಣ್ಣುಗಳಿಗೆ ಎಷ್ಟೇ ಆಕರ್ಷಕವಾಗಿದ್ದರೂ ಪ್ರಪಂಚದ ಅಸತ್ಯಮಯ ರೂಪ ಅವರನ್ನು ಹೇಗೆ ಆಕರ್ಷಿಸಲು ಸಾಧ್ಯವಿತ್ತು? ಛಲಗಾರ ಯುವಕನಂತೆ ಅವರು ತಮ್ಮ ಗುರಿಯೆಡೆಗೆ ಮುಂದೆ ಸಾಗುತ್ತಲೇ ಇದ್ದರು. ಆಚಾರ್ಯ ಶಂಕರರು ಮುಂದೆ ನಡೆಯುತ್ತಿದ್ದರು ಮತ್ತು ಭಾರತೀಯ ಆತ್ಮದ ಆಧ್ಯಾತ್ಮಿಕ, ಅಧಿದೈವಿಕ ಮತ್ತು ಅಧಿಭೌತಿಕ ಸ್ವರೂಪವು ಸಂಪೂರ್ಣ ದೃಶ್ಯದಲ್ಲಿ ನಾಟ್ಯವಾಡುತ್ತಿತ್ತು.

ಆಚಾರ್ಯರು ಶ್ರೀನಗರದ ಕಡೆಗೆ ತೆರಳಿದರು. ಅನೇಕ ವಿದ್ವಾಂಸರು ಅಲ್ಲಿ ಬಂದು ಸೇರಿದ್ದರು. ಶಂಕರಾಚಾರ್ಯರ ವಿಜಯ ಪತಾಕೆಯು ಸಂಪೂರ್ಣ ಭಾರತದಲ್ಲಿ ಹಾರಾಡುತ್ತಿತ್ತು. ಆದರೆ ಕಾಶ್ಮೀರದ ಶಾರದಾ ಭಕ್ತರು ಇವರ ಮುಂದೆ ತಲೆ ಬಾಗಲು ಸಿದ್ಧರಿರಲಿಲ್ಲ. ಶಂಕರಾಚಾರ್ಯರು ಸರಸ್ವತಿಯ ಅವತಾರವಾದ ಭಾರತಿಯನ್ನು ತಮ್ಮ ಶಾಸ್ತ್ರಗಳಿಂದ ಗೆದ್ದಿದ್ದರು. ಆದರೂ ಕಾಶ್ಮೀರೀ ಭಕ್ತರಿಗೆ ಇದೇನೋ ಹೆಚ್ಚು ಮಹತ್ವದ ವಿಷಯವಾಗಿರಲಿಲ್ಲ. ಅವರಿಗೆ ಕಿವಿಗಿಂತ ಕಣ್ಣಿನ ಮೇಲೆ ಹಚ್ಚು ನಂಬಿಕೆ ಇತ್ತು. ಆಚಾರ್ಯ ಶಂಕರರಿಗೆ ಸಹ ಅವರನ್ನೂ ತಮ್ಮ ದಾರಿಗೆ ತರದೆ ಹೇಗಿರಲು ಸಾಧ್ಯ. ಎಲ್ಲಿಯವರೆಗೆ ಮನಸ್ಸಿನಲ್ಲಿ ವಿಷಯ ವಿಕಾರಗಳು ತುಂಬಿರುವುದೋ ಅಲ್ಲಿಯವರೆಗೆ ಬರೀ ಶರೀರವು ದಷ್ಟ ಪುಷ್ಟವಾಗಿದ್ದರೆ ಏನೂ ಪ್ರಯೋಜನವಿಲ್ಲ ಹಾಗೂ ಕಾಶ್ಮೀರವು ಕೇವಲ ಪ್ರಾಕೃತಿಕ ದೃಷ್ಟಿಯಿಂದಲೇ ಅಲ್ಲ ಜ್ಞಾನ ಮತ್ತು ದೃಷ್ಟಿಯಿಂದಲೂ ಭಾರತದ ಕಿರೀಟಪ್ರಾಯವೇ ಆಗಿದೆ.

ಆಚಾರ್ಯ ಶಂಕರರು ಮಂದಿರದ ಕಡೆಗೆ ನಡೆದರು. ಅನೇಕ ವಿದ್ವಾಂಸರು ಅಲ್ಲಿ ಹಾಜರಾಗಿದ್ದರು, ಅನ್ಯ ವಿದ್ವಾಂಸರಂತೆ ಶಂಕರರೂ ಸಹ ಶಾರದಾ ಮಂದಿರದಿಂದ ನಿರಾಶೆಯಿಂದ ಹಾಗೂ ತಲೆತಗ್ಗಿಸಿ ವಾಪಸ್ಸು ಬರುವರೆಂದು ಅವರೆಲ್ಲಾ ತಿಳಿದುಕೊಂಡಿದ್ದರು. ಆಚಾರ್ಯರ ಹೆಜ್ಜೆಗಳು ಮಂದಿರದ ಬಾಗಿಲಿನ ಕಡೆಗೆ ಹೋದಂತೆಲ್ಲಾ, ಅಲ್ಲಿ ನೆರೆದಿದ್ದ ಜನಸಮೂಹದ ಕುತೂಹಲ ಹೆಚ್ಚಾಗುತ್ತಿತ್ತು. ಶಂಕರರು ಯಶಸ್ವಿಯಾಗುವುದಿಲ್ಲವೆಂಬ ನಂಬಿಕೆ ಯಾರು ಯಾರಲ್ಲಿ ಇತ್ತೋ, ಅವರಿಗೆಲ್ಲಾ ಮನಸ್ಸಿನಲ್ಲೇ ಸಂತೋಷವಾಗುತ್ತಿತ್ತು. ಏಕೆಂದರೆ ಶಂಕರರು ಆ ಕ್ಷಣ ತಮ್ಮ ಸಮಕ್ಕೆ ಕೆಳಗಿಳಿಯುಬಹುದು ಎನ್ನುವ ಯೋಚನೆ ಅವರಲ್ಲಿತ್ತು. ಶಂಕರಾಚಾರ್ಯರು ಬಾಗಿಲಿನ ಬಳಿ ಬಂದರು, ಕೈ ಚಾಚಿದರು. ನೂರಾರು ಕೈಗಳು ಅವರ ಚಾಚುತ್ತಿರುವ ಕೈಯನ್ನು ನೋಡಿದವು. ಆ ಕೈಯು ಹಿಂತಿರುಗಲಿಲ್ಲ ಬದಲಾಗಿ ಅದು ಮಂದಿರದ ಬಾಗಿಲನ್ನು ಸರಿಸಿ ಹಿಂದಕ್ಕೆ ನೂಕುತ್ತಿರುವುದನ್ನು ನೂರಾರು ಜನರು ನೋಡಿದರು. ಬಾಗಿಲು ತೆರೆಯಿತು ಮತ್ತು ಆಚಾರ್ಯರು ಅತ್ಯಂತ ಸಹಜವಾಗಿ ಒಳ ಪ್ರವೇಶಿಸಿದರು. ಎಲ್ಲೆಲ್ಲೂ ಶಂಕರಾಚಾರ್ಯರಿಗೆ ಜಯಜಯಾಕಾರ ಮೊಳಗಿತ್ತು. ಅವರ ವಿರೋಧಿಗಳ ಬಾಯಿಗೆ ಬೀಗ ಬಿತ್ತು. ಜನರ ಹರ್ಷಧ್ವನಿ ಮುಗಿಲು ಮುಟ್ಟಿತ್ತು. ಆದರೆ ವಿದ್ವಾಂಸರ ಕಾಲ ಕೆಳಗಿನ ಭೂಮಿ ಕುಸಿದಿತ್ತು. ಅವರು ಹಂತ–ಹಂತವಾಗಿ ಕೆಳಗಿಳಿಯುತ್ತಿದ್ದರು. ಶಾರದಾ ಮಾತೆಗೆ ಪೂಜೆ ಸಲ್ಲಿಸಿ ಶಂಕರಾಚಾರ್ಯರು ಹೊರ ಬಂದರು. ಜನರು ಶ್ರದ್ಧಾಭಕ್ತಿಗಳಿಂದ ಅವರ ದರ್ಶನ ಪಡೆದರು. ಆ ಸಂದರ್ಭದಲ್ಲೆ ಶಂಕರರು ಜನರನ್ನು ಉದ್ದೇಶಿಸಿ ಉಪದೇಶ ನೀಡಿದರು. ಭಾರತದ ಐಕ್ಯತೆ ಮತ್ತು ಆತ್ಮದ

ಸತ್ಯತೆಯ ಸಂದೇಶವನ್ನು ಸಾರಿದರು. ಶಂಕರಾಚಾರ್ಯರು ಕಾಶ್ಮೀರದಲ್ಲಿ ಕೆಲದಿನಗಳವರೆಗೆ ತಂಗಿದರು. ಅವರು ಯಾವ ಬೆಟ್ಟದ ಮೇಲಿದ್ದರೋ ಆ ಬೆಟ್ಟವು ಶಂಕರಾಚಾರ್ಯರ ಬೆಟ್ಟ ಎಂದು ಹೇಳುವುದು ತಪ್ಪಾಗುತ್ತದೆ. ಏಕೆಂದರೆ ಎಲ್ಲೆಲ್ಲಿ ಅವರು ಹೆಜ್ಜೆ ಇಟ್ಟಿದ್ದರೋ ಅದೆಲ್ಲಾ ಅವರದೇ, ಭಾರತದ್ದೇ, ಅವರ ಆ ಪಾದಗಳು ಭಾರತದ ನೆಲ–ಜಲದ ಕಣ–ಕಣವನ್ನೂ ಸ್ಪರ್ಶಿಸಿವೆ.

* * * * *

# ಆಪತ್ಕಾಲದಲ್ಲಿ ರಾಷ್ಟ್ರೀಯ ಶಕ್ತಿಗಳ ಜವಾಬ್ದಾರಿ

ನಮಗಾಗಿ ಸಹಾಯಕ ಮಿತ್ರರು ಇರುವ, ಇಲ್ಲದಿರುವ ಪ್ರಶ್ನೆಯು ಬಂದಾಗ, ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿಯೂ ಸ್ವಲ್ಪ ಸಮಯದಲ್ಲೇ ನಾವು ನಮ್ಮ ಒಂದೆರಡು ಮಿತ್ರರನ್ನು ಒಟ್ಟು ಹಾಕಬಹುದು. ಆದರೆ ಇಂತಹ ಸಮಯದಲ್ಲಿ ನಾವು ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಈ ಜನರಂತೂ ಸ್ನೇಹಹಸ್ತ ಚಾಚಿ ನಮ್ಮ ರಾಷ್ಟ್ರದ ಸನಿಹ ಬರಬಹುದು, ಆದರೆ ನಿಜವಾದ ಸ್ನೇಹವು ಕಡಿದುಹೋಗುವ ಹಾಗೆ ನಮ್ಮ ರಾಷ್ಟ್ರದ ನಡವಳಿಕೆ ಇರಬಾರದು. ನಮ್ಮ ಸನಿಹ ಬರುವವರನ್ನು ನಾವು ನಮ್ಮ ದುರ್ನಡತೆಯಿಂದ ದೂರ ಮಾಡುವಂತಾಗಬಾರದು. ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ವಿಚಾರಪೂರ್ವಕವಾಗಿ ಅನುಕೂಲ ಸಂದರ್ಭದ ಲಾಭ ಪಡೆಯುವಂತಹ ದೊಡ್ಡ ತಪ್ಪು ನಾವು ಮಾಡಬಾರದು. ಈ ದೃಷ್ಟಿಯಿಂದ ಮುಂದೆ ಬರುವಂತಹ ಕಠಿಣ ಪರಿಸ್ಥಿತಿಗಳನ್ನು ಎದುರಿಸಲು ಸಮಸ್ತ ರಾಷ್ಟ್ರವಾದಿಗಳು ಟೊಂಕಕಟ್ಟಿ ನಿಲ್ಲಬೇಕಾಗುತ್ತದೆ.

ಕಮ್ಯುನಿಸ್ಟ್ ಚೀನಾದ ಆಕ್ರಮಣದಿಂದ ಉಂಟಾದ ಸ್ಥಿತಿಯನ್ನು ರಾಷ್ಟ್ರಪತಿಗಳ ಮೂಲಕ ತುರ್ತು ಪರಿಸ್ಥಿತಿಯ ಘೋಷಣೆಯಾದಾಗ ಸಮಾಜದಲ್ಲಿ ಎಲ್ಲಾ ನೀತಿ ನಿಯಮಗಳನ್ನು ಮರು ಪರಿಶೀಲಿಸುವ ಮತ್ತು ಕದನವಿರಾಮದ ಘೋಷಣೆಯ ನಂತರ ಪುನಃ ದ್ವಂದ್ವಾತ್ಮಕ ಉಪೇಕ್ಷೆಯ ಭಾವನೆಗಳು ನಿರ್ಮಾಣವಾದಾಗ ಅದರ ಆಧಾರದ ಅಡಿಯಲ್ಲಿ ದೂರದೃಷ್ಟಿ ಹಾಯಿಸಿ ವಿಚಾರ ಮಾಡಿದಾಗ ಕೇವಲ ಚೀನಾದೆಡೆಗೆ ನೋಡಿದರೆ ಪಾಕಿಸ್ತಾನದ ಬಗ್ಗೆ ಉಪೇಕ್ಷೆಯಾಗಿದೆ ಎನ್ನುವುದು ಸ್ಪಷ್ಟವಾಯಿತು. ಕೆಲವರಂತೂ ಕೊಡು–ಕೊಳ್ಳುವುದರ ಮೂಲಕ ಪಾಕಿಸ್ತಾನದ ಜೊತೆ ಮೈತ್ರಿ ಮಾಡಿಕೊಳ್ಳುವ ಮಾತನ್ನಾಡುತ್ತಾರೆ. ಆದರೆ ವಾಸ್ತವವಾಗಿ ಹೀಗೆ ಮಾಡಿದರೆ ಖಂಡಿತವಾಗಿಯೂ ತಪ್ಪಾಗುತ್ತದೆ.

### ಎಲ್ಲಾ ಪರಿಸ್ಥಿತಿಗಳ ಸರಿಯಾದ ಮೌಲ್ಯಮಾಪನ ಅವಶ್ಯಕ

ದೇಶದ ಸರ್ವಾಂಗೀಣ ಸುರಕ್ಷತೆಯ ದೃಷ್ಟಿಯಿಂದ ವಿಚಾರ ಮಾಡಿದಾಗ ಎಲ್ಲಾ ಕ್ಷೇತ್ರಗಳ ಮತ್ತು ತನ್ನ ವಾಸ್ತವಿಕ ಶಕ್ತಿಯನ್ನು ಒಗ್ಗೂಡಿಸುವುದು ಅತ್ಯಂತ ಅವಶ್ಯಕವಾಗಿದೆ. ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಎನ್ನುವಂತಾಗಬಾರದು. ಕೇವಲ ಬಾಹ್ಯ ಬಿಕ್ಕಟ್ಟುಗಳನ್ನಷ್ಟೇ ಅಲ್ಲದೆ, ಆಂತರಿಕ ಸಮಸ್ಯೆಗಳ ಬಗ್ಗೆಯೂ ಚಿಂತಿಸಬೇಕಾಗಿದೆ.

ತನ್ನ ಶಕ್ತಿ ಮತ್ತು ತನ್ನ ದುರ್ಬಲತೆಯ ಬಗ್ಗೆ ಸಮಗ್ರ ದೃಷ್ಟಿ ಹರಿಸಬೇಕು ಮತ್ತು ಆಂತರಿಕ ಹಾಗೂ ಬಾಹ್ಯ ಶತ್ರುಗಳ ಬಗ್ಗೆ ಚಿಂತಿಸುವುದೂ ಸಹ ಅನಿವಾರ್ಯವಾಗಿದೆ.

ಇಂದು ಸಮಸ್ತ ದೇಶವಾಸಿಗಳು ಯಾವುದೇ ಒಂದು ನಿಶ್ಚಿತ ವಿಚಾರದ ಆಧಾರದ ಮೇಲೆ ಸಂಘಟಿತರಾಗಿಲ್ಲ ಆದ್ದರಿಂದ ಇಂತಹ ಪರಿಸ್ಥಿತಿಯಲ್ಲಿ ರಾಜಕೀಯ ಮತ್ತು ವೈಚಾರಿಕ ಸ್ವಾತಂತ್ರ್ಯ, ವ್ಯಾವಹಾರಿಕತೆ ಮತ್ತು ಭೌಗೋಳಿಕ ಸ್ಥಿತಿಗಳ ದೃಷ್ಟಿಯಿಂದ ವಿಚಾರ ಮಾಡುತ್ತಾ ನಿಜವಾದ ಅರ್ಥದಲ್ಲಿ ನಮ್ಮ ನೆರೆ ರಾಷ್ಟ್ರಗಳ ನಿರ್ಮಾಣದ ವಾಸ್ತವಿಕ ಆಧಾರವನ್ನು ತಿಳಿಯುವ ಅವಶ್ಯಕತೆ ಇದೆ.

**ಪಾಕಿಸ್ತಾನವು ನಮ್ಮ ಶತ್ರು**

ರಾಜಕೀಯ ದೃಷ್ಟಿಕೋನಕ್ಕೆ ಸಂಬಂಧಪಟ್ಟಂತೆ, ನಮ್ಮ ದೇಶದ ಮೇಲೆ ಕಮ್ಯುನಿಸ್ಟ್ ಚೀನಾವು ಆಕ್ರಮಣ ನಡೆಸಿದೆ. ಅದು ದೇಶದ ಪ್ರತಿಯೊಬ್ಬ ವ್ಯಕ್ತಿಯನ್ನು ಚೆನ್ನಾಗಿ ಅರಿತುಕೊಂಡಿದೆ. ಆದರೆ ಪಾಕಿಸ್ತಾನದ ಕಡೆಯಿಂದಲೂ ನಮ್ಮ ದೇಶದ ಮೇಲೆ ಸಂಕಟದ ಕರಿ ಮೋಡಗಳು ಆವರಿಸಿಕೊಂಡಿವೆ. ಇದನ್ನು ಮರೆಯುವುದಾಗಲೀ, ಅಥವಾ ಉದಾಸೀನ ತೋರಿಸುವುದಾಗಲೀ, ಖಂಡಿತವಾಗಿಯೂ ಸರಿಯಲ್ಲ. ಪಾಕಿಸ್ತಾನದ ಮನಸ್ಸಿನಲ್ಲಿ ಕೇವಲ ಕಾಶ್ಮೀರವನ್ನು ಕಬಳಿಸಲು ಇಚ್ಛಿಸುವುದು ಮಾತ್ರವಲ್ಲದೆ ಇನ್ನೇನೋ ಇದೆ. ಸಮಯ ಸಿಕ್ಕಾಗ ಅದು ಪೂರ್ಣಗೊಳಿಸಲು ಪ್ರಯತ್ನಿಸುತ್ತಿದೆ.

ವೈಚಾರಿಕ ದೃಷ್ಟಿಯಿಂದಲೂ ಸಹ ಚೀನಾ ಮತ್ತು ಪಾಕಿಸ್ತಾನಗಳು ನಮ್ಮ ಶತ್ರುಗಳೇ ಆಗಿವೆ. ನೆರೆ ರಾಷ್ಟ್ರಗಳು ಸಾಮಾನ್ಯವಾಗಿ ಶತ್ರುಗಳಾಗಿರುತ್ತಾರೆ. ಇದರ ಕಾರಣವೇನೆಂದರೆ ಇವುಗಳ ವೈಯಕ್ತಿಕ ಹಿತಾಸಕ್ತಿಗಳಲ್ಲಿ ಪರಸ್ಪರ ಘರ್ಷಣೆಗಳು ಆಗುತ್ತಿರುತ್ತವೆ. ನೆರೆಯವರು ಬಹಳ ಎಚ್ಚರಿಕೆಯಿಂದ ಇರುವುದು ಸಾಮಾನ್ಯ ನಿಯಮ.

**ಯಾರ ಮೇಲೆ ವಿಶ್ವಾಸವಿಡುವುದು?**

ವ್ಯಾವಹಾರಿಕವಾಗಿ ಹೇಳಬೇಕೆಂದರೆ ಒಳ್ಳೆಯ ವ್ಯಕ್ತಿಯ ಹತ್ತಿರವೂ ಎಚ್ಚರಿಕೆಯಿಂದಿರಬೇಕು. ಯಾರು ಎಲ್ಲಿಯವರೆಗೆ ತಮ್ಮನ್ನು ಪ್ರಾಮಾಣಿಕರೆಂದು ಸಾಬೀತುಪಡಿಸುವುದಿಲ್ಲವೋ; ಅವರ ಮೇಲೆ ವಿಶ್ವಾಸ ಇಡಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಮೊದಲಿನಿಂದಲೂ ತಡೆಯುವುದು (Prevention) ಮತ್ತು ಘಟನೆ ನಡೆದ ನಂತರ ಎಚ್ಚರಿಕೆ ವಹಿಸುವುದು ಅವಶ್ಯಕವಾಗಿದೆ. ಚೀನಾ ಮತ್ತು ಪಾಕಿಸ್ತಾನ ಇವೆರಡು ನೆರೆ ರಾಷ್ಟ್ರಗಳ ಸ್ವಭಾವವೇ ಶತ್ರುತ್ವದಿಂದ ಕೂಡಿರುವಂಥಾದ್ದು. ಇವೆರಡರ

ಜೊತೆ ಸಾಮಾನ್ಯವಾಗಿ ಮೈತ್ರಿಯನ್ನು ಮಾಡಿಕೊಳ್ಳಲಾಗುವುದಿಲ್ಲ. ಶತ್ರುತ್ವವನ್ನು ಮಾಡಿ ಬದುಕಲು ಸಾಧ್ಯವೆ ಇಲ್ಲ ಎನ್ನುವಂತಹ ಪರಿಸ್ಥಿತಿಯನ್ನು ನಾವು ಹುಟ್ಟು ಹಾಕಿದಾಗ ಮಾತ್ರ ಅವರು ನಮ್ಮ ಮಿತ್ರರಾಗಬಲ್ಲರು.

**ಬಲವಾಗಿ ವಿರೋಧಿಸುವ ಅವಶ್ಯಕತೆ**

ಭೌಗೋಳಿಕ ದೃಷ್ಟಿಯಿಂದಲೂ ಪಾಕಿಸ್ತಾನದ ನಿರ್ಮಾಣದ ಬಗ್ಗೆ ಯಾವುದೇ ಬಲವಾದ ಆಧಾರವಿಲ್ಲ. ಭೌಗೋಳಿಕ ದೃಷ್ಟಿಯಿಂದ ನೋಡಿದಾಗ ಗಡಿಪ್ರದೇಶಗಳ ನಿರ್ಧಾರ ಮತ್ತು ಸುರಕ್ಷತೆಯ ಬಗ್ಗೆಯೂ ಯಾವುದೇ ಸ್ಪಷ್ಟ ಆಧಾರವನ್ನು ತನ್ನದಾಗಿಸಿಕೊಂಡಿಲ್ಲ.

ಸತ್ಯ ಸಂಗತಿ ಏನೆಂದರೆ, ಭಾರತದ ವಿರೋಧದ ಆಧಾರದ ಮೇಲೆಯೇ ಪಾಕಿಸ್ತಾನದ ನಿರ್ಮಾಣವಾಗಿದೆ. ಭಾರತದ ಮಾನ್ಯತೆಗಳ, ನಿಷ್ಠೆಯ, ಪ್ರಣಾಳಿಗಳ ಇವೆಲ್ಲದರ ಘೋರ ವಿರೋಧಗಳ ನಡುವೆ 'ಇಸ್ಲಾಂ ಪ್ರಭುತ್ವದ' (Islamic State) ಸ್ಥಾಪನೆಯಾಗಬೇಕು ಎನ್ನುವ ಆಕಾಂಕ್ಷೆಯಿಂದ ಪಾಕಿಸ್ತಾನದ ನಿರ್ಮಾಣವಾಗಿದೆ.

ಹಿಂದೂಗಳ ಜೊತೆ ನಾವಿರಲು ಸಾಧ್ಯವಿಲ್ಲ ಎನ್ನುವ ನಿರ್ಧಾರದಿಂದ ಪ್ರತ್ಯೇಕ ಪಾಕಿಸ್ತಾನದ ಬೇಡಿಕೆ ಇಡುವ ವ್ಯಕ್ತಿಗಳ ಭಾರತೀಯ ಪರಂಪರೆಯನ್ನು ವಿರೋಧಿಸುವ ಪ್ರವೃತ್ತಿ ಇದಾಗಿದೆ. ಅವರ ದೃಷ್ಟಿಯಲ್ಲಿ ಯಾವಾಗಲೋ ನಾವು ಇಲ್ಲಿ ರಾಜ್ಯಭಾರ ಮಾಡಿದ್ದೆವು ಹಾಗೂ ಮತ್ತೆ ಅದನ್ನು ಸ್ಥಾಪನೆಗೊಳಿಸಬೇಕು ಎನ್ನುವ ಭಾವನೆ ಇದೆ. ಇವರ ಮಹತ್ವಾಕಾಂಕ್ಷೆಯ ಪೂರ್ಣತೆಯ ಮೊದಲನೇ ಮೆಟ್ಟಿಲೇ ಈ ಪಾಕಿಸ್ತಾನದ ನಿರ್ಮಾಣ. 'ನಗುತ್ತಾ ಪಡೆಯಲಾಗಿದೆ ಪಾಕಿಸ್ತಾನ' ಹೋರಾಡಿ ಪಡೆಯುತ್ತೇವೆ ಹಿಂದೂಸ್ಥಾನ' ಎನ್ನುವ ಕೂಗು ಅವರ ಎಲ್ಲಾ ಭಾವನೆಗಳ ದ್ಯೋತಕವಾಗಿದೆ. ಈ ಆಕಾಂಕ್ಷೆಯನ್ನು ಪೂರ್ಣಗೊಳಿಸಲೆಂದೇ ಅದು ಸಮಯ ಸಿಕ್ಕಾಗಲೆಲ್ಲ ಹೆದರಿಸಿ, ಬೆದರಿಸಿ, ಪ್ರಪಂಚದಾದ್ಯಂತ ಚೀರಾಡಿ, ಅರಚಾಡಿ, ಅಸ್ಸಾಂನಲ್ಲಿ ನುಸುಳಿ ಕುಳಿತುಕೊಳ್ಳುವ, ಕಾಶ್ಮೀರದ ಮೇಲೆ ಆಕ್ರಮಣ ಮಾಡುವಂತಹ ಹಲವಾರು ದುಷ್ಕೃತ್ಯಗಳನ್ನು ಮಾಡುತ್ತಾ ಬಂದಿದೆ. ಸ್ವಲ್ಪ ಕೊಟ್ಟರೆ ಅದರ ಹಸಿವು ಹಿಂಗುವಂಥಾದ್ದಲ್ಲ. ಅದರ ಈ ಅಭಿಲಾಷೆಯನ್ನು ಮಣ್ಣುಗೂಡಿಸುವಂಥಾ ಜನರು ಸಂಘಟಿತರಾಗುವ ತನಕ ಅದರ ವರ್ತನೆ ಬದಲಾಗುವುದಿಲ್ಲ. ನಾವು ನಮ್ಮ ಶಕ್ತಿಶಾಲಿ ಸ್ವರೂಪವನ್ನು ತೋರಿಸಬೇಕು. ಕಳೆದ ೧೬ ವರ್ಷಗಳಲ್ಲಿ ಪಾಕಿಸ್ತಾನದಲ್ಲಿ ಹಲವಾರು ಸರ್ಕಾರಗಳು ಬಂದು ಹೋದ ನಂತರವೂ ಭಾರತದ ಬಗ್ಗೆ ಅದರ ವರ್ತನೆ ಎಳ್ಳಷ್ಟೂ ಬದಲಾಗಿಲ್ಲ.

**ರಷ್ಯಾ ಮತ್ತು ಚೀನಾದ ಗುರಿ ಒಂದೇ ಆದರೆ ಪ್ರಯತ್ನಗಳು ಬೇರೆ ಬೇರೆ**

ಚೀನಾದ ಪರಿಸ್ಥಿತಿಯೂ ಸಹ ಪಾಕಿಸ್ತಾನದಂತೆಯೇ ಇದೆ. ಸಾಮ್ಯವಾದದಲ್ಲಿ ಸಹ ಅಸ್ತಿತ್ವವಿಲ್ಲ. ಅವರು ಯಾವಾಗ ಬೇಕಾದರೂ ತಮ್ಮ ಸ್ವಾರ್ಥಕ್ಕಾಗಿ ಅದನ್ನು ಉಪಯೋಗಿಸಿಕೊಳ್ಳಬಲ್ಲರು. ಅದು ಸಾಮ್ಯವಾದ ಮತ್ತು ಸಾಮ್ಯವಾದಿಗಳನ್ನು ಬಿಟ್ಟು ಬೇರೆಯವರನ್ನು ಬದುಕಲು ಬಿಡುವುದಿಲ್ಲ. ಈ ದೃಷ್ಟಿಯಿಂದ ರಷ್ಯಾ ಹಾಗೂ ಚೀನಾದ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಅವರಿಬ್ಬರಲ್ಲಿ ಕೇವಲ ಪ್ರಯತ್ನದಲ್ಲಿ ವ್ಯತ್ಯಾಸವಿದೆಯೇ ಹೊರತು ಗುರಿಯಲ್ಲಿ ಇಲ್ಲ. ಏಕೆಂದರೆ ರಷ್ಯಾ ಮತ್ತು ಚೀನಾದ ಪರಿಸ್ಥಿತಿಗಳಲ್ಲಿ ಬಹಳಷ್ಟು ಅಂತರವಿದೆ. ಒಂದು ವೇಳೆ ರಷ್ಯಾವು ಯುದ್ಧ, ಹೊಡೆದಾಟ, ಬಡಿದಾಟದ ದಾರಿ ಹಿಡಿದರೆ ಅದು ಇಡೀ ಯೂರೋಪ್ ಹಾಗೂ ಅಮೇರಿಕಾದ ಜೊತೆ ಸೆಣಸಾಡಬೇಕಾದೀತು. ಆದ್ದರಿಂದ ಅದು ಯುದ್ಧವನ್ನು ತಳ್ಳಿಹಾಕಲು ನಿರಂತರವಾಗಿ ಶೀತಲ ಯುದ್ಧವನ್ನು ಮಾಡುತ್ತಿದೆ ಹಾಗೂ ಪ್ರತ್ಯಕ್ಷವಾಗಿ ಯುದ್ಧ ಮಾಡುವುದನ್ನು ಬದಿಗೊತ್ತಿದೆ. ಈಗಲೂ ರಷ್ಯಾವು ಅಮೆರಿಕದ ಜೊತೆ ಯುದ್ದ ಮಾಡಲು ಇಷ್ಟಪಡುವುದಿಲ್ಲ. ಆದರೆ ಚೀನಾದ ಪರಿಸ್ಥಿತಿ ಇದಕ್ಕಿಂತ ತೀರಾ ಭಿನ್ನವಾಗಿದೆ. ಚೀನಾವು ಮಹಾಯುದ್ಧವನ್ನು ಮಾಡಲು ಹಿಂಜರಿಯುತ್ತದೆ ಆದರೆ ಎಲ್ಲೆಲ್ಲಿ ದೊಡ್ಡ ದೊಡ್ಡ ಯುದ್ಧಗಳು ಸಾಧ್ಯವಿಲ್ಲವೋ, ಅಲ್ಲಲ್ಲಿ ಅದು ಕೊಂಚ ಕೊಂಚವೇ ಮುನ್ನುಗ್ಗುತ್ತಿದೆ ಹಾಗೂ ಸಣ್ಣ ಪುಟ್ಟ ಯುದ್ಧ ಮಾಡುತ್ತಿದೆ. ಒಂದು ಕಡೆ ತಾನು ಏಕಾಂಗಿಯಾಗಿ ಇರುವುದು, ಇಡೀ ಸಾಮ್ಯವಾದಿ ವಿರೋಧಿ ದೇಶಗಳೆಲ್ಲಾ ಇನ್ನೊಂದು ಕಡೆ ಇರುವುದು ಚೀನಾಗೆ ಸುತಾರಾಂ ಇಷ್ಟವಿಲ್ಲ. ಈ ಕಾರಣದಿಂದಲೇ ರಷ್ಯಾ ಮತ್ತು ಚೀನಾ ದೇಶಗಳು ಮಹಾಯುದ್ಧವನ್ನು ತಳ್ಳುತ್ತಾ ಬಂದಿವೆ. ಆದರೆ ಅವೆರಡರ ದೃಷ್ಟಿಕೋನದಲ್ಲಿ ಅಂತರವಿದೆ. ಭಾರತದ ಜೊತೆ ಶಸ್ತ್ರಸಜ್ಜಿತರಾಗಿ ಯುದ್ಧ ಮಾಡಿದರೂ ಅದು ಮಹಾಯುದ್ಧವಾಗಲಾರದು ಎಂದು ಚೀನಾದೇಶಕ್ಕೆ ಗೊತ್ತಿದೆ. ಈ ಭಾವನೆಯಿಂದಲೇ ಅದು ಭಾರತದ ಮೇಲೆ ಆಕ್ರಮಣ ನಡೆಸಿತ್ತು. ಆದರೆ ಯುದ್ಧವು ತೀವ್ರ ಸ್ವರೂಪ ಪಡೆಯುವ ಸುಳಿವು ಸಿಕ್ಕ ಕೂಡಲೇ ಅದು ಯುದ್ಧವನ್ನು ಹಿಂತೆಗೆದುಕೊಂಡಿತ್ತು. ನಿರಂತರವಾಗಿ ಯುದ್ಧ ಮಾಡುವುದರಲ್ಲಿ ಆಪತ್ತಿದೆ ಎನ್ನುವುದನ್ನು ಚೀನಾ ಮನಗಂಡಿದೆ. ಅದರ ವರ್ತನೆಯಿಂದ ಇದು ಸ್ಪಷ್ಟವಾಗಿ ತಿಳಿಯುತ್ತದೆ.

**ಪಂಚಮದಳ V/s ಪಾಕಿಸ್ತಾನೀಯರು**

ಆಂತರಿಕ ಶಕ್ತಿಗಳ ಬಗ್ಗೆ ಚಿಂತಿಸಿದಾಗ ಪಾಕಿಸ್ತಾನಿ ತತ್ವಗಳು ಪಂಚಮದಳದ ರೂಪದಲ್ಲಿ ಕಾರ್ಯ ನಿರ್ವಹಿಸುತ್ತದೆ ಎನ್ನುವುದನ್ನು ತೀವ್ರ ರಾಷ್ಟ್ರವಾದಿಗಳು

ಗಮನಿಸಬೇಕಾದ ವಿಷಯ, ನಾವು ಅದರ ಬಗ್ಗೆ ತುಂಬಾ ಎಚ್ಚರದಿಂದಿರಬೇಕು. ಇಂದು ಯಾರು ಏನು ಮಾಡುತ್ತಿದ್ದಾರೆ ಎನ್ನುವುದಷ್ಟೇ ಅಲ್ಲ, ನಾಳೆ ಏನು ಮಾಡುತ್ತಾರೆ ಎನ್ನುವುದರ ಬಗ್ಗೆಯೂ ಗಮನ ಹರಿಸಬೇಕಾಗುತ್ತದೆ.

ಎಲ್ಲಾ ಪಾಕಿಸ್ತಾನಿ ತತ್ವಗಳು ಈ ದೃಷ್ಟಿಯಿಂದ ಪಂಚಮದಳವು. ಆ ವರ್ಗವು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ ಎನ್ನುವುದು ಈ ಸಮಾಜದ ಕಡೆಗೆ ನೋಡಿದಾಗ ಸ್ಪಷ್ಟವಾಗಿ ಗೊತ್ತಾಗುತ್ತದೆ. ಕಾಂಗ್ರೆಸ್ ಮೂಲಕ ಎಲ್ಲಾ ಸವಲತ್ತುಗಳನ್ನು ಅವರಿಗೆ ನೀಡಿದ ನಂತರವೂ ಅವರು ಕಾಂಗ್ರೆಸ್ ಜೊತೆ ತಮ್ಮನ್ನು ಸೇರಿಸಿಕೊಳ್ಳಲಿಲ್ಲ. ಪಾರ್ಟಿಗಳ ಜೊತೆಯಲ್ಲಿ ವ್ಯಾಪಾರ ಮಾಡುತ್ತಿರುತ್ತಾರೆ. ೧೯೦೬ ರಿಂದ ೧೯೪೭ ರವರೆಗೆ ಯಾರೂ ಮುಸ್ಲಿಂ ಲೀಗಿನಂತೆ ಹೆಜ್ಜೆ ಇಟ್ಟು ಮತ್ತು ಅವುಗಳನ್ನೇ ಪುನರಾವರ್ತಿಸುತ್ತಾ ತಮ್ಮನ್ನು ಅವರ ಜೊತೆ ಸೇರಿಸಿಕೊಂಡುಬಿಟ್ಟಿದ್ದರೋ ಅವರು ಇಂದು ಕೇವಲ ಧರ್ಮವಷ್ಟೇ ಅಲ್ಲ, ಸಾಮಾಜಿಕ ಮತ್ತು ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಅವರು ಯಾವ ಪಕ್ಷದಲ್ಲೇ ಇರಲಿ, ಅವರ ಈ ಪ್ರಯತ್ನವು ಎಲ್ಲಾ ಕಡೆಯೂ ನಡೆಯುತ್ತಲೇ ಇರುತ್ತದೆ. ಕಾಶ್ಮೀರದಲ್ಲಿ ಅವರ ಸಂಖ್ಯೆ ಹೆಚ್ಚಾಗಿರುವ ಕಾರಣ ಅವರು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ.

**ದೇಶಕ್ಕೆ ಕಂಟಕಪ್ರಾಯರಾದ ಕಮ್ಯುನಿಸ್ಟರ ನಗ್ನ ಸ್ವರೂಪ**

ಸಂಪೂರ್ಣ ಭಾರತದಲ್ಲಿ ಚೀನಾದ ಜೊತೆ ಕಮ್ಯುನಿಸ್ಟ್ ಸಹ ಸ್ವತಂತ್ರವಾಗಿ ತನ್ನ ವೈಚಾರಿಕ ಮನೋಭಾವನೆಗಳನ್ನು ಜನರ ಮುಂದೆ ಇಡುವ ಪ್ರಯತ್ನ ಮಾಡುತ್ತಿದೆ. ಅದು ತನ್ನ ಮೂಲಕ ಪ್ರಗತಿಯ ಒಣ ಪ್ರಚಾರವನ್ನು ಬಹಳಷ್ಟು ಮಾಡುತ್ತಿದೆ. ಇತಿಹಾಸವನ್ನು ತಿರುವಿದಾಗ, ಭಾರತದ ಕಮ್ಯುನಿಸ್ಟ್ ಪಾರ್ಟಿಯು ಯಾವಾಗಲೂ ದೇಶಕ್ಕೆ ದ್ರೋಹದ ಕೆಲಸವನ್ನೇ ಮಾಡುತ್ತಾ ಬಂದಿರುವುದು ಸ್ಪಷ್ಟವಾಗುತ್ತದೆ. ಉಕ್ಕಿನ ಮನುಷ್ಯರಾದ ಸರ್ದಾರ್ ಪಟೇಲರು ತಮ್ಮ ಪ್ರಯತ್ನದಿಂದ ತಣ್ಣಗಾಗಿಸಿದ್ದ ತೆಲಂಗಾಣ ಷಡ್ಯಂತ್ರವು ಕಮ್ಯುನಿಸ್ಟರ ದೇಶದ್ರೋಹಿ ಪ್ರವೃತ್ತಿಗೆ ಜೀವಂತ ಸಾಕ್ಷಿ. ಎಂದಿನಿಂದ ಟಿಬೇಟಿನ ಮೇಲೆ ಚೀನಾದ ಆಕ್ರಮಣವಾಯಿತೋ ಅಂದಿನಿಂದ ಕೆಲವರು ಅವರ ನಿಜವಾದ ಬಣ್ಣ ಅರಿತರು. ಆದರೆ ಅವರ ಪ್ರಯತ್ನ ಈಡೇರಲಿಲ್ಲ. ಕಮ್ಯುನಿಸ್ಟರು ಅಂಥಾ ಸಮಯದಲ್ಲೂ ದೇಶದ ಜನತೆಯಲ್ಲಿ ವಿಭಿನ್ನ ಪ್ರಕಾರದ ಭೇದಭಾವಗಳನ್ನು ಬಿತ್ತುವ ಪ್ರಯತ್ನ ಮಾಡಿದರು. ಸಾಂಪ್ರದಾಯಿಕ ಕಲಹಗಳನ್ನೂ ಹುಟ್ಟುಹಾಕಲು ಪ್ರಯತ್ನಿಸಿದರು. ಸಿಕ್ಕ ಸಿಕ್ಕಲ್ಲೆಲ್ಲಾ ಪಾಕಿಸ್ತಾನಿ ತತ್ವಗಳ ಜೊತೆಗೂಡಿ ಜಗಳಗಳಿಗೆ ಪ್ರೋತ್ಸಾಹ ನೀಡಿದರು. ದೇಶದ ಇಂಥಾ ಕಷ್ಟದ ಪರಿಸ್ಥಿತಿಯಲ್ಲಿ ಈ ಕಮ್ಯುನಿಸ್ಟರು ಪಾಕಿಸ್ತಾನಿಗಳು ಸಮಯ ಸಿಕ್ಕಾಗಲೆಲ್ಲಾ ಪರಸ್ಪರ

ಸೇರಿಕೊಂಡು ದೇಶದ್ರೋಹಿ ಷಡ್ಯಂತ್ರವಂತೂ ಮಾಡುತ್ತಾರೆ ಎನ್ನುವ ವಿಷಯ ರಾಜಕೀಯವಾಗಿ ಚಿಂತಿಸುವ ವ್ಯಕ್ತಿಗಳಿಗೆ ಯಾಕೆ ಅರ್ಥವಾಗುವುದಿಲ್ಲವೋ ತಿಳಿಯದು. ಕಾಶ್ಮೀರದ ಸಂಬಂಧದಲ್ಲಿ ಪಾಕಿಸ್ತಾನದ ಬೇಡಿಕೆಯು ಕಮ್ಯುನಿಸ್ಟರಿಂದ ಸಮರ್ಥಿಸಲ್ಪಟ್ಟಿತು. ಇದೂ ಸಹ ಜ್ವಲಂತ ಸಾಕ್ಷಿ. ಪ್ರಾರಂಭಧಲ್ಲೇ ಅವರು ಕಾಶ್ಮೀರ ವಿಭಜನೆಯನ್ನು ಮತ್ತು ಶೇಖ್ ಅಬ್ದುಲ್ಲಾ ಅವರನ್ನೂ ಸಮರ್ಥಿಸಿದ್ದರು. ಹೀಗೆ ಕಮ್ಯುನಿಸ್ಟರ ಮತ್ತು ಈ ಪಾಕಿಸ್ತಾನಿ ತತ್ವಗಳ ನಡುವೆ ಒಂದು ಗುಪ್ತ ಒಳ ಒಪ್ಪಂದವಾಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತಿದೆ. ಪಾಕಿಸ್ತಾನದಿಂದ ಅಸ್ಸಾಮಿಗೆ ಬಂದು ನೆಲೆಸಿರುವ ಪಾಕಿಸ್ತಾನೀಯರನ್ನು ಭಾರತದಿಂದ ಓಡಿಸಲು ಕಮ್ಯುನಿಸ್ಟರು ವಿರೋಧಿಸಿದ್ದು ಅವರ ಈ ಮನೋವೃತ್ತಿಗೆ ಹಿಡಿದ ಕನ್ನಡಿಯಾಗಿದೆ. ಭಾರತದಲ್ಲಿ ಎಷ್ಟು ಸಾಧ್ಯವೋ ಅಷ್ಟು ಕೋಲಾಹಲ ಉಂಟು ಮಾಡಬೇಕೆನ್ನುವ ವಿಷಯದಲ್ಲಿ ಎರಡೂ ದೇಶಗಳಲ್ಲಿ ಒಮ್ಮತವಿದೆ. ಆದ್ದರಿಂದ ಚೀನಾ–ಪಾಕಿಸ್ತಾನದ ಈ ಮೈತ್ರಿಯು ಇವರದೇ ಕುತಂತ್ರಗಳ ಯೋಜನಾಬದ್ಧ ಸ್ವರೂಪದ ಒಂದು ಅಂಶ ಎನ್ನುವ ಸಾಧ್ಯತೆ ಇದೆ. ಚೀನಾದ ಮೂಲಕ ಟಿಬೆಟ್ಟನ್ನು ವಶಪಡಿಸಿಕೊಳ್ಳುವ ಬಗ್ಗೆ ವಿರೋಧಿಸಿದ ಸಾಮ್ಯವಾದ ಭಾವನೆಯು ಇಡೀ ದೇಶದಲ್ಲಿ ಉಗ್ರಸ್ವರೂಪ ಪಡೆದುಕೊಂಡಿತು. ಎಲ್ಲಾ ಪಕ್ಷಗಳೂ ಸೇರಿ ಪ್ರಯತ್ನಪಟ್ಟವು. ದಲಾಯಿಲಾಮಾರ ಬಗ್ಗೆ ಪಕ್ಷಗಳೂ ಸಹಾನುಭೂತಿಯನ್ನು ವ್ಯಕ್ತಪಡಿಸಿದವು. ಚೀನಾದೇಶವು ಟಿಬೆಟ್ಟಿಯನ್ನರ ಪರಂಪರೆ ಮತ್ತು ಸಂಸ್ಕೃತಿಯನ್ನು ಹಾಳುಮಾಡುವುದರಲ್ಲಿ ಟೊಂಕ ಕಟ್ಟಿ ನಿಂತಿದೆ ಎಂದು ದಲಾಯಿಲಾಮರವರ ಮೂಲಕವೇ ಎಲ್ಲರಿಗೂ ತಿಳಿಯಲು ಸಾಧ್ಯವಾಯಿತು. ಕಮ್ಯುನಿಸ್ಟರು ವಿವಿಧ ಸ್ಥಳಗಳಲ್ಲಿ ಕಮ್ಯುನಿಸಮ್ ಪ್ರಚಾರಕ್ಕಾಗಿ ಕಮ್ಯುನಿಸ್ಟ್ ಸಮಸ್ಯೆಯನ್ನು ಎತ್ತಿ ಹಿಡಿಯದೆ ಸಾಂಪ್ರಾದಾಯಿಕ ಕಲಹವನ್ನು ಹುಟ್ಟು ಹಾಕಿಸಿದರು.

ಚೀನಾದ ಆಕ್ರಮಣವಾದ ನಂತರ ಅದು ಏಕಾಂಗಿ ಆಯಿತು. ಇದನ್ನು ಮುಗಿಸಲು ಅದು ಮತ್ತೆ ಬೇರೆ ಯಾವುದಾದರೂ ಹೊಸ ಸಮಸ್ಯೆಯನ್ನು ತಂದೊಡ್ಡಬಹುದು. ಸಾಂಪ್ರದಾಯಿಕ ಸಮಸ್ಯೆಯನ್ನು ತಂದೊಡ್ಡಬಹುದು ಮತ್ತು ಅದರಲ್ಲಿ ಮುಸಲ್ಮಾನರು ಸಹಾಯಕರಾಗಿರಬಹುದು. ಸಂಘ, ಜನಸಂಘ, ಹಿಂದೂ ಮಹಾಸಭಾ ಎನ್ನುವ ಹೆಸರು ಕೊಡಬಹುದು. ಎಲ್ಲರಿಂದ ಏಕಾಂಗಿ ಮಾಡುವ ತಂತ್ರ ಇದಾಗಿದೆ.

**ಕಾಂಗ್ರೆಸ್ ಇದರ ಮುಂದೆ ತಲೆಬಾಗುತ್ತಿದೆ**

ಸಾಮ್ಯವಾದಿ ಮತ್ತು ಪಾಕಿಸ್ತಾನಿ ತತ್ತ್ವ ಇವೆರಡೂ ಭಾರತದ ರಾಷ್ಟ್ರೀಯ ನಿಷ್ಠೆಗೆ ವಿರೋಧಗಳು. ಕಾಂಗ್ರೆಸ್ ಮತ್ತು ಪಿ.ಎಸ್.ಪಿ. ಕಮ್ಯುನಿಸ್ಟ್ ಅಥವಾ

ಮುಸಲ್ಮಾನರ ಜೊತೆ ಪ್ರತ್ಯಕ್ಷವಾಗಿ ನಿಲ್ಲಿಸಲಾಗದಿದ್ದರೂ, ಯಾವ ಮಾತುಕತೆಗಳಿಗೆ ಮಾನ್ಯತೆ ನೀಡುತ್ತಾರೋ, ಆ ಮಾತುಗಳನ್ನು ನಿರ್ಭಯವಾಗಿ ಹೇಳುವ ಧೈರ್ಯ ಇವುಗಳಲ್ಲಿ ಯಾವುದಕ್ಕೂ ಇಲ್ಲ. ರಾಜಕೀಯ ಕಾರಣಗಳಿಂದ ಅವು ತಲೆಬಾಗುತ್ತದೆ. ಆದರೆ ಅದರ ಜೊತೆ ಪ್ರತ್ಯಕ್ಷವಾಗಿ ನಿಲ್ಲುವುದಿಲ್ಲ.

**ಇವರನ್ನು ಉದಾಸೀನ ಮಾಡಬಾರದು**

ಈ ಪಕ್ಷವು ಅವರ ಜೊತೆ ಸೇರಿಕೊಂಡಿದೆ. ಆದ್ದರಿಂದ ಅವರನ್ನು ಬಿಟ್ಟು ಬಿಡಬೇಕು ಎನ್ನುವುದು ಸರಿಯಲ್ಲ. ಕಾಂಗ್ರೆಸ್, ಸೋಷಲಿಸ್ಟ್ ಪಾರ್ಟಿ, ಪ್ರಜಾ ಸೋಷಿಯಲಿಸ್ಟ್ ಪಾರ್ಟಿ ಮತ್ತು ಕಮ್ಯುನಿಸ್ಟರು ಒಂದೇ ಅಲ್ಲ. ಇವುಗಳಲ್ಲಿ ಸಾಮ್ಯವಾದಿಗಳು ಮತ್ತು ರಾಷ್ಟ್ರವಾದಿಗಳು ಇಬ್ಬರೂ ಇದ್ದಾರೆ. ಆದರೆ ಉಳಿದ ಜನರು ಎಲ್ಲಿ ನಿಲ್ಲುತ್ತಾರೆ ಎನ್ನುವುದೇ ಮಹತ್ವದ ವಿಷಯ. ಒಂದು ವೇಳೆ ಅವರು ಇವುಗಳ ಜೊತೆ ನಿಂತರೆ ಅವರ ಬಲ ವೃದ್ಧಿಸುವುದು. ಮಿಕ್ಕ ಜನರನ್ನು ರಾಷ್ಟ್ರವಾದಿಗಳನ್ನಾಗಿ ಮಾಡಲು ಈಗಿನ ಸಮಯ ತಕ್ಕ ಸಮಯವಾಗಿದೆ. ಏಕೆಂದರೆ ಚೀನಾದ ಆಕ್ರಮಣದಿಂದಾಗಿ ಈ ವರ್ಗವು ನಿಶ್ಚೇಷ್ಟಿತವಾಗಿ ನಿಂತಿದೆ. ಅದು ರಾಷ್ಟ್ರವಾದಿಗಳ ಬೆಲೆಯನ್ನೂ ಅರಿತಿದೆ.

**ಎಲ್ಲೆಲ್ಲೂ ಪರಿವರ್ತನೆಯಾಗುತ್ತಿದೆ.**

ರೇಡಿಯೋ ಮತ್ತು ವೃತ್ತಪತ್ರಿಕೆಗಳನ್ನು ಅವಲೋಕಿಸಿದರೆ, ಯಾರನ್ನು ಪ್ರತಿಗಾಮಿಗಳೆಂದು ಭಾವಿಸುತ್ತಿದ್ದೆವೋ ಅವರಿಂದಲೇ ಪ್ರೇರಣೆ ಪಡೆಯಲಾಗುತ್ತಿದೆ ಎನ್ನುವುದು ತಿಳಿಯುತ್ತದೆ.

ಈ ಹವೆಯ ಕಾರಣದಿಂದಲೇ ಇಂತಹ ವಾತಾವರಣ ಉಂಟಾಗಿದೆ. ಇದನ್ನು ಜನರು ಸ್ವಾಭಾವಿಕವಾಗಿ ಒಪ್ಪಿಕೊಂಡುಬಿಟ್ಟಿರುತ್ತಾರೆ. ಪ್ರತಾಪಸಿಂಹ ಕೈರೋರವರು ೧೦ ವರ್ಷಗಳವರೆಗೆ ಅಹಿಂಸೆ ಎನ್ನುವ ಶಬ್ದವನ್ನು ಶಬ್ದಕೋಶದಿಂದ ತೆಗೆದು ಬಿಡಬೇಕಾಗುತ್ತದೆ ಎಂದು ಹೇಳಿದರು. ಈ ವೈಚಾರಿಕ ದೃಷ್ಟಿಯಿಂದ ಬಂದಂತಹ ಪರಿವರ್ತನೆಯ ಬಗ್ಗೆ ಖಂಡಿತವಾಗಿ ಆಳವಾಗಿ ಯೋಚಿಸಬೇಕಾಗಿದೆ, ಇಷ್ಟೇ ಅಲ್ಲ, ಲೋಕಸಭೆಯಲ್ಲಿ ಸುಭದ್ರಾ ಜೋಶಿ ಕಮ್ಯುನಿಸ್ಟರನ್ನು ಸಮರ್ಥಿಸಿ ಭಾಷಣ ಮಾಡಿದಾಗ ಅವರಿಗೆ ತುಂಬಾ ತೊಂದರೆಯಾಯಿತು. ಎಷ್ಟು ವಿರೋಧ ವ್ಯಕ್ತವಾಯಿತೆಂದರೆ, ಅವರಿಂದ ಭಾಷಣವೇ ಮಾಡಲಾಗಲಿಲ್ಲ. ಇಂದಿನ ಸಮಾಜದಲ್ಲಿ ವೈಚಾರಿಕ ಕ್ರಾಂತಿಯು ಬಂದು ಹೋಗಿ ಮಾಡುತ್ತಿದೆ ಎನ್ನುವುದಕ್ಕೆ ಇದೇ ಸಾಕ್ಷಿ. ಜನರು ಕಳೆದ ೧೬ ವರ್ಷಗಳ ಇತಿಹಾಸ ಮತ್ತು ಭವಿಷ್ಯಕ್ಕೆ ಸಂಬಂಧಪಟ್ಟಂತೆ

ಚಿಂತಿಸಲು ಪ್ರಾರಂಭಿಸಿದ್ದಾರೆ ಎನ್ನುವುದೇ ಇದಕ್ಕೆ ಕಾರಣ. ಶ್ರೀಯುತ ದಿನಕರ್‌ರವರು ಚೀನಾದ ಈ ಆಕ್ರಮಣದ ಸಂಬಂಧವಾಗಿ ನಮ್ಮವರೇ ಆದ ದೇಶವಾಸಿಗಳನ್ನು ವೈಚಾರಿಕತೆ ಮತ್ತು ತಪ್ಪುಗಳನ್ನೇ ದೋಷಗಳೆಂದು ಪರಿಗಣಿಸಿದ್ದಾರೆ. ಆದ್ದರಿಂದ ಸಂಕಷ್ಟಗಳ ಬಗ್ಗೆ ವಿಚಾರ ಮಾಡುವಾಗ ಈ ಸ್ಥಿತಿಯ ಬಗ್ಗೆಯೂ ಚಿಂತಿಸಬೇಕಾಗುತ್ತದೆ.

**ಅಂತರಾಷ್ಟ್ರೀಯ ಮಿತ್ರರು ಒಂದೆಡೆ ಸೇರುತ್ತಾರೆ**

ನಮಗೆ ಸಹಾಯ ಮಾಡುವ ನಮ್ಮವರೇ ಆದ ೩–೪ ಮಿತ್ರರನ್ನು ಕಲೆಹಾಕಬಹುದು. ಅಂತಹ ಸಮಯದಲ್ಲಿ ನಾವು ಗಂಭೀರವಾಗಿ ಯೋಚಿಸಬೇಕಾಗುತ್ತದೆ. ಈ ಜನರಂತೂ ಸ್ನೇಹಹಸ್ತ ಚಾಚಿ ನಮ್ಮ ರಾಷ್ಟ್ರದ ಸನಿಹ ಬರಬಹುದು. ಆದರೆ ನಿಜವಾದ ಸ್ನೇಹವು ಮುರಿದುಹೋಗುವಂತಹ ನಡವಳಿಕೆ ನಮ್ಮ ರಾಷ್ಟ್ರದ್ದಾಗಿರಬಾರದು. ನಮ್ಮ ಸಮೀಪ ಬರುವವರನ್ನು ನಾವು ನಮ್ಮ ಕೆಟ್ಟ ನಡವಳಿಕೆಯಿಂದ ದೂರ ಮಾಡಬಾರದು. ಇದನ್ನು ಗಮನದಲ್ಲಿಡಬೇಕಾದ ಅವಶ್ಯಕತೆ ಇದೆ. ವಿಚಾರಪೂರ್ವಕವಾಗಿ ಅನುಕೂಲ ವಾತಾವರಣದ ಲಾಭ ಪಡೆಯುವ ದೊಡ್ಡ ತಪ್ಪನ್ನು ನಾವು ಮಾಡಬಾರದು. ಈ ದೃಷ್ಟಿಯಿಂದ ಮುಂಬರುವ ಎಲ್ಲಾ ಕಠಿಣ ಪರಿಸ್ಥಿತಿಗಳನ್ನು ಎದುರಿಸಲು ಎಲ್ಲಾ ರಾಷ್ಟ್ರವಾದಿಗಳು ಟೊಂಕಕಟ್ಟಿ ನಿಲ್ಲಬೇಕಾಗುವುದು.

**ಕಾಂಗ್ರೆಸ್ ಮತ್ತು ಕಮ್ಯುನಿಸ್ಟರ ಸ್ಥಿತಿ**

ಈ ಎಲ್ಲಾ ವೈಚಾರಿಕ ಕ್ರಾಂತಿಗಳ ನಂತರವೂ ಕಮ್ಯುನಿಸ್ಟರ ಸಂಘಟನೆಯು ದುರ್ಬಲವಾಗಿದೆ ಎಂದು ರಾಷ್ಟ್ರವಾದಿಗಳು ಅಂದುಕೊಳ್ಳಬಾರದು. ಕಮ್ಯುನಿಸ್ಟರ ಮತ್ತು ಜನತೆಯ ವಿಚಾರಗಳ ಮಧ್ಯೆ ಇರುವ ಬಿರುಕು ಸಾಕಷ್ಟು ದೊಡ್ಡದಾಗಿದೆ ಎನ್ನುವುದಂತೂ ಸರಿ. ಆದರೆ ಸಮಾಜದಲ್ಲಿ ಅವರಿಗೆ ಯಾವ ಸ್ಥಾನವಿತ್ತೋ, ಅದೂ ಸಹ ಬದಲಾಗಿದೆ ಎನ್ನುವ ಮಾತೂ ಸಹ ಕಡಿಮೆ ಮಹತ್ವದ್ದಲ್ಲ. ತೀವ್ರ ರಾಷ್ಟ್ರವಾದಿ ಚಿಂತಕರ ಬಗ್ಗೆಗೂ ಸಮಾಜದಲ್ಲಿ ಸಾಕಷ್ಟು ಪರಿವರ್ತನೆಯಾಗಿದೆ. ಈ ಪರಿವರ್ತನೆಯ ಬಗ್ಗೆ ನಾವು ಆಳವಾಗಿ ಯೋಚಿಸಬೇಕಾಗಿದೆ. ನೆಹರೂ ಹೇಳಿದಂತೆಯೇ ನಡೆಯುತ್ತದೆ ಎನ್ನುವಂತಹ ಪರಿಸ್ಥಿತಿಯು ಈಗ ಕಾಂಗ್ರೆಸ್ಸಿನಲ್ಲೂ ಇಲ್ಲ. ಕೃಷ್ಣಮೆನನ್ ಮತ್ತು ಮಾಳವೀಯರನ್ನು ನೆಹರೂರವರು ಇಷ್ಟಪಡದಿದ್ದರೂ ಅವರನ್ನು ತೆಗೆದುಹಾಕಿದ್ದು ಈ ಮಾತಿಗೆ ಜ್ವಲಂತ ಉದಾಹರಣೆ. ವೃತ್ತಪತ್ರಿಕೆಗಳ ಕ್ಷೇತ್ರದಲ್ಲೂ ಹಾಗೆಯೇ ಕಾರ್ಮಿಕರ ಕ್ಷೇತ್ರದಲ್ಲೂ ಕಮ್ಯುನಿಸ್ಟರ ಪರಿಸ್ಥಿತಿ ಕೆಳಮಟ್ಟಕ್ಕೆ ಇಳಿದಿದೆ. ಈ ರೀತಿ ಸಾಮ್ಯವಾದವನ್ನು ವಿರೋಧಿಸುವ ಕಾರ್ಯದಲ್ಲಿ ಮತ್ತು

ಶಕ್ತಿಯಲ್ಲಿ ಬಲವರ್ಧನೆಯಾಗಿರುವುದನ್ನು ನಾವು ನೋಡುತ್ತೇವೆ. ಕಮ್ಯುನಿಸ್ಟರ ಕೇಂದ್ರೀಯ ಸಂಘಟಿತ ಶಕ್ತಿಯನ್ನು ನಿರ್ಮೂಲ ಮಾಡುವ ಪ್ರಶ್ನೆಯೊಂದೇ ಈಗ ಉಳಿದಿರುವುದು. ಇದು ಕೇವಲ ದೇಶವ್ಯಾಪಿ ರಾಷ್ಟ್ರವಾದಿಗಳ ಸಂಘಟಿತ ಶಕ್ತಿಯ ಮೂಲಕ ಎಷ್ಟು ಕೆಲಸವಾಗಿದೆ, ನಾವು ಎಷ್ಟು ಪ್ರಯತ್ನಪಡುತ್ತಿದ್ದೇವೆ – ಇದರ ಮೇಲೆ ನಿಂತಿದೆ.

**ಶಕ್ತಿ ಮೀರಿ ಸೇರೋಣ**

ಹೇಗೆ ಮಳೆಯಾದ ನಂತರ ರೈತನು ಮನೆಯಲ್ಲಿ ಕುಳಿತುಕೊಂಡಿರಲು ಇಷ್ಟಪಡುವುದಿಲ್ಲವೋ, ಹಾಗೆಯೇ ರಾಷ್ಟ್ರವಾದಿಗಳು ಪರಿವರ್ತನೆಯಿಂದಾಗುವ ಅನುಕೂಲ ಪರಿಸ್ಥಿತಿಯ ಲಾಭ ಪಡೆದುಕೊಂಡಲ್ಲಿ ನಿಸ್ಸಂದೇಹವಾಗಿ ದೇಶದಲ್ಲಿ ತೀವ್ರ ರಾಷ್ಟ್ರೀಯತೆಯ ಭಾವವನ್ನು ಉದ್ದೀಪ್ತಗೊಳಿಸಬಲ್ಲರು ಎಂದು ಹೇಳಬಹುದು. ದೇಶದ ಮೇಲೆ ಬಂದೊದಗಿರುವ ಆಪತ್ತು ಮತ್ತು ಆಪತ್ಕಾಲದ ಪ್ರಶ್ನೆ ಬಂದಾಗ, ವಾಸ್ತವಿಕತೆ ಏನೆಂದರೆ ಆಪತ್ತು ಇನ್ನೂ ಕಳೆದಿಲ್ಲ. ಕಷ್ಟಗಳನ್ನೆದುರಿಸಲು ಸಮಸ್ತ ರಾಷ್ಟ್ರವಾದಿ ಶಕ್ತಿಗಳು ಸತತವಾಗಿ ಪ್ರಯತ್ನಶೀಲರಾಗಬೇಕು. ದೇಶ ಮತ್ತು ಸಮಾಜಕ್ಕೆ ರಾಷ್ಟ್ರವಾದಿಗಳಿಂದ ಬಹಳಷ್ಟು ಆಶಾಭಾವನೆಗಳಿವೆ. ಈ ರೀತಿ ಅಪೇಕ್ಷಿಸುವವರನ್ನು ಅವರು ತಮ್ಮ ಜೊತೆ ಕರೆತರಬೇಕೆನ್ನುವುದು ಅವರ ಮನಸ್ಸಿಗೆ ಬರಬೇಕು ಮತ್ತೆ ಈ ದೃಷ್ಟಿಯಿಂದ ರಾಷ್ಟ್ರವಾದಿ ತತ್ವವು ತನ್ನ ಆತ್ಮಾವಲೋಕನ ಮಾಡಿಕೊಳ್ಳಲಿ.

* * * * *

# ಚೀನಾ ದೇಶದ ಆಕ್ರಮಣ : ಕಾರಣ ಮತ್ತು ಸ್ಪಷ್ಟೀಕರಣ

ತೀರ್ಥಯಾತ್ರಿಗಳ, ಪ್ರವಾಸಿಗರ, ಪರ್ವತಾರೋಹಿಗಳ ಆಕರ್ಷಣೆಯ ಕೇಂದ್ರವಾದ ಹಿಮಾಲಯವು ಇಂದು ಏಷ್ಯಾದ ರಾಜಕೀಯ ಕೇಂದ್ರ ಬಿಂದುವಾಗಿದೆ. ಚೀನಾ ದೇಶವು ವಿಸ್ತಾರವಾದಿ ದೃಷ್ಟಿಕೋನವನ್ನಿಟ್ಟುಕೊಂಡು ಏಷ್ಯಾದಲ್ಲಿ ಕಮ್ಯುನಿಸಂನ ಪ್ರಸಾರದ ತನ್ನ ಆಕಾಂಕ್ಷೆಯನ್ನು ಪೂರ್ಣಗೊಳಿಸಲು ಒಂದು ಸುನಿಶ್ಚಿತವಾದ ಯೋಜನೆಯ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದೆ ಎನ್ನುವುದಕ್ಕೆ ಭಾರತದ ಗಡಿಯಲ್ಲಿ ಚೀನಾದ ಮೂಲಕ ಅಕ್ರಮವಾಗಿ ಲೋಗ್‌ಜೂ ಮತ್ತು ಲಡಾಖ್‌ನ ಭೂಭಾಗಗಳ ಮೇಲಿನ ಬಲವಂತವಾಗಿ ಹಾಗೂ ಹಠಾತ್ತಾಗಿ ಅಧಿಕಾರ ಪಡೆಯುವ ಹಾಗೂ ಹಿಮಾಲಯದ ಒಡಲಲ್ಲಿ ಇರುವ ರಾಜ್ಯಗಳ ಮೇಲಿನ ನಡವಳಿಕೆಯೇ ಇದಕ್ಕೆ ಸಾಕ್ಷಿ. ಚೀನಾದ ಈ ಆಕ್ರಮಣವು ಕೇವಲ ಭಾರತದ ಪ್ರಭುತ್ವಕ್ಕೆ ಸವಾಲಾಗದೇ ಸಂಪೂರ್ಣ ಏಷಿಯಾದ ಸ್ವತಂತ್ರ ಜೀವನ ಪದ್ಧತಿ, ಅದರ ಪ್ರಜಾಪ್ರಭುತ್ವ ಮತ್ತು ಭಾರತದ ಸ್ವಾಭಿಮಾನವನ್ನು ಪ್ರಪಂಚದಿಂದ ಅಳಿಸುವ ಒಂದು ಷಡ್ಯಂತ್ರವಾಗಿದೆ. ನಾವು ಪ್ರತಿಯೊಂದು ಹಂತದಲ್ಲೂ ಇದನ್ನು ವಿರೋಧಿಸಬೇಕಾಗಿದೆ.

ಚೀನಾದ ಆಕ್ರಮಣದ ಬಗ್ಗೆ ಅದರ ಜೊತೆ ಒಳ್ಳೆಯದು–ಕೆಟ್ಟದ್ದನ್ನು ಚರ್ಚಿಸುವ ಅವಶ್ಯಕತೆ ಇಲ್ಲ, ಏಕೆಂದರೆ ಅದು ಕೇವಲ ತನ್ನ ಉದ್ದೇಶ ಪೂರ್ಣಗೊಳಿಸಲು ಕಾರ್ಯನಿರತವಾಗಿದೆ ಹಾಗೂ ನಮ್ಮ ಬಾಯಿ ಮಾತಿನ ವಿರೋಧಿಗಳು ಅದರ ಮೇಲೆ ಯಾವುದೇ ಪರಿಣಾಮ ಬೀರಲಾರದು. ಚೀನಾವನ್ನು ಎದುರಿಸಲು ನಾವು ಗಂಭೀರವಾಗಿ ಚಿಂತಿಸಬೇಕಾಗುತ್ತದೆ. ಸ್ವತಂತ್ರ ಹೆಜ್ಜೆಗಳನ್ನು ಇಡಬೇಕಾಗುತ್ತದೆ ಹಾಗೂ ಅದಕ್ಕೆ ತಕ್ಕಂತೆ ಮಾನಸಿಕವಾಗಿ ಹಾಗೂ ಭೌತಿಕವಾಗಿ ನಮ್ಮನ್ನು ನಾವು ಸಿದ್ಧಗೊಳಿಸಿ ಕೊಳ್ಳಬೇಕಿದೆ.

**ಸಹ ಅಸ್ತಿತ್ವವು ಸಾಧ್ಯವಿದೆಯೇ?**

ಮೊಟ್ಟ ಮೊದಲನೆಯದಾಗಿ, ಚೀನಾದ ಜೊತೆ ಸಹ ಅಸ್ತಿತ್ವ ಅಥವಾ ಮೈತ್ರಿ ಸಾಧ್ಯವೇ ಎನ್ನುವುದು ವಿಚಾರಮಾಡಬೇಕಾದ ವಿಷಯ. ಪಂಚಶೀಲದ ಯಾವ ತತ್ವಗಳನ್ನು ನಮ್ಮ ಪ್ರಧಾನಮಂತ್ರಿಗಳು ಚೀನಾದ ಪ್ರಧಾನ ಮಂತ್ರಿಗಳ ಜೊತೆ ಸೇರಿ

ಘೋಷಿಸಿದರೋ ಅವುಗಳಲ್ಲಿ ಈ ಸಾಧ್ಯತೆಗಳನ್ನು ಸ್ವೀಕರಿಸಲಾಗಿದೆ. ಆದರೆ ಇದು ಈ ರಾಜಕೀಯದ ತಂತ್ರಗಾರಿಕೆ ಹಾಗೂ ಕಮ್ಯುನಿಸ್ಟ್ ಆಕ್ರಾಂತಕಾರಿಗಳ ಬಗ್ಗೆ ಅಜ್ಞಾನದ ಪರಿಚಯ ನೀಡುತ್ತಿದೆ.

**ಎರಡು ಆದರ್ಶಗಳ ಸಂಘರ್ಷ**

ಇಂದು ಏಷ್ಯಾದಲ್ಲಿ ಭಾರತ ಮತ್ತು ಚೀನಾಗಳ ನಡುವೆ ಮುಂದಾಳತ್ವದ ಸಂಘರ್ಷವಿದೆ. ಇವೆರಡೂ ದೊಡ್ಡ ದೇಶಗಳು ಹಾಗೂ ಏಷ್ಯಾದಲ್ಲಿ ಇವುಗಳಿಗೆ ಬಹಳ ದೊಡ್ಡ ಭೂಭಾಗ ಇರುವುದಲ್ಲದೆ ಪುರಾತನ ಕಾಲದಿಂದಲೂ ಇವುಗಳ ಮಧ್ಯೆ ಐತಿಹಾಸಿಕ ಸಂಬಂಧವಿದೆ. ದಕ್ಷಿಣ ಪೂರ್ವ ಏಷ್ಯಾ ಮತ್ತು ಮಧ್ಯ ಏಷ್ಯಾ ದೇಶಗಳು (ನೇಪಾಳ, ಟಿಬೆಟ್, ಸೀಕ್ವಾಂಗ್) ಇವೆರಡರ ಮಧ್ಯದಲ್ಲಿ ನೆಲೆಸಿದ್ದು ಚೀನಾವು ಅವುಗಳ ಮೇಲೆ ತನ್ನ ವಕ್ರದೃಷ್ಟಿ ಬೀರಿದೆ. ಭಾರತ ಯಾವ ಜೀವನ ಪದ್ಧತಿಯನ್ನು ಅಳವಡಿಸಿಕೊಂಡಿದೆಯೋ ಅದರ ಪ್ರಭಾವ ಈ ದೇಶಗಳ ಮೇಲೆ ಆಗಿದೆ. ಆಧ್ಯಾತ್ಮಿಕ ಮುಂದಾಳತ್ವಕ್ಕಾಗಿ ಈ ದೇಶದವರು ಯಾವಾಗಲೂ ಭಾರತದ ಕಡೆಗೆ ಮುಖ ಮಾಡಿದ್ದಾರೆ. ಪ್ರಜಾಪ್ರಭುತ್ವದ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯದ ಯಾವ ಆದರ್ಶಗಳನ್ನು ಮುಂದಿಟ್ಟುಕೊಂಡು ಭಾರತವು ಮುನ್ನಡೆಯುತ್ತದೆಯೋ, ಅವುಗಳಿಂದ ಈ ದೇಶಗಳಿಗೆ ತನ್ನ ನಿಜವಾಗದ ಅಸ್ತಿತ್ವವನ್ನು ಕಾಪಾಡಿಕೊಳ್ಳುವ ಪ್ರೇರಣೆಯು ಸಹ ಲಭಿಸುತ್ತಿದೆ. ಆದರೆ ಚೀನಾ ಇದನ್ನು ಇಷ್ಟಪಡುತ್ತಿಲ್ಲ. ಭಾರತವು ತನ್ನ ಮುಂದಾಳತ್ವವನ್ನು ಯಾವುದೇ ದೇಶದ ರಾಜಕೀಯ ಅಧಿಕಾರವನ್ನು ಪಡೆಯದೆಯೇ ನಡೆಸಬಲ್ಲದು. ಆದರೆ ಚೀನಾಗೆ ಇದು ಸಾಧ್ಯವಿಲ್ಲ. ಚೀನಾದ ಸಂಸ್ಕೃತಿ ಎಷ್ಟೇ ಹಳೆಯದಾಗಿದ್ದರೂ ಅದು ಭಾರತೀಯ ಸಂಸ್ಕೃತಿಯಂತೆ ರಾಜಕೀಯದಲ್ಲಿ ನಿರ್ಲಿಪ್ತರಾಗಿದ್ದುಕೊಂಡು ತನ್ನ ಪ್ರಭಾವ ಬೀರಲು ಅಥವಾ ಯಾವುದೇ ವೈಶಿಷ್ಟ್ಯವನ್ನು ತೋರಲು ಚೀನಾಕ್ಕೆ ಸಾಧ್ಯವಾಗಿಲ್ಲ. ಚೀನಾದ ರಾಷ್ಟ್ರೀಯ ಮನಸ್ಸು ಮೊದಲಿನಿಂದಲೂ ವಿಸ್ತಾರವಾದಿಯಾಗಿದೆ ಎನ್ನುವುದಕ್ಕೆ ಪ್ರಾಚೀನ ಇತಿಹಾಸವೇ ಸಾಕ್ಷಿ. ಇದರ ಗುಲಾಮನಾಗದೆ ಇದರ ಜೊತೆ ಸಹ ಅಸ್ತಿತ್ವವು ಸಾಧ್ಯವೇ ಇಲ್ಲ.

**ಕಮ್ಯುನಿಸಂ ಸಹ ಅಸ್ತಿತ್ವದ ವಿರೋಧಿ**

ಇಂದಿಗೂ ಕೆಂಪು ಚೀನಾವು ಯಾವ ತತ್ವಜ್ಞಾನವನ್ನು ಒಪ್ಪಿಕೊಂಡಿದೆಯೋ, ಅದು ಸಹಅಸ್ತಿತ್ವದ ಸಿದ್ಧಾಂತವನ್ನು ಒಪ್ಪಿಕೊಳ್ಳುವುದೇ ಇಲ್ಲ. ಬದಲಾಗಿ ತನ್ನ ಯಶಸ್ಸಿಗಾಗಿ ರಾಜ್ಯಶಕ್ತಿಯು ಅನಿವಾರ್ಯವೆಂದು ಭಾವಿಸಿದೆ. ಕಮ್ಯುನಿಸ್ಟ್ ತನ್ನನ್ನು

ತಾನೇ ಸಂಪೂರ್ಣ ವಿಶ್ವದ ಏಕೈಕ ಸಿದ್ಧಾಂತವೆಂದು ಭಾವಿಸಿದೆ ಹಾಗೂ ಇಡೀ ವಿಶ್ವವನ್ನು ಆಕ್ರಮಿಸಿಕೊಳ್ಳುವ ಆಕಾಂಕ್ಷೆಯನ್ನು ಹೊತ್ತು ನಡೆದಿದೆ. ಆದ್ದರಿಂದ ಕಮ್ಯುನಿಸ್ಟ್ ಚೀನಾ ಸಿದ್ಧಾಂತ ಸಹ ಅಸ್ತಿತ್ವವನ್ನು ಎಂದಿಗೂ ಒಪ್ಪುವುದಿಲ್ಲ.

ಈ ನಿಯಮವನ್ನು ಅರಿಯದ ಕಾರಣ ನಮ್ಮ ನಾಯಕರಿಂದ ತಪ್ಪಾಗಿದೆ. ಅವರು ಸಿದ್ಧಾಂತವೆಂದು ತಿಳಿದು ಮುನ್ನಡೆದರು ಹಾಗೂ ಚೀನಾದೇಶವೂ ಸಹ ಇದನ್ನು ಸಿದ್ಧಾಂತವೆಂದು ತಿಳಿಯುತ್ತದೆ ಎಂದು ಅವರು ನಂಬಿದರು. ನಾವು ಚೀನಾದ ಇತಿಹಾಸ, ಅದರ ಇಂದಿನ ರಾಜಕೀಯ ಮತ್ತು ಭವಿಷ್ಯದ ಸಾಧ್ಯತೆಗಳ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ.

ಭಾರತ–ಚೀನಾದ ಮೈತ್ರಿಯ ಕೂಗು ಕೆಂಪು ಚೀನಾದ ಸಮಸ್ಯೆಯ ಮೇಲೆ ಪರದೆ ಎಳೆಯುವ ಪ್ರಯತ್ನ ಮಾಡಿತು. ಪ್ರಪಂಚದ ದೇಶಗಳಿಗೆ ಅದು ಅವರ ಸ್ವಾತಂತ್ರ್ಯವನ್ನು ಸ್ವೀಕರಿಸಿ ಮುನ್ನಡೆಯುತ್ತಿದೆ ಎನ್ನುವ ನಂಬಿಕೆಯನ್ನು ತರಿಸುವ ಪ್ರಯತ್ನ ಮಾಡಿತು. ಆದರೆ ಇನ್ನೊಂದು ಕಡೆ ಅದು ಒಳಗೊಳಗೇ ತನ್ನ ಬಲೆ ಬೀಸುವ ಪ್ರಯತ್ನ ಮಾಡಿತು. ಏಷ್ಯಾದ ದೇಶಗಳು ಅದರ ಜೊತೆ ಗುದ್ದಾಡುತ್ತಿದ್ದವು. ಈ ದೇಶಗಳು ಯುದ್ಧದ ದೃಷ್ಟಿಯಿಂದ ಪಾಶ್ಚಾತ್ಯ ದೇಶಗಳಿಂದ ಸಹಾಯ ಪಡೆದಿರಬಹುದು. ಆದರೆ ತಾಂತ್ರಿಕ ದೃಷ್ಟಿಯಿಂದ ಭಾರತದಿಂದಲೇ ಪ್ರೇರಣೆ ಪಡೆಯುತ್ತಿದ್ದವು. ಆದರೆ ಭಾರತವು ಈ ದೇಶಗಳನ್ನು ಸಮರ್ಥಿಸಲಿಲ್ಲ. ಬದಲಾಗಿ ಅದು ಕೈಗೊಂಬೆಯಂತೆ ವರ್ತಿಸುತ್ತಾ ಅಧಿಕಾರ ಮಾಡುವ ಚೀನಾಗೂ ಸಹ ಬಲ ಸಿಗುವಂಥಾ ತನ್ನ ವಿದೇಶೀ ನೀತಿಯ ನಿರ್ಧಾರವನ್ನು ತಿಳಿಸಿತು. ಆದರೂ ತತ್ವಜ್ಞಾನದ ಕ್ಷೇತ್ರದಲ್ಲಿ ಭಾರತವು ತನ್ನ ಎದುರಾಳಿಯಾಗಿರಲು ಚೀನಾವು ಇಷ್ಟಪಡುವುದಿಲ್ಲ. ಭಾರತದ ಈ ಪ್ರತಿಷ್ಠೆಯನ್ನು ಮುಗಿಸಲೆಂದೇ ಅದು ಇಂತಹ ಆಕ್ರಮಣಕಾರಿ ಹಾಗೂ ಕಠೋರವಾದ ನಿಲುವನ್ನು ಪಡೆದಿದೆ.

## ಉತ್ತರದ ಗಡಿಗಳ ಕಡೆಗೆ ಕೆಟ್ಟಕಣ್ಣು

ಭಾರತ ಸರ್ಕಾರವು ಚೀನಾದ ಸಮಸ್ಯೆಯನ್ನು ಎಂದಿಗೂ ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಆದ್ದರಿಂದ ಉತ್ತರದ ಗಡಿ ಪ್ರದೇಶಗಳನ್ನು ಯಾವಾಗಲೂ ಉಪೇಕ್ಷಿಸುತ್ತಾ ಬಂದಿತು. ವಾಸ್ತವವಾಗಿ ಚೀನಾ ಟಿಬೆಟ್ಟಿನ ಮೇಲೆ ಆಕ್ರಮಣ ಮಾಡಿದಾಗಲೇ ನಾವೆಲ್ಲಾ ಎಚ್ಚೆತ್ತುಕೊಳ್ಳಬೇಕಾಗಿತ್ತು ಹಾಗೂ ಭಾರತದ ಸುರಕ್ಷತೆಗಾಗಿ ಟಿಬೆಟ್ಟಿನ ಸ್ವಾತಂತ್ರ್ಯವು ಅವಶ್ಯಕ ಎಂದು ಭಾವಿಸಿ ಅದಕ್ಕಾಗಿ ಹೋರಾಡಬೇಕಿತ್ತು. ಈ ಸಮಯದಲ್ಲಿ ನಮ್ಮ ಬಳಿ ಟಿಬೆಟ್ಟಿನ ಸೈನ್ಯವೂ ಇತ್ತು ಹಾಗೂ ಪಾಕಿಸ್ತಾನದ

ವಿಭಾಗವೂ ನಮ್ಮ ಕೈಯಲ್ಲಿತ್ತು. ನಾವು ಸ್ವಲ್ಪ ಸಹಾಯ ಮಾಡಿದ್ದರೂ ಟಿಬೆಟ್ಟಿನ ಜನರು ತಮ್ಮ ಸ್ವಾತಂತ್ರ್ಯಕ್ಕಾಗಿ, ರಕ್ಷಣೆಗಾಗಿ ಪ್ರಾಣಬಿಟ್ಟು ಕಾದಾಡುತ್ತಿದ್ದರು. ಆದರೆ ನಾವು ಅವರಿಗೆ ಮೋಸ ಮಾಡಿದೆವು. ನಾವು ಮೌನವಾಗಿದ್ದುಬಿಟ್ಟೆವು. ನಮ್ಮನ್ನು ಬಿಟ್ಟು ಬಾಕಿ ಪ್ರಪಂಚವು ಏನೂ ಮಾಡಲು ಸಾಧ್ಯವಿರಲಿಲ್ಲ.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಟಿಬೆಟ್ಟಿನ ಬಗ್ಗೆ ದನಿ ಎತ್ತಿದಾಗ ನಾವು ಅದರ ಬಾಯಿ ಮುಚ್ಚಿಸಿದೆವು. ನಾವು ಟಿಬೆಟ್ಟಿನ ಬದಲಾಗಿ ಚೀನಾದ ವಕಾಲತ್ತು ನಡೆಸಿದೆವು. ನಂತರವಂತೂ ಟಿಬೆಟ್ಟಿನ ಮೇಲೆ ಚೀನಾದ ಅಧಿಪತ್ಯವನ್ನು ಸ್ವೀಕಾರ ಮಾಡಿ ನಾವು ನಮ್ಮ ಸಂಪೂರ್ಣ ಅಧಿಕಾರವನ್ನು ಚೀನಾಕ್ಕೆ ಒಪ್ಪಿಸಿಬಿಟ್ಟೆವು. ಆ ಸಮಯದಲ್ಲಿ ಭಾರತ ಮತ್ತು ಟಿಬೆಟ್ಟಿನ ಮಧ್ಯೆ ಗಡಿಪ್ರದೇಶಗಳ ಒಪ್ಪಂದಗಳನ್ನು ಸಮರ್ಥಿಸುವ ಬಗ್ಗೆ ಚಿಂತೆಯನ್ನೇ ಮಾಡಲಿಲ್ಲ. ಯಾವ ಚೀನಾವು ಟಿಬೆಟ್ಟಿಗೆ ಬರಬಲ್ಲದೋ, ಅದು ಗಡಿಯನ್ನು ವಿಸ್ತರಿಸಬಲ್ಲದು ಎನ್ನುವುದನ್ನೂ ನಾವು ಮರೆತೆವು. ಆದ್ದರಿಂದ ನಾವು ನಮ್ಮ ಗಡಿಗಳನ್ನು ಭದ್ರಪಡಿಸಬೇಕು. ಆದರೆ ನಾವು ಅದರ ಮೋಸಕ್ಕೊಳಗಾದೆವು.

## ಕಮ್ಯುನಿಸ್ಟ್ ಪ್ರಚಾರಕ್ಕೆ ಬಲಿ

ಶ್ರೀ ದಲಾಯಿಲಾಮರವರು ಟಿಬೆಟ್ಟಿನಿಂದ ಓಡಿ ಹೋದ ನಂತರ ನಾವು ಅವರಿಗೆ ಆಶ್ರಯವಂತೂ ಕೊಟ್ಟೆವು. ಆದರೆ ಟಬೆಟ್ಟಿನ ಸ್ವಾತಂತ್ರ್ಯಕ್ಕಾಗಿ ಅವರು ಮಾಡಿದ ಹೋರಾಟಕ್ಕೆ ಬೆಂಬಲವನ್ನು ಕೊಡಲಿಲ್ಲ. ಆದರೆ ದಲಾಯಿಲಾಮರವರ ಕಾರಣದಿಂದ ಚೀನಾ ನಮ್ಮ ಮೇಲೆ ಕೋಪಗೊಂಡಿದೆ ಎನ್ನುವ ಕಮ್ಯುನಿಸ್ಟರ ಪ್ರಚಾರಕ್ಕೆ ನಾವು ಬಲಿಯಾದೆವು. ದಲಾಯಿಲಾಮಾರವರ ಜೊತೆ ನಾವು ವ್ಯವಹರಿಸಿದ ಪರಿಣಾಮವೂ ಈಗ ಉಲ್ಟಾ ಹೊಡೆದಿದೆ. ಒಂದು ಕಡೆ ನಾವು ಅವರಿಗೆ ಆಶ್ರಯ ನೀಡಿ ಅವರ ಬಗ್ಗೆ ಚೀನಾದ ದುರ್ನಡತೆಯ ಕಾರಣದಿಂದ ಉಂಟಾಗಬಹುದಾದ ನೋವಿನಿಂದ ಟಿಬೆಟ್ಟಿನ ಜನರ ಭಾವನೆಗಳನ್ನು ರಕ್ಷಿಸಿದೆವು. ಆ ನೋವಿನಿಂದ ವಿದ್ರೋಹದ ಜ್ವಾಲೆಯು ಇನ್ನೂ ಹೆಚ್ಚಾಗುವ ಸಾಧ್ಯತೆ ಇತ್ತು. ಇನ್ನೊಂದು ಕಡೆ ನಾವು ಟಿಬೆಟ್ಟಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಅವರ ಪ್ರಯತ್ನವನ್ನು ಕುಂಠಿತಗೊಳಿಸಿದೆವು. ಇತ್ತ ಚೀನಾವು ಭಾರತದ ಭೂಭಾಗಗಳ ಮೇಲೆ ಹಕ್ಕನ್ನು ಸ್ಥಾಪಿಸಿ ತನ್ನನ್ನು ತಾನು ಟಿಬೆಟ್ಟಿನ ರಾಷ್ಟ್ರೀಯ ಗಡಿಗಳ ವಿಸ್ತರಣೆಯಲ್ಲಿ ತನ್ನ ಪಾಲಿರುವುದಾಗಿ ಸಾಬೀತುಗೊಳಿಸುವ ಪ್ರಯತ್ನದಲ್ಲಿ ತೊಡಗಿಸಿಕೊಂಡಿತು. ನಮ್ಮ ಈ ತಪ್ಪನ್ನು ನಾವು ತಿದ್ದಿಕೊಳ್ಳುವ ಅಗತ್ಯವಿದೆ.

## ನಾವು ಚೀನಾದ ಶಕ್ತಿಯನ್ನು ಹೆಚ್ಚಿಸಿದೆವು

ಗಡಿಗಳ ಅವಹೇಳನೆಯ ಅತ್ಯಂತ ಆಶ್ಚರ್ಯಕರವಾದ ಉದಾಹರಣೆ ಎಂದರೆ ಪೀಕಿಂಗ್ ರೇಡಿಯೋದಿಂದ ಭಾರತದ ಭೂಮಿಯಲ್ಲಿ ಚೀನಾದ ಮೂಲಕ ರಸ್ತೆಗಳನ್ನು ಮಾಡುವ ಪ್ರಯತ್ನ ಘೋಷಣೆಯಾಗುವವರೆಗೆ ನಮಗೆ ಈ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ಭಾರತ ಸರ್ಕಾರದ ಜೊತೆಜೊತೆಯಲ್ಲಿ ಕಾಶ್ಮೀರ ಸರ್ಕಾರದ ಮೇಲೂ ಇದರ ಹೊಣೆ ಇದೆ. ಕಾಶ್ಮೀರದ ಮಂತ್ರಿ ಮಂಡಲದಲ್ಲಿ ಕಮ್ಯುನಿಸ್ಟರ ಅಸ್ತಿತ್ವ ಹಾಗೂ ಭಾರತ ಸರ್ಕಾರದ ಕಾಶ್ಮೀರ ನೀತಿ ಇವೆರಡೂ ಇದಕ್ಕೆ ಹೊಣೆ. ಆಕ್ರಮಣದ ಸುಳಿವು ಸಿಕ್ಕಿದ ನಂತರವೂ ಭಾರತ ಸರ್ಕಾರವು ಯಾವ ಸಮಯದಲ್ಲೂ ಪ್ರತಿರೋಧಾತ್ಮಕ ಉಪಾಯಗಳ ಮೊರೆ ಹೋಗಲಿಲ್ಲ. ಭಾರಾಹೋತಿನಲ್ಲಿ ನಾವು ನಮ್ಮ ಜಾಗ ಬಿಟ್ಟುಕೊಟ್ಟೆವು. ಲೋಗ್ಸುನಿಂದ ನಾವು ಹಿಂದೆ ಸರಿದೆವು. ಲಡಾಖಿನಲ್ಲಿ ನಮ್ಮ ಹಲವಾರು ಸೈನಿಕರು ಹುತಾತ್ಮರಾದಾಗಲೂ ನಾವು ವಿರೋಧ ಪತ್ರವನ್ನು ಕಳುಹಿಸುವುದನ್ನು ಬಿಟ್ಟು ಬೇರೇನೂ ಮಾಡಲು ಸಿದ್ಧರಾಗಲಿಲ್ಲ. ನಿಜವಾಗಿಯೂ ಇವೆಲ್ಲಾ ಘಟನೆಗಳು ಚೀನಾದ ಶಕ್ತಿಯನ್ನು ಹೆಚ್ಚಿಸುವಂತಾದ್ದೇ ಆಗಿದೆ.

ಚೀನಾದ ಆಕ್ರಮಣದ ಸಂಬಂಧದಲ್ಲಿ ನಾವು ಚಾವೂ–ಎನ್.ಲಾಯೀಯವರಲ್ಲಿ ಮಾತನಾಡಿ ಒಂದು ಕಡೆ ಆಕ್ರಮಣದ ಬಗ್ಗೆ ವಿವಾದದ ರೂಪವನ್ನು ಪ್ರಸ್ತುತಪಡಿಸುವ ಪ್ರಯತ್ನ ಮಾಡಿದೆವು. ಇನ್ನೊಂದು ಕಡೆ ಸಂಪೂರ್ಣವಾಗಿ ಗಡಿಯ ಬಗ್ಗೆ ಚರ್ಚಿಸಿ ಅದನ್ನೂ ವಿವಾದ ವಿಷಯವನ್ನಾಗಿ ಮಾಡಿದೆವು. ಆಕ್ರಮಣವನ್ನು ಅಂತ್ಯಗೊಳಿಸದೆ ಚರ್ಚೆ ಮಾಡುವುದು ಯಾವುದೇ ದೃಷ್ಟಿಯಿಂದಲೂ ಸರಿಯಲ್ಲ. ಪ್ರಧಾನಮಂತ್ರಿಗಳ ಮಾತುಕತೆಯು ವಿಫಲವಾದ ನಂತರವೂ ನಾವು ಎರಡೂ ದೇಶಗಳ ಅಧಿಕಾರಿಗಳ ಮೂಲಕ ಸತ್ಯಾಸತ್ಯತೆಗಳ ಶೋಧಕ್ಕಾಗಿ ಸಭೆ ಸೇರುವ ಪ್ರಸ್ತಾಪವನ್ನು ಒಪ್ಪಿಕೊಂಡೆವು. ಅದರ ವರದಿ ಬಂದ ನಂತರವೇ ನಾವು ನಮ್ಮ ಕಡೆಯಿಂದ ವಿದೇಶಾಂಗ ಖಾತೆಯ ಸಚಿವರನ್ನು ಪೀಕಿಂಗ್‌ಗೆ ಕಳುಹಿಸಿ ನಂತರ ನಮ್ಮ ಶಕ್ತಿಹೀನತೆಯನ್ನು ಪ್ರದರ್ಶಿಸಿದ್ದೇವೆ. ನಮ್ಮ ಶಾಂತಿಯ ಅಭಿಲಾಷೆ ಮತ್ತು ಯಾವುದಾದರೊಂದು ರೀತಿಯಲ್ಲಿ ರಾಜಿ ಮಾಡಿಕೊಳ್ಳುವ ಉತ್ಸುಕತೆಯು ಚೀನಾದ ಧೈರ್ಯ ಮತ್ತು ಅದರ ದುಷ್ಟತೆಯನ್ನು ಹೆಚ್ಚಿಸಿದೆ.

## ಗೃಹನೀತಿಯೂ ಇದಕ್ಕೆ ಹೊಣೆ

ಚೀನಾದ ಆಕ್ರಮಣಕ್ಕೆ ಭಾರತೀಯ ಆಡಳಿತದ ವಿದೇಶ ನೀತಿಯೇ ಅಲ್ಲದೆ ಗೃಹನೀತಿಯೂ ಸಹ ಹೊಣೆಯಾಗಿದೆ. ಪಂಡಿತ್ ನೇಹರೂರವರು ಕಮ್ಯುನಿಸ್ಟರಿಗೆ ಎಲ್ಲಾ ರೀತಿಯ ಸ್ವಾತಂತ್ರ್ಯವಲ್ಲದೆ, ಗೌರವವನ್ನೂ ಕೊಟ್ಟಿದ್ದಾರೆ. ಕಮ್ಯುನಿಸ್ಟರು

ಚೀನಾದ ಮೇಲೆ ಆಕ್ರಮಣ ಮಾಡಲು ಅವರ ಪಂಚಶೀಲ ಕಾರ್ಯಾಚರಣೆಗಳಲ್ಲಿ ಆದ ವೃದ್ಧಿಯೂ ಆಹ್ವಾನ ನೀಡಬಲ್ಲದು.

ಪ್ರಧಾನ ಮಂತ್ರಿಯು ಚೀನಾದ ಜೊತೆ ಯಥಾಸ್ಥಿತಿ ರಾಜಿ ಮಾಡಿಕೊಳ್ಳಲು ತಮ್ಮ ಮನಸ್ಸನ್ನು ಸಿದ್ಧಗೊಳಿಸಿಕೊಂಡಿದ್ದಾರೆಂದು ಅನ್ನಿಸುತ್ತದೆ. ಜನಾಭಿಪ್ರಾಯಗಳು ಅವರ ವಿರುದ್ಧ ತೀವ್ರವಾಗಿ ಇಲ್ಲದಿರುತ್ತಿದ್ದರೆ, ಕಳೆದ ಬಾರಿ ಅವರು ಚಾವೂ ಎನ್ ಲಾಯಿಯವರು ಬಂದಾಗ ಆಕ್ರಮಣದ ವಿಚಾರವನ್ನು ಮುಚ್ಚಿಟ್ಟಿದ್ದು, ನಂತರ ಅದರ ಗಂಭೀರತೆಯನ್ನು ಕಡಿಮೆಗೊಳಿಸಲು ಲಡಾಖಿನ ಫಲಹೀನತೆ ಮುಂತಾದವುಗಳ ಬಗ್ಗೆ ಪ್ರಸ್ತಾಪಿಸಿದ್ದು ಹಾಗೂ ಸೈನಿಕ ಕಾರ್ಯಾಚರಣೆಯ ಕಠಿಣತೆಗಳ ಬಗ್ಗೆ ಚರ್ಚೆ ಮಾಡಿದ್ದು. ಇವೆಲ್ಲಾ ಅವರು ಯಾವುದೇ ದಿಟ್ಟ ಹೆಜ್ಜೆಯನ್ನು ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಸೈನಿಕ ಕಾರ್ಯಾಚರಣೆ ಇರಲಿ, ಅವರು ರಾಜಕೀಯ ಒತ್ತಡ ತರಲು ಸಹ ಯಾವುದೇ ಕ್ರಮ ಕೈಗೊಳ್ಳಲಿಲ್ಲ.

**ಚೀನಾಕ್ಕೆ ಉಳಿಗಾಲವಿಲ್ಲ**

ಚೀನಾದ ವಿರುದ್ಧ ಕ್ರಮ ಕೈಗೊಳ್ಳದಿರಲು ಮತ್ತು ಜನತೆಯ ಗಮನವನ್ನು ಬೇರೆಡೆ ಸೆಳೆಯಲು ಭಾರತದ ಸರ್ಕಾರ ಹಾಗೂ ಕಮ್ಯುನಿಸ್ಟರು ಯೋಜನಾಬದ್ಧವಾಗಿ ಪ್ರಯತ್ನ ನಡೆಸಿದ್ದಾರೆ. ಒಂದೆಡೆ ಚೀನಾದ ಪ್ರಬಲ ಶಕ್ತಿ ಹಾಗೂ ನಮ್ಮ ದುರ್ಬಲತೆಯ ಬಗ್ಗೆ ಡಂಗೂರ ಹೊಡೆದಿದೆ. ಮತ್ತೊಂದೆಡೆ ನಾವೇನಾದರೂ ಯುದ್ಧ ಮಾಡಿದರೆ ಸೋಲು ನಮಗೆ ಕಟ್ಟಿಟ್ಟ ಬುತ್ತಿ ಎನ್ನುವ ಭಾವನೆ ಜನರ ಮನಸ್ಸಿನಲ್ಲಿ ಬಿತ್ತಲಾಗಿದೆ. ಇದು ಯಾವುದೇ ಸ್ವಾತಂತ್ರ್ಯ ಹಾಗೂ ಸ್ವಾಭಿಮಾನಿ ದೇಶಕ್ಕೆ ನಾಚಿಕೆಗೇಡಿನ ವಿಷಯ ಹಾಗೂ ಅನುಚಿತವಷ್ಟೆ ಅಲ್ಲದೆ, ಅಸತ್ಯವೂ ಹೌದು, ಚೀನಾವೂ ಎಷ್ಟೇ ಬೊಬ್ಬೆ ಹೊಡೆದರೂ, ಲಡಾಖಿನಲ್ಲಿ ನಮ್ಮ ಸೈನ್ಯವನ್ನು ಎದುರಿಸುವುದರಲ್ಲಿ, ಅದಕ್ಕೆ ಉಳಿಗಾಲವಿಲ್ಲ. ಇಂದಿನ ಅಂತಾರಾಷ್ಟ್ರೀಯ ಸ್ಥಿತಿಯಲ್ಲಿ ರಷ್ಯಾವು ಭಾರತವನ್ನು ವಿರೋಧಿಸಿ, ಚೀನಾಕ್ಕೆ ಸಹಾಯ ಮಾಡುವುದಿಲ್ಲವೆನ್ನುವುದು ಸ್ಪಷ್ಟ. ಆದರೆ ಭಾರತವು ಮೌನವಾಗಿದ್ದರೆ, 'ದಾವೆ ಹೂಡುವವನು ಅಶಕ್ತ–ಸಾಕ್ಷಿ ಸಶಕ್ತ' ಎನ್ನುವ ನೀತಿಯನ್ನು ಪಾಲಿಸಿದಂತಾಗುವುದಿಲ್ಲ. ನಮ್ಮ ಸೈನಿಕ ಶಕ್ತಿಯು ಹೆಚ್ಚಾಗಿರಬಹುದು, ಲಡಾಖಿನ ೧೨ ಸಾವಿರ ಚದರ ಮೈಲಿಗಳನ್ನು ಮುಕ್ತಗೊಳಿಸಲು ಅದು ಸಾಲದೇ ಇಲ್ಲ. ಸತ್ಯವೇನೆಂದರೆ ನಾವು ಸೈನಿಕ ಶಕ್ತಿಯನ್ನು ಸಹ ಬಳಸಬಲ್ಲೆವು ಎಂದು ವಿಶ್ವಕ್ಕೆ ತೋರಿಸಿದ್ದೇವೆ. ಹಾಗಾಗಿ ಎಲ್ಲಾ ದೇಶಗಳು ನಮ್ಮ ಜೊತೆ ವ್ಯವಹರಿಸುವಾಗ ಬಹಳ ಸಂಯಮ ಮತ್ತು ಎಚ್ಚರಿಕೆಯಿಂದ ಇರುತ್ತದೆ. ಆದರೆ ಯಾವುದಾದರೂ ಕಠೋರ ಕಾರ್ಯಾಚರಣೆ ಮಾಡುವ ಬದಲು ನಮ್ಮ ಸರ್ಕಾರವು ಪಂಚಮಾಂಗಿ

ಕಮ್ಯುನಿಸ್ಟರ ಜೊತೆ ಸೇರಿಕೊಂಡು ದೇಶದ ಜನತೆಯ ಗಮನವನ್ನು ಚೀನಾದ ಆಕ್ರಮಣದಿಂದ ದೂರ ಸರಿಯುವಂತೆ ಮಾಡುತ್ತಿದೆ. ಚೀನಾದ ಆಕ್ರಮಣವನ್ನು ಸಮರ್ಥಿಸುವ ಕಾರಣ ಯಾವ ಕಮ್ಯುನಿಸ್ಟರ ನಿಜವಾದ ದೇಶದ್ರೋಹಿ ರೂಪವು ಜನತೆಯ ಮುಂದೆ ಪ್ರಕಟವಾಗಿತ್ತೋ ಇಂದು ಪುನಃ ಅದಕ್ಕೆ ರಾಜಕೀಯ ಪ್ರತಿಷ್ಠೆ ಪ್ರಾಪ್ತಿಯಾಗುವಂತಹ ಕಾರ್ಯವನ್ನು ನಮ್ಮ ಸರ್ಕಾರವು ಮಾಡುತ್ತಿದೆ.

**ಏಕೈಕ ಉಪಾಯ**

ಚೀನಾದ ಜೊತೆಯಲ್ಲಿಯೇ ದೇಶದ ಒಳಗೆ ಕೆಲಸ ಮಾಡುವ ಪಂಚಮಾಂಗಿ ತತ್ವಗಳಿಂದ ಬಿಡುಗಡೆಗೊಳ್ಳುವ ಒಂದೇ ಒಂದು ಮಾರ್ಗವೆಂದರೆ ಜನತೆಯನ್ನು ರಾಷ್ಟ್ರೀಯ ಆಧಾರದ ಮೇಲೆ ಸಂಘಟಿಸಿ, ಅವರ ಆತ್ಮವಿಶ್ವಾಸ ಮತ್ತು ಪುರುಷಾರ್ಥವನ್ನು ಜಾಗೃತಿಗೊಳಿಸುವುದು. ಇಂದಿನ ಆಡಳಿತವು ಮಾನಸಿಕವಾಗಿ ಹಾಗೂ ರಾಜಕೀಯವಾಗಿ ಇದಕ್ಕೆ ಸಿದ್ಧವಿಲ್ಲ. ಆದ್ದರಿಂದ ಇವರ ಕೈಯಲ್ಲಿ ಆಕ್ರಮಣವನ್ನೂ ತಡೆಯಲಾಗಲಿಲ್ಲ, ಹಾಗೂ ಯಶಸ್ವಿಯಾಗಿ ಸೇಡನ್ನೂ ತೀರಿಸಿಕೊಳ್ಳಲಾಗುತ್ತಿಲ್ಲ. ಆಡಳಿತದಲ್ಲಿ ಯಾವುದೇ ಕುಂದು ಕೊರತೆಗಳಿರಬಹುದು. ಆದರೆ ರಾಷ್ಟ್ರವು ತನ್ನ ಸ್ವಾತಂತ್ರ್ಯದ ರಕ್ಷಣೆಗಾಗಿ ಸ್ವತಃ ತಾನೇ ಮುಂದೆ ಬಂದು ಆಡಳಿತ ಪಕ್ಷದ ತಪ್ಪುಗಳನ್ನು ಮತ್ತು ಅದರಿಂದಾಗುವ ಪರಿಣಾಮಗಳನ್ನು ಬದಲಿಸುವತ್ತ ಗಮನ ಸೆಳೆಯುವ ದಿನಗಳು ದೂರವಿಲ್ಲ.

* * * * *

# ನಾನಲ್ಲ, ನೀನೇ

## ಶ್ರೀ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಕಾರಣದಿಂದಲ್ಲ, ಆದರೆ ಶ್ರೀ ಮಾಧವರಾವ್ ಗೋಲ್ವಲ್ಕರ್‌ವರ ಕಾರಣದಿಂದ ಶ್ರೀ ಗೂರೂಜೀಯವರ ವ್ಯಕ್ತಿತ್ವಕ್ಕೆ ನನ್ನ ಭಕ್ತಿಪೂರ್ವಕ ನಮನಗಳು. ಒಬ್ಬ ಸಜ್ಜನರು ತನ್ನನ್ನು ನಾನು ಸಂಘದ ವಿರೋಧಿ ಎಂದು ತಿಳಿಯುತ್ತೇನೆ ಎಂದು ಹೇಳಿದರು. ಅವರ ಕಥನವು ವಿಚಿತ್ರವಾದದ್ದೇನಲ್ಲ. ಏಕೆಂದರೆ ಹೀಗೆ ಯೋಚಿಸುವವರು ಬಹಳಷ್ಟು ಜನರಿದ್ದಾರೆ. ಆ ಕಾಲವೂ ಒಂದಿತ್ತು (೧೯೪೮ರಲ್ಲಿ). ಆಗ ದೊಡ್ಡ ದೊಡ್ಡವರೆಲ್ಲಾ ಸಂಘ ಮತ್ತು ಸಂಘದ ಸ್ವಯಂಸೇವಕರೇನೋ ಒಳ್ಳೆಯವರು. ಆದರೆ ಅವರ ಮುಖಂಡರು ಮತ್ತು ಸಂಘದ ಸಂಘ ಸಂಚಾಲಕರು ಅವರನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಹೇಳಿದರು. ಅಂದರೆ ಈ ಎರಡು ಬಗೆಯ ವ್ಯಕ್ತಿಗಳ ಭಾವನೆಗಳಲ್ಲಿ ಅಂತರವಿರಬಹುದು ಆದರೆ ವಿಚಾರಗಳ ಮುನ್ನುಡಿಯಲ್ಲಿ ಅಲ್ಲ. ಅವರ ಪ್ರಕಾರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಸಂಚಾಲಕರು ಮತ್ತು ಶ್ರೀ ಮಾಧವರಾವ್ ಗೋಲ್ವಲ್ಕರ್ ಇಬ್ಬರೂ ಬೇರೆ ಬೇರೆ ವ್ಯಕ್ತಿಗಳು. ನನ್ನ ಪ್ರಕಾರ ಅವರು ಇಬ್ಬರನ್ನೂ ಅರ್ಥಮಾಡಿಕೊಳ್ಳಲಿಲ್ಲ. ಸಂಘವನ್ನು ಅರ್ಥಮಾಡಿಕೊಳ್ಳುವಲ್ಲಿ, ಶ್ರೀ ಗುರೂಜಿಯವರನ್ನು ಅರ್ಥ ಮಾಡಿಕೊಳ್ಳಲಿಲ್ಲ.

ಶ್ರೀ ಗುರೂಜಿಯವರ ವ್ಯಕ್ತಿತ್ವವು ಸಂಘದ ಸರಸಂಘಚಾಲಕತ್ವದಿಂದ ಕೊಂಚವೂ ಭಿನ್ನವಲ್ಲ ಎಂದು ನಾನು ಹೇಳಿದ ಮಾತ್ರಕ್ಕೆ ಅವರಲ್ಲಿ ಮಹಾನ್ ವಿಭೂತಿತತ್ವದ ಅಭಾವವಿದೆ ಎಂದರ್ಥವಲ್ಲ. ಸಂಘದ ಸರಸಂಘಚಾಲಕರಾದಾಗ ಅವರು, ಇದು ವಿಕ್ರಮಾದಿತ್ಯನ ಆಸನ, ಇದರ ಮೇಲೆ ಕುಳಿತು ಒಬ್ಬ ಸಾಮಾನ್ಯನೂ ನ್ಯಾಯ ಹೇಳಬಹುದು ಎಂದು ಹೇಳಿದರು. ನಯವಾಗಿ ಅವರು ತಮ್ಮನ್ನು ಸಾಮಾನ್ಯನಿಗೆ ಹೋಲಿಸಿಕೊಂಡರು. ಆದರೆ ಅವರ ಅಪ್ರತಿಮ ದೊಡ್ಡತನ ಸಿಂಹಾಸನದ ಕಾರಣದಿಂದ ಬಂದಿದ್ದಲ್ಲ ಬದಲಾಗಿ ಅವರ ವ್ಯಕ್ತಿತ್ವದ ಕಾರಣದಿಂದ ಎಂದು ತಿಳಿಯದಂತಹ ತಪ್ಪನ್ನು ಯಾರೂ ಮಾಡಲಾರರು. ಹೌದು, ಅವರು ತಮ್ಮ ಸಂಪೂರ್ಣ ಶಕ್ತಿ

ಮತ್ತು ವ್ಯಕ್ತಿತ್ವವನ್ನು ಸಂಘಕ್ಕೆ ಧಾರೆ ಎರೆದುಬಿಟ್ಟಿದ್ದಾರೆ. ಇದೇ ಅವರ ಜೀವನದ ಗುರಿ. ಇದೇ ಅವರ ದೊಡ್ಡತನಕ್ಕೆ ಸಾಕ್ಷಿ.

೧೯೩೮ರ ಮಾತು. ಸಂಘದ ಮಾನ್ಯ ಸರಸಂಘಚಾಲಕರಾದ ಪರಮಪೂಜ್ಯ ಡಾ. ಹೆಡಗೇವಾರ್‌ರವರು ಇನ್ನೂ ಬದುಕಿದ್ದರು. ಆ ವರ್ಷ ಶ್ರೀ ಗುರೂಜಿಯವರು ನಾಗಪುರದಲ್ಲಿ ನಡೆಯುವ ಅಧಿಕಾರಿಗಳ ಪ್ರಶಿಕ್ಷಣ ಶಿಬಿರದ ಮುಖ್ಯಾಧಿಕಾರಿಗಳಾಗಿದ್ದರು. ಶಿಬಿರದ ಮುಕ್ತಾಯಕ್ಕೆ ಮುನ್ನ ಅದರಲ್ಲಿ ಭಾಗವಹಿಸಿದ್ದ ಸ್ವಯಂಸೇವಕರು ಪರಮಪೂಜನೀಯ ಡಾಕ್ಟರ್‌ಜಿರವರ ಪಾದಾರವಿಂದಗಳಿಗೆ ಅರ್ಪಿಸಲು ನಿಧಿಯನ್ನು ಸಂಗ್ರಹಿಸಿದ್ದರು. ಪ್ರತಿಯೊಬ್ಬರೂ ತಮ್ಮ ತಮ್ಮ ಶಕ್ತಿಗನುಸಾರವಾಗಿ ಹಣ ಕೊಟ್ಟಿದ್ದರು. ಯಾರ್ಯಾರು ಏನೇನು ಕೊಟ್ಟಿದ್ದಾರೆನ್ನುವುದು ಯಾರಿಗೂ ಗೊತ್ತಿರಲಿಲ್ಲ. ಒಬ್ಬ ಸ್ವಯಂಸೇವಕನು ನಿಧಿಗೆ ಏನನ್ನೂ ಕೊಡದೆ ತನ್ನ ಶ್ರದ್ಧಾ ಭಕ್ತಿಗನುಸಾರವಾಗಿ ಡಾಕ್ಟರ್ ಸಾಹೇಬರಿಗೆ ಒಂದು ಗಡಿಯಾರವಿರುವ ಚಿನ್ನದ ಸರವನ್ನು ನೀಡಿದನು. ಹಣವನ್ನು ಮತ್ತು ಸರವನ್ನು ನೀಡುವ ಕಾರ್ಯಕ್ರಮವು ಪೂರ್ಣಗೊಂಡಿತು. ಆ ಚಿನ್ನದ ಸರವನ್ನು ಕೊಡುಗೆಯ ರೂಪದಲ್ಲಿ ನೀಡಿದ ಆ ಸ್ವಯಂಸೇವಕನ ತ್ಯಾಗವನ್ನು ನಾವೆಲ್ಲರೂ ಕೊಂಡಾಡಿದೆವು. ತಮ್ಮ ಮುಂದೆ ಅವನು ಆ ದಿನದ ಹೀರೋ ಆಗಿಬಿಟ್ಟ ಮುಖ್ಯಾಧಿಕಾರಿಯಾದ ಕಾರಣ ಶ್ರೀ ಗುರೂಜಿಯವರು ತಮ್ಮ ಸಮಾರೋಪ ಭಾಷಣ ಮಾಡಲು ಎದ್ದು ನಿಂತರು. ತಮ್ಮ ಭಾಷಣದಲ್ಲಿ ಅವರು ಚಿನ್ನದ ಸರದ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆಂದರು. ಯಾವ ಸ್ವಯಂಸೇವಕನು ಚಿನ್ನದ ಸರವನ್ನು ನೀಡಿದ್ದಾನೋ ಅವನಿಗೆ ಡಾಕ್ಟರ್ ಸಾಹೇಬರ ಬಗ್ಗೆ ಬಹಳ ಶ್ರದ್ಧೆ, ಗೌರವ, ಪ್ರೀತಿಗಳಿವೆ ಎಂದು ನನಗೆ ಗೊತ್ತು. ಅವರು ಮುಂದುವರೆಸುತ್ತಾ, ಆದರೆ ಅವನು ಪೂರ್ಣಪ್ರಮಾಣದ ಸ್ವಯಂಸೇವಕನಲ್ಲ, ಅವನಲ್ಲಿ ಎಲ್ಲೋ ಒಂದು ಕಡೆ ಅಹಂಕಾರವು ಅಡಗಿದೆ. ನಿಧಿ ಸಂಗ್ರಹ ಮಾಡುವಾಗ ಅದರಲ್ಲಿ ಯಾರ ಪ್ರತ್ಯೇಕ ವೈಯಕ್ತಿಕತೆಯೂ ಇರುವುದಿಲ್ಲ. ಆ ನಿಧಿ ಸಂಗ್ರಹದಲ್ಲಿ ಇವರು ಸೇರಿಕೊಳ್ಳದೆ, ಪ್ರತ್ಯೇಕವಾಗಿ ನೀಡುವ ಉದ್ದೇಶವೇನೆಂದರೆ, ಅವರ ವ್ಯಕ್ತಿತ್ವವನ್ನು ಪ್ರತ್ಯೇಕವಾಗಿ ಗುರುತಿಸಿಕೊಳ್ಳಲು ಅಷ್ಟೇ ಹಾಗೂ ಅದು ಅವರ ಅಹಾಂಕಾರವಷ್ಟೇ ಶ್ರೀ ಗುರೂಜಿಯವರ ಮಾತನ್ನು ಕೇಳಿ ನಮಗೆಲ್ಲರಿಗೂ ಒಮ್ಮೆಲೇ ಬೇಜಾರಾಯಿತು. ಆದರೆ ಸಂಘದ ಸ್ವಯಂಸೇವಕರಾಗಲು ತಮ್ಮ ವ್ಯಕ್ತಿತ್ವವನ್ನು ಸಂಘ ಜೀವನದಲ್ಲಿ ಎಷ್ಟು ವಿಲೀನಗೊಳಿಸಬೇಕಾಗುವುದೋ ಅದರ ಬಗ್ಗೆ ಎಂದೂ ಮರೆಯಲಾಗದಂಥಾ ಒಳ್ಳೆಯ ಪಾಠವಂತೂ ಸಿಕ್ಕಿತು. ತನ್ನ ಸಂಪೂರ್ಣ ಜೀವನವನ್ನು ಸಂಘಕ್ಕೆ ಮುಡುಪಾಗಿಡುವ ಆದರ್ಶ ವ್ಯಕ್ತಿತ್ವದ ಪರಿಚಯ ಕೇವಲ ಪರಮ ಪೂಜ್ಯ ಗುರೂಜಿಯವರ ಜೀವನದಿಂದ ಮಾತ್ರ ನಮಗಾಗಲು ಸಾಧ್ಯ. ಯಾವುದೇ

ಕಾರ್ಯದಲ್ಲಿ ಹಾಗೂ ಗುರಿಯಲ್ಲಿ ತಲ್ಲೀನತೆ ಹೊಂದುವುದು ಅಷ್ಟು ಸುಲಭವಲ್ಲ. ಅದೂ ವಿಶೇಷವಾಗಿ ಆ ಸಂಸ್ಥೆಯ ಮುಖಂಡನಾದಾಗ, ಒಂದು ವೇಳೆ ಯಾವುದೇ ವ್ಯಕ್ತಿಯ ಮುಂದೆ ವ್ಯಷ್ಟಿ ಮತ್ತು ಸಮಷ್ಟಿಯ ಬಗ್ಗೆ ಸಂಘರ್ಷವೇರ್ಪಟ್ಟರೆ ಅಥವಾ ಧ್ಯೇಯದ ಬಗ್ಗೆ ಗೊಂದಲವೇರ್ಪಟ್ಟರೆ, ಅವನು ಸಮಷ್ಟಿಯ ಭಾವನೆಗಳನ್ನು, ಇಚ್ಛೆಗಳನ್ನು ಮತ್ತು ಆಕಾಂಕ್ಷೆಗಳ ಪ್ರತೀಕವಾಗಿ ತನ್ನ ಮುಖಂಡನ ಆದೇಶವನ್ನು ಶಿರಸಾವಹಿಸಿ ನಡೆಯಬಲ್ಲನು. ಆಗ ಅವನ ದಾರಿ ಸುಗಮವಾಗಿರುತ್ತದೆ. ಆದರೆ ಯಾವ ವ್ಯಕ್ತಿಯ ಮೇಲೆ ಸಂಪೂರ್ಣ ಕಾರ್ಯಕ್ರಮಗಳ ನೇತೃತ್ವದ ಜವಬ್ದಾರಿ ಇರುವುದೋ, ಅವನು ತನ್ನ ಅಂತರಾತ್ಮವನ್ನು ಬಿಟ್ಟು ಮತ್ಯಾರಿಂದ ಪ್ರೇರಣೆ ಪಡೆಯಲು ಸಾಧ್ಯ. ಜನತಂತ್ರದ ಪ್ರಚಲಿತ ಪದ್ಧತಿಗಳು ಅಲ್ಲಿ ನಿಷ್ಪ್ರಯೋಜಕವೆನ್ನಿಸುತ್ತದೆ. ಆಗ ಅವುಗಳಿಂದ ಸಮಷ್ಟಿಯ ಭಾವನೆಗಳು ಮತ್ತು ಅದರ ಹಿತ–ಅಹಿತಗಳ ಬಗ್ಗೆ ತಿಳಿಯುವುದಿಲ್ಲ. ಸತ್ಯವು ಅನೇಕ ಸತ್ಯಗಳ ಅಥವಾ ಅರ್ಧ ಸತ್ಯಗಳ ಸರಾಸರಿಯೂ ಅಲ್ಲ. ಅದರ ಸಂಯೋಗವೂ ಅಲ್ಲ. ರಾಷ್ಟ್ರೀಯ ಸ್ವಯಂಸೇವಕ ಸಂಘವು ಸಂಪೂರ್ಣ ಸಮಷ್ಟಿಯಂತೂ ಅಲ್ಲ, ಅದು ಸಮಷ್ಟಿಯ ಒಂದು ಬಿಂದು ಅಷ್ಟೇ. ಅವರು ಇಡೀ ಸಮಾಜದ ಬಗ್ಗೆ ಚಿಂತಿಸಬೇಕಾಗುತ್ತದೆ. ಪರಮ ಪೂಜ್ಯ ಗುರೂಜಿಯವರು ಸಮಷ್ಟಿಯ ಹಿತವನ್ನೇ ತಮ್ಮ ಮುಂದಿಟ್ಟುಕೊಂಡು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಚಾಲನೆಯನ್ನು ಮಾಡಿದ್ದಾರೆ. ಅನೇಕ ವೇಳೆ ಈ ಜನರು ಅವರನ್ನು ಅರ್ಥಮಾಡಿಕೊಳ್ಳುವುದಿಲ್ಲ ಅಥವಾ ಸಮಷ್ಟಿ ಹಿತಕ್ಕೆ ಬದಲಾಗಿ ಯಾವುದೋ ಸಣ್ಣ ಹಿತವನ್ನು ಮುಂದಿಟ್ಟುಕೊಂಡು ಸಂಘದ ಗತವಿಧಿಗಳ ಸಂಚಾಲನೆ ಮಾಡಲು ಇಚ್ಛಿಸುತ್ತಾರೆ. ಅವರು ಶ್ರೀ ಗುರೂಜಿಯವರ ದೃಢತೆ ಮತ್ತು ಮತ್ತು ಅವರ ಸಿದ್ಧಾಂತಗಳ ಆಗ್ರಹವನ್ನು ನೋಡಿ ಅವರನ್ನು ಸರ್ವಾಧಿಕಾರಿಯೆಂದು ಹೇಳಿಬಿಡುತ್ತಾರೆ. ಆದರೆ ಅವರು ಆ ಭಾವನೆಯಿಂದ ಎಷ್ಟೋ ಗಾವುದ ದೂರದಲ್ಲಿದ್ದಾರೆ. ಅವರಿಗೆ ತಮ್ಮ ವೈಯಕ್ತಿಕ ಅಭಿಪ್ರಾಯವೆನ್ನುವುದು ಯಾವುದೂ ಇಲ್ಲ. ಸಂಘದ ಅಭಿಪ್ರಾಯವೇ ಅವರ ಅಭಿಪ್ರಾಯ ಅವರ ಸಿದ್ಧಾಂತವೇ ಸಂಘದ ಸಿದ್ಧಾಂತವಾಗುತ್ತದೆ. ಏಕೆಂದರೆ ಅವರು ತಮ್ಮನ್ನು ಸಂಪೂರ್ಣವಾಗಿ ಅದರಲ್ಲಿ ತೊಡಗಿಸಿಕೊಂಡಿದ್ದಾರೆ.

ಅವರು ವ್ಯಕ್ತಿ ಮತ್ತು ಸಂಸ್ಥೆಯ ಗೌರವದ ಬಗ್ಗೆ ಚಿಂತೆ ಮಾಡದೆ, ರಾಷ್ಟ್ರದ ಹಿತವನ್ನೇ ಸರ್ವೋಪರಿ ಎಂದು ಭಾವಿಸುವಂಥಾ ಇನ್ನೂ ಎಷ್ಟೋ ಅವಕಾಶಗಳು ಅವರಿಗೆ ಸಿಕ್ಕಿವೆ. ೧೯೪೮ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಲಾಯಿತು. ಆ ಸಮಯದಲ್ಲಿ ಒಂದು ವೇಳೆ ಅವರು ಇಚ್ಛಿಸಿದ್ದರೆ ಆಡಳಿತಕ್ಕೆ ಅಪಮಾನ ಮಾಡಿ ತಮ್ಮ ಶಕ್ತಿಯ ಸಂಚಯ ಮಾಡಿಕೊಡಬಹುದಿತ್ತು. ಆದರೆ

ಅವರು ಸಂಘದ ಕಾರ್ಯವನ್ನು ವಿಸರ್ಜಿಸಿ ತಮ್ಮ ದೇಶಭಕ್ತಿಯ ಪರಿಚಯ ಮಾಡಿಕೊಟ್ಟರು. ತಡೆಯಾಜ್ಞೆ ತೆರವುಗೊಂಡ ನಂತರ ಎಲ್ಲಾ ಕಡೆಯೂ ಅವರಿಗೆ ಭವ್ಯ ಸ್ವಾಗತ ಸಿಕ್ಕಿತು. ದಿಲ್ಲಿಯ ರಾಮ್ ಲೀಲಾ ಮೈದಾನದಲ್ಲಿ ಜರುಗಿದ ಸಭೆಗೆ ಕೊನೆ ಮೊದಲೇ ಇಲ್ಲ. ದೊಡ್ಡ ದೊಡ್ಡ ಸಂತರ ಸ್ವಾಭಿಮಾನವನ್ನು ಜಾಗೃತಿಗೊಳಿಸಲು ಇದೊಂದೇ ಸಾಕಾಗಿತ್ತು. ಗುರೂಜಿ ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದರು. ಒಂದು ವೇಳೆ ಹಲ್ಲು ತನ್ನ ನಾಲಿಗೆಯನ್ನೇ ಕಡಿದರೆ, ನಾವು ಆ ಹಲ್ಲಿಗೆ ಗುದ್ದಿ, ಅದನ್ನು ಮುರಿದುಹಾಕುವುದಿಲ್ಲ. ಅಲ್ಲೇ ಜನರು ಚಕಿತಗೊಂಡರು. ಗುರೂಜೀಯವರು ಸರ್ಕಾರದ ಅತ್ಯಾಚಾರ ಮತ್ತು ಅನ್ಯಾಯಗಳನ್ನು ನಿಂದಿಸುತ್ತಾ ಅದನ್ನು ಹಿಗ್ಗಾಮುಗ್ಗಾ ಬಯ್ಯುವರೆಂದು ತಿಳಿದಿದ್ದರು. ಆದರೆ ಆ ಮಹಾಪುರುಷರ ಆಳವನ್ನು ಜನರಿಗೆ ಅಳೆಯಲಾಗಲಿಲ್ಲ. ಅಲ್ಲಿ ಎಲ್ಲರಿಗೂ ಆತ್ಮೀಯತೆಯೇ ಕಾದಿತ್ತು. ಈ ಆತ್ಮೀಯತೆಯೇ ಅವರ ದೊಡ್ಡತನವನ್ನು ತೋರಿಸುತ್ತದೆ ಮತ್ತು ಅದೇ ಅವರನ್ನು ಗೌರವಿಸಲು ಕಾರಣವಾಗುತ್ತದೆ. ಅವರು ಆತ್ಮೀಯತೆಯಿಂದ ವರ್ತಿಸುವುದರಲ್ಲೇ ಅವರ ದೊಡ್ಡತನವು ಅಡಗಿದೆ. ಕಳೆದ ವರ್ಷ 'ಧರ್ಮಯುಗ' ವೆಂಬ ಸಾಪ್ತಾಹಿಕವು ಭಾರತದ ಅನೇಕ ಮಹಾ ಪುರುಷರ ಧ್ಯೇಯವಾಕ್ಯಗಳನ್ನು ಪ್ರಕಟಿಸಿತ್ತು. ಪರಮ ಪೂಜ್ಯ ಗುರೂಜಿಯವರ ಧ್ಯೇಯ ವಾಕ್ಯವು ಎಲ್ಲಕ್ಕಿಂತ ಚಿಕ್ಕದಾಗಿ, ಚೊಕ್ಕದಾಗಿತ್ತು. ನಾನಲ್ಲ ನೀನೇ ಎನ್ನುವ ಈ ಎರಡು ಶಬ್ದಗಳಲ್ಲಿ ಶ್ರೀ ಗುರೂಜಿಯವರ ಸಂಪೂರ್ಣ ಜೀವನವು ಅಡಗಿದೆ. ಈ ನೀನು ಯಾರು? ಎಂದರೆ ಸಂಘ, ಸಮಾಜ, ದೇವರು, ಅವರು ಮೂವರನ್ನೂ ಏಕಾಕಾರ ಮಾಡಿ ನಡೆಯುತ್ತಾರೆ. ಮೂವರ ಸೇವೆಯಲ್ಲಿ ವಿರೋಧವಿಲ್ಲ, ವಿಸಂಗತಿ ಇಲ್ಲ. ಒಬ್ಬರು ಸುಧಾರಿಸಿದರೆ, ಎಲ್ಲವೂ ಸುಧಾರಿಸಿದಂತೆ ಎನ್ನುವಂತೆ ಅವರು ಸಂಘದ ಸಾಧನೆಯನ್ನು ಮಾಡಿ ಎಲ್ಲರ ಸಾಧನೆಯಲ್ಲಿ ತೊಡಗಿಸಿಕೊಂಡಿದ್ದಾರೆ ಮತ್ತು ಅವರ ಜೀವನವೇ ಸಾಧನೆಯಾಗಿಬಿಟ್ಟಿದೆ. ಪರಿಣಾಮವಾಗಿ ಸಂಘವನ್ನು ಬಿಟ್ಟು ಬೇರೆ ಯಾವುದನ್ನೂ ಅವರು ಗುರುತಿಸುವುದಿಲ್ಲ. ಅದರ ಧ್ಯೇಯದೃಷ್ಟಿ ಎಷ್ಟು ಚುರುಕಾಗಿದೆಯೆಂದರೆ, ಜನರ ಹೊಗಳಿಗೆ ಮತ್ತು ತೆಗಳಿಕೆ ಎರಡರಿಂದಲೂ ಅವರು ವಿಚಲಿತರಾಗುವುದಿಲ್ಲ. ಸಂಘದ ಮೇಲೆ ನಿಷೇಧ ಹೇರಿದ ನಂತರ ಅಪಪ್ರಚಾರದ ಕಾರಣ ಸಂಘವನ್ನು ಶೈತಾನದ ಎರಡನೇ ಸ್ವರೂಪ ಎಂದು ತಿಳಿಯಲಾಗುತ್ತಿತ್ತು. ಆಗಲೂ ಅವರು ತಮ್ಮ ಗುರಿಯ ಕಡೆಗೆ ವಿಚಲಿತರಾಗದೇ ಉಳಿದರು ಮತ್ತು ತಡೆಯಾಜ್ಞೆ, ತೆರವುಗೊಂಡ ನಂತರ ನಾಲ್ಕಾರು ಕಡೆಯಿಂದ ವಿಶಾಲ ಸ್ವಾಗತ ಸಮಾರಂಭಗಳು ನಡೆದವು. ಆ ಸಂಭ್ರಮದಲ್ಲಿ ಅವರು ಕೊಚ್ಚಿಹೋಗಲಿಲ್ಲ, ನಾವೆಲ್ಲ ದಿನಪತ್ರಿಕೆಯನ್ನು ಓದುತ್ತಿದ್ದೆವು. ಮೊದಲಿನಿಂದ ಕೊನೆಯವರೆಗೆ ಎಲ್ಲವನ್ನೂ ಓದಿ ಮುಗಿಸಿದೆವು. ಅಷ್ಟರಲ್ಲಿ ಪರಮ ಪೂಜ್ಯ

ಗುರೂಜಿಯವರು ಕೊಠಡಿಯೊಳಗೆ ಪ್ರವೇಶಿಸಿದರು ಮತ್ತು ಸಹಜವಾಗಿ ಪತ್ರಿಕೆಯನ್ನು ಎತ್ತಿಕೊಂಡು, ಸುಮ್ಮನೆ ಕಣ್ಣು ಹಾಯಿಸಿದರು. ಪುಟ ತಿರುವಿದರು ಹಾಗೂ ಪತ್ರಿಕೆಯನ್ನು ಹಾಗೇ ಇಟ್ಟುಬಿಟ್ಟರು. ಮಾತು ಪ್ರಾರಂಭವಾಯಿತು. ಇದನ್ನೂ ನೋಡಿದಾಗ ಸಂಘಕ್ಕೆ ಸಂಬಂಧಿಸಿದಂತೆ ಒಂದು ವಿಷಯವು ಅದೇ ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು. ಗಮನ ಹರಿಯಿತು. "ಆದರೆ ಆ ವಿಷಯ ಎಲ್ಲಿದೆ" ನಾನು ಕೇಳಿದೆ. ಇದೇ ಪತ್ರಿಕೆಯಲ್ಲಂತೂ ಇದೆ ಪರಮ ಪೂಜ್ಯ ಗುರೂಜಿಯವರೆಂದರು. ನಾನು ಇಡೀ ಸಮಾಚಾರ ಪತ್ರಿಕೆಯನ್ನು ಓದಿದ್ದೆ. ನನಗೆ ಆ ಸಮಾಚಾರ ಎಲ್ಲೂ ಕಂಡಿರಲಿಲ್ಲ. ಪತ್ರಿಕೆ ತೆಗೆದು ಮತ್ತೆ ಪುಟ ತಿರುವಲು ಪ್ರಾರಂಭಿಸಿದೆ. ಎಲ್ಲೂ ಸಂಘದ ಹೆಸರೂ ಕಾಣಲಿಲ್ಲ. ಗುರೂಜೀಯವರು ನನ್ನ ಆತಂಕವನ್ನು ನೋಡಿ ಪತ್ರಿಕೆಯನ್ನು ಕೈಗೆ ತೆಗೆದುಕೊಂಡು ಹೇಳಿದರು. "ಇದೇ ಆ ಸಮಾಚಾರ". ಪೇಟೆ ಧಾರಣೆಯ ಪುಟದಲ್ಲಿ ಒಂದು ಕಡೆ ಸಣ್ಣದಾಗಿ ಸಮಾಚಾರವು ಪ್ರಕಟಗೊಂಡಿತ್ತು. "ಎಲ್ಲಿ ಪ್ರಕಟಿಸಿದ್ದಾರೆ ನೋಡಿ, ನಾವೇನಾದರೂ ವ್ಯಾಪಾರಿಗಳಾಗಿದ್ದರೆ ಈ ಪುಟದ ಮೇಲೆ ಗಮನ ಹರಿಯುತ್ತಿತ್ತು". ನಾನು ಮನಸ್ಸಿನಲ್ಲೇ ಹೀಗೆಂದು ಯೋಚಿಸಿದೆ. ಮರುಕ್ಷಣವೇ "ಪರಮಪೂಜ್ಯ ಗುರೂಜಿಯವರೂ ವ್ಯಾಪಾರಿಗಳಲ್ಲ, ಆಳೆಯುವುದು, ಸುರಿಯುವುದರಲ್ಲಿ ಅವರು ನೂರಾರು ಮೈಲಿ ದೂರ, ಆದರೂ ಅವರ ಗಮನ ಹೇಗೆ ಅಲ್ಲಿ ಹೋಯಿತು? ಅವರು ಪತ್ರಿಕೆಯನ್ನೂ ಪೂರ್ತಿ ಓದಿಲ್ಲ !" ಪತ್ರಿಕೆಯಲ್ಲಿ ಎಷ್ಟು ಪುಟಗಳಿದ್ದವೆಂದರೆ, ಅವರ ಕೈಯಲ್ಲಿಟ್ಟುಕೊಂಡಿದ್ದ ಅಲ್ಪ ಸಮಯದಲ್ಲಿ ಅಷ್ಟೂ ಸಮಾಚಾರವನ್ನು ಓದಲು ಸಾಧ್ಯವಿಲ್ಲ ಎಂದು ಯೋಚಿಸಿದ್ದೆ. ನಾನು ನನ್ನ ಸಂದೇಹವನ್ನು ವ್ಯಕ್ತಗೊಳಿಸುವಷ್ಟರಲ್ಲಿ ಅವರು ನನ್ನ ಮನದಿಂಗಿತವನ್ನೂ ಅರಿತುಕೊಂಡರು. ಸಹಜವಾಗಿ ಅವರು ಹೇಳಿದರು. "ಗುಂಪಿನಲ್ಲಿ ಹೇಗೆ ಒಂದು ಮಗುವು ತನ್ನ ತಾಯಿಯನ್ನು ಗುರುತಿಸಿಬಿಡುತ್ತದೆಯೋ ಹಾಗೆಯೇ ಜನ ಜಂಗುಳಿಯಲ್ಲೂ ನಮ್ಮ ಆತ್ಮೀಯ ಜನರ ಧ್ವನಿಯನ್ನು ನಾವು ಗುರುತಿಸಿಬಿಡುತ್ತೇವೆ". ಅವರಿಗೆ ಸಂಘದ ಬಗೆಗಿದ್ದ ಆತ್ಮೀಯತೆಯೇ ಅವರು ಈ ಸಮಾಚಾರವನ್ನು ನೋಡಲು ಸಾಧ್ಯವಾಗಿದ್ದು ಎಂದು ಆಗ ನನಗೆ ತಿಳಿಯಿತು. ಹಾಗೆಯೇ ದೇಶದ ಎಷ್ಟೋ ಇಂಥಾ ಸಮಾಚಾರಗಳು ಅವರ ಗಮನಕ್ಕೆ ಬರುತ್ತವೆ. ನಾವು ಈ ಮುಖಂಡರ ಭಾಷಣವನ್ನು ಓದುತ್ತಾ, ಓದುತ್ತಾ ವೃತ್ತಪತ್ರಿಕೆಗಳನ್ನು ಅರೆದು ಕುಡಿಯುವ ಪ್ರಯತ್ನ ಮಾಡುತ್ತೇವೆ. ಅನೇಕ ಮಹತ್ವಪೂರ್ಣ ಸಮಾಚಾರಗಳನ್ನು ಬಿಟ್ಟುಬಿಡುತ್ತೇವೆ. ಅವರು ಯಾವಾಗಲೂ ಹೇಳುತ್ತಾರೆ, "ನಾನಂತೂ ವೃತ್ತಪತ್ರಿಕೆಗಳನ್ನು ಓದುವುದಿಲ್ಲ". ಆದರೆ ನಿಜವಾಗಲೂ ವೃತ್ತಪತ್ರಿಕೆಗಳನ್ನು ಓದುವವರು ಅವರೇ, ನಾವು ಬರೀ ಅದನ್ನು ನೋಡುತ್ತೇವೆ ಮತ್ತು ಬಹಳ ಹೊತ್ತಿನವರೆಗೆ ನೋಡುತ್ತಿರುತ್ತೇವೆ ಅಷ್ಟೇ.

ಒಮ್ಮೆ ಅವರಿಗೆ ಆಗಷ್ಟೇ ಪ್ರಕಟಗೊಂಡ ಒಂದು ಪುಸ್ತಕವು ದೊರೆಯಿತು. ಆ ಪುಸ್ತಕವನ್ನು ನೋಡಲು ಅವರು ಅದನ್ನು ಕೈಗೆ ತೆಗೆದುಕೊಂಡರು. ಅತ್ತ ಇತ್ತ ತಿರುಗಿಸಿ, ಸಹಜವಾಗಿ ಪುಟ ತಿರುವಿ, ಒಂದು ವಾಕ್ಯ ಓದಿದೊಡನೆಯೇ "ಇದೇನು ಬರೆದಿದೆ"? ಎಂದರು. ಅಲ್ಲಿ ತಪ್ಪಿತ್ತು. ಅದನ್ನು ನಾನು ಒಪ್ಪಿಕೊಂಡೆ. ಅವರು ಮತ್ತೊಂದು ಪುಟ ತೆರೆದರು. ಅಲ್ಲಿಯೂ ಒಂದು ಅಶುದ್ಧ ಪದವಿತ್ತು ಪುಸ್ತಕವನ್ನು ನಾನು ಪಡೆದುಕೊಂಡೆ, ನಂತರ ನಾನು ಮೊದಲಿನಿಂದ ಕೊನೆಯವರೆಗೆ ನೋಡಿದೆ. ಕೇವಲ ಅವೆರಡೇ ಅಶುದ್ಧ ಪದಗಳಿದ್ದವು. ಪರಮ ಪೂಜ್ಯ ಗುರೂಜೀಯವರ ದೃಷ್ಟಿ ಅನಾಯಾಸವಾಗಿ ಅದೇ ಶಬ್ದಗಳ ಮೇಲೆ ಹೇಗೆ ಹೋಯಿತು? ಅವರಿಗೆ ಯಾವುದೇ ಸಿದ್ಧಿಯು ಪ್ರಾಪ್ತಿಯಾಗಿಲ್ಲ ಅಥವಾ ಇದಾವುದೇ ಅವಕಾಶ ಸಿಕ್ಕಿದ್ದಲ್ಲ. ಇಂಥಾ ಎಷ್ಟೋ ಅನುಭವಗಳಾಗಿವೆ. ಕೆಲಸದಲ್ಲಿರುವ ಶ್ರದ್ಧೆ ಮತ್ತು ಏಕಾಗ್ರತೆಯೇ ಅವರಿಗೆ ಇಂಥಾ ಸೂಕ್ಷ್ಮ ದೃಷ್ಟಿ ನೀಡಿರುವುದು. ಈ ದೃಷ್ಟಿಯಿಂದಲೇ ಪ್ರತಿಯೊಂದರಲ್ಲೂ ಅವರು ಸತ್ಯದ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುತ್ತಾರೆ ಹಾಗೂ ಭವಿಷ್ಯದ ಗರ್ಭದಲ್ಲಿ ಅಡಗಿರುವುದರ ಅರಿವು ಅವರಿಗಾಗುತ್ತದೆ. ಒಂದು ವೇಳೆ ಗಂಭೀರವಾಗಿ ಚಿಂತಿಸದಿದ್ದರೆ ಮುಂದಾಗುವ ಮಾತನ್ನ ಹೇಳುವ ಕಾರಣ ಅವರ ಮಾತು ಅಸಂಬದ್ಧ ಎನ್ನಿಸಬಹುದು. ಆದರೆ ಕೆಲವೇ ದಿನಗಳಲ್ಲಿ ಅವರ ಸತ್ಯತೆಯ ಸಾಬೀತಾಗುತ್ತದೆ. ೧೯೪೭ರಲ್ಲಿ ಅವರು ಭಾವಾತ್ಮಕ ರಾಷ್ಟ್ರೀಯತೆಯ ಬಗ್ಗೆ ಹೆಚ್ಚು ಒತ್ತು ನೀಡಿದರು. ಏಕಾತ್ಮಕತೆಯ ಮಾತನ್ನಾಡಿದರು. ರಾಷ್ಟ್ರೀಯ ಚಾರಿತ್ರ್ಯದ ಅವಶ್ಯಕತೆಯ ಬಗ್ಗೆ ಹೇಳಿದರು. ರಾಜನೀತಿಯ ಗೌರವಗಳನ್ನು ಉಲ್ಲೇಖಿಸುತ್ತಾ, ಸಾಂಸ್ಕೃತಿಕ ಸ್ಥಾಪನೆಯ, ಸಂಘಟನೆಯ ಸಂದೇಶ ನೀಡಿದರು. ಕಳೆದ ಎಂಟು ವರ್ಷಗಳಲ್ಲಿ ಅವರು ಅನೇಕ ಕಥನಗಳನ್ನು ನಿಜವೆಂದು ಸಾಬೀತು ಮಾಡಿದ್ದಾರೆ. ಪ್ರತ್ಯೇಕ ಹೊಸ ಘಟನೆಯು ಅದಕ್ಕೆ ಪುಷ್ಟಿ ನೀಡುತ್ತಾ ನಡೆದಿದೆ. ಸಮಾಜದ ವಿಭಿನ್ನ ಕ್ಷೇತ್ರಗಳ ಮುಖಂಡರು ಬಹಳ ಜನರಿರಬಹುದು ಆದರೆ ಯಾರು ಜೀವನವನ್ನು ಸಂಪೂರ್ಣವಾಗಿ ಮುಡಿಪಾಗಿಟ್ಟಿದ್ದಾರೋ ಹಾಗೂ ಯಾವುದೇ ಮೋಹ ಅಥವಾ ಭಯವಿಲ್ಲದೆ, ಧೈರ್ಯದಿಂದ ಸತ್ಯವನ್ನು ಉಚ್ಚರಿಸಬಲ್ಲರೋ, ಅಂತಹವರು ಒಬ್ಬರೇ, ಅವರೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಶ್ರೀ ಮಾಧವರಾವ್ ಗೋಲ್ವಲ್ಕರ್ ಎಂದು ನಾನು ನಿಸ್ಸಂಕೋಚವಾಗಿ ಹೇಳಬಲ್ಲೆ.

* * * * *

# ಗುರುವಿಲ್ಲದೆ ಜ್ಞಾನವಿಲ್ಲ

## ಪಂ. ದೀನ್ ದಯಾಳ್ ಉಪಾಧ್ಯಾಯರು

ಗುರುವಿಲ್ಲದೆ ಜ್ಞಾನವಿಲ್ಲ. ಗುರುವಿಂದಲೇ ವಿಭಿನ್ನ ಶಾಸ್ತ್ರಗಳ ತಾತ್ವಿಕ ಹಾಗೂ ಬಾಹ್ಯ ಜ್ಞಾನದ ಪ್ರಾಪ್ತಿಯು ಆಗುವುದು. ಆದರೆ ಯಾರು ಆಂತರ್ಯದ ಸಮಸ್ತ ಶಕ್ತಿಗಳನ್ನು ಜಾಗೃತಗೊಳಿಸಿ ನಮ್ಮನ್ನು ಮುನ್ನಡೆಸಲು ಪ್ರೇರೇಪಿಸುವನೋ ಅವನೇ ನಿಜವಾದ ಗುರು. ಜೀವನದ ಪ್ರೇರಣಾ ಸ್ತ್ರೋತ್ರವಾದ ಜ್ಞಾನವು ನಮ್ಮ ಎಲ್ಲಾ ಪರಿಸ್ಥಿತಿಗಳಲ್ಲೂ ನಮಗೆ ಬುತ್ತಿಯಂತೆ. ಇದರಲ್ಲಿ ಅಪೂರ್ಣ ಮನುಷ್ಯನನ್ನೂ ಸಹ ಪೂರ್ಣ ಮಾಡುವ ಸಾಮರ್ಥ್ಯ ಇದೆ.

ಪ್ರಜಾತಂತ್ರದ ಹೆಸರಿನಲ್ಲಿ ಇಂದು ಮನುಷ್ಯನ ಅಹಂಕಾರವು ಹೆಚ್ಚಾಗುತ್ತಾ ಹೋಗುತ್ತಿದೆ. ಅವನು ತನ್ನನ್ನು ಸರ್ವಜ್ಞನೆಂದು ತಿಳಿದು, ವಿಶ್ವವನ್ನು ತನ್ನ ಇಚ್ಛೆಗನುಸಾರವಾಗಿ ನಡೆಸಲು ಬಯಸುತ್ತಿದ್ದಾನೆ. ಒಂದು ವೇಳೆ ತನ್ನ ಇಚ್ಛೆಗಳನ್ನು ಮತ್ತು ವಿಚಾರಗಳನ್ನು ಬದಿಗೊತ್ತಿ ಬೇರೆಯವರ ಬಗ್ಗೆ ಸಹಿಷ್ಣುತೆಯಿಂದ ವರ್ತಿಸುತ್ತಾನೆಂದರೆ ಅದು ಕೇವಲ ಅಸಹಾಯಕತೆಯಿಂದ ಅಥವಾ ತೋರಿಕೆಗೆ ಮಾತ್ರ, ಅವನ ಶಿಸ್ತು ಮತ್ತು ಸಂಯಮಗಳು ದರೋಡೆಕೋರರಲ್ಲಿರುವ ಕೆಳಮಟ್ಟದ ಶಿಸ್ತು ಮತ್ತು ಸಂಯಮಕ್ಕಿಂತ ಹೆಚ್ಚಿನದಲ್ಲ. ಸ್ವಾರ್ಥವನ್ನು ಸಾಧಿಸಲಿಕ್ಕಾಗಿಯೇ ಅವನು ತಲೆಬಾಗುತ್ತಾನೆ. ಪರಿಣಾಮವಾಗಿ ಪ್ರಜಾ ಪ್ರಭುತ್ವದಲ್ಲಿ ವ್ಯಕ್ತಿಗಳ ಮಧ್ಯೆ ಕಂದಕಗಳೇರ್ಪಡುತ್ತಿವೆ. ಕೇವಲ ಸಿದ್ಧಾಂತಗಳ ಮುಖವಾಡ ಧರಿಸಿ ವಾಸ್ತವಿಕತೆಯನ್ನು ಮರೆ ಮಾಡುವ ಪ್ರಯತ್ನ ಮಾಡಲಾಗುತ್ತಿದೆ.

ಅಹಂಕಾರಿಗಳ ಈ ಸಂಘರ್ಷದಲ್ಲಿ ವಿಕಾಸದ ಕುರುಹೂ ಇಲ್ಲ. ಇದು ಪ್ರಜಾಪ್ರಭುತ್ವದ ನಿಜವಾದ ಸ್ವರೂಪವೂ ಅಲ್ಲ, ಲೋಕದ ಬದುಕಿಗೆ ಜೀವ ತುಂಬುವ ಸಿದ್ಧಾಂತಗಳು ಅದರ ಆತ್ಮದ ಅನುಭೂತಿಯ ಕಡೆಗೆ ಗುರಿ ಮಾಡಿಕೊಂಡು ತನ್ನ ಜೀವನವನ್ನು ರೂಪಿಸಿಕೊಳ್ಳುವುದೇ ನಿಜವಾದ ಪ್ರಜಾಪ್ರಭುತ್ವ.

ಕೇವಲ ಇಲ್ಲಿ ಅಲ್ಲಿ ಅಲೆದಾಡುವುದರಿಂದ ಜ್ಞಾನವು ಪ್ರಾಪ್ತವಾಗುವುದಿಲ್ಲ. ಬದಲಾಗಿ ಯಾರು ಲೋಕಾನುಭವವನ್ನು ಪಡೆದಿದ್ದಾರೊ, ಯಾರು ಜೀವನದ ಜೊತೆ ತನ್ನನ್ನು ಮಿಳಿತಗೊಳಿಸಿಕೊಂಡಿದ್ದಾರೋ, ಅಂತಹ ಮಹಾನುಭಾವರ

ಶ್ರೀಚರಣಗಳಲ್ಲಿ ಕುಳಿತಾಗ ಮಾತ್ರ ಈ ಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತದೆ. ಆಗಲೇ ನಾವು ನಿಜವಾದ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಸಾಧ್ಯ.

**ಪೂಜೆ**

ಮಾನವ ಜೀವನಲ್ಲಿ ನಿಜವಾದ ಮಾನವೀಯತೆಯನ್ನು ಜಾಗೃತಗೊಳಿಸುವ ಗುರುವಿನ ಬಗ್ಗೆ ಶ್ರದ್ಧೆಯ ಪುಷ್ಪಗಳನ್ನು ಅರ್ಪಿಸುವ ದಿನವೇ ಪವಿತ್ರದಿನ. ದೇವರ ಪಾದಗಳಿಗೆ ಭಕ್ತಿಯಿಂದ ಪ್ರಾರ್ಥನೆ ಮಾಡುತ್ತಾ, ಹೂವುಗಳನ್ನು ಅರ್ಪಿಸಬೇಕು. ಈ ಪೂಜೆಯಲ್ಲಿ ಇಷ್ಟದೈವ ಯಾರು? ವ್ಯಾಸರು ಈ ಸನಾತನ ಸಮಾಜದ ಗುರುಗಳು. ಅವರಂತೂ ನಮ್ಮ ಸಂಸ್ಕೃತಿಯ ಅಮರಧಾರೆಯ ಜೊತೆ ಮಿಳಿತಗೊಂಡುಬಿಟ್ಟಿದ್ದಾರೆ. ಅವರ ಪೂಜೆ ಎಂದರೆ ಪ್ರಳಯ ಮತ್ತು ಸೃಷ್ಟಿಯ ನಿರ್ಮಾಣದ ಆಟ. ಅವರು ಲೆಕ್ಕವಿಲ್ಲದಷ್ಟು ಬಾರಿ ಆಟವಾಡಿದ್ದಾರೆ. ಪರಮ ಶಕ್ತಿವಂತ ವ್ಯಕ್ತಿಚಕ್ರದ ಕಠೋರ ಆಘಾತಗಳನ್ನು ಸಹಿಸುವ ಸಾಮರ್ಥ್ಯವೆಂಬ ಸಂಜೀವನಿ ಸಲಿಲವನ್ನು ಯುಗ ಯುಗಗಳಿಂದ ಈ ಭರತ ಭೂಮಿಯ ಆತ್ಮವು ಭಾರತೀಯರಿಗೆ ನೀಡಿದೆ. ಈ ಅಮರತ್ವದ ಪೂಜೆಯಲ್ಲಿ ಯಾವ ಪುಷ್ಪಗಳು ಸ್ವೀಕೃತವಾಗುತ್ತವೆ? ಭೌತಿಕವಾಗಿ ಸುಂದರವಾಗಿರುವ ಅಥವಾ ಸುಗಂಧಮಯವಾಗಿರುವ ಹೂವುಗಳು ಒಂದೆರಡು ಗಳಿಗೆಯಲ್ಲಿ ಮುದುರಿ ಹೋಗುತ್ತವೆ. ಇಲ್ಲಿ ಕೇವಲ ಹೃದಯ ಪುಷ್ಪಗಳ ಅವಶ್ಯಕತೆ ಇದೆ. ಮೋಹ, ಸ್ವಾರ್ಥ, ದ್ವೇಷ, ಭಯ, ಸಂಕೀರ್ಣತೆಯಿಂದ ತುಂಬಿರುವ ಪ್ರಪಂಚದಲ್ಲಿ ತಾವರೆ ಎಲೆಯಂತೆ ತಟಸ್ಥವಾಗಿದ್ದು ದೃಢವಾಗಿರುವ ಹೃದಯಗಳಿಂದ ಈ ಪೂಜೆ ಸಾಧ್ಯ. ಪ್ರಪಂಚದ ಕಷ್ಟ, ಅವಹೇಳನೆ ಮತ್ತು ಕಂಟಕಗಳನ್ನು ಎದುರಿಸಿ, ಆತ್ಮ ವಿಶ್ವಾಸದ ಮೂಲಕ ತನ್ನ ಗುರಿ ಸಾಧನೆಗೆ ಪುಷ್ಟಿ ಕೊಡುವ ಮನಸ್ಸೇ ಈ ಪೂಜೆಯ ಸಾಮಗ್ರಿಗಳಾಗಬಹುದು. ಹೇ ನನ್ನ ಮನವೆ! ಈ ಕೆಲಸಕ್ಕಾಗಿ ಮೊದಲು ನಿನಗೆ ಅಗ್ನಿಪರೀಕ್ಷೆ.

* * * * *

# ವಿಕೇಂದ್ರೀಕರಣದ ವಿಡಂಬನೆ

ಉದ್ಯೋಗವನ್ನು ಯಶಸ್ವಿಯಾಗಿ ನಡೆಸಬೇಕಾದರೆ, ಅವುಗಳನ್ನು ಸಂಪೂರ್ಣವಾಗಿ ಆರ್ಥಿಕ ಆಧಾರದ ಮೇಲೆ ಸಾರ್ವಜನಿಕ ಹಿತಗಳ ಅಧೀನದಲ್ಲಿ ನಡೆಸಬೇಕಾದ ಅವಶ್ಯಕತೆ ಇದೆ. ಆದ್ದರಿಂದ ಅವುಗಳನ್ನು ದಿನದಿನವೂ ಬದಲಾಗುತ್ತಿರುವ ಪಕ್ಷದ ರಾಜಕೀಯದಿಂದ ಅಲಿಪ್ತವಾಗಿಡಬೇಕು. ಈ ದೃಷ್ಟಿಯಿಂದ ಅವುಗಳನ್ನು ಸ್ವಾಯತ್ತ ನಿಯಮಗಳ ಮೂಲಕ ನಡೆಸಬೇಕಾಗುತ್ತದೆ. ಪ್ರತಿದಿನವೂ ನಡೆಯುವ ವ್ಯವಹಾರಗಳಲ್ಲಿ ಅದಕ್ಕೆ ಸ್ವಾತಂತ್ರ್ಯವಿರಬೇಕು ಆದರೆ ಅವುಗಳ ಮೇಲೆ ಸಂಸತ್ತಿನ ನಿಯಂತ್ರಣವಿರುವ ಹಾಗೆ ವ್ಯವಸ್ಥೆ ಮಾಡಬೇಕು, ಶ್ರಮಿಕರನ್ನು ಸಹಭಾಗಿಗಳನ್ನು ಮಾಡುವ ದೃಷ್ಟಿಯಿಂದ ಸಾರ್ವಜನಿಕ ಉದ್ಯೋಗಿಗಳಿಗೆ ಉಳಿದೆಲ್ಲವುಗಳಿಂದ ಮಾರ್ಗದರ್ಶನ ನೀಡುವಂತಾಗಬೇಕು. ಕಳೆದ ೨೦ ವರ್ಷಗಳಲ್ಲಿ ಭಾರತ ಸರ್ಕಾರವು ಯಾವ ಯಾವ ಆಕರ್ಷಕ ಘೋಷಣೆಗಳಿಂದ ಜನತೆಯನ್ನು ಸೆಳೆಯಲು ಪ್ರಯತ್ನ ಪಟ್ಟಿದೆಯೋ, ಅವುಗಳಲ್ಲಿ ವಿಕೇಂದ್ರೀಕರಣವು ವಿಶೇಷ ಮಹತ್ವ ಪಡೆದುಕೊಂಡಿದೆ. ರಾಜಕೀಯ ಅಧಿಕಾರಗಳ ವಿಕೇಂದ್ರೀಕರಣ ಮತ್ತು ಆರ್ಥಿಕ ವಿಕೇಂದ್ರಿಕರಣದ ಜೊತೆಗೆ ಔದ್ಯೋಗಿಕ ಕ್ಷೇತ್ರದಲ್ಲೂ ಏಕಾಧಿಕಾರದ ಸ್ಥಿತಿಯನ್ನು ಅಂತ್ಯಗೊಳಿಸಲು ಔದ್ಯೋಗಿಕ ವಿಕೇಂದ್ರೀಕರಣದ ಕೂಗನ್ನು ಮತ್ತೆ ಮತ್ತೆ ಪುನರಾವರ್ತಿಸಲಾಗಿದೆ.

ಆದರೆ ಕಾಂಗ್ರೆಸ್ ಆಡಳಿತದಲ್ಲಿ ಆರ್ಥಿಕ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ವಿಕೇಂದ್ರೀಕರಣದ ಸ್ಥಾನದಲ್ಲಿ ಏಕಾಧಿಕಾರವು ಯಾವ ಮಟ್ಟದವರೆಗೆ ಹರಡಿದೆ ಎಂದರೆ ಸರಕಾರಕ್ಕೆ ಮಿತಿಮೀರಿರುವ ಏಕಾಧಿಕಾರದ ಪ್ರವೃತ್ತಿಯ ಬಗ್ಗೆ ಮನವರಿಗೆ ಮಾಡಿಕೊಡಲು ಮೆನೋಪೊಲಿ ಕಮಿಷನ್‌ನನ್ನು ಸ್ಥಾಪಿಸಬೇಕಾಯಿತು. ಅದರ ಗಂಭೀರ ವರದಿಯ ಬಗ್ಗೆ ಎಲ್ಲಾ ಕ್ಷೇತ್ರಗಳಲ್ಲೂ ಬೇಸರ ವ್ಯಕ್ತಪಡಿಲಾಗುತ್ತಿದೆ ಎಂದು ತಿಳಿಯಲು ಈ ಒಂದು ಘಟನೆ ಮಾತ್ರ ಸಾಕು.

ವಾಸ್ತವವಾಗಿ, ಸರ್ಕಾರದ ನೀತಿ ನಿರ್ಧಾರಕ ತತ್ವಗಳಿಂದ ಏಕಾಧಿಕಾರದ ಬಲ ಹೆಚ್ಚಾಗುತ್ತಾ ಹೋಯಿತೇ ಹೊರತು ಕಾನೂನು ಕಟ್ಟಳೆಗಳಿಂದ ಅಲ್ಲ. ನಮ್ಮ ಇಂದಿನ ಪ್ರಮುಖರು ಈ ವಿಷಯದಲ್ಲಿ ತನ್ನ ಮೌಲಿಕ ಚಿಂತನೆ ನಡೆಸುವುದು ಅವಶ್ಯಕ ಎಂದು ಎಂದಿಗೂ ಭಾವಿಸಲಿಲ್ಲ. ವಿದೇಶಗಳ ಮೋಹಕ ವಾದಗಳ

ಚಕ್ರವ್ಯೂಹದಲ್ಲಿ ಅವರು ತಮ್ಮ ನಿಜವಾದ ಸ್ವಾತಂತ್ರ್ಯವನ್ನು ಮರೆತರು. ನಮ್ಮ ಆತ್ಮದ ಮತ್ತು ನಮ್ಮ ಸ್ವಭಾವದ ಜೊತೆ ನಾವು ಇಂದಿನ ವಿಶಿಷ್ಟ ಪರಿಸ್ಥಿಗಳನ್ನು ಉದಾಸೀನ ಮಾಡಿ, ವಿದೇಶೀ ಸಿದ್ಧಾಂತಗಳನ್ನು ಮತ್ತು ನೀತಿಗಳನ್ನು ವೇದವಾಕ್ಯವೆಂದು ಭಾವಿಸಿ ಅದೇ ದಾರಿಯಲ್ಲಿ ನಡೆಯುವ ಪ್ರಯತ್ನ ಮಾಡಿದ್ದೇವೆ.

ಸಾಮಾನ್ಯವಾಗಿ ಕೇವಲ ಭಾರತದಲ್ಲಿ ಮಾತ್ರವಲ್ಲ ಅನ್ಯ ದೇಶಗಳಲ್ಲೂ ಸಹ ಪ್ರಾರಂಭಿಕ ಹಂತದಲ್ಲಿ ಯಾವುದೇ ಕೆಲಸದ ಯಶಸ್ಸಿಗಾಗಿ ಮಾನವೀಯ ಸಂಬಂಧಗಳ ಆಧಾರವಾದ ಪ್ರೇರಣೆ, ಮಾರ್ಗದರ್ಶನ ಮತ್ತು ನಿಯಂತ್ರಣದ ಅವಶ್ಯಕತೆ ಇದ್ದೇ ಇರುತ್ತದೆ.

ಪಶ್ಚಿಮದ ಔದ್ಯೋಗಿಕ ಕ್ಷೇತ್ರದಲ್ಲಿ ತನ್ನ ಪರಿಸ್ಥಿತಿ ಮತ್ತು ಅವಶ್ಯಕತೆಗನುಸಾರವಾಗಿ ಯಾವ ದೊಡ್ಡ ದೊಡ್ಡ ಉದ್ಯೋಗಗಳ ಆಶ್ರಯವನ್ನು ಪಡೆಯಿತೋ ಅವುಗಳಲ್ಲಿ ಮನುಷ್ಯನು ಒಂದು ದೊಡ್ಡ ಯಂತ್ರದ, ಒಂದು ಹೃದಯಹೀನ ಸಮಷ್ಟಿಯ ತುಣುಕಾಗಿ ಮಾತ್ರ ಇದ್ದುಬಿಟ್ಟನು. ಭಾರತದಲ್ಲಿ ನಾವು ಈ ರೀತಿಯ ನಿರ್ಜೀವ ಯಂತ್ರದ ಒಂದು ತುಣುಕಾಗಿ ಇದ್ದು ನಮ್ಮ ಅಸ್ತಿತ್ವದ ಉಜ್ವಲವಾದ ಸ್ವರೂಪವನ್ನು ಪ್ರಕಟಿಸಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಯೋಚಿಸಿದಾಗ ಕಾಯಕವನ್ನು ಕೌಟುಂಬಿಕ ಆಧಾರದ ಮೇಲೆ ಜೀವನದ ಒಂದು ಅಂಗವೆಂದು ಭಾವಿಸಿ ನಡೆದಂತೆ ಔದ್ಯೋಗಿಕ ಕ್ಷೇತ್ರದಲ್ಲೂ ಅದೇ ಪ್ರಣಾಳಿಯನ್ನು ಸ್ವೀಕರಿಸಬೇಕಾಗುತ್ತದೆ. ಆಗ ಮಾಲೀಕ, ಕೂಲಿ ಕೆಲಸಗಾರ, ಉತ್ಪಾದಕ, ಫಲಾನುಭವಿ ಮುಂತಾದ ಪಾರಸ್ಪರಿಕ ಸಂಬಂಧಗಳನ್ನು ಸರಿಯಾಗಿ ಗುರುತಿಸಲು ಸಾಧ್ಯವಾಗುತ್ತದೆ. ನಾವು ಈ ಸಂಬಂಧಗಳ ನಿರ್ವಹಣೆಯನ್ನು ಪಶ್ಚಿಮದ ಮಾನದಂಡಗಳಿಂದ ಮಾಡಲು ಸಾಧ್ಯವಿಲ್ಲ. ಅವರು ಮಾನವೀಯ ಮೌಲ್ಯಗಳನ್ನು ಉಪೇಕ್ಷಿಸಿ ಸಾಮಾಜಿಕ ಜೀವನದಲ್ಲಿ ಅಸಮಾನತೆ ಮತ್ತು ಕಠಿಣತೆ ಎನ್ನುವ ವಿಷವನ್ನು ತುಂಬಿಸಿದ್ದಾರೆ. ನಮ್ಮಲ್ಲಿರುವ ಬಿಸಿನೆಸ್ ಆಕ್ಟ್, ವೇಜಸ್ ಆಕ್ಟ್ ಮುಂತಾದ ನಿಯಮಗಳನ್ನು ಪಶ್ಚಿಮದಿಂದ ನಕಲು ಮಾಡಿ ಜಾರಿಗೆ ತರಲಾಗಿದೆ. ೧೮ನೇ ಅಥವಾ ೧೯ನೇ ಶತಮಾನದ ಬ್ರಿಟನ್ ಅಥವಾ ಯೂರೋಪ್‌ನ ಅನ್ಯ ದೇಶಗಳಲ್ಲಿ ಇದ್ದಂತೆ ಹಾಗೂ ಕಾರ್ಲ್‌ಮಾರ್ಕ್ಸ್‌ನು ಅದನ್ನು ಚಿತ್ರಿಸಿದ್ದ ಹಾಗೆ, ಅದೇ ರೂಪದಲ್ಲಿ ಐರೋಪ್ಯರು ಉದ್ಯಮಿಯನ್ನು ನೋಡುತ್ತಾರೆ. ಭಾರತದ ಎಲ್ಲಾ ಉದ್ಯಮಿಗಳು ಪಶ್ಚಿಮದ ಉದ್ಯೋಗಿಗಳ ಪರಂಪರೆಯನ್ನು ಭಾರತದಲ್ಲಿ ಮುಂದುವರೆಸಲು ಅವರದೇ ರೀತಿಯನ್ನು ಅನುಸರಿಸಿದ್ದಾರೆನ್ನಿಸುತ್ತದೆ. ಆದರೆ ದೇಶದಲ್ಲಿ ವ್ಯಾಪಕ ಔದ್ಯೋಗೀಕರಣದಲ್ಲಿ ನಾವು ನಮ್ಮದೇ ಮಾನದಂಡಗಳ ಆಧಾರದ ಮೇಲೆ ಮಾನವ ಸಂಬಂಧಗಳನ್ನು ನಿರ್ಧರಿಸಬೇಕಾಗುತ್ತದೆ.

**ಸ್ವಂತ ಸಂಪತ್ತಿನ ಪ್ರಶ್ನೆ**

ಸಾಮಾನ್ಯವಾಗಿ ಕಾಯಕ ಮತ್ತು ಅದಕ್ಕಾಗಿ ಸಿಗುವ ಫಲದಿಂದ ಯಾವುದೇ ದೊಡ್ಡ ಅಸಮಾನತೆಯು ಉಂಟಾಗುವುದಿಲ್ಲ. ತನ್ನ ಸಂಪತ್ತಿನ ಮೇಲೆ ಅಧಿಕಾರ ಮತ್ತು ಅವರ ಉಪಯೋಗದ ಮೂಲಕ ಬರುವ ಸಂಪಾದನೆಯಿಂದ ಅಸಮಾನತೆಯು ಹೆಚ್ಚಾಗುತ್ತದೆ. ಈ ಆಧಾರದ ಮೇಲೆ ಸಮಾಜವಾದಿಗಳು ಸ್ವಂತ ಆಸ್ತಿಯನ್ನೇ ಮುಗಿಸುವ ಮಾತನ್ನಾಡುತ್ತಾರೆ. ಆದರೆ ಅದರ ಸಿದ್ಧಾಂತ ಮತ್ತು ವ್ಯವಹಾರ ಈ ಎರಡೂ ದೃಷ್ಟಿಗಳಿಂದ ಅದನ್ನು ಸಮರ್ಥಿಸುವುದು ಕಷ್ಟವಾಗುತ್ತದೆ. ಸೃಷ್ಟಿಯ ಆರಂಭದಿಂದಲೂ "ಅಪರಿಗ್ರಹ ಮತ್ತು ಮಾಗ್ರದಃ ಕಸ್ಯನಿದ್ಧನಂ" ಎಂಬ ಉಪದೇಶ ಸಿಕ್ಕಿದೆ. ಆದರೆ ಈ ಪ್ರಪಂಚವು "ನನ್ನದು ಮತ್ತು ನಿನ್ನದು" ಎನ್ನುವ ಹೆಸರಿನದ್ದೇ ಆಗಿದೆ. ತನ್ನ ಸ್ವಂತ ಆಸ್ತಿ ಎನ್ನುವ ಭಾವನೆಯನ್ನು ಯಾವ ಸಾಮ್ಯವಾದಿಗಳು ಬುಡ ಸಮೇತ ನಿರ್ಮೂಲ ಮಾಡಲು ಇಚ್ಛಿಸುತ್ತಿದ್ದರೋ, ಅವರು ಪರ್ಸನಲ್ ನಂತರ ಸ್ವಲ್ಪ ಸಮಯದವರೆಗೆ ತಮ್ಮ ಸ್ವಂತ ಆಸ್ತಿಯನ್ನೂ ಸ್ವೀಕರಿಸಲು ಪ್ರಾರಂಭಿಸಿದರು, ಸ್ವಂತ ಆಸ್ತಿಯಿಂದಾಗಿ ಕೆಟ್ಟತನ ಹುಟ್ಟಿದರೂ ಸಹ ನಾವು ಅದನ್ನು ಬಹಿಷ್ಕರಿಸಲು ಸಾಧ್ಯವಿರಲಿಲ್ಲ. ಸ್ವಂತ ಆಸ್ತಿಯ ಗೌರವವನ್ನು ನಾವು ನಿಜವಾಗಲು ಕಾಪಾಡಬೇಕು. ಈ ಗೌರವಗಳನ್ನು ಕಾಪಾಡುವ ಕಾರ್ಯಕ್ರಮವೇ ವಿಕೇಂದ್ರೀಕರಣ.

**ವಿಕೇಂದ್ರೀಕರಣದ ವಿಡಂಬನೆಗಳು**

ಪಶ್ಚಿಮದ ದೊಡ್ಡ ದೊಡ್ಡ ತಂತ್ರಜ್ಞಾನ ಮತ್ತು ವಿಕೇಂದ್ರೀಕರಣ ಇವೆರಡೂ ಒಟ್ಟೊಟ್ಟಿಗೆ ನಡೆಯಲಾರವು. ಬಹಳಷ್ಟು ಜನರು ಪ್ರಾದೇಶಿಕ ಮಟ್ಟದಲ್ಲಿ ವಿಕೇಂದ್ರೀಕರಣದ ಅರ್ಥವನ್ನು ಚಿಂತಿಸುತ್ತಾರೆ. ಇವರು ವಿಕೇಂದ್ರೀಕರಣದ ಹೆಸರಿನಲ್ಲಿ ಬಾಂಬೆ ಮತ್ತು ಅಹಮದಾಬಾದಿನಂತಹ ಕಾರ್ಖಾನೆಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸಿ ಪರಿಹಾರ ಕಂಡುಕೊಳ್ಳುತ್ತಾರೆ, ಸಮಾಜವಾದಿಗಳು ರಾಜಕೀಯ ಶಕ್ತಿಯನ್ನು ಹಂಚಿಕೆ ಮಾಡಿಕೊಂಡು ತೃಪ್ತಿಪಟ್ಟುಕೊಳ್ಳುತ್ತಾರೆ. ಹಾಗೂ ಗ್ರಾಮ, ಜಿಲ್ಲೆ, ಪ್ರಾಂತ್ಯ ಮತ್ತು ಕೇಂದ್ರದ ನಾಲ್ಕು ಸ್ಥಂಭಗಳು ರಾಜ್ಯದ ರೂಪದಲ್ಲಾದರೆ ಸಮಾಜವಾದವು ಅರಳುತ್ತದೆ. ಆದರೆ ಪ್ರತಿಯೊಂದು ಜಾಗದಲ್ಲೂ ಆರ್ಥಿಕ ಶಕ್ತಿಯು ರಾಜ್ಯದ ಘಟಕಗಳ ಕೈಯಲ್ಲಿ ಇರುತ್ತದೆ ಹಾಗೂ ಯಾವ ತಂತ್ರಜ್ಞಾನವನ್ನು ತೆಗೆದುಕೊಂಡು ಪ್ರತಿಯೊಂದು ಕಡೆಯೂ ಉತ್ಪಾದನೆಯಾಗುವುದೋ ಅದು ಪಶ್ಚಿಮಾತ್ಯ ರೀತಿಯಲ್ಲೆ ಆಗುತ್ತದೆ. ಆದರ ಮಾಲೀಕತ್ವವು ಹಂಚುವವರದೇ ಹೊರತಾಗಿ ಮೌಲಿಕವಲ್ಲ. ಸರ್ವೋದಯವಾದಿಗಳು ಇಂದಿನ ಟೆಕ್ನಿಕ್‌ನನ್ನು ವಿರೋಧಿಸುತ್ತಾರೆ. ಆದರೆ

ಅದರ ಗ್ರಾಮ–ರಾಜ್ಯದಲ್ಲಿ ಸಂಪೂರ್ಣ ಗ್ರಾಮದ ಭೂಮಿಯಲ್ಲಿ ವ್ಯವಸಾಯವು ಒಂದೊಂದೇ ರೂಪದಲ್ಲಿ ಗ್ರಾಮಪಂಚಾಯಿತಿಯ ಮೇಲ್ವಿಚಾರಣೆಯಲ್ಲಿ ಆಗುತ್ತದೆ. ಹಳ್ಳಿಯ ಉಳಿದರ್ಥಿಕ ವ್ಯವಸ್ಥೆಯೂ ಪಂಚಾಯಿತಿಯ ಅಧೀನಕ್ಕೆ ಒಳಪಟ್ಟಿರುತ್ತದೆ. ಇಲ್ಲಿ ಯಾವುದೇ ಆಧುನಿಕ ಯಂತ್ರಗಳಾಗಲೀ, ವ್ಯಕ್ತಿಗೆ ಉತ್ಪಾದನೆಯ ಸ್ವಾತಂತ್ರ್ಯವಾಗಲೀ ಇರುವುದಿಲ್ಲ. ಸಮಾಜವಾದಿಗಳು ಮತ್ತೆ ಅವರಿಗೆ ಯಾವುದೇ ರೂಪ ರೇಷೆ ಇದೆಯೋ, ಇಲ್ಲವೋ–ಪಾಶ್ಚಿಮಾತ್ಯ ತಂತ್ರಜ್ಞಾನದಲ್ಲಿ ಅವರು ಮಿಗಿಲಾದ ಶ್ರದ್ಧೆವಹಿಸಿ ಮುಂದುವರಿಯುತ್ತಾರೆ. ಅವರ ಹೋರಾಟ ಯಂತ್ರದ ಮಾಲೀಕರ ವಿರುದ್ದವೇ ಹೊರತು ಯಂತ್ರ ವಿರುದ್ಧವಲ್ಲ, ಪರಿಣಾಮವಾಗಿ ಅವರು ಮಿಲ್ಕಿಯತ್ ರಾಜ್ಯಕ್ಕೆ ಒಪ್ಪಿಸಿ, ಪರಿಹಾರವಾಯ್ತೆಂದು ಸುಮ್ಮನಿರುತ್ತಾರೆ. ಇನ್ನೊಂದೆಡೆ ಸರ್ವೋದಯವಾದಿಗಳು ಯಂತ್ರದಿಂದಾಗುವ ದುಷ್ಪರಿಣಾಮಗಳನ್ನು ತಿಳಿದುಕೊಂಡರು. ಹಾಗಾಗಿ ಅವನ್ನು ಮುಗಿಸುವ ಪಣ ತೊಟ್ಟರು. ಸಮಾಜವಾದಿ ರಾಜ್ಯದ ಬಹುದೊಡ್ಡ ಹಾಗೂ ನಿರಂಕುಶ ಶಕ್ತಿಯನ್ನು ನೋಡಿ ಅದನ್ನೂ ಸಹ ತ್ಯಾಜ್ಯವೆಂದು ಸಾಬೀತುಪಡಿಸಿದರು ಹಾಗೂ ಆಡಳಿತವಿಹೀನ ಸಮಾಜದಲ್ಲಿ ಸಂಪೂರ್ಣ ಶಕ್ತಿಯನ್ನು ಗ್ರಾಮದ ಪಂಚಾಯಿತಿಗೆ ಒಪ್ಪಿಸಿದರು. ಇದೆಲ್ಲ ಅವ್ಯವಹಾರಿಕ. ಆದರೆ ಯಾವ ದುಷ್ಪರಿಣಾಮದಿಂದ ರಕ್ಷಿಸಿಕೊಳ್ಳುವ ಉದ್ದೇಶದಿಂದ ಇದನ್ನೆಲ್ಲಾ ಮಾಡಲಾಗುತ್ತಿದೆಯೋ, ಆ ದುಷ್ಪರಿಣಾಮಗಳು ಇದರಿಂದ ಅಂತ್ಯ ಕಾಣುವುದಿಲ್ಲ. ಇದಂತೂ ರೋಗವನ್ನು ದೂರ ಮಾಡುವ ಸಲುವಾಗಿ ರೋಗಿಯನ್ನೇ ಮುಗಿಸುವ ಪ್ರಕ್ರಿಯೇ ಎನ್ನಬಹುದು.

**ಇದು ವಿಕೇಂದ್ರೀಕರಣದ ವಿಡಂಬನೆಯಲ್ಲದೆ ಇನ್ನೇನು?**

ದೌರ್ಭಾಗ್ಯವೆಂದರೆ, ಈ ಎಲ್ಲಾ ಚಿಂತನೆಗಳು ಮಾನವನನ್ನು ಮೂಳೆ ಮಾಂಸಗಳಿಂದ ಮಾಡಿರುವ ವಿವಿಧ ಸಂಪನ್ನಗುಣಗಳಿರುವ, ಆಸೆ ಆಕಾಂಕ್ಷೆಗಳ ಮತ್ತು ಭಾವನೆಗಳಿರುವ, ಬದುಕಿರುವ ಪ್ರಾಣಿ ಎಂದು ತಿಳಿಯದೆ, ಯಾವುದೋ ಭಾವಸ್ವರೂಪ ಕಲ್ಪನೆಯಿಂದಲೇ ಅದರ ರಚನೆ ಮಾಡುತ್ತದೆ. ವೈಯಕ್ತಿಕ ಸ್ವತಂತ್ರವಿಟ್ಟುಕೊಂಡು ನಡೆಯುವ ಪ್ರಜಾತಂತ್ರವು ಒಂದು ವೇಳೆ ಅರ್ಧ ಮಾನವನನ್ನು ಸೃಷ್ಟಿಸಿದರೆ ಸಾಮ್ಯವಾದವು ಒಂದು ಸಾಮಾನ್ಯ ಜನ (ಮಾಸ್ ಮ್ಯಾನ್)ನ್ನು ಉತ್ಪಾದಿಸಿತು. ಈ ಸಾಮಾನ್ಯ ಜನ ದೇವರ ಸೃಷ್ಟಿಯಿಂದಾಗದೆ, ರಾಜ್ಯದ ಮೂಲಕ ರಚನೆಯಾಗುತ್ತದೆ. ರಾಜ್ಯವೇ ಅದರ ಸಂಪೂರ್ಣ ವಿಚಾರಗಳ ಭಾವನೆಗಳ ಕ್ರಿಯೆಗಳ ಮತ್ತು ಆದರ್ಶಗಳನ್ನು ಯೋಜಿಸುತ್ತದೆ. ಅವನಿಗೆ ವಿಚಾರ ಮಾಡುವ ವ್ಯಕ್ತಿಗತ ನಿರ್ಣಯ ತೆಗೆದುಕೊಳ್ಳುವ ಮತ್ತು ತೀರ್ಮಾನಗಳ ಸ್ವಾತಂತ್ರ್ಯವನ್ನು

ಕೊಡುತ್ತದೆ. ಇದಕ್ಕೆ ಪ್ರತಿಯಾಗಿ ಅವನಿಗೆ ಒಂದು ಯಂತ್ರ ಮಾನವನಿಗೆ ಕೊಡುವ ರಕ್ಷಣೆಯು ಪ್ರಾಪ್ತವಾಗುತ್ತದೆ. ಸರ್ವಸಮರ್ಪಣ ಭಾವದಿಂದ ಸರ್ವೋದಯವಾದಿ ಮನೋವೃತಿಯಿಂದ ಕೆಲಸ ಮಾಡುತ್ತಾ ಹೋಗುವಂತಹ ಒಂದು ರೀತಿಯ ಭಾವ–ಜನತೆಯ ಕಲ್ಪನೆಯಿಂದ ಸರ್ವೋದಯವಾದಿಗಳು ಮುಂದುವರಿಯುತ್ತಾರೆ.

**ಸಾಮ್ಯವಾದ ಮತ್ತು ಬಂಡವಾಳಶಾಹಿಗಳಲ್ಲಿ ಸಮಾನತೆ**

ಇಂದು ಸಾಮ್ಯವಾದ ಮತ್ತು ಬಂಡವಾಳಶಾಹಿಗಳು–ಇವೆರಡರಲ್ಲೂ ಮಾಲೀಕತ್ವದ ಸ್ವರೂಪ ಬಿಟ್ಟು ಬೇರೆ ಯಾವುದೇ ವ್ಯತ್ಯಾಸವಿಲ್ಲ. ಆದ್ದರಿಂದ ಎರಡರಲ್ಲೂ ವ್ಯಕ್ತಿಯ ವಿಕಾಸಕ್ಕಾಗಿ ಯಾವುದೇ ಸೌಲಭ್ಯಗಳಿಲ್ಲ ಮತ್ತು ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯಗಳು ಹೆಸರಿಗೆ ಮಾತ್ರ ಇದೆ. ಸಾಮ್ಯವಾದಕ್ಕೆ ಸಂಬಂಧ ಪಟ್ಟಂತೆ ಪ್ರಿನ್ಸ್ ಕೋಪಾಟಿಕನ್ ೧೯೦೪ರಲ್ಲೇ ಹೀಗೆ ಬರೆದಿದ್ದರು – ಈ ಶತಮಾನದ ಪ್ರಭಾವಿ ವಿಶೇಷಗಳಾದ ವಿಕೇಂದ್ರೀಕರಣ, ಸ್ವರಾಜ್ಯ ಮತ್ತು ಸ್ವತಂತ್ರವು ರಾಜಿಯನ್ನು ಮಾಡಿಕೊಳ್ಳುತ್ತವೆಯೋ ಅಥವಾ ಅದಕ್ಕೆ ವ್ಯತಿರಿಕ್ತವಾಗಿ ಬಲವಾದ ಅಧಿಕಾರವನ್ನು ಪುನಃ ಪ್ರತಿಷ್ಠಾಪಿಸುತ್ತಿದೆಯೋ ಎಂದು ನೋಡಬೇಕು. ರಷ್ಯಾದಲ್ಲಿ ಸಾಮ್ಯವಾದಿ ಕ್ರಾಂತಿಯ ನಂತರ ಅವರು ಪಶ್ಚಿಮದ ಯೂರೋಪಿನ ಕಾರ್ಮಿಕರಿಗೆ ಒಂದು ಪತ್ರವನ್ನು ಬರೆದಿದ್ದರು. "ಏಕ ಕೇಂದ್ರಿತ ರಾಜ್ಯ ಮತ್ತು ಸಾಮ್ಯವಾದವನ್ನು ಸ್ಥಾಪಿಸುವ ಪ್ರಯತ್ನ ನಿಜವಾಗಲೂ ಸಾಕಾರವಾಗುವುದಿಲ್ಲ ಎಂದು ಹೇಳುವುದು ನನ್ನ ಕರ್ತವ್ಯವಾಗಿದೆ". ಸಾಮ್ಯವಾದವನ್ನು ಹೇಗೆ ತರಬಾರದು ಎಂದು ನಾವು ರಷ್ಯಾದವರಿಂದ ಕಲಿಯುತ್ತಿದ್ದೇವೆ. ಎಲ್ಲಿಯವರೆಗೆ ಆಡಳಿತವು ಏಕಪಕ್ಷೀಯ ವಾಗಿರುವುದೋ ಅಲ್ಲಿಯವರೆಗೆ ಕಾರ್ಮಿಕರ ಮತ್ತು ಕೃಷಿಕರ ಪರಿಷತ್ತು ಅಪ್ರಮಾಣಿಕವಾಗಿಯೂ ಪ್ರಭಾವರಹಿತವಾಗಿಯೂ ಇರುವುದು. ರಸ್ತೆ ಮೇಲೆ ಬಿರುಗಾಳಿಯಿಂದ ಕೆಳಗೆ ಬಿದ್ದ ಮರವನ್ನು ತೆಗೆಯುವ ಆದೇಶ ಪಡೆಯಲು ಕಡಿಮೆಯೆಂದರೆ ನಲ್ವತ್ತು ಅಧಿಕಾರಿಗಳ ಅವಶ್ಯಕತೆ ಇರುವಂತಹ ಫ್ರಾನ್ಸನ್ನು ಸಡ್ಡು ಹೊಡೆಯುವಂತಹ ನೌಕರಶಾಹಿಯು ಇಲ್ಲಿ ವಿಕಸಿತಗೊಳ್ಳುತ್ತದೆ. ಪ್ರಿನ್ಸ್ ಕೋಪಾಟಿಕನ್‌ರವರು ಯಾವ ಕಮ್ಯುನಿಸಮ್‌ನ ಕಲ್ಪನೆ ಮಾಡುತ್ತಿದ್ದರೋ ಅದೇ ನಿಜವಾದ ಕಮ್ಯುನಿಸಮ್ ಅಥವಾ ರಷ್ಯಾದಲ್ಲಿ ಇಂದು ಏನಾಗುತ್ತಿದೆಯೋ ಅದನ್ನು ಹೇಳುವುದು ಕಷ್ಟ. ಆದರೆ ಸಮಾಜವಾದವು ಸರಕಾರೀಕರಣದ ಇನ್ನೊಂದು ಹೆಸರಾಗಿಬಿಟ್ಟಿದೆ ಎನ್ನುವುದಂತೂ ಸತ್ಯ. ಅದರಿಂದ ಆಡಳಿತ ಅಥವಾ ಹಣದ ವಿಕೇಂದ್ರೀಕರಣದ ಆಸೆ ಇಟ್ಟುಕೊಳ್ಳುವುದು ವ್ಯರ್ಥ.

**ವಿಕೇಂದ್ರೀಕರಣದ ಘಟಕ**

ವಿಕೇಂದ್ರೀಕರಣದ ಮೌಲಿಕ ಘಟಕಗಳು ವ್ಯಕ್ತಿ ಮತ್ತು ಕುಟುಂಬದ ವ್ಯಕ್ತಿಯ ಪ್ರಯತ್ನಗಳ ಹಾಗೂ ಕುಟುಂಬದ ಸಹಾಯದಿಂದ ಮತ್ತು ಮಾಲೀಕತ್ವದ ಮೂಲಕ ಯಾವಾಗಲೂ ವ್ಯಾಪಕವಾಗಿ ಅಸಮಾನತೆ ಅಥವಾ ಶೋಷಣೆಯ ಸಾಧ್ಯತೆಗಳು ಉಂಟಾಗುವುದಿಲ್ಲ. ಯಾವಾಗ ವ್ಯಕ್ತಿಯು ಈ ಗೌರವಗಳಿಂದ ಮುಂದೆ ನಡೆದು ಸಾಮೂಹಿಕ ಸಂಸ್ಥೆಗಳ ಮತ್ತು ನಿಗಮಗಳ ಮೂಲಕ ಅಧಿಕಾಧಿಕ ಶಕ್ತಿಯ ಮಾಲೀಕನಾಗುತ್ತಾ ಹೋದನೋ ಆಗ ಈ ಪ್ರವೃತ್ತಿಗಳೂ ಬಲಗೊಳ್ಳುತ್ತಾ ಹೋದವು. ಆದ್ದರಿಂದ ಸಾಧಾರಣವಾಗಿ ವ್ಯಕ್ತಿ ಅಥವಾ ಕುಟುಂಬವೇ ಉತ್ಪಾದನೆಯ ಆಧಾರವಾಗಬೇಕು. ನಾವು ಕುಟುಂಬದ ಘಟಕವನ್ನೇ ಉತ್ಪಾದನೆಯ ಘಟಕವನ್ನಾಗಿ ಮಾಡುವಂತಹ ಪ್ರಣಾಳಿಯನ್ನು ನಮ್ಮದಾಗಿಸಿಕೊಳ್ಳಬೇಕು. ಉದ್ಯೋಗಿಗಳಲ್ಲಿ ಕುಟೀರ ಕೈಗಾರಿಕೆಗಳು, ಮನೆಯಲ್ಲಿಯೇ ನಡೆಸುವಂತಹ ಸಣ್ಣ ಸಣ್ಣ ಕೈಗಾರಿಕೆಗಳು ಇವೆಲ್ಲಾ ನಮ್ಮ ವ್ಯಾಪಕ ಔದ್ಯೋಗಿಕರಣದ ಕಾರ್ಯಕ್ರಮಗಳಾಗಲು ಸಾಧ್ಯ ಹೌದು. ಇದರಲ್ಲಿ ಬಹಳ ಅತ್ಯುತ್ತಮ ಮಶೀನ್‌ಗಳ ಮತ್ತು ವಿದ್ಯುಚ್ಛಕ್ತಿಯನ್ನು ಬಳಸಬಹುದು.

**ಮಾಲೀಕತ್ವದ ಪ್ರಶ್ನೆ**

ಗಹನವಾಗಿ ನೋಡಿದಾಗ, ವಾಸ್ತವವಾಗಿ ಮಾಲೀಕತ್ವದ ಅಧಿಕಾರವು ನಿಶ್ಚಿತ ಗೌರವಗಳ ಮತ್ತು ನಿಶ್ಚಿತ ಉದ್ದೇಶಗಳಿಗಾಗಿ ಯಾವುದಾದರೂ ವಸ್ತುವಿನ ಉಪಯೋಗದ ಅಧಿಕಾರವಾಗಿದೆ. ಕಾಲ ಬದಲಾದಂತೆ ಈ ಅಧಿಕಾರಿಗಳಲ್ಲಿ ಪರಿವರ್ತನೆಯಾಗುತ್ತಾ ಹೋಗುತ್ತದೆ. ಆದ್ದರಿಂದ ನಾವು ಸೈದ್ಧಾಂತಿಕ ದೃಷ್ಟಿಯಿಂದ ವ್ಯಕ್ತಿ ಮತ್ತು ಸಮಾಜದ ಅಧಿಕಾರಗಳ ಜಗಳದಲ್ಲಿ ಬೀಳುವುದಿಲ್ಲ. ನಮ್ಮಲ್ಲಿ ಸಮಾಜವನ್ನು ಒಂದೇ ಸ್ವರೂಪ ಅರ್ಥಾತ್ ರಾಜ್ಯ ಎಂದು ತಿಳಿಯಲಾಗುವುದಿಲ್ಲ. ವ್ಯಕ್ತಿ, ಕುಟುಂಬ, ಕುಲ, ಜಾತಿ, ರಾಜ್ಯ ಮುಂತಾದ ಅನೇಕ ರೂಪಗಳಲ್ಲಿ ಸಮಾಜವು ತನ್ನನ್ನು ತಾನು ಅಭಿವ್ಯಕ್ತಗೊಳಿಸುವ ಮತ್ತು ಅದರ ಮೂಲಕ ತನ್ನ ಮನೋರಥವನ್ನು ಪೂರ್ಣಗೊಳಿಸುತ್ತದೆ. ವ್ಯಕ್ತಿಯಲ್ಲಿ ಸಮಾಜ ಹಿತದ ಭಾವನೆಯು ಇರಬೇಕಾಗುತ್ತದೆ. ಆದ್ದರಿಂದ ಪ್ರತ್ಯೇಕ ವ್ಯಕ್ತಿಯು ಸಂಪಾದಿಸುವ ಅಧಿಕಾರಿಯಾಗಿರುವಂತಹ ಅವಿಭಕ್ತ ಕುಟುಂಬದ ಒಂದು ವ್ಯಾವಹಾರಿಕ ಘಟಕವನ್ನು ನಮ್ಮಲ್ಲಿ ತರಲಾಯಿತು ಮತ್ತು ಸಂಪತ್ತಿನ ಉಪಯೋಗವನ್ನು ಮನಸ್ಸಿಗೆ ಬಂದಂತೆ ಅಲ್ಲದೆ ಕುಟುಂಬದ ಹಿತಕ್ಕಾಗಿಯೇ ಬಳಸಲಾಗುತ್ತದೆ. ಟ್ರಸ್ಟೀಶಿಪ್‌ನ ಈ ಭಾರತೀಯ ಸಿದ್ಧಾಂತವನ್ನು ಗಾಂಧೀಜಿ ಗುರೂಜಿ ಮುಂತಾದ ವಿಚಾರವಾದಿಗಳು ಸಮಾಜದ ಮುಂದಿಟ್ಟಿದ್ದಾರೆ. ಇನ್ನು

ನಾವು ನಮ್ಮ ಔದ್ಯೋಗಿಕ ಕಾರ್ಯಕ್ರಮಗಳ ಆಧಾರವಾದ ಚಿಕ್ಕ ಚಿಕ್ಕ ಉದ್ಯೋಗಿಗಳ ಬಗ್ಗೆ ಹೇಳಬೇಕೆಂದರೆ, ಅವು ನಿಶ್ಚಿತವಾಗಿ ವ್ಯಕ್ತಿಗತವಾದ ಮಾಲೀಕತ್ವದಲ್ಲಿ ಉಳಿಯುವಂಥಾದ್ದು, ಅವುಗಳು ಸರ್ಕಾರದ ಅಧೀನಕ್ಕೆ ಬರುವ ಪ್ರಶ್ನೆಯೇ ಏಳುವುದಿಲ್ಲ. ಪೂರ್ವ ಯೂರೋಪಿನ ಅನೇಕ ಸಾಮ್ಯವಾದಿ ದೇಶಗಳು ಅನೇಕ ರೀತಿಯ ಪ್ರಯತ್ನಗಳನ್ನು ಮಾಡಿದ ನಂತರವೂ, ಅವುಗಳ ರಾಷ್ಟ್ರೀಕರಣ ಮಾಡಲು ಅವರಿಗೆ ಸಾಧ್ಯವಾಗಿಲ್ಲ.

ಸಾಮಾನ್ಯವಾಗಿ ಮಾಲೀಕತ್ವದ ಸಂಬಂಧವನ್ನು ಹಣದಿಂದ ಬೆಸೆಯಲಾಗುತ್ತದೆ. ವರ್ಣ ವ್ಯವಸ್ಥೆಯ ಕೊಡುಗೆ ಇದೇ ಎಂದು ಹೇಳಬಹುದು. ಉದ್ಯೋಗಗಳಲ್ಲಿಯೂ ಹಣ ತೊಡಗಿಸುವವನೇ ಮಾಲೀಕನಾಗುತ್ತಾನೆ. ಹಣ ತೊಡಗಿಸುವವನೇ ಸ್ವಂತವಾಗಿ ತನ್ನಲ್ಲಿರುವ ಯಂತ್ರಗಳನ್ನು ಮತ್ತು ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಸಾಮಗ್ರಿಗಳನ್ನು ತಯಾರಿಸಿದರೆ ಆಗ ಯಾವುದೇ ಕಷ್ಟ ಎದುರಾಗುವುದಿಲ್ಲ. ಏಕೆಂದರೆ ಅವನು ಸಂಪೂರ್ಣ ಬಂಡವಾಳಕ್ಕೆ ಅವನೇ ಮಾಲೀಕನಾಗುತ್ತಾನೆ. ಆದರೆ ಆ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ಇನ್ಯಾರೋ ಉತ್ಪಾದನೆ ಮಾಡಿದರೆ ಇಬ್ಬರಲ್ಲಿ ಉತ್ಪಾದನೆಯ ಬಂಡವಾಳದ ಹಂಚಿಕೆಯ ಸಮಸ್ಯೆಯ ಜೊತೆಗೆ ಆ ಸಾಮಗ್ರಿಗಳ ಮಾಲೀಕತ್ವದ ಪ್ರಶ್ನೆಯೂ ಉದ್ಭವಿಸುತ್ತದೆ. ಕಾರಣವೇನೆಂದರೆ, ಕಾರ್ಮಿಕರಿಗೆ ಸಾಮಗ್ರಿಗಳು ಮತ್ತು ಯಂತ್ರಗಳ ಜೊತೆ ನೇರ ಸಂಪರ್ಕವಿರುತ್ತದೆ. ಅದನ್ನು ಸರಿಯಾಗಿ ಬಳಸಿದಾಗ ಮಾತ್ರ ಅವರ ಜೀವನ ನಿರ್ವಹಣೆ ಸಾಧ್ಯ, ಒಂದು ವೇಳೆ ಆ ಯಂತ್ರಗಳನ್ನೂ ಮಾರಿಬಿಟ್ಟರೆ ಅಥವಾ ಇನ್ನಾವುದೇ ರೀತಿಯ ಹಸ್ತಾಂತರವಾದರೆ ಆಗ ಅದರ ನೇರ ಪರಿಣಾಮ ಕಾರ್ಮಿಕನ ಮೇಲೆ ಆಗುತ್ತದೆ. ಅಚಲ ಉತ್ಪಾದನೆಯ ಸಾಧನ ಅಂದರೆ ಜಮೀನಿನಲ್ಲಿ ಪರಿಶ್ರಮ ಮಾಡುವ ಉತ್ಪಾದಕನ ಮಾಲೀಕತ್ವದ ಅಧಿಕಾರವನ್ನು ಒಪ್ಪಿಕೊಂಡಾಗ ಉದ್ಯೋಗದಲ್ಲೂ ಕಾರ್ಮಿಕರ ಮಾಲೀಕತ್ವವನ್ನು ಏಕೆ ಒಪ್ಪಿಕೊಳ್ಳುವುದಿಲ್ಲ. ಇಂದಿನ ಸಂಯುಕ್ತ ಬಂಡವಾಳ ಕಂಪನಿಗಳಲ್ಲಿ, ಕೇವಲ ಉದ್ಯೋಗದಿಂದುಂಟಾದ ಲಾಭದ ವಿನಃ ಬೇರೆ ಯಾವುದಕ್ಕೂ ಸಂಬಂಧ ಪಡೆದ ಶೇರ್ ಹೋಲ್ಡರ್ ಮಾಲೀಕತ್ವವನ್ನು ಪಡೆಯಬಹುದು. ಆದರೆ ಒಬ್ಬ ಕಾರ್ಮಿಕ ಆ ಕಾರ್ಖಾನೆಯಲ್ಲಿ ನಿರಂತರವಾಗಿ ಕೆಲಸ ಮಾಡುತ್ತಾನೆ. ಸ್ವತಃ ಯುಂತ್ರಗಳನ್ನು ತಯಾರಿಸುತ್ತಾನೆ ಮತ್ತು ಇಡೀ ಜೀವನವನ್ನು ಆ ಉದ್ಯೋಗಕ್ಕಾಗೇ ಮುಡುಪಾಗಿ ಇಡುತ್ತಾನೆ. ಅವನು ಯಾವಾಗಲೂ ಬೇರೆಯವನಾಗೇ ಉಳಿಯುತ್ತಾನೆ ಎನ್ನುವುದು ಬಹಳ ಆಶ್ಚರ್ಯ ತರಿಸುವಂತಹ

ವಿಷಯ. ನಿಸ್ಪೃಹತೆಯ ಈ ಅಂಶವು ಸರಿಯಲ್ಲ. ಆದ್ದರಿಂದ ಪಾಲುದಾರನ ಜೊತೆ ಜೊತೆ ಕಾರ್ಮಿಕನಿಗೂ ಮಾಲೀಕತ್ವದ ಅಧಿಕಾರ ಪ್ರಾಪ್ತವಾಗಬೇಕು ಮತ್ತು ಅವನನ್ನು ಲಾಭದಲ್ಲಿ ಮತ್ತು ತೊಡಗಿಸುವಿಕೆಯಲ್ಲಿ ಪಾಲುದಾರನನ್ನಾಗಿಸಬೇಕು. ಕಾರ್ಮಿಕರ ಪ್ರತಿನಿಧಿಯು ಸಂಚಾಲನಾ ಮಂಡಳಿಯಲ್ಲಿ ಇರಬೇಕು.

**ಸಾರ್ವಜನಿಕ ಉದ್ಯೋಗಗಳಿಗಾಗಿ ವ್ಯವಸ್ಥೆ**

ಸಾರ್ವಜನಿಕ ಉದ್ಯೋಗಿಗಳ ಕಾರಣದಿಂದಾಗಿ ಹೆಚ್ಚಿನ ಅಧಿಕಾರವು ರಾಜ್ಯದ ಕೈಲ್ಲಿರುತ್ತದೆ, ಯಾರ ಕೈಯಲ್ಲಿ ಆಡಳಿತದ ಸೂತ್ರವಿರುತ್ತದೆಯೋ, ಆ ರಾಜ್ಯದ ಪ್ರಜಾಪ್ರಭುತ್ವಕ್ಕೆ ವ್ಯಾವಹಾರಿಕ ಅರ್ಥ ಬರುತ್ತದೆ. ಹೀಗೆ ಆಡಳಿತ ಪಕ್ಷದ ಕೈಯಲ್ಲಿ ಅಧಿಕವಾದ ಅಧಿಕಾರ ಇರುತ್ತದೆ. ವಿಕೇಂದ್ರೀಕರಣವು ಎಂದಿಗೂ ಪ್ರಜಾಪ್ರಭುತ್ವಕ್ಕೆ ಮಾರಕವೇ ಆಗಿದೆ.

* * * * *

# ಕೇವಲ ವ್ಯವಸ್ಥೆಯಲ್ಲಿ ಮಾತ್ರವಲ್ಲ, ಯೋಜನೆಯಲ್ಲಿಯೂ ಮೂಲಭೂತ ಬದಲಾವಣೆ ಬೇಕು

ಮೌಲ್ಯಗಳ ಅಸ್ಥಿರತೆ, ಕಾಡುತ್ತಿರುವ ಬೆಲೆ ಏರಿಕೆ, ಹೆಚ್ಚುತ್ತಿರುವ ಅಪ್ರತ್ಯಕ್ಷ ತೆರಿಗೆ ಮತ್ತು ನಿರುದ್ಯೋಗ ಸಮಸ್ಯೆಗಳ ಬಗ್ಗೆ, ಭಾರತೀಯ ಜನಸಂಘವು, ದೇಶವ್ಯಾಪ್ತಿ ಆಂದೋಲನವನ್ನು ಕೈಕೊಳ್ಳಲು ನಿಶ್ಚಯಿಸಿತು. ಜನಸಂಘದ ಅಭಿಪ್ರಾಯದಂತೆ ಈ ಸಮಸ್ಯೆಗಳ, ಸಂತೋಷಜನಕ ಸಮಾಧಾನಕ್ಕೆ ಶೀಘ್ರ ವ್ಯವಸ್ಥೆ ಮಾಡದೇ ಇದ್ದರೆ, ದೇಶದ ಅರ್ಥವ್ಯವಸ್ಥೆ ಇದರ ಗಂಭೀರ ಪರಿಣಾಮವನ್ನು ಎದುರಿಸಬೇಕಾಗುತ್ತದೆ.

ದುಃಖದ ವಿಷಯವೆಂದರೆ, ಸರಕಾರಕ್ಕೆ ಬೆಲೆಗಳ ಸ್ಥಿರೀಕರಣ ಮಾಡುವ ಅವಶ್ಯಕತೆಯ ಅನುಭವ ಇದ್ದರೂ ಕೂಡ, ಈ ದಿಶೆಯಲ್ಲಿ, ಯಾವುದೇ ಪ್ರಭಾವಪೂರ್ಣ ಹೆಜ್ಜೆಯನ್ನು ಇಡಲಿಲ್ಲ. ಪರಿಣಾಮ ಸ್ವರೂಪ, ಸರಕಾರದಿಂದ ಸ್ವೀಕರಿಸಲ್ಪಟ್ಟ ನೀತಿಗಳು ಬೆಲೆ ಏರುವುದಕ್ಕೆ ನಾಂದಿಯಾಯಿತು.

ವಸ್ತುಗಳ ತಾತ್ಕಾಲಿಕ ತುಟ್ಟಿ, ನಿರುದ್ಯೋಗ, ಕರಭಾರ, ಪಂಚವಾರ್ಷಿಕ ಯೋಜನೆಗಳ ಪ್ರತ್ಯಕ್ಷ ಮತ್ತು ಅನಿವಾರ್ಯ ಪರಿಣಾಮವಾಗಿರುತ್ತದೆ. ಎಲ್ಲಿಯವರೆಗೆ, ಯೋಜನೆಗಳ ಪ್ರಾಮುಖ್ಯತೆ ಮತ್ತು ಔದ್ಯೋಗೀಕರಣದ ಪದ್ಧತಿಯಲ್ಲಿ ಮೌಲಿಕ ರೂಪದಲ್ಲಿ ಕ್ರಾಂತಿಕಾರಿ ಪರಿವರ್ತನೆಯಾಗುವುದಿಲ್ಲವೋ ಮೇಲೆ ತಿಳಿಸಿ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ. ನಮ್ಮ ಯೋಜನೆಗಳಲ್ಲಿ ಕೃಷಿ, ಚಿಕ್ಕ ಕೈಗಾರಿಕೆ ಮತ್ತು ಉದ್ಯೋಗಗಳಿಗೆ ಆದ್ಯತೆಯನ್ನು ನೀಡಬೇಕು. ಸಾರ್ವಜನಿಕ ಕ್ಷೇತ್ರಗಳಿಗೆ ಗೌರವ ನೀಡಬೇಕು. ವಿದೇಶದ ಔದ್ಯೋಗೀಕರಣವನ್ನು ಭಾರತದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ, ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕೆ ಅಡಿಗಲ್ಲಾಗಿ ಸ್ವೀಕರಿಸಬೇಕು.

ಅತ್ಯಧಿಕ ವಿದೇಶಿ ಸಂಪತ್ತುಗಳ ಆಮದು, ದೇಶದ ಆರ್ಥಿಕ ವ್ಯವಸ್ಥೆಯ ಪಡಿಯಚ್ಚಿನಲ್ಲಿ ಹಾಕಲಾಗುತ್ತದೆ. ಇದರಿಂದ ನಮಗೆ ದೊರೆತ ಸಾಧನಗಳ, ಜೀವನದ ಅವಶ್ಯಕತೆಗಳಿಗೆ ಪ್ರತಿಕೂಲವಾಗಿರುತ್ತದೆ. ಇದರ ಪರಿಣಾಮ ಒಂದು ದಿಕ್ಕಿನಲ್ಲಿ ವಿದೇಶದ ಸಾಲ ಹೆಚ್ಚುತ್ತಿದೆ, ಎರಡನೆಯದಾಗಿ ಕೊರತೆ ಮತ್ತು ನಿರುದ್ಯೋಗ; ವಿದೇಶಿ ಮುದ್ರೆಯ ಅವಶ್ಯಕತೆಯ ಕಾರಣ ಈಗ ಹೆಚ್ಚಿನ ರಫ್ತಿನ ಮೇಲೆ ಒತ್ತು

ಕೊಡಲಾಗುವುದು. ಇದರ ಹೊರದೇಶದ ಮಾರುಕಟ್ಟೆಯ ವಿಕಾಸದ ಬದಲಾಗಿ ಸ್ವದೇಶದ ಮಾರುಕಟ್ಟೆಯ ವಿಕಾಸವನ್ನು ಮಾಡಬೇಕು.

ಉತ್ಪಾದನೆಯ ಶುಲ್ಕ, ಮಾರಾಟಕರ, ಜಕಾತಿ, ಅಪ್ರತ್ಯಕ್ಷ ತೆರಿಗೆಯ ಪರಿಣಾಮ, ಹಣದುಬ್ಬರದ ಮೇಲೆ ಆಗುತ್ತಾ ಇರುತ್ತವೆ. ಕೃಷಿ ಸಲಕರಣೆ ಮತ್ತು ಔದ್ಯೋಗಿಕ ಉತ್ಪಾದನೆಯ ಮೇಲೆ ಸಂಯೋಗವೇ ಇಲ್ಲ. ಅಮೆರಿಕೆಯಿಂದ ಉದ್ದರಿಯಾಗಿ ಪಡೆದ ಆಹಾರ ಧಾನ್ಯಗಳಿಂದ, ಮಾರುಕಟ್ಟೆಯಲ್ಲಿ ಬೆಲೆಗಳ ಇಳಿಮುಖವಾಯಿತು. ಆದರೆ ಗ್ರಾಹಕರ ಇತರ ವಸ್ತುಗಳ ಬೆಲೆಯಲ್ಲಿ ಅಂತರ ಕಂಡುಬಂದಿಲ್ಲ. ಕೃಷಿ ಮತ್ತು ಉದ್ಯೋಗಗಳ ಸಂಧಾನದಿಂದ ಮಾತ್ರ ಈ ಸಮಸ್ಯೆಯನ್ನು ಪರಿಹರಿಸಬಹುದು.

ಕೆಲವು ಕ್ಷೇತ್ರಗಳಲ್ಲಿ ಬೆಲೆ ಏರಿಕೆಯನ್ನು ಕಡಿಮೆ ಮಾಡಲು ಭೌತಿಕ ನಿಯಂತ್ರಣಗಳ ಸಲಹೆಯನ್ನು ಪಡೆಯುತ್ತಾರೆ. ಆದರೆ ಜನಸಂಘವು ಇದಕ್ಕೆ ಒಪ್ಪಿಗೆ ನೀಡಿಲ್ಲ. ನಿಯಮಗಳಿಂದ ಬೆಲೆ ಏರಿಕೆ ನಿಲ್ಲುವುದಿಲ್ಲ. ಇದರ ಹೊರತಾಗಿ "ಚೋರ ಬಜಾರ್" ಹೆಚ್ಚುತ್ತದೆ. ಇದರ ಲಾಭವನ್ನು ಕೇವಲ ಮಧ್ಯವರ್ತಿಗಳು ಪಡೆಯುತ್ತಾರೆ. ನಿಯಮಗಳನ್ನು ಸರಿಯಾಗಿ ಪಾಲಿಸುವ ಕುಶಲತೆ ಮತ್ತು ಪ್ರಾಮಾಣಿಕತೆ ಪಾಲಿಸುವ ಸರ್ಕಾರವೂ ಕೂಡ ಇಲ್ಲ. ಆದಕಾರಣ ಸರ್ಕಾರಕ್ಕೆ ತನ್ನ ಆರ್ಥಿಕ ನೀತಿ, ಪಂಚವಾರ್ಷಿಕ ಯೋಜನೆಗಳ ಆಕಾರ–ಪ್ರಕಾರ ಮತ್ತು ಆದ್ಯತೆಯಲ್ಲಿ ಪರಿವರ್ತನೆಯಾಗಬೇಕು.

* * * * *

# ವಾರ್ತೆಗಳು-ಹಿಂದುಸ್ಥಾನದ ಅಭಿವ್ಯಕ್ತಿ

ಪ್ರತಿ ಕ್ಷಣ ನಮ್ಮ ಸುತ್ತಮುತ್ತಲೂ ಅನೇಕ ಘಟನೆಗಳು ನಡೆಯುತ್ತಿರುತ್ತವೆ. ಜೀವನದ ಪ್ರತಿಯೊಂದು ವ್ಯವಹಾರಗಳಲ್ಲಿ ಅದರ ಸಂಬಂಧವಿರುತ್ತದೆ. ಇದರಲ್ಲಿ ಯಾವ ಘಟನೆಗಳನ್ನು ನಾವು ಬೇರೆಯವರಿಗೆ ಹೇಳುವದು, ಆವಶ್ಯಕ ಮತ್ತು ಉಚಿತ ಎಂದು ತಿಳಿಯುತ್ತೇವೆ. ಅದೇ ಸುದ್ದಿ ಅಥವಾ ಸಮಾಚಾರವಾಗಿರುತ್ತದೆ. ಯಾವ ವಿಷಯ ಸಾರ್ವಜನಿಕ ಮಹತ್ವವಾಗಿರುತ್ತದೆಯೋ, ಯಾವದು ಪರಿವಾರದ ಮತ್ತು ವೈಯಕ್ತಿಕ ಇಚ್ಛೆ ಮತ್ತು ಚಿಂತೆಯ ವಿಷಯವಾಗಿರುವುದಿಲ್ಲವೋ, ಅದೇ ಪತ್ರಿಕೆಗಳಿಗೆ ಸುದ್ದಿಯಾಗಿರುತ್ತದೆ. ಸುದ್ದಿ ಮತ್ತು ಸಾಹಿತ್ಯದ ಮುಖ್ಯ ಅಂತರವೆಂದರೆ, ವಾರ್ತೆ ಮುಖ್ಯವಾಗಿ ಬೇರೆಯವರ ಜೀವನದಲ್ಲಿ ನಡೆದ ಘಟನೆಗಳ ಮತ್ತು ಕೃತಿಗಳ ಸಂಬಂಧವನ್ನು ಕಲ್ಪಿಸುತ್ತದೆ. ಆದರೆ ಸಾಹಿತ್ಯ ಮುಖ್ಯವಾಗಿ ಆತ್ಮದ ಅಭಿವ್ಯಕ್ತಿಯಾಗಿರುತ್ತದೆ. ವಸ್ತುನಿಷ್ಠತೆ ಸಮಾಚಾರದ ಮುಖ್ಯ ವಿಷಯವಾಗಿರುತ್ತದೆ. ಸಮಾಚಾರದ ಸಂಯೋಜಕರು ಹಲವಾರು ಘಟನೆಗಳನ್ನು ಸಂಯೋಜಿಸುತ್ತಾರೆ. ಎಲ್ಲ ಘಟನೆಗಳನ್ನು ಒಟ್ಟುಗೂಡಿಸುವ ಅವಶ್ಯಕತೆ ಇರುವುದಿಲ್ಲ ಮತ್ತು ಸಾಧ್ಯವೂ ಇರುವುದಿಲ್ಲ. ಯಾವುದೇ ದೃಶ್ಯದ ಅಥವಾ ವ್ಯಕ್ತಿಯ ಭಾವಚಿತ್ರದಲ್ಲಿ ಅದರ ಅಥವಾ ಅವನ ಪೂರ್ಣವಾದ ಪ್ರತಿಛಾಯೆ ಇರುತ್ತದೆ. ಆದರೆ ಚಿತ್ರಕಾರನ ಕುಂಚದಿಂದ ಬರೆದ ಚಿತ್ರದಲ್ಲಿ ಕೇವಲ ವಿವರಣೆಗಳು ಮಾತ್ರ ಅಲ್ಲ ಜೊತೆಗೆ ದರ್ಶಕನ ಮನಸ್ಸಿನಲ್ಲಿ, ವಸ್ತುವಿನ ನಿಜವಾದ ಕಲ್ಪನೆಗಳ ಜೊತೆಗೆ ಒಳ್ಳೆಯ ಪ್ರಭಾವವನ್ನು ನೀಡುತ್ತದೆ.

೨. ಜನರ ಆಸಕ್ತಿ ಜನರ ಸಂಶೋಧನಾ ಮನೋಭಾವವನ್ನು ವಿಚಾರ ಮಾಡಿ ಸುದ್ದಿಗಾರರು ಮೇಲ್ನೋಟಕ್ಕೆ ನೋಡುವ ಉದಾಸೀನ ಭಾವನೆಯಿಂದ ಕೆಲಸ ಮಾಡುವುದಿಲ್ಲ. ಜನರ ಇಚ್ಛೆಯನ್ನು ತೃಪ್ತಿಗೊಳಿಸಿ ಅದರಿಂದ ಹೊರಟ ಸಂಶೋಧನಾ ಪೂರ್ಣಗೊಳಿಸಿ, ಜನರ ಆಸಕ್ತಿಯನ್ನು ಕೆರಳಿಸಿ ಅವರ ಚಿಂತನಾ ಮನೋಭಾವವನ್ನು ಜಾಗೃತಗೊಳಿಸುವುದು. ಅವರ ಕಾರ್ಯಗಳ ಭಾವಾತ್ಮಕ ಮತ್ತು ರಚನಾತ್ಮಕ ಭಾಗವಾಗಿದೆ. ಸಮಾಚಾರದ ಸಂಕಲನ ಮತ್ತು ವಿತರಣೆಯಲ್ಲಿ ಯಾವಾಗಲೂ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಅದರಲ್ಲಿ ಅವರು ವಿಶೇಷ

ನಿರ್ಮಾಣ ಕಾರ್ಯ ಮಾಡಲು ಸಾಧ್ಯವಾಗುವುದಿಲ್ಲ. ನಿಂದೆ ಮಾಡುವವರು ಮತ್ತು ಸುದ್ದಿಗಾರರಲ್ಲಿ ತುಂಬಾ ಅಂತರವಿದೆ. ನಿಂದೆ ಮಾಡುವ ಜನರ ರುಚಿಯ ವಿಷಯವಾಗಿರುತ್ತದೆ. ಆದರೆ ನಿಜವಾದ ಅರ್ಥದಲ್ಲಿ ಅದು ಸುದ್ದಿ ಅಲ್ಲ, ಸುದ್ದಿಯಲ್ಲಿ ಸತ್ಯಂ, ಶಿವಂ, ಸುಂದರಂ ಈ ೩ ಆದರ್ಶಗಳನ್ನು ಚರಿತಾರ್ಥಗೊಳಿಸಬೇಕು. ಕೇವಲ ಸತ್ಯಂ ಮತ್ತು ಸುಂದರಂದಿಂದ ಕೆಲಸ ನಡೆಯುವುದಿಲ್ಲ. ಸುದ್ದಿಗಾರ ಶಿವಾನಂದ ಕಡೆಗೆ ಧ್ಯಾನವಿಡಬೇಕಾಗುತ್ತದೆ, ಆದರೆ ಉಪದೇಶಕನಾಗಿ ಕೆಲಸ ಮಾಡುವುದಿಲ್ಲ. ಉಪದೇಶಕನ ಪ್ರಸ್ತಾವನೆಯನ್ನು ತೆಗೆದುಕೊಂಡು ಹೋಗುವುದಿಲ್ಲ.

೩. ಅವನು ನೈಜತೆಯಿಂದ ವಾಚಕನನ್ನು 'ಶಿವಂ'ಕ್ಕೆ ಈ ಪ್ರಕಾರದಲ್ಲಿ ಕೊಂಡೊಯ್ಯುತ್ತಾನೆ. ಅದರಿಂದ ಶಿವಂ ಯಥಾರ್ಥವಾಗುತ್ತದೆ. ಸುದ್ದಿಗಾರ ಶೂನ್ಯದಲ್ಲಿ ವಿಹರಿಸುವುದಿಲ್ಲ. ಕಲ್ಪನಾ ಜಗತ್ತಿನಲ್ಲಿ ಮಾತನಾಡುವುದಿಲ್ಲ. ಆದರೆ ಜೀವನದ ನಿಜವಾದ ಘಟನೆಗಳ ಉಲ್ಲೇಖದಿಂದ, ಶಿವನನ್ನು ಸೃಜಿಸುತ್ತಾನೆ.

೪. ಮೇಲಿನ ಪೃಷ್ಠ ಭೂಮಿಯಿಂದ ವಿಚಾರ ಮಾಡಿದರೆ, ಸತ್ಯಾಸತ್ಯತೆಯನ್ನು ತಿಳಿಸುವುದು, ಸಮಾಚಾರದ ಪ್ರಮುಖ ವಿಶೇಷತೆಯಾಗಿರುತ್ತದೆ. ಆ ಸಮೂಹ ಕಾರ್ಯ ವ್ಯಕ್ತಿತ್ವವನ್ನು ಸ್ಪರ್ಶಿಸದೇ ಇರುವುದಿಲ್ಲ. ಪ್ರತ್ಯೇಕ ಸಮಾಚಾರದಲ್ಲಿ ತನ್ನ ಸ್ವಂತ ವಿಶೇಷತೆ ಇರಬೇಕಾಗುತ್ತದೆ. ಈ ದೃಷ್ಟಿಯಿಂದ ಭಾರತದ ಸಮಾಚಾರ ಜಗತ್ತಿನಲ್ಲಿ ಕೆಲವು ಕೊರತೆಗಳಿವೆ. ಇಲ್ಲಿಯ ಹೆಚ್ಚಿನ ಸಮಾಚಾರ ಪತ್ರಿಕೆಗಳ ಆಕರ ಒಂದೇ ಆಗಿರುತ್ತದೆ. ಸಂಪಾದಕೀಯ, ಒಂದೆರಡು ಸಮಾಚಾರ ಪತ್ರಗಳನ್ನು ಬಿಟ್ಟರೆ, ಎಲ್ಲ ಪತ್ರಿಕೆಗಳು ಒಂದೇ ಸಮಾನವಾಗಿರುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳು ಒಂದೇ ಪ್ರಕಾರದ ಸಮಾಚಾರ ಪತ್ರಿಕೆಗಳನ್ನು ಓದುವ ಅವಶ್ಯಕತೆ ಮತ್ತು ಹವ್ಯಾಸವನ್ನು ಇಟ್ಟುಕೊಂಡಿದ್ದಾರೆ. ಯಾವುದೇ ಒಂದು ಸಮಾಚಾರ ಪತ್ರದಿಂದ ಅವರ ಕೆಲಸ ನಡೆಯುತ್ತದೆ. ಭಾರತದಲ್ಲಿ ಸಮಾಚಾರ ಪತ್ರದ ಸ್ವಂತ ವ್ಯಕ್ತಿತ್ವ ವಿಕಸನಗೊಂಡಿಲ್ಲ.

೫. ಈ ಸ್ಥಿತಿಗೆ ಕಾರಣ ಎಲ್ಲ ಸಮಾಚಾರ ಪತ್ರಗಳ ಮೂಲ ಒಂದೇ ಆಗಿರುತ್ತದೆ. ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ, ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾದ ರೂಪಾಂತರವಾಗಿರುತ್ತದೆ ಮತ್ತು ಸರಕಾರದ ಮಾಹಿತಿ ಇಲಾಖೆ ಈ ಪತ್ರಿಕೆಗಳ ಸಮಾಚಾರದ ಮುಖ್ಯ ಆಧಾರವಾಗಿರುತ್ತದೆ. ಈ ಪತ್ರಿಕೆಗಳಿಗೆ ಸ್ವಂತ ವರದಿಗಾರರೇ ಇರುವುದಿಲ್ಲ. ಬಹುಶಃ ಎಲ್ಲ ಪತ್ರಿಕೆಗಳಿಗೆ ಒಬ್ಬ ಸುದ್ದಿಗಾರರೇ ಸಮಾಚಾರವನ್ನು ಕಳುಹಿಸುತ್ತಾರೆ. ಸಂವಹನ ಮಾಧ್ಯಮದಲ್ಲಿ, ಘಟನೆಗಳ ಮೌಲ್ಯದಲ್ಲಿ ಹೆಚ್ಚಾಗಿ ಸುದ್ದಿಗಾರರಿಂದ, ಅಡ್ಡಾದಿಡ್ಡಿಯಾಗಿ ಸವೆದ ಸ್ವರೂಪ ಹೇರಳವಾಗಿರುತ್ತದೆ ಯಾವುದೇ ಕಾರಣದಿಂದ ಸುದ್ದಿಗಾರರು ಹೊಸ ರೀತಿಯಲ್ಲಿ ಸಮಾಚಾರವನ್ನು ಕಳುಹಿಸಿದರೂ, ಪತ್ರಿಕೆಗಳ ಸಂಪಾದಕರು, ತಮ್ಮ ನಿಗದಿಪಡಿಸಿದ ಸ್ವರೂಪವನ್ನು

ಬಿಡಲು ಒಪ್ಪುವುದಿಲ್ಲ. ಇದರ ಪರಿಣಾಮ, ಸ್ವರಾಜ್ಯ ದೊರಕಿದರೂ ಕೂಡ, ಪತ್ರಿಕೆಗಳ ಕ್ಷೇತ್ರದಲ್ಲಿ ಹೊಸ ವಿಕಾಸ ಕಂಡು ಬರಲಿಲ್ಲ.

೬. **ಲೋಕರಾಜ್ಯದ ಸಫಲತೆಯ ಸೂತ್ರ:–** ರಾಜ್ಯದ ಪುನರ್ಘಟನೆಯ ಪ್ರಶ್ನೆಯಲ್ಲಿ, ದೇಶದ ವಿಭಿನ್ನ ಬೇಡಿಕೆಗಳ ಜೊತೆಗೆ, ಜನರ ಭಾವನೆಗಳು ಉಗ್ರವಾಗುತ್ತಿದ್ದವು. ಒಂದು ಶಿಷ್ಟಮಂಡಲ ಭೆಟ್ಟಿಯಾಯಿತು. ಈ ಮಂಡಲದ ಒಬ್ಬ ಸದಸ್ಯನು ತನ್ನ ನಿವೇದನೆಯಲ್ಲಿ ಈ ಪ್ರಕಾರದಲ್ಲಿ ಪ್ರಕಟಿಸುತ್ತಾನೆ. ದಿಲ್ಲಿಯಲ್ಲಿ ವಿಧಾನಸಭೆಯನ್ನು ಕೊನೆಗೊಳಿಸುವ ನಿರ್ಣಯದಿಂದ, ಜನತೆ ಬಹಳ ಸಂತೋಷವಾಗಿದೆ. ಆದರಿಂದ ಅವರು ಯಾವುದೇ ಪ್ರಕಾರದ ಪರಿವರ್ತನೆಯನ್ನು ಮಾಡಬಾರದು. ಯಾರು ವಿಧಾನಸಭೆಯನ್ನು ಪಡೆಯಬೇಕೆಂದು ಇಚ್ಛೆಉಳ್ಳ ಜನತೆಯ ಹೆಸರನ್ನು ಹೇಳುತ್ತಾರೆ. ಜನತೆಯ ಇಚ್ಛೆ ಏನು ಎಂಬುದು ತಿಳಿಯುವುದಿಲ್ಲ ಎಂದು ಮುಗುಳ್‌ನಗುತ್ತ ನೆಹರೂರವರು ಉತ್ತರಿಸಿದರು. ಜನತೆಯ ಇಚ್ಛೆ ಏನು ಎಂದು ತಿಳಿಯಬೇಕು. ಪಂಡಿತ ನೆಹರು ಅವರು ತಿಳಿಸಿದ ಪ್ರಶ್ನೆ, ಲೋಕರಾಜ್ಯದ ಅನುಸಾರವಾಗಿ ನಡೆಯುತ್ತದೆ. ಯಾವುದೇ ಎರಡು ವ್ಯಕ್ತಿಗಳ ಇಚ್ಛೆ ಒಂದೇ ಪ್ರಕಾರದಲ್ಲಿ ಇರುವುದಿಲ್ಲ. ರಾಷ್ಟ್ರದಲ್ಲಿ ಕೋಟಿಗಟ್ಟಲೇ ಜನರಿರುವಾಗ ರಾಷ್ಟ್ರದ ಎಲ್ಲ ಪ್ರಜೆಗಳು ಒಂದೇ ಪ್ರಕಾರದ ಇಚ್ಛೆಯನ್ನು ಪ್ರಕಟಗೊಳಿಸುವುದು ಸಾಧ್ಯವಿಲ್ಲ. ಯುದ್ಧದ ಸಮಯದಲ್ಲಿ ಶತ್ರುಗಳ ಮೇಲೆ ವಿಜಯವನ್ನ ಸಾಧಿಸುವಾಗ ಎಲ್ಲರ ಇಚ್ಛೆಯು ಒಂದೇ ತೆರನಾಗಿರುತ್ತದೆ. ಕೋಟಿಗಟ್ಟಲೇ ಜನರು ಇರುವ ರಾಷ್ಟ್ರದಲ್ಲಿ ಎಲ್ಲ ಜನರ ಇಚ್ಛೆ ಒಂದೇ ಆಗಲು ಸಾಧ್ಯವಿಲ್ಲ, ಅಲ್ಲಿಯೂ ನೀತಿಯ ಪ್ರಶ್ನೆಯ ಬಗ್ಗೆ ಅನೇಕ ಮತಭೇದಗಳುಂಟು.

೭. ಸಮಾನವಾದ ಲೋಕ ಇಚ್ಛೆ ವಾಸ್ತವವಾಗಿ ಒಂದು ಆವಶ್ಯಕ ಕಲ್ಪನೆ ಮಾತ್ರವಾಗಿರುತ್ತದೆ. ಸತ್ಯವಾಗಿಯೂ ಜನತಂತ್ರದಲ್ಲಿ ಒಬ್ಬರ ಇಚ್ಛೆ ನಡೆಯುವುದಿಲ್ಲ. ಪ್ರತಿಯೊಬ್ಬರಿಗೂ ತಮ್ಮ ಸಾಮಾನ್ಯ ಇಚ್ಛೆಯ ಅನುಸಾರ ತಮ್ಮ ವಿಚಾರಗಳನ್ನು ಎರಕ ಹೊಯ್ಯಬೇಕಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿ ತನ್ನ ಚಿಂತನೆ, ವಿಚಾರ, ಮಾನ್ಯತೆಗಳನ್ನೇ ಸರ್ವಶ್ರೇಷ್ಠವೆಂದು ತಿಳಿದು ಹಟ ಹಿಡಿದರೆ ಅದರಿಂದ ಲೋಕತಂತ್ರ ನಡೆಯದು. ಇದರ ಪರಿಣಾಮ ದೇಶ ತುಂಡು–ತುಂಡಾಗಿ ಹರಿದು ಹಂಚಿಹೋಗುತ್ತದೆ, ಅರಾಜಕತೆ, ಕೊನೆಗೆ ಏಕಾಧಿಕಾರದ ನಿರಂಕುಶ ಶಾಸನ ಅವಶ್ಯವಾಗಿ ಕಂಡುಬರುತ್ತದೆ.

೮. ತನ್ನ ಇಚ್ಛೆಗಳ ದಮನದ ಅರ್ಥ, ಬೇರೆಯವರ ಮಾತುಗಳನ್ನು ಮನ್ನಿಸುವ ಸಿದ್ಧತೆ. ಲೋಕತಂತ್ರದ ವ್ಯಾಖ್ಯೆ ಎಂದರೆ "ಅದು ವಾದ ವಿವಾದದ ಮುಖಾಂತರ ನಡೆಯುವ ರಾಜ್ಯವಾಗಿರುತ್ತದೆ"

"**ವಾದೇ–ವಾದೇ ಜಾಯತೇ ತತ್ವಭೇದಃ**" **:** ಇದು ನಮ್ಮ ಪೂರ್ವಜರ ಉಕ್ತಿ ನಾವು ಬೇರೆಯವರ ಮಾತುಗಳನ್ನು ಧ್ಯಾನಪೂರ್ವಕ ಕೇಳಿ, ಅದರಲ್ಲಿದ್ದ ಸತ್ಯಾಂಶವನ್ನು ಗ್ರಹಿಸುವ ಇಚ್ಛೆ ಪ್ರಕಟಪಡಿಸಿದರೆ ಅದೇ ತತ್ವ ಭೇದವಾಗುತ್ತದೆ. ನಾವು ಬೇರೆಯವರ ದೃಷ್ಟಿಕೋನವನ್ನು ತಿಳಿಯಲಿಕ್ಕೆ ಪ್ರಯತ್ನಪಡದೇ ನಮ್ಮ ದೃಷ್ಟಿಕೋನದ ವಿಚಾರಗಳಿಗೆ ಒತ್ತು ಕೊಡುತ್ತಿದ್ದರೆ "ವಾದ–ವಾದದಿಂದ ಕಂಠ ಶೋಷಣೆ" ಮಾತುಗಳ, ಚರಿತಾರ್ಥವಾಗುತ್ತದೆ. ವಾಲಟೇಯರನ ಅಭಿಪ್ರಾಯದ ಪ್ರಕಾರ "ನಾನು ನಿಮ್ಮ ಮಾತುಗಳನ್ನು ಸತ್ಯವೆಂದು ನಂಬುವುದಿಲ್ಲ–ಆದರೆ ನಿಮ್ಮ ಅಭಿಪ್ರಾಯವನ್ನು ಪ್ರಕಟಪಡಿಸುವ ಅಧಿಕಾರಕ್ಕೆ ಸಂಪೂರ್ಣ ಸಮರ್ಥನೆಯನ್ನು ನೀಡುತ್ತೇನೆ." ಅವನು ಮನುಷ್ಯನ ಕಂಠಶೋಷಣೆಯ ಅಧಿಕಾರವನ್ನು ಸ್ವೀಕಾರ ಮಾಡಿದ್ದಾನೆ.

ಭಾರತೀಯ ಸಂಸ್ಕೃತಿ, ಇದರ ಮುಂದೆ, ವಾದ–ವಿವಾದವನ್ನು ತತ್ವಬೋಧನೆಯ ಸಾಧನೆಯ ರೂಪದಲ್ಲಿ ನೋಡುತ್ತಿದೆ. ನಮ್ಮ ಮಾನ್ಯತೆಯ ಪ್ರಕಾರ, ಸತ್ಯ ಏಕಾಂಗಿಯಾಗಿರುವುದಿಲ್ಲ. ವಿವಿಧ ದೃಷ್ಟಿಕೋನದಿಂದ ಸತ್ಯವನ್ನು ನೋಡಬಹುದು, ಪರೀಕ್ಷಿಸಬಹುದು ಮತ್ತು ಅನುಭವಿಸಬಹುದು. ಈ ವಿವಿಧತೆಗಳ ಸಾಮಂಜಸ್ಯದಿಂದ ಪೂರ್ತಿಯಾಗಿ ಲೆಕ್ಕ ಮಾಡುವ ಶಕ್ತಿ ಇರುವವರೇ ತತ್ವದರ್ಶಿಗಳು, ಜ್ಞಾನಿಗಳು. ಈ ದೃಷ್ಟಿಕೋನದಿಂದ, ಜೀವನದಲ್ಲಿ ಸಾಮಂಜಸ್ಯ ಪೂರ್ಣ ಪರಿವರ್ತನೆ ಯಾಗಬೇಕಾದರೆ, ಸಂಯಮದ ಅತ್ಯಂತ ಅವಶ್ಯಕತೆ ಇರುತ್ತದೆ. ಯಾರು ಅಸಂಯಮಿಗಳಾಗಿರುತ್ತಾರೋ, ಅವರು ತಮ್ಮ ಇಚ್ಛೆಗಳ ಮೇಲೆ ನಿಯಂತ್ರಣವನ್ನು ಇಡುವುದಿಲ್ಲ. ತನ್ನ ಸ್ವಾರ್ಥದ ಇಚ್ಛೆಯನ್ನು ಪೂರ್ಣಗೊಳಿಸಲು, ಎಲ್ಲ ಪ್ರಕಾರದ ಪ್ರಯತ್ನಗಳನ್ನು ಮಾಡುತ್ತ, ಬೇರೆಯವರ ಬಗ್ಗೆ ಚಿಂತೆ ಮಾಡುವುದಿಲ್ಲ. ಇದರಲ್ಲಿ ಸಫಲರಾದರೆ ತನ್ನ ಕ್ಷೇತ್ರದಲ್ಲಿ, ಏಕಾಧಿಪತ್ಯವನ್ನು ಪ್ರತಿಷ್ಠಾಪಿಸಿ, ಪ್ರಜಾತಂತ್ರದ ಹತ್ಯೆಯನ್ನು ಮಾಡುತ್ತಾರೆ. ತಮ್ಮ ಕಾರ್ಯವೈಖರಿಯಲ್ಲಿ ಅಸಫಲರಾದರೆ ಪ್ರಜಾತಂತ್ರವು ರಸಹೀನ ಮತ್ತು ದುಃಖದಾಯಕವಾಗಿರುತ್ತದೆ. ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಬಹುಜನ ಸಮಾಜ ತಮ್ಮ ಸುಖವನ್ನು ಅನುಭವಿಸದಿದ್ದರೆ, ಅಲ್ಲಿ ಲೋಕತಂತ್ರದ ಆತ್ಮವಿಲ್ಲದ ನಿರ್ಜೀವ ರೇಖಾಚಿತ್ರ ಮಾತ್ರ ಕಂಡುಬರುತ್ತದೆ.

ಬೇರೆಯವರ ಮಾತನ್ನು ಕೇಳುವದು, ಅವರ ಅಭಿಪ್ರಾಯವನ್ನು ಗೌರವಿಸುವುದು ಒಂದು ಪ್ರಕಾರ, ಆದರೆ ಬೇರೆಯವರ ಕೈ ಕೆಳಗೆ ಬಗ್ಗುವದು ಬೇರೆಯೇ ಪ್ರಕಾರ. ಬೇರೆಯವರ ಇಚ್ಛೆಯ ಕೆಳಗೆ ಬಗ್ಗುವುದು ಸಿದ್ಧತೆಯಲ್ಲಿ ಒಂದು ಉಪಾಯವನ್ನು ಯಾವಾಗಲೂ ಅನುಭವಿಸಬೇಕು. ಯಾರು ಸಜ್ಜನಿಗಳು ಸತ್ಯವನ್ನು ಆಚರಿಸುವವರು, ಅಥವಾ ಸತ್ಯಕ್ಕೆ ಹೆದರುವವರು ತನ್ನ ವಿಚಾರಕ್ಕೆ ಪಟ್ಟು ಬೀಳದೇ, ಬೇರೆಯವರ ಮಾತನ್ನು ಮನ್ನಿಸುತ್ತಾರೆ. ಯಾರು ದುರ್ಜನ ಮತ್ತು ದುರಾಗ್ರಂಥಿಗಳಾಗಿರುತ್ತಾರೋ, ತಮ್ಮ ವಿಚಾರಗಳನ್ನು ಭಿನ್ನತೆಯಿಂದ

ಒಪ್ಪಿಸಿಕೊಂಡು, ಸಮಾಜದ ಮುಖಂಡರಾಗುತ್ತಾರೆ. ನಿಧಾನವಾಗಿ ಇದರಿಂದ ಪ್ರಜಾಸತ್ತೆ, ಒಂದು ವಿಕೃತ ರೂಪವನ್ನು ತಾಳಿ ಸಮಾಜಕ್ಕೆ ಕಷ್ಟವಾಗಿ ಪರಿಣಮಿಸುತ್ತದೆ.

ಇದೇ ಕಷ್ಟವನ್ನು ಎದುರಿಸಲು ನಮ್ಮಲ್ಲಿ ಶಾಸ್ತ್ರಜ್ಞರು "ಲೋಕಮತ ಪರಿಷ್ಕಾರದ" ವ್ಯವಸ್ಥೆ ಮಾಡಿದ್ದಾರೆ. ಯಾವ ಸಮಾಜದಲ್ಲಿ ಈ ಪರಿಷ್ಕಾರದ ಕೆಲಸ ನಡೆಯುತ್ತಿರುವುದೋ ಅಲ್ಲಿ ಸಂಕಿಷ್ಣತೆ ಮತ್ತು ಸಂಯಮಶೀಲ ವ್ಯಕ್ತಿಗಳ ಗುಂಪು ಯಾವಾಗಲೂ ಹೆಚ್ಚುತ್ತಾ ಹೋಗುತ್ತದೆ. ಈ ವಾತಾವರಣದಲ್ಲಿ ಈ ಗುಣಗಳಿಂದ ವಂಚಿತರಾದ ವ್ಯಕ್ತಿಗಳು ಸಿಗುತ್ತಾರೆ. ಒಮ್ಮೆ ಅಪವಾದವಾಗಿ ಇದ್ದರೂ ಕೂಡ, ಅವರು ತಮ್ಮ ವರ್ಚಸ್ವವನ್ನು ಬೀರಲು ಸಹಕಾರಿಯಾಗುವುದಿಲ್ಲ.

**ಜನತೆಯ ಅಭಿಪ್ರಾಯವನ್ನು ಸುಧಾರಿಸುವ ಕಾರ್ಯ ಸತತ ನಡೆಯುತ್ತಿರಬೇಕು. ಇದು ಅತ್ಯಂತ ಅವಶ್ಯಕ.**

ಆದರೆ ಈ ಜನತೆಯ ಅಭಿಪ್ರಾಯವನ್ನು ಪರಿಷ್ಕಾರ ಮಾಡುವ ಕೆಲಸವನ್ನು ಯಾರು ಮಾಡುತ್ತಾರೆ. ರಷ್ಯಾ ಮತ್ತು ಅನ್ಯ ಸಾಮ್ಯವಾದಿ ದೇಶಗಳಲ್ಲಿ ಈ ಕೆಲಸ ರಾಜ್ಯದಿಂದ ಮಾಡಲ್ಪಡುತ್ತದೆ. ಮಾರ್ಕ್ಸ್‌ನ ಸಿದ್ಧಾಂತದ ಅನುಸಾರ, ಕೂಲಿಕಾರರ ಕ್ರಾಂತಿಯ ನಂತರ, ಪ್ರತಿಕ್ರಾಂತಿಯಾಗುವ ಸಂಭಾವನೆ ಇರುತ್ತದೆ. ಅದನ್ನು ತಡೆಗಟ್ಟಲು ಕಠೋರ ಉಪಾಯಗಳನ್ನು ಅನುಸರಿಸಬೇಕಾದ ಅವಶ್ಯಕತೆ ಇರುತ್ತದೆ. ಇಲ್ಲಿಯವರೆಗೆ ಕಂಡುಕೊಂಡ ಜೀವನದ ಮೌಲ್ಯಗಳು, ಬಂಡವಾಳಶಾಹಿ ಅರ್ಥವ್ಯವಸ್ಥೆಯನ್ನು ಆಧಾರವನ್ನಾಗಿಟ್ಟುಕೊಂಡಿವೆ. ಅದನ್ನು ಹಿಮ್ಮೆಟ್ಟಿಸಿ, ಹೊಸ ಪ್ರಗತಿವಾದಿ ಮೌಲ್ಯಗಳನ್ನು ಪ್ರತಿಷ್ಠಾಪನೆ ಮಾಡಬೇಕು. ಈ ಕಾರ್ಯವನ್ನು ಲೆನಿನನು ರಾಜ್ಯಗಳಿಗೆ ವಹಿಸಿಕೊಟ್ಟನು. ಅವರ ಪ್ರಕಾರ ಕೂಲಿಕಾರರ ಮತ್ತು ಕ್ರಾಂತಿಕಾರಿ ಬಂಡುಕೋರರಿಂದ ಮಾತ್ರ ಇದು ಸಾಧ್ಯ. ಇದರ ಪರಿಣಾಮದಿಂದ ಜನತೆಯ ಮತದ ಪರಿಷ್ಕಾರದ ಹೆಸರಿನಲ್ಲಿ ವ್ಯಕ್ತಿಯ ಎಲ್ಲ ಸ್ವಾತಂತ್ರ್ಯಗಳು ಸಮಾಪ್ತವಾಯಿತು ಹಾಗೂ ಕೆಲವು ವ್ಯಕ್ತಿಗಳ "ಸ್ವೇಚ್ಛಾ ಪೂರ್ಣ ಏಕತಂತ್ರ ಶಾಸನ", ಜನತೆಯ ಇಚ್ಛೆಯ ಹೆಸರಿನಲ್ಲಿ ನಡೆಯಲಿಕ್ಕೆ ಪ್ರಾರಂಭವಾಯಿತು. ಔಷಧದಿಂದ ರೋಗ ವಾಸಿಯಾಗಲಿಲ್ಲ. ರೋಗಿ ಸತ್ತುಹೋದ.

ಅರ್ಥಾತ್ ಸಮಸ್ಯೆಗಳು ಎರಡೂ ದಿಕ್ಕಿನಲ್ಲಿ ಇವೆ. ಒಂದು ದಿಕ್ಕಿಗೆ ಜನರ ಸುಧಾರಣೆ ಇಲ್ಲದ ಅಭಿಪ್ರಾಯ, ಇದರ ಗತಿ ಯೋಚಿಸಿ ವಿಚಾರಮಾಡಿದರೆ ನಿರ್ಣಯ ಕೈಕೊಳ್ಳಲು ಸಾಧ್ಯವಾಗುವುದಿಲ್ಲ. ಆಂಗ್ಲ ನಾಟಕಕಾರ ಷೇಕ್ಸ್‌ಪಿಯರ್ ತನ್ನ ನಾಟಕ "ಜ್ಯುಲಿಯಸ್ ಸೀಸರ್"ನಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ಚಿತ್ರಿಸಿದ್ದಾನೆ. ಯಾವ ಜನತೆ ಬ್ರೂಟಸ್‌ನಿಗೆ ಸಮರ್ಥನೆ ಮಾಡಿ, ಜ್ಯೂಲಿಯಸ್ ಸೀಜರನ ವಧೆಗಾಗಿ ಹರ್ಷಪಡುತ್ತಿತ್ತೋ, ಕೆಲವು ಕ್ಷಣಗಳ ನಂತರ ಅದೇ ಜನತೆ

ಏಂಟೋನಿಯೋನ ಭಾಷಣದ ನಂತರ ಬ್ರುಟಸ್‌ನ ವಧೆ ಮಾಡಲಿಕ್ಕೆ ಸಿದ್ಧತೆ ಮಾಡಿತು. ಮಾಬೋಕ್ರೆಸಿ ಮತ್ತು ಓಟೋಕ್ರೆಸಿ, ಇವೆರಡರ ಮಧ್ಯೆ, ಡೆಮೋಕ್ರೆಸಿಯನ್ನು ಜೀವಂತವಾಗಿರಿಸುವದು ಒಂದು ಕಠಿಣ ಸಮಸ್ಯೆಯಾಯಿತು.

ಲೋಕಶಿಕ್ಷಣಗಳಿಂದ ಮೇಲೆ ಬಂದವನೇ, ಲೋಕಮತದ ಪರಿಷ್ಕಾರದ ಕಾರ್ಯವನ್ನು ಕೈಕೊಳ್ಳಬಹುದು. ಭಾರತವು ಇದಕ್ಕೆ, ರಾಜ್ಯದಿಂದ ಲೋಕಮತ–ನಿರ್ಮಾಣದ ಸಾಧನವನ್ನು ಕಸಿದುಕೊಂಡು ಸಮಾಧಾನವನ್ನು ತಂದುಕೊಂಡಿದೆ. ಜನತೆಯ ಮತದ ಅನುಸಾರ ನಡೆಯುವುದೇ ರಾಜ್ಯದ ಕೆಲಸ. ಸನ್ಯಾಸಿಗಳು ಯಾವಾಗಲೂ ಧರ್ಮದ ತತ್ವಗಳಿಗೆ ಅನುಸಾರವಾಗಿ ಜನತೆಯ ಭೌತಿಕ ಮತ್ತು ಆಧ್ಯಾತ್ಮಿಕ ಉನ್ನತಿಯ ಉತ್ಕರ್ಷದ ಇಚ್ಛೆಯನ್ನು ಪಡೆದು ತನ್ನ ವಚನ ಮತ್ತು ವಿರಕ್ತ ಆಚರಣೆಯಿಂದ, ಜನರ ಜೀವನದ ಮೇಲೆ ಸಂಸ್ಕಾರವನ್ನು ಬೀರುತ್ತಾರೆ ಜನತೆಗೆ ಧರ್ಮದ ಬಗ್ಗೆ ಗೌರವ ಭಾವವನ್ನು ಹುಟ್ಟಿಸುತ್ತಾರೆ. ಯಾವುದೇ ಮೋಹ ಅಥವಾ ಲೋಭವಿಲ್ಲದ ಕಾರಣ, ಸತ್ಯದ ಆಚರಣೆಯನ್ನು ಸಹಜವಾಗಿ ಮಾಡುತ್ತಾರೆ. ಲೋಕ ಶಿಕ್ಷಣ ಮತ್ತು ಲೋಕ ಸಂಸ್ಕಾರಕ್ಕೆ ಇದೇ ಕೇಂದ್ರ ಬಿಂದುವಾಗಿರುತ್ತದೆ. ಶಿಕ್ಷಣ ಮತ್ತು ಸಂಸ್ಕಾರಗಳಿಂದ ಮಾತ್ರ ಸಮಾಜಕ್ಕೆ ಜೀವನದ ಮೌಲ್ಯಗಳು ದೊರೆತು ಅವು ಸದೃಢವಾಗಲು ಅಡಿಪಾಯವಾಗುತ್ತದೆ. ಈ ಮೌಲ್ಯಗಳ ಒಡ್ಡು ಕಟ್ಟುವದರಿಂದ ಜನತೆಯ ಇಚ್ಛೆಗಳ ನದಿ ತನ್ನ ದಂಡೆಗಳನ್ನು ಅತಿಕ್ರಮಿಸಿ, ಸಂಕಟಕ್ಕೆ ಕಾರಣವಾಗುವುದಿಲ್ಲ.

ಗೌರವದಿಂದ ನಡೆಯುವ ಕ್ರಿಯೆಗಳೆಲ್ಲವೂ ಸಂಯಮವಾಗಿರುತ್ತದೆ. ಹಸಿವಿನಿಂದ ಸಾಯುವುದು ಸಂಯಮವಲ್ಲ, ಆದರೆ ಶರೀರದ ಅವಶ್ಯಕತೆಗೆ ಅನುಸಾರ, ಗುಣಿ ಮತ್ತು ಅಳತೆಯಲ್ಲಿ ಊಟಮಾಡುವದು ಸಂಯಮ. ಏನನ್ನು ಮಾತನಾಡದೇ ಇರುವುದು, ಅತ್ಯಾಚಾರಗಳ ವಿರುದ್ಧ ಸಿಡಿದೇಳದಿರುವುದು ಸಂಯಮ ಅಲ್ಲ, ಅಥವಾ ಸದುಪದೇಶವನ್ನು ಕೊಡದೇ ಇರುವುದು ಸಂಯಮ ಅಲ್ಲ. ವಾಚಾಳಿ ಮತ್ತು ಮೂಗನ ನಡುವೆ ಸಂಯಮ ಪುರುಷನು ಬರುತ್ತಾನೆ. ಅವಶ್ಯಕತೆ ಇದ್ದರೆ ಮಾತನಾಡುತ್ತಾನೆ. ಅವಶ್ಯವಾಗಿ ಮಾತನಾಡುತ್ತಾನೆ. ಯಾವಾಗ ಮಾನವನು ತನ್ನ ಆದರ್ಶಗಳ ಬಗ್ಗೆ ಶ್ರದ್ಧೆವಹಿಸುತ್ತಾನೋ, ತನ್ನ ಜವಾಬ್ದಾರಿಗಳ ಬಗ್ಗೆ ಅರಿವು ಇದ್ದು ತನ್ನ ವ್ಯವಹಾರಗಳ ನಿಯಮಗಳನ್ನು ಸರಿಯಾಗಿ ಪಾಲಿಸುತ್ತಾನೆ. ಯಾವಾಗಲೂ ಅಸಂಯಮ ಮತ್ತು ಬೇಜವಾಬ್ದಾರಿತನ ಕೂಡಿಕೊಂಡು ಹೋಗುತ್ತದೆ. ಯಾವಾಗ ನಾಗರಿಕ ತನ್ನ ಜವಾಬ್ದಾರಿಯನ್ನು ಅರಿತು ಅದನ್ನು ನಿರ್ವಹಿಸಲು ಕ್ರಿಯಾಶೀಲನಾಗುವನೋ ಆಗ ಪ್ರಜಾತಂತ್ರವು ಸಫಲತೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಸಮಾಜವು ಎಷ್ಟರಮಟ್ಟಿಗೆ, ರಾಜ್ಯವನ್ನು ನಡೆಸುವ ಜವಾಬ್ದಾರಿ

ತನ್ನದೆಂದು ತಿಳಿಯುವದೋ ಅಷ್ಟು ಅದು ಸಂಯಮಶೀಲವಾಗುತ್ತದೆ. ಯಾವುದೇ ಪಕ್ಷಕ್ಕೆ ಈವತ್ತಿಗೆ ಅಲ್ಲದಿದ್ದರೂ, ನಾಳೆಗಾದರೂ ರಾಜ್ಯವನ್ನು ನಡೆಸುವ ಜವಾಬ್ದಾರಿ ತಮ್ಮದಾಗುತ್ತದೆ ಎಂದು ತಿಳಿದು ಅವರು ತಮ್ಮ ವಾದ ಮತ್ತು ವ್ಯವಹಾರಗಳಲ್ಲಿ ಬೇಜವಾಬ್ದಾರಿ ಅಥವಾ ಅಸಂಯಮವನ್ನು ತೋರಿಸುವುದಿಲ್ಲ. ಕೊನೆಗೆ ಜನತೆಯ ಮೇಲೆ ಶಾಸನವನ್ನು ನಡೆಸುವ ಹೊಣೆ ಯಾವಾಗಲೂ ಇರುತ್ತದೆ. ಸಮಯ–ಸಮಯದಲ್ಲಿ ತಮ್ಮ ಪ್ರತಿನಿಧಿಗಳ ರೂಪದಲ್ಲಿ ಬೇರೆ–ಬೇರೆ ಪಕ್ಷಗಳನ್ನು ಆರಿಸುತ್ತದೆ. ಅವರು ಜವಾಬ್ದಾರಿಯತರಾಗಿದ್ದರೆ, ಪಕ್ಷ ಸಂಯಮ ಶೂನ್ಯವಾಗುವುದಿಲ್ಲ.

ಎಲ್ಲದಕ್ಕಿಂತ ಮುಖ್ಯವಾದದ್ದು ಜನತೆಯನ್ನು ಸುಸಂಸ್ಕೃತಗೊಳಿಸಿ ಜನರ ಮನಸ್ಸನ್ನು ಸುಧಾರಣೆ ಮಾಡುವುದು. ಈ ಕಾರ್ಯವನ್ನು ಕೈಕೊಳ್ಳುವಂತೆ ಅಧಿಕಾರದ ಮೋಹದಿಂದ ವಂಚಿತರಾದ, ಭಯದಿಂದ ಮುಕ್ತರಾದ ಮಹಾಪುರುಷ ಮತ್ತು ಸಂಘಟನೆಗಳು ಅಸ್ತಿತ್ವದಲ್ಲಿ ಇರುವದೇ ಲೋಕಮತ ತನ್ನ ಸರಿಯಾದ ದಿಕ್ಕಿನಲ್ಲಿ ನಡೆಯುತ್ತಾ ಹೋಗುತ್ತದೆ.

* * * * *

# ತಾಷ್ಕೆಂಟ್ ಒಪ್ಪಂದದಲ್ಲಿ ಜನಸಂಘದ ಎಚ್ಚರ

**ಎರಡನೇ ತಾಷ್ಕೆಂಟನ್ನು ಕೂಡ ರಚಿಸಬಹುದು**

೧೦ನೇ ಜನವರಿ ೧೯೬೬ರಲ್ಲಿ ಆಗಿನ ಭಾರತದ ಪ್ರಧಾನ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಾಷ್ಕೆಂಟ್ ಘೋಷಣೆ ಮಾಡಿ "ತಾಷ್ಕೆಂಟ್ ಒಪ್ಪಂದ"ಕ್ಕೆ ಸಹಿ ಹಾಕಿದ ಕೆಲವೇ ಕ್ಷಣಗಳಲ್ಲಿ ಇಹಲೋಕ ಯಾತ್ರೆಯನ್ನು ಮುಗಿಸಿದರು.

**ಪಾಕಿಸ್ತಾನ ಪಶ್ಚಾತಾಪಪಡಲಿಲ್ಲ:–** ಸುರಕ್ಷಾ ಪರಿಷದ್ ಕಠೋರ ಶಬ್ದದಿಂದ ಆಹ್ವಾನವನ್ನು ಕೊಟ್ಟ ನಂತರ, ನಾವು ವಿಶ್ವಕ್ಕೆ ಯಾವ ಪ್ರಕಾರದ ಘೋಷಣೆಯನ್ನು ಪ್ರಕಟಿಸುತ್ತಿದ್ದವೋ, ಅದೇ ಪ್ರಕಾರದಲ್ಲಿ ನಡೆದುಕೊಂಡಿದ್ದೇವೆ. ನಾವು ತಾಷ್ಕೆಂಟಿಗೆ ಹೋಗಿ ಆಕ್ರಮಣಕಾರರೊಂದಿಗೆ, ಸಮಾನವಾಗಿ ಮಾತುಕತೆ ನಡೆಸಿ, ನಿರ್ಣಯ ಕೈಕೊಂಡಿದ್ದೇವೆ. ಅದು ಎರಡು ದೇಶಕ್ಕೆ ಸರಿಯಾಗಿ ಹೊಂದಿಕೆಯಾಗುತ್ತವೆ. ಪಾಕಿಸ್ತಾನವು ತಾನು ಮಾಡಿದ ಕೃತ್ಯಕ್ಕೆ ದುಃಖವನ್ನು ಸೂಚಿಸುತ್ತಿದೆ, ಎಲ್ಲಿಯೂ ಈ ಒಪ್ಪಂದದಲ್ಲಿ ತಿಳಿಸಿಲ್ಲ. ಪಾಕಿಸ್ತಾನಕ್ಕೆ ತಾನು ಮಾಡಿದ ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು, ಪ್ರಾಯಶ್ಚಿತ್ತ ಅನುಭವಿಸುವಂತೆ ಮಾಡುವ ಅವಶ್ಯಕತೆ ಇತ್ತು. ವಿನಾಕಾರಣ ಕೇವಲ ಭಾರತದ ಮಾತ್ರ ಅಲ್ಲ. ವಿಶ್ವದ ಶಾಂತಿಯನ್ನು ಕದಡಿಸಿತ್ತು. ಭಾರತಕ್ಕೆ ಇಚ್ಛೆ ಇಲ್ಲದಿದ್ದರೂ, ಯುದ್ಧ ಮಾಡುವ ಪ್ರಸಂಗ ಬಂತು. ಇದರಿಂದ ನಮ್ಮ ದೇಶಕ್ಕೆ ೫೦೦ ಕೋಟಿ ರೂಪಾಯಿ ನಷ್ಟವಾಯಿತು. ದೇಶದ ಸಂಪತ್ತು ಹಾನಿಯಾಗಿ, ದೇಶದ ವಿಕಾಸದ ವಿಧಾನಕ್ಕೆ ಬಲವಾದ ಪೆಟ್ಟು ಬಿತ್ತು. ನಮ್ಮಲ್ಲಿಯ ಸಾವಿರಾರು ನವಯುವಕರು ಈ ಯುದ್ಧದಲ್ಲಿ ಮಡಿದು ಹುತಾತ್ಮರಾದರು. ಅನೇಕ ಮಾತೆಯರ ಮಡಿಲು ಶೂನ್ಯವಾಯಿತು. ಸಹೋದರಿಯರ ಸೌಭಾಗ್ಯ ಅಳಿಸಿಹೋಯಿತು. ಬಹಳ ಜನರು ಗಾಯಾಳುಗಳಾಗಿ ಅಂಗವಿಕಲರಾದರು. ಅವರಿಗೆ ಜೀವನ ನಡೆಸುವುದು ಕಷ್ಟವಾಯಿತು. ನಮಗೆ ಈ ನೊಂದ, ತ್ಯಾಗಿ ಮತ್ತು ಬಲಿದಾನಿಗಳ ಬಗ್ಗೆ ತುಂಬಾ ಗೌರವವಿದೆ. ಈ ವೀರ ಭಾರತ ಮಾತೆಯ ಪುತ್ರರು, ಭಾರತದೇಶದ ಕೀರ್ತಿಯನ್ನು ಗೌರವವನ್ನು ನಾಲ್ಕು ದಿಕ್ಕಿನಲ್ಲಿ ಪಸರಿಸಿದರು. ಆದರೆ ಮನಸ್ಸಿನಲ್ಲಿ ಏಳುವ ಮುಖ್ಯವಾದ ಪ್ರಶ್ನೆ ಎಂದರೆ ಈ ಆಕ್ರಮಣಕಾರರಿಗೆ ಯಾವ ಶಿಕ್ಷೆಯನ್ನು ಕೊಡಲಾಯಿತು. ಅವರಿಗೂ ಹಾನಿಯಾಗಿದೆ ಮತ್ತು ಅವರಿಗೂ ಇದರ ಹೊಡೆತ

ಬಿದ್ದಿದೆ ಎಂದು ಹೇಳುವುದು ನ್ಯಾಯವಲ್ಲ ಮತ್ತು ವ್ಯವಹಾರಿಕ ದೃಷ್ಟಿಯಿಂದ ಒಳಿತಲ್ಲ. ಯಾವ ದೇಶ, ಆಕ್ರಮಣಕಾರರಿಗೆ ದಂಡವನ್ನು ನೀಡುವುದಿಲ್ಲವೋ ಅದು ತನ್ನ ಸುರಕ್ಷತೆಯ ದೃಢವಾದ ವ್ಯವಸ್ಥೆಯನ್ನು ಕೈಕೊಳ್ಳಲು ಸಾಧ್ಯವಾಗುವುದಿಲ್ಲ.

**ವಿಜಯ ಪರಾಜಯದಲ್ಲಿ ಪರಿವರ್ತನೆಯಾಯಿತು**

ಪಾಕಿಸ್ತಾನದ ವಿರುದ್ಧ ಆಕ್ರಮಣವನ್ನು ಪ್ರತಿಭಟಿಸದಿದ್ದರೆ, ಅವರನ್ನು ನಾವು ಸಹಿಸಲಿಕ್ಕಾಗದಿದ್ದರೆ, ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತಿತ್ತು. ಆದರೆ ನಮ್ಮ ಸೈನಿಕರು ಅವರ ವಿರುದ್ಧ ಪ್ರಬಲವಾಗಿ, ಎದುರಾಳಿಯಾಗಿ ಅವರನ್ನು ಚೆಲ್ಲಾಪಿಲ್ಲಿ ಮಾಡಿದರು. ನಮ್ಮ ಸೇನೆಗೆ ಪ್ರಚಂಡ ವಿಜಯ ಸಿಗದೇ ಇದ್ದಲ್ಲಿ, ಅದು ಮನಸ್ಸಿಗೆ ತುಂಬಾ ದುಃಖದ ಮಾತಾಗಿ ಪರಿಣಮಿಸುತ್ತದೆ. ಈ ಪ್ರಕಾರ ನಡೆದರೆ ಕಳ್ಳರ ಕಳ್ಳತನದ ಸ್ವಭಾವ ಬಿಟ್ಟುಹೋಗಬಹುದೇ? ಜಗತ್ತಿನಲ್ಲಿ ನ್ಯಾಯ ಮತ್ತು ನಿಯಮಗಳ ಪರಿಪಾಲನೆ ಆಗಬಹುದೇ. ತಾಷ್ಕೆಂಟದಲ್ಲಿ ಭಾರತಕ್ಕೆ ಗೆಲವು ಸಿಕ್ಕಿತ್ತು. ಆದರೆ ಈ ಒಪ್ಪಂದದಲ್ಲಿ, ಒಂದು ಸೋತ ದೇಶವು ಮಾಡಿದ ಒಪ್ಪಂದಕ್ಕಿಂತ ನಿಕೃಷ್ಟವಾದದ್ದಾಗಿರುತ್ತದೆ. ಅದರಂತೆ ರಶಿಯಾ ಯುದ್ಧವನ್ನು ಮಾಡಿದೆ. ಆದರೆ ಅದು ಸೋತ ದೇಶಕ್ಕೆ ಯಾವ ಪ್ರಕಾರದ ಕಾರ್ಯವನ್ನು ಮಾಡಿದೆ. ಈವತ್ತಿಗೆ ಅದು ನಮಗೆ ಪ್ರತಿಕೂಲವಾದ ವ್ಯವಹಾರವನ್ನು ಮಾಡುವ ಸಲಹೆ ಕೊಟ್ಟಿದೆ, ಅದು ಭಾರತದಂಕಿತ ಮತ್ತು ಪ್ರತಿಷ್ಠೆಗೆ ಗಮನವನ್ನು ಕೊಟ್ಟಿಲ್ಲವೆಂದು ತಿಳಿಸಬಹುದು.

**ರಷ್ಯಾದ ಮೇಲೆ ವಿಶ್ವಾಸವಿರುವುದು ತಪ್ಪು**

ರಶಿಯಾದ ಮಧ್ಯಸ್ಥಿಕೆಯ ಪ್ರಯತ್ನಗಳಿಂದ, ನಮಗೆ ಸಹಾಯ ದೊರಕಬಹುದೆಂದು ಕೆಲವರು ಆಸೆ ಮತ್ತು ವಿಶ್ವಾಸಗಳನ್ನು ಇಟ್ಟುಕೊಂಡಿದ್ದರು. ತಾಷ್ಕೆಂಟಿನ ಅನುಭವ, ಈ ವಿಶ್ವಾಸಕ್ಕೆ ಒತ್ತನ್ನು ನೀಡಲಿಲ್ಲ. ಒಮ್ಮೆ ರಶಿಯಾ ನಮಗೆ ಸಹಾಯ ಮಾಡಿದರೆ, ಪಾಕಿಸ್ತಾನವು ಚೀನಾದ ಬೆಂಬಲವನ್ನು ಪಡೆಯುವ ಬೆದರಿಕೆ ಹಾಕಿತು. ಚೀನಾ ಅದಕ್ಕೆ ಸಹಾಯವನ್ನು ಮಾಡಲಿಕ್ಕೆ ಭಾರತದ ಉತ್ತರ ದಿಕ್ಕಿಗೆ ಕೆಣಕಲು ಪ್ರಾರಂಭಿಸುತ್ತದೆ. ಆದಕಾರಣ ಚೀನಿ ಆಕ್ರಮಣದ ಅಪಾಯ ಹೆಚ್ಚಾಗುತ್ತದೆ. ಇದರಿಂದ ರಷ್ಯಾ ಮತ್ತು ಅಮೇರಿಕಾ ನಮಗೆ ಪಾಕಿಸ್ತಾನವನ್ನು ಚೀನದ ಮುಷ್ಟಿಯಿಂದ ಬಿಡಿಸಿಕೊಳ್ಳಬೇಕೆಂದು ಸಲಹೆಯನ್ನು ನೀಡುತ್ತದೆ. ಇದಕ್ಕೆ ಬಲಿದಾನಕ್ಕೂ ಕೂಡ ನಾವು ಸಿದ್ಧರಾಗಿರಬೇಕು. ಈ ದಿಕ್ಕಿನಲ್ಲಿ "ಮ್ಯುನಿಖ" ಇದರ ಪುನರಾವೃತ್ತಿಯಾಗಿ ಎರಡನೇ ತಾಷ್ಕೆಂಟ್‌ನ ಯೋಜನೆ ಸಫಲವಾಗುತ್ತದೆ.

ತಾಷ್ಕೆಂಟ್ ಒಪ್ಪಂದದ ಕರಾರಿನಂತೆ ಒಂದು ದೇಶ, ಇನ್ನೊಂದು ದೇಶದ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡಬಾರದೆಂಬ ನೀತಿಯನ್ನು ಸ್ವೀಕರಿಸಲಾಯಿತು.

ಆದರೆ ಎರಡು ರಾಜ್ಯಗಳ ನಡುವಿನ ಸಾಮಾನ್ಯ ವ್ಯವಹಾರಗಳ ಸಂಗ್ರಹಣೆ ಪ್ರಶ್ನೆ ಒಂದು ಒಳ್ಳೆಯ ಸಿದ್ಧಾಂತವಾಗಿರುತ್ತದೆ. ಆದರೆ ಪಾಕಿಸ್ತಾನದ ನಿರ್ಮಾಣ ಸಾಮಾನ್ಯ ಮತ್ತು ಸ್ವಾಭಾವಿಕತೆಯ ಆಧಾರದ ಮೇಲೆ ಇಲ್ಲ. ಭಾರತ ಮತ್ತು ಪಾಕಿಸ್ತಾನ ೧೯೪೭ರವರೆಗೆ, ಒಂದೇ ದೇಶವಾಗಿತ್ತು. ಇವತ್ತಿಗೂ ಕೂಡ ಜನತೆಯ ಮಧ್ಯದಲ್ಲಿದ್ದ, ಏಕ್ಯತೆಯ ಸೂತ್ರವನ್ನು ಮರೆಯಲಿಕ್ಕೆ ಸಾಧ್ಯವಿಲ್ಲ ಇಂದಿಗೂ ಪಾಕಿಸ್ತಾನದಲ್ಲಿ ಹಿಂದುಗಳ ಮೇಲೆ ಆಗುತ್ತಿರುವ ದೌರ್ಜನ್ಯ, ಹಿಂದುಸ್ತಾನದ ರಾಜಕೀಯ ಧುರೀಣರ ಮೇಲೆ ಆಗುತ್ತಿರುವ ಅನ್ಯಾಯವನ್ನು, ಕಂಡು ಭಾರತ ಉದಾಸೀನವಾಗಿ ಇರಲಾರದು. ಎಲ್ಲಿಯವರೆಗೆ ಹಿಂದುಗಳಿಗೆ ಪಾಕಿಸ್ತಾನದಲ್ಲಿ ಸಮಾನ ಅಧಿಕಾರ ಸಿಗುವುದಿಲ್ಲವೋ, ಅವರ ಪ್ರಾಣ, ಆಸ್ತಿ ಹಾಗೂ ಗೌರವಕ್ಕೆ ಧಕ್ಕೆ ಬರುತ್ತಿದೆಯೋ, ಅಲ್ಲಿ "ಹಸ್ತಕ್ಷೇಪ"ದ ಹೆಸರಿನಲ್ಲಿ ಅದನ್ನು ಮರೆಯುವದು, ತನ್ನ ಕರ್ತವ್ಯಗಳನ್ನು ಅನಾದರ ಮತ್ತು ಲೋಪಮಾಡಿದಂತೆ ಹಿಂದಿನ ೧೮ ವರ್ಷಗಳಿಂದ ಪಾಕಿಸ್ತಾನಿ ಶಾಸಕರು, ಯಾರು ದ್ವಿರಾಷ್ಟ್ರವಾದದ ಸಿದ್ಧಾಂತವನ್ನು ಒಪ್ಪುವುದಿಲ್ಲವೋ, ಅವರು ಹಿಂದೂಗಳಾಗಿರಲಿ ಅಥವಾ ಮುಸ್ಲಿಮರಾಗಿರಲಿ ಹತ್ಯೆ ಮಾಡಬೇಕೆಂದು ನೀತಿಯನ್ನು ಅನುಸರಿಸಿತ್ತು.

ನಾವು ದಕ್ಷಿಣ ಆಫ್ರಿಕಾ ಮತ್ತು ರೋಡೇಶೀಯಾ ದೇಶದಲ್ಲಿ ವಾಸಿಸುತ್ತಿರುವ ಕಷ್ಟ ನಿವಾಸಿಗಳಿಗೆ ಆಗುತ್ತಿರುವ ಭೇದಭಾವ, ತಾರತಮ್ಯ ಮತ್ತು ಅನ್ಯಾಯದ ವಿರುದ್ಧ ಹೋರಾಡುತ್ತೇವೆ. ಆದರೆ ನಮ್ಮ ದೇಶದಲ್ಲಿ ಮತ್ತು ಪಾಕಿಸ್ತಾನದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಜನತೆಯ ದುರ್ಗತಿಯ ಬಗ್ಗೆ ವಿಚಾರ ಮಾಡುವುದಿಲ್ಲ. ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫಾರಖಾನರಿಗೆ ಭಾರತಕ್ಕೆ ಬರಲಿಕ್ಕೆ ಮತ್ತೆ ಇಲ್ಲಿ ಆಂದೋಲನವನ್ನು ನಡೆಸಲಿಕ್ಕೆ ಆಮಂತ್ರಣವನ್ನು ಭಾರತದ ಆಡಳಿತದ ಅಧಿಕಾರಿಗಳು ಸಂಸತ್ತಿನಲ್ಲಿ ಕೊಟ್ಟಿದ್ದರು. ಸಂಸತ್ತಿನ ಅನುಮತಿ ಇಲ್ಲದೇ ಮತ್ತು ವಾಪಸ್ ಬರಲು ಸಾಧ್ಯವಾಗುವುದಿಲ್ಲ.

**ಜಗತ್ತಿನಲ್ಲಿ ನಾವು ಒಬ್ಬರೇ ಶ್ರೇಷ್ಠರು :**

ಭೂತಕಾಲದ ಅನುಭವ ಮತ್ತು ವರ್ತಮಾನದ ಹುರುಳಿಲ್ಲದ ತತ್ವಗಳನ್ನು ಮರೆತು, ಭವಿಷ್ಯದ ಸುಂದರ ಕನಸುಗಳನ್ನು ತೋರಿಸುವ ತಾಷ್ಕೆಂಟ ಒಪ್ಪಂದ, ಭಾರತ ಮತ್ತು ಪಾಕಿಸ್ತಾನದ ಸಂಬಂಧಗಳಲ್ಲಿ ಮಾತ್ರ ಅಲ್ಲ. ವಿಶ್ವದ ರಾಜನೀತಿಯಲ್ಲಿ ಹೊಸ ಪರಿವರ್ತನೆಯ ಅಧ್ಯಾಯವನ್ನು ರೂಪಿಸಿದೆ ಎಂದು ತಿಳಿದು ತುಂಬಾ ಸಂತೋಷಪಟ್ಟರು. ಕಲ್ಪನಾಲೋಕದಲ್ಲಿ ವಿತರಿಸುವ ಜೀವಿಗಳು, ೧೮ ವರ್ಷದ ಹಿಂದೆ ಮಾಡಿರುವ ನೀತಿಯ ಕಹಿಫಲವನ್ನು ನಾವು ಈಗ ಅನುಭವಿಸುತ್ತಿದ್ದೇವೆ. ಭಾರತ ಮತ್ತು ಪಾಕಿಸ್ತಾನದ ಸಂಘರ್ಷದ ಸಮಯದಲ್ಲಿ, ಜಗತ್ತಿನ ಯಾವ ರಾಷ್ಟ್ರಗಳೂ ಕೂಡ ನಮ್ಮ ಸಹಾಯಕ್ಕೆ ಬಂದಿಲ್ಲ. ೧೯೩೫, ೨೨ ಅಕ್ಟೋಬರ್ ಹಿಂದೂಸ್ಥಾನ

ಟೈಮ್ಸ್ ಪತ್ರಿಕೆಯಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸುಧಾರಣೆ ಸಭೆಯ ವಿಶ್ಲೇಷಣೆಯನ್ನು ಮಾಡುತ್ತ, ಈ ಪ್ರಕಾರದಲ್ಲಿ ಹೇಳಲಾಗಿದೆ. ವಿಭಿನ್ನ ದೇಶಗಳ ಪ್ರತಿನಿಧಿಗಳು ನೀಡಿದ ೧೧೦ ಭಾಷಣಗಳಲ್ಲಿ ೮೫ ದೇಶಗಳ, ಭಾರತ ಮತ್ತು ಪಾಕ್ ಸಂಘರ್ಷದ ವರ್ಣನೆಯನ್ನು ಮಾಡಿದ್ದಾರೆ. ಇದರಲ್ಲಿ ೬೩ ರಾಷ್ಟ್ರಗಳು ಚಿಂತೆಯನ್ನು ಪ್ರಕಟಿಸಿ, ಆಂತರಿಕ ಮಾತುಕತೆಯಿಂದ ವಿವಾದವನ್ನು ಪರಿಹರಿಸಿಕೊಳ್ಳಬೇಕೆಂದು ಸಲಹೆ ನೀಡಿ, ಭಾರತ ಮತ್ತು ಪಾಕಿಸ್ತಾನದ ಮಧ್ಯದಲ್ಲಿ ತಟಸ್ಥವಾದ ಉದಾಸೀನತೆಯನ್ನು ಪ್ರಕಟಿಸಿದ್ದಾರೆ. ೧೯ ದೇಶಗಳು ಭಾರತದ ವಿರುದ್ಧ ಭಾಷಣವನ್ನು ಪ್ರಕಟಿಸಿದೆ. ಇದರಲ್ಲಿ ೧೧ ಅರಬ್ ದೇಶಗಳಾಗಿದ್ದವು. ಉಳಿದ ೮ರಲ್ಲಿ ಅಲ್ಬಾನಿಯಾ, ಪ್ರತ್ಯಗಾಲ, ಇರಾನ್, ತುರ್ಕಿ, ಸೋಮಾಲಿಯಾ ಮಾಲಿ, ರುಆಂಡಾ ಮತ್ತು ಉಗಾಂಡಾಗಳಾಗಿದ್ದವು. ೩ ಅನ್ಯ ದೇಶಗಳು ಅಪ್ರತ್ಯಕ್ಷವಾಗಿ ವಿವರಣೆ ನೀಡಿತ್ತು. ಭಾರತದ ಪರವಾಗಿ ಸಮರ್ಥನೆ ಮಾಡುವವರು ಯಾರೂ ಇರಲಿಲ್ಲ.

ನಮ್ಮ ಈ ಏಕಾಂಗಿ ನೀತಿಗೆ ಮುಖ್ಯ ಕಾರಣ, ನಮ್ಮ ವಿದೇಶ ನೀತಿಯಲ್ಲಿ ವಾಸ್ತವಿಕತೆಯಿಂದ ದೂರವಿರುವುದು. ಅದು ಕೇವಲ ಘೋಷಣೆ ಮತ್ತು ಸಿದ್ಧಾಂತಗಳ ಮೇಲೆ ನಿಂತಿದೆ. ನಾವು ಯಾವುದನ್ನು ಮಾತನಾಡುತ್ತೇವೆ ಅದರಂತೆ ದೃಢವಾಗಿ ನಿಲ್ಲುತ್ತೇವೆ ಎಂಬ ವಿಶ್ವಾಸ, ಜಗತ್ತಿನ ಯಾವ ದೇಶಕ್ಕೂ ಇರುವುದಿಲ್ಲ. ಕಾಶ್ಮೀರವನ್ನು ನಾವು ಸ್ವತಂತ್ರತೆ, ಪ್ರಭುತ್ವ ಮತ್ತು ಪ್ರಾದೇಶಿಕ ಅಖಂಡತೆಯ ಪ್ರಶ್ನೆ ಎಂದು ಹೇಳಿ ನಂತರ ಅದರ ಬಗ್ಗೆ ವಿವಿಧ ವಿಚಾರ, ವಾರ್ತೆ ಮತ್ತು ಸೂಚನೆಗಳನ್ನು ನೀಡುತ್ತೇವೆ.

ಪಾಕಿಸ್ತಾನದ ಸಂಗಡ ಯುದ್ಧದಲ್ಲಿ ವಿಜಯದ ಕಾರಣ, ವಿಶ್ವದಲ್ಲಿ ನಮ್ಮ ಪ್ರತಿಷ್ಠೆ ಹೆಚ್ಚಾಯಿತು. ನಿಧಾನವಾಗಿ ಅನೇಕ ದೇಶಗಳು ನಮ್ಮ ನಿಲುವನ್ನು ತಿಳಿದುಕೊಂಡವು. ವಿಭಿನ್ನ ಸಂಸದೀಯ ಶಿಷ್ಟಮಂಡಲಗಳ ಅನುಭವ ಸಾಕಷ್ಟು ಆಶಾಜನಕವಾಗಿತ್ತು. ಬ್ರಿಟನ್ನಿನ ವಿದೇಶ ಸಚಿವ ಶ್ರೀ ಮಾಯಕಲ್ ಸ್ಟುಅರನು ಸಂಯುಕ್ತ ರಾಷ್ಟ್ರದಲ್ಲಿ ೮ನೇ ಅಕ್ಟೋಬರದಲ್ಲಿ ಕಾಶ್ಮೀರ ವಿಷಯದಲ್ಲಿ ಭಾರತದ ನಿಲುವು ತುಂಬಾ ಅರ್ಥಪೂರ್ಣವಾದದ್ದು ಎಂದು ಮನ್ನಿಸಿದರು. ಶ್ರೀ ಶಾಸ್ತ್ರಿಯವರು ಗುರುದ್ವಾರಾ ಬಂಗಲಾ ಸಾಹೇಬರ ಮೇಲೆ ಭಾಷಣ ಮಾಡುತ್ತ, ಈ ಸಲ ಜಗತ್ತು ನಮ್ಮ ಮಾತನ್ನು ಕೇಳಲೇಬೇಕು ಎಂದು ನುಡಿದರು; ಮತ್ತು ಜಗತ್ತು ನಮ್ಮ ಮಾತನ್ನು ಕೇಳುತ್ತಾ ನಮ್ಮ ಪಕ್ಷಕ್ಕೆ ಬರುತ್ತಾ ಇತ್ತು. ಆದರೆ ಆದ ಪರಿಣಾಮ – ಯುಗ ದೀರ್ಘವಾಗಿ ಯೋಚನೆ ಮಾಡುತ್ತ ಕೇಳುತ್ತಿತ್ತು.

ಆದರೆ ಕಥೆ ಹೇಳುತ್ತ ನೀವೆ, ನಿದ್ರಾಸೀನರಾಗಿದ್ದಿರಿ ಎಂಬ ಮಾತು ಸಾರ್ಥಕವಾಗಿತ್ತು. ತಾಷ್ಕೆಂಟ್ ಘೋಷಣೆಯಿಂದ ಕುಟಿಲ ರಾಜನೀತಿಯ ಕ್ಷೇತ್ರದಲ್ಲಿ, ನಮ್ಮ ಹೆಜ್ಜೆಯನ್ನು ಹಿಂದೆ ಇಟ್ಟಿದ್ದೇವೆ. ನಮ್ಮ ಸೈನ್ಯ ಮತ್ತು ಕೋತವಾಲರು

ಹಿಂದೆ ಸರಿದ ಹಾಗೆ, ನಾವೂ ಕೂಡ ದೇಶದ ರಾಜನೀತಿಯಲ್ಲಿ ಹಿಂದೆ ಸರಿಯುತ್ತಿದ್ದೇವೆ. ತಾಷ್ಕೆಂಟ್ ಘೋಷಣೆಯಿಂದ ನಮ್ಮ ಸಹಾಯಕರು ನಮ್ಮ ಬಗ್ಗೆ ಸಂದೇಹ ಪಡಬಹುದು. ನಮ್ಮ ವಿರೋಧಿಗಳು ಅಸಹಾಯಕ ಮತ್ತು ನಿರಾಶಾವಾದಿಗಳು ಮತ್ತೆ ಸ್ವಾರ್ಥದ ಆಶಾವಾದಿಗಳಾಗಬಹುದು.

* * * * *

# ಬಾಂಗ್ಲಾ ದೇಶದ ಸಂಕಟದ ಸಂದರ್ಭದಲ್ಲಿ ಜನಸಂಘದಿಂದ ಎಚ್ಚರ

**ಎರಡನೇ ತಾಷ್ಕೆಂಟ್ – ದೇಶಕ್ಕೆ ವಿಶ್ವಾಸ ಘಾತ**

ಭಾರತೀಯ ಜನಸಂಘದ ಕೇಂದ್ರೀಯ ಕಾರ್ಯಸಮಿತಿ, ಭಾರತ ಸರಕಾರವು ಬಂಗಲಾದೇಶಕ್ಕೆ ವಿಶ್ವಾಸಘಾತ ಮಾಡಿದೆ ಎಂಬ ಆರೋಪ ಮಾಡಿದೆ. ಸಿಮ್ಲಾದಲ್ಲಿ ವಿದೇಶಮಂತ್ರಿ ಸರದಾರ ಸ್ವರ್ಣಸಿಂಹರ ಪಾಕಿಸ್ತಾನದಲ್ಲಿ ಆಂತರಿಕ ರಾಜಕೀಯ ಸಮಾಧಾನ ಬೇಡುವದು ನಾಚಿಕೆಗೇಡಿನ ವ್ಯವಹಾರವಾಗುತ್ತದೆ. ಪ್ರತಿಕೂಲ ಗಾಳಿಯ ಈ ಭಾಷಣ ರಾಷ್ಟ್ರೀಯ ಹಿತದ ಪ್ರತಿರಕ್ಷಣೆಯ ದೃಷ್ಟಿಯಿಂದ ಅಧಿಕಾರಶಾಹಿ ಕಾಂಗ್ರೆಸ್ ದಳದ ಘೋರ ಅಕರ್ಮಣ್ಯತೆಯ ಪರಿಚಯವಾಗಿರುತ್ತದೆ. ಇದು ರಾಷ್ಟ್ರೀಯ ವಿಷಯಗಳ ಇತ್ಯರ್ಥಕ್ಕೆ ಜಗತ್ತಿನ ಮಹಾಶಕ್ತಿಗಳ ಮೊರೆಹೋಗುವ ನಮ್ಮ ದುರ್ಬಲತೆಯನ್ನು ಪ್ರದರ್ಶಿಸುತ್ತದೆ. ಪ್ರಧಾನಮಂತ್ರಿಗಳು, ದೇಶದ ಜನತೆಗೆ, ಶರಣಾರ್ಥಿಗಳನ್ನು ೬ ತಿಂಗಳ ಒಳಗೆ ತಮ್ಮ ಮನೆ–ಮಠಗಳಿಗೆ ಹಿಂದೆ ಕಳುಹಿಸುವುದಾಗಿ ಆಶ್ವಾಸನೆಯ ವಚನ ನೀಡಿದ್ದರು. ೬ ತಿಂಗಳ ಗಡುವು ಮುಗಿದು, ಹಿಂತಿರುಗುವ ಸ್ಥಿತಿ ಬಂದೊದಗಿದರೂ ಶರಣಾರ್ಥಿಗಳು ಅಧಿಕಾಧಿಕ ಸಂಖ್ಯೆಯಲ್ಲಿ ಬರುವದು ಮಾತ್ರ ಜಾರಿಯಲ್ಲಿತ್ತು. ಮನಸೂನ ಕೊನೆಗಂಡ ನಂತರ ಯಾಹ್ಯಾಖಾನರ ತೋಪುಗಳು ಕೆಳಗೆ ಇಳಿದು, ಜನರಕ್ತ ಮತ್ತೆ ತಿರುಗುವುದು ಮತ್ತು ಅತ್ಯಾಚಾರದ ಹೊಸ ಪರಂಪರೆ ಪ್ರಾರಂಭವಾಗುವುದು. ಪರಿಣಾಮ ಸ್ವರೂಪ ಭಾರತದಲ್ಲಿ ವಲಸೆ ಬರುವ ಜನಸಂಖ್ಯೆ ಹೆಚ್ಚಾಗುವುದು. ಬಾಂಗ್ಲಾ ದೇಶದಲ್ಲಿ ಎದ್ದ ಬರಗಾಲದ ಸ್ಥಿತಿ ಈ ಸಮಸ್ಯೆಯನ್ನು ಮತ್ತಷ್ಟು ಹುರಿದುಂಬಿಸಬಹುದು.

ಆಗಸ್ಟ್ ತಿಂಗಳಲ್ಲಿ ಭಾರತ–ರಷ್ಯಾ ಒಪ್ಪಂದದ ಬಗ್ಗೆ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತ, ಒಪ್ಪಂದದ ಮೂಲ್ಯಂಕ ಕೇವಲ ಶಬ್ದಗಳಿಗೆ ಸೀಮಿತವಾಗದೇ, ಕಾರ್ಯವೈಖರಿ ಮತ್ತು ಕಲಾಪಗಳಲ್ಲಿ ವಿಜೃಂಭಿಸಬೇಕೆಂದು ಜನಸಂಘವು ತಿಳಿಸಿತು. ಭಾರತದ ದೃಷ್ಟಿಯಿಂದ ನೋಡುವುದಾದರೆ ಸಂಧಿಯ ಮೂಲ್ಯಾಂಕನೆ, ಬಂಗಲಾದೇಶದ ಸಮಸ್ಯೆಯನ್ನು ಪರಿಹರಿಸುವಲ್ಲಿ ಮಾತ್ರ ಪರಿಲಕ್ಷಿತವಾಗಿದ್ದು ಕಂಡುಬರುತ್ತಿದೆ.

ಈ ಒಪ್ಪಂದ ನಮಗೆ ಯಾವುದೇ ರೀತಿಯಿಂದ ಸಹಕಾರ ಅಥವಾ ಸಹಾಯವನ್ನು ಯಾವ ಕಾರಣಕ್ಕೂ ಮಾಡಿಲ್ಲ. ಅದರ ಬದಲಾಗಿ ಮುಂದೆ ಹೆಜ್ಜೆ ಇಡುವ ಸಾಮರ್ಥ್ಯವನ್ನು ಗಂಭೀರವಾಗಿ ಕುಂಠಿತಗೊಳಿಸಿದೆ. ಇದು ನಮಗೆ ಬಾಂಗ್ಲಾದೇಶದ ಸ್ವಾತಂತ್ರ್ಯವನ್ನು ಸಮರ್ಥಿಸಿಕೊಳ್ಳುವದನ್ನು ತ್ಯಾಗ ಮಾಡಲಿಕ್ಕೆ ಹಾಗೂ ಪಾಕಿಸ್ತಾನ ಭೂಪಟವನ್ನು ದೃಢೀಕರಿಸಲು, ರಶಿಯದ ಉತ್ಸುಕತೆ ಇದರಲ್ಲಿ ಅಮೇರಿಕಾ ರಾಷ್ಟ್ರವೂ ಕೂಡ ಉತ್ಕಟವಾದ ಆಸಕ್ತಿಯನ್ನು ಇಟ್ಟುಕೊಂಡು, ಮಾನ್ಯವಾಗಿ ಸಮರ್ಥನೆಯನ್ನು ನೀಡಲಿಕ್ಕೆ ಬಾಧ್ಯವಾಯಿತು.

ಈ ವಿಷಯದಲ್ಲಿ ರಷ್ಯಾ ತನ್ನ ಆಸಕ್ತಿಯನ್ನು ಯಾವಾಗಲೂ ಬಚ್ಚಿಟ್ಟಿಲ್ಲ. ಆ ಸಮಯದಲ್ಲಿ ತುಂಬಾ ಖ್ಯಾತಿಯಾಗಿದ್ದ ಇಂದಿರಾಗಾಂಧಿ ಹಾಗೂ ಕೋಸಿಗಿನ್‌ರ ಸಂಯುಕ್ತ ಉಪನ್ಯಾಸದ ಕೆಲವು ದಿನಗಳಷ್ಟರಲ್ಲಿ, ಪಾಕಿಸ್ಥಾನದ ಐಕ್ಯತೆ ಬಗ್ಗೆ ರಶಿಯಾದ ಕೃಪಾದೃಷ್ಟಿಯಲ್ಲಿ ಮಹತ್ವಪೂರ್ಣ ಪರಿವರ್ತನೆಯಾಯಿತೆಂದು ಹೇಳಲಾಯಿತು ಮತ್ತು ಅಲ್ಜೀರಿಯಾದ ಸಂಗಡ ೯ನೇ ಅಕ್ಟೋಬರ್ ೧೯೭೧ರಲ್ಲಿ ಒಂದು ಸಂಯುಕ್ತ ಭಾಷಣದಲ್ಲಿ ಈ ಪ್ರಕಾರ ತಿಳಿಸಲಾಯಿತು. ಇದರಲ್ಲಿ "ಪಾಕಿಸ್ತಾನದ ಐಕ್ಯತೆ ಮತ್ತು ಅಖಂಡತೆಯ ಬಗ್ಗೆ ಅದರ ಭಾವವನ್ನು ಪುಷ್ಟಿಗೊಳಿಸಲಾಯಿತು ಮತ್ತು ತಾಷ್ಕೆಂಟ್ ಒಪ್ಪಂದದ ಭಾವನೆ ಪ್ರಕಾರ, ತಮ್ಮ ಸಮಸ್ಯೆಗಳನ್ನು ಶಾಂತಿಪೂರ್ಣವಾಗಿ ಪರಿಹರಿಸಿಕೊಳ್ಳಬೇಕೆಂದು ಭಾರತ ಮತ್ತು ಪಾಕಿಸ್ತಾನ ದೇಶಗಳಿಗೆ ನಿವೇದನೆ ಮಾಡಲಾಯಿತು.

೫. ಭಾರತ–ರಷ್ಯಾ ಒಪ್ಪಂದದ ಮೇರೆಗೆ ಬಂಗಲಾ ದೇಶದ ಘಟನೆಗಳಲ್ಲಿ ಭಾರತ ದೇಶದ ಕರ್ಮ ಸ್ವತಂತ್ರತೆಯ ಮೇಲೆ ಯಾವುದೇ ಪ್ರಕಾರದ ಹೊಡೆತ (ಪೆಟ್ಟು) ಬಿದ್ದಿಲ್ಲ ಮತ್ತು ಭಾರತದ ನೀತಿ, ರಶಿಯಾದ ನೀತಿಯಿಂದ ಪ್ರಭಾವಿತವಾಗಿಲ್ಲ ಎಂಬುದಾಗಿ ಪ್ರತಿಪಾದನೆ ಮಾಡಲು, ಪ್ರಧಾನ ಮಂತ್ರಿಗಳು ತುಂಬಾ ಕಷ್ಟವನ್ನು ಎದುರಿಸುತ್ತಿದ್ದರು. ಈ ಪ್ರಕಾರದ ನಿರಾಕರಣೆಯ ಧೋರಣೆ, ಯಾರಿಗೂ ಭ್ರಮಿತಗೊಳಿಸುವುದಿಲ್ಲ. ಭಾರತ ಸರಕಾರ ಮತ್ತು ಸರಕಾರದ ಅನ್ಯ ಅಧಿಕಾರಿಗಳೂ ಬಂಗಲಾ ದೇಶಕ್ಕೆ ಮನ್ನಣೆ ದೊರೆಯುವದೆಂದು ತಿಳಿದಿದ್ದರು. ಆದರೆ ಯಾವಾಗ ದೊರಕುತ್ತದೆ ಎಂಬುದು ಸರಕಾರಕ್ಕೆ ಬಿಟ್ಟಿದ್ದು. ಈ ಸಮಸ್ಯೆಯ ರಾಜನೀತಿಕ ಸಮಾಧಾನ, ಅದರ ಪೂರ್ಣ ಸ್ವತಂತ್ರತೆ ನಿಂತ ಕಡಿಮೆ ಇಲ್ಲ ಎಂದು ರಕ್ಷಣಾ ಮಂತ್ರಿ ತಿಳಿಸಿದರು. ಸಂಸತ್‌ನ ಒಳಗೆ ಮತ್ತು ಹೊರಗೆ, ಈ ಪ್ರಕಾರದ ಸ್ಪಷ್ಟ ಭಾಷಣದ ಹಿನ್ನೆಲೆಯಲ್ಲಿ, ಸರಕಾರದ ತಿರುಗುಮುರುಗು ಸ್ಪಷ್ಟೀಕರಣದ ಹೊರತಾಗಿ ಇನ್ನೇನು ಇರಲಿಲ್ಲ. ಕಾರಣ ಸೋವಿಯತ್ ರಷ್ಯಾದ ನಿಗ್ರಹ ಕೆಳಗೆ, ನಾಚಿಕೆಗೇಡಿತನದ ರೀತಿಯಲಿ ತಲೆಬಾಗಬೇಕಾಯಿತು. ಭಾರತಕ್ಕೆ ಬಾಂಗ್ಲಾ ಸಮಸ್ಯೆ ಕೇವಲ ಮಾನವೀಯ

ಸಮಸ್ಯೆ ಮಾತ್ರ ಅಲ್ಲ. ಇದನ್ನು ಕಂಡು ಅಂತರ್‌ರಾಷ್ಟ್ರೀಯ ಜಗತ್ತು, ನಮ್ಮ ಮೇಲೆ ವಿಶ್ವಾಸವನ್ನು ಇಡುತ್ತದೆ. ಈ ಸಮಸ್ಯೆ ನಮ್ಮ ಆರ್ಥಿಕ ಸ್ಥಿತಿ, ರಾಜನೈತಿಕ ಸ್ಥಿರತೆ ಮತ್ತು ಪ್ರತಿರಕ್ಷಾಭಾವವನ್ನು ಗಂಭೀರವಾಗಿ ಪ್ರಭಾವಿತಗೊಳಿಸುತ್ತದೆ. ಒಮ್ಮೆ ಶರಣಾರ್ಥಿಗಳನ್ನು ಹಿಂತಿರುಗಿಸುವುದೇ, ಈ ಸಮಸ್ಯೆಯಲ್ಲಿ ನಮ್ಮ ಮುಖ್ಯ ಹಿತವಾಗಿದ್ದರೆ, ಪಾಕಿಸ್ತಾನದ ಸೈನ್ಯವನ್ನು ಬಾಂಗ್ಲಾದೇಶದಿಂದ ಪೂರ್ಣವಾಗಿ ಹೊಡೆದೋಡಿಸದೇ ಇದ್ದರೆ, ಯಾವ ಶರಣಾರ್ಥಿಗಳು ಅಲ್ಲಿಂದ ಹಿಂತಿರುಗಲಿಕ್ಕೆ ಸಾಧ್ಯವಿಲ್ಲ ಮತ್ತು ಬಾಂಗ್ಲಾ ದೇಶವನ್ನು ಯಾಹ್ಯಾಖಾನದ ಕಪಿಮುಷ್ಟಿಯಿಂದ ಮುಕ್ತಗೊಳಿಸಲು ಸಾಧ್ಯವಿಲ್ಲ.

ಯಾವುದೇ ಕ್ಷಣದಲ್ಲಿ ಯಾರಾದರೂ ಪಾಕಿಸ್ತಾನದ ಚೌಕಟ್ಟಿನಲ್ಲಿ ಬಾಂಗ್ಲಾ ದೇಶದ ಸಮಸ್ಯೆಯ ಸಮಾನವಾದ ಮಾತನ್ನೆತ್ತಿದರೆ, ಮೇಲೆ ತಿಳಿಸಿದ ಎರಡೂ ಆಧಾರತತ್ವಗಳನ್ನು ಮುಚ್ಚಿ. ಶರಣಾರ್ಥಿಗಳು ಹಿಂತಿರುಗುವ ಎಲ್ಲ ಸಾಧ್ಯತೆಗಳನ್ನು ಅಲ್ಲಗೆಳೆಯುತ್ತಾರೆ.

ನಮ್ಮಿಂದ ಕೈಕೊಂಡ ೧೯೬೫ರ ತಾಷ್ಕೆಂಟ್ ಒಪ್ಪಂದ, ನಮ್ಮ ಸಾಹಸಿ ಯುವಕರ ಬಲಿದಾನಕ್ಕೆ ವಿಶ್ವಾಸ ಘಾತವನ್ನುಂಟು ಮಾಡಿದೆ. ಹೊಸ ತಾಷ್ಕೆಂಟ್‌ದ ಮೊಳಕೆ ಒಡೆಯುವದಿದೆ. ಅದು ಕೇವಲ ಶೂರ, ವೀರ ಸೈನಿಕರಿಗೆ ಮತ್ತು ಸ್ವತಂತ್ರ ಬಾಂಗ್ಲಾ ದೇಶವನ್ನು ಕಟ್ಟಲಿಕ್ಕೆ ಬಲಿದಾನ ಮಾಡಿದ ಲಕ್ಷಗಟ್ಟಲೇ ಜನಕರ ಬಲಿದಾನಕ್ಕೆ ಮತ್ತು ಭಾರತದ ರಾಷ್ಟ್ರೀಯ ಹಿತಕ್ಕೆ ವಿಶ್ವಾಸಘಾತವನ್ನುಂಟು ಮಾಡುತ್ತದೆ. ಜನಸಂಘ ಎಲ್ಲ ಸಮಸ್ತ ರಾಷ್ಟ್ರವಾದಿ ಮತ್ತು ಪ್ರಜಾತಂತ್ರವಾದಿ ಶಕ್ತಿ ಯಾವುದು ಬಾಂಗ್ಲಾ ದೇಶಕ್ಕೆ ತತ್ಕಾಲ ಮಾನ್ಯತೆ ಕೊಡುವ ಬೇಡಿಕೆಯನ್ನು ಮುಂದಿಡುತ್ತದೆ. ಈ ಆತ್ಮ ಸಮರ್ಪಣೆಯ ಸ್ಥಿತಿಯನ್ನು ವಿರೋಧಿಸಲು ಒಂದಾಗಿ ಪ್ರಯತ್ನ ಮಾಡಲು ಆಮಂತ್ರಣವನ್ನು ನೀಡುತ್ತದೆ.

* * * * *

# ಚುನಾವಣೆಯ ಗೆಲುವಿನಿಂದ ಸಂತೋಷವಾಗಿ ಕೈಕಟ್ಟಿ ಕುಳಿತುಕೊಳ್ಳಬಾರದು

ಕೆಲವು ಪ್ರಮುಖ ಪಕ್ಷಗಳ ಹೊರತಾಗಿ, ಕೆಲವು ಕ್ಷೇತ್ರೀಯ ಪಕ್ಷಗಳಿವೆ. ಇದರಲ್ಲಿ ರಾಮರಾಜ್ಯ ಪರಿಷದ್ ಮತ್ತು ಹಿಂದೂ ಮಹಾಸಭೆ ಎರಡೂ ಪಕ್ಷಗಳು ಜನರಿಂದ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತಿದೆ. ಹಿಂದೂ ಮಹಾಸಭೆಗೆ, ಮಧ್ಯಪ್ರದೇಶದಿಂದ ಮತ್ತು ಉತ್ತರಪ್ರದೇಶದಿಂದ ಎರಡುಸ್ಥಾನ ದೊರಕಿದೆ. ರಾಮರಾಜ್ಯ ಪರಿಷತ್ತು ಮಧ್ಯಪ್ರದೇಶದಿಂದ ೧೦ ಮತ್ತು ರಾಜಸ್ಥಾನದಿಂದ ೩ ಸ್ಥಾನಗಳನ್ನು ಗೆದ್ದು ಗೆಲವನ್ನು ಪಡೆದುಕೊಂಡಿದೆ. ಪಂಜಾಬದಲ್ಲಿ, ಅಕಾಲಿ ದಳವನ್ನು ಒಂದು ಸಬಲ, ಸುದೃಢ, ಸಾಂಪ್ರದಾಯಿಕ ಸಮರ್ಥನೆಯನ್ನು ಹೊಂದಿದ ಶಕ್ತಿ ಎಂದು ತಿಳಿಯಲಾಗುತ್ತದೆ. ಅದು ಅಲ್ಲಿ ೧೯ ಸ್ಥಾನಗಳನ್ನು ಗೆದ್ದು, ೧೯.೨ ಪ್ರತಿಶತ ಮತವನ್ನು ಸಾಧಿಸಿಕೊಂಡಿದೆ. ಲೋಕಸಭೆಯಲ್ಲಿ ಕೂಡ, ಅದು ೩ ಸ್ಥಾನಗಳನ್ನು ಗೆದ್ದು ಗೆಲುವನ್ನು ಸಂಪಾದಿಸಿದೆ. ೧೯೫೭ರಲ್ಲಿ ಅದು ಕಾಂಗ್ರೆಸ್ಸಿನಲ್ಲಿ ವಿಲೀನವಾಗಿ ಚುನಾವಣೆಯನ್ನು ಎದುರಿಸಿದೆ. ಅವರ ಬಗ್ಗೆ ತುಲನಾತ್ಮಕ ವಿವೇಚನೆಯನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಆದರೆ ಅದಕ್ಕೆ ಮತದಾರರ ವಿಶೇಷ ಬಲ ಸಿಗಲಿಲ್ಲ. ಇದು ಮಾತ್ರ ಸ್ಪಷ್ಟವಾದದ್ದು.

**ರಿಪಬ್ಲಿಕ್ ಪಕ್ಷದ ಸಂಕೇತ**

ಪರಿಶಿಷ್ಟ ಜಾತಿ ಫೆಡರೇಷನ್ ಮುಖಾಂತರ, ರಿಪಬ್ಲಿಕನ್ ಪಾರ್ಟಿಯ ನಿಲುವಂಗಿಯನ್ನು ಧರಿಸಿ ಅದು ಚುನಾವಣೆಯನ್ನು ಎದುರಿಸಿತು. ಯಾವುದೇ ಪಕ್ಷ ಅಥವಾ ವರ್ಗದ ಸಂಗಡ ಪಕ್ಷ ಕಟ್ಟಿ ಚುನಾವಣೆಯನ್ನು ಎದುರಿಸುವುದು. ಈ ಪಕ್ಷದ ಸಾಮಾನ್ಯ ನೀತಿಯಾಗಿತ್ತು. ಕೆಲವು ಪ್ರದೇಶಗಳಲ್ಲಿ ಈ ಕಾರಣದಿಂದ ಎರಡೂ ಗುಂಪುಗಳು ಬೇರೆ ಬೇರೆ ಪಕ್ಷಗಳೊಡನೆ ಒಪ್ಪಂದ ಮಾಡಿಕೊಂಡು ಚುನಾವಣೆಯನ್ನು ಎದುರಿಸಿತು.

ಒಂದು ಗುಂಪು ಸಂಯುಕ್ತ ಮಹಾರಾಷ್ಟ್ರ ಸಮಿತಿಯೊಡನೆ ಇದ್ದು ಕಮ್ಯುನಿಷ್ಟರ ಸಂಬಂಧವನ್ನುಟ್ಟುಕೊಂಡಿತ್ತು. ಎರಡನೆಯ ಗುಂಪು ಸಮಾಜವಾದಿಗಳ ಮತ್ತು

ನಾಗ ವಿದರ್ಭ ಆಂದೋಲನ ಸಮಿತಿಯ ಸಂಗಡ ಅಕ್ರಮ ಸಂಬಂಧವನ್ನು ಇಟ್ಟುಕೊಂಡು ತನ್ನ ರಾಜನೀತಿಕ ಅಸ್ತಿತ್ವವನ್ನು ಸ್ಥಿರವಾಗಿ ನೆಲೆಯೂರಿಸಿಕೊಂಡಿತ್ತು. ಈ ದಳದ ಅಪಾಯಕಾರಿ ಸ್ವರೂಪ ಉತ್ತರ ಪ್ರದೇಶದಲ್ಲಿ ಪ್ರಕಟಗೊಂಡಿತ್ತು. ಇಲ್ಲಿ ಅವರು ಮುಸ್ಲೀಮ್ ಮತೀಯ ತತ್ವಗಳೊಡನೆ ಒಪ್ಪಂದ ಮಾಡಿಕೊಂಡು, ದಲಿತವರ್ಗ ಮತ್ತು ಮುಸ್ಲೀಮರ ಜಂಟೀ ಪಕ್ಷ ಕಟ್ಟಿ ಮತ್ತು ಅತ್ಯಂತ ಪ್ರತ್ಯಕ್ಷವಾಗಿ ಹಿಂದೂ ವಿರೋಧಿ ಭಾವನೆಗಳನ್ನು ಕೆರಳಿಸಲು ಪ್ರಯತ್ನ ಮಾಡಿತು. ಕೆಲವು ಪ್ರದೇಶಗಳಲ್ಲಿ ಅವರಿಗೆ ಸಫಲತೆ ದೊರಕಿದ್ದು ಕೂಡ–ಒಂದು ದೊಡ್ಡ ಚಿಂತೆಯ ವಿಷಯವಾಗಿತ್ತು. ಮಹಾರಾಷ್ಟ್ರದಲ್ಲಿ ರಿಪಬ್ಲಿಕನ್ ಪಕ್ಷದ ಸುದೃಢವಾದ ಕೋಟೆಯ ರಚನೆಯಾದರೂ ಕೂಡ, ಅದರಲ್ಲಿ ಕೇವಲ ೩ ಸದಸ್ಯರು ಮಾತ್ರ ಚುನಾಯಿತರಾಗಿ ಗೆದ್ದಿದ್ದರು, ಉತ್ತರ ಪ್ರದೇಶದಲ್ಲಿ ೮ ಸದಸ್ಯರು ಗೆದ್ದು ವಿಧಾನಸಭೆಗೆ ಹೋಗಿದ್ದರು. ಲೋಕಸಭೆಯಲ್ಲಿ ೮ ಇದ್ದವರೂ ಕಡಿಮೆಯಾಗಿ ಮೂರಕ್ಕೆ ತಲುಪಿದ್ದರು. ಈ ಮೂರು ಸದಸ್ಯರು ಉತ್ತರ ಪ್ರದೇಶದಿಂದ ಗೆದ್ದಿದ್ದರು. ಝೂರಖಂಡ ಎಂಬ ಪ್ರತ್ಯೇಕ ರಾಜ್ಯ ಬೇಕೆಂಬ ಬೇಡಿಕೆಯನ್ನು ಮುಂದಿಟ್ಟು, ಅಲ್ಲಿಯ ವನವಾಸಿಗಳು, ಚೋಟಾ ನಾಗಪೂರ ಮತ್ತು ಅಕ್ಕಪಕ್ಕದ ಕ್ಷೇತ್ರದ ಜನರ ಬೆಂಬಲವನ್ನು ಪಡೆದು, ಬಹುದಿನಗಳಿಂದ ಈ ನಿಟ್ಟಿನಲ್ಲಿ ಕಾರ್ಯ ವಹಿಸುತ್ತಿದ್ದರು. ವನವಾಸಿಗಳಲ್ಲಿ ಈ ಭಾವನೆ ಆಳವಾಗಿದ್ದ ಕಾರಣ, ಕಾಂಗ್ರೆಸ್ ಕೂಡ ಬಿಹಾರದಲ್ಲಿ ಅವರ ಸಂಗಡ ಒಪ್ಪಂದವನ್ನು ಮಾಡಲು ಪ್ರಯತ್ನಪಡುತ್ತಿತ್ತು. ಆದರೆ ಈ ಸಮಯದಲ್ಲಿ ವಿಜಯಿ ಸದಸ್ಯರ ಸಂಖ್ಯೆ, ಕಡಿಮೆಯಾಗಿ ವಿಧಾನಸಭೆಯಲ್ಲಿ ೩೦ ರಿಂದ ೨೦ ಮತ್ತು ಲೋಕಸಭೆಯಲ್ಲಿ ೬ ರಿಂದ ೩ಕ್ಕೆ ಇಳಿದಿತ್ತು.

**ಶೇತಕಾರಿ ಕಾಮಕರಿ ಪಕ್ಷದ ಶಕ್ತಿ ಕಡಿಮೆಯಾಗಿತ್ತು**

ಮಹಾರಾಷ್ಟ್ರದ ಕೃಷಿ ಕಾಮಕರಿ ಪಕ್ಷ ಒಂದು ಪ್ರಾದೇಶಿಕ ಮತ್ತು ಜಾತಿವಾದಿ ಪಕ್ಷದ ರೂಪದಲ್ಲಿ ಕೆಲಸ ಕೈಗೊಳ್ಳುತ್ತಿತ್ತು. ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಭಾಗದ ರೂಪದಲ್ಲಿ ಕಳೆದ ಬಾರಿಗೆ ಒಳ್ಳೆಯ ಯಶಸ್ಸನ್ನು ಕಂಡಿತ್ತು. ಆದರೆ ಈ ಬಾರಿಗೆ, ಕಾಂಗ್ರೆಸ್ಸಿನಿಂದ ಮಹಾರಾಷ್ಟ್ರದಲ್ಲಿ, ಜಾತೀಯತೆಗೆ ಆಹ್ವಾನ ದೊರೆತ ಕಾರಣ. ಕೃಷಿ ಕಾಮಕರಿ ಪಕ್ಷ ಪ್ರಭುತ್ವವುಳ್ಳ ಪಕ್ಷವಾಗಿ ಪರಿಣಮಿಸಲಿಲ್ಲ ಹಾಗೂ ಅದರ ಸದಸ್ಯರ ಸಂಖ್ಯೆ ಕೂಡ ೩೧ರಿಂದ ೧೫ಕ್ಕೆ ಇಳಿಮುಖವಾಯಿತು. ಫಾರ್‌ವರ್ಡ್ ಬ್ಲಾಕ್ ಬಂಗಾಲ ಮತ್ತು ಮದ್ರಾಸಿಗೆ ಮಾತ್ರ ಸೀಮಿತವಾಗಿತ್ತು. ಈ ಸಲ ವಿಧಾನಸಭೆಯಲ್ಲಿ ಪಶ್ಚಿಮ ಬಂಗಾಲದಲ್ಲಿ ೧೩ ಮತ್ತು ಮದ್ರಾಸದಲ್ಲಿ ೪ ಸದಸ್ಯರು ಆಯ್ಕೆಯಾಗಿದ್ದರು. ಲೋಕಸಭೆಯಲ್ಲಿ ಎರಡು ರಾಜ್ಯಗಳಿಂದ ಒಬ್ಬೊಬ್ಬ ಸದಸ್ಯರು ಆಯ್ಕೆಯಾಗಿದ್ದರು.

**ದ್ರವಿಡ–ಮುನ್ನೇತ್ರ–ಕಡಗಮ್ ಮತ್ತು ಮುಸ್ಲೀಮ್‌ಲೀಗ್**

ಭಾರತದಿಂದ ಬೇರೆಯಾಗಿ ಸ್ವತಂತ್ರ ದ್ರವಿಡ ರಾಷ್ಟ್ರ ಬೇಕೆಂಬ ಸ್ವರದ ಘೋಷಣೆ ಮಾಡುತ್ತೆ, ತಿರುಗುವ ದ್ರವಿಡ ಮುನ್ನೇತ್ರ ಕಡಗಮ್ ಪಕ್ಷಕ್ಕೆ ಈ ಬಾರಿ ಉತ್ತಮ ಸಾಫಲ್ಯ ಸಿಕ್ಕಿತ್ತು. ಅದರಲ್ಲಿ ೫೦ ಸದಸ್ಯರು ವಿಧಾನಸಭೆಗೆ ಮತ್ತು ೭ ಸದಸ್ಯರು ಲೋಕಸಭೆಗೆ ಚುನಾಯಿತರಾಗಿದ್ದರು. ಅವರ ವಿಜಯದ ಹಿಂದೆ ಕಾಂಗ್ರೆಸ್ಸಿಗರ ವಿರೋಧವಿತ್ತೋ ಅಥವಾ ಅದರ ಸಿದ್ಧಾಂತಗಳಿಗೆ ಮತದಾರರು ಮಾನ್ಯತೆ ಕೊಟ್ಟು ಗೌರವಿಸಿದ್ದರೋ ಎಂಬುದನ್ನು ಹೇಳುವುದು ಕಷ್ಟದ ಕೆಲಸ; ಆದರೆ ರಾಜಾಜಿಯವರ ಆಶೀರ್ವಾದದ ಸಂಪೂರ್ಣ ಲಾಭವನ್ನು ಅವರು ಪಡೆದಿದ್ದರು. ಇದು ಮಾತ್ರ ಸತ್ಯ.

ಅಸ್ಸಾಮ ರಾಜ್ಯದ ಪರ್ವತ ಕ್ಷೇತ್ರಗಳ ಎಲ್ಲ ಸ್ಥಾನಗಳು, “ಪ್ರತ್ಯೇಕ ಹಿಲ್ ಸ್ಟೇಟ್” ಬೇಕೆಂಬ ಬೇಡಿಕೆಯನ್ನಿಟ್ಟ ದಳಗಳಿಗೆ ದೊರಕಿದೆ. ಆ ಕ್ಷೇತ್ರದಲ್ಲಿ ಅನ್ಯ ಪಕ್ಷಗಳು ರಾಜನೀತಿಯ ದೃಷ್ಟಿಯಿಂದ ನಿಷ್ಕ್ರಿಯ ಎಂಬ ಮಾತು ಸ್ಪಷ್ಟವಾಗುತ್ತದೆ. ಇದೇ ಪ್ರಕಾರದಲ್ಲಿ ಸಾಲಾಬಾರ್ ಕ್ಷೇತ್ರದಲ್ಲಿ ಮುಸ್ಲಿಂ ಲೀಗದ ಪ್ರಭಾವ ಅಷ್ಟಕ್ಕಷ್ಟೇ ಆಗಿರುತ್ತದೆ.

**ಪ್ರತ್ಯೇಕ ಕಾಶ್ಮೀರ**

ಕಾಶ್ಮೀರದ ಚುನಾವಣೆಗೆ, ತನ್ನದೇ ಆದ ಒಂದು ಕಥೆ ಇರುತ್ತದೆ. ಅದು ಭಾರತದ ಚುನಾವಣಾ ಆಯೋಗದ ನಿರೀಕ್ಷಣೆಯಲ್ಲಿ ಇದ್ದರೂ ಕೂಡ, ಅಲ್ಲಿಯ ಕಾನೂನು, ನಿಯಮಾವಳಿಗಳು ಭಾರತದ ಅನ್ಯರಾಜ್ಯಗಳಿಗೆ ಭಿನ್ನವಾದದ್ದು. ಅಲ್ಲಿ ಚುನಾವಣೆಯನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗುತ್ತಿದೆ. ಜಮ್ಮು ಪ್ರಾಂತದಲ್ಲಿ ಫೆಬ್ರವರಿ ೨೪ಕ್ಕೆ ಚುನಾವಣೆಯಾದರೆ, ಭಾರತದ ಉಳಿದ ರಾಜ್ಯಗಳಾದ ಕಾಶ್ಮೀರ ಮತ್ತು ಲಡಾಖನಲ್ಲಿ ನಂತರ ಚುನಾವಣೆಯಾಯಿತು. ಮತ ಹಾಕಲು "ಗುರುತಿನ ಚಿಹ್ನೆಯ" ಪದ್ಧತಿ ಅಲ್ಲಿ ಜಾರಿಗೊಳಿಸಲಿಲ್ಲ. ಚುನಾವಣೆಯಲ್ಲಿ ಉಪದ್ರವಿಗಳ ತುಂಬಾ ರಿಪೋರ್ಟ ದೊರಕುತ್ತಿತ್ತು. ಪ್ರಜಾಪರಿಷತ್ತಿನ ಕಾರ್ಯಕರ್ತರು ಸೀಲನ್ನು ಮುರಿಯದೇ, ಮತ ಪೆಟ್ಟಿಗೆಯನ್ನು ತೆರೆಯುವ ಪ್ರದರ್ಶನ ಮಾಡಿ, ದೊಡ್ಡ ಉದ್ವೇಗವನ್ನೇ ಮಾಡಿದ್ದರು. ಚುನಾವಣಾ ಆಯೋಗವು ಮತಪೆಟ್ಟಿಗೆಯನ್ನು ಬಾರಿನಲ್ಲಿ, ಬಂದು ಮಾಡಿ ಇಡುವ ಆಜ್ಞೆಯನ್ನು ಅವಶ್ಯವಾಗಿ ಕೊಟ್ಟಿತ್ತು. ಆದರೆ ವಿಶೇಷವಾಗಿ ಆಜ್ಞೆಯನ್ನು ಪರಿಪಾಲಿಸಲಿಲ್ಲ. ನಾಮಾಂಕನ ಪತ್ರಗಳನ್ನು ಬಹಳಷ್ಟು ಕಾಳಜಿಯಿಂದ ನೋಡಲಾಗುತ್ತಿತ್ತು. ಚುನಾವಣಾ ಆಯೋಗದ ನಿಷ್ಪಕ್ಷಪಾತ ಚುನಾವಣೆಯಲ್ಲಿ ಜನತೆಗೆ ವಿಶ್ವಾಸ ಹೆಚ್ಚಾಯಿತು. ಈ ಪ್ರಕಾರದ ಹೆಜ್ಜೆಯನ್ನು

ಚುನಾವಣಾ ಆಯೋಗವು ಇಟ್ಟಿತು. ಭಾರತದ ಕಾನೂನು ಮತ್ತು ನಿಯಮಾವಳಿಗಳನ್ನು ಅಲ್ಲಿ ಜಾರಿಗೊಳಿಸಲಾಯಿತು. ಪ್ರಜಾಪರಿಷತ್ ೨೫ ಸ್ಥಾನಗಳಿಗೆ ಚುನಾವಣೆಯನ್ನು ಎದುರಿಸಿತು. ಅದಕ್ಕೆ ೩ ಸ್ಥಾನ ದೊರಕಿತು ಮತ್ತು ೧೭.೬೯% ಮತ ಪ್ರಾಪ್ತಿಯಾಯಿತು. ಅನ್ಯ ವಿರೋಧಿ ದಲವು ಇಲ್ಲಿ ಯಾವ ಸ್ಥಾನವನ್ನು ಪಡೆದಿಲ್ಲ. ಅದಕ್ಕೆ ದೊರೆತ ಮತಗಳೂ ಕೂಡ ತುಂಬಾ ಕಡಿಮೆ.

## ರಾಜ್ಯಸಭೆ ಮತ್ತು ವಿಧಾನ ಪರಿಷತ್ತು

ರಾಜ್ಯ ಸಭೆಯ ಎರಡು ವರ್ಷಗಳ ಚುನಾವಣೆಯಲ್ಲಿ ನಮಗೆ ಎರಡು ಸ್ಥಾನ ದೊರಕಿತು. ಒಂದು ಉತ್ತರ ಪ್ರದೇಶ ಇನ್ನೊಂದು ಮಧ್ಯ ಪ್ರದೇಶಕ್ಕೆ ದೊರಕಿದೆ. ಉತ್ತರ ಪ್ರದೇಶದ ವಿಧಾನ ಸಭೆಯಲ್ಲಿ ಶ್ರೀ ಪೀತಾಂಬರದಾಸರು ಪುನರಾಯ್ಕೆಯಾದರು. ರಾಜ್ಯಸಭೆಯಲ್ಲಿ, ಉತ್ತರಪ್ರದೇಶದಿಂದ ಶೀ ಸೀತಾರಾಮ ಜಯಪುರಿಯಾ ಸ್ವತಂತ್ರ ಅಭ್ಯರ್ಥಿಯಾದರೆ, ಶ್ರೀ ಮುರಹರಿಗೌಡ ಸಮಾಜವಾದಿ ಪಕ್ಷದಿಂದ, ರಾಜಸ್ಥಾನದಲ್ಲಿ ಮಹಾರಾಜಾ ಮಾನಸಿಂಹ ಸ್ವತಂತ್ರ ಪಕ್ಷದಿಂದ ಮತ್ತು ಬಿಹಾರದಲ್ಲಿ ಶ್ರೀ ಗಂಗಾಶರಣ ಸಿಂಹರು (ಪ್ರ.ಸೋ.ಪಾ.) ಯಿಂದ ಚುನಾಯಿತರಾದರು. ಉತ್ತರ ಪ್ರದೇಶದ ಕಮ್ಯುನಿಸ್ಟ್ ಸದಸ್ಯರಾದ ಶ್ರೀ ಕೆ. ಏ. ಅಹಮದರ ಸ್ಥಾನ ಖಾಲಿಯಾದ ನಂತರ ಅವರು ತಮ್ಮ ಸದಸ್ಯರನ್ನು ಆರಿಸಲಿಲ್ಲ ಮತ್ತು ಆ ಸ್ಥಾನವನ್ನು ತುಂಬಲಿಲ್ಲ. ಉತ್ತರ ಪ್ರದೇಶದ ವಿಧಾನಪರಿಷತ್ತಿಗೆ ಸ್ವತಂತ್ರ ಮತ್ತು ಸಮಾಜವಾದಿ ಸದಸ್ಯರಿಗೆ, ಉಳಿದ ಮತ ಚಲಾಯಿಸಿದ ಕಾರಣ ಗೆಲುವನ್ನು ಸಾಧಿಸಲು ಸಾಧ್ಯವಾಯಿತು. ಅವರು ಅದನ್ನು ಗೆದ್ದುಕೊಂಡರು. ಅಲ್ಲಿಯೂ ಕೂಡ, ಕಮ್ಯುನಿಸ್ಟ್ ಪಕ್ಷದವರು ಸೋಲನ್ನು ಅನುಭವಿಸಬೇಕಾಯಿತು. ಸ್ಥಳೀಯ ಪರಿಷತ್ತಿಗೆ ವಿಧಾನ ಪರಿಷತ್ತಿನ ಚುನಾವಣೆಯನ್ನು ಉತ್ತರ ಪ್ರದೇಶ ಮತ್ತು ಪಂಜಾಬಿನಿಂದ ಎದುರಿಸಿದ್ದವು. ಆದರೆ ಸಫಲತೆಯನ್ನು ಕಾಣಲಿಲ್ಲ. ಜಿಲ್ಲಾ ಪರಿಷತ್ತಿನಲ್ಲಿ ಆಯ್ಕೆಯಾದ ಸರಕಾರಿ ಕೆಲಸಗಾರರ ಸಂಖ್ಯೆ ಇದ್ದ ಕಾರಣ ಯಾವುದೇ ವಿರೋಧಿ ಪಕ್ಷವು, ಈ ಆಯ್ಕೆಯಾದ ಕ್ಷೇತ್ರದಿಂದ ಗೆಲುವು ಸಂಪಾದಿಸುವುದು ತುಂಬಾ ಕಠಿಣವಾಗಿತ್ತು.

ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಯ ಸ್ಥಾನಕ್ಕೆ ನಾವು ಡಾ॥ ರಾಧಾಕೃಷ್ಣ ಮತ್ತು ಡಾ॥ ಝುಕೀರ ಹುಸೇನರ ಹೆಸರನ್ನು ಸಮರ್ಥಿಸಿದ್ದೆವು.

## ಚುನಾವಣೆಯ ಪ್ರಚಾರದಲ್ಲಿ ಮೌಲಿಕ ತತ್ವಗಳ ಅಭಾವ

ಚುನಾವಣೆಯ ಪರಿಣಾಮದಿಂದ, ಭಾರತದ ರಾಜನೀತಿಯ ಸಿದ್ಧಾಂತದ ಪಕ್ಷದ ಸಂಬಂಧದಲ್ಲಿ, ಯಾವುದೇ ನಿರ್ಣಯವನ್ನು ಕೈಕೊಳ್ಳಲು ಕಠಿಣವಾಗುತ್ತದೆ.

ಯಾಕೆಂದರೆ ಮತ ನೀಡುವವರ ನಿರ್ಣಯ ಅನೇಕ ಕಾರಣಗಳಿಂದ ಪ್ರಭಾವಿತವಾಗಿರುತ್ತದೆ. ಅದರಲ್ಲಿ ಸಿದ್ಧಾಂತದ ಪಕ್ಷ ತುಂಬಾ ಕಡಿಮೆಯಾಗಿರುತ್ತದೆ. ಆದ್ದರಿಂದ ಅನೇಕ ದಳಗಳ ದೊಡ್ಡ–ದೊಡ್ಡ ರಾಜಕೀಯ ಧುರೀಣರು ಚುನಾವಣೆಯ ಪ್ರಚಾರಕ್ಕೆ, ತಮ್ಮ ಸಿದ್ಧಾಂತಗಳ ವಿವೇಚನೆಯ ಅವಶ್ಯಕತೆಯನ್ನು ಮನಗಾಣಲಿಲ್ಲ. ಆದರೆ ಕಾಂಗ್ರೆಸ್ ಪಕ್ಷ ಮಾತ್ರ ತಮ್ಮ ಮತದ ಅಧಿಕಾರವನ್ನು ಪ್ರಕಟಿಸಿತ್ತು. ಯಾಕೆಂದರೆ ಅದು ದೊಡ್ಡ ಪಕ್ಷವಾಗಿತ್ತು. ಬೇರೆ ಪಕ್ಷಗಳಲ್ಲಿ ಪಂ॥ ನೆಹರು ಅವರ ಹಾಗೆ ಖ್ಯಾತಿ ಪಡೆದ ರಾಜಕೀಯ ಧುರೀಣರು ಇರಲಿಲ್ಲ. ಉಳಿದ ಪಕ್ಷಗಳು ಇದಕ್ಕೆ ವಿರುದ್ಧವಾಗಿ ಈ ಪ್ರಕಾರದಲ್ಲಿ ಹೇಳುತ್ತಿತ್ತು. ಕಾಂಗ್ರೆಸ್ ಪಕ್ಷ ಅಸಫಲವಾಗಿದೆ ಅಥವಾ ಪ್ರತಿಸ್ಪರ್ಧಿ ಪಕ್ಷಕ್ಕೆ ತುಲನೆ ಮಾಡಿದರೆ ಅಭ್ಯರ್ಥಿಗಳು ತಮ್ಮ ಕ್ಷೇತ್ರಕ್ಕೆ ಮತ್ತು ಜಾತೀಯ ದೃಷ್ಟಿಯಿಂದ ನಿಷ್ಠೆಗೆ ಬಾಧ್ಯಸ್ಥರಾಗಿರುವುದಿಲ್ಲ. ಭಾರತೀಯ ಜನಸಂಘವು ಈ ಸಂಬಂಧದಲ್ಲಿ ಅಪವಾದವಾಗಬೇಕೆಂದು ಪ್ರಯತ್ನಪಡುತ್ತಿದೆ. ಅದು ಎಷ್ಟರಮಟ್ಟಿಗೆ ಸಫಲತೆಯನ್ನು ಹೊಂದಿದೆ ಎಂಬುದಾಗಿ ತಿಳಿಸುವದು ತುಂಬಾ ಕಷ್ಟ. ಅದೇ ರೀತಿಯಲ್ಲಿ ಆಡಳಿತ ಪಕ್ಷದಿಂದ ಆಗುವ ಅವ್ಯವಸ್ಥೆ ಮತ್ತು ಭ್ರಷ್ಟಾಚಾರದ ರಿಪೋರ್ಟ್ ಕೂಡ ಸಿಕ್ಕಿದೆ. ಇದರ ಪರಿಣಾಮ ಆಡಳಿತ ಪಕ್ಷಗಳ ಮೇಲೆ ಬೀಳುತ್ತದೆ. ಅಶಿಸ್ತಿನ ಕೆಲವು ಪ್ರಮುಖ ಉದಾಹರಣೆಗಳನ್ನು ಬಿಟ್ಟು ಚುನಾವಣೆಯ ಪರಿಣಾಮ ಬಹು ಜನರ ಮನಸ್ಸಿನ ಪ್ರತಿಬಿಂಬ ಎಂದು ತಿಳಿಸಲು ಮತ್ತು ಸ್ವೀಕಾರ ಮಾಡಲು ಯಾವುದೇ ಅಭ್ಯಂತರವಿರುವುದಿಲ್ಲ. ಜನರು ಭಯ ಅಥವಾ ಲೋಭಕ್ಕೆ ಒಳಗಾಗಿದ್ದರೆ ಅಥವಾ ಸಾಂಪ್ರದಾಯಿಕ ಹಾಗೂ ಜಾತಿಗತ ಭಾವನೆಗಳಿಂದ ವಶೀಕರಣಗೊಂಡಿದ್ದರೆ ಆಗ ಇದನ್ನೆ ಪ್ರಕಟಪಡಿಸಬೇಕಾಗುತ್ತದೆ; ಅನ್ಯ ದಳಗಳು ಅದಕ್ಕೆ ಪ್ರಜಾತಂತ್ರದ ಅಧಿಕಾರವನ್ನು ಸರಿಯಾದ ಅರ್ಥದಲ್ಲಿ ಉಪಯೋಗಿಸಲು ಸಜ್ಜುಗೊಳಿಸಿಲ್ಲ. ಈ ಅವ್ಯವಸ್ಥೆ ಮತ್ತು ಅಶಿಸ್ತಿನ ಆಳ ಎಷ್ಟಿತ್ತು, ಅದು ಚುನಾವಣೆಯ ಮೇಲೆ ಯಾವ ಪರಿಣಾಮ ಬೀರಿತು. ಅದನ್ನು ಹೇಗೆ ತಡೆಗಟ್ಟಬೇಕು. ಕಾರ್ಯಸಮಿತಿಯು ಒಂದು ಉಪಸಮಿತಿಯನ್ನು ಆಯ್ಕೆ ಮಾಡಿತು ಮತ್ತು ಅದರ ಖಂಡನೆ, ನಮಗೆ ದೊರಕುವುದು.

**ಕಾಂಗ್ರೆಸ್ ಟಿಕೆಟ್ ಈಗ ವಿಜಯದ ಟಿಕೆಟ್ ಅಲ್ಲ**

ಮೇಲೆ ತಿಳಿಸಿದ ಪರಿಮಿತಿಯ ಪ್ರಕಾರ, ಕೇವಲ ಚುನಾವಣೆಯ ಪರಿಣಾಮ ಮಾತ್ರ ಅಲ್ಲ, ಇಡೀ ಚುನಾವಣೆಯ ಆಂದೋಲನದ ವಿಶ್ಲೇಷಣೆಯನ್ನು ಕೂಡ ಮಾಡಬಹುದು. ಪ್ರಥಮವಾಗಿ ಇದನ್ನು ನಿರ್ವಿವಾದದ ರೂಪದಲ್ಲಿ ಹೇಳಬಹುದು. ಕಾಂಗ್ರೆಸ್ ತುಂಬಾ ವೇಗದಲ್ಲಿ ಅಲೋಕ ಪ್ರಿಯತೆಯನ್ನು ಪಡೆಯುತ್ತಿದೆ. ಚುನಾವಣೆಯ ಪರಿಣಾಮದ ಹೊರತಾಗಿ, ಜನತೆ ಯಾವ ಜ್ಞಾನವನ್ನು ಪಡೆಯಲು ಎರಡನೇ

ದಳದ ಮಾತನ್ನು ಕೇಳಿ ಅದಕ್ಕೆ ನೆರವನ್ನು ನೀಡಿತು. ಎಲ್ಲಿ ವಿರೋಧಿ ದಳದ ಶಕ್ತಿ ನೋಡಿತೋ, ಅಲ್ಲಿ ವಿರೋಧಿ ದಳದ ಶಕ್ತಿಯನ್ನು ಗೆಲ್ಲಿಸಲು ಪ್ರಯತ್ನಿಸಿತು. ಇವೆಲ್ಲ ಮಾತುಗಳಿಂದ ಜನತೆ ಪರಿವರ್ತನೆಯನ್ನು ಬಯಸುತ್ತದೆ ಎಂದು ತಿಳಿದುಕೊಳ್ಳಬಹುದು. ಕಾಂಗ್ರೆಸ್ ಗೆದ್ದುಕೊಂಡರೂ ಅದಕ್ಕೆ ಬಹುಮತ ದೊರಕಿಲ್ಲ ಮತ್ತು ಮತಗಳು ಕೂಡ ಕಡಿಮೆಯಾಗಿದೆ. ಯಾವ ಭಾರಿ ಬಹುಮತದಿಂದ ಕಾಂಗ್ರೆಸ್ ಪ್ರತಿಸ್ಪರ್ಧಿ ಸ್ಥಾನಗಳಿಗೆ ಗೆಲುವನ್ನು ಸಂಪಾದಿಸಿತ್ತೋ ಅದು ಈಗ ಭೂತಕಾಲದ ಮಾತಾಗಿದೆ. ಈಗ ಕಾಂಗ್ರೆಸ್ ಟಿಕೆಟ್ ವಿಜಯದ ಟಿಕೆಟ್ ಆಗಿ ಪರಿಣಮಿಸಲಿಲ್ಲ. ತುಂಬಾ ಸ್ಥಳಗಳಲ್ಲಿ ಕಾಂಗ್ರೆಸ್ ಸಂಕಟದಲ್ಲಿ ಬೀಳುವ ಪರಿಸ್ಥಿತಿ ಬಂದರೂ ಸ್ವಲ್ಪದರಲ್ಲಿಯೇ ಪಾರಾಗಿದೆ. ಕಾಂಗ್ರೆಸ್ಸಿನ ಗೆಲುವು ಜನತೆಯ ಸಮರ್ಥನೆಯ ಕಾರಣದಿಂದ ಅಲ್ಲ, ಆದರೆ ಅನ್ಯ ಪಕ್ಷಗಳ ತಾಂತ್ರಿಕ ಸಂಘಟನಾತ್ಮಕ ದುರ್ಬಲತೆಯ ಕಾರಣದಿಂದ ಆಗಿದೆ. ಚುನಾವಣೆಯ ಅನುಭವ, ಜ್ಞಾನ ಮತ್ತು ತಾಂತ್ರಿಕ ತರಬೇತಿ ಆಧಾರದ ಮೇಲೆ ಈ ಆಶೆಯನ್ನು ಇಟ್ಟುಕೊಳ್ಳಬಹುದು. ಕಾಂಗ್ರೆಸ್ ಕೂಡ ಸ್ಥಾನ ಭ್ರಷ್ಟವಾಗುವ ದಿನ ದೂರ ಇಲ್ಲ.

**ಜನತೆ ಕಮ್ಯುನಿಸ್ಟ್ ಪಕ್ಷದ ಅಪಾಯದ ಬಗ್ಗೆ ಜಾಗರೂಕವಾಗಿದೆ**

ಪಶ್ಚಿಮ ಬಂಗಾಳ, ಆಂಧ್ರ, ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಕಾಂಗ್ರೆಸ್ ಶಕ್ತಿಯ ಬಲ ಮತ್ತು ಉಳಿದ ನಾಲ್ಕೂ ಕಡೆ ಸಾಮಾನ್ಯವಾಗಿ ಹಾಸ್ಯವೇ ಎದ್ದು ಕಾಣುತ್ತಿತ್ತು. ಈ ರಾಜ್ಯಗಳಲ್ಲಿ ಕಮ್ಯುನಿಸ್ಟೇತರ ಪಕ್ಷಗಳಿಗೆ ಸಮರ್ಥನೆಯ ಅಭಾವ ಮತ್ತು ಸಮಾಜವಾದೋತ್ತರ ಪಕ್ಷಗಳಿಗೆ, ಬೇರೆಡೆಗೆ ಗೆಲುವು ಈ ಮಾತನ್ನು ಸೂಚಿಸುತ್ತವೆ. ಜನತೆ ಕಮ್ಯುನಿಸ್ಟ್ ಪಕ್ಷದ ಸಂಕಟದ ಬಗ್ಗೆ ಎಚ್ಚತ್ತಿದೆ. ಕಾಂಗ್ರೆಸ್ ಈ ಭಾವನೆಗಳಿಂದ ಸಂಪೂರ್ಣವಾಗಿ ಲಾಭವನ್ನು ಪಡೆಯುತ್ತಿದೆ. ಕಮ್ಯುನಿಸ್ಟ ಪಕ್ಷವು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕೆಲವು ಪ್ರಗತಿಯನ್ನು ಸಾಧಿಸಿದೆ. ಜನತೆ ಯಾವುದೇ ಸ್ಥಿತಿಯನ್ನು ಸಹನೆ ಮಾಡುವುದಿಲ್ಲ. ಕಮ್ಯುನಿಸ್ಟ್ ವರ್ಚಸ್ಸು ಪ್ರತಿಷ್ಠಾಪನೆ ಹೊಂದುವತನಕ ಜನತೆ ಯಾವ ಸ್ಥಿತಿಯನ್ನು ಸಹನೆ ಮಾಡುವುದಿಲ್ಲ. ಕಮ್ಯುನಿಸ್ಟ ಪಕ್ಷಕ್ಕೆ ಕೂಡ ಇದು ಗೊತ್ತಿದೆ. ಆದ ಕಾರಣ ಅದು ಅನ್ಯ ಪಕ್ಷಗಳೊಡನೆ ಕೂಡಿಕೊಂಡು ಜಂಟಿಯಾಗಿ ಪಕ್ಷ ಕಟ್ಟಿ, ಕಾಂಗ್ರೆಸ್‌ನಲ್ಲಿ ಪ್ರವೇಶ ಮಾಡಿ ಕೆಲಸ ಮಾಡುವ ನೀತಿಯನ್ನು ತನ್ನದಾಗಿಸಿತು. ಅದಕ್ಕೆ ತನ್ನ ಹೆಸರಿನಲ್ಲಿ ವ್ಯಾಪಕವಾದ ಗೆಲುವನ್ನು ಪಡೆಯುವ ಆಶೆ ಇರಲಿಲ್ಲ. ಯಾವ ಕಷ್ಟವನ್ನು ಜನತೆ ಗುರುತಿಸಿದೆಯೋ ಅದಕ್ಕೆ ಕಾಂಗ್ರೆಸ್ ಜನ ಎಚ್ಚೆತ್ತಕೊಂಡಿಲ್ಲ ಎಂಬುದು ಸ್ಪಷ್ಟವಾಗಿದೆ.

**ಸಮಾಜವಾದೇತರರ ಬಗ್ಗೆ ಲಕ್ಷ್ಯ**

ಸಮಾಜವಾದೇತರ ಶಕ್ತಿಗಳು ನಿಶ್ಚಯವಾಗಿಯೂ ಜನತೆಯ ಮೇಲೆ ಒಂದು

ಆಳವಾದ ಮುದ್ರೆಯನ್ನು ಬೀರಿದೆ. ಅವರ ಗೆಲುವು ಮಹತ್ವಪೂರ್ಣವಾದದ್ದು. ಆದರೆ ಅವರು ಜನಹಿತ ಪ್ರಶ್ನೆಗಳನ್ನು ತೆಗೆದುಕೊಂಡು ನಡೆದರು. ಆದಕಾರಣ ಅವರನ್ನು ಸ್ವಾರ್ಥದ ಸಂರಕ್ಷಕರು ಎಂದು ಕೆಟ್ಟ ಹೆಸರು ಕೊಡಬಾರದು.

**ಕೆಟ್ಟದ್ದು ಕೊನೆಗಾಣಲಿಲ್ಲ**

ಧಾರ್ಮಿಕ ಮತ್ತು ಕ್ಷೇತ್ರೀಯ ಪಕ್ಷಗಳು ಹಿಂದೆ ಸರಿದರೂ, ಕೆಟ್ಟದ್ದೆಲ್ಲ ಕೊನೆಗಂಡಿತು ಎಂದು ಹೇಳುವುದು ತಪ್ಪಾಗುತ್ತದೆ. ನಿಜವಾಗಿಯೂ ಕಾಂಗ್ರೆಸ್ ಮತ್ತು ಅನ್ಯ ಪಕ್ಷಗಳ ಸಂತೋಷಕರಣದ ನೀತಿಯಿಂದ, ಅವರಿಗೆ ಹೊಸ ಜೀವನ ದೊರಕಿತ್ತು. ದ್ರಾವಿಡ ಮುನ್ನೇತರು ಖಜಗಮ್‌ದ ಸಫಲತೆ ಚಿಂತೆಯ ವಿಷಯವಾಗಿರಲಿಲ್ಲ. ಆದರೆ ರಾಜಾಜಿಯವರಿಂದ ಅದರ ಸಮರ್ಥನೆ ಮತ್ತು ಮದ್ರಾಸ್ ದ್ರಾವಿಡ ಕಜಗಮ್ ಸಂಗಡ ಕಾಂಗ್ರೆಸ್ಸಿನ ಗುಪ್ತ ಒಪ್ಪಂದ. ನಿಶ್ಚಿತವಾಗಿಯೂ ತುಂಬಾ ಭಯಾನಕವಾದದ್ದು. ಮುಸ್ಲಿಮ್ ಲೀಗ್ ದೇಶದ ತುಂಬ ತನ್ನ ಬಲೆಯನ್ನು ಹರಡಿರಲಿಲ್ಲ, ಆದರೆ ಮುಸ್ಲಿಮ್ ಸಂಪ್ರದಾಯವಾದಿ ಮತ್ತು ರಿಪಬ್ಲಿಕನ್ನರ ಗಠಬಂಧನ ಕಾಂಗ್ರೆಸ್ಸಿನಿಂದ ಟಿಕೆಟ್ ಕೊಡುವದು. ಮುಸ್ಲಿಮ್ ಪ್ರತ್ಯೇಕತಾವಾದಿಯ ಬಗ್ಗೆ ಕಾಂಗ್ರೆಸ್ಸಿನಿಂದ ಮುಖಸ್ತುತಿ ಮತ್ತು ಸುರಕ್ಷತೆಗೆ ಘಾತಕವಾಗುವ ಸಂಭವವಿರುತ್ತದೆ. ಜನತೆ ಸಾಮಾನ್ಯವಾಗಿ ರಾಷ್ಟ್ರಭಕ್ತಿ ಮತ್ತು ಐಕ್ಯತೆಯಲ್ಲಿ ನಿಷ್ಠೆಯನ್ನು ಇಟ್ಟುಕೊಂಡಿದೆ. ಆದಕಾರಣ ಅವರನ್ನು ಎಚ್ಚರಿಸುವ ಮತ್ತು ಸಂಘಟಿತಗೊಳಿಸುವ ಕಾರ್ಯವನ್ನು ಮಾಡಬೇಕು. ಇದರಿಂದ ಅವರು ಅಧಿಕಾರ ಲೋಭಿ ಶಕ್ತಿಗಳ ಬೇಟೆಯ ಮೃಗವಾಗಬಾರದು.

**ಇದು ಸಮಯಸಾಧಕತನ**

ಕಾಂಗ್ರೆಸ್ ಶಾಸನದ ಕರ ನೀತಿಯನ್ನು ಜನತೆ ವ್ಯಾಪಕವಾಗಿ ವಿರೋಧಿಸಿತು. ಸಹಕಾರಿ ಕೃಷಿ ನೀತಿಯ ಬಗ್ಗೆ ರೈತರು ಬಂಡಾಯಕ್ಕಿಳಿದರು ಮತ್ತು ಕಾಂಗ್ರೆಸ್ಸಿಗರ ಗೋ ಮತ್ತು ದೇಶದ ರಕ್ಷಣೆಯ ವಿಷಯದಲ್ಲಿ ವರ್ತಿಸಿದ ನೀತಿಯ ಬಗ್ಗೆ ಘೋರ ಅಸಂತೋಷವನ್ನು ಪ್ರಕಟಿಸಿದರು. ಚುನಾವಣೆಯ ಪ್ರಚಾರದಲ್ಲಿ ಕಾಂಗ್ರೆಸ್ ಸಹಿತ ಎಲ್ಲ ಪಕ್ಷಗಳು ಈ ವಿಷಯದಲ್ಲಿ ಒಂದೇ ಭಾಷೆಯನ್ನು ಆಡುತ್ತದೆ. ಇದರ ಆಧಾರದ ಮೇಲೆ ನಾನು ಈ ನಿರ್ಣಯವನ್ನು ಕೈಗೊಂಡಿದ್ದೇನೆ. ಕಾಂಗ್ರೆಸ್ ಧುರೀಣರು ತಮ್ಮ ಭಾಷಣದಲ್ಲಿ ಎಲ್ಲಿಯೂ ಕರಗಳ ಹೆಸರನ್ನು ಎತ್ತಿಲ್ಲ. ಸಹಕಾರಿ ಕೃಷಿಯ ಬಗ್ಗೆ ಕೆಲವು ಕಡೆ ತಮ್ಮ ವಿಚಾರಗಳನ್ನು ಮಂಡಿಸಿದ್ದರು. ಆದರೆ ಕಾಂಗ್ರೆಸ್ ಕಾರ್ಯಕರ್ತರು ಹಳ್ಳಿಗಳಿಗೆ ಹೋಗಿ ಹೀಗೆ ತಿಳಿಸಿದರು–ಕಾಂಗ್ರೆಸ್ ಇಂಥ ತಪ್ಪು ವಿಚಾರಗಳನ್ನು ಯಾವಾಗಲೂ ತಿಳಿಸುವುದಿಲ್ಲ. ಚುನಾವಣೆಯಲ್ಲಿ

ಕಾಂಗ್ರೆಸ್, ಕಮ್ಯುನಿಸ್ಟ್, ಪ್ರಭಾ ಸಮಾಜವಾದಿ ಎಲ್ಲ ಪಕ್ಷಗಳು ಗೋರಕ್ಷಣಾ ನೀತಿಯನ್ನು ಸಮರ್ಥಿಸಿ ತಮ್ಮ ಕ್ಷೇತ್ರಗಳಿಗೆ ಹೋದರು. ಅವರು ದೇಶದಲ್ಲಿ ಎಲ್ಲಿಯೂ ಗೋಹತ್ಯೆ ಆಗುವುದಿಲ್ಲವೆಂದು ಸುಳ್ಳು ಪ್ರಚಾರವನ್ನು ಮಾಡಿದರು. ಈ ದಳಗಳು ತಮ್ಮ ನೈಜತೆಯನ್ನು ಅಡಗಿಸಿಕೊಂಡು, ಎಲ್ಲರಿಗಿಂತ ಮುಂದೆ ಹೋಗಿ ತಾವೇ ರಕ್ಷ ಕರ್ತರು ಎಂಬುದಾಗಿ ಸಿದ್ಧಪಡಿಸಲು ಪ್ರಯತ್ನಪಟ್ಟರು. ಯಾವ ಮಾತುಗಳನ್ನು ಚುನಾವಣೆಯ ಪ್ರಚಾರದಲ್ಲಿ ಮುಕ್ತವಾಗಿ ಹೇಳಲಿಕ್ಕೆ ಸಾಧ್ಯವಿಲ್ಲವೋ, ಅದನ್ನು ಘೋಷಣಾ ಪತ್ರದಿಂದ ತೆಗೆದುಹಾಕಿ ಅದಕ್ಕನುಸಾರವಾಗಿ ನೀತಿಯನ್ನು ಕೈಗೊಳ್ಳಬೇಕೆಂಬುದು ಪ್ರಾಮಾಣಿಕ ಬೇಡಿಕೆಯಾಗಿತ್ತು.

**ಜನಸಂಘ ತನ್ನ ಹೆಜ್ಜೆಯನ್ನು ಮುಂದಿಟ್ಟಿತು**

ಭಾರತೀಯ ಜನಸಂಘವು ಋತುವಿನ ಪಕ್ಷವಾಗದೇ, ಭಾರತದ ರಾಜನೀತಿಯಲ್ಲಿ ನಿರ್ದಿಷ್ಟವಾದ ಸ್ಥಾನ ಪಡೆದಿದೆ ಎಂಬುದಾಗಿ ೧೯೫೭ರ ಚುನಾವಣೆಯ ನಂತರ ಸಿದ್ಧಪಡಿಸಿತು. ೧೯೬೨ರ ಚುನಾವಣೆ ಅದರ ವಿಕಾಸದ ಸಾಧ್ಯತೆಯನ್ನು ಪ್ರಕಟಿಸಿತು. ಕೆಲವು ತುಂಬಾ ಪ್ರಚಾರಕ್ಕೊಳಗಾದ ಮತ್ತು ತುಂಬಾ ವೀಕ್ಷಿಸಿದ ಕ್ಷೇತ್ರಗಳ ಪರಿಣಾಮ ಅದರ ಸಾಮಾನ್ಯ ಪ್ರಗತಿಯನ್ನು ಮುಚ್ಚಿದ್ದವು; ಆದರೆ ಜನಸಂಘವು ತನ್ನ ಹೆಜ್ಜೆಯನ್ನು ಮುಂದಿಡುತ್ತಿದೆ ಎಂದು ಯಾವುದೇ ರಾಜನೀತಿಯ ವಿದ್ಯಾರ್ಥಿ ಮನಗಾಣದೇ ಇರುವುದಿಲ್ಲ. ಆದರೆ ನಾವು ಇದರಲ್ಲೇ ಸಂತೋಷವನ್ನು ಕಂಡು ಸುಮ್ಮನೇ ಕುಳಿತುಕೊಳ್ಳಲು ಸಾಧ್ಯವಿಲ್ಲ. ನಮಗೆ ಸಿಕ್ಕ ಗೆಲುವಿನಿಂದ ನಮ್ಮ ವಿಶ್ವಾಸ ಅವಶ್ಯವಾಗಿಯೂ ಹೆಚ್ಚಾಗುವುದು ತನ್ನ ವೈಫಲ್ಯತೆಯನ್ನು ಹುಡುಕಬೇಕು ಮತ್ತು ಅದನ್ನು ದೂರಮಾಡಲು ಪ್ರಯತ್ನಪಡಬೇಕು. ಚುನಾವಣೆಯಲ್ಲಿ ನಮಗೆ ಜನತೆಯ ಅಪಾರ ಪ್ರೇಮ ಮತ್ತು ಅದರಿಂದ ತುಂಬಾ ಅಪೇಕ್ಷೆಯ ಪರಿಚಯವಾಗಿದೆ. ಅದೇ ನಮ್ಮ ಸಂಪತ್ತು. ನಾವು ನಮ್ಮ ಉದ್ದೇಶವನ್ನು ನೆನಪಿಸಿಕೊಂಡು ಸೀದಾಭಾವ ಮತ್ತು ನಿಸ್ವಾರ್ಥ ಸ್ವಭಾವದಿಂದ, ಈ ಮಹಾನ್ ಕಾರ್ಯ ಪೂರ್ಣಗೊಳಿಸಲು ಒಂದಾಗಬೇಕು. ಇದರಿಂದ ನಾವು ಸಮರ್ಥ ಮತ್ತು ಸಬಲರಾಗಬಹುದು ಮತ್ತು ದೇಶದ ಆಶೆ, ಆಕಾಂಕ್ಷೆ ಮತ್ತು ಆಹ್ವಾನಗಳನ್ನು ಪೂರ್ಣಗೊಳಿಸಬಹುದು.

* * * * *

# ಸಮೃದ್ಧ ಭಾರತಕ್ಕಾಗಿ ಪುನರ್ ನಿರ್ಮಾಣ ಮಾಡೋಣ

ನಾವು ನಮ್ಮ ಅರ್ಥವ್ಯವಸ್ಥೆಯ ಕುರಿತಾಗಿ ಸರಿಯಾದ ಚಿಂತನೆ ಮಾಡಬೇಕು. ಅರ್ಥವ್ಯವಸ್ಥೆ ಹೇಗಿರಬೇಕು? ನಮ್ಮ ಮಾನವೀಯತೆಯನ್ನು ಹಾಳು ಮಾಡದೇ; ಅದರ ಮೇಲೆ ವಿಪರೀತ ಪ್ರಭಾವ ಬೀರದ ಮತ್ತು ಅದರ ಮುಖಾಂತರ ನಾವು ಮಾನವೀಯತೆಯಿಂದ ಮೇಲೇರಿ ದೈವತ್ವವನ್ನು ಪಡೆಯುವದಾಗಬೇಕು, ಏಕೆಂದರೆ ನಮ್ಮಲ್ಲಿ ಮಾನವ ಜೀವನದ ಸಂಪೂರ್ಣ ವಿಕಾಸ ಅದರ ದೈವತ್ವವದ ರೂಪದಲ್ಲಿ ಆವಿರ್ಭಾವವಾಗಿದೆ. ಈ ಉದ್ದೇಶದ ಸಿದ್ಧಿಗೋಸ್ಕರ ಅರ್ಥವ್ಯವಸ್ಥೆಯ ಪ್ರತಿಷ್ಠೆ ಏನಾಗಬೇಕು, ಅದನ್ನು ಚಿಂತಿಸೋಣ.

**ಅರ್ಥವ್ಯವಸ್ಥೆಯ ಸದಾಚಾರಗಳು**

ಜನರ ಉದರ ಪೋಷಣೆಗಾಗಿ, ಜೀವನದ ವಿಕಾಸಕ್ಕಾಗಿ ಮತ್ತು ರಾಷ್ಟ್ರದ ರಕ್ಷಣೆ ಹಾಗೂ ವಿಕಾಸಕ್ಕಾಗಿ ಯಾವ ಮುಖ್ಯ ಸಾಧನೆಗಳ ಅವಶ್ಯಕತೆಯಿದೆಯೋ ಅವುಗಳ ಉತ್ಪಾದನೆ ಅರ್ಥವ್ಯವಸ್ಥೆಯ ಗುರಿಯಾಗಬೇಕು. ಕನಿಷ್ಠ ಮಟ್ಟದ ಗೌರವದ ನಂತರ ಇನ್ನೂ ಹೆಚ್ಚು ಸಮೃದ್ಧಿ ಹಾಗೂ ಸುಖಕ್ಕಾಗಿ ಅರ್ಥೋತ್ಪಾದನೆ ಮಾಡಬೇಕೋ ಬೇಡವೋ ಎನ್ನುವ ಪ್ರಶ್ನೆ ಸ್ವಾಭಾವಿಕ ಹುಟ್ಟಿಕೊಳ್ಳುವುದು. ಪಾಶ್ಚಿಮಾತ್ಯ ದೇಶಗಳ ಅರ್ಥಶಾಸ್ತ್ರವಂತೂ ಬೇಡಿಕೆಗಳನ್ನು ಸಮಾನವಾಗಿ ಹೆಚ್ಚಿಸುತ್ತ ಹೋಗುವುದು ಮತ್ತು ಅವುಗಳ ಅವಶ್ಯಕತೆಗಳನ್ನು ನಿರಂತರವಾಗಿ ಪೂರೈಸುವುದನ್ನು ಮಾತ್ರ ವಿಕಲ್ಪವೆಂದು ತಿಳಿಯುತ್ತಿದೆ. ಈ ವಿಷಯದಲ್ಲಿ ಅದರ ಯಾವುದೇ ಹೆಚ್ಚಿನ ಗೌರವ ಇಲ್ಲ. ಸಾಮಾನ್ಯವಾಗಿಯಂತೂ ಮೊದಲು ಇಚ್ಛೆಯಾಗುತ್ತದೆ ಮತ್ತು ನಂತರ ಅದರ ಪೂರೈಕೆಗಾಗಿ ವಸ್ತುಗಳನ್ನು ಕಲೆ ಹಾಕಲಾಗುತ್ತದೆ; ಆದರೆ ಇಂದು ಪರಿಸ್ಥಿತಿ ಹೀಗಾಗಿದೆ ಯಾವುದನ್ನು ಉತ್ಪಾದನೆ ಮಾಡಲಾಗುತ್ತಿದೆಯೋ, ಅದರ ಉಪಯೋಗವಾಗಬೇಕು. ಅದಕ್ಕಾಗಿ ಜನರಲ್ಲಿ ಕಾಮನೆಗಳನ್ನು ಹುಟ್ಟು ಹಾಕಲಾಗುತ್ತಿದೆ. ಮಾರ್ಕೆಟ್ಟಿಗಾಗಿ ವಸ್ತುಗಳನ್ನು ಹುಟ್ಟು ಹಾಕುವ ಬದಲಾಗಿ ಹುಟ್ಟಿ ಹಾಕಿದವುಗಳಿಗಾಗಿ ಮಾರ್ಕೆಟ್ ಹುಡುಕುವುದು, ಸಿಗದಿದ್ದರೆ ಹೊಸ ಮಾರ್ಕೆಟ್‌ನ್ನು ಹುಟ್ಟುಹಾಕುವುದು ಇಂದಿನ ಅರ್ಥನೀತಿಯ ಪ್ರಮುಖ ಅಂಗವಾಗಿದೆ. ಪ್ರಾರಂಭದಲ್ಲಿ ಉತ್ಪಾದನೆಯು

ಉಪಭೋಗದ ಅನುಸರಣೆ ಮಾಡುತ್ತಿತ್ತು. ಈಗ ಉಪಭೋಗ ಉತ್ಪಾದನೆಯ ಅನುಚರನಾಗಿದೆ.

ನಾವು ಚಹಾದ ಉದಾಹರಣೆ ತೆಗೆದುಕೊಳ್ಳೋಣ. ಚಹದ ಬೇಡಿಕೆ ಇತ್ತು. ಅದಕ್ಕಾಗಿಯೇ ಚಹಾ ಉತ್ಪತ್ತಿ ಮಾಡಲಾಗಲಿಲ್ಲ. ಆದರೆ ಚಹಾದ ಉತ್ಪತ್ತಿ ಮಾಡಲಾಯಿತು ಮತ್ತು ಅದಕ್ಕಾಗಿಯೇ ನಮಗೆ ಕುಡಿಯುವುದನ್ನು ಕಲಿಸಲಾಯಿತು. ಈಗ ನಾವು ಚಹಾ ಕುಡಿಯುತ್ತಿದ್ದೇವೆ. ಅದೀಗ ನಮ್ಮ ಜೀವನದ ಒಂದು ಭಾಗವಾಗಿಬಿಟ್ಟಿದೆ. ಇದೇ ಪ್ರಕಾರ ನಾವು ಇತ್ತಿತ್ತಲಾಗಿ ವನಸ್ಪತಿ ತುಪ್ಪದ ಉಪಯೋಗ ಮಾಡುತ್ತಿದೇವೆ. ನಾವೇನು ಯಾವಾಗಲಾದರೂ ಇದರ ಬೇಡಿಕೆ ಇಟ್ಟಿದ್ದೇವೆಯೇ? ವಾಸ್ತವದಲ್ಲಿ ವನಸ್ಪತಿ ಬೆಳೆಯಲಾಯಿತು, ಮತ್ತು ಪುನರ್ ನಮಗೇ ಅದರ ಉಪಭೋಗ ಕಲಿಸಲಾಯಿತು. ಯಾವುದು ಉತ್ಪತ್ತಿಯಾಗುತ್ತದೆ, ಆದಾಗ್ಯೂ ಅದರ ಉಪಭೋಗ ಮಾಡದಿದ್ದರೆ ಅಲ್ಲಿ ವಸ್ತು ಅಗ್ಗವಾಗುವುದು. ೧೯೩೦–೩೨ ಅಗ್ಗವಾಗುವಿಕೆಯ ಕಾಲ ನಮಗೆಲ್ಲ ಗೊತ್ತಿರಬಹುದು. ಆ ಸಮಯದಲ್ಲಿ ಸಾಮಾನೇನೋ ಇತ್ತು ಆದರೆ ವಿಕ್ರಯವಿರಲಿಲ್ಲ. ಕಾರಣ ಕಾರಖಾನೆಗಳೆಲ್ಲ ಮುಚ್ಚತೊಡಗಿದ್ದವು ದಿವಾಳಿಯಾಗತೊಡಗಿದ್ದವು ಹಾಗೂ ನಿರುದ್ಯೋಗ ಹೆಚ್ಚಾಗತೊಡಗಿತ್ತು. ಆದ್ದರಿಂದ ಇಂದು ತಯಾರಾದ ವಸ್ತು ಖರ್ಚಾಗಬೇಕೆನ್ನುವುದು ಮಹತ್ವದ ಸಂಗತಿಯಾಗಿದೆ.

(ವ್ಯವಸ್ಥಾಪಕನೇ ಸಮಕಾಲೀನ ಸಂಪಾದಕ) ಕೆಲವು ವರ್ಷಗಳ ಹಿಂದೆ ಒಬ್ಬ ವರಿಷ್ಠ ಪತ್ರಕರ್ತರು ಅಮೇರಿಕಾಗೆ ಹೋಗಿದ್ದರು. ಅಲ್ಲಿಂದ ಮರಳಿದ ಬಳಿಕ ಅವರು ಒಂದು ರೋಚಕ ಘಟನೆಯನ್ನು ಹೇಳಿದರು. ಅಲ್ಲಿ ಆಲೂಗಡ್ಡೆ ಸುಲಿಯಲು ಚೂರಿ ತಯಾರಿಸುವ ಒಂದು ಕಾರಖಾನೆ ಇದೆ. ಜನರ ಅಶ್ಯಕತೆಗಿಂತಲೂ ಅಧಿಕವಾಗಿ ಆ ಕಾರಖಾನೆಯು ಉತ್ಪಾದನೆ ಮಾಡತೊಡಗಿತು. ಕಾರಣ ಜನರು ಹೆಚ್ಚು ಸಂಖ್ಯೆಯಲ್ಲಿ ಚೂರಿ ಖರೀದಿಸುವಂತೆ ಯಾವುದಾದರೂ ಉಪಾಯ ಹುಡುಕುವ ಪ್ರಶ್ನೆ ಉದ್ಭವವಾಯಿತು. ಕಾರಖಾನೆಯ ವಿಕ್ರಯದಾತಕ ಸಭೆ ಕರೆಯಲಾಯಿತು. ಒಂದು ಸಲಹೆ ಪ್ರಸ್ತುತಪಡಿಸಲಾಯಿತು. ಒಂದು ವೇಳೆ ಚೂರಿಯ ಅಲಗಿನ ಬಣ್ಣ ಆಲೂಗಡ್ಡೆಯ ಸಿಪ್ಪೆಯ ಹಾಗೆ ಮಾಡಿದರೆ ಆಲೂಗಡ್ಡೆ ಸುಲಿದ ನಂತರ ಸಿಪ್ಪೆಯ ಜೊತೆಗೆ ಚೂರಿಯನ್ನು ಕಸದ ಬುಟ್ಟಿಯಲ್ಲಿ ಎಸೆಯುವ ಸಂದರ್ಭ ಹೆಚ್ಚಾಗಬಹುದು. ಈ ಪ್ರಕಾರವಾಗಿ ವಸ್ತುವಿನ ಮಾರಾಟ ಹೆಚ್ಚಾಗಬಹುದು. ಚೂರಿಯನ್ನು ಆಕರ್ಷಣೀಯವಾಗಿ ಮಾಡಲು ಸುಂದರ ಪ್ಯಾಕಿಂಗ್ ವ್ಯವಸ್ಥೆ ಮಾಡಲಾಯಿತು. ಈಗ ಅರ್ಥವ್ಯವಸ್ಥೆ ಉಪಭೋಗ ಪ್ರಧಾನವಾಗದೇ ವಿನಾಶವಾಗಿದೆ. ಹಳೆಯದನ್ನು ಎಸೆಯಿರಿ ಹೊಸದನ್ನು ಖರೀದಿಸಿ. ಹೊಸದನ್ನು ಖರೀದಿಸುವ

ಬೇಡಿಕೆ ಗ್ರಾಹಕರಲ್ಲಿ ಹುಟ್ಟಿಸುವುದು, ಬೇಡಿಕೆ ಪೂರ್ಣಗೊಳಿಸುವುದಲ್ಲ, ಬೇಡಿಕೆ ಹುಟ್ಟಿಸುವುದು; ಇದೇ ಇಂದು ಅರ್ಥವ್ಯವಸ್ಥೆಯ ಗುರಿಯಾಗಿದೆ.

**ಪ್ರಕೃತಿಯ ಅನಾದರಣೆ ಬೇಡ**

ಉತ್ಪಾದನೆಯ ಸಂಬಂಧ ಪ್ರಾಕೃತಿಕ ಸಾಧನಗಳಿಂದಲೂ ಇದೆ. ಒಂದು ವೇಳೆ ಬೇಕಾಬಿಟ್ಟಿ ಹೆಚ್ಚಿಸುತ್ತ ಹೋದಲ್ಲಿ ಈ ಪ್ರಾಕೃತಿಕ ಸಾಧನಗಳು ಎಲ್ಲಿಯವರೆಗೆ ನಮ್ಮೊಡನಿರುತ್ತವೆ? ಆದಾಗ್ಯೂ ಒಂದು ರೀತಿಯ ವಸ್ತು ವಿಕಲ್ಪ (substitute) ಹುಡುಕಲಾಗುತ್ತದೆ. ಅವರ ಈ ತರ್ಕದ ಒಳಾರ್ಥವನ್ನು ಸ್ವೀಕಾರ ಮಾಡಿದ ನಂತರವೂ ಹೇಳಬಹುದು. ಈ ಪ್ರಕೃತಿಯ ಸಂಪತ್ತು ಅಪಾರವಾಗಿದ್ದರೂ ಕೂಡಾ ಅದಕ್ಕೆ ತನ್ನದೇ ಆದ ಗೌರವವಿದೆ ಎಂದು. ಒಂದು ವೇಳೆ ತುಂಬಾ ತೀವ್ರ ಗತಿಯಿಂದ ಮತ್ತು ಅನಾವಶ್ಯಕವಾಗಿ ನಾವು ಅದನ್ನು ವ್ಯಯಿಸುತ್ತ ಹೋದಲ್ಲಿ ಒಂದು ದಿನ ಪಾಶ್ಚಾತ್ತಾಪಪಡಬೇಕಾಗುವುದು.

**ಪ್ರಕೃತಿಯೊಂದಿಗೆ ಸ್ವೇಚ್ಛಾಚಾರ**

ಪ್ರಕೃತಿ ಸಂಪತ್ತಿನ ಗೌರವದ ಚಿಂತನೆ ಮಾಡದೇ ಇದ್ದರೂ ಹೆಚ್ಚು ಕಡಿಮೆ ಪ್ರಕೃತಿಯ ವಿಭಿನ್ನ ವಸ್ತುಗಳ ಮಧ್ಯದಲ್ಲಿ ಒಂದು ಪರಸ್ಪರಾವಲಂಬಿ ಸಂಬಂಧವಿದೆಯೆಂದು ನಾವು ಒಪ್ಪಿಕೊಳ್ಳಲೇಬೇಕು. ಒಬ್ಬರಿಗೊಬ್ಬರು ಆಸರೆಯಲ್ಲಿ ನಿಂತಿರುವ ಮೂವರು ಹುಡುಗಿಯರಲ್ಲಿ ಒಂದು ವೇಳೆ ನಾವು ಒಬ್ಬಳ ಸ್ಥಿತಿಯಲ್ಲಿ ಬದಲಾವಣೆ ಮಾಡಿದರೆ, ಉಳಿದವರೀರ್ವರು ತಮ್ಮಷ್ಟಕ್ಕೆ ತಾವೇ ಬೀಳುತ್ತಾರೆ. ಇಂದಿನ ಅರ್ಥವ್ಯವಸ್ಥೆ ಮತ್ತು ಉತ್ಪಾದನೆಯ ಪದ್ಧತಿ ಈ ಅನುಕೂಲತೆಯನ್ನು ತುಂಬಾ ತೀವ್ರಗತಿಯಿಂದ ಬಿಗಡಾಯಿಸತೊಡಗಿದೆ. ಆ ಪರಿಣಾಮವಾಗಿ ನಾವು ಹೊಸ–ಹೊಸ ಇಚ್ಛಾ ಪೂರೈಕೆಗಾಗಿ ಹೊಸ–ಹೊಸ ಸಾಧನಗಳನ್ನು ಹುಡುಕುತ್ತಿದ್ದೇವೆ. ಅಲ್ಲಿ ಇನ್ನೊಂದೆಡೆ ಹೊಸ–ಹೊಸ ಪ್ರಶ್ನೆಗಳು ನಮ್ಮ ಸಂಪೂರ್ಣ ಸಂಸ್ಕೃತಿ ಮತ್ತು ಮಾನವೀಯತೆಯನ್ನು ಅಳಿಸಿಹಾಕಲು ಜನ್ಮ ತಳೆಯತೊಡಗಿದೆ.

ನಾವು ಪ್ರಕೃತಿಯಿಂದ ಎಷ್ಟು ಬೇಕು ಅಷ್ಟನ್ನು ಮಾತ್ರ ಪಡೆಯಬೇಕು. ಅದು ತನ್ನ ಕೊರತೆಯನ್ನು ಸ್ವಯಂ ಪೂರೈಕೆ ಮಾಡಿಕೊಳ್ಳುವ ಹಾಗಿರಬೇಕು. ಮರದಿಂದ ಹಣ್ಣು ಪಡೆಯುವುದರಿಂದ ಅದಕ್ಕೆ ಹಾನಿಯಾಗುವುದಿಲ್ಲ, ಲಾಭವಾಗುತ್ತದೆ. ಆದರೆ ಭೂಮಿಯಿಂದ ಹೆಚ್ಚಿನ ಬೆಳೆ ಪಡೆಯುವ ಲೋಭದಲ್ಲಿ ನಾವು ಈ ರೀತಿಯ ರಾಸಾಯನಿಕಗಳ ಪ್ರಯೋಗ ಮಾಡುತ್ತಿದ್ದೇವೆ. ಅದರಿಂದ ಕೆಲ ದಿನಗಳ ನಂತರ ಅದರ ಉತ್ಪಾದನೆ ಶಕ್ತಿ ನಾಶವಾಗುವುದು. ಇಂದು ಅಮೇರಿಕಾ ದೇಶದಲ್ಲಿ

ಲಕ್ಷಾನು ಎಕರೆ ಭೂಮಿ ಈ ರೀತಿಯ ಸಾಗುವಳಿಯಿಂದ ಬಂಜರು ಆಗಿದೆ. ಈ ವಿನಾಶ ಲೀಲೆ ಎಲ್ಲಿಯವರೆಗೆ ನಡೆಯುವುದು?

ಕಾರಖಾನೆ ಮಾಲೀಕರು ಮಷೀನುಗಳಿಗಾಗಿ ಧನರಾಶಿಯ ವ್ಯವಸ್ಥೆ ಮಾಡುತ್ತಾರೆ. ಆದರೆ ಪ್ರಕೃತಿಯ ಈ ಕಾರಖಾನೆಗೆ ನಾವು ಯಾವುದೇ ಧನರಾಶಿಯ ಚಿಂತೆ ಮಾಡಬಾರದು. ಇದು ಹೇಗೆ ಸಾಧ್ಯ? ಈ ದೃಷ್ಟಿಯಿಂದ ವಿಚಾರಿಸಿದಾಗ ನಮ್ಮ ಅರ್ಥವ್ಯವಸ್ಥೆಯ ಉದ್ದೇಶ ಗೌರವಯುತ ಉಪಭೋಗವಲ್ಲ, ತುಂಬಾ ಸಂತುಲಿತವಾದ ಉಪಭೋಗವಾಗಿರಬೇಕು. ಉದ್ದೇಶಪೂರ್ಣ, ಸುಖಿ, ಅಭಿವೃದ್ಧಿಶೀಲ ಜೀವನಕ್ಕಾಗಿ ಯಾವ ಭೌತಿಕ ಸಾಧನೆಗಳ ಅವಶ್ಯಕತೆ ಇದೆಯೋ, ಅವುಗಳು ಅತ್ಯಾವಶ್ಯಕವಾಗಿ ದೊರಕುವಂತಾಗಬೇಕು. ಈಶ್ವರನ ಸೃಷ್ಟಿಯ ಅಧ್ಯಯನ ಮಾಡಿದಲ್ಲಿ ತಿಳಿಯುವುದೇನೆಂದರೆ– ಇಷ್ಟೆಲ್ಲ ವ್ಯವಸ್ಥೆಗಳನ್ನು ಆತನೇ ನಿರ್ಮಿಸಿದ್ದಾನೆ ಎಂದು. ಆದರೆ ಯಾವಾಗ ನಾವು ಇದನ್ನು ಅರಿತು ಭಗವಂತನು ಮನುಷ್ಯನನ್ನು ಕೇವಲ ಉಪಭೋಗದ ಪ್ರಾಣಿಯನ್ನಾಗಿ ಮಾಡಿದ್ದಾನೆ ಮತ್ತು ಅದರ ಬೇಕಾಬಿಟ್ಟಿ ಉಪಯೋಗಕ್ಕಾಗಿಯೇ ತನ್ನೆಲ್ಲ ಶಕ್ತಿ ವ್ಯಯಿಸುವುದು ಸರಿಯಾದುದಲ್ಲ. ಇಂಜಿನು ಪ್ರಾರಂಭಿಸಲು ಕಲ್ಲಿದ್ದಲು ಬೇಕು, ಆದರೆ ಕಲ್ಲಿದ್ದಲು ತಿನ್ನಲು ಇಂಜಿನ್ ಮಾಡಲಾಗಿಲ್ಲ. ಆದಾಗ್ಯೂ ಅದು ನಮ್ಮ ಪ್ರಯತ್ನವಾಗಿರುತ್ತದೆ. ಕಡಿಮೆ ಇಂಧನ ಬಳಕೆಯಿಂದ ಹೆಚ್ಚು ಶಕ್ತಿಯ ಉತ್ಪಾದನೆಯಾಗಬೇಕು. ಇದು ಉಳಿತಾಯದ ದೃಷ್ಟಿಕೋನವಾಗಿದೆ. ಮಾನವ ಜೀವನದ ಉದ್ದೇಶದ ಚಿಂತನೆ ಮಾಡಿ ನಾವು ಈ ರೀತಿಯ ವ್ಯವಸ್ಥೆ ಕೈಗೊಳ್ಳಬೇಕು–ಕನಿಷ್ಠ ಇಂಧನದಿಂದ ಅಧಿಕ ವೇಗದೊಂದಿಗೆ ನಮ್ಮ ಲಕ್ಷ್ಯದೆಡೆಗೆ ಸಾಗುವಂತಾಗಬೇಕು. ಆಗ ಈ ಅರ್ಥವ್ಯವಸ್ಥೆ ಮನುಷ್ಯತ್ವವಾಗುವುದು. ಇದು ಮಾನವನ ಒಮ್ಮುಖದ ವಿಚಾರ ಮಾಡದೇ, ಆತನ ಸಂಪೂರ್ಣ ಜೀವನದ ಮತ್ತು ಕೊನೆಯ ಉದ್ದೇಶದ ವಿಚಾರ ಮಾಡುವುದು. ಇದು ಸಂಹಾರಾತ್ಮಕವಾಗದೇ ಸೃಜನಾತ್ಮಕವಾಗುವುದು. ಇದು ಪ್ರಕೃತಿಯ ಶೋಷಣೆಯಲ್ಲಿ ಅವಲಂಬಿತವಾಗದೇ ಪೋಷಣೆಯಲ್ಲಿ ತೊಡಗುವುದು. ಶೋಷಣೆಯಲ್ಲಿ ಪೋಷಣೆ ನಮ್ಮ ಆಧಾರವಾಗಬೇಕು. ಪ್ರಕೃತಿಯ ಹೃದಯ ನಮಗೆ ಜೀವನದಾಯಿನಿಯಾಗಬೇಕು. ಇದೇ ವ್ಯವಸ್ಥೇಯನ್ನು ಮಾಡುವುದಾಗಬೇಕು.

**ಹಿಂಸಾತ್ಮಕ ಆರ್ಥಿಕ ಘೋಷಣೆಗಳು**

ಅರ್ಥವ್ಯವಸ್ಥೆಯ ಈ ಮಾನವೀಯ ಉದ್ದೇಶವಿದ್ದರೆ ಆರ್ಥಿಕ ಪ್ರಶ್ನೆಗಳೆಡೆಗೆ ನೋಡುವ ನಮ್ಮ ದೃಷ್ಟಿ ಸಂಪೂರ್ಣವಾಗಿ ಬದಲಾವಣೆಯಾಗುವುದು. ಪಾಶ್ಚಿಮಾತ್ಯ ಅರ್ಥವ್ಯವಸ್ಥೆಯಲ್ಲಿ, ಅದು ಬಂಡವಾಳಶಾಹಿಯಾಗಿರಬಹುದು, ಇಲ್ಲವೇ

ಸಮಾಜವಾದಿಯಾಗಿರಬಹುದು. ಮೌಲ್ಯಗಳಿಗೆ ತುಂಬಾ ಮಹತ್ವಪೂರ್ಣ ಹಾಗೂ ಕೇಂದ್ರೀಯ ಸ್ಥಾನ ಪ್ರಾಪ್ತವಾಗಿದೆ. ಅದರ ನಾಲ್ಕೂ ಕಡೆಗೆ ಸಂಪೂರ್ಣ ಆರ್ಥಿಕ ವಿಚಾರಗಳು ಗಿರಿಕಿ ಹೊಡೆಯುತ್ತಿರುತ್ತವೆ. ಒಬ್ಬ ನ್ಯಾಯವೇತ್ತನ ದೃಷ್ಟಿಯಿಂದ 'ಮೌಲ್ಯ' ಸಂಬಂಧದ ವಿಶ್ಲೇಷಣೆಯ ಏನೆಲ್ಲ ಮಹತ್ವವಿರಲಿ, ಆದರೆ ಅದರ ಆಧಾರದ ಮೇಲೆ ಯಾವ ಜೀವನದರ್ಶನ ನಿರ್ಮಾಣವಾಗಿದೆಯೋ ಅದು ತುಂಬಾ ಅಪೂರ್ವ, ಅಮಾನವೀಯ ಹಾಗೂ ಕೆಲವು ಅಂಶಗಳಲ್ಲಿ ನೀತಿಹೀನವಾದುದಾಗಿದೆ.

ಒಂದು ಉದಾಹರಣೆ ಕೊಡುವುದಾದರೆ–ಇತ್ತಿತ್ತಲಾಗಿ ಘೋಷಣೆ ಕೂಗಲಾಗುತ್ತಿದೆ – 'ಸಂಪಾದಿಸುವವ ಉಪಭೋಗಿಸುತ್ತಾನೆ' ಎಂದು. ಸಾಮಾನ್ಯವಾಗಿ ಈ ಘೋಷಣೆಯನ್ನು ಸಮತಾವಾದಿಗಳು ಕೂಗುತ್ತಾರೆ. ಆದರೆ – ಬಂಡವಾಳವಾಹಿಗಳೂ ಕೂಡಾ ಈ ಘೋಷಣೆಯ ಮೂಲದಲ್ಲಡಗಿರುವ ಸಿದ್ಧಾಂತದಿಂದ ಸಹಮತರಿಲ್ಲ ! ಆದಾಗ್ಯೂ ಈರ್ವರಲ್ಲಿ ಜಗಳವಿದ್ದರೆ ಅದು ಯಾರು ಎಷ್ಟು ಗಳಿಸುತ್ತಾರೆ ಎನ್ನುವ ಮಾತಿನ ಮೇಲೆಯೇ. ಬಂಡವಾಳಶಾಹಿಗಳು ಧೈರ್ಯ ಮತ್ತು ಬಂಡವಾಳಕ್ಕೆ ಮಹತ್ವ ಕೊಡುತ್ತಾರೆ. ಆ ಕಾರಣದಿಂದಲೇ ಉಪಭೋಗದಲ್ಲಿ ಅದರ ಪ್ರಮುಖ ಭಾಗವಿದ್ದರೆ, ಅದನ್ನವರು ಔಚಿತ್ಯವೆನ್ನುವುದುಂಟು. ಆದ್ದರಿಂದ ಅವರು ಶ್ರಮಿಕನಿಗೇ ಉಪಭೋಗದ ಅಧಿಕಾರ ನೀಡುತ್ತಾರೆ. ಈ ಎರಡೂ ವಿಚಾರಗಳು ಔಚಿತ್ಯಪೂರ್ಣವಾದವುಗಳಲ್ಲ. ವಾಸ್ತವವಾಗಿ ನಮ್ಮ ಘೋಷಣೆಗಳಿರಬೇಕು– 'ಸಂಪಾದಿಸುವವ ಉಪಭೋಗದಾತ' ಹಾಗೂ 'ಹುಟ್ಟಿದವ ಉಪಭೋಗಿ' ಎಂದು. ಉಪಭೋಗಿಸುವ ಹಕ್ಕು ಹುಟ್ಟಿನಿಂದಲೇ ಪ್ರಾಪ್ತವಾಗುತ್ತದೆ. ಸಂಪಾದಿಸುವ ಯೋಗ್ಯತೆ ಶಿಕ್ಷಣದಿಂದ ಬರುತ್ತದೆ. ಸಮಾಜದಲ್ಲಿ ಯಾರು ಗಳಿಸುವುದಿಲ್ಲವೋ, ಅವರು ಉಪಭೋಗಿಸುತ್ತಾರೆ. ಮಕ್ಕಳು, ಮುದುಕರು, ರೋಗಿ, ವಿಕಲಾಂಗ ಎಲ್ಲರ ಚಿಂತೆ ಸಮಾಜ ಮಾಡಬೇಕಾಗುತ್ತದೆ. ಪ್ರತಿಯೊಂದು ಸಮಾಜ ಈ ಕರ್ತವ್ಯದ ನಿರ್ವಹಣೆ ಮಾಡುತ್ತದೆ. ಮಾನವನ ಸಮಾಜಿಕತೆ ಮತ್ತು ಸಂಸ್ಕೃತಿಯ ಅಳತೆಗೋಲು ಈ ಕರ್ತವ್ಯದ ನಿರ್ವಹಣೆಯ ತತ್ಪರತೆಯಾಗಿದೆ. ಈ ಕರ್ತವ್ಯ ನಿರ್ವಹಣೆಯ ಕ್ಷಮತೆಯನ್ನು ಹುಟ್ಟುಹಾಕುವುದು ಅರ್ಥವ್ಯವಸ್ಥೆಯ ಕಾರ್ಯವಾಗಿದೆ. ಅರ್ಥಶಾಸ್ತ್ರವು ಈ ಕರ್ತವ್ಯದ ಪ್ರೇರಣೆಯ ಚಿಂತನೆ ಮಾಡುವುದಿಲ್ಲ. ಕಾರ್ಯವನ್ನಂತೂ ಮನುಷ್ಯ ತನ್ನ ಈ ಕರ್ತವ್ಯ ನಿರ್ವಹಣೆಗೋಸ್ಕರ ಮಾಡುತ್ತಾನೆ. ಇಲ್ಲದಾದರೆ ಯಾರ ಹಸಿವು ಹಿಂಗಿದೆಯೋ, ಅವರು ಕೆಲಸ ಮಾಡಲಾರದು.

ಮನುಷ್ಯ ಸಂಬಂಧಗಳಿಗೆ ಬಾಹ್ಯ ಅವಶ್ಯಕತೆಗಳನ್ನು ಪೂರೈಸುವುದು ಅರ್ಥವ್ಯವಸ್ಥೆಯು ಕನಿಷ್ಠಮಟ್ಟದ ಕಾರ್ಯವಾಗಿದೆ. ಸಾಮಾನ್ಯವಾಗಿ ಅನ್ನ, ವಸ್ತ್ರ ಮತ್ತು ಆವಾಸ ಈ ಅವಶ್ಯಕತೆಗಳನ್ನು ಸೂಚಿಸುತ್ತವೆ. ಇದೇ ಪ್ರಕಾರ ವ್ಯಕ್ತಿಯನ್ನು

ಸಮಾಜಕ್ಕಾಗಿ ಕರ್ತವ್ಯಗಳ ನಿರ್ವಹಣೆ ಮಾಡುವಲ್ಲಿ ಸಮರ್ಥನನ್ನಾಗಿಸುವುದು ಕೂಡಾ ಸಮಾಜದ ಮುಖ್ಯ ಪಾತ್ರವಾಗಿದೆ; ಮತ್ತು ಯಾವುದೇ ರೀತಿಯಿಂದ ಆರೋಗ್ಯಹೀನ ಸ್ಥಿತಿಯಲ್ಲಿರುವ ವ್ಯಕ್ತಿಗೆ ಆರೋಗ್ಯವಂತನನ್ನಾಗಿ ಮಾಡುವ ವ್ಯವಸ್ಥೆ ಮಾಡುವುದು ಹಾಗೂ ಅದರ ನಿರ್ವಹಣೆಯ ವ್ಯವಸ್ಥೆ ಮಾಡುವುದು ಕೂಡಾ ಸಮಾಜದ ಕರ್ತವ್ಯವಾಗಿದೆ. ಇಷ್ಟು ಹೆಚ್ಚು–ಕಡಿಮೆ ಯಾವ ರಾಜ್ಯದಲ್ಲಿವೆಯೋ, ಅದುವೇ ಧರ್ಮರಾಜ್ಯ; ಇಲ್ಲದೇ ಹೋದರೆ ಅಧರ್ಮ ರಾಜ್ಯವಾಗುವುದು. ರಘುವಂಶದ ದಿಲೀಪನ ರಾಜ್ಯದ ವರ್ಣನೆ ಮಾಡುತ್ತಾ ಕವಿ ಕಾಳಿದಾಸ ಹೇಳುತ್ತಾನೆ:

*ಪ್ರಜಾನಾಂ ವಿನಯಾಧಾನದ್ ರಕ್ಷಣಾತ್ ಭರಣಾದಪಿ ।*
*ಸ ಪಿತಾ ಪಿತರಸ್ತಾಸಾಂ ಕೇವಲಂ ಜನ್ಮಹೇತವಃ ॥* *(೧/೨೪)*

(ಪ್ರಜೆಯ ಶಿಕ್ಷಣ, ರಕ್ಷಣೆ ಮತ್ತು ಲಾಲನೆ–ಪಾಲನೆಯ ವ್ಯವಸ್ಥೆಯ ಕಾರಣ ಆತನೇ ಅವನ ನಿಜವಾದ ತಂದೆಯಾಗಿದ್ದ. ಆತನ ತಂದೆಯಂತೂ ಕೇವಲ ಜನ್ಮ ಕೊಟ್ಟವನಾಗಿದ್ದ). ಯಾವ ಭರತನ ಹೆಸರಲ್ಲಿ ಈ ದೇಶದ ಹೆಸರು ಭಾರತವೆಂದಾಗಿದೆಯೋ, ಆತನ ವ್ಯಾಖ್ಯೆಯೂ ಕೂಡಾ ಇದೇ ಆಗಿದೆ – 'ಭರಣಾತ್ ರಕ್ಷಣಾತ್‌ಚ್'. ಅರ್ಥಾತ್ ಲಾಲನೆ–ಪಾಲನೆ ಮತ್ತು ರಕ್ಷಣೆಯ ಕಾರಣದಿಂದ ಆತ ಭರತ ಎಂದು ಹೇಳಿಕೊಳ್ಳಲಾಗುತ್ತಿತ್ತು! ಆತನ ಈ ದೇಶ ಭಾರತವಾಗಿದೆ. ಈ ದೇಶದಲ್ಲಿ ಲಾಲನೆ–ಪಾಲನೆಯ ಭರವಸೆ ಇರದೇ ಇದ್ದಲ್ಲಿ 'ಭರತ' ಹೆಸರು ಸಾರ್ಥಕವಾಗುವುದಿಲ್ಲ.

**'ಕನಿಷ್ಟಮಟ್ಟದ' ಜನ್ಮಸಿದ್ಧ ಅಧಿಕಾರ**

ಈಗ ಪ್ರಶ್ನೆ ಉದ್ಭವಾಗುತ್ತಿದೆ – 'ಕನಿಷ್ಠಮಟ್ಟದ್ದನ್ನು' ಎಲ್ಲರಿಗೂ ಕೊಡಬೇಕು. ಅದು ಎಲ್ಲಿಂದ ಬರುವುದು? ಸ್ಪಷ್ಟವಾಗಿದೆ. ಅದು ನಮ್ಮ ಪ್ರಯತ್ನ ಮತ್ತು ಪುರುಷಾರ್ಥದಿಂದಲೇ ಬರಬೇಕು. ಆದ್ದರಿಂದಲೇ ನಮಗೆ ಕನಿಷ್ಠಮಟ್ಟದ ಅಧಿಕಾರ ಸಿಕ್ಕಿದೆ, ಅಲ್ಲಿಯ ಉತ್ಪಾದನೆಯ ಕಾರ್ಯ ಅರ್ಥಾತ್ ಪುರುಷಾರ್ಥದಿಂದ ವಿಹೀನವಾಗಿರುವ ವ್ಯಕ್ತಿ ಸಮಾಜದಲ್ಲಿ ಭಾರವಾಗಿದ್ದಾನೆ. ಇದೇ ರೀತಿಯ ಯಾವ ಸಮಾಜ ವ್ಯವಸ್ಥೆ ಅಥವಾ ಅರ್ಥವ್ಯವಸ್ಥೆಯ ಜನರ ಪುರುಷಾರ್ಥದಲ್ಲಿ ಅಡೆತಡೆಯುಂಟಾಗುವುದೋ ಅದು ಆತ್ಮಘಾತುಕವಾದುದಾಗಿದೆ. ಈ ರೀತಿಯ ವ್ಯವಸ್ಥೆಯಲ್ಲಿ ಸಮಾಜವು ವ್ಯಕ್ತಿಗಳ ಪ್ರತಿಯಾಗಿ ತನ್ನ ಕರ್ತವ್ಯಗಳ ನಿರ್ವಹಣೆ ಮಾಡುವುದಿಲ್ಲ. ಆದಾಗ್ಯೂ ವ್ಯಕ್ತಿಯ ಅವಶ್ಯಕತೆಗಳು ಪೂರ್ಣವಾಗುತ್ತಿದ್ದರೂ ಕೂಡಾ ಪುರುಷಾರ್ಥಗೈಯ್ಯದ ಕಾರಣ ಆತನ ಅಭಿವೃದ್ಧಿ ಒಮ್ಮುಖವಾಗುವುದು. ಮನುಷ್ಯ ಹೊಟ್ಟೆ ಮತ್ತು ಕೈ ಎರಡನ್ನೂ ಪಡೆದಿದ್ದಾನೆ. ಒಂದು ವೇಳೆ ಕೆಲಸ

ಸಿಗದಿದ್ದರೆ ಮತ್ತು ಹೊಟ್ಟೆಗೆ ಅನ್ನ ಸಿಕ್ಕರೂ ಕೂಡ ಮನುಷ್ಯ ಸುಖವಾಗಿರುವುದಿಲ್ಲ. ಆತನ ಅಭಿವೃದ್ಧಿಯಾಗುವುದಿಲ್ಲ. ಬಂಜೆ ಹೆಣ್ಣು ಹೇಗೆ ತನ್ನ ಜೀವನದಲ್ಲಿ ಅಪೂರ್ಣತೆ ಮತ್ತು ದುಃಖ ಅನುಭವಿಸುತ್ತಾಳೆಯೋ, ಹಾಗೆಯೇ ನಿರರ್ಥಕ ಪುರುಷಾರ್ಥವಿಲ್ಲದ ವ್ಯಕ್ತಿ ಅಪೂರ್ಣನೇ ಹೌದು.

**ಪ್ರತಿಯೊಬ್ಬನಿಗೆ ಕೆಲಸ**

'ಪ್ರತಿಯೊಬ್ಬನಿಗೆ ಕೆಲಸ' ಇದು ಅರ್ಥವ್ಯವಸ್ಥೆಯ ಮೂಲಭೂತ ಗುರಿಯಾಗಬೇಕು. ಅರ್ಥಾತ್ ಸ್ವಸ್ಥ ಮತ್ತು ದಯಾಳು ವ್ಯಕ್ತಿಗೆ ತನ್ನ ಗೃಹಸ್ಥಾಶ್ರಮದ ಅವಧಿಯಲ್ಲಿ ಜೀವಿತೋಪಾರ್ಜನೆಯ ವ್ಯವಸ್ಥೆಯಾಗಬೇಕು. ಇತ್ತಿತ್ತಲಾಗಿ ಸ್ಥಿತಿಯೇ ವಿಚಿತ್ರವಾಗಿದೆ. ಒಂದೆಡೆ ೧೦ ವರ್ಷದ ಬಾಲಕ ಮತ್ತು ೭೦ ವರ್ಷದ ಮುದುಕ ಕೆಲಸದಲ್ಲಿ ತೊಡಗಿದ್ದಾರೆ. ಇನ್ನೊಂದೆಡೆ ೨೫ ವರ್ಷದ ನವ ಯುವಕ ನಿರುದ್ಯೋಗ ವ್ಯಾಕುಲತೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಈ ವ್ಯವಸ್ಥೆಯನ್ನು ಹೋಗಲಾಡಿಸಬೇಕು. ಭಗವಂತ ಕೈ ಕೊಟ್ಟಿದ್ದಾನೆ ಆದರೆ ಅವರು ಉತ್ಪಾದಕರಾಗಲು ಸಾಧ್ಯವಿಲ್ಲ. ಅವರಿಗೆ ಬಂಡವಾಳದ ಸಹಾಯ ಬೇಕು. ಶ್ರಮ ಮತ್ತು ಬಂಡವಾಳದ ಸಂಬಂಧ ಪ್ರಕೃತಿ ಮತ್ತು ಪುರುಷನ ಸಂಬಂಧವಾಗಿದೆ. ಸೃಷ್ಟಿ ಇವೆರಡರ ಲೀಲೆಯಾಗಿದೆ. ಇವೆರಡರಲ್ಲಿ ಯಾವುದೇ ಒಂದನ್ನು ಅವಹೇಳನ ಮಾಡಬಾರದು.

**ಬಂಡವಾಳದ ತಯಾರಿ**

ಬಂಡವಾಳದ ತಯಾರಿಗಾಗಿ ಅವಶ್ಯಕವಾಗಿರುವುದು – ಎಲ್ಲ ಉತ್ಪಾದನೆಗಳ ಉಪಭೋಗ ಮಾಡುವ ಬದಲು ಅದರಿಂದ ಸ್ವಲ್ಪ ಉಳಿಸಿಕೊಳ್ಳಬೇಕು ಮತ್ತು ಭವಿಷತ್ತಿನ ಉತ್ಪಾದನೆಯ ಕೆಲಸಕ್ಕಾಗಿ ವಿನಿಯೋಗಿಸಬೇಕು. ಉಪಭೋಗದಲ್ಲಿ ಸಂಯಮವಿಲ್ಲದೇ ಬಂಡವಾಳ ನಿರ್ಮಾಣವಾಗದು. ಕಾರ್ಲ್‌ಮಾರ್ಕ್ಸ್ ಯಾವ 'ಹೆಚ್ಚಿನ ಬಂಡವಾಳ'ದ ಚರ್ಚೆ ಮಾಡುತ್ತಾನೆಯೋ, ಆ ಬಂಡವಾಳವೇ ನಿರ್ಮಾಣದ ಆಧಾರ ಸ್ಥಂಭವಾಗಿದೆ. ಬಂಡವಾಳಶಾಹಿ ಅರ್ಥ ವ್ಯವಸ್ಥೆಯಲ್ಲಿ ಉದ್ಯೋಗಪತಿಯು ಈ 'ಹೆಚ್ಚಿನ ಬಂಡವಾಳ'ದ ಸಹಾಯದಿಂದ ಬಂಡವಾಳದ ನಿರ್ಮಾಣ ಮಾಡುತ್ತಾನೆ. ಸಮಾಜವಾಗಿ ವ್ಯವಸ್ಥೆಯಲ್ಲಿ ಈ ಕಾರ್ಯವು ರಾಜ್ಯದ ಮುಖಾಂತರವಾಗುತ್ತದೆ. ಎರಡೂ ಪದ್ಧತಿಯಲ್ಲಿ ಸಂಪೂರ್ಣ ಉತ್ಪಾದನೆಯ ವಿತರಣೆ ಶ್ರಮಿಕರಲ್ಲಿ ಆಗುವುದಿಲ್ಲ. ಆದಾಗ್ಯೂ ಉತ್ಪಾದನೆಯ ಪದ್ಧತಿ 'ದೊಡ್ಡ ಪರಿಮಾಣ'ದೆಡೆಗೆ 'ಕೇಂದ್ರಿತವಾಗಿದ್ದರೆ' ಬಂಡವಾಳ ನಿರ್ಮಾಣಕ್ಕೋಸ್ಕರ ಶ್ರಮಿಕರಿಂದ ಮಾಡಿದ ಸಂಯಮ ಮತ್ತು ತ್ಯಾಗದ ಗೌರವವೂ ಇರುವುದಿಲ್ಲ. ಬಂಡವಾಳ ರೂಪದಲ್ಲಿ 'ಹೆಚ್ಚಿನ ಮೌಲ್ಯ'ದ ಪ್ರಯೋಗದಲ್ಲಿ ಶ್ರಮಿಕನ ಕೊಡುಗೆಯೂ ಇರುತ್ತದೆ. ಇದು ವಿಕೇಂದ್ರೀಕರಣದ ಲಾಭವಾಗಿದೆ.

## ಯಂತ್ರ ಆಧಿಪತ್ಯ

ಯಂತ್ರವು ಬಂಡವಾಳದ ಅತ್ಯಂತ ಮಹತ್ವಪೂರ್ಣ ರೂಪವಾಗಿದೆ. ಮಾನವನ ಶ್ರಮವನ್ನು ಸರಳ ಮಾಡುವುದು ಮತ್ತು ಅದರ ಉತ್ಪಾದನೆ ಹಾಗೂ ಸಾಮರ್ಥ್ಯವನ್ನು ಹೆಚ್ಚಿಸಲು ಯಂತ್ರಗಳು ಆವಿಷ್ಕಾರವಾಗಿದೆ. ಯಂತ್ರ ಮಾನವನ ಸಹಾಯಕ್ಕಾಗಿದೆ; ಮಾನವನ ಪ್ರತಿಸ್ಪರ್ಧಿಯಲ್ಲ. ಆದರೆ ಎಲ್ಲಿ ಮಾನವ ಶ್ರಮವನ್ನು ವಿನಿಮಯದ ವಸ್ತುವನ್ನಾಗಿ ತಿಳಿದುಕೊಂಡು ಅದರ ಮೌಲ್ಯಾಂಕನ ಹಣದ ರೂಪದಲ್ಲಿ ಮಾಡಲಾಯಿತೋ, ಅಲ್ಲಿ ಯಂತ್ರವು ಮಾನವನ ಪ್ರತಿಸ್ಪರ್ಧಿಯಾಯಿತು. ಇದು ಬಂಡವಾಳಶಾಹಿ ದೃಷ್ಟಿಕೋನದ ದುರ್ಗುಣವಾಗಿದೆ. ಆದಾಗ್ಯೂ ಯಾವುದರ ಸಾಫಲ್ಯಕ್ಕಾಗಿ ಯಂತ್ರಗಳ ಆವಿಷ್ಕಾರವಾಗಿವೆ, ಅದೇ ಯಂತ್ರವು ಮಾನವನ ಸ್ಥಾನವನ್ನು ಆಕ್ರಮಿಸಿಕೊಂಡು ಅವನನ್ನು ಹಸಿವಿನಿಂದ ಕೊಂದರೆ, ಅದು ಅದರ ಉದ್ದೇಶದ ವಿಪರೀತವಾಗುವುದು. ಅಚೇತನ ಯಂತ್ರವು ಇದಕ್ಕೆ ಅಪರಾಧಿಯಲ್ಲ. ಈ ಅವಗುಣ ಆ ಅರ್ಥ ವ್ಯವಸ್ಥೆಯದಾಗಿದೆ; ಅದರಲ್ಲಿ ವಿವೇಕ ಲುಪ್ತವಾಗಿದೆ. ನಾವು ಯಂತ್ರದ ಎಲ್ಲೆಯನ್ನು ವಿಚಾರಿಸಿಯೇ ಅದರ ಉಪಯೋಗದ ನಿರ್ಧಾರ ಮಾಡುವವರಾಗಬೇಕು. ಈ ದೃಷ್ಟಿಯಿಂದ ಪಾಶ್ಚಿಮಾತ್ಯ ದೇಶದ ಆ ಯಂತ್ರಗಳನ್ನು ಯಾವ ಜನಸಂಖ್ಯೆಯ ಗಾತ್ರದ ಆಧಾರದ ಮೇಲೆ ನಿರ್ಮಾಣವಾಗಿವೆಯೋ, ಅದನ್ನು ವಿಚಾರಿಸದೇ ಆಯಾತ ಮಾಡಿಕೊಳ್ಳುವುದು ತುಂಬಾ ತಪ್ಪಾಗಬಹುದು. ಯಂತ್ರವು ದೇಶ–ಕಾಲ ಪರಿಸ್ಥಿತಿ ನಿರಪೇಕ್ಷವಲ್ಲ, ಸಾಪೇಕ್ಷವಾದುದಾಗಿದೆ. ವಿಜ್ಞಾನದ ಆಧುನಿಕತೆಯ ಪ್ರಗತಿಯ ಉತ್ಪತ್ತಿ ಅದಾಗಿದೆ. ಆದರೆ ಅದರ ಉಪಯೋಗವನ್ನು ಪ್ರತಿಯೊಂದು ದೇಶ ತನ್ನ ಪರಿಸ್ಥಿತಿಗಳ ಅವಶ್ಯಕತೆಗಳ ಅನುಸಾರವಾಗಿ ಮಾಡುತ್ತದೆ. ನಮ್ಮ ಯಂತ್ರಗಳು ನಮ್ಮ ಆರ್ಥಿಕ ಅವಶ್ಯಕತೆಗಳ ಅನುಕೂಲವೇ ಇಲ್ಲ. ಆದಾಗ್ಯೂ ನಮ್ಮ ಸಾಂಸ್ಕೃತಿಕ ಹಾಗೂ ರಾಜಕೀಯ ಜೀವನ ಮೌಲ್ಯಗಳ ಪೋಷಕವಾಗದಿದ್ದರು ಕನಿಷ್ಠಪಕ್ಷ ಅವಿರೋಧಿ ಅವಶ್ಯಕವಾಗಬೇಕು.

ನಾವು ಸದುಪಯೋಗವಾಗುವ ಯಂತ್ರದ ನಿರ್ಮಾಣ ಮಾಡಬೇಕು. ಆದರೆ ಆಗುವುದೇನೆಂದರೆ–ಮೊದಲು ನಾವು 'ಯಂತ್ರ'ದ ಗೂಟ ನೆಡುತ್ತೇವೆ ನಂತರ ಎಲ್ಲ ವಸ್ತುಗಳ ಸಂಯೋಜನೆ ಅದರೊಂದಿಗೆ ಮಾಡುತ್ತೇವೆ. ಆದರೆ ಜಗತ್ತಿನ ಬೇರೆ ದೇಶಗಳಲ್ಲಿ ಹೀಗಾಗಿಲ್ಲ. ನವ–ನವೀನ ಯಂತ್ರಗಳು ತಯಾರಾಗುತ್ತಿಲ್ಲ. ವಾಸ್ತವವಾಗಿ ಯಾವುದು ವಿಜ್ಞಾನದ ಪ್ರಗತಿಯ ಲಕ್ಷಣವಾಗಿದೆಯೋ ಅದನ್ನು ಸ್ಥಿರವೆಂದು ಒಪ್ಪಿ ನಡೆಸುವುದು ಅವೈಜ್ಞಾನಿಕ ದೃಷ್ಟಿಯಾಗಿದೆ. ನಾವು ಯಂತ್ರವನ್ನು ಹೊರಗಿನಿಂದ ತರಿಸುತ್ತೇವೆ ಆದ್ದರಿಂದಲೇ ಈ ವಿಷಯವಾಗಿ ನಮ್ಮಲ್ಲಿ ಸೂಕ್ಷ್ಮತೆ ತುಂಬಾ ಕಡಿಮೆ ಇದೆ. ನಾವು ಔದ್ಯೋಗೀಕರಣದ ಅಭಿವೃದ್ಧಿ ಮಾಡುವವರಾಗಬೇಕು.

ಯಾವ ರೀತಿ ಕಾರಖಾನೆಯು ಪೂರ್ಣ ಸಾಮರ್ಥ್ಯದ ಉಪಯೋಗ ಮಾಡದೇ ಇರುವುದು ಆರ್ಥಿಕ ದೃಷ್ಟಿಯಿಂದ ಸರಿಯಾದುದಲ್ಲ. ಹಾಗೆಯೇ ದೇಶದ ಜನರನ್ನೂ ನಿರುದ್ಯೋಗಿಗಳನ್ನಾಗಿಸುವುದು ನಷ್ಟದ ವ್ಯಾಪಾರವಾಗಿದೆ. ಇಲ್ಲಿ ಯಂತ್ರ ಇಮ್ಮಡಿ ಲುಕ್ಸಾನುದಾಯಕವಾಗಿದೆ. ಖಾಲಿ ಯಂತ್ರವು ಕೇವಲ ಹಳೆಯ ಬಂಡವಾಳವನ್ನು ನುಂಗುತ್ತದೆ, ಹೊಸತು ಏನೂ ಇಲ್ಲ, ಆದರೆ ನಿರುದ್ಯೋಗಿ ಮನುಷ್ಯ ಇವತ್ತನ್ನು ಸ್ವಾಹಾ ಮಾಡುತ್ತಾನೆ. ಕಾರಣ ಇಂದಂತೂ ಗಳಿಸುವವ ಉಪಭೋಗಿಸುತ್ತಾನೆ, ಇದನ್ನು ಗುರಿಯಾಗಿಟ್ಟುಕೊಂಡು ನಾವು ಭಾರತದ ಅರ್ಥರಚನೆ ಮಾಡಬೇಕು. ಚರಖಾದ ಸ್ಥಾನದಲ್ಲಿ ನೂಲುವ ಯಂತ್ರಗಳಂತೂ ಬೇಕು. ಆದರೆ ಎಲ್ಲ ಕೆಲಸಗಳಿಗಾಗಿ ಸ್ವಯಂಚಾಲಿತ ಯಂತ್ರಗಳಲ್ಲ, ಸಂಪೂರ್ಣ ಜೀವನೋಪಾಯದ ಗುರಿಯನ್ನು ಮುಂದಿಟ್ಟುಕೊಂಡು ನಾವು ಬೇರೆ ಉತ್ಪಾದನೆಗಳ ವಿಚಾರ ಮಾಡಬೇಕು.

## ಅರ್ಥವ್ಯವಸ್ಥೆಯಲ್ಲಿ ವ್ಯಕ್ತಿ

ವ್ಯಕ್ತಿಯ ಉಪಭೋಗ ಮತ್ತು ಆತನ ಜೀವಿತೋಪಾರ್ಜನೆಯ ಚಿಂತನೆ ಮಾಡುವ ಸಮಯದಲ್ಲಿ ನಾವು ಪೂರ್ಣ ಏಕಾತ್ಮ ಮಾನವನ ಕುರಿತಾಗಿ ಚಿಂತಿಸಬೇಕಾಗುವುದು. ಹಿಂದಿನ ಶತಮಾನದ ಆರ್ಥಿಕ ಚಿಂತನೆ ಮತ್ತು ಅದರ ಮೇಲೆ ಅವಲಂಬಿತವಿರುವ ಅರ್ಥವ್ಯವಸ್ಥೆಯ ಪರಿಣಾಮವಿದಾಗಿದೆ, ಅಸ್ಥಿ–ಮಾಂಸಗಳ ವಾಸ್ತವಿಕ ಮನುಷ್ಯ ನಮ್ಮ ದೃಷ್ಟಿಯಿಂದ ಕಾಣದಾಗಿದ್ದಾನೆ. ನಾವು ಆತನ ವ್ಯಕ್ತಿತ್ವದ ಕುರಿತಾಗಿ ಎಳ್ಳಷ್ಟೂ ವಿಚಾರ ಮಾಡುವುದಿಲ್ಲ. ಬಂಡವಾಳಶಾಹಿ ಅರ್ಥಶಾಸ್ತ್ರವು ಮನುಷ್ಯನಿಗೆ ಒಬ್ಬ ಅರ್ಥಲೋಭಿ ಪ್ರಾಣಿಯೆಂದು ಗ್ರಹಿಸುತ್ತದೆ. ಆತನ ಎಲ್ಲ ನಿರ್ಣಯಗಳು ಆರ್ಥಿಕ ದೃಷ್ಟಿಯಿಂದಾಗುತ್ತವೆ. ಈ ರೀತಿಯ ವ್ಯಕ್ತಿಯು ಮುಂದೆ ಐದು ರೂಪಾಯಿಗಳು ಯಾವಾಗಲೂ ನಾಲ್ಕು ರೂಪಾಯಿಗಳಿಗಿಂತಲೂ ಅಧಿಕವಾಗಿರುತ್ತವೆ. ಆತ ಅರ್ಥೋಪಾರ್ಜನೆಯ ಪ್ರೇರಣೆಯಿಂದಲೇ ಕೆಲಸ ಮಾಡುತ್ತಾನೆ. ಅತ್ಯಧಿಕ ಲಾಭ ಆತನ ಗುರಿಯಾಗಿರುತ್ತದೆ. ಯಾವ ರೀತಿಯಾಗಿ ಬೇರೆ ವಸ್ತುಗಳು ಕ್ರಯ–ವಿಕ್ರಯವಾಗುತ್ತವೆ. ಹಾಗೆಯೇ ಮಾನವ ಶ್ರಮವು ಕ್ರಯ–ವಿಕ್ರಯದ ವಸ್ತುವಾಗಿದೆ. ಇದು ಮುಕ್ತ ವ್ಯಾಪಾರದ ವ್ಯವಸ್ಥೆಯಾಗಿದೆ. ಪ್ರತಿಸ್ಪರ್ಧೆಯ ಅಡೆತಡೆಯನ್ನುಳಿದು ಬೇರೊಂದು ನಿಯಂತ್ರಣವನ್ನು ಆತ ಅನ್ಯಾಯವೆಂದು ಭಾವಿಸುತ್ತಾನೆ. ಈ ಓಟದಲ್ಲಿ ಯಾರು ಎಲ್ಲರಿಗಿಂತಲೂ ಹಿಂದುಳಿಯುತ್ತಾರೋ ಅವರನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುವ ವಿಚಾರದಲ್ಲಿ ಆತ ತಯಾರಿಲ್ಲ, ಆದಾಗ್ಯೂ ಆತನ ವಿನಾಶವನ್ನು ನ್ಯಾಯವೆಂದು ಒಪ್ಪಿಕೊಳ್ಳುತ್ತಾನೆ. ಅದು ಆರ್ಥಿಕ ವಿಹೀನವಾದುದು, ಅದು ಇಲ್ಲದಾಗಬೇಕು. ಇದು ಆತನ ವಿಚಾರವಾಗಿದೆ. ಆತನ ವಿನಾಶದಿಂದ ನಿಧಾನವಾಗಿ ಶಕ್ತಿ ಹೀನವಾಗಿ

ಕೆಲವೊಬ್ಬರ ಕೈಯಲ್ಲಿ ಕೇಂದ್ರಿತವಾಗುವುದು. ಇದನ್ನು ಬಂಡವಾಳಶಾಹಿ ಅರ್ಥಶಾಸ್ತ್ರವು ಸಹಜ ಪ್ರಕ್ರಿಯೆ ಎಂದು ಒಪ್ಪಿಕೊಳ್ಳುವುದು. ಆದರೆ ಒಬ್ಬನೇ ಅಧಿಕಾರಸ್ಥನಾದ ನಂತರ ಪ್ರತಿಸ್ಪರ್ಧೆಯ ಅಡೆತಡೆ ಕಡಿಮೆಯಾಗುವುದಿಲ್ಲ. ಆ ಸ್ಥಿತಿಯಲ್ಲಿ ಪ್ರತಿಸ್ಪರ್ಧೆಯ ಕಾರಣ ಹುಟ್ಟುವ ಪ್ರೇರಣೆಯು ನಷ್ಟವಾಗುತ್ತದೆ. ಮೌಲ್ಯ ಬೇಕಾಬಿಟ್ಟಿಯಾಗುತ್ತದೆ, ಹಾಗೂ ಗುಣಮಟ್ಟದ ದೃಷ್ಟಿಯ ನಾಶವಾಗುತ್ತದೆ.

ಈ ರೀತಿಯ ಅರ್ಥಶಾಸ್ತ್ರಜ್ಞನ ದೃಷ್ಟಿ ಗ್ರಾಹಕನ ಸಂಬಂಧವೂ ಮನಸ್ಸಿನ ಅವಶ್ಯಕತೆ ಅಥವಾ ಇಚ್ಛೆಗಳೆಡೆಗೆ ಇರುವುದಿಲ್ಲ. ಆತನ ಕಿಸೆಯಲ್ಲಿ ಅರ್ಥಾತ್ ಮಾರಾಟದಲ್ಲಿ ಇರುತ್ತದೆ. ಹಸಿವಿನಿಂದ ಬಳಲುವವರು ಅರ್ಥಾತ್ ಬಡವರನ್ನು ಹೊರತುಪಡಿಸಿ ಹೊಟ್ಟೆ ತುಂಬಿಸಿಕೊಳ್ಳುವುದು ಮತ್ತು ವಸ್ತುಗಳ ವ್ಯವಸ್ಥೆ ಮಾಡುವುದು ಇಲ್ಲಿಯ ಚಿಂತನೆಯಾಗಿದೆ. ಕಾರಣ ಶೇಖರಿಸಿದ ಅವಶ್ಯಕತೆಗಳ ಪೂರೈಕೆಗಾಗಿ ಅನೇಕ ರೀತಿಯ ವಸ್ತುಗಳನ್ನು ತಯಾರು ಮಾಡಲಾಗುತ್ತದೆ. ಅಲ್ಲಿ ಸಾಧನಗಳಿಲ್ಲದವನಿಗೆ ಜೀವನ ನಿರ್ವಹಣೆಯ ವಸ್ತುಗಳ ಅವಶ್ಯಕತೆಯ ಅಭಾವ ಹೆಚ್ಚಾಗುತ್ತದೆ.

### ಮಾನವನ ವಿಕಾಸವಾಗದಿರುವುದು

ಉತ್ಪಾದನೆಯ ಕೇಂದ್ರೀಕರಣ ಹಾಗೂ ಸರ್ವಾಧಿಕಾರ ಧೋರಣೆಯಿಂದ ಗ್ರಾಹಕ ನಿಧಾನವಾಗಿ ಅಭಾವಹೀನನಾಗುತ್ತಾನೆ. ಮಾರ್ಕೆಟ್‌ಗಳ ಸಂಘಟನೆ ಈ ರೀತಿ ಮಾಡಲಾಗುತ್ತದೆ. ಅಲ್ಲಿ ರಾಮಪ್ರಸಾದನ ಪಾದಗಳ ನಂಬರಿನ ಚಪ್ಪಲಿಗಳು ಲಭ್ಯವಾಗುವ ಹಾಗೆ. ಎಲ್ಲ ಕ್ಷೇತ್ರಗಳಲ್ಲಿ ಈ ವಿಂಗಡಣೆ ಇಷ್ಟು ತೀವ್ರವಾಗಿ ಅಭಿವೃದ್ಧಿ ಹೊಂದುತ್ತಿದೆ. ಅದರಿಂದ ವ್ಯಕ್ತಿಯ ವ್ಯಕ್ತಿತ್ವ ನಷ್ಟವಾಗಿ ಅದು ಒಂದು ಅಂಕಿನದಾಗುತ್ತಿದೆ. ಡ್ಯೂಯೀ ದಶಮಲ ಸೂತ್ರಾನುಸಾರ – ಯಾವ ರೀತಿಯಾಗಿ ಪುಸ್ತಕಗಳ ವಿಂಗಡಣೆ ಮಾಡಿ ಅವುಗಳಿಗೆ ಒಂದು ನಿಶ್ಚಿತವಾದ ನಂಬರ್ ಕೊಡಲಾಗುತ್ತದೆಯೋ ಹಾಗೆಯೇ ಮಾನವನಿಗೂ ಕೊಡಬಹುದು. ವ್ಯಕ್ತಿಯೇ ಎಲ್ಲವೂ ಎಂದು ತಿಳಿದುಕೊಂಡಿರುವ ಅರ್ಥವ್ಯವಸ್ಥೆ ವ್ಯಕ್ತಿತ್ವವನ್ನೇ ಸಂಪೂರ್ಣ ಹಾಳು ಮಾಡಿಬಿಟ್ಟಿದೆ. ಸ್ಪಷ್ಟವಾಗಿ ಹೇಳುವುದಾದರೆ 'ಬಂಡವಾಳಶಾಹಿ ಅರ್ಥವ್ಯವಸ್ಥೆ ಮಾನವ'ನ ಅಭಿವೃದ್ಧಿ ಮಾಡುವಲ್ಲಿ ಅಸಮರ್ಥವಾಗಿಬಿಟ್ಟಿದೆ.

### ಸಮಾಜವಾದದ ಪ್ರತಿಕ್ರಿಯೆ

ಬಂಡವಾಳಶಾಹಿಯ ವಿರುದ್ಧವಾಗಿ ಸಮಾಜವಾದದ ಅರ್ಥವ್ಯವಸ್ಥೆ ಬಂದಿದೆ. ಆದರೆ ಇದು ಕೂಡಾ ಮಾನವನಿಗೆ ತನ್ನ ಗೌರವ ಕೊಡಲಾಗಲಿಲ್ಲ. ಅದು ಬಂಡವಾಳಶಾಹಿಯ ಮಾಲೀಕತ್ವವನ್ನು ರಾಜ್ಯದ ಕೈಯಲ್ಲಿ ಕೊಟ್ಟು ಸಂತಸಪಟ್ಟಿದೆ.

'ರಾಜ್ಯ'ವು ತುಂಬಾ ವ್ಯಕ್ತಿ ತಟಸ್ಥ ಸಂಸ್ಥೆಯಾಗಿದೆ. ಅಲ್ಲಿಯ ಎಲ್ಲ ಕಾರ್ಯ ವಿಧಿ–ವಿಧಾನಗಳು ನಿಯಮದಡಿಯಲ್ಲಿ ನಡೆಯುತ್ತವೆ. ಅಲ್ಲಿ ಸಾಮಾನ್ಯವಾಗಿ ಸ್ವ ವಿವೇಚನೆಗೆ ಸ್ಥಾನವಿಲ್ಲ. ಆದಗ್ಯೂ ಆಡಳಿತಾಧಿಕಾರಿಗಳಲ್ಲಿ ಉಚ್ಚಮಟ್ಟದ ಕರ್ತವ್ಯ ಪಾಲನೆ ಹಾಗೂ ಸಮಾಜನಿಷ್ಠೆ ಇರದಿದ್ದರೆ ಪಕ್ಷಪಾತ ಧೋರಣೆ ಹಾಗೂ ಭ್ರಷ್ಟಾಚಾರಕ್ಕೆ ಆಶ್ರಯವಾಗುವುದು. ಬಂಡವಾಳಶಾಹಿ ಅರ್ಥ ವ್ಯವಸ್ಥೆಯಂತೂ ಕೇವಲ ಅರ್ಥಪರಾಯಣ ಮಾನವನ ಚಿಂತನೆ ಮಾಡಿದೆ ಹಾಗೂ ಬೇರೆ ಕ್ಷೇತ್ರಗಳಲ್ಲಿ ಆತನನ್ನು ಸ್ವತಂತ್ರನನ್ನಾಗಿಸಿದೆ. ಕಾರಣ ಅದು ಕೆಲವೊಂದು ಪ್ರಮಾಣದಲ್ಲಿ ತನ್ನ ವ್ಯಕ್ತಿಯ ಅಭಿವೃದ್ಧಿ ಮಾಡಲು ಶಕ್ಯವಾಗಿದೆ. ಆದರೆ ಸಮಾಜವಾದಿ ವ್ಯವಸ್ಥೆಯಂತೂ ಕೇವಲ ಜಾತಿವಾಚಕ ಮಾನವನನ್ನು ಮಾತ್ರ ವಿಚಾರ ಮಾಡುತ್ತಿದೆ. ಅದರಲ್ಲಿ ವ್ಯಕ್ತಿಯ ಅಭಿರುಚಿ ಸ್ವಭಾವ ಮತ್ತು ಗುಣಗಳ ವೈವಿಧ್ಯತೆ ಹಾಗೂ ಅದರ ಆಶ್ರಯದಲ್ಲಿ ಅಭಿವೃದ್ಧಿಗಾಗಿ ಯಾವ ಸ್ಥಾನವೂ ಇಲ್ಲ.

ಯಾವ ರೀತಿಗಾಗಿ 'ಜೇಲ ಮ್ಯೆನುಅಲ್'ದಲ್ಲಿ ಮಾನವನ ವಿಚಾರ ಮಾಡಿ ಆತನ ಅವಶ್ಯಕತೆಗಳ ಚಿಂತನೆ ಮಾಡಲಾಗಿದೆ ಹಾಗೂ ಆತನ ಕಾರ್ಯಗಳ ವಿಧಿ–ವಿಧಾನ ರೂಪಿಸಲಾಗಿದೆ. ಅದೇ ರೀತಿಯಾಗಿ ಸಮಾಜವಾದಿ ವ್ಯವಸ್ಥೆಯಲ್ಲಿ ಮಾನವನ ವಿಚಾರ ಅತ್ಯಂತ ವ್ಯಕ್ತಿ ತಟಸ್ಥತೆಯ ಆಧಾರದ ಮೇಲೆ ಮಾಡಲಾಗಿದೆ. ಇಲ್ಲಿ ವ್ಯಕ್ತಿಗತ ಸ್ವಾತಂತ್ರ್ಯ ಹೆಸರಿನ ಯಾವ ವಸ್ತುವೂ ಇಲ್ಲ.

**ವಿವಾದವಲ್ಲ, ಮಾನವ**

ಬಂಡವಾಳಶಾಹಿ ಮತ್ತು ಸಮಾಜವಾದ ಇವೆರಡರ ಸ್ಥಿತಿಯಲ್ಲಿ ಮಾನವನ ಸುಲಭ ಮತ್ತು ಸಂಪೂರ್ಣ ರೂಪವನ್ನು ತಿಳಿದುಕೊಳ್ಳಲಾಗಿಲ್ಲ. ಒಂದರಲ್ಲಿ ಆತನನ್ನು ಸ್ವಾರ್ಥಿ, ಅರ್ಥಪರಾಯಣ, ಸಂಘರ್ಷಶೀಲ ಹಾಗೂ ಮತ್ಸ್ಯನ್ಯಾಯ–ಪ್ರವಣ ಪ್ರಾಣಿ ಎಂದು ಒಪ್ಪಿದರೆ ಬೇರೆಯವರಲ್ಲಿ ವ್ಯವಸ್ಥೆ ಮತ್ತು ಪರಿಸ್ಥಿತಿಗಳ ದಾಸನೆಂದು, ನಿರ್ಧನ ಹಾಗೂ ಆಸ್ಥೆಯಿಲ್ಲದವನೆಂದು ಒಪ್ಪಿಕೊಳ್ಳಲಾಗಿದೆ. ಶಕ್ತಿಯ ಕೇಂದ್ರೀಕರಣ ಎರಡರಲ್ಲಿಯೂ ಅಭೀಪ್ಸೆ ಇದೆ. ಕಾರಣ ಎರಡರ ಪರಿಣಾಮ ಅಮಾನವೀಕರಣವಾಗುತ್ತಿದೆ.

ಈಶ್ವರನ ಸರ್ವಶ್ರೇಷ್ಠ ರಚನೆಯಾದ ಮಾನವ ತನ್ನನ್ನು ಕಳೆದುಕೊಳ್ಳ ತೊಡಗಿದ್ದಾನೆ. ನಾವು ಮಾನವನನ್ನು ಮತ್ತೊಮ್ಮೆ ಆತನ ಸ್ಥಾನದಲ್ಲಿ ಪ್ರತಿಷ್ಠಾಪಿಸ ಬೇಕಾಗಿದೆ. ಆತನ ಹಿರಿಮೆಯ ಜ್ಞಾನವನ್ನು ಆತನಿಗೆ ಮಾಡಿಕೊಡಬೇಕಾಗಿದೆ. ಆತನ ಶಕ್ತಿಯನ್ನು ಬಡಿದೆಬ್ಬಿಸಬೇಕಾಗಿದೆ ಹಾಗೂ ದೈವತ್ವದ ಪ್ರಾಪ್ತಿಗಾಗಿ ಪುರುಷಾರ್ಥಶೀಲನನ್ನಾಗಿ ಮಾಡಬೇಕಾಗಿದೆ. ಇದು ವಿಕೇಂದ್ರಿತ ಅರ್ಥವ್ಯವಸ್ಥೆಯಿಂದ ಮಾತ್ರ ಸಾಧ್ಯವಿದೆ.

ನಮಗೆ ಸಮಾಜವಾದ ಅಥವಾ ಬಂಡವಾಳಶಾಹಿಯಲ್ಲ; ಮಾನವನ ಉತ್ಕರ್ಷ ಮತ್ತು ಸುಖ ಬೇಕಾಗಿದೆ.

'ಮಾನವ'ನನ್ನು ಪಣದಲ್ಲಿಟ್ಟು ಇಂದು ಈರ್ವರೂ ಜಗಳಾಡುತ್ತಿದ್ದಾರೆ. ಈರ್ವರೂ ಮಾನವನನ್ನು ಅರಿಯಲಿಲ್ಲ ಮತ್ತು ಅವರಿಗೆ ಮಾನವನ ಚಿಂತೆಯೂ ಇಲ್ಲ.

## ನಮ್ಮ ಅರ್ಥವ್ಯವಸ್ಥೆ

ನಮ್ಮ ಅರ್ಥವ್ಯವಸ್ಥೆಯ ಉದ್ದೇಶವಾಗಿರಬೇಕು :

೧. ಪ್ರತಿಯೊಬ್ಬ ವ್ಯಕ್ತಿಗೆ ಕನಿಷ್ಠ ಜೀವನ ಮಟ್ಟದ ಆಶ್ವಾಸನೆ ಹಾಗೂ ರಾಷ್ಟ್ರದ ಸುರಕ್ಷತೆಯ ಸಾಮರ್ಥ್ಯದ ವ್ಯವಸ್ಥೆಯಾಗಬೇಕು.

೨. ಈ ಮಟ್ಟದ ನಂತರ ಕ್ರಮವಾಗಿ ಸಮೃದ್ಧಿ, ಅದರಿಂದ ವ್ಯಕ್ತಿ ಮತ್ತು ರಾಷ್ಟ್ರಕ್ಕೆ ಆ ಸಲಕರಣೆಗಳು ಲಭ್ಯವಾಗುವಂತಾಗಬೇಕು. ಅದರಿಂದ ಅವರು ತಮ್ಮ ಚಿತ್ತದ ಆಧಾರದ ಮೇಲೆ ವಿಶ್ವದ ಪ್ರಗತಿಯಲ್ಲಿ ಕೊಡುಗೆ ನೀಡುವವರಾಗಬೇಕು.

೩. ಮೇಲ್ಕಾಣಿಸಿದ ಉದ್ದೇಶಗಳ ಈಡೇರಿಕೆಗಾಗಿ ಸಮರ್ಥ ಮತ್ತು ಆರೋಗ್ಯವಂತ ವ್ಯಕ್ತಿಗೆ ನಿಶ್ಚಿತ ರೋಜಗಾರ (ಕೆಲಸ)ದ ಅವಕಾಶ ಕೊಡುವುದು ಮತ್ತು ಪ್ರಕೃತಿಯ ಸಾಧನಗಳನ್ನು ಮಿತವ್ಯಯದಿಂದ ಉಪಯೋಗಿಸುವುದಾಗಬೇಕು.

೪. ರಾಷ್ಟ್ರದ ಉತ್ಪಾದಕರು – ಉತ್ಪಾದನೆಯ ವಿಚಾರ ಮಾಡಿ ಅನುಕೂಲ ವಾಗುವಂತಹ ಔದ್ಯೋಗೀಕರಣದ ಅಭಿವೃದ್ಧಿ ಮಾಡುವುದಾಗಬೇಕು.

೫. ಈ ವ್ಯವಸ್ಥೆ 'ಮಾನವನ' ಉಪೇಕ್ಷೆ ಮಾಡದೇ ಅವನ ಅಭಿವೃದ್ಧಿ ಪೂರ್ಣಗೊಳಿಸುವುದಾಗಬೇಕು ಹಾಗೂ ಸಮಾಜದ ಸಾಂಸ್ಕೃತಿಕ ಮತ್ತು ಜೀವನ ಮೌಲ್ಯಗಳ ರಕ್ಷಣೆ ಮಾಡುವುದಾಗಬೇಕು. ಇದು 'ಲಕ್ಷ್ಮಣ ರೇಖೆ'ಯಾಗಿದೆ, ಇದರ ಉಲ್ಲಂಘನೆಯನ್ನು ಅರ್ಥವ್ಯವಸ್ಥೆಯು ಯಾವುದೇ ಪರಿಸ್ಥಿತಿಯಲ್ಲಿ ಮಾಡುವುದಿಲ್ಲ.

೬. ಬೇರೆ–ಬೇರೆ ಕೈಗಾರಿಕೆಗಳು ಇತರೆಡೆಯಲ್ಲಿ ರಾಜ್ಯ, ವ್ಯಕ್ತಿ ಹಾಗೂ ಬೇರೆ ಸಂಸ್ಥೆಗಳ ಒಡೆತನದ ನಿರ್ಣಯವು ವ್ಯಾವಹಾರಿಕ ಆಧಾರದ ಮೇಲಾಗಬೇಕು.

ಇವೆಲ್ಲವುಗಳು ಕೆಲವು ಉನ್ನತ ವಿಚಾರಗಳಾಗಿವೆ. ಇವುಗಳನ್ನು ವಿಚಾರಿಸಿ ನಾವು ಅರ್ಥವ್ಯವಸ್ಥೆ ಮಾಡುವುದಾಗಬೇಕು.

ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ಎರಡು ಶಬ್ದಗಳನ್ನು ಪ್ರಯೋಗಿಸಿ ನಮ್ಮ ಅರ್ಥವ್ಯವಸ್ಥೆಯ ದಿಶೆಯ ಪರಿವರ್ತನೆಯನ್ನು ಹೇಳುವುದಾದರೆ – ಆ ಶಬ್ದಗಳು 'ವಿಕೇಂದ್ರೀಕರಣ' ಮತ್ತು 'ಸ್ವದೇಶಿ'ಯಾಗಿವೆ. ನಾವು ಇಂದು ಏನನ್ನು

ರಚಿಸುತ್ತಿದ್ದೇವೆಯೋ ಅದರಲ್ಲಿ 'ಕೇಂದ್ರೀಕರಣ' ತಿಳಿದು ಅಥವಾ ತಿಳಿಯದೆಯೇ ನಮ್ಮ ಆಸ್ಥೆಯ ವಿಷಯವಾಗಿಬಿಟ್ಟಿದೆ. ಕೇಂದ್ರೀಕರಣವೇ ಆರ್ಥಿಕವಾಗಿದೆ, ಇದು ನಮ್ಮ ಮಾನ್ಯತೆಯಾಗಿರುವುದರಿಂದ ಅದರ ದುಷ್ಪರಿಣಾಮಗಳ ಚಿಂತನೆ ಮಾಡದೇ ಅಥವಾ ತಿಳಿಯದೆಯೋ ಹತಾಶೆಯಿಂದ ನಾವು ಅದರೆಡೆಗೆ ಸಾಗುತ್ತಿದ್ದೇವೆ. ಇದೇ ಪರಿಸ್ಥಿತಿ 'ಸ್ವದೇಶಿಯ'ದಾಗಿದೆ. 'ಸ್ವದೇಶಿಯ'ದಾಗಿದೆ. 'ಸ್ವದೇಶಿ'ಯ ಕಲ್ಪನೆ ಕಳೆದ ಯುಗ ಹಾಗೂ ಮರುಳುವಿಕೆಯ ದ್ಯೋತಕವೆಂದು ತಿಳಿಯಲಾಗುತ್ತಿದೆ. ವಿದೇಶಿಗಳ ಪ್ರತಿಯೊಂದು ವಸ್ತುವನ್ನು ನಾವು ತುಂಬಾ ಉತ್ಸಾಹದಿಂದ ತೆಗೆದುಕೊಳ್ಳುತ್ತಿದ್ದೇವೆ. ವಿಚಾರ, ವ್ಯವಸ್ಥೆ, ಪದ್ಧತಿ, ಬಂಡವಾಳ, ಉತ್ಪಾದನೆ–ಪ್ರಣಾಳಿ, ಔದ್ಯೋಗಿಕರಣ ಹಾಗೂ ಉಪಭೋಗದ ಅಳತೆಗೋಲನ್ನು ನಾವು ಎಲ್ಲ ಕ್ಷೇತ್ರಗಳಲ್ಲಿ ವಿದೇಶಗಳ ಮೇಲೆಯೇ ಅವಲಂಬಿತರಾಗಿದ್ದೇವೆ. ಇದು ಪ್ರಗತಿಯ ಪಥವಲ್ಲ. ಇದರಿಂದ ಅಭಿವೃದ್ಧಿಯಾಗದು. ನಾವು ನಮ್ಮ 'ಸ್ವಂತಿಕೆ'ಯನ್ನು ಮರೆತು ಪರಾಧೀನರಾಗ ಹೊರಟಿದ್ದೇವೆ. 'ಸ್ವದೇಶಿ'ಯ ಭಾವನಾತ್ಮಕ ರೂಪವನ್ನು ಅರಿತು ನಾವು ಅದರ ಉತ್ಪತ್ತಿಯ ಆಧಾರ ಹಾಗೂ ಆಶ್ರಯದಾತರಾಗಬೇಕು.

## ನವ ನಿರ್ಮಾಣ ಮಾಡೋಣ

ಸಮಯದ ಅಭಾವದ ಕಾರಣದಿಂದ ನಾನು ಅರ್ಥವ್ಯವಸ್ಥೆ ಸಂಸ್ಥೆಯ ರಹಸ್ಯಗಳನ್ನು ಚರ್ಚೆ ಮಾಡಿರುವುದಿಲ್ಲ ಆದರೆ, ಅನೇಕ ಹಳೆಯ ಸಂಸ್ಥೆಗಳು ಬದಲಾವಣೆಯಾಗುತ್ತವೆ ಮತ್ತು ನವ ನಿರ್ಮಾಣವಾಗುವವು ಎಂಬುದನ್ನು ಸ್ಪಷ್ಟವಾಗಿ ಹೇಳಬಹುದು. ಈ ಪರಿವರ್ತನೆಯ ಕಾರಣದಿಂದ ಯಾವ ಹಳೆಯ ಸಂಸ್ಥೆಗಳಲ್ಲಿ ಸ್ವಾರ್ಥ ವ್ಯಾಪ್ತವಾಗಿದೆಯೋ, ಅವುಗಳಿಗೆ ಪೆಟ್ಟು ಬೀಳುವುದು. ಕೆಲವು ಜನ ಪ್ರಕೃತಿಯ ಅಪರಿವರ್ತನವಾದಿಗಳಾಗಿದ್ದಾರೆ, ಅವರಿಗೂ ಕೂಡಾ ಸುಧಾರಣೆ ಮತ್ತು ಉತ್ಪಾದನೆಯ ಈ ಪ್ರಯತ್ನಗಳಲ್ಲಿ ಕೆಲವು ತೊಂದರೆಗಳಾಗುವವು. ಆದರೆ ಔಷಧವಿಲ್ಲದೇ ರೋಗ ಗುಣಮುಖವಾಗುವುದಿಲ್ಲ ಮತ್ತು ವ್ಯಾಯಾಮದ ಕಷ್ಟವನ್ನನುಭವಿಸದೇ ಶಕ್ತಿಯೂ ಬರದು. ಆದ್ದರಿಂದ ನಾವು ವಾಸ್ತವಿಕತೆಯ ಮೋಹವನ್ನು ಬಿಟ್ಟು ನವನಿರ್ಮಾಣ ಮಾಡುವುದಾಗಬೇಕು. ನಮ್ಮ ನಿರ್ಮಾಣದಲ್ಲಿ ಹಳೆಯದರ ಪ್ರತಿ ಅನಾಸ್ಥೆ ಮತ್ತು ಅವಜ್ಞೆಯ ಭಾವವಿರಬಾರದು, ಆದರೆ ಅದಕ್ಕೆ ಅಂಟಿಕೊಂಡಿರಬೇಕಾದ ಅವಶ್ಯಕತೆಯಿಲ್ಲ. ಪರಿವರ್ತನೆಯ ಮಾರ್ಗ ಯಾವುದಿರ ಬೇಕು, ಇದನ್ನು ನಾವು ಮೇಲೆ ವಿಚಾರ ಮಾಡಿಯಾಗಿದೆ.

**ಉಪಸಂಹಾರ**

ನಾವು 'ಮನುಷ್ಯ'ನ ಸಮಗ್ರ ಮತ್ತು ಸಂಕಲಿತ ರೂಪದ ಕುರಿತಾಗಿ ಸ್ವಲ್ಪಾನುಸಾರ ಚಿಂತನೆ ಮಾಡಿಯಾಗಿದೆ. ಇದರ ಅಶ್ರಯದಲ್ಲಿ ನಾವು ನಡೆದರೆ ಭಾರತೀಯ ಸಂಸ್ಕೃತಿಯ ಶಾಶ್ವತ ಮೌಲ್ಯಗಳೊಂದಿಗೆ ರಾಷ್ಟ್ರೀಯತೆ, ಪ್ರಜಾತಂತ್ರ, ಸಮಾನತೆ ಮತ್ತು ವಿಶ್ವ ಐಕ್ಯತೆಯ ಆದರ್ಶಗಳನ್ನು ಸಮನ್ವಿತ ರೂಪದಲ್ಲಿಡಬಹುದು. ಇದರ ಹಳೆಯ ವಿರೋಧಗಳೆಲ್ಲವೂ ನಷ್ಟವಾಗಿ ಅವು ಪರಸ್ಪರವಾಗಿ ಪರಿಪೂರ್ಣವಾಗುವವು. ಮನುಷ್ಯ ತನ್ನ ಕಳೆದುಹೋದ ಪ್ರತಿಷ್ಠೆ ಮತ್ತು ಜೀವನೋದ್ದೇಶವನ್ನು ದೊರಕಿಸಿ ಕೊಳ್ಳಲು ಶಕ್ಯನಾಗುವನು.

* * * * *

# ಪಣ ಕಟ್ಟುವುದನ್ನು ಕಲಿಯಿರಿ

ದೀಪಾವಳಿಯಲ್ಲಿ ಲಕ್ಷ್ಮೀ ಪೂಜೆಯೊಂದಿಗೆ 'ಜೂಜಾಟ'ವಾಡುವ ಪದ್ಧತಿಯು ತುಂಬಾ ಪ್ರಾಚೀನವಾದುದಾಗಿದೆ. ಆ ದಿವಸ ಹೆಚ್ಚು ಜನರು 'ಜೂಜಾಟ'ವನ್ನು ಅನೈತಿಕ ಮತ್ತು ಅನುಚಿತವೆನ್ನುವುದುಂಟು. ಸಾಮಾನ್ಯವಾಗಿ ಶುಭ ಸಂಕೇತಕ್ಕಾಗಿ ಪಂದ್ಯ ಕಟ್ಟುತ್ತಾರೆ, ಆದರೆ ದುಡ್ಡಿರದಿದ್ದರೂ ಕೂಡಾ ಮಂಡಕ್ಕಿ ಬತ್ತಾಸುಗಳಿಂದ ಆಟದ ಪರಂಪರೆಯನ್ನು ಈಡೇರಿಸುತ್ತಾರೆ, ಆದರೆ 'ಪ್ಯೂರಿಟನ್' ಆಗುವ ದಾವೆ ಹೂಡುವುದಿಲ್ಲ, ಅವರು ಸ್ವಚ್ಛಂದವಾಗಿ ಆಡುತ್ತಾರೆ. ಕೆಲವೊಂದು ಪಟ್ಟಣಗಳಲ್ಲಿಯಂತೂ ದೀಪಾವಳಿಯ ಕೆಲ ದಿವಸ ರಸ್ತೆಯ ಇಕ್ಕೆಲಗಳಲ್ಲಿ ಸ್ವಚ್ಛಂದವಾಗಿ ಮದ್ಯಪಾನ ಮಾಡುತ್ತಾರೆ. ತಂದೆ–ಮಕ್ಕಳು ಒಂದೇ ಜೂಜು ಕಟ್ಟೆಯಲ್ಲಿ ಕುಳಿತು ಜೂಜಾಡುತ್ತಾರೆ. ಅಪರಾಧವಾಗುತ್ತಿದ್ದರೂ ಕೂಡಾ ಪೊಲೀಸ ವಿಭಾಗವು ಇತ್ತೀಚಿನ ದಿನಗಳಲ್ಲಿ ಕಾನೂನಿಗೆ ಮಣ್ಣೆರಚುತ್ತಿದೆ. ಒಂದು ವೇಳೆ ಯಾರನ್ನಾದರೂ ಬಂಧಿಸಿದರೆ ಸಾಮಾನ್ಯವಾಗಿ ಜನರು, ಪೊಲೀಸರು ಸರಿಯಾದುದನ್ನು ಮಾಡಲಿಲ್ಲ ಎಂದು ತಿಳಿದುಕೊಳ್ಳುತ್ತಾರೆ. ಬಹಳಷ್ಟು ಜನ ತಿಳಿದುಕೊಂಡಿರುವುದುಂಟು – ದೀಪಾವಳಿಯ ನಾಲ್ಕು ದಿವಸ ಸರಕಾರದ ವತಿಯಿಂದ ಬಾಜಿಯಾಡುವುದಕ್ಕೆ ಅವಕಾಶವಿರುತ್ತದೆ, ಆದರೆ ಇದು ನಿಜವಲ್ಲ. ಅನುಭವಿ ಜೂಜುಗಾರರಿಗಂತೂ ಕೇಳುವುದೇ ಬೇಡ, ಅವರಿಗಂತೂ ಅದು ಹಬ್ಬವೇ! ದೀಪಾವಳಿಯಲ್ಲಿ ಅನೇಕರಿಗೆ ಲಾಭವಾಗುತ್ತಿದೆಯಾದರೆ, ದಿವಾಳಿಯಾಗುವವರ ಸಂಖ್ಯೆಯೂ ಕಡಿಮೆಯಿಲ್ಲ. 'ದಿವಾಲಿ' ಮತ್ತು 'ದಿವಾಲಾ'ದಲ್ಲಿ ಶಬ್ದ ಸಾಮ್ಯತೆ ಸರಿಯಾಗಿದೆ. ಆದರೆ ಎರಡರ ಉತ್ಪತ್ತಿ ಎರಡು ಭಿನ್ನ ಧಾತುಗಳಿಂದಾಗಿವೆ. ಒಂದರ ಸಂಬಂಧ 'ದೀಪ'ವೆಂದಾದರೆ, ಇನ್ನೊಂದರ ಸಂಬಂಧ 'ದಿವಾಲಿ' ಯಿಂದ, ಆದರೂ ಎರಡರ ಮಿಶ್ರಣ ಅವಶ್ಯವಾಗುತ್ತದೆ.

**ಲಕ್ಷ್ಮೀ ಪೂಜೆ ಮತ್ತು ಜೂಜಾಟ :**

'ಜೂಜಾಟ' ಒಳ್ಳೆಯದೋ ಕೆಟ್ಟದೋ ಇದರ ರಗಳೆಯಲ್ಲಿ ತೊಡಗದೇ ಲಕ್ಷ್ಮೀ ಪೂಜೆಯೊಂದಿಗೆ ಜೂಜಾಟವಾಡುವ ಪದ್ಧತಿ ಏಕೆ ಪ್ರಾರಂಭವಾಯಿತು?

ಎನ್ನುವ ಪ್ರಶ್ನೆ ಅವಶ್ಯ ಹುಟ್ಟಿಕೊಳ್ಳುವುದುಂಟು. ಹೋಳಿ ಹುಣ್ಣಿವೆ, ದಸರಾ, ರಕ್ಷಾ ಬಂಧನ ಅನೇಕ ಹಬ್ಬಗಳಲ್ಲಿ ಯಾರೊಬ್ಬರೂ ಜೂಜಾಟದ ಹೆಸರನ್ನು ತೆಗೆದುಕೊಳ್ಳುವುದೇ ಇಲ್ಲ, ಆದರೆ ಲಕ್ಷ್ಮೀ ಪೂಜೆ ಜೂಜಾಟವಿಲ್ಲದೇ ನೀರಸವಾಗಿ ಕಾಣುವುದುಂಟು. ಉತ್ತರ ಪ್ರದೇಶದ ಒಂದು ಹಳ್ಳಿಯಲ್ಲಿ ದೀಪಾವಳಿಯ ಸಮಯದಲ್ಲಿ 'ಜೂಜಾಟ' ತುಂಬಾ ಸಡಗರದಲ್ಲಿತ್ತು; ಸಂಘ ಪರಿವಾರದ ಒಬ್ಬ ಸ್ವಯಂಸೇವಕನಿಂದ ಆತನ ತಂದೆ ಅಸಮಾಧಾನನಾಗಿದ್ದ. ಕಾರಣವಿಷ್ಟೇ ಆತ ಜೂಜಾಟವಾಡಲು ಹಿಂದೇಟು ಹಾಕಿದ್ದ. ವಿಷಯ ಯಾವಾಗ ನನ್ನೆಡೆಗೆ ಬಂದಿತೋ, ಆಗ ನಾನು ಆ ಸಭ್ಯ ಗ್ರಹಸ್ಥನಿಗೆ ತಿಳಿಸಿ ಹೇಳಿದೆ– 'ತಾವು ಜೂಜಾಟವೆನ್ನುವ ಕೆಟ್ಟ ಚಟವನ್ನು ನಿಮ್ಮ ಮಗನ ಮೇಲೆ ಏಕೆ ಹೇರುತ್ತೀರಿ? ಆತ ಹೇಳುತ್ತಾನೆ– "ಕೆಟ್ಟ ಚಟ, ಅರೆ! ಒಂದೆರಡು ಪಂದ್ಯ ಕಟ್ಟದಿದ್ದರೆ ಆತನ ಉತ್ಸಾಹ ಬಿಚ್ಚಿಕೊಳ್ಳುವುದೆಂತು? ನಾವಂತೂ ವ್ಯಾಪಾರಿಗಳು, ಲಕ್ಷಗಟ್ಟಲೇ ಗಳಿಸುತ್ತೇವೆ ಮತ್ತು ಲಕ್ಷಗಟ್ಟಲೇ ಕಳೆದುಕೊಳ್ಳುವುದು ಉಂಟು. ಒಂದು ವೇಳೆ ಈತನ ಹೃದಯ ಬಲಹೀನವಾಗಿದ್ದರೆ ಒಂದೇ ಸರತಿಯ ನಷ್ಟದಲ್ಲಿ ಹೃದಯಾಘಾತವಾಗಬಹುದು." ಅವರಿಗೆ ತಿಳಿ ಹೇಳಿದೆ– "ತಾವು ಚಿಂತೆ ಮಾಡದಿರಿ. ಈತ ಸಂಘ ಪರಿವಾರದ ಸ್ವಯಂಸೇವಕನಾಗಿದ್ದಾನೆ. ಆ ಕಾರಣವಾಗಿ ಈತ ತುಂಬಾ ದೊಡ್ಡ ಪಣ ಕಟ್ಟಿದ್ದುಂಟು. ಈತನ ಹೃದಯ ಬಲಹೀನವಾಗುವುದಿಲ್ಲ." ಆದರೆ ನನ್ನ ಮಾತು ಅವರ ಅರಿವಿಗೆ ಬರಲಿಲ್ಲ. ಸರಿ, ಅವರು ಏನೆಲ್ಲ ಹೇಳಿದರೋ ಅದರಿಂದ ನನಗೆ 'ಜೂಜಾಟ'ದ ಕೆಲವು ವ್ಯಾವಹಾರಿಕ ರಹಸ್ಯವೂ ಕಂಡಿತು.

**ಭದ್ರತೆಯ ಭಾವನೆ**

ಪ್ರಾಥಮಿಕ ಅರ್ಥಶಾಸ್ತ್ರದ ಪುಸ್ತಕಗಳಲ್ಲಿ ಉತ್ಪಾದನೆಯ ಐದು ಅಂಶಗಳ ವರ್ಣನೆ ದೊರೆಯುವುದು. ಭೂಮಿ, ಶ್ರಮ, ಬಂಡವಾಳ ಹಾಗೂ ವ್ಯವಸ್ಥೆಯೊಂದಿಗೆ ಧೈರ್ಯವೂ ಕೂಡಾ ಅವಶ್ಯವಾಗಿದೆ, ಮತ್ತು ಯಾರು ಧನಾರ್ಜನೆ ಮಾಡ ಬಯಸುತ್ತಾರೋ ಆ ವರ್ಗದಲ್ಲಿ ಇವೆಲ್ಲವುಗಳನ್ನು ಸಂಗ್ರಹಿಸುವ ಯೋಗ್ಯತೆ ಇರಬೇಕು. ಯಾರಲ್ಲಿ ಧೈರ್ಯದ ಅಭಾವವಿದೆಯೋ ಆತ ಸಾಧನಗಳಿದ್ದರೂ ಕೂಡ ಏನನ್ನು ಸಾಧಿಸದವನಾಗುತ್ತಾನೆ. ಆತ ಯಾವಾಗಲೂ ಭದ್ರತೆಯನ್ನು ಹುಡುಕುತ್ತಾನೆ. ಮನುಷ್ಯನ ಈ 'ಭದ್ರತೆ'ಯ ಭಾವನೆಯೇ ಆತನಿಗೆ ಅವಲಂಬಿತನಾಗಲು ಕಲಿಸಿದೆ. ಭದ್ರತೆಯ ಗ್ಯಾರಂಟಿ ಪಡೆಯಲು ಆತ ಶೋಷಣೆಯನ್ನು ಸಹಿಸುತ್ತಾನೆ. ಧನವನ್ನು ವ್ಯಾಪಾರದಲ್ಲಿ ತೊಡಗಿಸುವ ಬದಲಾಗಿ ತುಂಬಾ ಜನರು ಭೂಮಿಯಲ್ಲಿ ಹೂಳುತ್ತಾರೆ. ಕಾರಣವಿಷ್ಟೇ ಅದು ಸುರಕ್ಷಿತವಾಗಿರುವುದೆಂದು. ಇತ್ತೀತ್ತಲಾಗಿ

ಹಳ್ಳಿಗಳನ್ನು ಬಿಟ್ಟು ಧನವನ್ನು ಹೂಳಿಡುವ ಪದ್ಧತಿ ಕಡಿಮೆಯಾಗಿದೆಯೇನೋ, ಆದರೆ ಈಗಲೂ ಕೂಡಾ ಯಾವುದೇ ಕಂಪನಿಯ ಭಾಗವನ್ನು ಖರೀದಿಸುವ ಸ್ಥಾನದಲ್ಲಿ ತಮ್ಮ ಧನವನ್ನು ಅಂಚೆ ಕಛೇರಿಯಲ್ಲಿಡುವುದು ಇಲ್ಲವೇ ಸರಕಾರೀ ಸಾಲಪತ್ರ ಖರೀದಿಸುವುದು ಉಚಿತವೆಂದು ಭಾವಿಸುತ್ತಾರೆ. ಬ್ಯಾಂಕುಗಳಲ್ಲಿಯೂ ಸುರಕ್ಷತೆ ಇರುವಂತಹ ಬ್ಯಾಂಕುಗಳಲ್ಲಿ ಬಡ್ಡಿಯ ದರ ಕಡಿಮೆ ಸಿಗುತ್ತಿದ್ದರೂ ಕೂಡಾ ಹಣ ತೊಡಗಿಸುತ್ತಾರೆ. ಅರ್ಥಾತ್ ಸುರಕ್ಷತೆಗಾಗಿ, ಅವರು ಕೆಲವಷ್ಟು ನಷ್ಟದಲ್ಲಿರುತ್ತಾರೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅವರು ಧನಾರ್ಜನೆ ಮಾಡಲು ಶಕ್ಯವಾಗುವುದಿಲ್ಲ. ಒಬ್ಬ ಸಭ್ಯ ಗೃಹಸ್ಥನಲ್ಲಿ ಒಳ್ಳೆಯ ವ್ಯಾಪಾರ ನಡೆಯುತ್ತಿತ್ತು. ಆದರೂ ಆತ ನೌಕರೀ ಸಿಗಲೆಂದು ಬಯಸುತ್ತಿದ್ದ. ನಾನು ಆತನಿಗೆ ಕೇಳಿದರೆ ಹೇಳಿದ – "ಅಣ್ಣಾ ವ್ಯಾಪಾರವೇನೋ ಒಮ್ಮೆ ಲಾಭ ಮತ್ತೊಮ್ಮೆ ಹಾನಿ" ಎಂದು. ನಾನು ಹೇಳಿದೆ – "ಮತ್ತು ಒಮ್ಮೊಮ್ಮೆ ಅದೂ ಕೂಡಾ ಇಲ್ಲವಾಗುತ್ತೆ" ಎಂದು. ಹೂಂ ಗುಟ್ಟುತ್ತ ಆತ ಹೇಳುತ್ತಾನೆ – "ಇದಕ್ಕಿಂತಲೂ ಎಲ್ಲಿಯಾದರೂ ನೌಕರೀ ಸಿಕ್ಕರೆ ನಿಶ್ಚಿಂತವಾಗಿರುವೆ" ಎಂದು. ಇದೇ ರೀತಿ ಒಬ್ಬ ಸಭ್ಯ ಗ್ರಹಸ್ಥನಿದ್ದ ಸರಕಾರೀ ನೌಕರೀ ಗಿಟ್ಟಿಸುವ ಸಲುವಾಗಿ ತುಂಬಾ ಶ್ರಮಪಟ್ಟಿದ್ದ. ಕಾರಣ ಮಾತ್ರ ಇಷ್ಟೇ ಅಲ್ಲಿ ನೌಕರಿಯ ಭದ್ರತೆ ಇರುವುದೆಂದು. "ಸರಕಾರೀ ನೌಕರಿಯಲ್ಲಿ ಬಂಧನ ಅಧಿಕವಾಗಿರುವುದು" ಎಂದು ನಾನು ಹೇಳಿದಾಗ ಆತ ನುಡಿಯುತ್ತಾನೆ – "ನೌಕರಿಯ ನಿಶ್ಚಿಂತೆಯಂತೂ ಇರುತ್ತೆ ! ನಮಗೆ ಸ್ವತಂತ್ರತೆಯಿಂದ ಮಾಡುವುದೇನು. ಆರಾಮವಾಗಿ ಜೀವನೋಪಾಯ ಮಾಡುವುದು ಸಾಕು". ನಾನು ತಿಳಿದುಕೊಂಡೆ "ಯಾರಿಗೆ ಸ್ವಾತಂತ್ರ್ಯ ಪ್ರಿಯವಾಗಿದೆಯೋ, ಈತ ಆ ಸಭ್ಯ ಗ್ರಹಸ್ಥನಲ್ಲ" ಎಂದು.

**ಒಂದು ಮೌಲಿಕ ಪ್ರಶ್ನೆ**

ಈ ಮಹಾಶಯನ ಉತ್ತರದಿಂದ ಒಂದು ಮೌಲಿಕ ಪ್ರಶ್ನೆ ಉದ್ಭವವಾಗುತ್ತದೆ. ಜೀವನವೆಂದರೇನು? ಅದರ ಉದ್ದೇಶವೇನು? ಊಟ, ಕುಡಿಯುವುದು, ಆರಾಮವಾಗಿರುವುದು ಜೀವನವೆಂದಾದರೆ – ಆಗ ಈ ಎಲ್ಲ ಅವಶ್ಯಕತೆಗಳ ಪೂರೈಕೆಯಾಗುವ ಗ್ಯಾರಂಟಿ ಸಿಕ್ಕರೆ ಅದುವೇ ಸ್ವರ್ಗ, ಆದರೆ ಈ ಎಲ್ಲ ಅವಶ್ಯಕತೆಗಳ ವಿಷಯದಲ್ಲಿ ಮನುಷ್ಯ ಮತ್ತು ಪಶು ಎರಡೂ ಸಮಾನವೇ. ಮನುಷ್ಯ ಇವುಗಳಿಂದ ಇನ್ನಷ್ಟು ಮುಂದುವರಿಯಲು ಬಯಸುತ್ತಾನೆ. ವೇದಾಂತದ ಸಿದ್ಧಾಂತದ ಪ್ರಕಾರ ಅವನ ಈ ಇಚ್ಛೆ ಜಡ–ಜಗತ್ತಿನ ಬಂಧನದಿಂದ ಮೇಲೆದ್ದು ಚೈತನ್ಯದೊಂದಿಗೆ ಏಕರೂಪವಾಗುವ ಪ್ರವೃತ್ತಿಯ ಕಾರಣದಿಂದಲೇ. ಕಾರಣ ಏನೇ ಆಗಲಿ ಮನುಷ್ಯ

ಬಂಧನದಿಂದ ಮುಕ್ತಿ ಬಯಸುತ್ತಾನೆ. ಆದರೆ ಯಾರು ಮನುಷ್ಯನನ್ನು ಬಂಧನದಲ್ಲಿ ಕಟ್ಟಿ ಹಾಕಲು ಬಯಸುತ್ತಾರೆಯೋ ಅವರು ಆತನಿಗೆ ತನ್ನ ಈ ಸತ್ಯ ಸ್ವರೂಪದ ವಿಜೃಂಭಣೆಯಾಗಗೊಡುವುದಿಲ್ಲ. ಆದರೆ ಆತನಿಗೆ ಆತ ಅವಶ್ಯಕತೆಗಳ ಒಂದು ಗಂಟು (Bundle of wants) ಮಾತ್ರ ಎಂದು ಹೇಳುತ್ತಿರುತ್ತಾರೆ. ಯಾವ–ಯಾವ ರೀತಿ ಮನುಷ್ಯ ತನ್ನ ಈ ಹೀನ ಸ್ವರೂಪವನ್ನು ಒಪ್ಪುತ್ತಾನೆಯೋ ಹಾಗೆಯೇ ಆತ ತನ್ನ ಸ್ವಾತಂತ್ರ್ಯವನ್ನು ಇನ್ನೊಬ್ಬರ ಸುಪರ್ದಿಗೆ ಒಪ್ಪಿಸಿ, ಅದರ ಬದಲಿಗೆ ಈ ಅವಶ್ಯಕತೆಗಳ ಪೂರ್ತಿಗೊಳಿಸುವಿಕೆಯ ಗ್ಯಾರಂಟಿ ಮತ್ತು ತನ್ನ ರಕ್ಷಣೆ ಖರೀದಿಸುತ್ತಾನೆ. ಇಂಥ ವ್ಯಕ್ತಿಗಳಲ್ಲಿ ಧೈರ್ಯದ ಅತ್ಯಂತ ಅಭಾವವಾಗುವುದು ಮತ್ತು ಆತ ಇನ್ನೊಬ್ಬರ ಸಂಕೇತದ ಮೇಲೆ ಕುಣಿಯುವ ಬದಲಾಗಿ ಬೇರೇನನ್ನೂ ಮಾಡಲಾರ.

**ವಿಕಾಸದಲ್ಲಿ ಅಡಚಣೆ**

ಇಂದು ಭಾರತದ ಪರಿಸ್ಥಿತಿ ಹೆಚ್ಚು–ಕಡಿಮೆ ಹೀಗೆಯೇ ಇದೆ. ನಮಗೆ ಅನೇಕ ರೀತಿಯಿಂದ ಹೀಗೆ ತಿಳಿಸಲಾಗುತ್ತಿದೆ– ಜೀವನದ ಒಂದೇ ಒಂದು ಐತಿಹ್ಯವೆಂದರೆ – ಅನ್ನ, ವಸ್ತ್ರ, ಮತ್ತು ವಸತಿ. ದುರ್ಭಾಗ್ಯದಿಂದ ಅನ್ನ, ವಸ್ತ್ರ ಮತ್ತು ವಸತಿಯ ಯಾವುದೇ ಸ್ವರ್ಣಮಾನ ನಿಶ್ಚಿತವಾಗಿಲ್ಲ. ಎಷ್ಟೇ ಸಿಗಲಿ ಇದರ ಅಭಾವ ಇದ್ದೇ ಇರುತ್ತದೆ. ಕಾರಣ ಪ್ರತಿಯೊಬ್ಬ ಇವುಗಳನ್ನು ದೊರಕಿಸಿಕೊಳ್ಳಲು ಏನೆಲ್ಲ ಮಾಡಲು ತಯಾರಾಗಿದ್ದಾನೆ. ಆಡಳಿತವು ಅದರ ಮನಸ್ಥಿತಿಯ ಲಾಭ ಪಡೆಯಲು ಮುಂದಡಿ ಇಡುತ್ತಿದೆ. ಆಶ್ವಾಸನೆ ಕೊಡುವುದರೊಂದಿಗೆ ಆತ ನಮ್ಮ ಸ್ವಾತಂತ್ರ್ಯದ ಅಪಹರಣ ಮಾಡುತ್ತಿದ್ದಾನೆ. ನಮಗೆ ಸ್ವಾತಂತ್ರ್ಯದ ನೆನಪು ಬರಬಾರದೆಂದು, ನಮ್ಮ ಜೀವನದ ಭೌತಿಕ ರಹಸ್ಯವನ್ನು ಅತಿಶಯಗೊಳಿಸಿ ನಮ್ಮ ಮುಂದೆ ಇಡುತ್ತಿದ್ದಾನೆ. ನಿಶ್ಚಿತವಾಗಿಯೂ ಇದು ನಮ್ಮ ಅಭಿವೃದ್ಧಿಯಲ್ಲಿ ಅಡಚಣೆಯೇ ಆಗಿದೆ. ಇದರಿಂದ ಭಾರತೀಯ ಸಾಮಾನ್ಯ ನಾಗರಿಕ ಸಾಹಸಹೀನನಾಗುತ್ತಾನೆ; ಆತ ಏನನ್ನೂ ಅರ್ಪಣೆ ಮಾಡದವನಾಗುತ್ತಾನೆ. ವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡು ಆತ ದೇಶದ ಸ್ವಾತಂತ್ರ್ಯದ ರಕ್ಷಣೆ ಮತ್ತು ಅದಕ್ಕಾಗಿ ಬಲಿದಾನದ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾನೆ.

**ಪರಾಕ್ರಮದ ಆವಶ್ಯಕತೆ**

ಸ್ವಾತಂತ್ರ್ಯ ಮತ್ತು ಧೈರ್ಯ ಎರಡು ಒಟ್ಟಿಗೇ ಇರುತ್ತವೆ. ಧೈರ್ಯದಿಂದಲೇ ಲಕ್ಷ್ಮಿಯ ಆಗಮನವಾಗುತ್ತದೆ. ಅದಕ್ಕಾಗಿ ಹೆಲ್ಮೆಟ್‌ದ ಹಾಗೆ ಧೂಳು ಝಾಡಿಸಿ ಮುಂದಡಿ ಇಡುವವ 'ವೆಲಕ್ಯೂಲೇಟಿವ್' ವ್ಯಕ್ತಿಯಾಗಲಾರ. ಆದರೆ ಧೈರ್ಯದೊಂದಿಗೆ ಧುಮುಕುವ ವ್ಯಕ್ತಿ ಬೇಕು. ಹೀಗೆಯೇ ನರ ಶ್ರೇಷ್ಠರ ಸಹಾಯದಿಂದ

ಭಾರತದ ಅಭಿವೃದ್ಧಿಯಾಗಿದೆ. ಹೀಗೆಯೇ ಸಾಹಸೀ ವೀರರು ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಕ್ಕೆ ಆಧುನಿಕ ವೈಭವ ದೊರಕಿಸಿಕೊಟ್ಟಿದ್ದಾರೆ. ಈ ಪಾಶ್ಚಿಮಾತ್ಯ ರಾಷ್ಟ್ರಗಳು ಧನವನ್ನು ಹುಟ್ಟು ಹಾಕಿ ಸಾಮಾಜಿಕ ಸಮಸ್ಯೆಗಳನ್ನೇ ಸೃಜಿಸಿವೆ. ಆ ರಾಷ್ಟ್ರಗಳು ಮಾನವನ ನಿಯಂತ್ರಣ ಮಾಡದಾದವು. ನಾವು ಆ ಸಮಸ್ಯೆಗಳನ್ನು ಪರಿಹರಿಸಬೇಕಲ್ಲದೇ ಲಕ್ಷ್ಮಿ ಪ್ರಾಪ್ತಿಯ ಭ್ರಮೆಯಲ್ಲಿ ಯಾವ ಸಾಹಸದ ವೃತ್ತಿ ಇದೆಯೋ ಅದನ್ನು ತೊಡೆದುಹಾಕಬೇಕು.

## ಸಮುದ್ರ ಮಂಥನ

ಉದ್ಯೋಗ ಮತ್ತು ಸಾಹಸದಿಂದ ಸಮುದ್ರ ಮಂಥನ ಮಾಡಿಯೇ ಲಕ್ಷ್ಮಿಯನ್ನು ಒಲಿಸಿಕೊಳ್ಳಬಹುದು. ಲಕ್ಷ್ಮಿ ಹೊರಟುಹೋದ ಮೇಲೆ ಅವಳನ್ನು ವಿಷ್ಣುವಿನ (ರಾಷ್ಟ್ರ) ಶ್ರೀಚರಣಗಳಲ್ಲಿ ಅರ್ಪಿಸುವುದಾಗಬೇಕು. ಲಕ್ಷ್ಮಿಯನ್ನು ಸ್ವಾಗತಿಸಿ ಅನ್ನಕೂಟದ ದಿವಸ ಈಶ್ವರನಿಗೆ ಅರ್ಪಿಸಿಯೇ ಪ್ರಸಾದ ಸ್ವೀಕರಿಸಬೇಕು. ಈ ವೃತ್ತಿಯೇ ಸಂಪತ್ ಜನ್ಯ ಸಮಸ್ಯೆಗಳನ್ನು ಪರಿಹರಿಸಬಹುದು.

ನಾವು ದೀಪಾವಳಿಯ ದಿವಸ ದಾಳಗಳನ್ನೆಸೆಯುವುದು ಬೇಡ, ಆದರೆ ಇಂದು ರಾಷ್ಟ್ರೀಯ ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿ ಪಂದ್ಯ ಕಟ್ಟಲಿಕ್ಕೆ ತಯಾರಿದ್ದಾನೆಯೇ? ಒಂದು ವೇಳೆ ಹಾಗಿದ್ದರೆ ಅನ್ನ, ವಸ್ತ್ರ ಮತ್ತು ವಸತಿಯ ಘೋಷಣೆ ಬಿಟ್ಟು ಪುರುಷಾರ್ಥ ಸಾಧಿಸಬೇಕು. ಪುರುಷಾರ್ಥಿಯ ಮಾರ್ಗದಲ್ಲಿ ಅಡಚಣೆಗಳು ನಿಲ್ಲುವುದಿಲ್ಲ, ಆತ ಎಲ್ಲವನ್ನೂ ತುಂಡರಿಸಿ ಮುಂದುವರಿಯುತ್ತಾನೆ.

* * * * *

# ಯತೋ ಧಮಸ್ತತೋಜಯಃ

**ಯತೋ ಧರ್ಮಸ್ತತೋಜಯಃ**

ಯತೋಧರ್ಮಸ್ತತೋಜಯಃ ಅಂದರೆ ಎಲ್ಲಿ ಧರ್ಮವಿದೆಯೋ ಅಲ್ಲಿ ವಿಜಯವಿದೆ ಎಂದು ಮಹಾಭಾರತದಲ್ಲಿ ಹೇಳಲಾಗಿದೆ. ಆಗ ಜನರು ಮುಂದಿಡುವ ಪ್ರಶ್ನೆ ಏನೆಂದರೆ ಕೌರವರ ಪ್ರಮುಖ ಸೇನಾಪತಿಗಳಾಗಿದ್ದವರೆಲ್ಲರೂ ಮಹಾಭಾರತ ಯುದ್ಧದಲ್ಲಿ ಮೋಸದಿಂದಲೇ ಕೊಲ್ಲಲ್ಪಟ್ಟರು. ಭೀಷ್ಮನನ್ನು ಕೊಲ್ಲಲು ಶಿಖಂಡಿಯನ್ನು ಎದುರು ತರಲಾಯಿತು. ದ್ರೋಣಾಚಾರ್ಯರನ್ನು ಯುದ್ಧದಲ್ಲಿ ಮುಗಿಸುವ ಸಲುವಾಗಿ ಯುಧಿಷ್ಠಿರ ಸುಳ್ಳು ಹೇಳಿದ. ತನ್ನ ರಥದ ಚಕ್ರವನ್ನು ಮೇಲೆತ್ತಲು ಅರ್ಜುನನಿಂದ ಸ್ವಲ್ಪ ಸಮಯಾವಕಾಶವನ್ನು ಕೇಳಿದ ಸಂದರ್ಭದಲ್ಲಿಯೇ ಕರ್ಣನನ್ನು ವಧಿಸಲಾಯಿತು. ಜಯದ್ರಥನ ವಧೆಗೆ ಸೂರ್ಯದೇವ ಮೋಡಗಳೊಳಗೆ ಮರೆಯಾಗಿ ನಂತರ ಕಾಣಿಸಿಕೊಳ್ಳುವುದೇ ಕಾರಣ ಎನ್ನಲಾಗುತ್ತಿದೆ. ಇನ್ನು ದುರ್ಯೋಧನನ ಮೃತ್ಯು ಆತನ ಸೊಂಟದ ಕೆಳಭಾಗಕ್ಕೆ ಭೀಮ ಗದಾಪ್ರಹಾರ ಮಾಡಿದ್ದರಿಂದ ಆಯಿತು. ಅಂದರೆ ಇವುಗಳ ಆಧಾರದ ಮೇಲೆ ಪಾಂಡವರ ವಿಜಯಕ್ಕೋಸ್ಕರ ನಡೆದು ಹೋದ ಈ ಎಲ್ಲಾ ಕೃತ್ಯಗಳನ್ನು ಧರ್ಮಾನುಕೂಲವಾದವುಗಳು ಎಂದು ಹೇಳಬಹುದೇ? ಪಾಂಡವರು ಮೋಸ ಎಸಗಿದರು ಆದರೂ 'ಎಲ್ಲಿ ಧರ್ಮ ವಿದೆಯೋ ಅಲ್ಲಿ ಜಯವಿದೆ' ಎಂದು ವೇದವ್ಯಾಸರು ಮಾಡಿದ ಘೋಷಣೆ ಪರಸ್ಪರ ವಿರೋಧಾಭಾಸವೆಂದಾಗಲಿಲ್ಲವೇ? ಧರ್ಮದ ಹೆಸರಿನಲ್ಲಿ ಅಧರ್ಮವೆಸಗಿದಂತಾಗಲಿಲ್ಲವೆ? ಇದರ ಉತ್ತರ ಹುಡುಕುತ್ತಾ ಹೋದಂತೆ ನನಗೆ ವೇದ್ಯವಾದ ಅಂಶವೇನೆಂದರೆ ಕೌರವರ ಮತ್ತು ಪಾಂಡವರ ನಡುವೆ ಮೂಲಭೂತವಾದ ದೊಡ್ಡ ಅಂತರವಿತ್ತು. ಕೌರವ ಪಕ್ಷದ ಪ್ರತಿಯೊಬ್ಬನೂ "ವ್ಯಕ್ತಿವಾದಿಯಾಗಿದ್ದ" ಹಾಗಾಗಿ ಆತ ಅನರ್ಥವನ್ನೇ ಘೋಷಿಸುತ್ತಿದ್ದ, ಭೀಷ್ಮಪಿತಾಮಹ ಮಹಾನ್‌ರಾಗಿಯೇ ಇದ್ದರು ಆದರೆ ಅವರೊಳಗಿನ 'ವ್ಯಕ್ತಿವಾದಿ' ದೃಷ್ಟಿಕೋನ ಇಲ್ಲಿ ಅವರ ಪ್ರತಿಜ್ಞೆಯಿಂದಲೇ ಪ್ರಕಟವಾಗುತ್ತದೆ.... 'ಶಿಖಂಡಿ ನನ್ನೆದುರು ಬಂದಾಗ ನಾನು ಬಾಣ ಬಿಡುವುದಿಲ್ಲ ಎಂದು ನಾನು ಪ್ರತಿಜ್ಞೆ ಮಾಡಿದ್ದೇನೆ'. ಆದರೆ ಅದೇ ಭೀಷ್ಮಪಿತಾಮಹ ನಾನು ಒಬ್ಬ ಸೇನಾಪತಿ, ಸೇನೆಯ ಸಂಪೂರ್ಣ ಹೊಣೆ ನನ್ನ

ಮೇಲೆ ಇದೆ ಎಂದು ಯೋಚಿಸಲೇ ಇಲ್ಲ. ಏಕೆಂದರೆ ಅವರಿಗೆ ತನ್ನದೇ ಪ್ರತಿಜ್ಞೆಯ ಚಿಂತೆ ಕಾಡುತ್ತಿತ್ತು. ಇನ್ನೊಂದು ಕಡೆ ಇದೇ ರೀತಿ ಅರ್ಜುನ ತನ್ನ 'ವ್ಯಕ್ತವಾದಿ' ದೃಷ್ಟಿಕೋನವನ್ನು ಮುಂದಿಟ್ಟುಕೊಂಡು ಶಸ್ತ್ರತ್ಯಾಗ ಮಾಡುವ ವಿಚಾರ ವ್ಯಕ್ತಪಡಿಸಿದಾಗ ಭಗವಾನ್ ಕೃಷ್ಣ ಧರ್ಮದ ಮಹತ್ತ್ವವನ್ನು ಅರ್ಜುನನಿಗೆ ತಿಳಿ ಹೇಳುತ್ತಾ ಒಂದು ವೇಳೆ ನೀನು ತನ್ನ ಬಗ್ಗೆ ಮಾತ್ರ ಯೋಚಿಸಿದಲ್ಲಿ ಅದು ನಿನ್ನ ವ್ಯರ್ಥ ಚಿಂತನೆಯಾಗುತ್ತದೆ ಎಂದು ಹೇಳಿದ. ಆಗ ಅರ್ಜುನ 'ನಾನು' ಎಂಬುವುದನ್ನು ಬಿಟ್ಟು 'ನಾವು' ಎಂಬುದನ್ನು ಸ್ವೀಕರಿಸಿದ. ಭೀಷ್ಮಪಿತಾಮಹ ಮಾತ್ರ ತನ್ನ ಪಕ್ಷದ ಬಗ್ಗೆಯಾಗಲಿ ಅಥವಾ ಸಮಾಜದ ಬಗ್ಗೆಯಾಗಲಿ ಚಿಂತಿಸಲೇ ಇಲ್ಲ. ಕೇವಲ 'ನಾನು' ಎಂಬುವುದರ ಬಗ್ಗೆ ಮಾತ್ರ ಯೋಚಿಸಿದ. ಇತ್ತ ಭಗವಾನ್ ಶ್ರೀಕೃಷ್ಣನೂ ಮಹಾಭಾರತ ಯುದ್ಧದಲ್ಲಿ ಶಸ್ತ್ರಧಾರಣೆ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದ. ಆದರೂ ಶಸ್ತ್ರಧಾರಣೆ ಮಾಡಲೇಬೇಕಾದ ಸಂದರ್ಭ ಒದಗಿ ಬಂದಾಗ ಮುಂದೆ ನೋಡಲಿಲ್ಲ. ಸಮುದಾಯದ ಹಿತಕ್ಕಾಗಿ ವೈಯಕ್ತಿಕ ಹಿತದ ಬಗ್ಗೆ ಯೋಚಿಸಲೇ ಇಲ್ಲ. ಧರ್ಮರಾಜ ಯುಧಿಷ್ಠಿರನೂ ಸಹ ಕೃಷ್ಣನ ಮಾತನ್ನು ಒಪ್ಪಿ 'ಸಮಷ್ಠಿ'ಯ ಹಿತಕ್ಕನುಗುಣವಾಗಿ ತನ್ನ ರಥವನ್ನು ಸ್ವಲ್ಪ ಕೆಳಕ್ಕಿಳಿಸಿದನು. ಅತ್ತ ದ್ರೋಣಾಚಾರ್ಯರಿಗೆ ಪುತ್ರಮೋಹ ಕಾಡುತ್ತಿತ್ತು. ಪುತ್ರವಧೆಯ ವಿಚಾರ ಕೇಳಿದೊಡನೆ ಶಸ್ತ್ರತ್ಯಾಗ ಮಾಡಿದರು. ಕರ್ಣನಂತೂ ಸೂರ್ಯದೇವ ಕರುಣಿಸಿದ ಕವಚ ಕುಂಡಲಗಳನ್ನು ಬೇರೆ ಯಾರಿಗೂ ನೀಡಬಾರದೆಂದು ಎಚ್ಚರಿಕೆ ಇದ್ದರೂ ಸಹ ಅವನು ಇಂದ್ರನಿಗೆ ಅರ್ಪಿಸಿಬಿಟ್ಟ. ಆದರೆ ಕರ್ಣನಿಗೆ ತನ್ನ 'ದಾನವೀರತೆ'ಯ ಬಗ್ಗೆಯೇ ಗಮನವಿತ್ತು. ಹಾಗಾಗಿ ಆತ ಸರ್ವರ ಹಿತದ ಬಗ್ಗೆ ಚಿಂತಿಸಲಿಲ್ಲ. ಇತ್ತ ಕುಂತಿಯು ಸಹ ಸಂದರ್ಭ ಬಂದಾಗ 'ನೀನು ನನ್ನ ಪುತ್ರ' ಎಂದು ಕರ್ಣನಿಗೆ ತಿಳಿಸಿಯೇ ಬಿಟ್ಟಳು. ಕುಂತಿ ಅವಿವಾಹಿತಳಾಗಿದ್ದಾಗಲೇ ಕರ್ಣನ ಜನನವಾಗಿತ್ತು. ಈ ಸಂಗತಿಯನ್ನು ತಿಳಿದ ಕುಂತಿ ತನ್ನ ಸ್ವ–ಅಪಮಾನವನ್ನು ಸಹಿಸಿಕೊಳ್ಳಬೇಕಾಯಿತು. ಆದರೆ ಸಮಾಜದ ಹಿತಕ್ಕಾಗಿ ಆಕೆ ಹಾಗೆ ಘೋಷಿಸಿದ್ದು ಮಾತ್ರವಷ್ಟೇ ಅಲ್ಲ ಜೊತೆಗೆ 'ಅರ್ಜುನನನ್ನು ಬಿಟ್ಟು ಬಳಿಕ ಯಾವ ಪಾಂಡವರ ಮೇಲೂ ಬಾಣಪ್ರಯೋಗ ಮಾಡುವುದಿಲ್ಲವೆಂಬ' ವಚನವನ್ನು ಪಡೆದುಕೊಂಡಳು. ಅತ್ತ ಭೀಷ್ಮನ ಸಾವಿನ ರಹಸ್ಯ ಯಾರಿಗೂ ತಿಳಿದಿರಲಿಲ್ಲ. ಆದರೆ ದ್ರೌಪದಿ ಹೋಗಿ ಕೇಳಿದಾಗ ಭೀಷ್ಮ 'ಶಿಖಂಡಿ ತನ್ನೆದುರಿಗೆ ಬಂದಾಗ ತಾನು ಯುದ್ಧ ಮಾಡುವುದನ್ನು ನಿಲ್ಲಿಸುವೆ' ಎಂದು ಹೇಳಿದ. ಹೀಗೆ ಮಾಡುವುದು ಸಮುದಾಯ ಹಿತಕ್ಕೆ ಮಾರಕ ಎಂದು ಭೀಷ್ಮ ಯೋಚಿಸಲೇ ಇಲ್ಲ. ಆದರೆ ಆತನಿಗೆ ತನ್ನದೇ ಹಿತದ ಕಾಳಜಿ ಇತ್ತು.

ಅಂದರೆ 'ಸಮಷ್ಟಿವಾದ'ವೇ ಧರ್ಮ, 'ವ್ಯಕ್ತಿವಾದ' ಅಧರ್ಮವಾಗುತ್ತದೆ. ರಾಷ್ಟ್ರಕ್ಕಾಗಿ ದುಡಿಯುವುದು ಧರ್ಮ. 'ರಾಷ್ಟ್ರಕಾರ್ಯ'ವನ್ನು ನೆರವೇರಿಸುವಾಗ ಏನೇ ಬಂದರೂ ನಿರ್ವಹಿಸಲೇ ಬೇಕಾಗುತ್ತದೆ. ಸತ್ಯ, ಸುಳ್ಳು ಸರ್ವರನ್ನು ಸಲಹುವಿಕೆಯಿಂದಲೇ ಸಮಷ್ಠಿಯ ಹಿತವಿದೆ. ಆದರೆ ಧರ್ಮರಾಜನೇ ಸುಳ್ಳು ಹೇಳಿದ್ದಾನೆ. ಆದ್ದರಿಂದ ನಾವೂ ಸಹ ನಮ್ಮ ದೈನಂದಿನ ಬದುಕಿನಲ್ಲಿ ಸುಳ್ಳು ಹೇಳಬಹುದು ಎಂಬುದು ಇದರ ಅರ್ಥವಲ್ಲ. ಸುಳ್ಳು ಹೇಳುವುದೆಂದರೆ ಅದು ಕೆಟ್ಟದ್ದು ಎಂದೇ ಅರ್ಥ. ಆದರೆ ಇಲ್ಲಿ ರಾಷ್ಟ್ರದ ಹಾಗೂ ಸಮಷ್ಠಿಯ ವಿಚಾರಮಾಡಿ ಕಾರ್ಯ ನಿರ್ವಹಿಸಲಾಗಿದೆಯೇ ಎಂಬ ಪ್ರಶ್ನೆ ಮುಖ್ಯವಾಗುತ್ತದೆ.

* * * * *

# ಇತಿಹಾಸದ ಕಥೆ

**ಶಕ್ತಿಯುತ ಭಾರತ**

ಸಿಂಧು ನದಿಯ ಶಾಂತ ಪ್ರವಾಹ ಇಂದು ಪ್ರಕ್ಷುಬ್ದವಾಗಿಬಿಟ್ಟಿದೆ. ಮಗಧದ ಸೇನೆ ಅದರ ಎಡದಂಡೆಯಲ್ಲಿ ಬೀಡುಬಿಟ್ಟಿದೆ. ಕುದುರೆಗಳ ಕೆನೆತ ಹಾಗೂ ಆನೆಗಳ ಘೀಳಿಡುವಿಕೆಯಿಂದಾಗಿ ಮತ್ತೊಮ್ಮೆ ಅಲ್ಲಿನ ತಪೋವನದ ತಪಸ್ವಿಗಳ ಶಾಂತಿಗೆ ಧಕ್ಕೆ ಉಂಟಾಗಿದೆ. ಸೇನೆಯ ಒಂದು ವಿಭಾಗ ಎಂಟು ದಿನಗಳ ಹಿಂದೆಯೇ ಇಲ್ಲಿಗೆ ಆಗಮಿಸಿತ್ತು. ಎರಡನೆಯದು ಇಂದೇ ಮಗಧದಿಂದ ಬಂದಿದೆ. ಅದರ ಎಲ್ಲಾ ಕರ್ಮಚಾರಿಗಳು ಶಿಬಿರದ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಶತ್ರು ಇನ್ನೆಂದಿಗೂ ತಲೆ ಎತ್ತದಂತೆ ಈ ಬಾರಿ ತಕ್ಕ ಶಾಸ್ತಿ ಮಾಡಲೇಬೇಕು ಎಂದು ಒಬ್ಬ ಸೈನಿಕ ಹೇಳುತ್ತಾ ಡೇರೆಯ ಗೂಟದ ಮೇಲೆ ಸುತ್ತಿಗೆಯಿಂದ ಬಲವಾಗಿ ಹೊಡೆದ.

ಡೇರೆಯ ಹಗ್ಗವನ್ನು ಹಿಡಿದು ಎಳೆಯುತ್ತಿದ್ದ ಒಬ್ಬ ಯುವಕ ಆ ಮಧ್ಯವಯಸ್ಕ ಸಿಪಾಯಿಗೆ ಹೇಳಿದ... ಅಲ್ಲಾ ಕಾಕಾ...! ಆ ಅಲೆಕ್ಸಾಂಡರ್‌ಗೆ ಕೆಟ್ಟ ಪರಿಸ್ಥಿತಿ ಒದಗಿದರೂ ಆ ಯವನರು ಭಾರತದ ಮೇಲೆ ವಿಜಯ ಸಾಧಿಸುವ ಕನಸು ಕಾಣುತ್ತಿದ್ದರಲ್ಲ...!

...ಇಲ್ಲಿ ಶತ್ರುವಿನ ಉದ್ಧಟತನದ ಅಥವಾ ಧೈರ್ಯದ ಪ್ರಶ್ನೆ ಎಲ್ಲಿದೆ ಹೇಮನಾಥ? ಇಲ್ಲಿ ನಮ್ಮದೇ ದೋಷವಿದೆ. ನಮ್ಮ ಅಂತರ್ರಾಷ್ಟ್ರೀಯ ಧೋರಣೆಗಳೇ ಅವರು ನಮ್ಮ ಮನೆಯೊಳಗೆ ನುಗ್ಗಲು ಪ್ರೇರೇಪಿಸುತ್ತವೆ. ಆದರೆ ಇಂದು ಭಾರತವರ್ಷ ಅಲೆಕ್ಸಾಂಡರ್ ಕಾಲಕ್ಕಿಂತಲೂ ಅಧಿಕ ಸಂಘಟಿತ ಮತ್ತು ಶಕ್ತಿಶಾಲಿ ರಾಷ್ಟ್ರವಾಗಿದೆ. ಆದರೆ ಇಂದು ನಾವು ನಮ್ಮದೇ ಭಾರತದ ರಕ್ಷಣೆಗಾಗಿ ಹೋರಾಡಲು ಅಣಿಯಾಗಿದ್ದೇವೆ. ಅಂದಿನ ಪರಿಸ್ಥಿತಿಗೂ ಇಂದಿಗೂ ಎಷ್ಟು ಅಂತರವಿದೆ...!

...ಕಾಕಾ...! ನೀವು ಸಹ ಯುದ್ಧ ಮಾಡಿದ್ದಿರೇನು...? ಹೇಮನಾಥ್ ಕೇಳಿದ. ಅರುಣಾಭ ನಿಟ್ಟುಸಿರು ಬಿಡುತ್ತಾ ಹೇಳಿದ 'ನನಗೆ ಅಂತಹ ಭಾಗ್ಯವಾದರೂ ಎಲ್ಲಿಂದ ಸಾಧ್ಯ...?' ಅಲೆಕ್ಸಾಂಡರ್ ಭಾರತದ ಮೇಲೆ ಆಕ್ರಮಣ ಮಾಡಿದ್ದಾನೆ ಎಂದು ಕೇಳಿದ ತಕ್ಷಣ ನನ್ನ ಭುಜಗಳು ಅದುರಲಾರಂಭಿಸಿದವು. ರಕ್ತ ಕುದಿಯಲಾರಂಭಿಸಿತು. ನಮ್ಮ ಖಡ್ಗಗಳು ಒರೆಯಿಂದ ಹೊರಗೆ ಬರಲು ಆಸ್ಪದ

ನೀಡಲೇ ಇಲ್ಲ. ನಮ್ಮ ಬಾಣ ಬತ್ತಳಿಕೆಯಲ್ಲಿಯೇ ಉಳಿಯಿತು. ಇನ್ನೂ ಹೇಳಬೇಕೆಂದರೆ ಹೇಮನಾಥ....! ಆಗ ನಮ್ಮಲ್ಲಿ ಕೆಲವೇ ಮಂದಿ ಮಗಧದಿಂದಾಚೆಗೆ ಯೋಚಿಸಲು ಶಕ್ತರಾಗಿದ್ದರು. (ಒಬ್ಬ ಸೈನಿಕನನ್ನು ತೋರಿಸಿ) ...ಈತ ಆಗ ಏನು ಉತ್ತರ ನೀಡಿದ್ದ ಎಂದು ಈ ಹರಿಶೀಲನನ್ನೇ ಕೇಳು...ಎಂದ.

ಹರಿಶೀಲ ಹೇಳಿದ ... ಕಳೆದುಹೋದ ಸಂಗತಿಗಳನ್ನು ಈಗ ನೆನಪಿಸಿ ನಾಚಿಕೆಪಟ್ಟುಕೊಳ್ಳುವಂತೆ ಮಾಡುವೆ ಏಕೆ ಬಂಧು..? ನಾನಂತೂ ಈಗ ಸಮಸ್ತ ಭಾರತವನ್ನು ನನ್ನದೆಂದು ತಿಳಿಯುತ್ತೇನೆ. ಈಗ ಇಮ್ಮಡಿಯಾಗಿ ಶತ್ರುಸಂಹಾರ ಮಾಡಿ ನನ್ನ ಋಣವನ್ನು ತೀರಿಸುತ್ತೇನೆ. ಅಮಾತ್ಯರಾಕ್ಷಸರೇ ನಂದವಂಶ ಮತ್ತು ಮಗಧದಿಂದಾಚೆಗೆ ಯೋಚಿಸಲಾರರಾಗಿದ್ದಾರೆಂದರೆ ಇನ್ನು ನಮ್ಮಂಥವರ ಕಥೆ ಏನು...? ಹರಿಶೀಲ ಸ್ವಲ್ಪಮಟ್ಟಿಗೆ ಉಲ್ಲಸಿತನಾಗಿಯೇ ಹೇಳಿದ್ದ.

ಅರುಣಾಭ ಹೇಳಿದ... ಇಂದಂತೂ ಅಮಾತ್ಯರಾಕ್ಷಸರ ರಾಷ್ಟ್ರೀಯತೆಯನ್ನು ಕೊಂಡಾಡಲೇಬೇಕು. ಮೊದಮೊದಲು ಅವರು ಚಂದ್ರಗುಪ್ತರನ್ನು ವಿರೋಧಿಸುತ್ತಿದ್ದರು ಆದರೆ ಯಾವಾಗ ಸೆಲ್ಯೂಕಸ್‌ನ ರಾಯಭಾರಿ ದೇಶದ್ರೋಹದ ಸಂದೇಶದೊಂದಿಗೆ ಅವರ ಬಳಿ ಬಂದನೋ ಆಗ ಇಂತಹ ರಾಷ್ಟ್ರೀಯ ವಿಪತ್ತಿನ ಸಮಯದಲ್ಲಿ ಮಹಾರಾಜರೊಂದಿಗಿರುವುದೇ ಯೋಗ್ಯ ಎಂದು ಅವರು ತೀರ್ಮಾನಿಸಿದರು. ಆಗ ಅವರು ಸೆಲ್ಯೂಕಸ್‌ನ ರಾಯಭಾರಿಗೆ ಹೇಳಿದ್ದೇನು ಗೊತ್ತೇ...? ...! ಏ ರಾಯಭಾರಿ... ನೀನು ಹೋಗಿ ಆ ಸೆಲ್ಯೂಕಸ್‌ನಿಗೆ ಹೇಳು... ಆ ಪರ್ವತಕ ಭಾರತದ ಕಟ್ಟಕಡೆಯ ದೇಶ ದ್ರೋಹಿ. ಪ್ರತಿಯೊಬ್ಬ ದೇಶದ್ರೋಹಿ ತನ್ನ ಪಾಪಕೃತ್ಯಕ್ಕಾಗಿ ಎಲ್ಲಿ ಪ್ರಾಯಶ್ಚಿತ್ತ, ಮಾಡಿಕೊಳ್ಳುತ್ತಾನೋ....ಅಲ್ಲಿಗೆ ಆತ ಈಗಾಗಲೇ ತಲುಪಿ ಬಿಟ್ಟಿದ್ದಾನೆ. ಗಗನದಲ್ಲಿ ಕುಸುಮವನ್ನು ಅರಸುವ ಹಾಗೆ ಭಾರತದಲ್ಲಿ ದೇಶದ್ರೋಹಿಗಳನ್ನು ಹುಡುಕುವ ವ್ಯರ್ಥಪ್ರಯತ್ನ ಮಾಡುವ ಅವಶ್ಯಕತೆ ಇಲ್ಲ...

ರಾಮವೀರ ಹೇಳಿದ... ಈ ಕಾರಣಕ್ಕಾಗಿಯೇ ಇಂದು ಭಾರತ ಇಷ್ಟು ಶಕ್ತಿಯುತವಾಗಿದೆ. ಸಂಪತ್ತು ಹೊಂದಿರುವಾತ ದೇಶದೊಂದಿಗೆ ಕೈಜೋಡಿಸದಿದ್ದಲ್ಲಿ ಆತನನ್ನು ಕ್ಷಮಿಸಲಾಗುತ್ತದೆ. ಆದರೆ ಸಂಕಷ್ಟ ಕಾಲದಲ್ಲಿ ಶತ್ರು ಪಕ್ಷದೊಂದಿಗೆ ಕೈಜೋಡಿಸಿ ದೇಶದ್ರೋಹ ಎಸಗುವವನು ಹಾಗಿರಲಿ, ದೇಶದ ಆಗು ಹೋಗುಗಳಿಗೆ ಸ್ಪಂದಿಸದೇ ಮೌನವಾಗಿರುವವನೂ ಸಹ ಕ್ಷಮಿಸಲ್ಪಡಲಾರ. ಈ ಕಾರಣಕ್ಕಾಗಿಯೇ ತಾನೆ ಅಮಾತ್ಯರಾಕ್ಷಸ ಪುನಃ ಮಂತ್ರಿ ಪದವಿಯನ್ನು ಅಲಂಕರಿಸಿದ್ದಾರೆ. ಸೆಲ್ಯೂಕಸ್‌ನ ಆಕ್ರಮಣವಂತೂ ನಮಗೆ ವರದಾನ ಸ್ವರೂಪವಾಗಿದೆ. ಈತ ನಮ್ಮೆಲ್ಲರನ್ನೂ ಎಷ್ಟು ಹತ್ತಿರಕ್ಕೆ ತಂದಿದ್ದಾನಲ್ಲ...! ಇಂದು ಸಮಸ್ತ ಭಾರತ ಏಕಕಂಠದಿಂದ ಮಾತಾಡುತ್ತದೆ ಮತ್ತು ಏಕೈಕ ಸಂಜ್ಞೆಯಿಂದ ಮುಂದಡಿಯಿಡುತ್ತಿದೆ. ಈ ಏಕತೆಯಲ್ಲಿ

ಅದೆಂತಹ ಶಕ್ತಿ ಇದೆ...! ಇದು ಸೆಲ್ಯೂಕಸ್‌ನಿಗೂ ಅರ್ಥವಾಗುತ್ತದೆ. ಎಂದು ಹೇಳುತ್ತಾ ಹರಿಶೀಲ ಉತ್ತೇಜಕವಾಗಿ ನಿಂತುಕೊಂಡ. ಅಷ್ಟರಲ್ಲಿ ಹರಿಶೀಲ ಯಾವ ಏಕತೆಯ ವರ್ಣನೆಯನ್ನು ಮಾಡಿದ್ದನೋ ಅದನ್ನೇ ಪ್ರತ್ಯಕ್ಷವಾಗಿ ಸಾಕ್ಷಾತ್ಕರಿಸುತ್ತಿದೆಯೇನೋ ಎಂಬಂತೆ ದುಂದುಭಿಯ ಸದ್ದು ಮೊಳಗಿತ್ತು.

**ರಾಷ್ಟ್ರೀಯ ಮಹತ್ವಾಕಾಂಕ್ಷೆಗಳ ಅವಶ್ಯಕತೆ**

ಮಹತ್ವಾಕಾಂಕ್ಷಿಯಾಗ ಬಯಸುವುದು ಇಂದು ಸಮಂಜಸವಾಗಲಾರ ದೆನಿಸಿದರೂ ನಮ್ಮ ರಾಷ್ಟ್ರೀಯ ಪರಂಪರೆಯಲ್ಲಿ ಮಹತ್ವಾಕಾಂಕ್ಷೆಯ ಬಗ್ಗೆ ಯಾವತ್ತೂ ಗೌರವವಿದೆ. ಸಂತೋಷ ಮತ್ತು ಶಾಂತಿಯು ಮನುಷ್ಯನನ್ನು ಗೊತ್ತುಗುರಿ ಯುಳ್ಳವನನ್ನಾಗಿಸಿ ಅವನಲ್ಲಿ ಸೋಮಾರಿತನವನ್ನು ಸೃಷ್ಟಿ ಮಾಡುತ್ತಿದೆಯಾದರೆ ಅಸಂತೋಷ ಮತ್ತು ಅಶಾಂತಿಗಳು ಆತನ ಬದುಕಿಗೆ ಚಲನೆಯನ್ನು ನೀಡುತ್ತ ಆತನಲ್ಲಿ ಪೌರುಷತ್ವದ ಆವಾಹನೆಗೊಳಿಸುತ್ತವೆ. ಪರಾಕ್ರಮಿಯಾದವನು ನಿಷ್ಕ್ರಿಯನಾಗಿರಲಾರ ಮತ್ತು ಧರ್ಮ, ಅರ್ಥ, ಕಾಮ, ಮೋಕ್ಷ, ಮತ್ತು ಪುರುಷಾರ್ಥ ಈ ಚತುಷ್ಟಂಗಗಳ ಆರಾಧನೆಯ ಆದೇಶವು ನಮಗೆ ಸನಾತನ ಕಾಲದಿಂದಲೇ ಪ್ರದತ್ತವಾದದು. ಯಾರು ತಮ್ಮ ಬದುಕಿನಲ್ಲಿ ಈ ಪುರುಷಾರ್ಥವನ್ನು ಅನುಷ್ಠಾನಗೊಳಿಸುವುದಿಲ್ಲವೋ ಆತನ ಬದುಕಿಗೆ ಪೌರುಷದ ಸಂಜ್ಞೆಯನ್ನು ನೀಡಲಾಗದು ಹಾಗೇನೇ ಆತನ ಬದುಕು ಸಾರ್ಥಕವೆನಿಸಲಾರದೂ ಕೂಡ. ಆದ್ದರಿಂದ ಜೀವನದಲ್ಲಿ ಬಂಗಾರದಂತಹ ಕನಸನ್ನು ಕಟ್ಟಿಕೊಳ್ಳುವುದು ಹೇಯ ಹಾಗೂ ನಿಕೃಷ್ಟವೆನಿಸುವುದಿಲ್ಲ ಬದಲಾಗಿ ಪ್ರಶಸ್ತವಾದ ಮತ್ತು ಉತ್ತಮ ಧ್ಯೇಯವಾಗುತ್ತದೆ.

ಮಹತ್ವಾಕಾಂಕ್ಷೆಯಂತೂ ಬೇಕು. ಆದರೆ ಅದು ಒಬ್ಬ ವ್ಯಕ್ತಿಯದ್ದಾಗಿರದೆ ರಾಷ್ಟ್ರದ್ದಾಗಿರಬೇಕು. ವ್ಯಕ್ತಿವಾದದ ಆರಾಧನೆಯಿಂದ ಸೃಷ್ಟಿಯಿಂದ ಮಹತ್ವಾಕಾಂಕ್ಷೆಯು ಧಾರ್ಮಿಕ ಕ್ಷೇತ್ರದಲ್ಲಿ ಶ್ರೇಷ್ಠತೆಯನ್ನು ಆರ್ಥಿಕ ಕ್ಷೇತ್ರದಲ್ಲಿ 'ಬಂಡವಾಳಶಾಹಿ' ಪ್ರವೃತ್ತಿಯನ್ನು, ರಾಜಕೀಯ ಕ್ಷೇತ್ರದಲ್ಲಿ 'ಯಾಜಮಾನ್ಯ ಪ್ರವೃತ್ತಿ'ಯನ್ನು ಹುಟ್ಟುಹಾಕುತ್ತಾ ಮೋಕ್ಷದ ದಾರಿಯನ್ನು ಶಾಶ್ವತವಾಗಿ ಮುಚ್ಚಿಬಿಡುತ್ತದೆ. ಆದುದರಿಂದ ವ್ಯಕ್ತಿಯ ಉಪಾಸನೆಯಲ್ಲಿ ಮಹತ್ವಾಕಾಂಕ್ಷೆಯನ್ನು ನಿರ್ಲಕ್ಷಿಸಿ ಸಮಾಜದ ಸೇವಾರಾಧನೆಯಲ್ಲಿ ಅದಕ್ಕೆ ಸ್ಥಾನ ಕಲ್ಪಿಸಬೇಕು. ಇದೇ ಭಾವನೆಯನ್ನು ಕವಿಯ 'ಅಸಂತುಷ್ಟಾಃದ್ವಿಜಾಃನಷ್ಟಾಃಸಂತುಷ್ಟಶ್ಚಮಹೀಪತಿಃ' ಮಾತಿನ ಮೂಲಕ ವ್ಯಕ್ತಪಡಿಸಿದ್ದಾನೆ. ಇಲ್ಲಿ 'ದ್ವಿಜ' ಮತ್ತು 'ಮಹೀಪತಿ' ಎಂಬುವುದನ್ನು ಬ್ರಾಹ್ಮಣ ಹಾಗೂ ರಾಜನಿಗಾಗಿ ಬಳಸಿಲ್ಲ ಬದಲಾಗಿ ಶಬ್ದ ಶಕ್ತಿಯ ಮುಖೇನ ವ್ಯಕ್ತಿಜೀವನ ಹಾಗೂ ರಾಷ್ಟ್ರಜೀವನಕ್ಕಾಗಿ ಬಳಸಲ್ಪಟ್ಟಿವೆ. ಬ್ರಹ್ಮನ ಆರಾಧನೆ ಹಾಗೂ ಚಿಂತನೆಯಲ್ಲಿ ತೊಡಗುವ ಬ್ರಾಹ್ಮಣ

ವ್ಯಕ್ತಿ ಸ್ವಾತಂತ್ರ್ಯದ ಕ್ಷೇತ್ರದಲ್ಲಿ ಮುಂದಿರುವುದಕ್ಕೋಸ್ಕರ ವ್ಯಕ್ತಿಗತ ಜೀವನದಲ್ಲಿ ಸಂತಸ ಹಾಗೂ ಆದರ್ಶಗಳನ್ನು ಸೃಷ್ಟಿಸುತ್ತಾನೆಯಾದರೆ ರಾಷ್ಟ್ರದ ವಿಜಯದಾಕಾಂಕ್ಷೆ ಮತ್ತು ಸಮಾಜದ ಧಾರಣಾಶಕ್ತಿಯ ಪ್ರತೀಕವಾದ ರಾಜನು ತನ್ನ ಬದುಕಿನಲ್ಲಿ ಅಸಮಾಧಾನ ಮತ್ತು ಅಸಂತೋಷವನ್ನು ತುಂಬಿಕೊಂಡು ಸಮಾಜದ ಏಳಿಗೆಗೆ ಸಹಾಯಕವಾಗುತ್ತಾನೆ. ವ್ಯಕ್ತಿ ಮತ್ತು ಸಮಾಜ ಬದುಕಿನಲ್ಲಿ ಸದ್ಗುಣಗಳ ಹೊಂದಾಣಿಕೆಯಾಗದಿದ್ದರೆ ವ್ಯಕ್ತಿ ಮತ್ತು ಸಮಾಜ ಇಬ್ಬರೂ ಅವಸಾನ ಹೊಂದುತ್ತಾರೆ.

ಇಂದು ಬದುಕಿನಲ್ಲಿ ಇಂತಹ ವಿಸಂಗತಿಗಳೇ ಗೋಚರಿಸುತ್ತಿವೆ. ಜನರು ಮಹತ್ವಾಕಾಂಕ್ಷೆಯನ್ನು ಉಚಿತವಲ್ಲವೆಂದೇನೊ ಎಂದು ಬಾವಿಸುತ್ತಾರೆ. ಆದರೆ ವ್ಯಕ್ತಿಜೀವನದ ಮಹತ್ವಾಕಾಂಕ್ಷೆಯನ್ನಲ್ಲ, ಬದಲಾಗಿ ಸಮಾಜಜೀವನದ ಮಹತ್ವಾಕಾಂಕ್ಷೆಯನ್ನು ವ್ಯಕ್ತಿಹಿತದ ಸಂಬಂಧಕೋಸ್ಕರ ನಮಗೆ ಜ್ಞಾನಿ ಮತ್ತು ದಾರ್ಶನಿಕನಾಗ ಬಯಸುವ ಇಚ್ಛೆಯುಂಟಾಗಬಹುದು ಆದರೆ ಸಮಾಜಕ್ಕೋಸ್ಕರವಾಗಿ ಅಂತಹ ಭಾವನೆ ಉಂಟಾಗಲಾರದು. ಆದುದರಿಂದ ನಾವು ಜಗತ್ತಿಗೆ ಜ್ಞಾನ ದೀಪದ ಬೆಳಕನ್ನು ನೀಡುವಲ್ಲಿ ಆಸಕ್ತರಾಗಿಲ್ಲ, ಬದಲಾಗಿ ಆ ಪ್ರಕಾಶದಲ್ಲಿ ನಮ್ಮ ದಾರಿಯನ್ನು ತಡಕಾಡುವಲ್ಲಿಯೇ ವ್ಯಾಕುಲರಾಗಿರುವಂತೆ ತೋರುತ್ತೇವೆ. ರಾಷ್ಟ್ರದ ಪ್ರತಿಭೆ ಸುಪ್ತವಾಗಿದೆ ಮತ್ತು ಅದನ್ನು ಜಾಗೃತಗೊಳಿಸುವ ಯಾವ ಆಸಕ್ತಿಯು ಇಲ್ಲ. ಭಾರತದ ಜ್ಞಾನದ ಆಧಾರ ಭಾರತೀಯತೆಯಾಗಿರದೆ ಪಾಶ್ಚಿಮಾತ್ಯವಾಗಿದೆ. ನಮ್ಮೆಲ್ಲ ದಾರ್ಶನಿಕರು, ಸ್ಮೃತಿಕಾರರು, ಕಾನೂನುಪಂಡಿತರು, ಸಾಹಿತಿಗಳು ಹಾಗೂ ಕಲೆಗಾರರೆಲ್ಲರೂ ಪಾಶ್ಚಾತ್ಯ ಸಿದ್ಧಾಂತಗಳ ಆಧಾರದ ಮೇಲೆ ತಮ್ಮ ಜೀವನವನ್ನು ರೂಪಿಸಿಕೊಳ್ಳ ಬಯಸುತ್ತಾರೆಯೇ ಹೊರತು ತಮ್ಮ ಪ್ರತಿಭೆಯ ಮುಖೇನ ತಮ್ಮ ಸಿದ್ಧಾಂತಗಳ ಅನ್ವೇಷಣೆ ಮಾಡುವುದಿಲ್ಲ. ನಮ್ಮ ಕವಿಗಳು ಮಿಲ್ಟನ್ ಮತ್ತು ಕೀಟ್ಸ್‌ರವರ ಅನುಕರಣೆ ಮಾಡುವ ಬಯಕೆ ಹೊಂದಿದ್ದಾರೆಯೇ ಹೊರತು ತಾವೇ ಸ್ವತಃ ಕವಿಯಾಗುವ, ಕೀಟ್ಸ್ ಹಾಗೂ ಮಿಲ್ಟನ್‌ನಂಥವರಿಗೆ ಮಾರ್ಗದರ್ಶನ ಮಾಡುವ ಬಯಕೆ ಹೊಂದಿಲ್ಲ. ವಿಮರ್ಶಕ ಬ್ರಾಡ್ಲೆ ರೀತಿಯಲ್ಲಿ ವಿಮರ್ಶೆಗೆ ತೊಡಗುತ್ತಾರೆಯೇ ವಿನಃ ನಮ್ಮದೇ ಪರಂಪರೆ, ಪದ್ಧತಿಗೆ ಅನುಸಾರವಾಗಿ ವಿಮರ್ಶೆಯ ಕ್ಷೇತ್ರದಲ್ಲಿ ಹೊಸ ಹೊಸ ಸಿದ್ಧಾಂತಗಳ ನಿರೂಪಣೆಗೆ ತೊಡಗುವುದಿಲ್ಲ. ಇಬ್ಸನ್ ಏಕಾಂಕಗಳು ಹಿಂದಿಯಲ್ಲಿ ಅವತರಿಸಿಬಿಡುತ್ತವೇ ಹೊರತು ಇಂಗ್ಲೀಷಿಗೆ ನಮ್ಮದೇ ಆದ ಏಕಂಕಗಳನ್ನು ನೀಡುವ ಇಚ್ಛೆ ನಮಗೆ ಇಲ್ಲ. ನಾವು ಅಮೇರಿಕಾದ ಮಾದರಿಯನ್ನು ಅನುಕರಣೆ ಮಾಡಿ ನಮ್ಮ ಪ್ರಜಾತಂತ್ರ ವ್ಯವಸ್ಥೆಯನ್ನು ರೂಪಿಸಿಕೊಂಡೆವು. ಆದರೆ ಅತ್ಯಂತ ಕಷ್ಟಕರವೆನಿಸಿದರೂ ನಾವು ಯಾವ ಏಕತೆಯ ವಿಧಾನವನ್ನು ಅಳವಡಿಸಿಕೊಂಡೆವೋ ಅದನ್ನೇ ನೀತಿ ನಿಯಮದಡಿ

ತಂದು ಅದಕ್ಕೂ ವಿಧಿ ವಿಧಾನಗಳ ರೂಪ ನೀಡಿ ಅಮೇರಿಕಾ ಮುಂತಾದ ದೇಶಗಳಿಗೋಸ್ಕರ ಏಕತೆಯ ದಾರಿಯನ್ನು ಸುಗಮಗೊಳಿಸಲಿಲ್ಲ.

ರಾಜಕೀಯ ವೈಯಕ್ತಿತ ಮಹತ್ವಾಕಾಂಕ್ಷೆಯ ಪ್ರಾಬಲ್ಯ ಇರುತ್ತದೆ. ಆದರೆ ರಾಷ್ಟ್ರೀಯ ಮಹತ್ವಾಕಾಂಕ್ಷೆ ಹುಡುಕಿದರೂ ಕಣ್ಣಿಗೆ ಬೀಳುವುದಿಲ್ಲ. ತನ್ನ ನಾಯಕತ್ವ ಹಾಗೂ ಹೆಚ್ಚುಗಾರಿಕೆಯನ್ನು ಗಟ್ಟಿಮಾಡಿಕೊಳ್ಳುವ ಹಂಬಲದಿಂದಾಗಿ ಪ್ರಜಾತಂತ್ರ ವ್ಯವಸ್ಥೆಗೂ ಸಹ ನರಕದ ಹಾದಿ ತೋರಿಸಲಾಗುತ್ತದೆ. ಪಕ್ಷಗಳು ಆಗುತ್ತವೆ–ಅಳಿಯುತ್ತವೆ. ಮಂತ್ರಿ ಮಂಡಲಗಳು ಬೀಳುತ್ತವೆ. ಸಂಸ್ಥೆಗಳನ್ನು ದಮನಿಸಲಾಗುತ್ತದೆ ಹಾಗೂ ವ್ಯಕ್ತಿಗಳನ್ನು ಜೈಲುಗಳಿಗೆ ತಳ್ಳಲಾಗುತ್ತದೆ. ಆದರೆ ಎಲ್ಲೆಡೆಯಿಂದಲೂ ರಾಷ್ಟ್ರದ ಮಾನಾಪಮಾನದ ಪ್ರಶ್ನೆ ಉದ್ಭವಿಸಿದಾಗ ಅತ್ಯಂತ ನಿಕೃಷ್ಟತಮ ಮತ್ತು ಅಪಮಾನ ಹಾಗೂ ನಿರ್ಲಜ್ಜೆತನದ ಒಪ್ಪಂದಗಳು ಮಾಡಿಕೊಳ್ಳಲಾಗುತ್ತವೆ. ವೈಯಕ್ತಿಕ ಕ್ಷೇತ್ರದಲ್ಲಿ ಇತರರನ್ನು ಹೊಂಚು ಹಾಕುವ ಬೆದರಿಕೆ ಒಡ್ಡುವವರೇ ರಾಷ್ಟ್ರಸಮ್ಮಾನ ಮಣ್ಣುಪಾಲಾಗುವುದನ್ನು ಸಾಕ್ಷೀಕರಿಸುತ್ತಾರೆ. ರಾಷ್ಟ್ರದ ಬಗ್ಗೆ ಸ್ವಾಭಿಮಾನ ಮತ್ತು ರಾಷ್ಟ್ರೀಯ ಮಹತ್ವಾಕಾಂಕ್ಷೆ ಇಲ್ಲದಿರುವುದು ಇದಕ್ಕೆ ಕಾರಣ. ಹಾಗಾಗಿ ವಿಶ್ವವಿಜಯೀ ಭಾರತ, ಮಾತೃಭೂಮಿ ಭಾರತ ಇಂದು ಹೆಚ್ಚೆಂದರೆ ತನ್ನ ರಕ್ಷಣಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ ಯೋಚಿಸಬಹುದೇ ವಿನಃ ವಿಜಯದ ಸಾಧ್ಯತೆಯ ಬಗೆಗೆ ಅಲ್ಲ, ತನ್ನ ಒಡೆಯನಿಂದ ಒದೆ ತಿಂದ ನೌಕರ ಹೇಗೆ ತನ್ನೆಲ್ಲಾ ಸಿಟ್ಟನ್ನು ತನ್ನ ಪತ್ನಿಯ ಮೇಲೆ ಪ್ರದರ್ಶಿಸುತ್ತಾನೋ ಹಾಗೆಯೇ ವಿದೇಶಾಂಗಮಟ್ಟದ ವ್ಯವಹಾರಗಳಲ್ಲಿ ಆತ್ಮಾಭಿಮಾನ ಅನುಭವಿಸುವ ರಾಜಕೀಯ ವ್ಯಕ್ತಿಗಳು ದೇಶೀಯ ಸಂಗತಿಗಳಲ್ಲಿ ಸರ್ವಾಧಿಕಾರಿ ಧೋರಣೆ ಕಡೆಗೆ ವಾಲುತ್ತಾರೆ.

ರಾಷ್ಟ್ರೀಯ ಮಹತ್ವಾಕಾಂಕ್ಷೆಯ ಈ ಲೋಪ ಆರ್ಥಿಕ ಕ್ಷೇತ್ರದಲ್ಲಿಯೂ ಘಾತಕವಾಗಿ ಪರಿಣಮಿಸುವುದು ಗೋಚರವಾಗುತ್ತದೆ. ನಮ್ಮ ವಣಿಕ ಸಂಪತ್ತು ಸೃಷ್ಟಿಯನ್ನಂತೂ ಬಯಸುತ್ತಾನೆ. ಆದರೆ ಆತನಲ್ಲಿ ತಾನೊಬ್ಬ ದೊಡ್ಡ ವ್ಯಕ್ತಿಯಾಗಬೇಕೆಂಬ ಮಹತ್ವಾಕಾಂಕ್ಷೆ ಇರುತ್ತದೆಯೇ ಹೊರತು ತಾನೊಬ್ಬ ಒಳ್ಳೆಯ ವ್ಯಾಪಾರಿಯಾಗಬೇಕೆಂದಿರುವುದಿಲ್ಲ. ನೂರಾರು ಗ್ರಾಹಕರಿಗೆ ಹಾಲು ವಿತರಿಸುವ ವ್ಯಾಪಾರಿ ಅಧಿಕ ಧನ ಸಂಪಾದನೆಗೆ ಹೆಚ್ಚು ಹೆಚ್ಚು ಗ್ರಾಹಕರನ್ನು ತಲುಪುವ ಪ್ರಯತ್ನ ಮಾಡುವುದಿಲ್ಲ ಬದಲಾಗಿ ಹಾಲಿಗೆ ನೀರನ್ನು ಸೇರಿಸಿ ಲಾಭಗಳಿಸುವ ಬಗ್ಗೆ ಯೋಚಿಸುತ್ತಾನೆ. ಒಬ್ಬ ಗಿರಣಿ ಮಾಲಿಕ ಹೆಚ್ಚು ಉತ್ಪಾದನೆ ಹಾಗೂ ಗುಣಮಟ್ಟದ ಬಗ್ಗೆ ಚಿಂತಿಸುವುದಿಲ್ಲ. ಆದರೆ ಕಾಳಸಂತೆ ವ್ಯಾಪಾರ ಮತ್ತು ಲಾಭ ಬಡುಕುತನದ ದಾರಿಯನ್ನು ಹುಡುಕುತ್ತಾನೆ. ಪಾಶ್ಚಿಮಾತ್ಯ ದೇಶಗಳಲ್ಲಿ ಮಹತ್ವಾಕಾಂಕ್ಷೆ ಇದೆ. ಹಾಗಾಗಿಯೇ ಅವರು ಹೊಸ ಹೊಸ ಮಾರುಕಟ್ಟೆ ಅನ್ವೇಷಣೆಯಲ್ಲಿ ತೊಡಗುತ್ತಾರೆ. ತಮಗೆ ಬೇಕಾದ ವಸ್ತುಗಳನ್ನು ಅವರು ಅಲ್ಲಿಯೇ ಉತ್ಪಾದಿಸುವುದಿಲ್ಲ. ಆದರೆ

ಯಾರು ಉತ್ಪಾದಿಸುತ್ತಾರೋ ಅಲ್ಲಿ ಆಮಿಷ ಸೃಷ್ಟಿಸುತ್ತಾರೆ. ಪರಿಣಾಮವಾಗಿ ಅವರ ವ್ಯಾಪಾರ ವೃದ್ಧಿಯಾಗುತ್ತದೆ. ನಮ್ಮ ವ್ಯವಹಾರ ಕುಸಿಯುತ್ತದೆ.

ನಮ್ಮ ಕುಶಲ ಕರ್ಮಿಯು ಕೂಡ ಇಂತಹ ಮಹತ್ವಾಕಾಂಕ್ಷೆಯಿಂದ ಹೊರತಾಗಿದ್ದಾನೆ. ಅವನು ವೈಯಕ್ತಿಕ ಪ್ರಗತಿಯನ್ನೇನೋ ಬಯಸುತ್ತಾನೆ. ಆದರೆ ಅದಕ್ಕೆ ತಕ್ಕುದಾಗಿ ನೈಪುಣ್ಯತೆ ಯೋಗ್ಯತೆಯನ್ನು ಪಡೆದುಕೊಳ್ಳುವುದಿಲ್ಲ. ಬದಲಾಗಿ ಮುಖಸ್ತುತಿ ಮತ್ತು ಶಿಫಾರಸುಗಳನ್ನು ಆಶ್ರಯಿಸುತ್ತಾನೆ. ಆರ್ಥಿಕ ಧಕ್ಷತೆ ಮತ್ತು ಪರಿಶ್ರಮವನ್ನು ವಿನಿಮಯೋಗಿಸುವಲ್ಲಿ ಚಳುವಳಿ, ಮುಷ್ಕರ ಮುಂತಾದವುಗಳನ್ನು ಮುನ್ನಡೆಸುವಲ್ಲಿ ಅತ್ಯಂತ ಸಕ್ರಿಯವಾಗಿ ಗೋಚರಿಸುತ್ತಾನೆ. ಮಹತ್ವಾಕಾಂಕ್ಷೆಯ ಅಭಾವದ ಇಂತಹ ಉದಾಹರಣೆಗಳು ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಣಸಿಗುತ್ತವೆ ಮತ್ತು ಇಂತಹ ಅಭಾವಗಳಿಂದ ಯಾವ ರೀತಿಯಿಂದ ವಿವಾದತ್ತ ನಾವು ಸಾಗುತ್ತಿದ್ದೇವೆ ಎಂಬುವುದು ಕಿಂಚಿತ್ ವಿಚಾರ ಮಾಡುವುದರಿಂದಲೇ ನಮಗೆ ವೇದ್ಯವಾಗುತ್ತದೆ.

ರಾಷ್ಟ್ರ ಜೀವನದಲ್ಲಿ ನಮ್ಮ ಕೀಳರಿಮೆಯ ಭಾವನೆಯನ್ನು ಪೋಷಿಸುವುದಿಲ್ಲ ಎಂಬುವುದನ್ನು ನಾವು ನಿಶ್ಚಯಿಸಿಕೊಳ್ಳಬೇಕು. ನಮ್ಮ ರಾಷ್ಟ್ರವಿಜಯದ ಆಕಾಂಕ್ಷೆಯನ್ನು ಜನರು ಸಾಮ್ರಾಜ್ಯವಾದದ ದೃಷ್ಟಿಯಿಂದ ಪರಿಭ್ರಮಿಸಿ ನಮ್ಮನ್ನು ಹಿಂದೆ ತಳ್ಳಲು ಪ್ರಯತ್ನಿಸಿದರೂ ನಾವು ಶಬ್ದಗಳ ಹಿಂದೆ ಬೀಳದೆ ಭಾವಗ್ರಹಿಕೆಯನ್ನು ಆಧರಿಸುತ್ತಾ ರಾಷ್ಟ್ರದ ಪ್ರತಿಯೊಂದು ಕ್ಷೇತ್ರವನ್ನು ಗುಣಸಂಪನ್ನ ಮಾಡಬೇಕು. ರಾಷ್ಟ್ರದ ಈ ಆಕಾಂಕ್ಷೆಯನ್ನು ಪೂರ್ಣಗೊಳಿಸುವುದಕ್ಕೋಸ್ಕರ ಪುನಃ ವೈಯಕ್ತಿಕ ಮಹತ್ವಾಕಾಂಕ್ಷೆಗಳನ್ನು ತ್ಯಜಿಸಬೇಕಾಗುತ್ತದೆ. ಅವುಗಳು ತಾವಾಗಿಯೇ ದೂರವಾಗಿಬಿಡುತ್ತವೆ. ಏಕೆಂದರೆ ಯಾವುದಾದರೂ ಶ್ರೇಷ್ಠವಾದುದನ್ನು ಪಡೆದ ಯಾವನೇ ತಿಳುವಳಿಕಸ್ತನಾದವನಿಗೆ ನಿಕೃಷ್ಟವಾದದ್ದರ ಬಗ್ಗೆ ಮೋಹವಿರಲಾರದು. ರಾಷ್ಟ್ರೀಯ ಆಕಾಂಕ್ಷೆಗಳು ಜಾಗೃತಗೊಂಡ ಬಳಿಕ ವೈಯಕ್ತಿಕ ಆಸೆ, ಆಕಾಂಕ್ಷೆಗಳು ಹಾಗೂ ತಜ್ಜನ್ಯ ಸ್ವಾರ್ಥ, ಭ್ರಷ್ಟಾಚಾರ ಮುಂತಾದ ಎಲ್ಲಾ ಅವಗುಣಗಳು ದೂರವಾಗಿ ನಾವು ವೈಭವ ಮತ್ತು ಮಂಗಳಕಾರಿ ವಾತಾವರಣದೆಡೆಗೆ ಮುಂದಡಿ–ಯಿಡಬಲ್ಲವರಾಗುತ್ತೇವೆ.

* * * * *

# ಭಾರತೀಯ ಗಣತಂತ್ರ ವ್ಯವಸ್ಥೆಯಲ್ಲಿ ಆರ್ಥಿಕ ಪ್ರಜಾತಂತ್ರ

ಭಾರತೀಯ ಪ್ರಜ್ಞೆಯು ಸ್ವಭಾವತಃ ಪ್ರಜಾತಂತ್ರವೇ ಆಗಿದೆ ಮತ್ತು ಇಂದಿನ ಕಾಲಮಾನವೂ ಸಹ ಪ್ರಜಾತಂತ್ರ ವ್ಯವಸ್ಥೆಯ ಕಡೆಗೆ ಮುನ್ನಡೆಯುತ್ತಿದೆ. ರಾಜಕೀಯ ಕ್ಷೇತ್ರಗಳಲ್ಲಿ ಪ್ರಜಾತಂತ್ರದ ಈ ಭಾವನೆ ಬಹುತೇಕ ಸ್ಪಷ್ಟವಾಗಿ ಗೋಚರಿಸುತ್ತದೆ. ಯಾವ ರೀತಿ ಪ್ರಜಾಸಮುದಾಯದಲ್ಲಿ ರಾಜಕೀಯ ನಿರ್ಮಾಣ ಮಾಡಲಾಗುತ್ತದೆಯೋ ಅದೇ ರೀತಿ ಆರ್ಥಿಕ ಶಕ್ತಿಯನ್ನು ಸಹ ಪ್ರಜಾಸಮುದಾಯದಲ್ಲಿ ವಿಕೇಂದ್ರೀಕರಣಗೊಳಿಸಿ ಅರ್ಥವ್ಯವಸ್ಥೆಯ ನಿರ್ಮಾಣ ಮತ್ತು ಹತೋಟಿಯನ್ನು ತರಬೇಕಾಗುತ್ತದೆ. ರಾಜಕೀಯ ಪ್ರಜಾತಂತ್ರದಲ್ಲಿ ವ್ಯಕ್ತಿಗೆ ತನ್ನ ರಚನಾತ್ಮಕ ಸಾಮರ್ಥ್ಯವನ್ನು ದಮನ ಮಾಡುವುದಕ್ಕೆ ಬದಲಾಗಿ ಆ ಸಾಮರ್ಥ್ಯ ಸಂಪೂರ್ಣವಾಗಿ ಪ್ರಕಟವಾಗುವಂತಹ ಎಲ್ಲಾ ಅವಕಾಶಗಳು ಪ್ರತಿಯೊಂದು ಸಂದರ್ಭದಲ್ಲಿಯೂ ಸಿಗುವಂತಾಗಬೇಕು. ಯಾವ ಅರ್ಥವ್ಯವಸ್ಥೆ ವ್ಯಕ್ತಿಯನ್ನು ಆತನ ಹಿತಾಸಕ್ತಿಯೊಳಗೆ ಆತನನ್ನು ಹಿಸುಕಿಹಾಕಿದೆಯೋ ಅಂತಹ ಅರ್ಥವ್ಯವಸ್ಥೆ ಯಾವ ಕಾರಣಕ್ಕೂ ನಮಗೆ ಸ್ವೀಕಾರವಾಗುವುದಿಲ್ಲ. ಏಕೆಂದರೆ ಮುಂದೆ ಭವಿಷ್ಯದಲ್ಲಿ ಆ ದಮನದ ಪರಿಣಾಮಗಳು ಗೋಚರಿಸುತ್ತವೆ. ಮತ್ತು ಅಂತಿಮವಾಗಿ ಅದರ ದುಷ್ಪರಿಣಾಮ ಕೇವಲ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಯ ಮೇಲಷ್ಟೇ ಅಲ್ಲ, ಆರ್ಥಿಕ ವ್ಯವಸ್ಥೆಯ ಮೇಲೂ ಉಂಟಾಗುತ್ತದೆ. ಇದು ನಿಸರ್ಗದತ್ತವಾದ ನಿಯಮ ಮತ್ತು ಪ್ರಾರಂಭದಿಂದಲೇ ಇದನ್ನು ಗಮನಿಸುತ್ತಾ ಮುನ್ನಡೆಯುವುದು ಬುದ್ಧಿವಂತಿಕೆ ಎನಿಸುವುದು.

ರಾಜನೀತಿಯಲ್ಲಿ ವ್ಯಕ್ತಿಯೊಬ್ಬನ ರಚನಾತ್ಮಕ ಶಕ್ತಿಯನ್ನು ಏಕತಂತ್ರ ಆಡಳಿತ ಯಾವ ರೀತಿಯಲ್ಲಿ ದಮನ ಮಾಡುತ್ತಿದೆಯೋ ಅದೇ ರೀತಿಯಲ್ಲಿ ಆರ್ಥಿಕ ನೀತಿಯಲ್ಲಿ ವ್ಯಕ್ತಿಯ ರಚನಾತ್ಮಕ ಸಾಮರ್ಥ್ಯವನ್ನು ಬೃಹತ್ ಪ್ರಮಾಣದ ಔದ್ಯೋಗೀಕರಣ ನಾಶ ಮಾಡುತ್ತದೆ. ಅಂತಹ ಉದ್ಯೋಗಗಳಲ್ಲಿ ಸ್ವತಃ ವ್ಯಕ್ತಿಯು ಕೂಡ ಯಂತ್ರದ ಒಂದು ಬಿಡಿ ಭಾಗದಂತಾಗಿಬಿಡುತ್ತಾನೆ. ಹಾಗಾಗಿ ಏಕತಂತ್ರ ಆಡಳಿದಂತೆಯೇ ಅಂತಹ ಔದ್ಯೋಗೀಕರಣವು ಸಹ ತಿರಸ್ಕಾರಾರ್ಹವಾಗುತ್ತದೆ. ಯಾವಾಗ ವಿಕೇಂದ್ರೀಕರಣದ ವ್ಯವಸ್ಥೆಯ ಆಧಾರದ ಮೇಲೆ ಉದ್ಯೋಗದ ವ್ಯವಸ್ಥೆಯಾಗುತ್ತದೆಯೋ ಆಗ ಆರ್ಥಿಕ ಕ್ಷೇತ್ರದಲ್ಲಿ ವ್ಯಕ್ತಿಯ ರಚನಾತ್ಮಕ ಶಕ್ತಿ

ಹೊರಹೊಮ್ಮಲು ಸಾಧ್ಯವಾಗುತ್ತದೆ. ವಿಕೇಂದ್ರೀಕರಣದ ಅರ್ಥವನ್ನು ಯಂತ್ರಗಳನ್ನು ತ್ಯಜಿಸುವುದೆಂದು ಅರ್ಥೈಸಲಾಗದು. ಇದರಿಂದ ಯಂತ್ರಗಳ ಮಿತಬಳಕೆಯಂತೂ ಸಾಧ್ಯವಾಗುತ್ತದೆ. ಈ ಪರಿಸ್ಥಿತಿಯಲ್ಲಿ ಬೃಹತ್ ಯಂತ್ರಗಳ ನಿರಾಕರಣೆ ಅವಶ್ಯಕವಾಗುತ್ತದೆ. ಇನ್ನು ಬೃಹತ್‌ಯಂತ್ರಗಳ ಸಹಾಯದಿಂದ ನಡೆಸಲ್ಪಡುವ ಕೆಲವು ಉದ್ಯೋಗಗಳು ಇರಬಹುದು. ಅಂಥವುಗಳ ಮೇಲೆ ವೈಯಕ್ತಿಕ ಒಡೆತನಕ್ಕೆ ಬದಲಾಗಿ ಆಡಳಿತಾತ್ಮಕ ಒಡೆತನವಿರಬೇಕು. ಅಂತಹ ಉದ್ಯೋಗಗಳು ಸುರಕ್ಷಿತ ಉದ್ದಿಮೆಗಳ ವಲಯಕ್ಕೆ ಒಳಪಡುತ್ತವೆ.

ಯಾವ ಸಮಸ್ಯೆಗಳ ಮುಖ್ಯಕಾರಣ ಅತಿಕೇಂದ್ರೀಕರಣವಾಗಿದೆಯೋ ಆ ಎಲ್ಲಾ ಸಮಸ್ಯೆಗಳು ವಿಕೇಂದ್ರೀಕರಣದಿಂದಾಗಿ ಪರಿಹಾರವಾಗುತ್ತವೆ. ಅತಿಕೇಂದ್ರೀಕರಣದ ಕಾರಣದಿಂದಾಗಿಯೇ ಬಂಡವಾಳಶಾಹಿ ವ್ಯವಸ್ಥೆಯ ಉತ್ಪತ್ತಿಯಾಗುತ್ತದೆ. ಆ ಜನರಿಗೆ ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡುವ ಅವಕಾಶವೇ ದೊರೆಯುವುದಿಲ್ಲವೆಂದಾದಲ್ಲಿ ಬಂಡವಾಳ ಸಂಗ್ರಹವಾಗುವುದಾದರೂ ಹೇಗೆ? ಇದರಿಂದಾಗಿ ಹಳ್ಳಿಗಳು ಹೆಚ್ಚೆಚ್ಚು ಸ್ವಾವಲಂಬಿಗಳಾಗಿಯೇ ಆಗುತ್ತದೆ. ವ್ಯಕ್ತಿಗೆ ಪ್ರೇರಣೆ ದೊರೆಯುವುದರಿಂದ ವಸ್ತುಗಳ ಉತ್ಪಾದನೆ, ಜೊತೆಗೆ ಗುಣಮಟ್ಟ ಸಹ ವೃದ್ಧಿಯಾಗುತ್ತದೆ. ಹಿಂದಿನ ಕಾಲದ ಗುಡಿ ಕೈಗಾರಿಕೆಗಳು ಯಾವೆಲ್ಲ ಶ್ರೇಷ್ಠ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸುತ್ತಿದ್ದವೋ ಅಷ್ಟನ್ನು ಇಂದಿನ ಗಿರಣಿಗಳು ಉತ್ಪಾದಿಸುತ್ತಿಲ್ಲ. ಗುಡಿ ಕೈಗಾರಿಕೆಗಳಲ್ಲಿ ಕರಕುಶಲತೆ ಹಾಗೂ ನೈಪುಣ್ಯತೆ ಎಷ್ಟು ದೊಡ್ಡ ಪ್ರಮಾಣದಲ್ಲಿ ಕಾಣಸಿಗುತ್ತಿತ್ತೋ, ಅದು ಇಂದಿನ ಯಂತ್ರೋದ್ಯಮದಲ್ಲಿ ಖಂಡಿತವಾಗಿಯೂ ಕಂಡುಬರುತ್ತಿಲ್ಲ. ಯಾವ ರೀತಿ ರಾಜನೀತಿಯ ಪ್ರಜಾಪ್ರಭುತ್ವದಲ್ಲಿ ಗ್ರಾಮಪಂಚಾಯತು ಮುಂತಾದ ವ್ಯವಸ್ಥೆಗಳಿಂದ ಲೋಕತಂತ್ರ ಹೊರಳಿ ಊರ್ಧ್ವಮುಖಿಯಾಗಿರುತ್ತದೆಯೋ ಅದೇ ಪ್ರಕಾರ ಆರ್ಥಿಕ ಲೋಕದಲ್ಲಿ ಗ್ರಾಮ ಹಾಗೂ ಗೃಹ ಉದ್ಯೋಗಗಳು ಹಾಗೇನೇ ವಿಕೇಂದ್ರೀಕರಣದನ್ವಯ ನಡೆಯುವ ಕೃಷಿ ಉತ್ಪಾದನಾ ಕೇಂದ್ರಗಳ ಹಂತದಿಂದ ಲೋಕತಂತ್ರ ಮೇಲೇರಬೇಕಾಗುತ್ತದೆ. ಸಮತಾವಾದದ ಬೇರುಗಳು ಆಕಾಶದಲ್ಲಿ ಬೆಸೆದಿದ್ದರೆ ಅರ್ಥವ್ಯಸ್ಥೆಯ ಬೇರುಗಳು ಭೂಮಿಯ ಆಳದಲ್ಲಿ ಪಸರಿಸಿರುತ್ತವೆ.

## ಆರ್ಥಿಕ ಸೂತ್ರ

ಭಾರತೀಯ ಸಂಸ್ಕೃತಿಯಲ್ಲಿ 'ಕರ್ಮ' ಅಂದರೆ ಶ್ರಮಕ್ಕೆ ಪರಮೋಚ್ಚ ಸ್ಥಾನವನ್ನು ನೀಡಲಾಗಿದೆ. ವೇದಗಳಿಂದ ಮೊದಲ್ಗೊಂಡು ಉಪನಿಷತ್ತುಗಳು ಹಾಗೂ ಗೀತೆಯ ತನಕವೂ ಇದರ ಮಹತ್ವ ಹಿರಿದಾಗಿದೆ. ದುಡಿಮೆ ಮಾಡುವುದು ಪ್ರತಿಯೊಬ್ಬ

ನಾಗರಿಕನ ಕರ್ತವ್ಯವಾಗಿದೆ. ಹಾಗಾಗಿ ಶ್ರಮವನ್ನು ಉಪೇಕ್ಷಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಇದರೊಂದಿಗೆ ಪ್ರತಿಯೊಬ್ಬನಿಗೂ ದುಡಿಯುವ ಅವಕಾಶ ದೊರಕಿಸಿಕೊಡುವುದು ಆಡಳಿತದ ಕರ್ತವ್ಯವಾಗುತ್ತದೆ. ಒಂದು ವೇಳೆ ಪ್ರತಿಯೊಬ್ಬನೂ ಕರ್ಮಸಿದ್ಧಾಂತವನ್ನು ಸ್ವೀಕರಿಸುವಂತಾದರೆ ಆಗ ಸಮಾನ ವಿತರಣಾವ್ಯವಸ್ಥೆಯ ದಿಕ್ಕು ಸ್ಪಷ್ಟವಾಗುತ್ತದೆ ಮತ್ತು ನಾವು ವಿಕೇಂದ್ರೀಕರಣದತ್ತ ಸಾಗುತ್ತೇವೆ. ಔದ್ಯೋಗೀಕರಣದ ಉದ್ದೇಶವನ್ನು ನಂಬಿ ಮುನ್ನಡೆಯುವುದು ತಪ್ಪಾಗುತ್ತದೆ. ಆ ಉದ್ದೇಶವೇ ಸ್ವತಃ ತಂತಾನೇ ಸ್ಪಷ್ಟವಾಗಿಲ್ಲ. ಈ ಸಿದ್ಧಾಂತವನ್ನು ಗಣಿತದ ಸೂತ್ರದ ಆಧಾರದ ಮೇಲೆ ಹೀಗೆ ಹೇಳಬಹುದು ಜ x ಕ x ಯ=ಇ.

(ಇಲ್ಲಿ 'ಇ' ಎಂಬುದು ಸಮಾಜದ ಪ್ರಬಲ ಇಚ್ಛೆಯ ದ್ಯೋತಕವಾಗಿದೆ. ಅದನ್ನು ಭರಿಸುವ ಶಕ್ತಿ ಅದರಲ್ಲಿದೆ 'ಜ' ಸಮಾಜದಲ್ಲಿ ದುಡಿಯುವ ಅರ್ಹತೆಯುಳ್ಳ ವ್ಯಕ್ತಿಗಳ ಸಂಖ್ಯೆಯ ದ್ಯೋತಕವಾಗಿದೆ. 'ಕ' ದುಡಿಯುವ ಸ್ಥಿತಿ ಮತ್ತು ವ್ಯವಸ್ಥೆಯ ದ್ಯೋತಕವಾಗಿದೆ. ಮತ್ತು 'ಯ' ಎಂಬುದು ಯಂತ್ರದ ದ್ಯೋತಕವಾಗಿದೆ.)

ಈ ಸೂತ್ರದ ಅನುಸಾರ ಒಂದುವೇಳೆ ನಾವು 'ಜ' ನಿಶ್ಚಿತವೆಂದು ಬಯಸುವುದಾದರೆ (ಪ್ರತಿಯೊಬ್ಬನಿಗೂ ಕೆಲಸ ಕೊಡಿಸಿ ಎಂಬ ಸಿದ್ಧಾಂತದ ಅನುಸಾರ ಆವಶ್ಯಕವಾಗಿದೆ) 'ಇ' ಯ ಅನುಪಾತದಲ್ಲಿ 'ಕ' ಮತ್ತು 'ಯ'ವನ್ನು ಬದಲಾಯಿಸಬೇಕಾಗುತ್ತದೆ. ಯಾವುದರ ಸಹಾಯದಿಂದ ನಾವು ಅತ್ಯಧಿಕ ಉತ್ಪಾದನೆಯನ್ನು ಮಾಡಲು ಸಾಧ್ಯವೋ ಅಂಥ ಯಂತ್ರಗಳನ್ನು ನಮ್ಮ ಬೇಡಿಕೆ ಹೆಚ್ಚುತ್ತಾ ಹೋದ ಹಾಗೆ ನಾವು ಉಪಯೋಗ ಮಾಡಬೇಕಾಗುತ್ತದೆ. ಇಂದು ಚಾಲ್ತಿಯಲ್ಲಿರುವ ಆಡಳಿತ ನೀತಿಯ ಪ್ರಕಾರ 'ಯ' ಎಲ್ಲವನ್ನೂ ನಿಯಂತ್ರಿಸುತ್ತಿದೆ.

ವಾಸ್ತವಾಂಶದಲ್ಲಿ 'ಇ' ಯ ವೃದ್ಧಿಯಿಂದ ನಮ್ಮ ಎಲ್ಲ ಸಮಸ್ಯೆಗಳು ಪರಿಹಾರವಾಗುತ್ತವೆ. ಆದರೆ (ಇ) ಸಹಜವಾಗಿ ವೃದ್ಧಿಯಾಗಲು ಸಾಧ್ಯವಿಲ್ಲ. ಏಕೆಂದರೆ ಇದು ನಮ್ಮ ಕೊಳ್ಳುವ ಶಕ್ತಿಯ ಮೇಲೆ ಅವಲಂಬಿತವಾಗಿದೆ. ಆದುದರಿಂದ ದೇಶದ ಕೊಳ್ಳುವ ಶಕ್ತಿಯನ್ನು ವೃದ್ಧಿಸುವ ಪ್ರಯತ್ನವನ್ನು ಆಡಳಿತ ವ್ಯವಸ್ಥೆ ಮಾಡಬೇಕಾಗುತ್ತದೆ. ಕೊಳ್ಳುವ ಶಕ್ತಿಯಂತೂ ಮೂಲತಃ ಅಧಿಕ ಉತ್ಪಾದನೆಯಿಂದಲೇ ವೃದ್ಧಿಸಬಲ್ಲದು. ಆದರೆ ಅದಕ್ಕಾಗಿ ಸಂಪತ್ತಿನ ಗರಿಷ್ಠ ಮಟ್ಟದಲ್ಲಿ ಸಮತೋಲಿತ ವಿತರಣೆಯ ಅವಶ್ಯಕತೆ ಇದೆ.

'ಇ' ಅಂದರೆ ಆರ್ಥಿಕ ಬೇಡಿಕೆ ದೇಶದಲ್ಲಿ ಮತ್ತು ದೇಶದ ಹೊರಗೂ ಇರಬಹುದು. ಒಂದು ವೇಳೆ ನಮ್ಮ ಸರಕು ಹೊರಗೆ ಹೋಗುತ್ತದೆ ಎಂದಾದರೆ 'ಇ' ಕ್ಷೀಣಿಸುತ್ತದೆ. ಏಕೆಂದರೆ ನಮ್ಮಕೊಳ್ಳುವ ಶಕ್ತಿಯ ಬಹು ಅಂಶ ಅವುಗಳನ್ನು ಕೊಳ್ಳುವುದರಲ್ಲಿಯೇ ಖರ್ಚಾಗಿಬಿಡುತ್ತದೆ. ಇಂದು ಭಾರತದಲ್ಲಿ ಆಗುತ್ತಿರುವುದು

ಇದೇ. ಸ್ವದೇಶಿ ಪ್ರೇಮದ ಮುಖೇನ 'ಇ' ಯನ್ನು ವೃದ್ಧಿಸಲು ಸಾಧ್ಯ. ಏಕೆಂದರೆ 'ಯ' ಮತ್ತು 'ಕ' ಇವುಗಳಲ್ಲಿ ದಿಡೀರ್ ಪರಿವರ್ತನೆ ಸಾದ್ಯವಿಲ್ಲ. ಆದುದರಿಂದ 'ಜ' ಇಳಿಮುಖವಾಗುತ್ತದೆ.

ಮನುಷ್ಯ, ದುಡಿಮೆ ಮತ್ತು ಯಂತ್ರ – ಇವು ಆರ್ಥಿಕ ಕ್ಷೇತ್ರದ ಮೂರು ಅಂಶಗಳು. ಈ ಮೂರರ ಸಮನ್ವಯವೇ ಆರ್ಥಿಕ ವ್ಯವಸ್ಥೆಯ ಉದ್ದೇಶವಾಗಿದೆ. ಯಾವ ಆರ್ಥಿಕ ವ್ಯವಸ್ಥೆಯಲ್ಲಿ ಈ ಮೂರರ ಸಮನ್ವಯವಿರುವುದಿಲ್ಲವೋ ಅದರಲ್ಲಿ ಸಮನ್ವಯದ ಅಭಾವದ ಪರಿಣಾಮವಾಗಿ ಖಂಡಿತವಾಗಿಯೂ ಅಸಮಾನತೆ ಉಂಟಾಗುತ್ತದೆ. ಯಾವ ಆರ್ಥಿಕ ನೀತಿಯು ಇಂತಹ ಪರಿಣಾಮಗಳಿಂದಾಗಿಯೇ ತನ್ನ ದರ್ಶನಸೂತ್ರವನ್ನು ಮುನ್ನಡೆಸುತ್ತದೆಯೋ ಅದು ತಾತ್ಕಾಲಿಕವಾಗಿ ಈ ಪರಿಣಾಮಗಳನ್ನು ದೂರ ಮಾಡುತ್ತದೆ. ಎಂದಾದರೂ ಅದು ವ್ಯವಸ್ಥೆಯನ್ನು ತಳಮಟ್ಟದಿಂದ ಸರಿಪಡಿಸಲಾರದು. ಮೂಲಭೂತವಾಗಿ ಸರಿಪಡಿಸುವುದಕ್ಕೋಸ್ಕರವೇ ಉದ್ದೇಶಗಳಲ್ಲಿ ಗಟ್ಟಿಯಾಗುತ್ತಾ ಮುನ್ನಡೆಯಬೇಕಾಗುತ್ತದೆ ಮತ್ತು ಈ ಪರಿಣಾಮಗಳನ್ನು ಹತ್ತಿಕ್ಕುವ ಉಪಾಯಗಳನ್ನು ಮಾಡಬೇಕಾಗುತ್ತದೆ.

> ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತವು ದೇಶದ ಮತ್ತು ಕಾಲ ಈ ಎರಡೂ ದೃಷ್ಟಿಯಿಂದ ಎಷ್ಟು ಬದಲಾಗಿದೆ ಎಂದರೆ ಇಂದು ನಾವು ಮಾರ್ಕ್ಸ್‌ವಾದದ ವಿಶ್ಲೇಷಣೆಯನ್ನು ಗಿಳಿಯ ಪಾಠದ ಹಾಗೆ ಕಂಠಪಾಠ ಮಾಡಿ ಕಣ್ಣು ಮುಚ್ಚಿಕೊಂಡು ಭಾರತದಲ್ಲಿ ಜಾರಿ ಮಾಡಿಬಿಟ್ಟರೆ ಅದು ವೈಜ್ಞಾನಿಕ ಅಥವಾ ವಿವೇಕಪೂರ್ಣ ದೃಷ್ಟಿಕೋನ ಎಂದೆನಿಸುವುದಿಲ್ಲ. ಇದು 'ರೂಢಿವಾದ' ವೆಂದೆನಿಸುವುದು. ಯಾರು ತನ್ನ ದೇಶದ ರೂಢಿ, ಸಂಪ್ರದಾಯಗಳನ್ನು ಅಳಿಸಿಹಾಕಿ ಸುಧಾರಣೆಯ ಹಕ್ಕು ಮಂಡಿಸುತ್ತಾರೋ ಅವರು ವಿದೇಶಿ ರೂಢಿ ಪದ್ಧತಿಗಳ ಗುಲಾಮರಾದರೆಂದಾದರೆ, ಇದಂತೂ ಸೋಜಿಗದ ವಿಷಯವೇ ಸರಿ.
>
> **ಪಂ. ದೀನ್ ದಯಾಳ್ ಉಪಾಧ್ಯಾಯ**

* * * * *

# ಮೂರನೇ ಸಾರ್ವತ್ರಿಕ ಚುನಾವಣೆಯಿಂದ ವೃದ್ಧಿಸಿದ ಜನಸಂಘದ ಶಕ್ತಿ

**ಭಾರತೀಯ ಜನಮಾನಸದಿಂದ ಸಮಾಜವಾದಿ ಘೋಷಣೆಯ ಜಾದು ಅಂತ್ಯ. ಜನಸಂಘದ ಅಖಿಲ ಭಾರತೀಯ ಪ್ರತಿನಿಧಿ ಸಭೆಯ ಸಮಕ್ಷಮದಲ್ಲಿ ಶ್ರೀ ಉಪಾಧ್ಯಾಯ ಅವರ ವರದಿ.**

ದಿನಾಂಕ ೨೪-೫-೬೨ ರಂದು ರಾಜಸ್ಥಾನದ ಕೋಟಾದಲ್ಲಿ ಜರುಗಿದ ಭಾರತೀಯ ಜನಸಂಘದ ಕಾರ್ಯಕಾರಿಣಿ ಪ್ರಧಾನ ಕಾರ್ಯದರ್ಶಿಯಾದ ಪಂ. ದೀನ್ ದಯಾಳ್ ಉಪಾಧ್ಯಾಯರು ವರದಿ ಮಂಡನೆ ಮಾಡುತ್ತಾ ಹೀಗೆ ನುಡಿದರು:

೧೯೬೧ರ ನವೆಂಬರ್ ೧೨ರಿಂದ ೧೪ರವರೆಗೆ ವಾರಾಣಸಿಯಲ್ಲಿ ನಡೆದ ಭಾರತೀಯ ಪ್ರತಿನಿಧಿ ಸಭೆಯ ತನ್ನ ಹಿಂದಿನ ಅಧಿವೇಶನದಲ್ಲಿ ಮೂರನೇ ಸಾರ್ವತ್ರಿಕ ಚುನಾವಣೆಗಾಗಿ ಜನಸಂಘದ ನೀತಿಗಳನ್ನು ನಿರ್ಧರಿಸಿತು. ಹಾಗೇನೇ ಚುನಾವಣೆಯ ಪ್ರಣಾಳಿಕೆಗೆ ಸ್ವೀಕೃತಿ ನೀಡಿತು. ಆ ಸಂದರ್ಭದಲ್ಲಿ ನಾವು ಅತ್ಯಧಿಕ ಸ್ಥಾನಗಳಲ್ಲಿ ಚುನಾವಣೆಯನ್ನು ಎದುರಿಸಬೇಕು ಮತ್ತು ಇತರೆ ಪಕ್ಷಗಳೊಂದಿಗೆ ಯಾವುದೇ ಪ್ರಕಾರದ ಚುನಾವಣಾ ಮೈತ್ರಿಯ ಹೊಂದಾಣಿಕೆ ಅಥವಾ ಸಂಯುಕ್ತಪಕ್ಷವನ್ನಾಗಿ ಮಾಡಿಕೊಳ್ಳದೇ ನಮ್ಮದೇ ಕಾರ್ಯಕ್ರಮ ಹಾಗೂ ನೀತಿಗಳ ಆಧಾರದ ಮೇಲೆ ಜನಾಭಿಪ್ರಾಯದ ಸಮರ್ಥನೆಯನ್ನು ಪಡೆಯುವ ಪ್ರಯತ್ನವನ್ನು ಮಾಡಬೇಕೆಂದು ನಿರ್ಣಯಿಸಿದೆವು. ಆದರೆ ಸ್ಥಳೀಯ ಆವಶ್ಯಕತೆಗಳಿಗನುಸಾರವಾಗಿ ಸ್ವತಂತ್ರ್ಯ ಅಭ್ಯರ್ಥಿಗಳು ಅಥವಾ ಕಮ್ಯುನಿಸ್ಟ್ ಮುಸ್ಲಿಂ ಲೀಗ್ ದ್ರಾವಿಡ ಮುನ್ನೇತ್ರ ಕಳಗಂ ಮತ್ತು ಅಕಾಲಿದಳಗಳನ್ನು ಬಿಟ್ಟು ಇನ್ನಿತರ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬಹುದು ಎಂಬ ರಿಯಾಯಿತಿಯನ್ನು ಖಂಡಿತವಾಗಿಯೂ ಪ್ರಕಟಿಸಿದೆವು. ಇದರ ಪ್ರಕಾರ ನಮ್ಮ ಅಭ್ಯರ್ಥಿ ಆ ನಿರ್ದಿಷ್ಟ ಕ್ಷೇತ್ರದಲ್ಲಿ ಸ್ಪರ್ಧಿಸುವುದನ್ನು ಬಿಟ್ಟರೆ ಉಳಿದಂತೆ ಯಾವ ನಿರ್ಬಂಧಗಳೂ ನಮ್ಮ ಮೇಲೆ ಇರಲಿಲ್ಲ.

**ನಮ್ಮ ಚುನಾವಣಾ ಸಿದ್ಧತೆ**

ಮೇಲೆ ಹೇಳಿದ ನೀತಿನಿಯಮದ ಪ್ರಕಾರ ಜನಸಂಘವು ೧೧೬೨

ಅಭ್ಯರ್ಥಿಗಳನ್ನು ವಿಧಾನ ಸಭೆಗಳಿಗೆ, ಹಾಗೂ ಲೋಕಸಭೆಗೆ ೧೯೮ ಉಮೇದುದಾರವನ್ನು ಕಣಕ್ಕಿಳಿಸಿತು. ಕಾಂಗ್ರೇಸೇತರ ಪಕ್ಷಗಳಲ್ಲಿ ಜನಸಂಘವೊಂದೇ ತನ್ನ ಹೆಚ್ಚಿನ ಅಭ್ಯರ್ಥಿಗಳನ್ನು ಚುನಾವಣಾ ಕಣಕ್ಕೆ ಇಳಿಸುವ ಪ್ರಯತ್ನ ಮಾಡಿತು. ಉಳಿದ ಚುನಾವಣೆಗಳಿಗೆ ತುಲನೆ ಮಾಡಿದಲ್ಲಿ ಇದೊಂದು ದೊಡ್ಡ ಪ್ರಯತ್ನವಾಗಿತ್ತು. ಏಕೆಂದರೆ ಆಗ ವಿಧಾನಸಭೆ ಮತ್ತು ಲೋಕಸಭೆಯ ಅಭ್ಯರ್ಥಿಗಳ ಸಂಖ್ಯೆ ಕ್ರಮವಾಗಿ ೫೭೮ ಹಾಗೂ ೧೩೦ ಆಗಿತ್ತು. ಕಳೆದ ಬಾರಿ ನಾವು ಅಸ್ಸಾಂ, ಒರಿಸ್ಸಾ, ಮದ್ರಾಸ್ ಹಾಗೂ ಕೇರಳಗಳಲ್ಲಿ ಯಾವುದೇ ಚುನಾವಣೆಗೆ ಸ್ಪರ್ಧಿಸಲಿಲ್ಲ ಮತ್ತು ಆಂದ್ರದಲ್ಲಿ ಕೇವಲ ಇಬ್ಬರು ಉಮೇದುದಾರರನ್ನು ಕಣಕ್ಕಿಳಿಸಲಾಯಿತು. ಆದರೆ ಅಸ್ಸಾಂ ಒರಿಸ್ಸಾವನ್ನು ಬಿಟ್ಟಂತೆ ಉಳಿದಲ್ಲಿ ಪ್ರದೇಶಗಳಲ್ಲಿ ಚುನಾವಣೆಗಳಲ್ಲಿ ಭಾಗವಹಿಸಲಾಯಿತು. ಆದರೆ ಇಲ್ಲಿ ಉಲ್ಲೇಖಿಸಬೇಕಾದ ಅಂಶವೇನೆಂದರೆ ಕೆಲವೇ ಕೆಲವು ಅಭ್ಯರ್ಥಿಗಳನ್ನು ಬಿಟ್ಟಂತೆ ಉಳಿದ ಅಭ್ಯಥಿಗಳ ಆಯ್ಕೆಯನ್ನು ಬಹಳ ತಡವಾಗಿ ಮಾಡಲಾಯಿತು ಮತ್ತು ಕೊನೇ ಕ್ಷಣಗಳಲ್ಲಿ ಅಭ್ಯರ್ಥಿಯನ್ನು ಬದಲಾಯಿಸಿದ ಕ್ಷೇತ್ರಗಳೂ ಕಡಿಮೆಯೇನಿಲ್ಲ. ಇದಕ್ಕೆ ಸಮರ್ಪಕವಾದ ಕಾರಣಗಳಿದ್ದವು ಎಂದು ಒಪ್ಪಿಕೊಂಡರೂ ಸಹ ಖಂಡಿತವಾಗಿಯೂ ಇದರ ಪರಿಣಾಮವಂತೂ ಚುನಾವಣೆಯ ಫಲಿತಾಂಶದ ಮೇಲೆ ಉಂಟಾಯಿತು. ಸಾರ್ವತ್ರಿಕ ಶಿಕ್ಷಣ, ಜನಸಂಘದ ಸಿದ್ಧಾಂತ ಮತ್ತು ಕಾರ್ಯಕ್ರಮಗಳ ಪ್ರಚಾರ ಹಾಗೂ ಸಂಘಟನೆಯ ವಿಸ್ತಾರದ ದೃಷ್ಟಿಯಿಂದ ಈ ಪ್ರಯತ್ನ ಖಂಡಿತವಾಗಿಯೂ ಫಲಪ್ರದವಾಗಿ ಹೊರಹೊಮ್ಮುತ್ತದೆ.

ಜನಸಂಘದ ನೀತಿಗೆ ಸಂಬಂಧಿಸಿದಂತೆ ಇತರೆ ಪಕ್ಷಗಳೊಂದಿಗೆ ಹೊಂದಾಣಿಕೆಯ ಪ್ರಶ್ನೆ ಉದ್ಭವಿಸುವುದೇ ಇಲ್ಲ, ಆದರೆ ಹೊಂದಾಣಿಕೆಯ ಸಂದರ್ಭ ಎಲ್ಲೋ ಅಲ್ಲೊಂದು ಇಲ್ಲೊಂದು ಸ್ಥಾನಗಳಿಗೆ ಸಂಬಂಧಿಸಿದಂತೆ ಅದರಲ್ಲೂ ಅಭ್ಯರ್ಥಿಗಳೊಂದಿಗೆ ಒದಗಿ ಬಂತು. ರಾಜಸ್ಥಾನದಲ್ಲಿ ಸ್ವತಂತ್ರಪಕ್ಷದ ನಾಯಕರೊಂದಿಗೆ ಆ ಪ್ರದೇಶದಾದ್ಯಂತ ಹೊಂದಾಣಿಕೆಯ ಮಾತುಕತೆ ನಡೆದಿತ್ತು. ಆದರೆ ಫಲ ನೀಡಲಿಲ್ಲ. ಆ ಪಕ್ಷದ ನಾಯಕರು ಈ ಹೊಂದಾಣಿಕೆಯ ನಿರ್ಧಾರವನ್ನು ತಮ್ಮ ಪಕ್ಷದ ಅನುಯಾಯಿಗಳಿಗೆ ತಿಳಿಸಿ ಅದನ್ನು ಜಾರಿಗೊಳಿಸುವಲ್ಲಿ ಅವರನ್ನು ಒಪ್ಪಿಸುವ ಸ್ಥಿತಿಯಲ್ಲಿ ಇರಲಿಲ್ಲ. ನಾವು ಬೆಂಬಲಿಸಿದ ಸ್ವತಂತ್ರ ಅಭ್ಯರ್ಥಿಗಳಲ್ಲಿ ಪೂತಪುರದಲ್ಲಿ ಡಾ। ರಾಮಮನೋಹರ ಲೋಹಿಯಾ, ಉತ್ತರ ಬಾಂಬೆಯಲ್ಲಿ ಆಚಾರ್ಯ ಕೃಪಲಾನಿ, ಫತೇಪುರದಲ್ಲಿ ಶ್ರೀಗೌರಿಶಂಕರ್ ಕಕ್ಕಡ್ ಹಾಗೂ ನರಸಿಂಹಘಡದಲ್ಲಿ ಭಾನುಪ್ರತಾಪಸಿಂಹ ಪ್ರಮುಖರಾಗುತ್ತಾರೆ. ಇವರಲ್ಲಿ ಶ್ರೀಕಕ್ಕಡ್ ಮತ್ತು ಭಾನುಪ್ರಕಾಶ್ ಜಯಗಳಿಸಿದರು. ಅದೇ ರೀತಿ ನಾವು ಶ್ರೀರಾಮೇಶ್ವರಾನಂದ (ಕರ್‌ನಾಲ್) ಮತ್ತು ಲಾಲ್‌ಹರದೇವ್ ಸಹಾಯ್ (ಅಮರೊಹ್) ಇವರನ್ನು ಸಹ ಬೆಂಬಲಿಸಿದ್ದೆವು.

ಹಾಗೂ ಅವರು ನಮ್ಮ ಚಿಹ್ನೆಯ ಆಧಾರದಲ್ಲಿಯೇ ಸ್ಪರ್ಧಿಸಿದ್ದರು. ಸ್ವಾಮಿರಾಮೇಶ್ವರಾನಂದರು ಜಯಶಾಲಿಯಾದ ಬಳಿಕ ಜನಸಂಘದೊಂದಿಗೇ ಕಾರ್ಯ ನಿರ್ವಹಿಸುತ್ತಿದ್ದಾರೆ.

**ವಿಭಿನ್ನ ಪಕ್ಷಗಳ ಚುನಾವಣೆ ಪ್ರಚಾರದ ಶೋಧನೆಯ ಆವಶ್ಯಕತೆ**

ಭಾರತೀಯ ಜನಸಂಘವು ತನ್ನ ರಾಜಕೀಯ ನೀತಿಗೆ ಕಾನೂನಿನ ಸ್ವರೂಪ ನೀಡಬಯಸುತ್ತದೆ. ಆದುದರಿಂದ ಅದರ ಪ್ರಚಾರ ಮತ್ತು ಚಳುವಳಿಗಳು ಯಾವತ್ತೂ ಕಾನೂನಿಕ ದೃಷ್ಟಿಕೋನದೊಂದಿಗೇ ಮುಂದುವರೆದಿವೆ. ಈ ಚುನಾವಣೆಗಳಲ್ಲಿಯೂ ನಾವು ನಮ್ಮ ಗುಣಮಟ್ಟವನ್ನು ಕಾಪಾಡಿಕೊಂಡಿದ್ದೇವೆ. ನಮ್ಮ ವಕ್ತಾರರೂ ಸಹ ಮುಖ್ಯವಾಗಿ ತಮ್ಮ ವಿಚಾರವನ್ನು ಮುಂದಿಟ್ಟರು ಮತ್ತು ನಮ್ಮ ಕಾರ್ಯಕ್ರಮದ ತಳಹದಿಯ ಮೇಲೆ ಹಾಗೂ ಆಧಾರಸಹಿತವಾಗಿ ಎಚ್ಚರಿಕೆಯಿಂದ ಇತರೇ ಪಕ್ಷಗಳ ಟೀಕೆಯನ್ನು ಮಾಡಿದರು. ನಮ್ಮ ಹಾಗೂ ಕಾಂಗ್ರೆಸ್ ಮತ್ತು ಅದರೊಂದಿಗೆ ರೂಪುಗೊಂಡಿರುವ ಇತರೇ ಪಕ್ಷಗಳೊಂದಿಗೆ ಮೂಲಭೂತ ಹಾಗೂ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇದೆ ಎಂಬುದು ಸತ್ಯ. ಈ ಕಾರಣದಿಂದಾಗಿ ಮತ್ತು ನಮ್ಮ ಪರ್ಯಾಯ ನೀತಿಗಳು ಹಾಗೂ ಕಾರ್ಯಕ್ರಮಗಳು, ಅವೆಲ್ಲದರ ಮೂಲಬೇರು ಈ ದೇಶದ ಮಣ್ಣು ಮತ್ತು ಸಂಸ್ಕೃತಿಯೊಳಗೆ ಬೆಸೆದುಕೊಂಡಿರುವ ಕಾರಣ ನಮ್ಮ ಆಲೋಚನೆಗಳು ಇತರೇ ಪಕ್ಷಗಳನ್ನು ಮೂಲೋತ್ಪಾಟನೆ ಮಾಡುವಂತಹವು ಗಳಾಗಿದ್ದವು. ನಿರ್ಭಯತೆ ಮತ್ತು ನಿಸ್ವಾರ್ಥ ಪ್ರವೃತ್ತಿ ಕಾರಣದಿಂದ ಅವುಗಳ ಹರಿತ ಕೆಲವೊಂದು ಕಡೆ ತೀಕ್ಷ್ಣವಾಗಿರಬಹುದು. ಆದರೆ ಜನಸಂಘವು ಎಲ್ಲಿಯೂ ತನ್ನ ಸಂಪೂರ್ಣ ಪ್ರಚಾರ ಕಾರ್ಯಕ್ರಮದಲ್ಲಿ ವೈಯಕ್ತಿಕ ಆಕ್ಷೇಪದ ಸಾಂಪ್ರದಾಯಿಕತೆಯ, ಜಾತೀಯತೆಯ ಭಾವನೆಗಳ ಅಥವಾ ಪ್ರಾಂತೀಯ ವರ್ಗನಿಷ್ಠೆಯನ್ನು ಆಶ್ರಯಿಸಲಿಲ್ಲ. ಆಯಾಯ ಪ್ರದೇಶಗಳಲ್ಲಿನ ಆಚಾರ ವಿಚಾರಗಳನ್ನು ನವೀಕರಿಸಿ ಅಂತೆಯೇ ನಡೆದುಕೊಳ್ಳಲಾಯಿತು. ನಮ್ಮಿಂದ ಅವುಗಳ ಅನುಕರಣೆಯೂ ಆಯಿತು. ಚುನಾವಣೆಯ ನಂತರ ಕಮ್ಯುನಿಸ್ಟ್ ಪಕ್ಷ ಹಾಗೂ ಅದರ ಕೆಲವು ಸಮರ್ಥಕರು ಜನಸಂಘದ ಮೇಲೆ ಅಸಮರ್ಪಕ ಚುನಾವಣಾ ಪ್ರಚಾರ ಅಥವಾ ಭಿತ್ತಿಪತ್ರಗಳನ್ನು ಹೊರಡಿಸುವ ಆರೋಪವನ್ನು ಮಾಡಿರುತ್ತಾರೆ. ಈ ವಿಷಯದಲ್ಲಿ ಪ್ರಧಾನ ಮಂತ್ರಿಗಳನ್ನು ಎಳೆದು ತರುವ ಪ್ರಯತ್ನಗಳನ್ನು ಮಾಡಿದರು. ಪ್ರಧಾನ ಮಂತ್ರಿಗಳೇನೋ ಶ್ರೀ ಬಲರಾಜ್ ಮಧೋರ್‌ರವರಿಗೆ ಬರೆದ ಪತ್ರದ ಮುಖೇನ ತಾವು ಈ ಷಡ್ಯಂತ್ರದಲ್ಲಿ ಭಾಗಿಯಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ಕಮ್ಯುನಿಸ್ಟರ ಇತರೇ ಸಂಗಾತಿಗಳು ಅವರ ಈ ದುಷ್ಟತನದಲ್ಲಿ ನಿರಂತರ ಕೈ ಜೋಡಿಸುತ್ತಿದ್ದಾರೆ.

ಅವರೆಲ್ಲರೂ ಭವಿಷ್ಯದ ರಾಜಕೀಯ ವಾತಾವರಣವನ್ನು ಪ್ರಭಾವಿತಗೊಳಿಸಲು ಭಾರತೀಯ ಜನಸಂಘದ 'ಗುಮ್ಮ' ವನ್ನು ಜನರ ಮುಂದೆ ತಂದು ನಿಲ್ಲಿಸಿ ಅವರ ಗಮನವನ್ನು ಬೇರೆಡೆಗೆ ಸೆಳೆಯುವ, ಇದರಿಂದ ಅವರ ಭಾರತ ವಿರೋಧಿ ಕಾರ್ಯಕ್ರಮಗಳು ಸಾಗುತ್ತಿರಬೇಕು ಎಂಬುದು ಸ್ಪಷ್ಟವಾಗುತ್ತಿದೆ ಮತ್ತು ಚುನಾವಣೆಯ ದಿನಗಳಲ್ಲಿ ಮಾಡಿನ ಪಾಪಕೃತ್ಯಗಳನ್ನು ಮುಚ್ಚಿಡಲು ಒಂದು ಷಡ್ಯಂತ್ರದ ರೂಪದಲ್ಲಿ ಇದೆಲ್ಲಾ ನಡೆಯುತ್ತಿದೆ. ಬೇರೆ ಬೇರೆ ಪಕ್ಷಗಳ ಮೂಲಕ ಮಾಡಲಾದ ಚುನಾವಣಾ ಪ್ರಚಾರದ ನಿಷ್ಪಕ್ಷಪಾತವಾದ ತನಿಖೆ ಮಾಡಿಸಬೇಕು ಎಂದು ಸರಕಾರಕ್ಕೆ ನನ್ನ ಬೇಡಿಕೆಯಾಗಿದೆ. ಇದು ಸದ್ಯದ ದುಷ್ಟತನವನ್ನು ಹತ್ತಿಕ್ಕುವುದಷ್ಟೇ ಅಲ್ಲ ಬದಲಾಗಿ ಭವಿಷ್ಯದಲ್ಲಿ ಚುನಾವಣಾ ಪ್ರಚಾರದ ಗುಣಮಟ್ಟವನ್ನು ಎತ್ತರಿಸಲೂ ಆವಶ್ಯಕವಾಗಿದೆ.

**ಕಮ್ಯುನಿಸ್ಟರ ಹಿಂಸಾ ಕೃತ್ಯ**

ಚುನಾವಣೆಯಲ್ಲಿ ಕಮ್ಯುನಿಸ್ಟರು ಅತ್ಯಂತ ಕೀಳುಮಟ್ಟದ ಪ್ರಚಾರಕಾರ್ಯದ ಜೊತೆಗೆ ಅನೇಕ ಸ್ಥಾನಗಳಲ್ಲಿ ಹಿಂಸೆ ಹಾಗೂ ಬಲಪ್ರಯೋಗದ ಸಹಾಯಕ್ಕೂ ಮುಂದಾದರು. ಆದರೆ ಅವರು ಎಲ್ಲೆಲ್ಲಿ ಜನಸಂಘದ ವಿರುದ್ಧ ಕಾಂಗ್ರೆಸ್ಸನ್ನು ಸಮರ್ಥಿಸುತ್ತಿದ್ದರೋ ಅಲ್ಲಿ ಮಾತ್ರ ಈ ಕರ್ಮಕಾಂಡಗಳನ್ನು ನಡೆಸಿದರು. ಕಾಂಗ್ರೆಸ್‌ನ ಮರೆಯಲ್ಲಿ ತನ್ನ ಕೆಟ್ಟ ವಿಚಾರಗಳನ್ನು ಈಡೇರಿಸಿಕೊಳ್ಳಲು ಈ ನೀತಿಯನ್ನು ಅನುಸರಿಸಲಾಯಿತು ಎಂಬುದು ಸ್ಪಷ್ಟವಾಗುತ್ತದೆ. ಈ ದೃಷ್ಟಿಯಿಂದ ಇಲ್ಲಿ ಲೋಮಾಪವೂ ಮತ್ತು 'ಬಸರಾಮ್‌ಪುರ್'ನ ಘಟನೆಗಳು ಉಲ್ಲೇಖನಾರ್ಹ. ನ್ಯಾಯಾಲಯದಲ್ಲಿ ಮೊಕದ್ದಮೆ ಇರುವ ಕಾರಣ ನಾನು ಈ ಕುರಿತಂತೆ ಹೆಚ್ಚಿಗೆ ಹೇಳ ಬಯಸುವುದಿಲ್ಲ. ಆದರೆ ಆ ಜನರು ಪ್ರಜಾತಂತ್ರದ ಸಫಲತೆಯನ್ನು ಬಯಸುತ್ತಾರೆ. ಅವರು ಗಮನಿಸಬೇಕಾದುದು ಏನೆಂದರೆ ಅವರು ಜಾಗರೂಕರಾಗಿರಬೇಕು. ಮತ್ತು ಕ್ಷಣಿಕ ಪಕ್ಷಾಧಾರಿತ ಲಾಭಕ್ಕಾಗಿ ಈ ರೀತಿಯ ಹಿಂಸಾಲೋಲುಪ ಶಕ್ತಿಗಳ ಕೈಗೆ ಸಿಲುಕಬಾರದು ಎಂಬುದನ್ನು ಅವರು ಗಮನಿಸಬೇಕಾಗುತ್ತದೆ.

**ಮುಸ್ಲಿಂ ಕೋಮುವಾದಕ್ಕೆ ಪ್ರೋತ್ಸಾಹ**

ಕಾಂಗ್ರೆಸ್, ಕಮ್ಯುನಿಸ್ಟ್ ಹಾಗೂ ಪಂ. ಸಂ. ದಳ ಈ ಮೂರು ಪಕ್ಷಗಳೂ ಮುಸಲ್ಮಾನರ ಒಟ್ಟು ಬೆಂಬಲವನ್ನು ಪಡೆಯುವ ಸ್ಪರ್ಧೆಯಲ್ಲಿ ಅವರೊಳಗೆ ಭೇದ ಹಾಗೂ ಕೋಮುವಾದದ ಭಾವನೆಗಳನ್ನು ಕೆರಳಿಸುವ ಸಾಕಷ್ಟು ಪ್ರಯತ್ನ ಮಾಡಿದವು. ಅಭ್ಯರ್ಥಿಗಳಿಗೆ ಪಕ್ಷದ ಟಿಕೆಟ್ ನೀಡುವ ಸಮಯದಲ್ಲಿ ಕೋಮುಭಾವನೆಯ

ಆಧಾರದಲ್ಲಿ ವಿಚಾರ ಮಾಡಿದ್ದಷ್ಟೇ ಅಲ್ಲ ಬದಲಾಗಿ ಚುನಾವಣೆಯ ಪ್ರಚಾರದ ವೇಳೆಯಲ್ಲಿಯೂ ಆ ವರ್ಗದ ಸಮರ್ಥನೆಯನ್ನು ಪಡೆಯುವ ಸಲುವಾಗಿ ಅವರನ್ನು ಧಾರ್ಮದ ಭಾವನೆಗಳ ಆಧಾರದಲ್ಲಿಯೇ ಸಂಬೋಧಿಸಲಾಯಿತು. 'ಗೂಬೆ' ಬೆದರಿಕೆಯನ್ನು ಮುಂದೊಡ್ಡಲಾಯಿತು. ಅವರ ಮನಸ್ಸಿನಲ್ಲಿ ಒಂದು ಬಗೆಯ ಆತಂಕವನ್ನು ಸೃಷ್ಟಿಸುವ ಸಲುವಾಗಿ ಜನಸಂಘ ಮತ್ತು ಜನಸಂಘದ ಈ ತಥಾಕಥಿಕ ಭಯದ ಕಾರಣ ರಾಜಕೀಯ ಮತ್ತು ಆರ್ಥಿಕ ಕಾರ್ಯಕ್ರಮಗಳಲ್ಲಿ ಆಧಾರದ ಮೇಲೆ ಸ್ವತಂತ್ರ ನಿರ್ಣಯವನ್ನು ಕೈಗೊಂಡು ಮತದಾನ ಮಾಡಬಾರದೆಂದು ಪ್ರಚಾರ ಮಾಡುವ ಪ್ರಯತ್ನ ಮಾಡಲಾಯಿತು.

**ಜನಸಂಘದ ವಿರುದ್ಧ ಸುಳ್ಳು ಆರೋಪ**

ಸಿಖ್ಖರು ಹಾಗೂ ಹರಿಜನರ ನಡುವೆ ಇದೇ ರೀತಿಯ ಅಪಪ್ರಚಾರವನ್ನು ಹರಡಲಾಯಿತು. ಪ್ರಾಂತೀಯತೆಯ ಆಧಾರದಲ್ಲಿ ಜನರ ನಡುವೆ ಜನಸಂಘದ ಕುರಿತಂತೆ ಭ್ರಮೆಯನ್ನು ಹುಟ್ಟಿಸಲಾಯಿತು. ಇದರ ಫಲ ಒಂದು ಕಡೆ ಜನಸಂಘವನ್ನು ಮುಸಲ್ಮಾನರ ಶತ್ರು ಎಂಬುದಾಗಿ ಘೋಷಿಸಲಾದರೆ ಮತ್ತೊಂದು ಕಡೆ ಒಂದು ವೇಳೆ ಜನಸಂಘ ಅಧಿಕಾರಕ್ಕೆ ಬಂದದ್ದೇ ಆದಲ್ಲಿ ಸವರ್ಣೀಯರ ರಾಜ್ಯ ಸ್ಥಾಪನೆಯಾಗಿ ಹರಿಜನರ ಕಿವಿಗೆ ಕಾದ ಸೀಸ ಸುರಿಯಲಾಗುವುದು ಎಂದು ಪ್ರಚಾರ ಮಾಡಲಾಯಿತು. ಕೇಶವದೇವ ಮಾಲವೀಯರವರು ಸ್ವತಃ ಬ್ರಾಹ್ಮಣರಾಗಿದ್ದರೂ ಸಹ ಬ್ರಾಹ್ಮಣರು ಹಾಗೂ ಠಾಕೂರರ ಬೆಂಬಲ ಜನಸಂಘಕ್ಕೆ ಇರುವ ಆರೋಪವನ್ನು ಮಾಡಿದ್ದರು. ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರೀಯವರು ಜನಸಂಘವನ್ನು ಮಹಾರಾಷ್ಟ್ರದ ಪಕ್ಷವೆಂದು ಹೇಳಿ ರಾಯಪುರದಲ್ಲಿ ಪ್ರಾಂತೀಯ ದ್ವೇಷ ಹುಟ್ಟುಹಾಕುವ ಪ್ರಯತ್ನ ಮಾಡಿದ್ದರು. ಮತ್ತೊಂದು ಕಡೆ ಕಾಂಗ್ರೆಸ್ಸಿನ ನಾಯಕರುಗಳು ಮಹಾರಾಷ್ಟ್ರದಲ್ಲಿ ಜನಸಂಘವು ಮರಾಠಿಗರ ವಿರುದ್ಧವಾಗಿರುವ ಪಕ್ಷ ಎಂದು ಬಿಂಬಿಸುತ್ತಾ ಜಾತೀಯ ಭಾವನೆಗಳ ಆಸರೆ ಪಡೆದರು. ಇನ್ನು ಕೇರಳದಲ್ಲಿಯಂತೂ ಸ್ವತಃ ಪ್ರಧಾನಮಂತ್ರಿಯಾದವರೇ ಜನಸಂಘವನ್ನು ಉತ್ತರ ಭಾರತದ ಪಕ್ಷ ಎಂದು ಹೇಳುತ್ತಾ ಉತ್ತರ ಹಾಗೂ ದಕ್ಷಿಣದ ನಡುವೆ ಕೃತಕ ಕಂದಕವನ್ನು ನಿರ್ಮಿಸಿ ಜನತೆಯನ್ನು ಇಬ್ಭಾಗಿಸುವ ಪ್ರಯತ್ನ ಮಾಡಿದರು. ಜನಸಂಘದೊಂದಿಗೆ ಗಾಂಧೀಜಿಯವರ ಹತ್ಯೆಯನ್ನು ತಳುಕುಹಾಕಿ ಜನಸಂಘದ ಹೆಸರನ್ನು ಕೆಡಿಸುವ ಕೆಲಸವನ್ನು ಸಮರ್ಪಕವಾಗಿಯೇ ಕೈಗೊಳ್ಳಲಾಯಿತು. ಹೀಗೆ ಮಾಡುವ ಮೂಲಕ ಮಹಾತ್ಮ ಗಾಂಧಿ ಹಾಗೂ ದೇಶದ ಗೌರವವನ್ನು ಹಾಳುಗೆಡುತ್ತಿದ್ದೇವೆ ಎಂದು ಗಾಂಧೀಜೀವರ ಅನುಯಾಯಿಗಳೆಂದು ಎಂದು ಹೇಳಿಕೊಳ್ಳುವವರು ಯೋಚಿಸಲೇ ಇಲ್ಲ. ಯಾರೋ

ಒಬ್ಬ ಬುದ್ಧಿಭ್ರಮಣೆ ಗೊಳಗಾದ ವ್ಯಕ್ತಿಯಿಂದ ಯಾವುದಾದರೂ ಪಾಪಕಾರ್ಯ ಘಟಿಸುವುದೆಂದರೆ ಆ ಮಾತು ಬೇರೆ. ಆದರೆ ತಮ್ಮೊಂದಿಗೆ ಅತ್ಯಧಿಕ ಜನ ಬೆಂಬಲ ಹೊಂದಿರುವ ಒಂದು ದೊಡ್ಡ ಸಂಘಟನೆ ಇಂತಹ ಕೆಲಸಗಳನ್ನು ಮಾಡುತ್ತದೆ ಎಂದಾದರೆ ಅದರ ಮಹತ್ವವೇ ಬೇರೆಯಾಗಿಬಿಡುತ್ತದೆ. ತಮ್ಮ ರಾಜಕೀಯ ಸ್ವಾರ್ಥಸಾಧನೆಗಾಗಿ ಗಾಂಧೀಜಿಯವರನ್ನು ಸಾಕಷ್ಟು ಉಪಯೋಗಿಸಿಕೊಂಡಾಗಿದೆ ಎಂದು ನನಗನ್ನಿಸುತ್ತದೆ. ಈಗ ಜನರು ಇಂತಹ ಪಾಪ ಕೃತ್ಯದಿಂದ ದೂರವಿರಬೇಕಾಗಿದೆ. ಈ ರೀತಿಯ ಅಪ್ಪಟ ಸುಳ್ಳು ಹಾಗೂ ದ್ವೇಷಭರಿತ ಪ್ರಚಾರದಿಂದ ಜನತೆಯ ಮನಸ್ಸಿನ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗಿರಬಹುದೆಂದು ಅಳೆಯುವುದು ಕಷ್ಟ ಸಾಧ್ಯವೇನಲ್ಲ. ಆದರೆ ಎಲ್ಲೆಲ್ಲಿ ನಮ್ಮ ಕಾರ್ಯಕರ್ತರು ಗಟ್ಟಿಯಾಗಿ ನಿಂತು ಕಾರ್ಯ ನಿರ್ವಹಿಸಿದರೋ ಅಲ್ಲೆಲ್ಲಾ ಎಲ್ಲಾ ವರ್ಗ ಜನರು ನಮಗೆ ಸಂಪೂರ್ಣ ಸಹಕಾರ ನೀಡಿದ್ದಾರೆಂಬು ದಂತೂ ಸತ್ಯ.

**ಇವು ಅಪವಿತ್ರ ಮೈತ್ರಿಗಳು**

ಚುನಾವಣೆಗಳಲ್ಲಿ ಎಲ್ಲಾ ಪಕ್ಷಗಳು ಮಾಡಿಕೊಂಡ ಮೈತ್ರಿ ಕೇವಲ ಆಶ್ಚರ್ಯಜನಕವಷ್ಟೇ ಅಲ್ಲ, ದುಃಖದಾಯಕವೂ ಆಗಿದೆ. ಅಧಿಕಾರ ಮೋಹದಿಂದ ಅವುಗಳು ಯಾವ ಹಂತಕ್ಕೆ ತಲುಪಬಹುದು ಎಂಬುದನ್ನು ಇದರಿಂದ ಅಂದಾಜಿಸಬಹುದು. ಕಮ್ಯೂನಿಸ್ಟ್ ಪಕ್ಷವಂತೂ ಜನಸಂಘವನ್ನು ಸೋಲಿಸುವುದಕ್ಕಾಗಿ ಕಾಂಗ್ರೆಸ್‌ನ ಸಮರ್ಥನೆ ಮಾಡುವುದಾಗಿ ನಿರ್ಧರಿಸಿತ್ತು. ಮತ್ತು ಈ ಪ್ರಸ್ತಾಪವನ್ನು ಕೇರಳದವರೆಗೂ ಮಾಡಲಾಯಿತು. ಪಶ್ಚಿಮ ಬಂಗಾಳದಲ್ಲಿ ಅವರು ವಾಮಪಂಥ್ಯ ಸಂಯುಕ್ತದಳದ ತಮ್ಮ ಹಳೆಯ ನೀತಿಯನ್ನೇ ತಮ್ಮದಾಗಿಸಿಕೊಂಡು ಪರ್ಯಾಯ ಸರ್ಕಾರದ ಘೋಷಣೆ ಮಾಡಿದರು. ಈ ಬಾರಿ ಪ್ರ.ಸಂ. ದಳ ಅದರಲ್ಲಿ ಭಾಗಿಯಾಗಲಿಲ್ಲ. ಆದರೆ ಉಳಿದ ಎಲ್ಲಾ ವಾಮಪಂಥೇದಳಗಳು ಅದರಲ್ಲಿ ಸೇರಿಕೊಂಡವು. ಪಂಜಾಬಿನಲ್ಲಿ ಅಕಾಲಿ ದಳದೊಂದಿಗೆ ಹಾಗೂ ಆಂದ್ರದಲ್ಲಿ ಸ್ವತಂತ್ರ ಪಾರ್ಟಿಯೊಂದಿಗೆ ಪರೋಕ್ಷ ಒಪ್ಪಂದ ಮಾಡಿಕೊಂಡರು. ಅಲ್ಲಿಯ ಜಾತೀಯ ಸ್ಥಿತಿಗಳ ಕಾರಣದಿಂದ ಆ ಇಬ್ಬರೂ ಹೀಗೆ ಮಾಡಿಕೊಂಡಿದ್ದಿರಬಹುದು ಎನಿಸುತ್ತದೆ. ಅವರು ಮಹಾರಾಷ್ಟ್ರದಲ್ಲಿ ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಹೆಸರಿನಲ್ಲಿಯೇ ಹಿಂದೂಮಹಾಸಭಾ, ರಿಪಬ್ಲಿಕ್ ಪಾರ್ಟಿ ಹಾಗೂ ಶೇಂ.ಕಾಂ. ಪಕ್ಷದೊಂದಿಗೆ ಒಪ್ಪಂದ ಮಾಡಿಕೊಂಡು ಚುನಾವಣೆ ಎದುರಿಸಿದರು. ಸ್ವತಂತ್ರ ಪಾರ್ಟಿಯಂತೂ ಕಾಂಗ್ರೆಸ್ ಅಲ್ಲದೇ ಬಹುಶಃ ಅಕಾಲಿದಳ ದ್ರಾವಿಡ ಮುನ್ನೇತ್ರ ಕಳಗಂ ಮತ್ತು ಕಮ್ಯೂನಿಸ್ಟರೂ ಸಮ್ಮಿಲಿತಗೊಂಡಂತೆ ಅವರೆಲ್ಲರ ಜೊತೆ ಒಂದಲ್ಲ ಒಂದು ರೀತಿಯಲ್ಲಿ

ಹೊಂದಾಣಿಕೆ ಮಾಡಿಕೊಂಡಿತು. ಹಿಂದೂ ಮಹಾಸಭಾ ಮತ್ತು ರಾಮರಾಜ್ಯ ಪರಿಷತ್ತುಗಳು ತಮ್ಮಲ್ಲಿಯೇ ಚುನಾವಣಾ ಒಪ್ಪಂದ ಮಾಡಿಕೊಂಡು, ಚುನಾವಣೆಗಳಲ್ಲಿ ಭಾಗವಹಿಸಿದರು. ರಿಪಬ್ಲಿಕ್ ಪಾರ್ಟಿಯ ಎರಡೂ ಗುಂಪುಗಳು ಕ್ರಮವಾಗಿ ಪ್ರಜಾಸಮಾಜವಾದಿ ಮತ್ತು ವಿದರ್ಭವಾದಿ ಹಾಗೂ ಕಮ್ಯುನಿಸ್ಟರ ಜೊತೆಗೂಡಿ ಚುನಾವಣೆ ಎದುರಿಸಿದವು. ಉತ್ತರಪ್ರದೇಶದಲ್ಲಿ ಹಳೆಯ ಮುಸ್ಲಿಂಲೀಗ್ ತತ್ತ್ವಗಳು ಹಾಗೂ ರಿಪಬ್ಲಿಕ್‌ಪಾರ್ಟಿಯ ನಡುವೆ ಒಪ್ಪಂದ ಏರ್ಪಟ್ಟಿತು. ಮತ್ತು ಮುಸ್ಲಿಂಲೀಗ್‌ನ ಎಲ್ಲಾ ಕಟ್ಟಾ ಸಂಪ್ರದಾಯವಾದಿ ವ್ಯಕ್ತಿಗಳು ರಿಪಬ್ಲಿಕ್ ಪಾರ್ಟಿಯ ಹೆಸರಿನಡಿಯಲ್ಲಿ ಚುನಾವಣೆಯ ಕಣಕ್ಕಿಳಿದರು. ಝಾರ್‌ಖಂಡ್ ಪಕ್ಷದೊಂದಿಗೆ ಕಾಂಗ್ರೆಸ್ ಚುನಾವಣಾ ಮೈತ್ರಿ ಮಾಡಿಕೊಳ್ಳುವ ಪ್ರಯತ್ನ ಮಾಡಿತಾದರೂ ಅದು ಸಫಲವಾಗಲಿಲ್ಲ. ಯಾವುದೇ ರೀತಿಯ ಹೊಂದಾಣಿಕೆ ಮಾಡಿಕೊಳ್ಳದೇ ತಮ್ಮ ನೀತಿಗಳಗನುಗುಣವಾಗಿ ಚುನಾವಣೆಯನ್ನು ಎದುರಿಸಿದ ಪಕ್ಷಗಳೆಂದರೆ ಅವು ಭಾರತೀಯ ಜನಸಂಘ ಹಾಗೂ ಸೋಶಿಯಲಿಸ್ಟ್ ಪಕ್ಷಗಳು ಮಾತ್ರ.

**ಕಾಂಗ್ರೆಸ್‌ನ ಪತನದಲ್ಲಿ ತೀವ್ರತೆ**

ಚುನಾವಣೆಯ ಪರಿಣಾಮದ ದೃಷ್ಟಿಯಿಂದ ಬೇರೆ ಬೇರೆ ಪಕ್ಷಗಳ ಸ್ಥಿತಿ ಗತಿಗಳಲ್ಲಿ ಅಂತಹ ಯಾವುದೇ ವಿಶೇಷ ಪರಿವರ್ತನೆಯಾಗಲಿಲ್ಲ ಆದರೆ ಕಾಂಗ್ರೆಸ್‌ನ ಪತನ ಅತ್ಯಂತ ತೀವ್ರತರವಾಗಿ ಆಗುತ್ತಿದೆ ಎಂದು ಹೇಳಬಹುದು. ಕಮ್ಯುನಿಸ್ಟರು ತಮ್ಮದೇ ಕೋಟೆಯೊಳಗೆ ಪೆಟ್ಟು ತಿಂದರೂ ಉಳಿದ ಕ್ಷೇತ್ರಗಳಲ್ಲಿ ಈ ಕೊರತೆಯನ್ನು ತುಂಬಿಕೊಂಡು ಸಾರ್ವಜನಿಕ ಅಭಿಪ್ರಾಯದಲ್ಲಿ ತಮ್ಮ ಸ್ಥಿತಿಯನ್ನು ಕಿಂಚಿತ್ ಉತ್ತಮಪಡಿಸಿಕೊಂಡಿದ್ದಾರೆ. ಪ್ರ.ಸೋ; ಪಾರ್ಟಿಯ ಅವನತಿಯ ಅಧ್ಯಾಯ ಆರಂಭವಾಗಿಬಿಟ್ಟಿದೆ. ಸ್ವತಂತ್ರ ಪಾರ್ಟಿ ಉತ್ತಮ ಸಾಫಲ್ಯವನ್ನು ಪಡೆದಿದೆಯಾದರೂ ಸಹ ಅವರು ಮಾಡಿದ ವಾಗ್ದಾನಗಳು ಹಾಗೂ ಜನತೆಯಲ್ಲಿ ಮೂಡಿಸಿದ್ದ ಅಪೇಕ್ಷೆಗಳ ಆಧಾರದ ಮೇಲೆ ನೋಡಿದರೆ ಅವರ ಸಾಧನೆ ಏನೇನು ಸಾಲದು. ದ್ರಾವಿಡ ಮುನ್ನೇತ್ರ ಕಳಗಂ ಪಕ್ಷವನ್ನು ಬಿಟ್ಟು ಉಳಿದಂತೆ ಬೇರೆ ಸಣ್ಣಪುಟ್ಟ ಹಾಗೂ ಪ್ರಾಂತೀಯ ಪಕ್ಷಗಳು ಹಿಂದೆ ಸರಿದಿವೆ ಮತ್ತು ಅಖಿಲ ಭಾರತ ಮಟ್ಟದ ರಾಜಕೀಯದ ಹಿನ್ನೆಲೆಯಲ್ಲಿ ಮಹತ್ವಹೀನವಾಗಿಬಿಟ್ಟಿದೆ. ಭಾರತೀಯ ಜನಸಂಘವಂತೂ ಸಾಕಷ್ಟು ಮುಂದೆ ಹೆಜ್ಜೆ ಇಟ್ಟಿದೆಯಾದರೂ ಯಾವ ಚಾರಿತ್ರಿಕ ಕಾರ್ಯವನ್ನು ಪೂರ್ಣಗೊಳಿಸಲು ಅದು ಜನ್ಮ ತಳೆದಿದೆಯೋ ಆ ದೃಷ್ಟಿಯಿಂದ ಅದು ಇನ್ನೂ ಬಹಳಷ್ಟು ಹಿಂದೆಯೇ ಇದೆ.

## ವೃದ್ಧಿಸಿದ ಮತದಾನದ ಸರಾಸರಿ

ಪ್ರಪ್ರಥಮವಾಗಿ ಗೋಚರಿಸುವ ಮಹತ್ವಪೂರ್ಣ ಅಂಶವೇನೆಂದರೆ ಕಳೆದ ಸಾರ್ವತ್ರಿಕ ಚುನಾವಣೆಗಳಿಗೆ ಹೋಲಿಸಿದರೆ ಈ ಸಾರಿ ಮತದಾರರ ಸಂಖ್ಯೆ ವೃದ್ಧಿಯಾಗಿದೆ ಮತ್ತು ಸರಾಸರಿ ಅನುಪಾತದಲ್ಲಿ ಅಧಿಕ ಮತದಾನವಾಗಿದೆ. ಮತದಾನದ ಸರಾಸರಿ ಪ್ರಮಾಣ ಕಳೆದ ಮೂರು ಚುನಾವಣೆಗಳಿಂದ ನಿರಂತರವಾಗಿ ವೃದ್ಧಿಯಾಗುತ್ತಲಿದೆ. ೧೯೫೨ನೇ ಇಸವಿಯಲ್ಲಿ ಸರಾಸರಿ ೪೫.೭ರಷ್ಟು ಜನರು ಅಧಿಕೃತವಾಗಿ ಮತಾಧಿಕಾರದ ಪ್ರಯೋಗ ಮಾಡಿದ್ದರು. ಇದು ೧೯೫೭ರಲ್ಲಿ ೪೬.೬ ಸರಾಸರಿ ಹಾಗೂ ೧೯೬೨ರಲ್ಲಿ ೫೩.೭೧ ಸರಾಸರಿ ಇತ್ತು. ಹಿಂದಿಗಿಂತ ಮತದಾನ ಹೆಚ್ಚಳವಾಗದ ಯಾವ ಪ್ರದೇಶವೂ ಇಲ್ಲ. ಬಿಹಾರ ಹಾಗೂ ಮಧ್ಯಪ್ರದೇಶವನ್ನು ಹೊರತುಪಡಿಸಿದಂತೆ ಉಳಿದ ಎಲ್ಲಾ ಪ್ರದೇಶಗಳಲ್ಲಿ ಶೇಕಡಾವಾರು ೫೦ಕ್ಕಿಂತಲೂ ಜಾಸ್ತಿ ಮತದಾನವಾಗಿದೆ. ಮದ್ರಾಸಿನಲ್ಲಂತೂ ಇದು ಶೇಕಡಾ ೭೦.೩೫ ಆಗಿದೆ. ದೆಹಲಿಯಲ್ಲಿ ಮತದಾನ ಶೇಕಡಾ ೫೭.೨೯ರಿಂದ ೬೬.೫೪ಕ್ಕೆ ವೃದ್ಧಿಯಾಗಿದೆ. ಚುನಾವಣೆಗಳಲ್ಲಿ ಮತದಾನದ ಅನುಪಾತದಲ್ಲಿ ಈ ತೀವ್ರತರ ಹೆಚ್ಚಳದ ಅಂದಾಜು ಮಾಡದಿರುವ ಕಾರಣದಿಂದಲೇ ಕೆಲವು ಸ್ಥಾನಗಳಲ್ಲಿ ಚುನಾವಣಾ ಫಲಿತಾಂಶ ಅನಿರೀಕ್ಷಿತವಾಗಿದೆ ಇಂತಹುದೇ ಒಂದು ಉದಾಹರಣೆಯಾಗಿದೆ. ಈ ಬಾರಿ ಕಾನೂನುಬಾಹಿರ ಮತಗಳ ಸಂಖ್ಯೆಯಲ್ಲಿ ಭಾರಿ ವೃದ್ಧಿಯಾಗಿದೆ. ೧೯೫೭ರ ಲೋಕಸಭೆಯ ಒಟ್ಟು ಮತದಾನದಲ್ಲಿ ಶೇಕಡಾ ೧.೭೧ರಷ್ಟು ಕಾನೂನುಬಾಹಿರ ಮತಗಳಾಗಿದ್ದವು. ೧೯೬೨ರಲ್ಲಿ ಈ ಸಂಖ್ಯೆ ಹೆಚ್ಚಾಗಿ ಶೇಕಡಾವಾರು ೪.೦೧ರಷ್ಟು ಆಯಿತು. ವಿಧಾನಸಭೆಯ ಕಾನೂನುಬಾಹಿರ ಮತದಾನಗಳೂ ಸಹ ಶೇಕಡಾ ೧.೮೭ರಿಂದ ೫.೨೧ರಷ್ಟು ಹೆಚ್ಚಾಗಿವೆ. ಮಧ್ಯಪ್ರದೇಶದಲ್ಲಿ ಅತೀ ಹೆಚ್ಚು ಕಾನೂನುಬಾಹಿರ ಮತಗಳ ಚುನಾವಣೆ ಆಯಿತು. ಅಲ್ಲಿ ಅದರ ಸಂಖ್ಯೆ ಒಟ್ಟು ಮತದಾನದ ಶೇಕಡಾ ೭.೦೨ರಷ್ಟು ಇದೆ. ಮತದಾನದ ವಿಧಾನದಲ್ಲಿ ಹೊಸಪದ್ಧತಿ ಅಳವಡಿಕೆ ಹಾಗೂ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಒಟ್ಟಿಗೆ ಚುನಾವಣೆ ನಡೆಸಿದ ಪರಿಣಾಮದಿಂದ ಈ ಅವಾಂತರ ಸೃಷ್ಟಿಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಎಲ್ಲಿ ಮತದಾರರು ಲೋಕಸಭೆಗೆ ಒಂದು ಪಕ್ಷದ ಹಾಗೂ ವಿಧಾನ ಸಭೆಗೆ ಮತ್ತೊಂದು ಪಕ್ಷದ ಉಮೇದುದಾರರನ್ನು ಚುನಾಯಿಸುವ ಪ್ರಯತ್ನ ಮಾಡಿದ್ದಾರೋ ಅಲ್ಲೆಲ್ಲಾ ಈ ರೀತಿಯ ಕಾನೂನುಬಾಹಿರ ಮತಗಳ ಸಂಖ್ಯೆ ಜಾಸ್ತಿ ಆಗಿದೆ. ಬಲರಾಂಪುರ ಕ್ಷೇತ್ರದಲ್ಲಿ ವಿಧಾನಸಭೆಗಳಲ್ಲಿ ಜನಸಂಘದ ವಿಜಯಿಯಾದ ಬಳಿಕವೂ ಅಟಲ್ ಬಿಹಾರಿ ವಾಜಪೇಯಿಯವರ ಅಸಫಲತೆಗೆ ಇದೇ ಕಾರಣ. ಈ ಪರಿಸ್ಥಿತಿಯನ್ನು ಸುಧಾರಿಸುವ ಪ್ರಯತ್ನ ಮಾಡುವ ಅವಶ್ಯಕತೆ ಇದೆ. ರಾಜಕೀಯ

ಪಕ್ಷಗಳು ಚುನಾವಣಾ ಪದ್ಧತಿಯ ಕುರಿತಂತೆ ಅತ್ಯಧಿಕ ತಿಳುವಳಿಕೆ ನೀಡುವ ನಿಟ್ಟಿನಲ್ಲಿ ಪ್ರಯತ್ನಶೀಲರಾಗಬಹುದು. ಹಾಗೇನೇ ಚುನಾವಣಾ ಆಯೋಗವೂ ಸಹ ಎಲ್ಲಾ ಪದ್ಧತಿ ಕ್ರಮಗಳನ್ನು ಅಧಿಕ ಸರಳಗೊಳಿಸುವ ಉಪಾಯಗಳ ಬಗ್ಗೆ ಚಿಂತಿಸಬೇಕಾಗಿದೆ. ಸ್ಥಾನ ಹಾಗೂ ಮತದಾನದ ದೃಷ್ಟಿಯಿಂದ ಬೇರೆ ಬೇರೆ ಪಕ್ಷಗಳ ಸ್ಥಿತಿಗತಿ ಬಗ್ಗೆ ೧೯೫೭ಕ್ಕೆ ಹೋಲಿಸಿದಲ್ಲಿ ೧೯೬೨ರಲ್ಲಿ ಈ ಕೆಳಗಿನ ಪರಿವರ್ತನೆಗಳು ಗೋಚರಿಸುತ್ತವೆ.

### ಕಾಂಗ್ರೆಸ್‌ನ ಕುಗ್ಗಿದ ಬಲ

೧೯೫೭ರ ಚುನಾವಣೆಯಲ್ಲಿ ಕಾಂಗ್ರೆಸ್ ೩೭೧ ಸ್ಥಾನಗಳನ್ನು ಗೆದ್ದು ಶೇಕಡಾ ೪೭.೭೫ರಷ್ಟು ನ್ಯಾಯಬದ್ಧ ಮತಗಳನ್ನು ಪಡೆಯಿತು. ಬೇರೆಬೇರೆ ಉಪಚುನಾವಣೆಗಳು ಹಾಗೂ ಪಕ್ಷದೊಳಗಿನ ಪರಿವರ್ತನೆ ಬಳಿಕ ಲೋಕಸಭೆ ವಿಸರ್ಜನಗೊಂಡಿತು. ಆಗ ಕಾಂಗ್ರೆಸ್ ಸದಸ್ಯರ ಸಂಖ್ಯಾಬಲ ೩೭೫ ಇತ್ತು. ೧೯೬೨ರಲ್ಲಿ ಈ ಸಂಖ್ಯೆಯಲ್ಲಿ ಇಳಿಕೆಯಾಗಿ ಅದು ೩೬೦ಕ್ಕೆ ತಲುಪಿತು. ಮತಗಳಲ್ಲಿಯೂ ಇಳಿಮುಖವಾಗಿ ಅಂದರೆ ಕೇವಲ ಶೇಕಡಾ ೪೪.೭೦ರಷ್ಟು ದೊರೆಯಿತು. ಮದ್ರಾಸು, ದೆಹಲಿ, ಮಣಿಪುರ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಅದರ ಲೋಕಸಭಾ ಸದಸ್ಯರ ಸಂಖ್ಯೆಯಲ್ಲಿ ಯಾವುದೇ ಪರಿವರ್ತನೆಯಾಗಲಿಲ್ಲ. ಮಹಾರಾಷ್ಟ್ರ, ಮೈಸೂರು ಮತ್ತು ಒರಿಸ್ಸಾಗಳಲ್ಲಿ ಅವರು ಮುಂದಿದ್ದಾರೆ. ಆದರೆ ಉಳಿದ ಎಲ್ಲಾ ಕ್ಷೇತ್ರಗಳಲ್ಲಿಯೂ ಸದಸ್ಯರ ಸಂಖ್ಯೆಯಲ್ಲಿ ಇಳಿಮುಖವಾಗಿದೆ. ಲೋಕಸಭೆಯ ಮತದಾನದ ಶೇಕಡವೂ ೫೫.೫೨ರಿಂದ ಇಳಿಕೆಯಾಗಿ ೫೨.೭೪ಕ್ಕೆ ತಲುಪಿದೆ. ಮಧ್ಯಪ್ರದೇಶ, ರಾಜಸ್ಥಾನ, ಪಂಜಾಬು ಹಾಗೂ ಉತ್ತರ ಪ್ರದೇಶದಲ್ಲಿ ಅದರ ಲೋಕಸಭಾ ಸದಸ್ಯರ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಮಧ್ಯಪ್ರದೇಶದಲ್ಲಂತೂ ೧೯೫೭ರಲ್ಲಿನ ೩೫ ಸ್ಥಾನಗಳಿಗೆ ಹೋಲಿಸಿದರೆ ಈ ಬಾರಿ ಕೇವಲ ೨೪ ಸ್ಥಾನಗಳು ಮಾತ್ರ ಅದಕ್ಕೆ ಲಭಿಸಿವೆ. ಒಟ್ಟಾರೆಯಾಗಿ ಹಿಂದಿನ ೩೭೨ ಸ್ಥಾನಗಳಲ್ಲಿ ಕೇವಲ ೨೮೫ ಸ್ಥಾನಗಳಲ್ಲಿ ಮಾತ್ರ ಅದರ ಸದಸ್ಯರು ಮರು ಆಯ್ಕೆಯಾಗಿದ್ದಾರೆ. ಆದರೆ ೧೯೫೭ರಲ್ಲಿ ಯಾವ ೭೫ ಸ್ಥಾನಗಳಲ್ಲಿ ಅದು ಪರಾಜಯವನ್ನು ಅನುಭವಿಸಿತ್ತೋ, ಅಲ್ಲಿ ಈ ಬಾರಿ ಅದಕ್ಕೆ ಜಯ ದೊರೆತಿದೆ. ಪ್ರಜಾಸಮಾಜವಾದಿ ಪಕ್ಷದಿಂದ ೧೪ ಸ್ಥಾನಗಳನ್ನು ಗೆದ್ದುಕೊಂಡರೆ ೯ ಸ್ಥಾನಗಳಲ್ಲಿ ಸೋಲು ಅನುಭವಿಸಿದೆ. ಕಮ್ಯುನಿಸ್ಟರಿಂದ ೧೩ ಸ್ಥಾನಗಳನ್ನು ಪಡೆದಿದ್ದರೆ ೧೨ ಸ್ಥಾನಗಳನ್ನು ಕಳೆದುಕೊಂಡಿದ್ದಾರೆ. ಜನಸಂಘದಿಂದ ಅವರು ೫ ಸ್ಥಾನಗಳನ್ನು ನಷ್ಟ ಮಾಡಿಕೊಂಡಿದ್ದಾರೆ. ವಿಧಾನ ಸಭೆಗಳಲ್ಲಿಯೂ ಕಾಂಗ್ರೆಸ್ ಸದಸ್ಯರ ಸಂಖ್ಯೆ ಹಾಗೂ ಮತಗಳು ಹೀಗೆ ಎರಡರಲ್ಲಿಯೂ ಇಳಿಕೆಯಾಗಿದೆ.

೧೯೫೭ರಲ್ಲಿ ಅದಕ್ಕೆ ೧೯೧ಳ ಸ್ಥಾನಗಳು ದೊರೆತಿದ್ದರೆ ೧೯೬೨ರಲ್ಲಿ ಅದು ಕೇವಲ ೧೭೭೨ ಸ್ಥಾನಗಳನ್ನು ಪಡೆಯಲು ಶಕ್ಯವಾಯಿತು. ಈ ಪ್ರಕಾರವಾಗಿ ಅದಕ್ಕೆ ೧೪೨ ಸ್ಥಾನಗಳು ಕಡಿಮೆಯಾದವು. ಮತಗಳ ಶೇಕಡಾವಾರು ಕೂಡ ೪೫.೫೬ರಿಂದ ಕುಸಿದು ೪೪.೩೩ಕ್ಕೆ ತಲುಪಿತು. ಅಸ್ಸಾಂ (೪.೦೫), ಬಿಹಾರ (೦.೫೬), ಮದ್ಯಪ್ರದೇಶ (೧೧.೨೮), ಮೈಸೂರು (೨.೬೦), ಪಂಜಾಬು (೩.೦೭), ಗುಜರಾತ್ (೬.೩), ರಾಜಸ್ಥಾನ (೫.೨೧), ಮತ್ತು ಉತ್ತರಪ್ರದೇಶ (೭.೪೯)ದಲ್ಲಿ ಅದರ ಮತಗಳು ಶೇಕಡಾವಾರು ಕಡಿಮೆಯಾಗಿವೆ. ಆದರೆ ಆಂಧ್ರದಲ್ಲಿ ೭.೪೯, ಮದ್ರಾಸಿನಲ್ಲಿ ೦.೭೯, ಪಶ್ಚಿಮಬಂಗಾಳದಲ್ಲಿ ೧.೦೫ ಹಾಗೂ ಮಹಾರಾಷ್ಟ್ರದಲ್ಲಿ ೬.೮೮ರಷ್ಟು ಅದರ ಶೇಕಡಾವಾರು ವೃದ್ಧಿಯಾಗಿವೆ. ಮಹಾರಾಷ್ಟ್ರ ಕ್ಷೇತ್ರದಲ್ಲಿ ೧೯೫೭ರಲ್ಲಿ ಹಾಗೂ ವಿರೋಧಿ ಪಕ್ಷಕ್ಕೆ ೧೨೭ ಸ್ಥಾನಗಳು ದೊರೆತಿದ್ದವು. ಆದರೆ ಈ ಬಾರಿ ಕಾಂಗ್ರೆಸ್‌ಗೆ ೨೧೫ ಹಾಗೂ ವಿರೋಧ ಪಕ್ಷದ ಕೆಲವೇ ೪೯ ಸ್ಥಾನಗಳು ದೊರೆತಿವೆ. ಗುಜರಾತ್‌ನಲ್ಲಿ ಕಾಂಗ್ರೆಸ್‌ನ ಸದಸ್ಯರ ಸಂಖ್ಯೆ ೩೭ರಿಂದ ಏರಿಕೆಯಾಗಿ ೧೧೩ಕ್ಕೆ ತಲುಪಿತಾದರೆ ಇತರೆ ಪಕ್ಷಗಳು ೩೫ರಿಂದ ಏರಿಕೆ ಪಡೆದು ೪೧ ಸ್ಥಾನಗಳಲ್ಲಿ ಜಯಿಸಿದವು. ಅಸ್ಸಾಂಗಳಲ್ಲಿ ಅದರ ಸದಸ್ಯರ ಸಂಖ್ಯೆ ೭೧ ರಿಂದ ಏರಿಕೆಯಾಗಿದೆ. ಆದರೆ ಅದಕ್ಕೆ ಮೊದಲಿಗಿಂತಲೂ ಕಡಿಮೆ ಮತಗಳು ದೊರೆತಿವೆ. ೧೯೫೭ರಲ್ಲಿ ಅದಕ್ಕೆ ಶೇಕಡಾ ೫೨.೩೫ರಷ್ಟು ಮತಗಳು ಅದರ ಪಾಲಾದವು. ಮದ್ರಾಸಿನಲ್ಲಿ ಕಾಂಗ್ರೆಸ್ ಪರವಾಗಿ ಅಧಿಕ ಮತದಾನವೇನೋ ಆಗಿದೆ ಆದರೂ ಗೆದ್ದಿರುವ ಸ್ಥಾನಗಳ ಸಂಖ್ಯೆ ೧೫೧ರಿಂದ ೧೩೯ಕ್ಕೆ ಇಳಿಕೆಯಾಗಿದೆ. ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಮೊದಲಿಗಿಂತ ೫ ಸ್ಥಾನಗಳಲ್ಲಿ ಹೆಚ್ಚಿಗೆ ಪಡೆಯಲು ಸಾಧ್ಯವಾಯಿತು. ಉಳಿದಂತೆ ಎಲ್ಲಾ ಪ್ರದೇಶಗಳಲ್ಲಿಯೂ ಅದರ ಶೇಕಡಾವಾರು ಮತ ಹಾಗೂ ಸ್ಥಾನಗಳು ಎಲ್ಲದರಲ್ಲಿಯೂ ಇಳಿಮುಖವಾಗಿದೆ. ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಅದು ಬಹುಮತವನ್ನು ಸಹ ಪಡೆಯಲು ಸಾಧ್ಯವಾಗಲಿಲ್ಲ. ಕೆಲವು ಪಕ್ಷೇತರ ಸದಸ್ಯರನ್ನು ಕಾಂಗ್ರೆಸಿಗೆ ಸೇರಿಸಿಕೊಂಡು ಅದರ ಮಂತ್ರಿ ಮಂಡಲಗಳು ಅಸ್ತಿತ್ವಕ್ಕೆ ಬಂದಿವೆ. ಪಂಜಾಬಿನಲ್ಲಿಯೂ ಅದರ ಸಂಖ್ಯೆ ೧೨೦ರಿಂದ ಇಳಿಮುಖವಾಗಿ ೯೦ಕ್ಕೆ ತಲುಪಿದೆ.

**ಪ್ರಜಾಸಮಾಜವಾದಿ ಪಕ್ಷಕ್ಕೆ ಭಾರಿ ಹೊಡೆತ**

ಈ ಚುನಾವಣೆಯಲ್ಲಿ ಒಂದು ವೇಳೆ ಯಾವುದಾದರೂ ಪಕ್ಷಕ್ಕೆ ಭಾರಿ ಆಘಾತವಾಗಿದೆ ಎಂದಾದರೆ ಅದು ಪ್ರಜಾಸಮಾಜವಾದಿ ಪಕ್ಷ. ಇದರ ಮತಗಳು ಹಾಗೂ ಸದಸ್ಯರ ಸಂಖ್ಯೆ ಎರಡೂ ಕ್ಷೀಣಿಸಿವೆ. ೧೯೫೭ರ ಲೋಕಸಭೆಯಲ್ಲಿ

ಅದಕ್ಕೆ ೧೦.೪೧ ಶೇಕಡಾ ಮತಗಳು ದೊರೆತಿದ್ದವು. ಆದರೆ ೧೯೬೨ರಲ್ಲಿ ಅದು ಕೇವಲ ೬.೭೯ ಶೇಕಡಾ ಮತವನ್ನು ಪಡೆಯಿತು. ವಿಧಾನಸಭೆಯ ಚುನಾವಣೆಗಳಲ್ಲಿಯೂ ಅದರ ಶೇಕಡಾವಾರು ಮತ ೧೦.೦೭ ರಿಂದ ಇಳಿದು ೭.೦೦ಕ್ಕೆ ತಲುಪಿತು. ಸದಸ್ಯರ ಸಂಖ್ಯೆಯ ದೃಷ್ಟಿಯಿಂದಲೂ ಲೋಕಸಭೆಯಲ್ಲಿ ೧೯ ಸ್ಥಾನಗಳ ಪೈಕಿ ೧೧ ವಿಧಾನಸಭೆಯಲ್ಲಿ ೧೯೫ ಸ್ಥಾನಗಳಲ್ಲಿ ೧೪೯ ಕ್ಷೇತ್ರಗಳಲ್ಲಿ ಅದಕ್ಕೆ ವಿಜಯ ದಕ್ಕಿತು. ೧೯೫೭ರ ಚುನಾವಣೆಗಳ ನಂತರ ಅಸ್ಸಾಂ, ಬಿಹಾರ, ಮಧ್ಯಪ್ರದೇಶ, ಮಹಾರಾಷ್ಟ್ರ, ಮೈಸೂರು ಮತ್ತು ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ನ ನಂತರ ಪ್ರ. ಸೋ. ಪಾರ್ಟಿಯ ಸದಸ್ಯರ ಸಂಖ್ಯೆಯೇ ಅಧಿಕವಾಗಿತ್ತು. ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿಯಂತೂ ಅದಕ್ಕೆ ವಿರೋಧಪಕ್ಷದ ಮಾನ್ಯತೆ ದೊರಕಿತ್ತು. ಆದರೆ ೧೯೬೨ರಲ್ಲಿ ಮೈಸೂರನ್ನು ಬಿಟ್ಟು ಉಳಿದಂತೆ ಮತ್ತಿನ್ಯಾವ ಪ್ರದೇಶದಲ್ಲಿಯೂ ತನ್ನ ಸ್ಥಾನವನ್ನು ಖಾಯಂಗೊಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಜನಸಂಘವು ಮಧ್ಯಪ್ರದೇಶ ಉತ್ತರಪ್ರದೇಶಗಳಲ್ಲಿ, ಬಿಹಾರದಲ್ಲಿ ಸ್ವತಂತ್ರಪಾರ್ಟಿ ಹಾಗೂ ಮಹಾರಾಷ್ಟ್ರದಲ್ಲಿ ಕ್ಷೇಂ.ಶಂ. ಪಕ್ಷಗಳು ಅದನ್ನು ಹಿಂದಕ್ಕೆ ತಳ್ಳಿವೆ. ಶೇಕಡಾವಾರು ಮತಗಳ ದೃಷ್ಟಿಯಿಂದಲೂ ೧೯೫೭ಕ್ಕೆ ಹೋಲಿಸಿದರೆ ಗುಜರಾತನ್ನು ಬಿಟ್ಟಂತೆ ಉಳಿದ ಪ್ರದೇಶಗಳಲ್ಲಿ ಕಡಿಮೆ ಮತಗಳು ದೊರತಿವೆ.

## ದುರ್ಬಲಗೊಂಡ ಸಮಾಜವಾದಿ ದಳ

೧೯೫೨ರ ಚುನಾವಣೆಯ ನಂತರ ಸೋಷಿಯಲಿಸ್ಟ್ ಪಾರ್ಟಿ ಮತ್ತು ಕಿಸಾನ್ ಮಜ್ದೂರ್ ಪ್ರಜಾಪಾರ್ಟಿಗಳು ಸೇರಿ ಹೊಂದಾಣಿಕೆ ಮಾಡಿಕೊಂಡು ಪ್ರಂ.ಸೋ.ಪಾ. ಎಂಬ ಹೊಸ ರೂಪದಲ್ಲಿ ಸಂಘಟಿತರಾದರು ಎಂದು ನಮಗೆ ತಿಳಿದಿದೆ. ಆದರೆ ಕೆಲವೇ ದಿನಗಳ ನಂತರ ಅವರಲ್ಲಿ ಕೆಲವರು ಡಾ॥ ಲೋಹಿಯಾರವರ ನೇತೃತ್ವದಲ್ಲಿ ‘ಸೋಷಿಯಲಿಸ್ಟ್ ಪಾರ್ಟಿ’ ಹೆಸರಿನಲ್ಲಿ ಬೇರ್ಪಟ್ಟರು. ಇವರು ಕ್ರಮೇಣ ಕ್ಷೀಣಿಸುತ್ತಿದ್ದಾರೆ ಎಂಬ ಅಂಶ ಈ ಎರಡೂ ಪಕ್ಷಗಳ ೧೯೫೨, ೧೯೫೭ ಮತ್ತು ೧೯೬೨ರ ಒಟ್ಟು ಮತಗಳನ್ನು ಅವಲೋಕಿಸಿದಾಗ ನಮಗೆ ವೇದ್ಯವಾಗುತ್ತದೆ. ೧೯೫೨ರಲ್ಲಿ ಅವರಿಗೆ ಒಂದು ಕೋಟಿ ೬೦ ಲಕ್ಷ ಮತಗಳು ದೊರಕಿದ್ದವು. ೧೯೫೭ರಲ್ಲಿ ಅದು ಇಳಿಕೆಯಾಗಿ ೧ ಕೋಟಿ ೨೫ ಲಕ್ಷಕ್ಕೆ ತಲುಪಿತು. ಈಗ ೧೯೬೨ರಲ್ಲಿ ಅವರಿಗೆ ಕೇವಲ ಒಂದು ಕೋಟಿ ಮತಗಳು ಮಾತ್ರ ಲಭ್ಯವಾಗಿವೆ. ಇಲ್ಲಿ ಸ್ಪಷ್ಟವಾಗುವ ಅಂಶವೇನೆಂದರೆ ಕಾಂಗ್ರೆಸ್ ಸಮಾಜವಾದವನ್ನು ಸ್ವೀಕರಿಸಿದ ಮೇಲೆ ಇತರೇ ಸಮಾಜವಾದಿ ಪಕ್ಷಗಳಿಗೆ ಯಾವುದೇ ಅವಕಾಶ ಉಳಿಯಲಿಲ್ಲ. ಇನ್ನು ಎಲ್ಲೆಲ್ಲಿ ಕಮ್ಯುನಿಸ್ಟ್ ಪಕ್ಷದ ನಿರಂಕುಶ ನಾಯಕತ್ವದ ಸಮಸ್ಯೆ ಉದ್ಭವಿಸಿದೆಯೋ ಅಲ್ಲೆಲ್ಲಾ ಜನತೆಯೇ ಒಂದೇ ವಿಚಾರಧಾರೆಯ ಅನೇಕ

ಪಕ್ಷಗಳನ್ನು ಸ್ವೀಕರಿಸಲು ಮುಂದಾಗಲಿಲ್ಲ. ಆದುದರಿಂದ ಪ್ರ.ಸೋ.ಪಾ. ಮತ್ತು ಸೋ.ಪಾ. ಎರಡೂ ಪಕ್ಷಗಳು ಈ ಕ್ಷೇತ್ರದಲ್ಲಿ ತೀವ್ರಗತಿಯಲ್ಲಿ ಕ್ಷೀಣಿಸುತ್ತಿವೆ.

ಸೋಶಿಯಲಿಸ್ಟ್ ಪಾರ್ಟಿಯ ೫೯ ಸ್ಥಾನಗಳಲ್ಲಿ ೪೫ ಸ್ಥಾನಗಳು ಉತ್ತರಪ್ರದೇಶ, ಮಧ್ಯಪ್ರದೇಶ ಹಾಗೂ ಬಿಹಾರಗಳಲ್ಲಿವೆ. ಅದೇ ಪ್ರಕಾರವಾಗಿ ಪ್ರಜಾಸೋಶಿಯಲಿಸ್ಟ್ ಪಾರ್ಟಿಗೆ ೧೪೯ ಸ್ಥಾನಗಳಲ್ಲಿ ೧೦೦ ಸ್ಥಾನಗಳು ದಕ್ಕಿವೆ.

**ರಾಜಾಮಹಾರಾಜರ ಸ್ವತಂತ್ರ ಪಕ್ಷ**

ಸ್ವತಂತ್ರಪಾರ್ಟಿ ಚುನಾವಣೆಗಳಿಗೂ ಮೊದಲೇ ರೂಪುಗೊಂಡಿತ್ತು. ಎಲ್ಲಾ ಒಟ್ಟು ಸೇರಿ ಅದು ಲೋಕಸಭೆಯಲ್ಲಿ ಶೇಕಡಾ ೭.೮೯ ಮತಗಳನ್ನು ಪಡೆದು ಒಟ್ಟಾರೆ ೧೮ ಸ್ಥಾನಗಳನ್ನು ಪಡೆಯಲು ಶಕ್ಯವಾಯಿತು. ಆದರೆ ಅದನ್ನು ಒಂದರ್ಥದಲ್ಲಿ ಸ್ಥಳೀಯ ಪಕ್ಷಗಳ ಸಂಘಟನೆ ಎಂದು ಹೇಳುವುದು ಯೋಗ್ಯ ಎನಿಸುತ್ತದೆ. ಅದರ ಫಲಿತಾಂಶವನ್ನೂ ಸಹ ನಾವು ಇದೇ ಸಂಬಂಧವಾಗಿ ನೋಡಬೇಕಾಗುತ್ತದೆ. ಚುನಾವಣೆಯ ನಂತರ ಗಣತಂತ್ರ ಪರಿಷತ್‌ನ ವಿಲೀನೀಕರಣ ಪ್ರಕ್ರಿಯೆಯಿಂದಾಗಿ ಅದರ ಸದಸ್ಯರ ಸಂಖ್ಯೆ ೨೨ಕ್ಕೆ ಬಂದು ನಿಲ್ಲುತ್ತದೆ. ವಿಧಾನ ಸಭೆಗಳಲ್ಲಿ ಅದಕ್ಕೆ ೧೬೬ ಸ್ಥಾನಗಳು ಹಾಗೂ ಶೇಕಡಾ ೭.೪೨ ಸರಾಸರಿ ಮತಗಳು ದೊರೆತಿವೆ. ಇದರೊಂದಿಗೆ ಅದು ಮೊದಲು ಬಿಹಾರದಲ್ಲಿ ಜನತಾಪಾರ್ಟಿ ರೂಪದಲ್ಲಿ ಅಸ್ತಿತ್ವದಲ್ಲಿತ್ತು. ಹಾಗೇನೇ ರಾಜಸ್ಥಾನ ಮತ್ತು ಗುಜರಾತಿನಲ್ಲಿ ಅದರ ಗೆಲುವು ಮಹತ್ವಪೂರ್ಣವೆನಿಸುತ್ತದೆ. ಈ ಮೂರು ಕ್ಷೇತ್ರಗಳಲ್ಲಿ ಅದಕ್ಕೆ ವಿರೋಧಪಕ್ಷದ ಮಾನ್ಯತೆ ಲಭಿಸಿದೆ. ಅಲ್ಲಲ್ಲಿ ಹಿಂದಿನ ರಾಜಮಹಾರಾಜರುಗಳ ಆಶ್ರಯದಲ್ಲಿ ಪೋಷಿಸಲ್ಪಟ್ಟ ಕಾರಣದಿಂದಾಗಿ ಈ ವಿಜಯದ ಹಿನ್ನೆಲೆಯಲ್ಲಿ ಸದ್ಯದ ಸಂಘಟನೆ ಹಾಗು ಮುಂದೆ ಅದರ ಭವಿಷ್ಯದ ಸಾಧ್ಯಾಸಾಧ್ಯತೆಗಳು ಎಷ್ಟರ ಮಟ್ಟಿಗಿವೆ ಎಂದು ಊಹಿಸುವುದು ಕಷ್ಟ.

**ಉಲ್ಲೇಖಾರ್ಹವಲ್ಲದ ಕಮ್ಯುನಿಸ್ಟರ ಬೆಳವಣಿಗೆ**

೧೯೫೭ರ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಾರ್ಟಿಗೆ ೨೭ ಸ್ಥಾನಗಳು ದೊರಕಿದ್ದವು. ಅದರ ಇಬ್ಬರು ಸದಸ್ಯರು ತೆಲಂಗಾಣ ಕ್ಷೇತ್ರದಿಂದ "ಪೀಪಲ್ಸ್ ಡೆಮೋಕ್ರಾಟಿಕ್ ಫ್ರಂಟ್" ಎಂಬ ಹೆಸರಿನಿಂದ ವಿಜಯಿಗಳಾಗಿದ್ದರು. ಅದಾದ ಬಳಿಕ ಪಕ್ಷಗಳಲ್ಲುಂಟಾದ ಪರಿವರ್ತನೆಯ ಪರಿಣಾಮದಿಂದಾಗಿ ಲೋಕಸಭೆ ವಿಸರ್ಜನೆಯಾದಾಗ ಅದರ ಸಂಖ್ಯೆ ೩೦ ಇತ್ತು. ೧೯೬೨ರಲ್ಲಿ ಅದರ ಸದಸ್ಯರು ೨೯ ಸ್ಥಾನಗಳಲ್ಲಿ ವಿಜಯಿಗಳಾದರು. ೧೯೫೭ರಲ್ಲಿ ಕಮ್ಯುನಿಸ್ಟ್ ಪಾರ್ಟಿಗೆ ಶೇಕಡಾ ೮.೯೨ರಷ್ಟು ಮತಗಳು ದೊರಕಿದ್ದವು. ಆದರೆ ೧೯೬೨ರಲ್ಲಿ ಅದಕ್ಕೆ ೯.೯೬ರಷ್ಟು

ಮತಗಳು ಪ್ರಾಪ್ತವಾದವು. ಈ ಬಾರಿ ವಿಧಾನಸಭೆಯ ಚುನಾವಣೆಯಲ್ಲಿ ಅದರ ವಿಜೇತ ಸದಸ್ಯರ ಸಂಖ್ಯೆ ೧೫೩ ಆಗಿದ್ದರೆ ೧೯೫೭ರಲ್ಲಿ ೧೬೧ ಉಮೇದುದಾರರು ಜಯಶಾಲಿ ಆಗಿದ್ದರು. ಆದರೆ ಈ ಸಾರಿ ಒರಿಸ್ಸಾ ಹಾಗೂ ಕೇರಳದಲ್ಲಿ ಚುನಾವಣೆಗಳು ನಡೆಯಲಿಲ್ಲ. ಅದರಲ್ಲಿ ಕಮ್ಯುನಿಸ್ಟ್ ಪಕ್ಷ "ಪೀಪಲ್ಸ್ ಡೆಮೊಕ್ರಾಟಿಕ್ ಫ್ರಂಟ್" ಹೆಸರಿನಲ್ಲಿ ಸ್ಪರ್ಧಿಸಿತ್ತು. ಒರಿಸ್ಸಾ ಮತ್ತು ಕೇರಳದ ಉಪಚುನಾವಣೆಗಳ ಫಲಿತಾಂಶವನ್ನು ಒಂದುವೇಳೆ ಸೇರಿಸಿದಲ್ಲಿ ಈ ಬಾರಿ ಅದರ ಜಯಗಳಿಸಿದ ಸದಸ್ಯರ ಒಟ್ಟು ಸಂಖ್ಯೆ ೧೮೧ ಆಗಬಹುದು. ೧೯೫೭ರಲ್ಲಿ ಪೀಪಲ್ಸ್ ಡೆಮೊಕ್ರಾಟಿಕ್ ಫ್ರಂಟ್‌ನ ೨೨ ಸ್ಪರ್ಧಿಗಳು ಜಯಶಾಲಿಗಳಾಗಿದ್ದರು. ೧೯೫೭ರಲ್ಲಿ ಕಮ್ಯುನಿಸ್ಟ್ ಪಕ್ಷದ ಒಟ್ಟು ಚುನಾಯಿತರೆ ಸದಸ್ಯರ ಸಂಖ್ಯೆ ೧೮೩ ಆಗುತ್ತದೆ. ೧೯೫೭ರಲ್ಲಿ ವಿಧಾನಸಭೆಯ ಶೇಕಡಾ ೭.೭೦ರಷ್ಟು ಮತಗಳಿಗೆ ಹೋಲಿಸಿದಲ್ಲಿ ೧೯೬೨ರಲ್ಲಿ ಅದಕ್ಕೆ ೮.೫೮ರಷ್ಟು ಮತಗಳು ದೊರೆತಿವೆ. ಬಂಗಾಳ ಮತ್ತು ಆಂಧ್ರದಲ್ಲಿ ಕಮ್ಯುನಿಸ್ಟ್‌ಪಕ್ಷ ತನ್ನ ಹೆಚ್ಚಿನ ಕಾರ್ಯಕ್ರಮವನ್ನು ಕೇಂದ್ರೀಕರಿಸಿತ್ತು. ಹಾಗೇನೇ ಹೆಚ್ಚಿನ ನಿರೀಕ್ಷೆಯನ್ನೂ ಹೊಂದಿತ್ತು. ಅಲ್ಲಿ ಅದರ ಸದಸ್ಯರ ಸಂಖ್ಯೆ ಅನುಕ್ರಮವಾಗಿ ೩೭ರಿಂದ ೫೧ ಹಾಗೂ ೪೬ರಿಂದ ೫೦ಕ್ಕೆ ತಲುಪಿದೆ. ಅಸ್ಸಾಂನಲ್ಲಿ ಅದರ ನಾಲ್ಕೂ ಜನ ಹಿಂದಿನ ವಿಧಾನಸಭೆಯಲ್ಲಿ ಸದಸ್ಯರಾಗಿದ್ದರು. ಆದರೆ ಈ ಸಾರಿ ಅದಕ್ಕೆ ಒಂದು ಸ್ಥಾನವೂ ಸಿಗಲಿಲ್ಲ. ಮಧ್ಯಪ್ರದೇಶ ಹಾಗೂ ಮದ್ರಾಸುಗಳಲ್ಲಿಯೂ ಅದರ ಸದಸ್ಯರ ಸಂಖ್ಯಾಬಲ ಇಳಿಮುಖವಾಗಿದೆ. ಪರಂತು ಇತರೇ ಪ್ರದೇಶಗಳಲ್ಲಿ ಅದು ತನ್ನ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದೆ. ರಾಜಸ್ಥಾನದಲ್ಲಂತೂ ಇದಕ್ಕೆ ಮೊದಲು ಅದರ ಒಬ್ಬ ಸದಸ್ಯನೂ ಇರಲಿಲ್ಲ. ಈ ಬಾರಿ ಅದರ ಐದು ಸದಸ್ಯರು ಆರಿಸಿ ಬಂದಿದ್ದಾರೆ. ಆಂಧ್ರದಲ್ಲಿ ಅದರ ಸಂಖ್ಯೆ ೩೮ರಿಂದ ೫೧ಕ್ಕೆ ತಲುಪಿದೆಯಾದರೂ ಶೇಕಡಾವಾರು ಮತದಾನದಲ್ಲಿ ೨೯.೦೫ರಿಂದ ಇಳಿಕೆಯಾಗಿ ೧೯.೫೪ಕ್ಕೆ ನಿಂತಿದೆ. ಮಹಾರಾಷ್ಟ್ರದಲ್ಲಿಯೂ ಈ ಪಕ್ಷಕ್ಕೆ ಭಾರೀ ಹೊಡೆತ ಬಿದ್ದಿದೆ. ೧೯೫೭ರಲ್ಲಿ ಅದಕ್ಕೆ ೧೮ ಸದಸ್ಯರು ದಕ್ಕಿದ್ದಾರೆ. ಕಮ್ಯುನಿಸ್ಟರ ಕೇಂದ್ರವೆಂದೇ ಕರೆಸಿಕೊಳ್ಳುವ ಪಶ್ಚಿಮಬಂಗಾಳದ ಕಲ್ಕತ್ತಾದಲ್ಲಿಯೂ ಅವರು ಸ್ಥಾನಗಳನ್ನು ಕಳೆದುಕೊಂಡಿದ್ದಾರೆ. ಆದರೆ ಮೊದಲ ಬಾರಿಗೆ ಗ್ರಾಮೀಣ ಪ್ರದೇಶಗಳಲ್ಲಿ ಕೆಲವು ಸ್ಥಾನಗಳು ಲಭಿಸಿವೆ. ಅಖಿಲ ಭಾರತ ಮಟ್ಟದಲ್ಲಿಯೂ ಒಂದುವೇಳೆ ಪಿ.ಡಿ.ಎಫ್.ಗೆ ಲೋಕಸಭೆಯ ಚುನಾವಣೆಯಲ್ಲಿ ಸಂದಾಯವಾದ ೧೦,೪೪೦,೩೨ ಮತಗಳನ್ನು ಕಮ್ಯುನಿಸ್ಟರ ೧೯೫೭ರ ಮತಗಳೊಂದಿಗೆ ಸೇರಿಸಿದರೆ ೧೯೫೭ರಲ್ಲಿ ಅವರ ಒಟ್ಟು ಮತಗಳ ಸಂಖ್ಯೆ ೧.೧೭.೯೮.೧೦೭ ಆಗುತ್ತದೆ. ಇದು ಶೇಕಡಾ ೯.೭೯ರಷ್ಟು ಆಗುತ್ತದೆ. ಈ ಸಾರಿ ಅವರಿಗೆ ಶೇಕಡಾವಾರು

೯.೯೬ರಷ್ಟು ದೊರೆತಿದೆ. ಅಂದರೆ ಅವರ ಮತಗಳ ವಾಸ್ತವಿಕ ಹೆಚ್ಚಳ ಶೇಕಡಾ ೨೫ರಷ್ಟು ಆದಂತಾಗುತ್ತದೆ.

**ಪ್ರಗತಿಪಥದತ್ತ ಜನಸಂಘ**

೧೯೬೨ರ ಚುನಾವಣೆಗಳಲ್ಲಿ ಲೋಕಸಭೆಯ ೧೪ ಸ್ಥಾನಗಳು ಜನಸಂಘಕ್ಕೆ ದೊರೆತಿವೆ. ೧೯೫೭ರಲ್ಲಿ ಅದರಲ್ಲಿ ೪ ಸ್ಥಾನಗಳು ದೊರೆತಿದ್ದವು. ಹಾಗೇನೇ ಲೋಕಸಭೆ ವಿಸರ್ಜನೆಯಾದ ಸಮಯದಲ್ಲಿ ಅದರ ಸಂಖ್ಯೆ ೬ಕ್ಕೆ ಏರಿಕೆ ಆಗಿತ್ತು. ೧೯೫೭ರಲ್ಲಿ ೫.೯೩ ಶೇಕಡಾವಾರು ಮತಗಳು ಲಭಿಸಿದ್ದರೆ ಈಗ ಅದು ಏರಿಕೆಯಾಗಿ ೬.೪೭ಕ್ಕೆ ತಲುಪಿದೆ.

ವಿಧಾನ ಸಭೆಗಳಲ್ಲಿ ಜನಸಂಘದ ಸದಸ್ಯರ ಸಂಖ್ಯೆ ೧೯೫೭ರಲ್ಲಿ ೫೧ರಿಂದ ವೃದ್ಧಿಯಾಗಿ ೧೯೬೨ರಲ್ಲಿ ೧೧೯ಕ್ಕೆ ತಲುಪಿದೆ. ಮತಗಳ ಸರಾಸರಿಯು ೪.೦೩ರಿಂದ ಏರಿಕೆಯಾಗಿ ೬.೨೧ ಆಗಿದೆ. ಈ ರೀತಿಯಾಗಿ ವಿಧಾನಸಭೆಯಲ್ಲಿ ಜನಸಂಘದ ಪ್ರಗತಿ ಮಹತ್ವಪೂರ್ಣವಾಗಿದೆ. ಉತ್ತರಪ್ರದೇಶ ಹಾಗೂ ಮಧ್ಯಪ್ರದೇಶದಲ್ಲಿ ಅದಕ್ಕೆ ವಿರೋಧಪಕ್ಷದ ಮಾನ್ಯತೆ ಲಭಿಸಿದೆ. ಮೊಟ್ಟಮೊದಲ ಬಾರಿಗೆ ಬಿಹಾರದಲ್ಲಿ ಜನಸಂಘಕ್ಕೆ ೧೦೩ ಸ್ಥಾನಗಳಲ್ಲಿ ವಿಜಯ ದೊರತಿದೆ. ರಾಜಸ್ಥಾನದಲ್ಲಿ ೧೯೫೭ರಲ್ಲಿನ ೬ ಸ್ಥಾನಗಳಿಗೆ ಹೋಲಿಸಿದಲ್ಲಿ ೧೫ ಸ್ಥಾನಗಳು ದಕ್ಕಿವೆ. ಹಾಗೇನೇ ಪಂಜಾಬಿನಲ್ಲಿ ೮ ಸ್ಥಾನಗಳಲ್ಲಿ ಜಯಸಾಧಿಸಿದೆ. ಇತರೇ ಪ್ರದೇಶಗಳಲ್ಲಿ ಜಯ ದೊರೆತಿಲ್ಲವಾದರೂ ಮತಗಳ ಶೇಕಡಾವಾರು ದೃಷ್ಟಿಯಿಂದ ಪಶ್ಚಮಬಂಗಾಳದ ಮಿಡ್ನಾಪುರ ಜಿಲ್ಲೆಯನ್ನು ಹೊರತುಪಡಿಸಿ ಉಳಿದಂತೆ ಎಲ್ಲಾ ಕಡೆಗಳಲ್ಲಿಯೂ ಜನಸಂಘವೂ ಮುಂದೆ ಇದೆ.

ಮಹಾರಾಷ್ಟ್ರ ಹಾಗೂ ದೆಹಲಿಗಳಲ್ಲಿನ ಸೋಲು ಅನಪೇಕ್ಷಣೀಯವಾಗಿತ್ತು. ಮಹಾರಾಷ್ಟ್ರದಲ್ಲಿ ಸಂಯುಕ್ತ ಮಹಾರಾಷ್ಟ್ರದ ಸ್ಥಾಪನೆಯ ನಂತರ ಜನಮತ ಕಾಂಗ್ರೆಸ್ಸಿನ ಕಡೆಗೆ ತೀವ್ರಗತಿಯಲ್ಲಿ ವಾಲಿಕೆಯಾದದ್ದರ ಪರಿಣಾಮವು ಎಲ್ಲಾ ವಿರೋಧಪಕ್ಷಗಳ ಮೇಲೂ ಉಂಟಾಯಿತು. ಜನಸಂಘವೂ ಕೂಡ ಈ ಬಿರುಗಾಳಿಗೆ ತುತ್ತಾಗಿದೆ. ದೆಹಲಿಯಲ್ಲಿ ಜನಸಂಘದ ಮತಗಳು ಶೇಕಡಾ ೧೯.೭೨ರಿಂದ ೩೨.೬೬ ಆಗಿ ಬಿಟ್ಟಿವೆ. ಆದರೆ ಸ್ಥಾನಗಳು ಮಾತ್ರ ದೊರೆಯಲಿಲ್ಲ ಎಲ್ಲಾ ವಿರೋಧಪಕ್ಷಗಳು ಜನಸಂಘದ ವಿರುದ್ಧ ಸಂಘಟಿತರಾಗುವ ಮೂಲಕ ಕಾಂಗ್ರೆಸ್ಸಿಗೆ ಸಹಾಯ ಮಾಡುವುದು ಹಾಗೂ ಅನಿರೀಕ್ಷಿತವಾದ ರೂಪದಲ್ಲಿ ಮತದಾನದಲ್ಲಿ ಹೆಚ್ಚಳ ಆಗಿರುವುದು ಇವೇ ಮುಂತಾದವು ಮುಖ್ಯ ಕಾರಣಗಳಾಗುತ್ತವೆ.

* * * * *

# ಚೀನಾ ಎಂದರೆ ಭಯವೇಕೆ?

ಸಾಮಾಜಿಕ ಒಳ–ಹೊರಗುಗಳ ಸಂಪೂರ್ಣ ಸುರಕ್ಷತೆಗಾಗಿ 'ರಾಜ್ಯ'ದ ಉಗಮ ಆಗಿದೆ ಹಾಗೂ ಇಂದು ವಿಭಿನ್ನ ವಿಚಾರಧಾರೆಗಳ ಪ್ರಭಾವದಿಂದ ಅದರ ಕರ್ತವ್ಯಗಳ ವಿಕಾಸ ಮತ್ತು ವಿಸ್ತಾರವಾಗಿದ್ದರೂ ಕೂಡ ಅದರ ಅಸ್ತಿತ್ವವು ಅದರದ್ದೇ ಆದ ಎರಡು ಮೂಲಭೂತ ಕರ್ತವ್ಯದ ಸಾರ್ಥಕ್ಯ, ಅವುಗಳ ಪರಿಣಾಮಕಾರಿ ಪಾಲನೆ ಹಾಗೂ ಅನುಷ್ಠಾನವನ್ನು ಅವಲಂಬಿಸಿದೆ. ಹಾಗಾಗಿ ಆಂತರಿಕ ಯಾ ಬಾಹ್ಯವಾಗಿ ಅಥವಾ ಯಾವುದೇ ರೀತಿಯಿಂದಲೂ ಸಹ ಅದನ್ನು ಉತ್ತೇಜಿಸುವುದಾಗಲಿ ಅಥವಾ ಅದರ 'ಅಸ್ಮಿತೆ'ಗೆ ಆಘಾತವನ್ನುಂಟುಮಾಡುವುದಾಗಲಿ ಆದದ್ದೇ ಆದರೆ ಆಗ 'ರಾಜ್ಯ'ದ ಸೂತ್ರಧಾರ ಎನಿಸಿಕೊಂಡವರು ಉಳಿದೆಲ್ಲಾ ತಮ್ಮ ಕರ್ತವ್ಯಗಳನ್ನು ಬದಿಗಿರಿಸಿ ಅಥವಾ ಅವನ್ನು ತಿರಸ್ಕರಿಸಿಯಾದರೂ ಸರಿ, ತನ್ನನ್ನು ಕೆಣಕುವ ಶಕ್ತಿ ಅಥವಾ ವ್ಯಕ್ತಿಯ ವಿರುದ್ಧ ಸಕಾರಾತ್ಮಕವಾಗಿ ಸೆಟೆದು ನಿಲ್ಲುವ ಪ್ರಯತ್ನ ಮಾಡುತ್ತಾರೆ. ಈ ಕರ್ತವ್ಯದ ಅನುಭವ ಹಾಗೂ ಅದರಿಂದ ಪ್ರೇರಿತಗೊಂಡ ಪ್ರಯತ್ನಗಳಲ್ಲಿಯೇ ರಾಜ್ಯದ 'ಪ್ರಭುತ್ವ' ಅಡಗಿರುತ್ತದೆ. ಯಾವ ರೀತಿ ಒಂದು ಕಾಡಿನಲ್ಲಿ ಎರಡು ಸಿಂಹಗಳು ಇರಲು ಅಸಾಧ್ಯವೋ ಹಾಗೆಯೇ ರಾಜ್ಯದಲ್ಲಿ ಎರಡು 'ಅಧಿಕಾರಶಕ್ತಿ'ಗಳು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಎರಡನೆಯದರ ಹುಟ್ಟು ಮೊದಲನೆಯದರ ಪರಾಭವದ ನಂತರವೇ ಆಗಿರುತ್ತದೆ.

ನಮ್ಮ ನೆರೆಯ ದೇಶವಾದ ಚೀನಾ ನಮ್ಮ ಪ್ರಭುತ್ವವನ್ನು ಉತ್ತೇಜಿಸಿ ಪಂಥಾಹ್ವಾನ ನೀಡಿದೆ. ಅದು ಈ ಪಂಥಾಹ್ವಾನವನ್ನು ಯುದ್ಧದ ಘೋಷಣೆ ಮಾಡುವುದಕ್ಕಾಗಿ ನೀಡಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಮತ್ತು ಅದರ ನಡುವಿನ ಎಲ್ಲಾ ಪ್ರಕಾರದ ರಾಯಭಾರ ಸಂಬಂಧಗಳು ಈ ಹಿಂದಿನಂತೆ ಯಥಾವತ್ತಾಗಿಯೇ ಇವೆ. ಆದರೆ ಚೀನವು ಆಕ್ರಮಣ ಮಾಡಿದೆ ಎಂಬ ಅಂಶವನ್ನು ಯಾರು ತಿರಸ್ಕರಿಸಲಾರರು. ಮತ್ತು ಭಾರತದ ನಡುವೆ ಈ ಕುರಿತಂತೆ ಯಾವದೋ ಒಡಂಬಡಿಕೆ ಆಗಿದೆ ಎಂದರ್ಥವಲ್ಲ. ಆದರೆ ನಮ್ಮ ಭೂಮಿಯ ಮೇಲೆ ನಮ್ಮದೇ ಅಧಿಕಾರವನ್ನು ಅದು ಒಪ್ಪಿಕೊಳ್ಳಲು ತಯಾರು ಇಲ್ಲ ಎಂದರ್ಥವಾಗುತ್ತದೆ.

**ವಿಚಿತ್ರ ಸ್ಥಿತಿ**

ಸದ್ಯದ ಪರಿಸ್ಥಿತಿಯಲ್ಲಿ ಎರಡು ಅಂಶಗಳ ಆಧಾರದ ಮೇಲೆ ಪರಿವರ್ತನೆಯನ್ನು ತರಬಹುದು. ಒಂದು: ಶಾಶ್ವತವಾಗಿಯೋ ಅಥವಾ ತಾತ್ಕಾಲಿಕವಾಗಿಯೋ ಚೀನಾದೊಂದಿಗೆ ಒಪ್ಪಂದ ಮಾಡಿಕೊಂಡು ಆ ಪ್ರದೇಶದ ಅಧಿಕಾರವನ್ನು ಚೀನಾದಿಂದ ಪಡೆಯುವುದು ಅಥವಾ ಚೀನಾ ಅಲ್ಲಿಂದ ತನ್ನ ಅಧಿಕಾರವನ್ನು ತ್ಯಜಿಸಿ ತನ್ನ ಗಡಿಯೊಳಗೆ ತೆರಳುವ ಹಾಗೆ ಒತ್ತಡ ಹೇರುವುದು ಎರಡನೆಯದು. ಆದರೆ ಈ ಎರಡೂ ಪರ್ಯಾಯಗಳಲ್ಲಿ ಯಾವುದನ್ನು ಬೇಕಾದರೂ ಕಾರ್ಯರೂಪಕ್ಕೆ ತಾರದಿರುವ ಕಾರಣದಿಂದಾಗಿ ಇಂದು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಒಂದು ರೀತಿಯ ವಿಚಿತ್ರ ಸ್ಥಿತಿ ಉದ್ಭವವಾಗಿಬಿಟ್ಟಿದೆ. ಚೀನಾ ನಮ್ಮ ಮಿತ್ರನೂ ಅಲ್ಲ ಶತ್ರುನೂ ಅಲ್ಲ ಮತ್ತು ತಟಸ್ಥವಾಗಿಯೂ ಇಲ್ಲ. ಲಡಾಖ್ ವಿಷಯಕ್ಕೆ ಸಂಬಂಧಿಸಿದಂತೆ ಚೀನಾದೊಂದಿಗೆ ನಾವು ಯುದ್ಧವನ್ನು ಬಯಸುವುದಿಲ್ಲ ಸಂಧಿಯನ್ನೂ ಸಹ. ಈ ಪರಿಸ್ಥಿತಿಯಲ್ಲಿ ಅದು ಅಲ್ಲಿ ತಳವೂರಿರುವಷ್ಟು ಕಾಲ ನಮ್ಮ ಪ್ರಭುತ್ವಕ್ಕೆ ಸವಾಲೊಡ್ಡುತ್ತಲೇ ಇರುತ್ತದೆ ಮತ್ತು ನಮ್ಮ ತಲೆಯೊಳಗೆ ಉದ್ವೇಗ ಹೆಚ್ಚುತ್ತಲೇ ಹೋಗುತ್ತದೆ, ನಮ್ಮ ನೆತ್ತಿಯ ಮೇಲೆ ಅನಿಶ್ಚಿತತೆಯ ಕತ್ತಿ ತೂಗಾಡುತ್ತಲೇ ಇರುತ್ತದೆ. ಮತ್ತು ಈ ಪ್ರಕಾರವಾಗಿ ಕೇವಲ ಲಡಾಖ್ ಭಾಗವಷ್ಟೇ ಅಲ್ಲ, ಸಂಪೂರ್ಣ ಉತ್ತರದ ಗಡಿ ಭಾಗ ನಮಗೆ ಚಿಂತೆಯ ವಿಷಯವಾಗಿ ಕಾಡುತ್ತಿರುತ್ತದೆ. ಚೀನಾದ ನಿಲುವಿನ ಪ್ರಕಾರ ಅದು ನಮ್ಮ ಅಧಿಕೃತ ಭೂಭಾಗ ಹೊಂದಿರುವುದರಿಂದಲೇ ಅದರ ಹಸಿವು ಹಿಂಗುತ್ತಿಲ್ಲ. ಬದಲಾಗಿ ಅದು ಇನ್ನೂ ಹೆಚ್ಚಿನ ಭಾಗದ ಮೇಲೆ ತನ್ನ ಹಕ್ಕನ್ನು ಮಂಡಿಸುತ್ತಿದೆ. ಆದರೆ ಅದು ಒಂದು ವೇಳೆ ಅಷ್ಟರಲ್ಲಿಯೇ ತೃಪ್ತವಾಗುತ್ತದೆ ಎಂದಾದರೆ ನಾವು ಅದರೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕೇನು? ಇದರ ಅರ್ಥ ಆಕ್ರಮಣಕ್ಕೆ ಬದಲಾಗಿ ಆತ್ಮಸಮರ್ಪಣೆ ಎಂದಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಇದರ ಪರಿಣಾಮ ನಮ್ಮ ನೆರೆಹೊರೆಯ ದೇಶಗಳ ಮೇಲೂ ಉಂಟಾಗುತ್ತದೆ. ನಮ್ಮ ನಾಯಕರು "ಶಾಂತಿಯ" ಉನ್ನತ ಆದರ್ಶದಿಂದ ಪ್ರೇರಿತವಾಗಿ ಬೇಕಿದ್ದರೆ ಒಪ್ಪಂದ ಮಾಡಿಕೊಳ್ಳಲಿ. ಆದರೆ ಸಮಸ್ತ ವಿಶ್ವ ಅದನ್ನು ನಮ್ಮ ದುರ್ಬಲತೆ ಎಂದೇ ಪರಿಗಣಿಸುತ್ತದೆ. ದುರ್ಬಲರೊಂದಿಗೆ ಮಾಡಿಕೊಂಡ ಒಪ್ಪಂದಗಳಿಗೆ ಬೆಲೆ ಇರುವುದಿಲ್ಲ. ನಾವು ಒಪ್ಪಂದವನ್ನು ಬಯಸುತ್ತೇವೆ ಎಂದಾದರೆ ನಾವು ನಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಬೇಕಾಗುತ್ತದೆಯೇ? ನಮ್ಮ ಶಕ್ತಿಯನ್ನು ಪ್ರಕಟಿಸದೆ ಮಾಡಿಕೊಂಡ ಒಪ್ಪಂದದಿಂದ ನಾವು ಕಳೆದುಕೊಂಡಿರುವ ಗೌರವ, ಪ್ರತಿಷ್ಠೆಗೆ ಮತ್ತಷ್ಟು ಹೊಡೆತ ಬಿದ್ದಂತಾಗುತ್ತದೆ ಮತ್ತು ಏಶಿಯಾದ ಸಣ್ಣಪುಟ್ಟ ರಾಷ್ಟ್ರಗಳಿಗೆ ಯಾವುದೇ ಆಶ್ರಯ ಇಲ್ಲದಂತಾಗುತ್ತದೆ. ಅವುಗಳು ಪುನಃ ಚೀನಾದ ತೆಕ್ಕೆಗೆ ಸೇರಿ ಹೋಗುತ್ತದೆ. ಅಥವಾ ಭಯಭೀತರಾಗಿ ಅಮೇರಿಕಾದ ಆಶ್ರಯವನ್ನು ಬಯಸುತ್ತವೆ.

## ಯುದ್ಧ ಮಾಡಬಹುದೇ

ನಮ್ಮ ಬಲವನ್ನು ಸಾಬೀತುಪಡಿಸುವುದರ ಅರ್ಥ ಎಂದರೆ ಚೀನಾದೊಂದಿಗೆ ಲಡಾಖ್‌ನ ಭೂಮಿಯಲ್ಲಿ ಸಕ್ರಿಯ ಹೋರಾಟಕ್ಕೆ ಮುಂದಾಗುವುದು. ಇಲ್ಲಿ ಸಿದ್ಧಾಂತ ಮತ್ತು ವ್ಯವಹಾರ ಇವೆರಡರ ಪ್ರಶ್ನೆ ಉದ್ಭವವಾಗುತ್ತದೆ. ಅವರ ಸಂಖ್ಯೆ ಬೆರಳೆಣಿಕೆಯಷ್ಟಿದ್ದರೂ ಸೈದ್ಧಾಂತಿಕವಾಗಿ ಸೈನಿಕ ಸಂಘರ್ಷವನ್ನು ವಿರೋಧಿಸುವಂತಹ ಕೆಲವು ಜನರು ನಮ್ಮ ದೇಶದಲ್ಲಿದ್ದಾರೆ. ವಿನೋಬಾಜಿ ಮತ್ತು ಜಯಹಪ್ರಕಾಶ್‌ಜಿಯವರನ್ನು ಇಂಥ ಜನರ ಗುಂಪಿಗೆ ಸೇರಿಸಬಹುದು. 'ಯುದ್ಧ ಬೇಡ' ಎಂಬ ನೀತಿಯನ್ನು ಸಿದ್ಧಾಂತದ ಉನ್ನತ ಆಸನದಲ್ಲಿ ಮಂಡಿಸುವ ಪ್ರಯತ್ನವನ್ನು ನಮ್ಮ ಪ್ರಧಾನಮಂತ್ರಿಗಳೂ ಸಹ ಆಗಾಗ ಮಾಡುತ್ತಾರೆ. ಆದರೆ ಚೀನಾ ಮುಂದೊತ್ತಿ ಬಂದದ್ದೇ ಆದರೆ ನಾವು ಅದನ್ನು ಎದುರಿಸಲು ಸಿದ್ಧ ಎಂದು ಅವರೇ ಹೇಳಿದಾಗ 'ಯುದ್ಧ ಬೇಡ' ಎಂಬುವುದು ಅವರಿಗೆ ಸಿದ್ಧಾಂತವಾಗಿ ಉಳಿಯುವುದಿಲ್ಲ ಎಂಬ ನಿರ್ಣಯಕ್ಕೆ ನಾವು ಬರಬೇಕಾಗುತ್ತದೆ. ಅವರು ಇದರಿಂದ ಸಾಧ್ಯವಾದಷ್ಟು ಪಲಾಯನ ಮಾಡಬಯಸುತ್ತಾರೆಂಬುದು ಬೇರೆ ಮಾತು.

ಎರಡನೆಯದು ವ್ಯವಹಾರದ ಪ್ರಶ್ನೆ : ಚೀನಾದೊಂದಿಗೆ ಲಡಾಖ್‌ನಲ್ಲಿ ಯುದ್ಧ ಮಾಡುವಷ್ಟು ಸಾಮರ್ಥ್ಯ ನಮ್ಮಲ್ಲಿ ಇದೆಯೇ? ನಮ್ಮಲ್ಲಿ ಒಂದು ವೇಳೆ ಯಾವುದಾದರೂ ದೌರ್ಬಲ್ಯ ಇದೆ ಎಂದಾದಲ್ಲಿ, ಬಹಳ ವ್ಯಥೆಯ ಸಂಗತಿಯೇನೆಂದರೆ ನಮ್ಮ ದೇಶದ ದೊಡ್ಡ ದೊಡ್ಡವರೆನಿಸಿಕೊಂಡವರ ಮನಸ್ಸಿನಲ್ಲಿ ಇಂತಹ ಪ್ರಶ್ನೆ ಉದ್ಭವಿಸುತ್ತದೆ. ಇದು ಸತ್ಯವೂ ಕೂಡ. ವ್ಯಾವಹಾರಿಕತೆಯ ಹೆಸರಿನಲ್ಲಿ ಈ ರೀತಿಯ ಪ್ರಶ್ನೆಯ ಔಚಿತ್ಯವನ್ನು ವಿಷದಪಡಿಸುವ ಪ್ರಯತ್ನವನ್ನು ಮಾಡಲಾಗುತ್ತದೆ. ಆದರೆ ಬಲಾಬಲದ ವಿಚಾರ ಮಾಡಿಯಾದರೂ ಸಂಘರ್ಷಕ್ಕೆ ಬದಲಾಗಿ ನ್ಯಾಯ ಮತ್ತು ತನ್ನ ರಾಷ್ಟ್ರೀಯಹಿತ ಹಾಗೂ ಮೌಲ್ಯಗಳ ರಕ್ಷಣೆಯ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಯುದ್ಧದ ಭೀಕರತೆಯನ್ನು ಸಂತಸದಿಂದಲೇ ಸ್ವೀಕರಿಸುತ್ತಾರೆ. ಇದೇ ನಿಜವಾದ ವ್ಯಾವಹಾರಿಕತೆ. ಶಕ್ತಿ ಮತ್ತು ಸಾಮರ್ಥ್ಯದ ಪ್ರಶ್ನೆ ಯುದ್ಧದ ಸಂಕಲ್ಪ ಮಾಡಿದ ನಂತರವೇ ಉದ್ಭವಿಸುತ್ತದೆ. ಒಮ್ಮೆ ನ್ಯಾಯದ ಬಗ್ಗೆ ಶ್ರದ್ಧೆ ಮತ್ತು ಅದನ್ನು ಪಡೆಯುವುದಕ್ಕೋಸ್ಕರ ಎಲ್ಲವನ್ನು ನಿರ್ವಹಿಸುವ ತಯಾರಿ ಒಮ್ಮೆಯಾಗಿ ಬಿಟ್ಟಿತೆಂದರೆ ನಂತರ 'ಉದ್ಯೋಗಪರ್ವ' ಪ್ರಾರಂಭವಾಗುತ್ತದೆ. ಕೊನೆಯ ಕ್ಷಣದವರೆಗೂ 'ಸಂಧಿ'ಗಾಗಿಯೇ ನೀವು ಸಿದ್ಧರಿದ್ದಿರೀ ಆದರೆ ಯುದ್ಧಕ್ಕಾಗಿ ಸ್ಥಿರತೆಯೇ ಇಲ್ಲ ಎಂದಾದರೆ ಆ ಸಂಧಿಯಾದರೂ ಏನು ಮಾಡೀತು?

## ಸಫಲತೆ ದಕ್ಕುವುದು ಹೇಗೆ?

ಒಂದು ವೇಳೆ ಮಹಾಭಾರತ ಆಗಿಯೇ ತೀರುತ್ತದೆ ಎಂದಾದರೆ ಅದು

ಇಂದು ಅಲ್ಲದಿದ್ದರೆ ನಾಳೆ. ಅದಕ್ಕಾಗಿ ಸೂಕ್ತ ಸಂದರ್ಭಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಅಂದರೆ ಚೀನದೊಂದಿಗೆ ಯುದ್ಧ ಮಾಡುವ ಸಾಮರ್ಥ್ಯ ನಮ್ಮಲ್ಲಿ ಇಲ್ಲ ಎಂಬ ಪ್ರಶ್ನೆ ಉದ್ಭವಿಸಲೇ ಬಾರದು. ಬದಲಾಗಿ ಚೀನಾದೊಂದಿಗೆ ಹೋರಾಡಿ ಸಾಫಲ್ಯವನ್ನು ಪಡೆಯುವುದು ಹೇಗೆ? ಎಂಬ ಪ್ರಶ್ನೆ ಮುಖ್ಯವಾಗಬೇಕು. ಯುದ್ಧ ಅನಿವಾರ್ಯವಾಗಿದೆ ಎಂದು ಪರಿಗಣಿಸಿ ಮುನ್ನಡೆಯಬೇಕು. ಈ ಹಂತಕ್ಕೆ ತಲುಪಿದ ಮೇಲೆಯೇ ನಮ್ಮ ಹಾಗೂ ಶತ್ರುಪಡೆಯ ಬಲಾಬಲದ ಬಗ್ಗೆ, ನಮ್ಮ ಮತ್ತು ನಮ್ಮ ಶತ್ರುವಿನ ಬಗ್ಗೆ ಹಾಗೂ ಶತ್ರು–ಮಿತ್ರರ ಬಗ್ಗೆ ಯೋಚಿಸಬೇಕಾಗುತ್ತದೆ. ಈ ವಿಚಾರವನ್ನು ಮಾಡುತ್ತಾ ಯುದ್ಧದ ಮುಂದಿನ ಸಂಭಾವ್ಯತೆಯ ಬಗ್ಗೆ ನಮ್ಮ ಶಕ್ತ್ಯಾನುಸಾರವಾಗಿ ಚಿಂತಿಸುತ್ತಾ ಮುಂದುವರೆಯಬೇಕಾಗುತ್ತದೆ.

**ಜಾಗತಿಕ ಯುದ್ಧದ ಆತಂಕ**

ಇಲ್ಲಿ ಎಲ್ಲದಕ್ಕಿಂತ ಮೊದಲು ಉದ್ಭವಿಸುವ ಪ್ರಶ್ನೆ ಏನೆಂದರೆ ಲಡಾಖ್‌ನ ಸಂಘರ್ಷ ವಿಶ್ವ ಯುದ್ಧವಾಗಿ ಪರಿಣಮಿಸಬಹುದೇ...? ದೌರ್ಭಾಗ್ಯವೆಂದರೆ ಕಳೆದ ದಶಕದಲ್ಲಿ ನಮ್ಮ ದೇಶದಲ್ಲಿ ಜಾಗತಿಕ ಯುದ್ಧದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಮತ್ತು ನಮ್ಮ ಪ್ರಧಾನಮಂತ್ರಿಗಳು ಪ್ರಪಂಚದ ದೊಡ್ಡದೊಡ್ಡ ಸಮೂಹಗಳಿಗೆ ಸಲಹೆ ನೀಡುತ್ತಾ "ನಮ್ಮ ತಲೆಯೊಳಗೆ ವಿಶ್ವಯುದ್ಧದ ಆತಂಕ ತೀವ್ರವಾಗಿ ಆವರಿಸಿದೆ ಎಂದು ಹೇಳಿದ್ದಾರೆ". ಬಹುಶಃ ವಿಶ್ವಯುದ್ಧ ಕುರಿತಂತೆ ಭಾರತ ಆತಂಕಗೊಂಡಿರುವಷ್ಟು ಜಗತ್ತಿನ ಬೇರಾವ ದೇಶವೂ ಭಯಭೀತವಾಗಿಲ್ಲ. ಹೈದರಾಬಾದ್, ಪೂರ್ವಬಂಗಾಳ, ಗೋವಾ, ತುಕೇರಗ್ರಾಮ, ಕಾಶ್ಮೀರ, ಲಡಾಖ್.... ಹೀಗೆ ಯಾವುದೇ ಪ್ರಶ್ನೆ ನಮ್ಮ ಮುಂದೆ ಎದುರಾದರೂ ಅದು ನಮಗೆ ಮೂರನೇ ವಿಶ್ವಯುದ್ಧವೆಂಬ ಫಿರಂಗಿಗೆ ಬೆಂಕಿಯಿಡುವ ಬತ್ತಿಯ ಹಾಗೆ ಗೋಚರಿಸುತ್ತದೆ. ಈ ಭಯದ ಭೂತವನ್ನು ನಮ್ಮ ತಲೆಯಿಂದ ಹೊರಹಾಕಿದರೆ ಕ್ಷೇಮ.

ಲಡಾಖ್‌ನ ಸಮಸ್ಯೆಯಿಂದಾಗಿ ವಿಶ್ವಯುದ್ಧ ಸಂಭವಿಸುವುದಿಲ್ಲ. ಅದು ಜಾಗತಿಕ ಮಟ್ಟದ ಸ್ಥಿತಿಗತಿ, ಲಡಾಖ್‌ನ ಭೌಗೋಳಿಕ ಪರಿಸ್ಥಿತಿ ಹಾಗೂ ನಮ್ಮ ದೇಶದ ವಿದೇಶಾಂಗ ನೀತಿ–ಈ ಮೂರು ಅಂಶಗಳ ಆಧಾರದ ಮೇಲೆ ಅದು ನಿಂತಿದೆ. ನಮ್ಮ ತಟಸ್ಥನೀತಿಯು ಈ ಸಂಘರ್ಷವನ್ನು ವ್ಯಾಪಕವಾಗಿ ಹರಡಲು ಬಿಡುವುದಿಲ್ಲ. ಆದುದರಿಂದ ನಮ್ಮ ನೀತಿಯಲ್ಲಿ ಪರಿವರ್ತನೆ ತಂದು ಪಾಕಿಸ್ತಾನದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ನಾವು ಮುಂದಾಗಬಾರದು. ಅವರೊಂದಿಗೆ ನಮ್ಮ ಮೈತ್ರಿಯನ್ನು ಇನ್ನಷ್ಟು ಖಂಡಿತಾ ಗಟ್ಟಿಗೊಳಿಸಿಕೊಳ್ಳಬಹುದು.

**ರಷ್ಯಾ ದೇಶವು ಚೀನಾಕ್ಕೆ ಸಹಾಯ ಮಾಡಬಹುದೇ?**

ಜಾಗತಿಕ ಯುದ್ಧ ಸಂಭವಿಸದಿದ್ದರೂ ಕೂಡ ರಷ್ಯಾ ಚೀನಾದೇಶಕ್ಕೆ ತನ್ನ ಸಹಾಯ ನೀಡಬಹುದು ಎಂಬುದು ಎರಡನೆಯ ಪ್ರಶ್ನೆ. ಯಾವ ಕಮ್ಯೂನಿಸ್ಟ್ ವ್ಯವಸ್ಥೆಯ ವಿರುದ್ಧ ಹೋರಾಡಲು ಪಶ್ಚಿಮದ ಎಲ್ಲಾ ರಾಷ್ಟ್ರಗಳು ಒಟ್ಟಾಗಿ ಕಾರ್ಯತಂತ್ರದಲ್ಲಿ ನಿರತರಾಗಿದ್ದಾರೋ ಅಂತಹ ವ್ಯವಸ್ಥೆ ವಿರುದ್ಧ ನಾವು ಒಂಟಿಯಾಗಿ ಕಾದಾಡುವುದು ಬುದ್ಧಿವಂತಿಕೆ ಎನಿಸಿಕೊಳ್ಳುವುದೆ? ಯಾರ ತಲೆಯಲ್ಲಿ ಕಮ್ಯುನಿಸಂನ ಭಯ ಆವರಿಸಿದೆಯೋ ಅವರು ಈ ಪರಿಸ್ಥಿತಿಗಿಂತ ಉತ್ತಮವಾದ ಬೇರಾವ ಪರಿಸ್ಥಿತಿಯ ಕಲ್ಪನೆಯನ್ನು ಮಾಡಿಕೊಳ್ಳಲಾರರು. ಆದರೆ ಇಂದು ರಷ್ಯಾ ಭಾರತದ ವಿರುದ್ಧ ಚೀನಾದೇಶಕ್ಕೆ ಸಹಾಯ ಮಾಡಲಾರದು ಎಂಬುದು ಮಾತ್ರ ಸತ್ಯ. ರಷ್ಯಾ ಮತ್ತು ಚೀನಾದ ನಡುವಿನ ಆಂತರಿಕ ಭಿನ್ನಾಭಿಪ್ರಾಯದ ಸ್ಥಾನದಲ್ಲಿ ಭಾರತದ ವಿದೇಶನೀತಿ ಮತ್ತು ಅಂತರ್ರಾಷ್ಟ್ರೀಯ ಸಮತಾವಾದದ ಅಂಶಗಳು ಈ ಸಂಘರ್ಷದಿಂದ ದೂರವಿರುವ ಹಾಗೆ ರಷ್ಯಾವನ್ನು ಅಸಹಾಯಕಗೊಳಿಸುತ್ತದೆ.

ಒಂದು ವೇಳೆ ನಾವು ನಮ್ಮದೇ ಶಕ್ತಿ ಸಾಮರ್ಥ್ಯದ ಮೇಲೆ ಅವಲಂಬಿತರಾಗಿದ್ದರೆ ರಷ್ಯಾ ಮತ್ತು ಅಮೇರಿಕಾಗಳು ತಟಸ್ಥವಾಗಿರುತ್ತವೆ.

**ಚೀನಾದೊಂದಿಗೆ ಯುದ್ಧ ಮಾಡಲು ನಾವು ಶಕ್ತರೇ?**

ಈಗ ಎದುರಾಗುವ ಮೂರನೇ ಪ್ರಶ್ನೆ ಎಂದರೆ 'ನಾವು ಚೀನಾದೊಂದಿಗೆ ಸಮರ್ಥವಾಗಿ ಹೋರಾಟ ಮಾಡುತ್ತೇವೆಯೇ...?' ಈ ಕುರಿತಂತೆ ಭಾರತದ ಮಿತ್ರರು ಹಾಗೂ ಶತ್ರುಗಳು ಇಲ್ಲಿಯವರೆಗೆ ಇಬ್ಬರೂ ಯುದ್ಧದ ವಿಷಯಕ್ಕೆ ಸಂಬಂಧಿಸಿದಂತೆ ದೇಶದ ಮನೋಬಲವನ್ನು ಕುಗ್ಗಿಸುವ ಪ್ರಯತ್ನವನ್ನೇ ಮಾಡಿದ್ದಾರೆ ಎಂದಷ್ಟೇ ಹೇಳಬಹುದು. ಚೀನಾದ ಬಗ್ಗೆ ಪ್ರಾರಂಭದಿಂದಲೂ ಅಬ್ಬರದ ಪ್ರಚಾರ ಮಾಡಲಾಗಿದೆ. 'ಬೇರೆಯವರ ಬಟ್ಟಲಿನ ಪಾಯಸವೇ ಜಾಸ್ತಿ' ಎನ್ನುವ ನಾಣ್ನುಡಿಯಂತೆ ನಮ್ಮ ಬಳಿ ಸಾಮರ್ಥ್ಯವೇ ಇಲ್ಲ. ಆದರೆ ಚೀನಾ ಮಾತ್ರ ಸರ್ವಶಕ್ತಿ, ಸಾಮರ್ಥ್ಯ ಹೊಂದಿದೆ ಎಂಬುದು ನಮ್ಮ ಧೋರಣೆಯಾಗಿದೆ. ನಮ್ಮ ಶತ್ರು ದುರ್ಬಲನಾಗಿಲ್ಲ ಎಂದು ಒಪ್ಪಿಕೊಂಡರೂ ಸಹ ನಮ್ಮ ದೇಶದ ಸೈನಿಕ ಸಾಮರ್ಥ್ಯದ ತಲುನೆಯಲ್ಲಿ ಚೀನಾದ ಸಾಮರ್ಥ್ಯ ಅತ್ಯಧಿಕವಾಗಿದೆ, ಹಾಗಾಗಿ ನಮ್ಮದೇ ಭೂಭಾಗವನ್ನು ಚೀನಾದಿಂದ ಮುಕ್ತಗೊಳಿಸಲು ಸಾಧ್ಯವೇ ಇಲ್ಲ ಎಂದು ಹೇಳುವುದೂ ಸಹ ಸತ್ಯಸಂಗತಿಯಾಗಲಾರದು. ಚೀನಾ ಅಧಿಕ ಸಂಖ್ಯೆಯಲ್ಲಿ ಸೈನ್ಯವನ್ನು ಹೊಂದಿದೆ. ಆದರೆ ಅವರ ಸೈನಿಕ ಶಿಸ್ತು, ಶೌರ್ಯ ಮತ್ತು ಯುದ್ಧನೀತಿಯ ಆಧಾರದಲ್ಲಿ ಸೇನೆಯನ್ನು ಎದುರಿಸಲು ಅವರಿಗೆ ಸಾಧ್ಯವಿಲ್ಲ. ನಮ್ಮ ಬಳಿ ಅತ್ಯಾಧುನಿಕ

ಶಸ್ತ್ರಾಸ್ತ್ರಗಳು ಇಲ್ಲದಿರಬಹುದು. ಆದರೆ ಶಸ್ತ್ರಬಲದಲ್ಲಿ ನಾವೇನೂ ಕಡಿಮೆ ಇಲ್ಲ. ಇನ್ನು ಭೌಗೋಳಿಕ ಸ್ಥಿತಿಗತಿಗೆ ಸಂಬಂಧಿಸಿದಂತೆ ಹೇಳುವುದಾದರೆ ಅದು ಎಂದಿಗೂ ಬದಲಾಗದ ಪ್ರಶ್ನೆಯಾಗಿಯೇ ಉಳಿಯುತ್ತದೆ. ಯಾರು ಇದಕ್ಕಿಂತಲೂ ದುರ್ಗಮವಾದ ಕಾಶ್ಮೀರದಂತಹ ಸ್ಥಾನಗಳಿಗೆ ತೆರಳಿ ಯುದ್ಧದಲ್ಲಿ ಜಯಶಾಲಿಯಾಗಲು ಸಮರ್ಥರಿದ್ದಾರೋ ಅವರು ಲಡಾಖ್‌ನಲ್ಲಿ ಹಿಂದೆ ಬೀಳುತ್ತಾರೆ ಎಂದು ಹೇಳುವುದು ಸಮಂಜಸವಾಗುವುದಿಲ್ಲ. ಸಾರಿಗೆ ವ್ಯವಸ್ಥೆಯಲ್ಲಿ ಇಷ್ಟೊಂದು ಪ್ರಗತಿ, ವಿಕಾಸ ಆದ ನಂತರವೇ ಅಲ್ಲಿನ ಯುದ್ಧನೀತಿ ಯಾವತ್ತೂ ಭಿನ್ನವಾಗಿಯೇ ಇರುತ್ತದೆ ಮತ್ತು ನಮ್ಮ ಸೈನಿಕರು ಹಾಗೂ ಅಧಿಕಾರಿಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ಅಜ್ಞಾನಿಗಳಲ್ಲ ಎಂದು ಹೇಳಬಹುದು.

ನಾವು ಯಾವ ಪ್ರದೇಶದಲ್ಲಿ ಚೀನಾದೊಂದಿಗೆ ಸಂಘರ್ಷಕ್ಕೆ ಮುಂದಾಗಬೇಕಾಗಿದೆಯೋ ಅಲ್ಲಿ ನಮ್ಮ ಮಿತ್ರರು ಹಾಗೂ ಅದರ ಶತ್ರುಗಳು ಇದ್ದಾರೆ ಎಂಬುದನ್ನು ಮರೆಯಬಾರದು. ಟಿಬೆಟ್ ಇನ್ನೂ ಹೋರಾಡುತ್ತಲೇ ಇದೆ. ಸಿಕಿಯಾಂಗ್ ಹಾಗೂ ಚೀನಿ ತುರ್ಕಿಸ್ಥಾನಗಳು ದಂಗೆ ಏಳಲು ಸನ್ನದ್ಧವಾಗಿವೆ ಮತ್ತು ಚೀನಾದ ಆಂತರಿಕ ಸ್ಥಿತಿಗತಿ ಅಲ್ಲಿ ಪ್ರಜಾತಂತ್ರ ಇಲ್ಲದೇ ಇರುವ ಕಾರಣ ಬಹಿರಂಗಗೊಳ್ಳದೇ ಇರಬಹುದು. ಆದರೆ ಅಲ್ಲಿನ ಆಡಳಿತಗಾರರು ನಿಶ್ಚಿತರಾಗಿ ಪೀಕಿಂಗ್‌ನಿಂದ ಸಾವಿರಾರು ಮೈಲಿ ದೂರ ತೆರಳಿ ಯುದ್ಧದಲ್ಲಿ ನಿರತರಾಗುತ್ತಾರೆ ಎನ್ನುವ ಹಾಗಿಲ್ಲ. ಪರಂತು ಹಿಮಾಲಯದ ಉತ್ತರಭಾಗದ ದೇಶಗಳ ಬಗ್ಗೆ ನಾವು ನಮ್ಮ ನೀತಿಯನ್ನು ಬದಲಾಯಿಸಿಕೊಳ್ಳಬೇಕಾಗಿದೆ ಎಂಬುದಂತೂ ಸತ್ಯ. ಟಿಬೆಟ್‌ನ ಸಮಸ್ಯೆಯನ್ನು ನಿರ್ಲಕ್ಷ್ಯ ಮಾಡಿ ನಮ್ಮ ಕೈಯನ್ನು ನಾವೇ ತುಂಡರಿಸಿಕೊಂಡಂತಾಗಿದೆ.

**ಆರ್ಥಿಕವಾಗಿ ಜರ್ಜರಿತ ಚೀನಾ**

ಆರ್ಥಿಕ ದೃಷ್ಟಿಯಿಂದಲೇ ಎಷ್ಟು ಬೇಕಾದರೂ ಚೀನಾದ ಗುಣಗಾನ ಮಾಡಿ ಹಾಡಿ ಹೊಗಳಲಿ, ಆದರೆ ಅವನ ಸಮೃದ್ಧಿ ಕೇವಲ ಪ್ರಚಾರಾತ್ಮಕವಾಗಿ ಮಾತ್ರ ಎಂಬುದು ಸ್ಪಷ್ಟವಾಗಿ ಹೋಗಿದೆ. ಲಡಾಖ್‌ನ ಯುದ್ಧದ ಹೊರೆಯನ್ನು ಸಂಭಾಳಿಸುವುದು ಅದಕ್ಕೆ ಸುಲಭದ ವಿಷಯವೇನಲ್ಲ.

**ನಮ್ಮ ನಿಷ್ಕ್ರಿಯತೆಯೇ ಚೀನಾದ ಶಕ್ತಿ**

ಭಾರತದಂತಹ ದೇಶದೊಂದಿಗೆ ಸಕ್ರಿಯ ಹೋರಾಟ ಮಾಡಬೇಕಾದ ಸಂದರ್ಭ ಒಂದುವೇಳೆ ಚೀನಾಕ್ಕೆ ಒದಗಿ ಬಂದದ್ದೇ ಆದರೆ ಅದು ಯಾವುದೇ ಹೆಜ್ಜೆ ಮುಂದಿಡುವ ಮುನ್ನ ನೂರು ಸಾರಿ ಯೋಚಿಸುತ್ತದೆ. ಈಗಂತೂ ನಮ್ಮ

ನಿಷ್ಕ್ರಿಯತೆ ಹಾಗೂ ಶಾಂತಿಯ ನೀತಿಯೇ ಅದರ ಶಕ್ತಿಯಾಗಿದೆ. ಇಂದಿನವರೆಗೂ ಅದು 'ಧೌಲಘಾಯೋ'ದ ಮೇಲೆ ತನ್ನ ಸ್ವಾಧೀನವನ್ನು ಮುಂದುವರೆಸಿಕೊಂಡು ಬಂದಿದೆ. ಯಾಕಾದರೂ ಅದು ತಾನೇ ಸ್ವತಃ ಹಿಂದೆ ಸರಿದು ತನಗೆ ತಾನೇ ಕೆಟ್ಟ ಹೆಸರು ತಂದುಕೊಳ್ಳಬೇಕು? ಆದರೆ ಒಂದು ಸಾರಿ ನಮ್ಮ ಸೇನೆಯು ಮುಂದೊತ್ತುವ ನಿರ್ಧಾರ ಮಾಡಿತ್ತೆಂದರೆ ಆಗ ಅದು ಭಾರತದೊಂದಿಗೆ ನ್ಯಾಯೋಚಿತ ಒಪ್ಪಂದಕ್ಕೆ ಮುಂದಾಗುತ್ತದೆ. ಒಂದು ವೇಳೆ ಅದು ತನ್ನ ಹಠದ ಸ್ವಭಾವವನ್ನೇ ಮುಂದುವರೆಸುತ್ತದೆ ಎಂದಾದಲ್ಲಿ ತನ್ನ ನ್ಯಾಯೋಚಿತ ಅಧಿಕಾರದ ಸಂರಕ್ಷಣೆಯನ್ನು ಮಾಡಿಕೊಳ್ಳುವಷ್ಟು ಶಕ್ತಿ, ಸಾಮರ್ಥ್ಯ ಇಂದಿಗೂ ಕೂಡ ಭಾರತದಲ್ಲಿ ಇದೆ.

* * * * *

# ವಚನ ಭಂಗ

ಪ್ರಧಾನ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ೧೦ ಜನವರಿ ೧೯೬೬ ರಂದು ತಾಷ್ಕೆಂಟ್ ಸಹಿ ಮಾಡಿದರು. ಅದಾದ ಕೆಲವೇ ಗಂಟೆಗಳಲ್ಲಿ ದಿವಂಗತರಾದರು. ಈ ಎರಡೂ ಘಟನೆಗಳ ಮಧ್ಯೆ ಯಾವ ಕಾರ್ಯಕಾರಣ ಸಂಬಂಧವಿದೆ ಎಂಬುದನ್ನು ಆ ಭಗವಂತನೇ ಹೇಳಬೇಕು! ಆದರೆ ತಾಷ್ಕೆಂಟ್‌ನಲ್ಲಿ ಅವರ ಮೇಲೆ ಆದ ಶಾರೀರಿಕ ಮತ್ತು ಮಾನಸಿಕ ಒತ್ತಡ ಅವರ ಹೃದಯರೋಗದ ಮೇಲೆ ಘಾತಕ ಪರಿಣಾಮ ಮಾಡಿತು ಎಂಬುದರಲ್ಲಿ ಯಾವ ಸಂದೇಹವಿಲ್ಲ. ತಾಷ್ಕೆಂಟ್ ಒಪ್ಪಂದದಿಂದ ಅವರಿಗೆ ಆತ್ಮ ಕ್ಲೇಶ ಆಗಲಿಲ್ಲ ಎಂಬುದನ್ನು ಹೇಳಲಾಗುವುದಿಲ್ಲ. ಮಾರನೆಯ ದಿನ ಶಾಸ್ತ್ರಿಯವರ ಶವ ಮತ್ತು ತಾಷ್ಕೆಂಟ್ ಒಪ್ಪಂದ ಎರಡೂ ಶ್ರೀ ಕೊಸಿಜಿನ್‌ರ ಜೊತೆಯಲ್ಲಿ ಭಾರತಕ್ಕೆ ಬಂದವು. ಪಾಕಿಸ್ತಾನದೊಡನೆ ಆದ ಯುದ್ಧದಲ್ಲಿ ಅತ್ಯಂತ ಚಾತುರ್ಯದಿಂದ ನೇತೃತ್ವವನ್ನು ವಹಿಸಿದ ನಮ್ಮ ಪ್ರಧಾನ ಮಂತ್ರಿಗಳ ದೇಹಾವಸಾನವಾದುದರಿಂದ ದೇಶ ಎಷ್ಟು ಶೋಕಗ್ರಸ್ತವಾಗಿತ್ತೆಂದರೆ ಅದರಿಂದ 'ತಾಷ್ಕೆಂಟ್ ಒಪ್ಪಂದ'ದ ಶವಪರೀಕ್ಷೆಯನ್ನು ಮಾಡಿಸಲಾಗಲಿಲ್ಲ. ತಾಷ್ಕೆಂಟ್ ಒಪ್ಪಂದ ಮತ್ತು ಶಾಸ್ತ್ರಿಯವರ ಸಾವಿನ ಸುದ್ದಿಗಳ ಮಧ್ಯದ ಅಲ್ಪ ಅವಧಿಯಲ್ಲಿ ದೇಶದಲ್ಲಿ ಏನೆಲ್ಲಾ ಪ್ರತಿಕ್ರಿಯೆಗಳಾದುವೋ, ಅವು ಒಪ್ಪಂದಕ್ಕೆ ಅನುಗುಣವಾಗಿರಲಿಲ್ಲ. ಇಂದು ಜನಸಾಮಾನ್ಯರು ಅದರಿಂದಾಗಿ ಚಿಂತಿತರಾಗಿದ್ದಾರೆ. ಇವರ ಮನಸ್ಸಿನಲ್ಲಿ ಭವಿಷ್ಯದ ಬಗೆಗೆ ಭೀತಿಯಿದೆ. ಶಾಂತಿಪ್ರಿಯತೆ ಮತ್ತು ಶೋಕಾಕುಲತೆ ಅವರ ನಿರಾಸೆಯ ಮೇಲೆ ಪರದೆಯನ್ನು ಖಂಡಿತ ಹಾಕಿದೆ. ಆದರೆ ಅವರು ಮನಸ್ಸಿನಲ್ಲಿಯೇ ಪರಿತಪಿಸುತ್ತಿದ್ದಾರೆ. ತಾವು ಎಲ್ಲವನ್ನು ಕಳೆದುಕೊಂಡಂಥ ಅನುಭವ ಅವರಿಗಾಗುತ್ತಿದೆ. ತಾವು ಪರಾಕ್ರಮ, ತ್ಯಾಗ ಮತ್ತು ಬಲಿದಾನದಿಂದ ಏನೆಲ್ಲಾ ಸಂಪಾದಿಸಿದ್ದೆವೋ ಅದನ್ನು ಒಪ್ಪಂದದ ಬಾಜಿನಲ್ಲಿ ಕಳೆದುಕೊಂಡೆವು ಎಂದು ಅನುಭವಿಸತೊಡಗಿದ್ದಾರೆ. ನಳರಾಜ ಮತ್ತು ಧರ್ಮರಾಜ ಯುಧಿಷ್ಠಿರನ ಕಾಲದಿಂದ ಇಲ್ಲಿಯವರೆಗೆ ಮುಖಾಮುಖಿ ಕುಳಿತು ಪಂದ್ಯದಲ್ಲಿ ಸೋಲುವ ದೀರ್ಘ ಪರಂಪರೆಯಲ್ಲಿ ಇನ್ನೊಂದು ಕೊಂಡಿ ಸೇರಿಕೊಂಡಿತು. ಭಾರತ-ವಿಭಜನೆಯ ನಂತರ ಪಾಕಿಸ್ತಾನದೊಂದಿಗೆ ಅನೇಕ ಒಪ್ಪಂದಗಳಾಗಿವೆ.

ತಾಷ್ಕೆಂಟ್ ಒಪ್ಪಂದ ಅವಕ್ಕಿಂತಲೂ ಭಿನ್ನವೇನಲ್ಲ. ಅದರ ಫಲಿತಾಂಶವು ಭಿನ್ನವಾಗುವುದಿಲ್ಲ.

ತಾಷ್ಕೆಂಟ್ ಒಪ್ಪಂದದ ಚರ್ಚೆ ಮಾಡುವ ಮುನ್ನ ಇದರ ಮೂಲರೂಪವನ್ನು ಆಮೂಲಗ್ರವಾಗಿ ಓದಿಕೊಳ್ಳುವುದು ಉಪಯುಕ್ತವೆನಿಸುತ್ತದೆ. ಮೂಲ ಒಪ್ಪಂದ ರಷ್ಯನ್ ಭಾಷೆಯಲ್ಲಿದೆ. ಅದರ ಇಂಗ್ಲಿಷ್ ಅನುವಾದದ ಮೇಲೆ ಸಹಿಗಳನ್ನು ಹಾಕಲಾಯಿತು. ಇಂಗ್ಲಿಷ್ ಅನುವಾದದ ಹಿಂದೀ ರೂಪಾಂತರ ಕೆಳಕಂಡಂತಿದೆ.

**ತಾಷ್ಕೆಂಟ್ ಒಪ್ಪಂದ**

೧. ಭಾರತದ ಪ್ರಧಾನ ಮಂತ್ರಿ ಮತ್ತು ಪಾಕಿಸ್ತಾನದ ಪ್ರಧಾನರು ತಾಷ್ಕೆಂಟ್‌ನಲ್ಲಿ ಸೇರುವ ಮತ್ತು ಭಾರತ ಮತ್ತು ಪಾಕೀಸ್ತಾನದ ಇಂದಿನ ಸಂಬಂಧಗಳ ಬಗ್ಗೆ ಚರ್ಚಿಸಿದ ನಂತರ ಆ ಮೂಲಕ ದೇಶಗಳ ನಡುವೆ ಸಾಮಾನ್ಯ ಮತ್ತು ಶಾಂತಿಪೂರ್ಣ ಸಂಬಂಧಗಳನ್ನು ಸ್ಥಾಪಿಸಲು ಮತ್ತು ಎರಡೂ ದೇಶದ ನಿವಾಸಿಗಳ ಮಧ್ಯೆ ಅರಿವು ಮತ್ತು ಸೌಹಾರ್ದತೆಯನ್ನು ವೃದ್ಧಿಸಿಕೊಳ್ಳುವ ತಮ್ಮ ಸಂಕಲ್ಪದ ಘೋಷಣೆಯನ್ನು ಮಾಡುತ್ತಾರೆ. ಈ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಭಾರತ ಮತ್ತು ಪಾಕೀಸ್ತಾನದ ಜನರ ಹಿತಕ್ಕಾಗಿ ಇದು ಅತ್ಯಾವಶ್ಯಕವೆಂದು ಭಾವಿಸುತ್ತಾರೆ.

೨. ಭಾರತದ ಪ್ರಧಾನ ಮಂತ್ರಿ ಮತ್ತು ಪಾಕೀಸ್ತಾನದ ಪ್ರಧಾನರು – ಈ ಇಬ್ಬರು ಸಂಯುಕ್ತ ರಾಷ್ಟ್ರ ಸಂಘದ ಘೋಷಣಾಪತ್ರದ ಅನುಸಾರವಾಗಿ ಭಾರತ ಮತ್ತು ಪಾಕಿಸ್ತಾನದಲ್ಲಿ ಒಳ್ಳೆಯ ನೆರೆಹೊರೆಯ ಸಂಬಂಧಗಳನ್ನು ನಿರ್ಮಿಸಿಕೊಳ್ಳಲು ಸಾಕಷ್ಟು ಪ್ರಯತ್ನಶೀಲರಾಗಿರುತ್ತಾರೆ. ಅವರು ಪಾರಸ್ಪರಿಕ ವಿವಾದಗಳನ್ನು ಶಾಂತಿಪೂರ್ವಕವಾಗಿ ಬಗೆಹರಿಸಿಕೊಳ್ಳಲು ಮತ್ತು ಬಲಪ್ರಯೋಗವನ್ನು ಮಾಡದಿರಲು ಸಂಯುಕ್ತ ರಾಷ್ಟ್ರದ ಘೋಷಣಾ ಪತ್ರದ ಅಡಿಯಲ್ಲಿ ತಮ್ಮ ಒಪ್ಪಂದಗಳ ಬಗೆಗೆ ಪುನಃ ನಂಬಿಕೆಯನ್ನು ವ್ಯಕ್ತಪಡಿಸುತ್ತಾರೆ ಎಂಬುದರ ಬಗೆಗೆ ಇಬ್ಬರೂ ಸಹಮತರಾಗಿದ್ದಾರೆ.

೩. ಅವರ ಅಭಿಪ್ರಾಯದಂತೆ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಬಿಗಿ ವಾತಾವರಣ ಇರುವುದರಿಂದಾಗಿ ಅವರ ಕ್ಷೇತ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ಭಾರತ–ಪಾಕ್ ಉಪಮಹಾದ್ವೀಪದ ಶಾಂತಿ ಹಾಗೂ ಎರಡೂ ದೇಶಗಳ ಜನತೆಯ ಹಿತಗಳಿಗೆ ಯಾವುದೇ ಲಾಭವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಬಗೆಗೆ ಚರ್ಚೆಯಾಯಿತು ಹಾಗೂ ಎರಡೂ ಪಕ್ಷಗಳು ತಮ್ಮ ತಮ್ಮ ದೃಷ್ಟಿಕೋನಗಳನ್ನು ಮಂಡಿಸಿದವು.

೪. ಭಾರತದ ಪ್ರಧಾನ ಮಂತ್ರಿ ಮತ್ತು ಪಾಕಿಸ್ತಾನದ ಪ್ರಧಾನರು ಎರಡೂ ದೇಶಗಳ ಸಶಸ್ತ್ರ ವ್ಯಕ್ತಿಗಳೂ ೨೫ ಫೆಬ್ರವರಿ ೧೯೬೬ ಒಳಗೆ ಅವರು ೫ ಆಗಸ್ಟ್ ೧೯೬೫ ಮುಂಚೆ ಇದ್ದಂಥ ಸ್ಥಳಗಳಿಗೆ ಹೋಗಬೇಕು ಮತ್ತು ಎರಡೂ ದೇಶಗಳು ಯುದ್ಧ ವಿರಾಮದ ಗಡಿಯಲ್ಲಿ ಶರತ್ತುಗಳನ್ನು ಪಾಲಿಸಬೇಕು ಎಂಬುದರ ಬಗೆಗೆ ಸಹಮತರಾಗಿದ್ದಾರೆ.

೫. ಭಾರತದ ಪ್ರಧಾನ ಮಂತ್ರಿ ಮತ್ತು ಪಾಕಿಸ್ತಾನದ ಪ್ರಧಾನರು ಎರಡೂ ದೇಶಗಳ ಮಧ್ಯದ ಸಂಬಂಧಗಳ ಆಧಾರವನ್ನು ಒಬ್ಬರು ಇನ್ನೊಬ್ಬರ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದಿರುವ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತಾರೆ.

೬. ಭಾರತದ ಪ್ರಧಾನ ಮಂತ್ರಿ ಮತ್ತು ಪಾಕಿಸ್ತಾನದ ಪ್ರಧಾನರು ಎರಡೂ ಪಕ್ಷಗಳು ಇನ್ನೊಂದು ದೇಶದ ವಿರುದ್ಧ ಪ್ರಚಾರ ಮಾಡುವುದನ್ನು ಸಮರ್ಥಿಸುವುದಿಲ್ಲ ಮತ್ತು ಎರಡೂ ದೇಶಗಳ ಮಧ್ಯೆ ಮೈತ್ರಿಭಾವ ವೃದ್ಧಿಯಾಗುವಂಥ ಪ್ರಚಾರ ಕಾರ್ಯವನ್ನು ಪ್ರೋತ್ಸಾಹಿಸುವರು ಎಂಬ ವಿಚಾರದಲ್ಲಿ ಸಹಮತರಾಗಿದ್ದಾರೆ.

೭. ಭಾರತದ ಪ್ರಧಾನ ಮಂತ್ರಿ ಮತ್ತು ಪಾಕಿಸ್ತಾನದ ಪ್ರಧಾನರು ಪಾಕಿಸ್ತಾನದಲ್ಲಿರುವ ಭಾರತದ ಉಚ್ಚ ಆಯುಕ್ತರು ಹಾಗೂ ಭಾರತದಲ್ಲಿರುವ ಪಾಕಿಸ್ತಾನದ ಉಚ್ಚ ಆಯುಕ್ತರು ತಮ್ಮ ತಮ್ಮ ಹುದ್ದೆಗಳಿಗೆ ವಾಪಸ್ ಬರುತ್ತಾರೆ ಹಾಗೂ ರಾಜತಾಂತ್ರಿಕ ಮಿಷನ್ ಸಾಮಾನ್ಯ ರೀತಿಯಲ್ಲಿ ಕೆಲಸ ಮಾಡುತ್ತದೆ. ರಾಜಕೀಯ ಸಂಬಂಧಗಳ ವಿಚಾರದಲ್ಲಿ ೧೯೬೧ರ ವಿಯನ್ನಾ ಒಪ್ಪಂದಗಳನ್ನು ಎರಡೂ ಪಕ್ಷಗಳು ಪಾಲಿಸುತ್ತವೆ ಎಂದು ಒಪ್ಪಿದರು.

೮. ಭಾರತದ ಪ್ರಧಾನ ಮಂತ್ರಿ ಮತ್ತು ಪಾಕಿಸ್ತಾನದ ಪ್ರಧಾನರು ಎರಡೂ ದೇಶಗಳ ಮಧ್ಯೆ ಆರ್ಥಿಕ ಹಾಗೂ ವಾಣಿಜ್ಯ ಸಂಬಂಧಗಳನ್ನು, ಸಂಚಾರ ವ್ಯವಸ್ಥೆ ಹಾಗೂ ಸಾಂಸ್ಕೃತಿಕ ಆದಾನ–ಪ್ರದಾನದ ವಿಷಯದಲ್ಲಿ ತೆಗೆದುಕೊಳ್ಳುವ ಪರಿಹಾರಗಳನ್ನು ಕುರಿತು ಚರ್ಚಿಸುವರು ಮತ್ತು ಈಗಿನ ಒಪ್ಪಂದಗಳನ್ನು ಪಾಲಿಸಲು ಕ್ರಮ ಕೈಗೊಳ್ಳುವರು ಎಂಬುದನ್ನು ಒಪ್ಪಿದರು.

೯. ಭಾರತದ ಪ್ರಧಾನ ಮಂತ್ರಿ ಹಾಗೂ ಪಾಕಿಸ್ತಾನದ ಪ್ರಧಾನರು ತಮ್ಮ ತಮ್ಮ ದೇಶದ ಅಧಿಕಾರಿಗಳಿಗೆ ಯುದ್ಧ ಕೈದಿಗಳನ್ನು ಅದಲು ಬದಲು ಮಾಡಿಕೊಳ್ಳುವ ವ್ಯವಸ್ಥೆ ಮಾಡಲು ಆದೇಶ ನೀಡುವುದನ್ನು ಮಾನ್ಯ ಮಾಡಬೇಕೆಂದು ತೀರ್ಮಾನಿಸಿದರು.

೧೦. ಭಾರತದ ಪ್ರಧಾನ ಮಂತ್ರಿ ಮತ್ತು ಪಾಕಿಸ್ತಾನದ ಪ್ರಧಾನಮಂತ್ರಿ ಎರಡೂ ದೇಶಗಳ ಶರಣಾರ್ಥಿಗಳನ್ನು ಮತ್ತು ನಿಯಮಬಾಹಿರವಾಗಿ ನುಸುಳಿ ಬಂದವರನ್ನು ಹೊರಹಾಕುವುದರ ಕುರಿತಂತೆ ಬರುವ ಸಮಸ್ಯೆಗಳ ಬಗೆಗೆ ಮಾತುಕತೆಯನ್ನು ಜಾರಿ ಇಡಲು ಒಪ್ಪಿದರು. ಎರಡೂ ದೇಶಗಳಿಂದ ನಿಷ್ಕ್ರಮಣವನ್ನು ತಡೆಯುವಂಥ ವಾತಾವರಣವನ್ನು ಸೃಷ್ಟಿಸಬೇಕು ಎಂಬುದನ್ನೂ ಅವರು ಒಪ್ಪಿದರು. ಯುದ್ಧದ ಕಾಲದಲ್ಲಿ ಇಬ್ಬರಿಂದಲೂ ವಶಪಡಿಸಿಕೊಂಡಿರುವ ಸಂಪತ್ತನ್ನು ಹಿಂತಿರುಗಿಸುವುದನ್ನು ಕುರಿತು ವಿಚಾರ ಮಾಡುವ ಮಾತನ್ನು ಇಬ್ಬರೂ ಒಪ್ಪಿಕೊಂಡರು.

೧೧. ಭಾರತದ ಪ್ರಧಾನ ಮಂತ್ರಿ ಮತ್ತು ಪಾಕಿಸ್ತಾನದ ಪ್ರಧಾನರು ಎರಡೂ ಪಕ್ಷಗಳು ಉನ್ನತ ಮಟ್ಟದಲ್ಲಿ ಮತ್ತು ಉಳಿದ ಹಂತಗಳಲ್ಲಿ ಎರಡೂ ದೇಶಗಳೊಡನೆ ನೇರವಾಗಿ ಸಂಬಂಧಪಟ್ಟ ವಿಷಯಗಳ ಕುರಿತು ಮಾತುಕತೆ ನಡೆಸುತ್ತಿರುತ್ತಾರೆ ಎಂಬ ಅಂಶವನ್ನು ಒಪ್ಪಿಕೊಂಡರು. ಸಂಯುಕ್ತ ಭಾರತ–ಪಾಕ್ ಸಮಿತಿಗಳನ್ನು ರಚಿಸಬೇಕು, ಇವು ತಮ್ಮ ತಮ್ಮ ಸರ್ಕಾರಗಳಿಗೆ ಭವಿಷ್ಯದಲ್ಲಿ ಇನ್ನು ಯಾವ ಯಾವ ವಿಚಾರಗಳನ್ನು ಕುರಿತಂತೆ ಹೆಜ್ಜೆ ಇಡಬೇಕು ಎಂಬುದರ ಅವಶ್ಯಕತೆಯ ಬಗ್ಗೆ ಎರಡೂ ಪಕ್ಷಗಳು ಸಮ್ಮತವಾಗಿವೆ.

೧೨. ಭಾರತದ ಪ್ರಧಾನ ಮಂತ್ರಿ ಹಾಗೂ ಪಾಕಿಸ್ತಾನದ ಪ್ರಧಾನರು ಸೋವಿಯತ್ ನಾಯಕರಿಗೆ ಹಾಗೂ ಸೋವಿಯತ್ ಸರ್ಕಾರ ಮತ್ತು ಸೋವಿಯತ್ ಸಂಘದ ಮಂತ್ರಿಮಂಡಲದ ಅಧ್ಯಕ್ಷರಿಗೆ ವೈಯಕ್ತಿಕವಾಗಿ ಆಭಾರಿಯಾಗಿದ್ದಾರೆ. ಏಕೆಂದರೆ ಅವರು ಇಂದಿನ ಸಭೆಯ ಫಲಶೃತಿಗಳು ಎರಡೂ ದೇಶಗಳಿಗೆ ಸಮಾಧಾನಕಾರಕವಾಗಿದೆ ಎಂದು ಭಾವಿಸಿದ್ದಾರೆ. ಅವರು ಈ ಮಾತುಕತೆಯಲ್ಲಿ ರಚನಾತ್ಮಕ ಹಾಗೂ ಮೈತ್ರಿಪೂರ್ಣ ನೆರವನ್ನು ನೀಡಿದ್ದಾರೆ ಎಂದು ಸ್ಮರಿಸಲಾಯಿತು.

೧೩. ಭಾರತದ ಪ್ರಧಾನ ಮಂತ್ರಿಗಳು ಮತ್ತು ಪಾಕಿಸ್ತಾನದ ಪ್ರಧಾನರು ಉಜಬೇಕಿಸ್ತಾನದ ಮಿತ್ರ ಸರ್ಕಾರ ಮತ್ತು ಜನತೆಯ ಬಗೆಗೂ ಅವರ ಪ್ರೀತಿಯ ಸ್ವಾಗತ ಮತ್ತು ಹಾರ್ದಿಕ ಆತಿಥ್ಯಕ್ಕಾಗಿ ಕೃತಜ್ಞರಾಗಿದ್ದಾರೆ. ಅವರು ಸೋವಿಯತ್ ಸಂಘದ ಮಂತ್ರಿಮಂಡಲದ ಅಧ್ಯಕ್ಷರನ್ನು ಈ ಒಪ್ಪಂದಕ್ಕೆ ಸಾಕ್ಷಿಯಾಗಿರಲು ಆಮಂತ್ರಿಸುತ್ತಾರೆ.

| | |
|---|---|
| ಭಾರತದ ಪ್ರಧಾನ ಮಂತ್ರಿಗಳು | ಪಾಕಿಸ್ತಾನದ ಪ್ರಧಾನರು |
| ಲಾಲ್ ಬಹಾದ್ದೂರ್ ಶಾಸ್ತ್ರಿ | ಮೊಹಮ್ಮದ್ ಅಯೂಬ್ ಖಾನ್ |

**ಸೇರಿಕೊಂಡಿರುವ ವಿಷಯಗಳು**

ಒಪ್ಪಂದದಲ್ಲಿ ಮುಖ್ಯವಾಗಿ ಮೂರು ಬಗೆಯ ಅಂಶಗಳು ಸೇರಿಕೊಂಡಿವೆ:

೧. ಯಾವ ವಿಚಾರಗಳನ್ನು ತೀರ್ಮಾನ ಮಾಡಲಾಯಿತೋ ಆ ವಿಷಯಗಳೆಂದರೆ (ಅ) ೫ ಆಗಸ್ಟ್ ೧೯೬೫ ಹೊತ್ತಿಗೆ ಸಶಸ್ತ್ರ ವ್ಯಕ್ತಿಗಳನ್ನು ವಾಪಸ್ ಕರೆಸಿಕೊಳ್ಳುವುದು. (ಆ) ಯುದ್ಧ ಬಂದಿಗಳನ್ನು ಅದಲು ಬದಲು ಮಾಡುವುದು (ಇ) ರಾಯಬಾರಿ ಕಛೇರಿಗಳನ್ನು ಪುನಃ ಪ್ರಾರಂಭಿಸುವುದು.

೨. ಯಾವ ಸಮಸ್ಯೆಗಳ ಮೇಲೆ ಚರ್ಚೆಯಾಯಿತೋ ಅಥವಾ ಯಾವ ಸಮಸ್ಯೆಗಳನ್ನು ಕುರಿತು ಚರ್ಚೆ ಮಾಡಬೇಕೆಂದು ಒಪ್ಪಲಾಯಿತೋ, ಅವುಗಳ ಪೈಕಿ ಕಾಶ್ಮೀರ ಕುರಿತು ಚರ್ಚಿಸಲಾಯಿತು. ಆದರೆ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಲಿಲ್ಲ. ಶರಣಾರ್ಥಿಗಳ ಮತ್ತು ನಿಯಮಬಾಹಿರವಾಗಿ ನುಸುಳಿದವರ ಸಮಸ್ಯೆ, ಯುದ್ಧದ ಸಂಧರ್ಭದಲ್ಲಿ ಜಪ್ತು ಮಾಡಿದ ಮಾಲುಗಳನ್ನು ಹಿಂತಿರುಗಿಸುವ ಸಮಸ್ಯೆ, ಆರ್ಥಿಕ, ವ್ಯಾಪಾರ ವಹಿವಾಟು ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ಪುನರ್ ಸ್ಥಾಪಿಸುವ ವಿಚಾರದಲ್ಲಿ ಮುಂದೆ ಚರ್ಚಿಸಲಾಗುವುದು ಎಂಬ ನಿರ್ಣಯವನ್ನು ಮಾಡಲಾಯಿತು.

೩. ಒಳ್ಳೆಯ ನೆರೆಹೊರೆ ಮತ್ತು ಶಾಂತಿಯ ಸದುದ್ದೇಶವನ್ನು ವ್ಯಕ್ತಪಡಿಸಲಾಯಿತು. ಇದರಲ್ಲಿ (ಅ) ಸಂಯುಕ್ತ ರಾಷ್ಟ್ರಸಂಘದ ಒಪ್ಪಂದ ಪತ್ರದ ಆಧಾರದ ಮೇಲೆ ಬಲಪ್ರಯೋಗ ಮಾಡದಿರುವಂತೆ ಹಾಗೂ ಎಲ್ಲಾ ಪ್ರಶ್ನೆಗಳನ್ನು ಶಾಂತಿಪೂರ್ವಕವಾಗಿ ಬಗೆಹರಿಸಿಕೊಳ್ಳುವಂತೆ (ಆ) ಒಂದು ದೇಶ ಇನ್ನೊಂದು ದೇಶದ ವಿರುದ್ಧ ಪ್ರಚಾರ ಮಾಡುವುದನ್ನು ನಿರುತ್ಸಾಹಗೊಳಿಸುವ ಹಾಗೂ ಸದ್ಭಾವನೆಗೆ ಪ್ರೋತ್ಸಾಹ ನೀಡುವಂಥ ಪ್ರಚಾರವನ್ನು ಪ್ರೋತ್ಸಾಹಿಸಲು ಘೋಷಣೆಯನ್ನು ಮಾಡಲಾಯಿತು. (ಇ) ಒಂದು ದೇಶ ಇನ್ನೊಂದು ದೇಶದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದಿರುವಂಥ ನೀತಿಯನ್ನು ಅನುಸರಿಸಬೇಕೆಂಬ ತೀರ್ಮಾನ ಮಾಡಲಾಯಿತು. ಏನೆಲ್ಲಾ ವಿಚಾರಗಳನ್ನು ಮುಂದೆ ಚರ್ಚಿಸಲಾಗುವುದೊ ಅವು ಸದಿಚ್ಛೆಯಿಂದ ಕೂಡಿದವಾಗಿವೆ. ಅವುಗಳ ಪರಿಣಾಮಗಳು ಭವಿಷ್ಯದ ಗರ್ಭದಲ್ಲಿ ಅಡಗಿವೆ. ಅವುಗಳನ್ನು ಕುರಿತಂತೆ ಈವರೆಗಿನ ಅನುಭವಗಳ ಆಧಾರದ ಮೇಲೆ ನಮ್ಮ ಅಭಿಪ್ರಾಯಗಳನ್ನು ಅವಶ್ಯ ವ್ಯಕ್ತಮಾಡಬಹುದು. ಆದರೆ ಯಾವುದೇ ನಿರ್ಣಯಾತ್ಮಕ ವಿಚಾರವನ್ನು ನಿರ್ವಿವಾದವಾಗಿ ವ್ಯಕ್ತಪಡಿಸುವಂತಿಲ್ಲ. ಹೀಗಾಗಿ ಅವುಗಳ ಬಗ್ಗೆ ವಿಚಾರ ಮಾಡುವ ಮುನ್ನ ಈಗಾಗಲೇ ನಿರ್ಣಯವಾಗಿರುವ ವಿಚಾರಗಳನ್ನು ಕುರಿತು ಚರ್ಚಿಸುವುದು ಒಳಿತು. ಇದರ ಜೊತೆಗೆ ಯಾವ

ವಿಷಯವನ್ನು ಕುರಿತು ಚರ್ಚೆಯಾಗಿಲ್ಲವೋ ಅದರ ಬಗ್ಗೆಯೂ ಕೊಂಚ ಕೊಂಚ ವಿಚಾರ ಮಾಡುವುದು ಅವಶ್ಯಕ.

**ಒಂದೇ ನೆಲೆಯಲ್ಲಿ ಆಕ್ರಮಣಕಾರಿಗಳು ಮತ್ತು ಆಕ್ರಮಣಕ್ಕೊಳಗಾದವರು**

ಯುದ್ಧದಲ್ಲಿ ಬಂಧಿತರಾದವರನ್ನು ಅದಲು ಬದಲು ಮಾಡುವ ಹಾಗೂ ರಾಯಭಾರ ಕಛೇರಿಗಳನ್ನು ಪುನಃ ತೆರೆಯುವುದನ್ನು ಕುರಿತಂತೆ ಇದು ಉಭಯತ್ರಯರಿಗೂ ಒಪ್ಪಿತ ನಿರ್ಣಯ. ಆದರೆ ಆಗಸ್ಟ್ ೫ರ ಹೊತ್ತಿಗೆ ವಾಪಸ್ಸು ಕರೆಸಿಕೊಳ್ಳಬೇಕೆಂಬ ನಿರ್ಣಯ ಸೈದ್ಧಾಂತಿಕವಾಗಿ ತಪ್ಪು ನಿರ್ಣಯವಾಗಿದೆ. ವ್ಯಾವಹಾರಿಕ ದೃಷ್ಟಿಯಿಂದ ಇದು ಹಿತಕಾರಿಯಾದುದಾಗಿಲ್ಲ ಹಾಗೂ ಸರ್ಕಾರದಿಂದ ದೇಶಕ್ಕೆ ನೀಡಲಾಗಿರುವ ಆಶ್ವಾಸನೆಗಳಿಗೆ ವಿರುದ್ಧವಾಗಿದೆ. ಈ ನಿರ್ಣಯವನ್ನು ನಾವು ಪಾಕೀಸ್ತಾನದೊಂದಿಗೆ ಚರ್ಚಿಸಿ ಸಂಯುಕ್ತ ಒಪ್ಪಂದವಾಗಿ ತೆಗೆದುಕೊಂಡಿದ್ದೆವು ಎಂಬುದು ಇನ್ನೂ ಆಶ್ಚರ್ಯದ ವಿಷಯವಾಗಿದೆ. ಪಾಕೀಸ್ತಾನ ಆಕ್ರಮಣಕಾರಿ ಯಾದದ್ದು ಎಂಬುದು ನಮಗೆ ಗೊತ್ತಿದ್ದು ಇದನ್ನು ನಾವು ಪ್ರಪಂಚದ ಮುಂದೆ ಹೇಳುತ್ತ ಬಂದಿದ್ದೇವೆ. ಪ್ರಧಾನ ಮಂತ್ರಿಗಳಾದ ಶಾಸ್ತ್ರಿಯವರು, ವಿದೇಶಾಂಗ ಮಂತ್ರಿ ಸ್ವರ್ಣಸಿಂಗ್‌ರವರು ಹಾಗೂ ನಮ್ಮೆಲ್ಲ ಪ್ರತಿನಿಧಿಗಳು ಮತ್ತೆ ಮತ್ತೆ ಪ್ರಪಂಚದ ಮುಂದೆ ಪಾಕೀಸ್ತಾನ ಭಾರತದ ಮೇಲೆ ಮೂರು ಬಾರಿ ಆಕ್ರಮಣ ಮಾಡಿದೆ ಎಂದು ಸಾರಿದ್ದಾರೆ: ೧೯೪೭ರ ಅಕ್ಟೋಬರ್‌ನಲ್ಲಿ ಕಾಶ್ಮೀರದಲ್ಲಿ ಮೊದಲ ಸಾರಿ, ೧೯೬೫ರ ಏಪ್ರಿಲ್‌ನಲ್ಲಿ ಕಛ್‌ನಲ್ಲಿ ಎರಡನೆಯ ಸಾರಿ ಮತ್ತೆ ಮೂರನೆಯ ಸಾರಿ ಕಾಶ್ಮೀರದಲ್ಲಿ ೧೯೬೫ರ ಆಗಸ್ಟ್‌ನಲ್ಲಿ. ಪಾಕೀಸ್ತಾನ ಕದನ ವಿರಾಮವನ್ನು ಉಲ್ಲಂಘಿಸಿದ್ದರಿಂದ ಹಾಗೂ ಭಾರಿ ಪ್ರಮಾಣದಲ್ಲಿ ಆಕ್ರಮಣ ಮಾಡಿದ್ದರಿಂದ ಈಚಿನ ಸಂಘರ್ಷವುಂಟಾಯಿತು. ನಾವು ಪಾಕಿಸ್ತಾನವನ್ನು ಆಕ್ರಮಣಕಾರಿ ಎಂದು ಘೋಷಿಸುವಂತೆ ಸುರಕ್ಷಾ ಪರಿಷತ್ತನ್ನು ಕೇಳಿಕೊಂಡಿದ್ದೇವೆ. ಕೇಂದ್ರ ಶಿಕ್ಷಣ ಸಚಿವರಾದ ಎಂ. ಕೆ. ಛಾಗಲಾರು ೧೭ ಸೆಪ್ಟಂಬರ್ ೧೯೬೫ರಂದು ಸುರಕ್ಷಾ ಪರಿಷತ್ರಿನಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಪಾಕೀಸ್ತಾನದ ಆಕ್ರಮಣದ ಚರ್ಚೆಯನ್ನು ತುಂಬಾ ಪ್ರಭಾವಕಾರಿ ಶಬ್ದಗಳಲ್ಲಿ ಮಾಡುತ್ತ ಹೀಗೆ ಹೇಳಿದರು–'ಈ ತಥ್ಯಗಳ ಆಧಾರದ ಮೇಲೆ ಈ ಆಕ್ರಮಣವನ್ನು ನಿಂದಿಸಲಿಲ್ಲವೆಂದ ಮೇಲೆ ಈ ಪರಿಷತ್ತಿನ ಉಪಯೋಗವಾದರೂ ಏನು? ನೀವು ಪ್ರಧಾನ ಕಾರ್ಯದರ್ಶಿಯವರ ನಿವೇದನೆಯನ್ನು ಗೌರವಿಸಬಯಸುವುದಾದರೆ, ನಾನು ಆಗಸ್ಟ್ ೫ರಂದು ಪಾಕಿಸ್ತಾನ ಆಕ್ರಮಣ ಮಾಡಿದರೆ ತಾವು ಈ ಆಕ್ರಮಣವನ್ನು ಖಂಡಿಸಿದ್ದು ಸಂತಸ ತಂದಿದೆ ಎಂದು ಹೇಳಿ ತಮ್ಮ ಕರ್ತವ್ಯವನ್ನು ನಿರ್ವಹಿಸಿ ಎಂಬ ಬೇಡಿಕೆಯನ್ನಿಡುತ್ತೇನೆ. ಇಲ್ಲವಾದರೆ ಅಂತಾರ್‍ರಾಷ್ಟ್ರೀಯ ಕಾನೂನು ನಿರರ್ಥಕವಾಗುತ್ತದೆ ಮತ್ತು

ಅಂತಾರಾಷ್ಟ್ರೀಯ ಸಮಾಜ ಉಳಿಯುವುದಿಲ್ಲ ಎಂದು ನಾನು ಹೇಳುತ್ತೇನೆ. ಇದರಿಂದ ತಮಗೆ ಸಂತೋಷವಾಗುವುದೇನು? ಈ ಆಕ್ರಮಣವನ್ನು ಖಂಡಿಸುವುದು ಮಾತ್ರವಲ್ಲ ಅದು ತನ್ನ ಆಕ್ರಮಣವನ್ನು ನಿಲ್ಲಿಸಬೇಕು ಎಂದು ಪಾಕಿಸ್ತಾನಕ್ಕೆ ಆದೇಶ ನೀಡಬೇಕು. ಒಬ್ಬ ಆಕ್ರಮಣಕಾರಿಗೆ ಆಕ್ರಮಣದ ಲಾಭವನ್ನು ಪಡೆದುಕೊಳ್ಳಲು ಅವಕಾಶ ಕೊಡಲಾಗದು. ಅಧ್ಯಕ್ಷರೆ ಹಾಗೂ ಪರಿಷತ್ತಿನ ಸದಸ್ಯರೆ, ತಮ್ಮಲ್ಲಿ ನನ್ನ ವಿನಮ್ರ ನಿವೇದನೆ ಏನೆಂದರೆ ಆಕ್ರಮಣಕಾರರನ್ನು ಮತ್ತು ಆಕ್ರಮಣಕ್ಕೆ ಬಲಿಯಾದವರನ್ನು ತಾವು ಒಂದೇ ತಕ್ಕಡಿಯಲ್ಲಿಟ್ಟು ತೂಗಬೇಡಿ, ಅವರನ್ನು ಒಂದೇ ಮಾನದಂಡದಿಂದ ಅಳೆಯಬೇಡಿ. ಸೆಪ್ಟಂಬರ್ ೪ ಮತ್ತು ೬ರ ಪ್ರಸ್ತಾಪಗಳನ್ನು ಕುರಿತಂತೆ ನನ್ನ ಆಕ್ಷೇಪಣೆ ಏನೆಂದರೆ ನೀವು ಭಾರತ ಮತ್ತು ಪಾಕೀಸ್ತಾನದೊಂದಿಗೆ ಒಂದೇ ವಿಧವಾಗಿ ವ್ಯವಹಾರ ಮಾಡುತ್ತಿದ್ದೀರಿ. ಹೀಗೆ ಮಾಡುವಾಗ ಪಾಕೀಸ್ತಾನ ಮತ್ತು ಭಾರತ ಯಾವ ರೀತಿ ಕೆಲಸ ಮಾಡಿದವು ಎಂಬುದರ ಬಗ್ಗೆ ಗಮನ ಹರಿಸಲೇ ಇಲ್ಲ. ತಾವು ಅವರಿಗೆ ಒಂದೇ ಬಗೆಯಲ್ಲಿ ವ್ಯವಹರಿಸಲು ಆದೇಶ ನೀಡುತ್ತಿದ್ದೀರಿ.'

'ಕೆಲವು ರಾಷ್ಟ್ರಗಳು ನಿಷ್ಪಕ್ಷತೆಯ ಮಾತುಗಳನ್ನು ಆಡುತ್ತವೆ. ಅವು ಭಾರತ ಮತ್ತು ಪಾಕೀಸ್ತಾನದ ಮಧ್ಯೆ ನಿಷ್ಪಕ್ಷವಾಗಿರಲು ಬಯಸುತ್ತವೆ. ಸಭಾಧ್ಯಕ್ಷರೆ, ತಾವು ನ್ಯಾಯಾಧೀಶರಾಗಿದ್ದವರು, ನಾನು ಸಹ ೧೭ ವರ್ಷಗಳ ಕಾಲ ನ್ಯಾಯಾಧೀಶನಾಗಿದ್ದವನು, ನನ್ನ ಮುಂದೆ ಎರಡು ಪಕ್ಷಗಳು ಬಂದಾಗ ನಾನು ನಿಷ್ಪಕ್ಷನಾಗಿರಬಲ್ಲೆ ಎಂದು ಹೇಳಲಾರೆ. ಸರಿ ಯಾರದ್ದು, ತಪ್ಪು ಯಾರದ್ದು ಎಂಬುದರ ನಿರ್ಣಯವನ್ನು ನಾನು ಮಾಡಲೇ ಬೇಕಾಗುತ್ತದೆ. ತಾವು ನ್ಯಾಯ ನೀಡಲು ಕುಳಿತಿದ್ದೀರಿ. ಸುರಕ್ಷಾ ಪರಿಷತ್ತು ಭಾರತ ಮತ್ತು ಪಾಕೀಸ್ತಾನದ ಮಧ್ಯೆ ನಿಷ್ಪಕ್ಷವಾಗಿದೆ ಎಂದು ಹೇಳುವುದು ತಪ್ಪಾಗುತ್ತದೆ. ಇದು ಸಂಪೂರ್ಣವಾಗಿ ತಪ್ಪಾದ ಮತ್ತು ದೌರ್ಬಲ್ಯದ ದೃಷ್ಟಿಕೋನವಾಗುತ್ತದೆ. ಈ ನಿಲುವಿನಿಂದ ಸುರಕ್ಷಾ ಪರಿಷತ್ತಿನ ಉಪಯುಕ್ತತೆ ಖಂಡಿತ ಕೊನೆಗೊಳ್ಳುವುದು. ತಾವು ಸತ್ಯವನ್ನು ಯಥಾರ್ಥ ರೂಪದಲ್ಲಿ ನೋಡಬೇಕಾದಂಥ ಸಮಯ ಈಗ ಬಂದಿದೆ. ಇಂದಿನವರೆಗೂ ಸುರಕ್ಷಾ ಪರಿಷತ್ತು ವಿಷಯದಲ್ಲಿ ಹಿಂದು ಮುಂದು ನೋಡುತ್ತಾ ಬಂದಿದೆ. ಆದರೆ ಇತಿಹಾಸದಲ್ಲಿ ಎಂಥ ಸಂಧರ್ಭಗಳು ಬರುತ್ತವೆ. ಇಂದು ಅಂಥ ಸಂದರ್ಭ ಬಂದಿದೆ. ಸುರಕ್ಷಾ ಪರಿಷತ್ತು ಸತ್ಯವನ್ನು ಆಡಲೇಬೇಕಾಗಿದೆ.

**ಪಾಕಿಸ್ತಾನ ಪಶ್ಚಾತ್ತಾಪಪಡಲಿಲ್ಲ**

ಸುರಕ್ಷಾ ಪರಿಷತ್ತು ಇಷ್ಟು ಕಠೋರವಾದ ಶಬ್ದಗಳಲ್ಲಿ ಹೇಳಿದರೂ ನಾವು ಮಾಡಿದ್ದು ಏನೆಂದರೆ ವಿಶ್ವದ ಬಗೆಗೆ ನಾವು ನಮ್ಮ ಕೋಪವನ್ನು ವ್ಯಕ್ತಪಡಿಸುತ್ತಲೇ

ಬಂದಿದ್ದೇವೆ. ನಾವು ತಾಷ್ಕೆಂಟ್‌ಗೆ ಹೋಗಿ ಆಕ್ರಮಣಕಾರಿ ದೇಶದೊಂದಿಗೆ ಸರಿಸಮನಾಗಿ ಕುಳಿತು ಮಾತನಾಡಿದ್ದಷ್ಟೇ ಅಲ್ಲ. ಅಲ್ಲಿ ತೆಗೆದುಕೊಂಡ ನಿರ್ಣಯಗಳು ಇಬ್ಬರಿಗೂ ಸಮಾನವಾಗಿ ಅನ್ವಯವಾಗುತ್ತವೆ ಎಂದೆವು. ಈ ಒಪ್ಪಂದದಲ್ಲಿ ಎಲ್ಲಿಯಾದರೂ ಪಾಕಿಸ್ತಾನಕ್ಕೆ ತಾನು ಮಾಡಿದ್ದರ ಬಗ್ಗೆ ಖೇದವಿದೆ ಎಂಬ ಉಲ್ಲೇಖ ಮಾಡುವ ಒಂದಾದರೂ ಶಬ್ದವಿದೆಯೇ? ಪಾಕಿಸ್ತಾನದಿಂದ ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ್ತ ಮಾಡಿಸಬೇಕಾದ ಅನಿವಾರ್ಯತೆ ಇತ್ತು. ಯಾವುದೇ ಕಾರಣವಿಲ್ಲದೆ ಅದು ಭಾರತವಷ್ಟೇ ಅಲ್ಲ ವಿಶ್ವದ ಶಾಂತಿಯನ್ನು ಭಂಗಗೊಳಿಸಿತು. ಇಷ್ಟವಿಲ್ಲದಿದ್ದರೂ ಭಾರತಕ್ಕೆ ಯುದ್ಧ ಮಾಡಬೇಕಾಗಿ ಬಂತು. ಈ ಯುದ್ಧದಲ್ಲಿ ನಮ್ಮ ಸುಮಾರು ೫೦೦ ಕೋಟಿ ರೂಪಾಯಿಗಳು ವ್ಯಯವಾಗಿವೆ ಎಂದು ಅಂದಾಜು ಮಾಡಲಾಗಿದೆ. ರಾಷ್ಟ್ರೀಯ ಆಸ್ತಿಯ ಏನೆಲ್ಲಾ ಹಾನಿಯಾಗಿದೆ ಹಾಗೂ ನಮ್ಮ ವಿಕಾಸ ಪ್ರಕ್ರಿಯೆಯಲ್ಲಿ ಏನೆಲ್ಲಾ ಪರಿಣಾಮಗಳು ಆಗಿವೆಯೋ ಇವು ಪ್ರತ್ಯೇಕ ವಿಷಯಗಳು. ನಮ್ಮ ಎಷ್ಟೋ ಸಾವಿರ ಯೋಧರು ಈ ಯುದ್ಧದಲ್ಲಿ ವೀರಸ್ವರ್ಗವನ್ನು ಸೇರಿಕೊಂಡರು. ಅನೇಕ ತಾಯಂದಿರ ಮಡಿಲುಗಳು ಬರಿದಾದುವು. ಎಷ್ಟೋ ಸೋದರಿಯರ ಕುಂಕುಮ ಅಳಿಸಿಹೋಯಿತು. ಬಹಳಷ್ಟು ಜನ ಗಾಯಗೊಂಡು ಜೀವನೋಪಾಯಗಳನ್ನು ಮಾಡಿಕೊಳ್ಳಲು ಅಸಮರ್ಥರಾದರು. ಈ ಎಲ್ಲಾ ಕಷ್ಟಗಳ ತ್ಯಾಗಗಳ ಮತ್ತು ಬಲಿದಾನಗಳ ಬಗೆಗೆ ನಮಗೆ ಹೆಮ್ಮೆಯಿದೆ. ಭಾರತಮಾತೆಯ ಈ ಮಕ್ಕಳು ತಮ್ಮ ಪರಾಕ್ರಮದಿಂದ ಭಾರತದ ಗೌರವವನ್ನು ಆಕಾಶದೆತ್ತರಕ್ಕೆ ಏರಿಸಿದರು. ಈಗ ಈ ಆಕ್ರಮಣಕಾರಿಗಳಿಗೆ ಯಾವ ಶಿಕ್ಷೆಯನ್ನು ಕೊಡಬೇಕು. ಎಂಬ ಪ್ರಶ್ನೆ ಉದ್ಭವಿಸಿದೆ. ಪಾಕೀಸ್ತಾನ ತನಗೂ ನಷ್ಟವಾಗಿದೆ, ತನ್ನ ಅಭಿವೃದ್ಧಿಗೂ ಧಕ್ಕೆಯಾಗಿದೆ ಎಂದು ಹೇಳಿದರೆ ಇದು ನ್ಯಾಯ ಮತ್ತು ವ್ಯಾವಹಾರಿಕ ದೃಷ್ಟಿಯಿಂದ ಸರಿಯಾಗುವುದಿಲ್ಲ. ಆಕ್ರಮಣಕಾರಿಗಳಿಗೆ ಶಿಕ್ಷಿಸಲಾಗದ ದೇಶದಿಂದ ಎಂದಿಗೂ ತನ್ನ ರಕ್ಷಣೆಗೆ ಶಾಶ್ವತವಾದ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗುವುದಿಲ್ಲ.

**ಮರೆತ ವಿಜಯ**

ಪಾಕಿಸ್ತಾನದ ಆಕ್ರಮಣದ ಮುಂದೆ ನಮ್ಮ ಸೈನ್ಯ ನಿಲ್ಲಲಾಗದಿದ್ದ ಪಕ್ಷದಲ್ಲಿ ನಾವು ಒಮ್ಮೆಗೆ ಗಟ್ಟಿ ಮನಸ್ಸು ಮಾಡಿ ಸೋತು ಕುಳಿತುಬಿಡುತ್ತಿದ್ದೆವು. ಆದರೆ ನಮ್ಮ ವೀರ ಸೈನಿಕರು ಆಕ್ರಮಣಕಾರಿಗಳಿಗೆ ಬುದ್ಧಿ ಕಲಿಸಿ ತಕ್ಕ ಪಾಠ ಹೇಳಿದ್ದಾರೆ. ಸೈನ್ಯ ವಿಜಯಶ್ರೀಯನ್ನು ವರಿಸಿದೆ. ಕಳ್ಳನನ್ನು ಹಿಡಿದ ನಂತರವೂ ಅವನಿಗೆ ಶಿಕ್ಷೆಯಾಗದಿದ್ದರೆ ಮನಸ್ಸಿಗೆ ಏನು ಅನ್ನಿಸಬಹುದು ಹೇಳಿ? ಇದರಿಂದ ಕಳ್ಳನಿಗೆ ಕಳ್ಳತನ ಮಾಡುವ ಅಭ್ಯಾಸ ತಪ್ಪುವುದೇ? ಪ್ರಪಂಚದ ನ್ಯಾಯ ಮತ್ತು ನಿಯಮಗಳ ವ್ಯವಸ್ಥೆ ಸರಿ

ಇರುವುದೇ? ತಾಷ್ಕೆಂಟಿಗೆ ಭಾರತ ಜಯಶೀಲವಾಗಿ ಹೋಗಿತ್ತು. ಆದರೆ ಅದು ಒಂದು ಪರಾಜಿತ ದೇಶವೂ ಮಾಡಿಕೊಳ್ಳಲಾರದಂಥ ಒಪ್ಪಂದವನ್ನು ಮಾಡಿಕೊಂಡಿತು. ರಷ್ಯಾ ಯುದ್ಧಗಳನ್ನು ಮಾಡಿದೆ. ಅದು ಪರಾಜಿತ ದೇಶಗಳ ಬಗೆಗೆ ಹೇಗೆ ವ್ಯವಹರಿಸಿದೆ ಎಂಬುದು ನಮಗೆ ಗೊತ್ತಿದೆ. ಇಂದು ಅದು ನಮಗೆ ತದ್ವಿರುದ್ಧ ವ್ಯವಹರಿಸುವ ಸಲಹೆ ಕೊಟ್ಟರೆ ಅದು ಭಾರತದ ಹಿತಗಳನ್ನು ಮತ್ತು ಗೌರವವನ್ನು ಗಮನದಲ್ಲಿಟ್ಟುಕೊಂಡಿಲ್ಲ ಎಂದು ಹೇಳಬೇಕಾಗುತ್ತದೆ.

**ನಷ್ಟವನ್ನು ಏಕೆ ತುಂಬಬಾರದು?**

ಯುದ್ಧವಷ್ಟೇ ಅಲ್ಲ ನಮ್ಮ ರಾಯಭಾರ ಕಛೇರಿಗಳ ಮೇಲೂ ಕರಾಚಿಯಲ್ಲಿ ಯಾವ ಆಕ್ರಮಣವಾಗಿದೆಯೊ ಹಾಗೂ ಅಲ್ಲಿನ ನೌಕರರಿಗೆ ಏನೆಲ್ಲಾ ನಷ್ಟವಾಗಿದೆಯೊ ಅದರ ವಿಷಯದಲ್ಲಿ ಸಹ ನಾವು ನಮ್ಮ ಹಕ್ಕೊತ್ತಾಯಗಳನ್ನು ನಾವಾಗಿಯೇ ಕೊನೆಗೊಳಿಸಿದ್ದೇವೆ. ಅಕ್ಟೋಬರ್ ೫, ೧೯೫೫ ರಂದು ನಾವು ಪಾಕೀಸ್ತಾನಕ್ಕೆ ಒಂದು ವಿರೋಧಿಸುವ ಪತ್ರವನ್ನು ನೀಡಿದ್ದೆವು. ಅದರಲ್ಲಿ ನಾವು ಪಾಕೀಸ್ತಾನ ಈ ದುರ್ಘಟನೆಗೆ ಸಂಬಂಧಿಸಿದಂತೆ ಕ್ಷಮೆ ಯಾಚಿಸಬೇಕು ಮತ್ತು ಆಗಿರುವ ನಷ್ಟವನ್ನು ತುಂಬಿಕೊಡಬೇಕು ಎಂದು ಒತ್ತಾಯಿಸಿದೆವು. ಶಾಸ್ತ್ರಿಯವರು ರಾಯಭಾರ ಕಛೇರಿಗಳನ್ನು ಮತ್ತೆ ಪ್ರಾರಂಭಿಸುವಾಗ ಚರ್ಚೆಯ ಸಂದರ್ಭದಲ್ಲಿ ಪಾಕ್‌ನ ಪ್ರಧಾನ ಮಂತ್ರಿ ಅಯೂಬ್‌ಖಾನ್‌ರಲ್ಲಿ ಈ ಬೇಡಿಕೆಯನ್ನು ಪುನಃ ಇಟ್ಟಿದ್ದರೇನು? ಹಾಗೆ ಇಟ್ಟಿಲ್ಲದಿದ್ದಲ್ಲಿ ನಮ್ಮ ವಿರೋಧವನ್ನು ಸೂಚಿಸುವ ಪತ್ರಗಳನ್ನು ಯಾಕಾದರೂ ಕಳಸಬೇಕಿತ್ತು? ನಮ್ಮ ಪತ್ರಗಳಿಗೆ ನಾವೇ ಬೆಲೆಯನ್ನು ಕೊಡಲು ತಯಾರಿಲ್ಲವೆಂದ ಮೇಲೆ ಬೇರೆಯವರು ಅವನ್ನು ಕಸದ ಬುಟ್ಟಿಗೆ ಹಾಕಿದರೂ ಆಶ್ಚರ್ಯ ಪಡುವಂಥಾದ್ದೇನಿದೆ?

**ಆಗಸ್ಟ್ ೫ ಒಂದು ದಿನಾಂಕವಷ್ಟೇ, ಗಡಿರೇಖೆಯಲ್ಲ**

ಎರಡೂ ದೇಶಗಳ ಸಶಸ್ತ್ರ ವ್ಯಕ್ತಿಗಳನ್ನು ೫ ಆಗಸ್ಟ್ ೧೯೬೫ಕ್ಕಿಂತಲೂ ಮುಂಚೆ ಇದ್ದ ಸ್ಥಿತಿಗೆ ವಾಪಸ್ಸು ಕರೆಸಿಕೊಳ್ಳುವುದು ಹಾಗೂ ಯುದ್ಧ ವಿರಾಮರೇಖೆಯನ್ನು ಪಾಲಿಸುವ ತೀರ್ಮಾನ ಮಾಡಿದ್ದು ತಾಷ್ಕೆಂಟ್ ಒಪ್ಪಂದದ ಎಲ್ಲಕ್ಕಿಂತ ಮಹತ್ವದ ತೀರ್ಮಾನವಾಗಿವೆ. ಈ ತೀರ್ಮಾನಗಳಿಂದ ಇಡೀ ದೇಶಕ್ಕೆ ಘೋರ ನಿರಾಸೆಯಾಗಿದೆ. ಇದರ ಮೂಲಕ ಭಾರತ ಸರ್ಕಾರ ಮತ್ತು ಅದರ ಪ್ರತಿನಿಧಿಗಳು ಮತ್ತೆ ಮತ್ತೆ ಹೇಳುತ್ತ ಬಂದಿದ್ದ ಮಾತುಗಳನ್ನು ಸುಳ್ಳು ಎಂದು ಹೇಳಿದಂತಾಯಿತು. ಪ್ರಧಾನಮಂತ್ರಿ ಶಾಸ್ತ್ರೀ ಹಾಗೂ ಉಳಿದ ಎಲ್ಲ ವಕ್ತಾರರು

ಭಾರತದ ಸೈನ್ಯದ ತುಕಡಿಗಳು ಕಾರ್ಗಿಲ್ ಶಿಖರಗಳಿಂದ ಹಾಗೂ ಉಡೀ–ಪೂಂಛ್ ಮತ್ತು ಟಿಥ್‌ವಾಲ್ ಕ್ಷೇತ್ರಗಳಿಂದ ಯಾವುದೇ ಸಂದರ್ಭದಲ್ಲೂ ವಾಪಸ್ಸು ಬರುವುದಿಲ್ಲ ಎಂಬ ವಿಷಯವನ್ನು ಅನೇಕ ಸಾರಿ ಸ್ಪಷ್ಟಪಡಿಸಿದ್ದರು. ಇನ್ನು ಆಗಸ್ಟ್ ೫ ರ ದಿನಾಂಕವಿದೆಯಲ್ಲ, ಅದರ ವಿಷಯಕ್ಕೆ ಬಂದರೆ ಭಾರತ ಅದನ್ನು ಎಂದೂ ಒಪ್ಪಿರಲಿಲ್ಲ. ಹಳೆಯ ಯುದ್ಧವಿರಾಮ ರೇಖೆಯನ್ನು ಪಾಕಿಸ್ತಾನವು ಆಕ್ರಮಣ ಮಾಡಿ ಅದನ್ನು ಕೊನೆಗಾಣಿಸಿತು ಹಾಗೂ ಅದನ್ನು ಮತ್ತೆ ಎಳೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎಂ. ಕೆ. ಛಗಲಾ ಸುರಕ್ಷಾ ಪರಿಷತ್ತಿನಿಂದ ಹಿಂತಿರುಗಿ ೨೦ ಸೆಪ್ಟೆಂಬರ್ ೧೯೬೫ರಂದು ಲೋಕಸಭೆಯಲ್ಲಿ ಮಾಡಿದ ಭಾಷಣದಲ್ಲಿ ಆಗಸ್ಟ್ ೫ ರ ಮಹತ್ವವನ್ನು ಅವಶ್ಯ ಹೇಳಿದ್ದರು. ಆಗಸ್ಟ್ ೫ ರ ಗಡುವನ್ನು ಅಥವಾ ಸ್ಥಿತಿಯನ್ನು ಭಾರತ ಒಪ್ಪಿದೆ ಎಂದು ಯಾವಾಗಲೂ ಹೇಳಿರಲಿಲ್ಲ. ಆಗಸ್ಟ್ ದಿನಾಂಕ ೫ ಪಾಕಿಸ್ತಾನ ಆಕ್ರಮಣ ಮಾಡಿದ ದಿನ. ಈ ದೃಷ್ಟಿಯಿಂದ ಅದಕ್ಕೆ ಖಂಡಿತ ಮಹತ್ವವಿದೆ. ಆದರೆ ತಾಷ್ಕೆಂಟ್ ಒಪ್ಪಂದದಲಿ ಎಲ್ಲಕ್ಕಿಂತ ಹೆಚ್ಚಾಗಿ ಗಮನಿಸಬೇಕಾದ ಸಂಗತಿಯೆಂದರೆ ಆಗಸ್ಟ್ ೫ ರಂದು ಪಾಕಿಸ್ತಾನದಲ್ಲಿ ಆಕ್ರಮಣವನ್ನು ಕುರಿತಂತೆ ಯಾವ ಚರ್ಚೆಯೂ ಆಗಲಿಲ್ಲ. ಆದರೆ ೫ನೇ ಆಗಸ್ಟ್‌ಗಿಂತ ಮುಂಚಿನ ಸ್ಥಿತಿಯನ್ನು ನಮ್ಮ ಮೇಲೆ ಖಂಡಿತ ಹೇರಲಾಯಿತು.

**ನುಸುಳುಕೋರರನ್ನು ಏನು ಮಾಡಬೇಕು?**

ಆಗಸ್ಟ್ ೫ ರ ಮಹತ್ವವನ್ನು ಇನ್ನೊಂದು ಕಾರಣಕ್ಕೂ ಹೇಳಲಾಗುತ್ತದೆ. ಸಂಯುಕ್ತ ರಾಷ್ಟ್ರ ಸಂಘದ ಮಹಾಕಾರ್ಯದಶಿಯವರ ರಿಪೋರ್ಟ್‌ಗನುಗುಣವಾಗಿ ಈ ದಿನಾಂಕದಂದೇ ಪಾಕಿಸ್ತಾನ ಆಕ್ರಮಣಕಾರಿಗಳು ಕಾಶ್ಮೀರದ ಒಳಗೆ ನುಗ್ಗಿ ಬಂದರು. ಇದರ ಆಧಾರದ ಮೇಲೆ ಪಾಕೀಸ್ತಾನ ಮುಸ್ಲಿಂ ಬಾಂಧವರನ್ನು ಕಳುಹಿಸುವ ತನ್ನ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದು ಹಾಗೂ ಅವರನ್ನು ವಾಪಸ್ ಕರೆಸಿಕೊಳ್ಳುವುದು ಎಂಬ ತರ್ಕವನ್ನು ನೀಡಲಾಯಿತು. ಆದರೆ ತಾಷ್ಕೆಂಟ್ ಒಪ್ಪಂದದಲ್ಲಿ ಈ ಎರಡರಲ್ಲಿ ಯಾವುದರ ಉಲ್ಲೇಖವೂ ಇಲ್ಲ. ಪಾಕಿಸ್ತಾನ ನುಗ್ಗಿ ಬಂದವರ ಬಗೆಗೆ ತನ್ನ ಜವಾಬ್ದಾರಿಯನ್ನು ತೆಗೆದುಕೊಂಡಿಲ್ಲ ಹಾಗೂ ಅವರನ್ನು ವಾಪಸ್ಸು ಕರೆಸಿಕೊಳ್ಳುವುದಕ್ಕೆ ತಾನು ತಯಾರು ಎಂದು ಹೇಳಿಲ್ಲ. ಈ ಒಪ್ಪಂದದಲ್ಲಿ ಸುರಕ್ಷಾ ಪರಿಷತ್ತಿನಿಂದ ಎರವಲಾಗಿ ಪಡೆದು ಸೈನ್ಯದ ಜಾಗದಲ್ಲಿ ಸಶಸ್ತ್ರವ್ಯಕ್ತಿ' ಎಂಬ ಶಬ್ದವನ್ನು ಬಳಸಲಾಗಿದೆ. ಈ ಶಬ್ದದಲ್ಲಿ 'ಸಶಸ್ತ್ರವಾಗಿ ನುಗ್ಗಿದವರೂ' ಸೇರಿಕೊಳ್ಳುತ್ತಾರೆ. ಆದರೆ ಒಪ್ಪಂದಕ್ಕೆ ಸಹಿಯಾಗುತ್ತಿದ್ದಂತೆಯೇ ತಾಷ್ಕೆಂಟ್‌ನಲ್ಲಿಯೇ ಪಾಕೀಸ್ತಾನಿ ವಕ್ತಾರ 'ವ್ಯಕ್ತಿಗಳಲ್ಲಿ ನುಗ್ಗಿ ಬಂದವರು ಸೇರುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಈಚೆಗೆ ಭಾರತ ಮತ್ತು ಪಾಕಿಸ್ತಾನದ ಸೇನಾಧಿಪತಿಗಳ ಸಂಯುಕ್ತ ಸಭೆಯಲ್ಲಿ ಸಶಸ್ತ್ರ ವ್ಯಕ್ತಿಗಳನ್ನು ವಾಪಸ್ ಕರೆಸಿಕೊಳ್ಳುವುದರ ಬಗೆಗೆ ಏನು ಯೋಜನೆ ಸಿದ್ಧವಾಗಿದೆಯೋ ಅದರಲ್ಲೂ ನುಗ್ಗಿ ಬಂದವರ ಬಗೆಗೆ ಯಾವುದೇ ಉಲ್ಲೇಖವಿಲ್ಲ. ಭಾರತ ಸರ್ಕಾರ ಇಲ್ಲಿಯತನಕ ಮಾಡಿರುವ ವ್ಯವಸ್ಥೆ ಕೇವಲ ಭಾರತದ ಜನತೆಯನ್ನು ಕತ್ತಲಿನಲ್ಲಿಡಲು ಮಾರಕವಾಗಿದೆಯೇ ಹೊರತಾಗಿ ಅದು ವ್ಯವಹಾರದಲ್ಲಲ್ಲ ಎಂಬ ತೀರ್ಮಾನಕ್ಕೆ ಬರೋಣವೇ? ಅಥವಾ ಈ ವಿಷಯದಲ್ಲಿಯೂ ನಾವು ನಮ್ಮ ಹೆಜ್ಜೆಯನ್ನು ಹಿಂದಕ್ಕೆ ಇಟ್ಟಿದ್ದೇವೆ ಎಂದು ಭಾವಿಸಬಹುದೇ?

## ಮುಕ್ತ ಪ್ರದೇಶಗಳ ಮಹತ್ವ

ಅಧಿಕೃತ ಕಾಶ್ಮೀರದಲ್ಲಿ ಯಾವ ಸ್ಥಳಗಳನ್ನು ತೆರವುಗೊಳಿಸಿ ಅವನ್ನು ನಾವು ನಮ್ಮ ವಶಕ್ಕೆ ತೆಗೆದುಕೊಂಡಿರುವುದಕ್ಕೆ ಪಾಕಿಸ್ತಾನದ ಬಳಿ ಎರಡು ಆಧಾರಗಳಿದ್ದವು. ಮೊದಲನೆಯದು, ಕಾನೂನಿನ ದೃಷ್ಟಿಯಿಂದ ಅವು ನಮ್ಮವು. ಹೀಗಾಗಿ ಅವುಗಳನ್ನು ಗುಲಾಮಗಿರಿಯ ಮುಷ್ಟಿಯಿಂದ ಬಿಡುಗಡೆಗೊಳಿಸುವುದು ನಮ್ಮ ಜವಾಬ್ದಾರಿಯಾಗಿದ್ದು ಇದನ್ನು ನಾವು ಈ ಸಂದರ್ಭದಲ್ಲಿ ಪಾಲಿಸಿದ್ದೇವೆ. ಎರಡನೆಯದು, ಈ ಪ್ರದೇಶಗಳು ಕದನಗಳ ದೃಷ್ಟಿಯಿಂದ ಮಹತ್ವದಾಗಿವೆ. ಏಕೆಂದರೆ ಈ ಮಾರ್ಗವಾಗಿಯೇ ಪಾಕಿಸ್ತಾನ ನುಗ್ಗುವವರನ್ನು ಕಳಿಸುತ್ತಿದೆ. ಕಾರ್ಗಿಲ್ ಪರ್ವತ ಶ್ರೇಣಿಗಳು ನಮ್ಮ ಶ್ರೀನಗರ ಕಣಿವೆಗಳು ಮಾರ್ಗದ ಸುರಕ್ಷತೆಯ ದೃಷ್ಟಿಯಿಂದ ಆವಶ್ಯಕವಾಗಿವೆ. ತಾಷ್ಕೆಂಟ್ ಒಪ್ಪಂದದಲ್ಲಿ ಈ ಪ್ರದೇಶಗಳನ್ನು ಖಾಲಿ ಮಾಡುವ ನಿರ್ಣಯವನ್ನು ನಮ್ಮ ಮೇಲೆ ಕಾಣಿಸಿದ ಕಾರಣದಿಂದ ಪ್ರತಿಕೂಲ ಪ್ರಭಾವವನ್ನು ಮಾಡುವುದು.

ಭಾರತ ಈ ಪ್ರದೇಶಗಳನ್ನು ಎಂದೂ ತೆರವು ಮಾಡುವುದಿಲ್ಲ ಎಂದು ನಾವು ಅನೇಕ ಸಾರಿ ಘೋಷಿಸಿದ್ದೇವೆ. ಇಷ್ಟೇ ಅಲ್ಲ. ಈ ಕ್ಷೇತ್ರಗಳನ್ನು ಬಿಡುಗಡೆಗೊಳಿಸಿದ ನಂತರ ನಾವು ಅಲ್ಲಿ ಸಾಮಾನ್ಯ ಆಡಳಿತವನ್ನು ಜಾರಿಗೊಳಿಸಲು ಹಾಗು ಅವುಗಳಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುವ ವ್ಯವಸ್ಥೆಯನ್ನು ಮಾಡಿದ್ದೆವು. ಹೊಸ ದೆಹಲಿಯಿಂದ ಪ್ರಕಟವಾಗುವ 'ಹಿಂದೂಸ್ತಾನ್ ಟೈಮ್ಸ್'ನ ಅಕ್ಟೋಬರ್ ೨೩ರ ಸಂಚಿಕೆಯಲ್ಲಿ ಶ್ರೀನಗರದಿಂದ ೨೨ ಅಕ್ಟೋಬರ್‌ನ ಒಂದು ಸುದ್ದಿ ಪ್ರಕಟವಾಯಿತು. ಇದರಲ್ಲಿ ಕಾಶ್ಮೀರ ಸರಕಾರ ಹಾಜಿಪೀರ್ ಪ್ರದೇಶದಲ್ಲಿ ಸಾಮಾನ್ಯ ನಾಗರಿಕ ಆಡಳಿತವನ್ನು ಜಾರಿಗೊಳಿಸಲಾಗಿದೆ ಎಂದು ಹೇಳಲಾಗಿತ್ತು. ಈ ಪ್ರದೇಶದ ನೂರು ಹಳ್ಳಿಗಳ ಒಂದು ಪ್ರತ್ಯೇಕ ಪಟ್ಟಣವನ್ನು ನಿರ್ಮಿಸಲಾಗಿದೆ. ಒಬ್ಬ ಅಸಿಸ್ಟೆಂಟ್ ಕಮೀಷನರ್, ಒಬ್ಬ ತಹಶೀಲ್ದಾರ್, ಇಬ್ಬರು ಶಿರಸ್ತೆದಾರರು,

ಐವರು ಕಂದಾಯ ಅಧಿಕಾರಿಗಳು ಮತ್ತು ಇಪ್ಪತ್ತು ಮಂದಿ ಶಾನುಭೋಗರನ್ನು ಈ ಕ್ಷೇತ್ರಕ್ಕೆ ನಿಯೋಜಿಸಲಾಗಿದೆ ಎಂಬ ಉಲ್ಲೇಖವಿದೆ.

ಇದೇ ರೀತಿ 'ಹಿಂದೂಸ್ತಾನ್ ಟೈಮ್ಸ್'ನ ೭ನೇ ನವೆಂಬರ್ ೧೯೬೫ರ ಸಂಚಿಕೆಯಲ್ಲಿ ಹಾಜ್‌ಪೀರ್ ಪಟ್ಟಣವನ್ನು ದೇಶದ ಇನ್ನಿತರೆ ಪ್ರದೇಶಗಳೊಂದಿಗೆ ಟೆಲಿಫೋನ್‌ನಿಂದ ಸಂಪರ್ಕ ಕಲ್ಪಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಅದೇ ದಿನ ಉಡೀ ಮತ್ತು ಪೂಂಛ್‌ಗೆ ಸಂಪರ್ಕ ಕಲ್ಪಿಸುವ ೩೫ ಮೈಲಿ ಉದ್ದದ ಮತ್ತು ನೇರವಾದ ರಸ್ತೆಯನ್ನು ದುರಸ್ತಿಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ ಎಂಬ ಸುದ್ದಿಯು ಪ್ರಕಟವಾಯಿತು.

ಇಲ್ಲಿ ಉದ್ಭವಿಸುವ ಪ್ರಶ್ನೆಯೆಂದರೆ ಈ ಪ್ರದೇಶಗಳಿಂದ ನಮ್ಮ ಸೈನ್ಯವನ್ನು ವಾಪಸ್ ಕರೆಸಿಕೊಳ್ಳಬೇಕೆಂದಿದ್ದರೆ ಅಲ್ಲಿ ಈ ಎಲ್ಲಾ ವ್ಯವಸ್ಥೆಗಳನ್ನು ಏಕಾದರೂ ಮಾಡಲಾಯಿತು? ಅವುಗಳನ್ನೂ ಲಾಹೋರ್ ಸಿಯಾಲ್ ಕೋಟೆಗಳಂತೆ ಸೈನಿಕ ಆಡಳಿತದ ಅಧೀನದಲ್ಲಿ ಇಡಬಹುದಾಗಿತ್ತು. ನಾಗರಿಕ ಆಡಳಿತಕ್ಕೆ ಇಷ್ಟೊಂದು ದೊಡ್ಡ ಪ್ರಮಾಣದ ಸಿಬ್ಬಂದಿಗಳನ್ನು ಏಕೆ ಭರ್ತಿಮಾಡಿಕೊಳ್ಳಲಾಯಿತು? ಕಳೆದ ೧೮ ವರ್ಷಗಳಿಂದ ಮುರಿದುಹೋದ ಹಾಗೂ ಕೆಲಸಕ್ಕೆ ಬಾರದ ವಿಡಿಪೂಂಛ್‌ನ ರಸ್ತೆಯನ್ನು ದುರಸ್ತಿಗಾಗಿ ಹಣವನ್ನು ಏಕೆ ವ್ಯಯಿಸಲಾಯಿತು? ಹಾಜಿ ಪೀರ್ ಮಾರ್ಗದವರೆಗೆ ಟೆಲಿಫೋನ್ ಲೈನ್‌ಗಳನ್ನು ಏಕಾಗಿ ಹಾಕಿಸಲಾಯಿತು? ಇವನ್ನು ಪಾಕಿಸ್ತಾನಕ್ಕೆ ಒಪ್ಪಿಸಲೆಂದೇ ಮಾಡಲಾಯಿತೇ?

**ಪ್ರಜಾಪ್ರಭುತ್ವದ ತಗಾದೆ**

ಈ ಭೂಭಾಗಗಳನ್ನು ತೆರವುಗೊಳಿಸಲಾಗುವುದಿಲ್ಲ ಎಂಬುದು ಭಾರತ ಸರ್ಕಾರದ ಸ್ಪಷ್ಟ ನಿಲುವಾಗಿತ್ತು. ಆದರೆ ರಷ್ಯಾದ ಒತ್ತಾಯಕ್ಕೆ ಅದು ಮಣಿಯ ಬೇಕಾಯಿತು. ಒಂದು ವೇಳೆ ವಿಷಯ ಹೀಗಿದ್ದರೆ ಪ್ರಜಾಪ್ರಭುತ್ವ ಹಾಗೂ ನೀತಿಸಂಹಿತೆಯ ತಗಾದೆ ಏನಾಗಿತ್ತೆಂದರೆ, ಭಾರತ ಅಧಿಕಾರಿಗಳು ತಾಷ್ಕೆಂಟಿನಲ್ಲಿ ಈ ವಿಷಯವಾಗಿ ಯಾವುದೇ ನಿರ್ಣಯ ಕೈಗೊಳ್ಳದೆ ಭಾರತದ ಜನತೆ ಹಾಗೂ ಸಂಸತ್ತಿನ ಅಭಿಪ್ರಾಯವನ್ನು ಅರಿಯುವ ವ್ಯವಸ್ಥೆ ಮಾಡುತ್ತಿದ್ದರು. ಅವರು ಅಸಹಾಯಕರಾಗಿದ್ದ ಪಕ್ಷದಲ್ಲಿ ಅವರು ದೇಶದ ಜನತೆಯನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿತ್ತು. ಶಾಸ್ತ್ರೀಯವರು ತಾಷ್ಕೆಂಟಿಗೆ ಹೊರಟ ಸಂದರ್ಭದಲ್ಲಿ ನಮ್ಮ ಮನಸ್ಸಿನಲ್ಲಿ ಈ ರೀತಿಯ ಸಂದೇಹಗಳಿದ್ದವು. ಅವನ್ನು ನಾವು ವ್ಯಕ್ತಪಡಿಸಿದ್ದೆವು. ಆದರೆ ಅವರು ಭಾರತವು ತಾನು ಕೈಗೊಂಡ ಆಧಾರಭೂತ ನಿಲುವುಗಳಿಂದ ಯಾವುದೇ ರೀತಿಯ ಒತ್ತಡಗಳಿಗೆ ಮಣಿಯುವುದಿಲ್ಲವೆಂಬ ಭರವಸೆಯನ್ನು ಎಲ್ಲ

ರೀತಿಯಿಂದಲೂ ನಮಗೆ ಮೂಡಿಸಿದ್ದರು. ವಿಷಾದದ ಸಂಗತಿಯೆಂದರೆ ಈ ಆಶ್ವಾಸನೆಗಳು ತಾಷ್ಕೆಂಟ್ ಒಪ್ಪಂದದಲ್ಲಿ ಈಡೇರಲಿಲ್ಲ.

**ಭಾರತದ ಅಧಿಕೃತ ನೀತಿ**

ಭಾರತ ಆಡಳಿತದ ಅಧಿಕೃತ ನೀತಿಯನ್ನು ಪ್ರಧಾನ ಮಂತ್ರಿಗಳಾದ ಶ್ರೀ ಶಾಸ್ತ್ರಿಯವರು ಸಂಯುಕ್ತ ರಾಷ್ಟ್ರದ ಮಹಾಕಾರ್ಯದರ್ಶಿಗಳಾದ ಉಥಾಂಟರಿಗೆ ದಿನಾಂಕ ೧೪ನೇ ಸೆಪ್ಟೆಂಬರ್‌ನಲ್ಲಿ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಮುಂದೆ ಸಂಸತ್ತು, ಭದ್ರತಾ ಮಂಡಳಿ ಅಥವಾ ಮಹಾಕಾರ್ಯದರ್ಶಿಗಳಾದ ಉಥಾಂಟ್‌ರೊಡನೆ ಈ ವಿಷಯವಾಗಿ ನಡೆದ ಚರ್ಚೆಗಳಲಿ ಈ ಪತ್ರವನ್ನು ಉಲ್ಲೇಖಿಸಿದ್ದಾರೆ. ಸೇನೆ ಮತ್ತು ಪಾಕಿಸ್ತಾನದಿಂದ ಬಂದ ನುಸುಳಿ ಬಂದವರು, ಇಬ್ಬರಿಗೂ ಅನ್ವಯಿಸುತ್ತವೆ ಎಂದು ಅರ್ಥೈಸುತ್ತೇವೆ. ಪಾಕಿಸ್ತಾನವು ನುಸುಳು ಕೋರರನ್ನು ಹಿಂದಕ್ಕೆ ಕರೆಸುವ ಜವಾಬ್ದಾರಿಯನ್ನು ಒಪ್ಪಿಕೊಳ್ಳಬೇಕು. ಭವಿಷ್ಯದಲ್ಲಿ ನಾವು ನುಸುಳುವಿಕೆಯ ಸಂಭವನೀಯತೆಗಳು ಇರುವಂಥ ಯಾವುದೇ ವ್ಯವಸ್ಥೆಯನ್ನು ನಾವು ಒಪ್ಪಿಕೊಳ್ಳುವುದಿಲ್ಲ.

ಅದೇ ದಿನ ಕೇಂದ್ರ ಸರ್ಕಾರದ ಶಿಕ್ಷಣಮಂತ್ರಿಗಳಾದ ಶ್ರೀ ಛಾಗಲಾ ಅವರು ತಮ್ಮ ಭದ್ರತಾ ಪರಿಷತ್ತಿನ ಭಾಷಣವನ್ನು ಉಲ್ಲೇಖಿಸುತ್ತಾ ಈ ವಿಷಯವಾಗಿ ಲೋಕಸಭೆಯಲ್ಲಿ ಹೀಗೆ ಹೇಳಿದ್ದರು – "ನಾನು ದಿನಾಂಕ ೧೭ ಸೆಪ್ಟೆಂಬರ್‌ನಲ್ಲಿ ಭದ್ರತಾ ಪರಿಷತ್ತಿನಲ್ಲಿ ಹೀಗೆ ಹೇಳಿದ್ದೆ – "ಇದು ಯುದ್ಧ–ವಿರಾಮ ಈ ವ್ಯವಸ್ಥೆಗೆ ಸಂಬಂಧ ಪಟ್ಟ ವಿಚಾರ. ನಾನು ಅದನ್ನು ವಿವರವಾಗಿ ಹೇಳಲು ಹೋಗುವುದಿಲ್ಲ ಆದರೆ, ಕಾಶ್ಮೀರದಿಂದ ಎಲ್ಲಾ ಆಕ್ರಮಣಕಾರರೂ ಹಿಂದಿರುಗಲೇಬೇಕು ಎಂಬುದನ್ನಂತೂ ಹೇಳಬಲ್ಲೆ. ಪಾಕಿಸ್ತಾನವು ಅವರನ್ನು ಯಾವ ರೀತಿ ಕಳುಹಿಸಿತ್ತೋ ಅದೇ ರೀತಿ ವಾಪಸ್ ಕರೆಸಿಕೊಳ್ಳಬೇಕು. ಎರಡನೆಯದಾಗಿ ಮುಂದೆ ಅತಿಕ್ರಮಣ ಸಾಧ್ಯವಾಗದ ಹಾಗೆ ಅವರು ಕ್ರಮ ತೆಗೆದುಕೊಳ್ಳಬೇಕು. ಮೂರನೆಯದಾಗಿ ಅತಿಕ್ರಮಣದ ಹೊಣೆಗಾರಿಕೆಯನ್ನು ಪಾಕಿಸ್ತಾನವು ಹೊತ್ತುಕೊಳ್ಳಬೇಕು.

ರಾಜ್ಯ ಸಭೆಯಲ್ಲಿ ಇದೇ ವಿಷಯದ ಮೇಲೆ ಮಾತನಾಡುತ್ತಾ ಶ್ರೀಛಾಗಲಾರವರು ಇನ್ನೂ ಸ್ಪಷ್ಟವಾಗಿ ಹೇಳಿದ್ದರು – 'ಮಾನ್ಯ ಸದಸ್ಯರು ೫ನೇ ಆಗಸ್ಟ್‌ನ ಬಗೆಗೆ ಮಾಡಿದ ಚರ್ಚೆಯ ಬಗ್ಗೆ ಈಗ ನಾನು ಮಾತನಾಡುತ್ತೇನೆ. ಇದರಿಂದ ಆಕ್ರಮಣಕಾರರಿಗೆ ಲಾಭವುಂಟಾಗುತ್ತದೆಂದು ಅವರು ಹೇಳಿದ್ದಾರೆ. ನೀವು ಪ್ರಧಾನ ಮಂತ್ರಿಯವರು ಮಹಾಕಾರ್ಯದರ್ಶಿಗಳಿಗೆ ಬರೆದ ಪತ್ರವನ್ನು ಓದಿದಲ್ಲಿ ನಾವು ಆಗಸ್ಟ್ ೫ರ ಸ್ಥಿತಿಗೆ ಮರಳುವುದರ ಅರ್ಥವೇನು ಎಂಬುದು

ಸ್ಪಷ್ಟವಾಗಿ ತಿಳಿದುಬರುತ್ತದೆ. ನಾನು ಭದ್ರತಾ ಪರಿಷತ್ತಿನೆದುರೂ ಸರ್ಕಾರದ ನೀತಿಯನ್ನು ಸ್ಪಷ್ಟಪಡಿಸಿದ್ದೆ. ಅದೇನೆಂದರೆ ೫ನೇ ಆಗಸ್ಟ್‌ನ ತಾರೀಖಿಗೆ ಮೂರು ಷರತ್ತುಗಳಿವೆ – ಮೊದಲನೆಯದಾಗಿ, ಕಾಶ್ಮೀರವನ್ನು ಪ್ರವೇಶಿಸಿರುವ ನುಸುಳು ಕೋರರು ಹಾಗೂ ಪಾಕಿಸ್ತಾನದ ಆಕ್ರಮಣವನ್ನು ಪ್ರಾರಂಭಿಸಿರುವವರು ಹಿಂತಿರುಗಬೇಕು. ಎರಡನೆಯದಾಗಿ ಪಾಕಿಸ್ತಾನವು ಈ ಅತಿಕ್ರಮಣಕಾರರ ಹೊಣೆಯನ್ನು ಹೊತ್ತುಕೊಳ್ಳಬೇಕು ಹಾಗೂ ಮೂರನೆಯದು ಅತಿ ಹೆಚ್ಚು ಮಹತ್ವಪೂರ್ಣವಾದದ್ದು, ನಾವು ಭವಿಷ್ಯದಲ್ಲಿ ಅತಿಕ್ರಮಣವು ಅಸಾಧ್ಯವಾಗುವಂಥ ಸ್ಥಿತಿಯನ್ನು ನಿರ್ಮಾಣ ಮಾಡಬೇಕು. ನಾವು ಬಹಳಷ್ಟು ಬಾರಿ ಯುದ್ಧ–ವಿರಾಮ ಘೋಷಿಸಿದ್ದೇವೆ. ನಾವು ಪಾಕಿಸ್ತಾನವನ್ನು ಬಹಳ ನಂಬಿದ್ದೇವೆ. ಈಗ ನಾವು ಮತ್ತಷ್ಟು ನಂಬಿಕೆಯನ್ನಿಡಲು ಸಿದ್ಧರಿಲ್ಲ. ಆದ್ದರಿಂದ ದೇಶದ ಹಿತಕ್ಕಾಗಿ, ಸುರಕ್ಷತೆಯ ದೃಷ್ಟಿಯಿಂದ ನಾವು ಮುಂದೆ ಅತಿಕ್ರಮಣ ಸಾಧ್ಯವಾಗದಂತೆ ಯುದ್ಧವಿರಾಮ ರೇಖೆಯನ್ನು ನಿರ್ಧರಿಸಬೇಕು. ಯುದ್ಧವಿರಾಮ ರೇಖೆ ೫೦೦ ಮೈಲಿಗಳಷ್ಟು ಉದ್ದವಿದೆ. ತಾವು ಸಂಯುಕ್ತ ರಾಷ್ಟ್ರ ಸಂಘದ ವೀಕ್ಷಕರ ಸಂಖ್ಯೆಯನ್ನು ನಲವತ್ತರಿಂದ ನಾಲ್ಕು ನೂರು ಅಥವಾ ನಾಲ್ಕು ಸಾವಿರಕ್ಕೆ ಹೆಚ್ಚಿಸಬಹುದು. ಆದರೆ ಎಲ್ಲಿಯವರೆಗೆ ಯುದ್ಧವಿರಾಮ ರೇಖೆಯನ್ನು ಅತಿಕ್ರಮಣ ಅಸಾಧ್ಯವಾಗುವಂತೆ ನಿರ್ಮಿಸಲಾಗುವುದಿಲ್ಲವೋ, ಅಲ್ಲಿಯವರೆಗೆ ಭವಿಷ್ಯದಲ್ಲಿ ಯಾವುದೇ ಗ್ಯಾರಂಟಿ ಇರುವುದಿಲ್ಲ.'

ಮೇಲಿನ ಎಲ್ಲಾ ಹೇಳಿಕೆಗಳಲ್ಲಿ ಭಾರತವು ಜಮ್ಮು ಹಾಗೂ ಕಾಶ್ಮೀರ ರಾಜ್ಯಗಳಿಂದ ತನ್ನ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳುವುದಿಲ್ಲವೆಂದು ಸ್ಪಷ್ಟವಾಗಿ ಹೇಳಲಾಗಿದೆ. ಅದು ಹಾಜಿಪೀರ್, ಕಾರ್ಗಿಲ್ ಹಾಗೂ ಉಡೀ ಪೂಂಛ್ ಕ್ಷೇತ್ರದಿಂದ ಹಿಂದಕ್ಕೆ ಸರಿಯುವುದಿಲ್ಲ. ಏಕೆಂದರೆ ಅವುಗಳ ಮೇಲೆ ಅಧಿಕಾರ ವಿರಿಸಿಕೊಳ್ಳದ ಹೊರತು ನುಸುಳುಕಾರರನ್ನು ತಡೆಯಲು ಸಾಧ್ಯವಿಲ್ಲ.

**ಶಾಸ್ತ್ರಿಯವರ ಷರತ್ತುಗಳು**

ಯುದ್ಧ ವಿರಾಮದ ನಂತರ ೧೯೬೫ರ ನವೆಂಬರ್ ೫ರಂದು ಲೋಕಸಭೆಯಲ್ಲಿ ಮಾತನಾಡುತ್ತಾ ಪ್ರಧಾನಮಂತ್ರಿ ಶಾಸ್ತ್ರಿಯವರು ಇನ್ನೂ ಸ್ಪಷ್ಟ ಶಬ್ದಗಳಲ್ಲಿ ಪಾಕಿಸ್ತಾನದ ಜೊತೆ ಮಾತುಕತೆಗೆ ಷರತ್ತುಗಳನ್ನಿಟ್ಟಿದ್ದರು. ಅವರು ಹೇಳಿದ್ದರು – ಹಿಂತಿರುಗುವ ಚರ್ಚೆಯಲ್ಲಿ ಮುಖ್ಯವಾದ ಪ್ರಶ್ನೆಯೇನೆಂದರೆ ೧೯೬೫ರ ಆಗಸ್ಟ್ ೫ರಂದು ಪ್ರಾರಂಭವಾದ ನುಸುಳುಗಾರರ ವಿಧಾನ ಮತ್ತೆ ಪುನರಾವರ್ತನೆಯಾಗುವುದಿಲ್ಲವೆಂದು ನಮಗೆ ಭರವಸೆ ನೀಡಬೇಕು.

ಯುದ್ಧ ವಿರಾಮಕ್ಕೆ ಮೊದಲು ಮಹಾಕಾರ್ಯದರ್ಶಿಯವರಿಗೆ ಬರೆಯಲಾದ ಪತ್ರದಲ್ಲಿ ನಾನು ಈ ವಿಷಯದ ಮೇಲೆ ಬಹಳ ಒತ್ತು ನೀಡಿದ್ದೆ.

ಯಾವುದೇ ಭಾಗದಲ್ಲಿ ಉಂಟಾಗುವ ಆಕ್ರಮಣವನ್ನು ಖಂಡಿಸಬೇಕು ಹಾಗೂ ಆಕ್ರಮಣಕಾರರನ್ನು ಗುರುತಿಸುವಲ್ಲಿ ನಿಷ್ಪಕ್ಷಪಾತತೆಯನ್ನು ವಹಿಸಿದರೆ ಈ ಪ್ರಪಂಚವು ಬಹಳಷ್ಟು ಕಷ್ಟಗಳು ಹಾಗೂ ದುಃಖಗಳಿಂದ ಪಾರಾಗುತ್ತದೆ ಎಂಬ ಭಾವನೆಯನ್ನು ನಾನು ವ್ಯಕ್ತಪಡಿಸದೆ ಇರಲಾರೆ.

ಒಂದು ವೇಳೆ ಪಾಕಿಸ್ತಾನವು ಇಂದಿನ ಒತ್ತಡಗ್ರಸ್ತ ಸ್ಥಿತಿಯನ್ನು ಸಮಾಪ್ತಗೊಳಿಸ ಬಯಸಿದರೆ ಅದು ಯುದ್ಧ–ವಿರಾಮ ಒಪ್ಪಂದವನ್ನು ಗೌರವಿಸಬೇಕು ಹಾಗೂ ಪಾಲಿಸಬೇಕು. ಪ್ರತಿ ದಿನ ಉಂಟಾಗುತ್ತಿರುವ ಯುದ್ಧವಿರಾಮದ ಉಲ್ಲಂಘನೆಯನ್ನು ನಿಲ್ಲಿಸಬೇಕು. ಆನಂತರ ಅದು ತನ್ನ ಎಲ್ಲಾ ಸಶಸ್ತ್ರ ವ್ಯಕ್ತಿಗಳನ್ನು ನಮ್ಮ ನೆಲದಿಂದ ಹಿಂದಕ್ಕೆ ಕರೆಸಿಕೊಳ್ಳಬೇಕು. ಆಗ ನಾವೂ ನಮ್ಮ ಸೇನೆಯನ್ನು ನಮ್ಮ ಅಧೀನದಲ್ಲಿರುವ ಪಾಕಿಸ್ತಾನದ ಭೂಭಾಗಗಳಿಂದ ಹಿಂದಕ್ಕೆ ಕರೆಸಿಕೊಳ್ಳುತ್ತೇವೆ (ಇಲ್ಲಿ ಪಾಕಿಸ್ತಾನದ ಭೂಭಾಗಗಳು ಎಂಬ ಶಬ್ದದ ಉಲ್ಲೇಖವಿದೆ. ಉಡೀ–ಪೂಂಛ್, ಹಾಜಿ ಪೀರ್ ಹಾಗೂ ಕಾರ್ಗಿಲ್ ಪಾಕಿಸ್ತಾನದ ಕ್ಷೇತ್ರಗಳಲ್ಲ)

ಅದು ಶಸ್ತ್ರಾಸ್ತ್ರಗಳನ್ನು ಹಾಗೂ ಯುದ್ಧ–ಸಾಮಗ್ರಿಗಳನ್ನು ಒಟ್ಟುಗೂಡಿಸುವ ಪ್ರಯತ್ನವನ್ನು ನಿಲ್ಲಿಸಬೇಕು.

ಅದು ವಶಪಡಿಸಿಕೊಂಡಿರುವ ವಸ್ತುಗಳನ್ನು ಮುಕ್ತಗೊಳಿಸಬೇಕು.

ಭಾರತದ ಸಮಾನ ವಿರೋಧದ ಆಧಾರದ ಮೇಲೆ ಉಂಟಾಗಿರುವ ಹಾಗೂ ಭಾರತದ ವಿನಾಶವನ್ನು ಗುರಿಯಾಗಿಸಿಕೊಂಡಂಥ ಚೀನಾ ದೇಶದೊಂದಿಗಿನ ಸಂಬಂಧವನ್ನು ಕೊನೆಗಾಣಿಸಬೇಕು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಪಾಕಿಸ್ತಾನವು ಮೊದಲು ಸಾಮಾನ್ಯ ಸ್ಥಿತಿಯನ್ನು ತಂದರೆ, ಆಗ ಮಾತ್ರ ಒಳ್ಳೆಯ ಸಂಬಂಧಗಳ ಬಗ್ಗೆ ಯೋಚಿಸಲು ಸಾಧ್ಯವಾಗುತ್ತದೆ.

ಇವೆಲ್ಲ ಷರತ್ತುಗಳನ್ನು ಸಂಸತ್ತು ಸ್ವೀಕರಿಸಿತ್ತು ಹಾಗೂ ಅವುಗಳ ಆಧಾರದ ಮೇಲೆ ಪಾಕಿಸ್ತಾನದೊಡನೆ ಮಾತುಕತೆ ನಡೆಯಬೇಕಿತ್ತು. ಆದರೆ ಎಲ್ಲವೂ ಇದಕ್ಕೆ ವಿರುದ್ಧವಾಗಿಯೇ ನಡೆಯಿತು.

**ಶ್ರೀ ಸಾದಿಕ್ ಅವರ ಘೋಷಣೆಗಳು**

ಜಮ್ಮು ಹಾಗೂ ಕಾಶ್ಮೀರದ ಮುಖ್ಯಮಂತ್ರಿಗಳಾದ ಶ್ರೀ ಗುಲಾಮ್ ಮಹಮ್ಮದ್ ಸಾದಿಕ್‌ರವರ ಬಗ್ಗೆ ಹೇಳುವುದಾದರೆ, ಅವರು ಕಲ್ಕತ್ತಾ, ಜಮ್‌ಶೆಡ್‌ಪುರ, ಪಟ್ನಾ, ದೆಹಲಿ, ಶ್ರೀನಗರ ಮುಂತಾದ ಎಲ್ಲಾ ಸ್ಥಳಗಳಲ್ಲಿ ಮಾಡಿದ ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ಭಾರತವು ಯಾವುದೇ ಸ್ಥಿತಿಯಲ್ಲಿ ಯುದ್ಧವಿರಾಮದ ರೇಖೆಯನ್ನು ಅತಿಕ್ರಮಿಸಿರುವ ಕಾಶ್ಮೀರದ ಆ ಭಾಗಗಳಿಂದ ತನ್ನ ಸೈನ್ಯವನ್ನು ತೆರವುಗೊಳಿಸುವುದಿಲ್ಲ

ಎಂದು ಘೋಷಿಸಿದ್ದರು. 'ಹಿಂದುಸ್ತಾನ್ ಟೈಮ್ಸ್' ತನ್ನ ೧೩ನೇ ಡಿಸೆಂಬರ್‌ನ ಸಂಚಿಕೆಯಲ್ಲಿ ಅವರ ಡಿಸೆಂಬರ್ ೧೨ರ ಭಾಷಣದ ವಿವರವನ್ನು ನೀಡುತ್ತಾ ಬರೆದಿದೆ –

ಕಾಶ್ಮೀರದ ಮುಖ್ಯಮಂತ್ರಿ ಶ್ರೀ ಗು.ಮ. ಸಾದಿಕ್‌ರವರು ಆಗ್ರಹಪೂರ್ವಕವಾಗಿ ಘೋಷಿಸಿರುವುದೇನೆಂದರೆ, ಭಾರತವು ತಥಾಕಥಿತ ಸ್ವತಂತ್ರ ಕಾಶ್ಮೀರದ ಯಾವೆಲ್ಲಾ ಭೂಭಾಗಗಳನ್ನು ಮುಕ್ತಗೊಳಿಸಿದೆಯೋ, ಅವುಗಳನ್ನು ಹಿಂತಿರುಗಿಸುವ ವಿಚಾರವಾಗಿ ಚರ್ಚಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ಭೂಭಾಗಗಳು ಕಾನೂನು ಹಾಗೂ ಸಂವಿಧಾನಾತ್ಮಕವಾಗಿ ಭಾರತದ ಅಭಿನ್ನವಾದ ಅಂಗಗಳು. ನಾವು ಯಾವುದೇ ಯುದ್ಧ–ವಿರಾಮ ರೇಖೆಗೆ ಸಿದ್ಧರಿಲ್ಲ. ಒಂದು ವೇಳೆ ಪಾಕಿಸ್ತಾನವು ಛಂಬ ಭೂಭಾಗವನ್ನು ತೆರವುಗೊಳಿಸಿದರೆ, ನಾವು ಲಾಹೋರ್ ಹಾಗೂ ಸಿಯಾಲ್ ಕೋಟೆಯಿಂದ ಹಿಂದಿರುಗುತ್ತೇವೆ.

**ಆಶ್ವಾಸನೆಗಳು ಸುಳ್ಳಾದವು**

ಇಷ್ಟೆಲ್ಲ ಸ್ಪಷ್ಟ ಉಲ್ಲೇಖಗಳ ನಂತರವೂ ನಮ್ಮ ವಿದೇಶಾಂಗ ಮಂತ್ರಿಗಳಾದ ಶ್ರೀ ಸ್ವರ್ಣಸಿಂಹರು ತಾಷ್ಕೆಂಟಿನ ಒಪ್ಪಂದದಲ್ಲಿ ಹಿಂತಿರುಗುವ ವ್ಯವಸ್ಥೆಯನ್ನು ಪ್ರಧಾನಮಂತ್ರಿಗಳ ಮೂಲಕ ಇಡಲಾದ ಷರತ್ತುಗಳ ಅನುಸಾರವಾಗಿದೆ ಎಂದು ಹೇಳಿದ್ದಾರೆಂದರೆ ಅವರ ಈ ಹೇಳಿಕೆಯನ್ನು ರಾಜಕೀಯ ದುಃಸ್ಸಾಹಸವೆಂದೇ ಪರಿಗಣಿಸಬೇಕಿದೆ. ಜನತೆಯು ಈ ರೀತಿಯ ಮರೆವಿಗೆ ಬರುವಷ್ಟು ಮೂರ್ಖರೇನಲ್ಲ ಹಾಗೂ ಕಾಲದ ಪರದೆಯಿಂದಾಗಿ ಜನರ ಮನಸ್ಸಿನ ಸ್ಮೃತಿಪಟಲದ ಮೇಲೆ ಅವುಗಳ ಬಿಂಬ ಮಬ್ಬಾಗಿಹೋಗುವಷ್ಟು ಇವು ಹಳೆಯ ಘಟನೆಗಳೇನಾಗಿಲ್ಲ.

ಇಂದು ಶಾಸ್ತ್ರೀಯವರು ನಮ್ಮೊಡನಿಲ್ಲ. ಆದರೆ ನಾವು ಶ್ರೀ ಸ್ವರ್ಣಸಿಂಹರು ಹಾಗೂ ಶ್ರೀ ಯಶವಂತರಾವ್ ಚೌಹಾಣ್‌ರನ್ನು ಅವರು ಈ ರೀತಿಯ ಒಪ್ಪಂದವನ್ನು ಹೇಗೆ ತಾನೇ ಒಪ್ಪಿಕೊಂಡರು ಎಂದು ಖಂಡಿತವಾಗಿ ಕೇಳುತ್ತೇವೆ.

**ಬೇರೆ ಬೇರೆ ವ್ಯಾಖ್ಯೆಗಳು**

ಪಾಕಿಸ್ತಾನವು ಎಲ್ಲಾ ಸಶಸ್ತ್ರ ವ್ಯಕ್ತಿಗಳನ್ನು ಹಿಂದಕ್ಕೆ ಕರೆಯಿಸಿಕೊಳ್ಳುವ, ಯುದ್ಧವಿರಾಮದ ಷರತ್ತುಗಳನ್ನು ಪಾಲಿಸುವ ಹಾಗೂ ಪರಸ್ಪರರ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದಿರುವುದನ್ನು ಒಪ್ಪಿಕೊಳ್ಳುವುದರ ಮೂಲಕ ಭಾರತದ ಎಲ್ಲಾ ಷರತ್ತುಗಳನ್ನು ಒಪ್ಪಿಕೊಂಡಿದೆ ಎಂಬುದಾಗಿ ಶ್ರೀ ಸ್ವರ್ಣಸಿಂಹರು ತಮ್ಮ ರೇಡಿಯೋ ಭಾಷಣದಲ್ಲಿ ಹೇಳಿದ್ದಾರೆ. ಆದರೆ ನಾವು ಈ ಷರತ್ತುಗಳು ಭಾರತವು

ವಿಧಿಸಿದವುಗಳಲ್ಲ ಎಂಬುದನ್ನು ಮೊದಲನೆಯದಾಗಿ ಹೇಳಬಯಸುತ್ತೇವೆ. ಸರ್ದಾರ್ ಸ್ವರ್ಣಸಿಂಹರು ತಮ್ಮ ಹೊಸ ಷರತ್ತುಗಳನ್ನು ಹುಟ್ಟುಹಾಕುತ್ತಿದ್ದಾರೆ. ಎರಡನೆಯದಾಗಿ ಪಾಕಿಸ್ತಾನದ ವಕ್ತಾರರು ತಾಷ್ಕೆಂಟಿನ ಒಪ್ಪಂದವನ್ನು ಹೇಗೆ ವ್ಯಾಖ್ಯಾನಿಸಿದ್ದಾರೋ ಅದು ಸಹ ಸ್ವರ್ಣಸಿಂಹದ ವ್ಯಾಖ್ಯೆಗಿಂತ ಸರ್ವಥಾ ಭಿನ್ನವಾಗಿದೆ.

ಪಾಕಿಸ್ತಾನದ ವಕ್ತಾರ ಒಪ್ಪಂದ ಪತ್ರಕ್ಕೆ ಸಹಿ ಹಾಕಿದ ತಕ್ಷಣವೇ ಹಾಗೂ ವಿದೇಶಾಂಗ ಸಚಿವರಾದ ಶ್ರೀ ಅಜೀಜ್ ಅಹಮದ್‌ರು ದಿನಾಂಕ ೨೨ ಜನವರಿ ೧೯೬೬ರಂದು ಸ್ಪಷ್ಟಪಡಿಸಿದ್ದೇನೆಂದರೆ, ಸಶಸ್ತ್ರ ವ್ಯಕ್ತಿಗಳಲ್ಲಿ, ಕಾಶ್ಮೀರದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುವವರನ್ನು ಸೇರಿಸಲಾಗುವುದಿಲ್ಲ ಎಂಬುದು. ಪಾಕಿಸ್ತಾನವು ಈ ಅತಿಕ್ರಮಣಕಾರರನ್ನು ದೇಶಭಕ್ತರೆಂದು ಕರೆಯುತ್ತದೆ ಎಂಬುದನ್ನು ನಾವು ಬಲ್ಲೆವು. ಅದು ಅವರನ್ನು ವಾಪಸ್ ಕರೆಸಿಕೊಳ್ಳಲು ಸಿದ್ಧವಿಲ್ಲ. ಇದೇ ರೀತಿ ಪಾಕಿಸ್ತಾನದ ವಕ್ತಾರರು ಒಬ್ಬರು ಇನ್ನೊಬ್ಬರ ವಿಷಯದಲ್ಲಿ ಹಸ್ತಕ್ಷೇಪ ಮಾಡದಿರುವ ನೀತಿ ಕಾಶ್ಮೀರಕ್ಕೆ ಅನ್ವಯಿಸುವುದಿಲ್ಲ. ಏಕೆಂದರೆ ಅದು ವಿವಾದಗ್ರಸ್ತ ಕ್ಷೇತ್ರವಾಗಿದೆ. ಶ್ರೀ ಅಯೂಬ್ ಮತ್ತು ಭುಟ್ಟೊ ಅವರು ಕಾಶ್ಮೀರದ ವಿಷಯದಲ್ಲಿ ಉದಾಸೀನರಾಗಿರುವುದಿಲ್ಲ ಎಂದೂ ಸ್ಪಷ್ಟಪಡಿಸಿದರು.

**ಸ್ಪಷ್ಟೀಕರಣ ಕೇಳಿ**

ತಾಷ್ಕೆಂಟ್‌ನ ಒಪ್ಪಂದವನ್ನು ಭಿನ್ನ-ಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸಲಾಗುತ್ತಿದೆ ಎಂಬುದು ಸ್ಪಷ್ಟವಿದೆ. ಆದರೆ ಆಶ್ಚರ್ಯದ ವಿಷಯವೇನೆಂದರೆ ಭಾರತ ಸರ್ಕಾರವು ಈ ಸಂಬಂಧವಾಗಿ ಪಾಕಿಸ್ತಾನದಿಂದ ಯಾವುದೇ ಸ್ಪಷ್ಟೀಕರಣವನ್ನು ಕೇಳಲಿಲ್ಲ. ಇದಕ್ಕೆ ವಿರುದ್ಧವಾಗಿ ಭಾರತ ಹಾಗೂ ಪಾಕಿಸ್ತಾನದ ಸೇನಾಧಿಕಾರಿಗಳ ಮಧ್ಯೆ ಪರಸ್ಪರ ಹಿಂದಿರುಗುವ ಸಂಬಂಧವಾಗಿ ಉಂಟಾದ ಒಪ್ಪಂದದಲ್ಲಿ ಅತಿಕ್ರಮಣಕಾರರ ಬಗೆಗೆ ಎಲ್ಲಿಯೂ ಚರ್ಚಿಸಿಲ್ಲ. ಎಲ್ಲಿಯವರೆಗೆ ವ್ಯಾಖ್ಯೆಯ ಬಗೆಗೆ ಎರಡೂ ದೇಶಗಳ ಮಧ್ಯೆ ಒಮ್ಮತ ಮೂಡುವುದಿಲ್ಲವೋ ಅಲ್ಲಿಯವರೆಗೆ ಒಪ್ಪಂದವನ್ನು ಕಾರ್ಯಗತಗೊಳಿಸುವುದು ಸಾಧ್ಯವಿಲ್ಲ ಎಂದಾಗಬೇಕಿತ್ತು. ನಾವು ಪುನಃ ಇಲ್ಲಿ ನಮ್ಮ ತಪ್ಪನ್ನು ಪುನರಾವರ್ತಿಸುತ್ತಿದ್ದೇವೆ. ನಾವು ನಮ್ಮ ವ್ಯಾಖ್ಯೆಯನ್ನು ನೀಡಿ ಸುಮ್ಮನೆ ಕುಳಿತುಬಿಡುತ್ತೇವೆ ಹಾಗೂ ಪಾಕಿಸ್ತಾನವು ಏನು ಹೇಳುತ್ತದೋ ಅದನ್ನೇ ಮಾಡುತ್ತೇವೆ. ಇದರ ಪರಿಣಾಮವಾಗಿ ನಮ್ಮ ಹೇಳಿಕೆ ನಿಸ್ಸಾರವಾಗುತ್ತದೆ.

**ಜಮ್ಮು ಕಾಶ್ಮೀರದ ಬಗೆಗೆ ಚರ್ಚಿಸಿದ್ದು ಏಕೆ?**

ಜಮ್ಮು ಹಾಗೂ ಕಾಶ್ಮೀರವು ಭಾರತದ ಅಭಿನ್ನ ಅಂಗ ಹಾಗೂ ಅದರ

ರಾಜಕೀಯ ಭವಿಷ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಹೊರಗಿನ ಶಕ್ತಿಯೊಂದಿಗೆ ಯಾವುದೇ ಮಾತುಕತೆಯನ್ನು ನಡೆಸುವುದಿಲ್ಲವೆಂಬುದು ಭಾರತ ಸರ್ಕಾರದ ದೃಷ್ಟಿಕೋನವಾಗಿದೆ. ಇದೇ ಆಧಾರದ ಮೇಲೆ ನಮ್ಮ ವಿದೇಶಾಂಗ ಮಂತ್ರಿಗಳಾದ ಶ್ರೀ ಸ್ವರ್ಣಸಿಂಹರು ಸುರಕ್ಷಾ ಪರಿಷತ್ತಿನ ಸಭೆಯಿಂದ ಎದ್ದು ಹೊರನಡೆದರು. ತಾಷ್ಕೆಂಟ್‌ಗೆ ಹೋಗುವ ಮೊದಲು ಶ್ರೀ ಶಾಸ್ತ್ರಿಯವರು ಕಾಶ್ಮೀರದ ಬಗೆಗೆ ಯಾವುದೇ ಮಾತುಕತೆ ನಡೆಸುವುದಿಲ್ಲವೆಂದು ಘೋಷಿಸಿದ್ದರು.

ಕಾಶ್ಮೀರವು ಭಾರತದ ಅಂಗವಾಗುವ ಹಾಗೂ ಭಾರತದೊಂದಿಗೆ ಏಕೀಕರಣಗೊಳ್ಳುವ ಬಗ್ಗೆ ಹೇಳುವುದಾದಲ್ಲಿ ಅದು ಎಂದೋ ಮುಗಿದುಹೋದ ಅಧ್ಯಾಯ. ಒಂದು ವೇಳೆ ಪಾಕಿಸ್ತಾನದೊಡನೆ ಯಾವುದೇ ವಿಷಯವಾಗಿ ಚರ್ಚಿಸುವುದಾದಲ್ಲಿ ಅದು ಪಾಕಿಸ್ತಾನವು ಬಲವಂತವಾಗಿ ಆಕ್ರಮಿಸಿಕೊಂಡಿರುವ ಆ ಮೂರನೇ ಎರಡು ಭೂಭಾಗದ ವಿಚಾರವಾಗಿ ಮಾತ್ರ. ಶ್ರೀ ಸ್ವರ್ಣಸಿಂಹರು ಈ ಮಾತನ್ನು ನ್ಯೂಯಾರ್ಕ್‌ನ ಪತ್ರಕರ್ತರ ಸಮ್ಮೇಳನದಲ್ಲಿ ಹೇಳಿದ್ದರು.

### ಕಾಶ್ಮೀರದ ಬಗ್ಗೆ ಏಕೆ ಚರ್ಚಿಸಲಾಯಿತು?

ತನ್ನ ಈ ಧೋರಣೆಯ ಅನುಸಾರ ತಾಷ್ಕೆಂಟಿನಲ್ಲಿ ವಿಚಾರ–ವಿನಿಮಯಕ್ಕಾಗಿ ಸಿದ್ಧಪಡಿಸಲಾಗುತ್ತಿದ್ದ ವಿಷಯಗಳ ಪಟ್ಟಿಯಲ್ಲಿ ಶಾಸ್ತ್ರಿಯವರು ಕಾಶ್ಮೀರದ ವಿಷಯವನ್ನು ಸೇರಿಸಲು ತಯಾರಿರಲಿಲ್ಲ. ಆದರೆ ರಷ್ಯಾದ ಪ್ರಧಾನಮಂತ್ರಿಯವರ ಒತ್ತಾಯಕ್ಕೆ ಮಣಿದು ಅವರು ಪಾಕಿಸ್ತಾನದೊಂದಿಗೆ ಕಾಶ್ಮೀರದ ಬಗೆಗೆ ಅನೌಪಚಾರಿಕವಾದ ಮಾತುಕತೆ ನಡೆಸಲು ಸಿದ್ಧರಾದರು. ಈಗ ಅಂದರೆ ಮಾತುಕತೆಯ ವಿಷಯವನ್ನು ತಾಷ್ಕೆಂಟ್‌ನ ಘೋಷಣೆಯಲ್ಲಿ ಸೇರಿಸಿಕೊಂಡ ನಂತರ ಅದನ್ನು ಯಾವುದೇ ರೀತಿಯಲ್ಲಿ ಅನೌಪಚಾರಿಕವೆಂದು ಹೇಳಲಾಗುವುದಿಲ್ಲ.

ಕಾಶ್ಮೀರದ ಬಗ್ಗೆ ಭಾರತ ಹಾಗೂ ಪಾಕಿಸ್ತಾನವು ಯಾವ ದೃಷ್ಟಿಕೋನವನ್ನು ತೋರ್ಪಡಿಸಿದವು ಎಂಬುದರ ಬಗ್ಗೆ ಮಾಹಿತಿಯಿಲ್ಲ. ಆದರೆ ಸಂಪೂರ್ಣ ಭೂಭಾಗದ ಶಾಂತಿಯ ಹಿನ್ನೆಲೆಯಲ್ಲಿ ಕಾಶ್ಮೀರದ ಬಗೆಗೆ ಚರ್ಚಿಸಲಾಗುವುದು ಎಂದು ಒಪ್ಪಂದದಲ್ಲಿ ಹೇಳಲಾಗಿದೆ. ಕಾಶ್ಮೀರದ ವಿಷಯವನ್ನು ಪ್ರಾದೇಶಿಕ ಶಾಂತಿಯೊಂದಿಗೆ ಸೇರಿಸಿ ಪಾಕಿಸ್ತಾನವು ಆಟವನ್ನು ಗೆದ್ದುಕೊಂಡಿತು. ದೇಶದ ಶಾಂತಿಗೆ ಕಾಶ್ಮೀರದ ಸಮಸ್ಯೆಯಿಂದ ಭಂಗವುಂಟಾಗುತ್ತದೆಂದು ನಾವು ಒಪ್ಪುವುದಿಲ್ಲ. ನಮಗೆ ಸಮಸ್ಯೆ ಹಾಗೂ ಆಪತ್ತು ಇದ್ದರೆ ಅದು ಪಾಕಿಸ್ತಾನದ ಆಕ್ರಮಣದಿಂದ ಮಾತ್ರ .

ಕಾಶ್ಮೀರದ ಸಮಸ್ಯೆ ಬಗೆಹರಿಯುವವರೆಗೂ ಈ ಭೂಭಾಗದಲ್ಲಿ ಶಾಂತಿ ನೆಲೆಸುವುದಿಲ್ಲವೆಂದು ಪಾಕಿಸ್ತಾನವು ಪದೇ–ಪದೇ ಹೇಳುತ್ತಲೇ ಬಂದಿದೆ. ಇದು

ಅದರ ಬೆದರಿಕೆಯೂ ಆಗಿದೆ. ಇದರ ಅನುಸಾರವಾಗಿ ಅದು ಒಂದೆರಡು ಸಾರಿ ಆಕ್ರಮಣವನ್ನು ನಡೆಸಿದೆ. ಕಾಶ್ಮೀರದ ಸಮಸ್ಯೆ ಬಗೆಹರಿಯದ ಹೊರತಾಗಿ ಭಾರತ ಹಾಗೂ ಪಾಕಿಸ್ತಾನದ ನಡುವೆ ಒತ್ತಡಗ್ರಸ್ತ ಪರಿಸ್ಥಿತಿ ಮುಂದುವರಿಯಲಿದೆ ಹಾಗೂ ಎರಡೂ ದೇಶಗಳ ಜನತೆಗೆ ಒಳಿತಾಗುವುದಿಲ್ಲವೆಂದು ಇಂದು ಅದು ಒಪ್ಪಂದದ ಮುಖಾಂತರ ನಮ್ಮನ್ನು ಒಪ್ಪಿಸಿದೆ. ಇದು ಇಂದಿನವರೆಗಿನ ನಮ್ಮ ದೃಷ್ಟಿಕೋನಕ್ಕೆ ಭಿನ್ನವಾದ ವಿಷಯ. ನಮ್ಮ ಪ್ರಕಾರ ಕಾಶ್ಮೀರದ ವಿಷಯ ಒಂದು ಸಮಸ್ಯೆಯೇ ಅಲ್ಲ ಅಥವಾ ಅದು ಭಾರತ–ಪಾಕ್‌ನ ನಡುವಿನ ಒತ್ತಡಕ್ಕೆ ಕಾರಣವಲ್ಲ ಬದಲಾಗಿ ಅದರ ಲಕ್ಷಣವಾಗಿದೆ.

### ನ್ಯೂಯಾರ್ಕ್ ಹಾಗೂ ತಾಷ್ಕೆಂಟ್‌ನಲ್ಲಿ ವಿರೋಧ

ಕಾಶ್ಮೀರದ ರಾಜಕೀಯ ಭವಿಷ್ಯಕ್ಕೆ ಸಂಬಂಧಿಸಿದಂತೆ ಇನ್ನೂ ಯಾವ ನಿರ್ಣಯವನ್ನೂ ಕೈಗೊಳ್ಳಲಾಗಿಲ್ಲ ಎಂಬುದು ಸತ್ಯ. ಆದರೆ ಕಾಶ್ಮೀರದ ಬಗ್ಗೆ ಚರ್ಚಿಸಿ ನಾವು ಈ ಸಮಸ್ಯೆಯನ್ನು ಪುನಃ ಜೀವಂತಗೊಳಿಸಿದೆವು. ನಮ್ಮ ಈ ನಡೆ ಪರಿಷತ್ತಿನಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಆದ ಚರ್ಚೆಗೆ ತಾಳೆಯಾಗುವುದಿಲ್ಲ. ಸುರಕ್ಷಾ ಪರಿಷತ್ತಿನಲ್ಲಿ ನಾವು ಒತ್ತಾಯಪೂರ್ವಕವಾಗಿ ನಾವು ಕಾಶ್ಮೀರವನ್ನು ತಮ್ಮ ಆಂತರಿಕ ವಿಚಾರವೆಂದು ಭಾವಿಸುತ್ತೇವೆ ಮತ್ತು ಅದನ್ನು ಕುರಿತ ಯಾವ ಚರ್ಚೆಯನ್ನೂ ನಾವು ಮಾಡುವುದಿಲ್ಲ. ಆದರೆ ತಾಷ್ಕೆಂಟ್ ಅಲೆಯಲ್ಲಿ ನಾವು ನಮ್ಮ ನಿಲುವನ್ನೇ ಮರೆತುಬಿಟ್ಟೆವು. ನ್ಯೂಯಾರ್ಕ್‌ನಲ್ಲಿ ನಾವು ಸಂಪಾದಿಸಿದ್ದನ್ನು ತಾಷ್ಕೆಂಟ್‌ನಲ್ಲಿ ಕಳೆದುಕೊಂಡೆವು.

### ಪಾಕಿಸ್ತಾನದ ನಡೆ

ಶಾಸ್ತ್ರೀಜಿಯವರು ಭಾರತ–ಪಾಕ್‌ನ ಸಂಬಂಧಗಳು ಹಾಗೂ ಸಮಸ್ಯೆಗಳ ಬಗೆಗೆ ಚರ್ಚಿಸಲು ತಾಷ್ಕೆಂಟ್‌ಗೆ ತೆರಳಿದ್ದರು. ಆದರೆ ಅಲ್ಲಿ ಕೇವಲ ಕಾಶ್ಮೀರದ ಸಮಸ್ಯೆಯ ವಿಚಾರವಾಗಿ ಚರ್ಚೆಯಾಯಿತು. ಬೇರೆ ವಿಷಯಗಳ ಬಗ್ಗೆ ಮುಂದೆ ಚರ್ಚಿಸಲಾಗುವುದೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ೧೯೬೨–೬೩ರಲ್ಲಿ ಭಾರತ–ಪಾಕ್ ಮಾತುಕತೆಯ ಇತಿಹಾಸವನ್ನು ಪುನರಾವರ್ತಿಸಲಾಗಿದೆ. ಆ ಸಮಯದಲ್ಲೂ ಉಭಯ ದೇಶಗಳ ಎಲ್ಲಾ ವಿವಾದಗಳನ್ನು ಕುರಿತು ಚರ್ಚಿಸಲು ಒಂದಲ್ಲ ಹಲವಾರು ಸಭೆಗಳು ನಡೆದವು. ಆದರೆ ಕಾಶ್ಮೀರವನ್ನು ಬಿಟ್ಟು ಬೇರಾವುದೇ ವಿಷಯದ ಬಗ್ಗೆ ಚರ್ಚೆ ನಡೆಯಲಿಲ್ಲ. ಇದು ಪಾಕಿಸ್ತಾನದ ಹಳೆಯ ಧೋರಣೆ. ಅದು ಯಾವ ವಿಷಯದ ಬಗ್ಗೆ ಇಚ್ಛಿಸುತ್ತದೋ ಅದರ ಬಗ್ಗೆ ಮಾತ್ರ ಚರ್ಚಿಸುತ್ತದೆ

ಹಾಗೂ ನಮಗೆ ಮಹತ್ವವಾದಂಥ ವಿಷಯಗಳನ್ನು ತಳ್ಳಿಹಾಕುತ್ತದೆ. ನಾವು ಅನುಭವದಿಂದ ಏನನ್ನೂ ಕಲಿತಿಲ್ಲ ಎಂದು ಅನ್ನಿಸುತ್ತಿದೆ.

**ಪಾಕಿಸ್ತಾನ ಬಲಪ್ರಯೋಗ ಮಾಡುತ್ತದೆ**

ತಾಷ್ಕೆಂಟಿನಲ್ಲಿ ಕಾಶ್ಮೀರದ ಬಗೆಗಿನ ಚರ್ಚೆಯಿಂದಾಗಿ ಈಗ ಮುಂದಕ್ಕೆ ಅದರ ಹಾದಿ ಸುಗಮವಾಗಿದೆ. ತಾಷ್ಕೆಂಟಿನ ಒಪ್ಪಂದ ಕಾಶ್ಮೀರದ ಸಮಸ್ಯೆಯ ಪರಿಹಾರಕ್ಕೆ ಒಂದು ಸಾಧನ ಎಂಬ ಪಾಕಿಸ್ತಾನದ ಪ್ರಧಾನಿಯವರ ಹೇಳಿಕೆ ತೆರೆದಿಟ್ಟಿದೆ. ಸಂಯುಕ್ತ ರಾಷ್ಟ್ರ ಸಂಘದ ಉಲ್ಲೇಖ ನೀಡುತ್ತಾ ಅದು ಸುರಕ್ಷಾ ಪರಿಷತ್ತಿನ ಮೂಲಕ ಕಾಶ್ಮೀರ ಪ್ರಾಪ್ತಿಯ ಬಾಗಿಲನ್ನು ತೆರೆದಿಟ್ಟಿದೆ. ತಾಷ್ಕೆಂಟ್ ಒಪ್ಪಂದದ ಹೆಸರಿನಲ್ಲಿ ರಷ್ಯಾದ ಸಹಾಯವನ್ನು ಪಡೆದೂ ಅದು ಕಾಶ್ಮೀರವನ್ನು ನಮ್ಮ ಕೈಯಿಂದ ಕಿತ್ತುಕೊಳ್ಳುವ ಪ್ರಯತ್ನ ಮಾಡಬಲ್ಲದು. ಅತಿಕ್ರಮಣಕಾರರ ಮಾರ್ಗವನ್ನಂತೂ ಅದು ಪ್ರಶಸ್ತವಾಗಿಸಿದೆ. ಪುನಃ ಅದು ಯುದ್ಧ ಹಾಗೂ ಮಾರಾಮಾರಿಯ ಕಾರ್ಯಾಚರಣೆಗಳ ಮೂಲಕ ಕಾಶ್ಮೀರವನ್ನು ಹೊಡೆದುಕೊಳ್ಳಲು ಪ್ರಯತ್ನಿಸಬಲ್ಲದು. ಬಲಪ್ರಯೋಗ ಮಾಡುವುದಿಲ್ಲವೆಂಬ ನಿರ್ಣಯ ಕಾಶ್ಮೀರಕ್ಕೆ ಅನ್ವಯಿಸುವುದಿಲ್ಲವೆಂದು ಅದರ ನೇತಾರರು ಸ್ಪಷ್ಟವಾಗಿ ಹೇಳಿದ್ದಾರೆ. ಸಂಯುಕ್ತ ರಾಷ್ಟ್ರ ಸಂಘದ ೫೫ನೇ ಅನುಚ್ಛೇದದಲ್ಲಿ ರಾಷ್ಟ್ರಗಳಿಗೆ ತಮ್ಮ ಸ್ವಾತಂತ್ರ್ಯ ಹಾಗೂ ರಕ್ಷಣೆಗಾಗಿ ಬಲಪ್ರಯೋಗ ಮಾಡಲು ಅನುಮತಿ ನೀಡಲಾಗಿದೆ. ಪಾಕಿಸ್ತಾನವು ಕಾಶ್ಮೀರದ ಪ್ರಶ್ನೆಯನ್ನು ಸ್ವಾತಂತ್ರ್ಯದ ಪ್ರಶ್ನೆ ಎಂದು ಹೇಳುತ್ತದೆ.

**ಪಾಕಿಸ್ತಾನದ ಮುಂದಿನ ಹೆಜ್ಜೆಗಳು**

ಒಪ್ಪಂದ ಪತ್ರದ ಮೇಲೆ ಸಹಿ ಹಾಕಿದ ತಕ್ಷಣವೇ ತಾಷ್ಕೆಂಟಿನಲ್ಲಿ ಪಾಕಿಸ್ತಾನದ ವಿದೇಶಮಂತ್ರಿಗಳಾದ ಶ್ರೀ ಅಜೀಜ್ ಅಹಮದ್‌ರವರು ಪತ್ರಕರ್ತರ ಒಂದು ಗೋಷ್ಠಿಯಲ್ಲಿ ತಾಷ್ಕೆಂಟಿನ ಒಪ್ಪಂದವು ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಲು ಮೂರು ಮಾರ್ಗಗಳನ್ನು ತೆರೆದಿಟ್ಟಿದೆ ಎಂದು ಹೇಳಿದರು. ಮೊದಲನೆಯದಾಗಿ, ಸೇನೆಗಳನ್ನು ಹಿಂದಕ್ಕೆ ಕರೆಸಿಕೊಂಡ ನಂತರ ಸುರಕ್ಷಾ ಮಂಡಳಿಯು ಭಾರತ–ಪಾಕಿಸ್ತಾನದ ನಡುವಿನ ಸಂಘರ್ಷದ ಮೂಲವಾಗಿರುವ ಸಮಸ್ಯೆಯನ್ನು ರಾಜಕೀಯವಾಗಿ ಪರಿಹರಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲೇಬೇಕು. ಎರಡನೆಯದಾಗಿ, ತಾಷ್ಕೆಂಟ್ ಒಪ್ಪಂದದ ೯ನೇ ಭಾಗದ ಪ್ರಕಾರ, ಭಾರತ ಹಾಗೂ ಪಾಕಿಸ್ತಾನಗಳು ವಿಭಿನ್ನ ಸ್ತರಗಳಲ್ಲಿ ಸಂಯುಕ್ತ ಸಮಿತಿಗಳನ್ನು ರಚಿಸುತ್ತವೆ. ಅವು ಕಾಶ್ಮೀರ ಸಮಸ್ಯೆಯ ಬಗ್ಗೆ ಚರ್ಚಿಸಿ ಪರಿಹಾರವನ್ನು ಒದಗಿಸಿಕೊಡಲಿವೆ.

ಮೂರನೆಯದಾಗಿ ಸೋವಿಯತ್‌ನ ಮಧ್ಯಸ್ಥಿಕೆಯಿಂದಲೂ ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಬಹುದು. ಅಂದರೆ ಯಾವ ಭದ್ರತಾ ಪರಿಷತ್ತಿನ ಪ್ರಸ್ತಾವನೆಯನ್ನು ಭಾರತವು ಎಂದೂ ಪೂರ್ಣತಃ ಸ್ವೀಕಾರ ಮಾಡಿಲ್ಲ ಹಾಗೂ ಯುದ್ಧ ವಿರಾಮವನ್ನು 'ಸಾದ ಯುದ್ಧ-ವಿರಾಮ' ಎಂದು ಒಪ್ಪಿ ಅದನ್ನೇ ಈಗ ನಮ್ಮ ಮೇಲೆ ಹೇರುವ ವ್ಯವಸ್ಥೆ ಮಾಡಲಾಗುತ್ತಿದೆ. ೨೫ನೇ ಫೆಬ್ರವರಿಯ ಹೊತ್ತಿಗೆ ಸೇನೆಗಳು ವಾಪಸಾಗಲಿವೆ. ಅದಾದ ನಂತರ ಪಾಕಿಸ್ತಾನವು ಪುನಃ ಭದ್ರತಾ ಪರಿಷತ್ತಿನ ಸಭೆ ಕರೆದು ಈಗ ಕಾಶ್ಮೀರದ ರಾಜಕೀಯ ಆಯಾಮದ ಬಗ್ಗೆ ಚರ್ಚೆಯಾಗಬೇಕಿದೆ ಎಂದು ಹೇಳುತ್ತದೆ. ಆಗ ರಷ್ಯಾ ತನ್ನ ನಿಷೇಧಾಧಿಕಾರವನ್ನು ಪ್ರಯೋಗಿಸುವುದೇನು? ಕೆಲವರು ಇದಕ್ಕೆ 'ಹೌದು' ಎನ್ನುತ್ತಾರೆ. ರಷ್ಯಾ ನಮಗೆ ಈ ವಿಷಯದಲ್ಲಿ ಮಾತು ಕೊಟ್ಟಿದೆ. ಒಂದು ವೇಳೆ ಹೀಗಾದಲ್ಲಿ ಸಮಸ್ಯೆ ಸುರಕ್ಷಾ ಪರಿಷತ್ತಿನ ಕೈಯಿಂದ ರಷ್ಯಾದ ಕೈಗೆ ಹಸ್ತಾಂತರವಾಗುತ್ತದೆ. ಪುನಃ 'ತಾಷ್ಕೆಂಟಿನ'ನ ವ್ಯವಸ್ಥೆಯಾಗುತ್ತದೆ ಹಾಗೂ ರಷ್ಯಾ ತನ್ನ ನಾನಾ ಸಲಹೆಗಳನ್ನು ನಮ್ಮ ತಲೆಗೆ ಕಟ್ಟಲು ಪ್ರಯತ್ನಿಸುತ್ತದೆ. ಆಗ ನಾವು ದೃಢವಾಗಿರಲು ಸಾಧ್ಯವೇನು? ರಷ್ಯಾದ ಕೋಪಿಸಿಕೊಳ್ಳುವುದರ ಬಗ್ಗೆ ನಾವು ಚಿಂತಿಸುವುದಿಲ್ಲವೇನು? ಯಾವ 'ಒಂಟಿತನ'ದಿಂದ ಪಾರಾಗಲು ಭಾರತದ ಹಿತ, ಸಂಸತ್ತಿನ ಸಂಕಲ್ಪ, ದೇಶದ ಗೌರವ, ಸೇನೆಯ ಪರಾಕ್ರಮ ಹಾಗೂ ನೀಡಲಾದ ಆಶ್ವಾಸನೆಗಳನ್ನು ಒಂದೆಡೆ ಇಟ್ಟು ತಾಷ್ಕೆಂಟ್ ಒಪ್ಪಂದದ ಮೇಲೆ ಒಲ್ಲದ ಮನಸ್ಸಿನಿಂದ ಸಹಿ ಮಾಡಿದೆವೋ, ಅದೇ 'ಒಂಟಿತನ' ನಮ್ಮ ಮೇಲೆ ಭೂತದಂತೆ ಸವಾರಿ ಮಾಡುವುದು. ನಮ್ಮ ಅಸಹಾಯಕತೆ ನಮ್ಮನ್ನು ವಿನಾಶಗೊಳಿಸುತ್ತದೆ ಹಾಗೂ ಕಾಶ್ಮೀರದ ಬಲಿದಾನ ಮಾಡಬೇಕಾಗಿ ಬರುತ್ತದೆ.

ಮಧ್ಯಸ್ಥಿಕೆಯ ಪ್ರಯತ್ನಗಳಿಗೆ ರಷ್ಯಾ ನಮಗೆ ಸಹಕರಿಸುತ್ತದೆ ಎಂಬ ಭರವಸೆ ಮತ್ತು ವಿಶ್ವಾಸವನ್ನು ಕೆಲವರು ಬೆಳೆಸಿಕೊಂಡು ಬಂದಿದ್ದಾರೆ. ತಾಷ್ಕೆಂಟಿನ ಅನುಭವ ಈ ವಿಶ್ವಾಸವನ್ನು ಪುಷ್ಟೀಕರಿಸುವುದಿಲ್ಲ. ರಷ್ಯಾ ಒಂದು ವೇಳೆ ನಮಗೆ ಸಹಾಯ ಮಾಡಿದ ಪಕ್ಷದಲ್ಲಿ ಪಾಕಿಸ್ತಾನವು ಚೀನಾದ ಮಡಿಲಿಗೆ ಪೂರ್ಣವಾಗಿ ಹೋಗುವುದಾಗಿ ಬೆದರಿಕೆ ಹಾಕುತ್ತದೆ. ಅದರ ಸಹಾಯಕ್ಕಾಗಿ ಚೀನಾ ದೇಶವು ಭಾರತದ ಉತ್ತರದ ಗಡಿಯನ್ನು ಕೆಣಕುವ ಪ್ರಯತ್ನ ಮಾಡುತ್ತದೆ. ಚೀನಾದ ಕಡೆಯಿಂದ ಆಕ್ರಮಣದ ಅಪಾಯ ಹೆಚ್ಚಾಗುತ್ತದೆ. ನಂತರ ರಷ್ಯಾ ಹಾಗೂ ಅಮೆರಿಕಾ ಎರಡೂ ದೇಶಗಳು ಪಾಕಿಸ್ತಾನವನ್ನು ಚೀನಾದ ವಶದಿಂದ ಮುಕ್ತಗೊಳಿಸಬೇಕು ಎಂದು ನಮಗೆ ಸಲಹೆ ನೀಡುತ್ತವೆ. ಇದಕ್ಕಾಗಿ ಅದನ್ನೂ ಮಾಡಬೇಕೆಂದು ಹೇಳುತ್ತವೆ ಹಾಗೂ ಈ ರೀತಿ 'ಮ್ಯೂನಿಖ್'ನ ಪುನರಾವರ್ತನೆಗೆ ಎರಡನೇ 'ತಾಷ್ಕೆಂಟ್'ನ ವ್ಯವಸ್ಥೆಯಾಗುತ್ತದೆ.

ತಾಷ್ಕೆಂಟಿನ ಒಪ್ಪಂದ ಆದ ತಕ್ಷಣದಿಂದಲೇ ಪಾಕಿಸ್ತಾನದ ನೇತಾರರು 'ಕಾಶ್ಮೀರ'ದ ಜಪ ಮಾಡುವ ಪರಿಯನ್ನು ನೋಡಿದರೆ, ಈ ರಹಸ್ಯ ಮಾತುಕತೆಯಿಂದ ಅವರ ಆತ್ಮವಿಶ್ವಾಸ ಹೆಚ್ಚಾಗಿದೆ ಎಂದು ಸ್ಪಷ್ಟವಾಗುತ್ತದೆ.

ಒಂದೇ ಏಟಿಗೆ ಇಡೀ ಪಾಕಿಸ್ತಾನವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳ ಬಯಸುತ್ತಿದ್ದ ಪಾಕಿಸ್ತಾನದ ಉಗ್ರವಾದಿ ಶಕ್ತಿಗಳು ಅಥವಾ ಯಾರನ್ನು ಪಾಕಿಸ್ತಾನದ ನೇತಾರರು ಭಾರತವು ಈ ಯುದ್ಧದಲ್ಲಿ ಹೀನಾಯವಾಗಿ ಸೋತುಹೋಗಿದೆ ಎಂದು ತಮ್ಮ ಸುಳ್ಳು ಪ್ರಚಾರದಿಂದ ಭ್ರಮೆಗೊಳಪಡಿಸಿದ್ದರೋ ಅವರು ತಾಷ್ಕೆಂಟ್ ಒಪ್ಪಂದದಿಂದ ನಿರಾಶರಾಗಿದ್ದಾರೆ ಎಂಬುದು ಸತ್ಯ. ಆದರೆ ಅವರ ನಿರಾಶೆ ಹಾಗೂ ಚಳುವಳಿಯ ಕಾರಣದಿಂದ ತಾಷ್ಕೆಂಟ್ ಒಪ್ಪಂದದಿಂದ ನಮಗೆ ಲಾಭವಾಗಿದೆ ಎಂದು ತಪ್ಪಾಗಿ ಅರ್ಥೈಸಬಾರದು.

## ಇತರೆ ಸಮಸ್ಯೆಗಳು

ಭಾರತ ಹಾಗೂ ಪಾಕಿಸ್ತಾನಗಳ ನಡುವೆ ಇರುವ ಇನ್ನೂ ಅನೇಕ ಸಮಸ್ಯೆಗಳಿಗೆ ಕಳೆದ ೧೮ ವರ್ಷಗಳಿಂದ ಯಾವುದೇ ಪರಿಹಾರ ಸಿಕ್ಕಿಲ್ಲ. ಪಾಕಿಸ್ತಾನದಿಂದ ಸುಮಾರು ೧ ಕೋಟಿ ಹಿಂದೂಗಳು ಭಾರತಕ್ಕೆ ಶರಣಾರ್ಥಿಗಳಾಗಿ ಬಂದಿದ್ದಾರೆ. ಒಂದು ಅಂದಾಜಿನಂತೆ ೧೨೦೦ ಕೋಟಿ ರೂಪಾಯಿಗಳ ಸಂಪತ್ತನ್ನು ಬಿಟ್ಟು ಬಂದಿದ್ದಾರೆ. ಪಶ್ಚಿಮ ಪಾಕಿಸ್ತಾನದಿಂದ ಬಂದಿರುವ ಹಿಂದೂಗಳು ಅಲ್ಲಿ ೪೮ ಲಕ್ಷ ಸ್ಟಾಂಡರ್ಡ್ ಎಕರೆಗಳಷ್ಟು ಫಲವತ್ತಾದ ಭೂಮಿ ಹಾಗೂ ಸುಮಾರು ೪೦೦ ಕೋಟಿ ರೂಪಾಯಿಗಳ ಮೌಲ್ಯದ ಮನೆಗಳ ಆಸ್ತಿಯನ್ನು ತೊರೆದು ಬಂದಿದ್ದಾರೆ. ಇದಲ್ಲದೆ ಯಂತ್ರ–ಕಾರ್ಖಾನೆಗಳು, ಅಂಗಡಿ, ಬ್ಯಾಂಕ್ ಮುಂತಾದವು ಸಂಪತ್ತು, ಸಂಘ ಹಾಗೂ ಸಂಸ್ಥೆಗಳ ಆಸ್ತಿಯ ಲೆಕ್ಕ ಬೇರೆ. ಪೂರ್ವ ಬಂಗಾಳದಿಂದ ಬಂದ ಹಿಂದೂಗಳ ಸಂಪತ್ತನ್ನು ಅಂದಾಜು ಮಾಡಲೇ ಇಲ್ಲ. ಅದನ್ನೂ ಸೇರಿಸಿದರೆ ಮೂಲ ಸಂಪತ್ತು ಇನ್ನೂ ಹೆಚ್ಚಾಗುತ್ತದೆ. ಪಾಕಿಸ್ತಾನದಿಂದ ಈ ಹಣಕ್ಕೆ ಪರಿಹಾರ ಪಡೆದುಕೊಳ್ಳಬೇಕು. ಆದರೆ ಇಲ್ಲಿಯವರೆಗೆ ಒಂದು ಪೈಸೆಯೂ ಸಿಕ್ಕಿಲ್ಲ. ಈ ವಿಷಯವಾಗಿ ಅದು ಮಾತನ್ನೂ ಆಡುವುದಿಲ್ಲ.

ಇದೇ ಪ್ರಕಾರವಾಗಿ ಪಾಕಿಸ್ತಾನದಿಂದ ಭಾರತಕ್ಕೆ ಬಂದ ಶರಣಾರ್ಥಿಗಳಿಗೆ ಪುನರ್ವಸತಿ ಕಲ್ಪಿಸಲು ಭಾರತವು ಭಾರೀ ಪ್ರಮಾಣದ ಹಣವನ್ನು ಖರ್ಚು ಮಾಡಬೇಕಾಯಿತು. ಭಾರತ ಸರ್ಕಾರದ ಮಾಹಿತಿ ವಿಭಾಗದ ಪ್ರಕಾರ ೧೯೬೪ರವರೆಗೆ ಈ ಹಣ ೪೨೦ ಕೋಟಿಯಷ್ಟಾಗುತ್ತದೆ. ಈ ಹಣವನ್ನು

ಪಾಕಿಸ್ತಾನ ಭರಿಸಬೇಕು. ಕಾಲುವೆಯ ನೀರಿಗೆ ಹೊರ ಸೇತುವೆಗಳನ್ನು ನಿರ್ಮಿಸಲು ಪಾಕಿಸ್ತಾನಕ್ಕೆ ಭಾರತ ಹಣ ಕೊಡುವುದಾದರೆ ಪಾಕಿಸ್ತಾನದ ನೀತಿಗಳು ಹಾಗೂ ಅಲ್ಲಿನ ಆಡಳಿತದ ಕುಕೃತ್ಯಗಳಿಗೆ ಗುರಿಯಾಗಿ ಮನೆ–ಮಠಗಳನ್ನು ಕಳೆದುಕೊಂಡವರಿಗೆ ಪುನರ್ವಸತಿ ಕಲ್ಪಿಸಲು ವ್ಯಯಿಸಿದ ಹಣವನ್ನು ಪಾಕಿಸ್ತಾನವು ಏಕೆ ಭರಿಸಬಾರದು?

ಪಾಕಿಸ್ತಾನದಿಂದ ಕೇವಲ ಮುಸ್ಲಿಮೇತರರು ಮಾತ್ರವಲ್ಲದೆ ಮುಸಲ್ಮಾನರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಅಸ್ಸಾಂ, ತ್ರಿಪುರಾ, ಪಶ್ಚಿಮ ಬಂಗಾಳ ಹಾಗೂ ಬಿಹಾರ್‌ಗೆ ವಲಸೆ ಬಂದಿದ್ದಾರೆ. ಅವರು ಅಕ್ರಮವಾಗಿ ಬಂದು ವ್ಯವಸ್ಥಿತವಾಗಿ ನೆಲೆಯೂರಿದ್ದಾರೆ. ಅವರ ಸಂಖ್ಯೆಯನ್ನು ಸುಮಾರು ೧೨ ಲಕ್ಷಕ್ಕೆ ಹತ್ತಿರವೆಂದು ಅಂದಾಜಿಸಲಾಗಿದೆ. ಈ ಹೆಚ್ಚಿನ ಸಂಖ್ಯೆಯಿಂದ ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮಗಳು ಉಂಟಾಗಿವೆ. ಆದರೆ ಪಾಕಿಸ್ತಾನವು ಸಾಗುತ್ತಿರುವ ರೀತಿಯನ್ನು ಗಮನಿಸಿದರೆ ಈ ನಡೆಯ ಮೂಲದಲ್ಲಿ ಇರುವ ರಾಜಕೀಯ ಸಂಭಾವ್ಯತೆಗಳ ಕಡೆಗೆ ಕಣ್ಣು ಮುಚ್ಚಿ ಕೂಡುವಂತಿಲ್ಲ. ಭಾರತ ಸರ್ಕಾರವು ಈ ಅಕ್ರಮವಾಗಿ ಬಂದಿರುವವರನ್ನು ವಾಪಸ್ ಕಳಿಸಬೇಕೆಂದು ಬಯಸುತ್ತದೆ. ಪಾಕಿಸ್ತಾನವು ಈ ಮಾರ್ಗದಲ್ಲಿ ಅನೇಕ ಅಡೆತಡೆಗಳನ್ನುಂಟು ಮಾಡುತ್ತಿದೆ.

ಪಾಕಿಸ್ತಾನದಿಂದ ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಬಂದಿರುವ ಜನರಿಗೆ ಭೂಮಿಯನ್ನು ಬೇಡುವುದು ಸಹ ಸ್ವಾಭಾವಿಕವೇ, ಪಾಕಿಸ್ತಾನವು ಆಗಾಗ ತನ್ನ ನಾಗರಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಕಡೆಗೆ ತಳ್ಳುತ್ತಿದೆ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ.

ದೇಶ ವಿಭಜನೆಯ ಸಮಯದಲ್ಲಿ ಸಂಯುಕ್ತ ಭಾರತವು ನೀಡಬೇಕಾದ ಮೊತ್ತದ ಹೊಣೆಯನ್ನು ಭಾರತವು ತನ್ನ ಮೇಲೆ ಹೊತ್ತುಕೊಂಡಿತು. ಅದರಲ್ಲಿ ಸುಮಾರು ೩೦೦ ಕೋಟಿ ರೂ.ಗಳ ಮೊತ್ತ ಪಾಕಿಸ್ತಾನದ ಪಾಲಿಗೆ ಬರುತ್ತದೆ. ಈ ಮೊತ್ತವನ್ನು ಪಾಕಿಸ್ತಾನವು ೬ ಕೋಟಿ ರೂ.ಗಳ ವಾರ್ಷಿಕ ಕಂತುಗಳಲ್ಲಿ ತೀರಿಸಬೇಕಾಗಿತ್ತು. ಆದರೆ ಇಲ್ಲಿಯವರೆಗೆ ಒಂದು ಕಂತನ್ನೂ ತೀರಿಸಿಲ್ಲ. ಈ ವಿಷಯದ ಬಗೆಗೂ ಚಿಂತನೆ ಮಾಡಬೇಕಾಗಿದೆ.

ಇತ್ತೀಚಿನ ಸಂಘರ್ಷದಲ್ಲೂ ಪಾಕಿಸ್ತಾನವು ನಮ್ಮ ಬಹಳಷ್ಟು ಸರಕುಗಳನ್ನು ವಶಪಡಿಸಿಕೊಂಡಿತ್ತು. ಅಸ್ಸಾಂನಿಂದ ಕಲ್ಕತ್ತಾಕ್ಕೆ ಬರುವ ಚಹಾ ಹಾಗೂ ಪ್ರಪಂಚದ ಬೇರೆ–ಬೇರೆ ದೇಶಗಳಿಂದ ಬರುವ ಎಲ್ಲಾ ಸರಕುಗಳನ್ನು ಪಾಕಿಸ್ತಾನದ ಬಂದರುಗಳಲ್ಲಿ ತಡೆಯಲಾಯಿತು. ಈ ಸರಕುಗಳ ಮೌಲ್ಯ ೨೦ ಕೋಟಿ ರೂಪಾಯಿಗಳಿಗಿಂತ ಕಡಿಮೆ ಇರಲಾರದು. ಈ ಸರಕುಗಳನ್ನು ಹಿಂತಿರುಗಿಸುವ, ಅವುಗಳಲ್ಲಿ ಕಡಿಮೆಯಾಗಿರುವ ಅಥವಾ ಹಾಳಾಗಿರುವ ಸರಕನ್ನು ಬದಲಾವಣೆ ಮಾಡುವ

ಅಥವಾ ವಿಳಂಬದಿಂದ ಉಂಟಾಗುವ ಆರ್ಥಿಕ ನಷ್ಟವನ್ನು ಪಾಕಿಸ್ತಾನವೇ ತುಂಬಿಕೊಡಬೇಕು.

ಗಡಿವಿವಾದಗಳನ್ನು ಬಗೆಹರಿಸುವಲ್ಲಿಯೂ ಇಲ್ಲಿಯವರೆಗೆ ಪಾಕಿಸ್ತಾನದ ಆರೋಪಗಳನ್ನು, ಅವು ಸರಿಯಾಗಿರಲಿ ಅಥವಾ ತಪ್ಪಾಗಿರಲಿ ಸ್ವೀಕರಿಸಿ ನಾವು ಆಗಾಗ್ಗೆ ರಾಜಿ ಒಪ್ಪಂದ ಮಾಡಿಕೊಳ್ಳುತ್ತಲೇ ಬಂದಿದ್ದೇವೆ. ಆದರೆ ಹಿಂದೂ–ಬಾಹುಳ್ಯದ ಕಾರಣದಿಂದ ರೆಡ್‌ಕ್ಲಿಫ್ ಅವಾರ್ಡ್‌ನ ಅನುಸಾರ ಭಾರತಕ್ಕೆ ಸಿಗಬೇಕಾಗಿದ್ದ ಸಿಲ್‌ಹಟ್‌ನ ಹನ್ನೆರಡು ಠಾಣೆಗಳು ಹಾಗೂ ಚಿಟ್‌ಗಾಂವ್‌ನ ಪರ್ವತಿಯ ಪ್ರದೇಶಗಳು ಇಂದಿಗೂ ಪಾಕಿಸ್ತಾನದ ವಶದಲ್ಲಿಯೇ ಇವೆ. ಪಾಕಿಸ್ತಾನವು ಅವುಗಳ ಬಗೆಗೆ ಚರ್ಚಿಸಲೂ ತಯಾರಿಲ್ಲ.

**ಮುಸ್ಲಿಮೇತರರು ಹಾಗೂ ಫಖ್ತೂನರ ಜೊತೆಗಿನ ವಿಶ್ವಾಸಘಾತ**

ತಾಷ್ಕೆಂಟಿನ ಒಪ್ಪಂದದಲ್ಲಿ ಪರಸ್ಪರರ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವ ನೀತಿಯನ್ನು ಸ್ವೀಕರಿಸಲಾಗಿದೆ. ಎರಡು ರಾಷ್ಟ್ರಗಳ ನಡುವಿನ ಸಾಮಾನ್ಯ ವ್ಯವಹಾರ ಸಂಹಿತೆಗೆ ಸಂಬಂಧಿಸಿದಂತೆ ಇದು ಒಂದು ಒಳ್ಳೆಯ ಸಿದ್ಧಾಂತ. ಆದರೆ ಪಾಕಿಸ್ತಾನದ ನಿರ್ಮಾಣ ಸಾಮಾನ್ಯ ಹಾಗೂ ಪ್ರಾಕೃತಿಕ ಆಧಾರದ ಮೇಲೆ ಆದುದಲ್ಲ. ಭಾರತ ಹಾಗೂ ಪಾಕಿಸ್ತಾನ ೧೯೪೭ರವರೆಗೆ ಒಂದೇ ದೇಶವಾಗಿದ್ದವು ಹಾಗೂ ಇಂದಿಗೂ ಅವುಗಳ ಜನತೆಯ ಮಧ್ಯೆ ಐಕ್ಯತೆಯ ಸೂತ್ರವಿರುವುದನ್ನು ಮರೆಯಲಾಗುವುದಿಲ್ಲ. ಇಂದು ಪಾಕಿಸ್ತಾನದಲ್ಲಿ ಹಿಂದೂಗಳ ದುಃಸ್ಥಿತಿ ಹಾಗೂ ಫಖ್ತೂನಿಸ್ತಾನದ ನೇತಾರರ ವಿಷಯದಲ್ಲಾಗುವ ಅನ್ಯಾಯದ ಕುರಿತಾಗಿ ಭಾರತ ಉದಾಸೀನದ ಧೋರಣೆ ಹೊಂದಲಾಗುವುದಿಲ್ಲ. ಎಲ್ಲಿಯವರೆಗೆ ಹಿಂದೂಗಳಿಗೆ ಸಮಾನ ಅಧಿಕಾರಗಳು ಪ್ರಾಪ್ತವಾಗುವುದಿಲ್ಲವೋ ಹಾಗೂ ಅವರ ಪ್ರಾಣ, ಮಾನ ಹಾಗೂ ಗೌರವಗಳಿಗೆ ಹಾನಿಯಾಗುವುದಿಲ್ಲವೆಂಬ ಭರವಸೆ ಮೂಡುವುದಿಲ್ಲವೋ ಅಲ್ಲಿಯವರೆಗೆ ಹಸ್ತಕ್ಷೇಪವಿಲ್ಲವೆಂಬ ಹೆಸರಿನಲ್ಲಿ ಆ ಸಮಸ್ಯೆಗಳನ್ನು ಮರೆತುಬಿಡುವುದು ತನ್ನ ಕರ್ತವ್ಯವನ್ನು ಅವಹೇಳನೆ ಮಾಡಿದಂತೆ. ಮುಸ್ಲಿಂಲೀಗ್‌ನ ದ್ವಿರಾಷ್ಟ್ರವಾದದ ಸಿದ್ಧಾಂತವನ್ನು ಒಪ್ಪಿಕೊಂಡಿಲ್ಲದವರನ್ನು – ಅವರು ಹಿಂದುಗಳಿರಬಹುದು ಅಥವಾ ಮುಸಲ್ಮಾನರಾಗಿರಬಹುದು–ನಿಧಾನವಾಗಿ ಮುಗಿಸಿಬಿಡುವ ನೀತಿಯನ್ನು ಪಾಕಿಸ್ತಾನಿ ಶಾಸಕರು ಹಿಂದಿನ ೧೮ ವರ್ಷಗಳಿಂದ ನಡೆಸಿಕೊಂಡು ಬಂದಿದೆ. ನಾವು ದಕ್ಷಿಣ ಆಫ್ರಿಕಾ ಹಾಗೂ ರೊಡೆಶಿಯಾದ ಕರಿಯ ನಿವಾಸಿಗಳ ಬಗೆಗೆ ಉಂಟಾಗುತ್ತಿರುವ ಭೇದ–ಭಾವ ಹಾಗೂ ಅನ್ಯಾಯದ ವಿರುದ್ಧ ಹೋರಾಡಬಲ್ಲೆವು. ಆದರೆ ನಮ್ಮ ಪಕ್ಕದಲ್ಲಿಯೇ ಹಾಗೂ ೧೯೪೭ರವರೆಗೆ

ಪಾಕಿಸ್ತಾನದ ಸ್ವಾತಂತ್ರ್ಯವೂ ಸೇರಿದಂತೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿರುವವರ ದುಸ್ಥಿತಿಯ ಬಗೆಗೆ ಹೇಗೆ ತಾನೇ ಗೊತ್ತಿಲ್ಲದವರಂತೆ ಇರಲು ಸಾಧ್ಯ.

ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್‌ರನ್ನು ಭಾರತಕ್ಕೆ ಬರುವಂತೆ ಹಾಗೂ ಇಲ್ಲಿಂದಲೇ ತಮ್ಮ ಚಳುವಳಿಯನ್ನು ಆರಂಭಿಸಲು ಭಾರತದ ಆಡಳಿತದ ವಕ್ತಾರರು ಸಂಸತ್ತಿನಲ್ಲಿ ಆಹ್ವಾನ ನೀಡಿದ್ದರು. ಸಂಸತ್ತಿನ ಅನುಮತಿಯಿಲ್ಲದೆ ಅದನ್ನು ವಾಪಸ್ ಪಡೆಯಲಾಗುವುದಿಲ್ಲ.

**ಪಾಕಿಸ್ತಾನವು ಕಾಶ್ಮೀರಿಗಳನ್ನು ಉದ್ಧಾರ ಮಾಡುತ್ತಿದೆ**

ಹಸ್ತಕ್ಷೇಪ ಮಾಡದ ನಿರ್ಧಾರವು ಕಾಶ್ಮೀರದ ವಿಷಯದಲ್ಲಿ ಅನ್ವಯಿಸುವುದಿಲ್ಲವೆಂದು ಪಾಕಿಸ್ತಾನವು ಘೋಷಿಸಿದೆ. ಪಾಕಿಸ್ತಾನದ ನೇತಾರರು ಕಾಶ್ಮೀರದ ಜನತೆಯನ್ನು ನಿರಂತರವಾಗಿ ಉದ್ರೇಕಿಸುತ್ತಿದ್ದಾರೆ. ಹಿಂದಿನ ಕೇಂದ್ರಮಂತ್ರಿಗಳಾದ ಶ್ರೀ ಮಹಾವೀರ ತ್ಯಾಗಿಯವರು ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಹಸ್ತಕ್ಷೇಪ ಮಾಡದಿರುವ ಘೋಷಣೆಯ ಕಾರಣದಿಂದಾಗಿ ಪಾಕಿಸ್ತಾನವು ಕಾಶ್ಮೀರದಿಂದ ತನ್ನ ಸಹಾಯಹಸ್ತವನ್ನು ಹಿಂಪಡೆಯುವುದೆಂದು ಯೋಚಿಸಿ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದ ಜನರಿಗೆ ಇದರಿಂದ ಜ್ಞಾನೋದಯವಾಗಬೇಕಿದೆ.

**ಶಾಂತಿಯ ಭಾಷೆ ಕೇವಲ ತೋರಿಕೆಯದಷ್ಟೆ**

ತಾಷ್ಕೆಂಟ್ ಒಪ್ಪಂದವನ್ನು ಶಾಂತಿ ಹಾಗೂ ಒಳ್ಳೆಯ ನೆರೆಹೊರೆಯ ಮಾತುಕತೆ ಎಂದು ಹೇಳಲಾಗುತ್ತದೆ. ಭಾರತವು ಇಚ್ಛಿಸಿದ್ದಂತೆ ಯುದ್ಧ ಮಾಡದಿರುವ ಒಪ್ಪಂದವನ್ನು ಪಾಕಿಸ್ತಾನವು ತಿರಸ್ಕರಿಸಿತು. ಒಂದಂತೂ ನಿಜ. ಸಂಯುಕ್ತ ರಾಷ್ಟ್ರ ಸಂಘದ ಘೋಷಣೆಯ ಅನುಸಾರವಾಗಿ ಶಾಂತಿಪೂರ್ವಕವಾಗಿ ಎಲ್ಲ ವಿಷಯಗಳನ್ನು ಪರಿಹರಿಸಿಕೊಳ್ಳುವ ಸದಿಚ್ಛೆಯನ್ನು ಪಾಕಿಸ್ತಾನ ಪುನರುಚ್ಚರಿಸಿದೆ. ಭಾರತದ ಬಹಳಷ್ಟು ಮಂದಿ ಈ ಒಂದು ಮಧುರವಾದ ಘೋಷಣೆಯಿಂದ, ಎಷ್ಟು ಪ್ರಭಾವಿತರಾಗಿದ್ದಾರೆಂದರೆ, ಅವರು ಶಕ್ತಿ ಮೀರಿ ತಮ್ಮ ಸರ್ವಸ್ವವನ್ನು ಸಮರ್ಪಿಸಲು ಸಿದ್ಧರಾಗಿದ್ದಾರೆ. ಅಂತಾರಾಷ್ಟ್ರೀಯ ಜಗತ್ತಿನ ವ್ಯವಹಾರಗಳು ಈ ರೀತಿಯ ಭಾವುಕತೆ ಹಾಗೂ ಮುಗ್ಧತೆಯಿಂದ ನಡೆಯುವುದಿಲ್ಲ. ಅಲ್ಲಿ ಶೇಖ್‌ಚಿಲ್ಲಿಯ ಕಥೆಗಳನ್ನು ಹೊರತುಪಡಿಸಿದರೆ ಇನ್ನೆಲ್ಲಿಯೂ ಸಿಗದಂಥ ಎಲ್ಲ ರೀತಿಯ ಅವಾಸ್ತವಿಕತೆ ಕಂಡುಬರುತ್ತದೆ. ನಾವು ಶಾಂತಿ ಹಾಗೂ ಒಪ್ಪಂದದ ವಿರೋಧಿಗಳಲ್ಲ. ನಾವು ಪಾಕಿಸ್ತಾನದ ಜೊತೆ ಯಾವಾಗಲೂ ಯುದ್ಧ ಮಾಡಲು ಬಯಸುವುದಿಲ್ಲ. ಆದರೆ

ಶಾಂತಿಯ ಘೋಷಣೆಯನ್ನು ಕೂಗುತ್ತಾ ಯಾರಾದರೂ ನಮ್ಮನ್ನು ಮೋಸಗೊಳಿಸಿದರೆ ಅಥವಾ ನಾವು ನಮ್ಮ ಪ್ರಜ್ಞೆಯನ್ನೇ ಮರೆಯುವಂತಾದರೆ, ಅದನ್ನು ನಾವು ಒಪ್ಪುವುದಿಲ್ಲ.

ತಾಷ್ಕೆಂಟಿನ ಒಪ್ಪಂದದಲ್ಲಿ ಬರೆಯಲಾಗಿರುವಂಥ ಶಾಂತಿ ಮತ್ತು ಮಿತ್ರತ್ವದ ಭಾಷೆ ಹೊಸತೇನೂ ಅಲ್ಲ. ಪ್ರತಿಯೊಂದು ಒಪ್ಪಂದದ ಪ್ರಸ್ತಾವನೆಯಲ್ಲಿ ಇದೇ ರೀತಿಯ ಭಾಷೆಯ ಪ್ರಯೋಗವಾಗಿರುತ್ತದೆ ಕಛ್ ಒಪ್ಪಂದದ ಪ್ರಸ್ತಾವನೆಯಲ್ಲೂ ಒತ್ತಡವನ್ನು ಕಡಿಮೆಗೊಳಿಸುವ ವಿಚಾರವನ್ನು ಹೇಳಾಗಿತ್ತು. ನಹರೀ ನೀರಿನ ಒಪ್ಪಂದದ ಮೇಲೆ ಸಹಿ ಹಾಕುವ ಸಮಯದಲ್ಲೂ ಭಾರತ–ಪಾಕಿಸ್ತಾನದ ಮಿತ್ರತ್ವ ದೃಢಪಡಿಸಲು ಅಡಿಪಾಯ ಹಾಕುವ ಘೋಷಣೆಯನ್ನು ಮಾಡಲಾಗಿತ್ತು. ನೆಹರೂ–ಲಿಯಾಕತ್ ಫ್ಯಾಕ್ಟ್ ಸಹ ಸದ್ಭಾವನೆ ಹಾಗೂ ಮಿತ್ರತ್ವ ಆಧಾರಶಿಲೆ ಎಂದು ಭಾವಿಸಲಾಗಿತ್ತು. ಇಂದು ತಾಷ್ಕೆಂಟಿನ ಭಾವನೆಯ ಬಗ್ಗೆ ಎಲ್ಲ ಕಡೆ ಚರ್ಚೆಗಳಾಗುತ್ತಿವೆ. ವಾಂಡುಂಗ್ ಭಾವನೆ ಹಾಗೂ ಪಂಚಶೀಲ ಘೋಷಣೆಯ ಗತಿ ಏನಾಯಿತೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ತಾಷ್ಕೆಂಟಿನ ಭಾವನೆ ಅದಕ್ಕಿಂತ ಭಿನ್ನವಾಗೇನೂ ಇರಲಾರದು.

## ಇದು ಹೃದಯ ಪರಿವರ್ತನೆಯಲ್ಲ

ರಾಷ್ಟ್ರಪತಿ ಡಾ. ರಾಧಾಕೃಷ್ಣನ್‌ರವರು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರಿಗೆ ಅರ್ಪಿಸಿದ ಒಂದು ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಾ ಒಮ್ಮೆ ತಾಷ್ಕೆಂಟಿನ ಒಪ್ಪಂದದ ಬಗ್ಗೆ ಹೀಗೆ ಹೇಳಿದ್ದರು – ತಾಷ್ಕೆಂಟ್ ಒಂದು ಸಂಧಿಯ ಮತ್ತು ಕಾನೂನಿನ ದಾಖಲೆಯೂ ಅಲ್ಲ, ಬದಲಾಗಿ ಒಪ್ಪಂದ ಹೃದಯ ಪರಿವರ್ತನೆಯ ಒಂದು ಸಂಕಲ್ಪ. ಈ ರೀತಿಯ ಬಣ್ಣನೆ ಆಶಾವಾದಿ ಹಾಗೂ ಸುಧಾರಣಾವಾದಿ ದೃಷ್ಟಿಕೋನ ದ್ಯೋತಕವಾಗಬಹುದು ಮತ್ತು ಒಪ್ಪಂದ ಶಬ್ದಗಳನ್ನು ಮೇಲ್ಪದರದಲ್ಲಿ ಅರ್ಥೈಸುವವರು ಅದರಿಂದ ಪ್ರಭಾವಿತರಾಗಲೂಬಹುದು. ಆದರೆ ಆಳವಾಗಿ ಯೋಚಿಸಿದಾಗ ಹಾಗೂ ಘೋಷಣೆಯು ಸ್ವೀಕೃತವಾದಂಥ ರೀತಿಯ ಬಗೆಗೆ ಯೋಚಿಸಿದರೆ ಅದರಲ್ಲಿ ಹೃದಯ ಪರಿವರ್ತನೆಯನ್ನು ನೋಡುವ ಯಾವ ಕಾರಣವೂ ಇಲ್ಲ ಎಂಬುದನ್ನು ನಿರ್ವಿವಾದವಾಗಿ ಹೇಳಬಹುದು. ತಾಷ್ಕೆಂಟಿನಲ್ಲಿ ಒಂದು ವಾರಪೂರ್ತಿ ಮಾತುಕತೆ ನಡೆಯುತ್ತಲೇ ಇತ್ತು ಹಾಗೂ ಭಾರತ ಮತ್ತು ಪಾಕಿಸ್ತಾನದ ನಡುವೆ ಯಾವುದೇ ವಿಚಾರದಲ್ಲೂ ಐಕಮತ್ಯ ಮೂಡಲಿಲ್ಲ ಎಂಬುದು ಸರ್ವವಿದಿತ. ಕಡೆಯ ದಿನವಂತೂ ಮಾತುಕತೆ ವಿಫಲವಾಗುವ ಎಲ್ಲ ಸಂಭಾವ್ಯತೆಗಳೂ ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಎರಡೂ ಕಡೆಯ ನೇತಾರರಲ್ಲಿ ಯಾವುದೇ ಬಗೆಯ ಸಂಯುಕ್ತ ಹೇಳಿಕೆ ನೀಡುವುದರ ಕುರಿತು ಯಾವ ಸುಳಿವೂ ಇರಲಿಲ್ಲ.

ಒಬ್ಬ ಪಾಕಿಸ್ತಾನಿ ಭಾಷಣಕಾರನು ಸಂಯುಕ್ತ ಮಾತುಕತೆಯೇನೂ ಟಿಕೆಟ್ ಅಲ್ಲವಲ್ಲ, ಅದರ ಹೊರತಾಗಿ ನಾವು ನಮ್ಮ ದೇಶಕ್ಕೆ ಹಿಂದಿರುಗಲಾರವೇನು? ಎಂದು ನುಡಿದ. ಭಾರತವು ಒಂದರ ನಂತರ ಮತ್ತೊಂದು ಮಸೂದೆಯನ್ನು ಕೊಡುತ್ತಲೇ ಇತ್ತು ಹಾಗೂ ಪಾಕಿಸ್ತಾನದ ಶಿಷ್ಟಮಂಡಲ ಅವನ್ನು ಲೇವಡಿಮಾಡಿ ನಗೆಪಾಟಲಿಗೆ ಈಡಾಗುವಂತೆ ಮಾಡುತ್ತಲೇ ಇರುತ್ತಿತ್ತು. ಭಾರತದ ಯುದ್ಧ ಬೇಡ ಎಂಬ ಒಪ್ಪಂದದ ಪ್ರಸ್ತಾವನೆಯನ್ನು ಪಾಕಿಸ್ತಾನವು ಇದೇ ರೀತಿ ತಿರಸ್ಕರಿಸಿತು. ೯ನೇ ಜನವರಿಯಂದು ಬಂದ ಸಮಾಚಾರದ ಪ್ರಕಾರ ಔಪಚಾರಿಕ ಮಾತುಕತೆಗಳ ಸಂಭಾವ್ಯತೆಯೂ ಕಂಡುಬರುತ್ತಿರಲಿಲ್ಲ.

ಇದರ ನಂತರ ಏನು ನಡೆಯಿತೋ ಅದರ ಪರಿಣಾಮವೇ ತಾಷ್ಕೆಂಟ್ ಒಪ್ಪಂದ. ಇವೆಲ್ಲವೂ ಆದದ್ದು ರಷ್ಯಾದ ಪ್ರಧಾನ ಮಂತ್ರಿಯವರ ಪ್ರಭಾವ ಹಾಗೂ ಒತ್ತಡದಿಂದ. ರಷ್ಯಾದ ಪ್ರಧಾನಮಂತ್ರಿ ಒಪ್ಪಂದದ ಬರಹವನ್ನು ತಯಾರು ಮಾಡಿದರು ಹಾಗೂ ಭಾರತ ಮತ್ತು ಪಾಕಿಸ್ತಾನದ ನೇತಾರರು ಅದರ ಮೇಲೆ ಸಹಿಹಾಕಿದರು ಎಂದು ಹೇಳಿದರೆ ಇದು ಅತಿಶಯೋಕ್ತಿಯಲ್ಲ. ಇದು ಹೃದಯ ಪರಿವರ್ತನೆಯ ಸಂಕೇತವಲ್ಲ. ಹೊರಗಿನ ಒತ್ತಡದಿಂದ ಎಂದಿಗೂ ಹೃದಯ ಪರಿವರ್ತನೆ ಸಾಧ್ಯವಿಲ್ಲ. ತಾಷ್ಕೆಂಟ್ ಒಪ್ಪಂದದ ನಂತರ ಪಾಕಿಸ್ತಾನದ ನೇತಾರರ ಮಾತಿನಿಂದ, ಅವರು ಈ ಘೋಷಣೆಯನ್ನು ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುವ ಒಂದು ಸಾಧನಮಾತ್ರವೆಂದು ಭಾವಿಸಿದ್ದರು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

**ಯುದ್ಧ ಬೇಡ ಎಂಬ ಸಂಧಿಯೇ ಏಕೆ?**

ಒಪ್ಪಂದದ ರೂಪದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಒಪ್ಪಂದ ಪತ್ರವನ್ನು ಶ್ಲಾಘಿಸುತ್ತಾ ಬಲಪ್ರಯೋಗ ಮಾಡದಿರುವ ಹಾಗೂ ಎಲ್ಲಾ ಸಮಸ್ಯೆಗಳನ್ನು ಶಾಂತಿಪೂರ್ವಕವಾಗಿ ಇತ್ಯರ್ಥಗೊಳಿಸುವ ಸಂಕಲ್ಪವನ್ನು ಪುನರುಚ್ಚರಿಸಲಾಗಿದೆ. ನಮಗೆ ಇದು ಯುದ್ಧವರ್ಜನೆಯ ಒಪ್ಪಂದದ ಮತ್ತೊಂದು ರೂಪ ಎಂದು ತಿಳಿಸಲಾಗುತ್ತಿದೆ. ಇದು ಸತ್ಯವಲ್ಲ. ಸಂಯುಕ್ತ ರಾಷ್ಟ್ರಸಂಘದ ಸದಸ್ಯತ್ವ ಹಾಗೂ ಅದರ ಕಟ್ಟುಪಾಡುಗಳ ವಿಷಯಕ್ಕೆ ಬರುವುದಾದರೆ ಅವು ಹಿಂದಿನ ವರ್ಷಗಳಲ್ಲಿಯೂ ಇದ್ದವು. ಇದರ ನಂತರವೂ ಪಾಕಿಸ್ತಾನ ಒಂದಲ್ಲ, ಮೂರು ಬಾರಿ ಭಾರತದ ಮೇಲೆ ಆಕ್ರಮಣ ಮಾಡಿ ತನ್ನ ಮಾತನ್ನು ನಡೆಸಿಕೊಳ್ಳುವ ಪ್ರಯತ್ನ ಮಾಡಿದೆ. ಪಾಕಿಸ್ತಾನಕ್ಕೆ ಸಂಯುಕ್ತ ರಾಷ್ಟ್ರ ಸಂಘದ ಬಗೆಗೆ ನಿಷ್ಠೆ ಎಷ್ಟಿದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಸುರಕ್ಷಾ ಪರಿಷತ್ತಿನ ಆದೇಶದಂತೆ ಯುದ್ಧ ವಿರಾಮದ ಪ್ರಸ್ತಾವನೆಯನ್ನು ಸ್ವೀಕರಿಸುವ ಮೊದಲು ಪಾಕಿಸ್ತಾನದ ಪ್ರತಿನಿಧಿ, ಒಂದು ವೇಳೆ ಸಂಯುಕ್ತ ರಾಷ್ಟ್ರ ಸಂಘವು ಕಾಶ್ಮೀರದ ಸಮಸ್ಯೆಯನ್ನು ಜನವರಿ ೧, ೧೯೬೬ರವರೆಗೆ

ಪರಿಹರಿಸದಿದ್ದಲ್ಲಿ ಪಾಕಿಸ್ತಾನವು ತನ್ನ ಸದಸ್ಯತ್ವವನ್ನು ತ್ಯಜಿಸುತ್ತದೆ ಎಂಬುದಾಗಿ ಬೆದರಿಕೆ ಒಡ್ಡಿದ್ದರು. ಸಂಯುಕ್ತ ರಾಷ್ಟ್ರಸಂಘದ ಕಟ್ಟುಪಾಡುಗಳನ್ನು ಪಾಕಿಸ್ತಾನವು ತನ್ನ ಸ್ವಾರ್ಥಸಿದ್ಧಿ ಹಾಗೂ ವಿಸ್ತಾರ ಲಾಲಸೆಗೆ ಸಹಾಯಕವಾಗುವಂತಿದ್ದರೆ ಮಾತ್ರ ಒಪ್ಪಿಕೊಳ್ಳುತ್ತದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಯುದ್ಧ ವರ್ಜನೆಯ ಸಂಧಿಯೂ ಭಂಗವಾಗಬಲ್ಲದು, ಆದ್ದರಿಂದ ಅದಕ್ಕೆ ಯಾವುದೇ ರೀತಿಯ ವಿಶೇಷ ಮಹತ್ವ ಇಲ್ಲ ಎಂದು ಹೇಳಬಹುದು. ಹಿಟ್ಲರನು ರಷ್ಯಾದ ಜೊತೆಯಲ್ಲಿ ಇದೇ ರೀತಿಯ ಒಪ್ಪಂದ ಮಾಡಿಕೊಂಡಿದ್ದ ಹಾಗೂ ನಂತರದಲ್ಲಿ ಅವನು ಯಾವುದೇ ಹಿಂಜರಿಕೆಯೂ ಇಲ್ಲದೆ ರಷ್ಯಾದ ಮೇಲೆ ಆಕ್ರಮಣವನ್ನು ಮಾಡಿದ. ಪಾಕಿಸ್ತಾನದ ಮೇಲೆ ಇದಕ್ಕಿಂತ ಹೆಚ್ಚಿನ ನಂಬಿಕೆಯಿಡಲು ಸಾಧ್ಯವಿಲ್ಲ. ದೇಶದ ರಕ್ಷಣೆ ಹಾಗೂ ಆಕ್ರಮಣಗಳಿಂದ ಅದರ ಮುಕ್ತಿಯ ವಿಷಯದ ಬಗೆಗೆ ಹೇಳುವುದಾದರೆ, ಆ ಕೆಲಸ ಸಂಧಿ ಮಾತುಗಳಿಂದ ಸಾಧ್ಯವಿಲ್ಲ. ಅದಕ್ಕೆ ನಿತ್ಯಸಿದ್ಧವಾದ ಹಾಗೂ ಜಾಗೃತ ಶಕ್ತಿಯೇ ಬೇಕು. ಈ ಸಂಧಿಯ ನಂತರವೂ ಅದು ಬಲ ಪ್ರಯೋಗ ಮಾಡುವ ಪ್ರಯತ್ನ ಮಾಡಿದರೆ ಅದನ್ನು ಯುದ್ಧವೆಂದು ತಿಳಿಯಲಾಗುವುದು ಎನ್ನುವುದೇ ಪಾಕಿಸ್ತಾನದ ಜೊತೆಗಿನ ಯುದ್ಧ ವರ್ಜನೆಯ ಒಪ್ಪಂದಕ್ಕಿರುವ ಮಹತ್ವ. ಇತ್ತೀಚೆಗೆ ಅದು ಪದೇ–ಪದೇ ಆಕ್ರಮಣ ಮಾಡುತ್ತಿದೆ. ಆದರೆ ವಿಶ್ವದ ರಾಜಕೀಯರಂಗ ಎಷ್ಟು ವಿಕೃತವಾಗಿದೆ ಅಂದರೆ ಅದನ್ನು ಆಕ್ರಮಣಕಾರಿ ಎಂದು ಕರೆಯಲೂ ಎಲ್ಲರೂ ಹಿಂಜರಿಯುತ್ತಾರೆ. ಬಹುಶಃ ಯುದ್ಧವರ್ಜನೆಯ ಒಪ್ಪಂದದಿಂದ ಪಾಕಿಸ್ತಾನದ ಜನತೆಯ ಮೇಲೂ ಕೆಲವು ಮಾನಸಿಕ ಪರಿಣಾಮಗಳುಂಟಾಗುತ್ತವೆ. ಇಸ್ಲಾಮೀ ರಾಜ್ಯ ಹೆಸರಿನಲ್ಲಿ ಯಾವಾಗಲೂ ಅದನ್ನು ಜಿಹಾದ್‌ಗಾಗಿ ಪಂಥಾಹ್ವಾನ ನೀಡಲಾಗುತ್ತದೆ. ಯಾವ ಕಲ್ಪನೆಯನ್ನು ಆಧಾರವಾಗಿಸಿಕೊಂಡು ಪಾಕಿಸ್ತಾನದ ಶಾಸಕರು ಒಂದು ಧಾರ್ಮಿಕ ರಾಷ್ಟ್ರ ನಿರ್ಮಿಸುತ್ತಿದ್ದಾರೋ ಅದರಲ್ಲಿ ಭಾರತವು ಮುಸ್ಲಿಂ ಧರ್ಮೇತರ ರಾಷ್ಟ್ರವಾಗಿದೆ. ಭಾರತದೊಂದಿಗೆ ಸೆಣಸುವುದು ಅವರ ಧಾರ್ಮಿಕ ಕರ್ತವ್ಯವೆಂದು ಭಾವಿಸಲಾಗುತ್ತದೆ. ಯುದ್ಧ ಬೇಡವೆಂಬ ಸಂಧಿಯಲ್ಲಿ ಜಿಹಾದ್‌ಗೆ ಯಾವುದೇ ಸ್ಥಾನವಿರುವುದಿಲ್ಲ. ಒಂದು ಸಾರಿ ಪಾಕಿಸ್ತಾನದ ಜನತೆ ಈ ಹೇಯ ವಾತಾವರಣದಿಂದ ಹೊರ ಬಂದು ಯೋಚಿಸಿದರೆ ಅವರಿಗೆ ಪ್ರತ್ಯೇಕವಾಗಿರಲು ಮಾಡಿದ ತಪ್ಪು ಸಹಜವಾಗಿ ಅರ್ಥವಾಗುತ್ತದೆ.

ಪಾಕಿಸ್ತಾನದ ನೇತಾರರು ಅಲ್ಲಿನ ಜನತೆಯನ್ನು ಕಾಶ್ಮೀರಕ್ಕಾಗಿ ಹೋರಾಡುವಂತೆ ಅಣಿಗೊಳಿಸಿದ್ದಾರೆ. ಒಂದು ವೇಳೆ ಅವರು ಯುದ್ಧ ವರ್ಜನೆಯ ಒಪ್ಪಂದವನ್ನು ಮಾಡಿಕೊಂಡಿದ್ದೇ ಆದರೆ, ಅವರ ಈ ಧಾರ್ಮಿಕ ಉನ್ಮಾದ ನಿಷ್ಪ್ರಯೋಜಕವಾಗುತ್ತದೆ.

ಪಾಕಿಸ್ತಾನ ಹಾಗೂ ಚೀನಾದ ಗೆಳೆತನದ ಜೊತೆಗೂ ಯುದ್ಧವರ್ಜನೆಯ ಒಪ್ಪಂದ ಹೊಂದಾಣಿಕೆಯಾಗುವುದಿಲ್ಲ. ಚೀನಾ ದೇಶವು ಯುದ್ಧವನ್ನು ಅನಿವಾರ್ಯವೆಂದು ನಂಬುತ್ತದೆ ಹಾಗೂ ಸಂಪೂರ್ಣ ಏಷಿಯಾ ಖಂಡವನ್ನು ಯುದ್ಧವೆಂಬ ಭಟ್ಟಿಯಲ್ಲಿ ತಳ್ಳುವ ಯೋಜನೆ ರೂಪಿಸುತ್ತದೆ. ಪಾಕಿಸ್ತಾನ ಹಾಗೂ ಚೀನಾ ಎರಡೂ ರಾಷ್ಟ್ರಗಳೂ ಭಾರತದ ಬಗ್ಗೆ ತಿರಸ್ಕಾರ ಹಾಗೂ ವಿಸ್ತಾರಣೆಯ ವಿಷಯದಲ್ಲಿ ಸಮಾನ ಧೋರಣೆ ಮಾಡಿಕೊಂಡರೆ ಅದರ ಪರಿಣಾಮವಾಗಿ ಚೀನಾ ಹಾಗೂ ಪಾಕಿಸ್ತಾನದ ನಡುವೆ ಬಿರುಕುಂಟಾಗುವ ಸಾಧ್ಯತೆಗಳಿವೆ. ಆದ್ದರಿಂದ ಅದು ಯುದ್ಧ ಬೇಡೆಂಬ ಒಪ್ಪಂದವನ್ನು ಮಾಡಿಕೊಳ್ಳಲು ಒಪ್ಪಲಿಲ್ಲ ಹಾಗೂ ಮುಂದೆಯೂ ಒಪ್ಪಿಕೊಳ್ಳುವ ಸಾಧ್ಯತೆಗಳಿಲ್ಲ.

**ರಹಸ್ಯ ಮಾತುಕತೆಯ ವಿಫಲತೆ**

ಹಿಂದಿನ ಅನುಭವಗಳು ಹಾಗೂ ವರ್ತಮಾನದ ಬಲವಾದ ತಥ್ಯಗಳನ್ನು ಮರೆತು ಮುಂದಿನ ಸುವರ್ಣ ಸ್ವಪ್ನವನ್ನು ನೋಡುವವರು ತಾಷ್ಕೆಂಟ್ ಒಪ್ಪಂದವನ್ನು ಭಾರತ–ಪಾಕ್ ಸಂಬಂಧಗಳಲ್ಲಷ್ಟೇ ಅಲ್ಲದೆ ವಿಶ್ವದ ರಾಜಕೀಯದಲ್ಲಿ ಇದು ಒಂದು ಹೊಸ ತಿರುವು ಎಂದು ಹೇಳಿ ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತಿದ್ದಾರೆ. ಕಲ್ಪನಾ ಲೋಕದಲ್ಲಿ ವಿಹರಿಸುತ್ತಿರುವವರು ಹಿಂದಿನ ೧೮ ವರ್ಷಗಳಲ್ಲಿ ರೂಪಿಸಿದ ನೀತಿಗಳ ಕಹಿ ಫಲವನ್ನು ಈಗ ನಾವು ಅನುಭವಿಸುತ್ತಿದ್ದೇವೆ. ಭಾರತ–ಪಾಕ್‌ನ ಸಂಘರ್ಷವಾದಾಗ ಪ್ರಪಂಚದಲ್ಲಿ ಯಾವುದೇ ರಾಷ್ಟ್ರ ನಮ್ಮ ಪರವಾಗಿರಲಿಲ್ಲ. 'ಹಿಂದೂಸ್ತಾನ್ ಟೈಂಸ್'ನ ಅಕ್ಟೋಬರ್ ೨೩, ೧೯೬೫ರ ಸಂಚಿಕೆಯಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯ ಚರ್ಚೆಯ ವಿಶ್ಲೇಷಣೆ ಮಾಡುತ್ತ, ವಿಭಿನ್ನ ದೇಶಗಳ ಪ್ರತಿನಿಧಿಗಳು ಮಾಡಿದ ೧೧೦ ಭಾಷಣಗಳಲ್ಲಿ ಕೇವಲ ೮೫ ದೇಶಗಳು ಮಾತ್ರ ಭಾರತ–ಪಾಕ್ ಸಂಘರ್ಷವನ್ನು ಉಲ್ಲೇಖ ಮಾಡಿದವು ಎಂದು ಹೇಳಲಾಗಿತ್ತು. ಅವುಗಳಲ್ಲಿ ೬೩ ದೇಶಗಳು ಸಂಘರ್ಷದ ಬಗ್ಗೆ ಚಿಂತೆ ವ್ಯಕ್ತಿಪಡಿಸುತ್ತ ಪರಸ್ಪರ ಮಾತುಕತೆಯ ಮೂಲಕ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಸದಾಶಯವನ್ನು ವ್ಯಕ್ತಪಡಿಸುತ್ತಾ ಭಾರತ ಹಾಗೂ ಪಾಕಿಸ್ತಾನದ ಮಧ್ಯೆ ತಟಸ್ಥವಾಗಿರುವ ಭಾವನೆಯನ್ನು ಪ್ರಕಟಿಸಿದವು. ೧೯ ದೇಶಗಳು ಭಾರತದ ವಿರುದ್ಧ ಭಾಷಣ ಮಾಡಿದವು. ಇವುಗಳಲ್ಲಿ ೧೧ ಅರಬ್ ದೇಶಗಳಾಗಿದ್ದವು ಹಾಗೂ ಉಳಿದ ೮ರಲ್ಲಿ ಅಲ್ಬೇನಿಯಾ, ಪೋರ್ಚುಗಲ್, ಈರಾನ್, ತುರ್ಕಿ, ಸೋಮಾಲಿಯಾ, ಮಾಲಿ, ರುವಾಂಡಾ ಹಾಗೂ ಉಗಾಂಡಾಗಳಿದ್ದವು. ಭಾರತದ ನಿಲುವನ್ನು ಸಮರ್ಥಿಸುವವರು ಯಾರೂ ಇರಲಿಲ್ಲ.

**ವಿದೇಶಾಂಗ ನೀತಿಯ ಪೊಳ್ಳುತನ**

ನಮ್ಮ ಈ ಒಂಟಿತನಕ್ಕೆ ಮುಖ್ಯ ಕಾರಣ ನಮ್ಮ ವಿದೇಶಾಂಗ ನೀತಿ ಅಯಥಾರ್ಥವಾದಿಯಾಗಿರುವುದೇ ಆಗಿದೆ. ಅದು ಪೊಳ್ಳು ಸಿದ್ಧಾಂತಗಳ ಹಾಗೂ ಘೋಷಣೆಗಳ ಮೇಲೆ ಆಧಾರಿತವಾಗಿದೆ. ಎರಡನೆಯದಾಗಿ ನಾವು ಯಾವ ನಿಲುವನ್ನು ತಳೆದಿದ್ದೇವೆಯೋ ಅದಕ್ಕೆ ಬದ್ಧರಾಗಿರುತ್ತೇವೆ ಎಂದು ಪ್ರಪಂಚದ ಯಾವುದೇ ರಾಷ್ಟ್ರವೂ ನಂಬುವುದಿಲ್ಲ. ಒಂದೆಡೆ ಕಾಶ್ಮೀರವನ್ನು ನಾವು ನಮ್ಮ ಸ್ವಾತಂತ್ರ್ಯ, ಪ್ರಭುತ್ವ ಹಾಗೂ ಪ್ರಾದೇಶಿಕ ಅಖಂಡತೆಯ ಪ್ರಶ್ನೆ ಎಂದು ಹೇಳುತ್ತೇವೆ, ಮತ್ತೊಂದೆಡೆ ಅದರ ಬಗೆಗಿನ ಹಲವಾರು ಸಲಹೆಗಳ ಬಗ್ಗೆ ಚಿಂತನೆ ಹಾಗೂ ಮಾತುಕತೆ ನಡೆಸುತ್ತೇವೆ. ಸುರಕ್ಷಾ ಪರಿಷತ್ತಿನಿಂದ ಭಾರತವು ಹೊರ ನಡೆದ ಸಮಾಚಾರವನ್ನು ನೀಡುತ್ತಾ 'ಹಿಂದೂಸ್ತಾನ್ ಟೈಮ್ಸ್'ನ ವರದಿಗಾರರು ದಿನಾಂಕ ೨೭ ಅಕ್ಟೋಬರ್‌ರ ಸಂಚಿಕೆಯಲ್ಲಿ ಹೀಗೆ ಬರೆದಿದ್ದರು–ಪಾಕಿಸ್ತಾನ ಅಥವಾ ಸುರಕ್ಷಾ ಪರಿಷತ್ತಿನ ಯಾವುದೇ ಸದಸ್ಯ ರಾಷ್ಟ್ರವು ತನಗೆ ಬೇಕಾದಾಗ ನಮ್ಮನ್ನು ಕಾಶ್ಮೀರದ ಆಂತರಿಕ ಸಮಸ್ಯೆಯ ಬಗೆಗೆ ವಿವಾದಕ್ಕೀಡು ಮಾಡುತ್ತಿದ್ದ ಆ ಹಳೆಯ ಪರಂಪರೆಯನ್ನು ಮುರಿಯುವುದು ಹೊಸ ನೀತಿಯ ಉದ್ದೇಶವಾಗಿದೆ. ಈಗ ಹೊಸ ದೆಹಲಿಯ ಈ ಹೇಳಿಕೆಯಿಂದ, 'ಕಾಶ್ಮೀರದ ಘಟನೆಗಳು ನಮ್ಮ ಆಂತರಿಕ ವಿಷಯಗಳಾಗಿವೆ ಹಾಗೂ ವ್ಯವಹಾರದಲ್ಲಿ ಅವುಗಳ ಬಗ್ಗೆ ಯಾರಾದರೂ ಏನನ್ನಾದರೂ ಹೇಳಿದರೆ ಮಾತುಕತೆ ನಡೆಸುವ ನಡುವೆ ಇರುವ ವಿರೋಧ ಇಲ್ಲವಾಗುತ್ತದೆ.' ಎಂಬ ಭರವಸೆಯನ್ನು ಇಟ್ಟುಕೊಳ್ಳಬಹುದು. ದೌರ್ಭಾಗ್ಯವೆಂದರೆ ಈ ಆಸೆ ತಾಷ್ಕೆಂಟಿನಲ್ಲಿ ಫಲಕಾರಿಯಾಗಲಿಲ್ಲ.

ಪಾಕಿಸ್ತಾನದೊಡನೆ ನಡೆದ ಸಂಘರ್ಷದಲ್ಲಿ ವಿಜಯಿಯಾದ ಪರಿಣಾಮವಾಗಿ ವಿಶ್ವದಲ್ಲಿ ನಮ್ಮ ಗೌರವ ಹೆಚ್ಚಾಯಿತು. ಇದರ ಪರಿಣಾಮವಾಗಿ ನಿಧಾನವಾಗಿ ಅನೇಕ ರಾಷ್ಟ್ರಗಳು ನಮ್ಮ ನಿಲುವನ್ನು ಅರಿಯತೊಡಗಿದವು. ಬೇರೆ–ಬೇರೆಯ ಸಂಸತ್ತಿನ ಶಿಷ್ಟಮಂಡಲಗಳ ಅನುಭವ ಸಾಕಷ್ಟು ಅಸಹಾಯಕವಾಗಿದ್ದವು. ಬ್ರಿಟನ್‌ನ ವಿದೇಶಾಂಗ ಸಚಿವರಾದ ಶ್ರೀ ಮೈಕೆಲ್ ಸ್ಟುವರ್ ಅವರು ಸಂಯುಕ್ತ ರಾಷ್ಟ್ರದಲ್ಲಿ ೮ನೇ ಅಕ್ಟೋಬರ್‌ರಂದು, ಕಾಶ್ಮೀರದ ಬಗೆಗೆ ಭಾರತದ ತರ್ಕಗಳಲ್ಲಿ ಸಾಕಷ್ಟು ಶಕ್ತಿಯಿದೆ ಎಂಬುದಾಗಿ ಒಪ್ಪಿಕೊಂಡರು. ಶ್ರೀ ಶಾಸ್ತ್ರಿಯವರು ಗುರುದ್ವಾರಾ ಬಂಗಲಾ ಸಾಹೇಬ್‌ನಲ್ಲಿ ಭಾಷಣ ಮಾಡುತ್ತಾ ಹೀಗೆ ಹೇಳಿದರು– ಈ ಬಾರಿ ವಿಶ್ವ ನಮ್ಮ ಮಾಡು ಕೇಳಲೇ ಬೇಕು. ವಿಶ್ವ ನಮ್ಮ ಮಾತನ್ನು ಕೇಳುತ್ತಲೂ ಇದೆ. ನಿಧಾನವಾಗಿ ಅದು ನಮ್ಮ ಕಡೆ ಬರುತ್ತಿತ್ತು. ಆದರೆ ಆಗಿದ್ದೇನೆಂದರೆ,

ಬಹಳ ಗಮನವಿಟ್ಟು ಕೇಳುತ್ತಿತ್ತು ಜಗತ್ತು.
ಆದರೆ ನೀನೇ ಮಲಗಿಬಿಟ್ಟೆ ಹೇಳುತ್ತಾ–ಹೇಳುತ್ತಾ

ತಾಷ್ಕೆಂಟ್ ಒಪ್ಪಂದದ ರಹಸ್ಯ ಮಾತುಕತೆಯ ಕ್ಷೇತ್ರದಲ್ಲಿ ನಮ್ಮ ಹೆಜ್ಜೆ ಹಿಂದಾಗಿದೆ. ನಮ್ಮ ಸೈನ್ಯವು ಹಾಜಿಪೀರ್ ಹಾಗೂ ಟಿಥ್‌ವಾಲ್‌ನಿಂದ ಹಿಂದೆ ಸರಿಯುವುದರೊಂದಿಗೆ ನಾವೂ ಪ್ರಪಂಚದ ರಾಜಕೀಯದಿಂದ ಹಿಂದೆ ಸರಿದಿದ್ದೇವೆ. ತಾಷ್ಕೆಂಟ್‌ನ ಒಪ್ಪಂದದಿಂದ ನಮ್ಮ ಬೆಂಬಲಿಗರ ಮನಸ್ಸಿನಲ್ಲಿ ನಮ್ಮ ಬಗೆಗೆ ಸಂದೇಹ ಉಂಟಾಗುತ್ತದೆ. ನಿರಾಶೆಯಿಂದ ಹತಾಶರಾದ ನಮ್ಮ ವಿರೋಧಿಗಳು ಪುನಃ ಆಶಾನ್ವಿತರಾಗುತ್ತಾರೆ. ನಾವು ರಣರಂಗದಲ್ಲಿ ಗೆದ್ದ ಯುದ್ಧವನ್ನು ಶಾಂತಿಯ ಮಾತುಕತೆಯಲ್ಲಿ ಸೋತುಹೋದೆವು.

**ರಷ್ಯಾದ ಪಂಚಾಯಿತಿ**

ತಾಷ್ಕೆಂಟ್‌ನ ಒಪ್ಪಂದದಿಂದ ಯಾರಿಗಾದರೂ ಲಾಭವಾಗಿದೆ ಎಂದರೆ ಅದು ಪಾಕಿಸ್ತಾನ ಹಾಗೂ ರಷ್ಯಾಕ್ಕೆ ಮಾತ್ರ. ಪಾಕಿಸ್ತಾನವು ಏನೆಲ್ಲ ಮಾಡಿ ಅದು ಆಗಸ್ಟ್ ೫ ಕ್ಕಿಂತ ಮೊದಲಿದ್ದಂಥ ಸ್ಥಿತಿಗೆ ಮರಳಿತು. ಗುಡಿಸಿ–ಸಾರಿಸಿ ಅದು ಪುನಃ ಮೈದಾನಕ್ಕಿಳಿಯಲು ಸಿದ್ಧವಾಯಿತು. ರಷ್ಯಾವು ಕೇವಲ ಏಷ್ಯಾಕ್ಕಲ್ಲದೆ ಇಡೀ ವಿಶ್ವಕ್ಕೆ ನ್ಯಾಯ ನೀಡುವ ಗೌರವವನ್ನು ಗಳಿಸಿಕೊಂಡಿತು. ಇದೇ ಕಾರಣಕ್ಕಾಗಿ ಅದು ತನ್ನ ಸರ್ವಸ್ವವನ್ನು ಪಣಕ್ಕಿಟ್ಟು ನಮ್ಮನ್ನು ಮಣಿಸಿ ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿಸಿತು. ಆದರೆ ನಮ್ಮ ಮೇಲೆ ಯಾವುದೇ ರೀತಿಯ ಒತ್ತಡ ಇರಲಿಲ್ಲ ಎಂದು ಈಗ ಹೇಳುತ್ತಿರುವವರು ಸತ್ಯವನ್ನು ಮರೆಮಾಚುತ್ತಿದ್ದಾರೆ. ಬಹುಶಃ ರಾಜಕೀಯ ಇದೇ ರೀತಿಯ ನಿರ್ಲಜ್ಜತನವನ್ನು ಬಯಸುತ್ತದೇನೋ, ಆದರೆ ಇದು ದೇಶದ ಹಿತದ ಮಾನದಂಡವಲ್ಲ. ಪರಿಸ್ಥಿತಿಗಳು ಈ ಒತ್ತಡದ ಮುಂದೆ ಮಣಿಯುವಂತೆ ಅಸಹಾಯಕರನ್ನಾಗಿಸಿರಬಹುದು. ಅಸಹಾಯಕತೆಯ ಅರಿವಾದಾಗ ಮಾತ್ರ ಅದನ್ನು ದೂರ ಮಾಡುವ ದಾರಿ ಹೊಳೆಯುತ್ತದೆ. ಆದರೆ ಮರೆಯುವುದರಿಂದ ನಾವು ನಮ್ಮ ದೌರ್ಬಲ್ಯವನ್ನು ಎಂದೂ ಕೊನೆಗೊಳಿಸಿದಂತಲ್ಲ.

**ಸಮರ್ಥಕರು ಯಾರು?**

ಭಾರತದಲ್ಲಿ ತಾಷ್ಕೆಂಟ್‌ನ ಒಪ್ಪಂದವನ್ನು ಮಾಸ್ಕೋದ ಮಾರ್ಗದರ್ಶನದಂತೆ ತಮ್ಮ ನೀತಿಯನ್ನು ರೂಪಿಸಿಕೊಳ್ಳುವವರು ಅಥವಾ ಭಾರತದಲ್ಲಿದ್ದುಕೊಂಡೇ ಪಾಕಿಸ್ತಾನದ ಪರವಾಗಿ ಪ್ರಚಾರ ಮಾಡುವವರು ಮಾತ್ರ ಸಮರ್ಥಿಸಿಕೊಳ್ಳುತ್ತಿದ್ದಾರೆ. ಈ ತತ್ವಗಳು ಈಗ ಉದಾರತೆಯ ಹೆಸರಿನಲ್ಲಿ ಭಾರತದಿಂದ ಮತ್ತಷ್ಟು ತ್ಯಾಗವನ್ನು ಬೇಡುತ್ತಿವೆ. ಈಗ ಚೀನಾದೊಂದಿಗೂ ಇದೇ ರೀತಿಯಾಗಿ ಬೇಷರತ್ ಮಾತುಕತೆ ನಡೆಸುವ ಪ್ರಸ್ತಾವನೆಯನ್ನು ಇಡಲಾಗುತ್ತಿದೆ. ಒಂದು ವೇಳೆ ಈ ಪ್ರಸ್ತಾವನೆ

ಒಪ್ಪಿಗೆಯಾದಲ್ಲಿ ಭಾರತ ತನ್ನ ನೆಲ ಹಾಗೂ ಗೌರವ ಎರಡನ್ನೂ ಕಳೆದುಕೊಳ್ಳ ಬೇಕಾಗುತ್ತದೆ. ಹೀಗಾಗಲು ಬಿಡುವುದಿಲ್ಲ.

**ನಮಗೆ ಸೋಗು ಹಾಕುವವರು ಬೇಕಿಲ್ಲ**

ತಾಷ್ಕೆಂಟಿನಲ್ಲಿ ಶಾಂತಿಯ ಬುನಾದಿಯನ್ನು ಹಾಕಲಾಗಿದೆ ಎಂದು ಯಾರು ಭಾವಿಸಿದ್ದರೊ ಅವರು ಮೋಸಹೋಗಿದ್ದಾರೆ. ಇದರಿಂದ ಭಾವೀ ಯುದ್ಧದ ಬೀಜವನ್ನು ಬಿತ್ತಲಾಗಿದೆ. ತಾಷ್ಕೆಂಟ್ ಒಪ್ಪಂದದಿಂದ ಭಾರತ ಹಾಗೂ ಪಾಕಿಸ್ತಾನಗಳು ಪರಸ್ಪರ ಹತ್ತಿರ ಬರುವುದಿಲ್ಲ. ಅವುಗಳ ನಡುವೆ ಮಿತ್ರತ್ವ ಹಾಗೂ ಐಕ್ಯತೆ ಇರುವುದಿಲ್ಲ, ಬದಲಾಗಿ ಇನ್ನಷ್ಟು ದೂರ ಸರಿಯುತ್ತವೆ. ಇಂದು ಏನೆಲ್ಲಾ ಕಾಣುತ್ತಿದೆಯೋ, ಅದು ಅಸ್ಥಾಯಿಯಾಗಿದೆ. ತಾಷ್ಕೆಂಟಿನ ಒಪ್ಪಂದದಿಂದ ಪಾಕಿಸ್ತಾನವು ಚೀನಾದ ಮುಷ್ಟಿಯಿಂದ ಹೊರಬರುತ್ತದೆ ಎಂದು ಯಾರೆಲ್ಲಾ ನಂಬಿದ್ದಾರೋ, ಅವರಿಗೂ ನಿರಾಶೆ ಕಾದಿದೆ. ಭಾರತ ಹಾಗೂ ಪಾಕಿಸ್ತಾನದ ನಡುವೆ ಎಲ್ಲಿಯವರೆಗೆ ಮೂರನೇ ಶಕ್ತಿ ಇರುತ್ತದೆಯೋ, ಅಲ್ಲಿಯವರೆಗೆ ಅವು ಪರಸ್ಪರ ಹತ್ತಿರ ಬರಲು ಸಾಧ್ಯವಿಲ್ಲ. ಆಂಗ್ಲರು ಯಾವಾಗಲೂ ಸೋಗು ಹಾಕುತ್ತಿದ್ದರು. ಇದರಿಂದ ಹಿಂದೂಗಳು ಮುಸಲ್ಮಾನರು ಬೇರೆಯಾಗುತ್ತಲೇ ಹೋದರು. ಆಂಗ್ಲರು ಹೋದ ನಂತರ ಅಮೇರಿಕವು ಭಾರತ – ಪಾಕ್‌ನ ನಡುವಿನ ಮಧ್ಯಸ್ಥಿಕೆಯನ್ನು ವಹಿಸುವ ಪ್ರಯತ್ನ ಮಾಡಿತು. ಇದರಿಂದಾಗಿ ಪಾಕಿಸ್ತಾನದ ಹಠ ಮಾರಿತನಕ್ಕೆ ಪ್ರೋತ್ಸಾಹ ದೊರೆತಂತಾಯಿತು. ಇಂದು ರಷ್ಯಾ ಅದೇ ಕೆಲಸ ಮಾಡುತ್ತಿದೆ. ಸತ್ಯವಾದ ವಿಚಾರವೆಂದರೆ ಪರಸ್ಪರ ಸೇರಿ ಸಮಸ್ಯೆಯನ್ನು ಪರಿಹರಿಸಿಕೊಳ್ಳುವ ಸಲಹೆ ನೀಡುತ್ತಿರುವವರೇ ಮಧ್ಯದಲ್ಲಿ ಮೂಗು ತೂರಿಸಿ ಪರಿಸ್ಥಿತಿಯನ್ನು ಹಾಳು ಮಾಡುತ್ತಿದ್ದಾರೆ. ಜಗತ್ತಿನ ಈ ಸಲಹೆಗಾರರು ಹಾಗೂ ಮಿತ್ರರು ಭಾರತ–ಪಾಕ್‌ನ ವಿಷಯದಲ್ಲಿ ನಿಜವಾಗಿಯೂ ತಟಸ್ಥ ಧೋರಣೆ ಅನುಸರಿಸಿದರೆ ಭಾರತ ಹಾಗೂ ಪಾಕ್‌ನ ಜನತೆ ತಮ್ಮ ಹಿತಾಸಕ್ತಿಗಳನ್ನು ಅರಿತು ಐಕ್ಯತೆಯಿಂದ ತಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು.

**ತಾಷ್ಕೆಂಟ್ ಒಪ್ಪಂದವನ್ನು ತಿರಸ್ಕರಿಸಿ !**

'ತಾಷ್ಕೆಂಟ್ ಒಪ್ಪಂದ' ಭಾರತದ ಅಸಹಾಯಕತೆ ಹಾಗೂ ಪರಾವಲಂಬಿತನದ ಪ್ರತೀಕವಾಗಿದೆ. ಇದು ಭಾರತದ ಶೌರ್ಯ – ಸಾಹಸದ ಮೇಲೆ ತಣ್ಣೀರು ಸುರಿಯುವ ಶಾಸನವಾಗಿದೆ. ಇದರಿಂದಾಗಿ ನಮ್ಮ ಘನತೆ ಮಣ್ಣುಗೂಡಿದೆ. ನಮ್ಮ ಇತಿಹಾಸದ ಒಂದು ಸ್ವರ್ಣ ಅಧ್ಯಾಯದ ಮುಕ್ತಾಯ ಈ ರೀತಿಯಾಗಿ ಕಳಂಕಿತವಾಗುವುದೆಂಬ ಊಹೆಯೂ ಇರಲಿಲ್ಲ. ಭಾರತ ರಹಸ್ಯ ಮಾತುಕತೆಯಲ್ಲಿ

ಇಷ್ಟೊಂದು ಅಪಕ್ವವೆಂಬ ಕಲ್ಪನೆಯೂ ಇರಲಿಲ್ಲ. ಭಾರತದ ಸ್ವಾತಂತ್ರ್ಯದ ಅಸ್ಮಿತೆ, ಪ್ರಾದೇಶಿಕ ಅಖಂಡತೆ ಹಾಗೂ ಪ್ರಜಾತಂತ್ರ ಇದನ್ನು ಎಂದಿಗೂ ಒಪ್ಪುವುದಿಲ್ಲ. ಶಾಸ್ತ್ರೀಜಿ ಹಾಗೂ ಕೊಸಿಜಿನ್‌ಲಿರವರ ನಡುವೆ ಏನು ಮಾತುಕತೆಯಾಯಿತೋ, ಅದು ಯಾರಿಗೂ ತಿಳಿದಿಲ್ಲ. ಶಾಸ್ತ್ರೀಜಿ ಹೋದರು ಹಾಗೂ ಅವರ ಜೊತೆ ತಾಷ್ಕೆಂಟ್‌ನ ಒಪ್ಪಂದವೂ ಹೊರಟುಹೋಯಿತು. ಶಾಸ್ತ್ರೀಜಿಯವರಿಗೆ ಹೆಸರನ್ನು ಉಪಯೋಗಿಸಿಕೊಂಡು ಈ ಅಪಮಾನಕರವಾದ ಒಪ್ಪಂದವನ್ನು ದೇಶದ ತಲೆಗೆ ಕಟ್ಟಲು ಇಚ್ಛಿಸುವಂಥವರು ವಾಸ್ತವವಾಗಿ ಶಾಸ್ತ್ರಿಯವರು ಹಾಗೂ ಈ ದೇಶ ಎರಡಕ್ಕೂ ಅನ್ಯಾಯವೆಸಗುತ್ತಿದ್ದಾರೆ. 'ಜೈ ಜವಾನ್' ಎಂಬ ಘೋಷಣೆಯು ಭಾರತದ ಕೋಟಿ–ಕೋಟಿ ಕಂಠಗಳಿಂದ ಮೊಳಗಿದೆ. ಇಂದು ತಾವು ತಾಷ್ಕೆಂಟ್‌ನ ಸ್ವರದಿಂದಾಗಿ ತಮ್ಮ ಧ್ವನಿಯನ್ನು ಮಂಕಾಗಲು ಬಿಡುವುದಿಲ್ಲ. ೧೬ ಆಗಸ್ಟ್ ೧೯೬೫ರಲ್ಲಿ ಭಾರತವು ಮಗ್ಗುಲು ಬದಲಿಸಿತ್ತು. ಅದರ ಪುರುಷಾರ್ಥ ಹಾಗೂ ಪರಾಕ್ರಮ ಜಾಗೃತವಾಗಿದ್ದವು. ಈಗ ಯಾರು ಎಷ್ಟೇ ಜೋಗುಳ ಹಾಡಿದರೂ ಎಷ್ಟೇ ಜಾದು ಮಾಡಿದರೂ ಅದನ್ನು ಮಲಗಿಸಲು ಸಾಧ್ಯವಿಲ್ಲ.

ಜಯ್ ಭಾರತ್

* * * * *

# ನಮ್ಮ ರಾಷ್ಟ್ರಧ್ವಜ

ಭಾರತವು ವಿಶ್ವದಲ್ಲಿ ಅತ್ಯಂತ ಪ್ರಾಚೀನ ರಾಷ್ಟ್ರವಾಗಿದೆ. ಯಾವಾಗ ಪಶ್ಚಿಮವು ಹಸಿ ಮಾಂಸದ ಬದಲಾಗಿ ಹುರಿದ ಮಾಂಸವನ್ನು ತಿನ್ನಲು ಕಲಿಯುತ್ತಿತ್ತೋ, ಅದಕ್ಕಿಂತ ಎಷ್ಟೋ ಮೊದಲು ನಮ್ಮದೊಂದು ರಾಷ್ಟ್ರವಾಗಿತ್ತು. ರಾಮೇಶ್ವರದಿಂದ ಹಿಮಾಲಯದವರೆಗೆ ಹಬ್ಬಿರುವಂತಹ ಈ ಮಾತೃಭೂಮಿಯಲ್ಲಿ ಪುತ್ರರೂಪದಲ್ಲಿ ವಾಸಿಸುತ್ತಿರುವ ಈ ಸಮಾಜದ ರಾಷ್ಟ್ರ ಜೀವನವು ಅತ್ಯಂತ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಆದುದರಿಂದ ನಮ್ಮ ಪೂರ್ವಜರು ಭರತಖಂಡವನ್ನು ವರ್ಣಿಸುತ್ತ ಹೀಗೆ ಹೇಳಿದ್ದಾರೆ–

**ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್।**
**ವರ್ಷ ತದ್ ಭಾರತಂ ನಾಮ ಭಾರತೀ ಯತ್ರ ಸಂತತಿಃ॥**

ಅರ್ಥಾತ್ ಪೃಥ್ವಿಯ ಯಾವ ಭೂ ಭಾಗವು ಸಮುದ್ರದ ಉತ್ತರ ಮತ್ತು ಹಿಮಾಲಯದ ದಕ್ಷಿಣದಲ್ಲಿದೆಯೋ, ಅದು ಭರತಖಂಡವೆಂದು ಕರೆಯಲ್ಪಡುತ್ತದೆ ಮತ್ತದರ ಸಂತಾನವನ್ನು ಭಾರತೀಯರೆಂದು ಹೇಳುತ್ತಾರೆ. ಮಾತೃಭೂಮಿಯ ಈ ಚಿತ್ರ ಸಹಸ್ರಾರು ವರ್ಷಗಳಿಂದ ಭಾರತೀಯರ ಮಾನಸದಲ್ಲಿ ಅಚ್ಚೊತ್ತಿದೆ. ಪ್ರತಿನಿತ್ಯವೂ ಸ್ನಾನ, ಸಂಧ್ಯಾವಂದನೆ, ಪೂಜೆ ಹಾಗೂ ಧಾರ್ಮಿಕ ವಿಧಿ–ವಿಧಾನಗಳಲ್ಲಿ ಮಾತೃಭೂಮಿಯ ಇದೇ ರೂಪದ ಸ್ಮರಣೆಯನ್ನು ಬೇರೆ–ಬೇರೆ ರೀತಿಗಳಲ್ಲಿ ಮಾಡಲಾಗುತ್ತದೆ. ಇಷ್ಟೊಂದು ಪುರಾತನ ರಾಷ್ಟ್ರಕ್ಕೆ ಅದರದೇ ಆದ ಒಂದು ವಿಶಿಷ್ಟವಾದ ಜೀವನ ಪದ್ಧತಿಯಿದೆ. ಜೀವನದ ಆದರ್ಶ, ಸಂಸ್ಕೃತಿ, ಅನುಭವಗಳ, ಭಾವನೆಗಳ ಮತ್ತು ಪರಂಪರೆಗಳ ಸಮ್ಮಿಳನಗಳಿಂದ ಇದಕ್ಕೊಂದು ಏಕರೂಪತೆ ಬಂದಿದೆ. ಈ ರೀತಿಯಲ್ಲಿ ಸುವಿಕಸಿತ ಸಮಾಜವು ಸಾವಿರಾರು ವರ್ಷಗಳಿಂದ ಈ ಭೂಮಿಯ ಸಂತಾನದ ರೂಪದಲ್ಲಿ ವಾಸಿಸುತ್ತ ಬಂದಿದೆ. ನಮ್ಮ ರಾಷ್ಟ್ರೀಯ ಪರಂಪರೆಯು ಅನಾದಿ ಕಾಲದಿಂದಲೂ ಇದೆ. ಅತ್ಯಂತ ಪ್ರಾಚೀನ ಕಾಲದಿಂದ ಇಂದಿನವರೆಗೆ ನಮ್ಮ ಎಲ್ಲ ಮಹಾಪುರುಷರು ತಮ್ಮ–ತಮ್ಮ ಜೀವನದ ಉದಾಹರಣೆ ಗಳಿಂದ ಈ ಪರಂಪರೆಯನ್ನು ಪುಷ್ಟೀಕರಿಸಿದ್ದಾರೆ. ಜೀವನದ ಆದರ್ಶಗಳ ಮತ್ತು ಮಾತೃಭೂಮಿಯ ಬಗೆಗಿನ ಶ್ರದ್ಧೆಗಳ ಸಮಾನ ಪರಂಪರೆಗಳನ್ನು ಜಾಗ್ರತವಾಗಿಡಲು

ವಿಭಿನ್ನ ರೀತಿಯ ಸಂಸ್ಕಾರಗಳ ವ್ಯವಸ್ಥೆಯು ಕೂಡಾ ಪ್ರಾಚೀನ ಕಾಲದಿಂದ ನಡೆದುಕೊಂಡು ಬರುತ್ತಿದೆ. ಈ ಸಂಸ್ಕಾರಗಳ ಬಾಹ್ಯರೂಪಗಳಲ್ಲಿ ಕಾಲಕ್ಕನುಗುಣವಾಗಿ ಬದಲಾವಣೆಗಳಾಗಿದ್ದರೂ ಸಹ ಮೂಲಭಾವನೆಯಲ್ಲಿ ಯಾವುದೇ ರೀತಿಯ ಪರಿವರ್ತನೆಯಾಗುವುದಿಲ್ಲ. ರಾಷ್ಟ್ರ-ಭಾವನೆಯನ್ನು ಜಾಗ್ರತವಾಗಿಡಲು ನಿತ್ಯ ಮತ್ತು ನೈಮಿತ್ತಿಕಗಳೆಂಬ ಎರಡು ಬಗೆಯ ಸಂಸ್ಕಾರಗಳು ಇಂದಿಗೂ ಪ್ರಚಲಿತವಾಗಿವೆ. ನಮ್ಮ ತೀರ್ಥಸ್ಥಾನಗಳು, ಯಾತ್ರೆಗಳು, ವ್ರತ, ಹಬ್ಬ ಮುಂತಾದವುಗಳೆಲ್ಲ ಈ ಸಂಸ್ಕಾರಗಳನ್ನು ಮೂಡಿಸುವ ಮಾಧ್ಯಮಗಳು. ಈ ಸಂಸ್ಕಾರಗಳ ಮೂಲಕ ನಮ್ಮ ಮನಸ್ಸಿನಲ್ಲಿ ರಾಷ್ಟ್ರದ ಬಗೆಗೆ ಶ್ರದ್ಧಾಭಾವನೆ ಉಂಟಾಗುತ್ತದೆ. ರಾಷ್ಟ್ರದ ವಿಚಾರದಲ್ಲಿ ನಮ್ಮ ಧೋರಣೆ ದೃಢವಾಗುತ್ತದೆ. ನಮ್ಮ ಸಂಸ್ಕೃತಿಯ ವಿಶೇಷತೆಗಳು, ಇತಿಹಾಸ, ಭಾಷೆ, ಸಭ್ಯತೆ ಮುಂತಾದ ಅದೆಷ್ಟೋ ವಿಚಾರಗಳು ಈ ರಾಷ್ಟ್ರವೆಂಬ ಧೋರಣೆಯಿಂದ ಸುದೃಢವಾಗುತ್ತವೆ. ರಾಷ್ಟ್ರಕ್ಕೆ ಸಂಬಂಧಿಸಿದ ನಮ್ಮ ಈ ಸ್ನೇಹಪರತೆಯನ್ನು ನಾವು ಯಾವತ್ತೂ ಶಬ್ದಗಳಲ್ಲಿ ಅಭಿವ್ಯಕ್ತಿಸಲಾರೆವೆಂದೇನಲ್ಲ. ಅದೆಷ್ಟೋ ಬಾರಿಯಂತೂ ನಾವು ರಾಷ್ಟ್ರದ ಬಗೆಗಿನ ನಮ್ಮಲ್ಲಿರುವ ನಮ್ಮತನವನ್ನು ಅಭಿವ್ಯಕ್ತಿಸುವ ಕಾರಣಗಳನ್ನು ಕೂಡಾ ಸರಿಯಾದ ರೀತಿಯಲ್ಲಿ ಅರ್ಥೈಸಿಕೊಂಡಿರುವುದಿಲ್ಲ. ರಾಷ್ಟ್ರದ ಬಗೆಗಿನ ನಮ್ಮ ಈ ಭಕ್ತಿ-ಭಾವನೆ ನಮ್ಮ ಪ್ರತಿಯೊಂದು ವ್ಯವಹಾರದಲ್ಲಿ ಅಡಗಿರುತ್ತದೆ. ಮನಸ್ಸಿನಲ್ಲಿ ಅದೊಂದು ಕಲ್ಪನೆಯಂತೆ ಆವರಿಸಿಕೊಂಡಿರುತ್ತದೆ. ಈ ಅಮೂರ್ತ ಕಲ್ಪನೆಯನ್ನು ನಮ್ಮ ಕಣ್ಣೆದುರಿನಲ್ಲಿ ತಂದು ನಿಲ್ಲಿಸುವುದಕ್ಕಾಗಿಯೇ ವಿಭಿನ್ನ ಬಗೆಯ ಸಾಧನಗಳನ್ನು ಉಪಯೋಗಿಸುತ್ತೇವೆ. ನಾವು ರಾಷ್ಟ್ರದ ಬಗ್ಗೆ ನಮ್ಮಲ್ಲಿರುವ ಭಕ್ತಿಯನ್ನು ತೋರ್ಪಡಿಸುವ ಸುಸಂದರ್ಭವನ್ನು ಪಡೆಯಬೇಕೆಂಬ ಕಾರಣಕ್ಕಾಗಿ ರಾಷ್ಟ್ರಕ್ಕೆ ಸಂಬಂಧಿಸಿದ ನಮ್ಮ ಆಂತರಿಕ ಭಾವನೆಗಳನ್ನು ಎಲ್ಲಾದರೂ ಪ್ರಕಟಪಡಿಸ ಬಯಸುತ್ತೇವೆ. ಈ ಧೋರಣೆ ಹೇಗಿದೆಯೆಂದರೆ, ನಿರಾಕಾರ ಪರಬ್ರಹ್ಮನ ಬಗೆಗೆ ತನ್ನಲ್ಲಿರುವ ಭಕ್ತಿಯನ್ನು ಪ್ರಕಟಪಡಿಸಲು ಭಕ್ತನೊಬ್ಬ ಮೂರ್ತಿಯ ಅವಲಂಬನೆಯನ್ನು ಪಡೆದಂತೆ. ಈ ಕಾರಣದಿಂದಾಗಿಯೇ ರಾಷ್ಟ್ರಕ್ಕೆ ಸಂಬಂಧಿಸಿದ ಭಕ್ತಿಯ ಸಂಸ್ಕಾರಗಳನ್ನು ದೃಢಪಡಿಸಿಕೊಳ್ಳುವರೆ ಕೆಲವು ಮಾಧ್ಯಮಗಳ ಸಹಾಯ-ಸಹಕಾರಗಳನ್ನು ಪಡೆಯಲಾಗುತ್ತದೆ.

ರಾಷ್ಟ್ರಕ್ಕೆ ಸಂಬಂಧಿಸಿದ ಈ ಅಮೂರ್ತ ಭಕ್ತಿ-ಭಾವನೆಯನ್ನು ಮೂರ್ತರೂಪಕ್ಕೆ ತರುವುದಕ್ಕಾಗಿ ಇರುವ ಪರಮ ಪವಿತ್ರ ಸಾಧನವೊಂದಿದ್ದರೆ ಅದು ನಮ್ಮ ರಾಷ್ಟ್ರಧ್ವಜ. ಪ್ರತಿಯೊಂದು ರಾಷ್ಟ್ರಕ್ಕೂ ಅದರದೇ ಆದ ರಾಷ್ಟ್ರಧ್ವಜವಿರುತ್ತದೆ. ರಾಷ್ಟ್ರದ ಪ್ರತೀಕವಾಗಿ ಅದು ಎಲ್ಲರಿಗೂ ಪ್ರೇರಣೆಯನ್ನು ಕೊಡುತ್ತದೆ. ನಮ್ಮದೂ ಒಂದು ರಾಷ್ಟ್ರಧ್ವಜವಿದೆ,

ಅದು ಇಂದಿನಿಂದಲ್ಲ, ಅನಾದಿ ಕಾಲದಿಂದಲೂ ಬಳಕೆಯಾಗುತ್ತ ಬಂದಿದೆ. ಈ ರಾಷ್ಟ್ರಧ್ವಜದಲ್ಲಿ ನಾವು ನಮ್ಮ ದೇಶದ ಸಮಗ್ರ ಇತಿಹಾಸ ಪ್ರತಿಬಿಂಬಿತವಾಗಿರುವುದನ್ನು ಕಾಣುತ್ತೇವೆ. ಇದು ಬಟ್ಟೆಯ ಒಂದು ತುಂಡಷ್ಟೇ ಅಲ್ಲ. ಒಂದು ವೇಳೆ ಹಾಗಿದ್ದರೆ, ಇದನ್ನು ನೋಡಿದೊಡನೆ ನಮ್ಮ ಮಸ್ತಕವು ಶ್ರದ್ಧೆಯಿಂದ ಹೀಗೆ ಬಾಗುತ್ತಿರಲಿಲ್ಲ. ಬಣ್ಣ ಮತ್ತು ಬಟ್ಟೆಯ ಅನೇಕ ರೀತಿಯ ಧ್ವಜಗಳು ನೇತಾಡುತ್ತಿದ್ದರೂ, ನಾವು ಈ ರೀತಿಯಲ್ಲಿ ನಮ್ಮ ಶ್ರದ್ಧಾಭಾವವನ್ನು ತೋರಿಸಲು ಸಾಧ್ಯವಿಲ್ಲ. ಅದರಿಂದ ನಮಗೆ ಸ್ಫೂರ್ತಿಯೂ ಕೂಡಾ ಸಿಗಲಾರದು. ಆದಾಗ್ಯೂ ಈ ಒಂದು ರಾಷ್ಟ್ರಧ್ವಜದ ಎದುರು ನಾವು ಶ್ರದ್ಧೆಯಿಂದ ತಲೆಬಾಗಿಬಿಡುತ್ತೇವೆಂದರೆ, ಇದಕ್ಕೆ ಕಾರಣವಿಷ್ಟೇ ಇದು ನಮ್ಮ ರಾಷ್ಟ್ರ ಮೂರ್ತ ಸ್ವರೂಪವಾಗಿದೆ. ರಾಷ್ಟ್ರದ ಭೂತ, ವರ್ತಮಾನ ಮತ್ತು ಭವಿಷ್ಯ ಇದರೊಳಗಿಂದ ಇಣುಕುತ್ತಿರುವಂತೆ ನಮಗೆ ಕಾಣುತ್ತದೆ. ಇದುವೆ ನಮ್ಮ ಸಾಂಸ್ಕೃತಿಕ ಪರಂಪರೆಯ ದ್ಯೋತಕವಾಗಿದೆ.

ಯಾವ ರಾಷ್ಟ್ರ ಜೀವನದ ಪ್ರತೀಕವಾಗಿ ಈ ಧ್ವಜವಿದೆಯೋ ಆ ರಾಷ್ಟ್ರ ಜೀವನ ಹಿಂದೂ ಜೀವನವಾಗಿದೆ ಎಂಬುದನ್ನು ಬಿಡಿಸಿ ಹೇಳುವ ಅವಶ್ಯಕತೆಯಿಲ್ಲ. ಹಿಂದುತ್ವದ ಪರಂಪರೆಯೇ ಈ ದೇಶದ ಪರಂಪರೆಯಾಗಿದೆ. ಇದೊಂದು ಐತಿಹಾಸಿಕವಾದ ನಿಜಾಂಶ. ವೇದಕಾಲದ ಅತಿ ಪ್ರಾಚೀನವಾದ ಪುಟಗಳಿಂದ ತಿಳಿದುಬರುವುದೇನೆಂದರೆ, ಮಾತೃಭೂಮಿಗಾಗಿ ಪ್ರೇಮ ಮತ್ತು ಭಕ್ತಿಯ ಆದರ್ಶ ಮತ್ತು ಪರಂಪರೆಗಳನ್ನು ನಿರ್ಧರಿಸಿದವರು ಹಿಂದೂ ಸಮಾಜದ ಪೂರ್ವಿಕರೇ ಆಗಿದ್ದರು. ಅವರು ನಮ್ಮ ಮಾತೃಭೂಮಿಯ ಸಜೀವ ಮತ್ತು ಅಖಂಡ ಪ್ರತಿಭೆಯನ್ನು ಸಮಾಜದ ಮಸ್ತಿಷ್ಕದಲ್ಲಿ ಸದಾ ಉಜ್ಜ್ವಲವಾಗಿಡುವ ಉದ್ದೇಶದಿಂದ ವಿವಿಧ ಕೃತ್ಯ ಹಾಗೂ ಕರ್ತವ್ಯಗಳನ್ನು ನಿರ್ಧರಿಸಿದರು. ಮಾತೃಭೂಮಿಯ ಅಖಂಡತೆ ಮತ್ತು ಪಾವಿತ್ರತೆಗಾಗಿ ತಮ್ಮ ರಕ್ತ ಹರಿಸಿದವರು ಅವರೇ ಆಗಿದ್ದರು. ಸಾವಿರಾರು ವರ್ಷಗಳ ಇತಿಹಾಸ ಈ ನಿಜಾಂಶಕ್ಕೆ ಸಾಕ್ಷಿಯಾಗಿದೆ. ಹಾಗಾಗಿ ಯಾವ ರೀತಿಯಲ್ಲಿ ಅನಾದಿ ಕಾಲದಿಂದ ಬಂದಿರುವ ಈ ರಾಷ್ಟ್ರೀಯ ಪರಂಪರೆಯಿದೆಯೋ, ಅದೇ ರೀತಿಯಲ್ಲಿ ಭಕ್ತಿ–ಭಾವನೆಯನ್ನು ವ್ಯಕ್ತಪಡಿಸುವ ಈ ರಾಷ್ಟ್ರಧ್ವಜವೂ ಅನಾದಿಕಾಲದಿಂದ ನಮ್ಮ ದೇಶದಲ್ಲಿದೆ.

ಈ ಧ್ವಜದ ಅರ್ಥಾತ್ ನಮ್ಮ ರಾಷ್ಟ್ರೀಯ ಜೀವನದ ಮೂರ್ತರೂಪವಾಗಿರುವ ಈ ಪ್ರತೀಕದ ನಿರ್ಮಾಣ ಯಾವಾಗ ಆಯಿತು, ಎಂದು ಹೇಳುವುದು ಕಷ್ಟ. ಇದರ ನಿರ್ಮಾಣದ ಗಾಥೆ ಇತಿಹಾಸದ ಪುಟಗಳಲ್ಲಿ ಸಿಗುವುದಿಲ್ಲ. ಯಾವಾಗ ಈ ಬಣ್ಣದ ಮತ್ತು ಈ ಆಕಾರದ ಧ್ವಜ ಇರಬೇಕೆಂದು ನಿರ್ಧರಿಸಲಾಯಿತೆಂಬುದೂ

ತಿಳಿದುಬರುತ್ತಿಲ್ಲ. ಆದರೂ ಕೂಡಾ ಪ್ರಾಚೀನ ಗ್ರಂಥಗಳಲ್ಲಿ ಕೇಸರಿ ವರ್ಣದ ಧ್ವಜದ ಉಲ್ಲೇಖ ಸಿಗುತ್ತದೆ. ವೇದಗಳಲ್ಲಿಯೂ 'ಅಗ್ನಿ ಕೇತವಃ' ಎಂಬ ಹೆಸರಿನಲ್ಲಿ ಇದರ ಉಲ್ಲೇಖವಿದೆ. ಅಗ್ನಿಯ ಬಣ್ಣದಂತೆಯೆ ಈ ಧ್ವಜದ ಕಾಂತಿ ಎಂಬುದರ ಉಲ್ಲೇಖ ಉದ್ದೇಶಪೂರ್ವಕವಾಗಿಯೇ ಇದೆ. ನಮಗೆಲ್ಲ ತಿಳಿದಿರುವಂತೆ, ನಮ್ಮ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಯಜ್ಞಕ್ಕೆ ಬಹಳ ಪ್ರಾಮುಖ್ಯತೆಯಿದೆ. ಅಷ್ಟೇ ಅಲ್ಲ. ಭಾರತೀಯ ಸಂಸ್ಕೃತಿಯನ್ನು ಯಜ್ಞಸಂಸ್ಕೃತಿಯೆಂದು ಕರೆಯಲಾಗಿದೆ. ಆರ್ಯ ಜನಾಂಗದ ಸಂಪೂರ್ಣ ಬದುಕು ಯಜ್ಞಪ್ರಧಾನವಾಗಿತ್ತು. ಯಜ್ಞದ ನಿಮಿತ್ತವಾಗಿ ಋಷಿ–ಮುನಿಗಳು ಒಂದೆಡೆ ಸೇರುತ್ತಿದ್ದರು ಹಾಗೂ ಪರಸ್ಪರ ವಿಚಾರ–ವಿನಿಮಯ ಮಾಡಿಕೊಂಡು ಜೀವನದ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತ ಹೊಸ–ಹೊಸ ವಿಚಾರಗಳ ಕುರಿತಾಗಿ ಚರ್ಚಿಸುತ್ತಿದ್ದರು. ಇದೇ ಯಜ್ಞಸ್ಥಳಗಳಲ್ಲಿ ನಾವು ಸಮಾಜದ ಲೌಕಿಕ ಮತ್ತು ಪಾರಮಾರ್ಥಿಕ ಹೀಗೇ ಎಲ್ಲ ರೀತಿಯ ಔನತ್ಯದ ಮಾರ್ಗಗಳನ್ನು ಕಂಡುಹಿಡಿದಿದ್ದೇವೆ. ಯಜ್ಞವೇ ನಮ್ಮ ಸಂಸ್ಕೃತಿಯ ಪ್ರತೀಕವಾಗಿತ್ತು. ಆದುದರಿಂದ ಯಾರು ಈ ಸಂಸ್ಕೃತಿಯನ್ನು ನಾಶಗೊಳಿಸಲು ಪ್ರಯತ್ನಿಸಿದರೋ ಅವರು ಯಜ್ಞವನ್ನು ಹಾಳು ಮಾಡತೊಡಗಿದರು. ರಾಕ್ಷಸರಿಂದ ಯಜ್ಞಗಳನ್ನು ಹಾಳುಗೆಡವಿದ ವರ್ಣನೆ ಬರುತ್ತದೆ, ಅದು ಇದೇ ನಿಜಾಂಶದ ದ್ಯೋತಕವಾಗಿದೆ. ರಾಕ್ಷಸರು ಸರಿಯಾಗಿ ಯಜ್ಞನಡೆಸಲು ಬಿಡುತ್ತಿರಲಿಲ್ಲ. ಯಾಕೆಂದರೆ ಯಜ್ಞದಲ್ಲಿ ನಮ್ಮ ಸಂಸ್ಕೃತಿ ಹುದುಗಿಕೊಂಡಿರುತ್ತಿತ್ತು. ನಮ್ಮ ರಾಷ್ಟ್ರದ ಆತ್ಮ ಈ ಯಜ್ಞಗಳಲ್ಲಿಯೇ ನೆಲೆಗೊಂಡಿರುತ್ತಿತ್ತು. ಯಜ್ಞಸಂಸ್ಕೃತಿಯ ವಿಸ್ತಾರದಿಂದ ಭಾರತದ ಸಾಂಸ್ಕೃತಿಕ ವೈಭವ ವೃದ್ಧಿಸುತ್ತಿತ್ತು. ಆದರೆ ನಿರಂತರವಾಗಿ ಸಮಯ ಸರಿದಂತೆಲ್ಲ ಈ ಯಜ್ಞಗಳನ್ನು ಬೇರೆ–ಬೇರೆ ಸ್ಥಳಗಳಿಗೆ ಕೊಂಡುಹೋಗುವುದು ಕಷ್ಟವಾಯಿತು. ಯಜ್ಞದ ಮಹತ್ತ್ವ ಕುಂಠಿತವಾಗತೊಡಗಿತು. ಹಾಗಾಗಿ ನಮ್ಮ ಸಂಸ್ಕೃತಿಯ ವಿಶೇಷತೆಗಳನ್ನು ಎಂದೆಂದೂ ಕುಂದದಂತೆ ಕಾಪಾಡಿಕೊಂಡು ಬರಲೋಸುಗ ಯಜ್ಞದ ಪ್ರತೀಕವಾದಂತಹ ಧ್ವಜದ ಆವಿಷ್ಕಾರವಾಯಿತು. ಅಗ್ನಿಯಿಂದ ಮೇಲೇಳುವ ಜ್ವಾಲೆಯಂತೆ ಅದೇ ಬಣ್ಣ ಮತ್ತು ಅದೇ ಆಕಾರದಲ್ಲಿ ಅದರ ಪ್ರತಿಷ್ಠಾಪನೆಯಾಯಿತು. ಈ ಧ್ವಜದಿಂದಾಗಿ ನಾವು ನಮ್ಮ ಯಜ್ಞಸಂಸ್ಕೃತಿಯನ್ನೇ ವಿಸ್ತೃತಗೊಳಿಸುತ್ತಿದ್ದೆವು. ಇದೇ ಧ್ವಜವನ್ನು ಹಿಡಿದುಕೊಂಡು ಹೋಗಿ ನಾವು ಯುದ್ಧದಲ್ಲಿ ವಿಜಯಿಗಳಾಗುತ್ತಿದ್ದೆವು. ಯಾವುದನ್ನು ನೋಡಿದಾಗ ಪ್ರೇರಣೆ ಪ್ರಾಪ್ತಿಯಾಗುವುದೋ, ಸ್ಫೂರ್ತಿ ಸಿಗುವುದೋ, ಆದರ್ಶ ಪ್ರಕಟವಾಗುವವೋ, ಜೀವನದ ಗುರಿ ನೆನಪಿನಲ್ಲಿ ಉಳಿಯುವುದೋ, ಅಂತೆಯೇ ಯಾವ ಶ್ರೇಷ್ಠ ಮೌಲ್ಯಗಳಿಗಾಗಿ ಹೋರಾಡುವಾಗ ನಮ್ಮ ವೈಯಕ್ತಿಕ ಜೀವನವನ್ನು ಸಮರ್ಪಿಸುವಾಗಲೂ ಪ್ರಸನ್ನತೆ ಉಂಟಾಗುವುದೋ, ಅಂದವರ ಪ್ರತೀಕ ಈ

ಧ್ವಜವಾಗಿತ್ತು. "ಕೃಣ್ವಂತೋ ವಿಶ್ವಮರ್ಯಮ್" ಎಂದು ಬೊಬ್ಬಿಡುತ್ತ ಸಮಗ್ರ ವಿಶ್ವದಲ್ಲಿ ವಿಜೇತರಾಗಲು ಯಾವ ಶ್ರೇಷ್ಠ ಗುರಿಯು ಪ್ರೇರಣೆಯನ್ನು ಕೊಡುತ್ತಿತ್ತೋ, ಅದು ಈ ಧ್ವಜದಲ್ಲಿ ಪ್ರಕಟವಾಗುತ್ತಿತ್ತು. ಸಂಪೂರ್ಣ ವಿಶ್ವವನ್ನು ಸಭ್ಯತೆಯ ಕಡೆಗೆ ಕೊಂಡೊಯ್ಯಲು, ಅವರಿಗೆ ಜ್ಞಾನ–ದಾನ ಮಾಡಲು, ಸರ್ವ ರೀತಿಯ ಸಂಕಟಗಳೊಂದಿಗೆ ಹೋರಾಡುವ ಶಕ್ತಿ ಇದೇ ಧ್ವಜದಿಂದ ಪ್ರಾಪ್ತಿಯಾಗಿದೆ. ಎಂದಿಗೂ ಭಾರತವು ವಿಶ್ವವನ್ನು ಗುಲಾಮಗಿರಿಯತ್ತ ತಳ್ಳಲು ಯುದ್ಧ ಮಾಡಿರಲಿಲ್ಲ. ಕೇವಲ ಆತ್ಮರಕ್ಷಣೆಗಾಗಿಯೇ ಯುದ್ಧ ನಡೆದಿದೆ. ಆದರೆ ಆತ್ಮರಕ್ಷಣೆಯ ಅರ್ಥ ನಮ್ಮ ತುಚ್ಛವಾದ ಐಹಿಕ ಜೀವನದ ರಕ್ಷಣೆಯಲ್ಲ, ಬದಲಾಗಿ ನಮ್ಮ ಸಂಸ್ಕೃತಿಯ ರಕ್ಷಣೆಯೇ ಆಗಿತ್ತು. 'ಶರೀರ ನಶ್ವರವಾದದ್ದು ಮತ್ತು ಆತ್ಮ ಅಮರವಾದದ್ದು' ಈ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತ ಧರ್ಮ, ಸಂಸ್ಕೃತಿ ಮತ್ತು ಸಭ್ಯತೆಯ ರಕ್ಷಣೆಗಾಗಿ ಬಹುದೊಡ್ಡ ಬಲಿದಾನಗಳು ನಡೆದಿವೆ. ಈ ಎಲ್ಲ ಆದರ್ಶಗಳನ್ನು ನಮ್ಮೆದುರು ಪ್ರಸ್ತುತಪಡಿಸುವ ಯಾವುದಾದರೊಂದು ಪ್ರತೀಕವಿದ್ದರೆ, ಅದರಿಂದ ನಮಗೆ ಖಂಡಿತವಾಗಿಯೂ ಸ್ಫೂರ್ತಿ ಸಿಗುತ್ತದೆ. ಯಜ್ಞದಂತೆಯೆ ತ್ಯಾಗ, ತಪಸ್ಸು, ಕರ್ಮ ಹಾಗೂ ಉತ್ಸರ್ಗ ಮಾಡುವ ಭಾವನೆ ಈ ಧ್ವಜದಿಂದ ಸಿಗುತ್ತದೆ. ಆದುದರಿಂದ ಇದು ಅನಾದಿಕಾಲದಿಂದಲೂ ನಮ್ಮ ರಾಷ್ಟ್ರಧ್ವಜವಾಗಿದೆ.

ಇದಕ್ಕಿರುವ ಬಣ್ಣದ ವಿಶೇಷತೆಯೆಂದರೆ, ಇದು ಸನ್ಯಾಸಿಗಳ ಬಣ್ಣ. ಧ್ವಜದ ಬಣ್ಣ ಕಾವಿಯಾಗಿದ್ದು, ಹಾಗಾಗಿಯೇ ಸನ್ಯಾಸಿಗಳು ಕಾವಿಬಣ್ಣದ ಬಟ್ಟೆ ತೊಡಲು ಆರಂಭಿಸಿದರೋ ಅಥವಾ ಸನ್ಯಾಸಿಗಳ ಬಟ್ಟೆಯ ಬಣ್ಣ ಕಾವಿಯಾಗಿರುವುದರಿಂದ ಧ್ವಜದ ಬಣ್ಣ ಕಾವಿಯಾಯಿತೋ, ನಿರ್ಧರಿಸುವುದು ಕಷ್ಟ. ವಾಸ್ತವವಾಗಿ ಇವೆರಡೂ ಒಂದೇ.

ಈ ಸಾಧು–ಸನ್ಯಾಸಿಗಳು ತಮ್ಮ ಜೀವನದ ಸಮಸ್ತ ಮೋಹಗಳನ್ನು ತ್ಯಜಿಸಿ ದೇಶ ಹಾಗೂ ಸಮಾಜದ ಕಾರ್ಯಗಳಿಗಾಗಿ ತಮ್ಮ ಜೀವನವನ್ನು ಮುಡಿಪಾಗಿಡುತ್ತಿದ್ದರು. ಸುತ್ತೆಲ್ಲ ಸಂಚರಿಸುತ್ತಿದ್ದರು. ಮೂರು ದಿನಗಳಿಗಿಂತ ಹೆಚ್ಚು ಕಾಲ ಒಂದೇ ಸ್ಥಳದಲ್ಲಿ ನಿಲ್ಲುತ್ತಿರಲಿಲ್ಲ. ಸತತವಾಗಿ ಜನಸೇವೆಯಲ್ಲಿ ತೊಡಗಿಕೊಂಡಿರುತ್ತಿದ್ದರು. ಪಾರಂಪರಿಕವಾಗಿ ಈ ಸಾಧು–ಸನ್ಯಾಸಿಗಳು ಸಮಾಜವನ್ನು ಜ್ಞಾನಭರಿತ, ಸಮರ್ಥ ಮತ್ತು ಸುಖ–ಸಮೃದ್ಧವಾಗುವಂತೆ ಪ್ರಯತ್ನಿಸುತ್ತಿದ್ದರು. ಈ ದೇಶಕ್ಕೆ ರಾಷ್ಟ್ರೀಯತೆಯ ಪಾಠ ಕಲಿಸುವ ಕೆಲಸವನ್ನು ಅವರೇ ಮಾಡಿದ್ದಾರೆ. ಅವರ ತ್ಯಾಗ, ಪರಿಶ್ರಮ, ಸೇವಾ ಮನೋಭಾವನೆಯಿಂದಾಗಿಯೇ ಆಸೇತು ಹಿಮಾಚಲದವರೆಗಿನ ಸಂಪೂರ್ಣ ಭರತಭೂಮಿಯಲ್ಲಿ ಏಕತೆಯ ಸೂತ್ರ ಸ್ಥಾಪಿತವಾಗಿದೆ. ಐಹಿಕ ಜೀವನದ ಸುಖ–ಲೋಲುಪತೆಯಿಂದ ಮೇಲಕ್ಕೆದ್ದ

ಅವರ ತ್ಯಾಗಮಯ ವ್ಯಕ್ತಿತ್ವ ಎಲ್ಲ ದಿಕ್ಕುಗಳಲ್ಲಿ, ಎಲ್ಲ ರಾಜ್ಯಗಳಲ್ಲಿ, ಎಲ್ಲ ಭಾಷೆ–ಭಾಷಿಕರಲ್ಲಿ ಸಮಾನವಾಗಿ ಇಂದಿಗೂ ವಂದ್ಯವಾಗಿದೆ. ಸುದೂರದ ನಮ್ಮ ಅತೀತದಲ್ಲಿ ಹೋಗಿ–ಬರುವ ಸಾಧನಗಳು ಇಂದಿನಷ್ಟು ಸಮೃದ್ಧವಾಗಿಲ್ಲದ ಕಾಲದಲ್ಲಿ ಜೀವನದ ಆದರ್ಶಗಳ, ದೃಷ್ಟಿಕೋನಗಳ, ಸಾಹಿತ್ಯದ ಏಕರೂಪದ ಭಾವನೆಗಳನ್ನು ನಿರ್ಮಿಸುವ ಕಾರ್ಯ ಇಂತಹ ಸನ್ಯಾಸಿಗಳ ಮೂಲಕವೇ ಸಾಧ್ಯವಾಗಿದೆ. ಹಾಗಾಗಿ ಈ ಸಮಾಜಕ್ಕಾಗಿ ಸಮರ್ಪಿಸಿಕೊಂಡ ತ್ಯಾಗಿಗಳ ಮತ್ತು ನಿಷ್ಕಾಮ ಕರ್ಮಯೋಗಿ ಸನ್ಯಾಸಿಗಳ ಪರಂಪರೆಯನ್ನೇ ಭಾರತವು ಆದರ್ಶವೆಂದು ಪರಿಗಣಿಸಿದೆ. ಜೀವನದ ಚರಮ ಆರ್ಜನೆ ತ್ಯಾಗದಲ್ಲಿ ಪಡಿಮೂಡಿದೆ. ಮಹಾನ್ ಸಮ್ರಾಟ್‌ರ ರಾಜಮುಕುಟಗಳು ಇಂತಹ ತಾಪಸಿಗಳ ಸಮಕ್ಷಮದಲ್ಲಿ ಶರಣಾಗತಿ ಪಡೆದಿವೆ. ಅಂತರಂಗ–ಬಹಿರಂಗಗಳಲ್ಲಿ ಪೂರ್ಣ ನಿಸ್ವಾರ್ಥಿ–ನಿಸ್ಸಂಗಿಗಳಾಗಿದ್ದರೂ ಸಮಸ್ತ ಸಮಾಜದ ಶ್ರೇಯೋಭಿವೃದ್ಧಿಯಲ್ಲಿ ತಮ್ಮ ಜೀವನವನ್ನೇ ಹೋಮ ಮಾಡಿಕೊಂಡ ಈ ವಿರಾಗಿಗಳ ಬದುಕೇ ಸಾಕ್ಷಾತ್ ಯಜ್ಞದಂತಿದೆ. ಯಜ್ಞದ ಜ್ವಾಲೆಗಳಂತೆ ಶುದ್ಧ ಮತ್ತು ತೇಜಸಿಗಳಾಗಿದ್ದ ಈ ಸನ್ಯಾಸಿಗಳು ತಮ್ಮ ಉಡುಪಿಗಾಗಿ ಅದರದೇ ಪ್ರತೀಕವಾಗಿರುವ ಕಾವಿಯನ್ನೇ ಆಯ್ದುಕೊಂಡರು. ಕಾವಿವಸ್ತ್ರ ಸನ್ಯಾಸಿಗಳ ವೇಷಭೂಷಣವಾಯಿತು. ಇದೇ ಆದರ್ಶವನ್ನು ಭಾರತವು ತನ್ನೆದುರು ಇಟ್ಟುಕೊಂಡಿರುವುದರಿಂದ ಸನ್ಯಾಸಿಗಳ ಈ ವಸ್ತ್ರವನ್ನೇ ತನ್ನ ರಾಷ್ಟ್ರಧ್ವಜವನ್ನಾಗಿ ಒಪ್ಪಿಕೊಂಡಿತು. ಈ ಬಣ್ಣ ರಾಷ್ಟ್ರದ ಆತ್ಮದ ಬಣ್ಣವಾಗಿತ್ತು. ಮೂರ್ತಿವೆತ್ತ ಪಾವಿತ್ರ್ಯತೆಯ ಹಾಗೂ ತ್ಯಾಗಪೂರ್ಣ ಸಂಸ್ಕಾರಗಳ ಪ್ರತೀಕವಾಗಿರುವ ಭಗವಾಧ್ವಜ ಇಂದಿಗೂ ಅದೇ ಆದರ್ಶಗಳೆಡೆಗೆ ನಮ್ಮನ್ನು ಪ್ರೇರೇಪಿಸುತ್ತದೆ.

ಇಂತಹ ಅದೆಷ್ಟೋ ಸಂದರ್ಭಗಳು ಬಂದಾಗ ನಮಗೆ ನಮ್ಮ ಈ ರಾಷ್ಟ್ರೀಯ ಆದರ್ಶಗಳ ಹಿಂದಿರುವ ನಿಜಾಂಶದ ಅರಿವಾಗುತ್ತದೆ. ಕಾವಿಧಾರಿಯೊಬ್ಬರನ್ನು ಕಂಡೊಡನೆ ನಮಗರಿವಿಲ್ಲದೆಯೆ ನಮ್ಮ ಅಂತಃಕರಣ ಶ್ರದ್ಧಾಪೂರ್ವಕವಾಗಿ ಅವರೆಡೆಗೆ ಸೆಳೆಯಲ್ಪಡುತ್ತದೆ. ಇದಕ್ಕೆ ಕಾರಣವಿಷ್ಟೇ, ನಾವು ನಮ್ಮ ರಾಷ್ಟ್ರೀಯ ಪರಂಪರೆಯ ತ್ಯಾಗಪೂರ್ಣ ಜೀವನದೆಡೆಗೆ ಶ್ರದ್ಧಾಪೂರ್ವಕವಾಗಿ ತಲೆಬಾಗುತ್ತಿದ್ದೇವೆ. ಒಂದು ಬಾರಿ ನಡೆದ ಘಟನೆ ಹೀಗಿದೆ–ನಾನು ರೈಲಿನಲ್ಲಿ ಪ್ರವಾಸ ಮಾಡುತ್ತಿದ್ದೆ. ಅದರಲ್ಲಿ ಸಿಕ್ಕಾಪಟ್ಟೆ ಜನರಿದ್ದರು. ಯಾವ ಸ್ಟೇಶನ್‌ನಲ್ಲಿ ಗಾಡಿ ನಿಂತರೂ ನೂಕುನುಗ್ಗಲಾಗಿ ಬಿಡುತ್ತಿತ್ತು. ಕಂಪಾರ್ಟ್‌ಮೆಂಟ್‌ಗೆ ಹತ್ತಿ ಬರುವುದಾಗಲಿ, ಇಳಿದು ಹೋಗುವುದಾಗಲಿ ತುಂಬಾ ಕಷ್ಟವಾಗಿತ್ತು. ಅದರಲ್ಲಿ ಸೇನಾ ಜವಾನನೊಬ್ಬ ಕುಳಿತಿದ್ದ. ಅವನು ಬಾಗಿಲ ಬಳಿಯಲ್ಲಿಯೇ ಇದ್ದುದರಿಂದ ಯಾರಿಗೂ ಒಳಗಡೆ ಬರುವುದಕ್ಕೆ ಬಿಡುತ್ತಿರಲಿಲ್ಲ. ಜನಸಂದಣಿಯನ್ನು ಗಮನಿಸಿದರೆ ಅವನ ಮೇಲೆ ದೋಷಾರೋಪ

ಮಾಡುವಂತಿರಲಿಲ್ಲ. ಆದರೆ ಒಂದು ಸ್ಟೇಶನ್‌ನಲ್ಲಿ ಸನ್ಯಾಸಿಯೊಬ್ಬರು ಆ ಕಂಪಾರ್ಟ್‌ಮೆಂಟ್‌ಗೆ ಹತ್ತಲು ಬಂದಾಗ ಆ ಸೈನಿಕ ಜನರನ್ನು ಆಚೆ–ಈಚೆ ತಳ್ಳಿ ಹರಸಾಹಸ ಮಾಡಿ ಸಾಧುಗಳನ್ನು ಒಳಗಡೆ ಎಳೆದುಕೊಂಡ. ಅಲ್ಲೊಬ್ಬ ವ್ಯಕ್ತಿ ಕಾಣುವುದಕ್ಕೆ ಕಲಿತವರಂತೆ ಅಥವಾ ಗ್ರೆಜುವೇಟ್ ತರಹ ಕಾಣುತ್ತಿದ್ದರು. ಅವರಿಗೆ ಈ ದೃಶ್ಯವನ್ನು ನೋಡಿ ಕಿರಿಕಿರಿಯಾದಂತಿತ್ತು. ಆ ಸೈನಿಕನಿಗೆ ಹೇಳಿದರು–"ನೀವೂ ಪರವಾಗಿಲ್ಲ, ವಿಚಿತ್ರವಾಗಿದ್ದೀರಿ, ಈ ಸಾಧು ಮಹಾಶಯರಿಗೆ ಯಾಕೆ ಒಳಗಡೆ ಬರೋದಕ್ಕೆ ಬಿಟ್ರಿ?" ಅದಕ್ಕೆ ಸೈನಿಕ ಹೇಳಿದ –" ಸಾಧುಗಳನ್ನು ಒಳಗಡೆ ಕರೆದುಕೊಂಡಿದ್ದಕ್ಕೆ ಅದರಿಂದೇನು ತೊಂದರೆಯಾಗಿದೆ ! "ಆ ವ್ಯಕ್ತಿ ಹೇಳಿದರು– ಇವರು ತ್ಯಾಗ ಜೀವಿಗಳಲ್ಲ, ಭೋಗ ಜೀವಿಗಳು." ಆ ವ್ಯಕ್ತಿ ಇನ್ನೂ ಅದೇನೇನೋ ಹೇಳಿದರು, ಆಗ ಸೈನಿಕ ಉತ್ತರ ಕೊಟ್ಟ–" ವ್ಯಕ್ತಿ ಹೇಗಿದ್ದರೇನಂತೆ, ನನಗೆ ಅದರ ಬಗ್ಗೇನೂ ಚಿಂತೆಯಿಲ್ಲ. ನನಗೆ ಈ ಬಟ್ಟೆಯ ಬಣ್ಣದ ಮೇಲೆ ಪ್ರೀತಿಯಿದೆ. ಹಾಗಾಗಿ ನಾನು ಆ ಬಣ್ಣವನ್ನು ಒಳಗಡೆ ಬರಮಾಡಿಕೊಂಡಿದ್ದೇನೆ. ಈ ವ್ಯಕ್ತಿ ಕೆಟ್ಟವರೇ ಆಗಿದ್ದಿರಬಹುದು, ಆದರೆ ಈ ಬಟ್ಟೆಯನ್ನು ಹಾಕಿಕೊಂಡಿದ್ದಾರೆ. ಈ ಬಣ್ಣವನ್ನು ಕಂಡಾಕ್ಷಣ ನಾವು ಶ್ರದ್ಧೆಯಿಂದ ತಲೆಬಾಗುತ್ತೇವೆ."

ಇದು ನನ್ನ ಅನುಭವಕ್ಕೆ ಬಂದ ಚಿಕ್ಕದೊಂದು ಉದಾಹರಣೆ. ಇಂತಹ ಅದೆಷ್ಟೋ ಉದಾಹರಣೆಗಳನ್ನು ಕೊಡಬಹುದು. ಇಲ್ಲಿ ನಾವು ಯೋಚಿಸಬೇಕಾದುದಿಷ್ಟೆ, ಶ್ರದ್ಧೆಯೆಂದರೇನು? ಅದು ಎಲ್ಲಿಂದ ಬಂದದ್ದು? ನಾವು ಸ್ವಲ್ಪ ಆಳವಾಗಿ ಯೋಚಿಸಿದರೆ, ನಮಗೆ ತಿಳಿದುಬರುವುದೇನೆಂದರೆ, ಯುಗ–ಯುಗಗಳಿಂದ ಭಾರತವು ಯಾವ ತ್ಯಾಗಪೂರ್ಣ ಜೀವನವನ್ನು ಪೂಜಿಸುತ್ತಾ ಬಂದಿದೆಯೋ, ಅದುವೇ ಉಕ್ಕಿ ಬಂದಂತಾಗುತ್ತದೆ. ಇದು ನಮ್ಮ ರಾಷ್ಟ್ರೀಯ ಅಭಿವ್ಯಕ್ತಿಯ ಸಾಧನ. ನಮ್ಮ ದೇಶಭಕ್ತಿಯ ಸಶಕ್ತವಾದ ಮಾಧ್ಯಮ. ಸಾಧಾರಣವಾಗಿ ದೈನಂದಿನ ಜೀವನದಲ್ಲಿ ನಾವು ಅದರ ಕಡೆಗೆ ಅಷ್ಟೊಂದು ಗಂಭೀರವಾಗಿ ಯೋಚಿಸುವ ಗೋಜಿಗೆ ಹೋಗದೇ ಇರಬಹುದು. ಆದರೂ ಕೂಡಾ ಅಂತಹ ಪ್ರಸಂಗಗಳು ನಮ್ಮ ಕಣ್ಮುಂದೆ ಬಂದಾಗ ಹೃದಯದಲ್ಲಿ ವಿರಾಜಮಾನವಾಗಿರುವ ಆ ಸಂಸ್ಕಾರಗಳು ತಾವಾಗಿಯೇ ಉಕ್ಕಿ ಹರಿಯತೊಡಗುತ್ತವೆ. ನಮ್ಮಿಂದ ತಡೆಯುವುದಕ್ಕೆ ಸಾಧ್ಯವಾಗುವುದಿಲ್ಲ.

ಹಾಗಾಗಿ ಈ ಧ್ವಜವು ನಮಗೆ ನಮ್ಮ ಸಂಸ್ಕೃತಿಯ ಸಂದೇಶವನ್ನು ಸಾರುತ್ತಿರುವಂತೆ ಕಂಡುಬರುತ್ತದೆ. ಇದನ್ನು ನೋಡಿ ನಾವು ತ್ಯಾಗಪೂರ್ಣ ಜೀವನದ ಆಕಾಂಕ್ಷೆಯಿಂದ ತುಂಬಿಹೋಗುತ್ತೇವೆ. ಕೆಲವರಿಗೆ ಇದರ ಸಂದೇಶ ಕೇಳಿಸದೇ ಇರಬಹುದು. ಯಾಕೆಂದರೆ, ರಾಷ್ಟ್ರಕ್ಕಾಗಿ ಸರ್ವಸ್ವವನ್ನೂ ತ್ಯಜಿಸಬಲ್ಲ ಭಾವನೆಯುಳ್ಳ ಅಂತಃಕರಣ ಮಾತ್ರ ಇದರ ಮಹತ್ತ್ವವನ್ನು ಅರಿಯಬಲ್ಲದು. ಯಾರ ಅಂತರಂಗದಲ್ಲಿ

ಸ್ವಲ್ಪವಾದರೂ ರಾಷ್ಟ್ರದ ಸೇವೆ ಮಾಡುವ ಒತ್ತಾಸೆಯಿದೆಯೋ, ಅಂಥವರ ಪಾಲಿಗೆ ಈ ರಾಷ್ಟ್ರಧ್ವಜದ ಸಂದೇಶ ಸುಸ್ಪಷ್ಟವಾಗಿದೆ. ರಾಷ್ಟ್ರದ ಸಮಗ್ರ ಇತಿಹಾಸ ಕಣ್ಣಿದುರಿಗೆ ತೇಲಿ ಬರುತ್ತದೆ. ವೈದಿಕ ಋಷಿಗಳ ವಾಣಿ, ರಾಮ, ಕೃಷ್ಣ, ಬುದ್ಧ, ಮಹಾವೀರರಿಂದ ಹಿಡಿದು ಸೂರದಾಸ್, ತುಳಸಿ, ನಾನಕ, ಮೀರಾ, ಚೈತನ್ಯ, ರಾಮದಾಸ್ ಮೊದಲಾದ ಅದೆಷ್ಟೋ ಆದರ್ಶ ಮಹಾಪುರುಷರ ಜೀವನ, ಅತುಲನೀಯ ಪರಾಕ್ರಮಿ ವೀರ ಯೋಧರ ವಿಜಯ ಗಾಥೆಗಳು, ಮಠ, ಮಂದಿರ, ತೀರ್ಥ ಮತ್ತು ಪವಿತ್ರ ನದಿಗಳ ಯಾತ್ರೆ ಮಾಡುವ ಪವಿತ್ರ ಆತ್ಮಗಳು ಇತ್ಯಾದಿ, ಇತ್ಯಾದಿ ಅದೆಷ್ಟೋ ಚಿತ್ರಗಳು ಕಣ್ಮುಂದೆ ತೂಗಾಡತೊಡಗುತ್ತವೆ. ಇವೆಲ್ಲವುಗಳಿಂದ ಒಂದೇ ಧ್ವನಿ ಕೇಳಬರುತ್ತದೆ, ಅದೇನೆಂದರೆ ತ್ಯಾಗಮಯ ಜೀವನ ನಡೆಸುತ್ತ ಸಮನ್ವಯದ, ಸಹಿಷ್ಣುತೆಯ ಸಾಂಸ್ಕೃತಿಕ ವಿಶೇಷತೆಯನ್ನು ಸ್ವೀಕರಿಸಬೇಕು. ಯಾರೂ ಪರರು ಎಂಬುದಾಗಿ ಉಳಿಯಬಾರದು, ಎಲ್ಲರನ್ನೂ ನಮ್ಮವರೆಂಬಂತೆ ಸ್ವೀಕರಿಸಬೇಕು. ವಿಶಾಲತೆಯೇ ಜೀವನ, ಸಂಕುಚಿತೆಯೇ ಮೃತ್ಯು. ಈ ಧ್ವಜವು ಅಗ್ನಿಯ ಜ್ವಾಲೆಗಳ ಯಜ್ಞದ ಪ್ರತೀಕ. ಅಗ್ನಿಯ ವಿಶೇಷತೆಯೆಂದರೆ, ಅದು ತಾನಷ್ಟೇ ಪವಿತ್ರವಾಗಿರುವುದಿಲ್ಲ ಹೊರತಾಗಿ ತನ್ನ ಸಂಪರ್ಕಕ್ಕೆ ಬಂದವರಿಗೂ ಪಾವಿತ್ರ್ಯವನ್ನು ನೀಡುತ್ತದೆ. ಇಷ್ಟೊಂದು ದಾಹಕತೆ ಮತ್ತು ಪಾವಿತ್ರ್ಯದಿಂದ ತುಂಬಿದ ಜೀವನವನ್ನು ನಡೆಸುವ ಶಿಕ್ಷಣ ಈ ಧ್ವಜದಿಂದ ಸಿಗುತ್ತದೆ. ಮೊದಲಿನಿಂದಲೂ ನಡೆದು ಬಂದ ಹಿಂದೂ ಸಂಸ್ಕೃತಿಯ ಒಂದು ವಿಶೇಷತೆಯೆಂದರೆ, ಯಾರೇ ಅದರ ಸಮೀಪಕ್ಕೆ ಬಂದರೂ ಅದನ್ನವರು ತಮ್ಮದಾಗಿಸಿಕೊಂಡರು. ನಾವು ನಮ್ಮ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಮರೆತಾಗಿನಿಂದ ಈ ಧ್ವಜದ ಸಂದೇಶವನ್ನು ತಾತ್ಸಾರ ಮಾಡಿದ್ದೇವೆ. ಸರ್ವಸಂಗ್ರಾಹಕ ವೃತ್ತಿಯನ್ನು ಬಿಟ್ಟಂದಿನಿಂದ ನಮ್ಮ ಅವನತಿ ಆರಂಭಗೊಂಡಿದೆ. ಎಲ್ಲಿಯವರೆಗೆ ನಾವು ಈ ಧ್ವಜವನ್ನು ಗುರುವಿನ ಸ್ಥಾನದಲ್ಲಿ ಇರಿಸಿಕೊಂಡಿದ್ದೆವೋ, ಅದರ ಬೋಧನೆಯನ್ನು ಗಮನವಿಟ್ಟು ಕೇಳಿದ್ದೆವೋ, ಅಲ್ಲಿಯವರೆಗೆ ಶಕರು, ಹೂಣರು, ಸಿಥಿಯನ್ಸ್‌ರು ಮುಂತಾದ ಅದೆಷ್ಟು ಜನರು ಬಂದರೋ ಅವರನ್ನೆಲ್ಲ ಸ್ವೀಕರಿಸಿದೆವು, ನಮ್ಮವರನ್ನಾಗಿ ಮಾಡಿಕೊಂಡೆವು. ಜೀರ್ಣಿಸಿಕೊಳ್ಳುವ ಈ ಪ್ರವೃತಿ ಆರ್ಯ ಸಂಸ್ಕೃತಿಯ ವಿಶೇಷತೆ. ಇಂತಹ ವಿಶೇಷತೆಯನ್ನು ತಿಳಿಸುವುದಕ್ಕೆ ಇರುವ ಸಾಧನ ಈ ಧ್ವಜ. ಯಜ್ಞಮಯ ಜೀವನದ ಪ್ರೇರಣೆಯನ್ನು ನೀಡುವ, ಅಗ್ನಿಯ ಜ್ವಾಲೆಯಂತೆ ಸದಾ ಊರ್ಧ್ವಮುಖಿಯಾಗುವಂತೆ ಪ್ರೇರೇಪಿಸುವ ಈ ಧ್ವಜದ ಸಂದೇಶವನ್ನು ನಾವೀಗ ಚೆನ್ನಾಗಿ ಕೇಳಿಸಿಕೊಳ್ಳಬೇಕಾಗಿದೆ.

ದುರ್ಭಾಗ್ಯವಶಾತ್ ಇಂದು ಅದೆಷ್ಟೋ ಭ್ರಾಮಕ ಧೋರಣೆಗಳು ಪ್ರಚಲಿತವಾಗಿವೆ. ಅದರಿಂದ ಪ್ರಭಾವಿತರಾಗಿ ನಾವಿಂದು ಇದರ ವಾಸ್ತವಿಕ

ಸಂದೇಶವನ್ನು ಮರೆತುಬಿಟ್ಟಿದ್ದೇವೆ. ಇದು ಸನ್ಯಾಸಿಯಾಗಿ ಕಾಡಿಗೆ ಹೋಗಿ ಮೂಗು ಮುಚ್ಚಿಕೊಂಡು ಧ್ಯಾನ ಮುದ್ರೆಯಲ್ಲಿ ಕುಳಿತುಕೊಳ್ಳುವ ಸಂದೇಶವನ್ನಷ್ಟೇ ಕೊಡುತ್ತದೆಂದು ಕೆಲವರು ತಿಳಿದುಕೊಂಡಿದ್ದಾರೆ. ದೇಶ, ಸಮಾಜವೆಂಬಿತ್ಯಾದಿಯಾಗಿ ತಲೆ ಕೆಡಿಸಿಕೊಳ್ಳದೆ ಕೇವಲ ಸಾಂಬ್ರಾಣಿಯ ಹೊಗೆ ಹಾಕಿಕೊಂಡು ಸಮಾಜದಿಂದ ದೂರ ಹೋಗಿ ಕುಳಿತುಕೊಳ್ಳುವುದರಲ್ಲಿಯೇ ಸನ್ಯಾಸತ್ವದ ರಹಸ್ಯ ಅಡಗಿರುವುದೆಂದು ಜನರು ಯೋಚಿಸುತ್ತಾರೆ. ಆದರಿದು ತಪ್ಪು ಅಭಿಪ್ರಾಯ. ಸನ್ಯಾಸತ್ವವು ಮಹಾನ್ ಕರ್ಮದ ಪ್ರೇರಕ ತತ್ತ್ವವಾಗಿದೆ. ಅಖಂಡ ಕರ್ಮಯೋಗಿಯಾಗುವುದೇ ನಿಜವಾದ ಸನ್ಯಾಸತ್ವದ ರಹಸ್ಯ. ಕರ್ಮದಿಂದ ಓಡುವುದಲ್ಲ, ಕರ್ಮದ ನಿಜವಾದ ಕಾರ್ಯಕರ್ತನಾಗಿ ಕರ್ಮದ ಕಡೆಗೆ ಓಡುವುದೇ ಈ ಬಣ್ಣ ಕೊಡುವ ಸಂದೇಶವಾಗಿದೆ. ಈ ಬಣ್ಣದಿಂದ ತುಂಬಿದ ಧರ್ಮದಲ್ಲಿ ಐಹಿಕ ಮತ್ತು ಪಾರಮಾರ್ಥಿಕ ಹೀಗೇ ಎರಡೂ ರೀತಿಯ ಮಾರ್ಗಗಳನ್ನು ತೋರಿಸಲಾಗಿದೆ. ಯಾವ ಮನುಷ್ಯ ಇಹಲೋಕದ ಕುರಿತಾಗಿ ಯೋಚಿಸುವುದಿಲ್ಲವೋ ಅವನು ಯಶಸ್ವಿಯಾಗಲಾರ. ನಾವು ಮನುಷ್ಯನ ಆಧ್ಯಾತ್ಮಿಕ ಉನ್ನತಿಯನ್ನು ಗುರಿಯ ರೂಪದಲ್ಲಿ ಮುಂದಿಟ್ಟಿದ್ದೇವೆಂಬುದು ನಿಜ. ಆದರೆ ಇದರರ್ಥ ಲೌಕಿಕ ಉನ್ನತಿಯ ಅಳತೆಯ ಮಾನವನ್ನು ಕಡಿತಗೊಳಿಸುವುದಲ್ಲ. ಭಗವಂತನು ನಮಗೆ ಈ ಜೀವನವನ್ನು ಯಾಕೆ ಕೊಟ್ಟಿದ್ದಾನೆ?... ಯಾಕೆಂದರೆ ನಾವು ಇದರಿಂದಾಗಿ ಚಿರಂತನ ಸುಖ ಮತ್ತು ಶಾಂತಿಯನ್ನು ಪಡೆದುಕೊಳ್ಳಬಹುದೆಂಬುದು ಆತನ ಆಂತರ್ಯ.

ಈ ಉದ್ದೇಶದ ಪ್ರಾಪ್ತಿಯ ಸಾಧನವೇ ಈ ಸಾಂಸಾರಿಕ ಜೀವನ. ಒಂದು ವೇಳೆ ನಾವು ಸಾಧನದ ಕಡೆಗೆ ನಿರ್ಲಕ್ಷ್ಯ ವಹಿಸಿದರೆ, ನಮ್ಮ ಗುರಿಯನ್ನು ತಲುಪುವುದು ಸಾಧ್ಯವಾಗಲಿಕ್ಕಿಲ್ಲ. ಅದು ಹೇಗೆಂದರೆ, ನಮಗೆ ಕಾರಿನಲ್ಲಿ ಕುಳಿತು ಬಹುದೂರ ಪಯಣಿಸಬೇಕಾಗಿದ್ದರೆ ಆ ಕಾರನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕಾಗಿರುವುದು ಅಷ್ಟೇ ಮುಖ್ಯವಾದದ್ದು. ಕಾರಿನ ಕುರಿತಾಗಿ ನಿರ್ಲಕ್ಷ್ಯ ಮಾಡಿ ಬೇಜವಾಬ್ದಾರಿಯುತವಾಗಿ ಅದನ್ನು ಓಡಿಸಿದರೆ ಅದು ಹೋಗಿ ಯಾವುದಾದರೂ ಗೋಡೆಗೆ ಹೊಡೆಯುವುದಂತೂ ನಿಶ್ಚಿತ. ಇದಕ್ಕೆ ನಮ್ಮಲ್ಲಿ ನದಿ ಮತ್ತು ನೌಕೆಯ ಉದಾಹರಣೆ ಕೊಡುವುದುಂಟು. ನದಿಯನ್ನು ಸರಿಯಾಗಿ ದಾಟಬೇಕೆಂದಿದ್ದ ದೋಣಿಯು ಸುಸ್ಥಿತಿಯಲ್ಲಿರಬೇಕು. ಅದರಲ್ಲಿ ಚಿಕ್ಕ ರಂಧ್ರವಿದ್ದರು ನದಿ ದಾಟುವುದು ಕಷ್ಟಕರ. ಸರಿಯಾಗಿದ್ದರೆ ಹುಟ್ಟುಹಾಕಿ ದೋಣಿಯನ್ನು ನಡೆಸುತ್ತ ಇನ್ನೊಂದು ದಡವನ್ನು ತಲುಪಬಹುದು. ಇದನ್ನೇ ಬುದ್ಧಿವಂತಿಕೆಯ ವ್ಯವಹಾರವೆನ್ನುವುದು. ಹೌದು! ಒಂದು ಮಾತಂತೂ ಸತ್ಯ, ನದಿ ನಮ್ಮ ಸರ್ವಸ್ವವೂ ಅಲ್ಲ; ನಮ್ಮ ಧ್ಯೇಯವೂ ಅಲ್ಲ. ನದಿಯನ್ನು ದಾಟಿ ಹೋದ ಮೇಲೂ ನಾವು ದೋಣಿಯನ್ನು

ಬಿಡದೆ, ಅದರಲ್ಲಿಯೇ ಕುಳಿತಿದ್ದರೆ ಅಥವಾ ಮರಳು ರಾಶಿಯ ಮೇಲೆ ದೋಣಿಯನ್ನು ಎಳೆಯತೊಡಗಿದರೆ ಅದು ಮೂರ್ಖತೆಯಾದೀತು. ಅಂತಹ ವ್ಯಕ್ತಿ ದೋಣಿಯ ಮಹತ್ತ್ವವನ್ನು ಅರಿತಿಲ್ಲವೆಂದಾಯಿತು. ಪಶ್ಚಿಮದ ಜಗತ್ತು ಇದನ್ನೇ ಮಾಡಿದೆ. ಪಾಶ್ಚಾತ್ಯ ಜಗತ್ತಿನ ಸಾಂಸಾರಿಕ ಪ್ರಗತಿಯ ವ್ಯಾಮೋಹ ದೋಣಿಯನ್ನು ಹಿಡಿದುಕೊಂಡು ಅದರಲ್ಲಿ ಕುಳಿತುಕೊಂಡಂತೆ ಸರಿ. ಭಾರತೀಯ ಸಂಸ್ಕೃತಿ ಮತ್ತು ಪಾಶ್ಚಾತ್ಯ ಸಂಸ್ಕೃತಿಗಿರುವ ಅಂತರವಿಷ್ಟೆ. ನಾವು ಸಾಧನದ ಉಪೇಕ್ಷೆ ಮಾಡಲಿಲ್ಲ. ಆದರೆ ಅದನ್ನೇ ನಮ್ಮ ಗಂತವ್ಯವೆಂದು ತಿಳಿಯುವ ತಪ್ಪನ್ನು ನಾವೆಂದೂ ಮಾಡಲಿಲ್ಲ. ಪಾಶ್ಚಾತ್ಯ ಸಂಸ್ಕೃತಿಯು ಈ ಜೀವನವನ್ನೇ ಸರ್ವಸ್ವವೆಂದು ಒಪ್ಪಿಕೊಂಡಿದೆ. ಇದಕ್ಕಿಂತಲೂ ಮುಂದೆ ಹೋಗಿ ಅದೆಂದೂ ಯೋಚನೆಯನ್ನೇ ಮಾಡಿಲ್ಲ. ಇದರ ಪರಿಣಾಮವಾಗಿ ಅಲ್ಲಿ ಸದಾ ಒಂದಿಲ್ಲೊಂದು ರೀತಿಯ ಸಂಘರ್ಷ ನಡೆಯುತ್ತಲೇ ಇದೆ. ರಕ್ಕಸ ವೃತ್ತಿಯಿಂದ ನರಸಂಹಾರವನ್ನು ಮಾಡುತ್ತಲೇ ಬಂದಿದೆ.

ಆದರೆ ನಾವು ಎರಡೂ ಪಕ್ಷಗಳ ಕುರಿತಾಗಿ ಅಧ್ಯಯನ ಮಾಡಿದ್ದೇವೆ. ಹಾಗಾಗಿಯೇ ಜೀವನದಿಂದ ಮೇಲಕ್ಕೆದ್ದ ತ್ಯಾಗಿಗಳು, ವೈರಾಗಿಗಳು, ತಪಸ್ವಿಗಳು ಹಾಗೂ ಋಷಿ–ಮುನಿಗಳು ಜಗತ್ತನ್ನು ತಿದ್ದುವ ಸಂಕಲ್ಪ ಮಾಡಿದರು, ಸಾಮ್ರಾಜ್ಯಗಳ ನಿರ್ಮಾಣ ಮಾಡಿದರು. ವಿಶ್ವದ ಕಲ್ಯಾಣಕ್ಕಾಗಿ ಅಖಂಡ ಕರ್ಮ–ಚೈತನ್ಯದ ಉದಾಹರಣೆಗಳನ್ನು ಪ್ರಸ್ತುತಪಡಿಸಿದರು. ತ್ಯಾಗದ ಪ್ರತೀಕವಾಗಿರುವ ಈ ಧ್ವಜವನ್ನು ತೆಗೆದುಕೊಂಡು ಭರತಖಂಡದ ಹೊರಗಿರುವ ದ್ವೀಪ ದ್ವೀಪಾಂತರಗಳಲ್ಲಿ ಪ್ರವಾಸ ಮಾಡಿದರು. ಜಾವಾ, ಸುಮಾತ್ರಾ, ಬಾಲಿ, ಹಿಂದೇಶಿಯಾ, ಜಪಾನ್, ಚೀನಾ ಮುಂತಾದ ಅದೆಷ್ಟೋ ದೇಶಗಳಲ್ಲಿ ಇಂದಿಗೂ ಭಾರತದ ಸಾಂಸ್ಕೃತಿಕ ವಿಜಯದ ಚಿನ್ಹೆ ಅಂಕಿತವಾಗಿದೆ. ಭಾರತದ ಮಹಾನ್ ಕರ್ಮದಿಂದ ಯೋಧರು ದಿಗ್ವಿಜಯ ಮಾಡುತ್ತಿದ್ದರು. ಯಾವ ಧ್ವಜದ ಮಾರ್ಗದರ್ಶನದಲ್ಲಿ ಸಮಸ್ತ ವಿಶ್ವದ ವೈಭವವನ್ನು ಸಂಪಾದನೆ ಮಾಡಿದ್ದರೋ, ಅದು ಕರ್ಮವೀರ ಪಲಾಯನ ಮಾಡುವ ಸಂದೇಶವನ್ನು ಹೇಗೆ ತಾನೇ ನೀಡಲು ಸಾಧ್ಯ? ಹಾಗಾಗಿಯೇ ಭಾರತವನ್ನು ಸ್ವರ್ಣಭೂಮಿಯೆಂದು ಕರೆದರು ಮತ್ತು ಹಾಲು–ತುಪ್ಪದ ಹೊಳೆ ಹರಿಯುತ್ತಿತ್ತು ಎಂಬ ಮಾತು ಜನಜನಿತವಾಯಿತು. ಇದೇ ಧ್ವಜವನ್ನು ಮುಂದಿಟ್ಟುಕೊಂಡು ನಾವು ಸಮಗ್ರ ವಿಶ್ವದಲ್ಲಿ ಜ್ಞಾನದ ಪ್ರಸಾರ ಮಾಡಿದೆವು ವಾಣಿಜ್ಯ, ವ್ಯಾಪಾರ, ಕಲಾ–ಕೌಶಲ್ಯ, ಸೈನ್ಯ–ಸಂಚಾಲನೆ, ಸಾಮಾಜಿಕ–ವ್ಯವಸ್ಥೆ ಮುಂತಾದ ಎಲ್ಲ ಕ್ಷೇತ್ರಗಳಲ್ಲಿ ನಾವು ಅಭಿವೃದ್ಧಿಯನ್ನು ಮಾಡಿದ್ದೇವೆ. ಲೌಕಿಕ ಜೀವನವನ್ನು ಪಾರಲೌಕಿಕ ಜೀವನವನ್ನು ಪಡೆಯುವ ಸಾಧನವೆಂದು ಪರಿಗಣಿಸಿ ನಾವು ಮುನ್ನಡೆದೆವು.

ಇದಕ್ಕೆ ಸಂಬಂಧಿಸಿದಂತೆ ಹಲವಾರು ಉದಾಹರಣೆಗಳನ್ನು ಕೊಡಬಹುದು. ಜಗದ್ಗುರು ಶಂಕರಾಚಾರ್ಯರ ಉದಾಹರಣೆ ಇದೇ ರೀತಿಯದ್ದು. ಕೇವಲ ಮೂವತ್ತೆರಡು ವರ್ಷಗಳ ಕಿರು ವಯಸ್ಸಿನಲ್ಲಿ ಅವರು ಅದೆಂತಹ ಮಹಾನ್ ಲೋಕೋದ್ಧಾರದ ಕಾರ್ಯವನ್ನು ಮಾಡಿಬಿಟ್ಟರು. ಅವರು ಕೇವಲ ಯಾವುದೋ ಒಂದು ಕಾಡಿನಲ್ಲಿ ಕುಳಿತು ತಪಸ್ಸು ಮಾಡುತ್ತಿದ್ದರು ಎಂದು ಯಾರಾದರೂ ಹೇಳಲು ಸಾಧ್ಯವೇ? ಅವರು ನಾಲ್ಕು ಬಾರಿ ಸಂಪೂರ್ಣ ಭಾರತವನ್ನು ಸುತ್ತಿ ಬಂದರು. ಎಲ್ಲ ಉಪನಿಷತ್ತು ಮತ್ತು ಗೀತೆಗಳ ಮೇಲೆ ಭಾಷ್ಯ ಬರೆದರು. ಸಮಗ್ರ ದೇಶದ ಬೇರೆ–ಬೇರೆ ಸ್ಥಳಗಳಲ್ಲಿ ಶಾಸ್ತ್ರಾರ್ಥ ಮಾಡಿದರು. ಈ ರೀತಿಯಲ್ಲಿ ಮಹಾನ್ ಕರ್ಮಮಯವಾದಂತಹ ಬದುಕನ್ನು ನಡೆಸಿದರು. ಅತ್ಯಲ್ಪ ಕಾಲದಲ್ಲಿ ಸಂಪೂರ್ಣ ಭಾರತದಲ್ಲಿ ನವಚೈತನ್ಯದ ಸಂಚಾರ ಮಾಡಿದರು. ಈ ರೀತಿಯ ಕರ್ಮಮಯ ಜೀವನ ನಡೆಸುವುದೇ ಈ ಧ್ವಜದ ಸಂದೇಶವಾಗಿದೆ. ಇದು ರಾಷ್ಟ್ರದ ಸನಾತನ ಸಂಸ್ಕೃತಿಯ ಪ್ರತೀಕವಾಗಿದೆ. ಈ ಧ್ವಜವೇ ನಮ್ಮ ಗುರು. ಇದರ ಮಾರ್ಗದರ್ಶನ ದಿಂದಲೇ ಪ್ರೇರಣೆ ಪಡೆದು ನಾವು ಉಜ್ಜ್ವಲ ಭವಿಷ್ಯದತ್ತ ಪಯಣಿಸಬಹುದು.

ಹಾಗಾಗಿಯೇ ಇದುವೇ ನಮ್ಮ ಭಾರತೀಯತೆಯ ನಿಜವಾದ ಪ್ರತೀಕ ಮತ್ತು ನಮ್ಮ ರಾಷ್ಟ್ರಧ್ವಜವೆಂಬುದನ್ನು ನಾವು ಚೆನ್ನಾಗಿ ಅರಿತುಕೊಳ್ಳಬೇಕು.

ಪ್ರಾಚೀನ ಕಾಲದಲ್ಲಿ ನಮ್ಮದು ಎಂಬ ಯಾವುದೇ ರಾಷ್ಟ್ರವಿದ್ದಿಲ್ಲ ಹಾಗಾಗಿ ರಾಷ್ಟ್ರಧ್ವಜವೆಂಬುದು ಹಿಂದೆಂದೂ ಇದ್ದಿರಲಿಲ್ಲ ಎಂದು ಇತ್ತೀಚೆಗೆ ಕೆಲವು ಬಾರಿ ಕೆಲವರು ಭ್ರಮೆಗೆ ಒಳಗಾಗಿ ಹೇಳುತ್ತಿರುವುದು ಕೇಳಿಬರುತ್ತಿದೆ. ಆದರದು ಬ್ರಿಟಿಷರಿಂದ ಹಬ್ಬಿಸಿರುವಂತಹ ದುರ್ಬುದ್ಧಿಯ ಪ್ರಭಾವದಿಂದಲೇ ಹೊರತು ಬೇರೇನೂ ಅಲ್ಲ. ಆಂಗ್ಲರು ತಮ್ಮ ಪ್ರಭಾವವನ್ನು ಇಲ್ಲಿ ಬೇರೂರುವುದಕ್ಕಾಗಿಯೇ ಭಾರತ ಹಿಂದೆಂದೂ ರಾಷ್ಟ್ರವಾಗಿರಲಿಲ್ಲ. ಅಷ್ಟೇ ಅಲ್ಲ ತಾವೇ ಮೊಟ್ಟಮೊದಲ ಬಾರಿಗೆ ಭಾರತಕ್ಕೆ ಇದೊಂದು ರಾಷ್ಟ್ರ ಎಂಬ ಪ್ರಜ್ಞೆಯನ್ನು ಬೆಳೆಸಿದವರು ಎಂಬಂತಹ ತಪ್ಪು ವಿಚಾರಧಾರೆಯನ್ನು ಹಬ್ಬಿಸಿದರು. ಇಂತಹ ತಪ್ಪುತಿಳುವಳಿಕೆಗೆ ಒಳಗಾಗಿರುವುದರಿಂದಲೇ ನಮ್ಮ ಪ್ರಾಚೀನವಾದ ರಾಷ್ಟ್ರ–ಜೀವನ ಮತ್ತು ರಾಷ್ಟ್ರಧ್ವಜ ನಮ್ಮಿಂದ ವಿಸ್ಮರಣೆಗೆ ಒಳಗಾಯಿತು. ಅಂಥವರು ಹೊಸ ರಾಷ್ಟ್ರಧ್ವಜವನ್ನು ಸಿದ್ಧಗೊಳಿಸುವ ಉದ್ದೇಶವನ್ನಿಟ್ಟುಕೊಂಡು ಮುಂದುವರಿದರು. ಅಜ್ಞಾನವಶಾತ್ ಅವರು ಯಾವ ರೀತಿಯಲ್ಲಿ ಭಾರತವನ್ನು ಹೊಸ ರಾಷ್ಟ್ರವನ್ನಾಗಿ ಮಾಡಬೇಕೋ ಅದೇ ರೀತಿಯಲ್ಲಿ ಅದಕ್ಕೊಂದು ರಾಷ್ಟ್ರಧ್ವಜವನ್ನೂ ಕೊಡಬೇಕು ಎಂದು ಯೋಚಿಸಿದರು. ಭಾರತದ ಸನಾತನ ರಾಷ್ಟ್ರಜೀವನದ ವಿಸ್ಮರಣೆಯ ದುಃಖದಾಯಕ ಪರಿಣಾಮದಿಂದಾಗಿ ಜನರು ರಾಷ್ಟ್ರಧ್ವಜವನ್ನು ಹುಡುಕತೊಡಗಿದರು.

ಹೊಸ ರಾಷ್ಟ್ರಧ್ವಜದ ಹುಡುಕಾಟ ಮೊಟ್ಟಮೊದಲು ವಿದೇಶದಲ್ಲಿಯೇ ಆಯಿತೆಂದು ಹೇಳಲಾಗುತ್ತದೆ. ಭರತಖಂಡವನ್ನು ಗುಲಾಮಗಿರಿಯಿಂದ ವಿಮುಕ್ತಿಗೊಳಿಸಲು ಆಯೋಜಿಸುವ ಶಿಕ್ಷಣ ಪಡೆಯುವುದಕ್ಕಾಗಿ ಕೆಲವು ನವಯುವಕರು ಫ್ರಾನ್ಸ್ ದೇಶಕ್ಕೆ ಹೋಗಿದ್ದರು. ಅಲ್ಲಿಯ ಒಂದು ಕಡೆಯಲ್ಲಿ ಬಹಳಷ್ಟು ನವಯುವಕರು ಒಟ್ಟಿಗೆ ಸೇರಿ ತಮ್ಮ ದೇಶ ಭಾರತದ ಕುರಿತಾಗಿ ಚರ್ಚಿಸುತ್ತಿರುವಾಗ ವಿದೇಶಿಯನೊಬ್ಬ ಭಾರತೀಯ ಯುವಕನಲ್ಲಿ ಕೇಳಿದ–ದೊಡ್ಡ–ದೊಡ್ಡ ಮಾತಾಡ್ತಾ ಇದ್ದೀಯಲ್ಲವಾ, ಹೇಳು ನಿನ್ನ ಧ್ವಜ ಯಾವುದು? ಯುವಕ ನಿರುತ್ತರನಾದ. ಯಾಕೆಂದರೆ ಅವನಿಗೆ ಭಾರತದ ರಾಷ್ಟ್ರಧ್ವಜದ ಕುರಿತಾಗಿ ಮಾಹಿತಿಯಿರಲಿಲ್ಲ. ಅಂದಿನ ದಿನಗಳಲ್ಲಿ ಭಾರತದಲ್ಲಿ ಆಂಗ್ಲರ ಆಳ್ವಿಕೆಯಿತ್ತು ಮತ್ತು ಇಲ್ಲಿ ಯೂನಿಯನ್ ಜ್ಯಾಕ್ ಹಾರಾಡುತ್ತಿತ್ತು. ಯೂನಿಯನ್ ಜ್ಯಾಕ್ ಭಾರತದ ಧ್ವಜ ಅಲ್ಲವೆಂಬುದು ಆ ಯುವಕನಿಗೆ ತಿಳಿದಿತ್ತು. ಆದರೆ ಆ ಬಡಪಾಯಿಗೆ ಭಾರತದ ಧ್ವಜ ಯಾವುದೆಂಬುದರ ಪರಿಚಯವಿರಲಿಲ್ಲ. ಆಗ ಭಾರತೀಯ ಯುವಕರು ಫ್ರಾನ್ಸ್‌ನಲ್ಲಿ ಒಂದು ಧ್ವಜವನ್ನು ತಯಾರು ಮಾಡಿದರು. ಅದರಲ್ಲಿ ಭಾರತದಲ್ಲಿರುವ ರಾಜ್ಯಗಳ ಸಂಖ್ಯೆಯಷ್ಟು ನಕ್ಷತ್ರ, ಕಮಲದ ಹೂವು ಹಾಗೂ ಮೂರು ಬಣ್ಣಗಳ ಪಟ್ಟಿಗಳಿದ್ದವು. ಈ ಧ್ವಜವನ್ನು ೧೯೦೭ರಲ್ಲಿ ಹಾರಿಸಲಾಯಿತು, ಮತ್ತೆ ೧೯೨೧ರಲ್ಲಿ ಕಾಂಗ್ರೆಸ್‌ನ ವಿಜಯವಾಡ ಅಧಿವೇಶನದಲ್ಲಿ ಮಹಾತ್ಮಾ ಗಾಂಧಿಯವರು ಮೂರು ಬಣ್ಣಗಳ ಪಟ್ಟಿಗಳೊಂದಿಗೆ ಚರಖವನ್ನಿಟ್ಟು ಧ್ವಜವನ್ನು ರೂಪಿಸಿದರು. ಆ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಆಂದೋಲನ ಜೋರಾಗಿತ್ತು. ಈ ಧ್ವಜವು ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿತ್ತು. ಕೆಂಪು, ಹಸಿರು ಮತ್ತು ಬಿಳಿ ಬಣ್ಣಗಳ ಈ ಧ್ವಜದಲ್ಲಿ ಕೆಂಬಣ್ಣ ಹಿಂದುಗಳ, ಹಸಿರು ಮುಸಲ್ಮಾನರ ಹಾಗೂ ಬಿಳಿಬಣ್ಣ ಇನ್ನಿತರರದೆಂದು ಹೇಳಲಾಗುತ್ತಿತ್ತು. ಆದರೆ ತದನಂತರದ ದಿನಗಳಲ್ಲಿ ತಮ್ಮ ಪ್ರತ್ಯೇಕವಾದ ಬಣ್ಣಗಳನ್ನೂ ಧ್ವಜದಲ್ಲಿ ಸೇರಿಸಬೇಕೆಂದು ಅನೇಕ ಚಿಕ್ಕ–ಚಿಕ್ಕ ವರ್ಗಗಳಿಂದ ಬೇಡಿಕೆಗಳು ಬರಲಾರಂಭಿಸಿದವು. ಇದರಿಂದಾಗಿ ಸಮಸ್ಯೆ ತಲೆದೋರಿತು. ಈ ವಿವಾದವನ್ನು ಬಗೆಹರಿಸುವುದಕ್ಕಾಗಿ ಕಮಿಟಿಯೊಂದನ್ನು ರಚಿಸಲಾಯಿತು. ಪಂ. ಜವಾಹರಲಾಲ ನೆಹರೂರವರು ಇದರ ಅಧ್ಯಕ್ಷರಾಗಿದ್ದರು. ಈ ಕಮಿಟಿಯು ಕೂಡಾ ಕೇಸರಿ ಬಣ್ಣದ ಧ್ವಜವೇ ರಾಷ್ಟ್ರಧ್ವಜವಾಗಬಹುದು ಎಂದು ಅಸಂದಿಗ್ಧ ಶಬ್ದಗಳಲ್ಲಿ ತೀರ್ಮಾನಿಸಿತು. ಆದರೆ ನಂತರದ ದಿನಗಳಲ್ಲಿ ಬ್ರಿಟಿಷರಿಂದ ಬಳುವಳಿಯಾಗಿ ಬಂದ ಸಂಮಿಶ್ರ ಸಂಸ್ಕೃತಿ ಹಾಗೂ ಖಿಚಡಿಯಂತಿರುವ ರಾಷ್ಟ್ರವಾದದ ಪ್ರಭಾವಕ್ಕೆ ಕಟ್ಟುಬಿದ್ದು ಧ್ವಜ ಕಮಿಟಿಯ ಈ ರಿಪೋರ್ಟ್‌ನ್ನು ಕಾರ್ಯರೂಪಕ್ಕೆ ತರಲಾಗಲಿಲ್ಲ. ಬದಲಾಗಿ ತ್ರಿವರ್ಣ ಧ್ವಜವನ್ನೇ ಸ್ವೀಕರಿಸಲಾಯಿತು. ಕೇವಲ ಕೇಸರಿ, ಹಸಿರು ಮತ್ತು ಬಿಳಿ ಬಣ್ಣಗಳ ಅರ್ಥವನ್ನು ಬದಲಾಯಿಸಿ ಇವು

ಸಮೂಹಗಳ ದ್ಯೋತಕವಲ್ಲ; ಗುಣಗಳ ದ್ಯೋತಕವೆಂದು ಸಾರಲಾಯಿತು. ಆ ಕಾಲ ಆಂಗ್ಲರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಳ್ಳುವ ಕಾಲವಾಗಿತ್ತು. ರಾಷ್ಟ್ರದ ಪ್ರಗತಿಗಾಗಿ ಸ್ವಾತಂತ್ರ್ಯವೆಂಬುದು ಮೊಟ್ಟಮೊದಲ ಆದ್ಯತೆಯಾಗಿತ್ತು. ಹಾಗಾಗಿ ಈ ಧ್ವಜ ಚಲಾವಣೆಗೆ ಬಂದಾಗ ಎಲ್ಲರೂ ಇದನ್ನು ಒಪ್ಪಿಕೊಂಡರು. ಅಷ್ಟೇ ಅಲ್ಲದೆ, ಅದನ್ನು ಗೌರವಿಸಿದರು. ಇದು ಸ್ವಾಭಾವಿಕವಾದದ್ದು. ದೇಶದ ಸ್ವಾತಂತ್ರ್ಯ ಪ್ರಾಪ್ತಿಗಾಗಿ ನಡೆದ ಆಂದೋಲನಗಳಲ್ಲಿ ಇದೇ ಧ್ವಜವನ್ನು ಎತ್ತಿಕೊಂಡು ತ್ಯಾಗ ಮತ್ತು ಬಲಿದಾನಗಳಾದವು. ಅದೆಷ್ಟೋ ಜನರು ನರಕ ಯಾತನೆಗಳನ್ನು ಸಹಿಸಿದರಲ್ಲದೆ ನೇಣುಗಂಬಕ್ಕೂ ಕೊರಳೊಡ್ಡಿದರು. ಆದುದರಿಂದ ಧ್ವಜ ಕಮಿಟಿಯ ರಿಪೋರ್ಟ್‌ನ್ನು ಒಪ್ಪಿಕೊಳ್ಳದೆ ಈ ಧ್ವಜವನ್ನು ಸ್ವೀಕರಿಸಲಾಯಿತು. ಇಂದಿಗೂ ಇದೇ ಬಣ್ಣಗಳ ಚಕ್ರಾಂಕಿತ ತ್ರಿವರ್ಣ ಧ್ವಜವು ನಮ್ಮ ರಾಷ್ಟ್ರಧ್ವಜವಾಗಿದೆ ಹಾಗೂ ನಮ್ಮೆಲ್ಲರಿಗೆ ಪರಮ ಶ್ರದ್ಧೆ ಮತ್ತು ಆದರದ ಕೇಂದ್ರಬಿಂದುವಾಗಿದೆ. ಆದರೂ ಕೂಡಾ ನಮ್ಮ ರಾಷ್ಟ್ರ ಜೀವನ ಎಷ್ಟು ಪ್ರಾಚೀನವಾಗಿದೆಯೋ, ಶತಾಬ್ದಿಗಳಷ್ಟು ದೀರ್ಘವಾದ ಅದರ ಗೌರವ ಪರಂಪರೆಯಿದೆಯೋ ಅದನ್ನು ಬಿಂಬಿಸುವುದಕ್ಕೆ ಈ ರಾಷ್ಟ್ರಧ್ವಜ ಸಮರ್ಥವಾಗಿದೆಯೇ? ಎಂಬ ಪ್ರಶ್ನೆ ಮನಸ್ಸಿನಲ್ಲಿ ಸಹಜವಾಗಿ ಉದ್ಭವಿಸುತ್ತದೆ. ಮೂವತ್ತು ಮೂವತ್ತೈದು ವರ್ಷಗಳಲ್ಲಿ ಆಗಿರುವ ನಮ್ಮ ತ್ಯಾಗ–ಬಲಿದಾನಗಳಿಗೆ ಇದು ಪ್ರತೀಕವಾದದ್ದಂತೂ ಸತ್ಯ. ಆದರೆ ಸಹಸ್ರಾರು ವರ್ಷಗಳ ಪೌರುಷ ಪರಾಕ್ರಮ ಶ್ರೇಷ್ಠತ್ವಪೂರ್ಣ ಜೀವನದ ಇತಿಹಾಸವನ್ನು ಗಮನಿಸಿದರೆ ಇದನ್ನು ಅಪೂರ್ಣವೆಂದೇ ಹೇಳಬೇಕು. ತಕ್ಕಡಿಯ ಒಂದು ತಟ್ಟೆಯಲ್ಲಿ ನಾವು ನಮ್ಮ ಮೂವತ್ತು ಮೂವತ್ತೈದು ವರ್ಷಗಳ ಭಾವನೆಗಳನ್ನು ಇಡೋಣ, ಇನ್ನೊಂದು ತಟ್ಟೆಯಲ್ಲಿ ಸಹಸ್ರಾರು ವರ್ಷಗಳ ಭಾವನೆಗಳನ್ನು ಇಟ್ಟಾಗ ತಕ್ಕಡಿಯ ಯಾವ ತಟ್ಟೆ ಭಾರವೆನಿಸಬಹುದು? ನಿಸ್ಸಂದೇಹವಾಗಿ ವೇದಕಾಲದಿಂದ ಶತ–ಶತಮಾನಗಳ ಉತ್ಥಾನ–ಪತನಗಳ ರೋಮಾಂಚಕಾರಿ ಕ್ಷಣಗಳ ಕಥನಗಳು ಮೇಳವಿಸಿಕೊಂಡಿವೆಯೋ, ಯಾವುದರಲ್ಲಿ ತ್ಯಾಗಿ, ತಪಸ್ವಿ, ಪರಾಕ್ರಮಿ, ದಿಗ್ವಿಜಯಿ, ಜ್ಞಾನಿ, ಋಷಿ–ಮುನಿ, ಸಾಮ್ರಾಟ–ಸೇನಾಪತಿ, ಕವಿ, ಸಾಹಿತ್ಯಕಾರ, ಸನ್ಯಾಸಿ ಮತ್ತು ಅಸಂಖ್ಯಾತ ಕರ್ಮಯೋಗಿಗಳ ಚಾರಿತ್ರ್ಯಗಳ ಸ್ಮರಣೆ ಕ್ರೋಡೀಕರಿಸಲ್ಪಟ್ಟಿದೆಯೋ, ಎಲ್ಲಿ ದಾರ್ಶನಿಕ ಉಪಲಬ್ಧಿಗಳೊಂದಿಗೆ ಜೀವನವನ್ನೇ ಹೋಮ ಮಾಡಿಬಿಡುವ ಅಸಂಖ್ಯಾತ ಉದಾಹರಣೆಗಳು ನಮ್ಮ ಸ್ಮೃತಿ–ಪಟಲದ ಮೇಲೆ ನರ್ತಿಸತೊಡಗುತ್ತವೋ, ಆ ಪರಮ ಪವಿತ್ರ ಭಗವಾಧ್ವಜವೇ ನಮ್ಮ ಅಖಂಡ ರಾಷ್ಟ್ರೀಯ ಪರಂಪರೆಯ ಪ್ರತೀಕವಾಗಿ ನಮ್ಮ ಕಣ್ಮುಂದೆ ಬಂದು ನಿಲ್ಲುತ್ತದೆ. ಇದುವೇ ಸತ್ಯ. ಈ ಧ್ವಜವೇ ನಮಗೆ ನಮ್ಮ ಅತೀತದ ಕುರಿತಾದ ಸರಿಯಾದ ಮಾಹಿತಿ ನೀಡಿ, ಭವಿಷ್ಯಕ್ಕಾಗಿ ಉತ್ತಮವಾದ ಪ್ರೇರಣೆ ಕೊಡುತ್ತ

ವರ್ತಮಾನದಲ್ಲಿ ಕರ್ಮಚೈತನ್ಯವನ್ನು ಜಾಗ್ರತಗೊಳಿಸುವಲ್ಲಿ ಸಕ್ಷಮವಾಗಿದೆ. ಇದುವೆ ನಮ್ಮ ಸ್ಫೂರ್ತಿಯ ಕೇಂದ್ರವಾಗಿದೆ. ಅನಂತಕಾಲದವರೆಗೆ ರಾಷ್ಟ್ರಕ್ಕೆ ಮಾರ್ಗದರ್ಶನವನ್ನು ನೀಡುವ ಈ ಭಗವಾಧ್ವಜ ನಮಗೆ ಗುರುವಷ್ಟೇ ಅಲ್ಲ. ಮಾರ್ಗದರ್ಶಕವೂ ಆಗಿದೆ. ಇದರೆದುರು ತಲೆಬಾಗಿ ನಿಂತು ನಮ್ಮ ಜೀವನವನ್ನು ನಾವು ಪಾವನಗೊಳಿಸಿ ಕೊಳ್ಳಬಹುದು.

* * * * *

# ರಾಷ್ಟ್ರೀಯತೆ ಅಥವಾ ಅರಾಷ್ಟ್ರೀಯ – ಸಮನ್ವಯ ಅಸಂಭವ

ಭಾರತದ ಕೋಟ್ಯಾಂತರ ಮುಸಲ್ಮಾನರನ್ನು ಇಲ್ಲಿಂದ ಕಿತ್ತೊಗೆಯಬೇಕೆಂದು ಯಾರೂ ಹೇಳುವುದಿಲ್ಲ. ಆದ್ದರಿಂದ ಅವರನ್ನು ಭಾರತೀಯ ಜೀವನದೊಂದಿಗೆ ಬೆರೆಯುವಂತೆ ಮಾಡಲೇ ಬೇಕಾಗುತ್ತದೆ. ಭೌತಿಕ ದೃಷ್ಟಿಯಿಂದ ಖಂಡ ತುಂಡವಾಗಿರುವ ಭಾರತದಲ್ಲಿ ಏಕತೆಯ ಅನುಭೂತಿ ಸಾಧ್ಯವಾಗುವುದಾದರೆ ಉಳಿದ ಭೂಭಾಗವು ನಮ್ಮೊಂದಿಗೆ ಐಕ್ಯತೆ ಸಾಧಿಸುವುದಕ್ಕೆ ಸಮಯ ಹಿಡಿಯುವುದಿಲ್ಲ. ಏಕತೆಯ ಅನುಭೂತಿಯ ಅಭಾವದ ಕಾರಣದಿಂದಲೇ ದೇಶವು ವಿಭಜಿತ ವಾಗಿದೆಯಾದರೆ ಆ ಅನುಭೂತಿಯ ಅಸ್ತಿತ್ವದಿಂದ ಅದು ಅಖಂಡವಾಗುವುದು. ನಾವು ಇದೇ ನಿಟ್ಟಿನಲ್ಲಿ ಪ್ರಯತ್ನಿಸಬೇಕು. ಮುಸಲ್ಮಾನರನ್ನು ಭಾರತೀಯರನ್ನಾಗಿ ಮಾಡುವುದಕ್ಕೆ ನಾವು ಕಳೆದ ಅನೇಕ ದಶಕಗಳಿಂದ ಪಾಲಿಸುತ್ತಿರುವ ನಮ್ಮ ನೀತಿಯನ್ನು ಬದಲಾಯಿಸಬೇಕಾಗುತ್ತದೆ. ಕಾಂಗ್ರೆಸ್ ಏಕತೆಯ ಪ್ರಯತ್ನವನ್ನು ತಪ್ಪು ಆಧಾರದ ಮೇಲೆ ಮಾಡಿದೆ. ಅನಾದಿ ಕಾಲದಿಂದ ನಡೆದುಕೊಂಡು ಬಂದ, ರಾಷ್ಟ್ರ ಮತ್ತು ಸಂಸ್ಕೃತಿಯ ಏಕತೆಯನ್ನು ಸಾಕ್ಷಾತ್ಕರಿಸಿಕೊಳ್ಳುವುದರ ಬದಲು, ಎಲ್ಲರಿಗೂ ಆ ಏಕತೆಯ ಅನುಭವ ಮಾಡಿಸುವುದರ ಬದಲು ಕಾಂಗ್ರೆಸ್ ಕಾಂಗ್ರೆಸ್ ಅನೇಕತೆಯ ಆತ್ಮಘಾತುಕತನವನ್ನು ಪೋಷಿಸಿತು. ಜೊತೆಗೆ ಕೃತ್ರಿಮ ಹಾಗೂ ರಾಜನೈತಿಕ ಚೌಕಾಶಿ ವ್ಯವಹಾರದ ಆಧಾರದ ಮೇಲೆ ಅದು ಅನೇಕರನ್ನು ಒಂದಾಗಿಸುವ ಪ್ರಯತ್ನವನ್ನೂ ಮಾಡಿತು. ಈ ಪ್ರಯತ್ನಗಳು ಎಂದೂ ಸಫಲವಾಗಲಾರವು. ರಾಷ್ಟ್ರೀಯತೆ ಮತ್ತು ಅ ರಾಷ್ಟ್ರೀಯತೆಗಳ ಸಮನ್ವಯವಾಗುವುದು ಅ ಸಂಭವವೇ ಆಗಿದೆ.

* * * * *

# ಹಿಂದುತ್ವದ ಅರಿವಿನ ಅಭಿವ್ಯಕ್ತಿ

ಹಿಂದೂ ಪದದ ಅನೇಕ ಪರಿಭಾಷೆಗಳನ್ನು ವಿದ್ವಾಂಸರು ಮಾಡಿದ್ದಾರೆ. ಅವುಗಳೆಲ್ಲವೂ ಪ್ರಾಯಶಃ ಅವ್ಯಾಪ್ತಿ ಅಥವಾ ಅತಿವ್ಯಾಪ್ತಿ ದೋಷಗಳಿಂದ ಕೂಡಿದೆ. ಆದರೆ ಪರಿಭಾಷೆಯ ಕಠಿಣತೆ ಇದ್ದಾಗ್ಯೂ ಸಹ ತಮ್ಮನ್ನು ಹಿಂದೂಗಳೆಂದು ಕರೆದುಕೊಳ್ಳುವ ಅಥವಾ ಕರೆಯಲ್ಪಡುವ ಕೋಟಿಗಟ್ಟಲೆ ಮಾನವರು ಈ ಪ್ರಪಂಚದಲ್ಲಿದ್ದಾರೆ. ಹಿಂದೂ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಸಮಾಜ ಸಹ ಇದೆ ಮತ್ತು ಗುಣದೋಷಗಳಿಂದ ಕೂಡಿದ ಆ ಸಮಾಜದ ಜೀವನಧಾರೆ ಸಹ ಇದೆ. 'ಹಿಂದುತ್ವ'ದ ಅರಿವಿನ ಈ ಅಭಿವ್ಯಕ್ತಿಯೇ ವಿಶ್ವಹಿಂದೂ ಪರಿಷತ್.

ಹಿಂದೂ ಸಮಾಜದ ಅತಿ ಹೆಚ್ಚಿನ ಸಂಖ್ಯೆ ಭಾರತದಲ್ಲಿದೆ. ಆದರೆ ಭಾರತದ ಹೊರಗೆ ಸಹ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ, ಸಾಕಷ್ಟು ಸಂಖ್ಯೆಗಳಲ್ಲಿ ಹಿಂದೂಗಳಿದ್ದಾರೆ. ಇವರಲ್ಲಿ ಎಲ್ಲರೂ ಪ್ರಾಯಶಃ ಭಾರತದಿಂದ ಹೊರಗೆ ಹೋದ ಪ್ರವಾಸಿಗಳು ಅಥವಾ ಅವರ ವಂಶಜರು.

ವಂಶಪರಂಪರೆಯಿಂದ ಭಾರತದೊಂದಿಗೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳದವರು ಆದರೆ ಹಿಂದೂ ವಿಚಾರಧಾರೆ ಅಥವಾ ಹಿಂದೂ ಧರ್ಮದಿಂದ ದೀಕ್ಷಿತರಾದಂತಹವರೂ ಸಹ ಎಣಿಸುವುದಕ್ಕೆ ಬಾರದಷ್ಟು ಕಡಿಮೆ ಎನಿಸಿದರೂ ಇದ್ದಾರೆ. ನೇಪಾಳವಾದರೋ ಪೂರಾ ಹಿಂದೂಗಳ ದೇಶ, ಬ್ರಹ್ಮದೇಶ, ಸಿಂಹಳ ಹಾಗೂ ದಕ್ಷಿಣ ಪೂರ್ವ ಏಷ್ಯಾದ ನಿವಾಸಿಗಳು ಇಂದು ತಮ್ಮನ್ನು ಹಿಂದೂ ಎಂದು ಹೇಳಿಕೊಳ್ಳದಿರಬಹುದು ಆದರೆ ಭಾರತದ ಜ್ಞಾನ ಪರಂಪರೆಯೊಂದಿಗೆ ಅವರ ಅಭಿನ್ನ ಸಂಬಂಧವಿದೆ. ಹೀಗೆ ಈ ದಿನ ಹಿಂದೂ ಕೇವಲ ಹಿಂದೂಸ್ತಾನ 'ದೊಂದಿಗೆ ಮಾತ್ರ ಸೀಮಿತವಾಗಿಲ್ಲ. ಆದರೆ ಪ್ರಪಂಚದ ಅನೇಕ ದೇಶಗಳಲ್ಲಿ ವ್ಯಾಪಿಸಿದ್ದಾರೆ. "ಹಿಂದೂ ವಿಶ್ವ" ರಾಜನೈತಿಕ ಪ್ರಭುತ್ವವಲ್ಲ. ರಾಜನೀತಿ ಮತ್ತು ರಾಜನೈತಿಕ ರಾಷ್ಟ್ರವಾದಕ್ಕಿಂತ ಮೇಲ್ಮಟ್ಟದಲ್ಲಿಯೇ ಇದರ ಬಗ್ಗೆ ಚಿಂತಿಸಬೇಕು. ಇದನ್ನು ಹೊರತುಪಡಿಸಿ ಹಿಂದೂ ಜೀವನದಲ್ಲಿ ಕರ್ತವ್ಯಗಳ ಮತ್ತು ನಿಷ್ಠೆಗಳ ಸಾಮಂಜಸ್ಯ ಮತ್ತು ತಾರತಮ್ಯವಿರುವುದಿಲ್ಲ ಮತ್ತು ಎಲ್ಲಿ ಈ ಸಾಮಂಜಸ್ಯವಿಲ್ಲವೋ ಅದು ಹಿಂದೂ ಜೀವನವಲ್ಲ. ಏಕೆಂದರೆ ಸೃಷ್ಟಿಯ ಭಿನ್ನ ಭಿನ್ನ ಕಣಗಳಲ್ಲಿ,

ಜೀವನದ ವಿಭಿನ್ನ ಅಂಶಗಳು ಮತ್ತು ಮಾನವನ ವಿಭಿನ್ನ ಕರ್ತವ್ಯಗಳ ನಡುವೆ ಆಶ್ಚರ್ಯಜನಕ ಸಮತೋಲನೆಯನ್ನು ಮೇಳವಿಸುವುದೇ ಹಿಂದೂ ಧರ್ಮದ ವಿಶೇಷತೆ.

ಪ್ರತಿಯೊಂದು ಸಮಷ್ಟಿಯ ಮೂಲದಲ್ಲಿ ಒಂದು ತತ್ವಜ್ಞಾನವಿರುತ್ತದೆ. ಆ ತತ್ವಜ್ಞಾನವನ್ನು ಅಭಿವ್ಯಕ್ತಿಗೊಳಿಸುತ್ತಾ ಸಮಷ್ಟಿಯ ಪ್ರಭುತ್ವದ ಅರಿವು ಮೂಡಿಸುವ ಕರ್ಮಕಾಂಡವೂ ಅವಶ್ಯಕ. ಕರ್ಮಕಾಂಡಕ್ಕಿಂತ ಹೆಚ್ಚಾಗಿ ತತ್ವಜ್ಞಾನಕ್ಕೆ ಹೆಚ್ಚು ಸ್ಥಾಯಿತ್ವ ಇದೆ. ಆದರೆ ಅದನ್ನು ಸ್ಥಿರವೆಂದಾಗಲಿ, ಗತಿಹೀನವೆಂದಾಗಲಿ ತಿಳಿಯುವುದು ತಪ್ಪಾಗುತ್ತದೆ. ಯಾವ ಸಮಷ್ಟಿಯ ತತ್ವಜ್ಞಾನದ ಕ್ಷೇತ್ರದಲ್ಲಿ ಹೊಸ ಚಿಂತನೆಯನ್ನು ಬಿಟ್ಟುಬಿಟ್ಟಿದೆಯೋ ಅವು ನಿರ್ಜೀವವಾಗಿ ಸಂಪ್ರದಾಯವಾಗಿ ಮಾತ್ರ ಉಳಿದಿದೆ. ಆದ್ದರಿಂದ ತತ್ವಚಿಂತನೆಯಲ್ಲಿ ಗತಿಮಯತೆಯು ಅವಶ್ಯಕ. ಈ ರೀತಿ ಕರ್ಮಕಾಂಡವನ್ನು ನಿತ್ಯ ಪರಿವರ್ತನಶೀಲವೆಂದು ತಿಳಿಯುವುದು ಅಥವಾ ಅದನ್ನು ಗೌಣವೆಂದು ತಿಳಿದು ಅದನ್ನು ಉಪೇಕ್ಷಿಸುವುದು ಸರಿಯಲ್ಲ. ಕರ್ಮಕಾಂಡ ರೂಢಿಯಾಗಬಾರದು, ಅದರ ವಿಚಾರ ಮಾಡುವುದು ಅವಶ್ಯಕ; ಆದರೆ ನಿರಂತರತೆ ಹಾಗೂ ಶ್ರದ್ಧೆಯ ವಿನಹ ಕರ್ಮಕಾಂಡದಲ್ಲಿ ಸಂಸ್ಕಾರಶೀಲತೆ ಬರುವುದಿಲ್ಲ.

ಹಿಂದೂ ಸಮಾಜದ ಬಳಿ ತತ್ವ ಮತ್ತು ಕರ್ಮಕಾಂಡ ಎರಡೂ ಇದೆ. ಆದರೆ ಈಗಿನ ಅವಶ್ಯಕತೆ ಎಂದರೆ, ಒಂದು ಕಡೆ ಇಂದಿನ ಸಮಸ್ಯೆಗಳ ಕಾರಣಗಳ ತಾತ್ವಿಕ ವಿವೇಚನೆಯನ್ನು ಇಂದಿನ ಸಮಸ್ಯೆಗಳ ಕಾರಣ ಮತ್ತು ಪ್ರಸ್ತುತ ಜೀವನದ ತಾತ್ವಿಕ ವಿವೇಚನೆಯ ಶಬ್ದಗಳು ಮತ್ತು ರೂಪಗಳಲ್ಲಿ ವಿಶ್ಲೇಷಣೆ ಆಗಿರಬೇಕು. ಜೊತೆಯಲ್ಲಿಯೇ ಈ ತತ್ವ ಚಿಂತನೆಯ ದಿಕ್ಕನ್ನು ಸಹ ಮುಂದುವರಿಸಬೇಕಾಗುವುದು. ನಮ್ಮ ಪೂರ್ವಜರು ಹಾಗೂ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಪ್ರಜ್ಞಾವಂತ ಋಷಿಗಳ ಬಗ್ಗೆ ಪೂರ್ಣಶ್ರದ್ಧೆ ಮತ್ತು ಗೌರವ ಭಾವನೆಗಳನ್ನು ಇಟ್ಟುಕೊಂಡರೂ ಸಹ ಜ್ಞಾನದ ಕ್ಷೇತ್ರದಲ್ಲಿ ಅಂತಿಮ ಶಬ್ದವನ್ನು ಹೇಳಿ ಮುಗಿಸಲಾಗಿದೆ ಎಂದು ತಿಳಿಯುವುದು. (ಎಲ್ಲೆಯೇ) ಅಸೀಮವನ್ನು ಎಲ್ಲೆಯೊಳಗೆ (ಸಸೀಮ) ತರುವ ಪ್ರಯತ್ನವಾಗುವುದು. ಸಮಾಜದಲ್ಲಿ ಒಂದು ವೇಳೆ ಋಷಿ ಪರಂಪರೆ ಮುಗಿದುಹೋದರೆ ಅದರ ಜೀವನ ಸ್ರೋತವೇ ಒಣಗಿಹೋಗುವುದು. ಈ ಯುಗದಲ್ಲಿ ಸಹ ಯೋಗಿ ಅರವಿಂದರು ಚಿಂತನೆಯ ಈ ಧಾರೆಯನ್ನು ಮುಂದುವರಿಸಿದ್ದಾರೆ.

ಹಿಂದೂ ಸಂಸ್ಕೃತಿ ಏಕಾತ್ಮವಾದಿ ಸಂಸ್ಕೃತಿ ಜಗತ್ತಿನ ನಾನಾತ್ವವು ಅಸತ್ ಮತ್ತು ಏಕತ್ವಭಾವವು ಸತ್ ಆಗಿದೆ. ಇದೇ ಹಿಂದೂ ಸಂಸ್ಕೃತಿಯ ಆತ್ಮ. ಸೃಷ್ಟಿಯ ವಿಭಿನ್ನ ಪ್ರಭುತ್ವಗಳು ಮತ್ತು ಜೀವನದ ವಿಭಿನ್ನ ಅಂಗಗಳ ದೃಶ್ಯ ಭೇದಗಳನ್ನು ಸ್ವೀಕರಿಸುತ್ತಾ ಅದರ ಒಳಗೆ ಏಕತೆಯನ್ನು ಹುಡುಕಿ ಸಮನ್ವಯವನ್ನು ಸ್ಥಾಪಿಸುತ್ತದೆ.

ಪರಸ್ಪರ ಸಂಘರ್ಷ ಮತ್ತು ವಿರೋಧದ ಜಾಗದಲ್ಲಿ ಅದು ಪರಸ್ಪರಾವಲಂಬನೆ, ಪೂರಕತೆ, ಅನುಕೂಲತೆ ಮತ್ತು ಸಹಯೋಗದ ಆಧಾರದ ಮೇಲೆ ಸೃಷ್ಟಿಯ ಎಲ್ಲ ಕ್ರಿಯೆಗಳ ವಿಚಾರ ಮಾಡುತ್ತದೆ. ಇದರ ದೃಷ್ಟಿ ಏಕಾಂಗಿಯಾಗಿರದೆ ಸರ್ವಾಂಗೀಣವಾಗಿದೆ.

ಹಿಂದೂ ತತ್ವಜ್ಞಾನವು ಶರೀರ, ಮನಸ್ಸು, ಬುದ್ಧಿ ಮತ್ತು ಆತ್ಮದ ಸಂಕಲಿತ ಚಿಂತನೆಯನ್ನು ಮಾಡಿದೆ. ಅದು ವ್ಯಷ್ಟಿ, ಸಮಷ್ಟಿ, ಸೃಷ್ಟಿ ಮತ್ತು ಪರಮೇಷ್ಟಿಯ ಮಧ್ಯೆ ಏಕಾತ್ಮತೆಯ ಪ್ರತಿಷ್ಠಾಪನೆಯನ್ನು ಮಾಡಿದೆ. ಅದು ಧರ್ಮ ಅರ್ಥ, ಕಾಮ ಮತ್ತು ಮೋಕ್ಷ ಚತುರ್ವಿಧ ಪುರುಷಾರ್ಥದ ಉಪಾಸನೆಯ ಮೂಲಕ ಮಾನವನ ಪೂರ್ಣ ವಿಕಾಸದ ಮಾರ್ಗವನ್ನು ಪ್ರಶಸ್ತ ಮಾಡಿದೆ. ಈ ದೃಷ್ಟಿಕೋನದಿಂದಲೇ ಇಂದಿನ ವಿಶ್ವದ ಸಂಘರ್ಷದ ಪರಿಹಾರವಾಗಬಲ್ಲದು ಹಾಗೂ ವ್ಯಕ್ತಿ ಸಮಾಜದ ಅಥವಾ ರಾಜ್ಯಾಡಳಿತದ ಸೂತ್ರದ ಬೊಂಬೆ ಆಗುವುದರ ಬದಲು, ತನ್ನ ಪೂರ್ಣತೆಯನ್ನು ಅನುಭವಿಸಿ, ಕರ್ತವ್ಯನಿಷ್ಠೆ, ಯಜ್ಞಮಯ ಕರ್ಮೋಪಾಸನೆಯ ಸಾಧಕನ ಗೌರವವನ್ನು ಪಡೆಯಬಲ್ಲ.

ಹಿಂದೂ ತತ್ವಜ್ಞಾನದ ಆಧಾರದ ಮೇಲೆ ಕರ್ಮಕಾಂಡ ಹಾಗೂ ಆಚರಣ ಸಂಹಿತೆಯ ವಿಧಾನದ ಅವಶ್ಯಕತೆ ಇದೆ. ದೇಶ, ಕಾಲ, ಪರಿಸ್ಥಿತಿಗೆ ಅನುಸಾರ ಕರ್ಮಕಾಂಡವು ಬದಲಾಗುತ್ತದೆ. ನಡೆದುಕೊಂಡು ಬರುತ್ತಿರುವ ಕರ್ಮಕಾಂಡದಲ್ಲಿ ಅನೇಕವು ರೂಢಿಯಾಗಿಬಿಟ್ಟಿವೆ. ಅನೇಕ ಕರ್ಮಕಾಂಡಗಳ ಪರಿಷ್ಕಾರವಾಗಿಲ್ಲ. ಇದು ಹಿಂದೂ ಜಗತ್ತು ಮಾಡಲೇ ಬೇಕಾದ ಕೆಲಸ. ಇಲ್ಲದಿದ್ದರೆ ಒಂದು ಕಡೆಯಾದರೋ ಕರ್ಮಕಾಂಡವನ್ನೇ ಹಿಂದುತ್ವವೆಂದು ತಿಳಿದು ಆತ್ಮದಿಂದ ವಿರಹಿತ ಶರೀರಕ್ಕೆ ಅಂಟಿಕೊಳ್ಳುವಂಥ ವ್ಯಕ್ತಿಗಳು ಇರುತ್ತಾರೆ, ಮತ್ತೊಂದು ಕಡೆಯಾದರೋ ಈ ಸಂಪೂರ್ಣ ಕರ್ಮಕಾಂಡವನ್ನು ತ್ಯಾಗ ಮಾಡಿ ಶೂನ್ಯದಲ್ಲಿ ಆತ್ಮನ ಉಪಾಸನೆ ಮಾಡುವ ಆಚರಣಹೀನ ವ್ಯಕ್ತಿಗಳು ಸಿಗುತ್ತಾರೆ. ಎರಡು ಸ್ಥಿತಿಗಳೂ ಚಿಂತಾಜನಕವಾದುವು ಮತ್ತು ಯಾವಾಗ ಈ ಎರಡೂ ವರ್ಗಗಳು ಹಿಂದುತ್ವದ ನಿಷ್ಠೆಯ ಹೆಸರಿನಲ್ಲಿ ಪರಸ್ಪರ ದೋಷಾರೋಪಣೆ ಮಾಡುತ್ತಾ ಸಂಘರ್ಷನಿರತರಾದರೆ ದೇವರೇ ಕಾಪಾಡಬೇಕು. ನಾವು ಈ ಸ್ಥಿತಿಯಿಂದ ಹೊರ ಬರಬೇಕು. ಇದು ಮಹತ್ವಪೂರ್ಣ ಕಾರ್ಯ. ಇದರ ಶುಭಾರಂಭವು ವಿಶ್ವ ಹಿಂದೂ ಪರಿಷತ್‌ನ ಫಲಶೃತಿಯ ರೂಪದಲ್ಲಿ ಆಗಿದೆ.

* * * * *

# ಸಹಿಷ್ಣುತೆಯೊಂದಿಗೆ ಜಯಿಸುವ ಪ್ರವೃತ್ತಿ ಬೇಕು

ಮಾನವನ ಸ್ಥಿತಿ ಮತ್ತು ಪ್ರಗತಿ ಅವನ ಸಹಿಷ್ಣುತೆ ಮತ್ತು ಜಯಿಸುವ ಪ್ರವೃತ್ತಿಗಳ ಸಾಮಂಜಸ್ಯದ ಮೇಲೆಯೇ ನಿರ್ಭರವಾಗಿದೆ. ಬೇರೆಯವರ ಮೇಲೆ ಪ್ರಭಾವ ಬೀರುವುದು ಮತ್ತು ಅವರ ಮೇಲೆ ಗೆಲುವನ್ನು ಸಾಧಿಸುವುದು ಪ್ರತಿಯೊಬ್ಬ ವ್ಯಕ್ತಿಯ ಆಸೆಯಾಗಿರುತ್ತದೆ ಹಾಗೂ ತನ್ನ ವ್ಯಕ್ತಿತ್ವವನ್ನು ಪ್ರಭಾವಶಾಲಿಯಾಗಿಸಲು ಮತ್ತು ಜಯಶಾಲಿಯಾಗಲು ಅವನು ಸದಾ ಪ್ರಯತ್ನಶೀಲನಾಗಿರುತ್ತಾನೆ. ಆದರೆ ಈ ರೀತಿ ವ್ಯಕ್ತಿ – ವ್ಯಕ್ತಿಯ ಮೇಲೆ ವಿಜಯ ಸಾಧಿಸುವ ಪ್ರಬಲ ಆಕಾಂಕ್ಷೆಯ ಪರಿಣಾಮ ಬೇರೆಯವರ ವಿನಾಶದ ಕಾರಣ ಆಗಬಾರದು ಮತ್ತು ಈ ವಿನಾಶದ ಕಾರಣದಿಂದ ಬೇರೆಯವರ ಮೂಲಕ ಆಗುವ ಸತ್ಯದ ಆವಿಷ್ಕಾರದ ಸಂಭಾವನೆಯೂ ಮುಗಿದುಹೋಗಬಾರದು. ಇದಕ್ಕೋಸ್ಕರ ಬೇರೆಯವರ ಅಭಿಪ್ರಾಯಗಳನ್ನು ಗೌರವಿಸಬೇಕು ಮತ್ತು ಅದನ್ನು ಸತ್ಯವೆಂದು ತಿಳಿದು ನಡೆಯುವುದು ಅವಶ್ಯಕವೆಂದು ಮಾನವನು ತಿಳಿದಿದ್ದಾನೆ. ಈ ಭಾವನೆಯೇ ಸಹಿಷ್ಣುತೆಯ ಪ್ರವೃತ್ತಿಗೆ ಜನ್ಮಕೊಟ್ಟಿದೆ. ತನ್ನ ಸಹಿಷ್ಣುತೆಯ ಪರಾಕಾಷ್ಟೆಗಾಗಿ ಭಾರತವರ್ಷವು ವಿಶ್ವದಲ್ಲಿಯೇ ಪ್ರಸಿದ್ಧವಾಗಿದೆ. ಈ ಪರಾಕಾಷ್ಟೆಯ ಅನುಭವವನ್ನು ಪಾಶ್ಚಿಮಾತ್ಯವು ಕೇವಲ ಇತ್ತೀಚೆಗಷ್ಟೇ ಅನುಭವಿಸಿದೆ. ಆದರೂ ಸಹ ಪಾಶ್ಚಿಮಾತ್ಯರ ಜೀವನದಲ್ಲಿ ಅಸಹಿಷ್ಣುತೆ ಎಷ್ಟರಮಟ್ಟಿಗೆ ಸೇರಿಕೊಂಡು ಬಿಟ್ಟಿದೆ ಎಂದರೆ ಸಹಿಷ್ಣುತೆಯ ರಾಗವನ್ನು ಆಲಾಪಿಸುತ್ತಿದ್ದರೂ ಒಂದಲ್ಲ ಒಂದು ರೀತಿಯಲ್ಲಿ ಭಯಂಕರ ಅಸಹಿಷ್ಣುತೆ ಪ್ರಕಟವಾಗಿಯೇ ಬಿಡುತ್ತದೆ. ಇಂದಿಗೂ ಸಹ ಪಶ್ಚಿಮದಲ್ಲಿ ತಾವು ಹೀನವೆಂದು ತಿಳಿಯುವ ಜಾತಿಗಳ ಬಗ್ಗೆ ಆದರ ಮತ್ತು ಶ್ರದ್ಧೆಯ ಭಾವನೆ ಹುಟ್ಟಿಲ್ಲ. ಇಂದಿಗೂ ಅಲ್ಲಿಯ ವಿದ್ವಾಂಸರು ಯೂರೋಪ್ ಮತ್ತು ಅಮೆರಿಕಾವನ್ನೇ, ವಿಶ್ವದ ಮೇಲೆ ಆಧಿಪತ್ಯ ನಡೆಸಿ, ಅದನ್ನು ಉಪಭೋಗಿಸುತ್ತಿರುವ ಕೇಂದ್ರವೆಂದು ತಿಳಿದು ಅದರ ಹಿತಕ್ಕಾಗಿಯೇ ಇಡೀ ಪ್ರಪಂಚವನ್ನು ಕುಣಿಸ ಬಯಸುತ್ತಾರೆ.

ಇದಕ್ಕೆ ವಿರುದ್ಧವಾಗಿ ಭಾರತದಲ್ಲಿ ಬಹಳ ಮುಂಚೆಯೇ ಸಹಿಷ್ಣುತೆಯ ಭಾವನೆಯು ಹುಟ್ಟಿತ್ತು. ಎರಡು ಸಾವಿರ ಮೈಲಿಗಳಷ್ಟು ಉದ್ದ ಮತ್ತು ಎರಡುಸಾವಿರ ಅಗಲದ ಭಾರತದಲ್ಲಿ ವಿವಿಧರೂಪ ಪ್ರಕೃತಿಯು ಆಂತರ್ಯದ ಸತ್ಯದ,

ಸಾಕ್ಷಾತ್ಕಾರವನ್ನು ಮಾಡಿಸಿತು. ನಾವು ವಿವಿಧತೆಯಲ್ಲಿ ಏಕತೆಯ ಅನುಭೂತಿಯನ್ನು ಪಡೆದೆವು ಮತ್ತು ಇದರ ಪರಿಣಾಮ ಸ್ವರೂಪವಾಗಿ ಸಹಿಷ್ಣುತೆಯ ಭಾವನೆಗಳಿಗೆ ಜನ್ಮ ಕೊಟ್ಟೆವು. ಫಲಸ್ವರೂಪವಾಗಿ ಜ್ಞಾನ, ಕರ್ಮ ಮತ್ತು ಭಕ್ತಿ, ಮೂರೂ ಕ್ಷೇತ್ರಗಳಲ್ಲಿ ನಾವು ನಮ್ಮ ಸಹಿಷ್ಣುತೆಯ ಮನೋವೃತ್ತಿಯ ಪರಿಚಯವನ್ನು ಕೊಟ್ಟಿದ್ದೇವೆ. 'ಏಕಂ ಸತ್ ವಿಪ್ರಾ ಬಹುಧಾವದಂತಿ' ಯ ಆದರ್ಶವನ್ನು ಮುಂದಿಟ್ಟುಕೊಂಡು ಜ್ಞಾನದ ಕ್ಷೇತ್ರದಲ್ಲಿ, ಕರ್ಮಕ್ಷೇತ್ರದಲ್ಲಿ ನಿಷ್ಕಾಮ ಕರ್ಮ ಯೋಗದ ಸಿದ್ಧಾಂತವನ್ನು ಪ್ರತಿಪಾದಿಸಿ, ಹಾಗೂ ಭಕ್ತಿ ಕ್ಷೇತ್ರದಲ್ಲಿ ಭಿನ್ನ ಭಿನ್ನ ದೇವತೆಗಳನ್ನು ಒಂದೇ ಬ್ರಹ್ಮನ ವಿವಿಧ ರೂಪಗಳೆಂದು ತಿಳಿದು ಸಹಿಷ್ಣುತೆಯ ಭಾವನೆಯನ್ನು ವಿಕಾಸಗೊಳಿಸಿದ್ದೇವೆ. ಸಹಿಷ್ಣುತೆ ನಮ್ಮ ಜೀವನ ಅಂಗವಾಗಿದೆ.

ಇಂದು ಪಾಶ್ಚಿಮಾತ್ಯ ಜೀವನ ಮತ್ತು ಅದರ ಇತಿಹಾಸದ ಬಗ್ಗೆ ನಮಗೆ ಹೆಚ್ಚು ಆಕರ್ಷಣೆ ಇದೆ. ಇದರ ಕೆಟ್ಟ ಪ್ರಭಾವವು ನಮ್ಮ ಮೇಲೆ ಎಷ್ಟು ಆಗಿದೆ ಎಂದರೆ ಈ ಸಹಿಷ್ಣುತೆಯ ಬಗ್ಗೆ ನಮ್ಮ ಆತ್ಮಾಭಿಮಾನವು ಪೂರ್ತಿಯಾಗಿ ನಿರಾಕರಿಸಲ್ಪಪಟ್ಟಿದೆ. ನಾವು ಸ್ವಯಂ ಅಪಮಾನಿತರಾಗಿರುವುದನ್ನೇ ನಾವು ಸಹಿಷ್ಣುಗಳಾಗಿದ್ದೇವೆಂದು ಘೋಷಣೆ ಮಾಡಿಕೊಳ್ಳುತ್ತಿದ್ದೇವೆ. ಇಷ್ಟೇ ಅಲ್ಲ, ಸಹಿಷ್ಣುತೆಯ ಭಾವನೆಗೆ ಎಷ್ಟು ಮಹತ್ವ ಕೊಡಲಾಗಿದೆ ಎಂದರೆ ಜೀವನದ ಮತ್ತೊಂದು ಅವಶ್ಯಕ ಪ್ರವೃತ್ತಿ ಅಂದರೆ ಜಯಿಸುವ ಪ್ರವೃತಿಯನ್ನು ನಾವು ದುರ್ಲಕ್ಷಿಸಿದ್ದೇವೆ. ಯಾರಾದರೂ ನಿನ್ನ ಒಂದು ಕಪಾಳಕ್ಕೆ ಹೊಡೆದರೆ, ನೀನು ಅವರ ಮುಂದೆ ಮತ್ತೊಂದು ಕೆನ್ನೆಯನ್ನು – ಕೊಡು, ಈ ಸಿದ್ಧಾಂತ ಎಷ್ಟು ಬಲವಂತ ಹೇರಲ್ಪಟ್ಟಿದೆ – ಎಂದರೆ ನಾವು ಅಪಮಾನಗಳ ಚಿಂತೆಯನ್ನೂ ಸಹ ಮಾಡುತ್ತಿಲ್ಲ.

ಜಯಿಷ್ಣುತೆಯ (ಜಯಿಸುವ ಪ್ರವೃತ್ತಿ) ಭಾವನೆಯ ಹೊರತು ಯಾವ ಸಮಾಜವೂ ಬದುಕಲಾರದು ಮತ್ತು ಅದು ತನ್ನ ಜೀವನದ ವಿಕಾಸವನ್ನೂ ಸಹ ಮಾಡಿಕೊಳ್ಳಲಾರದು. ಯಾವುದೇ ವ್ಯಕ್ತಿ ಅಥವಾ ಸಮಾಜ ಕೇವಲ ಉಸಿರಾಡುವುದ ಕ್ಕೋಸ್ಕರ ಬದುಕಲಾರದು. ಆದರೆ ಅದು ಯಾವುದೋ ಆದರ್ಶಕ್ಕೋಸ್ಕರ ಬದುಕುತ್ತದೆ ಹಾಗೂ ಅವಶ್ಯಕತೆ ಬಿದ್ದರೆ, ಆ ಆದರ್ಶದ ರಕ್ಷಣೆಗಾಗಿ ತನ್ನ ಜೀವನದ ಪರಿಸಮಾಪ್ತಿಯನ್ನೂ ಮಾಡಿಕೊಳ್ಳುತ್ತಾನೆ.

ವಿಜಯವನ್ನು ತನ್ನದಾಗಿಸಿಕೊಳ್ಳುವ ಪ್ರವೃತ್ತಿಯ ಮಹತ್ವವನ್ನು ಭಾರತ ವರ್ಷವು ಎಂದೆಂದೂ ತಿಳಿದಿದೆ. ಆದ್ದರಿಂದಲೇ ವಿಜಯದಶಮಿಯಂತಹ ಶಕ್ತಿಪೂಜೆಯ ಹಬ್ಬಗಳನ್ನು ಯೋಜಿಸಿದೆ. ವಿಜಯದಶಮಿ ನಮ್ಮ ವಿಜಯಗಳ ಸ್ಮಾರಕ ಮತ್ತು ಭಾವಿ ವಿಜಯಗಳ ಪ್ರೇರಕವಾಗಿದೆ. ಪ್ರಪಂಚದಲ್ಲಿ ವಿಜಯವನ್ನು ನಮ್ಮದಾಗಿಸಿಕೊಳ್ಳಬೇಕೆಂಬುದನ್ನು ನಮಗೆ ನೆನಪಿಸಲೆಂದೇ ಪ್ರತಿ ವರ್ಷವೂ

ಈ ದಿನ ಬರುತ್ತದೆ. ನಾವು ಸೋಲುವುದಕ್ಕಾಗಿ ಅಥವಾ ಉದಾಸೀನರಾಗಿ ಕೇವಲ "ಆಹಾರ ನಿದ್ರಾಭಯಮ್ಮೈದುನಂಚ"ವರೆಗೆ ಮಾತ್ರ ಜೀವನವನ್ನು ಸೀಮಿತ ವಾಗಿಡುವುದಕ್ಕಲ್ಲ ವಿಜಯಿಗಳಾಗುವುದಕ್ಕೆ ಹುಟ್ಟಿದ್ದೇವೆ.

ವಿಜಯಕ್ಕಾಗಿ ಸೀಮೋಲ್ಲಂಘನೆ ಅವಶ್ಯಕ. ಆದರೆ ಇಂದು ನಾವು ಜೀವನದ ಎಲ್ಲೆಗಳನ್ನು ಮಾಡಿಕೊಂಡಿದ್ದೇವೆ. ಸ್ವಾರ್ಥ ಮತ್ತು ಅಜ್ಞಾನದ ಸಂಕುಚಿತ ಕಾರ್ಯಕ್ಷೇತ್ರದಲ್ಲಿ ನಾವು ಕೂಪಮಂಡೂಕದ ರೀತಿ ನಮ್ಮ ಜೀವನವನ್ನು ಸೀಮಿತಗೊಳಿಸಿಕೊಂಡಿದ್ದೇವೆ. ನಾವು ನಮ್ಮ ಸರಹದ್ದುಗಳನ್ನು ಮುರಿಯಬೇಕು. ಯಾರು ಸರಹದ್ದುಗಳ ಹೊರಗೆ ಹೋಗಲಾರನೋ ಅವನು ಗೆಲುವನ್ನೂ ಸಹ ಪಡೆಯಲಾರ. ಸೇನೆ ಮತ್ತು ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಕೇವಲ ಶತ್ರುವಿನ ರಾಜ್ಯದ ಮೇಲೆ ಆಕ್ರಮಣ ಮಾಡಿ ಸೋಲಿಸುವುದರಿಂದ ಸೀಮೋಲ್ಲಂಘನ ಮತ್ತು ವಿಜಯ ಪಡೆದಂತಾಗುವುದಿಲ್ಲ. ಆದರೆ ವಿಚಾರಗಳು ಮತ್ತು ಭಾವನೆಗಳ ಪ್ರಪಂಚದಲ್ಲಿ ನಮಗೆ ಅನೇಕ ಶತ್ರುಗಳಿದ್ದಾರೆ. ಅವರನ್ನು ಸೋಲಿಸಿ, ನಾವು ನಮ್ಮ ವಿಜಯವನ್ನು ಪಡೆಯಬಲ್ಲೆವು.

* * * * *

# ಅಲಿಪ್ತ ನೀತಿ (ತಟಸ್ಥನೀತಿ) ಮತ್ತು ಯಾರೊಡನೆಯೂ ಸೇರಿಕೊಳ್ಳದಿರುವುದು ಜನಸಂಘದ ನಿಲುವಾಗಿದೆ

**ಪಂಡಿತ ದೀನ್ ದಯಾಳ್ ಉಪಾಧ್ಯಾಯ**

ಪಾಟ್ನಾದಲ್ಲಿ ಚುನಾವಣೆಯ ಸಭೆಯೊಂದನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಭಾರತವು ಅಮೆರಿಕದ ಒಕ್ಕೂಟವನ್ನೂ ಸೇರಬೇಕೆಂದು ಭಾರತೀಯ ಜನಸಂಘವು ಬಯಸುತ್ತದೆಂದು, ಪಂಡಿತ ಜವಾಹರಲಾಲ್ ನೆಹರೂ ಅವರು ತಪ್ಪಾಗಿ ಅಭಿಪ್ರಾಯಪಟ್ಟರು (ಹೇಳಿಕೆ ನೀಡಿದರು). ಜನಸಂಘವು ಕೇವಲ ತಟಸ್ಥ ನೀತಿಯನ್ನು ಮಾತ್ರವಲ್ಲ, ಯಾವ ಪಂಗಡದ ಜೊತೆಗೂ ಸೇರದಿರುವ ನೀತಿಯನ್ನು ಅನುಸರಿಸುತ್ತದೆ. ನೇರವಾಗಿ ನಮಗೆ ಸಂಬಂಧಿಸದಿರುವ ಸಂಗತಿಗಳಲ್ಲಿ ಕೂಡಾ ನಮ್ಮ ಒಳಗೊಳ್ಳುವಿಕೆಯಿಂದಾಗಿ, ಒಮ್ಮೆ ನಮ್ಮೊಡನೆ ಸ್ನೇಹದಿಂದಿದ್ದು ಯಾವಾಗಲೂ ನಮ್ಮ ಸ್ನೇಹವನ್ನು ಬಯಸುತ್ತಿದ್ದ ದೇಶಗಳ ಸಹಾನುಭೂತಿಯಿಂದ ನಾವು ದೂರವಾಗಿದ್ದೇವೆ. ಮಧ್ಯವರ್ತಿಗಳ ಮತ್ತು ಉಪದೇಶಕರ ಪಾತ್ರಗಳನ್ನು ನಾವು ಬಿಟ್ಟುಬಿಡೋಣ. ಸಾಮ್ರಾಜ್ಯವಾದೀ ಅಥವಾ ವಿಸ್ತರಣಾವಾದೀ ಉದ್ದೇಶಗಳಲ್ಲಿ ತೊಡಗಿಕೊಂಡಿರುವ ಈ ಜಗತ್ತಿನ ವಿವಿಧ ಶಕ್ತಿಗಳು, ನಮ್ಮ ಸಲಹೆಗಳು ಅದೆಷ್ಟೇ ವಿವೇಕಪೂರ್ಣವಾಗಿದ್ದರೂ, ಅದಕ್ಕೆ ಕಿವಿಗೊಡುವಂತಹ ಚಿತ್ತವೃತ್ತಿಯಲ್ಲಿಲ್ಲ. ಅಲ್ಲದೆ, ಮೂರನೆಯ ಒಕ್ಕೂಟವೊಂದನ್ನು ರೂಪಿಸಿ ಮುನ್ನಡೆಸುವಂತಹ ಸ್ಥಿತಿಯಲ್ಲಿಯೂ ನಾವಿಲ್ಲ. ನಾವು ನಮ್ಮ ಚೈತನ್ಯ ಓಜಸ್ಸುಗಳನ್ನು ಮುಖ್ಯವಾಗಿ ರಾಷ್ಟ್ರ ನಿರ್ಮಾಣದ ಚಟುವಟಿಕೆಗಳತ್ತ ನಿರ್ದೇಶಿಸಿದರೆ ಮತ್ತು ನಮ್ಮದೇ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದರಲ್ಲಿ ನಿಮಗ್ನರಾದರೆ ಯಾವುದೇ ದೊಡ್ಡ, ಶಕ್ತ ರಾಷ್ಟ್ರವೂ ನಮ್ಮೊಡನೆ ವಿರೋಧ ಕಟ್ಟಿಕೊಳ್ಳಲು ಇಚ್ಛಿಸುವುದಿಲ್ಲ. ಮತ್ತು ಪಂಡಿತ ನೆಹರೂ ಅವರು ವಿ. ಕೆ. ಕೃಷ್ಣಮೆನನ್‌ರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದೂ, ಅವರ ಬದಲಾಗಿ ಬೇರೆ ಯಾರಾದರೂ, ತಮ್ಮ ಅಭಿಪ್ರಾಯಗಳನ್ನು ಮನಗಾಣಿಸುವಲ್ಲಿ ಹೆಚ್ಚಿನ ಸಾಮರ್ಥ್ಯವಿರುವವರನ್ನು ನಿಯುಕ್ತಗೊಳಿಸಬೇಕೆಂದು ನಾವು ಭಾವಿಸುತ್ತೇವೆ. ಇದರಲ್ಲಿ ಯಾವುದೇ ಪ್ರತಿಷ್ಠೆಯ ಪ್ರಶ್ನೆಯೂ ಅಡಗಿಲ್ಲ.

---

**ಮೂಲ ಆಕರ : ಆರ್ಗನೈಸರ್, ಮಾರ್ಚ್ ೪, ೫೭**

ಕಾಶ್ಮೀರದ ಬಗೆಗೆ ಭಾರತವು ನಾಲ್ಕು ನಿಯಂತ್ರಣದ (ಅಧಿಕಾರದ) ನಿರ್ಣಯ ಅಥವಾ ಠರಾವನ್ನು ವಿರೋಧಿಸುವುದರಿಂದಾಗಿ ಜಾರಿಂಗ್ ಮಿಷನ್ ಅನ್ನು ಒಪ್ಪಿಕೊಳ್ಳುವುದಾಗಲೀ, ಮತ್ತು ಅವನಿಗೆ, ಪರಿಸ್ಥಿತಿಯ ಸ್ಥಳದಲ್ಲಿಯೇ ಅಧ್ಯಯನ–ಪರಿಶೀಲನೆ ನಡೆಸುವ ಅನುಕೂಲಗಳನ್ನು ಒದಗಿಸಿಕೊಡುವ ಪ್ರಶ್ನೆಯೇ ಇರಬಾರದು. ಅಧಿಕಾರ ಗ್ರಹಣ ಮತ್ತು ಆಕ್ರಮಣಗಳ ಮೂಲ ಸಂಗತಿಗಳು– ಸತ್ಯಘಟನೆಗಳು ಒಪ್ಪಿಗೆಯಾಗುವ ತನಕ, ಈ ವಿಷಯದ ಬಗೆಗೆ, ಅಂತರರಾಷ್ಟ್ರೀಯವಾಗಿ ನಿರ್ಧರಿಸಲ್ಪಟ್ಟ (ಅಂತರರಾಷ್ಟ್ರೀಯವಾಗಿ ನಾಮನಿರ್ದೇಶನ ಹೊಂದಿದ) ಯಾವುದೇ ಅಂಗಸಂಸ್ಥೆಯೊಡನೆ ನಾವು ಮಾತುಕತೆ ನಡೆಸಬಾರದು. ಹಾಗೇನಾದರೂ ಸೌಜನ್ಯ ಮತ್ತು ಸೌಹಾರ್ದಯುತ ಸಂಬಂಧಗಳ ಹೆಸರಿನಲ್ಲಿ ಯಾವುದೇ ಒಂದು ದೇಶದೊಡನೆ, ಇಂತಹ ಮಾತುಕತೆಗಳು ನಡೆದರೂ, ಅದು ರಾಜ್ಯದ ಜನತೆಯ ಮನಸ್ಸುಗಳಲ್ಲಿ, ತಮ್ಮ ಭವಿಷ್ಯದ ಬಗೆಗೆ ಸಂಧಿಗ್ಧತೆಯ ಅಥವಾ ಅನಿಶ್ಚಿತತೆಯ ಭಾವನೆಗಳನ್ನು ಸೃಷ್ಟಿಸುತ್ತದೆ. ಅಂತಹ ಮನಸ್ಥಿತಿಯು ರಾಜ್ಯದ ಪ್ರಗತಿಪರ ಅಭಿವೃದ್ಧಿಗೆ ಅಡಚಣೆ ಉಂಟುಮಾಡುತ್ತದೆ.

ಕಾಂಗ್ರೆಸ್ಸಿನ ನಾಯಕರು, ಕಾಶ್ಮೀರ ಸಮಸ್ಯೆಯನ್ನು ತಮ್ಮ ಪಕ್ಷದ ಉದ್ದೇಶಗಳಿಗಾಗಿ ದುರುಪಯೋಗಪಡಿಸಿಕೊಳ್ಳುತ್ತಿರುವುದು (ಲಾಭದಾಯಕವಾಗಿ) ಬಳಸಿಕೊಳ್ಳುತ್ತಿರುವುದು ವಿಷಾದನೀಯ. ಪ್ರಸ್ತುತ ಸಮಸ್ಯೆಯು, ಮುಖ್ಯವಾಗಿ ಕಾಂಗ್ರೆಸ್ ಸರ್ಕಾರದ ತಪ್ಪು ನಿರ್ವಹಣೆಯ ಪರಿಣಾಮವಾಗಿದ್ದರೂ ಕೂಡಾ, ಭಾರತದ ರಕ್ಷಣೆಯು ಕಾಶ್ಮೀರದ ರಕ್ಷಣೆಯೊಂದಿಗೇ ಸೇರಿದ್ದು– ಸಂಬಂಧಿಸಿದ್ದು ಇದು, ಇಡಿಯ ರಾಷ್ಟ್ರಕ್ಕೆ ಸಂಬಂಧಿಸಿದ್ದು ಎಂದು ಜನಸಂಘವು ಭಾವಿಸುತ್ತದೆ.

* * * * *

# ಪ್ರತ್ಯೇಕ ಮತ್ತು ಪ್ರತ್ಯೇಕತಾವಾದಿ ಕಾಶ್ಮೀರದ ಸಂವಿಧಾನವನ್ನು ಕಿತ್ತೊಗೆಯಿರಿ

**ಜಮ್ಮುವಿನಲ್ಲಿ ಶ್ರೀ ದೀನ್ ದಯಾಳ್**

ಜಮ್ಮು, ಫೆಬ್ರುವರಿ, ೮:– ಆರು ದಿನಗಳ ಭೇಟಿಗಾಗಿ ಜಮ್ಮು ಪ್ರಾಂತ್ಯಕ್ಕೆ ಆಗಮಿಸಿರುವ, ಭಾರತೀಯ ಜನಸಂಘದ ಪ್ರಧಾನಕಾರ್ಯದರ್ಶಿಗಳಾದ ಶ್ರೀ ದೀನ್ ದಯಾಳ್ ಉಪಾಧ್ಯಾಯರು ನಿನ್ನೆ, ಕಾಶ್ಮೀರದ ಪ್ರಧಾನಿಗಳಾದ ಬಕ್ಷಿ ಗುಲಾಮ್ ಮೊಹಮ್ಮದ್‌ರಿಗೆ, ರಾಜ್ಯದ ಪ್ರತ್ಯೇಕ ಸಂವಿಧಾನವನ್ನು ಕಿತ್ತೊಗೆಯುವಂತೆಯೂ ಮತ್ತು ಭಾರತೀಯ ಸಂವಿಧಾನವನ್ನು ಅದರ ಸಾಕಲ್ಯದಲ್ಲಿ (ಸಮಗ್ರವಾಗಿ) ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯಿಸಿ, ಆ ಮೂಲಕ ಅದು ಭಾರತದ ಅಧಿಕಾರಕ್ಕೆ ಸೇರಿ ಸಂಪೂರ್ಣವಾಗಿ ಅದರೊಂದಿಗೆ ಸಂಘಟಿತವಾಗುವಂತೆ ಪರಿವರ್ತಿಸುವ ಗೌರವಕ್ಕೆ ಅರ್ಹರಾಗಬೇಕೆಂದು ಮನವಿ ಮಾಡಿದರು.

ರಾಜ್ಯ ಪ್ರಜಾ ಪರಿಷತ್‌ನ ಆಶ್ರಯದಡಿಯಲ್ಲಿ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಶ್ರೀ ಉಪಾಧ್ಯಾಯರು ಕಾಶ್ಮೀರ ಮತ್ತು ಉಳಿದ ಭಾರತದ ನಡುವಿನ ಪ್ರಸ್ತುತ ಏಕತೆಯ ಗುಣಧರ್ಮವನ್ನು ಪ್ರಜಾ ಪರಿಷತ್‌ಗೆ ಹೋಲಿಸಿದರು. ನ್ಯಾಷನಲ್ ಕಾನ್‌ಫರೆನ್ಸ್ ಅಂತಹ ಏಕತೆಯನ್ನು ನಂಬುವುದಿಲ್ಲ ಎಂದು ಅವರು ಹೇಳಿದರು.

ಶ್ರೀ ಉಪಾಧ್ಯಾಯರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದರು: ಭಾರತಕ್ಕೆ ಕಾಶ್ಮೀರದ ಸೇರ್ಪಡೆಯು, ೧೯೫೪, ಫೆಬ್ರವರಿ ೬ ರಂದು ನ್ಯಾಷನಲ್ ಕಾನ್‌ಫರೆನ್ಸ್ ಮೂಲಕ ಸಾಧಿತವಾಯಿತೆಂದೂ, ಮತ್ತು ೧೯೪೭ ಅಕ್ಟೋಬರ್ ೨೬ ರಂದು ಮಹಾರಾಜ ಹರಿಸಿಂಗ್ ಅವರಿಂದ ಅಲ್ಲವೆಂದೂ ಸಮರ್ಥಿಸುವುದು, ಅಪಾಯಕಾರಿ ತೊಡಕುಗಳಿಂದ, ಅಂತರಾರ್ಥಗಳಿಂದ ತುಂಬಿದೆ. ಫೆಬ್ರವರಿ ೬ನೆಯ ದಿನಾಂಕವನ್ನು, ನ್ಯಾಷನಲ್ ಕಾನ್‌ಫರೆನ್ಸ್, ಸೇರ್ಪಡೆಯ ವಾರ್ಷಿಕೋತ್ಸವವಾಗಿ ಆಚರಿಸುವ ಮೂಲಕ ವಿಶ್ವಸಂಸ್ಥೆಯಲ್ಲಿ ನಮ್ಮ ವಾದವನ್ನು – ದುರ್ಬಲಗೊಳಿಸುತ್ತಿದೆ.

---

**ಮೂಲ ಆಕರ : ಸಮಾಚಾರ, ಫೆಬ್ರುವರಿ ೧೩, ೧೯೬೧**

ಲಡಾಖ್ ಮೇಲಿನ ಆಕ್ರಮಣವನ್ನು ಸರಿಯಾಗಿ ನಿರ್ವಹಿಸದಿದ್ದುದಕ್ಕೆ ಭಾರತ ಸರ್ಕಾರಕ್ಕಿಂತಲೂ ಹೆಚ್ಚಾಗಿ ಕಾಶ್ಮೀರ ಸರ್ಕಾರವು ಹೆಚ್ಚು ದೋಷಾರ್ಹವೆಂದೂ ಈ ಆಕ್ರಮಣದ ಈ ಕುಮ್ಮಕ್ಕು ಅಥವಾ ಉತ್ತೇಜನವನ್ನು ತನಿಖೆ ಮಾಡುವ ಅವಶ್ಯಕತೆಯಿದೆ ಎಂದೂ ಅವರು ಹೇಳಿದರು.

ರಾಷ್ಟ್ರೀಯ ರಕ್ಷಣೆಯ ಸವಾಲನ್ನು ಎದುರಿಸುವಲ್ಲಿ ಹೆದರಿರುವುದು ನಮ್ಮ ಪರಾಕ್ರಮಿಯಾದ ಸೈನ್ಯವಲ್ಲ ಆದರೆ ಭಾರತ ಸರ್ಕಾರ ಎಂದೂ ಹೇಳಿದರು.

* * * * *

# ನೆಹರೂ ಅವರ ವಿದೇಶಾಂಗ ನೀತಿಯು ಭಾರತವನ್ನು ಮಿತ್ರಹೀನವನ್ನಾಗಿ ಮಾಡಿದೆ

## ದೆಹಲಿಯಲ್ಲಿ ದೀನ್ ದಯಾಳ್

ಇತ್ತೀಚಿನ ಚುನಾವಣಾಸಭೆಗಳ ಭಾಷಣಗಳ ಸರಣಿಯಲ್ಲಿ ದೀನ್ ದಯಾಳ್ ಉಪಾಧ್ಯಾಯರು ಹೀಗೆ ಹೇಳಿದರು: ಕಾಶ್ಮೀರದ ಬಗೆಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯವು, ಜಗತ್ತಿನಲ್ಲಿ ನಮಗೆ ಯಾರೂ ಮಿತ್ರರಿಲ್ಲವೆಂಬುದನ್ನು ತೋರಿಸುತ್ತದೆ. ನೆಹರೂರ ವಿದೇಶಾಂಗ ನೀತಿಯು ನಮ್ಮನ್ನು ಇಲ್ಲಿಗೆ ತಂದು ನಿಲ್ಲಿಸಿದೆ. ಕಾಶ್ಮೀರವೂ ಅದರ ಭಾಗವಾಗಿ ರೂಪುಗೊಂಡಿರುವಂತೆ, ಭಾರತದ ಸ್ವಾತಂತ್ರ್ಯ ಮತ್ತು ಸಮಗ್ರತೆಯ ರಕ್ಷಣೆಗೆ ಸಂಬಂಧಿಸಿದಂತೆ, ಪ್ರತಿಯೊಬ್ಬ ಭಾರತೀಯನೂ, ಅವನು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವನಾಗಿದ್ದರೂ, ಆಕ್ರಮಣಕಾರಿಯೊಡನೆ ಹೋರಾಡುತ್ತಾನೆ ಮತ್ತು ಶಾಂತಿ ಹಾಗೂ ಸ್ವಾತಂತ್ರ್ಯಗಳನ್ನು ನಾಶಮಾಡುವ ಶತ್ರುಗಳ ದುಷ್ಟ ತಂತ್ರಗಳನ್ನು ವಿಫಲಗೊಳಿಸುತ್ತಾನೆ. ಆದರೆ, ನಾವು ನಮ್ಮ ವಿದೇಶಾಂಗ ನೀತಿಯ ಬಗೆಗೆ ಮರುಯೋಚನೆ ಮಾಡುವ ಅದನ್ನು ಪುನರ್ರೂಪಿಸುವ ಸಮಯ ಬಂದಿದೆ.

ನಾವು ನಮ್ಮ ಸ್ವತಂತ್ರ ಅಲಿಪ್ತನೀತಿಯನ್ನು (ತಟಸ್ಥನೀತಿ) ಮುಂದುವರೆಸಬಹುದು, ಆದರೆ, ಜಗತ್ತಿನ ರಾಷ್ಟ್ರಗಳ ಮನಸ್ಸಿನಲ್ಲಿ ಸಂದೇಹ ಸೃಷ್ಟಿಸುವ, ಆ ರಾಷ್ಟ್ರಗಳ ಮನಸ್ಸುಗಳನ್ನು ಕಿರಿಕಿರಿಗೊಳಿಸುವುದರಿಂದ ದೂರ ಉಳಿಯಬೇಕು. ಜನಸಂಘವು ಯಾವುದೇ ಪಕ್ಷದೊಡನೆ ಸೇರ್ಪಡೆಗೊಳ್ಳದಿರುವುದನ್ನು, ಅಲಿಪ್ತನೀತಿಗೆ ಅತ್ಯವಶ್ಯಕವಾದ ನಡೆಯೆಂದು ಪ್ರತಿಪಾದಿಸುತ್ತಿದೆ. ಜಗತ್ತಿನ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುವಿಕೆಯಿಂದ ನಮಗೆ ಸಾಕಷ್ಟು ಸಮಸ್ಯೆಗಳು ಎದುರಾಗಿವೆ. ನಾವು ಹಳೆಯ ಸ್ನೇಹಿತರನ್ನು ಕಳೆದುಕೊಂಡಿದ್ದೇವೆ ಮತ್ತು ಹೊಸ ಸ್ನೇಹಿತರನ್ನು ಗಳಿಸಿಲ್ಲ. ಪಂಡಿತ ನೆಹರೂ ತಮ್ಮ ಮಣ್ಣಿನ ಕಾಲುಗಳೊಡನೆ, ಮುಗಿಲಿನ ಎತ್ತರದಿಂದ ಈ ಗಟ್ಟಿ ನೆಲದ ಮೇಲೆ ಇಳಿದು ಬರಲಿ ಮತ್ತು ವಾಸ್ತವಿಕವಾದ ನೀತಿಯನ್ನು ಅನುಸರಿಸಲಿ.

---

**ಮೂಲ ಆಕರ : ಆರ್ಗನೈಸರ್ (ಸಮಾಚಾರ), ಫೆಬ್ರುವರಿ ೧೧, ೧೯೫೭**

* * * * *

# ಮುಂಬೈಯಲ್ಲಿ ದಿನ್ ದಯಾಳ್‌ಜೀ ಪೀಟರ್ ಆಲ್ವರೆಸ್‌ರೊಡನೆ ಭೇಟಿ

ಕಳೆದ ವಾರ ಮುಂಬೈಯಲ್ಲಿ ಭಾರತೀಯ ಜನಸಂಘದ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ, ಭಾರತೀಯ ಜನಸಂಘದ ಪ್ರಧಾನಕಾರ್ಯದರ್ಶಿಗಳಾದ ಪಂಡಿತ ದೀನ್ ದಯಾಳ್ ಉಪಾಧ್ಯಾಯ ಅವರು ಹೀಗೆ ಘೋಷಿಸಿದರು: ನಮ್ಮ ಎದುರು ಎರಡು ಸಮಸ್ಯೆಗಳಿವೆ, ಮೊದಲನೆಯದು ಕಾಂಗ್ರೆಸ್ಸನ್ನು ಸ್ಥಾನಪಲ್ಲಟಗೊಳಿಸುವುದು ಮತ್ತು ಎರಡನೆಯದು ಕಮ್ಯುನಿಸ್ಟರೊಡನೆ ಹೋರಾಡುವುದು. ಆದ್ದರಿಂದ ನಮ್ಮದು ತ್ರಿಕೋಣಾತ್ಮಕ ಹೋರಾಟವಾಗಿದೆ. ಇತ್ತೀಚಿನ ಕಾಲದ ರಾಜಕೀಯ ಇತಿಹಾಸವನ್ನು ಶೋಧಿಸುತ್ತಾ, ಕಾಂಗ್ರೆಸ್ಸಿನಲ್ಲಿದ್ದ ಉದಾರವಾದಿಗಳು– ವಿದ್ವಾಂಸರೂ, ಪ್ರಾಮಾಣಿಕರೂ ಆಗಿದ್ದರು ಹಾಗಿದ್ದರೂ, ಅವರು ಜನಪ್ರಿಯ ನಾಯಕತ್ವದ ಮುಂದಾಳುಗಳಾಗಿ ಉಳಿಯಲಿಲ್ಲ, ಏಕೆಂದರೆ ಅವರು ಆರಾಮಕುರ್ಚಿಯ ರಾಜಕಾರಣಿಗಳಾಗಿರುವುದರಲ್ಲಿಯೇ ಸಂತೃಪ್ತರಾಗಿದ್ದರು. ಕಾಂಗ್ರೆಸ್ಸಿನ ಪ್ರಸ್ತುತ ನಾಯಕತ್ವವನ್ನು ಬದಲಾಯಿಸುವ ಸಂದರ್ಭದಲ್ಲಿ ಜನಸಂಘವು ಈ ಲಿಬರಲ್ ಪರಂಪರೆಯನ್ನು ಉಳಿಸಲು ಇಚ್ಛಿಸುವುದಿಲ್ಲ.

ಆಂಧ್ರದ ಚುನಾವಣೆಯ ಬಗೆಗೆ ಮಾತನಾಡುತ್ತಾ ದೀನ್ ದಯಾಳ್ ಉಪಾಧ್ಯಾಯರು, ಆಂಧ್ರದಲ್ಲಿನ ಜನಸಂಘದ ಕೆಲವೇ ಅಭ್ಯರ್ಥಿಗಳ ಅದೃಷ್ಟ ಹೇಗಿರುತ್ತದೆಯೋ ಹೇಳುವುದು ಕಷ್ಟ ಎಂದರು. ಜನಸಂಘದ ಸಭೆಗಳಿಗೆ ಒಳ್ಳೆಯ ಹಾಜರಾತಿಯಿರುತ್ತಿತ್ತು ಮತ್ತು ಬರಹರೂಪದಲ್ಲಿ, ಭಾಷಣಕಾರರಿಗೆ ಕಳಿಸಿದ ಪ್ರಶ್ನೆಗಳನ್ನು ಬಹಳ ಎಚ್ಚರಿಕೆಯಿಂದ ಉತ್ತರಿಸಲಾಗುತ್ತಿತ್ತು ಹಾಗೂ ಚುನಾವಣಾ ಸಭೆಗಳಲ್ಲಿ ಇದು ಸ್ವಾಗತಾರ್ಹವಾದ ವಿಶೇಷ ಲಕ್ಷಣವಾಗಿತ್ತು. ವಿಜಯವಾಡದಲ್ಲಿ ಪ್ರತಿಯೊಬ್ಬ ಮತದಾರರನ್ನೂ ಕಾರ್ಯಕರ್ತರು ವೈಯಕ್ತಿಕವಾಗಿ ಸಂಪರ್ಕಿಸುತ್ತಿದ್ದರು. ಈ ಕಾರ್ಯಕರ್ತರು ಬೆಳಗಿನ ಜಾವ ಐದು ಗಂಟೆಯಿಂದ, ರಾತ್ರಿ ಹನ್ನೊಂದು ಗಂಟೆಯವರೆಗೂ ಕೆಲಸ ಮಾಡುತ್ತಿದ್ದರು.

---

**ಮೂಲ ಆಕರ : ಆರ್ಗನೈಸರ್: ದೆಹಲಿ, ೧೯೫೫, ಫೆಬ್ರುವರಿ ೨೧ (ಸಮಾಚಾರ)**

ಚುನಾವಣೆಯ ಅವಧಿಯಲ್ಲಿ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದು ಅತ್ಯಂತ ಮುಖ್ಯ ಸಂಗತಿ ಎಂದು ಪಂಡಿತ ದೀನ್ ದಯಾಳ್ ಉಪಾಧ್ಯಾಯರು ಹೇಳಿದರು ಮತ್ತು ಈ ಪಟ್ಟಿಗಳಲ್ಲಿ ಯಾವುದೇ ಅವ್ಯವಹಾರ ನಡೆಯದಂತೆ ಜನಸಂಘದ ಕಾರ್ಯಕರ್ತರು ನಿಗಾ ವಹಿಸಬೇಕೆಂದೂ ಹೇಳಿದರು. ಜನಸಂಘದ ಕಾರ್ಯದರ್ಶಿಗಳಾದ ಶ್ರೀ ಅಟಲ್ ಬಿಹಾರಿಯವರು ಲಕ್ನೋದಲ್ಲಿ ಸಂಸತ್ತಿನ ಸ್ಥಾನಕ್ಕೆ ಸ್ಪರ್ಧಿಸುತ್ತಿರುವಾಗ, ಜನಸಂಘದ ಕಾರ್ಯಕರ್ತರುಗಳಿದ್ದ ಇಡಿಯ ಮೊಹಲ್ಲವನ್ನೇ ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿತ್ತು.

ಪಂಡಿತ ನೆಹರೂ ಅವರ ಸಮಾಜವಾದೀ ಸಮಾಜದ ಘೋಷಣೆಯು ಮುದಿಯಾಗುತ್ತಿರುವ ಕಾಂಗ್ರೆಸ್ಸಿಗೆ ಹೊಸ ಜೀವನವನ್ನು ಗುತ್ತಿಗೆಯಾಗಿ ಕೊಡುವ ಉದ್ದೇಶ ಮಾತ್ರವಾಗಿತ್ತೆಂದು ದೀನ್ ದಯಾಳ್ ಅವರು ಅಭಿಪ್ರಾಯಪಟ್ಟರು. ಪಂಡಿತ್ ನೆಹರೂ ಸಹಕಾರೀ ರಾಷ್ಟ್ರಮಂಡಲದ ಘೋಷಣೆಯೊಂದಿಗೆ (Co-operative Commonwealth) ಆರಂಭಿಸಿದರು. ನಂತರ ಜಾತ್ಯಾತೀತ ರಾಷ್ಟ್ರ (ರಾಜ್ಯ)ದ ಬಗೆಗೆ ಮಾತನಾಡಿದರು. ನಂತರ ಸುಖೀರಾಜ್ಯದ ಬಗೆಗೆ ತಿಳಿಸಿದರು. ಈಗ ಕಡೆಗೆ ಸಮಾಜವಾದಿ ಸಮಾಜದ ಹೇಳಿಕೆಯನ್ನು ತಲುಪಿದ್ದಾರೆ. ಆದ್ದರಿಂದ ಇವೆಲ್ಲವೂ ಕೇವಲ ಕ್ಷಣಿಕವಾದ, ಬಂದುಹೋಗುತ್ತಿರುವ ಘೋಷಣೆಗಳೆಂಬುದು ಸ್ಪಷ್ಟವಾಗುತ್ತದೆ. ನಿಜವಾದ ಸಮಾಜವಾದವು ಯಾವುದೋ ಒಂದು ನಿರ್ದಿಷ್ಟ ಆರ್ಥಿಕ ವಿನ್ಯಾಸವನ್ನು ಮಾತ್ರ ಒಳಗೊಂಡಿರುವುದಿಲ್ಲ, ಆದರೆ, ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಸಂಪೂರ್ಣ ಮತ್ತು ಸಮಗ್ರ ಬೆಳವಣಿಗೆ, ಅಭಿವೃದ್ಧಿಗಳನ್ನು ಒಳಗೊಂಡಿರುತ್ತದೆ. ಇದನ್ನು ಸಾಧಿಸುವುದಕ್ಕೆ ಬದಲಾಗಿ ಕಾಂಗ್ರೆಸ್, ಆಳುವವರು ಮತ್ತು ಆಳ್ವಿಕೆಗೆ ಒಳಪಡುವವರ ನಡುವೆ ಹಿರಿದಾದ ಕಂದಕವನ್ನು ನಿರ್ಮಿಸುತ್ತಿದೆ.

ಇಂತಹ ಎಲ್ಲ ಹೇಳಿಕೆಗಳ ಸಮಸ್ಯೆಯೆಂದರೆ, ಇದು ಯಾವುದೇ ರಚನಾತ್ಮಕ ಕಾರ್ಯದ ಆಧಾರವಿಲ್ಲದೇ ಕೇವಲ ಸೈದ್ಧಾಂತೀಕರಿಸುತ್ತಿದ್ದುದೇ ಆಗಿತ್ತೆಂದು ಜನಸಂಘದ ನಾಯಕರು ಹೇಳಿದರು. ಇಂದಿನ ಅವಶ್ಯಕತೆ, ಇಂತಹ ಮಾತುಗಳಲ್ಲ. ಆದರೆ, ಭಾರತೀಯ ಸಮಾಜ ಶಾಸ್ತ್ರದ, ಶಾಶ್ವತ, ಬಹುಕಾಲ ಅಸ್ತಿತ್ವದಲ್ಲಿ ಇರುವಂತಹ ತತ್ತ್ವಗಳ– ಸಿದ್ಧಾಂತಗಳ– ಆಧಾರದ ಮೇಲೆ ವಿಕಸನ ಹೊಂದುವ ಸಮಾಜ ನಿರ್ಮಿಸುವ ರಚನಾತ್ಮಕ ಕಾರ್ಯಕ್ರಮಗಳು. ಅಂತಹ ಸಮಯ ಬರುವ ತನಕ ಎಲ್ಲ ಮಾತುಗಳೂ ವಿಫಲವಾಗಬೇಕಾಗುತ್ತದೆ. ಉದಾಹರಣೆಗೆ, ಸಹಕಾರೀ ಚಳುವಳಿಯ ಬಗೆಗೆ ಸಾಕಷ್ಟು ಗದ್ದಲ ನಡೆದಿತ್ತು, ಆದರೆ ಸೈದ್ಧಾಂತಿಕವಾಗಿ ಉತ್ತಮವಾಗಿದ್ದರೂ ಕೂಡ, ಅದು ಆಚರಣೆಯಲ್ಲಿ– ಕಾರ್ಯಗತಗೊಳ್ಳುವುದರಲ್ಲಿ ವಿಫಲವಾಯಿತು, ಏಕೆಂದರೆ, ಸದ್ಯದಲ್ಲಿ ನಮ್ಮ ಜನರಲ್ಲಿ ಸಹಕಾರೀ ಮನೋಭಾವದ

ಕೊರತೆಯಿತ್ತು. ಸಾಮಾಜಿಕ ಸಂಸ್ಥೆಗಳು ಈ ಮನೋಭಾವ ಬೆಳೆಸಿಕೊಳ್ಳಲು ಒತ್ತಾಯವಾಗಿ ಕಾರ್ಯಮಾಡಬೇಕೆಂಬ ಆಶಯದೊಡನೆ ತಮ್ಮ ಮಾತುಗಳನ್ನು ಮುಗಿಸಿದರು.

ಶ್ರೀ ದೀನ್ ದಯಾಳರು ಇತ್ತೀಚೆಗೆ ಮುಂಬೈನಲ್ಲಿ, ಗೋವಾದ ನ್ಯಾಷನಲ್ ಕಾಂಗ್ರೆಸ್‌ನ ಅಧ್ಯಕ್ಷರಾದ ಶ್ರೀ ಪೀಟರ್ ಆಳ್ವಾರೆಸ್ ಅವರನ್ನು ಅನೌಪಚಾರಿಕವಾಗಿ ಭೇಟಿ ಮಾಡಿದ್ದರು.

ಗೋವಾ ವಿಮುಕ್ತಿ ಹೋರಾಟವನ್ನು ತೀವ್ರಗೊಳಿಸುವ ಬಗೆಗೆ ಚರ್ಚಿಸಿದರೆಂದೂ ಈ ಹೋರಾಟವು ಸರ್ವಪಕ್ಷಗಳ ಆಧಾರದೊಡನೆ ನಡೆಯಬೇಕೆಂಬ ಸೂಚನೆ ನೀಡಿದರೆಂದೂ ತಿಳಿದುಬಂದಿದೆ.

* * * * *

# ಜನಸಂಘವು ತನ್ನ ಸ್ಥಾನವನ್ನು ಉತ್ತಮಗೊಳಿಸಿಕೊಳ್ಳುವ ವಿಶ್ವಾಸ ಭರವಸೆ ಹೊಂದಿದೆ

**ನಾಗಪುರದಲ್ಲಿ ಪ್ರಧಾನಕಾರ್ಯದರ್ಶಿಗಳು**

ಈ ಬಾರಿ ವಿರೋಧಪಕ್ಷದ ಶಕ್ತಿಗಳು, ೧೯೫೧–೫೨ಕ್ಕೆ ಹೋಲಿಸಿದರೆ, ಮಹಾ ಚುನಾವಣೆಗಳಲ್ಲಿ ಉತ್ತಮ ಫಲಿತಾಂಶ ಪಡೆಯುತ್ತವೆಂದು, ಭಾರತೀಯ ಜನಸಂಘದ ಪ್ರಧಾನಕಾರ್ಯದರ್ಶಿಗಳಾದ ದೀನ್ ದಯಾಳ್ ಉಪಾಧ್ಯಾಯರು, ಜನವರಿ ಹದಿಮೂರರಂದು, ನಾಗಪುರದಲ್ಲಿ ಹೇಳಿದರು.

ಆಡಳಿತ ಪಕ್ಷಕ್ಕೆ ಹೆಚ್ಚು ಶಕ್ತವಾದ ವಿರೋಧ ಪಕ್ಷವನ್ನು ನೀಡಬೇಕೆಂಬ ತೀಕ್ಷ್ಣ ಆಸೆಯು, ದೇಶದ ಸಾಮಾನ್ಯ ಜನರಲ್ಲಿ ಮೂಡಿತ್ತೆಂದು ಅವರು ಪತ್ರಿಕಾಗೋಷ್ಠಿಯೊಂದಕ್ಕೆ ತಿಳಿಸಿದರು. ಕಾಂಗ್ರೆಸ್ ಪಕ್ಷದ ವಿರುದ್ಧ ನೇರ ಸಂಘರ್ಷವನ್ನು ಸಂಘಟಿಸಬೇಕೆನ್ನುವ ರಾಜಕೀಯ ಪಕ್ಷಗಳ ಆತಂಕವು ಜನರ ಆ ಆಸೆಯಿಂದ ಹುಟ್ಟಿದುದು ಎಂದರು.

ಬಹುಕೋನ ಸ್ಪರ್ಧೆಯು, ಸಹಜವಾಗಿಯೇ ಯಾವಾಗಲೂ ಕಾಂಗ್ರೆಸ್ಸಿಗೇ ನೆರವಾಗುವುದು ಎಂದು ದೀನ್‌ದಯಾಳ್ ಆಲೋಚಿಸಲಿಲ್ಲ. ಕೆಲವು ವೇಳೆ, ವಾಸ್ತವವಾಗಿ, ಅದರ ವಿರುದ್ಧವೂ ಪರಿಣಾಮ ಬೀರುವುದೆಂದು ಅವರು ಹೇಳಿದರು.

ರಾಜ್ಯಗಳ ಚುನಾವಣಾ ಪ್ರವಾಸದಲ್ಲಿರುವ ಪ್ರಧಾನಕಾರ್ಯದರ್ಶಿಗಳು, ಜನಸಂಘದ ಅಭ್ಯರ್ಥಿಗಳ ಪಟ್ಟಿಯು, ತಡವಾಗಿ ಎಂದರೆ ಜನವರಿ ೧೮ ಅಥವಾ ೧೯ರಂದು, ದೆಹಲಿಯಿಂದ ಪ್ರಕಟಿಸಲ್ಪಡುವುದೆಂದು ಹೇಳಿದರು.

ಪಕ್ಷವು ದೇಶದಲ್ಲಿ ವಿಧಾನಸಭೆಗೆ ಒಂದು ಸಾವಿರ ಅಭ್ಯರ್ಥಿಗಳನ್ನೂ, ಮತ್ತು ಸಂಸತ್ತಿನ ಸ್ಥಾನಗಳಿಗೆ ೧೦೦ ಅಭ್ಯರ್ಥಿಗಳನ್ನೂ ಕಣಕ್ಕೆ ಇಳಿಸುತ್ತದೆ. ಉತ್ತರಪ್ರದೇಶ, ರಾಜಾಸ್ಥಾನ, ಪಂಜಾಬ್, ಮಧ್ಯಪ್ರದೇಶ ಮತ್ತು ಬಿಹಾರದ ಉತ್ತರದ ಜಿಲ್ಲೆಗಳಲ್ಲಿ ಕಾಂಗ್ರೆಸ್ಸಿಗೆ ಉತ್ತಮ ಸ್ಪರ್ಧೆ ನೀಡುವ ಭರವಸೆಯನ್ನು ಅವರು ಹೊಂದಿದ್ದಾರೆ.

---

**ಮೂಲ ಆಕರ : ಆರ್ಗನೈಸರ್, ಜನವರಿ ೨೧, ೧೯೬೨**

ಉಳಿದ ರಾಜ್ಯಗಳಲ್ಲಿ, ವಿಶೇಷವಾಗಿ ಮಹಾರಾಷ್ಟ್ರ, ಗುಜರಾತ್ ಮತ್ತು ಬಂಗಾಳಗಳಲ್ಲಿ ಪಕ್ಷವು ಇತರ ವಿರೋಧ ಪಕ್ಷಗಳೊಡನೆ ಚುನಾವಣಾ ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ಚಿಂತಿಸುತ್ತಿತ್ತೆಂದು ಶ್ರೀ ಉಪಾಧ್ಯಾಯರು ಹೇಳಿದರು.

ಕಳೆದ ಮಹಾಚುನಾವಣೆಗಳಲ್ಲಿ ಭಾರತದ ರಾಜಕೀಯ ಪಕ್ಷವಾಗಿ ಹೊರಹೊಮ್ಮಿದ ಭಾರತೀಯ ಜನಸಂಘವು, ಪುನಃ ತನ್ನ ತತ್ತ್ವಗಳು ಮತ್ತು ಕಾರ್ಯಕ್ರಮಗಳಿಗಾಗಿ ಬೆಂಬಲವನ್ನು ಬೇಡಲು ಜನರೆದುದು ಹೋಗುತ್ತಿದೆ. ಪಕ್ಷವು ವಿಭಿನ್ನವಾದ ಕಾರ್ಯಕ್ರಮವನ್ನು ಹೊಂದಿರುವುದರಿಂದಲೂ, ಮತ್ತು ನಾವು ಜನರು ವೈಯಕ್ತಿಕ ನೆಲೆಯ ಆಧಾರಕ್ಕಿಂತಲೂ ಸೈದ್ಧಾಂತಿಕ ನೆಲೆಯಲ್ಲಿ ರಾಜಕೀಯಕ್ಕೆ ಸೇರ್ಪಡೆಗೊಳ್ಳಬೇಕಾದ ಅಗತ್ಯವಿದೆಯೆಂದು ಭಾವಿಸುವುದರಿಂದಾಗಿ, ಯಾವುದೇ ಪಕ್ಷಗಳ ಅಥವಾ ಪಂಗಡಗಳೊಡನೆ ಸೇರುವ ದೃಷ್ಟಿಕೋನ ಹೊಂದಿಲ್ಲ.

ಆದಾಗ್ಯೂ, ಕಾಂಗ್ರೆಸ್ ಅಧಿಕಾರದ ಏಕಸ್ವಾಮ್ಯವನ್ನು ಅನುಭವಿಸುತ್ತಾ ದುರುಪಯೋಗಪಡಿಸುತ್ತಿರುವ ಪ್ರಸಕ್ತ ಸಮಯದಲ್ಲಿ ನಮ್ಮ ಸ್ಥಾನವು ವಿರೋಧ ಪಕ್ಷದೊಡನೆಯೇ ಆಗಿದೆ, ಏಕೆಂದರೆ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಉತ್ತೇಜನ ನೀಡಿ ಅದನ್ನು ಬಲಗೊಳಿಸಬೇಕಾಗಿದೆ. ಆದ್ದರಿಂದ ನಾವು, ಕಾಂಗ್ರೆಸ್ಸೇತರ ಅಭ್ಯರ್ಥಿಗಳ ವಿಜಯದ ಸಾಧ್ಯತೆಯನ್ನು ಪ್ರೋತ್ಸಾಹಿಸಲು ಇತರ ಪಕ್ಷಗಳೊಡನೆ ಚುನಾವಣಾ ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ನಿರ್ಧರಿಸಿದ್ದೇವೆ.

ನಮ್ಮ ಶಕ್ತಿ, ಚೈತನ್ಯಗಳನ್ನು ಕೇಂದ್ರೀಕರಿಸುವ ಸಲುವಾಗಿ, ಹಿಂದಿನ ಐದು ವರ್ಷಗಳಲ್ಲಿ ನಾವು ಯಾವ ಚುನಾವಣಾ ಕ್ಷೇತ್ರಗಳಲ್ಲಿ ಸಫಲ ಕಾರ್ಯಸಾಧಿಸಿದ್ದೇವೆಯೋ ಎಲ್ಲಿ ಮತಕೇಂದ್ರಗಳ (ಮತಗಟ್ಟೆಗಳ) ಮೂರನೆಯ ಒಂದು ಭಾಗದಷ್ಟರಲ್ಲಿಯಾದರೂ, ಮತಕೇಂದ್ರದ ಸಮಿತಿಗಳನ್ನು ಹೊಂದಿದ್ದೇವೆಯೋ ಮತ್ತು ಶೇಕಡಾ ಒಂದರಷ್ಟು ಮತದಾರರು ನಮ್ಮ ಪಕ್ಷದ ಪ್ರಾಥಮಿಕ ಸದಸ್ಯತ್ವ ಪಡೆದಿರುತ್ತಾರೆಯೋ, ಮುಖ್ಯವಾಗಿ ಆ ಪ್ರದೇಶಗಳಲ್ಲಿ ನಮ್ಮ ಅಭ್ಯರ್ಥಿಗಳನ್ನು ಸ್ಪರ್ಧೆಗಿಳಿಸಲು ನಿರ್ಧರಿಸಿದ್ದೇವೆ. ೧೦೦ ಜನ ಲೋಕಸಭಾ ಅಭ್ಯರ್ಥಿಗಳನ್ನು ಒಳಗೊಂಡಂತೆ ನಾವು ಒಂದು ಸಾವಿರ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಭರವಸೆ ಹೊಂದಿದ್ದೇವೆ.

ಭಾರತೀಯ ಜನಸಂಘವು ರಾಷ್ಟ್ರೀಯ ಭದ್ರತೆ, ರಾಷ್ಟ್ರ ರಕ್ಷಣೆಗಳಿಗೆ ಪ್ರಥಮ ಆದ್ಯತೆ ನೀಡುತ್ತದೆ. ನೆರೆಯ ರಾಜ್ಯಗಳೊಂದಿಗೆ ಶಾಂತಿ ಮತ್ತು ಸೌಹಾರ್ದಯುತ ಸಂಬಂಧಗಳನ್ನು ಹೊಂದಿರಬೇಕೆಂಬ ನಮ್ಮ ಅಭಿಲಾಷೆಯು, ನಮ್ಮನ್ನು ಅವಾಸ್ತವಿಕ ನೀತಿಗಳನ್ನು ಅನುಸರಿಸುವಂತಾಗಲೀ, ದೇಶದ ರಕ್ಷಣಾ ಅವಶ್ಯಕತೆಗಳನ್ನು,

ನಿರ್ಲಕ್ಷಿಸುವಂತಾಗಲೀ, ಮಾಡಬಾರದು. ಯುವಕರಿಗೆ ಮಿಲಿಟರಿ ಶಿಕ್ಷಣ ನೀಡುವುದರ ಮೂಲಕ ಮತ್ತು ಶೀಘ್ರವೇ ರಕ್ಷಣಾ ವಿಭಾಗದ ಕೈಗಾರಿಕೆಗಳ ಸ್ಥಾಪನೆಯ ಮೂಲಕ ನಮ್ಮ ರಕ್ಷಣಾದಳದ ಸಾಮರ್ಥ್ಯವನ್ನು ಹೆಚ್ಚಿಸಬೇಕು.

ಭಾರತೀಯ ಜನಸಂಘವು ರಾಷ್ಟ್ರೀಯ ಐಕಮತ್ಯ, ಒಗ್ಗಟ್ಟುಗಳನ್ನು ಸಮರ್ಥಿಸುತ್ತದೆ. ಏಕರಾಷ್ಟ್ರ ಸಿದ್ಧಾಂತವನ್ನು ನಂಬುವ ನಾವು, ಇತಿಹಾಸದ ಚಲನೆಯ ಅವಧಿಯಲ್ಲಿ ವಿಭಜನಾ ನೀತಿಗೆ, ರಾಷ್ಟ್ರವಿರೋಧಿ ಪ್ರವೃತ್ತಿಗಳಿಗೆ, ಹೊರಪ್ರದೇಶಗಳ ನಿಷ್ಠೆಗೆ ಬಲಿಯಾಗಿರುವಂತಹ ಭಾರತೀಯ ಪ್ರಜೆಗಳನ್ನು ಈ ರಾಷ್ಟ್ರೀಯರನ್ನಾಗಿಸಿ, ಅವರಿಗೆ ನಾಗರಿಕ ಹಕ್ಕುಗಳನ್ನು ನೀಡುವ ಬಗೆಗೆ ಕ್ರಮ ತೆಗೆದುಕೊಳ್ಳಬೇಕೆಂದು ಭಾವಿಸುತ್ತೇವೆ. ನಮ್ಮ ರಾಜಕಾರಣ ರಾಷ್ಟ್ರೀಕರಣಗೊಳ್ಳಲಿ. ಧರ್ಮಗಳನ್ನು ಧಾರ್ಮಿಕ ಉದ್ದೇಶಗಳಿಗೆ ಹೊರತಾದುದಕ್ಕೆ ಪರಿಗಣಿಸಬಾರದು.

ತಳಮಟ್ಟದತನಕ ರಾಜಕೀಯ ಅಧಿಕಾರವು ವಿಕೇಂದ್ರೀಕರಣಗೊಂಡಿರುವಂತಹ ಏಕಕೇಂದ್ರ ಪ್ರಭುತ್ವ ಸ್ವರೂಪದ– ಏಕಾತ್ಮಕರೂಪದ ಸರ್ಕಾರವನ್ನು ಜನಸಂಘವು ಬೆಂಬಲಿಸುತ್ತದೆ. ಸ್ಥಳೀಯ ಸಂಸ್ಥೆಗಳು ಕಾನೂನಿಗೆ ಅನುಗುಣವಾದ– ಶಾಸನಬದ್ಧ– ಮನ್ನಣೆಯನ್ನು ಪಡೆಯಬೇಕು ಮತ್ತು ಅವುಗಳ ಆದಾಯದ ಮೂಲಗಳು ಅಧಿಕಗೊಳ್ಳಬೇಕು ಮತ್ತು ಖಚಿತವೆಂಬ ಭರವಸೆಯಿರಬೇಕು.

ಈ ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಎರಡನೆಯ ಪಂಚವಾರ್ಷಿಕ ಯೋಜನೆಯು ಮೂಲಭೂತವಾಗಿ ಬದಲಾವಣೆಯಾಗಬೇಕು.

ದೊಡ್ಡ ಪ್ರಮಾಣದಲ್ಲಿ ವಸ್ತುಗಳ ತಯಾರಿಕೆಗೆ ಸೂಕ್ತವಾಗಿರುವಂತಹ ಪಾಶ್ಚಿಮಾತ್ಯ ತಾಂತ್ರಿಕತೆಯ ಮೇಲೆ ಮುಖ್ಯವಾಗಿ ಅವಲಂಬಿಸಿರುವುದರಿಂದ, ಈ ಯೋಜನೆಯು ರಾಜ್ಯದ ಅಧಿಕಾರ ಮತ್ತು ಬಂಡವಾಳಶಾಹಿಯು, ಅಧಿಕಾರದಲ್ಲಿರುವ ಪಕ್ಷದ ಪ್ರೀತಿಪಾತ್ರರಾದ ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕರಣಗೊಳ್ಳಲು ಎಡೆ ಮಾಡುತ್ತದೆ.

ಜನಸಂಘವು ಜನತಾ ವಲಯ (ವಿಭಾಗ)ವನ್ನು ಅಭಿವೃದ್ಧಿಪಡಿಸಲು ಬಯಸುತ್ತದೆ. ಅಂದರೆ, ವಿಕೇಂದ್ರೀಕರಣಗೊಂಡ, ಸಣ್ಣ ಪ್ರಮಾಣದ ಮತ್ತು ಗುಡಿ ಕೈಗಾರಿಕೆಗಳು.

ಮೂಲಭೂತವಾದಂತಹ ಮತ್ತು ರಕ್ಷಣಾವಲಯದ ಕೈಗಾರಿಕೆಗಳನ್ನು ಹೊರತುಪಡಿಸಿ ಉಳಿದ ಎಲ್ಲದರ ರಾಷ್ಟ್ರೀಕರಣವನ್ನು ನಾವು ವಿರೋಧಿಸುತ್ತೇವೆ. ಬೇರೆ ಎಲ್ಲ ಕೈಗಾರಿಕೆಗಳನ್ನೂ, ಸಮರ್ಪಕವಾದ ಸರ್ಕಾರಿ ನಿಬಂಧನೆಗಳೊಡನೆ ಖಾಸಗಿ ಉದ್ಯಮಶೀಲತೆಗೆ ಬಿಟ್ಟು ಬಿಡಬೇಕು.

ಬೃಹತ್‌ಪ್ರಮಾಣ ಮತ್ತು ಸಣ್ಣ ಪ್ರಮಾಣದ ವಲಯ, ವಿಭಾಗಗಳ ಬಗೆಗೆ ಸ್ಪಷ್ಟವಾದ ಎಲ್ಲೆಯನ್ನು ಗುರುತಿಸಬೇಕು.

ಗ್ರಾಹಕ ಅಥವಾ ಬಳಕೆಯ ವಸ್ತುಗಳನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳು ಉತ್ಪಾದಿಸಬೇಕು, ದೊಡ್ಡ ಪ್ರಮಾಣದ ಕೈಗಾರಿಕೆಗಳು, ಉತ್ಪಾದಕರು ರಫ್ತು ಮಾಡುವ ವಸ್ತುಗಳ ಉತ್ಪಾದನೆಗೆ ಮಿತಿಗೊಳ್ಳಬೇಕು.

ಆದಾಯದ ರಾಷ್ಟ್ರೀಯ ಕನಿಷ್ಠ ಮಿತಿಯು ತಿಂಗಳಿಗೆ ನೂರು ರೂಪಾಯಿ ಎಂದು ನಿಗದಿಮಾಡಲ್ಪಡಬೇಕು ಮತ್ತು ವೆಚ್ಚಮಾಡಬಹುದಾದ ಆದಾಯದ ಗರಿಷ್ಠ ಮಿತಿಯು ತಿಂಗಳಿಗೆ ಎರಡು ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿರಬಾರದು.

ಜಮೀನಿನ ಮರುಹಂಚಿಕೆಯಾಗದೇ ಭೂಸುಧಾರಣೆಯ ಯಾವುದೇ ಯೋಜನೆಯೂ ಅಪರಿಪೂರ್ಣ. ಐದು ಜನ ಸದಸ್ಯರ ಕುಟುಂಬವೊಂದಕ್ಕೆ, ಒಳ್ಳೆ ನೀರಾವರಿಯ ಮೂವತ್ತು ಎಕರೆಗಳು ಗರಿಷ್ಠ ಮಿತಿಯೆಂದು ನಿಗದಿಪಡಿಸಲು ಜನಸಂಘವು ಇಚ್ಛಿಸುತ್ತದೆ. ಕನಿಷ್ಠ ಮಿತಿಯ ಆರ್ಥಿಕ ಹಿಡುವಳಿಯು ಐದು ಎಕರೆ ಜಮೀನಾಗಿರಬೇಕು. ಬಾಡಿಗೆಯನ್ನು ಕಡಿಮೆ ಮಾಡುವುದಕ್ಕೆ ನಾವು ಬೆಂಬಲ ನೀಡುತ್ತೇವೆ. ಸಾಮೂಹಿಕ ವ್ಯವಸಾಯವನ್ನು ನಾವು ವಿರೋಧಿಸುತ್ತೇವೆ.

ಜೀವನಾವಶ್ಯಕ ವಸ್ತುಗಳ ಮೇಲಿನ ಪರೋಕ್ಷ ತೆರಿಗೆಗಳನ್ನು ಜನಸಂಘವು ವಿರೋಧಿಸುತ್ತದೆ. ಕನಿಷ್ಠ ಆದಾಯ ಮಿತಿಯವರೆಗೂ ಯಾವುದೇ ನೇರ ತೆರಿಗೆಗಳು ಇರಬಾರದು, ಅಂದರೆ, ತಿಂಗಳಿಗೆ ನೂರು ರೂಪಾಯಿಗಳು. ಮಾರಾಟ ತೆರಿಗೆ ಕಚ್ಚಾ ಮತ್ತು ಮಧ್ಯಮ ದರ್ಜೆಯ ಬಟ್ಟೆಯ ಮೇಲಿನ ಎಕ್ಸೈಸ್ ಸುಂಕ, ಮತ್ತು ಪಂಚಾಯತ್ ತೆರಿಗೆಗಳ ರದ್ಧತಿಯನ್ನು ನಾವು ಸಮರ್ಥಿಸುತ್ತೇವೆ.

ಸರ್ಕಾರಿ ವೆಚ್ಚದಲ್ಲಿ ಉಳಿತಾಯ, ತೆರಿಗೆಯ ನಿಯಮಗಳಿಂದ ತಪ್ಪಿಸಿಕೊಳ್ಳುವಂತಹ ಎಲ್ಲ ದಾರಿಗಳನ್ನು ಮುಚ್ಚುವುದರಿಂದ ತೆರಿಗೆಯ ಆದಾಯವನ್ನು ಇನ್ನೂ ಹೆಚ್ಚು ಮಾಡಲು ಸಾಧ್ಯವಾಗುವ, ಆಸ್ತಿಯುಳ್ಳ ಶ್ರೀಮಂತ ವರ್ಗದವರು ತೆರಿಗೆ ತಪ್ಪಿಸಿದಲ್ಲಿ ಮತ್ತಷ್ಟು ಹೆಚ್ಚು ತೆರಿಗೆ ಹಾಕುವುದನ್ನು ಸಾಮಾನ್ಯವಾಗಿ ಕಾಲ್‌ಡಾರ್ ವರದಿಗೆ ಅನುಸಾರವಾಗಿ ಶಿಫಾರಸ್ಸು ಮಾಡಲಾಗಿದೆ. ಎರಡು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಆದಾಯದ, ಕಡ್ಡಾಯ ಸಾಲಗಳು, ಹೂಡಿಕೆಗಳು, ನಮ್ಮ ಎಲ್ಲ ಅಭಿವೃದ್ಧಿ ಯೋಜನೆಗಳಿಗೂ ಸಾಕಷ್ಟು ಹಣದ ಭರವಸೆ ನೀಡುತ್ತದೆ ಎಂದು ಅವರು ತಮ್ಮ ಭಾಷಣವನ್ನು ಮುಗಿಸಿದರು.

* * * * *

# ದೀನ್ ದಯಾಳ್ ಅವರಿಗೆ ೫೩,೦೦೦ ರೂಪಾಯಿಗಳ ನಿಧಿಯ ಕೊಡುಗೆ

ವ್ಯಕ್ತಿ ಸ್ವಾತಂತ್ರ್ಯದ ತತ್ತ್ವದ ಮೇಲೆ, ಸ್ವತಂತ್ರಪಕ್ಷ ರಚನೆಯು, ಈ ವರ್ಷಗಳಲ್ಲಿನ ಭಾರತೀಯ ಜನಸಂಘದ ನಿಲುವಿನ ಸಮರ್ಥನೆಯಾಗಿದೆ ಎಂದು ಭಾರತೀಯ ಜನಸಂಘದ ಪ್ರಧಾನಕಾರ್ಯದರ್ಶಿಗಳಾದ ದೀನ್ ದಯಾಳ್ ಉಪಾಧ್ಯಾಯ ಹೇಳಿದರು. ಜೂನ್ ೧೪ ರಂದು ಹೊಸ ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್ ನಲ್ಲಿ, ಅವರಿಗೆ ೫೩,೦೦೦ ರೂಪಾಯಿಗಳ ನಿಧಿಯನ್ನು ಅರ್ಪಿಸಿದ ಸಂದರ್ಭದಲ್ಲಿ ಸೇರಿದ್ದ ಸಾವಿರ ಸಂಖ್ಯೆಯ ಪ್ರಸಿದ್ಧ ಸಭಾಸದಸ್ಯರನ್ನು ಉದ್ದೇಶಿಸಿ ಅವರು ಭಾಷಣ ಮಾಡುತ್ತಿದ್ದರು. ದೆಹಲಿ ರಾಜ್ಯದ ಜನಸಂಘದ ಅಧ್ಯಕ್ಷರಾದ ಪ್ರೊಫೆಸರ್ ಬಾಲರಾಜ್ ಮಧೋಕ್ ಅಧ್ಯಕ್ಷತೆ ವಹಿಸಿದ್ದರು ಮತ್ತು ಸಭಾಸದರ ಉತ್ಸಾಹಪೂರ್ಣ ಕರತಾಡನ ದೊಂದಿಗೆ ನಿಧಿಯನ್ನು ಅರ್ಪಿಸಿದರು. ದೀನ್ ದಯಾಳ್ ಜೀಯವರ ಹೃದಯವೈಶಾಲ್ಯ ಮತ್ತು ಬುದ್ಧಿಮತ್ತೆಯನ್ನು ಅವರು ಉಜ್ವಲವಾಗಿ ಪ್ರಶಂಸಿಸಿದರು. ಕ್ಯಾಪ್ಟನ್ ಕೇಶವಚಂದ್ರ, ಪಂಜಾಬಿನ ಜನಸಂಘದ ಅಧ್ಯಕ್ಷ ಶ್ರೀ ಅಟಲ್ ಬಿಹಾರಿ ವಾಜಪೇಯಿ, ಲೋಕಸಭಾ ಸದಸ್ಯ, ದೆಹಲಿಯ ಹಂಗಾಮಿ ಮೇಯರ್ ಶ್ರೀ ಕೇದಾರ್‌ನಾಥ್ ಸಾಹ್ನಿ, ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ದೆಹಲಿಯ ನಾಗರಿಕರನ್ನು ಮತ್ತು ಜನಸಂಘದ ಕಾರ್ಯಕರ್ತರನ್ನು ಜನಸಂಘಕ್ಕಾಗಿ ತಮ್ಮ ಅತ್ಯುತ್ತಮ ಸೇವೆ ಸಲ್ಲಿಸಿದುದಕ್ಕಾಗಿ, ಶ್ರೀ ದೀನ್ ದಯಾಳ್‌ರು ಅಭಿನಂದಿಸಿದರು. ಸತ್ಯಾಗ್ರಹದಲ್ಲಿ ಭಾಗವಹಿಸುವುದಾಗಲಿ, ಅಥವಾ ಚುನಾವಣೆಗಳಲ್ಲಿ ಹೋರಾಡುವುದಿರಲಿ, ಪ್ರವಾಹಪೀಡಿತರಿಗೆ ಸೇವೆ ಮಾಡುವುದಾಗಲಿ, ಅಥವಾ ದೊಡ್ಡದಾದ ರಾಷ್ಟ್ರೀಯ ಕಾರಣಗಳಿಗಾಗಿ ಪ್ರದರ್ಶನಗಳನ್ನು ನಡೆಸುವುದರಲ್ಲಾಗಲಿ, ನೀವು ಯಾವಾಗಲೂ ಜನತೆಯ ಜೊತೆಯಲ್ಲಿಯೇ ನಿಂತು ಜನಸಂಘದ ಧ್ವಜವನ್ನು ಉನ್ನತಮಟ್ಟದಲ್ಲಿಯೇ ರಕ್ಷಿಸಿದ್ದೀರಿ. ನೀವು ಇನ್ನು ಮುಂದೆಯೂ ಇನ್ನೂ ಹೆಚ್ಚಿನ

---

**ಮೂಲ ಆಕರ : ಆರ್ಗನೈಸರ್, ಜೂನ್ ೨೨, ೧೯೫೯**

ಪ್ರಮಾಣದಲ್ಲಿ ಹೀಗೆಯೇ ನಡೆದುಕೊಳ್ಳುವುದನ್ನು ಮುಂದುವರೆಸುತ್ತೀರಿ ಎಂದು ನಾನು ನಂಬುತ್ತೇನೆ, ಏಕೆಂದರೆ, ಜನಸಂಘವು ತನ್ನ ಶಕ್ತಿ ಮತ್ತು ಪ್ರಾಮುಖ್ಯತೆಯನ್ನು ಗಳಿಸಿದಂತೆಲ್ಲಾ ನಿಮ್ಮಿಂದ ಇನ್ನೂ ಹೆಚ್ಚಿನ ಸೇವೆಗಾಗಿ ಬೇಡುತ್ತದೆ.

ಸಿ. ಆರ್. ಅವರ ಸ್ವತಂತ್ರ ಪಕ್ಷದ ಪೂರ್ವಭಾವಿ ರಚನೆಯ ಬಗೆಗೆ ಉಲ್ಲೇಖಿಸುತ್ತಾ ಶ್ರೀ ದೀನ್ ದಯಾಳ್‌ರು ಹೇಳಿದರು: ಕಾಂಗ್ರೆಸ್‌ನಲ್ಲಿದ್ದ ಹಿಂದಿನ ಅನೇಕ ಉನ್ನತಮಟ್ಟದ ನಾಯಕರು ಹೊಸ ಪಕ್ಷವನ್ನು ಸ್ಥಾಪಿಸಿದ್ದಾರೆ. ಅವರ ಆರ್ಥಿಕ ನೀತಿಯು ಸಾಮಾನ್ಯವಾಗಿ ಜನಸಂಘದ ಆರ್ಥಿಕ ನೀತಿಯನ್ನೇ ಅನುಸರಿಸುವುದನ್ನು ನಾವು ಕಾಣುತ್ತೇವೆ. ಅವರು ಕೂಡಾ, ಸಮಾಜವಾದ, ರಾಷ್ಟ್ರೀಕರಣ ಮತ್ತು ಸಹಕಾರೀಕರಣವನ್ನು ವಿರೋಧಿಸುತ್ತಾರೆ. ಸಹಜವಾಗಿಯೇ ನಾವು ಆರಂಭದಿಂದಲೇ ಆವಡಿಯ ನಿರ್ಣಯವನ್ನು ವಿರೋಧಿಸಿದೆವು. ಸಮಾಜವಾದೀ ಮಾದರಿಯೂ, ಎಲ್ಲ ವಸ್ತುಗಳ ಭರವಸೆ ನೀಡುತ್ತದೆ ಆದರೆ ಅದು ಕಿಸೆಗಳಿಗೆ ಕತ್ತರಿ ಹಾಕುತ್ತದೆಂದು ನಾವು ಕಂಡುಕೊಂಡೆವು. ಹಿರಿಯರು ಮಾತನಾಡಲು ಬಹಳ ದೀರ್ಘ ಸಮಯ ತೆಗೆದುಕೊಂಡರು. ಬಹುಶಃ, ಜೀವನ ಪರ್ಯಂತದ ಅವರ ಕಾಂಗ್ರೆಸ್‌ನ ಜೊತೆಗಿದ್ದ ಸ್ನೇಹ, ಮಮತೆಗಳು ಅವರು ತಮ್ಮ ಮನಸ್ಸುಗಳಲ್ಲಿದ್ದ ಅಭಿಪ್ರಾಯವನ್ನು ಹೊರಗೆ ಹಾಕದಂತೆ ತಡೆದಿರಬಹುದು– ಕೌರವರ ಅತಿ ದುರ್ವರ್ತನೆಗಳ ಬಗೆಗೆ ಮೂಕ ಪ್ರೇಕ್ಷನಾಗಿರಲು ಭೀಷ್ಮನು ತನಗೆ ತಾನು ಪರವಾನಗಿ ಕೊಟ್ಟುಕೊಂಡಿದ್ದಂತೆ, ಆದರೂ ಏನೂ ಮಾಡದೆಯೇ ಇರುವುದಕ್ಕಿಂತಲೂ ತಡವಾಗಿಯಾದರೂ ಮಾಡುವುದು ಉತ್ತಮ.

ಸ್ವಲ್ಪ ಸಮಯ ನಮ್ಮೊಡನೆ ಸಹಾನುಭೂತಿಯಿಂದಿರುವವರೂ ಕೂಡ ನಾವು ಸಮಾಜವಾದೀ ಮೇಳವನ್ನು ಸೇರುವಂತೆ ಒತ್ತಾಯಿಸಿದರು. ಒಂದು ಗುಬ್ಬಚ್ಚಿಯು ಯಾವ ಬದಲಾವಣೆಯನ್ನು ಮಾಡುವುದಿಲ್ಲ ಎಂದು ಹೇಳಿದರು. ಮೇಳಗಾರರ ಅಥವಾ ವಾದ್ಯವೃಂದದವರ ಗುಂಪಿನಲ್ಲಿ ಗಿಳಿಯ ಹಾಡನ್ನು ಕೇಳುವರಾರು ಎಂದು ಪ್ರಶ್ನಿಸಿದರು. ಆದರೆ ನಾವು ನಮ್ಮ ಅಭಿಪ್ರಾಯಕ್ಕೆ ಬದ್ಧರಾಗಿದ್ದೆವು. ಸಂಸ್ಕೃತ ಕವಿಯು ಕೋಗಿಲೆಗೆ ಹೇಳಿದಂತೆ – ಹಾಡುತ್ತಿರು ಕೋಗಿಲೆಯೇ, ಹಾಗಿಲ್ಲದಿದ್ದರೂ ಕಾಕಾ ಎನ್ನುವ ಕಾಗೆಗಳ ಗುಂಪನ್ನು ಮಾತ್ರ ಸೇರಬೇಡ. ಏಕೆಂದರೆ, ಕಾಗೆಗಳಿಂದ ಕೋಗಿಲೆಯನ್ನು ಹೇಗೆ ತಾನೇ ಬೇರೆಯಾಗಿ ಗುರುತಿಸಲು ಸಾಧ್ಯ? ಆದ್ದರಿಂದ ಮುಕ್ತ ಆರ್ಥಿಕ ನೀತಿಯ ನಮ್ಮ ನಿಲುವಿನಲ್ಲಿ ಪಟ್ಟು ಹಿಡಿದೆವು. ಮತ್ತು ಈ ದಿನ ಕಾಂಗ್ರೆಸ್ ಪಕ್ಷದ ಕೆಲವು ಆಧಾರ ಸ್ತಂಭಗಳೆನಿಸಿಕೊಂಡವರೂ ಇದೇ ದೃಷ್ಟಿಕೋನವನ್ನು ತಲುಪಿದ್ದಾರೆ, ನಾವು ಅವರನ್ನು ಅಭಿನಂದಿಸುತ್ತೇವೆ ಮತ್ತು ಅವರನ್ನು ವಿರೋಧ

ಪಕ್ಷದ ಸ್ಥಾನಕ್ಕೆ ಸ್ವಾಗತಿಸುತ್ತೇವೆ. ಉಳಿದಂತೆ ಹೊಸ ಪಕ್ಷವು ಹೇಗೆ ರೂಪು ತಳೆಯುತ್ತದೆ ಎಂಬುದನ್ನು ಕಾದು ನೋಡುತ್ತೇವೆ.

ಶ್ರೀ ದೀನ್ ದಯಾಳರು ಮುಂದುವರೆದು ಹೇಳಿದರು: ನಾವು ವಿರೋಧ ಪಕ್ಷವಾಗಿರುವುದರಿಂದ ಮಾತ್ರವೇ ಕಾಂಗ್ರೆಸ್ಸನ್ನು ವಿರೋಧಿಸುವುದಿಲ್ಲ. ಆದರೆ ನಾವು ಅದರ ಕಾರ್ಯನೀತಿಗಳಿಗೆ ವಿರುದ್ಧವಾಗಿದ್ದೇವೆ. ನೀವು ಒಬ್ಬ ಸಮಾಜವಾದಿಯಾಗದೇ ಇದ್ದಲ್ಲಿ ನೀನೊಬ್ಬ ಬಂಡವಾಳಶಾಹಿಯಾಗಿದ್ದೀರಿ. ನೀವು ಯು.ಎಸ್.ಎ. ಜೊತೆಯಲ್ಲಿಲ್ಲದಿದ್ದರೆ, ನೀವು ಯು.ಎಸ್.ಎಸ್.ಆರ್.ನ ಜೊತೆಗಿದ್ದೀರಿ ಎಂದು ಕೆಲವರು ಹೇಳುತ್ತಾರೆ. ನಾವು ಈ ನಿಲುವನ್ನು ತಿರಸ್ಕರಿಸುತ್ತೇವೆ. ನಾವು ಇದು ಅಥವಾ ಅದು ಎಂಬ ವಿಕಲ್ಪದ ದ್ವಂದ್ವದ ಕೊಂಬುಗಳ ಮೇಲೆ ನಿಲ್ಲುವುದನ್ನು ನಿರಾಕರಿಸುತ್ತೇವೆ. ಬಂಡವಾಳಶಾಹಿಯು ಒಂದು ವಿದೇಶೀ ರೋಗ ಮತ್ತು ಸಮಾಜವಾದವು ಒಂದು ವಿದೇಶೀ ಚಿಕಿತ್ಸೆ. ಇವೆರಡರಲ್ಲಿ ಯಾವುದೂ ನಮ್ಮ ಆರ್ಥಿಕ ಸ್ಥಿತಿಯನ್ನು, ನಮ್ಮ ಜನತೆಯ ಇತಿಹಾಸವನ್ನು ಮತ್ತು ಇವರ ಇಷ್ಟಗಳು ಯಾವುವು ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಚಹಾ ವ್ಯಸನಿಗಳು ಕಾಫಿಯು ಕೆಟ್ಟದ್ದೆಂದು ಆಲೋಚಿಸುತ್ತಾರೆ. ಕಾಫಿಯ ವ್ಯಸನಿಗಳು ಚಹಾ ಕೆಟ್ಟದೆಂದು ಆಲೋಚಿಸುತ್ತಾರೆ. ಅವರಲ್ಲಿ ಯಾರೂ ಮೂರನೆಯ ಪಾನೀಯದ ಸಾಧ್ಯತೆಯನ್ನು ಕಲ್ಪಿಸಿಕೊಳ್ಳುವುದಿಲ್ಲ. ನಾವು ಇವೆರಡನ್ನೂ ವರ್ಜಿಸುತ್ತೇವೆ, ಹಾಗೆ ಹೇಳುವುದಾದರೆ ಹಾಲನ್ನು ಹೆಚ್ಚು ಇಷ್ಟಪಡುತ್ತೇವೆ. ಹಾಗೆಯೇ ನಾವು ಬಂಡವಾಳಶಾಹಿ ಮತ್ತು ಸಮಾಜವಾದ ಎರಡನ್ನೂ ತಿರಸ್ಕರಿಸುತ್ತೇವೆ. ಅವೆರಡೂ ಕೂಡ ಮನುಷ್ಯನನ್ನು ಮಾನವನಿಗಿಂತ ಕೆಳಮಟ್ಟಕ್ಕೆ ಇಳಿಸುತ್ತವೆ. ಆದ್ದರಿಂದ ನಾವು, ವ್ಯಕ್ತಿಯ ಮತ್ತು ಸವಾಜದ ಉತ್ತಮ ಅಭಿವೃದ್ಧಿಗಾಗಿ ಮತ್ತು ಸ್ವಾತಂತ್ರ್ಯದ ಉಳಿವಿಗಾಗಿ ಅರ್ಥವ್ಯವಸ್ಥೆಯ ವಿಕೇಂದ್ರೀಕರಣಕ್ಕಾಗಿ ಒತ್ತಾಯಿಸಿದ್ದೇವೆ.

ಸ್ವರಾಜ್ ಪಕ್ಷವನ್ನು ಪೂರ್ವಾಚಾರಪ್ರಿಯ ಅಥವಾ ಸಂಪ್ರದಾಯ ರಕ್ಷಕ ಪಕ್ಷವೆಂದು ಪರಿಗ್ರಹಿಸಲಾಗಿದೆ. ಸಂಪ್ರದಾಯರಕ್ಷಕ ಎನ್ನುವುದು ಒಳ್ಳೆಯ ಶಬ್ದ. ಅದು ರಾಷ್ಟ್ರಜೀವನದಲ್ಲಿ ಉತ್ತಮವಾಗಿರುವ ಸಂಪ್ರದಾಯದ ಸಂರಕ್ಷಣೆ ಮತ್ತು ಸಂಘಟನೆ ಎರಡನ್ನೂ ಸಮರ್ಥಿಸುತ್ತದೆ. ಆದರೆ ಒಂದು ಆಲೋಚನೆಯು ಮೂಡುತ್ತದೆ: ಸಂಪ್ರದಾಯನಿಷ್ಠವೆಂಬ ಈ ಶಬ್ದವನ್ನು, ಬ್ರಿಟನ್ನಿನ ಕನ್ಸರ್ವೇಟೀವ್ ಪಕ್ಷವು, ಸಮಾಜವಾದೀ ನಿಲುವಿನ ಲೇಬರ್ ಪಕ್ಷಕ್ಕೆ ವಿರೋಧವಾಗಿದೆಯೆಂಬ ಕಾರಣದಿಂದಾಗಿ ತೆಗೆದುಕೊಂಡಿದೆಯೇ? ಬಹುಶಃ ರಾಷ್ಟ್ರೀಯ ಪರಿಕಲ್ಪನೆಯು ಹೆಚ್ಚು ಸಮರ್ಪಕವಾಗಿರುತ್ತದೆ. ನಮ್ಮ ಪರಿಸ್ಥಿತಿಗೆ ಅಪ್ರಸ್ತುತವಾಗುವಂತಹ, ಪಶ್ಚಿಮದ ಸಿದ್ಧ ಮಾದರಿಯ ಪರಿಹಾರಗಳು ವಿಪುಲವಾಗಿವೆ.

ಶ್ರೀ ದೀನ್ ದಯಾಳ್‌ಜೀಯವರು ಜಂಟಿ ಸಹಕಾರೀ ವ್ಯವಸಾಯದ ವಿಷಯದ ಬಗೆಗೆ ಹೀಗೆ ಹೇಳಿದರು: ಇದು ವ್ಯಕ್ತಿ ಸ್ವಾತಂತ್ರ್ಯವನ್ನು ನಾಶಗೊಳಿಸುವಂತಹ ಅಪಾಯಕಾರೀ ಸಲಹೆಯಾಗಿದೆ. ಈಗಾಗಲೇ ಸರ್ಕಾರವು ವಾಣಿಜ್ಯ ಮತ್ತು ಕೈಗಾರಿಕೆಯನ್ನು ಅಧಿಕವಾಗಿ ನಿಯಂತ್ರಿಸುತ್ತಿದೆ. ಇನ್ನು ಈಗ ರೈತಾಪಿ ವರ್ಗವನ್ನೂ ನಿಯಂತ್ರಿಸಿದರೆ, ವ್ಯಕ್ತಿಸ್ವಾತಂತ್ರ್ಯದ ಗತಿ ಏನಾಗಬೇಕು? ಜಂಟಿ ಸಹಕಾರೀ ವ್ಯವಸಾಯವು ರೈತಾಪಿ ಜನರ ವಿರುದ್ಧವಾಗಿರುವ ಷಡ್ಯಂತ್ರ, ಸಂಚು ಎಂದು ನಾನು ಭಾವಿಸುತ್ತೇನೆ. ಚೀನಾದಲ್ಲಿ ಕೂಡ ಮೊದಲು ಅವರು ಸಹಕಾರಿ ಸಂಘಗಳಂತೆಯೇ ಆರಂಭಿಸಿದರು. ನಂತರ ಒಂದು ದಿನ ಸಾಮೂಹಿಕಗಳಾಗಿ ಬದಲಾಯಿಸಲ್ಪಟ್ಟವು.

ನೇರವಾಗಿ ಹೇಳಬೇಕೆಂದರೆ, ಸ್ವಇಚ್ಛಾಪೂರ್ವಕ ಸಹಕಾರೀ ಕೃಷಿ ಕೇತ್ರಗಳ ಬಗೆಗೆ ಪ್ರಧಾನ ಮಂತ್ರಿಯವರ ಭರವಸೆಗೆ ನಾನು ಹೆಚ್ಚು ಮಹತ್ವ ಕೊಡುವುದಿಲ್ಲ. ಸ್ವತಂತ್ರ ಕೃಷಿ ಕ್ಷೇತ್ರಗಳು ಮತ್ತು ಸಹಕಾರೀ ಕೃಷಿಕ್ಷೇತ್ರಗಳ ನಡುವೆ ಸರ್ಕಾರವೇ ಭೇದ ಮಾಡಿ, ಸಹಕಾರೀ ಕೃಷಿ ಕ್ಷೇತ್ರಗಳಿಗೆ, ನೆರವು, ಒತ್ತಾಸೆ, ಪ್ರೋತ್ಸಾಹ ಮತ್ತು ಇತರ ಸೌಲಭ್ಯಗಳನ್ನು ನೀಡುತ್ತದೆಯೋ ಆಗ ಅದು ರಾಜ್ಯದ ಎಲ್ಲ ಸಲಕರಣೆಗಳನ್ನೂ ಅವುಗಳಿಗೇ ಒದಗಿಸುತ್ತದೆ. ಇಂತಹ ಪರಿಸ್ಥಿತಿಯು, ರೈತರು ಸಾಲ ಮತ್ತಿತರ ಸೌಲಭ್ಯಗಳ ಕೊರತೆಯನ್ನು ಅನುಭವಿಸದಿರಬೇಕಾದರೆ, ಅವರು ಇದೇ ಅಧಿಕಾರಿಶಾಹೀ ಮಾರ್ಗವನ್ನೆ ಹಿಡಿಯುವಂತೆ ಅವರನ್ನು ಒತ್ತಾಯಿಸುತ್ತದೆ. ಇಂತಹ ಸಂದರ್ಭಗಳಲ್ಲಿ ರೈತನು ಉಪವಾಸ ಮಾಡುವ ಸ್ವಾತಂತ್ರ್ಯದ ನಿರ್ಬಂಧಕ್ಕೆ ಒಳಗಾಗುತ್ತಾನೆ. ಇದು ನಿರ್ಬಂಧವಲ್ಲದೆ ಮತ್ತೇನು?

ಸಮತಾವಾದಿಗಳು ಜನತೆಯನ್ನು ತಮ್ಮ ಅಡಿಯಾಳುಗಳನ್ನಾಗಿ ಮಾಡಿಕೊಂಡಾಗ ಅದನ್ನು ಅವರ ಮುಕ್ತಿ ಎಂದು (ಬಿಡುಗಡೆ) ಕರೆಯುತ್ತಾರೆ. ಪ್ರಧಾನಮಂತ್ರಿಗಳು ಉಪಯೋಗಿಸುವ 'ಸಹಕಾರ' ಮುಂತಾದ ಸವಿಯಾದ ಶಬ್ದಗಳು ಅದೇ ಮಾದರಿಯನ್ನೇ ಅನುಸರಿಸುವಂತೆ ತೋರುತ್ತದೆ. ರೈತರು ಇದನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ತಮ್ಮ ಜಮೀನಿಗೆ ಸಮೀಪವಾಗುತ್ತಿರುವ ಅಪಾಯದ ಸುದ್ದಿಯು ಕಾಳ್ಗಿಚ್ಚಿನಂತೆ ಹರಡಿದೆ. ತಾವು ಹಿಂದೆ ಎಂದೂ ಯಾವುದೇ ಸಭೆ, ಸಮ್ಮೇಳನಗಳಿಗೆ ಭೇಟಿನೀಡದಿದ್ದುದಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಸಹಕಾರ ಕೃಷಿಯ ವಿರೋಧೀ ಸಭೆಗಳಿಗೆ ಹಾಜರಾಗುತ್ತಿದ್ದಾರೆ. ಗ್ರಾಮಸ್ಥರನ್ನು ಎಚ್ಚರಿಸಲೆಂದು ಹೋಗುವ ನಗರ ಕಾರ್ಯಕರ್ತರಿಗಿಂತಲೂ ಹೆಚ್ಚಾಗಿ ಕೆಲವರು ಇದರಲ್ಲಿರುವ ತೀವ್ರ ತೊಡಕುಗಳನ್ನು ವಿವರಿಸಬಲ್ಲರು. ಸಹಕಾರೀ ಕೃಷಿ ಕ್ಷೇತ್ರಗಳನ್ನು ಬೆಂಬಲಿಸುವವರು ಎಲ್ಲಿಯಾದರೂ ಇರುವುದಾದಲ್ಲಿ ಅವರು ಜಮೀನಿಲ್ಲದವರಾಗಿದ್ದು, ಅವರ ಕಾರ್ಯದರ್ಶಿಗಳಾಗಿಯೋ ಲೆಕ್ಕಿಕರಾಗಿಯೋ ನಿಯುಕ್ತಗೊಳ್ಳುವ ನಿರೀಕ್ಷೆ ಹೊಂದಿರುತ್ತಾರೆ.

ಸರ್ಕಾರವು ತನ್ನ ಈ ಕಾರ್ಯಕ್ರಮವನ್ನು ಮುಂದುವರೆಸಿದ್ದೇ ಆದಲ್ಲಿ ಗ್ರಾಮಗಳಲ್ಲಿ ಅಸ್ತವ್ಯಸ್ತತೆ ಮತ್ತು ಇಡಿಯ ದೇಶದಲ್ಲಿ ಕ್ಷಾಮ ಉಂಟಾಗುವುದರ ಬಗೆಗೆ ಸಂದೇಹವೇ ಇಲ್ಲ. ಮತ್ತು ಇಂತಹ ವಿಪತ್ತನ್ನು ನಾವು ತಡೆಯಬಲ್ಲೆವು, ತಡೆಯುತ್ತೇವೆ ಎಂಬುದರಲ್ಲಿಯೂ ಯಾವ ಸಂದೇಹವೂ ಇಲ್ಲ. ಸಹಕಾರಿಕೃಷಿ ಕ್ಷೇತ್ರಗಳನ್ನು ವಿರೋಧಿಸುವ ಮೂಲಕ ನಾವು ದೇಶವನ್ನು ಹಸಿವಿನಿಂದ, ಆಹಾರದ ಕೊರತೆಯಿಂದ ರಕ್ಷಿಸುತ್ತಿದ್ದೇವೆ, ಹಾಗಿಲ್ಲದಿದ್ದರೆ ಅದೇ ದೇಶದ ಪಾಡಾಗುತ್ತಿತ್ತು.

ಶ್ರೀ ದೀನ್ ದಯಾಳರು ತಮ್ಮ ಮಾತುಗಳನ್ನು ಮುಂದುವರೆಸಿದರು: ಇತರ ಪಕ್ಷಗಳು ತನ್ನ ಜೊತೆ ಸಹಕರಿಸಬೇಕೆಂದು ಕಾಂಗ್ರೆಸ್ ಬಯಸುತ್ತದೆ, ಆದರೆ ಅದು ಯೋಜನೆಗಳನ್ನು, ಕಾರ್ಯನೀತಿಗಳನ್ನು ರೂಪಿಸುವಾಗ ತನ್ನ ಮನಸ್ಸಿಗೆ ಬಂದಂತೆ ಮಾಡುತ್ತದೆ. ಆದರೆ ಆ ಯೋಜನೆ ಮತ್ತು ಕಾರ್ಯನೀತಿಗಳನ್ನು ಇತರರು ಕಾರ್ಯಗತಗೊಳಿಸಲಿ ಎಂದು ನಿರೀಕ್ಷಿಸುತ್ತದೆ. ಇದು ನಿಜವಾಗಿಯೂ ಸಹಕಾರವನ್ನು ಬಯಸುವ ನವೀನ ಮತ್ತು ಆಶ್ಚರ್ಯಕರ ರೀತಿಯಾಗಿದೆ. ಮತ್ತೆ ಹೇಳುವುದಾದರೆ ಸಹಕಾರ ಎಂಬ ಪದದ ಅಸಂಸ್ಕೃತ ದುರುಪಯೋಗವಾಗಿದೆ.

ಅವರು ಸಾರ್ವಜನಿಕ ಕ್ಷೇತ್ರವನ್ನು ವಿಸ್ತರಿಸುತ್ತಲೇ ಹೋಗುತ್ತಾರೆ. ಜನಸಂಘವು ಸಾರ್ವಜನಿಕ ಕ್ಷೇತ್ರವನ್ನು ವಿರೋಧಿಸುತ್ತದೆ ಎಂದು ಇದರ ಅರ್ಥವಲ್ಲ. ಭಾರಿಯಾದ, ಮುಖ್ಯ ಮತ್ತು ರಕ್ಷಣಾ ವಿಭಾಗದ ಕೈಗಾರಿಕೆಗಳನ್ನು ರಾಜ್ಯವೇ ನಿರ್ವಹಿಸಬೇಕೆಂದು ನಾವು ಬಯಸುತ್ತೇವೆ. ಆದರೆ ಸರ್ಕಾರವು, ರಸ್ತೆ ಸಾರಿಗೆ, ಜೀವವಿಮೆ, ಪಠ್ಯಪುಸ್ತಕಗಳು, ಹೊಟೆಲ್‌ಗಳು ಮತ್ತು ಇಂತಹ ಎಲ್ಲದರಲ್ಲಿಯೂ ತನ್ನ ಮೂಗು ತೂರಿಸಿಕೊಂಡು ಬರುತ್ತದೆ– ಎಲ್ಲದರಲ್ಲಿಯೂ ಕೈಯಾಡಿಸಲು ಆರಂಭಿಸುತ್ತದೆ. ಆದರೆ ಇವುಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸರ್ಕಾರದ ಬಳಿ ಸಂಪನ್ಮೂಲವಾಗಲೀ, ತರಬೇತಿ ಪಡೆದ ನುರಿತ ತಂಡಗಳಾಗಲೀ ಇಲ್ಲ. ಆದರೆ, ಇದು, ಹೆಚ್ಚು, ಹೆಚ್ಚಾಗಿ ನುಂಗುವುದರಿಂದ ಅದನ್ನು ತಡೆಯುವುದಿಲ್ಲ. ಇದರ ಪರಿಣಾಮವೆಂದರೆ, ಗುಲ್ಲುಗಳ ಅಪನಿಂದೆಗಳ ಹೆಚ್ಚಳ, ದೇಶವನ್ನು ಆಳಲು ತರಬೇತಿ ಪಡೆದ ICS ವ್ಯಕ್ತಿಗಳನ್ನು ವಾಣಿಜ್ಯ ಮತ್ತು ಕೈಗಾರಿಕೆಯನ್ನು ನಿರ್ವಹಿಸುವಂತೆ ಕೇಳಲಾಗುತ್ತದೆ. ಅವರು ತಪ್ಪುಗಳನ್ನು ಮಾಡಿದಾಗ ಅವರನ್ನು ತ್ರಾಸದಾಯಕವಾದ ತನಿಖೆಗೆ ಗುರಿಮಾಡಲಾಗುತ್ತದೆ, ಮತ್ತು ತನಿಖಾವರದಿಗಳು ಸರ್ಕಾರದ ಮರ್ಜಿ ಅಥವಾ ಅಭಿರುಚಿಗೆ ಸರಿಯಿಲ್ಲದಿದ್ದಾಗ, ತನಿಖೆ ನಡೆಸಿದ ನ್ಯಾಯಾಧೀಶರನ್ನು ಬುದ್ಧಿಮತ್ತೆಯ ಕೊರತೆಯಿರುವವರು ಎಂದು ವರ್ಣಿಸಲಾಗುತ್ತದೆ ಹಾಗೂ ಅವರ ವರದಿಗಳನ್ನು ಆತಂಕಕಾರಿ, ಮಾರಕವಾದವು ಎಂದೆಲ್ಲಾ ಹೇಳಿ ಬಹಿರಂಗವಾಗಿ ದೂಷಿಸಲಾಗುತ್ತದೆ. ಆದರೆ, ಹೀಗಿದ್ದರೂ ಕೂಡ ಸರ್ಕಾರವು ಅಧಿಕಾರೀ ಮತ್ತು ಪಕ್ಷಾಭಿಮಾನಿ ಒತ್ತಡಗಳಿಗೆ ಅಧೀನರನ್ನಾಗಿಸುವ ಉದ್ದೇಶದಿಂದ ಸರ್ಕಾರವು, ಕೈಗಾರಿಕೆ ಮತ್ತು ವಾಣಿಜ್ಯದ ಮೇಲೆ ತನ್ನ ನಿಯಂತ್ರಣವನ್ನು ವಿಸ್ತರಿಸುತ್ತಲೇ ಇರುತ್ತದೆ. ಇದು ನನಗೆ ರೋಮಿನ

ಚಕ್ರವರ್ತಿಯೊಬ್ಬನನ್ನು ನೆನಪಿಸುತ್ತದೆ. ಹೆಚ್ಚು ಹೆಚ್ಚಾಗಿ ಆಹಾರ ಭುಜಿಸುವ ಸಂತೋಷವನ್ನು ಪಡೆಯಬೇಕೆಂಬ ಉದ್ದೇಶದಿಂದ, ಹೊಟ್ಟೆತುಂಬಾ ತಿಂದು, ಅದನ್ನು ವಾಂತಿಮಾಡಿಕೊಂಡು, ಮತ್ತೆ ತಿನ್ನಲು ತೊಡಗುತ್ತಿದ್ದನಂತೆ!

* * * * *

# ರಾಜಸ್ಥಾನ ಭಾರತೀಯ ಜನಸಂಘದ ಬಿಕನೇರ್ ಅಧಿವೇಶನ

ರಾಜಸ್ಥಾನ ಜನಸಂಘದ ಏಳನೆಯ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸುತ್ತಾ, ಭಾರತೀಯ ಜನಸಂಘದ ಮಹಾಕಾರ್ಯದರ್ಶಿಗಳಾದ ಶ್ರೀ ದೀನ್ ದಯಾಳ್ ಉಪಾಧ್ಯಾಯರು ಹೀಗೆ ಹೇಳಿದರು: ಸರ್ವಾಧಿಕಾರೀ ಪ್ರಭುತ್ವ ಮತ್ತು ಬಂಡವಾಳಶಾಹಿಯ ಆಕ್ರಮಣದ ವಿರುದ್ಧ ವ್ಯಕ್ತಿಯ ಘನತೆಯನ್ನು ಉಳಿಸಲು ಮತ್ತು ಸಂರಕ್ಷಿಸಲು, ಜನಸಂಘವು ಐತಿಹಾಸಿಕ ಪಾತ್ರವಹಿಸಬೇಕಾಗಿತ್ತು ಏಕೆಂದರೆ, ಇದೊಂದೇ ಅಂತಹ ಸಂಘಟನೆಯಾಗಿತ್ತು. ಭಾರತ ಸರ್ಕಾರವು ಸಮಾಜವಾದದ ಹೆಸರಿನಡಿಯಲ್ಲಿ, ಬಂಡವಾಳಶಾಹಿಯ ಕೆಡಕುಗಳಿಂದ ಆಶ್ರಯ ಪಡೆಯುತ್ತದೆ, ಮತ್ತು ಚಿಕಿತ್ಸೆಯು ರೋಗಕ್ಕಿಂತಲೂ ಕೆಟ್ಟದ್ದಾಗಿದೆಯೆಂಬುದನ್ನು ಮರೆಯುತ್ತದೆ. ಜನಸಂಘವು ಇವೆರಡನ್ನೂ ತ್ಯಜಿಸುತ್ತದೆ. ಯಾವುದಾದರೂ ಒಂದೇ ಒಂದು ಸಂಸ್ಥೆಯಾಗಲೀ, ವ್ಯಕ್ತಿಗಳ ಅಂಗಸಂಸ್ಥೆಯಾಗಲೀ ಒಂದಕ್ಕಿಂತಲೂ ಹೆಚ್ಚು ವಲಯದಲ್ಲಿ ವ್ಯಕ್ತಿಗಳು ಕೇಂದ್ರೀಕೃತ ಅಧಿಕಾರವನ್ನು ಅನುಭವಿಸಬಾರದು ಎಂಬ ವಿಕೇಂದ್ರೀಕರಣಗೊಂಡ ಸಾಮಾಜಿಕ ವ್ಯವಸ್ಥೆಯನ್ನು ಜನಸಂಘ ನಂಬುತ್ತದೆ.

ದೇಶದ ರಾಜಕೀಯ ಪರಿಸ್ಥಿತಿಯ ಬಗೆಗೆ ವಿಶ್ಲೇಷಿಸುತ್ತಾ ದೀನ್ ದಯಾಳ್‌ರು ರಾಷ್ಟ್ರದ ಭದ್ರತೆಯ ವಿಷಯದಲ್ಲಿ ಪ್ರಸಕ್ತ ಸರ್ಕಾರದ ನಿರಾತಂಕ, ನೆಮ್ಮದಿಗಳ ಬಗೆಗೆ ಆಕ್ಷೇಪಿಸಿದರು: ನಮ್ಮ ಗಡಿಗಳಲ್ಲಿ ಯಾವುದೇ ಪ್ರಚೋದನೆಯಿಲ್ಲದೆ, ಪಾಕಿಸ್ತಾನವು ಹಗಲು ರಾತ್ರಿಗಳಲ್ಲಿ ಬಂದೂಕಿನ ಹೊಡೆದಾಟ ಮಾರ್ಗಕ್ಕಿಳಿಯುತ್ತದೆಂದರೆ, ಅದು ಭಾರತದ ಶೂರಜನರಿಗೆ ಅಪಮಾನ, ನಾವೆಲ್ಲರೂ ಶಾಂತಿಯನ್ನು ಬಯಸುತ್ತೇವೆ. ಆದರೆ ಎಲ್ಲ ಬೆಲೆಯನ್ನು ಕೊಟ್ಟುಬಿಟ್ಟು ಪಡೆದ ಶಾಂತಿಯನ್ನಲ್ಲ. ನಮ್ಮ ರಾಷ್ಟ್ರೀಯ ಗೌರವ ಮತ್ತು ಸಮಗ್ರತೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗದಿದ್ದರೆ, ನಮ್ಮ ಸೇನೆಯನ್ನು ವಿರಚನಗೊಳಿಸಿ ಸೈನಿಕರನ್ನು ನಿವೃತ್ತಿಗೊಳಿಸುವುದು ಉತ್ತಮವಾಗುತ್ತದೆ. ಈ ದಾಳಿಗಳನ್ನು ನಿಲ್ಲಿಸುವಂತೆ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡೋಣ, ಹಾಗೆ ನಿಲ್ಲಿಸದಿದ್ದಲ್ಲಿ, ಪ್ರತೀಕಾರದ ಕ್ರಮಗಳನ್ನು ತೆಗೆದುಕೊಳ್ಳಲು ನಾವು ಸ್ವತಂತ್ರರಾಗಿದ್ದೇವೆ.

---

**ಮೂಲ ಆಕರ : ಆರ್ಗನೈಸರ್, ಮಾರ್ಚ್ ೦೨, ೧೯೫೮**

ಮತ್ತು ಬೆರುಬರಿ ಒಕ್ಕೂಟವನ್ನು ಪಾಕಿಸ್ತಾನಕ್ಕೆ ವರ್ಗಾಯಿಸಿದುದನ್ನು ಅವರು ವಿರೋಧಿಸಿದರು. ಅವರು ಹೇಳಿದರು: ಈ ವಗಾವಣೆಯು ಸೈದ್ಧಾಂತಿಕವಾಗಿ ಮತ್ತು ವ್ಯಾವಹಾರಿಕವಾಗಿಯೂ ತಪ್ಪಾಗಿದೆ. ಜನಸಂಘವು ಈ ವರ್ಗಾವಣೆಯನ್ನು ಅನುಮತಿಸುವುದಿಲ್ಲ.

**ಅಧ್ಯಕ್ಷ ಭಾಷಣ**

ದೇಶದಲ್ಲೆಲ್ಲಾ, ಸಮಾಜವಾದದ ಹೆಸರಿನಲ್ಲಿ ಸರ್ವಾಧಿಕಾರವು ಹರಡುತ್ತಿದೆ ಎಂದು, ಅಧ್ಯಕ್ಷತೆ ವಹಿಸಿದ್ದ ಶ್ರೀ ವೈದ್ಯ ರವಿದತ್ತ ಹೇಳಿದರು. ಕಾಂಗ್ರೆಸ್‌ನ ನಾಗಪುರದ ನಿರ್ಣಯಗಳು ಕೇವಲ ರಾಜಕೀಯ ಮತ್ತು ಆರ್ಥಿಕ ಗೊಂದಲಗಳನ್ನು ಉಂಟುಮಾಡುತ್ತವೆ ಎಂದು ಆತಂಕ ವ್ಯಕ್ತಪಡಿಸಿದರು. ತಕಾವಿ ನಿಯಮಗಳು ಕ್ರಮವಿಲ್ಲದೆ ನಿರಂಕುಶವಾಗಿದ್ದವೆಂದೂ, ನೀರಿನ ಕಂದಾಯದ ಬೆಲೆಗಳು ಸ್ಥಳದಿಂದ ಸ್ಥಳಕ್ಕೆ ಬೇರೆ ಬೇರೆಯಾಗಿದ್ದವೆಂದೂ, ನೀರಾವರಿ ಸೌಲಭ್ಯಗಳು ಕ್ರಮವಾಗಿರಲಿಲ್ಲ ವೆಂದೂ ಅವರು ಹೇಳಿದರು. ಸರ್ಕಾರವು ತನಗೆ ಇಷ್ಟವಾದ ಸಂಸ್ಥೆಗಳಿಗೆ ಸಾಲ ನೀಡುತ್ತಿತ್ತು. ಹಾಗೆ ಸಾಲ ನೀಡಿದ ಕೋಟಿ ಕೋಟಿಯಷ್ಟು ಹಣ ಎಂದಿಗೂ ಮರಳಿ ಪಡೆಯಲಾಗುವುದಿಲ್ಲ. ಇಂತಹ ಅಗಾಧವಾದ ಗುಲ್ಲುಗಳ ಬಗೆಗೆ ಎಲ್ಲ ಪಕ್ಷದವರಿಂದ ತನಿಖೆಯಾಗಬೇಕೆಂದು ಶ್ರೀ ವೈದ್ಯ ಒತ್ತಾಯ ಮಾಡಿದರು. ಪಾಲಿನಾಂಡ್‌ನಲ್ಲಿನ ರಾಜಸ್ಥಾನದ ಕಲ್ಲಿದ್ದಲು ಗಣಿಗಳು, ಜಾಮ್‌ಸಾಗರದ ಜಿಪ್‌ಸಮ್ ಗಣಿಗಳು ಅಧಿಕಾರಿಗಳ ಸ್ಪಷ್ಟವಾದ ದುರಾಡಳಿತದಿಂದಾಗಿ ನಷ್ಟವನ್ನು ಅನುಭವಿಸುತ್ತಿದ್ದವು.

ಕೇರಳದಲ್ಲಿ ರಾಷ್ಟ್ರೀಕೃತ ಪಠ್ಯಪುಸ್ತಕಗಳನ್ನು ಕಾಂಗ್ರೆಸ್ ವಿರೋಧಿಸಿತು, ಆದರೆ, ಬೇರೆ ಕಡೆಯಲ್ಲಿ ಅದನ್ನು ತಾನೇ ಆರಂಭಿಸಿತು. ಈ ಪುಸ್ತಕಗಳು ಕೆಟ್ಟದಾಗಿ ತಯಾರಾಗಿದ್ದುದಲ್ಲದೇ ಅವು ನಾಸ್ತಿಕತೆಯ ಭಾವನೆಯನ್ನು ಬೆಳೆಸಿದವು ಎಂದರು. ಪ್ರತಿಭೆಯನ್ನು ಆಕರ್ಷಿಸಲು ರಾಜಸ್ಥಾನದ ಶಿಕ್ಷಣ ಸೇವೆಯನ್ನು ಸ್ಥಾಪಿಸುವಂತೆ ಅವರು ಕರೆ ನೀಡಿದರು. ರಾಜರ ಆಡಳಿತದಲ್ಲಿ ಹಿಂದಿಭಾಷೆಯನ್ನು ಉಪಯೋಗಿಸುತ್ತಿದ್ದ ರಾಜಸ್ಥಾನವು ಈಗ ಆಡಳಿತದಲ್ಲಿ ಇಂಗ್ಲಿಷ್‌ನ್ನು ಏಕೆ ಉಪಯೋಗಿಸಬೇಕೆಂದು ಅವರು ಆಶ್ಚರ್ಯಪಟ್ಟರು. ಧಾರ್ಮಿಕ ದತ್ತಿಯ ಆಸ್ತಿಗಳಲ್ಲಿ ಸರ್ಕಾರದ ಹಸ್ತಕ್ಷೇಪದ ಬಗೆಗೆ ಅವರು ಟೀಕಿಸಿದರು. ಕಡೆಯಲ್ಲಿ, ಸರ್ಕಾರಿ ಅಧಿಕಾರಿಗಳ ಅಲ್ಪವೇತನವನ್ನು ಮರುಪರಿಶೀಲಿಸಲು ವೇತನ ಆಯೋಗ ರಚಿಸುವಂತೆ ಕರೆ ನೀಡಿದರು.

**ಪುರಸಭಾ ಮತ್ತು ಪಂಚಾಯತಿ ಸದಸ್ಯರ ಸಮ್ಮೇಳನ**

ಇದೇ ಸಂದರ್ಭದಲ್ಲಿ, ಎರಡು ಬೇರೆ ಬೇರೆ ಸಮ್ಮೇಳನಗಳು ಕೂಡ ನಡೆದವು. ಒಂದು ಪುರಸಭಾ ಸದಸ್ಯರದು, ಮತ್ತೊಂದು ಜನಸಂಘಕ್ಕೆ ಸೇರಿದ ಗ್ರಾಮ ಪಂಚರದು. ಪುರಸಭಾಸದಸ್ಯರ ಸಮ್ಮೇಳನಕ್ಕೆ ದೆಹಲಿಯ ಕಾರ್ಪೊರೇಷನ್‌ನ ಜನಸಂಘದ ನಾಯಕರಾದ ಶ್ರೀ ಕಿದಾರನಾಥ್ ಸಾಹ್ನಿಯವರು ಅಧ್ಯಕ್ಷರಾಗಿದ್ದರು ಮತ್ತು ಗ್ರಾಮಪಂಚರ ಸಭೆಯು ಎಂ.ಎಲ್.ಎ. ಭೈರೋನ್ ಸಿಂಗ್‌ರ ಅಧ್ಯಕ್ಷತೆಯಲ್ಲಿ ನಡೆಯಿತು.

ಪಂಚಾಯತ್ ಸಮ್ಮೇಳನದ ವರದಿಗಳು, ಭಾಷಣಗಳಿಂದ ತಿಳಿದು ಬಂದ ಪ್ರಧಾನವಾದ ಅಭಿಪ್ರಾಯವೆಂದರೆ, ಇತ್ತೀಚಿನ ತಿಂಗಳುಗಳಲ್ಲಿ ರಾಜಸ್ಥಾನದ ಜನಸಂಘವು ಗ್ರಾಮಾಂತರ ಪ್ರದೇಶಗಳ್ಲಿ ಗಮನಾರ್ಹವಾದ ಪ್ರವೇಶ ದೊರಕಿಸಿ ಕೊಂಡಿದೆ ಎನ್ನುವ ಅಂಶ. ದೇಗಾನಾ ಮಂಡಲ ಜನಸಂಘದ (ಜೋಧಪುರ ವಿಭಾಗ) ಕಾರ್ಯದರ್ಶಿಗಳಾದ ಶ್ರೀ ಗಂಗಾಪ್ರಸಾದರು ಪ್ರಸ್ತುತಪಡಿಸಿದ ವರದಿಯ ಮೂಲಕ, ಗ್ರಾಮೀಣ ಜನತೆಯಲ್ಲಿ ಪಕ್ಷದ ಜನಪ್ರಿಯತೆಯು ಬೆಳೆಯುತ್ತಿರುವುದರ ಬಗೆಗೆ ಮಹತ್ತ್ವಪೂರ್ಣ ನಿದರ್ಶನವನ್ನು ಒದಗಿಸುತ್ತದೆ. ದೇಗಾನಾ ತೆಹಸಿಲ್‌ನಲ್ಲಿ ಇತ್ತೀಚೆಗೆ ಚುನಾಯಿಸಲ್ಪಟ್ಟ ೨೩ ಪಂಚಾಯತ್‌ಗಳಲ್ಲಿ ಜನಸಂಘವು ಹದಿನಾಲ್ಕರಲ್ಲಿ ಸಂಪೂರ್ಣ ಬಹುಮತ ಪಡೆದಿತ್ತು ಮತ್ತು ಅದರ ಸರಪಂಚರು ಮತ್ತು ಉಪಸರಪಂಚರು ಸುಮಾರು ಅಷ್ಟೇ ಸಂಖ್ಯೆಯಲ್ಲಿ ಜಯಗಳಿಸಿದ್ದರು.

**ಬಿ.ಎಂ.ಎಸ್.ನ ವಿಜಯ**

ಅಖಿಲ ಭಾರತೀಯ ಮಜ಼ದೂರ ಸಂಘದ ಶಾಖೆಯು, ಇಲ್ಲಿ ಏರುತ್ತಿರುವ ಜೀವನ ವೆಚ್ಚವನ್ನು ದೃಷ್ಟಿಯಲ್ಲಿಟ್ಟುಕೊಂಡು, ಕನಿಷ್ಠ ವೇತನ ಶಾಸನದ ಬಗೆಗೆ ನಿರ್ಧರಿಸಲು, ಕೆಲಸಗಾರರನ್ನು ಪ್ರತಿನಿಧಿಗಳಾಗಿ ಒಳಗೊಂಡಿರುವಂತಹ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಜಾರಿಗೊಳಿಸಿತು.

ಅದರ ಅಂತಿಮ ನಿರ್ಣಯವು ವಿಶ್ವಕರ್ಮ ದಿನವನ್ನು ರಾಷ್ಟ್ರೀಯ ಶ್ರಮದಿನವೆಂದು ಮನ್ನಣೆ ಮಾಡಬೇಕು ಮತ್ತು ಅದನ್ನು ಸಂಬಳಸಹಿತ ರಜೆಯ ದಿನವೆಂದು ಘೋಷಿಸಬೇಕು ಎಂಬುದಾಗಿತ್ತು.

ಫೆಬ್ರವರಿ, ೨೧, ೫೪ (ಮಾಘ ಶುದ್ಧ ತ್ರಯೋದಶಿ)ಯಂದು ರೈಲ್ವೇ ಕಾರ್ಯಾಗಾರದ ಕಾರ್ಮಿಕರಿಗೆ ಸಂಬಳಸಹಿತ ರಜೆಯೆಂದು ಘೋಷಿಸುವಂತೆ, ಬಿಕನೇರ್‌ನಲ್ಲಿ ರೈಲ್ವೇ ಆಡಳಿತವು ಒತ್ತಾಯಕ್ಕೊಳಗಾದಾಗ, ವಿಶ್ವಕರ್ಮದಿನವು ತನ್ನ ಪ್ರಥಮ ವಿಜಯ ಪಡೆಯಿತು.

ಇದಕ್ಕೂ ಮುನ್ನ, ಮಾಘ ಶುದ್ಧ ತ್ರಯೋದಶಿಯಂದು ರಾಜಸ್ಥಾನದಲ್ಲಿ ಆಚರಿಸಲಾಗುವ ವಿಶ್ವಕರ್ಮ ದಿನವನ್ನು ಸರ್ಕಾರೀ ರಜಾದಿನವೆಂದು ಘೋಷಿಸುವಂತೆ ಕಾರ್ಮಿಕರು ಒತ್ತಾಯಮಾಡಿದ್ದರು. ಬಹುಮಂದಿ ಕೆಲಸಗಾರರು ಇದರ ಪರವಾಗಿದ್ದರೆ ಮಾತ್ರ ಇದಕ್ಕೆ ಒಪ್ಪುವುದಾಗಿ ಅಧಿಕಾರಿಗಳು ಉತ್ತರಿಸಿದ್ದರು. ಇದರ ಪರಿಣಾಮವಾಗಿ, ೨೦೦೦ ಕೆಲಸಗಾರರಲ್ಲಿ ೧೭೦೦ ಕೆಲಸಗಾರರು ಸಹಿ ಮಾಡಿದ ಜ್ಞಾಪನಾ ಪತ್ರವನ್ನು ಅಧಿಕಾರಿಗಳಿಗೆ ಅರ್ಪಿಸಿದರು ಮತ್ತು ಅವರ ಬೇಡಿಕೆಯನ್ನು ಒಪ್ಪಲಾಯಿತು.

* * * * *

### ಸಂಪ್ರದಾಯವಾದಿ ಮತ್ತು ತೀವ್ರಗಾಮಿ, ಸಂಪ್ರದಾಯವಾದಿ ಮತ್ತು ಉದಾರವಾದಿ, ಸುಧಾರಣಾವಾದಿ ಮತ್ತು ಕ್ರಾಂತಿಕಾರಿ

## ಪಂಡಿತ ಮಾಳವೀಯರ ಬಗೆಗೆ ದೀನ್ ದಯಾಳ ಉಪಾಧ್ಯಾಯರ ಪ್ರಶಂಸೆ

(ನಮ್ಮ ಪ್ರತಿನಿಧಿಯಿಂದ)

ದೆಹಲಿ, ಡಿಸೆಂಬರ್ ೨೮: ಕಳೆದ ಸಂಜೆ ಏರ್ಪಡಿಸಿದ್ದ ಕಾರ್ಯಕ್ರಮವೊಂದರಲ್ಲಿ ಪಂಡಿತ ಮದನ ಮೋಹನ ಮಾಳವೀಯರನ್ನು ಉಜ್ವಲವಾಗಿ ಪ್ರಶಂಸಿಸುತ್ತಾ, ಭಾರತೀಯ ಜನಸಂಘದ ಪ್ರಧಾನಕಾರ್ಯದರ್ಶಿಗಳಾದ, ಪಂಡಿತ ದೀನ್ ದಯಾಳ್ ಉಪಾಧ್ಯಾಯರು ಹೀಗೆ ಹೇಳಿದರು: ಪಂಡಿತ ಮದನ ಮೋಹನ ಮಾಳವೀಯ ಕೇವಲ ಸ್ವಾತಂತ್ರ್ಯ ಹೋರಾಟಗಾರರು ಮಾತ್ರವಾಗಿರಲಿಲ್ಲ ಅವರು ಸಮಾಜದ ಉದ್ಧಾರಕ್ಕೆ, ಏಳಿಗೆಗೆ ಶ್ರಮಿಸುವ ರಚನಾತ್ಮಕ ಕಾರ್ಯಕರ್ತರು ಕೂಡಾ ಆಗಿದ್ದರು.

ಶ್ರೀ ಉಪಾಧ್ಯಾಯರು ಹೇಳಿದರು: ಗತ ಕಾಲದಿಂದ ಸ್ಫೂರ್ತಿಪಡೆಯುತ್ತಾ, ತಮ್ಮ ಬೇರುಗಳನ್ನು ದೃಢವಾಗಿ ನೆಲದಲ್ಲಿ ಆಧಾರಗೊಳಿಸುತ್ತಾ, ಶ್ರೀ ಮಾಳವೀಯರು ಯಾವಾಗಲೂ ಪ್ರಗತಿಪಥದಲ್ಲಿ ಸಾಗುತ್ತಾ, ಅತ್ಯುತ್ತಮ ಭವಿಷ್ಯಕ್ಕಾಗಿ ಕಾರ್ಯ ನಿರ್ವಹಿಸಿದರು. ಅವರಲ್ಲಿ ಸಂಪ್ರದಾಯವಾದಿ ಮತ್ತು ತೀವ್ರಗಾಮಿ ಪೂರ್ವಾಚಾರಪ್ರಿಯ ಮತ್ತು ಉದಾರವಾದಿ, ಸುಧಾರಣಾವಾದಿ ಮತ್ತು ಕ್ರಾಂತಿಕಾರಿಗಳ ಹಿತಕರ ಮಿಶ್ರಣವನ್ನು ದೇಶ ಅವರಲ್ಲಿ ಕಂಡಿತು. ಅವರು ಹಿಂದೂ ಆಗಿದ್ದರು ಮತ್ತು ಆ ಬಗೆಗೆ ಹೆಮ್ಮೆ ತಳೆದಿದ್ದರು. ೧೯೪೬ರ ನೌಕೆಲಿ ದಂಗೆಗಳ ಸಮಯದಲ್ಲಿ, ಹುಚ್ಚೆದ್ದಿದ್ದ ಜನರಿಗೆ ಅವರ ಮೃತ್ಯುಶಯ್ಯೆಯ ಮನವಿಯು, ಕಾಂಗ್ರೆಸ್‌ನ್ನು ಕಾರ್ಯನೀತಿಯನ್ನು ಮರುಪರಿಶೀಲಿಸಬೇಕೆಂದು ಅವರು ಅದೆಷ್ಟು ತೀವ್ರವಾಗಿ ಇಚ್ಛಿಸಿದ್ದರೆನ್ನುವುದನ್ನು ಅನಾವರಣಗೊಳಿಸುತ್ತದೆ.

ಪಂಡಿತ ಮಾಳವೀಯರು ಕೇವಲ ಭ್ರಾಮಕ ಕನಸುಗಾರರಾಗಿರಲಿಲ್ಲ, ಆದರೆ ಒಬ್ಬ ಧರ್ಮ ಪ್ರಚಾರಕನ ಭಾವೋದ್ದೀಪಿತ ಉತ್ಸಾಹ ಮತ್ತು ವ್ಯಾವಹಾರಿಕ ಒಳನೋಟ ಚುರುಕುಬುದ್ಧಿಗಳನ್ನು ಹೊಂದಿದವರಾಗಿದ್ದರು. ಇದು ಅವರ ಕಾಲದ

---

**ಮೂಲ ಆಕರ : (ಸಮಾಚಾರ), ಜನವರಿ ೦೧, ೧೯೬೭**

ಆದರ್ಶವಾದಿಗಳಲ್ಲಿ ಅತ್ಯಂತ ಅಪರೂಪವಾಗಿತ್ತು. ತಮ್ಮ ಕಾಣ್ಕೆಗಳನ್ನು ವಾಸ್ತವತೆಗೆ ಮಾರ್ಪಡಿಸಲು ಅವರು ಸತತವಾಗಿ ಕಾರ್ಯ ಮಾಡಿದರು. ಬನಾರಸ್ ಹಿಂದೂ ಮಹಾವಿಶ್ವವಿದ್ಯಾಲಯವು ಅವರ ಜೀವಿತ ಕಾಲದ ಕೆಲಸದ ಸಾಕಾರರೂಪವಾಗಿದೆ.

ನಮ್ಮ ರಾಷ್ಟ್ರೀಯತೆಯ ಆಧಾರವೂ, ಮೂಲ ಉಗಮವೂ ಆದ ಹಿಂದೂ ಧರ್ಮದ ನಿಜವಾದ ಸ್ವಭಾವ, ಲಕ್ಷಣಗಳನ್ನು ತಿಳಿಯದ ಕೆಲವರು ಇಂದು ಈ ವಿಶ್ವವಿದ್ಯಾಲಯದ ನಾಮಕರಣವನ್ನು– ಪರಿಭಾಷೆಯನ್ನು– ಬದಲಾಯಿಸುವಂತೆ ಒತ್ತಾಯಿಸುತ್ತಿದ್ದಾರೆ. ಇದು ಮಾಳವೀಯ ಜೀಯವರು ನಂಬಿ, ಸಮರ್ಥಿಸಿದ್ದ ಎಲ್ಲದರ ನಿರಾಕರಣೆಗೆ ಸಮವಾಗುತ್ತದೆ ಎಂದು ದೀನ್ ದಯಾಳ್ ಉಪಾಧ್ಯಾಯ ಅಭಿಪ್ರಾಯಪಟ್ಟರು.

* * * * *

# ಇದು ಯೋಜಿತ ಪಿತೂರಿ

**ಚಿತಾವಣೆಯು ತೀವ್ರತರವಾಗಿದ್ದರೂ ಶಾಂತಿಯುತವಾಗಿ ನಡೆದುಕೊಳ್ಳುವಂತೆ ಭಾರತೀಯ ಜನಸಂಘದ ಬೆಂಬಲಿಗರಿಗೆ ದೀನ್ ದಯಾಳ್ ಉಪಾಧ್ಯಾಯ ಅವರ ಒತ್ತಾಯ**

ಲಖ್ನೊ, ಫೆಬ್ರವರಿ ೧೧: ನಿನ್ನೆಯ ದಿನ ಇಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಜನಸಂಘದ ಪ್ರಧಾನಕಾರ್ಯದರ್ಶಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರು ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷವು ಜನತೆಯನ್ನು ಬೆದರಿಸುವ ಮತ್ತು ಜನಸಂಘಕ್ಕೆ ಮಸಿ ಬಳಿಯುವ ಇಬ್ಬಗೆಯ ಪಿತೂರಿಯನ್ನು ಹೊಂದಿದೆ ಎಂದು ದೂರಿದರು. ಲೋಮಾ ಮೌ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆಯನ್ನು ನಡೆಸಬೇಕೆಂದು ಅವರು ಒತ್ತಾಯಿಸಿದರು.

ಕಾಂಗ್ರೆಸ್ ಕಾರ್ಯಕರ್ತರ ಹಿಂಸಾಕಾರ್ಯಗಳು ಹೆಚ್ಚಾಗುತ್ತಿರುವುದು ಚುನಾವಣೆಗಳನ್ನು ಶಾಂತಿಯುತವಾಗಿ ನಡೆಸುವುದಕ್ಕೆ ತೀವ್ರವಾದ ಅಪಾಯವನ್ನೊಡ್ಡುತ್ತದೆ ಎಂದು ಶ್ರೀ ಉಪಾಧ್ಯಾಯ ಅವರು ಹೇಳಿದರು. ಬಲರಾಮಪುರ, ರಾಯ್ ಬರೇಲಿ ಮತ್ತು ಪ್ರತಾಪ್‌ಘಡಗಳಲ್ಲಿ ಜನಸಂಘದ ಕಾರ್ಯಕರ್ತರ ಮೇಲೆ ಹಲ್ಲೆ ನಡೆದು, ಅವರು ಗಾಯಗೊಂಡಿದ್ದಾರೆ, ಅವರ ಆಸ್ತಿಪಾಸ್ತಿಗಳನ್ನು ಲೂಟಿಮಾಡಲಾಗಿದೆ. ಲೋಮ ಮೌನಲ್ಲಿ ನಡೆದ ಗೂಂಡಾಗಿರಿಯಲ್ಲಿ ಮೂವರು ಅಸುನೀಗಿದ್ದಾರೆ.

ಲೋಮ ಮೌನಲ್ಲಿನ ವಾಸ್ತವಾಂಶಗಳನ್ನು ತಿರುಚಿರುವ ರೀತಿಯನ್ನು ನೋಡಿದರೆ, ಕಾಂಗ್ರೆಸ್ ಪಕ್ಷವು ಈ ಎಲ್ಲವನ್ನೂ ಪೂರ್ವಯೋಜಿತವಾಗಿಯೇ ಮಾಡುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಜನತೆಯನ್ನು ಭಯಭೀತರನ್ನಾಗಿಸುವುದು ಮತ್ತು ಜನಸಂಘದ ವಿರುದ್ಧ ಅಪಪ್ರಚಾರ ಮಾಡುವುದು – ಇವೆರಡೂ ಅವರ ಯೋಜಿತ ಪಿತೂರಿಯಾಗಿದೆ ಎಂದು ಶ್ರೀ ಉಪಾಧ್ಯಾಯ ಅವರು ನುಡಿದರು.

**ತನಿಖೆಯ ಮುಂದೂಡಿಕೆ**

ಸತ್ಯವನ್ನು ತಿಳಿದುಕೊಳ್ಳಲು, ಮತ್ತು ಹಿತಾಸಕ್ತಿಯುಳ್ಳವರು ವಾಸ್ತವಾಂಶಗಳನ್ನು ತಮ್ಮ ಅನುಕೂಲಕ್ಕೆ ತಕ್ಕಹಾಗೆ ತಿರುಚದಂತೆ ಹಾಗೂ ಸಾಕ್ಷಿಗಳ ಮೇಲೆ ಪ್ರಭಾವ

ಬೀರದಂತೆ ಮಾಡಲು ತಕ್ಷಣವೇ ನ್ಯಾಯಾಂಗ ತನಿಖೆಯನ್ನು ನಡೆಸಬೇಕು ಎಂದು ಜನಸಂಘವು ಒತ್ತಾಯಿಸಿತ್ತು ಎಂದು ಅವರು ಹೇಳಿದರು. ಮ್ಯಾಜಿಸ್ಟ್ರೇಟ್‌ರವರಿಂದ ತನಿಖೆ ನಡೆಸಲು ಲಖ್ನೊ ವಿಭಾಗದ ಆಯುಕ್ತರು ಆಜ್ಞಾಪಿಸಿದ್ದರು.

ಆದರೆ, ಮನವರಿಕೆಮಾಡಲು ಸಮರ್ಥವಲ್ಲದ ಕಾರಣಗಳನ್ನು ನೀಡಿ ತನಿಖೆಯನ್ನು ಮುಂದೂಡಲಾಯಿತು. ಈ ಮಧ್ಯೆ ಕಾಂಗ್ರೆಸ್ ಪ್ರಚಾರಕರು ಇಡೀ ಘಟನೆಗೆ ಬೇರೆ ಬೇರೆ ಬಣ್ಣಗಳನ್ನು ಕಟ್ಟಿ ಅಸತ್ಯವನ್ನೇ ಸತ್ಯವೆಂದು ತಿರುಚಿ ಅದನ್ನು ಜನತೆಯ ಮುಂದಿಡುತ್ತಿದ್ದಾರೆ. ಮುಖ್ಯಮಂತ್ರಿಯವರೇ ಸ್ವತಃ ಸತ್ಯವನ್ನು ವಿಕೃತಗೊಳಿಸುವ ಈ ಕೆಲಸದಲ್ಲಿ ಭಾಗಿಯಾಗಿದ್ದಾರೆಂದು ತೋರುತ್ತಿದೆ. ಇಂತಹ ಕುತಂತ್ರಗಳನ್ನು ನಾನು ಬಲವಾಗಿ ಖಂಡಿಸುತ್ತೇನೆ ಎಂದರು.

ಈ ವಿಧ್ವಂಸಕ ಕೃತ್ಯಗಳನ್ನು ಕೊನೆಗಾಣಿಸಲು ಬೇಕಾದ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳಬೇಕೆಂದು ನಾನು ಕಾಂಗ್ರೆಸ್ ಪಕ್ಷದ ಕೇಂದ್ರ ಮಂಡಲಿಯನ್ನು ಒತ್ತಾಯಿಸುತ್ತೇನೆ. ಮತಪತ್ರಗಳು ಮಾಡಬೇಕಾಗಿರುವ ಕೆಲಸವನ್ನು ಮದ್ದುಗುಂಡುಗಳು ಮಾಡಬಾರದು. ಎಷ್ಟೇ ತೀವ್ರವಾದ ಪ್ರಚೋದನೆಗೂ ಬಲಿಯಾಗದೆ ಶಾಂತವಾಗಿರುವಂತೆ ನಾನು ಜನಸಂಘದ ಕಾರ್ಯಕರ್ತರನ್ನು ಪ್ರಾರ್ಥಿಸುತ್ತೇನೆ. ನಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿದೆ ಮತ್ತು ಎಲ್ಲಾ ಸಂದರ್ಭಗಳಲ್ಲಿಯೂ ಈ ನಂಬಿಕೆಯನ್ನು ಕಾಪಾಡಿಕೊಂಡು ಬರಬೇಕು ಹಾಗೂ ಇತರರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಅವರು ಹೇಳಿದರು.

* * * * *

# ಸಂಭ್ರಮ ಮತ್ತು ಹೊಣೆಗಾರಿಕೆ

**ದೆಹಲಿ ಚುನಾವಣೆಯನ್ನು ಕುರಿತು – ದೀನ್ ದಯಾಳ್ ಉಪಾಧ್ಯಾಯ ಅವರು**

ಜನಸಂಘದ ಪ್ರಧಾನಕಾರ್ಯದರ್ಶಿ ಶ್ರೀ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರು ಮಾರ್ಚ್ ೨೩ರಂದು ನಡೆದ ಹೊಸದಾಗಿ ಚುನಾಯಿತರಾದ ಸಂಘದ ನಗರಸಭಾ ಸದಸ್ಯರ ಸಭೆಯಲ್ಲಿ ಮಾತನಾಡುತ್ತಾ ಜಯದ ಸಡಗರ–ಸಂಭ್ರಮದ ನಡುವೆಯೇ ತಮ್ಮನ್ನು ಚುನಾಯಿಸಿದ ದೆಹಲಿಯ ಜನತೆಯ ಬಗ್ಗೆ ಇರಬೇಕಾದ ಹೊಣೆಗಾರಿಕೆಯತ್ತ ಅವರ ಗಮನವನ್ನು ಸೆಳೆದರು. ಜನತೆಯ ಸೇವೆಯೇ ಜನಸಂಘದ ಧ್ಯೇಯವಾಗಿದೆ. ಈ ಧ್ಯೇಯದ ಬಗ್ಗೆ ಇಟ್ಟಿರುವ ವಿಶ್ವಾಸವನ್ನು ಜನತೆಯು ಜನಸಂಘದ ಅಭ್ಯರ್ಥಿಗಳನ್ನು ಚುನಾಯಿಸುವ ಮೂಲಕ ಸ್ಪಷ್ಟವಾಗಿ ತೋರಿಸಿದ್ದಾರೆ ಎಂದು ಅವರು ಹೇಳಿದರು. **ಈ ಜನಮತವನ್ನು ಜನಸಂಘದ ಚುನಾಯಿತ ಸದಸ್ಯರು ತಮ್ಮ ಪ್ರಜ್ಞೆಯಲ್ಲಿ ಸದಾಕಾಲ ಇಟ್ಟುಕೊಂಡಿರಬೇಕೆಂದು ಅವರು ನುಡಿದರು.** ಜನಪ್ರತಿನಿಧಿಗಳ ಮೇಲಿನ ಜನತೆಯ ವಿಶ್ವಾಸ ಕಳೆದ ಹತ್ತು ವರ್ಷಗಳಲ್ಲಿ ಬಹಳಷ್ಟು ಕಡಿಮೆಯಾಗಿದೆ. ಇದನ್ನು ನಾವು ಮತ್ತೆ ಗಳಿಸಿಕೊಳ್ಳಬೇಕಾಗಿದೆ ಎಂದರು.

ಅವರು ಮುಂದುವರೆದು ಹೇಳಿದರು ಜನಸಂಘವು ಜಯಗಳಿಸಲು ಅದರ ಕಾರ್ಯಕರ್ತರಲ್ಲಿರುವ ಹೊಂದಾಣಿಕೆ ಕಾರ್ಯನೀತಿ, ಶಿಸ್ತು ಮತ್ತು ಸಂಘಟನಾ ಚಾತುರ್ಯ, ಇವುಗಳೇ ಮುಖ್ಯ ಕಾರಣವೆಂಬುದು ಸಾಮಾನ್ಯವಾಗಿ ಎಲ್ಲರ ಭಾವನೆ. ಈ ಶಿಸ್ತು ಹಾಗೂ ಸಹಕಾರದ ಮನೋಭಾವವನ್ನು ನಾವು ಇನ್ನಷ್ಟು ಬಲಪಡಿಸಿದರೆ, ಸಂಘದ ಆದರ್ಶಗಳನ್ನು ಸಾಕಾರಗೊಳಿಸುವಲ್ಲಿ ಸಾಕಷ್ಟು ಸಹಾಯವಾಗುತ್ತದೆ, ಅಲ್ಲದೆ, ಇತರರಿಗೂ ನಾವು ಆರೋಗ್ಯಕರ ಮೇಲ್ಪಂಕ್ತಿಯನ್ನು ಹಾಕಿಕೊಡುವಂತೆ ಮಾಡುತ್ತದೆ.

ಅಂದೇ ಗಾಂಧಿ ಮೈದಾನದಲ್ಲಿ ಮಾತನಾಡುತ್ತಾ ಅವರು ತಮ್ಮ ಪಕ್ಷದ ಅಭ್ಯರ್ಥಿಗಳ ಜಯಕ್ಕೆ ಎಲ್ಲ ವಿಧದಿಂದಲೂ ಸಹಕಾರವನ್ನು ನೀಡಿದ ಮತದಾರರಿಗೆ ಕೃತಜ್ಞತೆಯನ್ನು ಸೂಚಿಸುವುದು ಜನಸಂಘದ ಕರ್ತವ್ಯವಾಗಿದೆಯೆಂದರು. ಜನತೆಯು ತಮ್ಮ ಮೇಲೆ ಹೊರಿಸಿರುವ ಜವಾಬ್ದಾರಿಯ ಅರಿವು ಜನಸಂಘಕ್ಕೆ ಇದೆ ಮತ್ತು ಈ ಹೊಣೆಯನ್ನು ಸಂಪೂರ್ಣವಾಗಿ ನಿರ್ವಹಿಸುವಲ್ಲಿ ಜನಸಂಘವು ಎಲ್ಲಾ ಪ್ರಯತ್ನವನ್ನೂ ಮಾಡುತ್ತದೆ ಎಂದು ಅವರು ಹೇಳಿದರು. ಆದರೆ ಈ ಜವಾಬ್ದಾರಿಯನ್ನು ನಿರ್ವಹಿಸಲು

ಸಂಘಕ್ಕೆ ಜನತೆಯ ಸಹಕಾರದ ಮುಂದುವರಿಕೆಯು ಅತ್ಯಗತ್ಯ ಎಂದು ಅವರು ನುಡಿದರು.

ಯಾವುದೇ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆತಿಲ್ಲ. ಇದು ರಾಷ್ಟ್ರದ ರಾಜಕೀಯದಲ್ಲಿನ ಭವಿಷ್ಯದ ಬೆಳವಣಿಗೆಯ ಮುನ್ಸೂಚನೆಯಾಗಿದೆ. ಇಂಗ್ಲೆಂಡ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿನ ದ್ವಿಪಕ್ಷ ಪ್ರಜಾಪ್ರಭುತ್ವದ ಹಾಗಲ್ಲದೆ, ಭಾರತವು ತನ್ನದೇ ಆದ ಪಕ್ಷಗಳ ಸಮ್ಮಿಶ್ರ ಪದ್ಧತಿಯೊಂದನ್ನು ರೂಪಿಸಿಕೊಳ್ಳ ಬೇಕಾಗುತ್ತದೆ. ಫ್ರಾನ್ಸಿನಲ್ಲಿರುವಂತಹ ಪರಿಸ್ಥಿತಿಯನ್ನು ತಡೆಗಟ್ಟಬೇಕಾದರೆ, ಸ್ವಾರ್ಥಸಾಧನೆಗೋಸ್ಕರ ಪಕ್ಷಾಂತರ ಮಾಡುವುದನ್ನು, ಪಕ್ಷ–ಪಕ್ಷಗಳ ನಡುವೆ ಅನೀತಿಯುತವಾದ ಒಕ್ಕೂಟವನ್ನು ರಚಿಸಿಕೊಳ್ಳುವುದನ್ನು ತಪ್ಪಿಸಬೇಕು. ಆದರೆ, ತಮ್ಮ ವೈಯಕ್ತಿಕ ಅಥವಾ ತಮ್ಮ ಪಕ್ಷದ ಸಿದ್ಧಾಂತ ಹಾಗೂ ಕಾರ್ಯನೀತಿಗಳನ್ನು ತ್ಯಜಿಸದೆ, ಹಾಗೂ ಮುಕ್ತ ಆಲೋಚನೆ ಮತ್ತು ವಾಕ್‌ಸ್ವಾತಂತ್ರ್ಯಕ್ಕೆ ಧಕ್ಕೆಬಾರದ ಹಾಗೆ ಆಡಳಿತವು ಸುಸೂತ್ರವಾಗಿ ನಡೆಯಲು ಸಹಕಾರವನ್ನು ನೀಡಲು ಅವಕಾಶವಿರಬೇಕು. ಎಂದು ಶ್ರೀ ಉಪಾಧ್ಯಾಯ ಅವರು ಹೇಳಿದರು.

* * * * *

# ಮತಗಳಿಕೆಯ ಪ್ರಮಾಣದಲ್ಲಿನ ಇಳಿಕೆಯು ಆಡಳಿತ ಪಕ್ಷದವರ ರಾಜಕೀಯ ಮರುಚಿಂತನೆಗೆ ಪ್ರೇರಣೆಯೇ?

## ಶ್ರೀ ಉಪಾಧ್ಯಾಯ ಅವರಿಂದ ಕಾಂಗ್ರೆಸ್ಸಿಗೆ ಪ್ರಜಾಪ್ರಭುತ್ವದ ಸಂಪ್ರದಾಯಗಳ ಪುನರ್ಮನವರಿಕೆ

ದೆಹಲಿ, ಮಾರ್ಚ್ ೬: ನಿನ್ನೆಯ ರಾತ್ರಿ ಇಲ್ಲಿ ನೆರೆದಿದ್ದ ದೊಡ್ಡ ಸಭೆಯೊಂದರಲ್ಲಿ ಜನಸಂಘದ ಇತ್ತೀಚಿನ ಮಹತ್ವಪೂರ್ಣ ಬೆಳವಣಿಗೆಯು ಅವನತಿಯತ್ತ ಸಾಗುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯ ಶಕ್ತಿಯಾಗಿ ಮತ್ತು ನಿಜವಾದ ರಾಷ್ಟ್ರೀಯ, ಪ್ರಜಾಪ್ರಭುತ್ವವಾದೀ ಪಕ್ಷವಾಗಿ ಜನಸಂಘವು ಬೆಳೆಯುತ್ತಿದೆ ಎನ್ನುವುದರ ಬಗ್ಗೆ ಜನತೆಯಲ್ಲಿ ವಿಶ್ವಾಸವನ್ನು ಮೂಡಿಸಿದೆ ಎಂದು ಆ ಪಕ್ಷದ ಮಹಾಕಾರ್ಯದರ್ಶಿಯವರಾದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರು ಹೇಳಿದರು.

ಈ ಸಭೆಯು ದೆಹಲಿ ಪ್ರದೇಶ ಜನಸಂಘದ ಆಶ್ರಯದಲ್ಲಿ ಸಂಘಟಿಸಲ್ಪಟ್ಟಿತ್ತು ಮತ್ತು ಪ್ರೊ. ಬಲರಾಜ್ ಮಧೋಕ್ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಜನಸಂಘವು ಸಾಧಿಸಿದ ಪ್ರಗತಿಯ ಬಗ್ಗೆ ಹೇಳುತ್ತಾ ಶ್ರೀ ಉಪಾಧ್ಯಾಯ ಅವರು ತಮ್ಮ ಪಕ್ಷವು ವಿಧಾನ ಸಭೆಗಳಲ್ಲಿ ತನ್ನ ಶಕ್ತಿಯ ವೃದ್ಧಿ ಎರಡರಷ್ಟಕ್ಕಿಂತ ಹೆಚ್ಚಾಗಿದೆ ಎಂದರು. ಜನಸಂಘವು ರಾಷ್ಟ್ರೀಯ ಶಕ್ತಿಗಳನ್ನು ಒಗ್ಗೂಡಿಸುವ ಕೇಂದ್ರ ಬಿಂದುವಾಗಲಿದೆ ಎಂದೂ ಅವರು ನುಡಿದರು.

ಭಾರತೀಯ ಜನಸಂಘದ ಮುಖಂಡರಾದ ಶ್ರೀ ಉಪಾಧ್ಯಾಯ ಅವರು ತಮಗೆ ನೀಡಿದ ಬೆಂಬಲಕ್ಕಾಗಿ ಜನತೆಗೆ ಕೃತಜ್ಞತೆಯನ್ನು ಅರ್ಪಿಸುತ್ತಾ ಈಗಿರುವ ಚುನಾವಣಾ ವ್ಯವಸ್ಥೆಯಲ್ಲಿರುವ ಕೆಲವು ಕೊರತೆಯಿಂದಾಗಿ ಮತ್ತು, ಅದಕ್ಕಿಂತ ಹೆಚ್ಚಾಗಿ ಆಳುವ ಪಕ್ಷದವರು ಅನುಸರಿಸಿದ ಅಕ್ರಮ ತಂತ್ರಗಳಿಂದಾಗಿ ಜನತೆಯು ತೋರಿದ ವ್ಯಾಪಕ ಬೆಂಬಲವು ಚುನಾವಣಾ ಫಲಿತಾಂಶವಾಗಿ ರೂಪುಗೊಳ್ಳಲಿಲ್ಲ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷವು ಪುನಃ ಅಧಿಕಾರಗ್ರಹಣ ಮಾಡಿದ್ದರೂ, ಜನತೆಯು ಅದರ ನೀತಿ ಮತ್ತು ಕಾರ್ಯಕ್ರಮಗಳ ಬಗ್ಗೆ ತಮಗಿರುವ ಅತೃಪ್ತಿಯನ್ನು

ಸಂದೇಹಕ್ಕೆಡೆಯಿಲ್ಲದಂತೆ ತೋರ್ಪಡಿಸಿದ್ದಾರೆ. ಈ ಪ್ರವೃತ್ತಿಯನ್ನು ಅರಿತು ಕಾಂಗ್ರೆಸ್ ಪಕ್ಷವು ತನ್ನ ನೀತಿಗಳನ್ನು ತಿದ್ದಿಕೊಳ್ಳುವುದು ಪ್ರಜಾಪ್ರಭುತ್ವದ ಪರಂಪರೆಯ ಪ್ರಕಾರ ಆವಶ್ಯಕ. ಆದರೆ ಇದು ನೆರವೇರಲಾರದ ಆಶಯವಾಗಿಯೇ ಉಳಿಯುವುದು ಎಂದು ತೋರುತ್ತದೆ. ವಾಸ್ತವವಾಗಿ, ಕಾಂಗ್ರೆಸ್ ಆಡಳಿತವು ಹೆಚ್ಚು ಹೆಚ್ಚಾಗಿ ಜನವಿರೋಧಿ ಹಾಗೂ ಸರ್ವಾಧಿಕಾರೀ ಧೋರಣೆಯತ್ತ ಓಲುತ್ತಿರುವ ಸೂಚನೆಗಳು ಕಂಡುಬರುತ್ತಿವೆ. ಚುನಾವಣಾ ನಂತರ ದೆಹಲಿಯಲ್ಲಿ ತನ್ನ ವಿರೋಧಿಗಳನ್ನು ಕಾಂಗ್ರೆಸ್ ಪಕ್ಷವು ಬೆದರಿಸುತ್ತಿರುವ ರೀತಿಗಳನ್ನು ನೋಡಿದರೆ ಆ ಪಕ್ಷವು ಸರಕಾರದ ಪ್ರಜಾತಾಂತ್ರಿಕ ಆಡಳಿತವನ್ನು ನಿಷ್ಫಲಗೊಳಿಸುವ ಪಣ ತೊಟ್ಟಂತೆ ಕಾಣಿಸುತ್ತದೆ. ಜನತೆಯ ಹಿತಾಸಕ್ತಿ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಲು ಮಾಡಬೇಕಾಗಿರುವ ಯಾವುದೇ ತ್ಯಾಗವನ್ನೂ ಅತಿ ದೊಡ್ಡದೆಂದು ಜನಸಂಘವು ಭಾವಿಸುವುದಿಲ್ಲ ಎಂದು ಅವರು ನುಡಿದರು.

**ಮತಪೆಟ್ಟಿಗೆ ಅಕ್ರಮಗಳು :**

ಜನಸಂಘದ ದೆಹಲಿ ರಾಜ್ಯ ಘಟಕದ ಅಧ್ಯಕ್ಷರಾದ ಪ್ರೊ. ಬಲರಾಜ್ ಮಧೋಕ್ ಅವರು, ಜನ ಸಂಘವು ನಗರಸಭೆಯ ಒಳಗೆ ಮತ್ತು ಹೊರಗೆ ಹಾಗೂ ಸಂಸತ್ತಿನಲ್ಲಿ ಎಂದಿನಂತೆಯೇ ತನ್ನ ಜನಸೇವೆಯನ್ನು ಮುಂದುವರೆಸುತ್ತದೆ ಎಂದು ಆಶ್ವಾಸನೆಯನ್ನು ಕೊಟ್ಟರು. ಹೊರನೋಟಕ್ಕೇ ಕಾಣುವಂತೆ ಎಸಗಿದ ಅಕ್ರಮಗಳಿಂದ ಮತ್ತು ಅಡೆತಡೆಯಿಲ್ಲದೆ ಮಾಡಿದ ಮದ್ಯ ಮತ್ತು ಹಣದ ಹಂಚಿಕೆಯಿಂದ ಹಾಗೂ ಅಧಿಕಾರಿಕ ಬಲ ಮತ್ತು ಬೆದರಿಕೆಗಳಿಂದ ಆಡಳಿತ ಪಕ್ಷವು ಪ್ರಜಾಪ್ರಭುತ್ವದ ಕತ್ತನ್ನು ಹಿಸುಕಿದೆ ಎಂದು ಅವರು ಹೇಳಿದರು.

ಇಷ್ಟೆಲ್ಲಾ ಕುತಂತ್ರಗಳ ನಡುವೆಯೂ, ಜನಸಂಘವು ತನ್ನ ಮತಗಳಿಕೆಯ ಪ್ರಮಾಣವನ್ನು ೧೯೫೭ರ ಶೇ. ೧೯ ರಿಂದ ಶೇ. ೩೩ಕ್ಕೆ, ಅಂದರೆ ಹೆಚ್ಚುಕಡಿಮೆ ಎರಡು ಪಟ್ಟು, ಹೆಚ್ಚು ಮಾಡಿಕೊಂಡಿದೆ. ಆದರೆ, ಇದಕ್ಕೆ ಹೋಲಿಸಿದಾಗ ಕಾಂಗ್ರೆಸ್ ಪಕ್ಷದ ಮತಗಳಿಕೆಯಲ್ಲಿ ಯಾವುದೇ ಹೆಚ್ಚಳವೂ ಕಂಡುಬರುವುದಿಲ್ಲ.

ಈ ಚುನಾವಣೆಯಲ್ಲಿ ಗಾಬರಿ ಹುಟ್ಟಿಸುವಂತಹ ಅಕ್ರಮಗಳು, ಅದರಲ್ಲಿಯೂ ಇಡೀ ಮತಪೆಟ್ಟಿಗೆಯನ್ನೇ ಬದಲಾಯಿಸಿದಂತಹ ಘಟನೆಗಳು ಪಕ್ಷದ ಗಮನಕ್ಕೆ ಬಂದಿವೆಯೆಂದು ಶ್ರೀ ಮಧೋಕ್ ಅವರು ಹೇಳಿದರು. ಪ್ರದೇಶ ಕಾರ್ಯಕಾರಿ ಸಮಿತಿಯು ನೇಮಿಸಿರುವ ಸಮಿತಿಯು ವಿಚಾರಣೆಯನ್ನು ನಡೆಸಿ ವಾಸ್ತವಾಂಶಗಳನ್ನು ಸದ್ಯದಲ್ಲಿಯೇ ಜನತೆಯ ಮುಂದೆ ಇಡುತ್ತದೆ.

ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಪಕ್ಷದಲ್ಲಿರುವ ಅವರ ಪಕ್ಷಪಾತಿಗಳ ನಡುವಿನ ಅಪವಿತ್ರ ಮೈತ್ರಿಯಿಂದಾಗಿ ದೇಶದಲ್ಲಿನ ಪ್ರಜಾಪ್ರಭುತ್ವವು ಇಂದು ಗಂಡಾಂತರವನ್ನು

ಎದುರಿಸುತ್ತಿದೆ. ಶಕ್ತಿಯುತವಾದ ರಾಷ್ಟ್ರೀಯ ಭಾವನೆ ಹಾಗೂ ಪ್ರಜಾಪ್ರಭುತ್ವದ ಮೇಲಿನ ಅಚಲ ವಿಶ್ವಾಸವು ಮಾತ್ರ ಈ ಸವಾಲನ್ನು ಎದುರಿಸಬಲ್ಲವು ಮತ್ತು ದೇಶದಲ್ಲಿನ ಪ್ರಜಾಪ್ರಭುತ್ವವನ್ನು ರಕ್ಷಿಸಬಲ್ಲವು. ಎಲ್ಲಾ ರಾಷ್ಟ್ರೀಯ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಟ್ಟಾಗಿ ಈ ಸವಾಲನ್ನೆದುರಿಸುವುದು ಈ ಸನ್ನಿವೇಶದ ಅಗತ್ಯವಾಗಿದೆ ಎಂದು ಅವರು ಹೇಳಿದರು.

ಸಭೆಯು ನಡೆದ ಸಾದರ್ ಕ್ಷೇತ್ರದ ಲೋಕಸಭಾ ಅಭ್ಯರ್ಥಿ ಡಾ. ಮಹಾವೀರ ಅವರು ಚುನಾವಣೆಯ ಸಂದರ್ಭದಲ್ಲಿ ಜನಸಂಘದ ಪರವಾಗಿ ಎದ್ದಿದ್ದ ಅಲೆಯನ್ನು ಕುರಿತು ಹೇಳುತ್ತಾ, ದೆಹಲಿಯ ಕಾಂಗ್ರೆಸ್ ಅಭ್ಯರ್ಥಿಗಳ ಗೆಲವು ಸಾಮಾನ್ಯ ಜನರಲ್ಲಿ ಸ್ವಲ್ಪವೂ ಸಂಭ್ರಮವನ್ನು ತಂದಿಲ್ಲ ಎಂದರು. ಸಾಮಾನ್ಯರಲ್ಲಿ ತಮ್ಮನ್ನು ವಂಚಿಸಲಾಗಿದೆಯೆಂಬ ಭಾವನೆಯಿದೆ ಎಂದು ಅವರು ನುಡಿದರು.

* * * * *

# ಕಾಶ್ಮೀರದಲ್ಲಿನ ಪರವಾನಗಿ ಪದ್ಧತಿಯ ರದ್ದತಿಗೆ ಜನಸಂಘದ ಸ್ವಾಗತ

ಲಖ್ನೌ, ಮಾರ್ಚ್ ೨೮. ಕಾಶ್ಮೀರ ರಾಜ್ಯವನ್ನು ಪ್ರವೇಶಿಸುವುದಕ್ಕೆ ಮತ್ತು ಅಲ್ಲಿಂದ ಇತರ ರಾಜ್ಯಗಳಿಗೆ ಬರುವುದಕ್ಕೆ ಇಲ್ಲಿಯವರೆಗೂ ಇದ್ದ ಪರವಾನಗಿ ಪದ್ಧತಿಯನ್ನು ರದ್ದುಮಾಡಿರುವುದು ಅಲ್ಲಿನ ಜನತೆ ಮತ್ತು ದೇಶದ ಇತರೆಡೆಗಳ ಜನತೆಯ ಭಾವನಾತ್ಮಕ ಜೋಡಣೆಯತ್ತ ಇಟ್ಟ ಹೆಜ್ಜೆಯಾಗಿದೆ. ಭಾರತೀಯ ಜನಸಂಘ ಮತ್ತು ಪ್ರಜಾಪರಿಷತ್ತು ತಮ್ಮ ಚಳವಳಿಯನ್ನು ೧೯೫೩ರಲ್ಲಿ ಹಿಂತೆಗೆದುಕೊಳ್ಳುವಾಗ ತಾವು ನೀಡಿದ್ದ ಆಶ್ವಾಸನೆಯನ್ನು, ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಶ್ರೀ ಭಕ್ಷಿ ಗುಲಾಮ್ ಮೊಹಮ್ಮದ್ ಅವರು ತಡವಾಗಿಯಾದರೂ ಪೂರೈಸಿದ್ದಾರೆ. ಡಾ. ಶಾಮಪ್ರಸಾದ್ ಮುಖರ್ಜಿಯವರು ಈ ಪರವಾನಗಿ ಪದ್ಧತಿಯ ಸಿಂಧುತ್ವವನ್ನು ಮತ್ತು ಅದರ ಅವಶ್ಯಕತೆಯನ್ನು ಮೊಟ್ಟಮೊದಲ ಬಾರಿಗೆ ಪ್ರಶ್ನಿಸಿದ್ದರು. ಸ್ವತಂತ್ರ ಭಾರತದ ಪ್ರಜೆಯಾಗಿ ದೇಶದ ಇತರ ಭಾಗಗಳಿಗೆ ಅನಿರ್ಬಂಧಿತವಾಗಿ ಪ್ರವೇಶಿಸಲು ತಮಗೆ ಇರುವ ಹಕ್ಕನ್ನು ಕಾಶ್ಮೀರವನ್ನು ಪ್ರವೇಶಿಸಲೂ ಇದೆ ಎಂಬುದನ್ನು ಪ್ರತಿಪಾದಿಸಲು ಅವರು ಪರವಾನಗಿಯಿಲ್ಲದೇ ಕಾಶ್ಮೀರವನ್ನು ಪ್ರವೇಶಿಸಿದ್ದರು. ಅವರ ಈ ಮೇಲ್ಪಂಕ್ತಿಯನ್ನನ್ನುಸರಿಸಿ ನೂರಾರು ಸತ್ಯಾಗ್ರಹಿಗಳು ಕಾಶ್ಮೀರವನ್ನು ಪರವಾನಗಿಯನ್ನು ಪಡೆಯದೆಯೇ ಪ್ರವೇಶಿಸಿದ್ದರು. ಇಂದು ಡಾ. ಶ್ಯಾಮಾಪ್ರಸಾದ್ ಮುಖರ್ಜಿಯವರು ನಮ್ಮೊಡನೆ ಇಲ್ಲ. ಆದರೂ ಶೇಖ್ ಮೊಹಮ್ಮದ್ ಅಬ್ದುಲ್ಲಾ ಅವರ ಮುಂದಾಳತ್ವದಲ್ಲಿ ಭಾರತದಿಂದ ದೂರ ಸರಿಯುತ್ತಿದ್ದ ಕಾಶ್ಮೀರವು, ಡಾ. ಮುಖರ್ಜಿಯವರ ಹುತಾತ್ಮತೆಯಿಂದ ಭಕ್ಷಿ ಗುಲಾಮ್ ಮೊಹಮ್ಮದ್ ಅವರು ಮುಖ್ಯಮಂತ್ರಿಯಾಗಿರುವಾಗ ತನ್ನ ತಾಯ್ನಾಡಿನತ್ತ ಮರಳುತ್ತಿದೆ.

ನಾನು ಅವರನ್ನು ಇಂತಹ ಐತಿಹಾಸಿಕ ತೀರ್ಮಾನಕ್ಕಾಗಿ ಅಭಿನಂದಿಸುತ್ತೇನೆ ಮತ್ತು ಭಾರತದ ಸಂವಿಧಾನವು ನೀಡಿರುವ ಹಕ್ಕುಗಳನ್ನು ಕಾಶ್ಮೀರದ ಜನತೆಗೂ ವಿಸ್ತರಿಸುವಲ್ಲಿ, ಸರ್ವೋಚ್ಚ ನ್ಯಾಯಾಲಯ, ಚುನಾವಣಾ ಆಯೋಗದ ವ್ಯಾಪ್ತಿಯನ್ನು ಕಾಶ್ಮೀರಕ್ಕೂ ವಿಸ್ತರಿಸುವಲ್ಲಿ, ಹಾಗೂ ನೇರ ಚುನಾವಣೆಯಿಂದ ಲೋಕಸಭೆಗೆ

---

**ಮೂಲ ಆಕರ : ಆರ್ಗನೈಸರ್, ೬ ಏಪ್ರಿಲ್ ೧೯೫೯**

ಪ್ರವೇಶದ ಅವಕಾಶವನ್ನು ನೀಡುವಲ್ಲಿ ಶ್ರೀ ಭಕ್ಷಿಯವರು ಪರಿಣಾಮಕಾರಿಯಾದ ಪಾತ್ರವನ್ನು ನಿರ್ವಹಿಸುವಂತೆ ಪ್ರಾರ್ಥಿಸುತ್ತೇನೆ. ತಾರತಮ್ಯದಿಂದ ಕೂಡಿರುವ ಈಗಿನ ವಿಧಿಗಳು ಶೇಕ್ ಅಬ್ದುಲ್ಲಾ ಅವರು ಅನುಸರಿಸುತ್ತಿದ್ದ ಸರ್ವಾಧಿಕಾರಿ ಧೋರಣೆಯ ಪಳೆಯುಳಿಕೆಗಳಾಗಿವೆ ಮತ್ತು ರಾಷ್ಟ್ರೀಯವಾದಿಯಾಗಿರುವ ಶ್ರೀ ಭಕ್ಷಿಯಂತಹವರಿಗೆ ಹೊಂದುವಂತಹುದಲ್ಲ.

* * * * *

# ಆಡಳಿತ ಹಿಂದಿಯ ಸ್ವರೂಪವನ್ನು ವಿಕೃತಿಗೊಳಿಸುವ ಪ್ರಯತ್ನ ಮಾಡದಿರಲು ಜನಸಂಘದ ಅಖಿಲ ಭಾರತದ ಕಾರ್ಯದರ್ಶಿ ಶ್ರೀ ದೀನ್ ದಯಾಳ್ ಉಪಾಧ್ಯಾಯರ ಭಾಷಣ

ಆಕಾಶವಾಣಿಯಲ್ಲಿ ಬಿತ್ತರಗೊಂಡ ಸಮಾಚಾರದಿಂದ ಕಳೆದ ಹಲವಾರು ದಿನಗಳಲ್ಲಿ ಭಾಷೆಯನ್ನು ಕುರಿತು, ಅನೇಕ ವಿವಾದಗಳೆದ್ದಿವೆ. ನಿಧಾನವಾಗಿ ಈ ಪ್ರಶ್ನೆಯು ವ್ಯಾಪಕವಾಗಿ ಹರಡುತ್ತಾ ಜನರ ಕ್ಷೋಭೆಗೆ ಕಾರಣವಾಗಿದೆ. ಇದು ಅತ್ಯಂತ ದುಃಖದ ವಿಷಯವಾಗಿದೆ. ಭಾಷೆಯ ವಿಷಯದಲ್ಲಿ ಕಳೆದ ಹಲವಾರು ದಿನಗಳಿಂದ ದೇಶದ ರಾಜಕೀಯಲ್ಲಿ ಬಹಳಷ್ಟು ಕೋಲಾಹಲವುಂಟಾದ ನಂತರವೂ, ಹಿಂದಿನ ಅನುಭವಗಳಿಂದ ಯಾವುದೇ ಲಾಭವಾಗದಿದ್ದರೂ, ಆಡಳಿತ ಪಕ್ಷವು ಯಾವುದೇ ಕಾರಣವಿಲ್ಲದೆ ಉರಿಯುವ ಬೆಂಕಿಗೆ ಕೈ ಇಟ್ಟಿದೆ. ಇದು ತನ್ನ ಬುದ್ಧಿಮತ್ತೆಯ ಅಭಾವವನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಹಿಂದಿಯನ್ನು ಆಡಳಿತ ಭಾಷೆಯನ್ನಾಗಿ ಮಾಡುವ ಮತ್ತು ಅದಕ್ಕನುಸಾರವಾದ ಸ್ವರೂಪಕ್ಕೆ ಸಂಬಂಧಪಟ್ಟಂತೆ ಸಂವಿಧಾನದಲ್ಲಿ ನಿಸ್ಸಂದೇಹವಾಗಿ ಅವಕಾಶ ನೀಡಿದ ನಂತರವೂ ಆಡಳಿತವು ಯಾವ ನಿಯಮವನ್ನು ಪಾಲಿಸುತ್ತದೆಯೋ ಅದು ಸಂವಿಧಾನ ವಿರೋಧವಾಗಿದೆ. ಸರಳ ಹಿಂದಿಯ ಹೆಸರಿನಲ್ಲಿ ಯಾವ ಬೆರಕೆ ಭಾಷೆಯನ್ನು ಹೇರುವ ಪ್ರಯತ್ನವಾಗುತ್ತಿದೆಯೋ, ಅದನ್ನು ಸಂವಿಧಾನ ಸಭೆಯು ಈ ಮೊದಲೇ ತಿರಸ್ಕರಿಸಿದೆ. ದೆಹಲಿಯ ಮತ್ತು ಅದರ ಸುತ್ತಮುತ್ತಲಿನ ಉರ್ದು ಓದಿರುವ ಪಟ್ಟಣದ ಜನರ ಭಾಷೆಯೂ ಹಿಂದಿಯಲ್ಲ ಹಾಗೂ ದೇಶದಲ್ಲಿ ವ್ಯಾಪಕವಾಗಿ ಅದನ್ನು ಅರ್ಥಮಾಡಿಕೊಳ್ಳುವವರೂ ಇಲ್ಲ.

ಸಂವಿಧಾನದಲ್ಲಿ ಹಿಂದಿ ಮತ್ತು ಅನ್ಯ ಭಾರತೀಯ ಭಾಷೆಗಳನ್ನು ಆಡಳಿತದಲ್ಲಿ ತರಲು ೧೫ ವರ್ಷಗಳ ಮಿತಿ ಇಡಲಾಗಿತ್ತು. ಆಡಳಿತವು ಈ ಸಂಬಂಧ ಯಾವುದೇ ಪ್ರಯತ್ನ ಮಾಡಲಿಲ್ಲ. ಮೊದಲನೆಯದಾಗಿ ಆಡಳಿತ ಭಾಷೆಯ ಆಯೋಗದ ಶಿಫಾರಸ್ಸುಗಳು ಕಸದ ಬುಟ್ಟಿಗೆ ಎಸೆಯಲ್ಪಟ್ಟಿವೆ ಹಾಗೂ ಸಂಸತ್ ಸಮಿತಿಯ ವರದಿಯ ನಂತರವೂ ರಾಷ್ಟ್ರಪತಿಗಳು ಯಾವ ಆದೇಶ ನೀಡಿದ್ದರೋ ಅದನ್ನೂ ಪಾಲಿಸುತ್ತಿಲ್ಲ. ಹತ್ತು ವರ್ಷಗಳ ನಂತರ ಆಡಳಿತ ಭಾಷೆಯ ಇನ್ನೊಂದು ಆಯೋಗ

ರಚನೆಯಾಗುವುದೆಂದು ಸಂವಿಧಾನದಲ್ಲಿ ನಿರ್ದೇಶನ ನೀಡಲಾಗಿದೆ. ಆದರೆ ಆಡಳಿತ ಪಕ್ಷವು ಆ ನಿರ್ದೇಶನವನ್ನೂ ಉಲ್ಲಂಘಿಸಿದೆ ಮತ್ತು ಇಂದು ಮನ ಬಂದಂತೆ ಕಾರ್ಯ ನಿರ್ವಹಿಸುತ್ತಿದೆ. ಮತ್ತೊಂದು ಆಯೋಗದ ರಚನೆಯಾಗುವ ಹಾಗೂ ಅದರ ವರದಿಯಿಲ್ಲದೆ ಭಾಷೆಯ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳುವ ಅಧಿಕಾರ ಸರಕಾರಕ್ಕಿಲ್ಲ.

ಭಾಷೆಯ ಈ ಸಮಸ್ಯೆ ಒಂದು ಪಕ್ಷಕ್ಕೆ ಸಂಬಂಧಪಡದೆ ಒಂದು ರಾಷ್ಟ್ರೀಯ ಮಟ್ಟದ ಪ್ರಶ್ನೆಯಾಗಿದೆ. ಆದ್ದರಿಂದ ಎಲ್ಲಾ ಪಕ್ಷಗಳ ಬಹುತೇಕ ಜನರು ಆಡಳಿತ ಪಕ್ಷದ ಈ ನಿಯಮವನ್ನು ವಿರೋಧಿಸುತ್ತಿದ್ದಾರೆ. ಒಂದು ವೇಳೆ ಆಡಳಿತ ಪಕ್ಷದ ಆ ಆತಂಕಕಾರಿ ಪ್ರಯತ್ನವನ್ನು ತಡೆಯದಿದ್ದರೆ ರಾಷ್ಟ್ರ ಮತ್ತು ಸಂಸ್ಕೃತಿಗಾಗಿ ಬಹುದೊಡ್ಡ ಸಂಕಟ ಎದುರಾಗುತ್ತದೆ ಎಂದು ಭಾರತೀಯ ಜನಸಂಘಕ್ಕೆ ಎನಿಸುತ್ತದೆ. ಜನಸಂಘವು ತನ್ನ ಎಲ್ಲಾ ಶಕ್ತಿಯಿಂದ ಈ ನಿಯಮವನ್ನು ವಿರೋಧಿಸುತ್ತದೆ. ಜನಸಂಘದ ಎಲ್ಲಾ ಶಾಖೆಗಳು ಈ ಸಂಬಂಧದಲ್ಲಿ ಜನಾಭಿಪ್ರಾಯದ ಸಂಘಟನೆ ಮಾಡಲಿ ಮತ್ತು ಸಕ್ರಿಯವಾಗಿ ವಿರೋಧಿಸುವ ಸಿದ್ಧತೆ ನಡೆಸಲಿ. ವಾರ್ತಾ ಸಚಿವರು ಮತ್ತು ಆಡಳಿತ ಪಕ್ಷಕ್ಕೆ ನನ್ನ ನಿವೇದನೆ ಏನೆಂದರೆ, ಅವರು ಇನ್ನೂ ಸಮಯವಿರುವಾಗಲೇ ಎಚ್ಚೆತ್ತುಕೊಳ್ಳಲಿ ಹಾಗೂ ಸ್ವರೂಪವನ್ನು ಭ್ರಷ್ಟಗೊಳಿಸುವ ಪ್ರಯತ್ನವನ್ನು ಮಾಡದಿರಲಿ. ಭಾರತೀಯ ಭಾಷೆಗಳನ್ನು ಅವುಗಳ ಸ್ವಾಭಾವಿಕ ಅಧಿಕಾರದಿಂದ ವಂಚಿತಗೊಳಿಸಿ ಇಂಗ್ಲಿಷನ್ನು ಉಳಿಸಿಕೊಳ್ಳುವ ದುಸ್ಸಾಹಸ ಮಾಡದಿರಲಿ.

* * * * *

# ಪಾಕಿಸ್ತಾನೀಯರ ಅಕ್ರಮ ಪ್ರವೇಶದ ವಿರುದ್ಧ ಜನಸಂಘವು ದೇಶವ್ಯಾಪಿ ಆಂದೋಲನ ಮಾಡಲಿದೆ

## ಅಹಮದಾಬಾದಿನ ಅಧಿವೇಶನದಲ್ಲಿ ಶ್ರೀ ಉಪಾಧ್ಯಾಯರ ಘೋಷಣೆ

ಅಹಮದಾಬಾದಿನಲ್ಲಿ ನಡೆಯುವ ಅಖಿಲ ಭಾರತೀಯ ಜನಸಂಘದ ಹನ್ನೊಂದನೇ ವಾರ್ಷಿಕ ಅಧಿವೇಶನದಲ್ಲಿ ಪ್ರತಿನಿಧಿ ಸಮ್ಮೇಳನದ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಪ್ರಧಾನ ಕಾರ್ಯದರ್ಶಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು ಕಳೆದ ಒಂದು ವರ್ಷದ ದೇಶದ ರಾಜಕೀಯ ಸ್ಥಿತಿಗತಿಗಳನ್ನು ಮತ್ತು ಆಗುಹೋಗುಗಳನ್ನು ಉಲ್ಲೇಖಿಸುತ್ತಾ ದೇಶದ ವರ್ತಮಾನದ ಸಮಸ್ಯೆಗಳ, ಪರಿಸ್ಥಿತಿಗಳ ಮತ್ತು ಜನಸಂಘದ ಕಾರ್ಯಗಳ ಬಗ್ಗೆ ವಿಸ್ತೃತವಾದ ಬೆಳಕನ್ನು ಚೆಲ್ಲಿದರು.

ದೇಶದ ಎಲ್ಲಾ ಪ್ರದೇಶಗಳಲ್ಲಿ ವಿಧಿವತ್ತಾಗಿ ಜನಸಂಘದ ಸ್ಥಾಪನೆಯಾಗಿದೆ. ಒರಿಸ್ಸಾ ಮತ್ತು ಅಸ್ಸಾಂನಲ್ಲಿ ಜನಸಂಘದ ಕಾರ್ಯಗಳಿರಲಿಲ್ಲ. ಈಗ ಅಲ್ಲಿಯೂ ಪ್ರಾದೇಶಿಕ ಸಮ್ಮೇಳನಗಳು ಜರುಗಿ ಪ್ರಾದೇಶಿಕ ಘಟಕಗಳು ವಿಧಿವತ್ತಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಅವರು ಹೇಳಿದರು.

ದೇಶದ ತುರ್ತು ಪರಿಸ್ಥಿತಿಯಲ್ಲಿ ದೇಶದ ಸುರಕ್ಷತೆಯ ಪ್ರಶ್ನೆಯ ಬಗ್ಗೆ ದೇಶದ್ರೋಹಿ ಕಮ್ಯುನಿಸ್ಟರನ್ನು ಬಿಟ್ಟು ಅನ್ಯ ವಿರೋಧ ಪಕ್ಷಗಳ ಪರಸ್ಪರ ಸಹಯೋಗದ ಪ್ರಸ್ತಾಪವನ್ನು ಮಾಡುತ್ತಾ ಅವರು ಹೇಳಿದ್ದೇನೆಂದರೆ, ಯಾವ ಭಾಷಾ ವಿಧೇಯಕವನ್ನು ತುರ್ತುಪರಿಸ್ಥಿತಿಯ ನಿಮಿತ್ತ ಸ್ಥಗಿತಗೊಳಿಸಲಾಗಿತ್ತೋ ಅದನ್ನು ವಿರೋಧ ಪಕ್ಷಗಳ ಒಮ್ಮತದಲ್ಲಿ ಬಿರುಕು ಮೂಡಿಸಲು ಕಾಂಗ್ರೆಸ್ ಪಕ್ಷವು ಸಂಸತ್ತಿನಲ್ಲಿ ಪ್ರಸ್ತುತಪಡಿಸಿದೆ. ದೇಶದ ಸ್ವಾತಂತ್ರ್ಯ ಮತ್ತು ಸ್ವಾಭಿಮಾನವನ್ನು ಕಾಪಾಡಲು ನಾವು ದೇಶದಲ್ಲಿ ಇಂಗ್ಲಿಷ್ ಭಾಷೆಯನ್ನು ಹೇರುವುದರ ಬಗ್ಗೆ ಖಡಾಖಂಡಿತವಾಗಿ ವಿರೋಧ ವ್ಯಕ್ತಪಡಿಸಿದೆವು.

## ರಾಷ್ಟ್ರೀಯ ಪಕ್ಷಗಳ ಒಮ್ಮತದ ಅವಶ್ಯಕತೆ

ಅವರು ಕಳೆದ ಉಪಚುನಾವಣೆಯಲ್ಲಿ ರಾಷ್ಟ್ರೀಯ ಪ್ರಜಾತಾಂತ್ರಿಕ ವಿರೋಧ ಪಕ್ಷಗಳ ಒಮ್ಮತದ ಬಗ್ಗೆ ಸಂತೋಷ ವ್ಯಕ್ತಪಡಿಸುತ್ತಾ ಹೇಳಿದರು. ಭವಿಷ್ಯದಲ್ಲೂ

ನಾವು ಹೀಗೆಯೇ ಪ್ರಯತ್ನಿಸುತ್ತಿರೋಣ, ಏಕೆಂದರೆ ಯಾವ ವಿಷಯಗಳ ಬಗ್ಗೆ ವಿರೋಧಿ ಪಕ್ಷಗಳ ಸಹಮತವಿದೆಯೋ, ಅವುಗಳ ವಿಷಯದಲ್ಲಿ ಒಂದಾಗಿ ನಿಲ್ಲುವ ಅವಶ್ಯಕತೆ ಇದೆ.

**ಪಾಕಿಸ್ತಾನೀಯರ ಅಕ್ರಮ ಪ್ರವೇಶವು ಒಂದು ಗಂಭೀರ ಸಮಸ್ಯೆ**

ಪಾಕಿಸ್ತಾನದಿಂದ ಅಕ್ರಮವಾಗಿ ಪ್ರವೇಶಿಸಿ ಅಸ್ಸಾಂ, ತ್ರಿಪುರ ಮತ್ತು ಬಂಗಾಳಕ್ಕೆ ಬಂದು ನೆಲೆಸುವ ಪಾಕಿಸ್ತಾನೀಯರ ಕಾರಣ ಉಂಟಾಗುವ ಗಂಭೀರ ಸಮಸ್ಯೆಯ ಬಗ್ಗೆ ಜನಸಂಘ ಮುಖಂಡ ಮಾತನಾಡುತ್ತಾ, ಈ ಸಮಸ್ಯೆಯು ಒಂದು ಗಂಭೀರಸ್ವರೂಪವನ್ನು ಪಡೆದುಕೊಂಡಿದೆ. ಅನ್ಯ ಪಕ್ಷಗಳಿಗೂ ಸಹ ಈಗ ಇದರ ಗಂಭೀರತೆಯ ಅನುಭವವಾಗುತ್ತಿದೆ. ಆದ್ದರಿಂದ ಆಡಳಿತ ಗಮನವನ್ನು ಇತ್ತ ಸೆಳೆಯಲು ದೇಶವ್ಯಾಪಿ ಆಂದೋಲನವನ್ನು ಪ್ರಾರಂಭಿಸುವ ಚಿಂತನೆ ಮಾಡುತ್ತಿದ್ದೇವೆ ಎಂದು ಹೇಳಿದರು.

ಹಿಂದೂಸಭಾ ಮತ್ತು ರಾಮರಾಜ್ಯ ಪರಿಷತ್ತಿನ ಅನೇಕ ಮುಖಂಡರು ಜನಸಂಘಕ್ಕೆ ಸೇರ್ಪಡೆಗೊಂಡ ಬಗ್ಗೆ ಹರ್ಷ ವ್ಯಕ್ತಪಡಿಸತ್ತಾ, ಈ ಹೆಜ್ಜೆಯು ದೇಶದಲ್ಲಿ ರಾಷ್ಟ್ರೀಯ ಶಕ್ತಿಗಳನ್ನು ಹೆಚ್ಚಿಸುತ್ತದೆ ಮತ್ತು ಜನಸಂಘವು ಜನತೆಯನ್ನು ಪ್ರತಿನಿಧಿಸುವಲ್ಲಿ ಯಶಸ್ವಿಯಾಗುತ್ತದೆ ಎಂದು ಹೇಳಿದರು.

**ಆಚಾರ್ಯ ರಘುವೀರರ ಮರಣ-ಒಂದು ವಜ್ರಾಘಾತ**

ಆಚಾರ್ಯ ಡಾ. ರಘುವೀರರ ಆಕಸ್ಮಿಕ ಮರಣದ ಬಗ್ಗೆ ಹೇಳುತ್ತಾ, 'ಅವರ ಸಾವು ಜನಸಂಘಕ್ಕೆ ವಜ್ರಾಘಾತವನ್ನುಂಟು ಮಾಡಿದೆ. ಡಾ. ರಘುವೀರರು ಅಧ್ಯಕ್ಷರಾಗಿ ಆಯ್ಕೆಯಾದ ಮೇಲೆ ದೇಶಾದ್ಯಂತ ಪ್ರವಾಸ ಕೈಗೊಂಡಿದ್ದರು ಮತ್ತು ಭಾರತೀಯ ಭಾಷೆಗಳನ್ನು ರಕ್ಷಿಸಲು ಮತ್ತು ಇಂಗ್ಲಿಷನ್ನು ಬಲವಂತವಾಗಿ ಹೇರುವ ವಿರುದ್ಧ ಪ್ರಬಲ ಜನಾಭಿಪ್ರಾಯವನ್ನು ಕಲೆ ಹಾಕುವುದರಲ್ಲಿ ಬಹಳ ಪ್ರಯತ್ನ ಪಟ್ಟಿದ್ದರು' ಎಂದು ಹೇಳಿದರು.

ಶ್ರೀಯುತ ಉಪಾಧ್ಯಾಯರು ಹೊಸದಾಗಿ ಅಧ್ಯಕ್ಷರಾಗಿ ಚುನಾಯಿತರಾದ ಘೋಷ್‌ರವರ ಸ್ವಾಗತವನ್ನು ಮಾಡುತ್ತಾ, ಇವರ ಸಮರ್ಥ ನೇತೃತ್ವದಲ್ಲಿ ಜನಸಂಘವು ನಿರಂತರವಾಗಿ ಪ್ರಗತಿಪಥದಲ್ಲಿರುವುದೆಂದು ಹೇಳಿದರು.

* * * * *

# ಹಿಂದಿ ರಕ್ಷಾ ಸತ್ಯಾಗ್ರಹವನ್ನು ಜನಸಂಘವು ಬೆಂಬಲಿಸುತ್ತದೆ ದೀನ್ ದಯಾಳ್ ಜೀಯವರ ಹೇಳಿಕೆ

ಯಾರೂ ಬಯಸದೇ ಇದ್ದರೂ ಕೂಡಾ, ಹಿಂದಿ ರಕ್ಷಾ ಸಮಿತಿಯು ಸತ್ಯಾಗ್ರಹವನ್ನು ಆರಂಭಿಸಿತು ಮತ್ತು ಆ ಚಳುವಳಿಯು ವೇಗವನ್ನು ಪಡೆದು ಕೊಳ್ಳುತ್ತಿದೆ. ಪಂಜಾಬಿನ ಎಲ್ಲ ದಿಕ್ಕುಗಳಿಂದಲೂ ಸಮಿತಿಗೆ ದೊರಕುತ್ತಿರುವ ಬೆಂಬಲವು, ಪಂಜಾಬಿನ ಜನತೆಯ ಮನಸ್ಸಿನಲ್ಲಿ ನ್ಯಾಯಯುಕ್ತವಾದ ಭಯ, ಆಶಂಕೆಗಳು ಮನೆಮಾಡಿರುವುದನ್ನೂ ಮತ್ತು ಸರ್ಕಾರವು ಅದನ್ನು ನಿವಾರಿಸುವುದರಲ್ಲಿ ವಿಫಲವಾಗಿರುವುದನ್ನೂ ಸೂಚಿಸುತ್ತದೆ. ಸ್ವಾಮಿ ಆತ್ಮಾನಂದಜೀಯವರಿಗೆ ಬರೆದ ಪತ್ರದಲ್ಲಿ ಪ್ರಧಾನಮಂತ್ರಿಯವರು ಈ ಚಳುವಳಿಯ ಮೂಲವನ್ನು ಗುರುತಿಸಲು ಪ್ರಯತ್ನಿಸಿದ್ದಾರೆ, ಆದರೆ, ಅವರದೇ ವಿಶ್ಲೇಷಣೆಯ ಪ್ರಕಾರ ಕೂಡಾ ರಾಜ್ಯದ ರಾಜಕೀಯ ವಾತಾವರಣವನ್ನು ಸುಧಾರಿಸಲು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದಿರುವುದು ವಿಷಾದನೀಯ. ಇದುವರೆಗೂ ಕಾಂಗ್ರೆಸ್ ಮಾಡಿರುವ ಒಂದೇ ಒಂದು ಕಾರ್ಯವೆಂದರೆ, ಸಾರ್ವಜನಿಕ ಅಭಿಪ್ರಾಯದ ಒಂದು ಭಾಗವನ್ನು ಅಲಕ್ಷಿಸಿದ್ದು ಆ ಮೂಲಕ ಜನರನ್ನು ಹತಾಶೆಯ ಅಂಚಿಗೆ ತಳ್ಳುವುದೇ ಆಗಿದೆ. ಪ್ರಧಾನ ಮಂತ್ರಿಯವರು ತಮ್ಮ ಪತ್ರದಲ್ಲಿ ಜನರ ನೊಂದ ಭಾವನೆಗಳನ್ನು ಸಂತೈಸಲು ಪ್ರಯತ್ನಿಸಿದ್ದರೂ, ಪಂಜಾಬಿನ ಸರ್ಕಾರವೂ ಹಿಂದಿ ರಕ್ಷಾಸಮಿತಿಯ ಬಗೆಗೆ ಸೊಕ್ಕಿನ ಮನೋಭಾವವನ್ನೇ ಅನುಸರಿಸಿದೆ. ಪಂಜಾಬಿನ ಅತ್ಯಂತ ಗೌರವಾನ್ವಿತ ವ್ಯಕ್ತಿಗಳನ್ನು ಶ್ರೇಷ್ಠ ಜ್ಞಾನಿಗಳನ್ನು ಒಳಗೊಂಡಿದ್ದಂತಹ, ಚಳುವಳಿಗಾರರ ಸಮೂಹವನ್ನು ಸನ್ಮಾರ್ಗದರ್ಶಕ ಶಾಲೆಗೆ – ಸುಧಾರಣಾಶಾಲೆಗೆ– ಕಳಿಸಬೇಕು ಎನ್ನುವ ಸರ್ದಾರ್ ಪ್ರತಾಪ್‌ಸಿಂಗ್ ಖೈರಾನ್‌ರ ಟೀಕೆಗಳು (ಅಭಿಪ್ರಾಯವು) ಅವರ ವಿಕೃತ ಮನಸ್ಸನ್ನು ಅನಾವರಣಗೊಳಿಸುತ್ತವೆ. ಹಿಂದೆ ಹೋಷಿಯಾರ್‌ಪುರದಲ್ಲಿ ನಡೆದ ಪೊಲೀಸ್ ಹಿಂಸಾಚಾರವನ್ನು ಲಾಠಿ ಚಾರ್ಜ್‌ನಂತಹ ವ್ಯವಹಾರ ಎಂದು ಉಲ್ಲೇಖಿಸಿದಂತಹುದೇ ಅಚಾತುರ್ಯ, ಅದಕ್ಷತೆಗಳನ್ನು ಅವರು ಈ ಬಾರಿಯೂ ಪ್ರದರ್ಶಿಸಿದ್ದಾರೆ. ಜನರನ್ನು ಕೋಪೋದ್ರಿಕ್ತರನ್ನಾಗಿ ಮಾಡುವ ಅಥವಾ ಚಿತಾವಣೆ ಮಾಡುವ, ಅತಿದುಷ್ಟ ಉದ್ದೇಶವಿರದಿದ್ದಲ್ಲಿ ಅವರು ಅಂತಹ ಅಗೌರವದ, ಅಪಮಾನಕರ ಹೇಳಿಕೆಗಳನ್ನು ನಿವಾರಿಸಬೇಕಾಗಿದ್ದಿತು.

ಅಕಾಲಿ ನಾಯಕರ ಮನೋಭಾವದಿಂದಾಗಿ, ಯಾವುದೇ ಪರಿಹಾರ ಕೈಗೊಳ್ಳಲು ಪರಿಸ್ಥಿತಿಯು ಕಠಿಣವಾಗುತ್ತಿದೆ. ಸರ್ಕಾರವು ಹಿಂದಿ ರಕ್ಷಾ ಸಮಿತಿಯ ಬೇಡಿಕೆಗಳಲ್ಲಿ ಯಾವುದೇ ಒಂದನ್ನು ಒಪ್ಪಿದರೂ, ಪಂಜಾಬಿ ಸುಬಾ ಚಳುವಳಿಯನ್ನು ಪುನರ್ಜಾಗೃತಿಗೊಳಿಸುವುದಾಗಿ ಗ್ಯಾನಿ ಕರ್ತಾರ್‌ಸಿಂಗ್ ಬೆದರಿಕೆ ಒಡ್ಡಿರುವುದಾಗಿ ವರದಿಯಾಗಿದೆ. ಕಾಂಗ್ರೆಸ್ಸಿನೊಡನೆ ವಿಲೀನಗೊಂಡಿರುವ ಮತ್ತು ಈಗ ಅದರೊಡನೆ ಅಧಿಕಾರವನ್ನು ಹಂಚಿಕೊಂಡಿರುವ ಅಕಾಲಿಗಳು, ಹೆಚ್ಚು ರಚನಾತ್ಮಕವಾಗಿ ಆಲೋಚಿಸಬೇಕು ಹಾಗೂ ಜನರ ವಿಶ್ವಾಸಗಳಿಸಲು ತಾವೂ ಕೂಡ ಸರ್ಕಾರದ ಋಣಭಾರವನ್ನು– ಹೊಣೆಯನ್ನು ಹೊರಬೇಕು. ಒಪ್ಪಂದಗಳು ಅವರಿಗೆ ಅಧಿಕಾರವನ್ನು ಕೊಡಬಹುದು ಆದರೆ ಘನತೆ, ಗೌರವಗಳನ್ನು ನೀಡಲಾರವು. ಘನತೆಯಿಲ್ಲದ ಸರ್ಕಾರ ಜನರನ್ನು ಹೇಗೆ ಆಳಬಲ್ಲದು?

ಪಂಜಾಬ್ ಸರ್ಕಾರದ ವರ್ತನೆ, ಸಾಮರ್ಥ್ಯಗಳನ್ನು ಹೊರತುಪಡಿಸಿಯೂ, ಈ ಪರಿಸ್ಥಿತಿಯನ್ನು ನಿರ್ವಹಿಸುವಲ್ಲಿ ಕೇಂದ್ರ ಸರ್ಕಾರವು ವಿಶೇಷ ಜವಾಬ್ದಾರಿಯನ್ನು ಹೊಂದಿದೆ. ಪಂಜಾಬಿನ ಪರಿಧಿಯಿಂದ ಆಚೆಗೂ ಹರಡುವ ಸಾಮರ್ಥ್ಯ ಈ ಚಳುವಳಿಗಿದೆ. ಒಂದು ಪಕ್ಷ ಹಾಗೇನಾದರೂ ಆದಲ್ಲಿ, ಇದು ಎಲ್ಲ ಕಡೆಯೂ ಜನರ ಮನಸ್ಸನ್ನು ಧಾವತಿಗೊಳಿಸುತ್ತದೆ. ಇಂತಹ ಬೆಳವಣಿಗೆಯನ್ನು ಎಚ್ಚರಿಕೆಯಿಂದ ತಪ್ಪಿಸಬೇಕಾಗಿದೆ. ಪರಿಸ್ಥಿತಿಯು ಮತ್ತಷ್ಟು ಹದಗೆಡುವುದಕ್ಕೆ ಮುನ್ನವೇ ಈ ವಿಷಯದಲ್ಲಿ ಮಧ್ಯ ಪ್ರವೇಶ ಮಾಡಬೇಕೆಂದು ಮತ್ತು ಪಂಜಾಬಿನಲ್ಲಿನ ಪ್ರಮುಖ ನಾಯಕರ ಸಮ್ಮೇಳನವನ್ನು ಕರೆದು, ಸಂಬಂಧಪಟ್ಟ ಸಮಸ್ಯೆಗಳ ಬಗೆಗೆ, ಸರ್ವಸಮ್ಮತವಾದ ಪರಿಹಾರ ತಲುಪಬೇಕೆಂದು ನಾನು ಸಮ್ಮಿಶ್ರ ಸರ್ಕಾರದ ಗೃಹಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ.

* * * * *

# ಇಂಗ್ಲಿಷನ್ನು ಉಳಿಸಿಕೊಳ್ಳುವುದು ಆಳುವವರು ಮತ್ತು ಪ್ರಜೆಗಳ ನಡುವೆ ತಿಕ್ಕಾಟಕ್ಕೆ ಕಾರಣವಾಗುತ್ತದೆ

**ಇಂಗ್ಲಿಷ್ ಪರ ವಾದಿಸುವವರ ಮೇಲೆ ಶ್ರೀ ಉಪಾಧ್ಯಾಯ ಅವರ ಛಡಿ ಪ್ರಹಾರ**

**ರಾಯಪುರ, ಅಕ್ಟೋಬರ್ ೧೫, ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರು ಇಂಗ್ಲಿಷ್ ಪರ ವಾದಿಸುವವರನ್ನು ಇಲ್ಲಿನ ಪತ್ರಿಕಾಗೋಷ್ಠಿಯೊಂದರಲ್ಲಿ ಉಗ್ರವಾಗಿ ಟೀಕಿಸಿದರು. ಅವರು ವಿಶೇಷವಾಗಿ, ರಾಷ್ಟ್ರೀಯ ಸಮಗ್ರತೆಯ ಸಮಾವೇಶದಲ್ಲಿ ಮಾಡಿದ ಶ್ರೀ ಕೆ. ಎಂ. ಮುನ್ಷಿಯವರ ಭಾಷಣವನ್ನು ತೀವ್ರವಾಗಿ ಖಂಡಿಸಿದರು.**

ಶ್ರೀ ಉಪಾಧ್ಯಾಯ ಅವರ ಪತ್ರಿಕಾ ಹೇಳಿಕೆಯು ಕೆಳಕಂಡಂತೆ ಇದೆ.

ಶ್ರೀ ಕೆ. ಎಂ. ಮುನ್ಷಿಯವರು ಇಂಗ್ಲಿಷ್ ಪರ ಮಾಡಿದ ವಾದವು ಆಶ್ಚರ್ಯಕರವಾಗಿದೆ. ಅವರ ದೃಷ್ಟಿಕೋನದಲ್ಲಿ ಆಗಿರುವ ಬದಲಾವಣೆಯ ಕಾರಣವನ್ನು ಅರಿಯುವುದು ಸಾಧ್ಯವಿಲ್ಲ. ಇಂಗ್ಲಿಷ್ ಭಾಷೆಯು ಭಾರತದ ರಾಷ್ಟ್ರೀಯ ಪ್ರಜ್ಞೆಯ ಕಾರಣ ಮತ್ತು ಸಾಧನವಾಗುತ್ತದೆ ಎಂದು ಭಾವಿಸುವವರು, ನಮ್ಮ ರಾಷ್ಟ್ರೀಯತೆಯಲ್ಲಿನ ಗುಣಾತ್ಮಕ ಅಂಶಗಳನ್ನು ಮರೆತಿರುವಂತೆ ಕಾಣುತ್ತದೆ. ಮೆಕಾಲೆಯವರ ಭವಿಷ್ಯವಾಣಿ ನಿಜವಾಗುವಂತೆ ಅನಿಸುತ್ತದೆ ಮತ್ತು ಇಂಗ್ಲಿಷಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿದವರು ಹೆಸರಿಗೆ ಮಾತ್ರ ಭಾರತೀಯರಾಗಿದ್ದಾರೆ. ಅವರು ಭಾರತೀಯತೆಯ ಅರ್ಥವನ್ನು ತಿಳಿದುಕೊಳ್ಳದಿರುವುದಷ್ಟೇ ಅಲ್ಲ, ಅವರಿಗೆ ರಚನಾತ್ಮಕ ಗುರಿಗಳನ್ನು ಸಾಧಿಸುವಂತೆ ಬೇರೆಯವರನ್ನು ಪ್ರಚೋದಿಸುವ ಶಕ್ತಿಯನ್ನೂ ಹೊಂದಿರುವುದಿಲ್ಲ. ಇಂಗ್ಲಿಷ್ ಭಾಷೆಯು ಇಲ್ಲಿ ಮುಂದುವರೆಯುತ್ತಿರುವವರೆಗೆ ಆಳುವವರ ಮತ್ತು ಆಳಲ್ಪಡುತ್ತಿರುವವರ ನಡುವೆ ಅಗಾಧವಾದ ಕಂದಕವೇರ್ಪಡುತ್ತೆ. ಇದರಿಂದ ಜನತೆಯು ತುಳಿತ ಮತ್ತು ಪರಾಧೀನಕ್ಕೆ ಒಳಗಾದ ಮನೋಭಾವವನ್ನು ಹೊಂದಿ ಜಡವಾಗುತ್ತಾರೆ ಅಥವಾ ನಾಯಕರ ವಿರುದ್ಧ ದಂಗೆ ಏಳುತ್ತಾರೆ. ದೇಶದಲ್ಲಿ ಕ್ರಮವಾದ ಮತ್ತು ಪ್ರಜಾಸತ್ತಾತ್ಮಕವಾದ ಅಭಿವೃದ್ಧಿಗೆ ಈ ಎರಡೂ ಸನ್ನಿವೇಶಗಳು ಅನಪೇಕ್ಷಣೀಯವಾಗಿರುತ್ತವೆ. ಇಂತಹ ಅಪಾಯಕರ ಪರಿಸ್ಥಿತಿಯನ್ನು

---

**ಮೂಲ ಆಕರ : ಆರ್ಗನೈಸರ್, ೨೫, ಅಕ್ಟೋಬರ್, ೧೯೬೧**

ತಡೆಗಟ್ಟಬೇಕಾದರೆ ನಾವು ಇಂಗ್ಲಿಷಿಗೆ ಬದಲಾಗಿ ಹಿಂದಿ ಮತ್ತು ಇತರ ಸ್ಥಳೀಯ ಭಾಷೆಗಳನ್ನು ಉಪಯೋಗಿಸುವುದನ್ನು ಆದಷ್ಟು ಬೇಗ ಪ್ರಾರಂಭಿಸಬೇಕು.

**ಮೂರನೆಯ ಯೋಜನೆಯಲ್ಲಿ ಕೃಷಿಯ ಮೇಲೆ ಒತ್ತಡ**

ಎರಡನೆಯ ಯೋಜನೆಯ ಅವಧಿಯಲ್ಲಿ ದೇಶದ ಆರ್ಥಿಕತೆಯ ಮೇಲೆ ಒತ್ತಡ ಮತ್ತು ಹೊರೆಗಳಿಗೆ ಕಾರಣವಾದ ಅಂಶಗಳ ನಿವಾರಣೆಗೆ ಮೂರನೆಯ ಯೋಜನೆಯು ಯಾವ ಪ್ರಯತ್ನವನ್ನೂ ಹಾಕಿಕೊಂಡಿಲ್ಲ. ಬಂಡವಾಳ ಮತ್ತು ಆಮದಿನ ಮೇಲೆ ಎರಡನೆಯ ಯೋಜನೆಯಲ್ಲಿದ್ದ ಒತ್ತು ಮೂರನೆಯ ಯೋಜನೆಯಲ್ಲಿಯೂ ಮುಂದುವರೆಯುತ್ತಿದೆ. ಉದ್ದೇಶಿತ ಕಾರ್ಯಕ್ರಮಗಳು ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಸಂಭವವಿಲ್ಲ. ಬೆಲೆಗಳ ಮಟ್ಟವನ್ನು ಕಾಪಾಡಿಕೊಂಡು ಹೋಗಲು ಪರಿಣಾಮಕಾರಿಯಾದ ನಿರ್ದಿಷ್ಟ ನಿಲುವಿನ ಯಾವ ಕಾರ್ಯಕ್ರಮವೂ ಸೂಚಿತವಾಗಿಲ್ಲ. ಮೂರನೆಯ ಯೋಜನೆಯ ಅಂತ್ಯದ ವೇಳೆಗೆ ನಿರುದ್ಯೋಗದ ಮಟ್ಟವು ಕಡಿಮೆಯಾಗುವ ಬದಲು ಹೆಚ್ಚಾಗಿರುತ್ತದೆ.

ಯೋಜನೆಯ ಕಲ್ಪನೆ ಮತ್ತು ಅದರ ತಂತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಬೇಕೆಂದು ಜನಸಂಘವು ಬಯಸುತ್ತದೆ. ಕಚ್ಚಾ ವಸ್ತುಗಳ ಸಂಗ್ರಹಣೆಯಿಂದ ಮೊದಲುಗೊಂಡು ಅಂತಿಮವಾಗಿ ಮಾರುಕಟ್ಟೆಯಲ್ಲಿ ಅವು ಮಾರಾಟವಾಗುವವರೆಗಿನ ಎಲ್ಲಾ ಹಂತಗಳಲ್ಲಿಯೂ ಯೋಜನೆಯು ರಾಷ್ಟ್ರದಲ್ಲಿರುವ ಸಂಪನ್ಮೂಲಗಳನ್ನು ಅವಲಂಬಿಸಿರಬೇಕು. ಪರದೇಶಗಳಿಂದ ಅತಿಯಾಗಿ ಬಂಡವಾಳವನ್ನು ತರುವುದು ನಮ್ಮ ಮೇಲೆ ಸಾಲದ ಹೊರೆಯನ್ನು ಹೊರಿಸುವುದಷ್ಟೇ ಅಲ್ಲದೆ, ದೇಶದ ಆರ್ಥಿಕ ಪ್ರಗತಿಯನ್ನು ಕುಂಠಿತಗೊಳಿಸುತ್ತದೆ. ಹೊರದೇಶಗಳಲ್ಲಿ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನವು ಹೆಚ್ಚಿನ ಬಂಡವಾಳವನ್ನು ಬಯಸುತ್ತದೆ ಮತ್ತು ಕಡಿಮೆ ಕೆಲಸಗಾರರನ್ನು ಬೇಡುತ್ತದೆ. ಆದರೆ, ನಮಗೆ ಬೇಕಾಗಿರುವ ತಂತ್ರಜ್ಞಾನವು ಹೆಚ್ಚಿನ ಜನರಿಗೆ ಕೆಲಸವನ್ನು ಒದಗಿಸಬಲ್ಲುದಾಗಿರಬೇಕು ಮತ್ತು ಕಡಿಮೆ ಬಂಡವಾಳವನ್ನು ಬಯಸುವಂತಹುದಾಗಿರಬೇಕು. ಇಂತಹ ತಂತ್ರಜ್ಞಾನವನ್ನು ನಾವು ಬಳಸಿಕೊಂಡರೆ, ಅದು ಭಾರತದ ಆರ್ಥಿಕ ಅಭಿವೃದ್ಧಿಯ ದರವನ್ನು ಹೆಚ್ಚಿಸುತ್ತದೆ. ಹೊರದೇಶಗಳ ತಂತ್ರಜ್ಞಾನ ಮತ್ತು ಸಿದ್ಧಾಂತಗಳಿಂದ ನಮ್ಮನ್ನು ನಾವು ಮುಕ್ತಗೊಳಿಸಿಕೊಳ್ಳೋಣ ಮತ್ತು ವಾಸ್ತವಿಕತೆ ಹಾಗೂ ರಾಷ್ಟ್ರೀಯತೆಯನ್ನು ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಅಭಿವೃದ್ಧಿಯ ಯೋಜನೆಯನ್ನು ರೂಪಿಸೋಣ. ಸ್ವದೇಶೀ ಆದರ್ಶವನ್ನು ಪುನರುಜ್ಜೀವಸೋಣ. ಹಾಗಾದರೆ ಮಾತ್ರ ನಮ್ಮ ಅನುಭೋಗವು ಕಡಿಮೆಯಾಗಿ, ಉತ್ಪಾದನೆಯು ಹೆಚ್ಚಾಗುತ್ತದೆ. ವಿಕೇಂದ್ರೀಕೃತ

ಮತ್ತು ಯಾಂತ್ರೀಕೃತವಾದ ಸಣ್ಣ ಕೈಗಾರಿಕೆಗಳ ಮೂಲಕ ನಾವು ಎಲ್ಲರಿಗೂ ಉದ್ಯೋಗವನ್ನು ಕಲ್ಪಿಸಿದರೆ, ಉಚಿತ ವಿತರಣೆಯು ತಾನಾಗಿಯೇ ಆಗುತ್ತದೆ. ಉಳಿದ್ದದನ್ನು ಸರಕಾರದ ಆರ್ಥಿಕ ಕಾರ್ಯಕ್ರಮಗಳು ಸಾಧಿಸುತ್ತವೆ.

**ಆಲಿಘಡ**

ಆಲಿಘಡ ವಿಶ್ವವಿದ್ಯಾನಿಲಯದಲ್ಲಿನ ಘಟನೆಗಳು ಅದು ಕೋಮುವಾದಿ ಹಾಗೂ ರಾಷ್ಟ್ರವಿರೋಧಿ ಚಟುವಟಿಕೆಗಳು ಬೆಳೆಯಲು ಫಲವತ್ತಾದ ಭೂಮಿಯಾಗಿದೆ ಎಂಬುದನ್ನು ಸ್ಪಷ್ಟಗೊಳಿಸುತ್ತಿವೆ. ಈ ಘಟನೆಗಳಿಗೆ ಕೇವಲ ಅಲ್ಲಿನ ವಿದ್ಯಾರ್ಥಿಗಳು ಕಾರಣರಲ್ಲ, ವಿಶ್ವವಿದ್ಯಾನಿಲಯದ ಅಧಿಕಾರಿಗಳೂ ಈ ಎಲ್ಲಾ ಚಟುವಟಿಕೆಗಳ ಹಿಂದೆ ಇದ್ದಾರೆ ಎಂಬುದು ಕಂಡುಬರುತ್ತಿದೆ. ಇನ್ನು ಮುಂದೆ ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಭಾಗವಹಿಸದಂತೆ ಪಾಠ ಕಲಿಸಲು ಮುಸ್ಲಿಮೇತರ ವಿದ್ಯಾರ್ಥಿಗಳನ್ನು ಚೆನ್ನಾಗಿ ಥಳಿಸಲಾಗಿದೆ. ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ಆಲಿಘಡದಲ್ಲಿನ ವಾಸ್ತವಿಕ ಪರಿಸ್ಥಿತಿಯನ್ನು ಬಿಚ್ಚಿಟ್ಟ ನಂತರವೂ ಕೇಂದ್ರ ಶಿಕ್ಷಣ ಸಚಿವಾಲಯವು ತನ್ನ ಉದಾಸೀನ ಭಾವದಿಂದ ಹೊರಬಂದಿಲ್ಲ. ಅವರ ನಿರ್ಲಕ್ಷ್ಯದಿಂದಾಗಿಯೇ ಈಗಿನ ಇಂತಹ ವಿಲಕ್ಷಣ ಪರಿಸ್ಥಿತಿಯು ಬೆಳೆದುಬಂದಿದೆ. ಆಲಿಘಡ ವಿಶ್ವವಿದ್ಯಾನಿಲಯದ ವ್ಯವಹಾರಗಳ ಬಗ್ಗೆ ಒಂದು ವಿಚಾರಣೆಯನ್ನು ನಡೆಸಬೇಕು ಮತ್ತು ಅದನ್ನು ಕೋಮುವಾದಿ ಮತ್ತು ರಾಷ್ಟ್ರವಿರೋಧಿ ಶಕ್ತಿಗಳಿಂದ ಮುಕ್ತಗೊಳಿಸಬೇಕು ಎಂದು ನಾನು ಒತ್ತಾಯಮಾಡುತ್ತೇನೆ.

* * * * *

# ಜಮೀನು ಮತ್ತು ಕುಟುಂಬದ ಸ್ವಾತಂತ್ರ್ಯ ರಕ್ಷಣೆಯಲ್ಲಿ

**ಮೂರು ವಾರಗಳ ಚಳವಳಿಯ ಉದ್ದೇಶ**

ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದೀನ್ ದಯಾಳ್ ಉಪಾಧ್ಯಾಯ ಅವರು ಕೆಳಕಂಡ ಹೇಳಿಕೆಯನ್ನು ನೀಡಿದ್ದಾರೆ:

ದೇಶದ ಪಾರಂಪರಿಕ ಕೃಷಿ ನೆಲೆಯನ್ನು ನಾಶಪಡಿಸುವ ಉದ್ದೇಶ ಹೊಂದಿದ ನಾಗಪುರ ಕಾರ್ಯನೀತಿಯನ್ನು ಕಾಂಗ್ರೆಸ್ ಅನುಸರಿಸುವುದನ್ನು ಚಂಢೀಗಢದ ಎಐಸಿಸಿ ಅಧಿವೇಶನದಲ್ಲಿ ಪುನರುಚ್ಚರಿಸಿರುವುದು ವಿಷಾದಕರ. ಪಂಡಿತ್ ನೆಹರೂ ಅವರು ಸಹಕಾರಿ ಬೇಸಾಯದಲ್ಲಿ ತಮ್ಮ ನಂಬಿಕೆಯನ್ನು ಪುನರುಚ್ಚರಿಸಿದ್ದಾರೆ. ಅವರ ಆದರ್ಶವನ್ನು ನಾವು ಪ್ರಶ್ನಿಸುವುದಿಲ್ಲ.  ಆದರೆ ಅದು ವಾಸ್ತವತೆಯಿಂದ ಕೂಡಿಲ್ಲ ಎಂದು ಹೇಳಬೇಕಾಗಿದೆ. ಸಹಕಾರವೆನ್ನುವುದು ಒಳ್ಳೆಯ ತತ್ವವೇ, ಆದರೆ ಅದಕ್ಕೆ ತನ್ನದೇ ಆದ ಮಿತಿಗಳಿವೆ. ಮೊದಲಿನಿಂದ ಕೊನೆಯವರೆಗೆ ವೈಯಕ್ತಿಕ ಗಮನವನ್ನು ಬೇಡುವಂತಹ ಬೇಸಾಯ ಪದ್ಧತಿಗೆ ಅದು ಸೂಕ್ತವಲ್ಲ. ಸಹಕಾರಿ ಬೇಸಾಯವು ಭಾರತೀಯ ಸ್ಥಿತಿಗಳಿಗೆ ತಕ್ಕದ್ದಲ್ಲವೆಂದು ಭಾರತೀಯ ಜನಸಂಘ ಪರಿಗಣಿಸುತ್ತದೆ.

ಸಹಕಾರಿ ಬೇಸಾಯ ಪದ್ಧತಿಯು ಲಕ್ಷಾಂತರ ಕೃಷಿ ಕಾರ್ಮಿಕರನ್ನು ಉದ್ಯೋಗದಿಂದ ಹೊರದೂಡುತ್ತದೆ, ಉಳುವೆ ಮಾಡದ ಕೃಷಿ ವರ್ಗದವರ ಹತೋಟಿಯನ್ನು ಮುಂದುವರಿಸುತ್ತದೆ ಹಾಗೂ ಕೃಷಿ ಉತ್ಪಾದನೆಯಲ್ಲಿ ಸಮಗ್ರ ಕುಂಠಿತವನ್ನುಂಟು ಮಾಡುತ್ತದೆ. ಮಿತಿ ಹೇರಿಕೆಯ ಒಳ್ಳೆಯ ಪರಿಣಾಮಗಳನ್ನು ಹಾಳುಮಾಡುತ್ತದೆ, ಭಾರತದ ಪುನರ್ ಹಂಚಿಕೆಗಾಗಿ ಕಾತರದಿಂದ ಕಾಯುತ್ತಿರುವ ಭೂರಹಿತ ಗೇಣಿದಾರರು ಮತ್ತು ಬಡರೈತರ ಆಕಾಂಕ್ಷೆಗಳು ಸುಳ್ಳಾಗುತ್ತದೆ. ಉಳುವವನನ್ನು ಒಡೆಯನನ್ನಾಗಿಸಿ ಮಾಡುವ ಬದಲು, ಕಾಂಗ್ರೆಸ್ಸಿನ ನೀತಿಯು ಪ್ರತಿಯೊಬ್ಬರನ್ನು ಭೂಹೀನರನ್ನಾಗಿ ಮಾಡಿ, ಭದ್ರತೆ ಅಥವಾ ಗೌರವವಿಲ್ಲದ ಕೂಲಿಯಾಳುಗಳನ್ನಾಗಿ ಮಾಡುತ್ತದೆ.

ಅಲ್ಲದೆ ಎಲ್ಲ ಕಡೆ ವಿಫಲವಾಗಿರುವ ಪ್ರಯೋಗವನ್ನು ಕೈಗೊಳ್ಳಲು ಸಮಯ ಇದಲ್ಲ. ಮೊದಲು ನಾವು ವಿದೇಶಿ ಆಹಾರದಿಂದ ಬಿಡುಗಡೆ ಹೊಂದೋಣ. ಆದರ್ಶ ರಾಜ್ಯದ ವೈಭವವನ್ನು ಪ್ರಯೋಗಿಸುವ ಮೊದಲು ಭದ್ರ ಮತ್ತು ಫಲಪ್ರದ

ಕೃಷಿಯನ್ನು ಅಭಿವೃದ್ಧಿಪಡಿಸೋಣ. ಇಪ್ಪತ್ತೈದು ಕೋಟಿ ಜನರಿಗೆ ಅನ್ವಯವಾಗುವ ಮಹತ್ವಾಕಾಂಕ್ಷಿ, ಸಹಕಾರೀಕರಣವನ್ನು ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಸಾಧನಗಳಿಲ್ಲ, ದೇಶ ಸನ್ನದ್ಧವಾಗಿಲ್ಲ. ಇಂಥ ಅಗಾಧ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಸಾಧ್ಯವಿಲ್ಲ ಎಂಬುದು ನಮಗೆ ಖಾತರಿಯಾಗಿದೆ. ಆದರೂ, ಘೋಷಣೆಯ ಬಲವುಳ್ಳ ಕಾಂಗ್ರೆಸ್ ಪಕ್ಷವು ಕೃಷಿ ಅಭಿವೃದ್ಧಿಗೆ ಮಾರಕವಾಗದ ಮನಃಸ್ಥಿತಿಯನ್ನು ಸೃಷ್ಟಿಸುತ್ತಿದೆ. ಅದು ಈಗಾಗಲೇ ವ್ಯಾಪಾರ ಮತ್ತು ಕೈಗಾರಿಕೆಗಳಾದ ಉದ್ಯಮಗಳನ್ನು ಹೆದರಿಸಿದೆ. ಬೇಸಾಯ ವೃತ್ತಿಯ ಜನರಲ್ಲೂ, ಅಸ್ಥಿರತೆ ಮತ್ತು ಗೊಂದಲದ ಅದೇ ವಾತಾವರಣವನ್ನು ಸರ್ಕಾರ ಸೃಷ್ಟಿಸದಿರಲಿ. ಅದರಿಂದ ಉತ್ಪಾದನೆ ಕುಂಠಿತವಾಗುತ್ತದೆ. ಭಾರತದಲ್ಲಿ ಕೃಷಿ ಅಭಿವೃದ್ಧಿಗೆ ಶಕ್ತ ಸಾಧ್ಯತೆಗಳಿವೆ, ಆದರೆ ಸರ್ಕಾರದ "ನಾಯಿಯನ್ನು ಕೂಡಿಹಾಕುವ ನೀತಿಯು" ಮಾರಕವಾಗುತ್ತದೆ.

ರೈತಾಪಿ ಜನರಿಗೆ ಸಹಕಾರಿ ಬೇಸಾಯ ಪದ್ಧತಿಯ ಬಗ್ಗೆ ತಿಳಿವಳಿಕೆ ಕೊಡಲು ಹಾಗೂ ಸರ್ಕಾರದ ಉದ್ಯೋಗಗಳು ಹಾಗೂ ಘೋಷಣೆಗಳು ಏನೇ ಇದ್ದರೂ, ಅದು ರೈತನ ಜಮೀನನ್ನು ಕಸಿದುಕೊಳ್ಳುವುದಕ್ಕೆ ಆಸ್ಪದ ಕೊಡದಂತೆ ಜನಸಂಘವು ಅಕ್ಟೋಬರ್ ೧ ರಿಂದ ೨೧ರವರೆಗೆ ೨೧ ದಿನದ ಚಳವಳಿಯೊಂದನ್ನು ಏರ್ಪಡಿಸುತ್ತಿದೆ. ಬೇಸಾಯ ಜಮೀನಿನ ಹಾಗೂ ಕುಟುಂಬದ ಅಂಗವನ್ನು ಸಂರಕ್ಷಿಸಲು ಹಾಗೂ ರೈತನ ಸ್ವಾತಂತ್ರ್ಯದಲ್ಲಿ ನಂಬಿಕೆಯಿರುವ ಎಲ್ಲರಿಗೂ, ಸಹಕಾರಿ ಬೇಸಾಯ ಪದ್ಧತಿಯ ಹೆಸರಿನಲ್ಲಿ ಉಂಟುಮಾಡುತ್ತಿರುವ ಸಮಷ್ಟೀಕರಣದ ವಿರುದ್ಧ ನಡೆಯುವ ಚಳವಳಿಗೆ ಸಂಪೂರ್ಣ ಸಹಕಾರ ನೀಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

* * * * *

# ಪಂಡಿತ್ ಮೌಳಿಚಂದ್ರರ ರಾಜೀನಾಮೆ ಕುರಿತು ದೀನ್ ದಯಾಳರ ಹೇಳಿಕೆ

ಪಂಡಿತ ಮೌಳಿಚಂದ್ರ ಶರ್ಮ ಅವರು ಭಾರತೀಯ ಜನಸಂಘದ ಅಧ್ಯಕ್ಷ ಸ್ಥಾನ ಮತ್ತು ಸಾಮಾನ್ಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದುದಾಗಿ ನಾನು ವೃತ್ತಪತ್ರಿಕೆಗಳಿಂದ ತಿಳಿದಿದ್ದೇನೆ. ಕೇಂದ್ರ ಕಛೇರಿಗೆ, ಈ ರಾಜೀನಾಮೆ ವಿಷಯ ತಲುಪಿಲ್ಲದಿರುವುದು ಆಶ್ಚರ್ಯವೇ ಸರಿ. ಅದಕ್ಕೆ ತದ್ವಿರುದ್ಧವಾಗಿ, ನನ್ನ ಸಂಪರ್ಕದಲ್ಲಿ ಪಂಡಿತ್ ಶರ್ಮರವರು ಈ ವದಂತಿಯನ್ನು ಅಲ್ಲಗಳೆದು, ರಾಜೀನಾಮೆ ನೀಡಿರುವ ವಿಷಯವನ್ನು ನಿರಾಕರಿಸಿದರು.

ಪಂ. ಶರ್ಮರವರು ಹೇಳಿಕೆಯೊಂದನ್ನು ನೀಡಿ, ಅದರ ಅಧಿಕೃತ ಪ್ರತಿ ನಮ್ಮ ಕಛೇರಿಗೆ ಇನ್ನು ತಲುಪಿಲ್ಲ. ಹಾಗಾಗಿ ಪತ್ರಿಕೆಗಳು ಭಿನ್ನ ಹೇಳಿಕೆಗಳನ್ನು ಪ್ರಕಟಿಸಿವೆ. ಅವರಲ್ಲಿ ತಮ್ಮ ಅಭಿಪ್ರಾಯಗಳನ್ನು ಅದೆಷ್ಟೇ ಅಸಮರ್ಪಕವಾಗಿದ್ದಿದ್ದರೂ ಸಹ – ನವೆಂಬರ್ ೧೯೫೪ರ ೭ ಮತ್ತು ೮ರಂದು ನಡೆಯುತ್ತಿರುವ ಕಾರ್ಯಕಾರಿ ಸಮಿತಿಯ ಮುಂದೆ ಮಂಡಿಸಬಹುದಾಗಿತ್ತು. ಅವರ ರಾಜೀನಾಮೆ, ಅವರು ನೀಡಿರುವ ಹೇಳಿಕೆಯಲ್ಲಿ ವ್ಯಕ್ತಪಡಿಸಲಾದ ಕಾರಣಗಳಿಂದ ಉತ್ತೇಜಿತವಾಗಿಲ್ಲ. ಕಾರ್ಯಕಾರಿ ಸಮಿತಿಯು ಇಷ್ಟರಲ್ಲೇ ಸಭೆ ನಡೆಸಿ, ಅದಕ್ಕೆ ಅರ್ಹವೆನಿಸಿದ ಗಮನವನ್ನು ನೀಡುತ್ತದೆ.

ಏನಾದರೂ, ನಾನು ಒಂದು ವಿವರಣೆಯನ್ನು ನೀಡಲೇಬೇಕು ಏಕೆಂದರೆ, ಪಂಡಿತ್ ಮೌಳಿಚಂದ್ರ ಅವರು, ನಾನು ಭಾರತೀಯ ಪ್ರತಿನಿಧಿ ಸಭಾದ ಸಭೆಯನ್ನು ಕರೆಯದೆ ಇರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರತಿನಿಧಿ ಸಭಾ ತನ್ನ ಇಂದೋರ್ ಅಧಿವೇಶನದಲ್ಲಿ, ಪ. ಮೌಳಿ ಚಂದ್ರ ಶರ್ಮ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕೆಲವು ಅಭಿಪ್ರಾಯಗಳ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿದರು. ಅದನ್ನು ಅವರ ಗೈರುಹಾಜರಿಯಲ್ಲಿ ಓದಿ ಅದರಲ್ಲಿನ ಕೆಲವು ಅಂಶಗಳ ಬಗ್ಗೆ ಸ್ಪಷ್ಟೀಕರಣವನ್ನು

---

**ಮೂಲ ಆಕರ : ಆರ್ಗನೈಸರ್, ೨೬, ಜನವರಿ, ೧೯೫೬**

ಕೇಳುವಂತೆ ಸರ್ವಾನುಮತ ನಿರ್ಣಯವನ್ನು ಮಂಡಿಸಿದರು. ಕೇವಲ ಆ ಉದ್ದೇಶವಾಗಿ ಸಭೆಯೊಂದನ್ನು ನಡೆಸಬೇಕೆಂದು ಪ್ರತಿನಿಧಿ ಸಭಾ ಎಂದಿಗೂ ಆಶಿಸಿರಲಿಲ್ಲ.

ಇಂದೋರ್ ಅಧಿವೇಶನ ನಡೆದ ಎರಡು ತಿಂಗಳುಗಳ ಮೌನದ ನಂತರ, ಪಂಡಿತ್ ಮೌಳಿ ಚಂದ್ರ ಅವರು ನವೆಂಬರ್ ೭ ಮತ್ತು ೮ರಂದು ಪ್ರತಿನಿಧಿ ಸಭಾದ ಸಭೆ ನಡೆಯಬೇಕೆಂಬ ಆಸಕ್ತಿಯನ್ನು ವ್ಯಕ್ತಪಡಿಸಿದರು. ಕೆಲವು ಪ್ರಾಂತ್ಯಗಳಲ್ಲಿ ಈ ದಿನಗಳಂದು ಸಮ್ಮೇಳನವನ್ನು ನಡೆಸಲು ಉದ್ದೇಶಿಸಲಾಗಿದ್ದು, ಭಾರತೀಯ ಪ್ರತಿನಿಧಿ ಸಭಾದ ಸಭೆಯು ಅಂದು ನಡೆದಿದ್ದರೆ, ಅವರ ಕಾರ್ಯಕ್ರಮಗಳಿಗೆ ಭಂಗ ಬರುತ್ತಿತ್ತು. ಅಲ್ಲದೆ, ಪ್ರತಿನಿಧಿ ಸಭಾದ ಸಭೆಯನ್ನು ಕರೆಯುವ ಅಧಿಕಾರವು ಜನಸಂಘದ ಸಂವಿಧಾನದ ಪ್ರಕಾರ ಪರಿಚ್ಛೇದ ೧೨ (ಸಿ)ರ ಪ್ರಕಾರ ಕಾರ್ಯಕಾರಿ ಸಮಿತಿಗೆ ಮಾತ್ರ ಇದೆ. ಹಾಗಾಗಿ, ಈ ವಿಷಯವನ್ನು ಮುಂಬರುವ ಕಾರ್ಯಕಾರಿ ಸಮಿತಿ ಕಾರ್ಯಸೂಚಿಯಲ್ಲಿ ಇಡಲಾಗಿದೆ. ಅಧ್ಯಕ್ಷರೇ ಹೇಳಿದ್ದರೂ, ಸಂವಿಧಾನದ ಲಭ್ಯತೆಗಳನ್ನು ಮೀರುವುದು ನನ್ನ ಪಾಲಿಗೆ ಸಿಂಧುವಾಗುತ್ತಿರಲಿಲ್ಲ.

ವಾಸ್ತವಾಂಶವೆಂದರೆ, ಪಂಡಿತ್ ಮೌಳಿ ಚಂದ್ರ ಶರ್ಮರವರು ಕಾರ್ಯಕಾರಿ ಸಮಿತಿಯ ಸದಸ್ಯರಿಗಾಗಲಿ ಅಥವಾ ಪ್ರತಿನಿಧಿ ಸಭಾದ ಸದಸ್ಯರಿಗಾಗಲಿ ಭೇಟಿ ಅವಕಾಶ ಕೊಡಲು ಸಿದ್ಧರಿಲ್ಲ. ಆದ್ದರಿಂದ, ಅವರು ಇಂದೋರಿಗೆ ಪ್ರತಿನಿಧಿ ಸಭಾದ ಸಭೆಯಲ್ಲಿ ಭಾಗವಹಿಸಲು ಹೋಗುವುದನ್ನು ತಪ್ಪಿಸಿಕೊಂಡರು. ಕಾರ್ಯಕಾರಿ ಸಮಿತಿಯ ಸಭೆಯು ೭ರಂದು ಇರುವಾಗ ಅವರು ಹೇಳಿಕೆಯಂತೆ ಪ್ರತಿನಿಧಿಗಳಿಗೆ ಮಾಡಿ ಹೋಗಿದ್ದಾರೆ. ಅದರ ಪ್ರತಿಯೊಂದನ್ನು ಜನಸಂಘದ ಕಛೇರಿಗೆ ಕಳುಹಿಸುವ ಸೌಜನ್ಯವನ್ನು ತೋರಿಸಿಲ್ಲ.

* * * * *

# ಜನಸಂಘ ಮತ್ತು ಭೂಸುಧಾರಣೆಗಳು

ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಜನಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ದೀನ್ ದಯಾಳ್ ಉಪಾಧ್ಯಾಯ ಅವರು ಹೇಳಿದ್ದೇಂದರೆ:

ನೆಹರೂ–ನೂನ್, ಅವರ ಒಪ್ಪಂದವನ್ನು ಭಾರತ ಸರ್ಕಾರ ಏಕಪಕ್ಷೀಯವಾಗಿ ಅನುಷ್ಠಾನಗೊಳಿಸಲು ಆತುರಪಡುತ್ತಿರುವುದು ಗೊಂದಲಮಯವಾಗಿದೆ. ಹಾಗೆ ನೋಡಿದರೆ, ಆ ಒಪ್ಪಂದವನ್ನು ತುಕರ್‌ಗ್ರಾಮ್ ಮತ್ತು ಲಖಿಂಪುರ್‌ನಲ್ಲಿ ಉಂಟಾದ ಪಾಕಿಸ್ತಾನಿ ಆಕ್ರಮಣದ ಹಿನ್ನೆಲೆಯಲ್ಲಿ ಅತ್ಯಂತ ಹೀನಾಯಕರ ರೀತಿಯಲ್ಲಿ ಕೈಗೊಳ್ಳಲಾಯಿತು. ಅದು ಪರಿಪೂರ್ಣವಾಗಲಿ, ವೈಚಾರಿಕವಾಗಿಯೂ ಇರಲಿಲ್ಲ. ಪಾಕಿಸ್ತಾನ ಹಕ್ಕೊತ್ತಾಯ ಮಾಡಿದ್ದನ್ನೆಲ್ಲಾ ಭಾರತ ಒಪ್ಪಿಕೊಂಡರೂ ಭಾರತದ ಯಾವ ಅಂಶಗಳನ್ನು ಪಾಕಿಸ್ತಾನ ಒಪ್ಪಿಕೊಳ್ಳಲಿಲ್ಲ. ಅದು ರಾಡ್‌ಕಿನ್ ಮತ್ತು ಬಾಗ್ ವರದಿ ರೀತ್ಯಾ ಗಡಿ ವಿವಾದಗಳನ್ನು ಪರಿಹರಿಸಲಿಲ್ಲ. ಅಥವಾ ಗಡಿಗಳ ಯಾವುದೇ ವೈಜ್ಞಾನಿಕ ವಿಭಾಗವನ್ನಾಗಲಿ ಪ್ರಸ್ತಾಪ ಮಾಡಲಿಲ್ಲ. ಅದರ ಬದಲು, ಇಚ್ಛರ್‌ಮತಿ ನದಿ ಮತ್ತು ಬೆರುಬಾರಿ ಯೂನಿಯನ್‌ನ ಹೊಸ ಸಮಸ್ಯೆಗಳನ್ನು ತೆಗೆದುಕೊಂಡು, ಗಡಿಪರಿಸ್ಥಿತಿಯನ್ನು ಅದು ಇನ್ನಷ್ಟು ಬಿಗಡಾಯಿಸುವಂತೆ ಮಾಡಿದೆ. ಪಾಕಿಸ್ತಾನದಲ್ಲಿನ ಬದಲಾದ ಅಕ್ರಮದ ಸಂದರ್ಭಗಳು, ತುಕರ್‌ಗ್ರಾಮ್ ಮತ್ತು ಲಖಿಂಪುರ್‌ನ ಭಾರತದ ಗಡಿಯೊಳಗಿನ ಪಾಕಿಸ್ತಾನದ ಮುಂದುವರಿದ ನುಸುಳುವಿಕೆ, ಯುದ್ಧ ವಿರಾಮ ಒಪ್ಪಂದದ ಅನೇಕ ಉಲ್ಲಂಘನೆಗಳು ನಮ್ಮ ರಾಯಭಾರ ಸಿಬ್ಬಂದಿಯ ಮೇಲಿನ ದೌರ್ಜನ್ಯ, ಪಾಕ್‌ನ ಹೊಸದಾದ ಕಾಲ್ಪನಿಕ ಬೇಡಿಕೆಗಳು ಪಾಕಿಸ್ತಾನ ಸಂಬಂಧಿತ ಒಪ್ಪಂದವನ್ನು ಅನುಷ್ಠಾನಗೊಳಿಸಲು ಮಾಡುತ್ತಿರುವ ನಿರಾಕರಣೆಗಳು, ಆ ಒಪ್ಪಂದ ಸಹಿ ಹಾಕಲು ಇರುವ ಯಾವುದೇ ಸಮರ್ಥನೆಯನ್ನು ಅಲ್ಲಗಳೆದಿದೆ. ಆ ಒಪ್ಪಂದವನ್ನು ಅನೂರ್ಜಿತಗೊಳಿಸುವುದನ್ನು ತಪ್ಪಿಸಬೇಕು. ಅದರ ಬದಲು, ಕಳೆದುಹೋದ ಗಡಿಯನ್ನು ಮರಳಿ ಪಡೆಯಲು ಅಗತ್ಯ ಕ್ರಮಗಳನ್ನು ಕೈಕೊಳ್ಳಬೇಕು. ಬೆರುಬಾರಿ ಯೂನಿಯನ್ ಅನ್ನು ಪಾಕಿಸ್ತಾನಕ್ಕೆ ಹಸ್ತಾಂತರ ಮಾಡುವುದರ ವಿರುದ್ಧ

---

**ಮೂಲ ಆಕರ : ಆರ್ಗನೈಸರ್, ೨೦, ಏಪ್ರಿಲ್, ೧೯೫೯**

ಸರ್ಕಾರವನ್ನು ಒತ್ತಾಯ ಮಾಡುವಂತೆ, ಭಾರತೀಯ ಜನಸಂಘವು ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಲು ನಿರ್ಧರಿಸಿದೆ.

**ಭೂ ಸುಧಾರಣೆಗಳು**

ನಾಗಪುರದ ಕಾಂಗ್ರೆಸ್ ಅಧಿವೇಶನದ ಭೂಸುಧಾರಣೆ ಕುರಿತ ನಿರ್ಣಯಗಳು ದೇಶದಲ್ಲಿ ಒಂದು ರೀತಿಯ ಅನಿಶ್ಚಿತತೆ ಮತ್ತು ಗೊಂದಲವನ್ನು ಸೃಷ್ಟಿಸಿದೆ. ಭೂಮಿ–ಉಳುವವನ ಪರಸ್ಪರ ಸಂಬಂಧದ ಉದ್ದೇಶ ಮತ್ತು ಗುರಿಗಳ ಬಗ್ಗೆ ಕಾಂಗ್ರೆಸ್ ನಾಯಕರು ಉನ್ನತ ಮಟ್ಟದಲ್ಲಿ ನೀಡುತ್ತಿರುವ ವಿಭಿನ್ನ ವ್ಯಾಖ್ಯಾನಗಳು ಗೊಂದಲವನ್ನು ಹೆಚ್ಚಿಸಿವೆ. ಇಡೀ ಸಮಸ್ಯೆಯ ಬಗ್ಗೆ ವಿಧಿಸಲಾದ ಪರಿಶೀಲನೆ ಮಾಡುವುದರ ಬದಲು, ವರ್ಗ ಸಂಘರ್ಷವನ್ನುಂಟುಮಾಡುವಂತಹ ವಿವಾದ ಸೃಷ್ಟಿಯಾಗುತ್ತಿದೆ.

ಉಳುವವನೆ ಒಡೆಯನಾಗಿ ತನ್ನ ಪರಿಶ್ರಮದ ಫಲವನ್ನನುಭವಿಸುವಂತಾಗುವ ದೃಷ್ಟಿಯಿಂದ ಜನಸಂಘವು ಭೂ ಕಾಲಮಿತಿ ಪದ್ಧತಿಯನ್ನು ಸುಧಾರಿಸುವ ಆವಶ್ಯಕತೆಯನ್ನು ಮನಗಂಡಿದೆ. ಆದ್ದರಿಂದ, ಅದು ಕಾರ್ಯರಹಿತ ಮಧ್ಯವರ್ತಿಗಳ ಮತ್ತು ಭೂ ಉಳುಮೆ ಇರುವವರ ಹಿತವನ್ನು ನಾಶಪಡಿಸಿ, ಸಂಪೂರ್ಣ ಮತ್ತು ವರ್ಗಾವಣೆ ಮಾಡಲಾಗದಂತಹ ಮಾಲೀಕತ್ವವನ್ನು ಭೂಮಿಯ ಮೇಲೆ ರೈತರಿಗೆ ನೀಡುವುದರ ಪರವಾಗಿದೆ. ಭೂಮಿ ಮತ್ತು ಮನುಷ್ಯನ ಪ್ರಮಾಣವನ್ನು ಪರಿಗಣಿಸಿ, ಪಾರಂಪರಿಕ ಸಾಧನಗಳಿಂದಲೇ ತೀವ್ರವಾದ ಬೇಸಾಯುವನ್ನು ಅಗತ್ಯ ಸುಧಾರಣೆಯೊಂದಿಗೆ, – ಗುರಿಯಾಗಿಟ್ಟುಕೊಳ್ಳಬೇಕೆಂಬುದು ಜನಸಂಘದ ನಿಲುವು. ಯಾಂತ್ರೀಕೃತ ಬೇಸಾಯ ಬೃಹತ್‌ಪ್ರಮಾಣದ ನಿರುದ್ಯೋಗವನ್ನುಂಟು ಮಾಡಿದರೆ, ಸಾಧಾರಣ ಮತ್ತು ಎತ್ತುಗಳ ಮತ್ತು ನೇಗಿಲ ಸಹಾಯದಿಂದ ಬೃಹತ್ ಪ್ರಮಾಣದ ಬೇಸಾಯ, ಗರಿಷ್ಟ ಪ್ರಮಾಣದ ಇಳುವರಿಯನ್ನು ನೀಡುವುದಿಲ್ಲ. ಬೃತಹ್ ಜಮೀನನ್ನು ಜನ ಹೊಂದಿದ್ದರೆ, ಅವುಗಳನ್ನು ಬೇಸಾಯ ಮಾಡದೆ ಹೋಗಬಹುದು ಅಥವಾ ಕಡಿಮೆ ಮಟ್ಟದಲ್ಲಿ ಉಳುಮೆಯಾಗಬಹುದು ಅಥವಾ ಅಂತಹ ಕಡೆ ಗೈರು ಜಮೀನ್ದಾರರು ಉಂಟಾಗಬಹುದು. ಸ್ವಂತ ಬೇಸಾಯ ಮಾಡುವ ರೈತ ಯಜಮಾನಿಕೆ ಮಾತ್ರ ಗರಿಷ್ಠ ಫಲವನ್ನು ನೀಡುವುದರಿಂದ ಜಮೀನು ಬಗ್ಗೆ ಮಿತಿ ಹೇರುವುದು ಆವಶ್ಯಕ. ಐದು ಎಕರೆಯಷ್ಟು ಉತ್ತಮ ನೀರಾವರಿ ಜಮೀನನ್ನು ಕನಿಷ್ಠ ಮಿತಿಯನ್ನಾಗಿಸುವುದನ್ನು ಜನಸಂಘ ಒಪ್ಪುತ್ತದೆ. ಅದನ್ನು ಯಾವುದೇ ರೀತಿಯಲ್ಲಿ ವಿಭಾಗಿಸುವುದನ್ನಾಗಲಿ, ಪರಭಾರೆ ಮಾಡುವುದಾಗಲಿ ಸಾಧ್ಯವಿರಕೂಡದು. ಗರಿಷ್ಠ ಮಿತಿಯನ್ನು ಉತ್ತಮ ನೀರಾವರಿಯನ್ನು ೩೦ ಎಕರೆ ಅಥವಾ ಅದಕ್ಕೆ ಸಮನಾದ ವರ್ಷಕ್ಕೆ ೬೦೦೦/– ರೂಪಾಯಿಯ ಇಳುವರಿ ಎಂದಿಟ್ಟುಕೊಳ್ಳಬಹುದು. ಅವಿಭಜಿತ

ಹಿಂದೂ ಕುಟುಂಬ (ಐದು ಸದಸ್ಯರನ್ನು ಹೊಂದಿರುವ) ತಾವೇ ಭಾಗವಾಗಿದ್ದರೆ, ಸಾಧ್ಯವಾದಷ್ಟು ಜಮೀನನ್ನು ಹೊಂದಲು ಅವಕಾಶವಿರಬೇಕು.

ಜಮೀನನ್ನು ಒಗ್ಗೂಡಿಸಿ, ರೈತರನ್ನು ಕೇವಲ ಕೃಷಿ ಕಾರ್ಮಿಕರನ್ನಾಗಿ ಮಾಡುವ ಸಹಕಾರಿ ತತ್ತ್ವದ ವಿಸ್ತರಣೆಯನ್ನು ಜನಸಂಘ ವಿರೋಧಿಸುತ್ತದೆ. ತೀವ್ರಕಾಲೀನ ಕೇಂದ್ರಿತ ಬೇಸಾಯ ಪದ್ಧತಿಗೆ ಹೆಚ್ಚು ಜನರ ಅಗತ್ಯವಿರುವುದು ನಮ್ಮ ದೇಶಕ್ಕೆ ಅನ್ವಯಿಸುವುದಿಲ್ಲ. ಅಶಿಸ್ತು, ಅಸಾಮರ್ಥ್ಯ, ಮತ್ತು ಗೊಂದಲವನ್ನು ಸೃಷ್ಟಿಸದೆ, ಜನ ಒಟ್ಟಾಗಿ ದುಡಿಯುವುದಕ್ಕೂ ಒಂದು ಮಿತಿಯಿದೆ. ಈ ಮಿತಿಯು ಉತ್ಪಾದನೆಯ ವಿಧಾನವಾಗಿತ್ತು. ಸಾಧನಗಳಂತೆಯೇ ಸಾಮಾಜಿಕ ಸ್ಥಿತಿಗತಿಗಳಿಂದಲೂ ನಿಗದಿಯಾಗಿದೆ. ತನ್ನದೇ ಆದ ಜಮೀನಿನಲ್ಲಿ ಕೆಲಸ ಮಾಡುವ ರೈತ ಕುಟುಂಬ ಉತ್ತಮ ಫಲಿತಾಂಶವನ್ನು ಪಡೆಯಬಹುದು. ಸಹಕಾರಿ ಬೇಸಾಯವನ್ನು ಅಳವಡಿಸಿದರೆ, ಅದು ಉತ್ಪಾದಕಾ ಸಾಮರ್ಥ್ಯವನ್ನು ಕುಂಠಿತಗೊಳಿಸಿ ಉತ್ಪಾದನೆಯ ಕುಸಿತಕ್ಕೆ ಎಡೆ ಮಾಡಿಕೊಡುತ್ತದೆ. ಸಹಕಾರಿ ಬೇಸಾಯವು ಈಗಾಗಲೇ ಇರುವ ಗ್ರಾಮೀಣ ನಿರುದ್ಯೋಗ ಸಮಸ್ಯೆಯನ್ನು ತೀವ್ರಗೊಳಿಸುತ್ತದೆ. ಈ ನಿರುದ್ಯೋಗಿಗಳನ್ನು ಕೈಗಾರಿಕಾ ವಲಯಕ್ಕೆ ಸೇರಿಸುವಂತೆ ಮಾಡಲು ಸಾಧ್ಯವಾಗಿಲ್ಲ, ಸಾಧ್ಯವಾಗುವುದೂ ಇಲ್ಲ.

ಪ್ರಜಾಪ್ರಭುತ್ವದ ಸಹಕಾರಿ ಬೇಸಾಯವು ಒಪ್ಪಿಗೆಯಾಗುವುದಿಲ್ಲ ಎನ್ನುವುದು ಭಾರತೀಯ ಜನಸಂಘದ ನಿರ್ದಿಷ್ಟ ಅಭಿಪ್ರಾಯವಾಗಿದೆ. ಇಡೀ ಪದ್ಧತಿಯನ್ನು ಸ್ವಯಿಚ್ಛೆ ತಳಹದಿಯ ಮೇಲೆ ಅನುಷ್ಠಾನಗೊಳಿಸಲಾಗುತ್ತದೆ ಎಂಬ ಪ್ರಧಾನ ಮಂತ್ರಿಗಳ ಭರವಸೆಗಳ ಮೇಲೆ ನಂಬಿಕೆಯಿಡಲು ಸಾಧ್ಯವಿಲ್ಲ. ಸರ್ಕಾರವು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಾಗ, ಗುರಿ ಹಾಗೂ ಮಿತಿಗಳನ್ನಿಟ್ಟಿರುವುದು, ಉತ್ಸಾಹ ತೋರಿಸಿದಾಗ, ರೈತರನ್ನು ಸಹಕಾರಿ ರಂಗಕ್ಕೆ ಸೇರಿಸಿಕೊಳ್ಳಲು ಒತ್ತಡ ಹೇರಲಾಗುವುದು. ಮತ್ತು ಆರ್ಥಿಕ ನಿರ್ಧಾರದ ಕ್ಷೇತ್ರಕ್ಕೆ ಅವರನ್ನು ಸೇರಿಸಲ್ಪಟ್ಟರೆ, ಅಧಿಕಾರಿಗಳು ಕಾರ್ಯಗತಗೊಳಿಸುವ ಯೋಜನೆಗಳು ಹಾಗೂ ನೀತಿಗೆ ಬಲವಂತವಾಗಿ ಒಳಪಡಬೇಕಾಗುತ್ತದೆ. ಅಧಿಕಾರಶಾಹಿಯಿಂದ ನಿಯಂತ್ರಣಕ್ಕೊಳಪಟ್ಟ ರೈತಾಪಿವರ್ಗ, ರಾಜಕೀಯ ಮತ್ತು ಚುನಾವಣಾ ವಿಷಯಗಳಲ್ಲೂ ಮುಕ್ತ ಆಯ್ಕೆಯನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ. ಸಾಮೂಹಿಕ ತತ್ವ ಮತ್ತು ಕೇಂದ್ರೀಕರಣದ ಕಡೆ ವಾಲುವ ಶಕ್ತಿಗಳು ಉತ್ಪತ್ತಿಯಾದರೆ, ಸ್ವಯಂ ಹಾಗೂ ಪ್ರಜಾಪ್ರಭುತ್ವವಾದಿ ತತ್ವಗಳ ಕಡೆಗೆ ಅಂಟಿಕೊಳ್ಳಲು ಸಾಧ್ಯವಿಲ್ಲ. ಇಡೀ ನಡವಳಿಯನ್ನು ತಿರುಗುಮುರುಗು ಮಾಡುವವರೆಗೆ.

ಭೂ ಹಿಡುವಳಿ ಪದ್ಧತಿಯಲ್ಲಿ ಬದಲಾವಣೆಗಳು ಆವಶ್ಯಕ ಹಾಗೂ ಅಪೇಕ್ಷಣೀಯ. ಆದರೆ ಅವುಗಳಿಂದಲೇ ಕೃಷಿ ಉತ್ಪಾದನೆ ಅಧಿಕವಾಗುತ್ತದೆಂದು

ಹೇಳಲಾಗುವುದಿಲ್ಲ. ಉತ್ತಮ ಬೀಜಗಳು, ಗೊಬ್ಬರ, ನೀರಾವರಿ ಅನುಕೂಲಗಳು, ಎತ್ತುಗಳು, ಉಪಕರಣಗಳು, ಕೀಟನಾಶಕಗಳು, ಸಾಲ ಮತ್ತು ಮಾರುಕಟ್ಟೆ ಸೌಲಭ್ಯ ಇವುಗಳಿಲ್ಲದೆ ಕೃಷಿಯಲ್ಲಿ ಯಾವುದೇ ಸುಧಾರಣೆಯಾಗಲು ಸಾಧ್ಯವಿಲ್ಲ. ರೈತರ ಆವಶ್ಯಕತೆಗಳಿಗೆ ಈ ವಿಷಯಗಳಲ್ಲಿ ಸಹಕಾರಿ ಸಂಸ್ಥೆಗಳು ಸಹಾಯ ಮಾಡಬಹುದು. ಹಿಡುವಳಿ ಬದಲಾವಣೆಗಳ ಮೇಲಿನ ಅತಿಯಾದ ಮಹತ್ವವೇ ಕೃಷಿಕರ ಆವಶ್ಯಕ ಸಹಾಯಗಳ ನಿರ್ಲಕ್ಷ್ಯಕ್ಕೆ ಮುಖ್ಯವಾಗಿ ಕಾರಣವಾಗಿವೆ. ಆದ್ದರಿಂದ ಜನಸಂಘವು, ಸೇವಾ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವ ಕಾರ್ಯಕ್ರಮಗಳನ್ನು ಸ್ವಾಗತಿಸುತ್ತದೆ. ಈ ಸಂಸ್ಥೆಗಳಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಲು, ಈ ಸಹಕಾರಿ ಸಂಸ್ಥೆಗಳನ್ನು ಸಹಕಾರಿ ಬೇಸಾಯ ಪದ್ಧತಿಯೊಂದಿಗೆ ತಳಕು ಹಾಕಬಾರದು. ಅವುಗಳನ್ನು ಪಕ್ಷದ ಉಸ್ತುವಾರಿಯಿಂದ ಮುಕ್ತವಾಗಿಸಬೇಕು.

* * * * *

# ಜಬಲ್‌ಪುರದಿಂದ ದೂರವಿರಿ
# ರಾಜಕೀಯ ಪಕ್ಷಗಳಿಗೆ ದೀನ್ ದಯಾಳ್ ಅವರ ಎಚ್ಚರಿಕೆ

ಜಬಲ್‌ಪುರದಲ್ಲಿ ಉಂಟಾಗಿರುವ ಘಟನೆ ನೋವನ್ನುಂಟು ಮಾಡಿರುವಂತಹುದು, ಆದರೆ, ಜವಾಬ್ದಾರಿಯುತ ಪತ್ರಿಕೆಗಳು ಮತ್ತು ರಾಜಕಾರಣಿಗಳು ಭಾರತದಲ್ಲಿ, ಈ ವಿಷಾದಕರ ಘಟನೆಗಳಿಗೆ ಪ್ರತಿಕ್ರಿಯಿಸುತ್ತಿರುವ ರೀತಿ ಅಪಮಾನಕರ ಮತ್ತು ಹಾನಿಕಾರಕವಾಗಿದೆ. ನಾವು ಸಮರ್ಪಕ ದೃಷ್ಟಿಯಿಂದ ಘಟನೆಗಳನ್ನು ವಿಶ್ಲೇಷಿಸುವ ಮತ್ತು ತೀರ್ಮಾನಿಸುವ ಸಾಮರ್ಥ್ಯವನ್ನು ಕಳೆದುಕೊಂಡಿದ್ದೇವೆ ಎನ್ನುವುದನ್ನು ಅದು ತೋರಿಸುತ್ತದೆ. ನಾವು ವಿಚಾರಶಕ್ತಿಗಿಂತ ಹೆಚ್ಚಾಗಿ ಒಳಪ್ರೇರಣೆಯಿಂದ ಉತ್ತೇಜಿತರಾಗುತ್ತೇವೆ. ಪ್ರಧಾನ ಮಂತ್ರಿ ಮತ್ತು ಅವರ ಅಭಿಪ್ರಾಯಗಳನ್ನು ಪ್ರತಿಧ್ವನಿಸುವುದು ಅವರ ಕರ್ತವ್ಯವೆಂದು ತಿಳಿದಿರುವುದರ ಘೋಷಣೆಗಳಲ್ಲಿ ಯಾವುದೇ ತರ್ಕವಿರುವುದೇ ಆದರೆ, ಅದು ರಾಷ್ಟ್ರೀಯ ಮತ್ತು ಅಡೆತಡೆಯುಳ್ಳದ್ದು ಎನ್ನುವುದಕ್ಕಿಂತ, ಪಕ್ಷಪಾತ ಮತ್ತು ಪೂರ್ವಗ್ರಹವುಳ್ಳದ್ದಾಗಿದೆ. ವಿಷಯಗಳನ್ನು ಗ್ರಹಿಸಿ, ಇಡೀ ಪ್ರಸಂಗದ ಮೂಲಕಾರಣವನ್ನು ತಿಳಿಯದೆ, ಅವರು ತಪ್ಪಿತಸ್ಥರೆಂದು ಕಂಡುಬರುವವರನ್ನು ಖಂಡಿಸಿ ಮುಗ್ಧರೆಂಬ ಮುಖವಾಡ ಧರಿಸಿರುವ ಬಲಿಪಶುಗಳ ಬಗ್ಗೆ ಅನುಕಂಪ ತೋರಿಸುತ್ತಿದ್ದಾರೆ. ಜಬಲ್‌ಪುರ ಘಟನೆ ಬಗ್ಗೆ ಅಧ್ಯಕ್ಷ ಅಯೂಬ್‌ರವರು ಪ್ರಧಾನ ಮಂತ್ರಿ ನೆಹರೂರವರಿಂದ ಕೋಲಾಹಲ ಎಬ್ಬಿಸುವ ಬಗ್ಗೆ ಸೂಚನೆ ಪಡೆದಿದ್ದಾರೆ.

ಜಬಲ್‌ಪುರದಲ್ಲಿ ಜೀವ ಮತ್ತು ಆಸ್ತಿಪಾಸ್ತಿ ನಷ್ಟವಾಗಿರುವುದು ನಿಜ. ಆದರೆ, ಅದು ಯಾವುದೇ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ. ಅಸ್ಪಷ್ಟ ಮತ್ತು ಸಾಮಾನ್ಯ ಶಬ್ದಗಳಲ್ಲಿರುವ ಸರ್ಕಾರದ ಪತ್ರಿಕಾ ಹೇಳಿಕೆಯು, ಪಾಕಿಸ್ತಾನ ಮತ್ತು ಮುಸ್ಲಿಂ ಮತೀಯ ಪತ್ರಿಕೆಗೆ ಅನುಕೂಲ ಮಾಡಿಕೊಟ್ಟು, ಮುಸ್ಲಿಮರು ಮಾತ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ ಎನ್ನುವಂತೆ ಪ್ರಚಾರ ಕೊಡಲಾಗಿದೆ. ವಾಸ್ತವ ಅದಕ್ಕಿಂತ ದೂರವಾಗಿದೆ. ಹಿಂದೂಗಳು ಕಡಿಮೆ ತೊಂದರೆ ಅನುಭವಿಸಿಲ್ಲ. ಮುಸ್ಲಿಮರು

---

**ಮೂಲ ಆಕರ : ಆರ್ಗನೈಸರ್, ೬, ಮಾರ್ಚ್, ೧೯೬೧**

ಏನಾದರೂ ಕಳೆದುಕೊಂಡಿದ್ದರೆ, ಅದು ಪೊಲೀಸ್ ಮತ್ತು ಮಿಲಿಟರಿಯವರೊಂದಿಗೆ ನಡೆಸಿದ ಸೆಣಸಾಟದಿಂದ. ಆದರೆ, ಹಿಂದೂಗಳು, ವ್ಯವಸ್ಥಿತ ಮುಸ್ಲಿಂ ಗುಂಪಿನವರ ಪೂರ್ವಯೋಜಿತ ಆಕ್ರಮಣದಿಂದ ಬಲಿಪಶುಗಳಾಗಿದ್ದಾರೆ. ಪೊಲೀಸ್ ಮತ್ತು ಮಿಲಿಟರಿಯವರು ಬಲ ಪ್ರಯೋಗಿಸಿದ್ದು ಸಮರ್ಥನೀಯವೇ ಎಂಬ ವಿಚಾರಕ್ಕೆ ಮಧ್ಯಪ್ರದೇಶ ಸರ್ಕಾರ ವಿಚಾರಣೆ ನಡೆಸಲು ಒಪ್ಪಿದೆ. ಪೊಲೀಸ್ ಮತ್ತು ಮಿಲಿಟರಿಯವರು ಸಕಾಲಕ್ಕೆ ಫೆಬ್ರವರಿ ೭ ರಂದು ಬಂದು ಸೂಕ್ತ ಕ್ರಮ ತೆಗೆದುಕೊಳ್ಳದೆ ಇದ್ದರೆ, ಮುಸ್ಲಿಮರು ಆಕ್ರಮಣ ರೂಪಿಸಿದಾಗ, ಇಡೀ ಜಬಲ್‌ಪುರವೇ ಸುಟ್ಟು ಬೂದಿಯಾಗಿರುತ್ತಿತ್ತು ಎಂದು ಜಬಲ್‌ಪುರದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಅರಿವಾಗಿದೆ. ಸಂಬಂಧಪಟ್ಟವರು ಹಾಗೂ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳ ಯಾವ ಪ್ರಚಾರವೂ ಸಾವಿನ ದವಡೆಯಿಂದ ಪಾರಾದ ಸ್ಥಳೀಯರ ಅಭಿಪ್ರಾಯವನ್ನು ಬದಲಿಸಲು ಸಾಧ್ಯವಿಲ್ಲ.

ಮುಂದಿನ ಚುನಾವಣೆಯ ಬಗ್ಗೆ ಕಣ್ಣಿಟ್ಟು ಕಾಂಗ್ರೆಸ್ ಪಿಎಸ್‌ಪಿ ಮತ್ತು ಕಮ್ಯುನಿಸ್ಟರು ಮುಸ್ಲಿಮರನ್ನು ಓಲೈಸಿಕೊಳ್ಳುವುದರಲ್ಲಿ ಸ್ಪರ್ಧೆ ನಡೆಸಿದ್ದನ್ನು ನಾನು ಜಬಲ್‌ಪುರದಲ್ಲಿ ನೋಡಿದೆ. ಗುಂಪು ಹಲ್ಲೆಯ ಗುರಿಯಾಗಿದ್ದ ಯಾವ ಹಿಂದೂ ಮೊಹಲ್ಲಾಗಳಿಗೆ ಶ್ರೀಮತಿ ಇಂದಿರಾಗಾಂಧಿಯವರಿಂದ ಶಕೀರ್ ಆಲಿಯವರ ವರೆಗೆ, ಯಾವ ನಾಯಕರೂ ಭೇಟಿಕೊಡುವುದು ಆವಶ್ಯಕವೆಂದು ಪರಿಗಣಿಸಲಿಲ್ಲ. ತಮ್ಮ ಮನೆಗಳನ್ನು ಕಳೆದುಕೊಂಡು ಅಥವಾ ಭಯದಿಂದ ಓಡಿಬಂದ ಮುಸ್ಲಿಮರಿಗೆ ಊಟ ವಸತಿಯನ್ನು ಸರ್ಕಾರದ ಖರ್ಚಿನಲ್ಲಿ ಕೊಡುತ್ತಿದ್ದಾರೆ. ಅದೇ ಸುರಕ್ಷಿತವಲ್ಲದ ಪ್ರದೇಶದಿಂದ ಭಯಭೀತರಾಗಿ ಓಡಿ ಬಂದ ಬಡ ಹಿಂದೂಗಳು ತಮ್ಮ ಯೋಗಕ್ಷೇಮವನ್ನು ತಾವೇ ನೋಡಿಕೊಳ್ಳಬೇಕಾಗಿದೆ. ಈ ಗಲಭೆಯಿಂದ ಕೆಲಸ ಕಾರ್ಯಗಳಿಗೆ ಹೋಗಲಾರದೆ, ತಮ್ಮ ನೆಂಟರ ಅಥವಾ ಪರಿಚಯಸ್ಥರ ಮನೆಗಳಿಗೆ, ಭಯದ ವಾತಾವರಣದಿಂದ, ಹೊರಬರಲಾರದ ಅನೇಕ ಜನರನ್ನು ನಾನು ಭೇಟಿ ಮಾಡಿದೆ. ರಾಜಕೀಯ ಪಕ್ಷಗಳು ಮತ್ತು ಅಧಿಕಾರಿಗಳು ಮುಸ್ಲಿಮರಿಗಾದ ನಷ್ಟವನ್ನು ವಿಶ್ಲೇಷಿಸಲು ಕ್ರಮ ಕೈಗೊಳ್ಳುತ್ತಿದ್ದರು. ಆದರೆ ಹಿಂದೂಗಳು ಅನುಭವಿಸಿದ ಕಷ್ಟಗಳ ಬಗ್ಗೆ ಯಾವ ಮಾಹಿತಿಯನ್ನೂ ಸಂಗ್ರಹಿಸುತ್ತಿರಲಿಲ್ಲ. ಈ ಒಂದು ಅನಾಹುತವನ್ನು ಈ ರೀತಿಯ ಮತೀಯ ಮತ್ತು ರಾಜಕೀಯ ದೃಷ್ಟಿಯಿಂದ ನೋಡುತ್ತಿರುವುದು ಖಂಡನೀಯ ಹಾಗೂ ಪಕ್ಷಪಾತ ಉದ್ದೇಶವನ್ನು ಶೋಷಣೆಗೆ ಒಳಪಡಿಸುವುದನ್ನು ಅಪೇಕ್ಷಿಸಲಾಗಿದೆ. ಜಬಲ್‌ಪುರದ ಗಲಭೆಗಳಲ್ಲಿ ಕಾಂಗ್ರೆಸ್ ತೋರಿಸುತ್ತಿರುವ ದೊಡ್ಡ ಕಾಳಜಿಯ ಬಗ್ಗೆ ಅತ್ಯಾಶ್ಚರ್ಯವಾಗುತ್ತಿದೆ. ಈ ಕಾರಣದಿಂದಾಗಿ, ಘಟನೆಗಳನ್ನು ತಿರುಚಲಾಗಿದೆ ಮತ್ತು ಮಿತಿಮೀರಿ ಬೆಳೆಸಲಾಗಿದೆ. ಅಸ್ಸಾಂ ಅನಾಹುತದ ಬಗ್ಗೆ

ಹೆಚ್ಚು ತಲ್ಲಣಗೊಳ್ಳದ ಸರ್ಕಾರ ಮತ್ತು ಪಕ್ಷವು, ಜಬಲ್‌ಪುರದ ಗಲಭೆ ಆ ಅನಾಹುತದ ಮಿತಿ ಮತ್ತು ತೀವ್ರತೆಯಲ್ಲಿ ನೂರನೇ ಒಂದು ಭಾಗದಷ್ಟಿರದಿದ್ದರೂ, ಬಹಳ ಕ್ರಿಯಾಶೀಲವಾಗಿದೆ. ಕಾಂಗ್ರೆಸ್‌ನಲ್ಲಿರುವ ಮುಸ್ಲಿಂ ಅಭಿಮಾನಿಗಳನ್ನು ಹಿಂದೂಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ಎತ್ತಿಕಟ್ಟಲಾಗುತ್ತಿದೆ.

ಕಾಂಗ್ರೆಸ್ ಹೈಕಮಾಂಡಿಗೆ, ಜಬಲ್‌ಪುರದಲ್ಲಿರುವ ಮುಸ್ಲಿಮರ ಬಗ್ಗೆ ತೋರಿಸುತ್ತಿರುವ ಅಸಾಧಾರಣ ಮತ್ತು ಅಸ್ವಾಭಾವಿಕ ಆತಂಕದ ಪರಿಣಾಮವೆಂದರೆ, ಸ್ಥಳೀಯ ಆಡಳಿತವು ಈ ಮೇಲಿನ ನಾಯಕರನ್ನು ತೃಪ್ತಿಪಡಿಸಲು ಹಿಂದೂಗಳನ್ನು ವಿವೇಚನೆಯಿಲ್ಲದೆ ಬಂಧಿಸಿ ಅವರ ಮನೆಗಳನ್ನು ಹುಡುಕುತ್ತಿದೆ. ಅಮಾಯಕ ಜನರನ್ನು ಜೈಲಿಗೆ ಕಳುಹಿಸಲಾಗುತ್ತಿದೆ. ಮತ್ತು ಅವರ ಜಾಮೀನು ಅರ್ಜಿಯನ್ನು ಪುರಸ್ಕರಿಸುತ್ತಿಲ್ಲ. ಪರಿಸ್ಥಿತಿಯ ಅಸ್ವಾಭಾವಿಕತೆಯ ಕಾರಣವನ್ನು ಒಡ್ಡಿ ಈ ದಮನಕಾರಿ ಕ್ರಿಯೆಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಆದರೆ ವಾಸ್ತವವೆಂದರೆ, ಅಸ್ವಾಭಾವಿಕತೆ ತಲೆದೋರಿದ್ದಲ್ಲಿ, ಅದು ಪ್ರಧಾನ ಮಂತ್ರಿಗಳು ಮಾಡಿದ ಭಾಷಣಗಳಿಂದ ಹಾಗೂ ಅಧಿಕಾರ ವರ್ಗವು ತೆಗೆದುಕೊಂಡ ಕ್ರಮಗಳಿಂದ ಇಲ್ಲದಿದ್ದರೆ, ಪರಿಸ್ಥಿತಿ ಸ್ವಾಭಾವಿಕವಾಗಿಯೇ ಇದೆ. ವಿವಿಧ ರಾಜಕೀಯ ಪಕ್ಷಗಳ ನಾಯಕರು ಜಬಲ್‌ಪುರಕ್ಕೆ ಭೇಟಿ ನೀಡುವುದನ್ನು ನಿಲ್ಲಿಸಿ ಅದರ ಬಗ್ಗೆ ಮಾತನಾಡದಿದ್ದರೆ, ಹಾಗೂ ಆಡಳಿತವು ತಪ್ಪಿತಸ್ಥರೊಡನೆ ಸೂಕ್ತರೀತಿಯಲ್ಲಿ ಕ್ರಮ ಕೈಗೊಂಡು ಅಮಾಯಕರಿಗೆ ಭಯಾನಕತೆಯನ್ನುಂಟು ಮಾಡುವುದನ್ನು ನಿಲ್ಲಿಸಿದರೆ, ಸಹಜ ಸ್ಥಿತಿ ಬೇಗನೆ ನಿರ್ಮಾಣವಾಗಿಟ್ಟರೆ ವಿಚಾರಣ ಆಯೋಗ ಅದನ್ನು ಸಂಪೂರ್ಣವಾಗಿ ವಿಚಾರಗಳಿಗೆ ಒಳಪಡಿಸಲಿ. ಸ್ಥಳೀಯ ಆಡಳಿತ ಅದರ ತೀರ್ಪಿನ ಮೇಲೆ ಪ್ರಭಾವ ಬೀರುವುದು ಬೇಡ.

ರಾಜಕೀಯ ಪಕ್ಷಗಳು ಜಬಲ್‌ಪುರದಿಂದ ದೂರವಿರಲಿ ಅದೇ ಈ ಹೊತ್ತಿನ ತುರ್ತು.

ಕೋಟಾ, ಮೇ ೨೭

* * * * *

# ಭಾರತ ಸರ್ಕಾರದ ಭಾಷಾನೀತಿ ಸಂವಿಧಾನಕ್ಕೆ ವಿರುದ್ಧ

ಸಾರ್ವಜನಿಕ ವಿರೋಧವನ್ನು ಕ್ರೋಡೀಕರಿಸುವಂತೆ ಭಾರತೀಯ ಜನಸಂಘದ ಶಾಖೆಗಳಿಗೆ ಪಂ। ದೀನ್ ದಯಾಳ್ ಉಪಾಧ್ಯಾಯ ಕರೆ.

(ನಮ್ಮ ಪ್ರತಿನಿಧಿಯಿಂದ)

ನವದೆಹಲಿ, ಜುಲೈ ೧೬, ಪಂ। ದೀನ್ ದಯಾಳ್ ಉಪಾಧ್ಯಾಯರು (ಪ್ರಧಾನ ಕಾರ್ಯದರ್ಶಿ, ಭಾರತೀಯ ಜನಸಂಘ) ಕರೆದ ಪತ್ರಿಕಾಗೋಷ್ಠಿಯಲ್ಲಿ ಸರ್ಕಾರದ ಭಾಷಾ ನೀತಿಯನ್ನು ಕಟುವಾಗಿ ಟೀಕಿಸಿದರು – ಅದು ನಮ್ಮ ಸಂವಿಧಾನದ ಚೌಕಟ್ಟನ್ನು ಉಲ್ಲಂಘಿಸಿದ್ದಾಗಿದೆ ಎಂದು ವಿವರಿಸಿದರು.

ಸರ್ಕಾರಕ್ಕೆ ಸಕಾಲಿಕ ಎಚ್ಚರಿಕೆಯನ್ನು ನೀಡಿದ ಉಪಾಧ್ಯಾಯರು, ಜನಸಂಘದ ಎಲ್ಲ ಶಾಖೆಗಳಿಗೆ ಈ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ತಿಳಿಸಿದರು. ಕೇಂದ್ರ ಜಾರಿಗೆ ತರಲು ಉದ್ದೇಶಿಸಿದ ಹಿಂದೂಸ್ಥಾನೀಯ ಕಲಬೆರಿಕೆ ಹಿಂದಿ ಮತ್ತು ಎರಡನೆಯದಾಗಿ ಇಂಗ್ಲಿಷ್‌ನ್ನು ಆಡಳಿತ ಸಹಭಾಷೆಯಾಗಿ ಜಾರಿಗೆ ತರುವುದಕ್ಕೆ ವಿರೋಧ ವ್ಯಕ್ತಪಡಿಸಿದರು.

ಅವರ ಮಾತುಗಳ ಪೂರ್ಣ ಪಾಠ ಈ ರೀತಿ ಇದೆ. ಆಕಾಶವಾಣಿಯ ವಾರ್ತಾ ಪ್ರಸಾರದಲ್ಲಿ ಬಳಸುವ ಭಾಷೆಯ ಕುರಿತು ಗಂಭೀರವಾದ ಆಕ್ಷೇಪಣೆಗಳಿವೆ. ಜನರಲ್ಲಿನ ಸುಪ್ತ ಸಿಟ್ಟು ಈ ವಿಷಯದಲ್ಲಿ ಹೆಚ್ಚುತ್ತಿದೆ. ಇತ್ತೀಚಿನ ವರ್ಷಗಳ ಅನುಭವವನ್ನು ನೋಡಿ ಕೂಡಾ ಕಲಿಯದ ಕುರಿತು ವಿಷಾದವೆನ್ನಿಸುತ್ತದೆ. ಭಾಷಾ ವಾಗ್ವಾದಗಳು ಅಸಂತೋಷವನ್ನು ಮತ್ತು ವಿರೋಧವನ್ನು ಸಾಕಷ್ಟು ಹೆಚ್ಚಿಸುತ್ತಿವೆ. ಸರ್ಕಾರ ಯಾವುದೇ ಸೂತ್ರ ಅಥವಾ ವಿವೇಕವಿರದೆ ಇದನ್ನು ಮತ್ತೆ ಕೆದಕಲು ಮುಂದಾಗಿದೆ. ಇದರ ಇತ್ತೀಚಿನ ವರ್ತನೆ ಅದರ ವಿವೇಕಶೂನ್ಯತೆಯನ್ನು ಸ್ಪಷ್ಟವಾಗಿ ಕಾಣಿಸುವಂತದ್ದು.

ನಮ್ಮ ಸಂವಿಧಾನ ಆಡಳಿತ ಭಾಷೆಯಾಗಿ ಹಿಂದಿಯ ಪಾತ್ರವನ್ನು ಸ್ಪಷ್ಟವಾಗಿ ತಿಳಿಸಿದ್ದಲ್ಲದೆ ಅದರ ರೂಪದ ಕುರಿತು ಸ್ಪಷ್ಟವಾಗಿ ಹೇಳಿದೆ. ಈಗಿನ ನೀತಿ ಈ

---

**ಮೂಲ ಆಕರ : ಆರ್ಗನೈಸರ್, ೨೩, ಜುಲೈ, ೧೯೬೨**

ವಿಷಯದಲ್ಲಿ ಸಂವಿಧಾನದ ಆಶಯಗಳಿಗೆ ವಿರುದ್ಧವಾದದ್ದು. ಸರಳ ಹಿಂದಿ ಎಂಬ ಹೆಸರಿನಲ್ಲಿ ಕಲಸುಮೇಲೋಗರದ ಹಿಂದಿಯ ಹೇರಿಕೆಯನ್ನು ಚುನಾಯಿತ ಪ್ರತಿನಿಧಿ ಸಭೆ ಸ್ಪಷ್ಟವಾಗಿ ತಿರಸ್ಕರಿಸಿದೆ. ಉರ್ದು ಶಿಕ್ಷಣ ಪಡೆದ ದೆಹಲಿಯ ನಗರವಾಸಿ ಸಮುದಾಯ ಆಡುವ ಭಾಷೆ ಮತ್ತು ಆ ಪರಿಸರಕ್ಕೆ ಹೊಂದಿಕೊಂಡ ಭಾಷೆ ಹಿಂದಿಯಲ್ಲ ಮತ್ತು ಅದು ಇಡೀ ದೇಶಕ್ಕೆ ಒಗ್ಗುವಂಥದ್ದಲ್ಲ.

ಇನ್ನು ೧೫ ವರ್ಷಗಳಲ್ಲಿ ಹಿಂದಿ ಮತ್ತು ಇತರೆ ಭಾರತೀಯ ಭಾಷೆಗಳನ್ನು ಸರ್ಕಾರಿ ಕೆಲಸಗಳಿಗೆ ಆಡಳಿತ ಭಾಷೆಯಾಗಿ ಪರಿವರ್ತಿಸಿಕೊಳ್ಳಬೇಕೆಂದು ನಮ್ಮ ಸಂವಿಧಾನ ಸ್ಪಷ್ಟವಾಗಿ ತಿಳಿಸಿದೆ. ಆದರೆ ಸರ್ಕಾರ ಈ ದಿಸೆಯಲ್ಲಿ ಅಗತ್ಯ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ವಿಫಲವಾಗಿದೆ.

೧೦ ವರ್ಷಗಳ ಬಳಿಕ ದ್ವಿತೀಯ ಭಾಷಾ ಆಯೋಗದ ರಚನೆಯನ್ನು ಮಾಡಲು ಸಹ ಸಂವಿಧಾನ ಸೂಚಿಸಿತ್ತು. ಸಂವಿಧಾನದ ಈ ನಿರ್ದೇಶಿತ ಸೂತ್ರಗಳನ್ನು ಸರ್ಕಾರ ಗಾಳಿಗೆ ತೂರಿದೆ ಮತ್ತು ಭಾಷಾ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ಸ್ವೇಚ್ಛಾ ಪ್ರವೃತ್ತಿಗೆ ಇಳಿದಿದೆ.

ಸರ್ಕಾರಕ್ಕೆ ಭಾಷಾ ಸಮಸ್ಯೆಯ ಕುರಿತು ಯಾವುದೇ ತೀರ್ಮಾನ ತೆಗೆದುಕೊಳ್ಳುವ ಹಕ್ಕಿಲ್ಲ. ದ್ವಿತೀಯ ಭಾಷಾ ಆಯೋಗದ ರಚನೆಯ ಪೂರ್ವದಲ್ಲಿ ಹೀಗೆ ಯಾವುದೇ ನಿರ್ಧಾರಕ್ಕೂ ಬರಬಾರದು. ಮತ್ತು ಆ ಆಯೋಗದ ವರದಿಯನ್ನಾಧರಿಸಿಯೇ ಏನನ್ನಾದರೂ ಕ್ರಮ ಕೈಗೊಳ್ಳಬೇಕು.

ಭಾಷಾ ಪ್ರಶ್ನೆಯು ರಾಷ್ಟ್ರೀಯ ವಿಷಯ ಮತ್ತು ಪಕ್ಷ ರಾಜಕೀಯವನ್ನು ಮೀರಿದ್ದು. ಎಲ್ಲ ರಾಜಕೀಯ ಪಕ್ಷಗಳಲ್ಲಿನ ಬಹುತೇಕ ಎಲ್ಲರು ಸರ್ಕಾರದ ಈ ನೀತಿಯನ್ನು ವಿರೋಧಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಒಂದೊಮ್ಮೆ ಸರ್ಕಾರ ಈ ಆತ್ಮಹತ್ಯಾ ಘಾತುಕ ನಿರ್ಣಯದಿಂದ ಹಿಂದೆ ಸರಿಯದಿದ್ದಲ್ಲಿ ಇದು ದೇಶ ಮತ್ತದರ ಸಾಂಸ್ಕೃತಿಕ ಪರಂಪರೆಗೆ ಅಪಾಯವನ್ನೊಡ್ಡುತ್ತದೆಂದು ಜನಸಂಘ ಭಾವಿಸುತ್ತದೆ. ಜನಸಂಘ ತನ್ನ ಸಂಪೂರ್ಣ ಶಕ್ತಿಯೊಂದಿಗೆ ಈ ವಿಧೇಯಕವನ್ನು ವಿರೋಧಿಸಲು ನಿರ್ಧರಿಸಿದೆ. ಆದ್ದರಿಂದ ಎಲ್ಲ ಭಾರತೀಯ ಜನಸಂಘದ ಶಾಖೆಗಳು ಈ ಕುರಿತು ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಡೀಕರಿಸಬೇಕು ಮತ್ತು ಸಕ್ರಿಯವಾಗಿ ಇದಕ್ಕೆ ವಿರೋಧವನ್ನು ದಾಖಲಿಸಬೇಕು.

ಭಾರತ ಸರ್ಕಾರದ ವಾರ್ತಾ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ – ವಿವೇಕವಂತರಾಗಿ. ಹಿಂದಿಯನ್ನು ಕುಲಗೆಡಿಸಬೇಡಿ. ಸ್ವಭಾವಿಕವಾದ ಮತ್ತು ಹಕ್ಕಿನ ಭಾರತೀಯ ಭಾಷೆಗಳ ಜಾಗವನ್ನು ಇಂಗ್ಲಿಷ್ ಆಕ್ರಮಿಸುವುದನ್ನು ತಡೆಯಬೇಕಿದೆ ಮತ್ತು ಇಂಗ್ಲಿಷನ್ನು ಉಳಿಸಿಕೊಳ್ಳುವುದನ್ನು ಅನಿರ್ದಿಷ್ಟಾವಧಿಗೆ ಮುಂದೂಡಬೇಕು.

* * * * *

# ಸ್ಪಷ್ಟ ಟಿಬೆಟ್ ನೀತಿಗಾಗಿ ಉಪಾಧ್ಯಾಯ ಒತ್ತಾಯ

## ಕಮ್ಯುನಿಸ್ಟರ ಪಾತ್ರಕ್ಕೆ ವಿರೋಧ

ಪಾಟ್ನಾದಲ್ಲಿ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿದ್ದ ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದೀನ್ ದಯಾಳ್ ಉಪಾಧ್ಯಾಯ ಅವರು ಚೀನಾವನ್ನುದ್ದೇಶಿಸಿ ಟಿಬೆಟ್ ಬಗ್ಗೆ ಭಾರತವು ಇನ್ನಷ್ಟು ಹೆಚ್ಚು ಸ್ಪಷ್ಟ ನೀತಿಯನ್ನು ಹೊಂದಬೇಕೆಂದು ಒತ್ತಾಯಿಸಿದರು.

ಟಿಬೆಟ್‌ನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಪ್ರಧಾನಿಯವರ ನಿಲುವು ನಿರಾಶಾದಾಯಕವಾಗಿದ್ದು, ಈ ನೀತಿಯು ಭಾರತ ಅಥವಾ ಟಿಬೆಟ್‌ನ ಸ್ವಾತಂತ್ರ್ಯ ಹಾಗೂ ಭಾರತದ ಆಸಕ್ತಿಗೆ ವಿರುದ್ಧವಾಗಿದೆ. ದಲಾಯಿಲಾಮ ಮತ್ತಿತರಿಗೆ ರಾಜಕೀಯ ಆಶ್ರಯ ನೀಡುವ ಕಾರ್ಯವು ಟಿಬೆಟ್‌ನ ಸ್ವಾತಂತ್ರ್ಯವನ್ನು ಗಳಿಸಿಕೊಡುವುದಿಲ್ಲ ಅಥವಾ ಭಾರತೀಯರ ಆಸಕ್ತಿಗಳನ್ನೂ ರಕ್ಷಿಸಿದಂತಾಗುವುದಿಲ್ಲ, ಆದ್ದರಿಂದ ಈ ಕುರಿತಂತೆ ಸ್ಪಷ್ಟ ನೀತಿ ಅಗತ್ಯ ಎಂದು ಪ್ರತಿಪಾದಿಸಿದರು. ಚೀನಿಯರ ವಿರುದ್ಧ ತಮ್ಮ ಅನುಯಾಯಿಗಳಿಗೆ ಹೋರಾಟದ ವಿಷಯವಾಗಿ ನಿರ್ದೇಶನ ಮತ್ತು ಮಾರ್ಗದರ್ಶನ ನೀಡಲು ದಲಾಯಿಲಾಮ ಅವರಿಗೆ ಅವಕಾಶ ಮಾಡಿಕೊಡಬೇಕೆಂದು ತಿಳಿಸಿದರು.

ಈ ವಿಷಯದಲ್ಲಿ ಭಾರತದ ಕಮ್ಯುನಿಸ್ಟರ ನಡವಳಿಕೆಯನ್ನು ಪರಾಮರ್ಶಿಸಿ ಹೀಗೆಂದರು ಕಮ್ಯುನಿಸ್ಟರು ಭಾರತದ ಸಾಮಾನ್ಯ ನಾಗರಿಕರ ಭಾವನೆಗಳಿಗೆ ವ್ಯತಿರಿಕ್ತವಾಗಿ ಭಾರತ – ಚೀನಾ ಸಂಬಂಧ ಸುಧಾರಿಸಲು ಯತ್ನಿಸುತ್ತಿದ್ದಾರೆ. ಚೀನಾ ಟಿಬೆಟ್ ಅತಿಕ್ರಮಣದ ಹೊರತಾಗಿಯೂ ಒಂದೊಮ್ಮೆ ಟಿಬೆಟ್‌ಗೆ ಅನ್ಯಾಯವೆಸಗಿ ಭಾರತ – ಚೀನಾ ದ್ವಿಪಕ್ಷೀಯ ಸಂಬಂಧ ಬೆಸೆಯಲು ಹೊರಟರೆ ಅದು ಸರಿಯಲ್ಲ. ಟಿಬೆಟ್‌ನಲ್ಲಿ ಶಾಂತಿ ನೆಲೆಸದೆ ಏಷ್ಯಾದಲ್ಲಿ ಶಾಂತಿ ನೆಲೆಸುವುದು ಅಸಾಧ್ಯ. ಪರಸ್ಪರ ನಂಬಿಕೆ ಮತ್ತು ಸೌಹಾರ್ದತೆಯ ಆಧಾರದಲ್ಲಿ ರೂಪುಗೊಳ್ಳಬೇಕಾದ ದ್ವಿಪಕ್ಷೀಯ ಸಂಬಂಧ ಚೀನಾ ಭಾರತದ ಗಡಿಯ ಉದ್ದಕ್ಕೂ ಸೇನಾ ಜಮಾವಣೆ ಮಾಡಿ ನಮ್ಮ ಮನದಲ್ಲಿ ಸಂಶಯ ಮೂಡಿಸಿರುವ ಈ ಸಂದರ್ಭದಲ್ಲಿ ಸಾಧ್ಯವಿಲ್ಲ.

---

**ಮೂಲ ಆಕರ : ಆರ್ಗನೈಸರ್, ೨೫, ಮೇ, ೧೯೫೯**

ಭಾರತ ಒಂದು ಸದೃಢ ನೀತಿ ಹೊಂದಿದಲ್ಲಿ ಟಿಬೆಟ್ ತಾನು ಕಳೆದುಕೊಂಡಿರುವ ಸ್ವಾತಂತ್ರ್ಯವನ್ನು ಮರಳಿ ಗಳಿಸುವಲ್ಲಿ ನೆರವಾಗುತ್ತದೆ ಮತ್ತು ಚೀನಾದ ಅತಿಕ್ರಮಣ ನೀತಿಗೆ ಒಂದು ಮಿತಿಯನ್ನು ರೂಪಿಸುತ್ತದೆ. ಹಾಗಲ್ಲದೆ ಭಾರತ ಚೀನಾದ ಬಗ್ಗೆ ಅತ್ಯಂತ ಶರಣಾಗತಿಯ ನೀತಿ ಅಳವಡಿಸಿಕೊಂಡಲ್ಲಿ ಇದು ಅಂತಿಮವಾಗಿ ಭಾರತದ ಗುಲಾಮಗಿರಿಯಲ್ಲಿ ಮುಕ್ತಾಯವಾಗುತ್ತದಲ್ಲದೆ ಇಬ್ಬರು ಸಮಾನರ ನಡುವೆ ಇರಬಹುದಾದ ಸ್ನೇಹ ಸಂಬಂಧವಾಗಿ ಮುಂದುವರೆಯುವುದಿಲ್ಲ. ಕಮ್ಯುನಿಸ್ಟ್ ಪಕ್ಷವು ಮತ್ತೊಮ್ಮೆ ತನ್ನ ಅಭಾರತೀಯ ನಡವಳಿಕೆಯನ್ನು ಮರುಕಳಿಸಿದೆ. ಟಿಬೆಟ್‌ನ ಆರ್ಥಿಕ ಅಥವಾ ರಾಜಕೀಯ ಪರಿಸ್ಥಿತಿಗಳೇನೇ ಇರಲಿ, ಅದನ್ನು ಒತ್ತಾಯಪೂರ್ವಕವಾಗಿ ಬದಲಾಯಿಸುವ ಹಕ್ಕು ಯಾವುದೇ ಹೊರಗಿನ ಶಕ್ತಿಗಳಿಗೆ ಇರುವುದಿಲ್ಲ. ಭಾರತದ ಕಮ್ಯುನಿಸ್ಟರು ಟಿಬೆಟ್‌ಗೆ ಸಂಬಂಧಿಸಿದಂತೆ ಪೀಕಿಂಗ್ ನೀತಿಯನ್ನು ಧ್ವನಿಸುವುದಾದಲ್ಲಿ ಅದು ವಿಶ್ವಾಸದ್ರೋಹವೇ ಸರಿ. ಒಂದೊಮ್ಮೆ ಟಿಬೆಟ್‌ನಲ್ಲಿ ದಲಾಯಿಲಾಮಾ ಅವರ ಆಡಳಿತದ ರೀತಿಗಳ ಬಗ್ಗೆ ಅಸಮಾಧಾನವಿದ್ದಲ್ಲಿ ಅದಕ್ಕಾಗಿ ಚೀನಾ ಅತಿಕ್ರಮಣವನ್ನು ಭಾರತೀಯ ಕಮ್ಯುನಿಸ್ಟರು ಬೆಂಬಲಿಸಿದಲ್ಲಿ ಇದೇ ಕಾರಣಕ್ಕಾಗಿ ಮುಂದೊಂದು ದಿನ ಅವರು ಭಾರತ ಮೇಲೆ ಚೀನಾ ಆಕ್ರಮಣವನ್ನೂ ಬೆಂಬಲಿಸಬಹುದು. ಆದುದರಿಂದ ಪ್ರತಿಯೊಬ್ಬ ದೇಶಭಕ್ತ ಭಾರತೀಯರು ಈ ರೀತಿಯ ಸಂಭವನೀಯ ಬೆಳವಣಿಗೆಗಳ ಬಗ್ಗೆ ಎಚ್ಚರಿಕೆ ಹೊಂದಿರದಿದ್ದಲ್ಲಿ ಭಾರತದ ಸ್ವಾತಂತ್ರ್ಯ ಮತ್ತು ಸುರಕ್ಷತೆಗೆ ತೊಡಕಾಗಲಿದೆ.

* * * * *

# ಜನಸಂಘವು ಪಂಜಾಬ್ ಹಿಂದಿ ಸತ್ಯಾಗ್ರಹವನ್ನು ಬೆಂಬಲಿಸುತ್ತದೆ

ಅಖಿಲ ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದೀನ್ ದಯಾಳ್ ಉಪಾಧ್ಯಾಯ ಅವರ ಪತ್ರಿಕಾ ಹೇಳಿಕೆ

ಪಂಜಾಬ್‌ನ ಪ್ರಸ್ತುತ ಪರಿಸ್ಥಿತಿಯು ಭಾರತೀಯ ಜನಸಂಘದ ಕೇಂದ್ರೀಯ ಕಾರ್ಯ ಸಮಿತಿಯ ಅತೀವ ಕಳವಳವನ್ನು ವ್ಯಕ್ತಪಡಿಸುತ್ತದೆ. ಸಮಿತಿಯು ಹಿಂದಿನ ಸಭೆಯಲ್ಲಿ ಪಂಜಾಬ್ ಪರಿಸ್ಥಿತಿಯ ಬಗ್ಗೆ ಚರ್ಚಿಸಿತ್ತು. ಕೇಂದ್ರ ಸರ್ಕಾರವು ತನ್ನ ಜವಾಬ್ದಾರಿಯನ್ನರಿತು ಈ ಪ್ರದೇಶದಲ್ಲಿ ಕದಡಿದ ಶಾಂತಿ ಮತ್ತು ಸುವ್ಯವಸ್ಥೆಯನ್ನು ಮರುಸ್ಥಾಪಿಸಲು ಯತ್ನಿಸುವುದೆಂದು ನಿರೀಕ್ಷಿಸಲಾಗಿತ್ತು. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಕೇಂದ್ರ ಸರ್ಕಾರವು ಪಂಜಾಬಿ ಮತ್ತು ಹಿಂದಿ ಭಾಷಿಕ ಪ್ರಾಂತ್ಯಗಳ ನಡುವಣ ವಿಭಾಗಿಸಲು ಪ್ರಯತ್ನಿಸುತ್ತಿರುವುದು ಸ್ಥಳೀಯ ಪರಿಸ್ಥಿತಿಯಲ್ಲಿ ಅವ್ಯವಸ್ಥೆ ಮತ್ತು ಭಾಷಿಕರ ನಡುವಣ ಕಂದಕವನ್ನು ನಿರ್ಮಿಸುತ್ತಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಿರಂಕುಶ, ದಮನಕಾರಿ ಮತ್ತು ಜನವಿರೋಧಿ ನೀತಿಗಳ ಬಗ್ಗೆ ಹಿಂದಿ ಸಮಿತಿ ಆಯೋಜಿಸಿರುವ ಅಹಿಂಸಾ ಮಾರ್ಗದಲ್ಲಿ ಸತ್ಯಾಗ್ರಹದ ಮೂಲಕ ಪ್ರತಿಭಟಿಸುತ್ತಿದ್ದಾರೆ.

ರಾಷ್ಟ್ರೀಯ ಚಿಂತನೆಗಳ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭಾರತೀಯ ಜನಸಂಘವು ಪಂಜಾಬ್‌ನ ಸಮಗ್ರತೆ ಮತ್ತು ಅದನ್ನು ಭಾರತದ ಪ್ರದೇಶವಾಗಿ ಉಳಿಸುವ ಹೋರಾಟದಲ್ಲಿ ಕೇವಲ ಪ್ರೇಕ್ಷಕನಾಗಿ ಉಳಿಯುವುದಿಲ್ಲ.

ಆದ್ದರಿಂದ ಈ ಹಂತದಲ್ಲಿ ಈ ವಿಷಯದ ಬಗ್ಗೆ ಭಾರತೀಯ ಜನಸಂಘವು ಈ ಹೋರಾಟದ ವಿಷಯವಾಗಿ ತನ್ನ ನಿಲುವನ್ನು ಸ್ಪಷ್ಟಪಡಿಸಬಯಸುತ್ತದೆ.

ಭಾರತೀಯ ಜನಸಂಘವು ಈ ರಾಷ್ಟ್ರವು ಮೂಲಭೂತವಾಗಿ ಒಂದು ಸಂಸ್ಕೃತಿಯಾಗಿ ರೂಪುಗೊಂಡಿರುವುದರಿಂದ ಒಂದು ರಾಷ್ಟ್ರವಾಗಿದೆ. ಜನರು ತಮ್ಮ ಮಾತೃಭೂಮಿಗೆ ಸಮಾನವಾಗಿ ಗೌರವಿಸುವತನಕ ಧಾರ್ಮಿಕ ನಂಬಿಕೆಗಳ ವಿಭಿನ್ನತೆಯು ರಾಷ್ಟ್ರವನ್ನು ವಿಭಾಗಿಸುವುದಿಲ್ಲ. ಹಿಂದೂ ಸಮಾಜವು ಸಿಖ್ಖರನ್ನು

---

**ಮೂಲ ಆಕರ : ಆರ್ಗನೈಸರ್, ೫, ಆಗಸ್ಟ್, ೧೯೫೭**

ತನ್ನ ಭಾಗವೆಂದೆ ಭಾವಿಸುತ್ತದೆ, ಹಿಂದೂ ಧರ್ಮದ ಮತ್ತು ಜನರ ರಕ್ಷಣೆಗಾಗಿ ಸಿಖ್ ಧರ್ಮಗುರುಗಳ ಮತ್ತು ಸಿಖ್ಖರ ಕೊಡುಗೆ ಹೆಮ್ಮೆಯ ವಿಷಯವೇ ಸರಿ.

ಇತ್ತೀಚಿನ ಬೆಳವಣಿಗೆಗಳಲ್ಲಿ ಕೆಲವರು ಸಿಖ್ಖರಲ್ಲಿ ವಿಭಜನೆಯ ವಿಷಬೀಜವನ್ನು ಬಿತ್ತುತ್ತಿರುವ ಬಗ್ಗೆ ಜನಸಂಘವು ಕಳವಳ ವ್ಯಕ್ತಪಡಿಸುತ್ತದೆ. ಈ ರೀತಿಯ ಬೆಳವಣಿಗೆಗಳು ಇಡಿಯ ರಾಷ್ಟ್ರದಲ್ಲಿ ಸಮಸ್ಯೆಯ ಬೀಜ ಬಿತ್ತುತ್ತಿವೆ.

ಒಂದು ಸಂಸ್ಕೃತಿಯು ಈ ದೇಶದ ಬಹುಮುಖೀ ನೆಲೆಗಳಲ್ಲಿ ಮತ್ತು ಬಹು ಭಾಷೆಗಳಲ್ಲಿ ವಿಸ್ತರಿಸಿದೆ ಎಂಬುದರಲ್ಲಿ ಜನಸಂಘವು ನಂಬಿಕೆ ಇರಿಸಿದೆ. ಈ ಎಲ್ಲಾ ಭಾಷೆಗಳು ರಾಷ್ಟ್ರೀಯ ಮತ್ತು ಅವುಗಳ ಬೆಳವಣಿಗೆಯು ರಾಷ್ಟ್ರೀಯ ನಡವಳಿಕೆ ವಿಸ್ತಾರ ಎಂದೇ ಭಾವಿಸುತ್ತದೆ. ಪಂಜಾಬಿ ಭಾಷೆ ಒಂದು ರಾಷ್ಟ್ರೀಯ ಭಾಷೆ ಎಂದು ಜನಸಂಘವು ಗುರುತಿಸುತ್ತದೆ ಮತ್ತು ಅದರ ಸರ್ವಾಂಗೀಣ ಬೆಳವಣಿಗೆ ಮತ್ತು ಪ್ರಗತಿ ಅವಶ್ಯಕತೆಯನ್ನು ಗುರುತಿಸುತ್ತದೆ.

ಐತಿಹಾಸಿಕವಾಗಿ ಗಮನಿಸಿದಾಗ ರಾಷ್ಟ್ರೀಯ ಆಂದೋಲನಕ್ಕೆ ಹಿಂದಿ ಮತ್ತು ಪಂಜಾಬಿ ಭಾಷೆಗಳು ತಮ್ಮದೇ ಆದ ಕೊಡುಗೆಯನ್ನು ನೀಡಿವೆ. ಅವು ಇಂಗ್ಲಿಷ್ ಮತ್ತು ಉರ್ದು ಭಾಷೆಗೆ ಪರ್ಯಾಯವಾಗಿ ಸ್ಥಳೀಯ ಜನರ ಆಡುಭಾಷೆಯನ್ನು ತಮ್ಮ ನೆಲೆಯಲ್ಲಿ ಸ್ಥಿರೀಕರಿಸುವಲ್ಲಿ ಶ್ರಮಿಸಿವೆ. ಭಾರತದ ನೆಲ ಜಲ ಸಂಸ್ಕೃತಿಯನ್ನು ತಮ್ಮದಾಗಿಸಿಕೊಂಡಿರುವ ಈ ಭಾಷೆಗಳು ಸಮಾನವಾಗಿ ಬೆಳೆಯಲು ಅನಿರ್ಬಂಧಿತ ಅವಕಾಶಗಳು ಲಭ್ಯವಿರುವ ಈ ವೇಳೆಯಲ್ಲಿ ಚಳುವಳಿಕಾರರು ಪರಸ್ಪರ ಹೋರಾಟಕ್ಕೆ ಇಳಿದಿರುವುದು ದುರದೃಷ್ಟಕರ. ಈ ಎಲ್ಲಾ ಹೋರಾಟಗಳ ನಡುವೆ ಎಲ್ಲರ ವಿರೋಧದ ನಡುವೆಯೂ ಉರ್ದು ಹಿಂಬಾಗಿಲ ಮೂಲಕ ಈ ಹೋರಾಟಗಳ ಲಾಭ ಪಡೆಯಲು ಯತ್ನಿಸುತ್ತಿದೆ.

ಜನಸಂಘದ ಅಭಿಪ್ರಾಯದಲ್ಲಿ ಪಂಜಾಬಿ ಭಾಷೆಯ ಹೆಸರಿನಲ್ಲಿ ರಾಜಕೀಯ ವಿಭಾಗೀಕರಣ ನಡೆಯುತ್ತಿದೆ. ಅಕಾಲಿದಳವು ಭಾಷೆಯ ಹೆರಿನಲ್ಲಿ ಪಂಜಾಬಿನ ಗಡಿಗಳನ್ನು ಸಂಕುಚಿತಗೊಳಿಸಲಾಗುತ್ತಿದೆ ಎಂದು ಆರೋಪಿಸುತ್ತಿದೆ. ಹಾಗಾಗಿ ಪಂಜಾಬಿ ಕೇವಲ ಒಂದು ಭಾಗದ ಜನರ ಆಡು ನುಡಿ ಎಂಬ ಅಭಿಪ್ರಾಯ ಬರುವಂತಾಗಿದೆ. ಆದುದರಿಂದ ಅಕಾಲಿದಳವು ಧರ್ಮಪ್ರಭುತ್ವ ಆಧಾರದಲ್ಲಿ ಭಾರತದ ಗಡಿ ಪ್ರದೇಶದಲ್ಲಿ ಒಂದು ಪ್ರತ್ಯೇಕ ರಾಜ್ಯ ನಿರ್ಮಿಸಿಕೊಳ್ಳುವ ಅಭಿಲಾಷೆಯನ್ನೂ ಹೊಂದಿದೆ. ಈ ರೀತಿಯ ರಾಜಕೀಯ ಒತ್ತಡಗಳ ನಡುವೆ ಯಾವುದೇ ಒಂದು ಮಗುವಿಗೆ ತನ್ನ ಮಾತೃ ಭಾಷೆಯಲ್ಲಿ ಶಿಕ್ಷಣ ಪಡೆಯುವ ಹಕ್ಕನ್ನು ವಂಚಿಸಲಾಗದು. ಇದನ್ನು ನಿರ್ಣಯಿಸುವ ಹಕ್ಕು ಆ ಮಗುವಿನ ಪೋಷಕರದು. ಪಂಜಾಬಿ ಮಾತನಾಡುವ ಪೋಷಕರು ಹಿಂದಿ ಭಾಷೆಯಲ್ಲಿ

ಮಗುವಿಗೆ ಶಿಕ್ಷಣ ಕೊಡಿಸಲು ಬಯಸಿದಲ್ಲಿ, ಈ ಹೋರಾಟಗಾರರು ಅದರ ವಿರುದ್ಧ ಹೋರಾಟ ಮಾಡುವ ಬದಲು, ಪಂಜಾಬಿ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವಂತೆ ಆ ಪೋಷಕರ ಮನ ಒಲಿಸುವುದು ಮತ್ತು ಅವರ ಸಂಶಯಗಳನ್ನು ನಿವಾರಿಸುವ ಕೆಲಸ ಮಾಡುವುದು. ಕಾಂಗ್ರೆಸ್ ಸರಕಾರದ ತುಷ್ಟೀಕರಣ ನೀತಿಯಿಂದ ಈ ರೀತಿಯ ಪ್ರಕರಣಗಳು ಹೆಚ್ಚುತ್ತಿವೆ. ಪಂಜಾಬಿನಲ್ಲಿ ಭಾಷೆಯ ವಿರೋಧಿಗಳು ಇಲ್ಲ. ಸರಕಾರ ಮತ್ತು ಅಕಾಲಿದಳ ಒಂದೊಮ್ಮೆ ರಾಷ್ಟ್ರೀಯ ಹಿತಾಸಕ್ತಿಯ ಮತ್ತು ಸಮಯೋಚಿತವಾಗಿ ಕ್ರಿಯಾಶೀಲರಾದಲ್ಲಿ ಕಳೆದ ಶತಮಾನದಲ್ಲಿ ಹಿಂದಿ ಮತ್ತು ಪಂಜಾಬಿ ಭಾಷೆಗಳು ಬೆಳೆದು ಬಂದ ರೀತಿಯನ್ನು ನೋಡಿದಲ್ಲಿ, ಮತ್ತು ಸ್ಥಳೀಯ ಧಾರ್ಮಿಕ ಮತ್ತಿತರ ಸಂಸ್ಥೆಗಳು ಹಿಂದಿ ಮತ್ತು ಪಂಜಾಬಿ ಶಿಕ್ಷಣದಲ್ಲಿ ತಂದಿರುವ ಬೆಳವಣಿಗೆ ಗಮನಿಸಿದಲ್ಲಿ ಪಂಜಾಬ್ ಪರಸ್ಪರ ಪೂರಕವಾಗಿ ಎರಡೂ ಭಾಷೆಗಳನ್ನು ಪ್ರದೇಶದ ಗೌರವ ಮತ್ತು ಸ್ಥಾನಮಾನಕ್ಕೆ ಧಕ್ಕೆ ಬಾರದಂತೆ ನಿರ್ವಹಿಸಬಹುದು.

ಈ ಸಮಸ್ಯೆಗೆ ಪರಿಹಾರ ರೂಪಿಸಲು ಒಂದು ದುಂಡು ಮೇಜಿನ ಸಭೆಗೆ ಯಾವುದೇ ಸ್ಪಂದನ ದೊರಕದಿರುವುದು ಶೋಚನೀಯ. ಸದ್ಭಾವನಾ ಯಾತ್ರ ಮತ್ತು ಪರಸ್ಪರ ಪೂರಕ ವಾತಾವರಣದಲ್ಲಿ ಸಮಾಧಾನಕರ ಪರಿಹಾರ ರೂಪಿಸುವ ಪ್ರಯತ್ನಗಳೂ ಕೂಡಾ ಫಲ ನೀಡದಿದ್ದುದು ಸರಕಾರದ ಹಠವಾದಿ ನಿಲುವಿನಿಂದಾಗಿ ಎಂಬುದು ಬೇಸರ ತರಿಸುವ ಸಂಗತಿ. ಸರಕಾರ ಚರ್ಚಾರ್ಹ, ಜನವಿರೋಧಿ, ಪ್ರಜಾತಂತ್ರ ವಿರೋಧಿ ನೀತಿಗಳನ್ನು ಮುಂದುವರೆಸಿಕೊಂಡು ಬರುತ್ತಿದೆ. ಇಂತಹ ಸಂದರ್ಭದಲ್ಲಿ ಒಂದು ರಾಜಕೀಯೇತರ ಸಂಘಟನೆ ಮಂಚೂಣಿಯಲ್ಲಿ ನಿಂತು ಈ ಹೋರಾಟ ನಡೆಸುತ್ತಿರುವುದು, ಹಾಗೂ ಈ ಆಂದೋಲನ ರಾಜಕೀಯ ಪಕ್ಷಗಳ ಕಾರ್ಯಸೂಚಿಯಂತಾಗದೆ ಜನಾಂದೋಲನವಾಗಿ ಮುಂದುವರೆಯುತ್ತಿರುವ ಹಿನ್ನೆಲೆಯಲ್ಲಿ ಜನಸಂಘವು ತನ್ನ ಎಲ್ಲಾ ಕಾರ್ಯಕರ್ತರು ತಮ್ಮ ವೈಯುಕ್ತಿಕ ನೆಲೆಯಲ್ಲಿ ಈ ಹೋರಾಟದಲ್ಲಿ ಭಾಗವಹಿಸಲು ಸ್ವತಂತ್ರರು ಎಂದು ತಿಳಿಸುತ್ತದೆ. ಪಂಜಾಬಿನ ಸಿಖ್ ಮತ್ತು ಸಿಖ್ಖರಲ್ಲದ ಎಲ್ಲ ನಾಗರಿಕರಿಗೂ ಜನಸಂಘದ ಮನವಿ ಏನೆಂದರೆ ಈ ಪ್ರತ್ಯೇಕತಾವಾದಿ, ಕೋಮುವಾದಿ ಶಕ್ತಿಗಳನ್ನು ಹಿಂದಿಕ್ಕಿ ಪಂಜಾಬಿ ಮತ್ತು ಹಿಂದಿ ಭಾಷಿಕರ ಸಾಮರಸ್ಯದ ಆಂದೋಲನವನ್ನು ಮುನ್ನಡೆಸಬೇಕೆಂದು ಮನವಿ ಮಾಡುತ್ತೇವೆ.

* * * * *

# ಆಗಸ್ಟ್ ೧೫ ಭಾರತದ ರಕ್ಷಣಾ ದಿನ ಎಂದು ಆಚರಿಸಬೇಕು

## ಜನಸಂಘದ ಕರೆ

ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದೀನ್ ದಯಾಳ್ ಉಪಾಧ್ಯಾಯ ಅವರ ಪತ್ರಿಕಾ ಹೇಳಿಕೆ

ಅಸ್ಸಾಂ ಮತ್ತು ತ್ರಿಪುರಾ ರಾಜ್ಯದ ಗಡಿಗಳಲ್ಲಿ ಪಾಕಿಸ್ತಾನದ ಸೈನ್ಯವು ನಿರಂತರವಾಗಿ ಗಡಿ ಉಲ್ಲಂಘನೆ ಮತ್ತು ಆಕ್ರಮಣ ಪ್ರವೃತ್ತಿ ತೋರುತ್ತಾ ಬಂದಿದೆ. ಲಕ್ಷ್ಮಿಪುರ ಈ ನಿಟ್ಟಿನಲ್ಲಿ ಅತ್ಯಂತ ಹೊಸ ಪ್ರಕರಣ. ಭಾರತದೊಂದಿಗೆ ಸಮಸ್ಯೆಯನ್ನು ಉಲ್ಬಣಿಸಲು ಪಾಕಿಸ್ತಾನ ಹವಣಿಸುತ್ತಿದೆ. ಇತ್ತೀಚೆಗೆ ಅಮೆರಿಕದಿಂದ ಹೊಸ ಆಯುಧಗಳನ್ನು ಪಡೆದಿರುವ ಮತ್ತು ಬಾಗ್ದಾದ್ ಒಪ್ಪಂದದ ರಾಷ್ಟ್ರಗಳೊಂದಿಗೆ ದೊರೆತ ಸಕ್ರಿಯ ಸಹಕಾರದ ಭರವಸೆಯ ಕಾರಣದಿಂದಾಗಿ ಸಂಭವನೀಯ ಪೂರ್ಣ ಪ್ರಮಾಣದ ಯುದ್ಧ ಮತ್ತು ಆಕ್ರಮಣತೆಯ ಸಾಧ್ಯತೆಯನ್ನು ನಿರ್ಮಿಸುತ್ತಿದೆ. ತನ್ನ ಪಠಾಣ ಸೇನಾ ವಿಭಾಗದ ಮೂಲಕ ತ್ರಿಪುರಾ ಗಡಿಯಲ್ಲಿ ಆಕ್ರಮಣ ಮಾಡಿರುವ ರೀತಿ ಅದು ತ್ರಿಪುರಾವನ್ನು ಆಕ್ರಮಿಸಬಯಸುತ್ತಿದೆ ಮತ್ತು ಭಾರತ ಈ ನಿಟ್ಟಿನಲ್ಲಿ ಎಚ್ಚರವಾಗುವ ಮುನ್ನವೇ ಪ್ರಪಂಚದ ದೃಷ್ಟಿಯಲ್ಲಿ ಈ ವಿಷಯದ ಚರ್ಚೆ ಕೂಡಾ ಅನಗತ್ಯ ಎಂಬ ಪರಿಸ್ಥಿತಿ ನಿರ್ಮಾಣ ಮಾಡ ಹೊರಟಿದೆ.

ಇಲ್ಲಿ ಆತಂಕಕಾರಿ ವಿಷಯವೇನೆಂದರೆ, ಇಂತಹ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸದ ಸರ್ಕಾರ ತುಂಬಾ ಲಘುವಾಗಿ ಈ ಪರಿಸ್ಥಿತಿಯನ್ನು ನಿರ್ವಹಿಸುತ್ತಿದೆ ಎಂಬುದು. ಪಾಕಿಸ್ತಾನವು ತನ್ನ ಅತ್ಯುತ್ತಮ ಪಡೆಯನ್ನು ಗಡಿಯಲ್ಲಿ ಸನ್ನದ್ಧಗೊಳಿಸಿರುವಾಗ ಭಾರತ ಸರ್ಕಾರವು ತನ್ನ ಸ್ಥಳೀಯ ಅಧಿಕಾರಿ ಮತ್ತು ಮತ್ತು ಗಡಿ ಭದ್ರತಾ ಅಧಿಕಾರಿಗಳನ್ನೇ ಈ ಸಮಸ್ಯೆ ನಿರ್ವಹಣೆಗೆ ತೊಡಗಿಸಿರುವುದು ಆತಂಕದ ವಿಷಯವೇ ಸರಿ. ಸರ್ಕಾರವು ಒಂದೋ ಪ್ರಜ್ಞಾಪೂರ್ವಕವಾಗಿ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಅಥವಾ ಸರ್ಕಾರಕ್ಕೆ ಸಮಸ್ಯೆಯ ಗಂಭೀರತೆ ಅರ್ಥವಾಗಿಲ್ಲ.

---

**ಮೂಲ ಆಕರ : ಆಗಸ್ಟ್ ೧೮, ೧೯೫೮, ಆರ್ಗನೈಸರ್**

ಜನಸಂಘವು ರಾಷ್ಟ್ರ ಗಡಿ ರಕ್ಷಣೆಗೆ ಪ್ರಾಧಾನ್ಯತೆ ನೀಡಬೇಕೆಂದು ಆಗ್ರಹಿಸುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಯಾವುದೇ ಅವಗಣನೆಯು ರಾಷ್ಟ್ರದ ಕೈಗಾರಿಕಾ ಮತ್ತು ಆರ್ಥಿಕ ಬೆಳವಣಿಗೆಯ ಯೋಜನೆಗಳಿಗೆ ಮಾರಕವಾಗಲಿದೆ. ಆದುದರಿಂದ ಜನಮಾನಸವನ್ನು ರಕ್ಷಣೆಯ ವಿಷಯಗಳಲ್ಲಿ ಸನ್ನದ್ಧರನ್ನಾಗಿಸುವುದು, ಗಡಿಯಲ್ಲಿ ಸೇನಾಬಲ ವೃದ್ಧಿಸುವುದು, ಮತ್ತು ಪಾಕಿಸ್ತಾನದ ಕಾರ್ಯಾಚರಣೆಗೆ ಸೂಕ್ತವಾಗಿ ಪ್ರತಿರೋಧಿಸುವುದು. ಕೇವಲ ಬಾಯಿಮಾತಿನ ಪ್ರತಿಭಟನೆಗಳು ಪಾಕಿಸ್ತಾನದ ಮೇಲೆ ಯಾವ ಪರಿಣಾಮವನ್ನೂ ಬೀರಲಾರವು. ಪಾಕಿಸ್ತಾನಕ್ಕೆ ಅರ್ಥವಾಗುವ ಭಾಷೆಯಲ್ಲಿ ಮಾತನಾಡದ ಹೊರತು ಅವರಿಗೆ ಅರಿವಾಗದು.

ಆದುದರಿಂದ ಈ ಕೂಡಲೇ ಪಾಕಿಸ್ತಾನದ ಆಕ್ರಮಣವನ್ನು ತೆರವುಗೊಳಿಸಿ ಲಕ್ಷ್ಮಿಪುರವನ್ನು ಸುರಕ್ಷಿತಗೊಳಿಸಬೇಕೆಂದು ನಾವು ಭಾರತ ಸರ್ಕಾರವನ್ನು ಆಗ್ರಹಿಸುತ್ತೇವೆ, ಗಡಿಯಲ್ಲಿ ಸೇನಾ ವ್ಯವಸ್ಥೆ ಸಕ್ಷಮಗೊಳಿಸಬೇಕು ಮತ್ತು ಪೂರಕ ವಾತಾವರಣವನ್ನು ನಿರ್ಮಿಸಬೇಕು, ಗಡಿಯಲ್ಲಿ ಭಾರತದಿಂದ ಪಾಕಿಸ್ತಾನಕ್ಕೆ ಸಾಮಗ್ರಿ ಸರಬರಾಜಿಗೆ ಕೊಂಡುಕೊಳ್ಳುವ ವ್ಯಾಪಾರ ನೀತಿಯ ಅನ್ವಯ ವಹಿವಾಟು ನಿರ್ವಹಿಸಬೇಕು.

ಇದೇ ಸಂದರ್ಭದಲ್ಲಿ ಈ ವಿಷಯವಾಗಿ ಸಾರ್ವಜನಿಕ ಅಭಿಪ್ರಾಯವನ್ನೂ ರೂಪಿಸುವ ಕಾರ್ಯವಾಗಬೇಕು. ಈ ಹಿನ್ನೆಲೆಯಲ್ಲಿ ನಾವು ಭಾರತೀಯ ಜನಸಂಘದ ಎಲ್ಲಾ ಶಾಖೆಗಳಿಗೂ ಈ ಮೂಲಕ ಆಗಸ್ಟ್ ೧೫ ನ್ನು ಭಾರತ ರಕ್ಷಣಾ ದಿನ ಎಂದು ಆಚರಿಸಲು ಕರೆ ಕೊಡುತ್ತೇವೆ. ಆ ದಿನ ಸಾರ್ವಜನಿಕ ಸಭೆಗಳನ್ನು ಆಯೋಜಿಸಿ ಸಾರ್ವಜನಿಕರಿಗೆ ವಸ್ತುಸ್ಥಿತಿಯನ್ನು ತಿಳಿಯಪಡಿಸುವ ಕಾರ್ಯ ವಾಗಬೇಕು.

* * * * *

# ಬಾಂಬೆಯ ಬಗೆಗಿನ ತೀರ್ಮಾನ ದುರದೃಷ್ಟಕರ ತಪ್ಪು ನೀತಿ

## ದೀನ್ ದಯಾಳ್ ಅವರಿಂದ ಶಾಂತಿಗಾಗಿ ಮನವಿ

ಎಸ್.ಆರ್.ಸಿ. ವರದಿಯ ಬಗ್ಗೆ ಸರ್ಕಾರ ಕೈಗೊಂಡ ತೀರ್ಮಾನದ ಬಗ್ಗೆ ಭಾರತೀಯ ಜನಸಂಘದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಶ್ರೀ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರು ನೀಡಿದ ಹೇಳಿಕೆ :

ಎಸ್.ಆರ್.ಸಿ. ವರದಿಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮವು ಸಮಾಜದ ವಿಭಜನಾ ಶಕ್ತಿಗಳಿಂದ ರೂಪಿಸಲ್ಪಟ್ಟ ಪರಿಸ್ಥಿತಿಯ ಬಗ್ಗೆ ಸತ್ಯಾರ್ಥತೆ ಮತ್ತು ವಸ್ತುನಿಷ್ಟತೆಯ ಕೊರತೆಯಿಂದ ಕೂಡಿದೆ, ಈ ಬಗ್ಗೆ ಸರ್ಕಾರದ ಕ್ರಮವು ರಾಷ್ಟ್ರದ ಏಕತೆಯನ್ನು ಸಾರುವ ಇನ್ನೂ ಹೆಚ್ಚು ದಿಟ್ಟ ಮತ್ತು ಕ್ರಾಂತಿಕಾರಿ ಸ್ವರೂಪದ್ದಾಗಿರಬೇಕಾಗಿದ್ದು, ದೇಶವನ್ನು ಕಾಡುತ್ತಿರುವ ಜಾತೀಯತೆ, ಭಾಷಾಂಧತೆ, ಕೋಮುವಾದಗಳು ರಾಷ್ಟ್ರದ ಜೀವನ ಮತ್ತು ಏಕತೆಯನ್ನು ತಿಂದುಹಾಕುತ್ತಿವೆ. ಈ ಬಗ್ಗೆ ಏಕೀಕೃತ ಸರ್ಕಾರದ ಸವರೂಪವು ಸೋತಲ್ಲಿ, ಕನಿಷ್ಟ ಕಾಂಗ್ರೆಸಿನ ನಾಯಕರು ಹೊಸ ರಾಜ್ಯಗಳನ್ನು ರಚಿಸುವಾಗ ತಮ್ಮ ಪಕ್ಷದ ಹಿತಾಸಕ್ತಿಗಳನ್ನು ಮೀರಿ ನಿರ್ಣಯ ಕೈಗೊಳ್ಳುವರೆಂಬ ನಿರೀಕ್ಷೆ ಹುಸಿಯಾಗಿದೆ. ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಒತ್ತಡವು ಅಂತಿಮವಾಗಿ ಕಾಂಗ್ರೆಸ್ ಹೈಕಮಾಂಡ್ ಅಂತಿಮ ನಿರ್ಣಯದ ಮೇಲೆ ಪ್ರಭಾವ ಬೀರಿದೆ. ಹಾಗಲ್ಲದಿದ್ದಲ್ಲಿ ರಾಜ್ಯಗಳ ನಡುವೆ ಕೇಂದ್ರಾಡಳಿತಕ್ಕೆ ಅಷ್ಟೊಂದು ಪ್ರದೇಶಗಳು ಒಳಗೊಳ್ಳುವಂತೆ ಮಾಡಿದ ನಿರ್ಣಯವನ್ನು ಬೇರೆ ಯಾವ ರೀತಿಯಲ್ಲಿ ವಿವರಿಸಲು ಸಾಧ್ಯ? ಕೇವಲ ದೆಹಲಿ, ಅದೂ ಕೂಡ ರಾಷ್ಟ್ರದ ರಾಜಧಾನಿ ಎಂಬ ಕಾರಣಕ್ಕಾಗಿ ಮಾತ್ರ ಕೇಂದ್ರಾಡಳಿತಕ್ಕೆ ಒಳಗೊಳ್ಳಬಲ್ಲದು, ಇದನ್ನುಳಿದು ಮಿಕ್ಕೆಲ್ಲ ಪ್ರದೇಶಗಳನ್ನು ಅವುಗಳ ಸಾಮೀಪ್ಯದ ಆಧಾರದಲ್ಲಿ ನೆರೆ ರಾಜ್ಯಗಳಿಗೆ ಸೇರಿಸಬೇಕೆ ಎಂಬುದು ಜನಸಂಘದ ಅಭಿಮತ.

ಈ ಹಿನ್ನೆಲೆಯಲ್ಲಿ ಬೊಂಬಾಯಿ ಕುರಿತ ಸರ್ಕಾರದ ನಿರ್ಣಯ ತಡೆಯಬಹುದಾಗಿದ್ದ ದುರದೃಷ್ಟಕರ ಅಲಕ್ಷ್ಯ ಎಂದು ನಾನು ಭಾವಿಸುವೆ. ರಾಷ್ಟ್ರದ

---

**ಮೂಲ ಆಕರ : ಆರ್ಗನೈಸರ್, ೨೬, ಜನವರಿ, ೧೯೫೬**

ಹಿತಾಸಕ್ತಿಯ ಹಿನ್ನೆಲೆಯಲ್ಲಿ (ಬೊಂಬಾಯಿಯ ಹಿತಾಸಕ್ತಿಯೂ ಸೇರಿದಂತೆ) ಕೆಲವು ಹಿತಾಸಕ್ತಿಗಳ ಹಿಂಸಾತ್ಮಕ ಪ್ರಚೋದನೆ, ಮತ್ತು ಗೂಂಡಾ ವರ್ತನೆ, ಆಸ್ತಿಪಾಸ್ತಿಗೆ ಬೆಂಕಿ ಹಚ್ಚುವ ಕ್ರಿಯೆಗಳಲ್ಲಿ ತೊಡಗುವವರಿಂದ ಸ್ಥಿತಿಯು ಇನ್ನಷ್ಟು ಹೀನಾಯ ಸ್ಥಿತಿಗೆ ತಲುಪಲಿದೆ. ರಾಜಕೀಯ ಉದ್ದೇಶಗಳ ಸಾಧನೆಗೆ ಒತ್ತಡ ಅಥವಾ ಹಿಂಸೆಯನ್ನು ಬಳಸುವ ವಿಧಾನವನ್ನು ಜನಸಂಘವು ವಿರೋಧಿಸುತ್ತದೆ. ಹಾಗೆಯೇ ಜನಾಂದೋಲನವನ್ನು ಹಿಂಸಾತ್ಮಕವಾಗಿ ಹತ್ತಿಕ್ಕುವ ಸರ್ಕಾರದ ನೀತಿ ಅಷ್ಟೆ ಖಂಡನೀಯ. ಬೊಂಬಾಯಿಯ ನಾಗರಿಕರಿಗೆ ಈ ಸಮಾಜವಿರೋಧಿ ಶಕ್ತಿಗಳ ಹಿತಾಸಕ್ತಿಗೆ ಮಣಿಯಬಾರದೆಂದು ನಾನು ವಿನಂತಿಸುತ್ತೇನೆ.

ಬೊಂಬಾಯಿಯಲ್ಲಿರುವ ಜನಸಂಘದ ಕಾರ್ಯಕರ್ತರು ಮತ್ತು ಅಭಿಮಾನಿಗಳಲ್ಲಿ ನಾನು ವಿನಂತಿಸುವುದೇನೆಂದರೆ, ಅವರು ತಮ್ಮೆಲ್ಲ ಶಕ್ತಿ ಮತ್ತು ಪ್ರಭಾವವನ್ನು ಶಾಂತಿ ಮತ್ತು ಸುವ್ಯವಸ್ಥೆ ಮರಳಿ ತರುವಲ್ಲಿ ಶ್ರಮಿಸಬೇಕು. ತಮ್ಮೆಲ್ಲ ಶಕ್ತಿ ಬಳಸಿ ಸಮಾಜವಿರೋಧಿ ಶಕ್ತಿಗಳು ಬೊಂಬಾಯಿಯ ಜನ ಮತ್ತು ಆಸ್ತಿಗಳಿಗೆ ಹಾನಿ ಮಾಡದಂತೆ ಸರ್ವ ಪ್ರಯತ್ನ ಮಾಡಬೇಕು.

* * * * *

ಜಮ್ಮುವಿನ ಆಂದೋಲನ

# ಭಾರತದ ಏಕತೆಗಾಗಿ ಸಂಗ್ರಾಮ

**ಜಯಪುರದ ಪತ್ರಿಕಾ ಸಮ್ಮೇಳನದಲ್ಲಿ ಅಖಿಲ ಭಾರತ ಜನಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ದೀನ್ ದಯಾಳ್ ಉಪಾಧ್ಯಾಯರಿಂದ ಕೊಡಲ್ಪಟ್ಟ ಹೇಳಿಕೆ ಈ ರೀತಿಯಾಗಿದೆ:**

ಪಾಕಿಸ್ತಾನದ ಅಧಿಕಾರದಲ್ಲಿರುವ ಕಾಶ್ಮೀರದ ಮೂರನೆ ಒಂದು ಭೂ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಬೇಕಾದುದು ಅತ್ಯಾವಶ್ಯಕವಾಗಿದೆ. ಅನ್ಯಾಯದ ಮಾರ್ಗದಿಂದ ಅಧಿಕೃತ ಭೂ ಭಾಗಗಳ ಮೇಲೆ ಪಾಕಿಸ್ತಾನದ ಹಿಡಿತವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆಂಬಲಿಸುವುದು ಭವಿಷ್ಯದಲ್ಲಿ ಆಕ್ರಮಣಕಾರಿ ಪ್ರವೃತ್ತಿಯನ್ನು ಪ್ರೋತ್ಸಾಹಿಸುವುದಕ್ಕೆ ಉದಾಹರಣೆಯಾಗಬಲ್ಲದು. ಉಳಿದಂತೆ ಕಾಶ್ಮೀರದ ಸಂಪೂರ್ಣ ವಿಲೀನೀಕರಣದ ಪ್ರಶ್ನೆ ಕೂಡಾ ತುರ್ತಾಗಿ ಬಗೆಹರಿಯ ಬೇಕಾಗಿದೆ.

ಭಾರತದ ಯಾವ ಸಂವಿಧಾನವು ಜಾತಿ–ಮತ–ಪಂಥಗಳಿಂದ ಮೇಲೆದ್ದು ಎಲ್ಲ ನಾಗರಿಕರಿಗೆ ಸಮಾನ ಅಧಿಕಾರ ಹಾಗೂ ರಕ್ಷಣೆಯ ಗ್ಯಾರಂಟಿ ಕೊಡುತ್ತದೊ, ಅದು ಭಾರತದಲ್ಲಿರುವ ನಾಲ್ಕು ಕೋಟಿ ಮುಸಲ್ಮಾನರಿಗೆ ಪ್ರತಿಕೂಲವಾಗಿರುವುದೆಂದು ಹೇಳಲು ಸಾಧ್ಯವಿಲ್ಲ. ಜನಾಭಿಪ್ರಾಯ ಸಂಗ್ರಹದ ಪ್ರಸ್ತಾಪವಿದ್ದರೂ ಸುದೂರ ಭವಿಷ್ಯದ ಆ ದಿನದವರೆಗೆ ಕಾಶ್ಮೀರದಲ್ಲಿ ಪ್ರಗತಿಗೆ ಅಡ್ಡಿಯುಂಟಾಗುವ ಸಾಧ್ಯತೆಯಿಲ್ಲ. ಕಾಶ್ಮೀರದ ವಿಷಯದಲ್ಲಿ ಅಲ್ಲಿಯ ಸಂವಿಧಾನ ಸಭೆ ಮತ್ತು ನೆಹರೂ–ಅಬ್ದುಲ್ಲ ಒಪ್ಪಂದಕ್ಕನುಗುಣವಾಗಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಆದರೆ ಈ ನಿರ್ಧಾರಗಳು ಕಾಶ್ಮೀರದ ಮತ್ತು ಭಾರತದ ಒಳಿತುಗಳಿಗೆ ಅನುಕೂಲವಾಗುವ ಸಂಪೂರ್ಣ ಐಕ್ಯದ ದೃಷ್ಟಿಯಿಂದಾಗಿರದೆ, ಒಂದು ಸ್ವತಂತ್ರ ಪ್ರಭುತ್ವವನ್ನು ಹುಟ್ಟುಹಾಕಿ ಪಾಕಿಸ್ತಾನದ ಒಂದು ಹೊಸ ಆವೃತ್ತಿಯನ್ನು ನಿರ್ಮಿಸುತ್ತಿವೆ. ಭಾರತದ ಐಕ್ಯವನ್ನು ಭಗ್ನಗೊಳಿಸುವ ಈ ಪ್ರಯತ್ನ ೧೯೪೭ರಂತೆಯೆ ಘಾತಕವಾಗಬಲ್ಲದು.

ಜಮ್ಮೂ ಪ್ರಜಾ ಪರಿಷದ್ ಈ ವಿಚ್ಛಿದ್ರಕಾರಿ ಪ್ರವೃತ್ತಿಗಳ ವಿರುದ್ಧ ಹೋರಾಟ ನಡೆಸುತ್ತಿದೆ. ಆದರೆ ಕಾಶ್ಮೀರ ಹಾಗೂ ಭರತ ಸರಕಾರಗಳೆರಡೂ ಪ್ರಜಾ ಪರಿಷದ್‌ನ ಸತ್ಯಾಗ್ರಹವನ್ನು ಕೇವಲ ಅಮಾನವೀಯ ರೀತಿಗಳಿಂದ ಹತ್ತಿಕ್ಕುತ್ತಿರುವುದಲ್ಲದೆ,

ಅದರ ವಾಸ್ತವಿಕ ಉದ್ದೇಶಗಳ ಕುರಿತಾಗಿ ಜನರಲ್ಲಿ ತಪ್ಪು ಕಲ್ಪನೆಗಳನ್ನು ಹುಟ್ಟಿಸುವ ಪ್ರಯತ್ನ ಮಾಡುತ್ತಿದೆ. ಕಾಂಗ್ರೆಸ್‌ನ ಹೈದರಾಬಾದ್ ಅಧಿವೇಶನದಲ್ಲಿಯೂ ಈ ಬಗ್ಗೆ ಪ್ರಯತ್ನ ಮಾಡಲಾಗಿದೆ.

ಜಮ್ಮೂವಿನಲ್ಲಿ ನಿಜವಾಗಿ ನಡೆಯುತ್ತಿರುವುದೇನು ಎಂಬ ಮಾಹಿತಿ ಭಾರತಕ್ಕೆ ಬರದಂತೆ ತಡೆಯಲಾಗುತ್ತಿದೆ. ಸ್ವತಂತ್ರ ವ್ಯಕ್ತಿ ಅಲ್ಲಿಗೆ ಹೋಗುವಂತಿಲ್ಲ. ಭಾರತೀಯ ಜನಸಂಘದ ಶಿಷ್ಟಮಂಡಲಕ್ಕೆ ಕಾಶ್ಮೀರಕ್ಕೆ ಹೋಗುವ ಅನುಮತಿ ಸಿಕ್ಕಿಲ್ಲ.

ಭಾರತ ಸರಕಾರ ವಾಸ್ತವಿಕತೆಯನ್ನು ಬಚ್ಚಿಡುವ ಪ್ರಯತ್ನ ಮಾಡುತ್ತಿದೆ. ಪರಿಸ್ಥಿತಿ ನಿಯಂತ್ರಣ ಮೀರಿದೆ ಎಂಬುದನ್ನು ದೈನಂದಿನ ಗೋಲಿಬಾರ್, ಲಾಠಿಚಾರ್ಜ್, ಅಶ್ರುವಾಯು ಮತ್ತು ಜನತೆಯಿಂದ ನಡೆಯುತ್ತಿರುವ ವಿರೋಧ ಪ್ರದರ್ಶನ ಹಾಗೂ ಹರತಾಳಗಳು ಪುಷ್ಟೀಕರಿಸುತ್ತಿವೆ.

ಒಂದು ವೇಳೆ ಸರಕಾರವು ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಳ್ಳದೇ ಹೋದಲ್ಲಿ, ರಾಷ್ಟ್ರದ ಬೇಡಿಕೆಯನ್ನು ಒಪ್ಪಿಕೊಂಡು ಜಮ್ಮೂವಿನ ಹೋರಾಟ ಭಾರತದ ಏಕತೆಯ ಹೋರಾಟವಾಗಿರುವುದರಿಂದ, ಅದು ಭಾರತದ ಎಲ್ಲ ರಾಷ್ಟ್ರವಾದಿ ಶಕ್ತಿಗಳ ಮಟ್ಟಿಗೆ ಅವರೆಲ್ಲರ ಹೋರಾಟವೂ ಆಗಿದೆ. ಭಾರತೀಯ ಏಕತೆಯ ಪವಿತ್ರ ಸಿದ್ಧಾಂತವನ್ನು ತನ್ನ ಮುಂದೆ ಇಟ್ಟುಕೊಂಡಿದೆ. ಆದ್ದರಿಂದ ಕಾನ್ಪುರ್ ಅಧಿವೇಶನದಲ್ಲಿ ಈ ಹೋರಾಟವನ್ನು ಕೈಗೆತ್ತಿಕೊಳ್ಳುವ ತೀರ್ಮಾನ ಮಾಡಲಾಗಿದೆ.

* * * * *

# ಫ್ರೆಂಚ್ ವಸತಿ ಪ್ರದೇಶಗಳ ಕುರಿತು ನೆಹರೂರವರ ಹೇಳಿಕೆ ನಿರಾಶಾದಾಯಕವಾದದ್ದು

### ಜನಸಂಘದ ಕಾರ್ಯದರ್ಶಿ ಶ್ರೀ ಉಪಾಧ್ಯಾಯರ ಹೇಳಿಕೆ

ನಾಗಪುರ: ಭಾರತೀಯ ಜನಸಂಘದ ಕಾರ್ಯದರ್ಶಿ ಶ್ರೀ ದೀನ್ ದಯಾಳ್ ಉಪಾಧ್ಯಾಯರು ಭಾರತದಲ್ಲಿರುವ ಫ್ರೆಂಚ್ ವಸತಿ ಪ್ರದೇಶಗಳ ವಿಷಯದಲ್ಲಿ ಫ್ರೆಂಚ್ ಶಾಸಕರೊಡನೆ ಮಾತುಕತೆ ನಡೆಸುವ ಕುರಿತಾಗಿ ಹೇಳಿದ ಪ್ರಸ್ತುತ ಪ್ರಧಾನ ಮಂತ್ರಿ ಪಂ. ನೆಹರೂರವರ ಹೇಳಿಕೆ "ನಿರಾಶಾದಾಯಕ"ವಾಗಿದೆ ಎಂದು ಪತ್ರಿಕಾ ಗೋಷ್ಠಿಯೊಂದರಲ್ಲಿ ಅಭಿಪ್ರಾಯಪಟ್ಟರು. ಅವರು ಮುಂದುವರಿಯುತ್ತಾ ಹೀಗೆ ಹೇಳಿದರು – "ಗಡಿಯಾರದ ಮುಳ್ಳನ್ನು ಹಿಂದಕ್ಕೆ ತಿರುಗಿಸುವ ಪ್ರಯತ್ನ ಸರ್ವಥಾ ಅವಿವೇಕದಿಂದ ಕೂಡಿದ್ದಾಗಿದ್ದು, ಯಾವ ಸರಕಾರಕ್ಕೆ ತನ್ನದೇ ಆದ ಅಸ್ತಿತ್ವವಿಲ್ಲವೋ ಅದರೊಂದಿಗಿನ ಮಾತುಕತೆಗೆ ಯಾವ ಅರ್ಥವಿದೆ?"

ಭಾರತ ಸರಕಾರವು ತುರ್ತಾಗಿ ಸ್ವತಂತ್ರ ಹೊಂದಿದ ಬೇರೆ–ಬೇರೆ ಕ್ಷೇತ್ರಗಳ ಪ್ರಜಾ ಸರಕಾರಗಳನ್ನು ಮಾನ್ಯ ಮಾಡಬೇಕು. ಅದರೊಂದಿಗೆ ಅವರಿಗೆ ಸರ್ವ ವಿಧದ ಸಹಕಾರ ನೀಡಿ ಇನ್ನುಳಿದ ವಸತಿ ಪ್ರದೇಶಗಳನ್ನು ಸ್ವತಂತ್ರಗೊಳಿಸುವರೆ ಸಹಾಯ ಹಸ್ತ ಚಾಚಬೇಕು– ಶ್ರೀ ದೀನ್ ದಯಾಳ್‌ರು ಈ ಮೂಲಕ ಭಾರತ ಸರಕಾರಕ್ಕೆ ತಮ್ಮ ಅಮೂಲ್ಯವಾದ ಸಲಹೆ ನೀಡಿದರು.

ಹೀಗೆ ಮುಂದುವರಿಯುತ್ತ ಅವರು ತಮ್ಮ ವಕ್ತವ್ಯದಲ್ಲಿ ಈ ರೀತಿ ಅಭಿಪ್ರಾಯ ಪಟ್ಟರು – ಪ್ರಧಾನ ಮಂತ್ರಿ ಪಂ. ನೆಹರೂರವರು ಮೊದಲು ಫ್ರೆಂಚ್ ವಸತಿ ಪ್ರದೇಶಗಳನ್ನು ಭಾರತ ಸರಕಾರಕ್ಕೆ ಹಸ್ತಾಂತರಿಸುವ ಬೇಡಿಕೆಯಿಟ್ಟಿದ್ದರು. ಪ್ರಚಲಿತ ವಕ್ತವ್ಯವು ಅವರ ಮೊದಲಿನ ಬೇಡಿಕೆಯಿಂದ ಹಿಂದಕ್ಕೆ ಸರಿಯುವಂಥದಲ್ಲದೆ, ದೇಶಭಕ್ತ ತತ್ತ್ವಗಳ ಬಗಗೆ ಸಂಪೂರ್ಣ ವಿಶ್ವಾಸಘಾತಕವಾದದ್ದು.

ಕೊನೆಯಲ್ಲಿ ಶ್ರೀ ಉಪಾಧ್ಯಾಯರು ಪ್ರೆಂಚ್ ವಸತಿ ಪ್ರದೇಶಗಳ ಜನರಿಗೆ ತಮ್ಮ ಸ್ವಾತಂತ್ರ್ಯ ಹೋರಾಟವನ್ನು ಮುಂದುವರಿಸುವಂತೆ ಕೇಳಿಕೊಂಡರು. ಜೊತೆಗೆ

---

ಆಕರ: ಪಾಂಚಜನ್ಯ [ವರ್ಷ ೭ ಅಂಕ ೪೨] ವೈಶಾಖ ಶುಕ್ಲ ೧೫ ಸಂವತ್ ೨೦೧೧ ವಿ

ಭಾರತದ ಜನತೆಯ ಪರವಾಗಿ ಹೋರಾಟಕ್ಕೆ ಸರ್ವ ರೀತಿಯ ಸಹಾಯ–ಸಹಕಾರ ನೀಡುವ ಭರವಸೆಯನ್ನಿತ್ತರು.

ರಾಷ್ಟ್ರದ ಗೌರವದಲ್ಲಿಯೇ ನಮ್ಮ ಗೌರವ ಅಡಗಿದೆ. ಆದರೆ ಯಾವಾಗ ಮನುಷ್ಯ ಈ ಸಾಮೂಹಿಕ ಭಾವವನ್ನು ಮರೆತು ವೈಯಕ್ತಿಕವಾದ ಬೇರೆ–ಬೇರೆ ಸ್ತರಗಳಲ್ಲಿ ಯೋಚಿಸುತ್ತಾನೋ ಆಗ ಅದರಿಂದ ಹಾನಿಯುಂಟಾಗುತ್ತದೆ. ನಾವು ಸಾಮೂಹಿಕ ರೂಪದಲ್ಲಿ ನಮ್ಮ ಕೆಲಸ–ಕಾರ್ಯಗಳನ್ನು ಪೂರೈಸಿ ರಾಷ್ಟ್ರದ ಕುರಿತು ಚಿಂತನೆ ಮಾಡಿದರೆ ಎಲ್ಲವೂ ಸುವ್ಯವಸ್ಥಿತವಾಗುತ್ತದೆ. ನಾವು ಸಾಮೂಹಿಕವಾಗಿ ಯೋಚಿಸಬೇಕು. ಸಮಾಜದ ಕುರಿತಾಗಿ ಯೋಚಿಸಬೇಕೇ ಹೊರತು ವ್ಯಕ್ತಿಯಾಗಿ ಅಲ್ಲ, ಎಂಬುದು ಮೂಲಭೂತವಾದ ವಿಚಾರವಾಗಿದೆ. ಇದರ ವಿರುದ್ಧವಾಗಿ ಯಾವುದಾದರೂ ಕೆಲಸ ಮಾಡಿದರೆ, ಅದು ಸಮಾಜದ ನೆಲೆಯಲ್ಲಿ ಘಾತಕವಾಗಿ ಮಾರ್ಪಡುತ್ತದೆ. ಸದಾ ಸಮಾಜದ ಕುರಿತಾಗಿ ಯೋಚನೆಮಾಡಿ ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕು.

ನಮ್ಮ ಆರ್ಥಿಕ, ರಾಜಕೀಯ, ಆಧ್ಯಾತ್ಮಿಕ ಹಾಗೂ ನೈತಿಕ ವಿಕಾಸಗಳೆಲ್ಲವೂ ಸಮಾಜದೊಂದಿಗೆ ಬೆರೆತುಕೊಂಡಿದೆ.

ಹಿಮಾಲಯದ ಗುಹೆಯಲ್ಲಿ ಕುಳಿತು ಯೋಗಾಭ್ಯಾಸ ಮಾಡಿದರೆ, ಮುಕ್ತಿ ಸಿಗುವುದಿಲ್ಲ ಆದರೆ ಯೋಗದ ಅಭ್ಯಾಸವಾಗಬಹುದಷ್ಟೆ. ಮುಕ್ತಿಯೂ ವೈಯಕ್ತಿಕವಾದುದಲ್ಲ; ಸಾಮಾಜಿಕ ಅಥವಾ ಸಮಷ್ಟಿಗತವಾದದ್ದು. ಯಾವಾಗ ಸಮಾಜ ಮುಕ್ತವಾಗುತ್ತದೋ. ವಿಕಾಸಹೊಂದುತ್ತದೋ ಆವಾಗ ವ್ಯಕ್ತಿಯು ಕೂಡಾ. ಭಗವಂತನು ಅವತರಿಸಿದ್ದರೆ ಅದು ಧರ್ಮ ರಕ್ಷಣೆಗಾಗಿಯೇ... ಭಗವಾನ್ ಕೃಷ್ಣರಂತೂ ಆಜನ್ಮ ಕಾರ್ಯ ನಿರ್ವಹಿಸಿದ್ದಾರೆ, ಅವರಂತೂ ಸಂಪೂರ್ಣ ಸಮಾಜವನ್ನು ತಮ್ಮೆದುರಿಗೆ ಇಟ್ಟುಕೊಂಡೇ ಕಾರ್ಯವೆಸಗಿದ್ದಾರೆ.

ಇದರ ಸಾರವೇನೆಂದರೆ, ಸಮಾಜದ ಕೆಲಸ ಭಗವಂತನ ಕೆಲಸ. ರಾಷ್ಟ್ರಭಕ್ತಿ ಅರ್ಥಾತ್ ಸಮಾಜ ಭಕ್ತಿಯೆಂಬುದೇ ಭಗವದ್ ಭಕ್ತಿಯಾಗಿದೆ.

ವಾಸ್ತವವಾಗಿ ಸಮಷ್ಟಿವಾದ–ಇದು ಧರ್ಮ, ರಾಷ್ಟ್ರವಾದ–ಇದು ಧರ್ಮ. ಹಾಗಾಗಿ ವ್ಯಕ್ತಿಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಮಾಡಿದಂತಹ ಕಾರ್ಯ ಅಧರ್ಮವಾಗುತ್ತದೆ. ರಾಷ್ಟ್ರದ ಕುರಿತಾಗಿ ಯೋಚಿಸಿ ಏನನ್ನೇ ಮಾಡಿದರೂ ಅದು ಧರ್ಮವಾಗುತ್ತದೆ.

ಸುಸಂಘಟಿತ ಕಾರ್ಯಶಕ್ತಿ ನಿಶ್ಚಯವಾಗಿ ಜಯಶಾಲಿಯಾಗಿರುತ್ತದೆ. ಈ ವಿಚಾರವನ್ನು ಅರ್ಥಮಾಡಿಕೊಂಡು ನಾವು ಮುಂದುವರಿಯಬೇಕು, ಈ ಒಂದು ಭಾವವನ್ನು ಸಂಪೂರ್ಣ ಸಮಾಜದಲ್ಲಿ ಬಿತ್ತಬೇಕು...ರಾಷ್ಟ್ರೀಯತೆಯ ನಂತರ

ಬರುವುದು ಪ್ರಜಾಪ್ರಭುತ್ವ ಅಥವಾ ಪ್ರಜಾತಂತ್ರ. ಪ್ರತಿಯೊಂದು ತಂತ್ರವೂ ರಾಷ್ಟ್ರೀಯತೆಯ ನಂತರವೇ ಬರುವುದು. ಒಂದು ವೇಳೆ ರಾಷ್ಟ್ರೀಯತೆಯು ದುರ್ಬಲವಾದಲ್ಲಿ ಪ್ರಜಾತಂತ್ರ ಮುಂದುವರಿಯಲಾರದು. ಒಂದೊಮ್ಮೆ ರಾಷ್ಟ್ರೀಯತೆ ಸರಿಯಾಗಿದ್ದರೆ ಅದು ಮುಂದುವರಿಯುತ್ತದೆ. ಆಗ ಪ್ರಜಾಪ್ರಭುತ್ವ ನಡೆಯಬಹುದು ಸಮಾಜವಾದ ನಡೆಯಬಹುದು, ಬಂಡವಾಳಶಾಹಿ ವ್ಯವಸ್ಥೆ ನಡೆಯಬಹುದು, ಅಷ್ಟೇ ಏಕೆ ಪ್ರತಿಯೊಂದು ವಾದವೂ ನಡೆಯಬಹುದು.

ಎಲ್ಲ ರೀತಿಯ ಅವ್ಯವಸ್ಥೆ ರಾಷ್ಟ್ರೀಯ ಭಾವನೆಯ ಅಭಾವದಿಂದ ಹುಟ್ಟಿಕೊಳ್ಳುವಂಥವುಗಳು. ರಾಷ್ಟ್ರೀಯ ಭಾವನೆಯಿದ್ದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಕೂಡಾ ತನ್ನ ನಿರ್ಣಯಗಳನ್ನು ದೇಶದ ಹಿತದ ದೃಷ್ಟಿಯಿಂದಲೇ ತೆಗೆದುಕೊಳ್ಳುತ್ತದೆ. ದುರ್ಭಾಗ್ಯವೆಂದರೆ, ಈ ದೇಶದ ಜನರು ಈ ಒಂದು ಮೂಲಭೂತ ವಿಷಯದ ಕುರಿತಾಗಿ ವಿಚಾರಮಾಡುವುದಿಲ್ಲ. ನಿಮ್ಮ ವೈಭವ ನಿಮಗೆ ಬೇಕೆಂದಿದ್ದರೆ, ಇದು ನಮ್ಮ ರಾಷ್ಟ್ರ ಇದರ ಕುರಿತಾಗಿ ನಾವೇ ವಿಚಾರ–ಪ್ರವೃತ್ತರಾಗಬೇಕು ಎಂಬ ವಿಚಾರವನ್ನು ಮನದಟ್ಟುಮಾಡಿಕೊಳ್ಳಬೇಕು.

* * * * *

# ಸೊಂಟ ಮುರಿವ ತೆರಿಗೆ: ನಿರಂಕುಶ ಪ್ರಭುತ್ವದ ಪಥದಲ್ಲಿ ಪಯಣ

## ಒಂದೇ ವಸ್ತುವಿನ ಮೇಲೆ ಹಲವು ರೀತಿಯ ತೆರಿಗೆ ಹೇರಿಕೆ ಸಂಪೂರ್ಣ ಅಸಮರ್ಪಕ

### ಶ್ರೀ ದೀನ್ ದಯಾಳ್ ಉಪಾಧ್ಯಾಯರಿಂದ ಸರಕಾರದ ತೆರಿಗೆ–ನೀತಿಗೆ ತೀವ್ರ ವಿರೋಧ

ಕಾಂಗ್ರೆಸ್ ಸರಕಾರದ ತೆರಿಗೆ ಹೆಚ್ಚಳ ನೀತಿಯನ್ನು ವಿರೋಧಿಸುವುದಕ್ಕಾಗಿ ಕಳೆದ ಜುಲೈ ೧ ರಂದು ಭಾರತೀಯ ಜನಸಂಘದ ವತಿಯಿಂದ ದೇಶವ್ಯಾಪಿ ಪ್ರದರ್ಶನಗಳನ್ನು ಹಾಗೂ ಸಭೆಗಳನ್ನು ಆಯೋಜಿಸಲಾಗಿತ್ತು. ದಿಲ್ಲಿಯ ಸಾರ್ವಜನಿಕ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಉಪಾಧ್ಯಾಯರು ಮಾಡಿದ ಭಾಷಣವನ್ನು ಇಲ್ಲಿ ಕೊಡಲಾಗಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಪ್ರತಿದಿನವೂ ಹೊಸ–ಹೊಸ ತೆರಿಗೆಗಳ ಹೊರೆಯನ್ನು ಜನರ ತಲೆಯ ಮೇಲೆ ಹೇರುತ್ತಿರುವುದು ಅತೀವ ನೋವಿನ ಸಂಗತಿಯಾಗಿದೆ. ಇದು ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಜೊತೆಗೆ ಇದರಿಂದಾಗಿ ಜನಸಾಮಾನ್ಯರಿಗೆ ಯಾವ ರೀತಿಯ ತೊಂದರೆಗಳನ್ನು ಅನುಭವಿಸಬೇಕಾಗಿ ಬರಹುದು, ಎಂಬುದರ ಕುರಿತಾಗಿ ಅವುಗಳ ಯೋಚನೆಯನ್ನೇ ಮಾಡುತ್ತಿಲ್ಲ. ಮೂರನೆಯ ಯೋಜನೆಯ ಹೆಸರಿನಲ್ಲಿ ಈ ತೆರಿಗೆಗಳನ್ನು ಹೇರಲಾಗುತ್ತಿದೆ. ಆದರೆ ಯಾವ ವಾಸ್ತವಾಂಶಗಳ ಆಧಾರದ ಮೇಲೆ ಈ ಮೂರನೆಯ ಯೋಜನೆಯನ್ನು ರೂಪಿಸಲಾಗಿತ್ತೋ, ಆ ಅಂಶಗಳೇ ನಿರಾಧಾರವಾದದ್ದೆಂಬುದು ಈಗಾಗಲೇ ಸಾಬೀತಾಗಿವೆ. ಒಂದೇ ವರ್ಷದಲ್ಲಿ ಪರಿಸ್ಥಿತಿ ಹೇಗೆ ಹದಗೆಟ್ಟಿದೆಯೆಂದರೆ, ಈಗ ಮೂರನೆಯ ಯೋಜನೆಯ ನಿಷ್ಕರ್ಷೆಯೇ ಸಾಬೀತಾಗಿ ಉಳಿದಿಲ್ಲ. ಹಾಗಿರುವಾಗ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಯೋಜನೆಯಲ್ಲಿ ಮಾರ್ಪಾಡು ಮಾಡಿಕೊಂಡು ಆರ್ಥಿಕ ವ್ಯವಸ್ಥೆಯನ್ನು ಸಮತೋಲನಕ್ಕೆ ತರಬಹುದಿತ್ತು. ಆದರೆ ಸರಕಾರ ಗೊಡ್ಡು ಸಂಪ್ರದಾಯವಾದಿಗಳಂತೆ ಯೋಜನೆಗಳ ಶಬ್ದರೂಪಗಳಿಗೆ ಜೋತುಬಿದ್ದು ಈ ರೀತಿಯ ಹೊಸ ಹೊಸ ತೆರಿಗೆಗಳನ್ನು ಹೇರುತ್ತಲೇ ಇದೆ. ಇದರಿಂದಾಗಿ ಜನರಿಗೆ ಒಂದೆಡೆ ತೆರಿಗೆಯ

ಹೊರೆ, ಇನ್ನೊಂದೆಡೆ ವಸ್ತುಗಳ ಬೆಲೆ ಏರಿಕೆಯ ಬಿಸಿ. ವಿದೇಶಿ ಹಣದ ಜೊತೆಗೆ ಮೂಲಭೂತ ಅವಶ್ಯಕತೆಯ ಮತ್ತು ದಿನಬಳಕೆಯ ವಸ್ತುಗಳ ಅಭಾವವು ಈ ಪರಿಸ್ಥಿತಿಯನ್ನು ಇನ್ನಷ್ಟು ವಿಷಮ ಸ್ಥಿತಿಗೆ ಕೊಂಡೊಯ್ಯುತ್ತಿದೆ. ಇವುಗಳೊಂದಿಗೆ ಹೆಚ್ಚುತ್ತಿರುವ ನಿರುದ್ಯೋಗ ಸಮಸ್ಯೆಯಂತೂ ಪ್ರಾಣಘಾತಕವಾಗಿದೆ ಎಂದು ಕಳೆದ ಜುಲೈ ೧ ರಂದು ದಿಲ್ಲಿಯ ಗಾಂಧೀ ಮೈದಾನದಲ್ಲಿ ಏರ್ಪಡಿಸಿದ್ದ ತೆರಿಗೆ ಏರಿಕೆ ನೀತಿಯ ವಿರೋಧಿ ಸಭೆಯಲ್ಲಿ ಭಾರತೀಯ ಜನಸಂಘದ ಅ. ಭಾ. ಪ್ರಧಾನ ಕಾರ್ಯದರ್ಶಿ ಶ್ರೀ ಉಪಾಧ್ಯಾಯರು ಅಭಿಪ್ರಾಯಪಟ್ಟಿದ್ದಾರೆ.

**ಬಡವರಿಗೆ ಹೊಡೆತ**

ಒಂದೆಡೆ ಸರಕಾರ ಹೊಸ ತೆರಿಗೆ ಹೇರಿದೆ ಇನ್ನೊಂದೆಡೆ ರೈಲು ಹಾಗೂ ಇನ್ನಿತರ ಸಾರಿಗೆ ವ್ಯವಸ್ಥೆಗಳ ಬಾಡಿಗೆಗಳನ್ನು, ಜೊತೆಗೆ ಸರಕಾರಿ ಕಾರ್ಖಾನೆಗಳ ಉತ್ಪಾದನೆಗಳ ಮೌಲ್ಯಗಳನ್ನು ಹೆಚ್ಚಿಸಿದೆ. ಅದರಿಂದಾಗಿ ಸುಮಾರು ೨೫೦ ಕೋಟಿ ರೂಪಾಯಿಗಳ ರಾಷ್ಟ್ರೀಯ ಆದಾಯವು ಸರಕಾರದ ಬೊಕ್ಕಸಕ್ಕೆ ಹೆಚ್ಚುವರಿಯಾಗಿ ಸೇರಿಕೊಳ್ಳುತ್ತಿದೆ. ಒಂದು ವರ್ಷಕ್ಕೆ ಈ ಗಾತ್ರ ಅತ್ಯಂತ ಭಾರಿ ಪ್ರಮಾಣದ್ದಾಗಿದೆ. ಅದೇನೇ ಇದ್ದರೂ ಇದರ ಹೆಚ್ಚುವರಿ ಹೊರೆ ಭಾರತದ ಬಡ ಹಾಗೂ ಮಧ್ಯಮ ವರ್ಗದ ಜನರ ಮೇಲೆ ಬೀಳುತ್ತಿರುವುದು ಅನೌಚಿತ್ಯವೂ ನಿರ್ದಾಕ್ಷಿಣ್ಯವೂ ಆಗಿರುವುದು ಮತ್ತಷ್ಟು ಭಯಂಕರ ರೂಪವಾಗಿ ನಮಗೆ ಕಂಡುಬರುತ್ತದೆ. ಇಂದು ನೂರರಲ್ಲಿ ಅರವತ್ತೈದು ಜನರ ಆದಾಯವು ಜೀವನ ನಿರ್ವಹಣೆಯ ಮಟ್ಟಕ್ಕಿಂತಲೂ ಕೆಳಗಿದೆ. ಆದರೆ ಸರಕಾರ ಅಂಥವರಿಗೂ ರಿಯಾಯತಿ ತೋರಿಸುವುದಕ್ಕೆ ತಯಾರಿಲ್ಲ.

**ತನಿಖಾ ಆಯೋಗದ ನೇಮಕವಾಗಲಿ**

ಕೇಂದ್ರ ಹಾಗೂ ರಾಜ್ಯ ಸರಕಾರಗಳ ತೆರಿಗೆ ಸಂಗ್ರಹ ನೀತಿಗಳಲ್ಲಿ ಇಂದು ಯಾವುದೇ ಹೊಂದಾಣಿಕೆಯಿಲ್ಲ. ಒಂದೇ ವಸ್ತುವಿನ ಮೇಲೆ ಉತ್ಪಾದನಾ ವೆಚ್ಚ, ಮಾರಾಟ ತೆರಿಗೆ ಮತ್ತು ಸುಂಕ ಹೇರಲಾಗುತ್ತಿದೆ. ಇದರ ನಿರ್ಧಾರ ಯಾವುದೇ ಸುಸಂಬದ್ಧ ನೀತಿಗೆ ಒಳಪಟ್ಟಿರದೆ, ಮನಬಂದಂತೆ ಹಾಗೂ ರಾಜಕೀಯ ಇಚ್ಛಾಶಕ್ತಿಗೆ ಅನುಗುಣವಾಗಿ ನಡೆಯುತ್ತಿದೆ. ಹಾಗಾಗಿ ತೆರಿಗೆ ಭಾರವನ್ನು ಎಷ್ಟು ಹೊರಬಲ್ಲದು, ಇದಲ್ಲದೆ ಬೇರೆ-ಬೇರೆ ಆಡಳಿತವಿರುವ ರಾಜ್ಯಗಳಲ್ಲಿ ತೆರಿಗೆ ಸಂಗ್ರಹಗಳ ಸಂಯೋಜನೆ ಹೇಗಿರಬೇಕು ಎಂಬುದನ್ನು ಅದು ಪತ್ತೆ ಮಾಡುವಂತಿರಬೇಕೆಂಬುದು ಜನಸಂಘದ ಅಭಿಪ್ರಾಯವಾಗಿದೆ.

**ವೈಷಮ್ಯದ ವಿಷಬೀಜ**

ಪಂಜಾಬ ಸರಕಾರವಂತೂ ತನ್ನ ತೆರಿಗೆ ನೀತಿಯಿಂದಾಗಿ ವೈಷಮ್ಯದ ಬೀಜ ಬಿತ್ತುತ್ತಿದೆ. ಹರಿಜನರ ಉದ್ಧಾರ ಆಗಲೇಬೇಕಾದದ್ದು. ಅದಕ್ಕಾಗಿ ದೇಶವ್ಯಾಪಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲೇಬೇಕು. ಸಂವಿಧಾನದಲ್ಲಿಯೂ ಅದಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಆದರೆ ಪಂಜಾಬ ಸರಕಾರದ ನೀತಿ ಹರಿಜನರ ಉದ್ಧಾರವಾಗಿರದೆ, ಅವರ ಅವನತಿಯೇ ಆಗಿದೆ. ಹಾಗಾದರೆ ಸರ್ದಾರ್ ಪ್ರತಾಪಸಿಂಹ ಕೈರೋಂರವರು ಭಾವನಾತ್ಮಕ ಏಕತೆಯನ್ನು ಈ ರೀತಿಯಲ್ಲಿ ಹುಟ್ಟುಹಾಕಬಯಸುತ್ತಾರೇನು?

**ಪಂಥಾಹ್ವಾನವನ್ನು ಎದುರಿಸಿ**

ಈ ಹೊರಲಾರದ ತೆರಿಗೆಯ ವಿರುದ್ಧ ಜನರ ಆಕ್ರೋಶ ಎಷ್ಟು ವ್ಯಾಪಕ ಹಾಗೂ ಸುಸಂಘಟಿತವಾಗುತ್ತಿದೆಯೋ, ಅಷ್ಟೇ ದೊಡ್ಡ ಪ್ರಮಾಣದಲ್ಲಿ ವಿಭಿನ್ನ ರಾಜ್ಯ ಸರಕಾರಗಳು ಮೈ ಪರಚಿಕೊಳ್ಳಲಾರಂಭಿಸಿವೆ. ಶ್ರೀ ಚಂದ್ರಭಾನು ಗುಪ್ತ ಹಾಗೂ ಸರ್ದಾರ್ ಕೈರೋಂರವರು ಒಂದೆಡೆ ಕೂಟನೀತಿಯನ್ನು ಅನಿಸರಿಸಿಕೊಂಡು ವಿರೋಧ ಪಕ್ಷಗಳನ್ನು ಒಡೆಯುವ ಪ್ರಯತ್ನ ಮಾಡುತ್ತಿದ್ದಾರೆ, ಇನ್ನೊಂದೆಡೆ ದಂಡನೆಯ ನೀತಿಯ ಮೂಲಕ ಜನರ ಮೇಲೆ ದಬ್ಬಾಳಿಕೆ ಮಾಡುವ ಬೆದರಿಕೆ ಹಾಕುತ್ತಿದ್ದಾರೆ. ಒಂದುವೇಳೆ ಸೊಂಟ ಮುರಿವ ತೆರಿಗೆ ಮತ್ತು ನಿರಂಕುಶ ಪ್ರಭುತ್ವವೇ ಇಂದಿನ ಸಮಾಜವಾದಿ ಸರಕಾರಗಳು ಸಮಾಜವಾದದ ಮೊದಲ ಕಂತಿನ ರೂಪದಲ್ಲಿ ಬಳುವಳಿಯಾಗಿ ಕೊಡುತ್ತವೆಯೆಂದಾದರೆ, ಸ್ಲೇವ್ ಸಂಸ್ಕೃತಿಯ ಈ ಹೊಸ ವೈಚಾರಿಕ ದಾನವನನ್ನು ಸ್ವಾತಂತ್ರ್ಯ ಮತ್ತು ಜನಹಿತದ ಶತ್ರುವೆಂದು ಪರಿಗಣಿಸಿ ಅದನ್ನು ವಿರೋಧಿಸುತ್ತಿದ್ದ ಆ ಜನರ ಸಂದೇಶವೇ ನಿಜವಾಗಿತ್ತು. ನಾವಂತೂ ಶಾಂತ ರೀತಿಯಲ್ಲಿ ನಮ್ಮ ವಿರೋಧವನ್ನು ತೋರ್ಪಡಿಸಬಯಸುತ್ತೇವೆ. ಆದರೆ ಸರಕಾರ ನಮಗೆ ತೊಂದರೆ ಕೊಡುವ ಉಪಾಯ ಮಾಡುತ್ತಿದೆ. ಒಂದೆಡೆ ಜನತೆಗೆ ತಮ್ಮ ಹಕ್ಕು ಮತ್ತು ಕರ್ತವ್ಯಗಳ ಮೇಲೆ ಆಗುತ್ತಿರುವ ಆಘಾತಗಳ ರಕ್ಷಣೆಗಾಗಿ ಕೊಡಮಾಡಿದ ಪಂಥಾಹ್ವಾನಗಳನ್ನು ಸ್ವೀಕರಿಸಲು ಸಜ್ಜುಗೊಳಿಸಿಕೊಳ್ಳ ಬೇಕಾಗಿದೆ, ಇನ್ನೊಂದೆಡೆ ಬುದ್ಧಿವಂತಿಕೆಯಿಂದ ಸರಕಾರದ ಕೂಟನೀತಿಯಿಂದ ತಪ್ಪಿಸಿಕೊಂಡು ಹೊರಬಂದು ಅದರ ಬಲೆಗೆ ಬೀಳದಂತೆ ತಮ್ಮನ್ನು ರಕ್ಷಿಸಿ ಕೊಳ್ಳಬೇಕಾಗಿದೆ.

* * * * *

# ಚೀನೀ ಸಾಮ್ರಾಜ್ಯದ ಪ್ರತೀಕಾರಕ್ಕಾಗಿ ಸಂಘಟಿತರಾಗಿ

ಕಳೆದ ಆಗಸ್ಟ್ ತಿಂಗಳ ಕಡೆಯ ವಾರದಲ್ಲಿ ಕಲ್ಕತ್ತೆಯ ಹಿಂದೂಸ್ತಾನ್ ಕ್ಲಬ್ಬಿನಲ್ಲಿ ಶ್ರೀ ಘನಶ್ಯಾಮ ಬೆರೀವಾಲಾ ಮೂಲಕ ಭಾರತೀಯ ಜನಸಂಘದ ಮಹಾಮಂತ್ರಿ ಪಂ. ದೀನ್ ದಯಾಳ್ ಉಪಾಧ್ಯಾಯರ ಸನ್ಮಾನಕ್ಕಾಗಿ ಆಯೋಜಿತವಾದ, ಲಘು ಉಪಾಹಾರ ಕಾರ್ಯಕ್ರಮದಲ್ಲಿ ಮಾಡಲಾದ ಸಂಕ್ಷಿಪ್ತ ಮತ್ತು ಸಾರ ಗರ್ಭಿತ ಭಾಷಣದಲ್ಲಿ ಪಂ. ಉಪಾಧ್ಯಾಯರು ದೇಶದ ಮುಂದಿರುವ ಎರಡು ಮುಖ್ಯ ಸಂಕಟಗಳತ್ತ ಜನರ ಗಮನ ಸೆಳೆದರು.

### ಜನತೆ ಸಂಘಟಿತವಾಗಬೇಕು

ಚೀನಾದ ಆಕ್ರಮಣದಿಂದ ಉದ್ಭವಿಸುವ ಗಂಭೀರ ಪರಿಸ್ಥಿತಿಯ ಬಗ್ಗೆ ಹೇಳುತ್ತಾ ದೇಶಕ್ಕೆ ಗೌರವ ತರುವ ರೀತಿಯಲ್ಲಿ ನಾವು ಆ ಸಮಸ್ಯೆಗೆ ಸಮಾಧಾನವನ್ನು ಇನ್ನೂ ಕಂಡುಕೊಂಡಿಲ್ಲವೆಂದು ಅವರು ಹೇಳಿದರು. ಚೀನಾದ ಪ್ರಧಾನಮಂತ್ರಿ ಶ್ರೀ ಚೌ–ಎನ್–ಲೈ, ಕಳೆದ ಬಾರಿ ಭಾರತಕ್ಕೆ ಬಂದಿದ್ದಾಗ, ಎಲ್ಲಿಯವರೆಗೆ ಭಾರತದ ಭೂಮಿಯಿಂದ ಚೀನಾದ ಸೈನ್ಯಗಳನ್ನು ತೆಗೆಯುವುದಿಲ್ಲವೋ ಅಲ್ಲಿಯವರೆಗೆ ಯಾವ ಮಾತುಕತೆಯೂ ಸಾಧ್ಯವಿಲ್ಲವೆಂದು ನೆಹರೂ ಅವರೊಂದಿಗೆ ಹೇಳಿದ್ದರು. ಆದರೆ ಕಳೆದ ಜುಲೈ ೨೬ರಂದು ಭಾರತ ಸರ್ಕಾರವು ಕಳುಹಿಸಿರುವ ವಿರೋಧ ಪತ್ರದಲ್ಲಿ ಚೀನಾ ೧೯೫೬ರಲ್ಲಿ ಭಾರತದ ಯಾವ ಭೂಮಿಯನ್ನು ತನ್ನದೆಂದು ಹೇಳಿಕೊಂಡು ವಶಪಡಿಸಿಕೊಂಡಿದೆಯೋ, ಆ ಅನೈತಿಕ ಬೇಡಿಕೆಯನ್ನು ಒಪ್ಪಿಕೊಂಡು ಒಂದು ರೀತಿಯಲ್ಲಿ ಸಮರ್ಪಣ ಭಾವನೆಯನ್ನು ಪ್ರಕಟಿಸಿದೆ. ಇದು ನಮ್ಮ ದೇಶಕ್ಕೆ ಅಪಮಾನ ಜನಕವಷ್ಟೇ ಅಲ್ಲ ದೇಶದ ಸುರಕ್ಷತೆಯ ದೃಷ್ಟಿಯಿಂದ ಭಯಂಕರ ಸಂಕಟವನ್ನು ತಂದೊಡ್ಡುವುದು ಸಹ ಆಗಿದೆ. ಇಂದಿನ ಪರಿಸ್ಥಿತಿಯಲ್ಲಿ ನಾವು ಆ ಭೂ ಭಾಗವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೋ ಅಥವಾ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೋ ಆ ಭಾಗದಿಂದ ನಮ್ಮ ಹಕ್ಕನ್ನು ಎಂದೆಂದಿಗೂ ಬಿಟ್ಟುಕೊಡುವುದು ಆತ್ಮ ಸಮರ್ಪಣೆಯಾಗಿದೆ ಮತ್ತು ಸರ್ಕಾರವು ಈ ಕಾರ್ಯಗಳ ವಿರುದ್ಧ ಸಂಪೂರ್ಣ ದೇಶವನ್ನು ಜಾಗೃತಗೊಳಿಸಬೇಕು.

**ಸಂಸತ್ತೇ ಸರ್ವೋಚ್ಚ**

ಪ್ರಧಾನ ಮಂತ್ರಿಗಳು ಹೇಳಿದ್ದೇನೆಂದರೆ ಅವರು ದೇಶಕ್ಕೆ ಹಾನಿಯನ್ನುಂಟು ಮಾಡುವ ಯಾವ ಮಾತನ್ನೂ ಆಡುವುದಿಲ್ಲ. ಆದ್ದರಿಂದ ಚೀನಾದೊಂದಿಗೆ ರಾಜಿ ಮಾಡಿಕೊಳ್ಳುವ ವಿಚಾರದಲ್ಲಿ ಪೂರಾ ಸ್ವಾತಂತ್ರ್ಯವಿರಬೇಕು. ಆದರೆ ಇದು ಪ್ರಜಾತಾಂತ್ರಿಕ ರಾಜ್ಯ. ಇಲ್ಲಿಯ ಜನತೆ ಇಲ್ಲಿನ ಸಂಸತ್ತಿನ ಸಂಪೂರ್ಣ ಅನುಮತಿ ದೊರೆಯದುವ ಹೊರತು ಪ್ರಧಾನ ಮಂತ್ರಿಗಳು ಯಾವ ಕೆಲಸವನ್ನೂ ಮಾಡುವಂತಿಲ್ಲ. ಆದ್ದರಿಂದ ಅವರ ಬೇಡಿಕೆ ಕೇವಲ ಪ್ರಜಾತಂತ್ರದ ವಿರುದ್ಧವಷ್ಟೇ ಅಲ್ಲ, ಇದು ದಬ್ಬಾಳಿಕೆ ಮತ್ತು ಸ್ವೇಚ್ಛಾಚಾರಿ ಸ್ವಭಾವವನ್ನು ಪರಿಚಯಿಸುತ್ತದೆ. ಚೀನಾ ಮತ್ತೆ ಮತ್ತೆ ನಮಗೆ ಮೋಸ ಮಾಡಿದೆ. ಟಿಬೆಟ್ಟಿನ ವಿಷಯದಲ್ಲಿ ಅದು ಮೋಸ ಮಾಡಿತು. ಪಂಚಶೀಲದ ರಾಜಿಯ ಜೊತೆ ಜೊತೆಗೆ ಅದು ನಮ್ಮ ದೇಶದ ಮೇಲೆ ಆಕ್ರಮಣವನ್ನು ಪ್ರಾರಂಭಿಸಿತು. ಆದ್ದರಿಂದ ಈ ರೀತಿ ಈ ಸಮಸ್ಯೆಯನ್ನು ಬಿಡಿಸಲಾಗುವುದಿಲ್ಲ. ನಾವು ಎಷ್ಟು ದುರ್ಬಲತೆಯನ್ನು ತೋರಿಸುತ್ತೇವೆಯೋ ನಾವು ಅಷ್ಟೇ ಸಂಕಟವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಈ ಪರಿಸ್ಥಿತಿಯ ಸರಿಯಾದ ವಿಶ್ಲೇಷಣೆ ಮಾಡಬೇಕು; ಸರಕಾರವು ಯಾವ ದೌರ್ಬಲ್ಯದ ಕ್ರಮ ತೆಗೆದುಕೊಳ್ಳುವ ಮುಂಚೆ ಇದರ ಬಗ್ಗೆ ಪ್ರಬಲ ಜನಾಭಿಪ್ರಾಯವನ್ನು ಜಾಗೃತಗೊಳಿಸುವುದು.

**ಆಂಗ್ಲರ ದಾಸ್ಯ ಅಸಹನೀಯ**

ಶ್ರೀ ಉಪಾಧ್ಯಾಯರು ತಮ್ಮ ಭಾಷಣದಲ್ಲಿ ಮತ್ತೊಂದು ಸಮಸ್ಯೆಯತ್ತ ಜನರ ಗಮನ ಸೆಳೆದರು; ಅದು ದೇಶದ ಭಾಷಾ ನೀತಿಯ ಸಂಬಂಧದಲ್ಲಿ ಅವರು ಹೇಳಿದ್ದೇನೆಂದರೆ, ಆಂಗ್ಲಭಾಷೆಯನ್ನು ಸಹರಾಜ ಭಾಷೆಯನ್ನಾಗಿ ಇಟ್ಟುಕೊಳ್ಳುವುದಕ್ಕೆ ಸರ್ಕಾರದ ಕಡೆಯಿಂದ ವಿಧೇಯಕವನ್ನು ಮಂಡಿಸುವ ಮಾತನ್ನು ಹೇಳಲಾಗುತ್ತಿದೆ. ಈ ಮಾತು ದೇಶಕ್ಕೆ ಅತ್ಯಂತ ಮಾರಕ. ಆಡಳಿತ ನಡೆಸುವುದಕ್ಕೆ ಆಂಗ್ಲಭಾಷೆ ಸಹಾಯಕ ಭಾಷೆ ಆಗಲಾರದು ಎಂಬ ಮಾತು ಸ್ಪಷ್ಟ. ಒಂದು ವೇಳೆ ಆಡಳಿತದ ಕಾರ್ಯಗಳಲ್ಲಿ ಈ ವಿಷಯವನ್ನು ಈಗಲೇ ಪ್ರಶ್ನಿಸಲು ಬಿಟ್ಟಿದ್ದೇ ಆದರೆ ಇದರಿಂದ ಬಹಳ ದೂರಗಾಮಿ ಮತ್ತು ಅಪಾಯಕಾರಿ ಪರಿಣಾಮಗಳಾವುವು. ವಿಶೇಷವಾಗಿ ಒಂದು ಸ್ವತಂತ್ರ ಸಾರ್ವಭೌಮ ಪ್ರಜಾಪ್ರಭುತ್ವವಿರುವ ದೇಶದಲ್ಲಿ ಆಡಳಿತವು ದೇಶದ ತನ್ನ ಭಾಷೆಯಲ್ಲಿ ನಡೆಯಬಲ್ಲುದು. ಆದ್ದರಿಂದ ಇಲ್ಲಿಯ ಭಾಷೆ ಆಂಗ್ಲ ಭಾಷೆ ಆಗಲಾರದು. ಯಾವುದೇ ದೃಷ್ಟಿಯಿಂದ ಅಳೆದರೂ ಈ ವಿಷಯದಲ್ಲಿಯೂ ಜನಾಭಿಪ್ರಾಯವನ್ನು ಜಾಗೃತಗೊಳಿಸುವುದು ಅವಶ್ಯಕ. ಏಕೆಂದರೆ ಅದರ ಹೊರತು ಸರ್ಕಾರ ಬಗ್ಗುವುದಿಲ್ಲ.

**ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ವಿರೋಧವಿಲ್ಲ**

ಹಿಂದಿಯ ಕಾರಣದಿಂದ ವಿರೋಧ ಹುಟ್ಟುವುದೆಂಬ ಆತಂಕವನ್ನು ಬಹಳ ಜನ ಪ್ರಕಟಿಸಿದರೆಂದು ತಾವು ಹೇಳಿದಿರಿ. ಆದರೆ ಅಂತಹ ಆತಂಕ ನಿರಾಧಾರವಾದುದು. ಪ್ರತ್ಯೇಕ ಪ್ರದೇಶದಲ್ಲಿ ಆ ಪ್ರದೇಶದ ತನ್ನ ಭಾಷೆಯಿಂದಲೇ ಕೆಲಸವಾಗುತ್ತದೆ. ಕೇವಲ ಕೆಲವೇ ಆಡಳಿತ ಸಂಬಂಧಿ ಕಾರ್ಯಗಳಲ್ಲಿ ಹಿಂದಿಯ ಪ್ರಯೋಜನವಾಗುತ್ತದೆ. ಎಲ್ಲೆಲ್ಲಿ ಕೇಂದ್ರದಲ್ಲಿ ಇಂಗ್ಲಿಷ್ ಮತ್ತು ಪ್ರದೇಶಗಳಲ್ಲಿ ಪ್ರಾದೇಶಿಕ ಭಾಷೆಯಲ್ಲಿ ವ್ಯವಹರಿಸುವ ಪ್ರಯತ್ನ ನಡೆದವೋ ಅಲ್ಲಿ ಈ ಪ್ರಯತ್ನಗಳು ಅಸಫಲವಾಯಿತೆಂಬುದು ಪ್ರಮಾಣೀಕರಿಸಲ್ಪಟ್ಟಿತು. ರಾಜ್ಯ ಭಾಷಾ ಆಯೋಗವು ಮದ್ರಾಸ್ ಮತ್ತು ಬಂಗಾಳದ ವಿಧಾನಸಭೆಗಳಲ್ಲಿ ಪ್ರಾದೇಶಿಕ ಭಾಷೆಗಳ ಬದಲು ಇಂಗ್ಲೀಷಿನ ಪ್ರಯೋಗ ಎಲ್ಲಕ್ಕಿಂತ ಹೆಚ್ಚಾಗಿ ಆಗಿದೆ ಎಂದು ತನ್ನ ವರದಿಯಲ್ಲಿ ಹೇಳಿದೆ. ಪಾಠಶಾಲೆಗಳಲ್ಲಿ ಹಿಂದಿಯನ್ನು ಅವಶ್ಯಕ ವಿಷಯದ ರೂಪದಲ್ಲಿ ಜಾರಿಗೆ ತರದೇ ಇರುವುದು ಈ ಎರಡು ಪ್ರದೇಶಗಳಲ್ಲಿಯೇ. ಭಾರತದ ಬೇರೆ ಎಲ್ಲ ದೇಶಗಳಲ್ಲಿ ಹಿಂದಿಯನ್ನು ಜಾರಿಗೆ ತರಲಾಗಿದೆ. ಭಾರತದ ಎಲ್ಲ ಭಾಷೆಗಳೂ ನಿಜವಾಗಿ ಒಂದೇ ಕುಟುಂಬದ ಸದಸ್ಯರು. ಆದ್ದರಿಂದ ಅವುಗಳ ಪರಸ್ಪರ ಸಂಬಂಧ ಎಷ್ಟು ಹೊಂದಿಕೊಳ್ಳುತ್ತವೆಯೋ ಇಂಗ್ಲೀಷಿನೊಂದಿಗೆ ಅಷ್ಟು ಹೊಂದಿಕೊಳ್ಳುವುದಿಲ್ಲ.

**ನಮ್ಮ ರಾಜ್ಯ ಎಲ್ಲಿದೆ?**

ಆದರೂ ಸಹ ತಮ್ಮ ದುರಾಗ್ರಹದ ಕಾರಣ ಆಡಳಿತದ ಮತ್ತು ಕೆಲವು ಜನರ ಕಡೆಯಿಂದ ನಡೆಯುತ್ತಿರುವ ಇಂಗ್ಲಿಷ್ ಜಾರಿಯಲ್ಲಿಡುವ ಪ್ರಯತ್ನ ನಮ್ಮ ಸ್ವಾಭಿಮಾನಕ್ಕೆ ಅಪಮಾನಜನಕ. ಒಂದು ವೇಳೆ ೧೯೬೫ರಲ್ಲಿ ಹಿಂದಿಯ ಪ್ರಯೋಗ ವ್ಯಾವಹಾರಿಕವೆಂದು ಅನ್ನಿಸದಿದ್ದರೆ ಆ ನಂತರ ನಾವು ಅದರ ವಿಚಾರ ಮಾಡಬೇಕು. ಎಲ್ಲಿಯವರೆಗೆ ಹಿಂದಿ ಬರುವುದಿಲ್ಲವೋ ಅಲ್ಲಿಯವರೆಗೆ ಆ ಹಿಂದಿ ಭಾಷಿಕರು ಈ ವಿಷಯದಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವುದಿಲ್ಲವೆಂದು ಪ್ರಧಾನ ಮಂತ್ರಿಯವರು ಹೇಳಿದರು. ಈ ರೀತಿಯ ಅವಿವೇಕದ ಹೇಳಿಕೆಗಳು ಮತ್ತು ಆ ದೂರದರ್ಶೀ ವಿಚಾರಗಳ ಮೂಲಕ ನಮ್ಮ ನಾಯಕರ ಸಮೂಹವು ಹೊಸದಾಗಿ ಇಬ್ಭಾಗವಾಗಿಸುವ ಮತ್ತು ದ್ವೇಷದ ಬೀಜವನ್ನು ದೇಶದಲ್ಲಿ ಬಿತ್ತುತ್ತಿದ್ದಾರೆ. ಸಂವಿಧಾನವನ್ನು ಮಾಡುವಾಗ ಅದನ್ನು ಮಾಡುವ ಎಲ್ಲ ಭಾಷೆಯ ಜನರೂ ಇದ್ದರು ಮತ್ತು ನಮ್ಮ ಭಾಷಾನೀತಿ ಅದೇ ಸಮಯದಲ್ಲಿಯೇ ಸಂವಿಧಾನದ ಮೂಲಕ ಸ್ವೀಕೃತವಾಗಿತ್ತು. ಮತ್ತೆ ಇಂದು ಈ ಹೊಸ ಮಾತನ್ನು ಆಡುತ್ತಿರುವುದಾದರೂ ಏಕೆ?

ನಮ್ಮ ದೇಶದಲ್ಲಿ ನಮ್ಮ ಆಡಳಿತ" ಎಂದು ಮಾಳವೀಯರು ಹೇಳಿದ್ದರು. ಒಂದು ವೇಳೆ ಇಲ್ಲಿ ಇಂಗ್ಲೀಷಿನಲ್ಲಿ ಆಡಳಿತ ನಡೆದರೆ ಅದು ನಮ್ಮ ರಾಜ್ಯ ಹೇಗೆ ಆಗುವುದು?

**ಮುಖ್ಯ ಸಲಹೆ**

ದೇಶದ ಎದುರು ಒಂದು ಗಟ್ಟಿ ಸಲಹೆಯನ್ನು ಇಡುತ್ತಾ ಶ್ರೀ ಉಪಾಧ್ಯಾಯ ಅವರು ಹೇಳಿದ್ದೇನೆಂದರೆ ಹಿಂದಿಯ ಬಗ್ಗೆ ಚಿಂತಿಸದೇ ನೀವು ನಿಮ್ಮ ಪ್ರದೇಶದಿಂದ ಇಂಗ್ಲಿಷನ್ನು ಕಿತ್ತೊಗೆಯಿರಿ. ಪ್ರಾದೇಶಿಕ ಭಾಷೆಯಲ್ಲಿ ಆಡಳಿತ ವ್ಯವಹಾರ ಹಾಗೂ ಇತರ ಕಾರ್ಯಗಳನ್ನು ನಡೆಸಿರಿ. ನಂತರ ಸ್ವಯಂ ಮತ್ತು ಸ್ವಾಭಾವಿಕ ರೂಪದಲ್ಲಿ ಹಿಂದಿ ಎಷ್ಟು ಅವಶ್ಯಕವೋ ಅಷ್ಟು ಸ್ಥಾನವನ್ನು ಸ್ಥಾಪಿಸಿಕೊಳ್ಳುತ್ತದೆ.

* * * * *

# ಪಂ. ದೀನ್ ದಯಾಳ್ ಉಪಾಧ್ಯಾಯರ ಕೊನೆಯ ಭಾಷಣ

ಪ್ರತಿಯೊಂದು ರಾಷ್ಟ್ರವೂ ತನ್ನ ವೈಭವದ ಸದಭಿಲಾಷೆಯೊಂದಿಗೆ ಪ್ರಗತಿಪಥದಲ್ಲಿ ಸಾಗುತ್ತದೆ. ವೈಭವದ ಈ ಅಭಿಲಾಷೆ ಅತ್ಯಂತ ಸ್ವಾಭಾವಿಕವಾದುದು, ಯಾಕೆಂದರೆ ಯಾರಿಗೆ ಆಸೆ–ಆಶಯಗಳಿಲ್ಲವೊ ಅವನನ್ನು ಮನುಷ್ಯನೆಂದು ಪರಿಗಣಿಸಲಾಗದು. ಪ್ರತಿಯೊಬ್ಬನೂ ಎತ್ತರಕ್ಕೇರ ಬಯಸುತ್ತಾನೆ, ಪ್ರಗತಿಪಥದಲ್ಲಿ ಸಾಗಬಯಸುತ್ತಾನೆ, ಸುಖವಾಗಿರ ಬಯಸುತ್ತಾನೆ, ಆದರೆ ಈ ಸುಖ, ಈ ವೈಭವ, ಈ ಉತ್ಕರ್ಷಗಳ ರೂಪ ಹೇಗಿದೆ? ಎಂಬುದು ಯೋಚಿಸಬೇಕಾದುದು. ನಾವು ಮೇಲೇಳುತ್ತಿದ್ದೇವೆ ಎಂಬುದರ ಅರ್ಥವೇನು? ವೈಯಕ್ತಿಕವಾಗಿ ನನ್ನ ಗೌರವ ಹೆಚ್ಚಾಗಿಬಿಟ್ಟರೆ ನಾನು ಎತ್ತರದ ಮಟ್ಟವನ್ನು ತಲುಪಬಹುದು, ಎಂದು ಹಲವು ಬಾರಿ ಜನರು ಯೋಚಿಸುವುದುಂಟು. ಆದರೆ ಯಾವ ಸಮಾಜದಲ್ಲಿ ನಾವು ಹುಟ್ಟಿರುವೆವೊ, ಯಾವ ಸಮಾಜದಲ್ಲಿ ನಾವು ಹುಟ್ಟಿರುವೆವೊ, ಯಾವ ರಾಷ್ಟ್ರದ ಭಾಗವಾಗಿದ್ದೇವೊ, ಅದರಿಂದ ಬೇರ್ಪಟ್ಟು ಈ ವೈಯಕ್ತಿಕ ಆಕಾಂಕ್ಷೆ ಈಡೇರಲಾರದು, ಎಂಬುದು ಆಳವಾಗಿ ಯೋಚಿಸಿದರೆ ತೀಳಿದುಬರುತ್ತದೆ. ಒಂದು ವೇಳೆ ಈಡೇರಿದರೂ ಅದು ಅಪೂರ್ಣವಾಗಿಯೇ ಉಳಿದುಬಿಡುತ್ತದೆ. ಸರ್ವತೋಮುಖ ಬೆಳವಣಿಗೆಯೆಂಬುದು ಒಬ್ಬ ವ್ಯಕ್ತಿಯಿಂದ ಸಾಧ್ಯವಿಲ್ಲ. ಕಾರಣ, ವೈಯಕ್ತಿಕ ಜೀವನವೆಂಬುದು ಇಲ್ಲವೇ ಇಲ್ಲ. ಬಹುಶಃ ಶರೀರವೆಂಬ ಬಂಧನದಿಂದಾಗಿ 'ನಾನು' ಎಂಬುದರ ಕುರಿತಾಗಿ ಯಾವಾಗ ವಿಚಾರಮಾಡುತ್ತೇವೋ, ಆಗ ಪ್ರತಿಯೊಬ್ಬನೂ 'ನಾನು' ಅಂದರೆ ಏನು ಎಂಬುದರ ಕುರಿತಾಗಿ ಯೋಚಿಸತೊಡಗುತ್ತಾನೆ.

ನನ್ನ ಹೆಸರನ್ನೇ ತೆಗೆದುಕೊಳ್ಳಿ. ಈ ದೀನ್ ದಯಾಳ್ ಎಂಬ ಹೆಸರಿನೊಂದಿಗೆ 'ನಾನು' ಸೇರಿಕೊಂಡಿದೆ. ಇದರೊಂದಿಗೆ ನನಗೆ ಬಲು ಮೋಹವಿದೆ. ಎಷ್ಟರಮಟ್ಟಿನ ಸಂಬಂಧವಿದೆಯೆಂದರೆ, ಯಾರಾದರೂ ನನ್ನ ಈ ಹೆಸರನ್ನು ಕರೆದು ಕೂಗಿದರೆ ನನ್ನಲ್ಲಿರುವ ಈ 'ನಾನು' ನಿದ್ದೆಯಲ್ಲೂ ಎಚ್ಚರಗೊಳ್ಳುತ್ತದೆ. ಯಾಕೆಂದರೆ ಅದರೊಂದಿಗೆ 'ನಾನು' ಕೂಡಿಕೊಂಡಿದೆ. ಆದರೆ ಈ ಹೆಸರು ಬಂದದ್ದೆಲ್ಲಿಂದ ಎಂದು ಗಂಭೀರವಾಗಿ ಕೇಳಿಕೊಂಡರೆ ತಿಳಿದುಬರುವುದೇನೆಂದರೆ, ಸಮಾಜದಲ್ಲಿ ಈ ಹೆಸರು ಪ್ರಚಲಿತವಾಗಿದೆ.

---

**ಮೂಲ ಆಕರ : ಆರ್ಗನೈಸರ್, ೪, ಫೆಬ್ರವರಿ, ೧೯೬೮ ಸ್ಥಳ: ಬರೇಲಿ**

ಈ ಹೆಸರು ಸಮಾಜದಿಂದ ದೊರಕಿದ್ದು. ಇದು ಕೇವಲ ನನ್ನೊಬ್ಬನದಲ್ಲ. ಹಾಗಾಗಿ ವ್ಯಕ್ತಿಯೊಬ್ಬ ಯಾವ ಸಮಾಜಕ್ಕೆ ಯಾವ ನೆಲೆಯಲ್ಲಿ ಹೋಗುತ್ತಾನೋ. ಆ ನೆಲೆಯಲ್ಲಿ ಅವನು ಹೆಸರು ಪಡೆಯುತ್ತಾನೆ.

ಸಮಾಜದೊಂದಿಗೆ ನಮ್ಮ ಸಂಬಂಧ ಹೆಸರಿನೊಂದಿಗೆ ಆರಂಭವಾಗುತ್ತದೆ. ತಂದೆ–ತಾಯಿಯ ಸಂಬಂಧ ಜನ್ಮದೊಂದಿಗಾದರೆ, ಹೆಸರಿನ ಸಂಬಂಧ ಒಮ್ಮೆಲೆ ಸಮಾಜದೊಂದಿಗೆ ಸೇರಿಕೊಂಡಿದೆ. ನೀವು ಯಾವ ಸಮಾಜದವರು, ಏನನ್ನು ಮಾತನಾಡುತ್ತೀರಿ ಎಂಬುದೂ ತಿಳಿದುಬಿಡುತ್ತದೆ.

ಯಾವ ಭಾಷೆಯನ್ನು ನಾನು ಪ್ರಯೋಗಿಸುತ್ತೇನೋ, ಅದು ನನ್ನದಲ್ಲ, ಅದನ್ನು ಯಾರೋ ನನಗೆ ಕೊಟ್ಟಿದ್ದಾರೆ. ಇದಕ್ಕೆ ಮಾತೃಭಾಷೆ ಎನ್ನುತ್ತಾರೆ. ಯಾಕೆಂದರೆ ಮೊಟ್ಟಮೊದಲ ಅಮ್ಮನೇ ಈ ಭಾಷೆಯನ್ನು ಕಲಿಸುತ್ತಾಳೆ. ಆದರೆ ಕೇವಲ ಅಮ್ಮ ಮಾತ್ರವಲ್ಲ, ಸಮಾಜದ ಸಹಭಾಗಿತ್ವವೂ ಇದರಲ್ಲಿದೆ.

ಈ ಭಾಷೆ ಸಮಾಜದಿಂದ ಬಂದಿದ್ದು, ಯೋಚನಾ–ವಿಧಾನವೂ ಸಮಾಜದಿಂದಲೇ ಬಂದಿದೆ. ಒಳಿತು–ಕೆಡಕುಗಳೇನೆಂಬುದು ಸಮಾಜದ ಬಳುವಳಿಯೇ ಆಗಿದೆ. ನನ್ನ ಮನಸ್ಸಿಗೆ ಯಾವುದರಿಂದ ಸಮಾಧಾನ ವಾಗುತ್ತದೆಂಬುದು ಕೂಡಾ ಸಮಾಜದಿಂದಲೇ ಹೊರಹೊಮ್ಮುತ್ತದೆ. ಸಮಾಜದಿಂದ ಸಿಗುವ ಅಪ್ರಿಸಿಯೇಶನ್ ಅಥವಾ ಪ್ರಶಂಸೆ ಮನುಷ್ಯರಿಗೆ ಅತ್ಯಂತ ದೊಡ್ಡದೆನಿಸುತ್ತದೆ. ಕಾರಣ, ಜನರು ವೈಯಕ್ತಿಕ ಮಾನ–ಸಂಮಾನಗಳ ಆಕಾಂಕ್ಷಿಗಳಾಗಿರುತ್ತಾರೆ. ಅದರ ಸಂಸ್ಕಾರ ನಮ್ಮ ಮನಸ್ಸಿನಲ್ಲಿ ಹುಟ್ಟುವಂತೆ ನೋಡಿಕೊಳ್ಳಬೇಕು. ರಾಷ್ಟ್ರದ ಸಲುವಾಗಿ ಮಾಡಬಹುದಾದಂತಹ ಯಾವುದೇ ಕಾರ್ಯವಿದ್ದರೂ, ಅವೆಲ್ಲವನ್ನು ನಾವು ಮಾಡಬೇಕು. ಇದರಲ್ಲಿ ಯಾವುದೇ ರೀತಿಯ ಭೇದ–ಭಾವವುಂಟಾಗಬಾರದು. ಯಾಕೆಂದರೆ ಪ್ರವೃತ್ತಿಯು ಭೇದ–ಭಾವವನ್ನು ಉಂಟುಮಾಡುತ್ತದೆ.

ಪ್ರತಿಯೊಬ್ಬನೂ ತನ್ನ ರಾಷ್ಟ್ರವನ್ನು ಮರೆತು, ಪ್ರಾಂತ ಮತ್ತು ಜಾತಿಯ ಹೆಸರಿನಲ್ಲಿ ಎದ್ದುನಿಂತಿರುವುದು ಕಂಡುಬರುತ್ತದೆ. ರಾಷ್ಟ್ರದ ವಿಸ್ಮರಣೆಯಾದರೆ, ರಾಜಕೀಯ ಪಕ್ಷ ನಡೆಯಲಾರವು. ಕೊನೆಗೂ ರಾಜಕೀಯವೆಂಬುದು ರಾಷ್ಟ್ರಕ್ಕಾಗಿ ಇರುವಂತಹುದು. ರಾಷ್ಟ್ರವನ್ನೇ ಮರೆತುಬಿಟ್ಟರೆ ಕಾರ್ಯಸಾಧನೆಯಾಗಲಾರದು. ರಾಷ್ಟ್ರವನ್ನು ಮರೆತರೆ ವಿದ್ಯೆ–ಬುದ್ಧಿಗಷ್ಟೇ ಅಲ್ಲ. ಯಾವುದಕ್ಕೂ ಬೆಲೆಯಿರುವುದಿಲ್ಲ. ರಾಷ್ಟ್ರಕ್ಕಾಗಿ ಎದ್ದುನಿಂತರೆ ವ್ಯಕ್ತಿಯ ಮೌಲ್ಯವೂ ಹೆಚ್ಚಾಗುತ್ತದೆ. ಇದೇ ಕಾರಣದಿಂದಾಗಿ ರಾಷ್ಟ್ರಪತಿ ಹುದ್ದೆಗೆ ಮಹತ್ತ್ವ ಬಂದಿರುವುದು.

ನಮ್ಮದೆಲ್ಲವೂ ದೇಶಕ್ಕಾಗಿ ಅರ್ಪಿತ ಎಂದು ಹೇಳುವವರು ಸಾಕಷ್ಟು ಜನರು ಸಿಗುತ್ತಾರೆ. ಆದರೆ ದೇಶಕ್ಕಾಗಿ ಏನನ್ನಾದರೂ ಮಾಡಬೇಕಾದ ಸಂದರ್ಭ ಬಂದರೆ,

ನಮ್ಮ ಜೀವವನ್ನೇ ಪಣಕ್ಕಿಡುತ್ತೇವೆ ಎನ್ನುತ್ತಾರೆ. ನಿಮ್ಮ ಜೀವವನ್ನು ನೀವೇ ಇಟ್ಟುಕೊಳ್ಳಿ, ಇನ್ನುಳಿದುದನ್ನೆಲ್ಲ ದೇಶಕ್ಕಾಗಿ ಅರ್ಪಿಸಿ.

ನಿಜ ಹೇಳಬೇಕೆಂದರೆ, ನಾವು ದೇಶಕ್ಕಾಗಿ ಏನನ್ನಾದರೂ ಮಾಡಲು ಸದಾ ಸಿದ್ಧರಿರುತ್ತೇವೆ, ಎಂಬುದು ಅಷ್ಟೊಂದು ಸುಲಭ–ಸಾಧ್ಯವಾದ ಮಾತಲ್ಲ. ಅದಕ್ಕಾಗಿ ಮನಸ್ಸಿನಲ್ಲಿ ನಿರಂತರ ಸಂಸ್ಕಾರ ಪಡೆದುಕೊಳ್ಳಬೇಕಾದ ಅವಶ್ಯಕತೆಯಿದೆ. ನಾಲ್ಕು ಜನರು ಒಟ್ಟಾಗಿ ಒಮ್ಮತದಿಂದ ಕಾರ್ಯ ನಿರ್ವಹಿಸುವುದು ಅಷ್ಟೊಂದು ಸುಲಭದ ಮಾತಲ್ಲ. ಒಂದು ವೇಳೆ ರಾಷ್ಟ್ರೀಯತೆಯ ಭಾವ ನಮ್ಮ ಮುಂದಿದ್ದರೆ ನಾವೆಲ್ಲ ಸೇರಿ ಕಾರ್ಯ– ಸಾಧನೆ ಮಾಡಬಹುದು.

* * * * *